ಪುನರೂರು ಪುರಸ್ಕಾರ



ಸಂಪಾದಕ

ಜಯರಾಮ ಕಾರಂತ

ಪುನರೂರು ಪುರಸ್ಕಾರ

ಸಂಪಾದಕ

ಜಯರಾಮ ಕಾರಂತ

ಪ್ರಕಾಶಕರು

ಕನ್ನಡ ಸಂಘ ಕಾಂತಾವರ–574129

ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಅಧಿಕೃತ ಮಾರಾಟಗಾರರು

ಸುಮುಖ ಪ್ರಕಾಶನ

174ಇ/28, 1ನೇ ಮಹಡಿ, 1ನೇ ಮುಖ್ಯರಸ್ತೆ, ವಿದ್ಯಾರಣ್ಯನಗರ, ಮಾಗಡಿ ರಸ್ತೆ ಟೋಲ್‌ಗೇಟ್,
ಬೆಂಗಳೂರು–23. ಫೋನ್: 23118585, 9844278792

*PUNARURU PURSKARA A Critical Perspective on **Dharmadarshi Harikrishna Punarur** Edited by Jayarama karantha, Published by* ***KANNADA SANGHA Kanthavara-574129***

ಪುಟಗಳು: ೫೦೮
Pages: 508

ಪುನರೂರು ರೇಖಾಚಿತ್ರ: ಜೇಮ್ಸ್‌ವಾಜ್

ಪ್ರಥಮ ಮುದ್ರಣ : ನವೆಬರ್ ೨೦೦೫
First Edition: November 2005

ಬೆಲೆ : ರೂ. ೨೫೦/-
Price: Rs. 250/-

ಪ್ರತಿಗಳಿಗೆ: ಸುಮುಖ ಬುಕ್ ಹೌಸ್
**174ಇ/28, 1ನೇ ಮಹಡಿ, 1ನೇ ಮುಖ್ಯರಸ್ತೆ
ವಿದ್ಯಾರಣ್ಯನಗರ, ಮಾಗಡಿ ರಸ್ತೆ ಟೋಲ್‌ಗೇಟ್, ಬೆಂಗಳೂರು-23.
ಫೋನ್: 23118585, 9844278792**

*DTP & Cover Design: Gangaraju N, Mathikere
Sumukha Prakashana, B'lore-560 023, Ph: 23118585.*

Printed at:
*Sumukha News Syndicate & Printing Services
VidyaranyaNagara, Bangalore-23.*

ಪುನರೂರು ಪುರಸ್ಕಾರ

ಪ್ರಕಾಶಕೀಯ

ಪುನರೂರು ಅಂದರೆ ನಮ್ಮ ನಡುವಿನ ಸಾಮಾನ್ಯನೊಬ್ಬ ಹೇಗೆ ಅಸಾಮಾನ್ಯವಾದ ಎಂಬುದರ ರೂಪಕ. 'ಕರ್ಮಣ್ಯೇವಾಧಿಕಾರಸ್ತೇ...' ಎಂಬ ಗೀತಾವಾಕ್ಯವನ್ನು ನಿಜಾರ್ಥದಲ್ಲಿ ತನ್ನ ಬದುಕಿನಲ್ಲಿ ಆವಾಹಿಸಿಕೊಂಡ ಸಾಹಸಿ. ಹೊರನೋಟದಲ್ಲಿ ಅಥವಾ ಸಂಪರ್ಕದಲ್ಲಿ ತುಸು ಒರಟೆನ್ನುವ ಹಾಗೆ ನಡೆದುಕೊಳ್ಳುವ ಮುಖವಾಡ ಧರಿಸದ ವ್ಯಕ್ತಿ. ಅಂತರಂಗದಲ್ಲಿ ಇನ್ನೊಬ್ಬರ ಕಷ್ಟಕ್ಕೆ ಕರಗುವ ಜೀವದ್ರವ್ಯದ ಮತ್ತು ಕೈಲಾಗದವರ ಕಷ್ಟದಲ್ಲಿ ಕೈಮೀಂ ನೆರವಾಗುವ ಔದಾರ್ಯದ ಮೂರ್ತಿ ಮತ್ತು ತಾನು ಬಯಸಿದ ಕ್ಷೇತ್ರಕ್ಕೆ ನಿರ್ಭೀತಿಯಿಂದ ಮುನ್ನುಗ್ಗುವ ಛಾತಿ ಉಳ್ಳವರು ಅವರೆಂದುಕೊಂಡರೂ, ಅದು ಅವರ ವ್ಯಕ್ತಿತ್ವವನ್ನು ಪೂರ್ತಿ ಅನಾವರಣ ಮಾಡಿದ ಹಾಗಾಗುವುದಿಲ್ಲ.

ಪುನರೂರು ಅವರನ್ನು ಒಪ್ಪಿಕೊಂಡವರಿಗೂ, ಒಪ್ಪಿಕೊಳ್ಳದವರಿಗೂ ಅವರು ಸದಾ ಆಕರ್ಷಣೆಯ ಕೇಂದ್ರ. ಅವರ ನಡೆನುಡಿಗಳು ವೈಭವೀಕರಣಕ್ಕೆ ಒಳಗಾದ ಹಾಗೆ ಅವು ಅನೇಕರ ಟೀಕೆಗೂ ಕಾರಣವಾದುದಿದೆ. ಆದರೆ ಅವರು ತೊಡಗಿಸಿಕೊಂಡ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಹಿತ್ಯ ಸಂಬಂಧಿ ಸಂಘಟನಾತ್ಮಕ ಚಟುವಟಿಕೆಗಳಲ್ಲಿನ ನಿಸ್ಪೃಹತೆ ಮತ್ತು ಕೊಡುಗೆಗಳ ಒಟ್ಟುಮೊತ್ತದ ಬಗ್ಗೆ ಪ್ರಾಯಃ ಯಾರಲ್ಲೂ ಅಭಿಪ್ರಾಯ ಬೇಧ ಇರಲಾರದು! ಈ ಹಿನ್ನೆಲೆಯಲ್ಲಿ ಅವರನ್ನು ಹತ್ತಿರದಿಂದ ಬಲ್ಲ, ದೂರ ನಿಂತು ನೋಡಿದ ವಿವಿಧ ಕ್ಷೇತ್ರಗಳಲ್ಲಿನ ಗಣ್ಯರು, ರಕ್ತ ಸಂಬಂಧಿಗಳು ತಮ್ಮ ಕಣ್ಣುಗಳಲ್ಲಿ ಪುನರೂರು ಅವರನ್ನು ಕಂಡು ಕಂಡರಸಿದ ಬಗೆಯೇ ಈ ಅಭಿನಂದನ ಗ್ರಂಥ.

ಪುನರೂರು ಮತ್ತು ಕಾಂತಾವರ ಕನ್ನಡ ಸಂಘದ ಸಂಬಂಧ ಸುಮಾರು ಎರಡೂವರೆ ದಶಕವನ್ನು ಮೀರಿದ್ದು. ಅದು ಅವರು ಸಾಹಿತ್ಯ ಸಂಘಟನ ಕ್ಷೇತ್ರಕ್ಕೆ ಧುಮ್ಮಿಕ್ಕುವ ದಿನಗಳಲ್ಲಿ ಪ್ರಾರಂಭವಾದದ್ದು. ಕಾಂತಾವರ ಕನ್ನಡ ಸಂಘವು 1979ರ ಸುಮಾರಿಗೆ ವರಕವಿ ಮುದ್ದಣನ ಹೆಸರಿನಲ್ಲಿ ಕಾವ್ಯ ಪ್ರಶಸ್ತಿ ಯೋಜನೆಯನ್ನು ಕನ್ನಡಕ್ಕೇ ಮೊದಲೆನ್ನುವಂತೆ ಪ್ರಾರಂಭಿಸಿತಾದರೂ ಅದು 1989ರ ಸುಮಾರಿಗೆ ನಿಂತೇ ಹೋಗುತ್ತದೆನ್ನುವ ಸ್ಥಿತಿ ತಲುಪಿದಾಗ ಗೋವರ್ಧನ ಗಿರಿಧಾರಿಯ ಹಾಗೆ ಅದನ್ನು ಎತ್ತಿ ಹಿಡಿದ ಅವರು ಈಗಲೂ ಕಾಂತಾವರ ಕನ್ನಡ ಸಂಘದ ಚೈತನ್ಯ ಶಕ್ತಿ.

ಪುನರೂರು ಅವರ ತೀರಿಸಲಾಗದ ಪ್ರೀತಿಯ ಋಣಕ್ಕಾಗಿ ಕಾಂತಾವರ ಕನ್ನಡ ಸಂಘವು ಈ ಅಭಿನಂದನ ಗ್ರಂಥದ ಮೂಲಕ ನುಡಿ ನಮನ ಸಲ್ಲಿಸಿ ತನ್ನ ಹೃದಯವನ್ನು ತುಸು ಹಗುರ ಮಾಡಲು ಹೊರಟಿದೆ.

ಈ ಅಭಿನಂದನ ಗ್ರಂಥವನ್ನು ಮೌಲಿಕವಾಗಿ ಸಂಪಾದಿಸಿದ ಜಯರಾಮ ಕಾರಂತರಿಗೆ, ಸಕಾಲದಲ್ಲಿ ನಮ್ಮ ಮನವಿಗೆ ಸ್ಪಂದಿಸಿದ ಲೇಖಕರಿಗೆ, ಸುಂದರವಾಗಿ ಇದನ್ನು ಹೊರತಂದ ಬೆಂಗಳೂರಿನ ಸುಮುಖ ಪ್ರಕಾಶದ ನಾರಾಯಣ ಮಾಲ್ಕೋಡ್ ಮತ್ತು ಅವರ ಸಿಬ್ಬಂದಿಗಳಿಗೆ ಸಂಘವು ಋಣಿಯಾಗಿದೆ.

ಕಾಂತಾವರ

19-10-2005

ನಾ. ಮೊಗಸಾಲೆ

ಕಾರ್ಯಾಧ್ಯಕ್ಷರು

ಕಾಂತಾವರ ಕನ್ನಡ ಸಂಘ

ಸಂಪಾದಕೀಯ

ಪುನರೂರು ಪುರಸ್ಕಾರ

ತಾನು ಹುಟ್ಟಿದ ಊರನ್ನೂ, ಅದರ ಸುತ್ತಲಿನ ಪರಿಸರವನ್ನೂ ತನ್ನ ಹೆಸರಿನ ಜೊತೆಗೇ ನೆನಪಿಸಿಕೊಡುತ್ತ ಬಂದಿರುವ ಹರಿಕೃಷ್ಣ ಪುನರೂರು ಧರ್ಮವನ್ನೂ, ಕರ್ಮವನ್ನೂ ದೇವರ ಸೇವೆಯೆಂದೇ ಪರಿಗಣಿಸುತ್ತಿರುವ ಪೇಜಾವರ ಶ್ರೀಗಳಿಂದ ದತ್ತವಾದ 'ಧರ್ಮದರ್ಶಿ' ಎಂಬ ಬಿರುದನ್ನು ತನ್ನ ಪೂರ್ವನಾಮವಾಗಿಸಿಕೊಂಡು ಬಂದಿರುವವರು. ಮಾತ್ರವಲ್ಲ, ಆ ಬಿರುದಿಗೆ ತಕ್ಕಂತೆ ಬದುಕುವ ಒಂದು ಹಠವನ್ನೂ ತೋರಿಸಿಕೊಂಡು ಬಂದವರು. ಇಂಥ ಹಠದಿಂದ ನಡೆದುಕೊಂಡು ಬರುತ್ತಿರುವ ತನ್ನ ಜೀವನಶೈಲಿಯನ್ನು 'ಹೋರಾಟ' ಎಂಬ ಮೂರಕ್ಷರಗಳ ಪದದೊಂದಿಗೆ ಒಂದಿಲ್ಲೊಂದು ರೀತಿಯಿಂದ ಅವರು ತಾವು ಸೇವೆ ಸಲ್ಲಿಸುತ್ತ ಬಂದಿರುವ ಕ್ಷೇತ್ರಗಳಲ್ಲಿ ಸಮರ್ಥಿಸಿಕೊಂಡು ಬಂದಿದ್ದಾರೆ. ನೇರ ನಡೆ ಹಾಗೂ ನೇರ ನುಡಿಗಳಿಂದ ಕೆಲವರ ದ್ವೇಷವನ್ನೂ, ಹಲವರ ಮೆಚ್ಚುಗೆಯನ್ನೂ ಗಳಿಸಿಕೊಂಡಿದ್ದಾರೆ. ತಾವು ಜೀವನದಲ್ಲಿ ಗಳಿಸಿದ್ದೇನಿದೆ, ಅದರ ಒಂದು ಭಾಗವನ್ನು ದೀನರ ದಲಿತರ ಒಳಿತಿಗೆ ವಿನಿಯೋಗಿಸುತ್ತ ಬಂದಿರುವುದು ಅವರ ಇನ್ನೊಂದು ದಾಖಲೆ. ಈ ವಿನಿಯೋಗ ಹೆಚ್ಚಿನೆಡೆಗಳಲ್ಲಿ ಜನತಾ ಜನಾರ್ದನನ ಸೇವೆಯಾಗಿ ಸಾರ್ಥಕಗೊಂಡಿದೆ. ಪರಿಸರದ ಮಕ್ಕಳಿಗಾಗಿ ಅವರು ದೊರಕಿಸಿರುವ ಶಿಕ್ಷಣಾವಕಾಶ, ಸ್ವತಃ ಸಾಹಿತಿಯಲ್ಲದಿದ್ದರೂ ನೂರಾರು ಸಾಹಿತಿಗಳ ಪ್ರತಿಭಾ ಪ್ರಕಾಶನಕ್ಕೆ ನಾನಾ ರೀತಿಗಳಲ್ಲಿ ಅವರು ನೀಡಿರುವ ಪ್ರೋತ್ಸಾಹ; ಯಕ್ಷಗಾನ, ಶಾಸ್ತ್ರಿಯ ನೃತ್ಯ-ಸಂಗೀತ ಕಲಿಕೆಗಾಗಿ ತುಡಿಯುವ ಅವಕಾಶ ವಂಚಿತರಿಗಾಗಿ ಈ ಕಲೆಗಳನ್ನು ಕಲಿಸುವ ಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ಅವರು ತೋರಿಸಿರುವ ಪ್ರಾಂಜಲ ಉತ್ಸಾಹ, ಸಾವಿರಾರು ಬಡಜನರಿಗೆ ನೇತ್ರಚಿಕಿತ್ಸೆ ದೊರಕಿಸಲು ಅವರು ತೊಡಗಿದ ಬೃಹತ್ ಯಶಸ್ವೀ ಅಭಿಯಾನ, ಅರ್ಧ ಸಹಸ್ರಕ್ಕಿಂತಲೂ ಹೆಚ್ಚು ಬಡವರ ಗೃಹನಿರ್ಮಾಣದಲ್ಲಿ ಅವರು ನೀಡಿದ ಸಹಾಯಹಸ್ತ, ಸಮಾಜದ ಮುಖ್ಯವಾಹಿನಿಯಲ್ಲಿ ಧ್ವನಿಯೇ ಇಲ್ಲದ ಬಡ ಕುಟುಂಬಗಳಿಗೆಂದು

ನೂರೊಂದು ಮನೆಗಳ ಅಗ್ರಹಾರ ಕಟ್ಟಿಸಿಕೊಡುವಲ್ಲಿ ಅವರು ಧಾರೆಯೆರೆದ ಶ್ರದ್ಧೆ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಾಧ್ಯಕ್ಷರಾಗಿ, ಕೇಂದ್ರ ಕಸಾಪ ಅಧ್ಯಕ್ಷರಾಗಿ ಸಾಹಿತ್ಯ ಸರಸ್ವತಿಯ ಸೇವೆಗೆ ನೀಡಿದ ಹೊಸ ವ್ಯಾಖ್ಯಾನ, ಕಾಂತಾವರ ಕನ್ನಡ ಸಂಘದ ಮುದ್ದಣ ಸ್ಮಾರಕ ಕಾವ್ಯ ಸ್ಪರ್ಧೆ ಹಾಗೂ ಕಾಸರಗೋಡಿನ ಪೆರ್ಲ ಪ್ರತಿಷ್ಠಾನದ ಕಾವ್ಯಸ್ಪರ್ಧೆಗೆ ವರ್ಷಂಪ್ರತಿ ನೀಡುತ್ತ ಬಂದಿರುವ ಸಹಕಾರ ಇವೆಲ್ಲವೂ ಹರಿಕೃಷ್ಣರನ್ನು ಪುನರೂರು ಮೂಲದ ಒಬ್ಬ ಪ್ರಾಮಾಣಿಕ ಸೇವಾಕಾಂಕ್ಷಿ, ಜೀವನಧರ್ಮದ ಅರ್ಥಪೂರ್ಣ ಅನುಷ್ಠಾನಕ್ಕೆ ತುಡಿಯುವ ಸರಳ ವ್ಯಕ್ತಿ ಎನ್ನುವುದಕ್ಕೆ ಅರ್ಥಪುಷ್ಟಿ ನೀಡುವ ಉದಾಹರಣೆಗಳು. ಹೀಗೆ ತನ್ನ ಪೂರ್ವನಾಮವನ್ನೂ ಉತ್ತರ ನಾಮವನ್ನೂ ಸಾರ್ಥಕಪಡಿಸಿಕೊಡಿಸಿಕೊಂಡ ಮಹನೀಯರು ನಾಡಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಇಂಥ ವ್ಯಕ್ತಿ ದಕ್ಷಿಣ ಕನ್ನಡ ಕರಾವಳಿಯ ಒಂದು ಹೆಮ್ಮೆಯ ಕೊಡುಗೆ– ಇದು ಕಸಾಪದ ಮಾಜಿ ಅಧ್ಯಕ್ಷ, ಹೋಟೆಲ್ ಉದ್ಯಮಿ, ಸಾಹಿತ್ಯ ಸಂಘಟಕ, ಸಮಾಜ ಸೇವಾಸಕ್ತ, ಧಾರ್ಮಿಕ ಸೇವಾಕಾಂಕ್ಷಿ, ಕೊಡುಗೈ ದಾನಿ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಒಂದು ಚಿತ್ರ.

ಇಂಥ ಪುನರೂರು ಹರಿಕೃಷ್ಣರಾಯರನ್ನು ಗೌರವಪೂರ್ವಕವಾಗಿ ಕಾಣುತ್ತಲೇ ವಸ್ತುನಿಷ್ಠವಾಗಿ ಅವರ ವ್ಯಕ್ತಿತ್ವವನ್ನು ಹಲವು ಕೋನಗಳಿಂದ ಕಂಡು ಇತರರಿಗೂ ಕಾಣಿಸುವ ಪ್ರಯತ್ನ ಇದುವರೆಗೆ ನಡೆದಿಲ್ಲವೆಂದೇ ಹೇಳಬೇಕು. ಇದುವರೆಗೆ ಬಂದಿರುವ ಅವರನ್ನು ಕುರಿತ ವ್ಯಕ್ತಿ ಚಿತ್ರಗಳು ಒಂದಿಲ್ಲೊಂದು ಕಾರಣಕ್ಕೆ ಆರಾಧನಾಭಾವದಿಂದಲೇ ಕಂಡಿವೆ ಅಥವಾ ಇದುವರೆಗೆ ಅವರ ಬಗ್ಗೆ ಕೇಳಿಬಂದಿರುವ ಸಂಗತಿಗಳು ಸ್ವಲ್ಪಮಟ್ಟಿನ ಅಸೂಯೆಯಿಂದ ಹಾಗೂ ಹೆಚ್ಚಿನ ಮಟ್ಟಿನ ಆಕ್ಷೇಪಣ ಭಾವದಿಂದ ವಿಕೃತಗೊಂಡಿವೆ. ಹರಿಕೃಷ್ಣರು ತನ್ನ ಜೀವನದುದ್ದಕ್ಕೂ ಮಾಡಿಕೊಂಡು ಬಂದದ್ದೇನು, ಈ ಕೆಲಸ ಕಾರ್ಯಗಳ ಹಿಂದಿನ ಆಶಯಗಳೇನಿದ್ದವು, ಯಾವ ಯಾವ ವ್ಯಕ್ತಿಗಳಿಂದ, ಸಂಗತಿಗಳಿಂದ ಅವರು ಪ್ರೇರಿತರಾದರು, ಆ ಪ್ರೇರಣೆಯ ಫಲವಾಗಿ ಅವರು ಹೇಗೆ ನಡೆದುಕೊಂಡರು, ವಸ್ತುತಃ ಅವರಿಗೆ ಎಂಥ ಸವಾಲುಗಳು ಎದುರಾದವು, ಅಂಥ ಸನ್ನಿವೇಶಗಳಿಗೆ ಎಂಥೆಂಥ ರೀತಿಗಳಲ್ಲಿ ಅವರು ಸ್ಪಂದಿಸಿದರು, ಅಂಥ ಸಂದರ್ಭಗಳಿಂದ ಇತರರಿಗೆ ಯಾವ ತೆರನ ಪ್ರಯೋಜನ–ಸಮಾಧಾನಗಳು ಉಂಟಾಗಿವೆ ಇವುಗಳನ್ನೆಲ್ಲ ಅವರಿಂದ ಸ್ವಲ್ಪ 'ದೂರದಲ್ಲಿ' ನಿಂತು ಅವಲೋಕಿಸುವ ಕೆಲಸ ಇದುವರೆಗೆ ಆಗಿಲ್ಲವೆಂದೇ ಹೇಳಬೇಕು.

★★★

'ಯಾಕೆ ಆಗಿಲ್ಲ?' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಕಷ್ಟವೇನಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯ ಚಿತ್ರಣಕ್ಕೆ ಹೊರಟವನಿಗೆ 'ಮೂಲಮೂರ್ತಿ'ಯನ್ನು ವಿರೂಪಗೊಳಿಸಬಾರದೆಂಬ ಅತಿ ಜಾಗರೂಕ ಭಾವವೊಂದು ಮನಸ್ಸಿನ ಆಳದಲ್ಲಿ ಇದ್ದೇ ಇರುತ್ತದೆ. ಅಭಿನಂದನ ಗ್ರಂಥಗಳು ಇರುವುದು ಆ ವ್ಯಕ್ತಿಯನ್ನು ಹೊಗಳಲಿಕ್ಕಾಗಿ ವಿನಾ ವಿಮರ್ಶಿಸಲಿಕ್ಕಾಗಿ ಅಲ್ಲ– ಎಂಬ ಸಂಪ್ರದಾಯಕ್ಕೆ ನಿಷ್ಠರಾದವರು ನಾವು. ಇದು 'ಸಹಜ'ವೆಂಬಂತೆ ಮುಂದುವರಿದುಕೊಂಡು ಬಂದಿರುವ ಒಂದು ಸಂಪ್ರದಾಯ. ಆದರೆ ಕೆಲವೊಂದು ವ್ಯಕ್ತಿತ್ವಗಳಿರುತ್ತವೆ. ಅವುಗಳ ಸೌಂದರ್ಯ ಪ್ರಕಟವಾಗಬೇಕಾದರೆ ಅವುಗಳ ಅಂತರಂಗ–ಬಹಿರಂಗ ದರ್ಶನದ ಕೆಲಸ ಪ್ರಾಂಜಲವಾಗಿ ನಡೆಯಬೇಕು. ಪುನರೂರು ಅವರದ್ದು ಇಂಥ ಸಂಕೀರ್ಣ ವ್ಯಕ್ತಿತ್ವ. ಮೇಲ್ನೋಟಕ್ಕೆ ಬಹಳ ಸರಳ ಎಂದು ಕಾಣಿಸುವ, ಆದರೆ ಬಗೆದಂತೆ ತನ್ನ ಆಂತರಿಕ ಬಲಿಷ್ಠತೆಯನ್ನು ಕಾಣಿಸಿ ಬೆಚ್ಚಿಬೀಳಿಸುವ ವ್ಯಕ್ತಿತ್ವ. ಅವರೊಳಗೊಬ್ಬ ವ್ಯಕ್ತಿ–ಅವನೇನೂ ದುರ್ಬಲನಲ್ಲ. ಅವನೊಬ್ಬ ನಾನ್–ಅಕಾಡೆಮಿಕ್ ವ್ಯಕ್ತಿ. ಪೇಟೆ ಪಟ್ಟಣಗಳಿಂದ ಜನಿತವಾದ ನಯ–ನಾಜೂಕಿನ

ಲಕ್ಷಣಗಳನ್ನು ನೀವು ಅವರಲ್ಲಿ ಕಾಣಲಾರಿರಿ. ನೇರವಾಗಿ ನುಡಿಯುವ, ನಡೆಯುವ ಅವನ ನಡವಳಿಕೆ ನಿಮ್ಮಲ್ಲಿನ 'ನಾಗರಿಕ'ನನ್ನು ಸ್ವಲ್ಪಮಟ್ಟಿಗಾದರೂ ವಿಚಲಿತಗೊಳಿಸುತ್ತದೆ. ನಿಮ್ಮ ವಿದ್ಯೆಗೆ, ಪಾಂಡಿತ್ಯಕ್ಕೆ, ಸಾಮಾಜಿಕ ಸ್ಥಾನಮಾನಕ್ಕೆ ಅವನು ನೀಡುವ ವಿನಯಪೂರ್ವಕ ಗೌರವ, ನಿಮ್ಮಲ್ಲಿನ 'ಅಹಂ'ಅನ್ನು ಬಡಿದೆಬ್ಬಿಸುತ್ತಲೇ, ಇಂಥ ನಡವಳಿಕೆ ನಿಮಗೂ ಏಕೆ ಸಾಧ್ಯವಿಲ್ಲ ಎಂಬ ಅಂಶ ನಿಮ್ಮ ಮನಸ್ಸಿಗೆ ಥಟ್ಟನೆ ಹೊಳೆಯುತ್ತದೆ- ಅದು ಪುನರೂರು ಅವರಿಗೆ 'ಸ್ವಯಂ ಅಥವಾ ಅನ್ಯ ತರಬೇತಿ'ಯಿಂದ ಬಂದದ್ದಲ್ಲ; ಅದವರ ಸಹಜ ಹುಟ್ಟುಗುಣ. ಒಬ್ಬ ಹಳ್ಳಿಯ ಮನುಷ್ಯ ನಮ್ಮನ್ನು ತನ್ನ ವಿನಯ, ಪರಂಪರಾಗತ ಬುದ್ಧಿವಂತಿಕೆ, ಮೇಲ್ನೋಟದ ಒರಟೊರಟೆಂಬಂತೆ ತೋರುವ ಲೋಕಾಭಿರಾಮ ಮಾತಿನವರಸೆ ಮತ್ತು ಅನ್ಯರ ಮಾತಿಗೆ ತಾಳ್ಮೆಯಿಂದ ಕಿವಿಗೊಡುವ ಗುಣಗಳಿಂದ ಹಾಗೂ ತನ್ನ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ಪ್ರಕಟಿಸುವ ಗುಣದಿಂದ ಶೋಭಿಸುವಂತೆ, ಆ ಮೂಲಕ ನಾಗರಿಕತೆಯೆಂಬುದು ಕೊನೆಗೂ ಗ್ರಾಮೀಣ ಸೌಂದರ್ಯದ ಎದುರು ಕತ್ತು ತಗ್ಗಿಸಬೇಕಾಗುತ್ತದೆ ಎಂಬ ಎಚ್ಚರವನ್ನೂ ಒಳಗೊಳಗೇ ಹುಟ್ಟಿಸುತ್ತಿರುತ್ತಾನೆ. ಅದು ನಮ್ಮ ಗ್ರಾಮಭಾರತ ನಾಗರಿಕ ಜಗತ್ತಿಗೆ ಇನ್ನೂ ನೀಡುತ್ತಿರುವ ಕೊಡುಗೆ. ಇತ್ತೀಚೆಗೆ ಇಂಥ ವ್ಯಕ್ತಿತ್ವಗಳು ನಗರೀಕರಣದ ಸೆಳೆ-ಆಮಿಷಗಳಿಗೆ ಸಿಕ್ಕು ಬಲಿಯಾಗುತ್ತಿವೆ. ಆದರೆ ಪುನರೂರು ಏನಕೇನ ಪ್ರಕಾರೇಣ ತನ್ನ ಆ ಸಹಜಗುಣವನ್ನು ಕಾಪಿಟ್ಟುಕೊಂಡು ಬಂದಿದ್ದಾರೆ.

ಕೈಗೆತ್ತಿಕೊಂಡ ಯಾವುದೇ ಕೆಲಸವಿರಲಿ ಅದನ್ನು ಅರ್ಧಕ್ಕೆ ನಿಲ್ಲಿಸದೆ ಎಗ್ಗಿರದೆ, ತಡೆಯದೆ ಮುಂದುವರಿಸಿ ಅದನ್ನು ಸುಸಂಪನ್ನಗೊಳಿಸುವುದು ಅವರ ಒಂದು ಗುಣ. ಹಾಗೆ ಕೆಲಸ ಮಾಡುವಾಗ ಅವರು ತಾನು ಹೋಟೇಲು ಸಾಹುಕಾರ, ಒಂದು ದೊಡ್ಡ ಸಂಸ್ಥೆಯ ಪದಾಧಿಕಾರಿ ಮುಂತಾದ ಉಪಾಧಿಗಳೆಲ್ಲವನ್ನೂ ಮರೆತುಬಿಟ್ಟಿರುತ್ತಾರೆ. ಹಿಡಿದ ಕೆಲಸ ಆಗುವುದಿಲ್ಲವೆಂದರೆ- 'ಯಾಕೆ ನೋಡುವ!' ಎಂಬ ಕೆಚ್ಚಷ್ಟೆ ಆಗ ಅವರಲ್ಲಿರುವುದು. ಈ ಸ್ವಭಾವ ಅವರಿಂದ ಹಲವಾರು ವಿಶಿಷ್ಟ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ, ಸಾಂಸ್ಕೃತಿಕ ಕೈಂಕರ್ಯಗನ್ನು ಯಶಸ್ವಿಯಾಗಿ ನೆರವೇರಿಸುವಂತೆ ಮಾಡಿದೆ. ಈ ಕೆಚ್ಚಿನಿಂದ ದುಡಿಯುತ್ತಿರುವಾಗ ಅವರಲ್ಲಿರುವ ಪ್ರಾಮಾಣಿಕತೆ- ಅದು ಇಂದಿನ ದಿನಗಳಲ್ಲಿ ಅಪರೂಪವಾಗಿರುವ ಒಂದು ಜನ್ಮದತ್ತ ಗುಣವೆಂದೇ ಹೇಳಬೇಕು.

ವೈಯಕ್ತಿಕ ಕೆಲಸಗಳಲ್ಲಾಗಲಿ, ಆಯ್ದುಕೊಂಡ ಸಾರ್ವಜನಿಕ ಕಾರ್ಯಭಾರಗಳಲ್ಲಾಗಲಿ ಹೀಗೆ ತೊಡಗಿರುವಾಗ 'ನಾನು ಕರ್ತವ್ಯವನ್ನಷ್ಟೆ ಮಾಡುತ್ತಿದ್ದೇನೆ' ಎಂಬ ನೈತಿಕ ಧೈರ್ಯ ಅವರಲ್ಲಿ ಆವೇಶಿತವಾಗಿರುವಂತೆ ಕಂಡುಬರುತ್ತದೆ. ಅವರ ಈ ಧೈರ್ಯಕ್ಕೆ ಇನ್ನೊಂದು ಕಾರಣ, ಅವರ ಮಾಜಿ ಪಟೇಲಿಕೆಯ ಮನೆತನದ ಹಿನ್ನೆಲೆಯೂ ಇರಬಹುದು. ಇಂಥಲ್ಲಿ ಅವರ ಸ್ವಾಭಿಮಾನವೂ ಸಾಕಷ್ಟು ಕೊಡುಗೆಯನ್ನು ನೀಡುತ್ತ ಬಂದಿದೆ. ಅಹಂಕಾರದ ನಡತೆಯೆದುರು ತಲೆ ಬಗ್ಗಿಸಲಾರೆ ಎಂಬ ಅವರ ಹಠ ಅವರ ಕಿಶೋರಾವಸ್ಥೆಯಿಂದಲೇ ಅವರಲ್ಲಿ ಮನೆ ಮಾಡಿದೆ. (ನೋಡಿ- 'ಪುನರೂರು ನೆನಪುಗಳು' ಲೇಖನದಲ್ಲಿನ ಕುತ್ತೆತ್ತೂರು ಆಚಾರ್ಯರೊಂದಿಗಿನ ಮುಖಾಮುಖಿ, ಚೆನ್ನೈ- ಆಗಿನ ಮದ್ರಾಸ್-ನಲ್ಲಿ ಉಡುಪ ಕುಟುಂಬ ನಡೆಸುತ್ತಿದ್ದ ಅಂಗಡಿಯಲ್ಲಿನ ಪ್ರಸಂಗ, ಕೇರಳದ ಸೂರಿಸ್ವಾಮಿ ಎಂಬ 'ರೌಡಿ'ಗೆ 'ಬುದ್ಧಿ' ಕಲಿಸಿದ ಪ್ರಸಂಗ.). ಇಷ್ಟೇ ಅಲ್ಲ, ಅನ್ಯಾಯ ಎಲ್ಲೆಲ್ಲಿ ನಡೆಯುತ್ತದೆ, ಅಲ್ಲೆಲ್ಲ ಅದನ್ನು ಪ್ರತಿಭಟಿಸಿ ನಿಲ್ಲುವುದು ತನ್ನ ಕರ್ತವ್ಯ ಎಂಬ ಭಾವದಲ್ಲಿ ಅವರು, ಸೆಟ್ಟು ಹೊಡೆದು ನಿಂತಿರುವುದನ್ನೂ ಕಾಣುತ್ತೇವೆ. ಇಂಥ ಪ್ರಸಂಗಗಳಲ್ಲಿ ಅನೇಕರ ಅಸಮಾಧಾನಕ್ಕೆ, ಕೋಪಕ್ಕೆ ಕಾರಣರಾದದ್ದನ್ನೂ ಕಾಣುತ್ತೇವೆ. ತನ್ನ

ವರ್ಚಸ್ಸಿನಿಂದ, ವೈಯಕ್ತಿಕ ಸಾಮರ್ಥ್ಯದಿಂದ ಈ ಅಸಮರ್ಪಕತೆಯನ್ನು ನಿವಾರಿಸುವುದು ಸಾಧ್ಯವಾಗದೆಂದು ಕಂಡುಬಂದಾಗ, ಅವರು ನ್ಯಾಯಾಲಯದ ಬಾಗಿಲನ್ನು ತಟ್ಟಿದ್ದಾರೆ. ಹೆಚ್ಚಿನೆಡೆಗಳಲ್ಲಿ ಜಯವನ್ನೂ ಸಾಧಿಸಿದ್ದಾರೆ. ಇಷ್ಟಾಗಿಯೂ ಇಂಥ ಪ್ರಸಂಗಗಳ ಬಗ್ಗೆ ಅವರಿಗೆ ಯಾವುದೇ ಪಶ್ಚಾತ್ತಾಪವಾಗಲಿ, ಕಹಿಭಾವವಾಗಲಿ ಇಲ್ಲ. ಹಾಗೆ ನಡೆದುಕೊಳ್ಳುವುದು ತನ್ನ ಕರ್ತವ್ಯವಾಗಿತ್ತು- ಎನ್ನುವುದು ಅವರ ನಿಶ್ಚಯವಾದ ನಂಬಿಕೆ.

★★★

ತನ್ನ ನೆರವು ಕೋರಿಬಂದವರಿಗೆ 'ಇಲ್ಲ' ಎನ್ನಬಾರದು ಎಂಬ ರಕ್ಷಕಭಾವ ಪುನರೂರರಲ್ಲಿ ಸದಾ ಜಾಗ್ರತವಾಗಿರುವುದನ್ನು ಅವರ ಅನೇಕ ಸಾಮಾಜಿಕ, ಧಾರ್ಮಿಕ, ಸಾಹಿತ್ಯ-ಸೇವಾ ನಿರ್ವಹಣೆಯ ಹಿಂದೆ ಕೆಲಸ ಮಾಡಿರುವುದನ್ನೂ ನಾವು ಗಮನಿಸಬಹುದು. ಅನೇಕ ಬಡವಿದ್ಯಾರ್ಥಿಗಳಿಗೆ, ಬಡ ತಂದೆತಾಯಿಗಳಿಗೆ, ವಿಧವೆಯರಿಗೆ, ವಿಚ್ಛೇದನದ ಅಂಚಿನಲ್ಲಿದ್ದ ದಂಪತಿಗಳಿಗೆ, ಸಾಹಿತಿ-ಕಲಾವಿದರುಗಳಿಗೆ ಅವರು ಫಲಾಪೇಕ್ಷೆಯಿಲ್ಲದೆ ನೆರವಾಗಿದ್ದಾರೆ. ಇಂಥ ಸಕಾಲಿಕ ನೆರವು ನೀಡುವ ಅವರ ಸದ್ದಿಲ್ಲದ, ಪ್ರಚಾರ ಬಯಸದ ಕೆಲಸ ಇನ್ನೂ ಮುಂದುವರಿದಿದೆ. ಸ್ವತಃ ನಾಲ್ಕೈದು ಶಾಲೆಗಳ ನಿರ್ವಹಣೆಯನ್ನು ವಹಿಸಿಕೊಂಡಿರುವುದಲ್ಲದೆ ಅವುಗಳ ಹೆಚ್ಚುವರಿ ವೆಚ್ಚವನ್ನು ಭರಿಸುವ ಕೆಲಸವೂ ನಿರಂತರವಾಗಿ ಸಾಗಿದೆ. ಸಾಹಿತಿ, ಕಲಾವಿದರೆಂದರೆ ಅವರಿಗೆ ಎಲ್ಲಿಲ್ಲದ ಅಭಿಮಾನ. ಸಾಹಿತ್ಯ ಕೃತಿಗಳ ಪ್ರಕಟಣೆ, ಮಾರಾಟಕ್ಕೂ ಅವರಿಂದ ಗಣನೀಯ ಕೊಡುಗೆ ಸಂದಿದೆ. ತನ್ನ ವಿದ್ಯಾಗುರು, ಕಿನ್ನಿಗೋಳಿಯ ಕೊಡೆತ್ತೂರು (ದಿವಂಗತ) ಅನಂತಪದ್ಮನಾಭ ಉಡುಪರ 'ಯುಗಪುರುಷ' ಮಾಸಪತ್ರಿಕೆ ಹಾಗೂ ಅದರ ಸೋದರ ಸಂಸ್ಥೆಗಳ ಚಟುವಟಿಕೆಗಳ ಹಿಂದೆ ಅವರ ಪ್ರೋತ್ಸಾಹದ ಹಸ್ತ ಇದ್ದೇ ಇದೆ. ವಿದ್ಯೆ ಕಲಿಸಿದ ಗುರುವಿನ ಋಣವನ್ನು ತೀರಿಸಬೇಕು ಎಂಬ ಕರ್ತವ್ಯ ದೃಷ್ಟಿ ಜೊತೆಗೆ ಒಂದು ಪ್ರಕಾಶನ ಸಂಸ್ಥೆಗೆ ತನ್ನಿಂದ ಇಷ್ಟಾದರೂ ಸಹಾಯವಾಗುತ್ತಿದೆಯಲ್ಲ ಎಂಬ ಧನ್ಯತಾಭಾವ ಇವೆರಡೂ ಇಲ್ಲಿ ಕೈಕೈ ಹಿಡಿದು ಸಾಗುತ್ತಿವೆ. ಜೊತೆಗೆ, ಅವರಿಂದ ಸಕಾಲಿಕ ಸಹಾಯ ಪಡೆದ ಅನೇಕ ಏಕವ್ಯಕ್ತಿ ಪ್ರಕಾಶನ ಸಂಸ್ಥೆಗಳಿವೆ; ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಿ ಮಾರಾಟ ಮಾಡಲು ಕಷ್ಟಪಡುತ್ತಿದ್ದ ನೂರಾರು ಕವಿಗಳು, ಲೇಖಕರು ಅವರಿಂದ ಉಪಕೃತರಾಗಿದ್ದಾರೆ. 'ವಿದ್ವಾನ್ ಪೆರ್ಲ ಕೃಷ್ಣಭಟ್ಟ ಸಾಂಸ್ಕೃತಿಕ ಪ್ರತಿಷ್ಠಾನ' ಒಂದೆರಡು ದಶಕಗಳ ಹಿಂದೆ ರಾಜ್ಯಮಟ್ಟದ ಕಾವ್ಯಸ್ಪರ್ಧೆಯ ಯೋಜನೆಯನ್ನು ಆರಂಭಿಸಿದಾಗ, ಪ್ರತಿವರ್ಷ ಪ್ರಶಸ್ತಿ ಮೊತ್ತದ ಒಂದಂಶವನ್ನು ದೇಣಿಗೆ ನೀಡುವುದಾಗಿ ವಾಗ್ದಾನ ನೀಡಿದ್ದ ಪುನರೂರು, ತನ್ನ ಆ ವಚನವನ್ನು ಇಷ್ಟು ವರ್ಷಗಳ ತನಕವೂ ಪೂರೈಸುತ್ತ ಬಂದಿದ್ದಾರೆ. ಕಾಂತಾವರ ಕನ್ನಡ ಸಂಘದ ಅಖಿಲ ಕರ್ನಾಟಕ ಮಟ್ಟದ ಮುದ್ದಣ ಸ್ಮಾರಕ ಕಾವ್ಯ ಸ್ಪರ್ಧೆಯ ಪ್ರಾಯೋಜಕರಾಗಿ ಕಳೆದ 14 ವರ್ಷಗಳಿಂದ ಸಹಕರಿಸುತ್ತ ಬಂದಿದ್ದಾರೆ. ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಸಂಸ್ಥೆ ಸ್ಥಾಪನೆಗೊಂಡು ಅದು ಕಳೆದ ಹತ್ತು ವರ್ಷಗಳಿಂದ ಹಲವು ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುವಂತಾಗಿರುವುದು ಅವರ ಪೋಷಕತ್ವದಿಂದಾಗಿ.

★★★

ಹರಿಕೃಷ್ಣ ಪುನರೂರ್ರು ಒಬ್ಬ ಧರ್ಮಭೀರು. ಬಲಪಂಥೀಯ ಎಂದು ಎಡಪಂಥೀಯರಿಂದ, ವಿಚಾರವಾದಿಗಳಿಂದ ವ್ಯಾಖ್ಯಾನಿಸಲ್ಪಟ್ಟಿರುವ ಧಾರ್ಮಿಕ ಮುಂದಾಳು. ಅವಿಭಜಿತ ಜಿಲ್ಲೆಯ ಅನೇಕ ಧಾರ್ಮಿಕ ಮುಖಂಡರುಗಳ ಮುಖವಾಣಿ: ಈ ಮುಖಂಡರುಗಳು ತಾವು ನೀಡಬೇಕಿದ್ದ ಹೇಳಿಕೆಗಳನ್ನು

ಅವರ ಬಾಯಿಂದ ನೇರವಾಗಿ, ಖಾರವಾಗಿ ಹೇಳಿಸಿ ಸಮಾಧಾನಪಟ್ಟಿದ್ದಾರೆ. ಪುನರೂರು ಇಂಥ ಹೇಳಿಕೆಗಳ ಮೂಲಕ ಪ್ರಚಂಡ ಬಲಪಂಥೀಯ ಕಾರ್ಯಕರ್ತ ಎಂಬ 'ಬಿರುದಿ'ಗೆ ಪಾತ್ರರಾಗಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನ ಯಶಸ್ವೀ ಕಾರ್ಯಕ್ರಮಗಳ ಹಿಂದೆ ಅವರ ಸಂಘಟನಾ ಚತುರತೆ ಬಹಳಷ್ಟು ಪಾತ್ರವಹಿಸಿದೆ. ಉಡುಪಿಯ ಕನಕ ಗೋಪುರ ವಿವಾದದಲ್ಲಿ ಕುರುಬ ಸಮುದಾಯದ ಪ್ರಸ್ತಾವಿತ 'ಮುತ್ತಿಗೆ'ಯನ್ನು, 'ಬನ್ನಿ, ನೋಡಿಕೊಳ್ಳುತ್ತೇವೆ' ಎಂಬ ಒಂದೇ ಮಾತಿನ ಎಚ್ಚರಿಕೆಯಿಂದ ಅಸಂಭವಗೊಳಿಸಿದರು. ಅವರ ಹಿಂದೆ ನಿಂತಿದ್ದವರು ಸಮಾಧಾನದ ಉಸಿರು ಬಿಡುವಂತೆ ಮಾಡಿದರು. ಸೌಮ್ಯವಾದಿಗಳಾದ ಪೇಜಾವರ ಶ್ರೀಗಳ ಮೂಲಕ ಈ ವಿವಾದದ ಬಗ್ಗೆ ಚರ್ಚೆ ನಡೆದು ಕನಕಗೋಪುರದ ಬಗೆಗಿನ ಕೆಲವೊಂದು ಅಪಾರ್ಥಗಳು ಬಗೆಹರಿದವು. ಇದರಲ್ಲಿ ಗಲಾಟೆಯಾಗಬಹುದು ಎಂದು ನಿರೀಕ್ಷಿಸಿದ್ದವರಿಗೆ ನಿರಾಶೆಯಾಯಿತು. ಆದರೆ ಪುನರೂರು ಅವರಿಗೆ ಇಂಥ ನಿರಾಶೆ ಆದಂತಿಲ್ಲ. ಮೊನ್ನೆ ಮೊನ್ನೆ 'ಮತ್ತೆ ಮುತ್ತಿಗೆ ಹಾಕ್ತೀವಿ' ಎಂದು ಬೆದರಿಕೆ ಹಾಕಿದವರಿಗೆ ಅವರು ಮತ್ತೆ ಸವಾಲಾಗಿ ನಿಂತಿದ್ದಾರೆ. ಇದರ ಪರಿಣಾಮವೇನಾದೀತು ಎಂಬ ಬಗ್ಗೆ ಅವರು ತಲೆಕೆಡಿಸಿಕೊಂಡಿಲ್ಲ. ಇಂಥ ನಿರಾಳತೆಯ ಹಿಂದೆ ಇರುವುದು ಪ್ರಾಯಃ 'ಧರ್ಮಸಮ್ಮತವಾದ ಕೆಲಸ ಇದು, ನಾನೇನೂ ಹೆದರುವವನಲ್ಲ' ಎಂಬ ಆತ್ಮವಿಶ್ವಾಸ.

ಅವರು ಬೆಳಗ್ಗಿನ ಜಪ, ಪೂಜೆ ಮುಗಿಸಿಯೇ ಮನೆ ಬಿಡುವವರು. ಭಗವತ್‌ಶಕ್ತಿ ತನ್ನೆಲ್ಲ ಚಟುವಟಿಕೆಗಳ ಹಿಂದಿದೆ ಎಂದು ಗಾಢವಾಗಿ ನಂಬಿರುವವರು. ಹಾಗೆಂದು ಕರ್ಮಠ ಬ್ರಾಹ್ಮಣನೇನೂ ಅಲ್ಲ. ಸಾಂಪ್ರದಾಯಕ 'ಮಡಿಗಿಡಿ' ಎಂದು ಹಾರಾಡುವವರಲ್ಲ. ಎಲ್ಲರ ಜೊತೆ ಬೆರೆಯುವವರು. ಅವರ ಮಿತ್ರರಲ್ಲಿ ಎಲ್ಲ ಜಾತಿ-ವರ್ಗ-ಪಂಗಡಗಳ ಜನರಿದ್ದಾರೆ. ಎಲ್ಲರ ಜೊತೆಗೂ ಒಂದು ರೀತಿಯ ಸಲಿಗೆಯಿಂದ ಬೆರೆಯುವ, ಸ್ನೇಹವನ್ನು ದುರುಪಯೋಗಿಸಿಕೊಂಡಾಗ ಗದರುವ, ಆಮೇಲೆ ಅದನ್ನು ಮರೆತುಬಿಡುವ, 'ಮತ್ಲಬಿ'ಗಳನ್ನು ಅವರೆದುರೇ 'ಚಿತ್' ಮಾಡುವ ಪುನರೂರು, ವ್ಯಕ್ತಿಯ ವಿನಯ, ಪ್ರತಿಭೆಗೆ ಬೆಲೆ ಕೊಡುವವರೆಂಬುದನ್ನು ಅವರನ್ನು ಹತ್ತಿರದಿಂದ ನೋಡಿದ ಅನೇಕರು ಬಲ್ಲರು. ಅವನವನ ಧರ್ಮ ಅವನವನಿಗೆ ಎಂಬ ಮಾತಿನಲ್ಲಿ ಅವರಿಗೆ ನಂಬಿಕೆ. ಹಿಂದುಗಳ ಮುಖವಾಣಿಯೆಂಬಂತೆ ಅಭಿಪ್ರಾಯ ಪ್ರಕಟಿಸುವ ವೇಳೆ ಅವರ ಹೇಳಿಕೆಯಲ್ಲಿನ 'ಖಾರ'ದಲ್ಲಿ ರಾಜಕೀಯದ ಗಂಧವಿದೆಯೆಂಬ ಅನುಮಾನ ಅನೇಕರಿಗೆ ಬಂದದ್ದುಂಟು. ರಾಜಕೀಯದಲ್ಲಿ ಮಾತ್ರ ಪುನರೂರು ಕಾಲಿಟ್ಟಿಲ್ಲ; ಇಟ್ಟಿದ್ದರೆ ನಮಗೊಬ್ಬ ದಕ್ಷ ರಾಜಕಾರಣಿ ಸಿಗುತ್ತಿದ್ದ ಎಂಬರ್ಥದ ವಾಕ್ಯವೊಂದನ್ನು ಈ ಸಂಪುಟದ ಎರಡನೆಯ ಭಾಗದಲ್ಲಿರುವ ಲೇಖನವೊಂದರಲ್ಲಿ ನೋಡಬಹುದು. ಹೌದೆ? ಈ ಮಾತನ್ನು ಒಪ್ಪಬಹುದೆ? ಬಹುಶಃ ಸಾಧ್ಯವಿಲ್ಲ. ರಾಜಕಾರಣಿಯ ನಯನಾಜೂಕು, ಜನರನ್ನು ಆಮಾಯಕವಾಗಿ ಮಾತನಾಡುವ ಕಲೆ ಅವರಿಗೆ ಸಿದ್ಧಿಸಿಲ್ಲ. ಸದ್ಯದ ರಾಜಕೀಯದ ಮೇಲೆ ಪ್ರಭಾವ ಬೀರಬಲ್ಲ ಪಕ್ಷವೊಂದರ ಚಿಂತನೆಗೆ ಹಿಂದೆ ಅನೇಕ ಬಾರಿ ಮೂಲಪ್ರೇರಣೆ ಒದಗಿಸಿದ್ದ ಸಂಘಟನೆಯೊಂದರ ಪಕ್ಷ ವಹಿಸಿ ಅವರು ಮಾತನಾಡುವ ಸಂದರ್ಭದಲ್ಲಿ ಅವರ ಈ ಮೂಲಸ್ವಭಾವ ನಮಗೆ ನೆನಪಾದರೆ ಒಳ್ಳೆಯದು ಅನ್ನಿಸುತ್ತದೆ.

★★★

ಇದು ಧರ್ಮರಾಜಕಾರಣದ ಮಾತಾಯಿತು; ಇದರಲ್ಲಿ ಅವರಿಗೆ ಆದ ಲಾಭಕ್ಕಿಂತ ನಷ್ಟವೇ ಜಾಸ್ತಿ ಎಂದು ವಾದಿಸುವವರಿರಬಹುದು. ಇಂಥವರಲ್ಲಿ ಹೆಚ್ಚಿನವರು ಹೊಸ ಕಾಲದ ಒಂದು ಅನಿವಾರ್ಯ

ಕಾಯಿಲೆಯಾದ 'ಒಂದು ಕೊಟ್ಟು ಎರಡು ಪಡೆ' ಎಂಬ ಅಭ್ಯಾಸಕ್ಕೆ ತಮ್ಮನ್ನು ತೆತ್ತುಕೊಂಡಿರುವವರು ಎಂದು ವಿಷಾದದಿಂದ ಹೇಳಬೇಕಾಗಿದೆ. ಪುನರೂರು ವ್ಯವಹಾರ ಚತುರರು; ಸಂಪನ್ಮೂಲವನ್ನು ಹೇಗೆ ತೊಡಗಿಸಿಕೊಳ್ಳುವುದೆಂದು ಅವರಿಗೆ ಗೊತ್ತಿದೆ; ಕಿಶೋರಾವಸ್ಥೆಯಲ್ಲೇ ಹೋಟೇಲ್ ವ್ಯವಹಾರದಲ್ಲಿನ 'ಮೈಹುಡಿ' ಮಾಡಿಕೊಳ್ಳುವ ಗುಣವನ್ನು ತನ್ನ ರಕ್ತದಲ್ಲಿ ಬೆಳೆಸಿಕೊಂಡು ಆ ವ್ಯವಹಾರದಲ್ಲಿ ಮೇಲೆ ಬಂದರು. ಸಾಕಷ್ಟು ಹಣವೂ ಕೈಗೆ ಬಂತು. ಧನಶೇಖರಣ ತಂದೊಡ್ಡುವ ಸ್ವ-ವಿನಾಶದ ಕಾಯಿಲೆಗೆ ಅವರು ತುತ್ತಾಗಲಿಲ್ಲ; ಬದಲಿಗೆ ಸಂಪಾದನೆಯಲ್ಲಿನ ಒಂದು ಅಂಶವನ್ನು ಶಾಲೆ ಆರಂಭಿಸುವುದು, ಸಮಾಜಸೇವೆಯಲ್ಲಿ ವ್ಯಸ್ತನಾಗುವುದು ಮುಂತಾದ ರಚನಾತ್ಮಕ ಚಟುವಟಿಕೆಗಳಿಗೆ ವಿನಿಯೋಗಿಸಿದರು. ಅನೇಕ ನಿರ್ಧನ-ನತದೃಷ್ಟರು ತನ್ನ ಬಳಿ ಬಂದಾಗ ತನಗೆ ಕೊಡಬೇಕು ಅನ್ನಿಸಿದ್ದನ್ನು ಕೊಟ್ಟು ಕಳುಹಿಸಿದರು. ನಡುವೆ ಇಂಥ ಉಪಕಾರ ಕಾರ್ಯಗಳಿಗೆ ಒಂದು ನೆಪವೆಂಬಂತೆ ಲಯನ್ಸ್ ಸಂಸ್ಥೆಯ ಸಂಪರ್ಕ ಲಭಿಸಿತು; ಅದರ ವಿವಿಧ ಪದಾಧಿಕಾರಗಳಲ್ಲಿದ್ದುಕೊಂಡು ನೋಡಿದವರು ಅಹುದಹುದೆಂಬಂತೆ ಹಲವು ಪ್ರಥಮಗಳನ್ನು ಸಾಧಿಸಿದರು. ಕಣ್ಣಿನ ತೊಂದರೆಯಿರುವವರಿಗೆ ನೇತ್ರಚಿಕಿತ್ಸೆ, ಉಚಿತ ಕನ್ನಡಕ ದಾನದಂಥ ಸೇವಾಯೋಜನೆಯಲ್ಲಿ ಅವರಿಗೆ ಅಂತಾರಾಷ್ಟ್ರೀಯ ಮನ್ನಣೆ ಲಭಿಸಿತು; ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆ ತನ್ನ ಚಟುವಟಿಕೆಗಳಲ್ಲಿ 'ದೃಷ್ಟಿದಾನ ಎಲ್ಲಕ್ಕಿಂತ ಮೊದಲು' ಎಂಬ ಸೇವಾಘೋಷಣೆಯನ್ನು ಸೇರ್ಪಡಿಸಿಕೊಳ್ಳುವುದಕ್ಕೆ ಅವರ ದೃಷ್ಟಿದಾನಯಜ್ಞ ಕಾರಣ. ಆ ಸಂಸ್ಥೆಗೆ ಇಡೀ ಭಾರತದ ಸೇವಾ ಪರಂಪರೆಯನ್ನು ಪ್ರತಿನಿಧಿಸುವ 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಘೋಷಣೆಯನ್ನು ನೀಡಿ ದ್ರವ್ಯಸಂಪದದ ಅರ್ಥವನ್ನು ಸೇವೈಕ ದೃಷ್ಟಿಯ ಜೀವನವಿಧಾನದ ಮೂಲಕ ಜೀರ್ಣಿಸಿಕೊಳ್ಳುವ ಸೇವಾಪಥದಲ್ಲಿ 'ಪುನರೂರು' ಎಂಬ ಕಾಯಕ ಕೈಮರವನ್ನು ಭದ್ರವಾಗಿ ನೆಟ್ಟು ಕೃತಾರ್ಥರಾದರು. ಕರಾವಳಿಯ ಭಾಗದಲ್ಲಿನ ಹಲವು ದೇವಸ್ಥಾನಗಳ ಜೀರ್ಣೋದ್ಧಾರ-ಬ್ರಹ್ಮಕಲಶ ಕಾರ್ಯಕ್ರಮಗಳಲ್ಲಿ, ಆಡಳಿತ ನಿರ್ವಹಣೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡು ಅವರು ನಡೆಸಿಕೊಟ್ಟ ಕೆಲಸಗಳ ಹಿಂದೆಯೂ ಇರುವುದು ಈ ಸೇವಾಭಾವವೇ. ಆದರೆ ಇಂಥ ಸೇವಾಕಾಂಕ್ಷಿಗಳು ಅನಿವಾರ್ಯವಾಗಿ ಕೆಲವೊಂದು ಟೀಕೆಗಳಿಗೆ ಗುರಿಯಾಗಬೇಕಾಗುತ್ತದೆ; ಕೊಚ್ಚೆ-ಕೆಸರನ್ನು ಕಳೆಯುವೆನೆಂದು ಹೊರಟವನು ಬೇಡವೆಂದರೂ ತನ್ನ ಉಡುಪಿಗೆ ಸಿಡಿಯುವ ಕೊಳೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ. ನಿಜವಾದ ಆಸ್ಥೆಯಿದ್ದವನು ಅದನ್ನು ನಿರ್ಮಲಗೊಳಿಸಿಕೊಂಡು ಮತ್ತೆ ಅಂಥ ಕೆಲಸವನ್ನು ಮುಂದುವರಿಸಲು ಹೊರಡುತ್ತಾನೆ. ಟೀಕೆಗಳನ್ನು ಕ್ಷಮಿಸುವ, ಕೆಲವೊಮ್ಮೆ ಕೆಲವೊಂದು ಅನೌಪಚಾರಿಕ ಗದರಿಕೆಗಳ ಮೂಲಕ ಬದಿಗೆ ಸರಿಸುವ ಕೆಲಸವನ್ನು ಅವರು ಮಾಡುತ್ತಲೇ ಬಂದಿದ್ದಾರೆ. ಆದರೆ ಈ ಅನೌಪಚಾರಿಕತೆಯನ್ನು ಸ್ವೀಕರಿಸಲೊಪ್ಪದ ಮನಸ್ಸುಗಳಿಗೆ ಅಂಥ ಗದರಿಕೆಗಳು ಉದ್ದೇಶಪೂರ್ವಕ ದುಡುಕಿನ ಹೇಳಿಕೆಗಳಾಗಿ ಸಂಕಟ ಹುಟ್ಟಿಸಿರುವುದು ನಿಜ.

★★★

ಆದರೆ ಇಂಥ ಅನೌಪಚಾರಿಕ ನಡವಳಿಕೆ ಪುನರೂರು ಅವರ ಸೇವಾ ಉತ್ಕಂಠೆಯ ಜೊತೆ ಎಷ್ಟೊಂದು ಸಹಜವಾದ ದಾಂಪತ್ಯವನ್ನು ಸಾಧಿಸಿದೆಯೆಂದರೆ, ಎಷ್ಟೇ ದೊಡ್ಡ ವ್ಯಕ್ತಿಯನ್ನೂ ಬಡಪೆಟ್ಟಿಗೆ ಒಪ್ಪಿಕೊಳ್ಳಲಾರದ ಕರಾವಳಿಯವರ ಒಳಜಂಭವನ್ನು ಗೇಲಿ ಮಾಡಿಯೂ ಅದು ಇಲ್ಲಿನ ಧಾರ್ಮಿಕ-ಸಾಹಿತ್ಯಿಕ ಸಂಸ್ಕೃತಿಯ ಆರಾಧಕರ ಪಾಲಿಗೆ ಸದಾ ಸ್ಫೂರ್ತಿ ನೀಡುವ ಗುಣವಾಗಿ

ಸಾರ್ಥಕಗೊಂಡಿದೆ. ಸಾಹಿತ್ಯ ಸಂಘಟನೆ, ಧಾರ್ಮಿಕ ಸೇವೆಗಳಲ್ಲಿ ತೊಡಗಿರುವವರು ಸಾಮಾನ್ಯವಾಗಿ ಅದು ತರುವ ಕೀರ್ತಿ, ಪ್ರತಿಷ್ಠೆ ಪ್ರಚಾರಗಳ ಲಾಭದತ್ತ ಒಮ್ಮೆಯಾದರೂ ಕಣ್ಣು ಹಾಯಿಸದಿರುವುದಿಲ್ಲ. ಒಮ್ಮೆ ಇವು ಲಭಿಸಿದುವೆಂದರೆ ಅವರ ಅನೌಪಚಾರಿಕ ನಡವಳಿಕೆ ಮಾಯವಾಗುತ್ತದೆ; ಕೀರ್ತಿ ಅವರ ತಲೆ ತಿರುಗಿಸುತ್ತದೆ; ಪ್ರಚಾರದ ಆಮಿಷ ಉಪ್ಪಿನ ಪಾನಕದಂತೆ ಅವರ ಬಾಯಾರಿಕೆಯನ್ನು ಹೆಚ್ಚಿಸುತ್ತ ಹೋಗುತ್ತದೆ. ಈ ಸೇವೆಯನ್ನೇಕೆ ಏಣಿಯನ್ನಾಗಿಸಿಕೊಂಡು ನನಗೆ ಬೇಕಾದ್ದನ್ನು ಪಡೆದುಕೊಳ್ಳಬಾರದು ನಾನು ಎಂಬ ಬಯಕೆಯ ಬೇತಾಳ ಅವರ ಬೆನ್ನಿಗೆ ಜೋತುಬೀಳುತ್ತದೆ. ಬರಬರುತ್ತ ಅವರ ಸುತ್ತಲಿನವರಿಗೆ ಅಲ್ಲದಿದ್ದರೂ ದೂರನಿಂತೇ ಅವರನ್ನು ಪ್ರೀತಿಸುತ್ತಿರುವವರಿಗೆ ಅವರ ಬಗ್ಗೆ ಅನುಮಾನಗಳು ಶುರುವಾಗುತ್ತವೆ. ಅವರ ಬಗ್ಗೆ ತಾತ್ಸಾರಭಾವ ಮೂಡುತ್ತದೆ. ಇಂಥ ಅಪಾಯಗಳಿಗೆ ತುತ್ತಾಗಿಯೂ ಇವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಇಂಥ ಸೇವಾಕ್ಷೇತ್ರಗಳಲ್ಲಿ ಮುಂದುವರಿದವರಿದ್ದಾರೆ. ಈ ವ್ಯಕ್ತಿ ಸಾಹಿತ್ಯ ಸಂಘಟನೆಯಿಂದ ಹೆಸರು ಮಾಡಿಕೊಂಡ, ದುಡ್ಡು ಮಾಡಿಕೊಂಡ ಎಂಬ ಅಪಖ್ಯಾತಿಗೂ ಒಳಗಾದವರಿದ್ದಾರೆ. ಆದರೆ ಪುನರೂರು ಅವರ ಬಗ್ಗೆ ಇಂಥ ಆರೋಪಗಳು ಇಲ್ಲ. ಇಂಥ ಅಸಮಾಧಾನಗಳು ಇಲ್ಲ. ಅನೌಪಚಾರಿಕವಾಗಿ ಓಡಾಡುತ್ತಲೇ ಅವರು ಪ್ರತಿಷ್ಠಿತರ ನಡುವೆ ಇದ್ದಾರೆ. ಪ್ರಚಾರದ ಅಬ್ಬರದ ನಡುವೆಯೇ ಅವರು ತಾನೊಬ್ಬ ವಿನೀತ ಕಾರ್ಯಕರ್ತ ಎಂದು ತೋರಿಸಿಕೊಟ್ಟಿದ್ದಾರೆ. ಲಕ್ಷಗಟ್ಟಲೆ ವೆಚ್ಚ ಮಾಡಬೇಕಾಗಿ ಬರುವ ಕಾರ್ಯಕ್ರಮಗಳ ಪ್ರತಿಯೊಂದು ಹಂತದ ಲೆಕ್ಕಾಚಾರದಲ್ಲಿ ತಾನೊಬ್ಬ ಶುದ್ಧಹಸ್ತನೆಂದು ತೋರಿಸಿಕೊಟ್ಟಿದ್ದಾರೆ. ತಾನು ಎಲ್ಲೆಲ್ಲಿ ಕೆಲಸ ಮಾಡಿದರೋ ಅಲ್ಲೆಲ್ಲ ಅಭಿವೃದ್ಧಿಯಾದದ್ದಕ್ಕೆ ಪುರಾವೆ ಉಳಿಸಿ ಹಿಂದೆ ಸರಿದಿದ್ದಾರೆ. ಮತ್ತೆ ಕೈಕಟ್ಟಿ ಕೂರದೆ ಇನ್ನೊಂದು ಕೆಲಸದತ್ತ ಧಾವಿಸಿದ್ದಾರೆ. ಅವರ ಬಗೆಗಿರುವ ಆರೋಪಗಳೇನಿದ್ದರೂ ಅವರು ಶ್ರೀಮದ್ಗಾಂಭೀರ್ಯದಿಂದ ಅಥವಾ ಸೊಫೆಸ್ಟಿಕೇಟೆಡ್ ಆಗಿ ವರ್ತಿಸುವುದಿಲ್ಲ, ಅಕ್ರಮಗಳಲ್ಲಿ ಕೈಜೋಡಿಸುವುದಿಲ್ಲ ಹಾಗೂ ಅಂಥ ಅಕ್ರಮಗಳನ್ನು ನಡೆಸುವವರನ್ನು 'ಸುಲಭದಲ್ಲಿ ಬಿಟ್ಟುಕೊಡಲು' ಬಯಸುವುದಿಲ್ಲ ಎಂಬುದೇ ಆಗಿದೆ. ಇಂಥ ಗುಣಗಳ ಜೊತೆಗೆ ಅವರ ನಿರ್ಭಯತ್ವ, ಎಲ್ಲಿ-ಯಾರ ಮೂಲಕ-ಯಾವ ರೀತಿಯಲ್ಲಿ ಮುಂದುವರಿದರೆ ಸಂಕಲ್ಪಿಸಿದ ಯೋಜನೆ ಸಂಪನ್ನಗೊಳ್ಳುತ್ತದೆಂಬ ಬಗೆಗಿನ ಮುನ್ನೋಟ, ಕೈಗೊಂಡದ್ದನ್ನು ಪೂರ್ಣಗೊಳಿಸದೆ ವಿರಮಿಸಲಾರೆ ಎಂಬ ಕೆಚ್ಚು, ಏನಾದರೂ ಒಳ್ಳೆಯದನ್ನು ಸಾಧಿಸಬೇಕೆಂಬ ಶ್ರದ್ಧೆ- ಇವು ನಮ್ಮ ಯುವಪೀಳಿಗೆ ಪುನರೂರು ಅವರಿಂದ ಕಲಿತುಕೊಳ್ಳಬೇಕಾದ ಗುಣಗಳು.

★★★

ಇಂಥ ಪುನರೂರು ಕಾಂತಾವರ ಕನ್ನಡ ಸಂಘದೊಂದಿಗೆ -ಪಿತೃಸದೃಶ ವಾತ್ಸಲ್ಯದ ಸಂಬಂಧವನ್ನಿರಿಸಿಕೊಂಡು ಬಂದಿದ್ದಾರೆ. ಕಳೆದ ಎರಡೂವರೆ ದಶಕದಿಂದ ಅವರು ಸಂಘದ ಪ್ರತಿಯೊಂದು ಚಟುವಟಿಕೆಯನ್ನು ಹತ್ತಿರದಿಂದ ಗಮನಿಸುತ್ತ ಬಂದಿದ್ದಾರೆ. ಹಿಂದೆಯೇ ಹೇಳಿದಂತೆ ಅದರ ಮುದ್ದಣ ಸ್ಮಾರಕ ಕಾವ್ಯ ಬಹುಮಾನ ಸ್ಪರ್ಧೆಯಂಥ ರಾಜ್ಯಮಟ್ಟದ ಕಾವ್ಯ ಪುರಸ್ಕಾರ ಯೋಜನೆಯ ಪ್ರಾಯೋಜಕರಾಗಿ ಸಹಕಾರ-ಸಲಹೆಗಳನ್ನು ನೀಡುತ್ತ ಬಂದಿದ್ದಾರೆ. ಕನ್ನಡ ಸಂಘದಂಥ ಗ್ರಾಮಾಂತರ ಮಟ್ಟದ ಸಂಸ್ಥೆಯೊಂದು ಹೆಚ್ಚಿನ ಉತ್ಸಾಹದಿಂದ ಕಾರ್ಯನಿರ್ವಹಿಸುವಲ್ಲಿ ಅವರಿತ್ತ ನೈತಿಕ ಪ್ರೋತ್ಸಾಹದ ದೊಡ್ಡ ಪಾತ್ರವಿದೆ. ಗೆಳೆಯ, ಗುರು, ಮಾರ್ಗದರ್ಶಕರಾಗಿ ಅವರು ಈ ಸಂಸ್ಥೆಯ ಬೆನ್ನ ಹಿಂದೆ ಇದ್ದಾರೆನ್ನುವುದು ಕನ್ನಡ ಸಂಘದ ಪಾಲಿಗೊಂದು ಹೆಮ್ಮೆಯ ಸಂಗತಿ.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಮೂರು ವರ್ಷಗಳ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಪರಿಷತ್ತಿನ ಚರಿತ್ರೆಯಾಗಿ ಕ್ರಾಂತಿಕಾರಿ ಸೇವಾಭಾವದ ಅಧ್ಯಾಯವೊಂದನ್ನು ಬರೆದ ಅವರು ಸೇವಾವಧಿ ಮುಗಿದಿದ್ದರೂ ತನ್ನ ಸಾಹಿತ್ಯ ಕೈಂಕರ್ಯ, ಸಮಾಜ ಸೇವೆ, ಸಾರ್ವಜನಿಕ ಸಂಪರ್ಕದಂಥ ಚಟುವಟಿಕೆಗಳನ್ನು ಹಿಂದಿನಂತೆಯೇ ವಿರಾಮವಿಲ್ಲದೆ ನಡೆಸಿಕೊಂಡು ಬರುತ್ತಿದ್ದಾರೆ. ಅವರೀಗ 60ರ ಹರೆಯದ ಹೊಸಿಲನ್ನು ದಾಟಿದ್ದಾರೆ. ಆದರೆ ಅದೇ ಮುನ್ನಿನ ಉತ್ಸಾಹದಿಂದ ಮುಂದುವರಿದಿದ್ದಾರೆ. 1976ರಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಘ ಇದೀಗ ಮೂವತ್ತರ ಹರೆಯದ ಹೊಸ್ತಿಲಲ್ಲಿದೆ, ಈ ಸಂಭ್ರಮದ ಆಚರಣೆಯನ್ನು, ಅವರಿಗೊಂದು ಅರ್ಥಪೂರ್ಣ ನುಡಿನಮನ ಸಲ್ಲಿಸುವ ಮೂಲಕ ಆರಂಭಿಸಲು ಸಂಘ ನಿರ್ಧರಿಸಿದ್ದರ ಫಲಶ್ರುತಿಯೇ ಈ 'ಪುನರೂರು ಪುರಸ್ಕಾರ'.

★★★

ಪುನರೂರು ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು, ವಿವಿಧ ಕ್ಷೇತ್ರಗಳಲ್ಲಿನ ಸಿದ್ಧಿ-ಸಾಧನೆಗಳನ್ನು ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿನ ಸಾಹಿತ್ಯ-ಸಂಸ್ಕೃತಿ ಅಭಿಮಾನಿಗಳು ಹೇಗೆ ಕಂಡಿದ್ದಾರೆ; ಜೊತೆಗೆ ಅವರ ಕೆಲಸಗಳು ಸದ್ಯದ ಸಾಂಸ್ಕೃತಿಕ ಸಂದರ್ಭದಲ್ಲಿ ಉಂಟುಮಾಡಿರುವ ಪರಿಣಾಮಗಳೇನು ಎಂಬುದನ್ನು ವಸ್ತುನಿಷ್ಠವಾಗಿ ದಾಖಲಿಸುವುದು ಈ ಸಂಪುಟದ ರೂಪಣೆಯ ಹಿಂದಿನ ಪ್ರಧಾನ ಉದ್ದೇಶವಾಗಿದೆ. ಸಂಪುಟದ ಮೊದಲ ಭಾಗದಲ್ಲಿ ಪುನರೂರು ಕನ್ನಡ ಸಾಹಿತ್ಯ ಪರಿಷತ್ತಿನ ಪೋಷಕಶಕ್ತಿಯಾಗಿ ಹೇಗೆ ದುಡಿಯುತ್ತ ಬಂದಿದ್ದಾರೆನ್ನುವುದನ್ನು ಕಾಣಿಸಿಕೊಡುವ ಲೇಖನಗಳಿವೆ. ಎರಡನೆಯ ಭಾಗದಲ್ಲಿ ಅವರ ಕ್ರಿಯಾಶೀಲ ವ್ಯಕ್ತಿತ್ವ ಸಾಹಿತ್ಯ ಕ್ಷೇತ್ರಕ್ಕಷ್ಟೇ ಅಲ್ಲದೆ ಧರ್ಮ, ಶಿಕ್ಷಣ, ಸಮಾಜ ಸೇವೆ ಮುಂತಾದ ಕ್ಷೇತ್ರಗಳಿಗೆ ಅವರು ನೀಡಿದ ರಚನಾತ್ಮಕ ಕೊಡುಗೆಗಳನ್ನು ಸ್ಮರಿಸಿಕೊಳ್ಳುವ, ವಿಶ್ಲೇಷಿಸುವ, ಆ ಮೂಲಕ ಅವರ ವ್ಯಕ್ತಿತ್ವದ ತಾತ್ತ್ವಿಕ ನಿಷ್ಕರ್ಷೆಯ ಪ್ರಕ್ರಿಯೆಗೆ ನಮ್ಮನ್ನು ಆಹ್ವಾನಿಸುವ ಉದ್ದೇಶದ ವ್ಯಕ್ತಿಚಿತ್ರಗಳನ್ನು ಕಾಣಬಹುದು. ಮೂರನೆಯ ಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಪರಿಷತ್ತಿನ ಕಾಯಕಲ್ಪಕ್ಕೆ ಅವರು ಶ್ರಮಿಸಿದ ಬಗೆಗಳನ್ನು, ಈ ನಿಟ್ಟಿನಲ್ಲಿ ಅವರಲ್ಲಿದ್ದ ಕನಸುಗಳನ್ನು, ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಅವರು ಮಾಡಿದ ಸಾಧನೆಗಳನ್ನು ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದೇ ವಿಭಾಗದಲ್ಲಿ ನಾಡಗೀತೆಯ ಬಗ್ಗೆ ಎದ್ದಿದ್ದ ವಿವಾದ ಯಾವ ರೀತಿ ಶುರುವಾಗಿ ಯಾವ ರೀತಿ ಸುಖಾಂತ್ಯಗೊಂಡಿತು ಎಂಬುದನ್ನು ತೋರಿಸಿಕೊಡುವ ಮಾಹಿತಿ ಬರಹಗಳೂ, ಆ ಕುರಿತು ಪುನರೂರು ಅವರಿಗೆ ಇಂದು ಏನು ಹೇಳಲಿಕ್ಕಿದೆ ಎಂಬುದನ್ನು ಸಾಹಿತ್ಯ ಸಹೃದಯಿಗಳ ಮುಂದಿರಿಸುವ ಪೂರಕ ಬರಹವೂ ಇವೆ. ಕಸಾಪದ ಆರ್ಥಿಕ ಬಲವನ್ನು ವೃದ್ಧಿಸುವ ಕೆಲಸಕ್ಕೆ ಪ್ರಥಮ ಆದ್ಯತೆ ನೀಡಿ ಅವರು ಉತ್ಸಾಹದಿಂದ ಸಂಗ್ರಹಿಸಿಕೊಟ್ಟ ಮುನ್ನೂರಕ್ಕೂ ಹೆಚ್ಚು ದತ್ತಿಗಳ ಯಾದಿಯೊಂದನ್ನೂ ಇಲ್ಲಿ ಕಾಣಬಹುದು. ಜೊತೆಗೆ ಕಸಾಪ ರಾಜ್ಯಾಧ್ಯಕ್ಷರಾಗಿ ತಾನು ಕಂಡುಂಡ ಕೆಲವು ಅನುಭವಗಳನ್ನು ಪುನರೂರು ಇಲ್ಲಿನ ಬರಹವೊಂದರಲ್ಲಿ ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

ಈ ಸಂಪುಟದ ನಾಲ್ಕನೆಯ ಭಾಗದಲ್ಲಿ ಕನ್ನಡ ಭಾಷೆ-ಸಾಹಿತ್ಯ-ಸಂಘಟನೆ ಕುರಿತಂತೆ ಚಿಂತನೆಗೆ ಹಚ್ಚುವ ಲೇಖನಗಳ ಜೊತೆಗೆ, ಪುನರೂರು ಯಾವ ಯಾವ ಕ್ಷೇತ್ರಗಳಲ್ಲಿ ಆಸಕ್ತಿ ತಳೆದು ದುಡಿಯುತ್ತ ಬಂದಿದ್ದಾರೆ, ಆ ಕ್ಷೇತ್ರಗಳಲ್ಲಿನ ಸದ್ಯದ ಸ್ಥಿತಿ-ಗತಿಗಳನ್ನು ಕುರಿತು ವಿವೇಚಿಸುವ 21 ತಜ್ಞ ಬರೆಹಗಳಿವೆ. ಪುನರೂರಿಗೆ ಅಕ್ಷರಾಭಿನಂದನೆ ಸಲ್ಲಿಸುವ ಹೊತ್ತಿಗೆ ಕನ್ನಡ ನಾಡಿನ ಧರ್ಮ, ಸಾಹಿತ್ಯ, ಶಿಕ್ಷಣ, ಕಲೆ. ಶಿ-

ಹಾಗೂ ಜಾನಪದ ಸಂಸ್ಕೃತಿಯ ಹಿಂದಿನ ಕಾಳಜಿಗಳು ಒಂದು ಅರ್ಥಪೂರ್ಣ ಸಂವಾದಕ್ಕೆ ಪ್ರೇರಣೆ ನೀಡಲೆಂಬ ದೃಷ್ಟಿಯಿಂದ ಇವುಗಳನ್ನು ಸಾದರಪಡಿಸಲಾಗಿದೆ. ಗ್ರಂಥದ ಐದನೆಯ ಭಾಗದಲ್ಲಿ ಪುನರೂರು ಅವರನ್ನು ಅವರ ಬಂಧುಗಳ ಹಾಗೂ ನಿಕಟವರ್ತಿಗಳು ಅರ್ಥಮಾಡಿಕೊಂಡ ಬಗೆಗಳನ್ನು ಕಾಣಿಸುವ ಸಮೀಪ ಚಿತ್ರಗಳಿವೆ. ಇದಲ್ಲದೆ ಪುನರೂರು ತನ್ನ ಬದುಕಿನ ಕೆಲವೊಂದು ಘಟನೆಗಳನ್ನು ನೆನಪಿಸಿಕೊಂಡು ಬರೆದುಕೊಟ್ಟ ಕುತೂಹಲಕಾರಿ ದೀರ್ಘ ಬರಹವೂ ಇದೆ.

★★★

ಸಂಘ ತನ್ನ 30ರ ಹರೆಯದ ಹೊಸ್ತಿಲನ್ನು ಸಮೀಪಿಸುತ್ತಿರುವ ಸಂದರ್ಭದಲ್ಲಿ ಇಂಥದೊಂದು ಪುರಸ್ಕಾರ ಗ್ರಂಥವನ್ನು ರೂಪಿಸಿಕೊಡುವಂತೆ ಸಂಘದ ಕಾರ್ಯಾಧ್ಯಕ್ಷ ಡಾ.ನಾ. ಮೊಗಸಾಲೆ ಸಂಘದ ಪರವಾಗಿ ನನ್ನನ್ನು ಕೇಳಿಕೊಂಡರು. ನನ್ನ ಜೀವನದ ಬಹುದೊಡ್ಡ ಕೊಡುಗೆಗಳಲ್ಲಿ ಮೊಗಸಾಲೆ ಅವರೊಂದಿಗಿನ ಸ್ನೇಹ ಪ್ರಧಾನವಾದುದು. ಅವರೊಬ್ಬ ಸಹಜ ಕವಿ, ಕಾದಂಬರಿಕಾರ, ಸ್ವತಃ ಉತ್ತಮ ಅಭಿರುಚಿಯ ಸಾಹಿತ್ಯ ಸಂಘಟಕ. ಕಾಂತಾವರ ಕನ್ನಡ ಸಂಘವನ್ನು ಹುಟ್ಟುಹಾಕಿದ ಒಬ್ಬ ಸಾಹಿತ್ಯ ಸಂಘಟಕ, ಪುನರೂರು ಅವರಂಥ ಸಾಹಿತ್ಯ ಸಂಘಟಕನನ್ನು ಎಷ್ಟೊಂದು ಸ್ನೇಹ, ಗೌರವಗಳಿಂದ ನೋಡಿಕೊಂಡು ಬಂದಿದ್ದಾರೆಂಬುದನ್ನು ನಾನು ನೋಡುತ್ತ ಬಂದಿದ್ದೇನೆ. ಗ್ರಾಮೀಣ ಮಟ್ಟದ ಸಾಹಿತ್ಯ ಸಂಘಟನೆಯೊಂದು, ಸ್ವತಃ ಒಂದು ಸಂಸ್ಥೆಯಾಗಿ ಬೆಳೆದು ನಿಂತಿರುವ ವ್ಯಕ್ತಿಯೊಬ್ಬನಿಗೆ ನುಡಿಗೌರವ ಅರ್ಪಿಸುವ ಕೆಲಸ ಅಚ್ಚುಕಟ್ಟಾಗಿ ನಡೆಯಬೇಕೆಂಬುದು ಮೊಗಸಾಲೆಯವರ ಕಾಳಜಿ. ಪುನರೂರು ಅವರೊಂದಿಗೆ 'ನಿಕಟ'ವೆನ್ನಿಸುವಷ್ಟು ಹೊಕ್ಕುಬಳಕೆ ನನಗಿಲ್ಲದಿದ್ದರೂ ಅವರು ಕಳೆದ ಎರಡು–ಎರಡೂವರೆ ದಶಕಗಳಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತನ್ನದೇ ಆದ ಶೈಲಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತ ಬಂದಿರುವುದನ್ನು ನೋಡುತ್ತ ಬಂದಿರುವವನು ನಾನು. ದಕ್ಷಿಣ ಕನ್ನಡ ಜಿಲ್ಲೆ ನಾಡಿಗೆ ನೀಡಿರುವ ಲವಲವಿಕೆಯ ಸೇವಾ–ಸಂಸ್ಕೃತಿಯೊಂದನ್ನು ಸಹೃದಯರೆದುರು ಇರಿಸಬೇಕೆಂಬ ಕನ್ನಡ ಸಂಘದ ಆಶಯ ಈ ಕೃತಿಯ ಮೂಲಕ ನೆರವೇರಬೇಕೆಂಬ ಪ್ರಯತ್ನ ನನ್ನದು. ಅದು ಎಷ್ಟರ ಮಟ್ಟಿಗೆ ಈಡೇರಿದೆ ಎಂಬುದನ್ನು ಸಹೃದಯರೇ ಹೇಳಬೇಕು. ಈ ಸಂಪುಟವನ್ನು ರೂಪಿಸುವಲ್ಲಿ ನಾಡಿನ ವಿವಿಧ ಲೇಖಕರು, ಸಾಹಿತಿ–ಸಂಸ್ಕೃತಿ ಅಧ್ವರ್ಯುಗಳು ಹಾಗೂ ಅಭಿಮಾನಿಗಳು, ನಾನಾ ಕ್ಷೇತ್ರಗಳ ತಜ್ಞರು ತಮ್ಮ ಅಮೂಲ್ಯ ಬರಹಗಳನ್ನು ಬರೆದುಕಳುಹಿಸುವ ಮೂಲಕ, ಸಹಕರಿಸಿದ್ದಾರೆ. ಪುನರೂರು ಅವರ ರೇಖಾಚಿತ್ರವೊಂದನ್ನು ಬಳಸಿಕೊಳ್ಳಲು ಕಲಾವಿದ ಗೆಳೆಯ ಜೇಮ್ಸ್‌ವಾಜ್ ಒಪ್ಪಿಗೆ ನೀಡಿದ್ದಾರೆ. ಗೆಳೆಯರಾದ ಬಿ.ಸೀತಾರಾಮ ಭಟ್, ಶ್ರೀಧರ ಡಿ.ಎಸ್ ಹಾಗೂ ಸೋದರಿ ಸುಜಾತಾ ಪುನರೂರು ಅವರ ಬಂಧುಗಳ ಮಾತುಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿಕೊಟ್ಟಿದ್ದಾರೆ. ಎಲ್ಲರಿಗೂ ಕೃತಜ್ಞತೆಗಳು.

ಜಯರಾಮ ಕಾರಂತ

ಒಳಗೆ...

ಭಾಗ-2 ಹೀಗಿದ್ದಾರೆ ಪುನರೂರು

ಭಾಗ-3 ಕ.ಸಾ.ಪ. ಅಧ್ಯಕ್ಷತೆಯ ದಿನಗಳು
'ಕನ್ನಡ ನುಡಿ'ಯಲ್ಲಿ ಅಧ್ಯಕ್ಷರ 'ತಿಂಗಳ ಮಾತು'ಗಳು

ನಾಡಗೀತೆ ವಿವಾದ: ಒಂದು ಇಣುಕು ನೋಟ

ಭಾಗ-4 ಭಾಷೆ-ಧರ್ಮ-ಸಂಸ್ಕೃತಿ: ಒಂದು ಸಂವಾದ

ಅನುಪಮ ಸೇವೆ ಅವರದು

ಡಾ|| ಡಿ. ವೀರೇಂದ್ರ ಹೆಗ್ಗಡೆ



ಕನ್ನಡ ಸಂಘ, ಕಾಂತಾವರ ಇದರ ಆಶ್ರಯದಲ್ಲಿ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಅವರಿಗೆ ಪುರಸ್ಕಾರ ಗ್ರಂಥ ಅರ್ಪಿಸುವ ವಿಚಾರ ತಿಳಿದು ಸಂತೋಷವಾಯಿತು.

ಪುನರೂರು ಅವರು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿರುವುದಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಸಲ್ಲಿಸಿರುವ ಸೇವೆ-ಸಾಧನೆಯನ್ನು ಗುರುತಿಸಿ ಅವರ ಅಭಿಮಾನಿ ಬಳಗದವರು ಸಂಘಟಿತರಾಗಿ ಶ್ರೀಯುತರಿಗೆ ನುಡಿಗೌರವ ಸಲ್ಲಿಸುವುದು ಔಚಿತ್ಯಪೂರ್ಣವಾಗಿದೆ.


'ಪುನರೂರು ಪುರಸ್ಕಾರ' ಎಂಬ ಅಭಿನಂದನ ಗ್ರಂಥವು ಪುನರೂರು ಅವರ ಹತ್ತು ಹಲವು ಕ್ಷೇತ್ರಗಳ ಬಹುಮುಖ ಸೇವೆಯನ್ನು ಪರಿಚಯಿಸಬಲ್ಲ ವಿಚಾರಪೂರ್ಣ ಲೇಖನಗಳಿಂದೊಡಗೂಡಿ ಆಕರ್ಷಕವಾಗಿ ಪ್ರಕಟವಾಗಲೆಂದು ಆಶಿಸುತ್ತೇನೆ.

ಈ ದಿಶೆಯಲ್ಲಿ ನಿಮ್ಮೆಲ್ಲ ಪ್ರಯತ್ನ ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ, ದಕ್ಷಿಣ ಕನ್ನಡ–574216

ಪುನರೂರು ಪುರಸ್ಕಾರ– ಅತ್ಯಂತ ಸಮಯೋಚಿತ

☐ ಪ್ರೊ|| ಜಿ. ವೆಂಕಟಸುಬ್ಬಯ್ಯ



ಹರಿಕೃಷ್ಣ ಪುನರೂರು ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅದರ ಆರ್ಥಿಕ ಸ್ಥಿತಿಯನ್ನು ತುಂಬ ಉತ್ತಮಪಡಿಸಿದ್ದಾರೆ. ಈಗ ಪರಿಷತ್ತು ತನ್ನ ಸ್ವಂತ ಕಾಲ ಮೇಲೆ ನಿಲ್ಲಬಲ್ಲುದು. ಸರಕಾರದ ಸಹಾಯವಂತೂ ಇದ್ದೇ ಇದೆ. ಇದು ತುಂಬ ಪ್ರಧಾನವಾದ ಬೆಳವಣಿಗೆ.

ಅವರು ಪರಿಷತ್ತಿನಿಂದ ಯಾವ ಸಹಾಯವನ್ನೂ ನಿರೀಕ್ಷಿಸದೆ ಸ್ವಂತ ಖರ್ಚಿನಲ್ಲಿ ನಾಡನ್ನು ಅನೇಕ ಸಲ ಸುತ್ತಾಡಿದ್ದಾರೆ. ಜನಬಲ–ಅರ್ಥಬಲ ಎರಡನ್ನೂ ಪರಿಷತ್ತಿಗೆ ಒದಗಿಸಿದ್ದಾರೆ.

ಮುಂದೆ ಪರಿಷತ್ತಿನ ಕಾರ್ಯವ್ಯಾಪ್ತಿ ಬಹುವಾಗಿ ಬೆಳೆಯಬೇಕು. ಅವರ ಸಹಾಯವನ್ನೂ ಪರಿಷತ್ತು ಮುಂದೆ ಪಡೆಯಲಿ ಎಂದು ಹಾರೈಸುತ್ತೇನೆ.

ಅಧ್ಯಕ್ಷ ಪದವಿಯಿಂದ ನಿವೃತ್ತರಾಗಿರುವ ಪುನರೂರರನ್ನು ಗೌರವಿಸುವುದು ಸರ್ವಥಾ ಸ್ತುತ್ಯ. ಈ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಆಸೆಪಡುತ್ತೇನೆ.

ಈಗ ನಾನು ಏನನ್ನೂ ಬರೆಯಲಾರೆ. ಆದರೆ ಪುನರೂರರಂಥ ಸಮಾಜ ಸೇವಕರನ್ನು ಪ್ರೀತಿಯಿಂದ ಗೌರವಿಸುವುದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಕಾಂತಾವರ ಕನ್ನಡ ಸಂಘದ ಅಧ್ಯಕ್ಷ ಡಾ. ನಾ. ಮೊಗಸಾಲೆಯವರ ಪ್ರಯತ್ನ ಅತ್ಯಂತ ಸಮಯೋಚಿತವಾಗಿದೆ.

58, 31ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು–82

ಭಾಗ : ಒಂದು

ಪರಿಷತ್ತಿನ ಪೋಷಕ ಶಕ್ತಿ

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕನ್ನಡ ಸಾಹಿತ್ಯ ಪರಿಷತ್ತನ್ನು ಜನತೆಯ ಬಳಿ ತಂದವರು

□ ಪ್ರೊ॥ ಹಂಪ ನಾಗರಾಜಯ್ಯ



ಹರಿಕೃಷ್ಣ ಪುನರೂರರು ಇದ್ದಕ್ಕಿದ್ದ ಹಾಗೆ ಉದ್ಭವಿಸಲಿಲ್ಲ; ಏಕ್‌ದಂ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಆಗಲಿಲ್ಲ. ಅವರು ಮೆಟ್ಟಿಲು ಮೆಟ್ಟಿಲಾಗಿ ಹತ್ತಿ ಮೇಲೇರಿದರು. ಹಂತ ಹಂತವಾಗಿ ವ್ಯಕ್ತಿತ್ವವನ್ನೂ ವರ್ಚಸ್ಸನ್ನೂ ವಿಸ್ತರಿಸಿದರು. ನಿರಂತರ ಶ್ರಮ, ಸೋಲದ ಶ್ರದ್ಧೆ ಅವರ ಶ್ವಾಸಕೋಶಗಳಾದುವು.

ಅವರು ಅಧ್ಯಕ್ಷರಾಗುವುದಕ್ಕೆ ಮೊದಲು ಒಂಬತ್ತು ವರ್ಷ ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಕ್ಷರಾಗಿ ಕಾರ್ಯಸಮಿತಿಯಲ್ಲಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಮೂರು ಅವಧಿಯಲ್ಲಿ ತಮ್ಮ ಕ್ರಿಯಾಶೀಲ ವರ್ಚಸ್ವೀ ವ್ಯಕ್ತಿತ್ವದ ಛಾಪು ಮೂಡಿಸಿದರು. ಉಳಿದ 26 ಜಿಲ್ಲೆಗಳ ಅಧ್ಯಕ್ಷರುಗಳ ಮೇಲೆ ಗಾಢ ಪ್ರಭಾವ ಬೀರಲು ಈ ದಕ್ಷಿಣ ಕನ್ನಡ ಜಿಲ್ಲೆಯ ನಾಯಕನಿಗೆ ಸಾಧ್ಯ ಆದದ್ದು ನೇರವಾದ ನಡೆ-ನುಡಿಗಳಿಂದ. ಇವರು ಮುಚ್ಚುಮರೆ ಇರದ ಬಿಚ್ಚು ಮನಸಿನ ಪಾರದರ್ಶಕ ವರ್ತನೆಯಿಂದ ಬಹುಜನರಿಗೆ ಪ್ರಿಯರಾದರು.

ಹರಿಕೃಷ್ಣ ಪುನರೂರರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿಗೆ ಆರಿಸಿ ಬಂದ ಅವಧಿಯಲ್ಲಿ ಹಣಕಾಸು ಪರಿಸ್ಥಿತಿ ಇಕ್ಕಟ್ಟಿನಲ್ಲಿದ್ದ ಕಾಲ. ಪರಿಷತ್ತು ಆರ್ಥಿಕವಾಗಿ ದುರ್ಬಲವಾಗಿದ್ದು ವಹಿವಾಟು ಹದಗೆಟ್ಟಿತ್ತು. ಅಂಥ 'ಪರ್ವ'ಕಾಲದಲ್ಲಿ ಅವರು

'[illegible]', 1079, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010

ಪದಾಧಿಕಾರಿಗಳೊಂದಿಗೆ ಕೂಡಿ ತಮ್ಮ ಅನುಭವವನ್ನು ಧಾರೆಯೆರೆದು ಪ್ರತಿಭೆಯನ್ನು ತಂದುಕೊಟ್ಟರು. ಜಿಲ್ಲಾ ಅಧ್ಯಕ್ಷರುಗಳಿಗೆ ಪುನರೂರರು ನೀಡಿದ ಬೆಂಬಲ ಸ್ಮರಣೀಯವಾದದ್ದು, ಮರೆಯಲಾಗದ್ದು. ಕ.ಸಾ.ಪ.ಗೆ ಒಂದು ಸ್ವಂತ ವಾಹನ ಬೇಕೆಂಬ ಬಹುದಿನಗಳ ಆಲೋಚನೆಗೆ ಜೀವತುಂಬಿ, ಕಾರು ಕೊಡುಗೆಯ ನಿರ್ಣಯವನ್ನು ಬೆಂಬಲಿಸಿದರಲ್ಲದೆ ನಿರ್ಣಯ ಕಾರ್ಯಗತಗೊಳ್ಳಲು ಪದಾಧಿಕಾರಿಗಳಿಗೆ ಹುಮ್ಮಸ್ಸು ತುಂಬಿದವರೂ ಪುನರೂರರೇ.

ಸದಾ ಶುಭ್ರ ಶ್ವೇತ ಧೋತಿ ಮಾದರಿಯ ಪಂಚೆ-ಶರಟು ತೊಟ್ಟು ಬೆಳಗ್ಗೆ ಹೊರಟರೆ ಇಡೀ ದಿನ ಚಟುವಟಿಕೆಯಿಂದ ದುಡಿಯುವ ಇವರ ಆದರ್ಶ ಅನುಕರಣ ಯೋಗ್ಯವಾದದ್ದು. ತಮ್ಮ ಸಹಜ ಸ್ವಭಾವದಿಂದ ಎಲ್ಲ ಸಮುದಾಯದ ಗೆಳೆಯರೊಂದಿಗೆ ಬೆರೆತರು, ಅಕ್ಕರೆ ಗಳಿಸಿದರು. ತುಳುನಾಡಿನ ಉದ್ದಗಲಗಳಲ್ಲಿ ನೂರಾರು ಕಾರ್ಯಕ್ರಮ ಮಾಡಿ ಮರೆಯಲಾಗದ ದಾಖಲೆ ನಿರ್ಮಿಸಿದರು, ಮಧುರ ಸ್ಮೃತಿಗಳನ್ನು ಬಿತ್ತಿದರು. ಇದರಿಂದ ಸಾಹಿತ್ಯ ಸಂಸ್ಕೃತಿ ಕಾರ್ಯವ್ಯಾಪ್ತಿ ಹಿಗ್ಗಿತು, ಜನಪ್ರಿಯವಾಯಿತು. ಅವರೂ ಜನಾನುರಾಗಕ್ಕೆ ಪಾತ್ರರಾದರು.

ಇಷ್ಟು ಪ್ರಭಾವ ವಲಯ ಸೃಷ್ಟಿಯಾದ ಮೇಲೆ ಅವರ ಅಭಿಮಾನಿಗಳೂ ಹಿತೈಷಿಗಳೂ ಕಲೆತು ಅವರನ್ನು ಕೇಂದ್ರ ಕ.ಸಾ.ಪ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಒತ್ತಾಯಿಸಿದರು. ಯಾವ ಪೂರ್ವ ಸಿದ್ಧತೆಯೂ ಇರದೆ ಬಲಾತ್ಕಾರಕ್ಕೆ ಮಣಿದು ಅಧ್ಯಕ್ಷತೆಗೆ ಕಣದ ಗೆಲುವಿನಲ್ಲಿ ಸ್ಪರ್ಧಿಸಿದರು. ವಾಸ್ತವವಾಗಿ ಸಾಗರದ ಟಿ. ಮಹಾಬಲೇಶ್ವರ ಭಟ್ಟರನ್ನು ನಿಲ್ಲಿಸಿ ಎಲ್ಲರೂ ಒಗ್ಗಟ್ಟಿನಿಂದ ಬೆಂಬಲಿಸುವ ಪ್ರಯತ್ನ ನಡೆಯಿತು. ಆದರೆ ಅವರು ಹುಬ್ಬ ಸೇರಿಕೊಂಡಿದ್ದ ಹಿಂದಿನ ಅಧ್ಯಕ್ಷರು, ಕೊಟ್ಟ ಮಾತಿಗೆ ತಪ್ಪಿ ಸ್ಪರ್ಧಿಸಿದರು. ಇದರಿಂದ ನೊಂದ ಸಜ್ಜನ, ಸುಸಂಸ್ಕೃತ ಮಹಾಬಲೇಶ್ವರ ಭಟ್ಟರು ಸ್ಪರ್ಧೆಯ ಕಣದಿಂದ ಹಿಂದೆ ಸರಿದರು. ಅನಿವಾರ್ಯವಾಗಿ ಪುನರೂರರನ್ನು ನಿಲ್ಲಿಸಲಾಯಿತು. ಚುನಾವಣೆ ನಡೆದು ಕಡಿಮೆ ಮತಗಳ ಅಂತರದಿಂದ ಸೋತರು. ಆದರೆ ಎರಡನೇ ಸಲ ಸ್ಪರ್ಧಿಸಿದಾಗ ಪ್ರಚಂಡ ಬಹುಮತದಿಂದ ಆರಿಸಿಬಂದರು.

ಕೇಂದ್ರ ಕ.ಸಾ.ಪ. ಅಧ್ಯಕ್ಷರಾಗಿ ಅವರು ಅನೇಕ ಮೌಲಿಕ, ಪ್ರಬುದ್ಧ, ಉಪಯುಕ್ತ ಕಾರ್ಯಗಳನ್ನು ಮಾಡಿದರು. ಸದಸ್ಯ ಸಂಖ್ಯೆಯನ್ನು ಹೆಚ್ಚಿಸಿದರು, ಪುಸ್ತಕ ಮಾರಾಟವನ್ನು ಸುವ್ಯವಸ್ಥಿತಗೊಳಿಸಿದರು. ಶಿಸ್ತು ಸಿಬ್ಬಂದಿ ಹಾಗೂ ಮಹಾಸಂಸ್ಥೆಯಲ್ಲಿ ಮತ್ತೆ ಕಾಣತೊಡಗಿತು. ವೈಯಕ್ತಿಕವಾಗಿ ಹಣದ ಅಪೇಕ್ಷೆ ಇಲ್ಲದೆ ನಿಸ್ವಾರ್ಥರಾಗಿ ದುಡಿದರು. ಕರ್ನಾಟಕದ ಉದ್ದಗಲಗಳಿಗೆ ಸಂಚರಿಸಿ ಪರಿಷತ್ತನ್ನು ಜನತೆಯ ಬಳಿಗೆ ಕೊಂಡೊಯ್ದರು. ತಾಲೂಕು ಹಾಗೂ ಜಿಲ್ಲಾ ಚಟುವಟಿಕೆಗಳಿಗೆ ಸ್ಫೂರ್ತಿ ಕೊಟ್ಟರು. ಬೆಳಗಾವಿ, ತುಮಕೂರು ಮತ್ತು ಮೂಡಬಿದಿರೆಯಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದರು. ಇದಕ್ಕಾಗಿ ನಾಡು-ನುಡಿಯನ್ನು ಪ್ರೀತಿಸುವ ಬುದ್ಧಿ, ಭಾವ, ಮನಸ್ಸುಗಳು ಹರಿಕೃಷ್ಣ ಪುನರೂರರನ್ನು ಬಹುಕಾಲ ನೆನೆಯುತ್ತವೆ. ಅವರು ಈಗಲೂ ದಣಿಯುವವರಲ್ಲ. ದಾರಿ ದೀರ್ಘವಾಗಿದೆ. ಅವರ ಪಯಣ ಸುಖಕರವಾಗಿರಲಿ ಎಂದು ಹೃತ್ಪೂರ್ವಕವಾಗಿ ಶುಭ ಕೋರುತ್ತೇನೆ.


□

ಭಾಗ: ಒಂದು

ಪರಿಷತ್ತಿನ ಪೋಷಕಶಕ್ತಿ

ಶುದ್ಧ ಹಸ್ತದ ಕ.ಸಾ.ಪ. ಆಡಳಿತಗಾರ

□ ಎಸ್. ವಿ. ಶ್ರೀನಿವಾಸರಾವ್



ನಿಸ್ಪೃಹ ವ್ಯಕ್ತಿತ್ವದ ನಿಷ್ಕಾಮ ಸೇವಾದುರಂಧರ ಧರ್ಮದರ್ಶಿ ಹರಿಕೃಷ್ಣ ಪುನರೂರುರವರ ಪರಿಚಯ ನನಗೆ 15-16 ವರ್ಷಗಳಷ್ಟು ಹಳೆಯದು. ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧಿಕಾರಿಯಾಗಿದ್ದಾಗ (1989-1992) ಅವರನ್ನು ಹಲವು ಬಾರಿ ಭೇಟಿಯಾಗಿ, ಅವರ ಸೌಜನ್ಯ ಹಾಗೂ ಸಜ್ಜನಿಕೆಯಿಂದ ಪ್ರಭಾವಿತನಾಗಿದ್ದೆ. ಅವರ ಸಮಾಜ ಸೇವಾ ಕಾರ್ಯಗಳ ಬಗ್ಗೆ ಹಲವು ಜನರಿಂದ ಕೇಳಿ ತಿಳಿದಿದ್ದೆ. ಆದ್ದರಿಂದ ಅವರ ಮೇಲೆ ಒಂದು ತರಹ ಗೌರವ ಹಾಗೂ ಅಭಿಮಾನ ಬೆಳೆಯತೊಡಗಿತ್ತು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿಗೆ ನಿಂತಾಗಿನಿಂದ ಅವರ ಸಹವಾಸ ಹೆಚ್ಚು ನಿಕಟವಾಗತೊಡಗಿತ್ತು. ಅಪಾರ ಬಹುಮತದಿಂದ ಅವರು 2001ರಲ್ಲಿ ಅಧ್ಯಕ್ಷರಾಗಿ ಆಯ್ಕೆಗೊಂಡಾಗ ನನ್ನ ಆತ್ಮೀಯ ಮಿತ್ರ ಪುಂಡಲೀಕ ಹಾಲಂಬಿಯವರ ಸಲಹೆಯ ಮೇರೆಗೆ, ನನ್ನ ಸಾಮರ್ಥ್ಯವನ್ನು ಗಮನಿಸಿದ್ದ ಶ್ರೀ ಪುನರೂರುರವರು 'ಕನ್ನಡ ನುಡಿ'ಯ ಒಬ್ಬ ಸಂಪಾದಕನನ್ನಾಗಿ (ಇನ್ನೊಬ್ಬರು ಮಹದೇವ ಪ್ರಕಾಶ್) ನೇಮಿಸಿದರು. ಈ ಗುರುತರ ಜವಾಬ್ದಾರಿಯನ್ನು ಕೆಲ ತಿಂಗಳು ಮಹದೇವ್ ಪ್ರಕಾಶ್ ಜೊತೆಯಲ್ಲಿ ನಿರ್ವಹಿಸಿದೆ. ಪತ್ರಿಕೆಗೆ ಹೊಸ ರೂಪ ನೀಡಿ, ಒಳಗಿನ ತಿರುಳನ್ನು ದರ್ಜೆಯಾಗಿರಿಸಲು

340, ಸೌರಭ, 4ನೇ ಮುಖ್ಯರಸ್ತೆ, ಬನಶಂಕರಿ 1ನೇ ಹಂತ, ಶ್ರೀನಗರ, ಬೆಂಗಳೂರು-50

ಪ್ರಯತ್ನಿಸಿದವು. ಪು. ಪ್ರಕಾಶ ರವರು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ಸಂಪಾದಕಗಿರಿಗೆ ರಾಜೀನಾಮೆ ನೀಡಿದಾಗ ಈ ಪತ್ರಿಕೆಯ ಪೂರ್ಣ ಜವಾಬ್ದಾರಿ ನನ್ನ ಹೆಗಲೇರಿತು. ಕಾದಂಬರಿ ಸಾಮ್ರಾಟರೆಂದು ಹೆಸರು ಪಡೆದಿದ್ದ ಅ.ನ.ಕೃಷ್ಣರಾಯರಂಥವರು ನಿರ್ವಹಿಸಿದ್ದ ಸಂಪಾದಕ ಜವಾಬ್ದಾರಿ ನಾನು ಹೊರಲು ಸಿದ್ಧನಾದೆ. ನಾನು ಇದನ್ನು ಸಮರ್ಥವಾಗಿ ನಿರ್ವಹಿಸುತ್ತೇನೆಂಬ ಪೂರ್ಣ ನಂಬಿಕೆ ಪುನರೂರರವರಿಗೆ ಇದ್ದುದರಿಂದ ಅವರು ನನಗೆ ಇದನ್ನು ಮತ್ತಷ್ಟು ವೈವಿಧ್ಯಪೂರ್ಣವಾಗಿ ಸಾಹಿತ್ಯಾಸಕ್ತರ ಮನಮುಟ್ಟುವಂತೆ ಹೊರಬರಲು ಪ್ರೇರಣೆ ನೀಡಿದ್ದಲ್ಲದೆ ನಿರ್ವಹಣೆಯಲ್ಲಿ ಪೂರ್ಣ ಸ್ವಾತಂತ್ರ್ಯ ನೀಡಿದರು. ಪುನರೂರುರವರ ಆಸೆ, ಅಭಿಲಾಷೆ, ಆದರ್ಶ ಜೀವನದ ಹಿನ್ನೆಲೆ, ನಿಸ್ವಾರ್ಥ ಮನೋಭಾವ, ಹಸ್ತಮುದ್ರೆ, ಆಡಳಿತಾತ್ಮಕ ಕೌಶಲ ಇವೆಲ್ಲವುಗಳನ್ನು ಅರಿತಿದ್ದುದರಿಂದ, ಇವುಗಳಿಗೆ ಧಕ್ಕೆಬಾರದಂತೆ ಅಷ್ಟೇ ಅಲ್ಲ, ಇವು ಪೂರ್ಣರೂಪದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ರಂಗದಲ್ಲಿ ವಿಕಸಿತಗೊಳ್ಳುತ್ತಿರುವುದನ್ನು ತೋರಿಸಲು ಮುಂದಾದೆ. ಅವರು ಬಯಸಿದಂತೆ 'ಕನ್ನಡ ನುಡಿ' ಮೂಡಿ ಬಂದು ಅತ್ಯಲ್ಪಕಾಲದಲ್ಲಿ ಅತ್ಯಂತ ಜನಪ್ರಿಯಗೊಂಡಿತು. ಪ್ರಶಂಸೆಯ ಸುರಿಮಳೆಯೇ ಬರತೊಡಗಿತು.

ಈ ಕೆಳಗಿನ ಕೆಲ ಅಭಿಪ್ರಾಯಗಳು ಅಧ್ಯಕ್ಷರ ಜನಪ್ರಿಯತೆಯನ್ನು ಪ್ರತಿಬಿಂಬಿಸುತ್ತವೆ.

'ತಾವು ಪ್ರಕಟಿಸುತ್ತಿರುವ 'ಕನ್ನಡ ನುಡಿ' ಪತ್ರಿಕೆಯಲ್ಲಿನ ಲೇಖನಗಳು, ಸುದ್ದಿಸಂಗ್ರಹ ಚೆನ್ನಾಗಿ ಮೂಡಿಬರುತ್ತಿವೆ. ತಮಗೆ ಅಭಿನಂದನೆಗಳು.'

'ಈಗ ಕನ್ನಡ ನುಡಿ ಹೊಸ ರೂಪ ತೊಟ್ಟು ಬರುತ್ತಿರುವುದು ನನಗೆ ಸಂತೋಷ ನೀಡಿದೆ. ಹೀಗೆ ಬದಲಾವಣೆ ತಂದದ್ದಕ್ಕಾಗಿ ಅಭಿನಂದನೆಗಳು.'

'ಭೇಷ್ ಕನ್ನಡ ನುಡಿ!'

'ಕನ್ನಡ ನುಡಿ' ಈಗ ಪುನರೂರರ ಸಾರಥ್ಯದಲ್ಲಿ ಉತ್ತಮವಾಗಿ ಮೂಡಿ ಬಂದಿದೆ.

'ಪುನರೂರುರವರು ಅಧ್ಯಕ್ಷರಾದಾಗಿನಿಂದ 'ಕನ್ನಡ ನುಡಿ'ಯ ಮಹತ್ವ, ವ್ಯಾಪಕತೆ ಹೆಚ್ಚಿದೆ. ಅವರ ಉದಾತ್ತ ಚಿಂತನ, ಸರಳಜೀವನ ಮತ್ತು ದಕ್ಷತೆಯು ಮುಂಬರುವ ಅಧ್ಯಕ್ಷರುಗಳಿಗೆ ಮಾರ್ಗದರ್ಶಿಯಾಗಲೆಂದು ಆಶಿಸುತ್ತೇವೆ...'

'ಒಂದು ಕಾಲಕ್ಕೆ ಜೀವಂತ ಶವದಂತಿದ್ದ ಪತ್ರಿಕೆಯನ್ನು ಜೀವತುಂಬಿ ಚೈತನ್ಯಪೂರ್ಣವಾಗಿ ಮಾರ್ಪಡಿಸಿರುವುದು ಕನ್ನಡಿಗರ ಸುದೈವವೆಂದೇ ಭಾವಿಸುತ್ತೇವೆ.'

...'ಕನ್ನಡ ನುಡಿ'ಯ ಬಗ್ಗೆ ಇಷ್ಟು ಸಾಕು. ಈಗ ಅವರು ಕೈಗೊಂಡ ಇತರ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸೋಣ.

ಕನ್ನಡ ಸಾಹಿತ್ಯ ಪರಿಷತ್ತನ್ನು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಮುನ್ನಡೆಸಲು ಸಾಹಿತಿಯಲ್ಲದ ಪುನರೂರುರವರು ಅಸಮರ್ಥರು ಎಂಬ ಕೆಲವರ ಅನಿಸಿಕೆಯನ್ನು ಇವರು ಬಹಳ ಬೇಗ ಸುಳ್ಳಾಗಿಸಿ ಶ್ರೀ ಜಿ. ನಾರಾಯಣರವರಂತೆ ತಮ್ಮ ಸಾಮರ್ಥ್ಯವನ್ನು ಮೆರೆದರು. ನಾಡು-ನುಡಿಯ ಮೇಲಿನ ನಿಚ್ಚಳ ಪ್ರೇಮ, ಒಳಿತನ್ನೇ ಮಾಡುವ ಕಾಳಜಿ, ನಿಷ್ಕಲ್ಮಷ ಕಾರ್ಯಕ್ಷಮತೆ, ದಿಟ್ಟನಿಲುವು, ಎದುರುತೊಡರುಗಳನ್ನು ಎದುರಿಸುವ ಎದೆಗಾರಿಕೆ, ಜಾತಿಮತ, ಬಂಧುಬಳಗದ ಪಕ್ಷಪಾತದಿಂದ ಹೊರನಿಲ್ಲುವ ಧೈರ್ಯವಿರುವ ಅಪ್ಪಟ ಕನ್ನಡಿಗ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಭಾರವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಎಂಬುದನ್ನು ಪುನರೂರುರವರು ಕನ್ನಡ ಜನಕ್ಕೆ ತೋರಿಸಿಕೊಟ್ಟಿದ್ದಾರೆ. ಸಂಸ್ಥೆಯ ಕಾರ್ಯನಿರ್ವಹಣೆಗೆ ಸಾಹಿತ್ಯಿಕ ಹಿನ್ನೆಲೆಗಿಂತ ಸಾಂಸ್ಕೃತಿಕ ಹಾಗೂ ಸುಸಂಸ್ಕೃತ, ವ್ಯವಹಾರಿಕ ಅತ್ಯಾವಶ್ಯಕ ಎಂಬುದನ್ನು ಪುನರೂರುರವರ ಕಾರ್ಯದಕ್ಷತೆ ಪ್ರತಿಬಿಂಬಿಸುತ್ತದೆ.

ಸುಸಂಸ್ಕೃತ ವ್ಯಕ್ತಿತ್ವದ ಬುದ್ಧಿವಂತ ವ್ಯಕ್ತಿ ಯಾವ ಸಂಸ್ಥೆಯನ್ನಾದರೂ ಮುನ್ನಡೆಸಬಲ್ಲ ಪ್ರಗತಿಯನ್ನು ತೋರಿಸಬಲ್ಲ ಎಂಬುದಕ್ಕೆ ಪುನರೂರುರವರು ಜ್ವಲಂತ ನಿದರ್ಶನ.

ಪುನರೂರುರವರು ಅಧಿಕಾರ ಸ್ವೀಕರಿಸಿದಾಗ ಪರಿಷತ್ತಿನ ಆರ್ಥಿಕಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲ. ಆಜೀವ ಸಂಸ್ಥತ್ವದ ಮೂಲ ನಿಧಿಯನಲ್ಲಿ 30 ಲಕ್ಷ ಕೊರತೆಯಿತ್ತು. ಪರಿಷತ್ತಿನ ನೌಕರರ ಗ್ರಾಚ್ಯುಟಿ ಹಣ ಪಾವತಿಗಾಗಿ ಕಟ್ಟಬೇಕಾಗಿದ್ದ ಕಂತಿನ ಹಣವನ್ನು ಪರಿಷತ್ತು ಬಾಕಿ ಉಳಿಸಿಕೊಂಡಿತ್ತು. ಈ ಎರಡು ಬಾಕಿಗೂ ಹಣವನ್ನು ಕ್ರೋಢೀಕರಿಸಿ ತುಂಬಿ, ಪರಿಷತ್ತಿನ ಗೌರವವನ್ನು ಕಾಪಾಡಿದ್ದಲ್ಲದೆ ನೌಕರರ ಹಿತವನ್ನೂ ರಕ್ಷಿಸಿದರು. ಈ ಮಾನವತಾ ದೃಷ್ಟಿ ನಿಜಕ್ಕೂ ಪ್ರಶಂಸನೀಯ. ಮೊದಲ ಬಾರಿಗೆ ಪರಿಷತ್ತಿನ ನಿವೃತ್ತ ನೌಕರರನ್ನು ಪರಿಷತ್ತಿಗೆ ಕರೆಸಿ, ಶಾಲುಹೊದಿಸಿ, ಅವರು ಪರಿಷತ್ತಿಗೆ ಮಾಡಿದ ಸೇವೆಯನ್ನು ಪ್ರಶಂಸಿಸಿ ಅವರನ್ನು ಗೌರವದಿಂದ ಸನ್ಮಾನಿಸಿದರು. ರಾಜ್ಯಾದ್ಯಂತ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಲು ಕ್ರಮವಾಗಿ 10, 5 ಮತ್ತು 3 ಸಾವಿರ ರೂಪಾಯಿಗಳ ಅನುದಾನವನ್ನು ಘೋಷಿಸಿ 60 ಜಿಲ್ಲಾ ಸಮ್ಮೇಳನ, 160 ತಾಲ್ಲೂಕು ಸಮ್ಮೇಳನ, 300 ಹೋಬಳಿ ಮಟ್ಟದ ಸಮ್ಮೇಳನಗಳನ್ನು ನಡೆಸಲು ಪ್ರೋತ್ಸಾಹ ನೀಡಿ, ಕನ್ನಡದ ಕಂಪು ರಾಜ್ಯದಲ್ಲೆಲ್ಲಾ ಹರಡಲು ನೆರವು ನೀಡಿದರು. ಗಡಿಪ್ರದೇಶಗಳಲ್ಲೂ ಸಮ್ಮೇಳನಗಳನ್ನು ನಡೆಸಿ ಕನ್ನಡ ಜಾಗೃತಿಯನ್ನುಂಟು ಮಾಡಿದರು. 'ಕನ್ನಡ ನುಡಿ'ಗೆ ಖರ್ಚಾಗುತ್ತಿದ್ದ ಅಪಾರ ಖರ್ಚನ್ನು ತಗ್ಗಿಸಲು ಸ್ವಪ್ರಯತ್ನದಿಂದ ಬ್ಯಾಂಕುಗಳು, ವ್ಯಾಪಾರೋದ್ಯಮಿಗಳನ್ನು ಸಂಪರ್ಕಿಸಿ ಜಾಹೀರಾತುಗಳನ್ನು ಸಂಗ್ರಹಿಸಿ ಖರ್ಚನ್ನು ಸರಿದೂಗಿಸಲು ಅಹರ್ನಿಶಿ ಶ್ರಮಿಸಿದ್ದಾರೆ. ನಷ್ಟದಲ್ಲಿ ನಡೆಯುತ್ತಿದ್ದ ಜಿ.ಎಂ.ಶ್ರೀ. ಅಚ್ಚುಕೂಟವನ್ನು ಲಾಭದಾಯಕ ಘಟಕವಾಗಿ ಮಾರ್ಪಡಿಸಿದ ಶ್ರೇಯಸ್ಸು ಪುನರೂರುರವರದು. ಜಿಲ್ಲಾ ಅಧ್ಯಕ್ಷರುಗಳಿಂದ ಬರಬೇಕಾಗಿದ್ದ ಬಾಕಿ (ಪುಸ್ತಕಗಳ ಮಾರಾಟ ಮತ್ತು ಅಮೃತನಿಧಿ ಟಿಕೇಟ್ ಮಾರಾಟ)ಯನ್ನು ವಸೂಲು ಮಾಡಲು ಧೈರ್ಯದಿಂದ ಕಾನೂನು ಕ್ರಮ ಕೈಗೊಂಡು ಯಶಸ್ವಿಯಾದರು. ಇದರಿಂದ ಅವರು ಕೆಲ ಅಧ್ಯಕ್ಷರುಗಳ ಅವಕೃಪೆಗೆ ತುತ್ತಾದರೂ ಕನ್ನಡ ಸಾಹಿತ್ಯ ಪರಿಷತ್ತಿನ ಹಿತದೃಷ್ಟಿಯಿಂದ ಎಂತಹ ಅಹಿತಕರ ಕಾರ್ಯ ಚಟುವಟಿಕೆಗೂ ತಾನು ಹಿಂಜರಿಯುವುದಿಲ್ಲ ಎಂಬುದನ್ನು ತೋರಿಸಿಕೊಟ್ಟರು. ರಾಜ್ಯಾದ್ಯಂತ ಅವಿರತವಾಗಿ ಕನ್ನಡ ಚಟುವಟಿಕೆಗಳು ನಡೆದುಕೊಂಡು ಹೋಗಲು ನೆರವಾಗುವ ದತ್ತಿ ಸಂಗ್ರಹ ಕಾರ್ಯವನ್ನು ಬಹು ಶ್ರದ್ಧೆಯಿಂದ ನಡೆಸಿ 60 ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹಿಸಿದ ಹೆಗ್ಗಳಿಕೆ ಇವರದು. ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಲು ಕಾರಣವಾಗುವ 'ಪುಸ್ತಕ ಮಾರಾಟ' ವನ್ನು ಎಲ್ಲಾ ಜಿಲ್ಲಾ ತಾಲ್ಲೂಕು, ಹೋಬಳಿ ಸಮ್ಮೇಳನ ಸ್ಥಳಗಳಲ್ಲಿ ನಡೆಸಿದರು. ಪುಸ್ತಕಗಳ ಪ್ರಕಟನೆಗಳನ್ನೂ ವೃದ್ಧಿಗೊಳಿಸಿದರು. ಇವರ ಅಧಿಕಾರಾವಧಿಯಲ್ಲಿ 300ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡವು ಎಂಬುದು ನಿಜಕ್ಕೂ ಬಹು ಹೆಮ್ಮೆಪಡುವಂತಹ ವಿಷಯ. ಪರಿಷತ್ತಿನಲ್ಲಿ ಲಭ್ಯವಿಲ್ಲದೆ ಇದ್ದ ಹಲವು ಅತ್ಯಮೂಲ್ಯ ಪುಸ್ತಕಗಳನ್ನು ಮರುಮುದ್ರಿಸಿ ಸಾಹಿತ್ಯಾಸಕ್ತರ ಪ್ರಶಂಸೆ ಗಳಿಸಿದರು. ವಿದ್ಯಾ ಇಲಾಖೆಯನ್ನು ಸಂಪರ್ಕಿಸಿ ಸುಮಾರು 30 ಲಕ್ಷ ರೂಪಾಯಿ ಬೆಲೆಯ ಕನ್ನಡ ನಿಘಂಟು, ರತ್ನಕೋಶಗಳನ್ನು ಮಾರಾಟ ಮಾಡಿದ್ದಲ್ಲದೆ ಇಂತಹ ಉಪಯುಕ್ತ ಗ್ರಂಥಗಳು ಶಾಲೆಗಳನ್ನು ಸೇರಲು ಕಾರಣಕರ್ತರಾದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತನ್ನದೇ ಆದ ವೆಬ್‌ಸೈಟ್ (ಅಂತರಜಾಲ ತಾಣ) ಸೃಷ್ಟಿಸಿ ಪರಿಷತ್ತನ್ನು ಅಂತಾರಾಷ್ಟ್ರೀಯ ಜಾಲಕ್ಕೆ ಸೇರಿಸಿದರು.

ಮೊತ್ತ ಮೊದಲ ಬಾರಿಗೆ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ 'ಕನ್ನಡ'ದಲ್ಲಿ 100ಕ್ಕೆ 100 ಅಂಕ ಪಡೆದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಪರಿಷತ್ತಿಗೆ ಆಹ್ವಾನಿಸಿ

ಸನ್ಮಾನಿಸಿದರು. ಹಾಗೆಯೇ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಸುಮಾರು 300 ವಿದ್ವಾಂಸರನ್ನು ಸನ್ಮಾನಿಸಿ ಗೌರವಿಸಿದ ಹೆಗ್ಗಳಿಕೆ ಇವರದು. ಪ್ರಥಮ ಬಾರಿಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರುಗಳು ಬೆಂಗಳೂರಿಗೆ ಬಂದುಹೋಗಲು ಉಚಿತ ಬಸ್ ಪಾಸ್ ಕೊಡಿಸಿದ್ದೂ ದಾಖಲೆ ಅಂಶವಾಗಿದೆ. ತಮಗೆ ಕಂಪ್ಯೂಟರ್ ಬಗ್ಗೆ ಹೆಚ್ಚಿನ ಅರಿವು ಇಲ್ಲದಿದ್ದರೂ ಸಂಸ್ಥೆಯ ಸಿಬ್ಬಂದಿಗೆ ಇದು ಅನಿವಾರ್ಯವೆಂಬುದನ್ನು ಮನಗಂಡು, ಅವರಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡಿ ಆಧುನಿಕ ಪ್ರಜ್ಞೆ ಪ್ರದರ್ಶಿಸಿದ್ದಾರೆ. ಪುಸ್ತಕ ಮಾರಾಟಕ್ಕೆ ಇವರು ನೀಡಿದಷ್ಟು ಪ್ರೋತ್ಸಾಹ, ನೆರವು, ಸಹಕಾರ ಇನ್ಯಾರೂ ನೀಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಪುಸ್ತಕ ಪ್ರಾಧಿಕಾರದ ಆಯ್ಕೆ ಸಮಿತಿಯಲ್ಲಿ ಹಾಗೂ ಗ್ರಂಥಾಲಯದ ಸಗಟು ಪುಸ್ತಕ ಖರೀದಿ ಸಮಿತಿಗಳಲ್ಲಿ ಸದಸ್ಯರಾಗಿದ್ದು ಪರಿಷತ್ತಿನ ಪುಸ್ತಕಗಳ ಆಯ್ಕೆಗೆ ಆದ್ಯತೆ ದೊರೆಯುವಂತೆ ಮಾಡಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಮೂರು ಅಖಿಲಭಾರತ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ ಶ್ರೇಯಸ್ಸು ಇವರದು. ಅತ್ಯಲ್ಪ ಕಾಲದಲ್ಲಿ ಕನ್ನಡ-ಕನ್ನಡ ಇಂಗ್ಲೀಷ್ (ಸಂಪುಟ-1) ಹೊರತಂದು ವಿಕ್ರಮ ಸಾಧಿಸಿದ್ದಾರೆ.

ಪುನರೂರು ಅವರು ತಮ್ಮ ಮೂರು ವರ್ಷಗಳ ಕಾಲಾವಧಿಯಲ್ಲಿ ಮಾಸಿಕ ಗೌರವಧನವನ್ನಾಗಲಿ-ಪ್ರಯಾಣ ಭತ್ಯೆಯನ್ನಾಗಲಿ ಸ್ವೀಕರಿಸದೆ, ಪರಿಷತ್ತಿಗೆ ಸುಮಾರು 20 ಲಕ್ಷ ರೂಪಾಯಿ ಖರ್ಚನ್ನೂ ಉಳಿಸಿಕೊಟ್ಟಿದ್ದಾರೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರಿಗೆ ನನ್ನ ಹಾರ್ದಿಕ ಅಭಿನಂದನೆಗಳು ಹಾಗೂ ಹೃತ್ಪೂರ್ವಕ ಶುಭಾಶಯಗಳು.

'ಪುನರೂರು ಪುರಸ್ಕಾರ'ದಂತಹ ಪ್ರಶಂಸನೀಯ ಕಾರ್ಯವನ್ನು ಹಮ್ಮಿಕೊಂಡಿರುವ ಕನ್ನಡ ಸಂಘ, ಕಾಂತಾವರ ಇದರ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ ನನ್ನ ತುಂಬು ಹೃದಯದ ಅಭಿನಂದನೆಗಳು.

☐

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಪರಿಷತ್ತಿನ ಪೋಷಕ ಶಕ್ತಿ

ಡಾ|| ಉಪ್ಪಂಗಳ ರಾಮಭಟ್ಟ



''ನಿರಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ'' ಎಂಬ ಸಾರ್ಥಕವಾದ ಮಾತೊಂದಿದೆ. ಪಂಡಿತರು, ವನಿತೆಯರು, ಫಲಪುಷ್ಪನೀಡುವ ಲತೆಗಳು ಶೋಭಿಸಬೇಕಾದರೆ ಅವಕ್ಕೆ ಯೋಗ್ಯವಾದ ಆಧಾರ ಇಲ್ಲವೇ ಆಶ್ರಯ ಇರಬೇಕು. ಪಂಡಿತಾದಿಗಳು ಸ್ವಾತಂತ್ರ್ಯಕ್ಕೆ ಅರ್ಹವಲ್ಲವೆಂದು ಈ ಮಾತಿನ ಅರ್ಥವಲ್ಲ; ಸ್ವತಂತ್ರರಾಗಿಯೂ ಬೆಳಗಬಲ್ಲವರೆಂಬುದರಲ್ಲಿ ಸಂದೇಹವಿಲ್ಲ, ಆಶ್ರಯವಿದ್ದರೆ ಹೆಚ್ಚು ಬೆಳಗಬಹುದೆಂದಷ್ಟೇ ಅರ್ಥ. ಪಂಡಿತರು, ವಿದ್ಯಾವಂತರು ತಮ್ಮ ಅಧ್ಯಯನಾದಿಗಳಲ್ಲೇ ಹೆಚ್ಚು ಸಮಯ ತೊಡಗಿರುವುದರಿಂದ ಅವರ ಜೀವನೋಪಾಯಕ್ಕೆ ಬೇಕಾದ ಆರ್ಥಿಕ ಅನುಕೂಲತೆ ಅವರಿಗಿರುವುದಿಲ್ಲ, ಸುಲಭದಲ್ಲಿ ಹಣ ಮಾಡುವ ತಂತ್ರವೂ ಅವರಿಗೆ ಒಪ್ಪುವುದಲ್ಲ; ಆದ್ದರಿಂದ ಅವರಿಗೆ ಸ್ಥಾನಮಾನ, ಆರ್ಥಿಕ ಅನುಕೂಲತೆಗಳು ಒದಗಿಬಂದರೇ ಅವರು ಹೆಚ್ಚು ಬೆಳಗಬಲ್ಲರು, ಅದನ್ನೇ ''ಆಶ್ರಯ'' ಎನ್ನುವುದು. ವನಿತೆಯರಲ್ಲಿ ಎಷ್ಟೇ ವಿದ್ಯಾಬುದ್ಧಿ ಸೌಂದರ್ಯಾದಿ ಗುಣಗಳಿದ್ದರೂ ಅವರಿಗೆ ಯೋಗ್ಯ ಗಂಡಂದಿರು ಇದ್ದಾಗ ಮಾತ್ರ ಸಮಾಜದಲ್ಲಿ ಅವರ ವರ್ಚಸ್ಸು ಹೆಚ್ಚುತ್ತದೆ. ಫಲಪುಷ್ಪ ನೀಡುವ ಬಳ್ಳಿಯೂ ನೆಲದಲ್ಲೆಲ್ಲೋ ಹೇಗೋ ಹಬ್ಬಿಕೊಂಡಿದ್ದರೆ ಯಾರ್‍ಯಾರ

'ಪರಾಶರ', ಸುಧೀಂದ್ರ ತೀರ್ಥ ಮಾರ್ಗ, ಕುಂಜಿಬೆಟ್ಟು, ಉಡುಪಿ–576 102

ಕಾಲ್ತುಳಿತಕ್ಕೂ, ದನಗಳ ಉಪಟಳಕ್ಕೂ ಒಳಗಾಗಿ ನಶಿಸುವುದು. ಏರಲು ಆಸರು, ಹಬ್ಬಲು ಚಪ್ಪರ ಅಥವಾ ಸೂಕ್ತವಾದ ಮರವಿದ್ದರೆ ಅದು ಹಬ್ಬಿ ಕಾಲ ಬಾಳಿ ಫಲಪುಷ್ಪಪ್ರದವಾಗುವುದು.

ಸಾಹಿತ್ಯ ರಚಯಿತರಿಗೆ, ಕವಿಗಳಿಗೆ, ಸಂಗೀತಾದಿ ಕಲಾಕಾರರಿಗೆ ಪ್ರಾಚೀನ ಕಾಲದಲ್ಲಿ ದೊಡ್ಡ ದೊಡ್ಡ ಶ್ರೀಮಂತರು, ಪಾಳೆಯಗಾರರು, ರಾಜರು, ಮಹಾರಾಜರು ಬೆಂಬಲವನ್ನೂ, ಆಶ್ರಯವನ್ನೂ ನೀಡಿ ಪ್ರೋತ್ಸಾಹ ನೀಡುತ್ತಿದ್ದರು. ಇದರಿಂದ ಅಂತಹ ವಿದ್ಯೆಗಳು ಬೆಳೆದು ರಾಜರ ಅಥವಾ ಆಶ್ರಯದಾತರ ಗೌರವಾದಿಗಳೂ ಹೆಚ್ಚುತ್ತಿದ್ದವು. ಅಂಥವರ ಕೃತಿಗಳಿಂದ ರಾಜಾದಿಗಳ ಹೆಸರು, ಕೀರ್ತಿ ಶಾಶ್ವತವಾಗುತ್ತಿತ್ತು. ಕನ್ನಡದ ಪಂಪರನ್ನಪೊನ್ನಾದಿ ಮಹಾಕವಿಗಳು ಹೀಗೆ ತಮ್ಮ ಆಶ್ರಯದಾತರನ್ನೂ ಬೆಳಗಿಸಿದರು, ತಾವು ಅವರಿಗಿಂತ ಹೆಚ್ಚಾಗಿ ಬೆಳಗಿದರು. ಅರಿಕೇಸರಿಯು ಪಂಪನಿಗೆ ಗಜತುರಗ ವಸ್ತ್ರಾಭರಣಾದಿ ಅಮೂಲ್ಯ ವಸ್ತುಗಳನ್ನು ಮಾತ್ರವಲ್ಲದೆ 'ಧರ್ಮಪುರ'ವೆಂಬ ಗ್ರಾಮವನ್ನೇ ನೀಡಿ ಗೌರವಿಸಿದ್ದನ್ನು ಅವನೇ ಬಾಯ್ತುಂಬ ಕೊಂಡಾಡಿದ್ದಾನೆ.

ನಮ್ಮ ದೇಶದಲ್ಲಿ ರಾಜಾಡಳಿತ ಕೊನೆಗೊಂಡಾಗ, ಕಲಾದಿಗಳ ಪೋಷಣೆಗೆ ದೊಡ್ಡ ಕೊರತೆಯುಂಟಾಯಿತು. ಬ್ರಿಟಿಷರು ಪರಕೀಯರಾದ್ದರಿಂದ ಅವರಿಂದ ಇಂತಹುದನ್ನು ನಿರೀಕ್ಷಿಸುವಂತಿಲ್ಲ. ಅವರ ಕೈಕೆಳಗಿನ 'ಅರಸ'ರೆಂಬ ನಾಮಧಾರಿಗಳು ಏನೋ ಸ್ವಲ್ಪ ಉತ್ತೇಜನ ನೀಡಿರಬಹುದು. ಪಾಶ್ಚಾತ್ಯ ಮಿಶನರಿಗಳೂ ಈ ದಿಸೆಯಲ್ಲಿ ದುಡಿದದ್ದುಂಟು. ನೇರವಾಗಿ ಪೋಷಣೆ, ಬೆಳವಣಿಗೆ, ಪ್ರಜಾಪ್ರಭುತ್ವಕಾಲದಲ್ಲಿ ಸರಕಾರ ಮೂಲದ ಅಕಾಡೆಮಿಗಳಿಂದಲೋ ವಿದ್ಯಾದಿ ಇಲಾಖೆಗಳಿಂದಲೋ ಆಯಿತೆನ್ನಬಹುದು, ಮೈಸೂರು ಮಹಾರಾಜರು ಸ್ವಾತಂತ್ರ್ಯಪೂರ್ವದಲ್ಲೇ, ತೊಂಬತ್ತು ವರ್ಷಗಳ ಹಿಂದೆಯೇ (1915) ಕನ್ನಡ ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಿರುವುದು ಅವರ ಅಸಾಮಾನ್ಯ ದೂರದೃಷ್ಟಿಗೆ ಸಾಕ್ಷಿ. ಸ್ವಾತಂತ್ರ್ಯಾನಂತರ ಇದರಂತೆ ಅನೇಕ ಸಂಘಸಂಸ್ಥೆಗಳು- ಸಾಹಿತ್ಯ ಸಂಗೀತ, ನಾಟಕ, ಚಿತ್ರಕಲೆ ಮೊದಲಾದವುಗಳ ಸಾಧನೆಗೆ ಹುಟ್ಟಿಕೊಂಡು ತಮ್ಮ ತಮ್ಮ ಅಭಿವೃದ್ಧಿ ಪಥದಲ್ಲಿ ಸಾಗಿದುವು. ಹಿಂದೆ ರಾಜರು ಮಾಡುತ್ತಿದ್ದ ಪೋಷಣೆಯನ್ನು ಅವು ತಮ್ಮ ಕೈಗೆ ತೆಗೆದುಕೊಂಡವು.

ಕನ್ನಡಕ್ಕೆ ಸಂಬಂಧಿಸಿ ಹೇಳುವುದಿದ್ದರೆ "ಕನ್ನಡ ಸಾಹಿತ್ಯ ಪರಿಷತ್ತಿ"ನ ಮಾದರಿಯಲ್ಲಿ ಕರ್ನಾಟಕದ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮೊದಲಾದ ಸರಕಾರ ಕೃಪಾಪೋಷಿತಗಳು ಮಾತ್ರವಲ್ಲದೆ ಸ್ಥಳೀಯವಾದ ಅನೇಕ ಕನ್ನಡ ಸಂಘಗಳು ಹುಟ್ಟಿ ಬೆಳೆದುವು. ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಜಿಲ್ಲೆ ತಾಲೂಕುಗಳ ಪ್ರತಿನಿಧಿಗಳನ್ನು ಮಾತ್ರ ಹೊಂದಿದ್ದು, ನಿಯಮಿತ ಸಂಖ್ಯೆಯ ಸದಸ್ಯರಿಂದ ಕೂಡಿದ್ದುದು ಜಿಲ್ಲೆ ಮತ್ತು ತಾಲೂಕು ಮಟ್ಟದ ಪ್ರತ್ಯೇಕ ಉಪಘಟಕಗಳನ್ನೇ ಹೊಂದಿ ವಿಸ್ತೃತೀಕರಣವಾಗಿ ಬೆಳೆಯಿತು. ಸಾಹಿತ್ಯ ಸಮ್ಮೇಳನ, ಗ್ರಂಥ ಪ್ರಕಟಣೆ, ವಿಚಾರಗೋಷ್ಠಿ, ಸಾಹಿತಿಗಳ ಸಂಮಾನ ಮೊದಲಾದ ಮೂಲ ಪರಿಷತ್ತಿನ ಧ್ಯೇಯ ಸಾಧನೆಗಳನ್ನೇ ಅಂಥಾ ಮಟ್ಟದಲ್ಲಿ ವಿಸ್ತರಿಸುವುದು ತೀರ ಇತ್ತೀಚೆಗೆ ಅದು ಸಾಹಿತ್ಯಜ್ಞರು ಸಾಹಿತ್ಯರಚಯಿತರೇ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಬೇಕಾದ ಔಚಿತ್ಯವನ್ನೂ ಮೀರಿ ಸಾಹಿತ್ಯ ಪ್ರೇರಕರು. (ಸಾಹಿತ್ಯಜ್ಞರಲ್ಲದವರು) ಅಧ್ಯಕ್ಷರಾಗುವದನ್ನು ಸಹಿಸಿಕೊಂಡು ವಿಸ್ತರಿಸತೊಡಗಿತು.

ಸಾಹಿತ್ಯದ ವಿದ್ಯಾರ್ಥಿಯಾದ ನಾನು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯ ಸಂಘಗಳ ಕಡೆಗೆ ದೃಷ್ಟಿ ಹರಿಸಿದಾಗ ಇಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಮಂಗಳೂರಿನಲ್ಲಿ ಕಂದಾಯ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದ ಬೇಕಲ ಮೂಲದ ಕೀಕಾನ ರಾಮಚಂದ್ರರು. ಕಾರ್ಯಕಾರಿ

ಸಮಿತಿಯಲ್ಲಿ ಕಯ್ಯಾರ ಕಿಞ್ಞಣ್ಣ ರೈ ಮೊದಲಾದವರಿದ್ದರು. ಆಗಲೇ ಹರಿಕೃಷ್ಣ ಪುನರೂರು ಅವರೂ ಸೇರಿಕೊಂಡಿದ್ದರು. ಕಾರ್ಯದರ್ಶಿಗಳಾಗಿ ಪಿ.ಎಸ್. ರಾಯರು ಇದ್ದ ನೆನಪು. ಹೆಚ್ಚು ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಪರಿಷತ್ತಿಗೆ ಆರ್ಥಿಕ ಅನುಕೂಲತೆಯೂ ಇರಲಿಲ್ಲ. ಕೇಂದ್ರ ಪರಿಷತ್ತಿನಿಂದ ಅತ್ಯಲ್ಪ ಧನಸಹಾಯವಿರುತ್ತಿತ್ತೆಂದು ತೋರುತ್ತದೆ. ವರ್ಷಕ್ಕೊಮ್ಮೆ ಸಮಿತಿಯ ಮೀಟಿಂಗ್ ನಡೆಯುತ್ತಿದ್ದ ನೆನಪಿದೆ. ಉಡುಪಿಯ ಪ್ರತಿನಿಧಿಯಾಗಿ ನಾನು ಭಾಗವಹಿಸುತ್ತಿದ್ದೆ. ಕೀಕಾನ ರಾಮಚಂದ್ರರು ಅನಾರೋಗ್ಯಪೀಡಿತರಾದಾಗ ಹರಿಕೃಷ್ಣ ಪುನರೂರು ಅವರು ಆ ಸ್ಥಾನಕ್ಕೇರಿದರು. ಅಲ್ಲಿಂದ ಪರಿಷತ್ತು ಮೈ ಕೊಡವಿ ನಿಂತು ಮಾಂತ್ರಿಕನ ಮಂತ್ರದಂಡದ ಬೊಂಬೆಯಂತೆ ನರ್ತಿಸತೊಡಗಿತು. ಮತ್ತೆ ಅವರು ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೇ ಆದಾಗ ಅವರ ಚಟುವಟಿಕೆ ರಾಜ್ಯಾದ್ಯಂತ ಹಬ್ಬಿತ್ತು. ನವತರುಣ ಪುನರೂರರು ಏನಾದರೂ ಸಾಧಿಸಬೇಕೆಂಬ ಹುಮ್ಮಸ್ಸಿನಿಂದ ತಮ್ಮ ಕೈಯಿಂದಲೇ ಹಣವೊದಗಿಸಿ ಚಟುವಟಿಕೆ ಬೆಳೆಸಿದರು. ಕೇವಲ ತಾಲೂಕು ಪ್ರತಿನಿಧಿಗಳೆಂದಿದ್ದವರಲ್ಲಿ ಒಬ್ಬರನ್ನು ಅಧ್ಯಕ್ಷರೆಂದೇ ಅವರು ನಾಮಕರಣ ಮಾಡಿದರು. ಉಡುಪಿ ತಾಲೂಕಿನ ಅಧ್ಯಕ್ಷನಾಗಿ ನನ್ನನ್ನವರು ನಾಮ ನಿರ್ದೇಶನ ಮಾಡಿದ್ದರಿಂದ ಸಾಹಿತ್ಯಕ್ಕೆ ನನ್ನ ಅತ್ಯಲ್ಪ ಸೇವೆ ಸಲ್ಲಿಸಲು ಹೆಚ್ಚಿನ ಅವಕಾಶವಾಯಿತು. ವಿವಿಧ ಜನರ ಒಡನಾಟದೊಂದಿಗೆ ಸಾಹಿತ್ಯ ಕೈಂಕರ್ಯ ಮಾಡುವ ಈ ಸದವಕಾಶ ನನ್ನ ಜೀವನದಲ್ಲಿ ಒಂದು ಮುಖ್ಯ ಅಧ್ಯಾಯವೆಂದು ಭಾವಿಸಿದ್ದೇನೆ. 1996-98 ಈ ಅವಧಿಯಲ್ಲಿ ಕಾಲೇಜಿನಲ್ಲಿ ನಡೆಸುತ್ತಿದ್ದ ಸಾಹಿತ್ಯ ಚಟುವಟಿಕೆಗಳಿಗೆ ಇದು ಬಲ ಮೌಲ್ಯಗಳನ್ನು ನೀಡಿತು. ಅಂಬಲ್ಪಾಡಿ ಮತ್ತು ಕೋಟೆಗಳಲ್ಲಿ ಅದ್ದೂರಿಯ ಎರಡು ತಾಲೂಕು ಸಾಹಿತ್ಯ ಸಮ್ಮೇಳನಗಳು ಸಾರ್ಥಕವಾಗಿ ಜರಗಿದವು. ತಾಲೂಕು ಸಮ್ಮೇಳನಗಳಿಗೆ ಪುನರೂರರು ಸ್ವಂತದ ಹತ್ತು ಸಾವಿರ ರೂಪಾಯಿಗಳನ್ನು ನೀಡಿ ಪ್ರೋತ್ಸಾಹಿಸಿದ್ದರಿಂದ ಸಾಹಿತ್ಯಾಸಕ್ತ ಸಾರ್ವಜನಿಕರು, ಮುಂದಾಳುಗಳು ಕೈಕೈಸೇರಿ ಮಣಭಾರದ ಹೊರೆ, ಹತ್ತಿಯಂತೆ ಹಗುರವಾಯಿತು. ಅಂಬಲ್ಪಾಡಿ ಸಮ್ಮೇಳನದಲ್ಲಿ ಮಿಗತೆಯಾದ ಹತ್ತು ಸಾವಿರ ಅದರ ನೆನಪಿಗಾಗಿ ನಡೆಸುವ ವಾರ್ಷಿಕ ಕಾರ್ಯಕ್ರಮಕ್ಕೆ ಇಡುಗಂಟಾಯಿತು. ಕೋಟ ಸಮ್ಮೇಳನದಲ್ಲಿ ಮಿಗತೆಯಾದ ಇದಕ್ಕಿಂತ ಹೆಚ್ಚಿನ ಮೊತ್ತದಿಂದಾಗಿ ಅಲ್ಲಿನ ಮಿತ್ರ ಮಂಡಳಿಯ ನೆರವಿನಿಂದ ವಾರ್ಷಿಕ ಕಾರ್ಯಕ್ರಮ ನಡೆಸುವಂತಾಯಿತು. ಈ ಮಾದರಿ ರಾಜ್ಯದ ಇತರ ಭಾಗಗಳಿಗೂ ಹಬ್ಬಿತು. ಒಂದು ರೀತಿಯ ಸ್ಪರ್ಧೆಯೇ ಏರ್ಪಟ್ಟಿತು.

ಅವರ ಅಧ್ಯಕ್ಷಾವಧಿಯ ಕೊನೆಯ ಹಂತದಲ್ಲಿ 'ಕುವೆಂಪು ಶತಮಾನ 2004' ಈ ಮಾಲಿಕೆಯ ಉಪಾಂತ್ಯದ ಒಂದು ಸುಮವಾಗಿ ಸಂಶೋಧನ, ವಿಚಾರ ವಿಮರ್ಶನ ಲೇಖನಗಳುಳ್ಳ ನನ್ನ 'ಸಂಗತಿ' ಎಂಬ ಗ್ರಂಥವನ್ನು ಸೇರಿಸಿಕೊಂಡಿರುವುದು ನನಗೆ ಅವರು ನೀಡಿದ ಇನ್ನೊಂದು ಸದವಕಾಶವೆಂದು ನೆನೆಯುತ್ತೇನೆ.

ತಾಲೂಕು ಅಧ್ಯಕ್ಷರು ನಡೆಸುವ ಪ್ರತಿಯೊಂದು ಸಾಹಿತ್ಯ ಚಟುವಟಿಕೆಗೂ ಪುನರೂರರು ಕನಿಷ್ಠ ಒಂದು ಸಾವಿರ ರೂಪಾಯಿಯ ದೇಣಿಗೆಯನ್ನಾದರೂ ನೀಡುತ್ತಿದ್ದರು. ಉಡುಪಿ ತಾಲೂಕು ಕ್ಷೇತ್ರದಲ್ಲಿ ಕೇವಲ ಸಾಹಿತ್ಯ ಸಮ್ಮೇಳನ ಮಾತ್ರವಲ್ಲದೆ ಅಧ್ಯಾಪಕರ ಕಮ್ಮಟ, ವಿಶೇಷ ಭಾಷಣ, ಗಮಕ ಮೊದಲಾದ ವಿವಿಧ ಚಟುವಟಿಕೆಗಳನ್ನು ನಡೆಸಿದ ನೆನಪು ಮನದಾಳದಿಂದ ಮೂಡಿಬರುತ್ತಿದೆ. ಪ್ರತಿಯೊಂದು ಕಡೆಯಲ್ಲೂ ಪುನರೂರರ ಹೆಸರೇ ಹೆಸರು- ಅಧ್ಯಕ್ಷತೆ, ಉದ್ಘಾಟನೆ, ಪುಸ್ತಕ ಬಿಡುಗಡೆ, ಮುಖ್ಯ ಅತಿಥಿ ಇತ್ಯಾದಿ ಇತ್ಯಾದಿ. ಹೆಚ್ಚಿನ ಕಡೆಗಳಲ್ಲೂ 'ನಾನು ಸಾಹಿತಿಯಲ್ಲ' ಎಂದು ಮುಗ್ಧವಾಗಿ ತೊಡಗಿ ಪ್ರಾಸ್ತಾವಿಕ ಚುಟುಕು ಮಾತನ್ನಾಡಿ ಚಾಲನೆ ನೀಡುವುದಷ್ಟೇ ಅವರ ಕಾಯಕ. ಜಿಲ್ಲೆಯ ಮೂಲೆ ಮೂಲೆಗೂ ಕರೆವಲ್ಲಿಗೆಲ್ಲ ಸ್ವಂತ ವಾಹನದಲ್ಲಿ ಸ್ವಂತ ವೆಚ್ಚದಲ್ಲಿ ಆಸಕ್ತರನ್ನೂ ಕೂಡಿಕೊಂಡು ಭಾಗವಹಿಸುವುದು


ಅವರ ಪ್ರೋತ್ಸಾಹ ಕ್ರಮದ ಒಂದು ರೀತಿ. ಸ್ಥಳೀಯ ಸಾಹಿತಿಗಳು, ಅಪ್ರಸಿದ್ಧರಾದವರು ಬೆಳಕಿಗೆ ಬರಬೇಕು, ಅವರೂ ಉತ್ಸಾಹ ತುಂಬಿ ಸಾಹಿತ್ಯ ಕೈಂಕರ್ಯ ಕೈಗೊಳ್ಳಬೇಕೆಂಬುದು ಅವರ ಮಹದಾಶಯ. ಹಣವಿಷ್ಟಿದ್ದರೂ, ತನ್ನ ಸುಖಭೋಗವಾಗಿ ಧಾರಾಳ ಉಳಿದಿದ್ದರೂ ಉತ್ತಮ ಕಾರ್ಯಕ್ಕಾಗಿ ಅದನ್ನು ಬಳಸಲು ಮನಮಾಡುವವರು ಬಹಳ ವಿರಳ. ಅಂತಹ ವಿರಳದಲ್ಲಿ ವಿರಳರು ಸರಳ ಉಡುಪು ನಡೆ ನುಡಿಯ ಪುನರೂರು. ಅವರಿಂದ ಇಂತಹ ಇನ್ನಷ್ಟು ಸತ್ಕಾರ್ಯಗಳು ನಾಡು ನುಡಿಗಳ ಸೇವೆ ನಡೆಯಲೆಂದು ಹಾರೈಸುತ್ತೇನೆ, ನನ್ನ ಪರವಾದ ಧನ್ಯತೆಯನ್ನು, ಅಭಿನಂದನೆಯನ್ನು ಸಲ್ಲಿಸುತ್ತೇನೆ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಾಹಿತ್ಯ ಪ್ರೇರಕ–ಪೋಷಕ ಚೈತನ್ಯ

□ ಪ್ರೊ॥ ಸಾ. ಶಿ. ಮರುಳಯ್ಯ



ಹರಿಕೃಷ್ಣ ಪುನರೂರು ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ. ಅದೊಂದು ಅಸಾಮಾನ್ಯ ಚೇತನ. ಸದಾ ಚಟುವಟಿಕೆಯಲ್ಲಿರುವ ಚಲನಶೀಲ ಶಕ್ತಿಯ ವ್ಯಕ್ತ ರೂಪ. ದೇಗುಲಗಳ ಬೀಡಾದ ದಕ್ಷಿಣ ಕನ್ನಡ ಜಿಲ್ಲೆಯ ಹಲವು ದೇವಳಗಳ ಧರ್ಮದರ್ಶಿ. ಅಧ್ಯಾತ್ಮಿಗಳ ಆತ್ಮಬಂಧು, ಕಾಯಕಯೋಗಿಗಳ ಕಾರುಣ್ಯ ಸಿಂಧು. ಆಚಾರ ಸಂಹಿತೆಗೆ ವೈಚಾರಿಕತೆಯ ವಿದ್ಯುತ್ ಸ್ಪರ್ಶ ನೀಡಿ, ಅದನ್ನು ಸಮಾಜಮುಖಿಯಾಗಿಸಿ, ಸಕಲ ಜೀವಾತ್ಮರಿಗೂ ಲೇಸನೇ ಬಯಸಿದ ಸಂಸಾರ ಯೋಗಿ! ಇಂತಿರುವ ಈತನನ್ನು ಭಾರತದ ಸನಾತನ ಸಂಸ್ಕೃತಿ ಸಂವರ್ಧನೆಯ ನೇತಾರನೆನ್ನಲೆ? ಜನಮನವನ್ನು ತನ್ನ ಮಾತಿನ ಚಿನ್ನದ ಚಾಟಿಯಿಂದ ಬಡಿದೆಬ್ಬಿಸಿ, ಅದು ಸನ್ಮಾರ್ಗದಲ್ಲಿ ಪ್ರವೃತ್ತನಾಗುವಂತೆ ಮಾಡುವ ಶಕ್ತಿಶಾಲಿ ಸಾಹಿತ್ಯದ ಪ್ರಾಚುರ್ಯದ ಪರಿಚಾರಕನೆನ್ನಲೆ? ಹೋಟೇಲ್ ಉದ್ದಿಮೆದಾರರು ನಡೆಸುವ ಅನ್ನಯಜ್ಞದ ಅಧ್ವರ್ಯುವೆನ್ನಲೆ? ಅಂತಾರಾಷ್ಟ್ರೀಯ ಪ್ರಬುದ್ಧ ಸೇವಾ ಸಂಸ್ಥೆಯ ನಿಷ್ಠಾಪೂರ್ಣ ಸೇವೆಗೈದು, ಅತ್ಯುನ್ನತ ಪೀಠಾರೋಹಣ ಮಾಡಿದ ಗವರ್ನರ್ ಎನ್ನಲೆ! ಸಪ್ತಾಶ್ವ ಸಂಯೋಜಿತ ಕನ್ನಡ ಸಾಹಿತ್ಯ ಪರಿಷತ್ ವರೂಥದ ಸ್ವಸ್ಥ ಪಾರ್ಥಸಾರಥಿ ಎನ್ನಲೆ? ದೀನರಿಗೆ ದಯೆಯಾಗಿ, ದಲಿತರಿಗೆ ತಾಯಾಗಿ, ಸೂರುಕಾಣದ ನೂರೆಂಟು ನಿರ್ಗತಿಕ ಕುಟುಂಬಗಳಿಗೆ,

ನಂ. 3, ರಾಗಿಣಿ, ಸರ್ವಿಸ್ ರಸ್ತೆ, ಆರ್.ಪಿ.ಸಿ. ಬಡಾವಣೆ, ವಿಜಯನಗರ(ಪೂರ್ವ), ಬೆಂಗಳೂರು–40

ಸಕಲ ಸವಲತ್ತುಗಳುಳ್ಳ ಅತ್ಯುತ್ತಮ ಕಾಂಕ್ರೀಟ್ ಕಟ್ಟಡಗಳನ್ನು ಕಟ್ಟಿಸಿ, ದಾನಗೊಟ್ಟ ಅನಾಥ ರಕ್ಷಕ ಮಹಾದಾನಿ ಎನ್ನಲೆ? ಪ್ರತಿ ವರ್ಷವೂ ಸಾಮೂಹಿಕ ವಿವಾಹವೇರ್ಪಡಿಸಿ, ಸಾವಿರಾರು ಜನರಿಗೆ ಬದುಕು ನೀಡಿದ ಬಡಬಗ್ಗರ ಬಂಧುವೆನ್ನಲೆ? ತನ್ನ ಸೌಜನ್ಯದ ನುಡಿಗಳಿಂದ ಜನಮನವನ್ನು ತಿದ್ದಿ ಬೆಳೆಸಿದ ಸಮಾಜ ಸುಧಾರಕನೆನ್ನಲೆ? ಯಾವುದೇ ದುರ್ಭರ ಪ್ರಸಂಗದಲ್ಲೂ ತನ್ನ ಮನಸ್ಸ್ವಾಸ್ಥ್ಯವನ್ನು ಕಳೆದುಕೊಳ್ಳದ ಸ್ಥಿತಪ್ರಜ್ಞನೆನ್ನಲೆ? ನನ್ನ ಈ ಅನಿಮಿತ್ತ ಬಂಧುವನ್ನು ಏನೆಂದು ಕರೆಯಲಿ? ಒಂದು ಮಾತಿನಲ್ಲಿ ಹೇಳುವುದಾದರೆ ಅವರು ಸವ್ಯಸಾಚಿ, ಸರ್ವ ಸಮರ್ಥ.

ಇಂತಹ ಪುರುಷಕಾರ ಉಳ್ಳ ಈ ವ್ಯಕ್ತಿ ಹುಟ್ಟು ಸಾಹಿತಿ ಅಲ್ಲ. ಸಾಹಿತ್ಯ ಪರಿಷತ್ತಿನ ಸ್ಪಷ್ಟ ಸಂಹಿತೆಗೆ ಅಪವಾದವಾಗಿಯೇ ಬಂದಾತ. ಆದರೆ ನೆನಪಿಡಬೇಕು, ಈತ ಸಾಹಿತಿಗಳ ನಿರ್ಮಾಪಕ, ಸಾಹಿತ್ಯ ಪ್ರೇರಕ, ಸದಭಿರುಚಿಯ ಸಾಹಿತ್ಯ ಪೋಷಕ. ಸಾಹಿತ್ಯದ ಸೃಷ್ಟಿಕರ್ತನಿಗಿಂತ ಅದನ್ನು ಸಂರಕ್ಷಿಸುವವನ ಹೊಣೆಗಾರಿಕೆ ಹಿರಿದು. ನಮ್ಮ ಪ್ರಾಚೀನ ದಾನಶಾಸನಗಳು ದಾನದ ಬಗೆಗೆ ಒಂದು ಮಾತು ಹೇಳುತ್ತವೆ: 'ದಾನಾತ್ ಶ್ರೇಯೋನುಪಾಲನಂ' ಎಂದು. ಅಂದರೆ ದಾನಕ್ಕಿಂತ ಅದರ ಪಾಲನೆ ಶ್ರೇಯಸ್ಕರ ಎಂದು. ಅಷ್ಟೇ ಅಲ್ಲ,

ದಾನಪಾಲನಯೋರ್ ಮಧ್ಯೇ ದಾನಾಚ್ಛ್ರೇಯೋನುಪಾಲನಂ
ದಾನಾತ್ ಸ್ವರ್ಗಂ ಅವಾಪ್ನೋತಿ ಪಾಲನಾತ್ ಅಚ್ಯುತ ಪದಂ ॥

ದಾನವನ್ನು ಕೊಡುವುದು, ಕೊಟ್ಟ ದಾನವನ್ನು ಪಾಲಿಸುವುದು- ಇವುಗಳಲ್ಲಿ ದಾನವನ್ನು ಪಾಲಿಸುವುದೇ ಹೆಚ್ಚು ಶ್ರೇಯಸ್ಕರ. ದಾನವಿತ್ತವನಿಗೆ ಸ್ವರ್ಗ ಪ್ರಾಪ್ತಿಯಾದರೆ, ಅದನ್ನು ರಕ್ಷಿಸಿಕೊಂಡು ಬಂದವನಿಗೆ ಸಾಕ್ಷಾತ್ ಅಚ್ಯುತ ಪದವಿಯೇ ಪ್ರಾಪ್ತವಾಗುತ್ತದೆ ಎಂತಲೂ ಹೇಳುತ್ತವೆ.

ಈ ಮಾತನ್ನೇ ಸಾಹಿತ್ಯ ರಚಕನಿಗಿಂತ ಸಾಹಿತ್ಯ ಸಂರಕ್ಷಕನಿಗೆ ಅನ್ವಯಿಸಿ ಹೇಳುವುದಾದರೆ ಸಹೃದಯ ಚೇತನಗಳಿಗೆ ಸದಾ ಸಾಹಿತ್ಯ ಸೌರಭವನ್ನು ಹಂಚುವ, ಸಾಹಿತ್ಯವನ್ನು ಸಂರಕ್ಷಿಸಿ ಪೋಷಿಸಿಕೊಂಡು ಬರುತ್ತಿರುವ ಈ ನಮ್ಮ ಆತ್ಮೀಯನಿಗೆ ಅಚ್ಯುತ ಪದವಿ ಪ್ರಾಪ್ತಿಸುವುದರಲ್ಲಿ ಸಂದೇಹವೇ ಇಲ್ಲ! ಅಲ್ಲವೆ?

ಈ ಸಾಹಿತ್ಯ ಪ್ರೇರಕ, ಪೋಷಕ ಚೈತನ್ಯಕ್ಕೆ ಶುಭವಾಗಲಿ!

ಈತನ ಬಹುಮುಖಿ ಸೇವೆಗಳಲ್ಲಿ ಸಾಹಿತ್ಯ ಸೇವೆಯೂ ಒಂದು. ಇದಕ್ಕೆ ಈತ ತನ್ನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಾವಧಿಯಲ್ಲಿ ಹೊರತಂದ ನೂರಾರು ಪುಸ್ತಕಗಳು ಸಾಕ್ಷಿ ಹೇಳುತ್ತವೆ. ಬಹುಶಃ ಕನ್ನಡ ಸಂಕ್ಷಿಪ್ತ ನಿಘಂಟು ಮತ್ತು ಕನ್ನಡ ರತ್ನಕೋಶಗಳು ಈತನ ಛಲದಿಂದ, ಈತನ ಬಲದಿಂದ, ಈತನ ಕೃಪೆಯಿಂದಲೇ ಪೂರ್ಣಗೊಂಡು ಹೊರಬರಲು ಸಾಧ್ಯವಿರುತ್ತಿರಲಿಲ್ಲ. ಸ್ವಲ್ಪ ಆಲಸ್ಯ ಮಾಡಿದ್ದರೂ ಪರಭಾರೆಯಾಗುವ ಸಂಭವವಿತ್ತು. ಆದರೆ ಅದಕ್ಕೆ ಅವಕಾಶ ಕೊಡಲಿಲ್ಲ. ತಾನೇ ಆ ಕಾರ್ಯವನ್ನು ಪೂರ್ಣಗೊಳಿಸಿ ಹೊರಬಂದ ಛಲದಂಕ ಮಲ್ಲ! ತನ್ನ ಅಧಿಕಾರಾವಧಿಯ ಮೂರು ವರ್ಷಗಳು ಮುಗಿದ ಮೇಲೂ, ಮತ್ತೆ ಆರು ತಿಂಗಳವರೆಗೆ ವಿಸ್ತರಿಸಿ, ತನ್ನ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿಯೇ ಅಧಿಕಾರ ಬಿಟ್ಟು ಬಂದಾತನೀತ. ಇದು ಸ್ತುತ್ಯರ್ಹ ಸಾಹಸ. ಈತನ ಕಾರ್ಯದಕ್ಷತೆ ನನಗೆ ಬರಲಿಲ್ಲ. ಅದರಿಂದಾಗಿ ಬಹು ನಷ್ಟ ಕಷ್ಟ ಅನುಭವಿಸಿದೆ. ನನ್ನ ಅಧ್ಯಕ್ಷಾವಧಿಯ ಮೂರು ವರ್ಷಗಳಲ್ಲಿ ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿ, ಡಾ|| ಎಂ.ಎಂ. ಕಲಬುರ್ಗಿ, ಡಾ|| ಉಪಾಧ್ಯಾಯ, ಡಾ|| ಸಂಗಮೇಶ ಸವದತ್ತಿಮಠ ಮೊದಲಾದ ಪ್ರಬುದ್ಧ ವಿದ್ವಾಂಸರ, ಪ್ರಕಾಂಡ ಪಂಡಿತರ ನೆರವಿನಿಂದ 'ಕನ್ನಡ-ಇಂಗ್ಲಿಷ್ ನಿಘಂಟು'ವಿನ ಮೊದಲ ಸಂಪುಟ ಸಿದ್ಧಪಡಿಸಿ, ಮುದ್ರಿಸಿ, ಬೈಂಡಿಂಗ್ ವ್ಯವಸ್ಥೆಯನ್ನೆಲ್ಲಾ ಮಾಡಿ ಮುಗಿಸಿದೆ. ಆದರೆ ಮುಂದೆ ಬಂದ ಮಹನೀಯರು ಮೊದಲ ಹಾಳೆಗಳನ್ನು ಹಿಂದೆಸೆದು ತಮ್ಮ ಹೆಸರಿನಲ್ಲಿ ಪ್ರಕಾಶಕ್ಕೆ ತಂದರು. ಇದೇ ಗತಿ, ನನ್ನ ಅಧ್ಯಕ್ಷಾವಧಿಯಲ್ಲಿ ಮುದ್ರಣಗೊಂಡು, ಬೆಳಕು ಕಾಣಲು ಸಿದ್ಧವಿದ್ದ, ನಂಜೇಗೌಡರ 'ಸಂಕ್ಷಿಪ್ತ ಕನ್ನಡ

ಸಾಹಿತ್ಯ ಚರಿತೆ' ಮೊದಲಾದ ಪುಸ್ತಕಗಳಿಗೂ ಪ್ರಾಪ್ತವಾಯಿತು. ಇದು ಭರತ ಚಕ್ರವರ್ತಿ ವೃಷಭಾಚಲದಲ್ಲಿ 'ಪೂರ್ವಾವನಿಪಾಳ ಪ್ರಶಸ್ತಿಯಳೊಂದೊಂದಂ ದಂಡರತ್ನದಿಂ ಸೀಂಟಿ ಕಳೆದು ನಿಜ ಪ್ರಶಸ್ತಿಗೆಡೆ ಮಾಡಿದಂತಾ'ಯಿತು!

ದುರಂತವೆಂದರೆ ಲೇಖಕರ ಗಮನಕ್ಕೂ ತರದೆ, 'ಲೇಖಕರ ನುಡಿ'ಯನ್ನು ತಿದ್ದುವ ಸ್ವಾತಂತ್ರ್ಯ ವಹಿಸಿದ ಮಹಾ ಮೇಧಾವಿಗಳ ಪ್ರಾವೀಣ್ಯ. 'ಬೆಳೆದ ಹೊಲಕ್ಕೆ ಮಂಚಿಗೆ ಹಾಕುವ' ಪುಂಡು ಪಾಳೇಗಾರರ ತೊಂಡುತನಕ್ಕೆ ಆಸ್ಪದ ಕೊಡದಂತೆ ಮಾಡಿದ ನನ್ನ ಮಿತ್ರ ನಿಜಕ್ಕೂ ಧನ್ಯ!

ನೆಲ ದೂರವಿದ್ದರೂ ಮನ ತುಂಬಾ ಹತ್ತಿರದಲ್ಲಿರುವುದರಿಂದ ಆತನಿಗೆ- ಆ ದಾನವಿನೋದನಿಗೆ- ನನ್ನ ಹಾರ್ದಿಕ ನಮನಗಳು. ಅರವತ್ತು ವಸಂತಗಳನ್ನು ಕಂಡಿರುವ ಈತ ನೂರ್ಕಾಲ ಬಾಳಲಿ, ಪೂರ್ಣ ಯಶೋಭಾಗಿಯಾಗಲಿ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕ್ರಿಯಾಶೀಲ ಸಂಘಟಕ, ಉತ್ಸಾಹಿ ಕಾರ್ಯಕರ್ತ

□ ಬಿ.ಎಂ. ಇದಿನಬ್ಬ



ಹರಿಕೃಷ್ಣ ಪುನರೂರರನ್ನು ನಾನು ಕಳೆದ ಮೂವತ್ತೈದು ವರ್ಷಗಳಿಂದ ಬಲ್ಲೆ. ಅವರು ಹೋಟೇಲು ಉದ್ಯಮಿಯಾಗಿ ಭಾರೀ ಚುರುಕಿನಿಂದ, ನಿಷ್ಠೆಯಿಂದ ಆ ಕಾಲದಲ್ಲಿಯೇ ಕೆಲಸ ಮಾಡುವುದನ್ನು ನಾನು ಕಂಡಿರುತ್ತೇನೆ. ಆ ಸಮಯದಲ್ಲೇ ಜಿಲ್ಲೆಯ ಸಂಘ ಸಂಸ್ಥೆಗಳಿಗೆ ಉದಾರ ನೆರವು ನೀಡುತ್ತಿದ್ದರು. ಅವರಿಗೆ ತುಂಬಾ ಗೆಳೆಯರ ಬಳಗ ಇದ್ದು, ಕ್ರಿಯಾಶೀಲರಾಗಿಯೇ ಸದಾ ಇರುತ್ತಿದ್ದರು.

ಅವರಿಗೆ ಆ ಕಾಲದಲ್ಲೇ, ವಿದ್ಯಾ ಕ್ಷೇತ್ರದ ಬಗ್ಗೆ, ಸಾಹಿತ್ಯದ ಬಗ್ಗೆ ತುಂಬಾ ಆಸಕ್ತಿ ಮತ್ತು ಕಳಕಳಿ ಇತ್ತು. ಅವರು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಅಪಾರ ಸೇವೆಯನ್ನು ಮಾಡುತ್ತಾ ಬಂದರು.

ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ, ಹೋಬಳಿಗಳಲ್ಲಿ ಗ್ರಾಮಗಳಲ್ಲಿ ಕನ್ನಡ ಸಾಹಿತ್ಯ ಸಭೆಗಳನ್ನು, ಸಮ್ಮೇಳನಗಳನ್ನು ನಡೆಸುತ್ತಾ ಬಂದರು. ಅವರ ಸಂಘಟನಾ ಸಾಮರ್ಥ್ಯ ಅಮೋಘವಾದುದು. ಆ ಸಂಘಟನಾ ಚಾತುರ್ಯವೇ ಆ ರೀತಿಯಲ್ಲಿ ಸಾಹಿತ್ಯ ಸಮ್ಮೇಳನಗಳಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕನ್ನಡದ ಅಭಿವೃದ್ಧಿಯಾಗಲು ಕಾರಣವಾಗಿದೆ. ಅದಕ್ಕೆ ಬುನಾದಿ ಹಾಕಿ ಕೊಟ್ಟವರು ಹರಿಕೃಷ್ಣ ಪುನರೂರು.

'ಕಾವ್ಯಶ್ರೀ' ಉಳ್ಳಾಲ, ಮಂಗಳೂರು

ಉದ್ಯಮಿಯಾಗಿ, ಸಾಹಿತ್ಯದ ಅಭಿವೃದ್ಧಿಗೆ ದುಡಿದ ಅವರು ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣಾ ಸ್ಪರ್ಧೆಗೆ ಚಂಪಾರ ಎದುರು ನಿಂತರು. ಇದು ಪುನರೂರರ ಅಗ್ನಿಪರೀಕ್ಷೆಯೇ ಆಯಿತು. ಒಕ್ಕಲಿಗ, ಲಿಂಗಾಯತ ಸದಸ್ಯರೇ ಜಾಸ್ತಿ ಇರುವ ಸಾಹಿತ್ಯ ಪರಿಷತ್ತಿನ ಈ ಚುನಾವಣೆ ಭಾರೀ ಕುತೂಹಲ ಮತ್ತು ಆಶ್ಚರ್ಯದ ವಿಚಾರವಾಗಿತ್ತು. ಆದರೆ ಕ್ರಿಯಾಶೀಲರೂ, ಸಂಘಟಕರೂ, ಉತ್ಸಾಹಿ ಕಾರ್ಯಕರ್ತರೂ ಆದ ಪುನರೂರು ನಿರಾಶರಾಗಲಿಲ್ಲ. ಧೈರ್ಯಗೆಡಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಸದಸ್ಯರ ಮನೆಗೂ ಭೇಟಿ ನೀಡಿ, ಮತ ಯಾಚನೆ ಮಾಡಿ, ಒಂದು ಅದ್ಭುತ ಸಾಧನೆಯನ್ನೇ ತೋರಿದರು. ಒಂದೆ ಈ ರೀತಿ ಎಲ್ಲಾ ಸದಸ್ಯರ ಮನೆಗಳಿಗೆ ಯಾವ ಸ್ಪರ್ಧಿಯೂ ಹೋಗಿರಲಿಲ್ಲ.


ಹರಿಕೃಷ್ಣ ಪುನರೂರರು ಅಧ್ಯಕ್ಷ ಚುನಾವಣೆಯಲ್ಲಿ ಬಹುಮತದಿಂದ ಗೆದ್ದು ಬಂದದು. ಮೂರು ವರ್ಷಕಾಲ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅತ್ಯುತ್ತಮ ಕೆಲಸ-ಕಾರ್ಯಗಳನ್ನು ಮಾಡಿ, ಕನ್ನಡಿಗರ ಪ್ರೀತಿಗೆ ಪಾತ್ರರಾದರು. ಆರ್ಥಿಕ ಕೊರತೆಯಿದ್ದ ಪರಿಷತ್ತಿಗೆ ಆರ್ಥಿಕ ನೆರವು ಒದಗಿಸಿಕೊಟ್ಟು ಅದನ್ನು ಬಲಾಢ್ಯ ಮಾಡಿದರು. ಸಂಖ್ಯೆಗಟ್ಟಲೆ ಕನ್ನಡ ಗ್ರಂಥಗಳನ್ನು ಅಚ್ಚು ಹಾಕಿಸಿ, ಪರಿಷತ್ತಿಗೆ ನೆಲೆ-ಬೆಲೆಯನ್ನು ಒದಗಿಸಿದರು. ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಯಿಂದ ನಿವೃತ್ತಿ ಹೊಂದಿದ ಮೇಲೆ ಕೂಡ ಪುನರೂರರು ದ.ಕ. ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ನಡೆಯುವ ಸಭೆ-ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ ಸಕ್ರಿಯವಾಗಿ ಕೆಲಸ ಮಾಡುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ.

ಪುನರೂರರು ಬಹುಕಾಲ ಬಾಳಿ ಇದೇ ರೀತಿಯ ಸೇವೆಯನ್ನು ಕನ್ನಡ ನಾಡಿಗೆ ಜನತೆಗೆ, ಮುಖ್ಯವಾಗಿ ನಮ್ಮ ಜಿಲ್ಲೆಗೆ ಒದಗಿಸಲು ದೇವರು ಅನುಗ್ರಹಿಸಲೆಂದು ಹಾರೈಸುತ್ತೇನೆ.

□

ನುಡಿ ಸೇವೆಗೆ ಇನ್ನೊಂದು ಹೆಸರು

ಡಾ। ಚನ್ನವೀರ ಕಣವಿ



1೯೯೮ರ ಡಿಸೆಂಬರ್ ತಿಂಗಳು. ಹಾಸನದ ಸಾಹಿತ್ಯ ಸಮ್ಮೇಳನ ಮುಗಿಸಿಕೊಂಡು ಬರುವಾಗ ಕಾರ್ಕಳದಲ್ಲಿ ಏರ್ಪಡಿಸಿದ್ದ ದ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವ ಅವಕಾಶ ನನಗೆ ಒದಗಿದ್ದಿತು. ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ವ್ಯಾಸರಾಯ ಬಲ್ಲಾಳ, ಎಲ್.ಎಸ್. ಶೇಷಗಿರಿರಾವ್, ಕು.ಶಿ. ಹರಿದಾಸ ಭಟ್ಟ, ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಜಿ. ನಾರಾಯಣ, ಶಾ.ಶಿ. ಮರುಳಯ್ಯ, ಎಂ.ವಿ. ಕಾಮತ್, ಬಿ.ವಿ. ಕಾರಂತ ಮೊದಲಾದ ಇನ್ನೂ ಅನೇಕ ಸಾಹಿತಿಗಳೂ ಕಲಾವಿದರೂ ಭಾಗವಹಿಸಿದ ಸಮ್ಮೇಳನ ಅದಾಗಿದ್ದಿತು. ಪ್ರಾದೇಶಿಕ ವೈಶಿಷ್ಟ್ಯವನ್ನು ಸಾರುವ ವೇದಿಕೆಯ ಅಲಂಕಾರ, ಕಾರ್ಯದರ್ಶಿಗಳಾದ ಎಂ. ರಾಮಚಂದ್ರ, ಅವರು ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಪಾಲಿಸಿದ ಸಮಯ ನಿಷ್ಠೆ, ಸಭೆಯ ಸುವ್ಯವಸ್ಥೆ, ಉಲ್ಲಾಸಕರವಾದ ಸಾಂಸ್ಕೃತಿಕ ವಾತಾವರಣ- ಒಂದೊಂದೂ ನನ್ನ ಮನಸ್ಸನ್ನು ತುಂಬಿನಿಂತವು. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಇವೆಲ್ಲವನ್ನು ದಕ್ಷತೆಯಿಂದ ಸಂಘಟಿಸಿದ ಹರಿಕೃಷ್ಣ ಪುನರೂರು ಅವರನ್ನು ನಾನು ಕಂಡದ್ದು ಇದೇ ಮೊದಲು. ಅರ್ಧ ತೋಳಿನ ಧವಳ ಶುಭ್ರ ಅಂಗಿ ಮತ್ತು ಪಂಚೆ, ಕೃತಕತೆಯಿಲ್ಲದ ಮುಗುಳು

'ಚೆಂಬೆಳಕು', ಕಲ್ಯಾಣ ನಗರ, ಧಾರವಾಡ-580 007

ನಗೆಯ ಪುನರೂರು ಅವರ ಸರಳತೆಯನ್ನು, ನೇರ ನಡೆಯನ್ನು ನಾನು ಅಂದು ಮನಸ್ಸಿನಲ್ಲಿಯೇ ಮೆಚ್ಚಿಕೊಂಡೆ.

ಮರುವರ್ಷ (1997) ಮಂಗಳೂರಿನಲ್ಲಿ ನಡೆದ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕಯ್ಯಾರ ಕಿಞ್ಞಣ್ಣ ರೈ ಅವರಿಗೆ ನನ್ನಿಂದ ಅಧಿಕಾರದ ಹಸ್ತಾಂತರ. ನಾನು ನೋಡಿದ ಸಾಹಿತ್ಯ ಸಮ್ಮೇಳನಗಳಲ್ಲಿಯೇ ಅದು ಅತ್ಯಂತ ಅಚ್ಚುಕಟ್ಟಾದದ್ದು. ಸಮ್ಮೇಳನದ ಕಾರ್ಯಾಧ್ಯಕ್ಷರಾಗಿ ಪ್ರಮುಖ ಪಾತ್ರವಹಿಸಿದ್ದ ಪುನರೂರು ವೇದಿಕೆಯ ಮೇಲೆ ಕುಳಿತದ್ದೇ ಕಡಿಮೆ. ಸ್ವಯಂಸೇವಕನಂತೆ ಅತ್ತಿತ್ತ ಓಡಾಡುತ್ತಿದ್ದುದೇ ಹೆಚ್ಚು. 66ನೇ ಸಮ್ಮೇಳನದ ನೆನಪಿಗೆಂದು 66 ಗ್ರಂಥಗಳ ಅನುದಾನ ಯೋಜನೆಯನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದ್ದರು. ಸಮ್ಮೇಳನದ ಆವರಣದಲ್ಲಿ ಸುಮಾರು ನಾಲ್ಕುನೂರು ಪುಸ್ತಕ ಮಳಿಗೆಗಳಿದ್ದುದನ್ನು ಕಣ್ಣಾರೆ ಕಂಡು ನಂಬಲೇಬೇಕಾಯಿತು. ಯಾವ ಶುಲ್ಕವಿಲ್ಲದೆ ಪ್ರಕಾಶಕರಿಗೆ, ಪುಸ್ತಕ ಮಾರಾಟಗಾರರಿಗೆ ಉಚಿತವಾಗಿ ಮಳಿಗೆಗಳನ್ನು ಒದಗಿಸಲಾಗಿತ್ತು. ಪುನರೂರು ಸಾಹಿತಿಯಾಗಿರಲಿಕ್ಕಿಲ್ಲ. ಆದರೆ ಸಾಹಿತ್ಯಾಭಿಮಾನಿಯಾಗಿ, ಪುಸ್ತಕ ಸಂಸ್ಕೃತಿಯ ಪೋಷಕರಾಗಿ ದುಡಿಯುವ ಅವಕಾಶವನ್ನು ಅವರು ನೂರಕ್ಕೆ ನೂರರಷ್ಟು ಸಫಲಗೊಳಿಸಿಕೊಂಡದ್ದು ನನಗೆ ಮನವರಿಕೆಯಾಯಿತು.

1990ರಿಂದ 2001ರವರೆಗೆ ಹನ್ನೊಂದು ವರ್ಷ ನಿರಂತರವಾಗಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದ್ದು ಪರಿಷತ್ತಿನ ಇತಿಹಾಸದಲ್ಲಿಯೇ ಒಂದು ದಾಖಲೆಯೆನ್ನಬಹುದು. ಅದಕ್ಕೆ ತಕ್ಕಂತೆ ಆ ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಸಂಘಟಕರಾಗಿ ಅವರು ಸಲ್ಲಿಸಿದ ಸೇವೆ, ನಡೆಸಿದ ಚಟುವಟಿಕೆಗಳು ಒಂದು ಮಾದರಿಯಾಗಿ ನಿಲ್ಲಬಲ್ಲವು.

2001ರಲ್ಲಿ ಕಾಂತಾವರದ ಕನ್ನಡ ಸಂಘದ ಬೆಳ್ಳಿಯ ಹಬ್ಬ, 2004ರಲ್ಲಿ ಮುದ್ದಣ ಕಾವ್ಯಪ್ರಶಸ್ತಿ ಯೋಜನೆಯ ಬೆಳ್ಳಿಹಬ್ಬ-ಎರಡಕ್ಕೂ ನನ್ನನ್ನು ಡಾ. ನಾ. ಮೊಗಸಾಲೆ ಬರಮಾಡಿಕೊಂಡಿದ್ದರು. ಆ ಸಂದರ್ಭಗಳಲ್ಲಿ ಮೂಲ್ಕಿಯಲ್ಲಿಯ ಪುನರೂರು ಟೂರಿಸ್ಟ್ ಹೋಟೇಲ್‌ನಲ್ಲಿಯೇ ನಮಗೆ ಊಟ, ವಸತಿಯ ಏರ್ಪಾಡು. ಕೆ.ಜಿ. ಜಿನರಾಜ ಹೆಗ್ಡೆ ಸ್ಮಾರಕ ಕನ್ನಡ ಭವನ ಕಾಂತಾವರದಲ್ಲಿ ಸೂರ್ಯಕಾಂತಿ ಪುಷ್ಪದಂತೆ ಅರಳಿ ನಿಂತಿದೆ. 7-11-2004ರಂದು ಮುದ್ದಣ ಕಾವ್ಯ ಪ್ರಶಸ್ತಿ ಪುರಸ್ಕೃತ ಕವಿಗಳಿಂದ ಕವಿಗೋಷ್ಠಿ, ವಿಚಾರಗೋಷ್ಠಿ. ಸಂಜೆ ಮುದ್ದಣ ಕಾವ್ಯಪ್ರಶಸ್ತಿ ಯೋಜನೆಯ ಪ್ರಾಯೋಜಕರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರಿಗೆ ಸನ್ಮಾನ. ಇಡೀ ದಿನ ಕಾಂತಾವರದ ನಿಸರ್ಗ ಸೌಂದರ್ಯದೊಡನೆ ಸಾಹಿತ್ಯಾಸಕ್ತರ ಹೃದಯದ ಔದಾರ್ಯವೂ ಬೆರೆತ ಸಂಭ್ರಮ. ಧರ್ಮಾಧಿಕಾರಿ ಡಾ|| ವೀರೇಂದ್ರ ಹೆಗ್ಗಡೆಯವರ ಅನುಪಸ್ಥಿತಿಯಲ್ಲಿ ಸನ್ಮಾನದ ಕಾರ್ಯವನ್ನು ನಿರ್ವಹಿಸುವ ಗೌರವ ನನ್ನ ಪಾಲಿಗೆ ಬಂದಿತು. ನನ್ನ ಭಾಷಣದ ಕೊನೆಯಲ್ಲಿ, ಆಗಲೆ ಹೊಳೆದ ಒಂದು ವಿಚಾರವನ್ನು ನಾನು ಪ್ರಸ್ತಾಪಿಸಿದೆ: ಮುದ್ದಣ ಕಾವ್ಯ ಪ್ರಶಸ್ತಿಯ ಬೆಳ್ಳಿಯ ಹಬ್ಬದ ಸವಿನೆನಪಿಗೆ ಪ್ರಶಸ್ತಿಯ ಮೊತ್ತವನ್ನು ರೂ.ಐದು ಸಾವಿರದಿಂದ ರೂ. ಹತ್ತು ಸಾವಿರಕ್ಕೆ ಹೆಚ್ಚಿಸಿದರೆ ಎಷ್ಟು ಒಳ್ಳೆಯದಾಗಬಹುದಲ್ಲವೆ? ಎಂಬುದೇ ಆ ಸಲಹೆ. ಪುನರೂರು ಅವರು ಸ್ವಲ್ಪವೂ ಹಿಂದೆ ಮುಂದೆ ನೋಡದೆ ಅದಕ್ಕೆ ಸಂತೋಷದಿಂದ ಸಮ್ಮತಿಸಿದರು. ಪುನರೂರು ತಮ್ಮ ಸೃಜನಾತ್ಮಕ ಕಾರ್ಯಗಳಿಂದ ಪಡೆದಿರುವ ಸ್ಥಾನ ದೊಡ್ಡದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಸಮಾಜಕ್ಕಾಗಿ ದುಡಿದರೆ ಸಮಾಜ ಅಂಥವರನ್ನು ಗುರುತಿಸಿ ಆತ್ಮೀಯತೆಯಿಂದ ತಬ್ಬಿಕೊಳ್ಳದೆ ಇರಲಾರದು. ನಿರಪೇಕ್ಷತೆಯಿಂದ ಸೇವೆ ಮಾಡಿದವರಿಗೆ ಆ ಸೇವೆಯಿಂದ ಸಿಗುವ ಆತ್ಮತೃಪ್ತಿ ಅಮೃತ ಸಮಾನವೆಂದು ಹೇಳಲಾಗುತ್ತದೆ. ಅಂಥ ಒಂದು ತೃಪ್ತಿಯ ಮಂದಹಾಸ ಪುನರೂರವರ ಮುಖದಲ್ಲಿ ಮೂಡಿದ್ದನ್ನು ಅಂದು ಯಾರೂ ಕಾಣಬಹುದಿತ್ತು.

ಮರುದಿನ ಬೆಳಗ್ಗೆ ಪುನರೂರು ಜೊತೆಯಲ್ಲಿಯೇ ಹೊಟೇಲ್‌ನಲ್ಲಿ ಉಪಹಾರ ತೆಗೆದುಕೊಂಡೆವು. ಸಮೀಪದಲ್ಲಿಯೇ ಇರುವ ಪುನರೂರಿಗೆ ಹೋಗಿ ಅವರ ಮನೆಯಲ್ಲಿ ಸ್ವಲ್ಪ ಹೊತ್ತು ಕುಳಿತು ಶ್ರೀಮತಿ ಉಷಾರಾಣಿಯವರ ಆತಿಥ್ಯ ಸ್ವೀಕರಿಸಿ, ಒಳಯಲ್ಲಿಯೇ ರಾಶಿಯಾಗಿ ಜೋಡಿಸಿದ್ದ ಹಲವಾರು ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕಗಳಲ್ಲಿ ಕಣ್ಣಾಡಿಸಿ 'ಶುಭವಾಗಲಿ' (ಮನೆಯ ಹೆಸರು) ಎಂಬ ಭಾವನೆಯಿಂದ ಹೊರಬಂದೆವು. ಸನಿಹದಲ್ಲಿಯೇ ಒಂದು ಮಹಾದ್ವಾರ. ಒಳಗೆ ಪ್ರವೇಶಿಸಿದೊಡನೆ ಸ್ವಚ್ಛವಾದ, ಸುಂದರವಾದ ಬಯಲಿನಲ್ಲಿ ಒಂದೇ ಮಾದರಿಯ ಅಚ್ಚುಕಟ್ಟಾದ ವಸತಿಗೃಹಗಳ ಸಾಲು. ನಡುವೆ ಅಗಲವಾದ ರಸ್ತೆಗಳು. ಪುನರೂರು ಬಡಬಗ್ಗರಿಗಾಗಿ ಕಟ್ಟಿಸಿರುವ ನೂರು ಮನೆಗಳು! ಒಂದೊಂದು ಸಂಸಾರಕ್ಕೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಒಳಗೊಂಡ ಮನೆಗಳು. ಎದುರಿಗೆ ಮಕ್ಕಳಿಗೆ ವಿಸ್ತಾರವಾದ ಕ್ರೀಡಾಂಗಣ, ಸಭಾಮಂಟಪ ಹಾಗೂ ಕಾರ್ಯಾಲಯ. ಪಕ್ಕದಲ್ಲಿಯೇ ಪ್ರಾಥಮಿಕ ಹಾಗೂ ಪ್ರೌಢಶಾಲೆ. ಒಬ್ಬ ವ್ಯಕ್ತಿಯ ನೆಲೆಯಲ್ಲಿ ಇಂಥ ವಿಶಿಷ್ಟ ಯೋಜನೆ ಪೂರೈಸಿರುವುದನ್ನು ನಾನು ಬೇರೆಡೆ ಕಂಡಿಲ್ಲ. ಪುನರೂರು ಅವರ ಸಾಮಾಜಿಕ ಕಳಕಳಿ ಅವರನ್ನು ಈ ರೀತಿ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ, ಧಾರ್ಮಿಕ ಕ್ಷೇತ್ರದಲ್ಲಿ ಕ್ರಿಯಾಶೀಲಗೊಳಿಸಿರುವುದು ದೊಡ್ಡ ಮಾತು. ಎಲ್ಲ ವರ್ಗದ ಜನರೊಡನೆ ಬೆರೆತು, ಸಾಮಾಜಿಕ ಬದುಕಿಗೆ ಒಡ್ಡಿಕೊಂಡು ಹೀಗೆ ಸದ್ದು-ಗದ್ದಲವಿಲ್ಲದೆ ತಮ್ಮನ್ನು ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳುವವರು ವಿರಳ. ದೇವಾಲಯಗಳನ್ನು ಸಾಂಸ್ಕೃತಿಕ ಕೇಂದ್ರಗಳಾಗಿಸುವ ಪ್ರಯತ್ನ, ಮಡಿ-ಮೈಲಿಗೆಗಳನ್ನು ತೊರೆದು ಸಮಾನ ಸಾಮಾಜಿಕ ಕಾರ್ಯವನ್ನು ಒದಗಿಸಬಲ್ಲ ಸೇವಾ ಮಂದಿರಗಳೇ ನಮ್ಮ ದೇವಸ್ಥಾನಗಳಾಗಬೇಕೆಂಬ ಅವರ ಪ್ರಗತಿಪರ ಧೋರಣೆಯನ್ನು ಯಾರೂ ಮೆಚ್ಚಬೇಕಾದದ್ದೆ.

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಮೊದಲ ಸಲ ಸೋತು, ಆಮೇಲೆ ಗೆದ್ದ ಸಂದರ್ಭದಲ್ಲಿ ಪರಿಷತ್ತಿಗಾಗಿ ವಿಶಾಲ ದೃಷ್ಟಿಯಿಂದ ವ್ಯಾಪಕವಾಗಿ ಅವರು ಮಾಡಬೇಕಾದ ಅನೇಕ ಕಾರ್ಯಗಳು ಕಾದುಕೊಂಡಿರುವಾಗ ಅವರ ಅಭಿಮಾನಿಗಳಿಂದಲೇ ಒಂದು ಅನುಚಿತ ಘಟನೆ ಸಂಭವಿಸಿದ್ದು ಮಾತ್ರ ವಿಷಾದನೀಯ. ಮಂಗಳೂರು ಬ್ರಾಹ್ಮಣ ಮಹಾಸಭೆ ಅವರಿಗೆ ಅಭಿನಂದನ ಸಮಾರಂಭ ಏರ್ಪಡಿಸಿದಾಗ ಪುನರೂರರ ಗೆಲುವಿಗಾಗಿ ಶ್ರಮಿಸಿದ ವ್ಯಕ್ತಿಯೊಬ್ಬರು ಹೇಳಿದರು: ''ಸಾಹಿತ್ಯ ಪರಿಷತ್ತನ್ನು ಕಟ್ಟಿದವರು ನಮ್ಮ ಬ್ರಾಹ್ಮಣರು. ಆದರೆ ಇತ್ತೀಚೆಗೆ ಅದು ಬ್ರಾಹ್ಮಣರ ಕೈತಪ್ಪಿ ಹೋಗಿತ್ತು. ಪರಿಕ್ರೃಷ್ಣರ ಮೂಲಕ ಈಗ ಪುನಃ ಬ್ರಾಹ್ಮಣರು ಪರಿಷತ್ತಿಗೆ ಪ್ರವೇಶ ಪಡೆದಂತಾಯಿತು. ಇನ್ನು ಮುಂದೆ ಇದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು.'' ಇದು ಪತ್ರಿಕೆಗಳಲ್ಲಿ ವರದಿಯಾದಾಗ ಇಂಥ ಜಾತೀಯ ಉನ್ಮಾದದ ಅವಿವೇಕವನ್ನು ಕೂಡಲೇ ಪ್ರತಿಭಟಿಸಿ ಹೇಳಿಕೆಕೊಟ್ಟವರಲ್ಲಿ ಪ್ರಸಿದ್ಧ ವಿದ್ವಾಂಸರೂ ಸಾಹಿತಿಗಳೂ ಆದ ಡಾ॥ ಕುಶಾಲಪ್ಪ ಗೌಡ, ರಾಮಚಂದ್ರದೇವ, ಸುಬ್ರಾಯ ಚೊಕ್ಕಾಡಿ, ಪ್ರಭಾಕರ ಶಿಶಿಲ ಮೊದಲಾದವರಿದ್ದರು. ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಹೊಸ ವರ್ಷದ ಚಟುವಟಿಕೆಗಳ ಉದ್ಘಾಟನೆಯ ಸಂದರ್ಭದಲ್ಲಿ (ಎದುರುಬದುರಾಗಿ) ನಾನೂ ಈ ಅವಿವೇಕವನ್ನು ಖಂಡಿಸುತ್ತ ಹೇಳಿದ್ದೆ: ''ಹಿಂದೆ ಪ್ರಗತಿಶೀಲ ಸಾಹಿತಿಗಳು ಪರಿಷತ್ತಿನ ಕರ್ಣಧಾರತ್ವವನ್ನು ವಹಿಸಿದ್ದ 'ರಾಜಸೇವಾಸಕ್ತ'ರನ್ನು ಟೀಕಿಸಿದ್ದುಂಟು. ಆದರೆ ಅದು ಇಂಥ ಕೀಳುಮಟ್ಟದ ಜಾತಿ ಕಾರಣಕ್ಕಾಗಿ ಎಂದೂ ಇರಲಿಲ್ಲ. ಅದರ ಜಡತ್ವವನ್ನು ನೀಗಿಸಿ, ಜನಪರಗೊಳಿಸುವ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿತ್ತು'' ಎಂಬುದಾಗಿ. ಮಂಗಳೂರಿನ ಆ ಸಭೆಯಲ್ಲಿಯೇ ಪುನರೂರು ಇಂಥ ಮಾತುಗಳಿಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರೆ ಅವರಿಗೇ ಒಳಿತಾಗುತ್ತಿತ್ತು. ಆಮೇಲೆ ಅವರು ನೀಡಿದ, ''ಸಾಹಿತ್ಯ

ಪರಿಷತ್ತು ಕನ್ನಡಿಗರದು. ಯಾವುದೇ ಒಂದು ಜಾತಿಗೆ ಮೀಸಲಾದುದಲ್ಲ. ಇಲ್ಲಿ ಕನ್ನಡಿಗರೆಲ್ಲರಿಗೂ ಪ್ರವೇಶವಿದೆ" ಎಂಬ ಹೇಳಿಕೆ ಕೊಂಚ ಸಮಾಧಾನವನ್ನುಂಟು ಮಾಡಿದರೂ ಅವರನ್ನು ಕೆಲವರು ಆಗೀಗ ಅನುಮಾನದಿಂದ ನೋಡುವುದು ತಪ್ಪಲಿಲ್ಲವೇನೊ!

ಮುಂದೆ ಪರಿಷತ್ತಿನಲ್ಲಿ ಜಾತೀಯ ಸಂಕುಚಿತ ಭಾವನೆಗೆ ಆಸ್ಪದ ಕೊಡದ ರೀತಿಯಲ್ಲಿ ಅವರು ತಮ್ಮ ಕಾರ್ಯಗಳನ್ನು ಕೈಗೊಂಡು ಸಾಧ್ಯವಾದಷ್ಟನ್ನು ನಿಷ್ಠೆಯಿಂದಲೇ ನಿರ್ವಹಿಸಿದರು. ಮೂರು ವರ್ಷಗಳ ಅವಧಿಯಲ್ಲಿ ಮೂರು ಸಾಹಿತ್ಯ ಸಮ್ಮೇಳನಗಳು ನಡೆಯುವಂತೆ ಪ್ರಯತ್ನಿಸಿದರು. ಸಾಕಷ್ಟು ದತ್ತಿ ನಿಧಿಗಳನ್ನು ಸಂಗ್ರಹಿಸಿ ಪರಿಷತ್ತಿನ ಆರ್ಥಿಕ ಬಲವನ್ನು ಹೆಚ್ಚಿಸಿದರು. "ನಾನು ಸಾಹಿತಿಯಾಗದೆ ಇರುವುದರಿಂದ ಎಲ್ಲರ ಸಾಹಿತ್ಯವನ್ನು ಗೌರವಿಸುತ್ತೇನೆ" ಎಂಬ ವಿನಯದಿಂದಲೇ ಕನ್ನಡ ಜನತೆಯ ಸಹಕಾರವನ್ನು ಕೋರಿ ಪಡೆದುಕೊಂಡರು. ಈ ದಿಸೆಯಲ್ಲಿ ಜಿ. ನಾರಾಯಣ ಅವರ ಆದರ್ಶವನ್ನು ಪುನರೂರು ಅನುಸರಿಸಿದರೆಂದು ತೋರುತ್ತದೆ. ಜಿ. ನಾರಾಯಣ ಅವರು ತಜ್ಞರಾದ ಹಿರಿಯ ಸಾಹಿತಿಗಳ (ರಂ.ಶ್ರೀ. ಮುಗಳಿ, ಎಲ್.ಎಸ್. ಶೇಷಗಿರಿರಾವ್, ಜಿ.ಎಸ್. ಶಿವರುದ್ರಪ್ಪ, ಸಿದ್ದಯ್ಯ ಪುರಾಣಿಕ, ಹಾ.ಮಾ.ನಾಯಕ, ದೇ. ಜವರೇಗೌಡ ಮುಂ). ಸಲಹೆಗಳನ್ನು ತಡೆದುಕೊಂಡೇ ತಮ್ಮ ಮಹತ್ವದ ಸಾಹಿತ್ಯಿಕ ಹಾಗೂ ಸಾಹಿತ್ಯ ಪ್ರಸಾರದ ಯೋಜನೆಗಳನ್ನು ಸ್ವಂತ ವಿವೇಚನೆಯೊಂದಿಗೆ ಸಮಗ್ರ ಕರ್ನಾಟಕದ ದೃಷ್ಟಿಯನ್ನಿಟ್ಟುಕೊಂಡು ನಿರ್ವಹಿಸುತ್ತಿದ್ದುದರಿಂದ ಅವುಗಳಿಗೆ ವಿಶೇಷ ಮೆರುಗು ಬರುತ್ತಿತ್ತು. ಪುನರೂರು ಅವರು ಈ ಅಂಶವನ್ನು ಗಮನಿಸಿದ್ದರೆ ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯಿಕ ಕೆಲಸಗಳಾಗಬಹುದಿತ್ತೆಂದು ತೋರುತ್ತದೆ. ಆದರೆ ಪರಿಷತ್ತನ್ನು ಆರ್ಥಿಕವಾಗಿ ಬಲಗೊಳಿಸುವಲ್ಲಿ, ಅವ್ಯವಹಾರಗಳಿಗೆ ಆಸ್ಪದ ಕೊಡದೆ ಆಡಳಿತವನ್ನು ಪಾರದರ್ಶಕವಾಗಿಸುವಲ್ಲಿ, ಪುಸ್ತಕ ಪ್ರಕಾಶನ ಹಾಗೂ ಸಾಹಿತ್ಯ ಪರಿಚಾರಿಕೆಯನ್ನು ತೀವ್ರಗೊಳಿಸುವಲ್ಲಿ, ಪರಿಷತ್ತಿನ ಆವರಣವನ್ನು ನವೀಕರಣಗೊಳಿಸುವಲ್ಲಿ ಅವರು ಕೈಗೊಂಡ ಪ್ರಾಮಾಣಿಕ ಪ್ರಯತ್ನಗಳನ್ನು ಯಾರೂ ಅಲ್ಲಗಳೆಯುವಂತಿಲ್ಲ. ಹಾಗೆಯೇ ಅವರ ಸಾಹಿತ್ಯ ಪ್ರೀತಿ, ಕನ್ನಡ ಭಾಷಾಭಿಮಾನ, ಸಾಹಿತಿಗಳ ಬಗೆಗಿನ ಗೌರವಗಳ ಬಗ್ಗೆ ಎರಡು ಮಾತಿಲ್ಲ.

2004 ಜನವರಿ ತಿಂಗಳು ನಡೆದ ನಾಡಗೀತೆಯ ಪ್ರಕರಣ ಹರಿಕೃಷ್ಣರನ್ನು ಸಾಕಷ್ಟು ವಿವಾದಕ್ಕೀಡು ಮಾಡಿತು. ಇದರಿಂದ ಕೆಲವು ಸತ್ಯಸಂಗತಿಗಳು ಬೆಳಕಿಗೆ ಬಂದದ್ದು ನಿಜ. ಆದರೆ 'ಕುವೆಂಪುರವರ ಪದ್ಯವೇ ಯಾಕೆ ನಾಡಗೀತೆಯಾಗಬೇಕು? ಕರ್ನಾಟಕದಲ್ಲಿ ಅವರೊಬ್ಬರೇ ಕವಿಗಳೇ...' ಎಂದು ಅವರು ಸಭೆಯೊಂದರಲ್ಲಿ ಆಡಿದ ಲಘುವಾದ ಮಾತು ಇನ್ನಷ್ಟು ಕೋಲಾಹಲಕ್ಕೆ ಕಾರಣವಾಯಿತು. ಸಾಹಿತ್ಯ ಪರಿಷತ್ತಿನಂಥ ಹಿರಿಯ ಪ್ರಾತಿನಿಧಿಕ ಸಂಸ್ಥೆಯ ಅಧ್ಯಕ್ಷರಾಗಿ ಅವರು ಈ ಸಂದರ್ಭದಲ್ಲಿ ಇನ್ನಷ್ಟು ಸಂಯಮವನ್ನೂ ವಿಚಾರವಂತಿಕೆಯನ್ನೂ ತೋರಿಸಬೇಕಾಗಿತ್ತೆಂದು ಸಾರ್ವಜನಿಕರು ಅಪೇಕ್ಷಿಸಿದ್ದರೆ ತಪ್ಪಲ್ಲ. ಇದರ ಪರಿಣಾಮವಾಗಿ ಮೈಸೂರಿನಲ್ಲಿ ನಡೆದ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಉದ್ರಿಕ್ತರ ಗುಂಪೊಂದು ವೇದಿಕೆಗೆ ಧಾವಿಸಿ ಅವರ ಪಂಚೆಯನ್ನು ಎಳೆಯುವ ಮಟ್ಟಕ್ಕೂ ಹೋದದ್ದು ದುರ್ದೈವದ ಸಂಗತಿ. ಈ ಬಗೆಯ ಪ್ರತಿಭಟನೆ ಅನಾಗರಿಕ ವರ್ತನೆಯೆನ್ನದೆ ವಿಧಿಯಿಲ್ಲ. ಅಂಥ ಸಂದರ್ಭದಲ್ಲಿಯೂ ಪುನರೂರು ವಿಚಲಿತಗೊಳ್ಳದೆ ಇದ್ದುದು ಆಶ್ಚರ್ಯಕರ ಸಂಗತಿ. ಆ ಜನರ ವಿರುದ್ಧ ಪೋಲೀಸರಿಗೆ ದೂರು ಕೊಡುವಂತೆ ಕೆಲವರು ಸೂಚಿಸಿದಾಗ "ಅವರು ಕನ್ನಡಿಗರು. ನಮ್ಮವರೆ. ನಾನು ಅವರ ವಿರುದ್ಧ ದೂರು ನೀಡುವುದಿಲ್ಲ" ಎಂದು ಹೇಳಿ ಯಾವುದೇ ಭಯ ಹಾಗೂ ದ್ವೇಷಕ್ಕೆ ಎಡೆಗೊಡದಂತೆ ನೋಡಿಕೊಂಡದ್ದನ್ನು ಮಾತ್ರ ಮೆಚ್ಚಲೇಬೇಕು.

ಹರಿಕೃಷ್ಣ ಪುನರೂರು ಅವರ ಕಾರ್ಯಕ್ಷೇತ್ರ ಹಾಗೂ ಸೇವಾಕ್ಷೇತ್ರ ವಿಸ್ತಾರವಾಗಿರುವುದರಿಂದ,

ಅವರಲ್ಲೂ ಅವರ ಸಮಾಜಮುಖಿ ವ್ಯಕ್ತಿತ್ವಕ್ಕೆ ಈಗಾಗಲೇ ಜನಮನ್ನಣೆ ದೊರಕಿರುವುದರಿಂದ ತಮ್ಮ ಮುಂದಿನ ದಾರಿ ಅವರಿಗೆ ನಿಚ್ಚಳವಾಗಿದೆ. ಆ ದಾರಿಯಲ್ಲಿ ಜನಹಿತಕಾರ್ಯದ ಮೈಲುಗಲ್ಲುಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಗೊಳ್ಳಲಿ, ಎಲ್ಲ ರೀತಿಯಿಂದಲೂ ಅವರಿಗೆ 'ಶುಭವಾಗಲಿ.'

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ನಾಡು-ನುಡಿಯ ಆರಾಧಕ

☐ ಟಿ. ಮಹಾಬಲೇಶ್ವರ ಭಟ್ಟ



ಹರಿಕೃಷ್ಣ ಪುನರೂರು ಅವರ ಪರಿಚಯ ಇತ್ತೀಚಿನ ವರ್ಷಗಳಲ್ಲಿ ಆದದ್ದು. 1998ರಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆಯ ಸಂದರ್ಭದಲ್ಲಿ ಅನೇಕ ಜನ ಹಿರಿಯ ಸಾಹಿತಿಗಳ ಪ್ರೀತಿಗೆ ಕಟ್ಟುಬಿದ್ದು ನಾನೂ ಅಧ್ಯಕ್ಷ ಚುನಾವಣೆಗೆ ಅರ್ಜಿ ಸಲ್ಲಿಸಿದ್ದೆ. ಅರ್ಜಿ ಸಲ್ಲಿಸುವಾಗ ಅವರೆಲ್ಲರಿಗೂ ನಾನು ಒಂದು ಮಾತನ್ನು ಸ್ಪಷ್ಟವಾಗಿ ತಿಳಿಸಿದ್ದೆ. ಸಾಹಿತ್ಯ ಕ್ಷೇತ್ರದ ಈ ಸ್ಥಾನಕ್ಕೆ ಚುನಾವಣೆಯ ಮೂಲಕ ಅಧ್ಯಕ್ಷರನ್ನು ಆರಿಸುವುದು ಸರಿಯಲ್ಲ. ಅವಿರೋಧವಾದ ಆಯ್ಕೆ ಈ ಸ್ಥಾನಕ್ಕೆ ಆಗಬೇಕು ಎಂದು. ಆಗ ಹರಿಕೃಷ್ಣ ಪುನರೂರು, ಎಸ್. ಬಸವಾರಾಧ್ಯ ಹಾಗೂ ಇನ್ನಿತರರು ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದ್ದರು. ಅವಿರೋಧವಾದ ಆಯ್ಕೆಯಾಗುವ ಲಕ್ಷಣ ನನಗೆ ಕಾಣಲಿಲ್ಲ. ಅವಿರೋಧ ಆಯ್ಕೆ ಆಗುವುದಿದ್ದರೆ, ಪುನರೂರು ಅವರಾಗಲಿ, ನಾನಾಗಲಿ ನಿವೃತ್ತರಾಗುತ್ತಿದ್ದೆವು. ಉಮೇದುವಾರಿಕೆ ಪರಿಶೀಲನೆ ನಡೆದ ಎರಡು ಘಂಟೆಗಳಲ್ಲಿ ನನ್ನ ಉಮೇದುದಾರಿಕೆಯನ್ನು ವಾಪಸ್ಸು ಪಡೆದು, ಚುನಾವಣೆಯಿಂದ ನಿವೃತ್ತಿ ಹೊಂದಿದೆ. ಅಂದು ಪುನರೂರು ಅವರು ಬೆಂಗಳೂರಿಗೆ ಬಂದಿರಲಿಲ್ಲ. ಆ ವರ್ಷ ಚುನಾವಣೆ ನಡೆದು ಪುನರೂರು ಅವರು ಪರಾಜಿತರಾದರು. ಅಲ್ಲಿಂದ ನನ್ನ-ಅವರ ಸಂಪರ್ಕ ಚೆನ್ನಾಗಿ ಬೆಳೆಯಿತು. ಮುಂದಿನ

81, "ಸುದರ್ಶನ" ಶ್ರೀ ಮಾರಿಕಾಂಬಾ ರಸ್ತೆ, ಸಾಗರ-577 401

ಚುನಾವಣೆಯಲ್ಲಿ ನಿಂತು ಜಯಗಳಿಸಿದರು. ಅಲ್ಲಿಯತನಕ ಪುನರೂರು ಅವರ ಸಾಧನೆ, ಕರ್ತವ್ಯಶಕ್ತಿ, ಸೇವಾ ತತ್ಪರತೆ, ನಾಡು-ನುಡಿಯ ಸೇವೆ, ಪರಿಶುದ್ಧ ಜೀವನ, ಇವೆಲ್ಲವನ್ನು ಬೇರೆಯವರಿಂದ, ಸುದ್ದಿ ಮಾಧ್ಯಮದಿಂದ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದೆ.

ನನಗಿಂತ ಪುನರೂರು ಹದಿನೆಂಟು ವರ್ಷ ಕಿರಿಯರು. ಅವರಿಗೆ ಈಗ ಅರವತ್ತು ವರ್ಷ ಮುಗಿದಿದೆ ಅಷ್ಟೆ. ಅಜಾನುಬಾಹು. ಸದಾ ಚಟುವಟಿಕೆಯ ವ್ಯಕ್ತಿ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವಾಗ ಹಾಗೂ ಅನಂತರ ಕೆಲವು ವಿಚಾರವಾದಿಗಳು, 'ಸಾಹಿತಿ ಅಲ್ಲದವರು, ಪರಿಷತ್ತಿನ ಅಧ್ಯಕ್ಷರಾಗಿ ಏನು ಮಾಡಬಲ್ಲರು?' ಎಂಬ ಮಾತನ್ನು ಗಾಳಿಯಲ್ಲಿ ತೂರಿಬಿಟ್ಟರು. ಪರಿಷತ್ತಿನ ನಿಬಂಧನೆಯಲ್ಲಿಯೂ, ಸಾಹಿತಿಯಾದವರೇ ಅಧ್ಯಕ್ಷರಾಗಬೇಕೆಂದು ಹೇಳಿಲ್ಲ, ಸಾಹಿತಿ ಅಲ್ಲದವರು ಅಧ್ಯಕ್ಷರಾಗಬಾರದೆಂದೂ ಹೇಳಿಲ್ಲ. ಕೆಲವು ಸಾಹಿತಿಗಳು, ಸಾಹಿತ್ಯಾಭಿಮಾನಿಗಳು ಏನಾದರೂ ಒಂದು ಕೊರತೆಯನ್ನು ಜನರ ಮುಂದೆ ತೇಲಿಬಿಡುತ್ತಲೇ ಇರುತ್ತಾರೆ. ಕರ್ತವ್ಯಶಾಲಿ ವ್ಯಕ್ತಿಯ ಕಡೆ ಯಾರೂ ಗಮನಿಸುವುದಿಲ್ಲ. ಈ ಹಿಂದೆ ಸಾಹಿತಿಯಾದವರೇ ಪರಿಷತ್ತಿನ ಅಧ್ಯಕ್ಷರಾಗಿ ಏನು ಮಾಡಿದ್ದಾರೆ ಎಂಬುದು ನಮ್ಮ ಕಣ್ಣ ಮುಂದೆ ಜೀವಂತ ಸಾಕ್ಷಿಯಾಗಿ ಉಳಿದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಮೂರು ಅವಧಿಯವರೆಗೆ ಸತತವಾಗಿ ಸಲ್ಲಿಸಿದ ಸೇವೆಯ ಅನುಭವ, ರಾಜ್ಯಮಟ್ಟದ ಅಧ್ಯಕ್ಷರಾದಾಗ ನೆರವಿಗೆ ಬಂದಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕೆಲಸಗಳಿಗೆ ಪುನರೂರು ಅವರು ಪ್ರೋತ್ಸಾಹ, ಬೆಂಬಲ, ಆರ್ಥಿಕ ಸಹಾಯವನ್ನು ಬಹಳ ವರ್ಷಗಳಿಂದ ಮಾಡುತ್ತಾ ಬಂದಿದ್ದು ಅಲ್ಲಿಯ ಜನರ ಪ್ರೀತಿಗೆ ಪಾತ್ರರಾಗಿ ಪುನರೂರು ಅವರು ಸಾಹಿತ್ಯ ಪೋಷಕರಾಗಿ ಉತ್ತಮ ಪಾತ್ರವನ್ನು ನಿರ್ವಹಿಸಿದ್ದಾರೆ.

ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ನಡೆಸಿದ ಮೂರು ವರ್ಷದ ಸಾಧನೆ ಸಾಮಾನ್ಯವಲ್ಲ. ತುಕ್ಕು ಹಿಡಿದ ಕುರ್ಚಿಯ ಮೇಲೆ ಅಭ್ಯಾಗತರನ್ನು ಕೂರಿಸಿ, ಕಾರ್ಯಕ್ರಮ ನಡೆಸುತ್ತಿದ್ದ ಪರಿಷತ್ತಿಗೆ ಇಂದಿನ ಆಧುನಿಕ ಕುರ್ಚಿಗಳನ್ನು ಸಾವಿರಕ್ಕೂ ಹೆಚ್ಚು ತಂದು ಸಭಾಭವನದಲ್ಲಿ ತುಂಬಿರುವುದು, 400ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪರಿಷತ್ತಿನ ವತಿಯಿಂದ ಮುದ್ರಿಸಿರುವುದು, ಆರ್ಥಿಕವಾಗಿ, ಶಾಶ್ವತನಿಧಿ, ದತ್ತಿನಿಧಿ, ಅಮೃತನಿಧಿ, ಸೇವಾದತ್ತಿನಿಧಿ, ಸಾಮಾನ್ಯನಿಧಿ ಮುಂತಾದವುಗಳನ್ನು ನಿರೀಕ್ಷೆಗೂ ಮೀರಿ ಹೆಚ್ಚಿಸಿರುವುದು, ಹಿಂದಿನ ಸಾಲವನ್ನು ತೀರಿಸಿರುವುದು- ಇವೆಲ್ಲವೂ ಸಾಹಿತ್ಯ ಸೇವೆಗೆ ಒಳಪಡುತ್ತವೆ. ಸಾಹಿತಿ ಎಷ್ಟು ಮುಖ್ಯವೋ ಸಾಹಿತ್ಯ ಪೋಷಕನೂ ಅಷ್ಟೇ ಮುಖ್ಯನಾಗುತ್ತಾನೆ.

ನಾನು, ಹರಿಕೃಷ್ಣ ಪುನರೂರು ಅವರನ್ನು ಬಹಳವಾಗಿ ಮೆಚ್ಚಿಕೊಂಡಿದ್ದು ಅವರ ಸಾಹಿತ್ಯ ಪೋಷಣೆಯ ಜೊತೆಗೆ ಅವರ ನಿರ್ಮಲ, ಪರಿಶುದ್ಧ, ಸಾರ್ವಜನಿಕ ಜೀವನ ಹಾಗೂ ಸಾರ್ವಜನಿಕ ಸೇವಾಭಾವನೆಗಾಗಿ. ಬಡಮಕ್ಕಳ ಶಿಕ್ಷಣ ಇರಲಿ, ದೇವಸ್ಥಾನವಿರಲಿ, ಕಲ್ಯಾಣ ಮಂಟಪವಿರಲಿ ಅಥವಾ ಬಡಜನರಿಗೆ ಬೇಕಾದ ವಿದ್ಯುತ್, ನೀರು, ಬೆಳಕು ಸೌಲಭ್ಯವಿರುವ ವಾಸದ ಮನೆಗಳಿರಲಿ, ಇವೆಲ್ಲವೂ ಪ್ರೀತಿ ಹಾಗೂ ಆಸಕ್ತಿಯಿಂದ ಮಾಡಿದ ಸಾಧನೆಗಳು. ಸ್ವಂತ ಹಣ, ಸ್ವಂತ ಪರಿಶ್ರಮದ ಫಲ ಇದು. ಯಾವ ಕೆಲಸ ಮಾಡಿದರೂ ಜನರಿಗೆ ಉಪಯೋಗವಾಗಬೇಕೆಂಬ ಧ್ಯೇಯ ಪುನರೂರು ಅವರದು.

ಈ ಸಂದರ್ಭದಲ್ಲಿ ಒಂದು ಘಟನೆ ನೆನಪಿಗೆ ಬರುತ್ತದೆ. ಈ ಲೇಖನ ಬರೆಯುವ ಹತ್ತು ತಿಂಗಳ ಹಿಂದೆ ಸಾಗರದವನಾದ ಗಣಪತಿ ಎಂಬ ದರ್ಜಿ ಕೆಲಸ ಮಾಡುವವರು ನನ್ನ ಬಳಿ ಬಂದು 'ನಾನು ಮದುವೆಯಾಗಿ ಒಂದು ವರ್ಷವಾಯಿತು. ದರ್ಜಿ ಕೆಲಸದಿಂದ ಹಾಗೂ ಹೀಗೂ ಜೀವನ ನಡೆಸುತ್ತಿದ್ದೆ.

ಮದುವೆ ಆದ ಮೇಲೆ ಇಬ್ಬರ ಜೀವನ ನಿರ್ವಹಣೆ ಕಷ್ಟವಾಗಿದೆ. ಕೆಲಸವೂ ಕಡಿಮೆಯಾಗುತ್ತಿದೆ. ಮನೆ ಬಾಡಿಗೆ ಕೊಡಲು ಸಾಧ್ಯವಿಲ್ಲ. ಈಗ ತಮ್ಮಿಂದ ನನಗೊಂದು ಉಪಕಾರವಾಗಬೇಕು' ಎಂದರು. ಇವರು ನಾನು ಬಹಳ ವರ್ಷಗಳಿಂದ ಬಲ್ಲವರಾಗಿದ್ದರು. 'ಏನು ಉಪಕಾರ?' ಎಂದೆ. 'ಹರಿಕೃಷ್ಣ ಪುನರೂರು ಅವರು ಬಡವರಿಗಾಗಿ ಉಚಿತವಾಗಿ ವಾಸ ಮಾಡಲು 101 ಮನೆ ಕಟ್ಟಿಸಿದ್ದಾರಂತೆ. ತಾವು ಅವರಿಗೆ ಒಂದು ಪತ್ರ ಕೊಟ್ಟರೆ, ನನಗೆ ಬಹುದೊಡ್ಡ ಉಪಕಾರವಾಗುತ್ತದೆ' ಎಂದರು. ಸ್ನೇಹದಲ್ಲಿ ಇಷ್ಟೊಬ್ಬರನ್ನು ಇಕ್ಕಟ್ಟಿಗೆ ಸಿಕ್ಕಿಸುವುದು ನನ್ನ ಜಾಯಮಾನವಲ್ಲ. 'ಆದರೂ ಆಯಿತು. ಪತ್ರ ಕೊಡುತ್ತೇನೆ' ಎಂದು ಹೇಳಿ ಒಂದು ಪತ್ರವನ್ನು ಬರೆದುಕೊಟ್ಟೆ. ಪತ್ರ ನೋಡಿದ ಪುನರೂರು ಅವರು 'ಇವರು ಪತ್ರ ಕಳಿಸಿದ ಮೇಲೆ ಇಲ್ಲ ಎಂದು ಹೇಳಲು ಸಾಧ್ಯವೆ?' ಎಂದು ಹೇಳಿ, 'ಖಾಲಿ ಮನೆಗಳಲ್ಲಿ ಇವರಿಗೆ ಯಾವುದು ಬೇಕೋ ಅದನ್ನು ನಾಳೆಯೇ ಕೊಡು' ಎಂದರಂತೆ. ಆತ ಈಗಲೂ ಸಾಗರಕ್ಕೆ ಬಂದಾಗ ನನ್ನನ್ನು ಕಂಡು 'ನಿಮ್ಮಿಂದ ಬಲು ಉಪಕಾರವಾಯಿತು' ಅನ್ನುತ್ತಾನೆ. 'ನನ್ನಿಂದ ಏನೂ ಉಪಕಾರವಾಗಿಲ್ಲ; ಅರ್ಧ ಬಿಳಿ ಹಾಳೆ ಒಂದು ತೊಟ್ಟು ಇಂಕು ಅಷ್ಟೆ! ನಿಜವಾಗಿ ಉಪಕಾರ ಮಾಡಿದವರು ಹರಿಕೃಷ್ಣ ಪುನರೂರು. ಅವರ ಪ್ರೀತಿಗೆ, ವಿಶ್ವಾಸಕ್ಕೆ ಎಂದೂ ಕೊರತೆ ಬಾರದ ರೀತಿಯಲ್ಲಿ ಇರಬೇಕಾದವರು ನೀವು' ಎಂದೆ.

ತಮ್ಮ ಮೂರು ವರ್ಷದ ಕನ್ನಡ ಸಾಹಿತ್ಯ ಪರಿಷತ್ತಿನ ಅವಧಿಯಲ್ಲಿ ಪುನರೂರು ಅವರು ಪ್ರತಿವರ್ಷ ಎಂಬಂತೆ ತುಮಕೂರು, ಬೆಳಗಾವಿ ಮತ್ತು ಮೂಡುಬಿದರೆಯಲ್ಲಿ ಮೂರು ಸಾಹಿತ್ಯ ಸಮ್ಮೇಳನಗಳನ್ನು ಬಹಳ ವಿಜೃಂಭಣೆಯಿಂದ ಮಾಡಿದ್ದಾರೆ. ಜಿಲ್ಲಾ ಸಮಿತಿಗಳಿಗೆ ಜೀವತುಂಬಿದ್ದಾರೆ. ಜಿಲ್ಲಾ ಸಮ್ಮೇಳನ, ತಾಲ್ಲೂಕು ಸಮ್ಮೇಳನ ನಡೆಯುವಂತೆ ಪ್ರೋತ್ಸಾಹಿಸಿದ್ದಾರೆ. ಶ್ರೀಸಾಮಾನ್ಯನ ಪರಮ ಪ್ರತಿನಿಧಿಯಾದ ಇವರಿಗೆ ದಿವಂಗತ ಜಿ.ಪಿ. ರಾಜರತ್ನಂ, ಹೇಳುವಂತೆ 'ಸಾಹಿತ್ಯ ಪರಿಚಾರಕರು' ಎಂಬ ಮಾತು ಅಕ್ಷರಶಃ ಸರಿ ಹೊಂದುತ್ತದೆ. ಈಗಾಗಲೇ ಇವರ ಕರ್ತವ್ಯ ಶಕ್ತಿ, ವಿವೇಕ ಸಾಮರ್ಥ್ಯ, ನಿಷ್ಕಾಮಬುದ್ಧಿ, ಸ್ಥೈರ್ಯ, ನಿಷ್ಠೆಗಳು ಅನೇಕ ರೀತಿಗಳಲ್ಲಿ ಪ್ರಕಾಶಕ್ಕೆ ಬಂದಿವೆ. ಹರಿಕೃಷ್ಣ ಪುನರೂರು ಅವರು ಸಾಹಿತಿಯಲ್ಲ, ಕನ್ನಡ ನಾಡು-ನುಡಿಯ ಆರಾಧಕರು, ಸಾಹಿತ್ಯ ಪರಿಚಾರಕರು, ಅಪ್ಪಟಕನ್ನಡಿಗರು. ಇವರಿಗೆ ಹೃದಯ ತುಂಬಿ ಶುಭ ಕೋರುತ್ತೇನೆ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಾಹಿತ್ಯ-ಸಮಾಜ ಸೇವೆಗೆ ಒಂದು ಅರ್ಥ

□ ಡಾ॥ ಕಯ್ಯಾರ ಕಿಞ್ಞಣ್ಣ ರೈ



ಈ ಜೀವಜಗತ್ತಿನ ಮಾನವ ಜನ್ಮದಲ್ಲಿ ಸ್ತ್ರೀರೂಪದಿಂದಾಗಲಿ, ಪುರುಷರೂಪದಿಂದಾಗಲಿ ಜನಿಸುವುದು ಪುಣ್ಯದ ಫಲವೆಂಬ ಸದ್ಭಾವನೆಯಿದೆ. ಇದು ಸಕಾರಣವೂ ಆಗಿದೆ. ಲೋಕದ ಇತರ ಜಂತು ಜಾಲಗಳಿಗಿಂತ ಮಾನವ ಜನ್ಮ ಹೆಚ್ಚು ಧೀಮಂತವೂ ಶ್ರೀಮಂತವೂ ಆಗಿದೆ. ಆನೆ, ಸಿಂಹ, ಹುಲಿಗಳಂತಹ ಸಶಕ್ತ ಪ್ರಾಣಿಗಳನ್ನು ಮನುಷ್ಯ ನಿಗ್ರಹಿಸಬಲ್ಲನು; ಪಶು ಪಕ್ಷಿಗಳ ಸಮಸ್ತ ಜೀವಿಗಳನ್ನೂ ತನ್ನ ಅಧೀನವಾಗಿಸಿ ಸಮರ್ಥನಾಗಿ ಆಳುವ ಹಾಗೂ ಬಾಳುವ ಹಿರಿಯ ಯೋಗ್ಯತೆ ಮಾನವ ಜೀವಿಗೆ ಇದೆ. ಹಾಗಾಗಿಯೇ ಮನುಷ್ಯ ಜನ್ಮ ಆ ಜೀವಿಯ ಪೂರ್ವಪುಣ್ಯದ ಫಲವೆಂಬ ಸಿದ್ಧಾಂತ ಸತ್ಯವಾಗಿದೆ. ಪರಮಾತ್ಮ ಮಹಾಜ್ಯೋತಿಯಿಂದ ಈ ಜೀವಲೋಕಕ್ಕೆ ಇಳಿದುಬಂದ ಜೀವಕಿರಣ, ಇಲ್ಲಿರುವ ಜೀವಿಗಳ ಮಧ್ಯೆ ಉತ್ತಮ ಸತ್ಕಾರ್ಯಗಳನ್ನು ಮಾಡಿದ ಫಲವಾಗಿ ಆ ಜೀವಿಗೆ ಮನುಷ್ಯತ್ವ ದೊರಕುವುದೆಂದೂ, ಆ ಜನ್ಮದಲ್ಲಿ ಮನುಷ್ಯ ಜೀವನದಲ್ಲಿಯೂ ಮುಂದೆ ಮಾಡಿದ ಪುಣ್ಯದ ಪೂರ್ಣ ಫಲದಿಂದ ಜೀವಾತ್ಮ ಮೂಲ ಪರಮಾತ್ಮ ಜ್ಯೋತಿಯಲ್ಲಿಯೇ ಲೀನವಾಗಿ ಶಾಶ್ವತ ಶಾಂತಿಯಿರುವ ಮೋಕ್ಷ ಪಡೆಯುವುದೆಂದೂ ಭಾರತದ ಧರ್ಮಜ್ಞಾನಿಗಳ ಉಪದೇಶದ ಸಿದ್ಧಾಂತ. ಇದು ಮನುಷ್ಯನ

ಪೆರಡಾಲ, ಕಾಸರಗೋಡು, ಕೇರಳ ಜಿಲ್ಲೆ

ಬದುಕನ್ನು ಬೆಳಗಿಸಲು ಸಹಾಯ ಮಾಡುವುದು. ನಮ್ಮ ಪುಣ್ಯ ಜನ್ಮಭೂಮಿ ಭಾರತದ ಅನಾದಿಕಾಲದ ವೇದೋಪನಿಷತ್ತುಗಳು- ಶ್ರುತಿಸ್ಮೃತಿ ಪುರಾಣೇತಿಹಾಸಗಳು ಈ ವಿಷಯದ ಜ್ಞಾನವನ್ನು ನೀಡುತ್ತವೆ. ಇಂತಹ ವಿಶೇಷ ಜ್ಞಾನಶಾಲಿಗಳಾದ ಭಾರತದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಾದಿ ಸಮಸ್ತ ಮತಾಚಾರ್ಯರು, ಸಂನ್ಯಾಸಿಗಳು, ಋಷಿವರ್ಯರು, ಸ್ವಾಮಿಗಳೆಲ್ಲರೂ ಅಂದಿನಿಂದ ಇಂದಿನತನಕವೂ ಈ ಪುಣ್ಯ ಸಿದ್ಧಾಂತವನ್ನು ಒಪ್ಪಿ ಬಾಳುತ್ತಿದ್ದಾರೆ. ಮಾನವ ಜೀವನವನ್ನು ಬೆಳಗಿಸುತ್ತಾರೆ.

ಇಂತಹ ಸತ್ಸಾಧನೆಯ ಸಿದ್ಧಿಗೆ ಹಲವು ಮಾರ್ಗಗಳಿವೆ. ಎಲ್ಲಾ ಮಾರ್ಗಗಳೂ ಕೊನೆಗೆ ಬದುಕನ್ನು ಬೆಳಗಿಸುತ್ತವೆ. ಆ ಮಾರ್ಗ ಮಾತ್ರ ಸರಿಯಾದ ಸತ್ಯಪೂರ್ಣವಾದ ರೀತಿಯ ನೀತಿಯದ್ದಾಗಿರಬೇಕು. ತುಳುನಾಡು ಎಂದು ಪ್ರಖ್ಯಾತವಾದ ಇಂದಿನ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸನ್ಮಾರ್ಗದರ್ಶಿಗಳು, ಸನ್ಮಾರ್ಗಗಾಮಿಗಳು ಹಲವರು ಆಗಿ ಹೋಗಿದ್ದಾರೆ; ಈಗಲೂ ಇದ್ದಾರೆ. ಇಂತಹ ಮಹನೀಯರಲ್ಲಿ ಧರ್ಮದರ್ಶಿಗಳಾಗಿ- ಮುಂದೆ ತನ್ನ ಕಾರ್ಯಕ್ಷೇತ್ರವನ್ನು ಇಡೀ ಜಿಲ್ಲೆಗೂ ವಿಸ್ತರಿಸಿ, ಅಲಲ್ಲಿ ಜರಗುತ್ತಿರುವ ಧರ್ಮ ಸಂಸ್ಕೃತಿ ಸಾಹಿತ್ಯ ಕ್ಷೇತ್ರಗಳಿಗೆ ಸಕ್ರಿಯ ಸಹಾಯ ನೀಡಿ- ಅಂತಹ ಸತ್ಸಾಧನೆಯ ಸಿದ್ಧಿಯ ಫಲವಾಗಿ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿ ಹೆಸರಾಂತುದು ಪುನರೂರು ಅವರ ಜೀವಿತದ ಸತ್ಸಾಧನೆಯ ಭಾಗ್ಯವೂ ಯೋಗ್ಯವೂ ಆಗಿದೆ. ಈ ತೆರನ ಸಾರ್ವಜನಿಕ ಸತ್ಕಾರ್ಯ ಮಾಡುತ್ತಾ ಕಳೆದ ಕೆಲವು ದಶಕಗಳಿಂದ ಸರ್ವಾದರಣೀಯರಾದ ಪುನರೂರಿಗೆ ಇಂದು ಅರವತ್ತು ವರ್ಷಗಳು ತುಂಬುತ್ತಿರುವಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತನ್ನ ಸಾಹಿತ್ಯ ಸಂಸ್ಕೃತಿಗಳ ಸತ್ಕಾರ್ಯ ಸಾಧನೆಯಿಂದ ಹೆಸರಾಂತ ಕಾಂತಾವರ ಕನ್ನಡ ಸಂಘದವರು ಪುನರೂರು ಪುರಸ್ಕಾರದ ಯೋಗ್ಯ ಸಮಾರಂಭ ಹಾಗೂ ಅವರ ಕುರಿತಾದ ಗ್ರಂಥ ಪ್ರಕಟಣೆಯೊಂದನ್ನು ಮಾಡಲು ಮುಂದೆ ಬಂದುದು ಅತ್ಯಂತ ಪ್ರಶಂಸನೀಯ.

ಹರಿಕೃಷ್ಣ ಪುನರೂರರು, ಧಾರ್ಮಿಕ ದೃಷ್ಟಿಯುಳ್ಳವರಾಗಿಯೇ, ಜೀವನದ ಧರ್ಮಕುಶಲರೂ ಆಗಿ, ತನ್ನ ಮನೆತನದ ಹಾಗೂ ಅಲ್ಲಿನ ದೇವಾಲಯದ ಸೇವೆ ಮಾಡುತ್ತಾ ಇದ್ದಂತೆಯೇ ಮೂಲ್ಕಿ, ಮಂಗಳೂರು ನಗರಗಳಲ್ಲಿಯೂ ವ್ಯಾವಹಾರಿಕ ವ್ಯಾಪ್ತಿಯನ್ನು ಉತ್ಸಾಹದಿಂದ ಮುಂದುವರಿಸುತ್ತಿದ್ದು, ಆ ವ್ಯಾವಹಾರಿಕ ಜೀವನೋದ್ಯೋಗದಲ್ಲಿ ಹಾಗೂ ತನ್ನ ಕೌಟುಂಬಿಕ ಸಂಪತ್ತಿನಲ್ಲಿ, ತನ್ನ ಎಲ್ಲಾ ವಿಧದ ಗಳಿಕೆಯಲ್ಲಿ ಆದ ಉಳಿಕೆಯನ್ನು ಸಾರ್ವಜನಿಕ ಸೇವೆಗೆ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯ, ಕಲಾತ್ಮಕ ಸೇವೆಗೇ ಸಮರ್ಪಿಸುತ್ತಾ ಇರುವುದು ಗಣನೀಯ ಯೋಗ್ಯತೆಯಾಗಿದೆ. ಲಯನ್ಸ್‌ನಂತಹ ಅಂತಾರಾಷ್ಟ್ರೀಯ ಸಂಸ್ಥೆಯ ಮೂಲಕ ನಿರಂತರ ಸಾರ್ವಜನಿಕ ಸತ್ಕಾರ್ಯಗಳನ್ನು ಮಾಡುತ್ತಾ ಇರುವುದು ಯೋಗ್ಯವಾಗಿದೆ. ಇದರಿಂದ ಪುನರೂರರ ಅಂತರ್ಯದಲ್ಲಿ ಸಮಾಜ ಸಂಸ್ಕೃತಿಗಳ ಸೇವೆ, ಪುನರೂರು ಕ್ಷೇತ್ರದಿಂದ ತೊಡಗಿ, ತುಳುನಾಡು, ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರ ಹಾಗೂ ಅಖಿಲ ಜಗತ್ತಿನ ಸಮಸ್ತ ಜೀವಲೋಕಕ್ಕೂ ಅನ್ವಯಿಸುವ ಉದಾರತೆ ಕಂಡುಬರುತ್ತದೆ.

ತುಳು, ಮಲೆಯಾಳ, ಕನ್ನಡ, ಸಂಸ್ಕೃತ, ಪ್ರಾಕೃತ, ವೈದಿಕಾದಿ ಭಾರತದ ಭಾಷೆಗಳನ್ನು ಅಭ್ಯಾಸ ಮಾಡುತ್ತಾ, ಬಾಲಸಾಹಿತ್ಯದಿಂದ, ಪ್ರೌಢಸಾಹಿತ್ಯದವರೆಗೆ ಹಲವು ಸಾಹಿತ್ಯ ಕೃತಿಗಳನ್ನು ರಚಿಸುತ್ತಾ ಇರುವವರೊಂದಿಗೆ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಭಾಷಾ ಮೂಲ ಪ್ರಾಂತರಚನೆಗಾಗಿ, ಭಾಷಾ ರಾಜ್ಯದ ರಚನೆ ಮಾಡಿದ ಸಂದರ್ಭ ಕಾಸರಗೋಡನ್ನು ಅನ್ಯಾಯವಾಗಿ ಕೇರಳದಲ್ಲಿ ಸೇರಿಸಿದ್ದಕ್ಕಾಗಿ ಹೋರಾಡುವ ನನ್ನ ಅಳಿಲ ಸೇವೆಯನ್ನು ಬಹುವಾಗಿ ತಿಳಿದುಕೊಂಡು, ರಾಜ್ಯರಾಷ್ಟ್ರಗಳ ಹಲವು ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು. ಸಾಹಿತ್ಯ ಸಂಘಟನೆಗಳು ಗೌರವಿಸುವ ಸಂದರ್ಭ ಹರಿಕೃಷ್ಣ ಪುನರೂರರು ಸಹ ಅವರು ಅಧ್ಯಕ್ಷರಾಗಿ ಕಾರ್ಯಕರ್ತರಾಗಿರುವ ಲಯನ್ಸ್ ಸಂಸ್ಥೆಯಿಂದ ತೊಡಗಿ ಸಾಹಿತ್ಯ ಪರಿಷತ್ತುವರೆಗಿನ

ಹಲವು ಸಂಸ್ಥೆಗಳಲ್ಲಿ ನನ್ನನ್ನು ಅಭಿನಂದಿಸಿ ಗೌರವಿಸಿದ ಅವರ ಉದಾರ ಹೃದಯ ಶ್ರೀಮಂತಿಕೆಗೆ ಋಣಿಯಾಗಿರುವೆನು. ಕಾಸರಗೋಡು ಕರ್ನಾಟಕದೊಂದಿಗೆ ಸೇರಲೇಬೇಕೆಂಬ ನಮ್ಮ ಹೋರಾಟಕ್ಕೂ ಅವರ ಸಕ್ರಿಯ ಸಹಕಾರಕ್ಕೆ ನಾವು ಋಣಿಗಳು. ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಮಂಗಳೂರಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿ, ಮಾನ್ಯ ಧರ್ಮಾಧಿಕಾರಿ ಡಾ|| ವಿ. ವೀರೇಂದ್ರ ಹೆಗ್ಗಡೆಯವರ ಜತೆಯಲ್ಲಿ ಪುನರೂರರ ಬೆಂಬಲವೂ ಗಣನೀಯವಾಗಿದೆ. ಸ್ವಂತಕ್ಕೆ ಇಂತಹ ಯಾವುದೇ ಸ್ಥಾನಮಾನ ಕುರಿತು ಸರ್ವಥಾ ಹೆಮ್ಮೆಪಡಲಾರೆನಾದರೂ, ನಾಡಿನ ಜನತೆಗೆ ನನ್ನ ಮೇಲೆ ಮತ್ತಷ್ಟು ಪ್ರೀತಿ ವಿಶ್ವಾಸ ಹೆಚ್ಚಲು ಇಂತಹ ಪ್ರೋತ್ಸಾಹವೂ ಕಾರಣವೆಂಬುದರಿಂದ, ಹಾಗೆ ಪ್ರೋತ್ಸಾಹಿಸಿದವರ ಸದ್ಗುಣವನ್ನು ಸ್ಮರಿಸಲೇಬೇಕಾಗಿದೆ.

ಹಿತದಿಂದ ಸಹಿತವಾದುದು ಸಾಹಿತ್ಯ. ಜನಜನಾಂಗಕ್ಕೆ ನಾಡಿನ, ರಾಷ್ಟ್ರದ ಹಾಗೂ ಜಗತ್ತಿನ ಸಾಹಿತ್ಯ ಹಿತವನ್ನು ನೀಡುತ್ತದೆ. ಸತ್ಯದ ನೀತಿಯ ಸನ್ಮಾರ್ಗದ ಜೀವನ ನಡೆಸಿದವರಿಗೆ ಎಷ್ಟೋ ಕಷ್ಟಗಳು ಬಂದರೂ ಕೊನೆಗೆ ಅದರ ಪರಿಹಾರವಾಗುತ್ತದೆ. ತ್ರಿಲೋಕದಲ್ಲೂ ದಶಕಂಠ ರಾವಣನೂ, ಪತಿವ್ರತೆ ಸೀತಾದೇವಿಯನ್ನು ಅಪಹರಿಸಿ ಮಾಡಿದ ಅನ್ಯಾಯದಿಂದ ಕಪಿಶ್ರೇಷ್ಠರ ಸಹಾಯ ಪಡೆದು ಶ್ರೀರಾಮನು ಆತನನ್ನು ವಧಿಸಿದನು. ಇಂತಹ ಉತ್ತಮ ಜೀವಿತದ ಸಾಧನೆ-ಸಿದ್ಧಿಗಳು ಸಾಹಿತ್ಯದಲ್ಲಿ ನಮಗೆ ದೊರಕುವವು. ಹಾಗಾಗಿಯೇ ಸಾಹಿತ್ಯಜ್ಞರಿಗೆ, ಸಾಹಿತ್ಯಕಾರರಿಗೆ, ಅವರಿಗೆ ಬೆಂಬಲ ನೀಡುವ ಮಹನೀಯರಿಗೆ ಸಮಾಜದಲ್ಲಿ ಗೌರವ ಹೆಚ್ಚುವುದು. ಹೀಗೆ ಸಾಹಿತ್ಯವನ್ನು ಸಾಹಿತ್ಯಜ್ಞರನ್ನು ಗೌರವಿಸಲು, ಮುಂದೆ ಬರುವ ಮಹನೀಯರು ಕೂಡ ಉತ್ತಮ ಸಾಹಿತ್ಯಪ್ರಿಯರೂ, ಓದುಗರೂ, ಅಭಿಮಾನಿಗಳೂ ಆಗಿರಬೇಕು. ಸಾಹಿತ್ಯ ಸಮಾರಾಧನೆಗೆ, ಸಾಹಿತಿ ಜನಿಸಿದ ಸಮಾಜ ಎಂದಿಗೂ ಬಾಧಕವಲ್ಲ. ವಿಶ್ವಸಾಹಿತಿ ಕಾಳಿದಾಸನು, ಕುರುಬಜನಾಂಗದಲ್ಲಿ ಜನಿಸಿದವನು; ಆದಿಕವಿ ವಾಲ್ಮೀಕಿ ನಿಷಾದವಂಶೀಯನು; ವೇದಗಳನ್ನು ಹಂಚಿ ಸಂಪಾದಿಸಿದ ಹಾಗೂ ಮಹಾಭಾರತವನ್ನು ಬರೆದ ವೇದ ವ್ಯಾಸನು ಬೆಸ್ತರವಳ ಮಗನು. ನಮ್ಮ ಪುಣ್ಯ ಭಾರತದ ಪವಿತ್ರ ಸಂದೇಶವಿದು. ಗಾರ್ಗಿ, ಮೈತ್ರೇಯೀ ಮೊದಲಾದ ಮಹಿಳಾ ಮಣಿಗಳು ವೇದಮಾರ್ಗಗಳನ್ನು ರಚಿಸಿದವರು. 'ನಮ್ಮ ಬುದ್ಧಿಯನ್ನು ಬೆಳಗಿಸು ಸೂರ್ಯನೇ' ಎಂದು ಹೇಳುವ ಗಾಯತ್ರಿ ಮಂತ್ರವನ್ನು ಹೆಂಗಸರು ಹೇಳಬಾರದೆಂಬುದಕ್ಕೆ ಅರ್ಥವಿಲ್ಲ. ಆದರೆ ಓಂಕಾರ ಹಾಗೂ ಮಂತ್ರಗಳನ್ನು ಉದಾತ್ತಾನುದಾತ್ತ ಸ್ವರಿತ ಸ್ವರಗಳಲ್ಲಿ ಹೇಳಬೇಕು. ಅದು ಜ್ಞಾನ ಸೂತ್ರ; ಸರಿಗಮ ಪದನಿಗಳನ್ನು ಸಂಗೀತಗಾರರು ತಿಳಿದು ಹಾಡುವಂತೆ. ಆದಕಾರಣ, ಸಾಹಿತ್ಯ ವಿಚಾರದಲ್ಲೂ ಆಳವಾದ ಅರಿವು ಜನ ಜನಾಂಗಕ್ಕೆ ಬರುವಂತೆ, ಸಾಹಿತ್ಯ ಪೋಷಕರು, ಹರಿಕೃಷ್ಣ ಪುನರೂರು ಅಂತಹವರು ಇನ್ನಷ್ಟು ಹೆಚ್ಚುವಂತೆ ಶ್ರೀ ದೇವರು ಆಶೀರ್ವದಿಸಲಿ. ಪುನರೂರರು ವೇದಮಂತ್ರಗಳು ಹೇಳುವಂತೆ, ನೂರು ವರ್ಷ ಸುಖವಾಗಿ, ಸಮೃದ್ಧವಾಗಿ, ಆನಂದಪೂರ್ಣವಾಗಿ ಜೀವಿಸುವಂತೆ ದೇವರ ಆಶೀರ್ವಾದ ಹೆಚ್ಚಲಿ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಾಹಿತಿಯಲ್ಲದ ಸಾಹಿತ್ಯ ಪ್ರೇಮಿ

□ ನಾ. ಡಿಸೋಜ



ಹರಿಕೃಷ್ಣ ಪುನರೂರು ಅವರನ್ನು ನಾನು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವುದಕ್ಕೂ ಮೊದಲು ಕಂಡವನು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಒಂದು ಓಘವನ್ನು ತಂದುಕೊಟ್ಟವರೇ ಪುನರೂರರು. ತಾಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ತಿಂಗಳಿಗೆ ಎರಡು ಮೂರರಂತೆ ಇಡೀ ದಕ್ಷಿಣ ಕನ್ನಡದಲ್ಲಿ ಒಂದು ಕಾಲದಲ್ಲಿ ನಿರಂತರವಾಗಿ ಸಾಹಿತ್ಯ ಸಮ್ಮೇಳನಗಳು ನಡೆದಿದ್ದರೆ ಇವುಗಳ ಹಿಂದೆ ಪುನರೂರರು ಇದ್ದರೆಂದೇ ಅರ್ಥ.

ಎಲ್ಲೆಲ್ಲಿ ಸಮ್ಮೇಳನಗಳನ್ನು ಮಾಡಬಹುದೆಂದು ಅವರಿಗೆ ಅನಿಸುತ್ತಿತ್ತೋ ಅಲ್ಲಿಗೆಲ್ಲ ಹೋಗಿ, ಸಾಹಿತ್ಯಾಸಕ್ತರ ಸಭೆ ಕರೆದು ಒಂದು ಸಮಿತಿ ಮಾಡಿ ಆ ಸ್ಥಳದಲ್ಲಿ ಸಮ್ಮೇಳನವಾಗುವ ಹಾಗೆ ಅವರು ನೋಡಿಕೊಳ್ಳುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ಕೊಂಚ ಧನ ಸಹಾಯವನ್ನು ಕೂಡ ಅವರೇ ಮಾಡುತ್ತಿದ್ದರು ಎಂದು ಕೂಡ ನಾನು ಕೇಳಿದ್ದೇನೆ.

ಅಷ್ಟೇ ಅಲ್ಲದೆ ಸಮ್ಮೇಳನ ನಡೆಯುವಾಗ ವ್ಯವಸ್ಥಾಪಕರು ಬೇರೊಂದು ಕಾರ್ಯದಲ್ಲಿ ಮಗ್ನರಾಗಿದ್ದಾಗ ಪುನರೂರು ಅವರೇ ವೇದಿಕೆ ಮೇಲಿನ ಕುರ್ಚಿಗಳನ್ನು ಜೋಡಿಸಿ, ಮುಂದಿನ ಕಾರ್ಯಕ್ರಮಕ್ಕೆ ವೇದಿಕೆ ಸಜ್ಜು ಮಾಡುತ್ತಿದ್ದುದನ್ನೂ ನಾನು

15/14, 2ನೇ ಕ್ರಾಸ್, ನೆಹರು ನಗರ, ಸಾಗರ-572 401

ನೋಡಿದ್ದೇನೆ.

ಅವರು ಪರಿಷತ್ತಿನ ಅಧ್ಯಕ್ಷರಾದ ಮೇಲೆ ಪ್ರಾರಂಭಿಸಿದ ಹೊಸ ಯೋಜನೆ ಎಂದರೆ ಸಾಹಿತ್ಯ ಸಮ್ಮೇಳನಗಳನ್ನು ಹೋಬಳಿ ಮಟ್ಟಕ್ಕೆ ತೆಗೆದುಕೊಂಡು ಹೋದದ್ದು. ಸಣ್ಣ ಸಣ್ಣ ಹೋಬಳಿಗಳಲ್ಲೂ ಸಾಹಿತ್ಯ ಸಮ್ಮೇಳನಗಳು ನಡೆದವು. ಚೆನ್ನಗಿರಿ ತಾಲೂಕಿನ ಎರಡು ಹೋಬಳಿಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದುಂಟು. ನನಗೆ ಆಶ್ಚರ್ಯ ತಂದದ್ದೆಂದರೆ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೋಬಳಿ ಸಮ್ಮೇಳನಗಳಲ್ಲಿ ಭಾಗವಹಿಸಿ ಕೊನೆಯತನಕ ಇದ್ದು ಕಾರ್ಯಕ್ರಮ ನಡೆಸಿಕೊಟ್ಟದ್ದು.

ಸಾಮಾನ್ಯವಾಗಿ ದೊಡ್ಡ ಸಾಹಿತಿಗಳು ಅನಿಸಿಕೊಂಡವರು ತಾಲೂಕು ಸಮ್ಮೇಳನ ಎಂದರೇನೆ ತಮ್ಮ ಘನತೆಗೆ ಕುಂದು ಎಂದು ತಿಳಿಯುತ್ತಾರೆ. ಇನ್ನು ಹೋಬಳಿ ಸಮ್ಮೇಳನ ಎಂದರೆ ಹತ್ತಿರವೂ ಸುಳಿಯುವುದಿಲ್ಲ. ಆದರೆ ಪುನರೂರರು ಈ ಮಾತಿಗೆ ಅಪವಾದ.

ಅವರ ಮೇಲಿದ್ದ ಒಂದು ಆಪಾದನೆ ಎಂದರೆ ಸಾಹಿತ್ಯದ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ ಎಂಬುದು. ಅವರು ಪರಿಷತ್ತಿನ ಅಧ್ಯಕ್ಷರಾದ ಮೇಲೂ ಕೆಲ ಸಾಹಿತಿಗಳು ಅವರನ್ನು ದೂರ ಇಟ್ಟದ್ದು ಈ ಕಾರಣಕ್ಕಾಗಿಯೇ.

ಆದರೆ ಸಾಹಿತ್ಯ ಕೇವಲ ಸಾಹಿತಿಗಳಿಂದಲೇ ಬೆಳೆಯುತ್ತದೆ ಎಂದು ನಾವು ತಿಳಿಯುತ್ತೇವೆ. ಸಾಹಿತ್ಯಕ್ಕಾಗಿ, ಕೆಲಸ ಮಾಡುವ 'ಶ್ರಮಜೀವಿ' ಹಣ ವಿನಿಯೋಗಿಸುವ ಸಾಹಿತ್ಯ ಪರಿಚಾರಕರೂ ಸಾಹಿತ್ಯಕ್ಕೆ ಬೇಕು.

ಸಾಹಿತಿಗಳು ಮಾಡಲಾರದ ಎಷ್ಟೋ ಕೆಲಸಗಳನ್ನು ಸಾಹಿತ್ಯ ಪರಿಚಾರಕರು ಮಾಡುತ್ತಾರೆ.; ಪುನರೂರರು ಮಾಡಿದ್ದಾರೆ.

ಪುನರೂರರು ಅಧ್ಯಕ್ಷರಾದ ಮೇಲೆ ಮಾಡಿದ ಇನ್ನೊಂದು ಕೆಲಸವೆಂದರೆ ಊರು ಊರುಗಳಿಂದ ದತ್ತಿಗಳನ್ನು ಪಡೆದದ್ದು. ಸಮ್ಮೇಳನಕ್ಕೋ ಮತ್ತೆ ಯಾವುದಕ್ಕೋ ತಾನು ಊರಿಗೆ ಬರಬೇಕಾದರೆ ಊರಿನ ದಾನಿಗಳಿಂದ ದತ್ತಿಗಳನ್ನು ಸಂಗ್ರಹಿಸಿ ಕೊಡಬೇಕೆಂಬ ಕರಾರನ್ನು ಪುನರೂರರು ಹಾಕುತ್ತಿದ್ದರು. ಜಿಲ್ಲೆ ತಾಲೂಕಿನ ಅಧ್ಯಕ್ಷರು ಅದರ ವ್ಯವಸ್ಥೆ ಮಾಡುತ್ತಿದ್ದರು. ಪುನರೂರರು ಊರಿಗೆ ಬಂದಾಗ ಪರಿಷತ್ತಿಗೆ ದತ್ತಿದಾನಿಗಳ ಯಾದಿ ದೊರಕುತ್ತಿತ್ತು.

ಇವತ್ತು ಊರು ಊರುಗಳಲ್ಲಿ ಈ ದತ್ತಿ ಉಪನ್ಯಾಸಗಳು ಅಧಿಕ ಸಂಖ್ಯೆಯಲ್ಲಿ ನಡೆಯುತ್ತಿವೆ. ಇದು ಕೂಡ ಒಂದು ಒಳ್ಳೆಯ ಬೆಳವಣಿಗೆ ಅಂದುಕೊಂಡಿದ್ದೇನೆ ನಾನು.

ಸಾಮಾನ್ಯವಾಗಿ ಸಾಹಿತ್ಯಿಕ ಕಾರ್ಯಕ್ರಮಗಳು ಸಂಘಟನೆ ಹಾಗೂ ಹಣಕಾಸಿನ ಕಾರಣಗಳಿಂದಾಗಿ ಸೊರಗುತ್ತವೆ.

ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ರೂಪಿಸುವುದು ಸಾಹಿತಿಗಳಿಂದ ಆಗದ ಕೆಲಸ. ಇವಕ್ಕೆ ವಿಶೇಷವಾದ ಸಂಘಟನಾ ಶಕ್ತಿ ಬೇಕಾಗುತ್ತದೆ. ಆಮಂತ್ರಣ ಹಾಕುವುದರಿಂದ ಬ್ಯಾನರ್ ಕಟ್ಟುವವರೆಗೆ ಕೆಲಸ ಮಾಡುವವರು ಇದ್ದರೆ ಒಂದು ಕಾರ್ಯಕ್ರಮ ಚೆಂದ ಕಾಣುತ್ತದೆ. ಇಲ್ಲಿ ದೊಡ್ಡಸ್ತಿಕೆ, ಬಿಗುಮಾನ, ಮುಜುಗರ ತಲೆಹಾಕಿದರೆ ಕೆಲಸ ಕೆಡುತ್ತದೆ.

ಪುನರೂರರ ಸರಳತೆ ಎಷ್ಟೋ ಬಾರಿ ಅವರಿಂದ ಈ ಕೆಲಸ ಮಾಡಿಸಿದೆ. ಅವರೇ ಮುಂದಾಗಿ ಕೆಲಸಕ್ಕೆ ನಿಂತಾಗ ಉಳಿದವರು ಅವರನ್ನು ಅನುಕರಿಸಿದ್ದಾರೆ.

ಅಂತಹದ್ದೇ ಮತ್ತೊಂದು ಕೆಲಸವೆಂದರೆ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಹಣದ ಕೊರತೆ ಎದುರಾಗುವುದು. ನಮ್ಮ ನಾಡಿನ ಸರಕಾರಿ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಡಿ.ಸಿ.

ಎಂ.ಪಿ.ಗಳು ಹೋದಾಗ ಧಾರಾಳವಾಗಿ ಹಣ ಕೊಡುವಂತೆ ಸಾಹಿತಿಗಳು ಹೋದಾಗ ಕೊಡುವುದಿಲ್ಲ. ಸಾಹಿತ್ಯದ ಮಹತ್ವ ಅರಿಯದಿರುವುದು ಒಂದು ಕಾರಣವಾದರೆ, ನಿರುಪದ್ರವಿ ಸಾಹಿತಿಗಳಿಂದ ತಮಗೆ ಏನೂ ಅಪಾಯವಿಲ್ಲ ಅನ್ನುವಂತಹ ಮನೋಭಾವ ಮತ್ತೊಂದು. ಹೀಗಾಗಿ ಸಾಹಿತಿಗಳು ಯಾವತ್ತೂ ಹಣದ ಕೊರತೆಯಿಂದ ಬಳಲುತ್ತಾರೆ.

ಈ ವಿಷಯವನ್ನು ಮನಗಂಡ ಪುನರೂರರು ಮೊದಲಿನಿಂದಲೂ ಸಾಹಿತ್ಯ ಸಮ್ಮೇಳನ, ವಿಚಾರ ಸಂಕಿರಣ, ಸ್ಪರ್ಧೆ ಸನ್ಮಾನಗಳಿಗೆ ಸಂಘ-ಸಂಸ್ಥೆಗಳಿಗೆ ಧನ ಸಹಾಯ ಮಾಡುತ್ತ ಬಂದಿದ್ದಾರೆ. ಹಲವಾರು ಪ್ರಕಟನೆಗಳಿಗೆ ಅವರು ಬೆಂಬಲವಾಗಿ ನಿಂತಿದ್ದಾರೆ. ಇದು ಪುನರೂರರ ಹೆಗ್ಗಳಿಕೆ ಎಂದೇ ನಾನು ತಿಳಿಯುತ್ತೇನೆ.

ನಮ್ಮಲ್ಲಿ ಸಾಹಿತಿಗಳು ಎಂದು ಕರೆಸಿಕೊಳ್ಳುವವರೆಲ್ಲ ಸ್ವರಸ್ವತಿ ಪುತ್ರರೇ ಹೊರತು ಲಕ್ಷ್ಮೀಪುತ್ರರಲ್ಲ. ಪುನರೂರರ ಹಾಗೆ ನಿರಂತರವಾಗಿ ಧಾರಾಳವಾಗಿ ಕೊಡಲು ಸಾಹಿತಿಗಳಿಂದ ಆಗುವುದೂ ಇಲ್ಲ. ಈ ಕಾರಣದಿಂದಾಗಿ ಪುನರೂರರ ಈ ಸಾಹಿತ್ಯ ಕೈಂಕರ್ಯ ಇಡೀ ಸಾರಸ್ವತ ಲೋಕ ಗುರುತಿಸಿದೆ ಎಂದು ನಾನು ತಿಳಿದಿದ್ದೇನೆ.

ಪುನರೂರರು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಿದವರಲ್ಲ. ಧರ್ಮದರ್ಶಿಯಾಗಿ, ಸಮಾಜ ಸೇವಕರಾಗಿ, ಶಿಕ್ಷಣ ಕ್ಷೇತ್ರದಲ್ಲಿ, ಲಯನ್ಸ್ ಸಂಸ್ಥೆಯ ಮೂಲಕ ಹಲವು ಕಾರ್ಯಗಳನ್ನು ಮಾಡಿದವರು.

ಶ್ರೀ ಜಿ. ನಾರಾಯಣರ ಹಾಗೆ ಸಾಹಿತಿ ಅನಿಸಿಕೊಳ್ಳದಿದ್ದರೂ ಸಾಹಿತ್ಯಕ್ಕಾಗಿ ದುಡಿಯುತ್ತಿರುವ ಪುನರೂರರ ಸೇವೆಯನ್ನು ನಾಡು ಸುಲಭವಾಗಿ ಮರೆಯಲಾರದು.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ನಿಷ್ಠಾವಂತ ಸಾಹಿತ್ಯ-ಸಮಾಜ ಸೇವಕ

□ ಪ್ರೇಮಾ ಭಟ್



ಅಸಂಗತವಾದವೇ ಮೆರೆಯುತ್ತಿರುವಂತಿರುವ ಆಧುನಿಕ ಜಗತ್ತಿನಲ್ಲಿ ಮನುಷ್ಯ ಮನುಷ್ಯನನ್ನು ಅರ್ಥ ಮಾಡಿಕೊಂಡು ಬದುಕುವ ಪರಿ ಕೆಟ್ಟಿದೆ. ಇಂಥ ವ್ಯವಸ್ಥೆಯಲ್ಲಿ ತಮ್ಮಿಂದಾದಷ್ಟು ಸಮಾಜ ಸೇವೆ ಮಾಡುವ ಅರ್ಥವಂತಿಕೆಯೂ ಕಡಿಮೆಯಾಗಿದೆ. ಆದರೆ ಮನುಷ್ಯನಿಗೆ ಸ್ವತಂತ್ರವಾದ ವಿಚಾರ ಶಕ್ತಿ ಇಚ್ಛಾಶಕ್ತಿಗಳಿದ್ದು, ಆತ ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಳ್ಳುತ್ತಾನೆ. ತನ್ನ ಗುಣ-ಸ್ವಭಾವಗಳಿಗೆ ತಾನೇ ಹೊಣೆಗಾರನಾದಾಗ, ರಾಜಕೀಯ ಪ್ರಲೋಭನೆಗಳಾವುದೂ ಅವನನ್ನು ಮುತ್ತಿಕ್ಕಿ ಹತ್ತಿಕ್ಕುವುದಿಲ್ಲ ಎನ್ನುವುದಕ್ಕೆ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ಸಾಕ್ಷಿ.

ಅವರನ್ನು ಕುರಿತು ಲೋಕಾಭಿರಾಮವಾಗಿ ಹೇಳುವುದಾದರೆ, ಅವರಲ್ಲಿ ಒಂದು ರೀತಿ ವೈತ್ಯ ಪ್ರತಿಭೆ ಅಡಗಿದೆ ಎನ್ನಬೇಕಾಗುತ್ತದೆ. ಹರಿಕೃಷ್ಣ ಪುನರೂರು ಒಬ್ಬ ನಿಷ್ಠಾವಂತ ಸಮಾಜ ಸೇವಕ ಹಾಗೂ ಸಾಹಿತ್ಯ ಪರಿಚಾರಕ. 1994ರ ಅವಧಿಯಲ್ಲಿ ಡಾ. ಸಾ.ಶಿ. ಮರುಳಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದಾಗ, ಪುನರೂರು ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿದ್ದರು. ಅಷ್ಟರಲ್ಲಾಗಲೆ ದ.ಕ. ಜಿಲ್ಲೆಯಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿ ಹೆಸರಾಗಿದ್ದರು. ಅವರು ಬೆಂಗಳೂರಿನ

'ಶ್ರೀ ಗುರುಪ್ರಸಾದ' 845, 4ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-560 040

ಸಾಹಿತ್ಯ ಪರಿಷತ್ತಿನ ಕೇಂದ್ರ ಕಚೇರಿಗೆ ಸಮಿತಿ ಸಭೆ ನಡೆದಾಗಲೆಲ್ಲ ಹಾಜರಾಗುತ್ತಿದ್ದರು. ನಾನಾಗ ಪರಿಷತ್ತಿನಲ್ಲಿ ಮಹಿಳಾ ಪ್ರತಿನಿಧಿಯಾಗಿ ಮೂರು ವರ್ಷದ ಅವಧಿಗೆ ನೇಮಕಗೊಂಡಿದ್ದೆ. ಆಗಲೇ ನಾನವರನ್ನು ನೋಡಿದ್ದು.

ದುಂಡು ಮೇಜಿನ ಸಮಿತಿ ಸಭೆಯಲ್ಲಿ ಹರಿಕೃಷ್ಣ ಪುನರೂರು ಅವರು ಬಂದು ಕುಳಿತರೆಂದರೆ ಅವರದು ಎದ್ದು ಕಾಣುವ ವ್ಯಕ್ತಿತ್ವ. ಅವರು ಧರಿಸುತ್ತಿದ್ದ ಬಟ್ಟೆಯೂ ಅವರಷ್ಟೆ ಶುದ್ಧ. ಸಭೆಗೆ ಅವರು ಬಂದರೆಂದರೆ ಯಾರೇ ಬಂದಿರಲಿ, ಬರದಿರಲಿ, ಸಭೆ ತುಂಬಿಕೊಂಡಂತೆ ಇರುತ್ತಿತ್ತು.

ಅವರೆಂದೂ ಯಾರದೋ ಒತ್ತಾಸೆಗೆ ಮಣಿದವರಲ್ಲ. ತಮಗೆ ಕಂಡದ್ದನ್ನು ಅನ್ನಿಸಿದ್ದನ್ನು ಮಂಗಳೂರಿನ ನೇರ ನುಡಿಯಲ್ಲಿ ಸಭೆಯ ಮುಂದಿಡುತ್ತಿದ್ದರು. ಸಮ್ಮೇಳನದ ಅಧ್ಯಕ್ಷರ ಆಯ್ಕೆಯಲ್ಲೇ ಆಗಲಿ ಮತ್ತಾವುದೇ ವಿಷಯದಲ್ಲಾಗಲಿ ತನಗನಿಸಿದ್ದನ್ನು ಸಭೆಯ ಮುಂದೆ ತರುತ್ತಿದ್ದರು. ಸಭೆ ಅವರ ಮಾತನ್ನು ಅನುಮೋದಿಸಲಿ, ಬಿಡಲಿ, ತಾವಾಡುವ ಮಾತಿನಲ್ಲಿ ಅಚಲವಾದ ನಿರ್ಧಾರವಿರುತ್ತಿತ್ತು, ಅವರ ಮಾತಿನಲ್ಲಿರುತ್ತಿದ್ದ ಗತ್ತು, ಗಾಂಭೀರ್ಯ ಇತರರನ್ನು ಆಲೋಚನೆಗೆ ಹಚ್ಚುವಂತೆ ಮಾಡುತ್ತಿದ್ದವು. ಅವರು ಕಟ್ಟಿದ ಕನಸು ಇಡುವ ಹೆಜ್ಜೆ ಒಂದೇ ಆಗಿರುತ್ತಿದ್ದುದರಿಂದ ಸಾಹಿತ್ಯಕ-ಸಾಂಸ್ಕೃತಿಕ ವಲಯದಲ್ಲಿ ಪುನರೂರರಿಗೆ ಒಳ್ಳೆಯ ಹೆಸರಿತ್ತು. ಅದ್ವೈತ ಎಂಬ ಪರಮಾರ್ಥವನ್ನು ದ್ವೈತ ಎಂಬ ವ್ಯವಹಾರವನ್ನು ಮೈಗೂಡಿಸಿಕೊಂಡಿದ್ದ ಪುನರೂರರು ಸಾಹಿತಿಯಾಗದೆ ಸಾಹಿತ್ಯ ಪರಿಚಾರಕರಾದರು, ಕಲಾವಿದರಾಗದೆ ಸಮಾಜಸೇವಕರಾದರು, ಸಾಹಿತಿ ಕಲಾವಿದರನ್ನು ಗೌರವಿಸಿದರು, ಕವಿಗಳಾಗದೆ ಕಲಾವಿದರನ್ನು ಸಾಹಿತಿಗಳನ್ನು ಸಂಘಟಿಸಿದರು ಎಲ್ಲರಿಗಿಂತ ಭಿನ್ನವಾಗಿ, ಎಲ್ಲದಕ್ಕಿಂತ ಭಿನ್ನವಾಗಿ ನಿಂತರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾಗಿ ಬಂದ ಅವರ ಮೇಲೆ ಒಳ್ಳೆಯ ಪ್ರತಿಕ್ರಿಯೆ ಬಂದಂತೆಯೇ ಭಿನ್ನಾಭಿಪ್ರಾಯಗಳೂ ಇದ್ದವು. ಆದರೆ ಅವರು ಇದಾವುದಕ್ಕೂ ತಲೆಕೆಡಿಸಿಕೊಳ್ಳದೆ ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ ಗೌರವವನ್ನು ಹೆಚ್ಚಿಸುವುದರಲ್ಲಿ ಕಂಕಣ ಬದ್ಧರಾದರು. ಅನೇಕ ಸಾಹಿತಿ ದಿಗ್ಗಜರ ಗ್ರಂಥಗಳನ್ನು ಪ್ರಕಟಿಸಿ ಹೊರತಂದರು. ಅವರು ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾಗಿದ್ದಾಗ ಅನೇಕ ಸಮ್ಮೇಳನಗಳನ್ನು ನಡೆಸಿಕೊಟ್ಟಿದ್ದರಲ್ಲದೆ, ದಕ್ಷಿಣ ಕನ್ನಡ ಜಿಲ್ಲಾ 8ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿಕೊಟ್ಟ ಅನುಭವ ಅವರಿಗಿತ್ತು. ಆದ್ದರಿಂದ ಅವರು ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಹೆಗ್ಗಳಿಕೆಗೆ ಪಾತ್ರರಾದರು.

ಇಷ್ಟು ಮಾತ್ರವಲ್ಲ, ಅವರಿಗೆ ಬಡಬಗ್ಗರ ಬಗ್ಗೆ ಅಪಾರವಾದ ಕಾಳಜಿ. ಅವರಿಗಾಗಿ ಅನೇಕ ವಸತಿ ಮನೆಗಳನ್ನು ಕಟ್ಟಿಸಿಕೊಟ್ಟ ಕೀರ್ತಿಗೂ ಕೂಡ ಅವರು ಭಾಜನರಾಗಿದ್ದಾರೆ. ಅವರು ಮಾಡಿದ, ಮಾಡುತ್ತ ಬಂದಿರುವ, ಮಾಡಲೇಬೇಕು ಎಂದುಕೊಂಡಿರುವ ಕೆಲಸದಲ್ಲಿ ಅತ್ಯಂತ ಆಸಕ್ತಿ ವಹಿಸಿ ಕೆಲಸ ಮಾಡುತ್ತಾ ಬಂದಿದ್ದಾರೆ.

ಪುನರೂರರನ್ನು ಕುರಿತು ಹೇಳುತ್ತಾ ಹೋದರೆ ಪುಟಗಟ್ಟಲೆ ಹೇಳಬಹುದಾದರೂ ಮಿತಿಯನ್ನು ಗಮನಿಸಿ ಹೇಳಲೇಬೇಕಾದುದನ್ನು ಹೇಳಿದ್ದೇನೆ ಎಂದುಕೊಂಡಿದ್ದೇನೆ. ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳದ, ಎಡರು-ತೊಡರುಗಳು ಏನೇ ಬರಲಿ- ಎಂಟೆದೆಯಿಂದ ನಿಗ್ರಹಿಸಿಕೊಂಡು ಬಂದ ಕನ್ನಡ ನಾಡು-ನುಡಿಗಾಗಿ ಅಹರ್ನಿಶಿ ದುಡಿದಂಥ ನಿಷ್ಠಾವಂತ ವ್ಯಕ್ತಿ ಧರ್ಮದರ್ಶಿ ಹರಿಕೃಷ್ಣ ಪುನರೂರರ ಅಭಿನಂದನ ಗ್ರಂಥಕ್ಕೆ ನನ್ನೆರಡು ನುಡಿನಮನವನ್ನು ಸಲ್ಲಿಸುತ್ತಿದ್ದೇನೆ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕನ್ನಡ ಪ್ರೀತಿಯ ಕರ್ಮಯೋಗಿ

ಎ.ಎಸ್.ಎನ್. ಹೆಬ್ಬಾರ್



ಹರಿಕೃಷ್ಣ ಪುನರೂರು ಅವರ ಪರಿಚಯ ನನಗಾಗಿದ್ದೇ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ. ಹಿಂದಿನಿಂದಲೂ ಸಾಹಿತ್ಯ ಪರಿಷತ್ತಿನ ಕುಂದಾಪುರ ತಾಲೂಕು ಪ್ರತಿನಿಧಿಯಾಗಿದ್ದ ನನ್ನನ್ನು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಕುಂದಾಪುರ ತಾಲೂಕು ಅಧ್ಯಕ್ಷರನ್ನಾಗಿ ಮಾಡಿದರು. ಕುಂದಾಪುರ ಬಹಳ ಹಿಂದಿನಿಂದಲೂ ಕನ್ನಡದ ಚಟುವಟಿಕೆಗಳಲ್ಲಿ ಮುಂದು. ಹಾಗಾಗಿ ಅತ್ಯಂತ ಉತ್ಸಾಹದಿಂದ ನಾನು ಈ ಕೆಲಸ ಕೈಗೆತ್ತಿಕೊಂಡಿದ್ದೆ. ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ನಡೆಸಬೇಕೆಂದು ಕರೆ ಬಂದಾಗ ಹರಿಕೃಷ್ಣ ಪುನರೂರು ಇದಕ್ಕೆ ಪ್ರೋತ್ಸಾಹ ನೀಡಿದರು. ಬಹುಶಃ ಇಂತಹ ಪ್ರಥಮ ಸಮ್ಮೇಳನ ಮಾಡಿದ್ದೇ ನಾವು, ಕುಂದಾಪುರದವರು. ಅದನ್ನು ಕಂಡ ಹರಿಕೃಷ್ಣ ಪುನರೂರು ಜಿಲ್ಲೆಯಾದ್ಯಂತ ಇತರ ತಾಲೂಕುಗಳಿಗೆ ಪ್ರಚೋದನೆ ನೀಡಿದರು. ಕುಂದಾಪುರವನ್ನು ಬೆರಳು ಮಾಡಿ ತೋರಿಸಿದರು. ಕುಂದಾಪುರಕ್ಕೆ ಮಾಡಲು ಸಾಧ್ಯವಾದುದು ನಿಮಗೇಕೆ ಆಗುವುದಿಲ್ಲ ಎಂದು ಛೇಡಿಸಿದರು. ಹಾಗಾಗಿ ಮೆಲ್ಲಗೆ ಇತರ ತಾಲೂಕುಗಳಲ್ಲಿಯೂ ಸಮ್ಮೇಳನಗಳು ಆರಂಭವಾದವು. ಆದರೆ ಅವರ ಪ್ರೋತ್ಸಾಹದಿಂದ ಕುಂದಾಪುರ ಯಾವಾಗಲೂ ಮುಂಚೂಣಿಯಲ್ಲಿ ಇರುತ್ತಿತ್ತು. ಉಳಿದವರು ಒಂದೋ ಎರಡೋ

'ನುಡಿ' ಮುಖ್ಯರಸ್ತೆ, ಕುಂದಾಪುರ-576 201

ಸಮ್ಮೇಳನ ಮಾಡುವಾಗ ಕುಂದಾಪುರ ತಾಲೂಕು ವರ್ಷಕ್ಕೊಂದು ಸಮ್ಮೇಳನ ಮಾಡುತ್ತಾ ದಾಖಲೆ ಸ್ಥಾಪಿಸಿತು. ಇದಕ್ಕೆಲ್ಲ ಹರಿಕೃಷ್ಣ ಪುನರೂರು ಬಂದೇ ಬರುತ್ತಿದ್ದರು. ಸಮ್ಮೇಳನಗಳನ್ನು ಅವರು ಸವಿಯುವ ರೀತಿಯೇ ಬೇರೆ. ಒಂದೇ ಒಂದು ದಿನ ನಿರುತ್ಸಾಹದ ಮಾತಾಡಿದವರೇ ಅಲ್ಲ. 'ಹಣದ ಕೊರತೆ ಬಿದ್ದರೆ ಹೇಳಿ ನಾನಿದ್ದೇನೆ. ಆದರೆ ಸಮ್ಮೇಳನ ಮಾಡುವುದನ್ನು ನಿಲ್ಲಿಸಬೇಡಿ' ಎನ್ನುತ್ತಲೇ ಬಂದರು. ಹಾಗೆಯೇ ಆಡಿದಂತೆ ದೇಣಿಗೆಯನ್ನು ಕೊಡುತ್ತಾ ಬಂದರು. ಈ ಹೊತ್ತು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕನ್ನಡದ ಕಾಯಕ ಹೀಗೆ ಸಮ್ಮೇಳನಗಳ ಮೂಲಕ ನಡೆಯುತ್ತಿದ್ದರೆ ಇವಕ್ಕೆಲ್ಲ ಮೂಲ ಸ್ಫೂರ್ತಿ, ಕಾರಣಪುರುಷ ಹರಿಕೃಷ್ಣ ಪುನರೂರು.

ಸಾಹಿತ್ಯದಲ್ಲಿ ಪುನರೂರು ಪರಿಶ್ರಮ ಇದ್ದವರಲ್ಲ. ಅದನ್ನು ಪ್ರಾಂಜಲವಾಗಿ ಅವರೇ ಒಪ್ಪಿಕೊಳ್ಳುತ್ತಾರೆ. ಆದರೆ ಸಾಹಿತ್ಯ ಅಂದರೆ ಅವರಿಗೇನೋ ಒಲವು, ಸೆಳೆತ. ಎಲ್ಲೇ ಆಗಲಿ, ಸಮ್ಮೇಳನಗಳು ನಡೆದಾಗ, ಗೋಷ್ಠಿಗಳು ಜರಗಿದಾಗ ಅವರು ತಪ್ಪದೇ ಹಾಜರು. ಮಂಗಳೂರಿನಲ್ಲಿ ಮಹಿಳೆಯರ ಸಾಹಿತ್ಯ ಗೋಷ್ಠಿ ಅರ್ಥಾತ್ ಸಮ್ಮೇಳನ ಜರುಗಿದಾಗ ಸ್ವತಃ ಬಡಿಸಲು ನಿಂತವರು ಹರಿಕೃಷ್ಣರು. ಆದರೆ ಅದನ್ನೇ ಪತ್ರಿಕಾ ಹೇಳಿಕೆ ನೀಡಿ ವಿವಾದವನ್ನೂ ತಂದುಕೊಂಡಿದ್ದರು. ಅದಕ್ಕೇನೂ ಹೆದರುವವರಲ್ಲ. ಇದ್ದುದ್ದನ್ನು ಇದ್ದಂತೆ ಹೇಳಿ ಪತ್ರಿಕೆಗಳಲ್ಲಿ ವಿವಾದ ಸೃಷ್ಟಿಸಿಕೊಂಡವರಲ್ಲಿ ಅವರು ಅಗ್ರಗಣ್ಯರು. ಹಾಗೆಂದು ಅವರಿಗೆ ಒಂದಿನಿತೂ ಬೇಸರ ಇಲ್ಲ. ತನ್ನನ್ನು ಅರ್ಥ ಮಾಡಿಕೊಳ್ಳದೇ ವೃಥಾ ಟೀಕೆ ಮಾಡುತ್ತಿದ್ದಾರಲ್ಲ ಎಂದು ನೊಂದು ನುಡಿಯುತ್ತಿದ್ದರು. ಆದರೂ ಹೇಳುವುದನ್ನು ಹೇಳದೇ ಬಿಡುವ ಜಾಯಮಾನ ಅವರದಲ್ಲ. ಇದರಿಂದಾಗಿಯೇ ಅನಂತರ ಕನ್ನಡ ರಾಜ್ಯ ಮಟ್ಟದ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದಾಗ ಹಲವಾರು ವಿವಾದಗಳನ್ನು ಮೈಮೇಲೆ ಎಳೆದು ಹಾಕಿಕೊಂಡರು. ಅಷ್ಟಾದರೂ ನನಗೆ ಅವರನ್ನು ಕಂಡರೆ ಪ್ರೀತಿ ಹೆಚ್ಚಿತ್ತೇ ಹೊರತು ಕಡಿಮೆಯಾಗಲಿಲ್ಲ. ಕಾರಣ ಅವರದು ಮಗುವಿನಂಥ ಮನಸ್ಸು. ಮಗುವಿನೊಂದಿಗೆ ಯಾರಿಗಾದರೂ ಮುನಿಸು ಉಂಟಾಗುತ್ತದೆಯೇ?

ಕರ್ನಾಟಕ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪುನರೂರು ಮೆರೆದರು. ಅವರೇನೂ ಅಧ್ಯಕ್ಷರ ವೈಭವ ಮೆರೆಸಲಿಲ್ಲ. ಅದೇ ಬಿಳಿ ಶರ್ಟು, ಅದೇ ಬಿಳಿ ಪಂಚೆ ಉಟ್ಟು ಇಡೀ ರಾಜ್ಯದಲ್ಲಿ ಓಡಾಡಿದರು. ಅಷ್ಟು ಸರಳ ಅವರ ಉಡುಗೆ, ತೊಡುಗೆ, ನಡೆನುಡಿ. ಇದರಿಂದಾಗಿಯೇ ಬಾಗಲಕೋಟೆಯ ಸಮ್ಮೇಳನದಲ್ಲಿ ಪೋಲೀಸರು ಅವರನ್ನು ತಡೆದಿದ್ದರು. ಆಗ ಅವರು ಜಿಲ್ಲಾಧ್ಯಕ್ಷರಾಗಿದ್ದರು. ಪೋಲೀಸರು ಕೊಟ್ಟ ಉಪದ್ರವವನ್ನು ಬಹಿರಂಗವಾಗಿ ಸಾರಿದರು. ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ಅದೂ ಒಂದು ರಾದ್ಧಾಂತ.

ತುಮಕೂರಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗಲೂ ರಾಜ್ಯ ಅಧ್ಯಕ್ಷರಾಗಿದ್ದ ಹರಿಕೃಷ್ಣರಿಗೆ ಇದೇ ರೀತಿಯ ಕಹಿ ಅನುಭವ ಉಂಟಾಗಿತ್ತು. ನಾನು ಅಧ್ಯಕ್ಷ ಎಂದು ಅವರು ಹೇಳಿದರೆ ಅವರ ಪಂಚೆ ನೋಡಿ ಪೋಲೀಸ್ ವರಿಷ್ಠಾಧಿಕಾರಿ ನಕ್ಕುಬಿಟ್ಟ. ಒಳಕ್ಕೆ ಪ್ರವೇಶಿಸಲೂ ಬಿಡಲಿಲ್ಲ. ನಂತರ ನಿಜವಾಗಿಯೂ ಅವರು ಅಧ್ಯಕ್ಷರೆಂದು ಗೊತ್ತಾದಾಗ ಅಧ್ಯಕ್ಷರು ಹೀಗೂ ಇರುತ್ತಾರಾ ಎಂದು ಅಚ್ಚರಿಪಟ್ಟ! ಆಗಲೂ ಪೋಲೀಸರ ವಿರುದ್ಧ ಹರಿಹಾಯ್ದಿದ್ದು ಹರಿಕೃಷ್ಣ ಪುನರೂರು. ಮೂಡುಬಿದಿರೆಯ ಸಾಹಿತ್ಯ ಸಮ್ಮೇಳನ ಜಯಭೇರಿ ಬಾರಿಸಿತು. ಅದು ಪುನರೂರುರವರ ಸಂಘಟನಾ ಶಕ್ತಿಯ ದ್ಯೋತಕವೂ ಆಗಿತ್ತು. ಜತೆಗ ಡಾ|| ಮೋಹನ ಆಳ್ವರವರ ಕರ್ತೃತ್ವ ಶಕ್ತಿ, ಸೃಜನಶೀಲತೆ, ಕಲಾತ್ಮಕತೆ ಸೇರಿ 'ನ ಭೂತೋ ನ ಭವಿಷ್ಯತಿ' ಎಂಬಂತಾಗಿತ್ತು. ಇವೆಲ್ಲದರಲ್ಲೂ ಹರಿಕೃಷ್ಣ ಪುನರೂರು ಸಣ್ಣ ಹುಡುಗನಂತೆ ಸಂತಸದಿಂದ ನಡೆದಾಡುತ್ತಾ ಭಾಗವಹಿಸುತ್ತಿದ್ದುದನ್ನು ಕಂಡಾಗ ಕನ್ನಡದ ಬಗ್ಗೆ ಎಂಥ ಆಸಕ್ತಿಯ ಮನುಷ್ಯ ಎಂದು

ಕಾಣಿಸುತ್ತವೆ. ಹೀಗೆ ಕನ್ನಡದ ಸಾರಥಿಯಾಗಿ ರಾಜ್ಯದಲ್ಲೇ ಹೆಸರು ಮಾಡಿದವರು ನಮ್ಮ ಹರಿಕೃಷ್ಣರು. ಅವರ ಶಕ್ತಿ, ಸಾಮರ್ಥ್ಯ, ಆಸಕ್ತಿಗಳನ್ನು ಅರ್ಥ ಮಾಡಿಕೊಳ್ಳದವರು ಮಾತ್ರ ಅವರತ್ತ ಗೇಲಿಯ ಮಾತುಗಳನ್ನು ತೂರಿರಬಹುದು, ಅವರನ್ನು ಟೀಕಿಸಿರಬಹುದು, ಅವರ ತೇಜೋವಧೆಗೆ ಪ್ರಯತ್ನಿಸಿರಬಹುದು. ಇವೆಲ್ಲ ದುರದೃಷ್ಟದ ಸಂಗತಿಗಳು.

ಹರಿಕೃಷ್ಣ ಪುನರೂರು ಮಹಾ ದಾನಿ. ಹಣದ ಕೊರತೆಯಿಂದ ಪುಸ್ತಕದ ಪ್ರಕಟಣೆಗಳು ನಿಲ್ಲಬಾರದೆಂಬ ಮಹದಾಶಯ ಹೊಂದಿದವರು. ಹಾಗಾಗಿ ಅಂತಹ ಸಂಕಟದಲ್ಲಿರುವ ಲೇಖಕರಿಗೆಲ್ಲ ಪುಸ್ತಕ ಪ್ರಕಟಣೆಗೆ ಸಹಾಯ ಧನ ನೀಡುತ್ತಲೇ ಬಂದವರು. ಅವರ ಊರಿನ ಸಮೀಪ ನೂರೊಂದು ಮನೆಗಳನ್ನು ಸ್ವಂತ ವೆಚ್ಚದಿಂದ ಕಟ್ಟಿ ಸುಸಜ್ಜಿತವಾಗಿಸಿ, ಆರ್ಥಿಕವಾಗಿ ಬಲಹೀನರಾದವರಿಗೆ ವಾಸಿಸಲು ಕೊಟ್ಟವರು. ಇಂತಹ ದಾನಶೂರರು ಈಗಿನ ಕಾಲದಲ್ಲಿ ಎಲ್ಲಿ ಸಿಕ್ಕುತ್ತಾರೆ?

ಮಾತ್ರವಲ್ಲ, ಅವರೆಲ್ಲೇ ಇದ್ದರೂ ಅಧ್ಯಕ್ಷ ಪೀಠಕ್ಕೆ ಅಂಟಿ ಕೂಡುವವರಲ್ಲ. ಕೆಲಸ ಅವರ ಜೀವಾಳ. ಸಮ್ಮೇಳನ ನಡೆದಾಗಲೆಲ್ಲ ಬಿಡುವು ದೊರೆತಾಗ ಅವರ ಧಾವಂತ ಅಡುಗೆ ಮನೆಗೆ- ಊಟದ ಮನೆಗೆ. ಬಂದವರ ಯೋಗಕ್ಷೇಮ ವಿಚಾರಿಸುತ್ತಾ, ಸ್ವತಃ ತಾವೇ ಬಡಿಸಲು ನಿಲ್ಲುತ್ತಾ ಸ್ವಯಂಸೇವಕರಿಗೆ ಸ್ಫೂರ್ತಿಯಾಗುವವರು. ಕೊಲ್ಲೂರಿನ ಶ್ರೀ ಮೂಕಾಂಬಿಕಾ ದೇವಾಲಯದ ಧರ್ಮದರ್ಶಿಯಾಗಿದ್ದ ಪುನರೂರು ಅಲ್ಲಿ ಸಹಸ್ರ ಚಂಡೀ ಮಹಾಯಾಗ ನಡೆದಾಗ ಎಲ್ಲೆಲ್ಲಿಂದಲೋ ಪಾತ್ರೆ-ಪರಿಕರಗಳನ್ನು ತಮ್ಮದೇ ವಾಹನದಲ್ಲಿ ತಂದರು. ಅಂಗಿ ಕಳಚಿ ಮಡಿ ಉಟ್ಟು ಸ್ವತಃ ಸಂತರ್ಪಣೆಗಳಲ್ಲಿ ಬಡಿಸಲು ನಿಂತರು. ಪಾದರಸದಂತೆ ಪಂಕ್ತಿಗಳೆಲ್ಲೆಲ್ಲಾ ಓಡಾಡಿ ಉಪಚಾರ ಮಾಡಿದರು. ಅತಿಥಿಗಳ ಯೋಗಕ್ಷೇಮ ನೋಡಿಕೊಂಡರು. ಅವರೊಬ್ಬರಿದ್ದರೆ ಯಾವುದೇ ಸಂಸ್ಥೆಗೆ ಹತ್ತು ಜನರ ಬಲ ಇದ್ದಂತೆ ಎಂದು ಮಾಡಿ ತೋರಿಸಿದರು.

ಹೀಗೆ ಬರೇ ಮಾತಿನ ಮೂಲಕ ಅಲ್ಲದೇ ಕೆಲಸದ ಮೂಲಕವೂ ನಿಜವಾದ ಅರ್ಥದಲ್ಲಿ ಸಂಘಟನಾಕಾರರಾಗಿ ಮೆರೆದವರು ಹರಿಕೃಷ್ಣ ಪುನರೂರುರವರು. ಸಮಾಜ ಇಂತಹ ಜನರನ್ನು ಗುರುತಿಸಬೇಕು, ಗೌರವಿಸಬೇಕು. ನಮ್ಮ ಯುವಜನರು ಇವರಿಂದ ಸ್ಫೂರ್ತಿ ಪಡೆಯಬೇಕು. ಹಾಗಾಗಿ ಅವರಿಗೆ ಕಾಂತಾವರ ಕನ್ನಡ ಸಂಘ ಸಂಕಲ್ಪಿಸಿದ ಗೌರವ ಗ್ರಂಥ ಅರ್ಪಣೆಯ ಕಾರ್ಯಕ್ರಮ ಅರ್ಥಪೂರ್ಣವಾದದ್ದು. ಕಾಂತಾವರ ಕನ್ನಡ ಸಂಘ ಈ ಕೆಲಸ ಮಾಡಿ ಜನರ ಅಭಿನಂದನೆಗೆ ಪಾತ್ರವಾಗುತ್ತದೆ. ಸನ್ಮಾನದಿಂದ ಪುನರೂರು ಹಿಗ್ಗುವವರಲ್ಲ. ಅದು ಇಲ್ಲದಿದ್ದರೆ ಕುಗ್ಗುವವರೂ ಅಲ್ಲ. ಅವರದು ಯಥಾ ಪ್ರಕಾರ ಕರ್ಮಯೋಗಿಯ ಕಾಯಕ. ಅವರಿಗೆ ಶುಭವಾಗಲಿ.

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕನ್ನಡದ ಕೆಲಸಕ್ಕೆ ಹೆಗಲೊಡ್ಡಿದವರು

☐ ಡಾ॥ ಪಾದೇಕಲ್ಲು ವಿಷ್ಣು ಭಟ್



ಹರಿಕೃಷ್ಣ ಪುನರೂರು ಅವರ ಸಾರ್ವಜನಿಕ ಕ್ಷೇತ್ರದ ಚಟುವಟಿಕೆಗಳ ಬಗೆಗೆ ನಾನು ಪತ್ರಿಕೆಗಳಲ್ಲಿ ಸಾಕಷ್ಟು ಓದಿದ್ದರೂ ಅವರ ನಿಕಟವಾದ ಪರಿಚಯ ನನಗೆ ದೊರಕಿದುದು ಸುಮಾರು 1990ರಿಂದ. ಆ ವರ್ಷ ಕನ್ನಡದ ಹಿರಿಯ ವಿದ್ವಾಂಸ ಸೇಡಿಯಾಪು ಕೃಷ್ಣಭಟ್ಟರ ತೊಂಬತ್ತನೆಯ ವರ್ಷದ ಅಭಿನಂದನ ಕಾರ್ಯಕ್ರಮ ಉಡುಪಿಯ ಎಂ.ಜಿ.ಎಂ. ಕಾಲೇಜಿನ ಸ್ವಭಾಭವನದಲ್ಲಿ ನಡೆದಿತ್ತು. ಆದಿನ ಸೇಡಿಯಾಪು ಅವರಿಗೆ ವರ್ಧಮಾನ ಪ್ರಶಸ್ತಿ ನೀಡುವ ಕಾರ್ಯಕ್ರಮವೂ ಇತ್ತು. ಆ ಕಾರ್ಯಕ್ರಮಕ್ಕೆ ಬಂದಿದ್ದ ಪುನರೂರು ಅವರು ಕಾರ್ಯಕ್ರಮದ ನಂತರ ಸೇಡಿಯಾಪು ಅವರ ಕಾಲಿಗೆ ಅಡ್ಡಬಿದ್ದು ನಮಸ್ಕರಿಸಿ "ದೇವಸ್ಥಾನಗಳ ಕೆಲಸ, ಕನ್ನಡದ ಕೆಲಸ ಮಾಡುತ್ತಿದ್ದೇನೆ. ಹಿರಿಯರು ಆಶೀರ್ವಾದ ಮಾಡಬೇಕು" ಎಂದು ಕೇಳಿಕೊಂಡರು. ಸೇಡಿಯಾಪು ಅವರಿಗೆ ದೃಷ್ಟಿಶಕ್ತಿ ಇರಲಿಲ್ಲ. ಆದರೂ ಅವರಿಗೆ ಪುನರೂರು ಅವರ ಚಟುವಟಿಕೆಗಳನ್ನು ಕೇಳಿಗೊತ್ತಿತ್ತು. ಸಂತೋಷದಿಂದ ಆಶೀರ್ವಾದ ಮಾಡಿದರು. ಇಂತಹ ಹಲವು ಹಿರಿಯರ ಆಶೀರ್ವಾದ ಬಲದಿಂದ ಪುನರೂರು ಅವರು ಸಮಾಜದ ಒಳಿತಿಗಾಗಿ ಹಲವು ಕೆಲಸಗಳನ್ನು ಮಾಡಲು ಸಾಧ್ಯವಾಯಿತು. ನೇರ ನುಡಿಯ, ಖಚಿತ ಸ್ಪಷ್ಟ ಮಾತಿನ ಪುನರೂರು ಅವರು ಹೊರನೋಟಕ್ಕೆ ಒರಟನೆಂಬಂತೆ

'ಧಾತ್ರಿ' ಅಂಚೆ : ಅತ್ರಾಡಿ, ತಾಲ್ಲೂಕು ಉಡುಪಿ, ದ.ಕ-576 107

ತೋರಿದರೂ ಗುರು-ಹಿರಿಯರ ಮೇಲೆ ಅವರಿಗೆ ಅಪಾರ ಗೌರವವಿದೆ. ಹೊರನೋಟದ ಒರಟುತನ ಅವರ ಗ್ರಾಮೀಣ ಹಿನ್ನೆಲೆಯಿಂದ ಬಂದುದು. ಸಾರ್ವಜನಿಕ ಕಾರ್ಯಗಳಲ್ಲಿ ಅವರು ಇದಿರಿಸಿದ ಏರುತಗ್ಗುಗಳು ಮತ್ತು ಕಹಿ ಅನುಭವಗಳಿಂದ ಗಟ್ಟಿಗೊಂಡರು. ಆ ದಿನ, ಸೇಡಿಯಾಪು ಅವರಲ್ಲಿ ನಾನು ಬರವಣಿಗೆಗಾಗಿ ಹೋಗುತ್ತಿದ್ದು, ಅವರ ಲೇಖನಗಳ ಸಂಪುಟವನ್ನು ಸಂಪಾದಿಸುತ್ತಿದ್ದುದನ್ನು ತಿಳಿದು ಪುನರೂರು ಅವರು ನನಗೆ ಉತ್ಸಾಹ ಬರುವಂತೆ ಪ್ರಶಂಸೆಯ ಮತ್ತು ಪ್ರೋತ್ಸಾಹದ ಮಾತುಗಳನ್ನಾಡಿದರು. ಅಂದಿನಿಂದ ನನ್ನ ಮತ್ತು ಅವರ ಪರಿಚಯ ಹೆಚ್ಚುತ್ತ ಹೋಯಿತು.

1993ರಲ್ಲಿ ನಾನು ಉಡುಪಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ಥಾಪಕ ಪ್ರಾಂಶುಪಾಲನಾಗಿ ಕಾರ್ಯನಿರ್ವಹಿಸುವ ಸಂದರ್ಭ ಬಂದಿತ್ತು. ಪ್ರಾಯಶಃ 1994ರಲ್ಲಿ ಒಂದು ದಿನ ಪುನರೂರು ಅವರು ತಮ್ಮ ವಾಹನದಲ್ಲಿ ನಮ್ಮ ಕಾಲೇಜು ಕಚೇರಿಯ ಮುಂದೆ ಬಂದಿಳಿದರು. ಆಗ ಅವರು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸಾಹಿತ್ಯ ಪರಿಷತ್ತಿನ 'ಅಮೃತ ನಿಧಿ' ಯೋಜನೆಯಲ್ಲಿ ಪ್ರತಿಯೊಬ್ಬನಿಂದ ಒಂದು ರೂಪಾಯಿಯಂತೆ ಸಂಗ್ರಹಿಸುವ ಯೋಜನೆಗೆ ಸಂಬಂಧಿಸಿದಂತೆ ನಡೆದಿತ್ತು ಅವರ ಭೇಟಿ. ನಮ್ಮ ಕಾಲೇಜಿನ ವಿದ್ಯಾರ್ಥಿ-ಅಧ್ಯಾಪಕರ ಸಂಖ್ಯೆಯಷ್ಟು ಚೀಟಿಗಳನ್ನಿತ್ತು ಅವುಗಳನ್ನು ಹಂಚಿ ಹಣ ಸಂಗ್ರಹಿಸಿಕೊಡುವಂತೆ ಕೋರಿದರು. ಈ ರೀತಿ ತಮ್ಮ ಖರ್ಚಿನಿಂದಲೇ ಊರೂರು ತಿರುಗಿ ವಿದ್ಯಾಸಂಸ್ಥೆಗಳ ಮುಖ್ಯಸ್ಥರನ್ನು ಕಂಡು, ವಿದ್ಯಾರ್ಥಿಗಳಿಗೂ ಸಾಹಿತ್ಯದ ಪರಿಷತ್ತಿನ ಪರಿಚಯ ಮತ್ತು ಪರಿಷತ್ತಿನ ಕಾರ್ಯಗಳಿಗೆ ಸಹಾಯವಾಗುವ ಅವಕಾಶ ಮಾಡಿಕೊಡುತ್ತಿದ್ದರೂ ಕೆಲವೆಡೆಗಳಿಂದ ಬರುತ್ತಿದ್ದ ಟೀಕೆಗಳು, ಕೆಲವು ವಿದ್ಯಾಸಂಸ್ಥೆಗಳು ತೋರಿಸಿದ ಅಸಹಕಾರ ಇತ್ಯಾದಿಗಳನ್ನೂ ಸ್ವಲ್ಪ ಬೇಸರದಿಂದಲೇ ಹೇಳಿಕೊಂಡರು. ''ಜನಗಳಲ್ಲಿ ಕೆಲವರು ಟೀಕಿಸುವುದಕ್ಕಾಗಿಯೇ ಇರುವವರು; ಅವರು ಕೆಲಸ ಮಾಡುವುದಿಲ್ಲ. ಟೀಕಿಸುವವರು ಅವರ ಆ ಕೆಲಸವನ್ನು ಮಾಡುತ್ತಿರಲಿ. ಒಳ್ಳೆಯ ಕೆಲಸದಲ್ಲಿ ಸಾಧನೆ ಮಾಡಿ ಮುಂದುವರಿಯುವುದೇ ನನ್ನ ಸ್ವಭಾವ. ನಾಲ್ಕು ಜನ ಟೀಕಿಸುತ್ತ ತಿರುಗಿದರೆ ನಲವತ್ತು ಜನ ನಮಗೆ ಸಹಾಯ ಮಾಡುತ್ತಾರೆ; ಒಳ್ಳೆಯ ಕೆಲಸಗಳಿಗೆ ಸ್ಪಂದಿಸುತ್ತಾರೆ'' ಎಂದೂ ಹೇಳಿದರು. ಆ ಕಾರಣದಿಂದಲೇ ಐದು ಲಕ್ಷಕ್ಕೂ ಮಿಕ್ಕಿದ ಹಣವನ್ನು ದ.ಕ. ಜಿಲ್ಲೆಯಿಂದ ಪರಿಷತ್ತಿಗಾಗಿ ಸಂಗ್ರಹಿಸಲು ಪುನರೂರು ಅವರಿಗೆ ಸಾಧ್ಯವಾಯಿತು! ಅತಿ ಹೆಚ್ಚಿನ ಪ್ರಮಾಣದಲ್ಲಿ ಈ ನಿಧಿಗೆ ಕೊಡುಗೆಯನ್ನು ಸಲ್ಲಿಸಿದ ಜಿಲ್ಲೆ ಎಂದು ದಕ್ಷಿಣ ಕನ್ನಡಕ್ಕೆ ಹೆಸರು ಬಂತು. ಆ ಹೆಸರಿನ ಹಿಂದೆ ಜನತೆಯ ಉದಾರತೆಯನ್ನು ಸದುಪಯೋಗ ಮಾಡಿಕೊಳ್ಳುವ ಶ್ರಮ ಪುನರೂರು ಅವರದೇ.

ಪುನರೂರು ಅವರ ನಿಕಟ ಪರಿಚಯ ನನಗಾಗುವ ಸಂದರ್ಭ ನನಗೆ 1995ರಲ್ಲಿ ಒದಗಿಬಂತು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿಯಲ್ಲಿ ನಡೆಯುವುದೆಂಬ ಅಭಿಪ್ರಾಯ ಬಂದಾಗ, ಮಂಗಳೂರಿನ ಪತ್ರಿಕೆಯೊಂದು ಉಡುಪಿಯ(ಮಣಿಪಾಲದ) ಪೈ ಬಂಧುಗಳು ಕನ್ನಡಕ್ಕೆ ವಿರೋಧಿಗಳೆಂಬ ಅರ್ಥ ಬರುವಂತೆ ಅಭಿಪ್ರಾಯ ಸಂಗ್ರಹ ಮಾಡಿ ಪ್ರಕಟಿಸತೊಡಗಿತು. ಮಣಿಪಾಲದ ಪೈ ಬಂಧುಗಳಿಲ್ಲದೆ ಉಡುಪಿಯಲ್ಲಿ ಸಮ್ಮೇಳನ ಯಶಸ್ವಿಯಾಗುವಂತಿಲ್ಲ. 1960ರಲ್ಲಿ ಅ.ನ.ಕೃ. ಅವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನ ಅಪೂರ್ವ ಯಶಸ್ಸನ್ನು ಕಂಡಿತ್ತು. ಅಂದು ಕಾರ್ಯದರ್ಶಿಯಾಗಿ ದುಡಿದಿದ್ದ ಪ್ರೊ. ಕು. ಶಿ. ಹರಿದಾಸ ಭಟ್ಟರಿಗೂ ಈ ಬಾರಿ ಸಮ್ಮೇಳನ ಮಾಡುವ ಉತ್ಸಾಹವಿತ್ತು. ಆದರೆ ಪತ್ರಿಕೆ ಹೀಗೆ ಉಡುಪಿಯ ಸಮ್ಮೇಳನಕ್ಕೆ ವಿರೋಧಾಭಿಪ್ರಾಯ ಸಂಚಯ ಮಾಡಿದಾಗ ಪೈ ಬಂಧುಗಳೂ ಹರಿದಾಸ ಭಟ್ಟರೂ ಆ ಯೋಜನೆಯನ್ನು ಕೈಬಿಟ್ಟು ಸುಮ್ಮನಾದರು. ಆದರೆ ಉಡುಪಿಯಲ್ಲಿ ಸಮ್ಮೇಳನವೊಂದನ್ನು ಮಾಡಲೇಬೇಕಾದುದು ಜಿಲ್ಲಾ ಸಾಹಿತ್ಯ ಪರಿಷತ್ತಿನ ಮರ್ಯಾದೆಯ ಪ್ರಶ್ನೆಯಾಗಿ

ನಿಂತಿತು. ಪುನರೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಜಿಲ್ಲೆಯ ವಿವಿಧ ಕಡೆಗಳಲ್ಲಿ ಪುನರೂರು ಅವರ ಬೆಂಬಲದಿಂದಲೇ ನಡೆದಿದ್ದವು. ಇದೀಗ ಎಂಟನೆಯ ಜಿಲ್ಲಾ ಸಮ್ಮೇಳನ ನಡೆಯಬೇಕಿತ್ತು. ಪುನರೂರು ಅವರು ಜಿಲ್ಲಾ ಸಮ್ಮೇಳನವನ್ನು ಪಂಥದಂತೆ ಸ್ವೀಕರಿಸಿದರು.

1995ರ ಈ ಸಮ್ಮೇಳನಕ್ಕೆ ಅಂದಿನ ಪರ್ಯಾಯ ಮಠಾಧೀಶ ಶ್ರೀ ಲಕ್ಷ್ಮೀವರ ತೀರ್ಥಸ್ವಾಮಿಗಳು ಆಶ್ರಯ ನೀಡುವ ಭರವಸೆ ನೀಡಿದರು. ಶ್ರೀಕೃಷ್ಣಮಠದ ಪರಿಸರದಲ್ಲೇ ಪೂರ್ವಭಾವೀ ಸಮಾಲೋಚನ ಸಭೆ ನಡೆಯಿತು. ಈ ಸಭೆಗೆ ಬರುವಂತೆ ಪುನರೂರು ಅವರೇ ನನಗೊಂದು ಕಾರ್ಡು ಬರೆದಿದ್ದರು. ನಾನು ಆ ಸಭೆಗೆ ಹೋದಾಗ ಆಕಸ್ಮಿಕವಾಗಿ ನನ್ನ ಹೆಸರು ಅಲ್ಲಿ ಸೂಚಿಸಲ್ಪಟ್ಟು ನಾನು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಬೇಕಾಯಿತು. ನನಗೆ ಇಂತಹ ಹೊಣೆ ವಹಿಸಿ ಅನುಭವವಿಲ್ಲದುದರಿಂದ ನಾನು ನಿರಾಕರಿಸಿದರೂ ಆ ಹೊಣೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಕೊನೆಗೆ ಪುನರೂರು ಅವರೇ ಧೈರ್ಯ ನೀಡಿದರು.

ಉಡುಪಿಯ ಸಾಂಸ್ಕೃತಿಕ ಸಂಘಟನೆಯೊಂದರ ಅಧ್ಯಕ್ಷರೂ ಸದಸ್ಯರೂ ಈ ಸಮಾಲೋಚನ ಸಭೆಯಲ್ಲಿ ಭಾಗವಹಿಸಿದ್ದರು. ಅವರಿಗೆ ಉಡುಪಿ ಮೂಲದವರೇ ಆದ ಕನ್ನಡದ ಜ್ಞಾನಪೀಠ ಪುರಸ್ಕೃತ ಹಿರಿಯ ಸಾಹಿತಿಯನ್ನು ಈ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿಸಬೇಕೆಂಬ ಆಶೆ. ಅವರು ಕಾರ್ಯಕ್ರಮ ಸಮಿತಿಯ ಮುಖ್ಯಸ್ಥರಾಗಿಯೂ ಆ ಸಂಸ್ಥೆಯ ಕಾರ್ಯದರ್ಶಿಯವರು ಸ್ವಾಗತ ಸಮಿತಿಯ ಜತೆ ಕಾರ್ಯದರ್ಶಿಯೂ ಆದರು. ಸಮ್ಮೇಳನಾಧ್ಯಕ್ಷತೆಗೆ ಮೂರು ಹೆಸರುಗಳನ್ನು ಆಯ್ಕೆ ಮಾಡಲಾಯಿತು. ಮೊದಲ ಹೆಸರು ಮೇಲೆ ತಿಳಿಸಿದ ಹಿರಿಯ ಸಾಹಿತಿಗಳದು, ಎರಡನೆಯದು ಉಡುಪಿಯವರೇ ಆಗಿದ್ದರೂ ಮುಂಬಯಿಯಲ್ಲಿದ್ದ ಹಿರಿಯ ಕಾದಂಬರಿಕಾರರದು, ಮೂರನೆಯದು ಉಡುಪಿ ಮೂಲದ ಬೆಂಗಳೂರಲ್ಲಿ ನೆಲೆಸಿರುವ ಮಹಿಳಾ ಸಾಹಿತಿಯದು. ಆದರೆ ಮೊದಲ ಆಯ್ಕೆಯ ಸಾಹಿತಿ ಕಾರಣಾಂತರಗಳಿಂದ ಅಧ್ಯಕ್ಷತೆಗೆ ಒಪ್ಪಲಿಲ್ಲ. ಎರಡನೆಯವರು ಅನಾರೋಗ್ಯದ ಕಾರಣ ನೀಡಿ ಅಧ್ಯಕ್ಷತೆಯ ಆಹ್ವಾನವನ್ನು ನಿರಾಕರಿಸಿದರು. ಮೂರನೆಯ ಆಯ್ಕೆಯಾಗಿದ್ದ ಮಹಿಳಾ ಸಾಹಿತಿ ಅಧ್ಯಕ್ಷರಾದರು.

ಸ್ಥಳೀಯ ಸಂಘಟನೆಯವರಿಗೆ ಸಹಜವಾಗಿಯೇ ಉತ್ಸಾಹ ಕಡಿಮೆಯಾಯಿತು. ಸಮ್ಮೇಳನಕ್ಕೆ ಆರ್ಥಿಕ ಬಲಗಳಿಸುವೆಡೆಯಲ್ಲಿ ಸಹಕರಿಸಲು ಹಿಂದೇಟು ಹೊಡೆದರು. ಆಗ ಸ್ಥಳೀಯ ಸಾಹಿತ್ಯಾಸಕ್ತರು ಮತ್ತು ಸಂಘಟನೆಯ ಅನುಭವಸ್ಥರೂ ತಟಸ್ಥರಾದರು. ಕಾರ್ಯದರ್ಶಿಯಾಗಿದ್ದ ನಾನು ತುಂಬ ಒತ್ತಡಕ್ಕೊಳಗಾದೆ.

ಸ್ಥಳೀಯವಾಗಿ ಧನಸಂಗ್ರಹಕ್ಕೆ ಯಾರೂ ಮುಂದೆ ಬಾರದೆ ಇದ್ದಾಗ ಪುನರೂರು ಅವರೇ ಬಂದು, ಉಡುಪಿಯಲ್ಲಿ ಜನಸಂಪರ್ಕ ಮಾಡಿ ಅಷ್ಟಿಷ್ಟು ಧನಸಂಚಯ ಮಾಡಿದರು. ತಾವೇ ಮುಂಗಡವಾಗಿ ಸ್ವಾಗತ ಸಮಿತಿಯ ಖಾತೆಗೆ ಸಾಕಷ್ಟು ಹಣ ಹಾಕಿದರು.

ಸಮ್ಮೇಳನ ಯಶಸ್ವಿಯಾಯಿತು. ಸ್ವಾಗತ ಸಮಿತಿ ಲೆಕ್ಕಾಚಾರಗಳನ್ನು ಮುಗಿಸಬೇಕಿತ್ತು. ಪುನರೂರು ಅವರು ಎಲ್ಲೆಲ್ಲಿಂದಲೋ ಹಣ ಕೇಳಿ ತಂದು ರಸೀತಿ ಹಾಕಿ ಖಾತೆಗೆ ಹಣ ತುಂಬಿ ಮುಂಗಡ ಹಾಕಿದ್ದ ಹಣವನ್ನು ಹಿಂದೆ ಪಡೆದರು. ಆರ್ಥಿಕ ವಿಷಯಗಳ ಲೆಕ್ಕಾಚಾರಕ್ಕೆ ಲೆಕ್ಕಪತ್ರಗಳಲ್ಲಿ ನುರಿತ ಪ್ರೊಫೆಸರರೊಬ್ಬರಿದ್ದುದರಿಂದ ಒಂದು ಪೈಸೆಯೂ ಅತ್ತಿತ್ತ ಆಗದೆ ಲೆಕ್ಕಾಚಾರ ಸರಿಯಾಗಿ, ನಾನು ನಿಟ್ಟುಸಿರುಬಿಟ್ಟೆ. ಆದರೆ ನಮ್ಮ ಸಮಿತಿಯ ಜೊತೆ ಕಾರ್ಯದರ್ಶಿಗಳು, 'ನನಗೆ ತಿಳಿದಿದ್ದಲ್ಲಿ ಪುನರೂರು

ಅವರಿಗೆ ಹಣ ಹಿಂದೆ ಪಡೆಯಲು ನಾನು ಬಿಡುತ್ತಿದ್ದಿಲ್ಲ'', ಎಂದಾಗ ನನಗೆ ವಿಚಿತ್ರವೆನಿಸಿತು. ಇದನ್ನು ತಿಳಿದ ಪುನರೂರು ಅವರು ನನ್ನಲ್ಲಿ ಹೇಳಿದ ಹಲವು ಲೋಕಾನುಭವದ ಮಾತುಗಳು ಈಗಲೂ ನನಗೆ ನೆನಪಿನಲ್ಲಿವೆ. ಪೂರ್ತಿ ಹಣ ಸಂಗ್ರಹ ಮಾಡಿದವರೇ ಪುನರೂರರು. ಅವರು ಅದನ್ನು ಹಿಂದಕ್ಕೆ ಪಡೆದುಕೊಂಡರು. ಮಿತದ ಅನುಗ್ರಹವೂ ಇದ್ದುದರಿಂದ ಸಾಕಷ್ಟು ಸರಳವಾಗಿ ಸಮ್ಮೇಳನ ಮುಗಿಯಿತು. ನನ್ನ ಅನುಭವಕೋಶವೂ ಶ್ರೀಮಂತವಾಯಿತು. ಪುನರೂರು ಅವರ ಸಾಮರ್ಥ್ಯದ ನಿಕಟ ಪರಿಚಯವಾಯಿತು.

ಈ ಸಂದರ್ಭದಲ್ಲಿಯೂ, ಬೇರೆ ಕೆಲವು ಸಂದರ್ಭಗಳಲ್ಲಿಯೂ ಪುನರೂರು ಅವರೊಂದಿಗೆ ವಾಹನದಲ್ಲಿ ಪ್ರಯಾಣ ಮಾಡುವ ಅವಕಾಶಗಳು ನನಗೊದಗಿದ್ದವು. ಸಾಹಿತ್ಯ ಲೋಕದ ಅನೇಕರು ಮಾಡುವ ವರ್ತನೆಗಳನ್ನು ಅವರು (ಹೆಸರು ಹೇಳದೆ) ತಿಳಿಸುತ್ತಿದ್ದಾಗ ಇಂತಹ ಜನಗಳೂ ಇದ್ದಾರೆಯೇ ಎನಿಸುತ್ತಿತ್ತು.

ಪುನರೂರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗಲೇ ತುಮಕೂರು ಸಾಹಿತ್ಯ ಸಮ್ಮೇಳನದಲ್ಲಿ ಶಿವರಾಮ ಕಾರಂತರ ಬಗೆಗೂ, ಮೂಡಬಿದರೆ ಸಾಹಿತ್ಯ ಸಮ್ಮೇಳನದಲ್ಲಿ ಶಾಸ್ತ್ರ ಸಾಹಿತ್ಯ ವಿಷಯವಾಗಿಯೂ ಮಾತಾಡುವ ಅವಕಾಶಗಳು ನನಗೆ ದೊರೆತವು. ತಮ್ಮ ಅಧಿಕಾರಾವಧಿಯಲ್ಲಿ 'ಕರ್ನಾಟಕ ಕವಿಚರಿತೆ'ಯನ್ನು ಪರಿಷ್ಕರಿಸಿ ಪ್ರಕಟಿಸುವ ಯೋಜನೆಯನ್ನು ಅವರು ಹಾಕಿದ್ದು ಅದರ ಪ್ರಮುಖ ಹೊಣೆಗಾರಿಕೆಯನ್ನು ವಹಿಸುವಂತೆ ನನ್ನಲ್ಲಿ ಪರಿಪರಿಯಾಗಿ ಹೇಳಿದರು. ಆದರೆ ಯೋಜನೆಯ ಅಗಾಧತೆ ಮತ್ತು ಸೀಮಿತವಾದ ಮೂರು ತಿಂಗಳ ಸಮಯಾವಕಾಶದಲ್ಲಿ ಈ ಕಾರ್ಯ ಅಸಾಧ್ಯವೆಂದು ನಾನು ಕೊನೆಗೂ ಒಪ್ಪಿಕೊಳ್ಳಲಿಲ್ಲ. ಇಂತಹ ದೊಡ್ಡ ಯೋಜನೆಯನ್ನು ನನಗೆ ವಹಿಸಬಂದ ಅವರ ವಿಶ್ವಾಸ ಬಹಳ ದೊಡ್ಡದು.

ನಾನು ಕಂಡ ಪುನರೂರು ಕನ್ನಡದ ಕೆಲಸಕ್ಕೆ ಹೆಗಲೊಡ್ಡಿದವರು. ಸಂಸ್ಥೆಗಳಿಗೆ ಅಂತಹ ನಿರ್ಭೀತರು ನೇತಾರರಾಗಿರಬೇಕು. ಪುನರೂರು ಸಾಹಿತ್ಯ ಪರಿಷದಧ್ಯಕ್ಷತೆಯಿಂದ ನಿವೃತ್ತರಾದರೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯರು. ಅವರಿಗೆ ಅಭಿನಂದನೆಗಳು.

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಮ್ಮೇಳನದ ರುಚಿ ಹತ್ತಿಸಿದವರು

□ ಪ್ರೊ॥ ಎಚ್. ಕೃಷ್ಣ ಭಟ್ಟ



ಡಾ. ಎಸ್.ವಿ. ಪರಮೇಶ್ವರ ಭಟ್ಟರು ಅವರ ವಿಭಾಗದ ಅಟೆಂಡರ್‌ನಲ್ಲಿ ಹೀಗೆ ಹೇಳುತ್ತಿದ್ದರಂತೆ- ಅಂಚೆ ಕವರಿಗೆ ಸ್ಟಾಂಪು ಅಂಟಿಸುವಾಗ ನೀನು ಹುಟ್ಟಿದ್ದೇ ಅಂಚೆ ಕವರುಗಳಿಗೆ ಸ್ಟಾಂಪು ಅಂಟಿಸಲು ಎಂದು ಹೆಮ್ಮೆಪಡುತ್ತಾ ಅಚ್ಚುಕಟ್ಟಾಗಿ ಸ್ಟಾಂಪು ಅಂಟಿಸಬೇಕು; ಹಾಗೆಯೇ ಊಟ ಮಾಡುವಾಗ ಜನ್ಮ ಪಡೆದುದೇ ಊಟ ಮಾಡುವುದಕ್ಕಾಗಿ ಎಂದು ಬಗೆದು ಚೆನ್ನಾಗಿ ಊಟ ಮಾಡಬೇಕು. ಅಂದರೆ ಪ್ರತಿಯೊಬ್ಬನೂ ತಾನು ಇಂತಹ ಒಂದು ನಿರ್ದಿಷ್ಟ ಕಾಯಕವನ್ನು ಮಾಡುವುದಕ್ಕಾಗಿಯೇ ಜನ್ಮ ಪಡೆದವನೆಂದು ಭಾವಿಸಿ ಮನಃಪೂರ್ವಕವಾಗಿ ದುಡಿಯಬೇಕೆಂಬುದು ಅದರ ಮಥಿತಾರ್ಥ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಧರ್ಮದರ್ಶಿ ಹರಿಕೃಷ್ಣ ಪುನರೂರು ಹುಟ್ಟಿದ್ದೇ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಲಿಕ್ಕಾಗಿ ಎಂಬಂತೆ ಅವರು ನಮ್ಮ ಪ್ರದೇಶದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದರು.

ಪುನರೂರು ಅವರೇ ಹೇಳುವಂತೆ ಅವರೇನೂ ಕತೆ ಕಾದಂಬರಿಗಳನ್ನು ಬರೆದವರಲ್ಲ, ಕವಿತೆ, ಕಾವ್ಯಗಳನ್ನು

ನಿರ್ದೇಶಕ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ-576102

ಹೊಸೆದವರಲ್ಲ, ವಿದ್ವಾಂಸರ ಕೃತಿಗಳನ್ನು ವಿಮರ್ಶೆಯ ಮೂಸೆಯಲ್ಲಿ ಹಾಕಿ ಜಾಲಾಡಿ ಹೊಳ್ಳು ಜೊಳ್ಳುಗಳನ್ನು ಪ್ರತ್ಯೇಕಿಸಿ ಹೇಳ ತೂಗಿ ನೋಡುವ ಪ್ರವೃತ್ತಿಯವರಲ್ಲ. ಆದರೆ ಉತ್ತಮ ಸಂಘಟಕರು. ಕವಿ, ಸಾಹಿತಿಗಳ ಬಗೆಗೆ ಕಳಕಳಿ, ವಿದ್ವಾಂಸರ ಬಗೆಗೆ ಅಪಾರ ಅಭಿಮಾನ, ಪ್ರೀತಿ, ಕಾಳಜಿ ಇರುವವರು. ಅಂತೆಯೇ ಕಲಾವಿದರಿಗೆ ಸಾಹಿತಿಗಳಿಗೆ ಪ್ರೋತ್ಸಾಹ ನೀಡುವವರು. ಸಾಮಾನ್ಯವಾಗಿ ಪ್ರೋತ್ಸಾಹ ನೀಡುವವರು ಬರೆಹಗಾರರ ಒಂದೆರಡು ಕೃತಿಗಳ ಒಂದೆರಡು ಪ್ರತಿಗಳನ್ನು ಖರೀದಿಸುವುದು ಅಥವಾ ಖರೀದಿಸುವಂತೆ ಇತರರನ್ನು ಪ್ರಚೋದಿಸುವುದು, ಪತ್ರಿಕೆಗಳಿಗೆ ಬರೆಯುವುದು ಇಂಥ ಸಾಮಾನ್ಯ ಮತ್ತು ಆರ್ಥಿಕವಾಗಿ ತಮಗೇನೂ ಲಾಭನಷ್ಟವಿಲ್ಲದ ಕೈಂಕರ್ಯವನ್ನು ಮಾಡುವರು. ಇಂತಹವರೇ ಬಹುಮಂದಿ. ಪುನರೂರು ಇದಕ್ಕೆ ತೀರಾ ಭಿನ್ನ ಮತದವರು.

ಸಾಹಿತಿ-ಕವಿಗಳಿಗೆ, ವಿಮರ್ಶಕ-ಬರೆಹಗಾರರಿಗೆ ಉತ್ತಮ ವೇದಿಕೆಯನ್ನು ನಿರ್ಮಿಸಿ, ಅವರ ಪರಿಚಯದೊಂದಿಗೆ ಅವರ ಸಾರಸ್ವತ ಸೇವೆಯನ್ನು ಜನಸಾಮಾನ್ಯರ ಮನೆ-ಮನಗಳಿಗೆ ತಲುಪಿಸುವ ಕೆಲಸವನ್ನು ಮಾಡಿದವರು ಪುನರೂರು ಅವರು. ವಿದ್ವಾಂಸರನ್ನು ದೂರದೂರದಿಂದ ಎಳೆದು ತಂದು ಸಭೆ ಸಮಾರಂಭಗಳ ಮೂಲಕ ಹಳ್ಳಿಹಳ್ಳಿಗಳ ಜನ ಸಾಮಾನ್ಯರಿಗೂ ಅವರನ್ನು ಪರಿಚಯಿಸಿದರು. ಇಲ್ಲಿ ಈ ಕಾಯಕದಲ್ಲಿ ಅವರ ಕಿಸೆಯಿಂದ ಜಾರಿದ ಮೊತ್ತವೆಷ್ಟೋ! ಅವರೂ ಲೆಕ್ಕವಿಟ್ಟಿರಲಿಕ್ಕಿಲ್ಲ.

ಅವರು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವ ಮೊದಲು ಪರಿಷತ್ತಿನ ಅಸ್ತಿತ್ವವೇ ಜನಸಾಮಾನ್ಯರಿಗೆ ಗೊತ್ತಿರಲಿಲ್ಲ. ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅಷ್ಟಿಷ್ಟು ಅದರ ಪ್ರಚಾರ ನಡೆದಿತ್ತು- ಕೀಕಾನ ರಾಮಚಂದ್ರರ ಕಾರ್ಯದರ್ಶಿತ್ವದಲ್ಲಿ. ಮುಂದೆ ಹರಿಕೃಷ್ಣರು ಅದರ ನೇತಾರರಾದ ನಂತರ ಅವಿಭಕ್ತ ಜಿಲ್ಲೆಯ ಸಂದು-ಗೊಂದುಗಳಲ್ಲಿದ್ದ ಚಿಕ್ಕಪುಟ್ಟ ಸಶಕ್ತ, ಅಶಕ್ತ ಯುವಕರನ್ನು, ಉದಯೋನ್ಮುಖ ಬರೆಹಗಾರರನ್ನು ಬೆನ್ನುತಟ್ಟಿ, ಪ್ರೋತ್ಸಾಹಿಸಿ ಉತ್ತಮ ಸಂಘಟಕರಾಗಿ ರೂಪಿಸಿದರು. ಅವರಿಗೆಲ್ಲಾ ವೇದಿಕೆಯನ್ನು ಕಲ್ಪಿಸಿ ಉತ್ತಮ ಸಾಹಿತಿಗಳೋ, ವಿಮರ್ಶಕರೋ, ಸಹೃದಯರೋ, ಕವಿಗಳೋ ಮುಂತಾದವರನ್ನು ನಿರ್ಮಿಸಿದರು. ಹರಿಕೃಷ್ಣರಲ್ಲಿ ಕಂಡುಬರುವ ದೊಡ್ಡ ಗುಣದೊಂದಿಗೇನೇ ಅವರಲ್ಲಿಯ ಸ್ಪಷ್ಟ ಮಾತು, ಅವರಿಗೆ ಮಿತ್ರರನ್ನು ತಂದುಕೊಟ್ಟಂತೆಯೇ ಶತ್ರುಗಳನ್ನೂ ಕೂಡ ಸೃಷ್ಟಿಸಿತು.

ಒಮ್ಮೆ ಸಮ್ಮೇಳನಕ್ಕೆ ಅಸ್ತು ಎಂದು ಹೇಳಿದ ನಂತರ ಪುನರೂರು ಆ ಸಂಘಟಕರ ಹಿಂದೆ ನಿರಂತರವಿರುತ್ತಿದ್ದರು. ಊರಿನ ಗಣ್ಯಾತಿಗಣ್ಯರನ್ನು ಸಂಪರ್ಕಿಸುವ ವಿಚಾರವಿರಬಹುದು, ಸಮ್ಮೇಳನಕ್ಕೆ ಬೇಕಾಗುವ ಧನಸಂಗ್ರಹವಿರಬಹುದು, ಸ್ಮರಣಸಂಚಿಕೆ ತಯಾರಿ, ಜಾಹೀರಾತು ಸಂಗ್ರಹ ಎಲ್ಲದರಲ್ಲಿಯೂ ತೊಡಗಿಕೊಂಡು ಊರ ಸಮ್ಮೇಳನದ ಸ್ವಯಂಸೇವಕನಾಗಿ ನಮ್ಮೊಡನಿದ್ದು ಸಹಕರಿಸುವ ಅಪೂರ್ವ ವ್ಯಕ್ತಿತ್ವ ಅವರದು.

ಅವರು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಉಡುಪಿಯಲ್ಲೊಂದು ಸಮ್ಮೇಳನವನ್ನು ಪ್ರೊ. ಕು.ಶಿ.ಯವರ ನೇತೃತ್ವದಲ್ಲಿ ಯೋಜಿಸಬೇಕೆಂಬ ಉತ್ಸಾಹವಿತ್ತು. ಕು.ಶಿ.ಯವರನ್ನು ಕೇಳಿದಾಗ ನನ್ನನ್ನು ಬೊಟ್ಟು ಮಾಡಿದರು. ನಾನು ಉತ್ಸಾಹ ತೋರದೆ ಇದ್ದುದರಿಂದ ಪುನರೂರರಿಗೆ ನಿರುತ್ಸಾಹವಾಯಿತು. ಮಣಿಪಾಲ ಅಕಾಡೆಮಿಯವರ ನೆರವಿನೊಂದಿಗೆ

ರಾಷ್ಟ್ರಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉಡುಪಿಯಲ್ಲಿ ಹಮ್ಮಿಕೊಳ್ಳಬೇಕೆಂದು ಕು.ಶಿ. ಹರಿದಾಸ ಭಟ್ಟರು ರಂಗೋಲಿ ಬರೆಯಬೇಕೆಂದು ಇನ್ನೇನು ಅಡಿ ಇಡುವಾಗಲೇ ಅಂದಿನ ಮಂಗಳೂರಿನ ಪತ್ರಿಕೆಯೊಂದು ಅಪಸ್ವರಿಯನ್ನಾಡಿ, ಮಾಧ್ಯಮದವರು ರಾಡಿ ಎಬ್ಬಿಸಿದಾಗ ಸಮ್ಮೇಳನದ ಬಗ್ಗೆಯೇ ಜುಗುಪ್ಸೆ ತಳೆದಿದ್ದರು. ಆದುದರಿಂದಲೇ ಪುನರೂರು ಅವರು ಕು.ಶಿ. ಯವರನ್ನು ಸಂಪರ್ಕಿಸಿದಾಗ ನನ್ನನ್ನು ತೋರಿಸಿದ್ದರು. ನನ್ನ ಮನಸ್ಸಿನಲ್ಲಿಯೂ ಆ ಪತ್ರಿಕೆ ಹೊರಡಿಸಿದ್ದ ಅಪಸ್ವರ ಅಳಿಯದೇ ಇದ್ದುದರಿಂದ ಮನಸ್ಸಿಲ್ಲದ ಮನಸ್ಸಿನಿಂದ ಒಲ್ಲೆ ಎಂದೆ. ಹೀಗೆ ಹರಿಕೃಷ್ಣರಿಗೆ ನೋವುಂಟು ಮಾಡಿದ ಘಟನೆ ನನಗೂ ಒಂದು ನೋವಿನ ಪ್ರಸಂಗವಾಗಿದೆ.


☐

ಭಾಗ: ಒಂದು

ಪರಿಷತ್ತಿನ ಪೋಷಕಶಕ್ತಿ

ಸಮ್ಮೇಳನಗಳ ಹಿಂದಿನ ಸ್ಫೂರ್ತಿ

☐ ಅಂಬಾತನಯ ಮುದ್ರಾಡಿ



ಧರ್ಮದರ್ಶಿ - ಲಯನ್ಸ್ ಗವರ್ನರ್ ಶ್ರೀ ಹರಿಕೃಷ್ಣ ಪುನರೂರರ ಬಗೆಗೆ ಕೇಳಿದ್ದೆ; ಪತ್ರಿಕೆಗಳಲ್ಲಿ ಸುದ್ದಿ ಓದಿದ್ದೆ. ಒಬ್ಬ ಧಾರ್ಮಿಕ ನೇತಾರರಾಗಿ, ಸಮಾಜ ಸೇವಕರಾಗಿ ಸುದ್ದಿಯಲ್ಲಿದ್ದ ಪುನರೂರು ಅವರನ್ನು ಕಾಣಲು ಬಯಸಿದ್ದೆ. ಹೇಗೆ ಕಾಣಬೇಕು; ಏಕಾಗಿ ಕಾಣಬೇಕು ಎಂದು ಯೋಚಿಸುತ್ತಿದ್ದೆ. ಅನಿರೀಕ್ಷಿತವಾಗಿ ಒಂದು ದಿನ ಅವರಿಂದ ಒಂದು ಪತ್ರ ಬಂತು. "ನಿಮ್ಮ ಸಾಹಿತ್ಯ ಸೇವೆಯನ್ನು ಗಮನಿಸಿ ಕಾರ್ಕಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಘಟಕದ ಅಧ್ಯಕ್ಷನನ್ನಾಗಿ ನಿಯೋಜಿಸಿದ್ದೇನೆ. ನಮ್ಮೊಂದಿಗೆ ಬನ್ನಿ; ಒಟ್ಟಾಗಿ ನಾವು ಸಾಹಿತ್ಯ ಸೇವೆ ಮಾಡೋಣ."

ನಾನು ಪುನರೂರು ಅವರನ್ನು ಕಂಡವನಲ್ಲ. ಅವರೂ ನನ್ನನ್ನು ಕಂಡ ನೆನಪಿಲ್ಲ. ಅವರನ್ನು ನಾನು ಕೇಳಿ ತಿಳಿದಂತೆ- ಅವರೂ ನನ್ನ ಬಗೆಗೆ ಕೇಳಿ ತಿಳಿದಿರಬಹುದು. ನಾನಾದರೋ-ಸ್ವಾಂತ ಸುಖಾಯ ಅಷ್ಟಿಷ್ಟು ಸಾಹಿತ್ಯ ಕೈಂಕರ್ಯ ಮಾಡುತ್ತಿರುವವನು. ತಾಲೂಕಿನಲ್ಲಿ ನನಗಿಂತ ಹೆಚ್ಚು ದುಡಿದವರು, ದುಡಿಯುತ್ತಿರುವವರು ಇದ್ದಾರೆ. ಸಂಕೋಚದಿಂದಲೇ ಪುನರೂರು ಅವರನ್ನು ಕಂಡೆ. ವಿನಯದಿಂದಲೇ 'ನನ್ನಿಂದ ಸಾಧ್ಯವಾದೀತೆ?' ಎಂಬ ಪ್ರಶ್ನೆಯನ್ನು ಮುಂದಿಟ್ಟೆ. "ನಿಮ್ಮ ಬಗೆಗೆ ಕೇಳಿದ್ದೇನೆ. ನಿಮ್ಮಿಂದ ಸಾಧ್ಯ. ಅಂತಹ ಸಂದರ್ಭದಲ್ಲಿ ನಾನಿದ್ದೇನೆ. ಒಪ್ಪಿಕೊಳ್ಳಿ..." ಎಂದರು.

ಮುದ್ರಾಡಿ–576 145, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಆ ನಾಟ- ಆ ಮೇಲು ಮಾತು ಒಪ್ಪಿಸಲು ಸಾಧ್ಯವಾಗಲಿಲ್ಲ. ಅಂದಿನಿಂದ ಏಳು ವರ್ಷಗಳ ಕಾಲ ಪುನರೂರರ ಜೊತೆಯಲ್ಲಿ ನಾಡು-ನುಡಿಯ ಅಳಿಲಸೇವೆ ಸಲ್ಲಿಸಿದ ಸಂತೃಪ್ತಿ ನನಗಿದೆ. ಈ ಏಳು ವರ್ಷಗಳಲ್ಲಿ ಪುನರೂರರಲ್ಲಿ ನಾನ ಕಂಡ ಅನುಕರಣೀಯವೂ, ಅನುಸರಣೀಯವೂ ಆದ ಗುಣವನ್ನು ಎತ್ತಿ ಹೇಳುತ್ತಿದ್ದೇನೆ.

ಎಷ್ಟೋ ವೇಳೆ- ನಾವು ಯಾರ ಬಗೆಗೆ ಏನನ್ನು ಕೇಳುತ್ತೇವೋ, ಅವರನ್ನು ಕಂಡಾಗ, ಒಡನಾಡಿಯಾದಾಗ ಹಾಗಿರುವುದಿಲ್ಲ. ವ್ಯಕ್ತಿಯ ವ್ಯಕ್ತಿತ್ವವನ್ನು ಜೊತೆಗಿದ್ದೇ ತಿಳಿಯಬೇಕು. ಆಗ ಹೊಗಳಿಕೆ- ಹೊಗಳಿಕೆಯಾಗಿಯೇ ಇರುತ್ತದೆ. ತೆಗಳಿಕೆ-ತೆಗಳಿಕೆಯಾಗಿಯೇ ಇರುತ್ತದೆ. ಹೊಗಳಿಕೆ-ತೆಗಳಿಕೆಗಳೆರಡೂ ಸಲ್ಲದೆಂದು ತಿಳಿಯುತ್ತದೆ. ಆದರೆ ಹರಿಕೃಷ್ಣ ಪುನರೂರರು ನುಡಿಯ ನೇರಕೆ ನಡೆವ ಅಪೂರ್ವ ವ್ಯಕ್ತಿಯಾಗಿ ಕಂಡರು; ಇಂದಿಗೂ ಹಾಗೆಯೇ ಇದ್ದಾರೆ.

ಹೌದು; ನಾನು ಅಧ್ಯಕ್ಷನಾಗಿದ್ದ ಏಳು ವರ್ಷಗಳಲ್ಲಿ ಆರು ತಾಲೂಕು ಸಮ್ಮೇಳನಗಳಾದವು. ಇದರ ಪ್ರೇರಕಶಕ್ತಿ ಪುನರೂರರು. ಬೆಂಬಲ ಅನೇಕ ಸಹೃದಯರದ್ದು. ಈ ಸಂದರ್ಭಗಳಲ್ಲಿ ನಡೆದ ಒಂದೆರಡು ಘಟನೆಗಳನ್ನು ನೆನಪಿಸುತ್ತಿದ್ದೇನೆ. ಮೊದಲನೆಯ ತಾಲೂಕು ಸಮ್ಮೇಳನ. ಸಮ್ಮೇಳನ ಸಮಿತಿ ರಚನೆಯಾಗಿತ್ತು. ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ಪದಾಧಿಕಾರಿಗಳು ಬೇರೆ ಬೇರೆ ಆಮಂತ್ರಣ ಪತ್ರಿಕೆಯಲ್ಲಿ ತಾಲೂಕು ಅಧ್ಯಕ್ಷನಾಗಿ ನನ್ನ ಹೆಸರಿತ್ತು. ಸಮ್ಮೇಳನದ ದಿನ ಕಾರ್ಯಕ್ರಮ ನಿರೂಪಕರು (ಹೆಸರು ಬೇಡ) ಎಲ್ಲರನ್ನು ವೇದಿಕೆಗೆ ಕರೆದರು. ನಾನು ಸಭೆಯಲ್ಲಿ ಮುಂದಿನ ಸಾಲಿನಲ್ಲಿ ಕೆಳಗೆ ಕುಳಿತಿದ್ದೆ. ಪುನರೂರರು ನನ್ನನ್ನು ವೇದಿಕೆಗೆ ಕರೆಯಲು ಹೇಳಿದರು. ನಿರೂಪಕರು 'ಅವರು ಅಗತ್ಯವಿಲ್ಲ' ಎಂದರು. ಪುನರೂರರು 'ಅದಾಗದು' ಎಂದು ತಾನೇ ಕರೆದು ಕುಳ್ಳಿರಿಸಿದರು.

ಇನ್ನೊಂದು ಘಟನೆ- ಅದೇ ಸಮ್ಮೇಳನದಲ್ಲಿ ನಡೆಯಿತು. ಓರ್ವ ಸಾಹಿತ್ಯಜ್ಞರಾಗಿ ಭಾಗವಹಿಸಿದ್ದ ಆಸ್ಥಾನ ಪಂಡಿತ ಶ್ರೀ ಶಿಶುಪಾಲ ಶಾಸ್ತ್ರಿಯವರ ಪರಿಚಯ ಆಗತಾನೇ ಪುನರೂರರಿಗಾಯಿತು. ಆ ಕ್ಷಣವೇ ನನ್ನನ್ನು ಕರೆದು ಹೇಳಿದರು. ''ಮುಂದಿನ ಸಮ್ಮೇಳನಕ್ಕೆ ಇವರನ್ನೇ ಅಧ್ಯಕ್ಷನ್ನಾಗಿ ಮಾಡಬೇಕು...'' ಸರಿ; ಎರಡನೆಯ ಸಮ್ಮೇಳನಕ್ಕೆ ಶಾಸ್ತ್ರಿಯವರೇ ಅಧ್ಯಕ್ಷರಾದರು. ಪುನರೂರರಿಗಾದ ಸಂತೋಷ ಹೇಳತೀರದು.

ಮೂರನೆಯ ಸಮ್ಮೇಳನ ಹೆಬ್ರಿಯಲ್ಲಿ. ಕಾರ್ಯನಿಮಿತ್ತ ಪುನರೂರರನ್ನು ಕಂಡೆ. 'ನಿಮ್ಮಲ್ಲಿಯ ಕಾರ್ಯಕರ್ತರು ಬಂದಿದ್ದಾರೆ. ಅವರಿಗೆ ನೀವೇ ಸಮ್ಮೇಳನಾಧ್ಯಕ್ಷರಾಗಬೇಕೆಂಬ ಆಸೆಯಿದೆ. ಬೇಡವೆನ್ನದಿರಿ. ಈಗ ಬೇಡವೆಂದರೆ ಮುಂದೆ ನಿಮಗೆ ಅವಕಾಶವೇ ಸಿಗಲಾರದು' ಎಂದರು. 'ನಾನೇ ತಾಲೂಕು ಅಧ್ಯಕ್ಷನಾಗಿರುತ್ತ ಸಮ್ಮೇಳನಾಧ್ಯಕ್ಷನಾಗುವುದು ಸರಿಯಲ್ಲ' ಎಂದೆ. 'ನಿಮ್ಮಲ್ಲಿ ಅರ್ಹತೆಯಿದೆ. ತಾಲೂಕು ಅಧ್ಯಕ್ಷ- ಸಮ್ಮೇಳನದ ಅಧ್ಯಕ್ಷನಾಗಬಾರದೆಂದಿಲ್ಲ. ಯಾರಾದರೂ ಪ್ರಶ್ನಿಸಿದರೆ ನಾನು ಉತ್ತರಿಸುತ್ತೇನೆ' ಎಂದರು. ಮರುಮಾತಾಡದೆ ಒಪ್ಪಿದೆ. ಕಾರ್ಯಕರ್ತರು ಪುನರೂರರನ್ನು ಕಂಡುದು ಮರಳಿ ಬಂದಾಗ ತಿಳಿಯಿತು.

ನಾಲ್ಕನೆಯ ಸಮ್ಮೇಳನ ಬೇಲಾಡಿಯಲ್ಲಿ. ಆಗಬಾರದ ಘಟನೆಯೊಂದು ನಡೆಯಿತು. ಮೆರವಣಿಗೆ ಸಾಗುತ್ತ ಜೀಪು ನಿಯಂತ್ರಣ ತಪ್ಪಿ ಕೆಲವರನ್ನು ಕೆಡಹಿತು. ಪೆಟ್ಟಾಯಿತು. ಪುನರೂರರೂ ಬಿದ್ದರು. ಪೆಟ್ಟಾದವರನ್ನೆಲ್ಲ ಆಸ್ಪತ್ರೆಗೆ ಸೇರಿಸಿದರು. ಖರ್ಚನ್ನೆಲ್ಲ ತಾನೇ ನೋಡಿಕೊಂಡರು. ಸಮ್ಮೇಳನ ನಡೆಯಿತು. ಪುಣ್ಯವಶಾತ್ ಜೀವಹಾನಿ ಆಗಲಿಲ್ಲ. ಈ ಸಂದರ್ಭ ಕಾರ್ಯಕರ್ತರಿಗೆ ಸಮ್ಮೇಳನ ಮುಂದುವರಿಸಲು ಹೇಳಿ, ಗಾಯಾಳುಗಳ ಜತೆಗಿದ್ದವರು ಪುನರೂರರು.

ಅವರು ಗುಣಗ್ರಾಹಿ. ಒಳ್ಳೆಯದನ್ನು, ಒಳ್ಳೆಯವರನ್ನು ಎಲ್ಲಿದ್ದರೂ ಗುರುತಿಸಬಲ್ಲರು;

ಗೌರವಿಸಬಲ್ಲರು. ಅವರಲ್ಲಿ ಒಳ್ಳೆಯದನ್ನು ಕಾಣುವ ಕಣ್ಣಿದೆ. ಒಳ್ಳೆಯದನ್ನು ಕೇಳುವ ಕಿವಿಯಿದೆ. ಒಳ್ಳೆಯದನ್ನು ಮಾಡುವ ಛಲವಿದೆ. ಒಳ್ಳೆಯದನ್ನು ಮಾಡಹೋಗಿ, ಅನೇಕ ವೇಳೆ ಕೆಟ್ಟದ್ದನ್ನು ಕೇಳಿದ್ದಾರೆ. ಅವರೂ ಅವರಿಗೆ ಬೇಸರವಿಲ್ಲ. ಒಮ್ಮೆ ಒಬ್ಬ ಲೇಖಕರನ್ನು ಯಾರದೋ ಮಾತಿಗಾಗಿ ಪೋಲೀಸರು ಠಾಣೆಯೊಳಗೆ ಇಟ್ಟರು. ಅಲ್ಲಿಯ ಸತ್ಕಾರ ಆ ಲೇಖಕರಿಗೆ ಸಿಗುವುದಿತ್ತು. ಸಕಾಲಕ್ಕೆ ಪುನರೂರರು ಅಲ್ಲಿಗೆ ತೆರಳಿದರು. ಅವರನ್ನು ಬಿಡಿಸಿದರು. ಏನಾಗದಂತೆ ನೋಡಿಕೊಂಡರು. ಇದರಿಂದಾಗಿ ಪುನರೂರರಿಗೆ ಸಿಕ್ಕಿದ್ದು ಇನ್ನೊಬ್ಬರಿಂದ ಅಪವಾದ! ಆದರೆ ಆ ಲೇಖಕರೇ ಮತ್ತೊಮ್ಮೆ ಪುನರೂರರಿಗೆ ಕೃತಘ್ನನಂತೆ ನಡೆದುಕೊಂಡರು. ಪುನರೂರರಿಗೆ ಕಂಡಿತು- ಬರೆಹಗಾರರ ಬದುಕಿಗೂ ಬರೆಹಕ್ಕೂ ಇರುವ ಅಂತರ. ಆದರೆ ಪುನರೂರರು ಯಾವುದನ್ನೂ ಬಹುಕಾಲ ತಲೆಗೆ ಹಚ್ಚಿಕೊಳ್ಳುವವರಲ್ಲ. ಮತ್ತೊಮ್ಮೆ ಆ ಮಹನೀಯರನ್ನೇ ದೊಡ್ಡ ಕೆಲಸದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. 'ಇದೇನು ಪುನರೂರರೆ?' ಎಂದಾಗ- 'ಅವರು ಮಾಡಿದ್ದು ಅವರಿಗೇ ತಿಳಿಯಲಿ' ಎಂದರು. ಪುನರೂರರು ಎಡೆಬಿಡದೆ ಇಷ್ಟೊಂದು ಕೆಲಸಗಳನ್ನು ಮಾಡುತ್ತಿರುವುದು ತನ್ನ ಹೃದಯ ವೈಶಾಲ್ಯದಿಂದ.


''ಸತ್ಯವಾದಿ ಲೋಕ ವಿರೋಧಿ'' ಎಂಬ ಮಾತೊಂದಿದೆ. ಪುನರೂರರನ್ನು ಪ್ರೀತಿಸುವ, ಆದರಿಸುವ, ಗೌರವಿಸುವ ಜನರಿರುವಂತೆಯೇ ಟೀಕಿಸುವ ಜನರೂ ಇಲ್ಲದಿಲ್ಲ. ಟೀಕಿಸುವವರು ಹಿಂದಿನಿಂದ ಟೀಕಿಸುತ್ತಾರೆಯೇ ವಿನಾ, ಪುನರೂರರ ಎದುರಿಗೇ ಟೀಕಿಸುವುದು ಅವರಿಗೂ ಸಾಧ್ಯವಾಗುತ್ತಿಲ್ಲ. ಪುನರೂರರು ಧರ್ಮದರ್ಶಿಗಳಾಗಿ ಅನೇಕ ಧರ್ಮದರ್ಶಿಗಳ, ಆಡಳಿತದಾರರ, ಅರ್ಚಕರ ಟೀಕೆಗೆ ಒಳಗಾದರು. ಅವಕಾಶ ವಂಚಿತರಾದರು. ಬ್ಯಾಂಕಿನ ನಿರ್ದೇಶಕರಾಗಿ ದುಡಿಯುತ್ತಿದ್ದರು. ದುಡಿಯುತ್ತಿಯೇ ದೂರ ಸರಿದರು. ಯಾರೇ ಇರಲಿ, ಏನೇ ಆಗಿರಲಿ, ಪುನರೂರರು ಅನ್ಯಾಯವನ್ನು ಸಹಿಸುವುದಿಲ್ಲ; ಪ್ರತಿಭಟನೆಗೆ ಹೆದರುವುದಿಲ್ಲ. ಈ ಕಾಲದಲ್ಲೂ ಇಂತಹವರು ಇದ್ದಾರಲ್ಲ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಹಳ್ಳಿ ಹಳ್ಳಿಯಲ್ಲಿ ಕನ್ನಡದ ತೇರು

☐ ವಿಠಲ ಬೇಲಾಡಿ



"ಏನು ಬೇಲಾಡಿಯವರು? ಹೇಗಿದ್ದೀರಿ? ಬೇಲಾಡಿಯಲ್ಲಿ ಯಾವಾಗ ತಾಲೂಕು ಸಾಹಿತ್ಯ ಸಮ್ಮೇಳನ? ಏನಾದರೂ ನಿರ್ಧಾರ ಮಾಡಿದಿರಾ? ಕೂಡಲೇ ಒಂದು ಮೀಟಿಂಗ್ ಕರೆಯಿರಿ!"

1995ರಲ್ಲಿ ಜಿಲ್ಲಾಧ್ಯಕ್ಷರಾಗಿದ್ದಾಗ ಆದ ಒಂದು ಭೇಟಿಯಲ್ಲಿ ಹರಿಕೃಷ್ಣ ಪುನರೂರು ಹೇಳಿದ ಮಾತುಗಳಿವು. ಅವರ ಈ ಅತ್ಯಂತ ಆತ್ಮೀಯ ಭಾವದ ಕನ್ನಡ ಸಾಹಿತ್ಯ ಪ್ರೇಮದ ನುಡಿಗಳನ್ನು ಆಲಿಸಿದಾಗ ಆಶ್ಚರ್ಯವಾಗದಿರಲಿಲ್ಲ. ಬೇಲಾಡಿ ಶಾಲೆಯಲ್ಲಿ ಅಲ್ಲೇ ಕಚೇರಿಯನ್ನು ಹೊಂದಿದ್ದ ಕಾಂತಾವರ ಕನ್ನಡ ಸಂಘದಲ್ಲಿ ಅವರಿಗಿದ್ದ ಒಲವಿಗಾಗಿ ಮನದಲ್ಲಿಯೇ ಆನಂದ ಅರಳುತ್ತಿದ್ದರೂ "ಸರ್! ಕಳೆದ ವರ್ಷವಷ್ಟೇ ಕಾಂತಾವರದಲ್ಲಿ ತಾಲೂಕು ಸಮ್ಮೇಳನ ಆಗಿದೆಯಲ್ಲ! ಬೇಲಾಡಿ ಕಾಂತಾವರ ಗ್ರಾಮದ ಒಂದು ಭಾಗವೇ ತಾನೆ? ಈಗ ಬೇಲಾಡಿಯಲ್ಲಿ ಮತ್ತೆ ಸಮ್ಮೇಳನ!" ಎಂದು ಮುಜುಗರದಿಂದ ನಾನು ಹೇಳಿದರೆ ಅವರು ಮುಂದೆ ಮಾತನಾಡಲು ಅವಕಾಶವನ್ನೇ ಕೊಡದೆ, 'ಶೆಟ್ರೇ, ಅದೆಲ್ಲ ಸರಿ. ಆದರೆ ಬೇಲಾಡಿ ಕಳೆದ ನಾಲ್ಕು ದಶಕಗಳಿಂದ ಪ್ರತಿವರ್ಷ ದಸರಾ ನಾಡಹಬ್ಬದ ಸಂದರ್ಭದಲ್ಲಿ ನಾಡಹಬ್ಬ ಆಚರಣೆ ಹಮ್ಮಿಕೊಂಡು ಪ್ರತೀ ವರ್ಷ ನಾಲ್ಕೈದು ದಿವಸಗಳ ಕಾಲ ಸಾಹಿತ್ಯ-ಕಲಾ ಕಾರ್ಯಕ್ರಮವನ್ನು ಅದ್ದೂರಿಯಾಗಿ ಸದ್ದು-ಗದ್ದಲವಿಲ್ಲದೆ

ಎಂ.ವಿಠಲ ಶೆಟ್ಟಿ 'ಪ್ರಶಸ್ತಿ', ಬೇಲಾಡಿ-574129, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ನಡೆಸಿಕೊಂಡು ಬಂದಿರುವ ಪುಣ್ಯ ನೆಲ! ಅಲ್ಲಿ ಮತ್ತೆ ಸಮ್ಮೇಳನ ಬೇಡ ಎಂದರೆ ಹೇಗೆ? ಬೇಲಾಡಿಯಲ್ಲಿ ಒಂದು ತಾಲೂಕು ಸಾಹಿತ್ಯ ಸಮ್ಮೇಳನ ಆಗಲೇಬೇಕು. ನಿಮಗೇನು ಸಹಕಾರ ಬೇಕು, ನಾನಿದ್ದೇನೆ! ಬೇಲಾಡಿ ಸಾಹಿತ್ಯ ಸರಸ್ವತಿ ಪೂಜೆಯ ಪವಿತ್ರ ತಾಣ; ಕಾಂತಾವರ ಕನ್ನಡ ಸಂಘದ ಬೇರು. ಏನೂ ಹೆದರಬೇಡಿ, ಅತ್ಯಂತ ಶಿಸ್ತಿನಿಂದ ಎಲ್ಲರೂ ತಲೆದೂಗುವಂತೆ ಮಾಡೋಣ. ಇಂದೇ ನಿರ್ಧಾರ ಮಾಡಿ'' ಎಂದಾಗ ಮುಂದೆ ಉತ್ತರಿಸಲಾಗದೆ ಮುಂದಿನವಾರವೇ ಸಮ್ಮೇಳನ ಜರಗಿಸುವ ಬಗೆಗೆ ವಿಚಾರ ವಿನಿಮಯ ಸಭೆಯ ಏರ್ಪಾಡಾಯಿತು. ವಿವಿಧ ಸಮಿತಿಗಳ ರಚನೆಯೊಂದಿಗೆ ಕಾರ್ಯಪ್ರವೃತ್ತವಾಯಿತು. 1996ರಲ್ಲಿ ನಿರೀಕ್ಷೆಯಂತೆ ಸಮ್ಮೇಳನವೂ ನಡೆಯಿತು.

ಈ ಘಟನೆ ಮನದಾಳದಲ್ಲಿ ಸ್ಥಿರವಾಗಿ ಉಳಿದಿದೆ. ಅದನ್ನು ಮರೆಯುವುದು ಅಸಾಧ್ಯ. ಕನ್ನಡಮ್ಮನ ಸೇವೆ, ಸಾಹಿತ್ಯ ಸರಸ್ವತಿಯ ಆರಾಧನೆ, ಕಲೋಪಾಸನೆಯ ಆಸಕ್ತಿ-ಇವು ಪುನರೂರು ಅವರ ನರ ನಾಡಿಗಳಲ್ಲಿ ಹಾಸು ಹೊಕ್ಕಾಗಿವೆ. ಅವರನ್ನು ನಾವು ಗೌರವಿಸಬೇಕಾದ್ದು ಈ ಗುಣಗಳಿಗಾಗಿ. ಕನ್ನಡವೆಂದರೆ ಅವರ ಮನ ಮುದಗೊಳ್ಳುವ ರೀತಿ, ಕನ್ನಡ ಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡ ಬಗೆ, ಅವರಿಗೆ ಅವರೇ ಸರಿ. ಆ ಭಾಷಾಭಿಮಾನ, ಸಂಘಟನೆಯಲ್ಲಿರುವ ವಿಶಿಷ್ಟ ಗುಣಸ್ವಭಾವ, ಹೃದಯ ಸಂಪನ್ನತೆ, ತುಂಬಿ ತುಳುಕುತ್ತಿರುವ ಉತ್ಸಾಹ ಇವುಗಳನ್ನು ಒಟ್ಟಾರೆಯಾಗಿ ನಾವು ಇತರರಲ್ಲಿ ಕಾಣುವುದು ಅಸಾಧ್ಯ. ಹಾಗಾಗಿಯೇ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಅವರು ಆಯ್ಕೆಯಾಗುವ ಮೊದಲೇ ಬಹು ಉನ್ನತ ಮಟ್ಟದ ಸಂಘಟಕರಾಗಿ ಅವರು ಜಿಲ್ಲಾದ್ಯಂತ ಆತ್ಮೀಯರಾದರು. ಅಧ್ಯಕ್ಷರಾದ ಬಳಿಕ ಪರಿಷತ್ತಿಗೆ ಹೊಸ ಚೈತನ್ಯವನ್ನು ನೀಡಿ, ಹಳೆಯ ಕೊಳೆಯನ್ನು ತೊಳೆಯುವುದರಲ್ಲಿ ಸಫಲರಾಗುವುದರೊಂದಿಗೆ ಅವರು ಜನಸಾಮಾನ್ಯರಲ್ಲಿಯೂ ನಿಜವಾದ ಕನ್ನಡದ ಮರೆಯಲಾರದ ಸೇನಾನಿಯಾಗಿ ಸರ್ವಮಾನ್ಯರಾದರು. ಅವರಿಂದಾಗಿ ರಾಜ್ಯ ಸಮ್ಮೇಳನಕ್ಕೆ ಹೊಸ ಆಯಾಮ ಲಭಿಸಿತು. ಅವರಿಂದಾಗಿ ಜಿಲ್ಲಾ ಸಮ್ಮೇಳನ ಜನಪ್ರಿಯವಾಯಿತು. ತಾಲೂಕು ಸಮ್ಮೇಳನ ಜನರನ್ನು ಹತ್ತಿರ ತಂದು ಮನ ಬೆಳಗಿಸಿತು. ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಇಟ್ಟು ಹೋಬಳಿ ಗ್ರಾಮಮಟ್ಟದಲ್ಲಿ, ಮನೆ ಮನೆಗಳಲ್ಲಿ ಶ್ರೀ ಶಾರದೆಯ ಸೇವೆಗೆ ವಿನೂತನ ರೀತಿಯ ಕಾರ್ಯಕ್ರಮ ರೂಪಿಸಿ, ಕೃತಿಗಿಳಿಸಿದ ಅವರ ಕ್ರಿಯಾಶೀಲ ವ್ಯಕ್ತಿತ್ವವನ್ನು, ಆ ವ್ಯಕ್ತಿತ್ವ ತೋರಿದ ಸಾಧನೆಯನ್ನು ಜನ ಮುಕ್ತ ಕಂಠದಿಂದ ಶ್ಲಾಘಿಸಿದರು. ಯಾರೂ ಗಮನಿಸದಿದ್ದ ತೆರೆಯ ಮರೆಯಲ್ಲಿದ್ದ ನೂರಾರು ಸಾಹಿತಿ ಕಲಾವಿದರ ಸನ್ಮಾನ ಪುರಸ್ಕಾರ ಕಾರ್ಯಕ್ರಮಗಳು ಪರಿಷತ್ತಿನ ಘನತೆಯನ್ನು ಇಮ್ಮಡಿಸಿದುವು. ನಿಂತಲ್ಲಿ ನಿಲ್ಲದೆ ನಾಡಿನಾದ್ಯಂತ ಸಂಚರಿಸಿ, ಕೈಯಿಂದಲೇ ಹೆಚ್ಚಿನ ವೆಚ್ಚವನ್ನೂ ಭರಿಸಿಕೊಂಡು ಜನರೊಂದಿಗೆ ಬೆರೆಯುವ ಅವರ ಕಾರ್ಯವೈಖರಿ ನಿರಂತರ ಮೆಲುಕು ಹಾಕಬೇಕಾದುದು. ''ನಾನು ಸಾಹಿತಿಯಲ್ಲ, ಸಾಹಿತ್ಯ ಪರಿಚಾರಕ. ನನ್ನದೇನಿದ್ದರೂ ಕನ್ನಡಮ್ಮನ ಕಿರು ಸೇವೆ ಅಷ್ಟೆ! ಎಲ್ಲಾ ಶಾರದೆಯ ಪ್ರೇರಣೆ; ಆ ಪ್ರೇರಣೆಯಾಗಿ ನಿಮ್ಮ ಕಾರ್ಯಾಚರಣೆ! ಸಾಹಿತ್ಯಾಭಿಮಾನಿಯಾದ ನನ್ನ ಈ ತೇರಿಗೆ ವಿರಾಮವಿಲ್ಲ, ಅಧ್ಯಕ್ಷಗಾದಿ ಮುಗಿದರೂ ಅದು ಸಾಗುತ್ತಲೇ ಇರುತ್ತದೆ'' ಎನ್ನುವ ಅವರ ಸಂತೃಪ್ತಿ-ಧನ್ಯತಾಭಾವದ ಹೃದಯತುಂಬಿದ ನುಡಿಗಳು ಅವರಲ್ಲಿ ಸಹಜವಾಗಿ ವ್ಯಕ್ತವಾಗುತ್ತಿತ್ತು.

ಪುನರೂರು ಅವರ ಸೇವಾವಧಿಯಲ್ಲಿ ನೂರಾರು ಪುಸ್ತಕಗಳು ಪ್ರಕಟಗೊಂಡುವು. ಸಾವಿರಾರು ಪುಸ್ತಕಗಳನ್ನು ಜನ ಕೊಂಡು ಓದಿದರು. ಲಕ್ಷಗಟ್ಟಲೆಯ ವ್ಯಾಪಾರವಾಯಿತು. ಲೇಖಕರಿಗೂ ಸಂತಸವಾಯಿತು. ಪ್ರಕಾಶಕರಿಗೂ ಸ್ಫೂರ್ತಿಯಾಯಿತು. ಈ ಉತ್ಸಾಹ, ಅನೇಕರಲ್ಲಿ ಹೊಸ ಆಸೆಗಳನ್ನು ಅಂಕುರಿಸುವಂತೆ ಮಾಡಿತು. ಅನೇಕರು ಮೂಗಿಗೆ ಬೆರಳಿರಿಸಿದರು. ಸಮ್ಮೇಳನ ಎಂದರೆ ಅದೊಂದು

ಜಾತ್ರೆಯೆಂದು ಕೆಲವರು ಲಘುವಾಗಿ ಮಾತನಾಡಿದರೆ ಅದಕ್ಕೆ ಅವರ ಪ್ರತಿಕ್ರಿಯೆ- ''ಹೌದು, ಕನ್ನಡ ತಾಯಿಯನ್ನು ಅವರವರ ಭಾವಕ್ಕೆ ಸರಿಯಾಗಿ ಸಿಂಗರಿಸಿ ಸೇವೆ ಮಾಡುವ ವಿರಾಮವಿಲ್ಲದ ಯಾತ್ರೆ ಇದು. ಹಳೆಬೇರಿನ ಆಸರೆಯಲ್ಲಿ ಹೊಸ ಚಿಗುರು ಕಾಣಿಸಿಕೊಂಡು ವೃಕ್ಷ ವಿಸ್ತಾರವಾಗಿ ಬೆಳೆಯಬೇಕು. ಸಾಹಿತ್ಯ ಸಮಾರಾಧನೆ ನಿಂತ ನೀರಾಗಬಾರದು, ಹರಿಯುತ್ತಲೇ ಇರಬೇಕು''.

ಪ್ರಕಾಶಕರಿಗೆ ಆರ್ಥಿಕವಾಗಿ ಲಾಭವಾದಾಗ ಅವರದು ಸಂತಸಪಡುವ ಜಾಯಮಾನ. ಹಳೆಯ ಗ್ರಂಥಗಳನ್ನು ಪುನಃ ಮುದ್ರಣಗೊಳಿಸುವಲ್ಲಿ ಅಭಿಮಾನ. ಇತರರನ್ನು ನಗಿಸಿ ತಾನು ನಗುವ, ಅನ್ಯರನ್ನು ಬದುಕಿಸಿ ಬದುಕುವ ಕೊಡುಗೈ ಪ್ರೇಮ ಅವರದು. ಹರಿಕೃಷ್ಣರ ಪರಿಚಾರಿಕೆಯ ಪರಿಯನ್ನು ಕಂಡು ಸಾವಿರಾರು ಮಂದಿ ತಾವಾಗಿಯೇ ಮುಂದೆ ಬಂದು ಪರಿಷತ್ತಿನ ಸದಸ್ಯರಾದರು. ಇದಕ್ಕಾಗಿ ಅವರು ಬಿಡುವಿಲ್ಲದೆ ನಾಡಿನಾದ್ಯಂತ ಸಂಚರಿಸಿದರು, ಶಾಲೆಗಳಿಗೆ ಭೇಟಿ ನೀಡಿದರು. ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಭರವಸೆ ತುಂಬಿದರು. 'ಅಮೃತ ನಿಧಿ' ಯ ಪ್ರತಿನಿಧಿಯಾದರು. ಕರೆದಲ್ಲಿಗೆ ತೆರಳಿ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಕನ್ನಡ ತಾಯಿಯ ಸೇವೆಯಲ್ಲಿ ಹೇಗೆ ಭಾಗವಹಿಸಬಹುದೆಂಬುದನ್ನು ಸೂಚಿಸುತ್ತಾ, ಕಾರ್ಯಕ್ರಮಗಳಿಗೆ ಹೊಸ ಚೇತನ ಮೂಡಿಸಿದಂತೆಯೇ ಬಡವರಿಗೆ ನೂರಾರು ಮನೆಗಳನ್ನು ಕಟ್ಟಿಸಿಕೊಟ್ಟು ನಿಜವಾದ ಬಡವರ ಬಂಧುವಾದರು. ಆದುದರಿಂದಲೇ ''ಪುನರೂರು ಪುನಃ ಪುನಃ ನಮ್ಮೂರಿಗೆ ಬರುತ್ತಿರಲಿ'' ಎಂದು ಜನ ಹಾರೈಸಿದರು. ರಾಜ್ಯಾಧ್ಯಕ್ಷರಾಗಿದ್ದ ಅವಧಿಯಲ್ಲಿ ತನ್ನ ಕನಸುಗಳಿಗೆಲ್ಲ ಜೀವತುಂಬಿದರೂ ತೃಪ್ತರಾಗದೆ ಅವರ ಪರಿಚಾರಿಕೆಯ ತೇರು ಮುಂದೆ ಮುಂದೆ ಸಾಗುತ್ತಲೇ ಇದೆ. ಹೀಗೇ ಸಾಗುತ್ತಿರಲಿ.

□

ಭಾಗ: ಒಂದು

ಪರಿಷತ್ತಿನ ಪೋಷಕಶಕ್ತಿ

ಸಾಹಿತ್ಯಕ್ಕೆ ಸಂಭ್ರಮ ತುಂಬಿದವರು

□ ಮನೋಹರ ಪ್ರಸಾದ್



ನೀಳಕಾಯ, ಶುಭ್ರ ಶ್ವೇತವಸನ, ಮಿನುಗುವ ಕಣ್ಣುಗಳು, ಚಿಮ್ಮುವ ಉತ್ಸಾಹ, ವೇಗದ ನಡೆ; ಇದು ಹರಿಕೃಷ್ಣ ಪುನರೂರು ಎಂಬ ಹೆಸರನ್ನು ಕೇಳಿದಾಕ್ಷಣ ಕಣ್ಮುಂದೆ ಸಾಗಿಬರುವ ಚಿತ್ರಣ.

ಭೇಟಿಯಾದಾಗಲೆಲ್ಲಾ ಅವರು ಮಾತನಾಡಿಸಲು ಧಾವಿಸಿ ಬರುತ್ತಾರೆ. ಮುಗುಳು ನಗುವಿನ ಸಿಂಚನ ಅಲ್ಲಿರುತ್ತದೆ. ಹೆಗಲಿಗೊಂದು ಆತ್ಮೀಯ ಸ್ಪರ್ಶದ ಅನುಭವ ದೊರೆಯುತ್ತದೆ. ಭೇಟಿಯಾದ ಸಂದರ್ಭದ ಬಗ್ಗೆ ಒಂದು ಪುಟ್ಟ ವ್ಯಾಖ್ಯಾನ ನಡೆಯುತ್ತದೆ. ಅಕಸ್ಮಾತ್ ಭೇಟಿಯಾಗಿದ್ದರೆ, ಆ ದಿನದ ಅಥವಾ ಅದರ ಹಿಂದಿನ ದಿನದ ಘಟನೆಯೊಂದರ ವಿಶ್ಲೇಷಣೆ ಸಿದ್ಧವಾಗಿರುತ್ತದೆ. ಇದು, ನಾನು ಕಳೆದ ಸುಮಾರು ಎರಡೂವರೆ ದಶಕಗಳಿಂದ ಕಾಣುತ್ತಿರುವ ಪುನರೂರು. ಅದೇ ನಗು, ಅದೇ ಸ್ನೇಹ, ಅದೇ ವಿಶ್ವಾಸ, ಅದೇ ವೇಗ ಮತ್ತು ಅದೇ ಅವಸರ!

1984ರಲ್ಲಿ ಪತ್ರಕರ್ತನಾಗಿ ನನಗೆ 'ಉದಯವಾಣಿ' ಬದುಕು ನೀಡಿತು. ಮಂಗಳೂರಿನಲ್ಲಿ ವರದಿಗಾರನಾಗಿ ನೇಮಕಗೊಂಡ ಸಂದರ್ಭದಲ್ಲಿ ಅವರಿಂದ ಶುಭಾಶಯ ಪತ್ರ ಬಂದಿತ್ತು, 'ಶುಭವಾಗಲಿ' ಎಂಬ ಒಕ್ಕಣೆ! ನನ್ನ ವಿಶೇಷ ವರದಿ- ಲೇಖನ ಪ್ರಕಟವಾದಾಗಲೆಲ್ಲಾ ಅವರಿಂದ ಅಭಿನಂದನೆ ಅಥವಾ ಪೂರಕ ಮಾಹಿತಿಯ ಪುಟ್ಟ ಪತ್ರ. ನನಗದು ಪ್ರೋತ್ಸಾಹದ ಬುತ್ತಿ! ಇಂದಿಗೂ

ಬ್ಯೂರೋ ಚೀಫ್, ಉದಯವಾಣಿ, ಕೊಡಿಯಾಲಬೈಲು, ಮಂಗಳೂರು-3

ಅವರು ಅದೇ ಸೌಜನ್ಯ ಸ್ಪಂದನವನ್ನು ಹೊಂದಿದ್ದಾರೆ. ಇದು ಅವರಿಗೆ ಮಾತ್ರ ಸಾಧ್ಯ ಎಂದರೆ ಉತ್ಪ್ರೇಕ್ಷೆಯಲ್ಲ.

ಪತ್ರಕರ್ತನಾಗಿ ಅವರ ಜತೆ ನಿರಂತರ ಒಡನಾಟ. ಅವರು ಸಂಘಟಿಸಿದ ಸುಮಾರು ನೂರು ಕಾರ್ಯಕ್ರಮಗಳ ವರದಿಯನ್ನು ಮಾಡಿದ್ದೇನೆ. ಅದರಲ್ಲಿ ಮೂಲ್ಕಿಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ ನನ್ನ ಪಾಲಿಗೆ ಅವಿಸ್ಮರಣೀಯ. ಸಂಘಟಕನಾಗಿ ಅವರ ಬದ್ಧತೆ ಮತ್ತು ಕಾರ್ಯವೈಖರಿಯನ್ನು ಅತೀ ಸಮೀಪದಿಂದ ಅರಿತುಕೊಳ್ಳುವ ಅವಕಾಶ ಅದಾಗಿತ್ತು. ವೇದಿಕೆಯಲ್ಲಿ ಆಸನಗಳನ್ನು ಸಿದ್ಧಪಡಿಸುವುದರಿಂದ ಆರಂಭಿಸಿ, ಭೋಜನಕ್ಕೆ ಎಲೆಗಳನ್ನು ವ್ಯವಸ್ಥೆಗೊಳಿಸುವವರೆಗೂ ಅವರಿರುತ್ತಾರೆ. ಸಮ್ಮೇಳನದ ಸಾಹಿತ್ಯದೊಂದಿಗೆ ಭೋಜನ ಸಾಹಿತ್ಯದವರೆಗೂ ಅವರ ಸಂಘಟನಾಶಕ್ತಿಯು ಬೆಸೆದಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ, ರಾಜ್ಯಾಧ್ಯಕ್ಷರಾಗಿ ಅವರು ಸಂಘಟಿಸಿದ ಪ್ರತಿಯೊಂದು ಸಾಹಿತ್ಯ ಸಮ್ಮೇಳನ ಕೂಡಾ ಕನ್ನಡ ಸಾಹಿತ್ಯ ಚರಿತ್ರೆಯ ವಿಶೇಷ ಅಧ್ಯಾಯಗಳು. ವಿವಿಧ ಕ್ಷೇತ್ರಗಳ ಸಾಧಕರಿಗೆ ಸಮ್ಮಾನ, ಕನ್ನಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಪುಸ್ತಕಗಳ ಪ್ರಕಟಣೆಯಂತಹ ಪರಿಕಲ್ಪನೆಗಳನ್ನು ಸಾಕಾರಗೊಳಿಸಿದವರು. ಒಟ್ಟು ತಾತ್ಪರ್ಯ : ಕನ್ನಡ ಸಾಹಿತ್ಯಕ್ಕೆ ಸಂಭ್ರಮದ ಮೆರುಗನ್ನು ತುಂಬಿದವರು ಹರಿಕೃಷ್ಣ ಪುನರೂರು ಅವರು.

ಲಯನ್ಸ್‌ನಂತಹ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಲ್ಲಿ ಜಿಲ್ಲಾ ಗವರ್ನರ್ ಎಂಬ ಪ್ರತಿಷ್ಠಿತ ಹುದ್ದೆಯನ್ನು ಕೂಡಾ ಯಶಸ್ವಿಯಾಗಿ ಅವರು ನಿರ್ವಹಿಸಿದ್ದಾರೆ. ಮಂಗಳೂರು, ಮೂಲ್ಕಿಗಳಲ್ಲಿರುವ ಅವರ ಕಚೇರಿಯಲ್ಲಿ ಸದಾಕಾಲ ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು, ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳು ಮುಂತಾದವರು ಇದ್ದೇ ಇರುತ್ತಾರೆ.

''ಸಮಾಜದಿಂದ ಪಡೆದಿರುವುದು ಸಮಾಜಕ್ಕೆ'' ಎಂಬ ತತ್ವವನ್ನು ಅವರು ನಿರಂತರವಾಗಿ ಪಾಲಿಸಿಕೊಂಡು ಬಂದಿದ್ದಾರೆ. ಸಹಾಯ ಅಪೇಕ್ಷಿಸಿ ಬಂದವರನ್ನು ಅವರು ಎಂದೂ ಬರಿಗೈಲಿ ಕಳುಹಿಸಿದವರಲ್ಲ. ಕೆಲವೊಮ್ಮೆ 'ಅಪಾತ್ರದಾನ' ಸಂಭವಿಸುವುದೂ ಇದೆ!

ಹಲವೊಮ್ಮೆ ಅತ್ಯುತ್ಸಾಹದಿಂದಾಗಿ ಅವರು ''ಯೋಚಿಸಿದ್ದೊಂದು–ಆದದ್ದೊಂದು'' ಪ್ರಸಂಗಗಳನ್ನು ಎದುರಿಸಬೇಕಾಗಿತ್ತು. ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿ ಇಂಥ ಅನೇಕ ನೋವಿನ ಘಟನೆಗಳನ್ನು ಅವರು ಸಹಿಸಬೇಕಾದ ಪರಿಸ್ಥಿತಿ ಉಂಟಾಗಿತ್ತು. ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಅವರು ಅನೇಕ ಬಾರಿ ಏಕಾಂಗಿಯಾಗಬೇಕಾಯಿತು. ಆರ್ಥಿಕ ವಿಚಾರದಲ್ಲಿ ಪುನರೂರು ಅವರ ಶಿಸ್ತನ್ನು ಎಲ್ಲರೂ ಬಲ್ಲವರೇ ಆಗಿದ್ದಾರೆ. ಅವರು ಇತರರಿಂದಲೂ ಇದೇ ರೀತಿಯ ಶಿಸ್ತು ಮತ್ತು ಪ್ರಾಮಾಣಿಕತೆಯನ್ನು ಬಯಸುವವರು. ಅಲ್ಲಿ ಲೋಪ ಕಂಡರೆ ಸಿಡಿದೇಳುವವರು. ಆದರೆ, ಅದಕ್ಕೆ ಇತರರಿಂದ ಬೆಂಬಲ ದೊರೆಯದಿದ್ದರೆ? ಆ ಭ್ರಷ್ಟ ವ್ಯವಸ್ಥೆಯು ಚಕ್ರವ್ಯೂಹವನ್ನೇ ಸೃಷ್ಟಿಸುತ್ತದೆ; ಅಲ್ಲವೇ?

ಆದರೆ, ಈ ಎಲ್ಲಾ ಸಂಚುಗಳ ವಿರುದ್ಧ ಅವರು ನೈತಿಕ ಗೆಲುವನ್ನು ವಿಳಂಬವಾಗಿಯೂ ಸಾಧಿಸಿದರು. ಇಂತಹ ಕೆಚ್ಚು, ಆತ್ಮವಿಶ್ವಾಸವನ್ನು ಪ್ರಾಮಾಣಿಕರು ಮಾತ್ರ ಹೊಂದಿರುತ್ತಾರೆ ಎಂಬ ಬಗ್ಗೆ ಎರಡು ಮಾತಿಲ್ಲ. ಇನ್ನು ಕೆಲವು ಪ್ರಕರಣಗಳು ಅವರ ಕೆಲವು ನಿಕಟವರ್ತಿಗಳ ತಪ್ಪು ಮಾರ್ಗದರ್ಶನದಿಂದ ಮತ್ತು ಮುಂಗೋಪದಿಂದ ಉಂಟಾದವುಗಳು ಎಂದಷ್ಟೇ ಹೇಳಬಹುದು. ಆದರೆ, ಈ ಎಲ್ಲಾ ಅಗ್ನಿಪರೀಕ್ಷೆಗಳನ್ನು ಅವರು ಜಯಿಸಿದರು. ಆ ಪ್ರಕರಣಗಳನ್ನು ಹೇಗೆ ನಿರ್ವಹಿಸಬಹುದಾಗಿತ್ತು ಎಂದು ಅವರು ವಿಶ್ಲೇಷಣೆ ನಡೆಸಿದ್ದಾರೆ. ಇದು ಅವರ ವ್ಯಕ್ತಿತ್ವದ ಪರಿಪಕ್ವತೆಯನ್ನು ಪ್ರತಿಬಿಂಬಿಸುತ್ತದೆ. ಸಮಾಜಕ್ಕೆ ಅವರಿಂದ ಮತ್ತಷ್ಟು

ಕೊಡುಗೆ ದೊರೆಯಲು ತನ್ಮೂಲಕ ಸಾಧ್ಯವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಕನ್ನಡಿಗರು ಹೆಮ್ಮೆಪಡುವಂತಹ ಸಾಧನೆ ಪುನರೂರು ಅವರದ್ದು. ಕನ್ನಡ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ಕೆ ಅವರು ಚಾಲನೆ ನೀಡಿದವರು. ಸ್ವಂತ ವೆಚ್ಚದಲ್ಲಿ ಈ ಕಾಯಕವನ್ನು ನಡೆಸುವವರು ಅವರು. ಸಾಮಾಜಿಕವಾಗಿ ಪ್ರಸ್ತುತವಾದ ಕಾರ್ಯಕ್ರಮಗಳಲ್ಲಿ ಅವರು ಸದಾ ಮುಂಚೂಣಿಯಲ್ಲಿರುತ್ತಾರೆ. ಅವರು ಏರ್ಪಡಿಸುವ ಪತ್ರಿಕಾಗೋಷ್ಠಿಗಳಲ್ಲಿಯೂ ಅದೇ ಶಿಸ್ತು. ಸಮಯ ಪಾಲನೆಗೆ ಆದ್ಯತೆ. ಅಗತ್ಯ ಮಾಹಿತಿಗಳನ್ನು ಪರಿಪೂರ್ಣವಾಗಿ ಒದಗಿಸುವ ಪೂರ್ವ ಸಿದ್ಧತೆ.

ಸಾಹಿತ್ಯ ಕ್ಷೇತ್ರಕ್ಕೆ ಪರಿಪೂರ್ಣ ಸಂಘಟನೆ ನಿರ್ಣಾಯಕ ಎಂಬ ಮಾತಿಗೆ ಉತ್ಕೃಷ್ಟ ಪುನರೂರು ಅವರೇ ನಿದರ್ಶನ. ಅವರು ಪರಿಷತ್‌ನ ರಾಜ್ಯಾಧ್ಯಕ್ಷರಾಗಿದ್ದ ಅವಧಿಯಲ್ಲಿ ನಿಗದಿತವಾಗಿ ಸಮ್ಮೇಳನಗಳು ನಡೆದಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಅತ್ಯಪೂರ್ವ ಎಂಬಂತಹ ಸಾಹಿತ್ಯಾತ್ಮಕ ಮತ್ತು ಸಂಘಟನಾತ್ಮಕ ಯಶಸ್ಸು ಪಡೆದಿವೆ. ಈಗ ಅವರ ಅಧ್ಯಕ್ಷತೆಯ ಅವಧಿ ಪೂರ್ಣಗೊಂಡಿದೆ. ಆ ಬಳಿಕದ ಹೊಸ ವ್ಯವಸ್ಥೆಯು ಆರಿಸಿದ್ದ ಸಮ್ಮೇಳನ ನಿರಂತರ ವಿವಾದದ ಸುಳಿಯಲ್ಲಿದೆ- ದಿನಾಂಕಗಳು ಮುಂದುವರಿಯುತ್ತಲೇ ಇವೆ. ಈ ಸಮ್ಮೇಳನದ ಸಂಘಟನೆಯ ಉಸ್ತುವಾರಿಯನ್ನು ಪುನರೂರು ಅವರಿಗೇ ವಹಿಸಿಕೊಟ್ಟಿದ್ದಿದ್ದರೆ ಅದು ಸಾಕಾರಗೊಳ್ಳಬಹುದಿತ್ತು; ಅಲ್ಲವೇ!?

ಭಾಗ: ಒಂದು

ಪರಿಷತ್ತಿನ ಪೋಷಕಶಕ್ತಿ

ಹೃದಯಾಂತರಾಳದ ಸಾಹಿತ್ಯ ಸೇವೆ

□ ಡಾ. ಮಹಾಬಲೇಶ್ವರರಾವ್



ಹರಿಕೃಷ್ಣ ಪುನರೂರು ಅವರನ್ನು ನಾನು ಸುಮಾರು ಇಪ್ಪತ್ತು ವರ್ಷಗಳಿಂದ ಬಲ್ಲೆ. ಹೋಟೆಲ್ ಉದ್ಯಮಿಯಾದರೂ ಕನ್ನಡ ನಾಡು-ನುಡಿಗಳ ಬಗೆಗಿನ ಕಳಕಳಿಯಿಂದ ಅಖಂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಗರ-ಗ್ರಾಮ ಪ್ರದೇಶ ಎಂಬ ಭೇದವಿಲ್ಲದೆ ಸಾಹಿತ್ಯದ ಉತ್ಸವಗಳನ್ನು ಸಂಘಟಿಸಿದ ಕೀರ್ತಿ ಅವರದ್ದು. 'ಕನ್ನಡ ಕನ್ನಡ' ಎಂದು ತುಟಿಮೇಲಿನ ಘೋಷಣೆಯಾಗದೆ ಹೃದಯಾಂತರಾಳದಿಂದ ಅವರು ಕನ್ನಡದ ಕೆಲಸ ಮಾಡಿದ್ದಾರೆ. ಪುಸ್ತಕ ಪ್ರಕಟಣೆಗಾಗಿ ಅನೇಕರಿಗೆ ನೆರವು ನೀಡಿದ್ದಾರೆ. ಮಕ್ಕಳ ಸಾಹಿತ್ಯ ಸಂಗಮದ ಕಾರ್ಯಕ್ರಮಗಳನ್ನು ಪ್ರಾಯೋಜಿಸಿದ್ದಾರೆ. ''ನಾನು ಸಾಹಿತಿಯಲ್ಲ. ಸಾಹಿತ್ಯದ ಬಗ್ಗೆ ನನಗೆ ಹೆಚ್ಚಿಗೆ ತಿಳಿದಿಲ್ಲ'' ಎಂದು ಪ್ರಾಂಜಲ ಮನಸ್ಸಿನಿಂದ ನುಡಿದರೂ ಸಹ ಕನ್ನಡದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಸಾಹಿತಿಗಳಿಗಿಂತಲೂ ನೂರು ಹೆಜ್ಜೆ ಮುಂದೆ ನಿಂತು ಹೋರಾಡಿದ ಸರಳ ವ್ಯಕ್ತಿ ಅವರು. ತಾವು ಹೋದ ಕಡೆಗಳಲ್ಲೆಲ್ಲ ಸಾಹಿತ್ಯ ಪರಿಷತ್ತಿನ ಪುಸ್ತಕಗಳನ್ನು ಕೊಂಡುಹೋಗಿ ಮಾರಾಟ ಮಾಡಿ ಪುಸ್ತಕಗಳ ಬಗ್ಗೆ ಒಲವು ಮೂಡಿಸಿದ ಪರೋಪಕಾರಿ ಅವರು.

ನನ್ನ-ಅವರ ಒಡನಾಟದ ಒಂದೆರಡು ಘಟನೆಗಳನ್ನು ನಾನಿಲ್ಲಿ ನೆನೆಯಲೇಬೇಕು. ನನ್ನ ಪತ್ನಿ ಸುಕನ್ಯಾ ಕಳಸ ಅವರಿಗೆ ಪೆರ್ಲ ಕೃಷ್ಣ

ಪ್ರಾಚಾರ್ಯರು, ಡಾ.ಟಿ.ಎಂ.ಎ. ಶಿಕ್ಷಣ ಕಾಲೇಜು, ಕುಂಜಿಬೆಟ್ಟು, ಉಡುಪಿ-576 103

ಭಟ್ ಪ್ರತಿಷ್ಠಾನದ ಪ್ರಶಸ್ತಿ ಬಂದಿತ್ತು. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಪರ್ಕಳದಲ್ಲಿ ನಡೆಯಿತು. ಕಾರ್ಯಕ್ರಮ ಮುಗಿಯುವಾಗ ಸಂಜೆ ಏಳೆಂಟು ಗಂಟೆ ದಾಟಿ ಹೋಗಿತ್ತು. ಉಡುಪಿಗೆ ಹೋಗುವುದೆಂತು ಎಂದು ಯೋಚಿಸುತ್ತಿರುವಾಗ "ನೀವು ಮಂಗಳೂರಿಗೆ ನಮ್ಮ ವಾಹನದಲ್ಲೇ ಬನ್ನಿ. ಒಟ್ಟಿಗೆ ಹೋಗೋಣ" ಎಂದು ಪುನರೂರು ಅವರು ಔದಾರ್ಯ ಮೆರೆದರು. ದಾರಿಯುದ್ದಕ್ಕೂ ಪ್ರೀತಿಯಿಂದ ನನ್ನೊಡನೆ ಮುಕ್ತವಾಗಿ ಹರಟಿದ ಆ ಸಂದರ್ಭ ನಾ ಮರೆಯಲಾರೆ.

ಕನ್ನಡದಲ್ಲಿ ಪಿ.ಎಚ್.ಡಿ. ಪದವಿ ಪಡೆದವರನ್ನು ಸನ್ಮಾನಿಸುವ ಒಂದು ಕಾರ್ಯವನ್ನು ಅವರು ಮಾಡುತ್ತ ಬಂದಿದ್ದಾರೆ. 1996ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ನನಗೆ ಪಿ.ಎಚ್.ಡಿ. ಪದವಿ ಲಭಿಸಿತು. ಅದೇ ವರ್ಷ ಉಡುಪಿಯ ಅಂಬಲಪಾಡಿಯಲ್ಲಿ ತಾಲೂಕು ಸಾಹಿತ್ಯ ಸಮ್ಮೇಳನ. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪುನರೂರು ಅವರಿಗೆ ನನ್ನನ್ನು ಸನ್ಮಾನಿಸುವ ಹಂಬಲ. ಸ್ಥಳೀಯ ಸಂಘಟಕರು ಪೂರ್ವ 'ನಿಗದಿತ ಸನ್ಮಾನಕ್ಕೆ ಮಾತ್ರ ಅವಕಾಶ; ಇದಕ್ಕೆ ಎಡೆಯಿಲ್ಲ' ಎಂದು ಪಟ್ಟು ಹಿಡಿದರು. ಪುನರೂರು ಅವರು 'ಈ ಸನ್ಮಾನ ಮಾಡಲೇಬೇಕು' ಎಂದು ಆಗ್ರಹಿಸಿದರು. ಸಂಘಟಕರು 'ಸುತರಾಂ ಸಾಧ್ಯವಿಲ್ಲ' ಎಂದರು. ಈ ನಡುವೆ ಸಂಘಟಕರಲ್ಲಿ ಒಬ್ಬರು ನನ್ನನ್ನು ಸಂಪರ್ಕಿಸಿ, 'ನೀವು ಸಮ್ಮೇಳನಕ್ಕೆ ಬರಬೇಡಿ' ಎಂದು ಉಪದೇಶಿಸಿದರು. "ಸಮ್ಮೇಳನಕ್ಕೆ ಬನ್ನಿ ಎಂದು ಕರೆಯುವುದು ಕ್ರಮ! ಬರಬೇಡಿ ಎಂದು ಹೇಳುವುದು ಎಂಥ ಸಂಸ್ಕೃತಿ! ಮೇಲಾಗಿ ನನ್ನ 25 ವಿದ್ಯಾರ್ಥಿಗಳಿಗೆ ಸಮ್ಮೇಳನದ ಕಾರ್ಯಕಲಾಪಗಳನ್ನು ಅಧ್ಯಯನ ಮಾಡಿ ವರದಿ ಸಿದ್ಧಪಡಿಸಿಕೊಡಿ ಎಂದು ಪ್ರೋತ್ಸಾಹಿಸಿದ್ದೇನೆ. ಅಂದು ನಾನೇ ಹಾಜರಾದರೆ ಶಿಕ್ಷಕನಾದ ನನ್ನ ಬಗ್ಗೆ ಅವರೇನು ಅಂದುಕೊಂಡಾರು? ಇದು ನಿಮಗೆ ಉಚಿತವೇ?" ಎಂದು ನಾನು ಅವರನ್ನು ಪ್ರಶ್ನಿಸಿದೆ.

ಸಮ್ಮೇಳನದ ದಿನ ಧ್ವಜಾರೋಹಣದ ಹೊತ್ತಿಗೆ ಸಭಾಸದನಕ್ಕೆ ಬರುವಂತೆ ಪುನರೂರು ಅವರು ನನಗೆ ತಿಳಿಸಿದ್ದರು. ನಾನೂ ಹೋಗಿದ್ದೆ. ಉಭಯ ಸಂಕಟದಲ್ಲಿದ್ದ ನಾನು ಅವರ ಕಣ್ಣಿಗೆ ಬೀಳಲಿಲ್ಲ. ಪುನರೂರು ಸನ್ಮಾನಕ್ಕಾಗಿ ಆಗ್ರಹಿಸಿದರು. ಸಂಘಟಕರು ಪಟ್ಟು ಸಡಿಲಿಸಲಿಲ್ಲ. ಸಿಟ್ಟುಗೊಂಡ ಪುನರೂರು ಅವರು ಧ್ವಜಾರೋಹಣದ ಬಳಿಕ ಅಲ್ಲಿಂದ ನಿರ್ಗಮಿಸಿದರು. ಸಂಘಟಕರ ಸೌಜನ್ಯರಹಿತ ವರ್ತನೆಯ ಬಗ್ಗೆ ಆಕ್ಷೇಪವನ್ನು ಕೆಲವರು ವ್ಯಕ್ತಪಡಿಸಿದರು. ಇದಾದ ಕೆಲವೇ ದಿನಗಳಲ್ಲಿ ಮಂಗಳೂರಿನಲ್ಲಿ ಅಂಚೆ ಇಲಾಖೆಯ ಸಿಬ್ಬಂದಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಪುನರೂರು ಅವರು ಹಮ್ಮಿಕೊಂಡ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿ, ಅಲ್ಲಿ ನನಗೆ ಪ್ರಶಸ್ತಿ ಪತ್ರ, ಸ್ಮರಣಿಕೆ ನೀಡಿ ಶಾಲು ಹೊದಿಸಿ ಗೌರವಿಸಿದರು. ಈ ಘಟನೆಯನ್ನು ನಾನು ಮರೆಯುವ ಹಾಗೆಯೇ ಇಲ್ಲ.

ಪುನರೂರು ಅವರ ಪ್ರೀತಿ, ಅಭಿಮಾನ ಬಲು ದೊಡ್ಡದು. ಕೈಗೊಂಡ ನಿರ್ಧಾರವನ್ನು ನಡೆಯಿಸುವ ಅವರ ಕೆಚ್ಚು ವಿಶಿಷ್ಟವಾದುದು. ಇಲ್ಲಿಂದ ಮುಂದೆ ಹಲವು ಕಡೆಗಳಲ್ಲಿ ನಾನು ಅವರನ್ನು ಭೇಟಿಯಾಗಿದ್ದೇನೆ. ಅತ್ಯಂತ ಗೌರವ ಹಾಗೂ ಪ್ರೀತಿಯಿಂದ ನನ್ನನ್ನು ಅವರು ಕಂಡಿದ್ದಾರೆ.

ಕೊಪ್ಪ ತಾಲೂಕಿನ ಕುದುರೆಗುಂಡಿ ಗ್ರಾಮದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಅವರ ಆಹ್ವಾನದ ಮೇರೆಗೆ ಭಾಷಣ ಮಾಡಲು ಹೋದಾಗ ರಾಜ್ಯ ಕಸಾಪ ಅಧ್ಯಕ್ಷರಾಗಿದ್ದ ಪುನರೂರು ಅವರೂ ಬಂದಿದ್ದರು. ಪರಿಷತ್ತಿನ ಪ್ರಕಟಣೆಗಳನ್ನು, ಜ್ಞಾನಪೀಠ ಪ್ರಶಸ್ತಿ ವಿಜೇತರ ಸುಂದರ ಚಿತ್ರಗಳನ್ನು ಮಾರಾಟಕ್ಕೆ ಇಟ್ಟಿದ್ದರು. ಅಲ್ಲಿ ನಾನು ಕೇವಲ 35 ರೂಪಾಯಿಗೆ ಕೊಂಡುಕೊಂಡ ಏಳು ಜನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಸುಂದರ ಚಿತ್ರಗಳು ಕಳೆದ ಮೂರ್ನಾಲ್ಕು ವರ್ಷಗಳಿಂದ ಕಾಲೇಜಿನ ನನ್ನ ಕಛೇರಿಯಲ್ಲಿ ರಾರಾಜಿಸುತ್ತಿವೆ. ಕಛೇರಿಗೆ ಬಂದ ಪ್ರತಿಯೊಬ್ಬರೂ ಈ ಚಿತ್ರಗಳನ್ನು ನೋಡಿ 'ಎಲ್ಲಿ

ಕೊಂಡುಕೊಂಡಿರಿ?' ಎಂದು ತಪ್ಪದೆ ಕೇಳುತ್ತಾರೆ. ಆಗ ನಾನು ಹರಿಕೃಷ್ಣ ಪುನರೂರು ಅವರ ಸಾಹಿತ್ಯ ಪರಿಚಾರಿಕೆ ಬಗ್ಗೆ ತಪ್ಪದೇ ನುಡಿಯುತ್ತೇನೆ.

ಸಾಹಿತಿಗಳಿಗೆ ಗರ್ವವಿದೆ. ಪೃಥ್ವಿಯ ಕಿರೀಟ ತಾವು ಎಂಬ ಜಂಭವಿದೆ. ನಾಡು-ನುಡಿ ಉಳಿದರೆ ತಾನೆ ಸಾಹಿತ್ಯ ರಚನೆ? ಓದುಗರನ್ನು ನಿರ್ಮಾಣ ಮಾಡಿದರೆ ತಾನೆ ಸಾಹಿತ್ಯ ರಚನೆ-ಪ್ರಕಟಣೆ ಇತ್ಯಾದಿ ಕಾರ್ಯಗಳು ಸಾಂಗವಾಗಿ ನೆರವೇರುವುದು? ನಮ್ಮ ನುಡಿಗೆ ಬಲಕೊಡುವ, ಕನ್ನಡ ಪ್ರೇಮದ ಕಂಪನ್ನು ಹಳ್ಳಿ ಹಳ್ಳಿಗಳಲ್ಲಿ ಪಸರಿಸಿದ ಹರಿಕೃಷ್ಣ ಪುನರೂರು ಅವರ ನುಡಿ ಸೇವೆ ನೂರಾರು 'ದಸ್ತಾವೇಜು ಬರಹಗಾರ'ರ ಸಾಹಿತ್ಯ ಸೇವೆಗಿಂತ ಸಾವಿರ ಪಾಲು ಮಿಗಿಲು. ಹರಿಕೃಷ್ಣ ಪುನರೂರು ಅವರಿಗೆ ಶುಭವಾಗಲಿ.

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕರಾವಳಿ ಕರ್ನಾಟಕದ ಗಂಡುಗಲಿ

☐ ಉಪ್ಪುಂದ ಚಂದ್ರಶೇಖರ ಹೊಳ್ಳ



ಮಹಾನ್ ವ್ಯಕ್ತಿಗಳು ನಮ್ಮ ನಡುವೆಯೇ ಸಾಧನೆಗಳನ್ನು ಮಾಡುತ್ತಿರುತ್ತಾರೆ. ನಮ್ಮ ಮಣ್ಣಿನ ಕಣ್ಣಿಗೆ ಅವು ಗೋಚರಿಸುವ ಪರಿ ಬೇರೆಯೇ ಆಗಿರುತ್ತದೆ.

ಏನೂ ಮಾಡದ, ಬರೇ ಊನ-ಕೊರತೆ ಕಾಣುವ ಶಿಷ್ಟಾಚಾರದ ನಯವಂತರ ಟೀಕೆ-ಟಿಪ್ಪಣಿಗಳೇ ನಮ್ಮ ಗಮನ ಸೆಳೆಯುತ್ತವೆ. ಅವುಗಳೇ ನಮ್ಮ ಅಭಿಪ್ರಾಯ ರೂಪಿಸುತ್ತವೆ. ದ್ವೇಷ-ಅಸೂಯೆಗಳನ್ನು ಪೋಷಿಸಿ ಸಾತ್ತ್ವಿಕತೆಯಿಂದ ವಿಮುಖರನ್ನಾಗಿ ಮಾಡುತ್ತವೆ. ಛಿದ್ರಾನ್ವೇಷಕರಾಗಿ ಒಳಿತನ್ನು ಆಸ್ವಾದಿಸುವ-ಆನಂದಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತೇವೆ!

ಸದಾ 'ಶುಭವಾಗಲಿ' ಎಂಬ ಹಾರೈಕೆಯನ್ನೇ ಧ್ಯೇಯವಾಕ್ಯವಾಗಿ ಮಾಡಿಕೊಂಡಿರುವ ಸರಳ-ಸಜ್ಜನ ಏಕಾಂಗಿವೀರ ಹರಿಕೃಷ್ಣ ಪುನರೂರು ಅವರ ನೆನಪು ನನಗೆ ಸದಾ ಸ್ಫೂರ್ತಿದಾಯಕ.

ಅವರನ್ನು 'ಕರಾವಳಿ ಕರ್ನಾಟಕದ ಗಂಡುಗಲಿ' ಎಂದು ಬಣ್ಣಿಸಬಹುದು!

ನಾನು 1993ರ ಡಿಸೆಂಬರಿನಲ್ಲಿ ಕೋಟೇಶ್ವರದಲ್ಲಿ ನಡೆದ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಮೊದಲು ಕಂಡೆ, ಮಾತನಾಡಿದೆ.

ಅಂದಿನ ಸಮಾರೋಪ ಸಮಾರಂಭದಲ್ಲಿ, ಮುಂದಿನ ಸಮ್ಮೇಳನ

• ಅಧ್ಯಕ್ಷರು, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, 'ಚೈತ್ರರಥ', ಶಂಕರ ಕಲಾ ಮಂದಿರ, ಉಪ್ಪುಂದ-576 232, ಕುಂದಾಪುರ ತಾಲೂಕು

ಉಪ್ಪುಂದದಲ್ಲಿ ಆಗಲಿ ಎಂದು ಆಹ್ವಾನಿಸಿದರು ಪುನರೂರು. ವೇದಿಕೆಗೆ ಕರೆದು ಸಮ್ಮೇಳನದ 'ವೀಳ್ಯ' ನೀಡಿದರು. ಅದು ನನ್ನ ಪಾಲಿಗೆ ಇನ್ನೂ ಹಸಿ ನೆನಪು. ಮರೆಯಲಾಗದ ಅನುಭವ.

1994ರ ಮಾರ್ಚ್ ಒಳಗೆ ಸಮ್ಮೇಳನ ನಡೆಸಿದರೆ 10 ಸಾವಿರ ರೂಪಾಯಿ ದೇಣಿಗೆ ತನ್ನ ವತಿಯಿಂದ ಇದೆ ಎಂದಿದ್ದರು. 1994ರ ಮಾರ್ಚ್‌ನಲ್ಲಿಯೇ ನಮ್ಮ ನೂತನ ಶಂಕರ ಕಲಾ ಮಂದಿರದಲ್ಲಿ ಕುಂದಾಪುರ ತಾಲೂಕಿನ ಮೂರನೆಯ ಸಮ್ಮೇಳನ ನಡೆಯಿತು. ಅಂದು ಧ್ವಜಾರೋಹಣ ಬೆಳಗ್ಗೆ 9ಕ್ಕೆ ಎಂದಿದ್ದರೆ, ಪುನರೂರು 8-30ಕ್ಕೇ ಹಾಜರು. ಬರುತ್ತ ತನ್ನ ವಾಹನದಲ್ಲಿ ಕನ್ನಡ ಭುವನೇಶ್ವರಿಯ ದೊಡ್ಡ ಚಿತ್ರ (ಕಟೌಟ್) ತಂದಿದ್ದರು. ಕಾರಿನಿಂದ ಇಳಿದವರೇ ಅದರೊಳಗಿದ್ದ ಪುಸ್ತಕದ ಕಟ್ಟುಗಳನ್ನು ತಡಮಾಡದೆ ತಾನೇ ಇಳಿಸತೊಡಗಿದ್ದನ್ನು ಕಂಡು ನಮ್ಮೂರಿನ ಯುವ ಸ್ವಯಂಸೇವಕರಿಗೆ ಅತ್ಯಾಶ್ಚರ್ಯ. ಎಲ್ಲರೂ ಆ ಕಡೆ ಓಡಿ ಆ ಕೆಲಸಕ್ಕೆ ಕೈ ಹಚ್ಚಿದರು.

ಹೀಗೆ ತಾನೇ ಸ್ವಯಂಸೇವಕರಾಗಿ ನೂರಾರು ಜನರಿಗೆ ಸೇವೆ, ಶ್ರಮದ ಮಹತ್ತ್ವವೇನೆಂಬುದನ್ನು ತಿಳಿಯಪಡಿಸಿರುವವರು ಪುನರೂರು.

ಕಾರ್ಯಕ್ರಮ ಶುರುವಾಗಿ, ನಾನು ಸ್ವಾಗತಿಸುತ್ತಿರುವಾಗಲೇ ಪುನರೂರು ತನ್ನ ಜೇಬಿಗೆ ಕೈ ಹಾಕಿ ಲಕೋಟೆ ತೆಗೆದು ಗುಟ್ಟಾಗಿ ಹಸ್ತಾಂತರಿಸಿದ್ದರು. ಅದರೊಳಗಿದ್ದುದು ಅವರು ಕೊಡುವೆನೆಂದು ವಾಗ್ದಾನವಿತ್ತಿದ್ದ ಹಣ. ತಾನು ಆಡಿದ ಮಾತನ್ನು ಅವರು ನಡೆಸಿಕೊಡುವ ರೀತಿ ಇದು. ಈ ಕೈ ಕೊಟ್ಟುದು ಆ ಕೈಗೆ ತಿಳಿಯಬಾರದು.

ತ್ಯಾಗ, ಧೈರ್ಯ, ಸಾಹಸ, ನಿರ್ಭಿಡೆ, ತಾನು ಸಾಮಾನ್ಯದಲ್ಲಿ ಸಾಮಾನ್ಯನೆಂಬ ಸರಳತೆ. ಒಳ್ಳೆಯ ಕೆಲಸಕ್ಕೆ ಸದಾ ಪ್ರೋತ್ಸಾಹ. ಇಂಥ ಸದ್ಗುಣ ಸಂಪತ್ತು-ಕ್ಷಾತ್ರ ತೇಜಸ್ಸಿನ ಜೊತೆ ಮೇಳೈಸಿರುವ ಉದಾಹರಣೆ ಬಹಳ ಅಪೂರ್ವ.

ಅವರ ತಾಯಿ ತೀರಿಕೊಂಡಿದ್ದ ಸಂದರ್ಭದಲ್ಲಿ ಪುನರೂರಿಗೆ ಹೋಗಿದ್ದೆ. ಅವರ ಗುರುತೇ ಸಿಗಲಿಲ್ಲ. ತಲೆ ಬೋಳಿಸಿಕೊಂಡು ಅಪರಕರ್ಮ ವ್ರತಧಾರಿಯಾಗಿದ್ದರು. ವ್ಯವಹಾರ ಜಗತ್ತಿನಿಂದ ಸಂಪೂರ್ಣ ವಿಮುಖರಾಗಿದ್ದರು. ಅಂದು ತನ್ನ ಮಾತೃಶ್ರೀಯವರ ಅಪರಕರ್ಮಗಳಲ್ಲಿ ಶ್ರದ್ಧೆ, ಭಕ್ತಿ, ಪ್ರೀತಿ, ಗೌರವಗಳಿಂದ ಪಾಲ್ಗೊಂಡ ಆಜಾನುಬಾಹು ಪುನರೂರರ ಇನ್ನೊಂದು ಮುಖವನ್ನು ಕಂಡೆ.

ನೂರು ಮನೆಗಳನ್ನು ಕಟ್ಟಿಸಿಕೊಡುವ ಮೂಲಕ ಸೂರಿಲ್ಲದವರಿಗೆ ಸೂರನ್ನು ಒದಗಿಸುವ ಬೃಹತ್ ಯೋಜನೆಗೆ ಅವರು ತೊಡಗಿಕೊಂಡಾಗಿನ ಕೃತಕೃತ್ಯತೆಯನ್ನು ಕಂಡು ಬೆರಗಾಗಿದ್ದೇನೆ. ಸ್ನೇಹಿತರಿಗೆ, ಸಮಾನಮನಸ್ಕರಿಗೆ ಆ ವಸತಿಗಳ ಸಮೂಹವನ್ನು ತೋರಿಸುವಾಗಿನ, ವಿವರಿಸುವಾಗಿನ ಅವರ ಧನ್ಯತಾಭಾವವನ್ನು ಕಂಡು ನಾನೂ ಪುಳಕಿತನಾಗಿದ್ದೇನೆ.

ನಮ್ಮ ಕಡೆಯ ಹಲವಾರು ಮಂದಿ ಅನಾರೋಗ್ಯ ಪೀಡಿತರಾಗಿದ್ದಾಗ, ಮದುವೆ-ಮುಂಜಿ ನೆರವೇರಿಸಲು ಆರ್ಥಿಕ ನೆರವು ಕೋರಿದಾಗ ಅವರು ನನ್ನ ಶಿಫಾರಸು ಪಡೆದು ನೀಡಿದ್ದಿದೆ. ಅವರಿಗೆ ಜಾತಿಭೇದ, ಪ್ರದೇಶ ಬೇಧ ಇಲ್ಲ. ಅವರೊಬ್ಬ ದೊಡ್ಡ ಮಾನವತಾವಾದಿ.

ನಮ್ಮ ಈ ಭಾಗದ ನನ್ನೆಲ್ಲ ಚಟುವಟಿಕೆಗಳಿಗೆ ಸದಾ ಬೆಂಬಲದ ಕಂಬವಾಗಿರುವ ಅವರು ನಮ್ಮೆಲ್ಲರ ಪಾಲಿಗೆ ಸಾಟಿಯಿಲ್ಲದ ಸರದಾರ.

ವೈಯಕ್ತಿಕವಾಗಿ, ಸಹೋದರ ವಾತ್ಸಲ್ಯ ತೋರಿದ ಹಿರಿಯಣ್ಣ.


'ಶುಭವಾಗಲಿ' ಎಂಬ ಭಾವವನ್ನೇ ಮೈವೆತ್ತು ಬಂದಂತಿರುವ ಅವರಿಗೆ ನಾವೂ 'ಶುಭವಾಗಲಿ' ಎನ್ನದೆ ಬೇರೇನೆನ್ನೋಣ?

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಾಹಿತ್ಯ ಸಂಘಟನಾ ಕ್ಷೇತ್ರದ ಮೈಕ್ ಬ್ರೇರ್ಲಿ

□ ಜಿ. ರಮೇಶ್ ಭಟ್



ನಾಯಕತ್ವದ ಬಗ್ಗೆ ಮಾತನಾಡುವ ಮಂದಿ ನೆನಪಿಸಿಕೊಳ್ಳುವ ಒಂದು ಕುತೂಹಲಕಾರಿ ವ್ಯಕ್ತಿತ್ವ ಮೈಕ್ ಬ್ರೇರ್ಲಿಯದ್ದು. ಯಾವುದೇ ಅಂತಾರಾಷ್ಟ್ರೀಯ ತಂಡದಲ್ಲಿ ಬ್ಯಾಟಿಂಗ್, ಬೌಲಿಂಗ್ ಅಥವಾ ಫೀಲ್ಡಿಂಗ್‌ನ ಸಾಧನೆಯ ಆಧಾರದಲ್ಲಿ ಸ್ಥಾನವನ್ನು ಪಡೆಯುವ ವಿಶೇಷ ಯೋಗ್ಯತೆಯನ್ನಾಗಲೀ, ಸಾಧನೆಯ ಇತಿಹಾಸವನ್ನಾಗಲೀ ಹೊಂದಿರದ ಆತ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕನಾಗಿ ಆಯ್ಕೆಯಾದದ್ದು ಒಂದು ಸಂಕೀರ್ಣ ಸಂದರ್ಭದಲ್ಲಿ. ಮುಂದಿನ ದಿವಸಗಳಲ್ಲಿ ಇಂಗ್ಲೆಂಡ್ ಕ್ರಿಕೆಟ್ ತಂಡವನ್ನು ಆ ದಿವಸಗಳ ವೆಸ್ಟ್ ಇಂಡೀಸ್ ನಂತರದ ಶ್ರೇಷ್ಠ ತಂಡವನ್ನಾಗಿಸುವಲ್ಲಿ ಆತನ ಕೊಡುಗೆ ಹೋಲಿಕೆಯೇ ಇಲ್ಲದ್ದು. ವಿಶ್ವದ ಶ್ರೇಷ್ಠ ಕ್ರಿಕೆಟಿಗರು, ತೆಂಡೂಲ್ಕರ್, ಲಾರಾ ಸೇರಿದಂತೆ ಹಲವರು ವಿಫಲರಾಗುವಲ್ಲಿ ಬ್ರೇರ್ಲಿ ಗೆದ್ದಿದ್ದ. ನಾಯಕತ್ವಕ್ಕೆ ಒಂದು ಹೊಸ ವ್ಯಾಖ್ಯಾನವನ್ನು ಬರೆದಿದ್ದ.

ಹರಿಕೃಷ್ಣ ಪುನರೂರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರಾದ ತತ್‌ಕ್ಷಣ ನನಗೆ ನೆನಪಾದದ್ದೂ ಬ್ರೇರ್ಲಿಯ ಕತೆ. ಮೊನ್ನೆ ಪುನರೂರು ಗದ್ದುಗೆಯಿಂದ ಇಳಿದ ಹೊತ್ತಿನಲ್ಲಿ ನನಗೆ ಮತ್ತೆ ನೆನಪಾದದ್ದು ಪ್ರುಡೆನ್ಶಿಯಲ್ ವರ್ಲ್ಡ್ ಕಪ್‌ನ ಫೈನಲ್‌ಗೇರಿದ ಇಂಗ್ಲೆಂಡ್ ತಂಡದ ಸಾಧನೆಯ ಒಂದು ಥಳಕು.

ಅಧಿಕಾರಿಗಳು, ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಛೇರಿ, ಮಣಿಪಾಲ-576104

ನಮಗೆಲ್ಲ ಮೊದಲೇ ತಿಳಿದಿದ್ದ ಒಂದು ಸಂಗತಿಯೆಂದರೆ, ಹರಿಕೃಷ್ಣ ಪುನರೂರು ಸಾಹಿತ್ಯ ಪರಿಷತ್ತಿನಿಂದ ಪಡೆಯುವಂಥದ್ದು ಏನೂ ಇರಲಿಲ್ಲ ಎನ್ನುವುದು. ನನಗೆ ತಿಳಿದ ಹಾಗೆ ಅವರು ತಮ್ಮ ಅಧಿಕಾರಾವಧಿಯಲ್ಲಿ ಪ್ರಯಾಣ ಭತ್ತೆ (ಟಿ.ಎ.) ಕೂಡ ಪಡೆದುಕೊಂಡಿರಲಿಲ್ಲ. 'ಭೂತ ಬರಹಗಾರ'ರಿಂದ ಪುಸ್ತಕಗಳನ್ನು ಬರೆಸಿಕೊಂಡು ತಮ್ಮ ಹೆಸರಿನಲ್ಲಿ ಪ್ರಕಟಿಸಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ವೆಚ್ಚದಲ್ಲಿ ತನ್ನ ಸಾಧನೆಯನ್ನು ಜಗಜ್ಜಾಹೀರು ಮಾಡಲು ಹೊರಡಲಿಲ್ಲ.

ನಾನು ದೆಹಲಿಯಲ್ಲಿದ್ದ ದಿವಸಗಳಲ್ಲಿ ಹಿರಿಯ ಸಾಹಿತಿಗಳೊಬ್ಬರು ಕರ್ನಾಟಕ ಸಂಘದ ಅತಿಥಿಗೃಹದಲ್ಲಿ ಉಳಿದುಕೊಂಡು, ಹೊಟೇಲ್ ಬಿಲ್ಲು ಕ್ಲೈಮ್ ಮಾಡಿದ ಪ್ರಕರಣವೊಂದು ನಡೆಯಿತು. ಸಾಹಿತ್ಯ ಜಗತ್ತಿನ 'ಜಗದ್ಗುರು'ಗಳೊಬ್ಬರು ತಮ್ಮ ಅಧಿಕಾರಾವಧಿಯ ಉದ್ದಗಲಕ್ಕೆ ಎತ್ತಿದ ಬಿಲ್ಲುಗಳ ಮಾಹಿತಿಯಿದ್ದ ನಾವೆಲ್ಲ ಅವರನ್ನು 'ಅಭಿನವ ಬಿಲ್ಹಣ' ಎಂದು ಹೊಗಳುತ್ತಿದ್ದವು. ಅವರು ಮತ್ತಷ್ಟು ಉಬ್ಬಿಕೊಳ್ಳುತ್ತಿದ್ದರು. ಹಲವು ದೊಡ್ಡ ಸಾಹಿತಿಗಳನ್ನು ಬಹಳ ಹತ್ತಿರದಿಂದ ಕಾಣುವ ಒಂದು ಸೌಭಾಗ್ಯ ಸಿಕ್ಕಿದ ಆ ದಿವಸಗಳಲ್ಲಿ ನನಗೆ ಖಚಿತವಾದ ಒಂದು ಸಂಗತಿಯೆಂದರೆ ಈ ಸಾಹಿತಿಗಳಲ್ಲಿ ಹಲವರು ಎಷ್ಟು ಎತ್ತರಕ್ಕೆ ಏರಿದ್ದಾರೋ ಅಷ್ಟೇ ಆಳಕ್ಕೆ ಕೂಡ ಇಳಿದವರೂ ಇದ್ದಾರೆ ಎನ್ನುವುದು.

ಕ.ಸಾ.ಪ.ದ ಭವಿಷ್ಯದ ಬಗ್ಗೆ ನನ್ನಂತೆ ಹಲವರು ಚಿಂತಿತರಾಗಿದ್ದ ಹೊತ್ತಿನಲ್ಲಿಯೇ ಪುನರೂರು ಅದರ ಅಧ್ಯಕ್ಷಗಾದಿಯನ್ನು ಏರಿದ್ದು. 'ಸಾಹಿತ್ಯದ ಮೂಲಕ ಹಣ ಮಾಡುವ ಅಗತ್ಯ ಅವರಿಗಿಲ್ಲ' ಎನ್ನುವುದೇ ಅವರ ದೊಡ್ಡ ಬಂಡವಾಳವಾಗಿತ್ತು. ಹಾಗಾಗಿಯೇ ಅವರ ಅಧಿಕಾರಾವಧಿಯಲ್ಲಿ ಆರ್ಥಿಕ ಹಗರಣಗಳು ನಡೆಯಲಿಲ್ಲ. ನಿಷ್ಕಲ್ಮಷ, ಪಾರದರ್ಶಕ ವ್ಯವಸ್ಥೆಯನ್ನು ಕ.ಸಾ.ಪ.ಕ್ಕೆ ಸಾಧ್ಯ ಮಾಡಿಕೊಟ್ಟ ಪುನರೂರು ಸ್ವಲ್ಪ ಹೆಮ್ಮೆಯಿಂದ ಮತ್ತು ಸ್ವಲ್ಪ ನಿರಾತಂಕವಾಗಿ ಉಸಿರೆಳೆದುಕೊಳ್ಳುವ ಅವಕಾಶವನ್ನು ಕೊಟ್ಟರೆಂದು ಹಳೆಯ ತಲೆಮಾರಿನ ಹಲವು ಬರಹಗಾರರು ನನ್ನಲ್ಲಿ ಹೇಳಿಕೊಂಡದ್ದೂ ಈ ಅವಧಿಯಲ್ಲಿ.

ಪುನರೂರು ನಮಗೆ ಆಪ್ತರಾಗುವುದು ಅವರ ಸರಳ-ಸಜ್ಜನಿಕೆಯ ಮೂಲಕ. ಅವರು ಆಕಾಶಕ್ಕೆ ಏಣಿಯಿಟ್ಟರೂ ನೆಲದ ಮೇಲೆಯೇ ಬದುಕಿದ್ದಾರೆ. ಅವರ ಭಾಷಣಗಳು, ಮಾತುಗಾರಿಕೆ, ಲಘು ಹಾಸ್ಯ ಇವೆಲ್ಲ ಹಿಂದೆ ಹೇಗಿದ್ದವೋ ಅವು ರಾಜ್ಯ ಅಧ್ಯಕ್ಷರಾಗಿದ್ದಾಗಲೂ ಹಾಗೆಯೇ ಉಳಿದವು; ಈಗಲೂ ಹಾಗೆಯೇ ಉಳಿದಿವೆ. ಅಧಿಕಾರಾವಧಿಯ ದಿವಸಗಳಲ್ಲಿಯೂ ಮಾತನಾಡಲಿಕ್ಕೆ ಅವರಿಗೆ 'ಜಾರ್ಗನ್'ಗಳ ಅಗತ್ಯ ಬೀಳಲಿಲ್ಲ. ಅವರು ಮಠಗಳನ್ನು ಸಾಕಿ ಬೆಳೆಸಲೂ ಇಲ್ಲ!

ಪುನರೂರು ರಾಜ್ಯ ಕ.ಸಾ.ಪ. ಅಧ್ಯಕ್ಷಸ್ಥಾನದಿಂದ ಇಳಿದ ಮೇಲೆ ಒಂದು ಸಂಗತಿ ಸ್ಪಷ್ಟವಾಗಿದೆ: ಕ.ಸಾ.ಪ. ಆರೋಗ್ಯಪೂರ್ಣವಾಗಿ ಕೆಲಸ ಮಾಡಬೇಕಿದ್ದರೆ ಅದಕ್ಕೆ 'ನಾನ್ ಪ್ಲೇಯಿಂಗ್ ಕ್ಯಾಪ್ಟನ್'ನ ಅಗತ್ಯವಿದೆ. ಯಾಕೆಂದರೆ ಸಾಹಿತಿ ಬಕಪಕ್ಷಿಯಾಗಲಾರ; ಆಗಬಾರದು. ಎಲ್ಲಿಯವರೆಗೆ ಆತ ನೀರಿನಲ್ಲಿ ಅಲೆಯುವ ಮೀನಿನ ಕಡೆಗೆ ದೃಷ್ಟಿನೆಟ್ಟಿರುತ್ತಾನೋ ಅಲ್ಲಿಯತನಕ ಆತ ಧ್ಯಾನ ಮಾಡಲಾರ. ಮಾಡಿದರೂ ಕೂಡ ಕ.ಸಾ.ಪ. ಏನನ್ನು ಪಡೆದುಕೊಳ್ಳುತ್ತದೆ, ಸಾಹಿತ್ಯ ಅದಕ್ಕಿಂತ ಜಾಸ್ತಿ ಕಳೆದುಕೊಳ್ಳುತ್ತದೆ.


ಪುನರೂರು ಮತ್ತು ಅವರಂತಹ ನಿಸ್ವಾರ್ಥಿ ಸಂಘಟಕರು ಈ ಕಾರಣದಿಂದಲೇ ಇವತ್ತಿನ ಸಾಹಿತ್ಯಿಕ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತರಾಗುತ್ತಾರೆ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಸಂಘಟಕನನ್ನು ಹತ್ತಿರದಿಂದ ಕಂಡೆ

☐ ಡಾ॥ ಸುನೀತಾ ಎಂ. ಶೆಟ್ಟಿ



ಶ್ರೀ ಹರಿಕೃಷ್ಣ ಪುನರೂರು ಅವರನ್ನು ನಾನು ಪ್ರಥಮ ಬಾರಿಗೆ ಕಂಡದ್ದು ಮೂಲ್ಕಿಯಲ್ಲಿ ನಡೆದ ಅಖಿಲ ಭಾರತ ಮಟ್ಟದ 'ತುಳು ಸಮ್ಮೇಳನ'ದಲ್ಲಿ. ಆಗ ಅವರು ಬಪ್ಪನಾಡು ದೇವಸ್ಥಾನದ ಮೊಕ್ತೇಸರ ಆಗಿದ್ದರೆಂದು ನೆನಪು. ಸಮ್ಮೇಳನ ನಡೆದುದು ದೇವಸ್ಥಾನದ ಆವರಣದಲ್ಲಿಯ ಜ್ಞಾನ ಮಂದಿರದಲ್ಲಿ. ಮುಂಬಯಿಯಿಂದ ಹೋಗಿದ್ದ ನನಗೆ ಬಪ್ಪನಾಡು ದೇಗುಲದ ದೊಡ್ಡ ಡೋಲು ಆಕರ್ಷಣೀಯವಾಗಿ ಕಂಡಿತ್ತು. ಏಕೆಂದರೆ ತುಳುನಾಡಿನಲ್ಲಿ ಕೆಲಸಕ್ಕೆ ಬಾರದ ದಡ್ಡ ಹುಡುಗರನ್ನು 'ನೀ ಬಪ್ಪನಾಡ್‌ದ 'ಡೋಲು ಗುದ್ದೆರೆ ಪೋ' (ನೀನು ಬಪ್ಪನಾಡಿನ ಡೋಲು ಬಡಿಯಲು ಹೋಗು) ಎನ್ನುತ್ತಿದ್ದ ರೂಢಿಯ ಮಾತನ್ನು ಎಳವೆಯಲ್ಲಿ ಕೇಳಿದ್ದ ನನಗೆ ಈ ಡೋಲನ್ನೊಮ್ಮೆ ಬಾರಿಸಿದರೆ ಹೇಗೆ? ಎಂಬ ಹುಚ್ಚು ಕುತೂಹಲ ಕೆರಳಿ ಕೈಯಿಂದ ಹೊಡೆದು 'ಢಂ' ಎಂದು ಬಾರಿಸಿದೆ. ಅಲ್ಲೇ ಹಾದು ಹೋಗುತ್ತಿದ್ದ ಪುನರೂರು 'ಡೋಲು ಬೊಟ್ಟೆರೆ ದುಡ್ಡು ಕೊರೊಡು' (ಡೋಲು ಹೊಡೆಯಬೇಕಾದರೆ ಹಣ ಪಾವತಿಸಬೇಕು) ಎಂದು ನಕ್ಕು ಮುಂದೆ ಹೋದರು. ಅದರ ಮಹತ್ವವನ್ನು ಪರ್ಯಾಯವಾಗಿ ಹೇಳಿದ್ದು ನನಗೂ ಅರ್ಥವಾಗಿ, ಇತ್ತೀಚೆಗೆ ನನ್ನ ಮೊಮ್ಮಗನೊಬ್ಬ ಅದನ್ನು ಬಾರಿಸಲೆಂದು ಕೈ ಎತ್ತಿದಾಗ ನಾನೇ ತಡೆದೆ. ಭಕ್ತಿಗಿಂತಲೂ

B-28, Shivasristi sarvodaya society, kurla (E) Mumbai-400 024

ಮುಖ್ಯವಾದುದು ಒಂದು ನೆಲದ ಪಾವಿತ್ರ್ಯ; ಅದು ಒಂದು ಜನಾಂಗದ ಸಂಸ್ಕೃತಿಯ ಪುಣ್ಯ!

ತುಳು ಸಮ್ಮೇಳನದ ಸಂದರ್ಭದಲ್ಲಿ ನಡೆದ ಶೋಭಾಯಾತ್ರೆಯಲ್ಲಿ ದೈವಗಳ (ಭೂತ ವೇಷ) ವೇಷವನ್ನು ಕುಣಿಸಿದ್ದೇ ಒಂದು ವಾದಕ್ಕೆ ಎಡೆಮಾಡಿಕೊಟ್ಟದ್ದು, ಹರಿಪೂಂಜರು ಅನ್ನಸತ್ಯಾಗ್ರಹ ನಡೆಸಿದ್ದು, ಕೊನೆಗೆ ಅವರನ್ನು ಸಮಾಧಾನ ಪಡಿಸಿದ ಮೇಲೆ ಎಲ್ಲವೂ ಶಾಂತವಾದುದು- ಈ ಘಟನೆಗಳು ಈಗಲೂ ದೃಶ್ಯಾವಳಿಗಳಂತೆ ನನ್ನ ಮನಃಪಟಲದಲ್ಲಿ ಮನೆ ಮಾಡಿವೆ. ತುಳುನಾಡಿನ ವೀರ, ಅಗೋಳಿ ಮಂಜಣ, ಬಪ್ಪನಾಡು ದೇವಾಲಯದ ಮುಂಭಾಗದಲ್ಲಿ ದಂಬೆಕಲ್ಲು ಊರಿದವನು ಎಂಬ ಸಾಹಸದ ಕತೆ ಈಗಲೂ ಜನಜನಿತವಾಗಿದೆ. ಇಂತಹ ಸ್ಥಳದಲ್ಲಿ ಎರಡು ದಿನಗಳ ಕಾಲ ತುಳುಭಾಷೆ, ಸಾಹಿತ್ಯ, ಸಂಸ್ಕೃತಿ- ಇವು ದೇಗುಲದ ಗಂಟೆಗಳಂತೆ ಮೊಳಗಿದವು. ಈ ಸಾಧನೆಯ ಸರದಾರ ಪುನರೂರು ಎಂಬ ಸಂಗತಿ ಮುಂಬಯಿಯ ನಮಗೆ ಗೌರವದ ವಿಷಯವಾಯಿತು.

ತುಳುಭಾಷೆಯನ್ನು ಪೋಷಿಸುವ ಕಾಯಕದ ಜೊತೆಗೆ ಹರಿಕೃಷ್ಣರು ಕನ್ನಡದ ಸೇವಕನಾಗಿಯೂ ದುಡಿಯುತ್ತ ಬಂದಿದ್ದಾರೆ. ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ರಾಜಗದ್ದುಗೆಯಿಂದ ಇಳಿಸಿ ಗ್ರಾಮಾಂತರ ಪ್ರದೇಶಗಳ ಹಸಿರುದಿಬ್ಬಗಳೆಡೆಗೆ ಸಾಗಿಸಿಕೊಂಡು ಬಂದು, ಜಿಲ್ಲೆ, ತಾಲೂಕು, ಹೋಬಳಿ ಮಟ್ಟಗಳಲ್ಲಿಯೂ ನುಡಿದೇವಿಯ ಆರಾಧನೆ ನಡೆಸುತ್ತ ಕನ್ನಡದ ತೇರನ್ನು ನಾಡಿನ ಉದ್ದಗಲಕ್ಕೂ ಹರಿಸಿದ ಹರಿಕಾರ ಇವರು. ಆ ಆ ಪರಿಸರದ ಸಾಧಕರನ್ನು ಗುರುತಿಸಿ ಗೌರವಿಸಿ ಗೌರವಿಸುವ ನೂತನ ಪರಂಪರೆಯನ್ನು ಹಾಕಿಕೊಟ್ಟು ಜನಪ್ರಿಯತೆಯನ್ನು ಗಳಿಸಿದರು. ಇದರಿಂದಾಗಿಯೇ 'ಮಂಗಳೂರು ತಾಲೂಕು ಸಾಹಿತ್ಯ ಸಮ್ಮೇಳನ'ದ ಉದ್ಘಾಟನೆ ನಡೆಸುವ ಒಂದು ಸುಯೋಗ ಮುಂಬಯಿಯ ನನಗೂ ದೊರಕಿತು. ಈ ಸಂದರ್ಭವನ್ನು ಕರ್ನಾಟಕದ ಪತ್ರಿಕೆಗಳು ಮುಖಪುಟದಲ್ಲಿ ಪ್ರಕಟಿಸಿದಾಗ ನನಗಾದ ಆನಂದ ಹೇಳತೀರದಷ್ಟು. ಮತ್ತೊಮ್ಮೆ ಬೆಳ್ತಂಗಡಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡುವ ಸುಸಂಧಿಯೂ ನನ್ನ ಪಾಲಿಗೆ ದಕ್ಕಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಎಲ್ಲೆಡೆ ತಾನೇ ಖುದ್ದಾಗಿ ಮುತುವರ್ಜಿ ವಹಿಸಿ ಸಮಾವೇಶಗಳ ಯಶಸ್ಸಿಗೆ ಕಾರಣರಾದ ಪುನರೂರು ಈ ಮೆಟ್ಟಲುಗಳನ್ನು ದಾಟಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಗೊಂಡಾಗ ನಾವು, ಮುಂಬಯಿ ಕನ್ನಡಿಗರು, ಮುಂದಿನ ಮೂರು ವರುಷಗಳಲ್ಲಿ ಪರಿಷತ್ತಿಗೆ ಪರ್ವಕಾಲ ಒದಗಲಿದೆ ಎಂದು ಖಂಡಿತವಾಗಿ ನಂಬಿದೆವು. ಸಾಹಿತಿಯಲ್ಲದ ಓರ್ವ ವ್ಯಕ್ತಿ ಕೇವಲ ಭಾಷೆ-ಸಾಹಿತ್ಯ ಪ್ರೇಮದಿಂದಲೇ ಪರಿಷತ್ತನ್ನು ಮುನ್ನಡೆಸಬಹುದೇ ಎಂದು ಹುಬ್ಬೇರಿಸಿದ ಎಲ್ಲರಿಗೂ ಸವಾಲಾಗಿ ನಿಂತು ಅ.ಭಾ. ಮಟ್ಟದ ಮೂರು ಸಮ್ಮೇಳನಗಳನ್ನು ಭರ್ಜರಿಯಾಗಿಯೇ ನಡೆಸಿದ ಪುನರೂರು ಒಂದು ಹೊಸ ಪರಂಪರೆಗೆ ತಳಪಾಯ ಹಾಕಿದರು.

1997ರಲ್ಲಿ ಅರುವತ್ತಾರನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಮಹಿಳಾಗೋಷ್ಠಿಯೊಂದು ಮುಖ್ಯ ಸಭಾಂಗಣದ ಹೊರಗಿನ ಕಟ್ಟಡದ ಕಿರು ಸಭಾಗೃಹದಲ್ಲಿ ಸಮಾವೇಶಗೊಂಡಿತು. ಈ ಗೋಷ್ಠಿಗೆ ಸಿನಿಮಾ ತಾರೆಯರಾದ ವಿನಯಾ ಪ್ರಸಾದ್ ಮತ್ತು ಉಮಾಶ್ರೀ ಅತಿಥಿಗಳಾಗಿ ಬಂದಿದ್ದರು. ಮುಂಬಯಿಯಿಂದ ಓರ್ವ ಭಾಷಣಕಾರ್ತಿಯಾಗಿ ನಾನೂ ಆಮಂತ್ರಿತಳಾಗಿದ್ದೆ. ಇದಕ್ಕಿದ್ದಂತೆ ಗೋಷ್ಠಿ ಆರಂಭಗೊಳ್ಳುವ ಮೊದಲೇ ಆ ಕಿರು ಸಭಾಂಗಣದಲ್ಲಿ ಜನ ತುಂಬಿದ್ದಲ್ಲದೆ ಹೊರಗಿನಿಂದಲೂ ನೂಕು ನುಗ್ಗಲು ಆರಂಭವಾಯಿತು. ಪೋಲೀಸರು ಬಂದರು. ಆದರೂ ಸಿನಿಮಾ ತಾರೆಯರನ್ನು ನೋಡುವ ಜನರ ನುಗ್ಗಾಟ ಕಡಿಮೆಯಾಗಲಿಲ್ಲ. ಕೊನೆಗೆ ಪುನರೂರು

ವೇದಿಕೆಗೆ ಬಂದು ಈ ಇಬ್ಬರು ತಾರೆಯರು ಮೊದಲು ಮಾತನಾಡುತ್ತಾರೆ; ಸದ್ದಿಲ್ಲದೆ ಕೇಳಿಕೊಳ್ಳಿ ಎಂದು ಹೇಳಿದ ಮೇಲೆ ಎಲ್ಲವೂ ಶಾಂತವಾಯಿತು. ಅದರಂತೆ ಆ ಇಬ್ಬರ ಮಾತು ಮುಗಿದ ಮೇಲೆಯೇ ನಾವು ಉಳಿದವರು ಸಾಹಿತ್ಯದ ಬಗ್ಗೆ ಮಾತನಾಡಿದೆವು. ಆಗ ಅರ್ಧ ಸಭೆ ಕರಗಿ ಹೋಗಿತ್ತು, ತಾರೆಯರೂ ಹೊರಟುಹೋಗಿದ್ದರು. ಹರಿಕೃಷ್ಣರ ಈ ಪ್ರಸಂಗಾವಧಾನತೆಯಿಂದಾಗಿ ಪೋಲೀಸರು ಲಾಠಿ ಚಾರ್ಜು ನಡೆಸುವುದು ತಪ್ಪಿತು; ಸಾಹಿತ್ಯ, ಜನಮಾನಸದ ನಡುವೆ ಸೇತುವೆ ಆಗಿಬಿಟ್ಟಿತು. ಓರ್ವ ಉತ್ತಮ ಸಾಹಿತಿಗೂ ಅಸಾಧ್ಯವಾದ ಸಂಘಟನಾ ಕೌಶಲ ಹರಿಕೃಷ್ಣರಲ್ಲಿ ಇದ್ದುದರಿಂದಲೇ ತನ್ನ ಅಧಿಕಾರದ ಅವಧಿಯ ಮೂರು ವರ್ಷಗಳಲ್ಲಿ ನಿರಂತರ ಸಾಹಿತ್ಯ ಸಮಾರಾಧನೆಗಳನ್ನು ನಡೆಸಿ ಅವರು 'ಸೈ' ಎನಿಸಿಕೊಂಡರು.

ನಾನು 'ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ'ಯ ಸದಸ್ಯೆಯಾಗಿದ್ದಾಗ ಸುರತ್ಕಲ್‌ಗೆ ಸಮೀಪದ ಚೇಳಾರು ಗುತ್ತಿನಲ್ಲಿ 'ಅಗೋಳಿ ಮಂಜಣ-ಸಂಸ್ಮರಣೆ' ಕಾರ್ಯಕ್ರಮವೊಂದು ನಡೆಯಿತು. ಚೇಳಾರು ಗುತ್ತು, ಅಗೋಳಿ ಮಂಜಣನ ತವರುಮನೆಯೆಂದು ಹೇಳಲಾಗುತ್ತಿದೆ. ಅವನದೆಂದು ಹೇಳಲಾಗುವ ಕೆಲವು ವಸ್ತುಗಳು ಈಗಲೂ ಆ ಮನೆಯಲ್ಲಿ ಇವೆ. ಅಕಾಡೆಮಿಯ ವತಿಯಿಂದ ನಡೆದ ಈ ಕಾರ್ಯಕ್ರಮಕ್ಕೆ ಸುರಿಯುವ ಮಳೆಯಲ್ಲಿಯೂ ಪುನರೂರು ಹಾಜರಾದರು. ''ಮಂಜಣನಿಗೆ ಪ್ರಿಯವಾದ ಬಪ್ಪನಾಡು ಕ್ಷೇತ್ರವೇ ಇಲ್ಲಿಗೆ ಬಂದಂತಾಯಿತು'' ಎಂದು ಆಗ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಿ॥ ಬಾಲಕೃಷ್ಣ ಶೆಟ್ಟಿ ಪೊಳಲಿಯವರು ನುಡಿದರು. ಓರ್ವ ಸಾಮಾನ್ಯ ಪ್ರೇಕ್ಷಕನಂತೆ ಆಗಮಿಸಿ, ತುಳು ಭಾಷೆಯ ಬೆಳವಣಿಗೆಯ ನಿಟ್ಟಿನಲ್ಲಿ ಅಕಾಡೆಮಿ ಏನು ಮಾಡುವುದು ಸಾಧ್ಯವೆಂಬುದರ ಬಗೆಗೆ ನಾಲ್ಕು ಸುರಸ ಮಾತುಗಳನ್ನಾಡಿ ಪ್ರೋತ್ಸಾಹಿಸಿದ ಈ ಸಂದರ್ಭ ಮರೆಯಲಾಗದ್ದು.

2004ರಲ್ಲಿ ಡಾ. ಮೋಹನ ಆಳ್ವರ ಸಹಕಾರದೊಂದಿಗೆ ಮೂಡಬಿದಿರೆಯಲ್ಲಿ 'ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ' 'ನ ಭೂತೋ ನ ಭವಿಷ್ಯತಿ'- ಎಂಬಂತೆ ನಡೆದು ಹೋಯಿತು. ಕರ್ನಾಟಕದ ಮೂಲೆ ಮೂಲೆಗಳಿಂದ ಬಂದ ಜನ, ದಕ್ಷಿಣ ಕನ್ನಡದ ನಿಸರ್ಗ ಸಿರಿಗೆ, ಶಿಲ್ಪ ವೈಭವಕ್ಕೆ, ಎಲ್ಲಕ್ಕಿಂತ ಮಿಗಿಲಾಗಿ ಇಲ್ಲಿಯ ಮನಸ್ಸುಗಳಿಗೆ ಮಾರು ಹೋದರು. ಬದುಕಿನಲ್ಲಿ ಅತಿ ಮುಖ್ಯವೆನಿಸುವ ತುಷ್ಟಿ-ಸಂತುಷ್ಟಿ ಈ ಎರಡೂ ದಕ್ಕುವುದೊಂದು ಭಾಗ್ಯವಲ್ಲವೇ? ಈ ಅದೃಷ್ಟವನ್ನು ಪಡೆದವರು ಪುನರೂರು ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ.

ಇನ್ನು ಕೊನೆಯದಾಗಿ ಇತ್ತೀಚೆಗೆ ನಡೆದ ಒಂದು ಪ್ರಸಂಗವನ್ನೂ ಹೇಳದಿದ್ದರೆ ನನ್ನ ಋಣಭಾರ ತಗ್ಗದು. ಧರ್ಮಸ್ಥಳದ ಗ್ರಾಮಾಂತರ ಯೋಜನೆಯಡಿಯಲ್ಲಿ ಮೂಲ್ಕಿ ಹೋಬಳಿಯ ಸ್ವಸಹಾಯ ಗುಂಪುಗಳೂ ಸೇರಿ ಬಪ್ಪನಾಡು ಕ್ಷೇತ್ರದಲ್ಲಿ ನಡೆಸಿದ ಸುಂದರ ಸಮಾರಂಭವೊಂದರಲ್ಲಿ ನಾನೋರ್ವ ಪ್ರೇಕ್ಷಕಿಯಾಗಿ ಹಾಜರಿದ್ದೆ. ಕಾರ್ಯನಿಮಿತ್ತ ಮುಂಬಯಿಯಿಂದ ಊರಿಗೆ ಹೋಗಿದ್ದ ನನ್ನಲ್ಲಿ ಅದನ್ನು ನೋಡುವ ಕುತೂಹಲವಿತ್ತು. ಸಭೆಯಲ್ಲಿದ್ದ ನನ್ನನ್ನು ನೋಡಿ ಪುನರೂರು, ವೇದಿಕೆಗೆ ಕರೆಸಿ, ಒಂದು ಸ್ಥಾನವಿತ್ತು ನಾಲ್ಕು ಮಾತುಗಳನ್ನಾಡುವ ಅವಕಾಶವನ್ನೂ ಒದಗಿಸಿಕೊಟ್ಟರು. 2004ರಲ್ಲಿ ಮುಂಬಯಿಯಲ್ಲಿ ನಡೆದ 'ಮಹಾರಾಷ್ಟ್ರ ಕನ್ನಡಿಗರ ಆರನೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶ'ದ ಸಂದರ್ಭದಲ್ಲಿಯೂ ಹರಿಕೃಷ್ಣ ಪುನರೂರು ಮತ್ತು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರದೀಪ್‌ಕುಮಾರ್ ಕಲ್ಕೂರ ಇವರಿಬ್ಬರೂ ಇದರಲ್ಲಿ ಭಾಗವಹಿಸಿದ್ದಲ್ಲದೆ ಅಧ್ಯಕ್ಷ ಸ್ಥಾನದಲ್ಲಿದ್ದ ನನ್ನನ್ನು ಗೌರವಿಸಿ ನಾಲ್ಕು ಒಳ್ಳೆಯ ಮಾತುಗಳನ್ನು ಆಡಿದರು.

ಈಗಲೂ, ಇಷ್ಟೆಲ್ಲ ಅಧಿಕಾರಗಳನ್ನು ಅನುಭವಿಸಿಯೂ ಅಹಂಕಾರದ ಕಿರೀಟವನ್ನು ತೊಟ್ಟುಕೊಳ್ಳದ

ಪುನರೂರು 'ಬಡವರ ಬಂಧು' ಕೂಡ ಆಗಿದ್ದಾರೆಂಬುದು ಪತ್ರಿಕೆಗಳಿಂದ ಇಲ್ಲಿಯ ನಮಗೆ ಸುದ್ದಿ ಮುಟ್ಟುತ್ತದೆ. ಜೇಬಿನ ಹಣ ಕರಗಿ ಹೋಗುವುದಕ್ಕಿಂತ, ನಿತ್ಯ ಚಲಾವಣೆಯಲ್ಲಿದ್ದರೇನೇ ಅದಕ್ಕೊಂದು ಸಾರ್ಥಕತೆ; ಶ್ರೀಮಂತಿಕೆ ಯಾವ ದಾರಿಯಲ್ಲಿ ಸಾಗಿದರೆ ಚೆನ್ನ ಎಂಬ ಅರಿವಿನಿಂದಲೇ ಬದುಕಿಗೆ ಅರ್ಥ ತುಂಬುವ ಈ ವ್ಯಕ್ತಿ ಸೂರ್ಕಾಲಕ್ಕಿಂತಲೂ ಹೆಚ್ಚು ಬಾಳಲಿ ಎಂದು ಆಶಿಸುತ್ತೇನೆ.

□

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಶಿಶು ಸಾಹಿತ್ಯ ಪ್ರೋತ್ಸಾಹಕ

☐ ಪಳಕಳ ಸೀತಾರಾಮ ಭಟ್ಟ



1989ರ ಒಂದು ಸಂಜೆ ಕಿನ್ನಿಗೋಳಿ ಯುಗಪುರುಷ ಸಭಾಭವನದಲ್ಲಿ ನನ್ನದೊಂದು ಪುಸ್ತಕ ಬಿಡುಗಡೆಯ ಕಾರ್ಯಕ್ರಮವಿತ್ತು. ಪುನರೂರು ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಹಿರಿಯಣ್ಣ ಕೊ.ಅ. ಉಡುಪ ಅವರು ಪ್ರಾಸ್ತಾವಿಕ ಭಾಷಣದಲ್ಲಿ ''ಪಳಕಳರು ಸುಮಾರು 150 ಪುಟಗಳ ತಮ್ಮ ಪ್ರಾತಿನಿಧಿಕ ಕವನ ಸಂಕಲನವೊಂದನ್ನು ಹೊರತರುವ ಹವಣಿಕೆಯಲ್ಲಿದ್ದಾರೆ. ಆ ಬಗ್ಗೆ ನಾವು ಸಹಕರಿಸುವ ಭರವಸೆ ನೀಡಿದ್ದೇವೆ'' ಎನ್ನುವ ಸಂಗತಿಯನ್ನು ಹೊರಗೆಡಹಿದರು. ಪುನರೂರು ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ''ಪಳಕಳರ ಪ್ರಾತಿನಿಧಿಕ ಕವನ ಸಂಕಲನವು ಯುಗಪುರುಷ ಪ್ರಕಾಶನದಿಂದಲೇ ಹೊರಬರಬೇಕು. ಅದರ ಮುದ್ರಣ ವೆಚ್ಚವನ್ನೆಲ್ಲ ನಾನು ಭರಿಸುತ್ತೇನೆ'' ಎಂದು ಘೋಷಿಸಿಯೇ ಬಿಟ್ಟರು. ಸ್ವಯಂ ಪ್ರೇರಣೆಯಿಂದ ಅವರು ಆ ಘೋಷಣೆ ಮಾಡಿದ್ದರು. ಬೇಡದೇ ನೀಡುವ ಉತ್ತಮಿಕೆಯನ್ನು ಅವರು ಮೆರೆದಿದ್ದರು.

ನನ್ನ 50ನೆಯ ಪುಸ್ತಕ 'ಮಕ್ಕಳ ಮಾಣಿಕ್ಯ'ದ ಮುದ್ರಣ ಆರಂಭಗೊಂಡಿತು. ಕೆಲವೇ ಸಮಯದೊಳಗೆ ಪುಸ್ತಕವು ಬಿಡುಗಡೆಗೆ ಸಿದ್ಧವಾಯಿತು. 20-12-89ರಂದು ಪುನರೂರು ಅವರಿಂದ ನನಗೊಂದು ಪತ್ರ ಬಂದಿತು. ಪ್ರಿಯ ಪಳಕಳರೇ, ನಿಮ್ಮ

ಶಿಶು ಸಾಹಿತ್ಯಮಾಲೆ, ಮಿತ್ತಬೈಲು–574226, ದಕ್ಷಿಣ ಕನ್ನಡ ಜಿಲ್ಲೆ

'ಮಕ್ಕಳ ಮಾಣಿಕ್ಯ'ದ ಮುದ್ರಣ ವೆಚ್ಚ ರೂ. 10,945/ನ್ನು ಕೊ.ಅ. ಉಡುಪ ಅವರಿಗೆ ಸಂದಾಯ ಮಾಡಿದ್ದೇನೆ. ಪುಸ್ತಕದ ಬಿಡುಗಡೆಯ ಬಳಿಕ, ಅದರ ಎಲ್ಲ ಪ್ರತಿಗಳನ್ನೂ ನೀವು ಪಡೆದುಕೊಳ್ಳಬೇಕು. ಅವುಗಳ ಮಾರಾಟದಿಂದ ಬಂದ ಹಣವನ್ನು ನಿಮ್ಮ ಮುಂದಿನ ಪುಸ್ತಕಗಳ ಪ್ರಕಟಣೆಗೆ ಬಳಸಿಕೊಳ್ಳಬೇಕು. ನಿಮ್ಮ ಸಾಹಿತ್ಯಸೇವೆ ಇನ್ನಷ್ಟು ಮುಂದುವರಿಯಬೇಕು. ನಿಮಗೆ ಶುಭವಾಗಲಿ'' ಎಂದು ಅವರು ಬರೆದಿದ್ದರು. ''ಒಂದು ವೇಳೆ ಆ ಪುಸ್ತಕಗಳ ಮಾರಾಟವು ನಿಮಗೆ ಅಸಾಧ್ಯವಾದಲ್ಲಿ, ನಿಮ್ಮ ಸಾಹಿತ್ಯಾಸಕ್ತ ಮಿತ್ರರಿಗೆ ಅವುಗಳನ್ನು ಹಂಚಿಬಿಡಿರಿ'' ಎಂದೂ ಅವರು ಸೇರಿಸಿದ್ದರು.

ಮುಂದಿನ ಕೆಲವೇ ದಿನಗಳಲ್ಲಿ ನನ್ನ ಹೊಸ ಪುಸ್ತಕದ ಬಿಡುಗಡೆ ನಡೆಯಿತು. ಪುನರೂರು ಅವರೇ ಅದನ್ನು ಬಿಡುಗಡೆಗೊಳಿಸಿ, ಶುಭ ಹಾರೈಸಿದ್ದರು. ಆ ಪುಸ್ತಕದ 250 ಪ್ರತಿಗಳನ್ನು ಮಾತ್ರ ನಾನು ಕೊ.ಅ. ಉಡುಪರಿಂದ ಪಡೆದುಕೊಂಡಿದ್ದೆ. 20 ರೂ. ಮುಖಬೆಲೆಯ ಆ ಪುಸ್ತಕವನ್ನು 15 ರೂ. ಗಳಿಗೂ ಕೊಳ್ಳುವವರು ಸಿಗಲಿಲ್ಲ. ಸುಮಾರು 200 ಪ್ರತಿಗಳನ್ನು ಮಾತ್ರ ಮಾರಾಟ ಮಾಡಿದ್ದೆ. ಉಳಿದ ಪ್ರತಿಗಳನ್ನು ಸಾಹಿತ್ಯಾಸಕ್ತ ಮಿತ್ರರಿಗೆ ಹಂಚಿ ಮುಗಿಸಿದ್ದೆ. ಪುಸ್ತಕಗಳ ಮಾರಾಟದಲ್ಲಿ ಇದು ನನ್ನ ನಿತ್ಯಾನುಭವವೂ ಹೌದು.

1991ರ ಸಮಯವದು. ನನ್ನ 60ನೆಯ ಪುಸ್ತಕ, 'ಮುಟ್ಟಿದ್ದೆಲ್ಲ ಚಿನ್ನ' ಕಥನಕವನಗಳ ಸಂಗ್ರಹ ಪ್ರಕಟಣೆಗೆ ಸಿದ್ಧವಾಗಿತ್ತು. ನನ್ನ ನಿರಂತರ ಪ್ರೋತ್ಸಾಹಕರಾಗಿದ್ದ ಕೊ.ಅ. ಉಡುಪರಿಗೇ, ಹಸ್ತಪ್ರತಿಯನ್ನು ಒಪ್ಪಿಸಿದ್ದೆ. ಅದೇ ಸಮಯದಲ್ಲಿ ಕೊ.ಅ. ಉಡುಪರ 'ಸದಾಶ್ರಮ' ಎಂಬ ಪುಸ್ತಕವೂ ಮುದ್ರಣದಲ್ಲಿತ್ತು. ಆ ಎರಡೂ ಪುಸ್ತಕಗಳನ್ನು ಒಂದೇ ದಿನ ಬಿಡುಗಡೆಗೊಳಿಸುವ ಆಶ್ವಾಸನೆಯನ್ನು ಉಡುಪರು ನೀಡಿದ್ದರು. ಪುಸ್ತಕ ಬಿಡುಗಡೆಯ ದಿನವನ್ನು ಎದುರು ನೋಡುತ್ತಿದ್ದೆ. ಹೀಗಿರುವಾಗಲೇ 16-1-1991ರಂದು ಶ್ರೀ ಪುನರೂರು ಅವರಿಂದ ನನಗೆ ಇನ್ನೊಂದು ಪತ್ರ ಬಂದಿತ್ತು.

''ಕೊ.ಅ. ಉಡುಪರ 'ಸದಾಶ್ರಮ' ಮತ್ತು ನಿಮ್ಮ 'ಮುಟ್ಟಿದ್ದೆಲ್ಲ ಚಿನ್ನ' ಈ ಎರಡೂ ಪುಸ್ತಕಗಳ ಮುದ್ರಣ ವೆಚ್ಚ ರೂ. 15,000ವನ್ನು ಯುಗಪುರುಷಕ್ಕೆ ಸಂದಾಯ ಮಾಡಿದ್ದೇನೆ. ಉಡುಪರ ಪುಸ್ತಕಗಳನ್ನು ಅವರೇ ಮಾರಾಟ ಮಾಡಿ, ಇನ್ನೂ ಹೆಚ್ಚಿನ ಪುಸ್ತಕಗಳನ್ನು ಪ್ರಕಟಿಸಲಿ. ನಿಮ್ಮ ಪುಸ್ತಕದ ಎಲ್ಲ ಪ್ರತಿಗಳನ್ನೂ ನೀವೇ ಪಡೆದು, ಮಾರಾಟಮಾಡಿರಿ. ಇದರಿಂದ ನಿಮ್ಮ ಇನ್ನೂ ನಾಲ್ಕು ಹೊಸ ಪುಸ್ತಕಗಳ ಬಿಡುಗಡೆಗಾದರೂ ಸಹಾಯವಾಗಲಿ'' ಎಂದು ಅವರು ಬರೆದಿದ್ದರು. ಆದರೆ ನಾನು ಸ್ವತಃ ಪ್ರಕಟಿಸಿದ 25ಕ್ಕಿಂತ ಹೆಚ್ಚು ಪುಸ್ತಕಗಳ ಸಾವಿರಾರು ಪ್ರತಿಗಳು ಮಾರಾಟವಾಗದೆ ನನ್ನ ಕಪಾಟುಗಳಲ್ಲಿ ತುಂಬಿದ್ದ ಕಾರಣ, 'ಮುಟ್ಟಿದ್ದೆಲ್ಲ ಚಿನ್ನ' ಪುಸ್ತಕದ 150 ಪ್ರತಿಗಳನ್ನು ಮಾತ್ರ ಉಡುಪರಿಂದ ನಾನು ಪಡೆದುಕೊಂಡು, ಉಳಿದ ಪ್ರತಿಗಳನ್ನು ಅವರಿಗೇ ಬಿಡಬೇಕಾಯಿತು. ಪುನರೂರು ಅವರ ಕೊಡುಗೆಯ ಸದುಪಯೋಗ ಪಡೆಯಲು ನಾನು ಅಸಮರ್ಥನಾದೆ. ಅದು ಬೇರೆ ಮಾತು.

ಅಂತೂ ಪುನರೂರು ಅವರು ನನ್ನ ಪುಸ್ತಕ ಪ್ರಕಟಣೆಯ ಎರಡು ಸಂದರ್ಭಗಳಲ್ಲಿ ನನಗೆ ಆರ್ಥಿಕ ನೆರವು ನೀಡಿದ್ದರು. ಒಟ್ಟು ಸುಮಾರು 14,000 ರೂ.ಗಳನ್ನು ಅವರು ನನಗಾಗಿ ವೆಚ್ಚ ಮಾಡಿದ್ದರು. ನಾನು ಬೇಡದಿದ್ದರೂ ಅವರು ನೀಡಿದ್ದರು. ನನಗೆ ಮಾತ್ರವಲ್ಲ, ಆರ್ಥಿಕ ನೆರವು ಯಾಚಿಸಿ ಬಂದ ಸಾಹಿತಿಗಳಲ್ಲಿ, ಕವಿಗಳಲ್ಲಿ, ಕಲಾವಿದರಲ್ಲಿ, ಸಂಘ ಸಂಸ್ಥೆಗಳ ಸದಸ್ಯರಲ್ಲಿ ಯಾರನ್ನೂ ಅವರು ಬರಿಗೈಯಲ್ಲಿ ಹಿಂದೆ ಕಳುಹಿಸಿದವರಲ್ಲ. ನಗುನಗುತ್ತಲೇ ಪ್ರಿಯ ವಾಕ್ ಸಹಿತ ಆರ್ಥಿಕ ನೆರವು ನೀಡಿ, ಶುಭಹಾರೈಸಿ, ಅವರನ್ನು ಪ್ರೋತ್ಸಾಹಿಸಿದ ಕೊಡುಗೈ ದಾನಿ ಪುನರೂರು ಅವರು. ಈ ರೀತಿಯ ಸಾಹಿತ್ಯ ಕಲಾ ಪ್ರೇಮವನ್ನು, ಇಂಥ ಔದಾರ್ಯವನ್ನು ಪುನರೂರು ಅವರ ಹೊರತು ಬೇರೆ ಯಾರಲ್ಲಿ ಕಾಣಲು ಸಾಧ್ಯ?

1993ರ ಒಂದು ದಿನ ನಾವು ಕೆಲವು ಮಂದಿ ಗೆಳೆಯರು ಪುನರೂರು ಅವರನ್ನು ಭೇಟಿ ಮಾಡಿದೆವು; ಮಂಗಳೂರಲ್ಲಿ ನಾವು ಸ್ಥಾಪಿಸಲು ಉದ್ದೇಶಿಸಿದ ಅವಿಭಜಿತ ''ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ''ಕ್ಕೆ ಅವರ ಬೆಂಬಲವನ್ನು ಯಾಚಿಸಿದೆವು. ಸಾಹಿತ್ಯ ಸಂಗಮದ ಧ್ಯೇಯೋದ್ದೇಶಗಳನ್ನು ನಮ್ಮಿಂದ ಕೇಳಿ ತಿಳಿದುಕೊಂಡ ಪುನರೂರು ಅವರು ತತ್‌ಕ್ಷಣ ನಮ್ಮ ಕೇಳಿಕೆಗೆ ಪ್ರತಿಸ್ಪಂದಿಸಿದರು; ಸಂಸ್ಥೆಗೆ ಸಂಪೂರ್ಣ ಸಹಕಾರದ ಭರವಸೆ ನೀಡಿದರು.


ಮುಂದಿನ ಜೂನ್ ತಿಂಗಳ ಹದಿಮೂರರಂದು ಮೂಲ್ಕಿಯ 'ಪುನರೂರು ಟೂರಿಸ್ಟ್ ಹೋಂ' ಸಭಾಭವನದಲ್ಲಿ 'ಮಕ್ಕಳ ಸಾಹಿತ್ಯ ಸಂಗಮ'ದ ಉದ್ಘಾಟನೆ ನಡೆಯಿತು. ಪುನರೂರು ಅವರು ಸಂಸ್ಥೆಯ ಗೌರವಾಧ್ಯಕ್ಷರಾಗಿ ಆಯ್ಕೆಗೊಂಡರು. ರೂ. 10 ಸಾವಿರ ತೆತ್ತು ಸಂಗಮದ ಮಹಾ ಪೋಷಕರೂ, ಮಾರ್ಗದರ್ಶಿಗಳೂ ಆದ ಪುನರೂರು ಅವರು ತ್ರಿಕರಣ ಪೂರ್ವಕ ಬೆಂಬಲ ನೀಡಿ, ಸಂಗಮದ ಮುನ್ನಡೆಗೆ ಕಾರಣರಾದರು. 1993ರಿಂದ ಇಂದಿನವರೆಗೂ ಸಂಗಮದ ವಾರ್ಷಿಕ ಮಹಾಸಭೆಗಳು ನಡೆಯುವುದು ಪುನರೂರು ಟೂರಿಸ್ಟ್ ಹೋಂ ಸಭಾಭವನದಲ್ಲಿ. ಸಭಿಕರಿಗೆಲ್ಲ ಊಟ-ಉಪಾಹಾರ ಒದಗಿಸುವವರು ಪುನರೂರು ಅವರು. ಸಂಗಮದ 'ಶಾಲಾ ಸಂಚಿಕೆಗಳಿಗೆ ಬಹುಮಾನ' ಯೋಜನೆಯ ಪ್ರಾಯೋಜಕರು ಪುನರೂರು. ವಿಶೇಷ ಸಂದರ್ಭಗಳಲ್ಲಿ ಸಾಹಿತಿಗಳ ಸಮ್ಮಾನ, ಬಾಲ ಪ್ರತಿಭಾ ಪುರಸ್ಕಾರಗಳಂಥ ಕಾರ್ಯಕ್ರಮಗಳಿಗೆ ಪ್ರೇರಣೆ - ಪ್ರಾಯೋಜಕತ್ವ ಅವರದೇ. ಕರಾವಳಿ ಕರ್ನಾಟಕದ ಹಲವಾರು ಸಾಹಿತ್ಯಿಕ-ಸಾಂಸ್ಕೃತಿಕ ಸಂಘ ಸಂಸ್ಥೆಗಳ ನಿರಂತರ ಪ್ರೋತ್ಸಾಹಕರು ಅವರು. ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಕನ್ನಡ ನಾಡಿಗೆ-ನುಡಿಗೆ ಅವರು ಸಲ್ಲಿಸಿದ ಸೇವೆ ಅನನ್ಯ, ಅವಿಸ್ಮರಣೀಯ.

ಮಾನವ ಸಹಜ ದೌರ್ಬಲ್ಯಗಳು, ಲೋಪದೋಷಗಳು ಪುನರೂರು ಅವರಲ್ಲೂ ಇರಬಹುದು. ಆದರೆ ಬಹಳ ಜನರಲ್ಲಿ ಕಂಡುಬರದ ಶೇಕಡಾ 90 ಒಳ್ಳೆಯ ಗುಣಗಳನ್ನು ಪುನರೂರು ಅವರು ಮೈಗೂಡಿಸಿಕೊಂಡಿದ್ದಾರೆ. ಅದು ಅವರ ವ್ಯಕ್ತಿತ್ವದ ಹೆಚ್ಚುಗಾರಿಕೆ. 60 ವಸಂತಗಳನ್ನು ದಾಟಿರುವ ಪುನರೂರು ಅವರ ಬದುಕು ಇನ್ನಷ್ಟು ಸಮೃದ್ಧವೂ ಸಾರ್ಥಕವೂ ಆಗುವಂತೆ ಭಗವಂತ ಅನುಗ್ರಹಿಸಲಿ ಎನ್ನುವುದು ನಮ್ಮೆಲ್ಲರ ಹಾರ್ದಿಕ ಹಾರೈಕೆ.

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಕಾವ್ಯಸ್ಪರ್ಧೆಗೆ ಕೊಡುಗೈಯ ಪ್ರೋತ್ಸಾಹ

□ ವಿದ್ವಾನ್ ಪೆರ್ಲ ಕೃಷ್ಣ ಭಟ್



ಅತ್ತೆ-ಸೊಸೆಯರಲ್ಲಿ ಸ್ವಾಭಾವಿಕವಾಗಿರುವ ಮಾನಸಿಕ ವೈರಭಾವವನ್ನು ಲಕ್ಷ್ಮೀ-ಸರಸ್ವತಿಯರ ಸಂಬಂಧಕ್ಕೆ ಹೋಲಿಸಿರುವುದು ಒಂದು ಸುಂದರ ಕಲ್ಪನೆ. ಲಕ್ಷ್ಮೀಪುತ್ರ-ಕಮಲಜ, ಬ್ರಹ್ಮನ ಪತ್ನಿ ಸರಸ್ವತಿ. ಈ ಸಂಬಂಧದಿಂದ ಅವರಿಬ್ಬರೂ ಅತ್ತೆ-ಸೊಸೆಯರಾಗಿದ್ದಾರೆ. ಇವರು ಏಕಕಾಲದಲ್ಲಿ ಒಂದೇ ಆಶ್ರಯದಲ್ಲಿ ಇರುವುದಿಲ್ಲ. ಇದ್ದರೂ ಪರಸ್ಪರ ಕಲಹ ತಪ್ಪಿದ್ದಲ್ಲ.

ವಿದ್ಯಾವಂತರು ಭಾರೀ ಶ್ರೀಮಂತರಾಗಿರುವುದನ್ನೂ ಶ್ರೀಮಂತರು ವಿದ್ಯಾವಂತರಾಗಿರುವುದನ್ನೂ ವಿರಳವಾಗಿ ಕಾಣಬಹುದಷ್ಟೆ! ಈ ಅನುಭವಕ್ಕೆ ಅಪವಾದವೆಂಬಂತೆ ಹರಿಕೃಷ್ಣ ಪುನರೂರು ಅವರು ನಮ್ಮ ಮುಂದೆ ಕಾಣಸುತ್ತಾರೆ. ಪುನರೂರು ಅವರು ಕೋಟ್ಯಾಧೀಶರಲ್ಲದಿದ್ದರೂ, ಶ್ರೀಮಂತರ ಸಾಲಿಗೆ ಸೇರಿದವರಾಗಿದ್ದಾರೆ.

ಪ್ರಸಿದ್ಧ ಸಾಹಿತಿಯಲ್ಲದವರೊಬ್ಬರು ತಮ್ಮಲ್ಲಿರುವ ಸಾಹಿತ್ಯಾಭಿಮಾನದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿರುವುದು ಒಂದು ಪವಾಡವೆ. ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇವರು ಸಮಗ್ರ ಕರ್ನಾಟಕದ ಹಲವಾರು ಹಳ್ಳಿ-ಪಟ್ಟಣಗಳಲ್ಲಿ ಸಾಹಿತ್ಯ ಸಮ್ಮೇಳನಗಳ

'ಗುರುಕುಲ', ಪೆರ್ಲ-671 552, ಕಾಸರಗೋಡು ಜಿಲ್ಲೆ, ಕೇರಳ

ಮಹಾಪೂರವನ್ನೇ ಹರಿಸಿದ್ದಾರೆ. ಒಂದೇ ತಿಂಗಳಲ್ಲಿ ನಾಲ್ಕೈದು ಸಾಹಿತ್ಯ ಸಮ್ಮೇಳನಗಳು ಜರಗಿದ ವಾರ್ತೆಗಳನ್ನು ನಾವು ಕೇಳಿದ್ದೇವೆ. ಅಧ್ಯಕ್ಷರಾಗಿದ್ದಾಗ ಸುಪ್ರಸಿದ್ಧ-ಪ್ರಸಿದ್ಧ-ಸಿದ್ಧ ಸಾಹಿತಿಗಳನೇಕರನ್ನು ಸಮಾರಂಭಗಳಲ್ಲಿ ಗೌರವಿಸಿ ಸಾಹಿತಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸಾಹಿತಿಯಲ್ಲದವನೂ ಭಾಷಾ ಸೇವೆಯನ್ನು ಹೇಗೆ ನಿರ್ವಹಿಸಬಹುದು ಎಂಬುದನ್ನು ತೋರಿಸಿದ್ದಾರೆ. ಪ್ರಾಯಶಃ ಇವರ ದೇಣಿಗೆ ಇಲ್ಲದ ಸಂಘ-ಸಂಸ್ಥೆಗಳು ಇರಲಾರವೆಂದು ತೋರುತ್ತದೆ.

ಒಂದು ಸಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿದವನು ಮತ್ತೊಮ್ಮೆ ಸ್ಪರ್ಧಿಸುವಂತಿಲ್ಲ ಎಂಬ ನಿಬಂಧನೆ ಇದ್ದುದರಿಂದ ಇವರು ದೂರ ಸರಿಯಬೇಕಾಗಿ ಬಂದುದು ಅನಿವಾರ್ಯವಾಯಿತು. ತಾನು ಅಧ್ಯಕ್ಷನ ಸ್ಥಾನದಲ್ಲಿ ಇಲ್ಲ ಎಂಬ ಕಾರಣದಿಂದ ಅವರು ಕನ್ನಡದ ಕೈಂಕರ್ಯವನ್ನು ಬಿಟ್ಟುಕೊಟ್ಟಿಲ್ಲ, ಈಗಲೂ ಅದೇ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬುದು ಸಂತಸದ ವಿಷಯ.

ನಾನು ಅಧ್ಯಾಪಕ ವೃತ್ತಿಯಿಂದ ನಿವೃತ್ತನಾದ ಮೇಲೆ, ವಯಸ್ಸು ಎಪ್ಪತ್ತು ವರ್ಷಗಳಾದಾಗ, ಅಭಿಮಾನಿಗಳು ಪೆರ್ಲದಲ್ಲಿ ಒಂದು 'ಸಪ್ತತಿ' ಸಮಾರಂಭವನ್ನು ಏರ್ಪಡಿಸಿದ್ದರು. ಈ ಸಮಾರಂಭದಲ್ಲಿ, ಡಾ॥ ಶಿವರಾಮ ಕಾರಂತರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ವೀರೇಂದ್ರ ಹೆಗ್ಗಡೆಯವರಂತಹ ಮಹಾನುಭಾವರು ಭಾಗವಹಿಸಿದ್ದು ನನ್ನ ಭಾಗ್ಯ ವಿಶೇಷವಾಗಿತ್ತು.

ಸಮಾರಂಭವು ಯಶಸ್ವಿಯಾಗಿ ನಡೆದ ಮೇಲೆ ಅದಕ್ಕಾಗಿ ಸಂಗ್ರಹಿಸಿದ ಹಣದಲ್ಲಿ ಸುಮಾರು ಒಂದೂಕಾಲು ಲಕ್ಷ ರೂಪಾಯಿಯಷ್ಟು ಮೊತ್ತ ಉಳಿದಿತ್ತು. ಅದನ್ನು ಹಸ್ತಾಂತರಿಸಲು ವ್ಯವಸ್ಥಾಪಕರು ನನ್ನ ಬಳಿಗೆ ಬಂದಾಗ, ಈ ಹಣವನ್ನು ಬ್ಯಾಂಕ್‌ನಲ್ಲಿಟ್ಟು ಅದರ ಬಡ್ಡಿಯಿಂದ ಪ್ರತಿವರ್ಷವೂ ಉದಯೋನ್ಮುಖ ಸಾಹಿತಿಯೊಬ್ಬರನ್ನು ಸಮ್ಮಾನಿಸಬೇಕೆಂಬ ಅಭಿಪ್ರಾಯವನ್ನು ನಾನು ಪ್ರಕಟಿಸಿದೆ.


ಅದರ ಫಲಶ್ರುತಿಯೇ ''ಪೆರ್ಲ ಕೃಷ್ಣ ಭಟ್ಟ ಸಾಂಸ್ಕೃತಿಕ ಪ್ರತಿಷ್ಠಾನ'' (ರಿ.) ಎಂಬ ಸಂಸ್ಥೆ. ಅದರ ಮೂಲಕ ಕಳೆದ ಸುಮಾರು ಇಪ್ಪತ್ತೈದು ವರ್ಷಗಳಿಂದ ಈ ರಾಜ್ಯ ಮಟ್ಟದ ಕಾವ್ಯ ಸ್ಪರ್ಧೆ ಮತ್ತು ಬಹುಮಾನ ಯೋಜನೆ ತಪ್ಪದೆ ನಡೆಯುತ್ತಿದೆ. ಮೊದಲನೆಯ ಕಾರ್ಯಕ್ರಮಕ್ಕೆ ಪ್ರತಿಷ್ಠಾನದವರು ಹರಿಕೃಷ್ಣ ಪುನರೂರು ಅವರನ್ನು ಆಮಂತ್ರಿಸಿದ್ದರು. ಅತಿಥಿಯಾಗಿ ಭಾಗವಹಿಸಿದ್ದ ಅವರು ''ನಿಧಿಯಿಂದ ಲಭಿಸುವ ಹಣದೊಂದಿಗೆ, ಪ್ರತಿವರ್ಷವೂ ಒಂದು ಸಾವಿರ ರೂಪಾಯಿಯ ದೇಣಿಗೆ ನನ್ನದೂ ಇದೆ'' ಎಂದು ಘೋಷಿಸಿದರು. ಇಂದಿಗೂ ಅವರು ತನ್ನ ವಚನವನ್ನು ಪಾಲಿಸುತ್ತ ಬಂದಿದ್ದಾರೆ.

ಅವರ ಇಂತಹ ಉದಾರ ದೇಣಿಗೆಗಳು ಇನ್ನೆಷ್ಟಿವೆಯೋ, ನಾನರಿಯೆ. ಇರುವುದಂತೂ ನಿಶ್ಚಯ. ಶ್ರೀಮಂತಿಕೆ ಮತ್ತು ಔದಾರ್ಯದ ಈ 'ಸಮ್ಮೇಳನವು' ಚಿರಸ್ಥಾಯಿಯಾಗಿರುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಭಾಗ: ಒಂದು
ಪರಿಷತ್ತಿನ ಪೋಷಕಶಕ್ತಿ

ಪುನರೂರಿನ ಮೊಗಸಾಲೆಯಲ್ಲಿ ಕಾಂತಾವರದ ಮುದ್ದಣ ಪ್ರೀತಿ

☐ ಜಿ.ಕೆ. ರವೀಂದ್ರಕುಮಾರ್



ಅದು ಪೆಟ್ರೋಲ್ ಬಂಕ್. ಹೊರಗೆ ಹತ್ತಾರು ವಾಹನಗಳು ಪೆಟ್ರೋಲ್, ಡೀಸೆಲ್‌ಗಾಗಿ ಬರುತ್ತಿವೆ. ತುಂಬಿಸಿಕೊಂಡು ಹೋಗುತ್ತಿವೆ. ಹತ್ತಿರದಲ್ಲೇ ರಾಷ್ಟ್ರೀಯ ಹೆದ್ದಾರಿ. ನೂರಾರು ವಾಹನಗಳು ತರಹೇವಾರಿ ಶಬ್ದ ಹೊಮ್ಮಿಸಿಕೊಂಡು ಚಲಿಸುತ್ತಿವೆ. ಈ ಸದ್ದು-ಗದ್ದಲದಲ್ಲಿ ಪೆಟ್ರೋಲ್ ಬಂಕ್‌ನ ಮಾಲೀಕರು ತಮ್ಮ ಗಾಜಿನ ಪಾರದರ್ಶಕ ಕೋಣೆಯಲ್ಲಿ ಕೂತು ಕಡತ, ರಸೀತಿ ಪುಸ್ತಕ ನೋಡುತ್ತ, ಹಣ ಲೆಕ್ಕಾಚಾರ ಮಾಡುತ್ತ, ಹೊರಗಿನ ಆಗುಹೋಗುಗಳತ್ತಲೂ ಆಗೀಗ ಲಕ್ಷ್ಯ ಹರಿಸುತ್ತಿದ್ದಾರೆ. ಎಣ್ಣೆ ಕಲೆಗಳ ಬಟ್ಟೆ ಧರಿಸಿದ ಹುಡುಗರು ಇಂಜಿನ್ ಆಯಿಲ್ ಅದೂ ಇದೂ ಅಂತ ಬಂದು ಗಮನ ಸೆಳೆಯುತ್ತಿದ್ದಾರೆ. ಮಧ್ಯೆ ಮಧ್ಯೆ ಫೋನ್ ಕಾಲ್‌ಗಳು. ಇದೆಲ್ಲದರ ನಡುವೆ ನಾನು ಒಳಗೆ ಕೂತಿರುವವರು ಪುನರೂರು ಇರಬಹುದೋ ಅಲ್ಲವೋ? ಎಂಬ ಸಣ್ಣ ಅನುಮಾನದಿಂದಲೇ ಒಳ ಪ್ರವೇಶಿಸಿ ನಮಸ್ಕಾರದ ಪೀಠಿಕೆಯೊಡನೆ ಪರಿಚಯಿಸಿಕೊಂಡು ಕೂತಿದ್ದೇ ತಡ, ಅವರ ಚಟುವಟಿಕೆಗಳ ಪಟ್ಟಿಗೆ ಇನ್ನೊಂದು ಸೇರಿಕೊಂಡಿತು. ಈ ಧೂಳು, ಎಣ್ಣೆ, ಹೊಗೆಯ ವಾತಾವರಣದಲ್ಲಿ ಒಂದಿಷ್ಟೂ ಕೊಳೆಯಿಲ್ಲದ ಶುಭ್ರ ಬಿಳಿಷರ್ಟು, ಬಿಳಿ ಪಂಚೆಯುಟ್ಟು ಸಂಜೆಯಾದರೂ ಹಾಗೇ ಕಾಪಾಡಿಕೊಂಡಿರುವುದರ ಗುಟ್ಟೇನು ಎಂದು ಯೋಚಿಸುತ್ತಿರುವಾಗಲೇ ನಗುಮೊಗದ ಪುನರೂರು ಯೋಗಕ್ಷೇಮ ವಿಚಾರಿಸಿ ಟೀ ತರಿಸಿ ಉಪಚರಿಸುತ್ತಲೇ ತಮ್ಮ ವ್ಯವಹಾರಗಳನ್ನೂ ನಿಭಾಯಿಸಿಕೊಂಡು ತಮ್ಮ ಸಹಾಯಕನಿಗೆ ಏನೋ ಹೇಳಿದರು. ಒಳಗಿನ ಕೋಣೆಯಿಂದ ಆ ಸಹಾಯಕ ದೊಡ್ಡದೊಂದು ಪುಸ್ತಕ ಹೊತ್ತು ತಂದ. ಪೆಟ್ರೋಲ್ ಬಂಕ್‌ನ ಯಾವುದೋ ಲೆಡ್ಜರು ಇರಬಹುದೆಂದು ಭಾವಿಸಿದ ನನಗೆ ಅದನ್ನು ನನ್ನ ಮುಂದೇ ಓಡಿದಾಗ

ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಯಾದವಗಿರಿ, ಮೈಸೂರು-570 020

ಆಶ್ಚರ್ಯ! ಅವರ ತುಂಬಾ ಕತ್ತರಿಸಿದ ಪತ್ರಿಕಾ ವರದಿಗಳನ್ನು ನೀಟಾಗಿ ಅಂಟಿಸಲಾಗಿತ್ತು. ಮುದ್ದಣ ಪ್ರಶಸ್ತಿ ಪಡೆದ ನನ್ನ ಭಾವಚಿತ್ರ ಮತ್ತು ವರದಿಗಳನ್ನು ಕಂಡು ನನಗೆ ಆಶ್ಚರ್ಯ ಮತ್ತು ಸಂತೋಷ. ಹಿಂದ ಹಿಂದಕ್ಕೆ ತಿರುವಿದಂತೆ ಹಿಂದಿನ ಕವಿಗಳ ವಿವರ. ಪುನರೂರು ಅವರು ವರದಿಗಳ ಕುರಿತು, ಪ್ರಶಸ್ತಿ ಯೋಜನೆ ಕುರಿತು ಹೇಳುತ್ತಾ ಹೋದರು.

ಇದೆಲ್ಲಾ ಜರುಗಿದ್ದು 1996ರಲ್ಲಿ. ಪ್ರತಿ ವರ್ಷವೂ ಕವಿಯೊಬ್ಬ ಇಂತಹ ಅನುಭವಕ್ಕೆ ಪಾತ್ರನಾಗುತ್ತಾನೇನೋ! ಆದರೆ ನನ್ನ ಕುತೂಹಲವಿರುವುದು ಕಾಂತಾವರ ಕನ್ನಡ ಸಂಘದವರು ವರದಿಗಳ ಸಂಗ್ರಹ ಮಾಡಿದರೆ ದೊಡ್ಡ ವಿಷಯವಲ್ಲ. ಆದರೆ ಪ್ರಶಸ್ತಿಗೆ ಧನಸಹಾಯ ಮಾಡುವ ಧರ್ಮದರ್ಶಿಯೊಬ್ಬರು ಪೆಟ್ರೋಲ್ ಬಂಕ್‌ನ ಸಕಲ ಅವ್ಯವಸ್ಥೆಗಳ ನಡುವೆ ಇಂತಹ ಸಂಗ್ರಹವೊಂದನ್ನು ಮಾಡುತ್ತ ಮಾಡುತ್ತ ಕಾಪಾಡಿಕೊಂಡಿರುವುದು. ಆಧುನಿಕ ಪ್ರಪಂಚದ ಸಕಲ ಸೋಲುಗಳ ನಡುವೆಯೂ ಅಭಿರುಚಿಯೊಂದನ್ನು ಕಾಪಾಡಿಕೊಳ್ಳುವುದು ದಕ್ಷಿಣ ಕನ್ನಡದ (ಉಡುಪಿಯೂ ಸೇರಿ) ಹುಟ್ಟುಗುಣ. ಪುನರೂರು ಮತ್ತು ಇಂತಹ ಕೆಲವು ಸಾಂಸ್ಕೃತಿಕ ಸಿರಿವಂತರಿಂದಾಗಿಯೇ ಅಲ್ಲವೇ ಅಷ್ಟೊಂದು ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಜಾನಪದ ಮುಂತಾದ ಚಟುವಟಿಕೆಗಳು ಜಿಲ್ಲೆಯ ತುಂಬಾ ವರ್ಷಪೂರ್ತಿ ನಡೆಯುತ್ತಿರುವುದು?

ಇಂತಹ ಸಾಂಸ್ಕೃತಿಕ ಸಿರಿವಂತರ ಹಲವು ಹತ್ತೊಂದು ಚಟುವಟಿಕೆಗಳನ್ನು ಪಕ್ಕದ ಉತ್ತರ ಕನ್ನಡದಲ್ಲಿ ಉದ್ಯೋಗ ನಿಮಿತ್ತ ವಾಸಿಸುತ್ತ ಏಳು ವರ್ಷಗಳ ಕಾಲ ಗಮನಿಸಿದ ಬಯಲು ಸೀಮೆಯ ಭಾಗ್ಯವಂತ ನಾನು. ಒಂದೊಂದು ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವೂ ಅದೆಷ್ಟು ಅದ್ದೂರಿ, ಅಚ್ಚುಕಟ್ಟುತನ, ಕಲಾತ್ಮಕ ಸೊಬಗಿಂದ ನಡೆಯುತ್ತಿತ್ತೆಂದರೆ ಜಿಲ್ಲೆಗೊಬ್ಬರಾದರೂ ಇಂತಹವರು ಇರಬಾರದೇ ಎಂದು ಅದೆಷ್ಟು ಸಲ ಅನಿಸಿದೆಯೋ. ತಮ್ಮ ಮೂಲ್ಕಿಯ ಹೋಟೇಲಿನಲ್ಲೇ ವಾಸ್ತವ್ಯ, ಪ್ರೀತಿಯ ಉಪಚಾರ, ಪ್ರಶಸ್ತಿ ನೀಡಿ ಕಾಂತಾವರದಿಂದ ತಮ್ಮ ಕಾರಿನಲ್ಲೇ ಕರೆದುಕೊಂಡು ಬರುವ ಔದಾರ್ಯ ಇದೆಲ್ಲವೂ ಸೇರಿಕೊಂಡ ಅರ್ಥವೇನಾದರೂ 'ಪುನರೂರು' ಎಂಬ ಪದಕ್ಕಿದೆಯೇ? ಈ ಸಲ ಜಿ. ವೆಂಕಟಸುಬ್ಬಯ್ಯನವರನ್ನು ಕೇಳಬೇಕು.

ಮುದ್ದಣ ಪ್ರಶಸ್ತಿಗೆ 25 ವರ್ಷವಾದುದಕ್ಕೆ ಒಂದು ಮಹೋತ್ಸವ. ಅಂದಿನ ಕವಿಯಿಂದ ಇಂದಿನವರೆಗೆ ಎಲ್ಲರನ್ನೂ ಕೂಡಿಸಿಕೊಂಡು ದೀಪಹಚ್ಚಿ ಸಂಭ್ರಮಿಸುವ ಘನವಂತಿಕೆ. ಅದಕ್ಕೆ 30 ವರ್ಷವಾಯಿತೆಂದು ಇನ್ನೊಂದು ಮಹೋತ್ಸವದ ಕಲ್ಪನೆ. ಪುಸ್ತಕ ಪ್ರಕಟಣೆ. ಪುನರೂರು ಅಂತಹವರು ಇರುವುದಕ್ಕಾಗಿ ಮೊಗಸಾಲೆಯಂತಹವರು ಕಾಣಿಸಿಕೊಳ್ಳುತ್ತಾರೋ ಅಥವಾ ಮೊಗಸಾಲೆಯಂತಹವರಿದ್ದಾರೆ ಎಂಬ ಕಾರಣಕ್ಕಾಗಿ ಪುನರೂರು ತರಹವರು ಮೈ ತಳೆಯುತ್ತಾರೋ. ಇದನ್ನು ಹೀಗೂ ಹೇಳಬಹುದಲ್ಲವೇ?

ಪುನರೂರಿನ ಮೊಗಸಾಲೆಯಲಿ
ಮುದ್ದಣನ ಕವಿಗಳು
ಪರಂಪರೆಯ ಪಡಸಾಲೆಯಲಿ
ಕಾಂತಾವರ ಚರಿತೆಯು...

ಸಾಹಿತ್ಯಕ್ಕೆ ರಾಜಾಶ್ರಯ ಬೇಕು ಎಂಬುದು ಚಾರಿತ್ರಿಕ ಸತ್ಯ. ಆದರೆ ಸದ್ಯಕ್ಕೆ ರಾಜಾಶ್ರಯದ ರಾಜಕೀಯಕ್ಕಿಂತಲೂ ಅದರ ಹೊರಗಿನ ಪ್ರೀತಿಯ ಆಸರೆ ಬೇಕು. ಪುನರೂರು ಅಂತಹವರ ಮೂಲಕ ದೊರೆಯುತ್ತಿರುವುದು ಇದು. ಯಾಕೆಂದರೆ ಪಂಪನ ಮೂಲಕ ಅರ್ಜುನನಾಗುವ ಅರಿಕೇಸರಿಯ ಇರಾದೆ ಇವರದಲ್ಲ. ರಾಜಧಾನಿಯಲ್ಲಿ ಕೂತು ಸಾಹಿತ್ಯ ಕಾರಣಕ್ಕೆ ಒಪ್ಪಿಸಿಕೊಂಡಿರುವವರು ಈ ಕಡೆ ಕಣ್ಣು ಹರಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ದಕ್ಷತೆ ಮೆರೆದು ಸಾಹಿತ್ಯ ಪರಿಚಾರಿಕೆಗೆ ಹೊಸತೊಂದು ಆಯಾಮ ಮತ್ತು ಚರ್ಚೆಗೆ ಅನುವು ಮಾಡಿಕೊಟ್ಟ ಹರಿಕೃಷ್ಣ ಪುನರೂರು ಅವರಿಂದ ಪ್ರತಿವರ್ಷ ಎರಡು ದಿನಗಳ 'ಕೇವಲ' ಸಾಹಿತ್ಯ ಸಮ್ಮೇಳನ ವಿದ್ವತ್‌ಪೂರ್ಣವಾಗಿ ಅದರ ನಿಜವಾದ ಅರ್ಥದಲ್ಲಿ ಜರುಗಬಲ್ಲುದೇ?


ಆಸೆ ಅತಿಯಾದರೆ ಅವರು ಕ್ಷಮಿಸಲಿ; ಆದರೆ ಅವರಿಗೆ 'ಶುಭವಾಗಲಿ'.

ಭಾಗ : ಎರಡು
ಹೀಗಿದ್ದಾರೆ ಪುನರೂರು

ಭಾಗ: ಎರಡು
ಹೀಗಿದ್ದಾರೆ ಪುನರೂರು

ಪುನರೂರು : ನಮ್ಮ ನಡುವಿನ ಲವಲವಿಕೆ

□ ಅರವಿಂದ ಚೊಕ್ಕಾಡಿ



ಹರಿಕೃಷ್ಣ ಪುನರೂರು ವೈಯಕ್ತಿಕವಾಗಿ ನನಗೆ ಏನೇನೂ ಪರಿಚಿತರಲ್ಲ. ಎಂದೋ ಒಮ್ಮೆ ರಾತ್ರಿ ಅವರ ಜೊತೆ ಹೊಳಲ್ಕೆರೆಯಿಂದ ಕಾರ್ಕಳದ ತನಕ ಬಂದಿದ್ದೇನೆ ಎಂಬುದನ್ನು ಬಿಟ್ಟರೆ ಅವರನ್ನು ಹತ್ತಿರದಿಂದ ನೋಡಿದವನೂ ಅಲ್ಲ. ಹೀಗೆ ಬರುವಾಗ ಅವರು, ತಾವು ಬಹಳ ಹಿಂದೆ ಒಂದೆರಡು ಕತೆಗಳನ್ನು ಬರೆದಿರುವುದರ ಬಗ್ಗೆ ಹೇಳಿದರು. ಅವನ್ನು ನೋಡುವ ಕುತೂಹಲವಿತ್ತಾದರೂ ಮತ್ತೆ ಸಂಪರ್ಕಿಸಲು ಅವಕಾಶ ಸಿಗಲಿಲ್ಲ ಅಥವಾ ಅವಕಾಶ ಮಾಡಿಕೊಳ್ಳಲಿಲ್ಲ.

ಪುನರೂರು ಅವರ ವಿಚಾರಗಳ ಬಗ್ಗೆ ನನಗೆ ಕೆಲವು ಅತೃಪ್ತಿಗಳಿವೆ. ನನ್ನದೇ ಆದ ರಿಸರ್ವೇಷನ್ಸ್ ಇದ್ದಾವೆ. ಅಗತ್ಯವಿದ್ದಾಗ ಅವನ್ನು ಬರೆದಿದ್ದೇನೆ ಕೂಡ. ಹಾಗೆಯೇ ಪುನರೂರು ಅವರ ಪಂಚೆ ಎಳೆದ ಘಟನೆ ನಡೆದಾಗ ಪಂಚೆ ಎಳೆದವರನ್ನು ಕಟುವಾಗಿ ಖಂಡಿಸಿ ಕೂಡ ಬರೆದಿದ್ದೇನೆ. ವೈಚಾರಿಕ ಭಿನ್ನಾಭಿಪ್ರಾಯಗಳು ದೈಹಿಕ ಹಲ್ಲೆಗೆ ಅಥವಾ ಮನುಷ್ಯ ಸಂಬಂಧಕ್ಕೆ ಧಕ್ಕೆ ತರುವುದಾದರೆ ಅಂತಹವರು ಸಾಹಿತಿಯಾಗಿಯಾಗಲಿ, ಸಾಮಾಜಿಕ ಕಾರ್ಯಕರ್ತರಾಗಿಯಾಗಲಿ ಏನನ್ನೂ ಸಾಧಿಸಲಾರರು.

ಈ ಎಲ್ಲದರ ನಡುವೆ ಪುನರೂರು ಬಗ್ಗೆ ನನಗೆ ಪ್ರೀತಿ ಇದೆ.

ಕೊಡಂಗಲ್ಲು, ಮೂಡಬಿದರೆ, ದ.ಕ.–574 197

ಗೌರವವಿದೆ. ಯಾಕೆಂದರೆ ಅವರು ಸಾಹಿತ್ಯ ಕ್ಷೇತ್ರದ ವ್ಯಕ್ತಿಯಲ್ಲ. ಆದರೂ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ತಮ್ಮೆದುರಿನ ಎಲ್ಲ ವಿರೋಧಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಸಂಘಟನಾ ಚಾಕಚಕ್ಯತೆ ಅವರಿಗಿದೆ. ಈ ಸಂಘಟನಾ ಚಾತುರ್ಯ ಎಲ್ಲಿಂದ ಬಂತು ಎಂದು ಪ್ರಶ್ನಿಸಿಕೊಂಡಿದ್ದೇನೆ. ನನ್ನ ಪ್ರಕಾರ ಬಹುಶಃ ಪುನರೂರು ಅವರ ಹೋಟೇಲ್ ಉದ್ಯಮದ ಹಿನ್ನೆಲೆ ಅವರಿಗೆ ಇಂತಹ ಚಾತುರ್ಯವನ್ನು ಒದಗಿಸಿರಬೇಕು. ಈ ಮಾತು ಹೇಳುವಾಗ ಸಾಹಿತ್ಯ ಸಂಘಟನೆ ಹಾಗೂ ಹೋಟೇಲ್ ಉದ್ಯಮದ ಸ್ವರೂಪಗಳನ್ನು ಗಮನಿಸಿರಬೇಕಾಗುತ್ತದೆ. ಸಾಹಿತ್ಯ ಸಂಘಟನೆಯೊಂದಕ್ಕೆ ಬೌದ್ಧಿಕ ಶಿಸ್ತು ಹಿನ್ನೆಲೆಯಾಗಿರುತ್ತದೆ. ಬೌದ್ಧಿಕ ಶ್ರಮದ ಹಿನ್ನೆಲೆ ಇರುತ್ತದೆ. ಬೌದ್ಧಿಕ ಶಿಸ್ತು ಅದರ ಸಹಾಯಕ್ಕೆ ಬರುತ್ತದೆ. ಹೋಟೇಲ್ ಉದ್ಯಮದ ಸ್ವರೂಪ ಬೇರೆ. ಮೂಲಭೂತವಾಗಿ ಅದು ಮಾನವ ಶ್ರಮವನ್ನು ಆಧರಿಸಿರುವಂಥದು ಮತ್ತು ಇಲ್ಲಿ ಸಂಘಟಿಸಬೇಕಾದ್ದು ತಳ ವರ್ಗದ ಜನರನ್ನು ಎನ್ನುವುದು ಮುಖ್ಯ ಸಂಗತಿ. ಈ ಸಂಘಟನೆಯ ಅನುಭವವಿರುವುದರಿಂದಲೇ ಪುನರೂರು ಅವರಿಗೆ ಸಮಾಜದ ಬೇರೆ ಬೇರೆ ನೆಲೆಗಳಿಂದ ಜನರನ್ನು ಸಾಹಿತ್ಯ ಪರಿಷತ್ ಸದಸ್ಯರನ್ನಾಗಿ ತರಲು ಸಾಧ್ಯವಾಯಿತೆಂದು ತೋರುತ್ತದೆ. ಅದರಿಂದ ಇವರೆಲ್ಲ ಸಾಹಿತ್ಯಾಸಕ್ತರಾಗುತ್ತಾರೆ ಎಂಬ ಭ್ರಮೆ ಬೇಡ. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ಅದು ಆಗುವ ಕೆಲಸವೇನಲ್ಲ. ಆದರೆ ಅಷ್ಟೂ ಮಂದಿಗೆ ಸಾಹಿತ್ಯ ಪರಿಷತ್ತಿನ ಸಣ್ಣ ಪರಿಚಯವಾದರೂ (ಕನಿಷ್ಠ ಅಂತಹದೊಂದು ಇದೆ ಎಂಬುದಾದರೂ) ಸಿಗುತ್ತದಲ್ಲ; ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಅದೊಂದು ದೊಡ್ಡ ಸಾಧನೆ. ಅದಕ್ಕಾಗಿ ಪುನರೂರು ಸಾಹಿತ್ಯ ಲೋಕಕ್ಕೆ ಹಿತವೆನಿಸಲಿ, ಅನಿಸದೆ ಇರಲಿ, ಸಾಹಿತ್ಯ ಸಮ್ಮೇಳನಗಳಿಗೆ ಕೆಲವು ಆಕರ್ಷಣೆ, ಕೊಂಚ ಅಬ್ಬರಗಳನ್ನು ತಂದಿದ್ದಾರೆ. ಜನರನ್ನು ಸಾಹಿತ್ಯದ ಕಡೆಗೆ ಸೆಳೆಯುವುದಕ್ಕೆ ಅದು ಅನಿವಾರ್ಯವಾಗಿರಬಹುದು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾಹಿತ್ಯ ಸಮ್ಮೇಳನ ಕೇವಲ ಸಾಹಿತಿಗಳಿಗಾಗಿ ಇರುವುದಲ್ಲ; ಯಾವುದೇ ಸಾರ್ವಜನಿಕ ಕಾರ್ಯಕ್ರಮದ ಅತ್ಯಂತಿಕ ಉದ್ದೇಶ ಜನರೇ ಆಗಿರುತ್ತಾರೆ. ಈ ನಿಟ್ಟಿನಲ್ಲಿ ಪುನರೂರು ಅತ್ಯಂತ ಡೆಮಾಕ್ರೆಟ್ ಆಗಿ ನಡೆದುಕೊಂಡಿದ್ದಾರೆ. ಈ ಪ್ರಜಾಸತ್ತಾತ್ಮಕ ದೃಷ್ಟಿಕೋನ ಅಧಿಕಾರದಲ್ಲಿರುವ ಯಾರಿಗೇ ಆದರೂ ಮಾದರಿ ಎನಿಸುವಂಥದ್ದು.

ಎರಡನೆಯದಾಗಿ ಪುನರೂರು ಅವರ ಆಯ್ಕೆಯ ಬಗ್ಗೆಯೇ ತಕರಾರುಗಳಿದ್ದುವು. ಇಲ್ಲಿ ನಾನಿದನ್ನು ಪ್ರಸ್ತಾವ ಮಾಡುತ್ತಿರುವುದು ಪುನರೂರು ಅವರೊಬ್ಬರ ವಿಚಾರವಾಗಿ ಅಲ್ಲ; ಒಂದು ಧೋರಣೆಗೆ ಸಂಕೇತವಾಗಿ. ನಮ್ಮಲ್ಲಿ ರಾಜಕಾರಣಿಗಳು ಸಾಹಿತ್ಯ ಕೂಟಕ್ಕೆ ಬರಬಾರದು, ಹೋಟೇಲ್ ಉದ್ಯಮಿಗಳು ಬರಬಾರದು, ಅವರು ಬರಬಾರದು, ಇವರು ಬರಬಾರದು ಎನ್ನುವ ಧೋರಣೆಯೊಂದು ಇದೆ. ಬಹುಶಃ ಈ ವಾದ ಪ್ರತಿಪಾದಕರ ಪ್ರಕಾರ ಸಾಹಿತ್ಯ ಎಂದರೆ ಯಾರೂ ಬರಬಾರದ ಒಂದು ದ್ವೀಪವಿರಬೇಕು. ಹೀಗೆ ಸಂಕುಚಿತವಾಗುತ್ತಾ ಹೋಗುವುದು ಯಾವುದೇ ಕ್ಷೇತ್ರಕ್ಕೆ ಹಿತವಾಗುವ ಸಂಗತಿಯಲ್ಲ. ನಾವು ಮನೆಗಳ ಗೋಡೆ ಕಟ್ಟಬೇಕು; ಮನಗಳ ಗೋಡೆ ಒಡೆಯಬೇಕು; ಬೃಹತ್ ಪ್ರಜಾತಂತ್ರದ ಜನರ ಅಧಿಕೃತ ಪ್ರತಿನಿಧಿಗಳಾದ ರಾಜಕಾರಣಿಗಳು ಸಾಹಿತ್ಯಕೂಟಕ್ಕೆ ಬರಬಾರದು ಎಂದರೆ ಪ್ರಜಾತಂತ್ರದ ಬಗ್ಗೆಯೇ ಇವರಿಗೆ ವಿಶ್ವಾಸವಿಲ್ಲವೆಂದು ಭಾವಿಸಬೇಕಾಗುತ್ತದೆ. ರಾಜಕಾರಣಿಗಳು ಕೆಟ್ಟವರಿದ್ದರೆ ಅದಕ್ಕೆ ಸ್ವಾರ್ಥ, ಸಮಾಜ ಮತ್ತು ವ್ಯಕ್ತಿ ಕಾರಣವೇ ಹೊರತು ಪ್ರಜಾತಂತ್ರವೆಂಬ ವ್ಯವಸ್ಥೆಯಲ್ಲ. ಹಾಗೆಯೇ ಕೂಲಿಕಾರ್ಮಿಕರು, ರೈತರು, ಕೈಗಾರಿಕೋದ್ಯಮಿಗಳು, ತೃತೀಯರಂಗದ ಉದ್ಯಮಿಗಳು ಇವರೆಲ್ಲರೂ ಈ ವ್ಯವಸ್ಥೆಯ ಪಾಲುದಾರರೇ. ಅವರಲ್ಲೊಬ್ಬ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಲು ಸಾಧ್ಯವಾದರೆ ಸಾಹಿತ್ಯ ಪ್ರಪಂಚ ಕ್ಷೇತ್ರಕ್ಕೆ ಸಲ್ಲುವ ಒಂದು ಕಾರಣಕ್ಕಾಗಿ ಸಂತೋಷಪಡಬೇಕು. ಅವರು ಸರಿಯಾಗಿ ಕೆಲಸ ಮಾಡದೇ ಹೋದರೆ ಸಲಹೆ ಕೊಡುವ ಅಥವಾ ತರಾಟೆಗೆ ತೆಗೆದುಕೊಳ್ಳುವ ಕೆಲಸ ಮಾಡಬೇಕೇ ಹೊರತು

ಆ ರಂಗಗಳಿಂದ ಸಾಹಿತ್ಯ ಕ್ಷೇತ್ರಕ್ಕೆ ಬರಬಾರದು ಎನ್ನುವುದಲ್ಲ. ಈ ದೃಷ್ಟಿಯಿಂದ ಪುನರೂರು ಅವರ ಆಯ್ಕೆಗಾಗಿ ಸಂತೋಷಪಟ್ಟಿದ್ದೇನೆ. ಮುಂದೆ ಒಬ್ಬ ರೈತ, ಇನ್ನೊಬ್ಬ ಕಾರ್ಮಿಕ ಪರಿಷತ್ ಅಧ್ಯಕ್ಷನಾಗಲು ಸಾಧ್ಯವಾದರೆ ಅದಕ್ಕೂ ಸಂತೋಷಪಡುತ್ತೇನೆ. ಅಷ್ಟೇ ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸಾಹಿತ್ಯ ಜನರ ನಡುವೆ ಹುಟ್ಟಿಕೊಳ್ಳುತ್ತದೆ ಮತ್ತು ಜನರೇ ಅದರ ಉದ್ದೇಶವಾಗಿರುತ್ತಾರೆ ಎನ್ನುವುದು. ಸಾಹಿತಿಯೊಬ್ಬನಿಗೆ ಹಾರ, ಶಾಲು ಹಾಕಿ ಸಮ್ಮಾನಿಸುವವರೂ ಜನರೇ ಆಗಿರುತ್ತಾರೆ. ಇದಕ್ಕೆಲ್ಲ ಬೇರೆ ಕ್ಷೇತ್ರದವರು ಆಗಬಹುದು ಎಂದಾಗ ಬೇರೆ ಕ್ಷೇತ್ರದವರು ಸಾಹಿತ್ಯ ಕ್ಷೇತ್ರಕ್ಕೆ ಬರಬಾರದು ಎನ್ನುವುದಕ್ಕೆ ಯಾವ ಅರ್ಥವೂ ಇರುವುದಿಲ್ಲ.

ಕೊನೆಯದಾಗಿ, ಹಣಕಾಸು ವ್ಯವಹಾರದ ನಿಭಾವಣೆ. ಬೇಕು ಎಂದಷ್ಟು ಖರ್ಚು ಮಾಡುವುದಕ್ಕೆ ಸಾಕಷ್ಟು ಹಣ ಸಾಹಿತ್ಯ ಪರಿಷತ್ ಬಳಿ ಇಲ್ಲ. ಅಂಥಲ್ಲಿ ಹಣ ಹೊಂದಿಸಿಕೊಳ್ಳಬೇಕಾಗುತ್ತದೆ. ನಾನಾ ಮೂಲಗಳಿಂದ ಹಣ ಹೊಂದಿಸುವುದು, ಅದನ್ನು ವ್ಯವಸ್ಥಿತವಾಗಿ ಖರ್ಚು ಮಾಡುವುದು, ಮಾಡಿದ ಖರ್ಚು ಸದುಪಯೋಗವಾಗುವಂತೆ ನೋಡಿಕೊಳ್ಳುವುದು ಸಣ್ಣ ಒತ್ತಡದ ಸಂಗತಿಯಲ್ಲ. ಆ ಕೆಲಸವನ್ನು ಪುನರೂರು ತುಂಬಾ ಚೆನ್ನಾಗಿ ನಿಭಾಯಿಸಿದ್ದಾರೆ. ಹಣ ದುರಪಯೋಗದ ಯಾವುದೇ ಸಣ್ಣ ರೂಮರ್ ಕೂಡ ಅವರ ಬಗ್ಗೆ ಇಲ್ಲ ಎನ್ನುವುದು ಅವರನ್ನು ಶುದ್ಧಹಸ್ತರನ್ನಾಗಿಯೇ ಇರಿಸಿದೆ. ಸಮಕಾಲೀನ ಭಾರತದ ವ್ಯವಸ್ಥೆಯ ಭ್ರಷ್ಟತೆಗಳನ್ನೆಲ್ಲ ನೋಡುವಾಗ ಪುನರೂರು ಶುದ್ಧಹಸ್ತರಾಗಿಯೇ ಉಳಿದುದು ಆಶ್ಚರ್ಯದ ಸಂಗತಿಯೂ ಅಭಿಮಾನದ ಸಂಗತಿಯೂ ಆಗುತ್ತದೆ. ಈ ನಿಟ್ಟಿನಲ್ಲಿ ಅವರು ಸಾಹಿತ್ಯ ಪರಿಷತ್ ಅಧ್ಯಕ್ಷಸ್ಥಾನಕ್ಕೆ ನಿಜವಾದ ಘನತೆ-ಗೌರವಗಳನ್ನು ತಂದಿದ್ದಾರೆ. ನನ್ನ ಊಹೆಯ ಪ್ರಕಾರ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಅವರು ಬೇಕಷ್ಟು ಹಣ ಕಳೆದುಕೊಂಡಿರಬಹುದು. ಯಾರು ತಾನೇ ವೈಯಕ್ತಿಕ ಸಂಪತ್ತನ್ನು ಸಾರ್ವಜನಿಕ ಕಾರ್ಯಕ್ಕಾಗಿ ಬಳಸುತ್ತಾರೆ! ಇಂತಹ ಕರ್ತವ್ಯ ನಿಷ್ಠೆಗಾಗಿ ಪುನರೂರು ಪ್ರಶ್ನಾತೀತವಾಗಿ ಅಭಿನಂದನಾರ್ಹರು.

ಪುನರೂರು ಹಲವಾರು ದಾನ ಧರ್ಮ ಕಾರ್ಯಗಳನ್ನು ಮಾಡಿದ್ದಾರೆ. ಸಾಹಿತಿಯಲ್ಲದಿದ್ದರೂ ಸಾಹಿತ್ಯದ ಅಭಿಮಾನ ಇಟ್ಟುಕೊಂಡಿದ್ದಾರೆ. ಪುರಸ್ಕಾರ-ಪ್ರಶಸ್ತಿಗಳನ್ನು ಯೋಜಿಸಿದ್ದಾರೆ. ಸಾಹಿತಿಗಳ ಬಳಗ ರೂಪುಗೊಳ್ಳಲು ನೆರವಾಗಿದ್ದಾರೆ. ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದಿಂದ ಹೊರಬಂದೊಡನೆ ಅವರು ಸಾಹಿತ್ಯಕ್ಕಾಗಿ ಮಾಡುವಂಥದೇನೂ ಇಲ್ಲವೆಂದು ಅರ್ಥವಲ್ಲ. ಅವರ ಆಸಕ್ತಿ, ಅಭಿರುಚಿ, ಬೆಂಬಲ ಸಾಹಿತ್ಯ ಕ್ಷೇತ್ರಕ್ಕೆ ಬೇಕು. ಸದಾ ಚಟುವಟಿಕೆ-ಲವಲವಿಕೆಯಲ್ಲಿರುವ ಪುನರೂರು ತುಂಬಾ ಕಾಲ ನಮ್ಮೊಂದಿಗಿರಬೇಕು ಎಂದು ಆಶಿಸುತ್ತಾ, ಇದು ತನಕದ ಅವರ ಸಾಧನೆಗಳಿಗಾಗಿ ಅಭಿನಂದಿಸಿ ನಾಳಿನ ಸಾಧನೆಗಳಿಗೆ ಪ್ರೀತಿಯ ಸುಪ್ರಭಾತ ಕೋರುತ್ತೇನೆ.

□

ಪಟೇಲ್ ಪುನರೂರು!

□ ಡಾ। ಎಂ. ಪ್ರಭಾಕರ ಜೋಶಿ



ನಮ್ಮ ಸಾರ್ವಜನಿಕ ಜೀವನದ ಓರ್ವ ವಿಶಿಷ್ಟ ಮತ್ತು ವಿಚಿತ್ರ ವ್ಯಕ್ತಿ ಪುನರೂರು. ಅವರು ಪಟೇಲ ವಂಶಸ್ಥರು. ('ಪುನಾರ್ದ ಪಟ್ಲೇರ್' - ಪುನರೂರಿನ ಪಟೇಲರು- ಎಂದೇ ಅವರ ಮನೆತನ ಪರಿಚಿತ. ಊರ ಪಟೇಲಿಕೆ ಅವರ ಅಣ್ಣ ವೆಂಕಟೇಶರಾಯರದ್ದು) ಈ ಒಂದು ಅಂಶ, ಅವರ ಆಸಕ್ತಿ, ಕಾರ್ಯವಿಧಾನ, ಧಾರಾಳತನ, ಕಾರ್ಯೋತ್ಸಾಹಗಳಲ್ಲೆಲ್ಲ ಬಿಂಬಿಸುತ್ತಿದೆ ಎನ್ನಬಹುದು. ಅವರ ಕಾರ್ಯಕ್ಷೇತ್ರಗಳಲ್ಲೆಲ್ಲಾ ಅವರು ಒಬ್ಬ ಪಟೇಲರೇ.

ಅವರನ್ನು ಕಂಡವರ, ಒಡನಾಡಿದವರ ಮೇಲೆ ಅತಿ ಸಹಜವಾಗಿ, 'ಸಾಮಾನ್ಯರಲ್ಲಿ ಅಸಾಮಾನ್ಯ'ನೆಂಬ ಒಂದು ಗಾಢ ಪ್ರಭಾವವನ್ನವರು ಒತ್ತಿಬಿಡುತ್ತಾರೆ. ಉನ್ನತ ಸ್ಥಾನಗಳಲ್ಲಿದ್ದು ಮುಖವಾಡವಿಲ್ಲದೆ, ಕೆಲವೊಮ್ಮೆ ಅಗತ್ಯವಾದ ಜಾಗ್ರತೆಯೂ ಇಲ್ಲದೆ ಸರಳವಾಗಿ ವ್ಯವಹರಿಸುವ ಅವರ ಸಾರ್ವಜನಿಕ ಜೀವನ ಅವರದೇ ಆದೊಂದು ಮಾದರಿ- ಅದು ಪುನರೂರು ಶೈಲಿ! ಧನಸಹಾಯದಿಂದ ಹಿಡಿದು ಊಟ-ತಿಂಡಿ ಬಡಿಸುವವರೆಗೆ ಅವರದು ಓತಪ್ರೋತ ಸಹಕಾರ. ಅದೂ ತುಂಬ ಸಹಜವಾಗಿ. ಸರಳತೆ ಮತ್ತು ನೇತೃತ್ವ ಅವರ ಹುಟ್ಟುಗುಣಗಳು.

'ಪುನರೂರರ ಸಹಾಯ' ಎಂಬುದೀಗ ನಮ್ಮ ದಕ್ಷಿಣ

ಡಾ. ಎಂ. ಪ್ರಭಾಕರ ಜೋಶಿ, ಎನ್3, ಪೀಸ್‌ಲ್ಯಾಂಡ್ ಅಪಾರ್ಟ್‌ಮೆಂಟ್ಸ್, ಪಿಂಟೋಸ್ ಲೇನ್, ಕದ್ರಿಕಂಬಳ, ಮಂಗಳೂರು-4

ಕನ್ನಡದ ಪ್ರದೇಶದಲ್ಲಿ ಸದಾ ಅಂಗೀಕೃತ ಮತ್ತು ನಿರೀಕ್ಷಿತ! 'ಟೇಕನ್ ಫಾರ್ ಗ್ರಾಂಟೆಡ್!' ಅವರು ಕೊಡುತ್ತಾರೆ, ಅಲ್ಲ 'ಕೊಡತಕ್ಕದ್ದು' ಎಂಬಂತೆ ಹಕ್ಕಿನಿಂದ ಅಪೇಕ್ಷಿಗಳು ವರ್ತಿಸುತ್ತಾರೆ. ಮಾತ್ರವಲ್ಲ 'ಪುನರೂರು ಈ ಸಲ ಇಂತಿಷ್ಟು ಕೊಟ್ಟರು' ಎಂದು ಗೊಣಗುತ್ತಾರೆ.

ಪುನರೂರರ ನೆರವು ಎಂದರೆ, ಊರಲ್ಲಿನ ಜನರಿಗೆ ಪಟೇಲರ ನೆರವು ಇದ್ದಹಾಗೆ, ರಕ್ಷಕತ್ವ–ಗಾರ್ಡಿಯನ್ ಶಿಪ್. ಅಶನ–ವಸನದಿಂದ ಸಾಂಸ್ಕೃತಿಕ ಕಾರ್ಯಕ್ರಮದವರೆಗೆ, ಸಾಹಿತ್ಯದಿಂದ ಧಾರ್ಮಿಕದವರೆಗೆ, ಚಿಕಿತ್ಸಾ ಸಹಾಯದಿಂದ ತೊಡಗಿ ಕಛೇರಿ ಕೆಲಸಗಳವರೆಗೆ–ಎಷ್ಟೊಂದು ವ್ಯಾಪ್ತಿ ಅದಕ್ಕೆ!

ಜನರನ್ನು ತನ್ನ ವಾಹನದಲ್ಲಿ ಕರೆತಂದು, ಊಟ–ಉಪಚಾರ ನೀಡಿ ಕೆಲಸವನ್ನೂ ಮಾಡಿಸಿಕೊಟ್ಟ ಬಳಿಕವೂ, 'ಅವರಿಗೇನು? ಅವರದ್ದೆ ವಾಹನವಿದೆ, ಹೋಟೇಲೂ ಅವರದ್ದೆ ಹೆಸರಿಗಾಗಿ ಮಾಡುತ್ತಾರೆ' ಎಂದವರುಂಟು!

ಒಂದಿಷ್ಟು ಕೋಪ ಮತ್ತು ಅವಸರ ಕೂಡ ಅವರ ವ್ಯಕ್ತಿತ್ವದ ಅಂಶಗಳು. ಇದರಿಂದ ಹಲವು ಬಾರಿ ಇತರರಿಗೆ ಉಪಕಾರವಾಗಿ ಪುನರೂರರಿಗೆ ತೊಂದರೆ ಆಗುವುದುಂಟು. ಅವಸರದಲ್ಲಿ ನೆರವು ನೀಡಿ ಆ ಬಳಿಕ ಫಲಾನುಭವಿ ಅನರ್ಹ ಎಂದು ಕಂಡುಬಂದದ್ದುಂಟು. ಇವರ ಗಡಿಬಿಡಿಯಿಂದ, ನೇರಕ್ರಮದಿಂದ ಮತ್ತು 'ಶರಣಾಗತರನ್ನು ಕಾಪಾಡುವ ಬಿರುದಿ'ನಿಂದ ಅಯೋಗ್ಯರಿಗೆ ರಕ್ಷಣೆಯೂ ಒಳ್ಳೆಯವರಿಗೆ ತೊಂದರೆಯೂ ಆದದ್ದೂ ಉಂಟು.

ಆದರೆ ಒಂದು ವಿಚಿತ್ರ. ಕೃತಘ್ನತೆಗಳನ್ನು ಅವರು ತಮಾಷೆಯಾಗಿ, ನಗುತ್ತ ಸ್ವೀಕರಿಸುತ್ತಾರೆ. ಬಿಕ್ಕಟ್ಟಿನ ಪ್ರಸಂಗವೊಂದರಲ್ಲಿ ಇವರಿಂದ ತನು–ಮನ–ಧನ ಸಹಾಯ ಪಡೆದವರೊಬ್ಬರು ಇವರ ಇದಿರಲೇ ಆ ಪ್ರಕರಣವನ್ನು ವಿವರಿಸುತ್ತ, ಇವರಿತ್ತ ನೆರವನ್ನೂ ಉಲ್ಲೇಖಿಸದೆ ಇದ್ದಾಗಲೂ ಇವರು ಸುಮ್ಮನೆ ಇದ್ದುದನ್ನು ಕಂಡಿದ್ದೇವೆ. ಬೇರೆ ಕೆಲವು ಸನ್ನಿವೇಶಗಳಲ್ಲೂ ಹಾಗೆಯೇ. ''ಏನು ಮಾಡುವುದು?'', ''ಅವರು ಸ್ವಲ್ಪ ಹಾಗೆಯೇ'', ''ಜನ ಹಾಳಲ್ಲ...'', ''ಇನ್ನೊಮ್ಮೆ ಅಗತ್ಯಬಿದ್ದಾಗ ಬಂದಾರು...'' ಅಂತೆಯೇ, ''ಹಣ ಹಿಂದಿರುಗಿಸಲಿಲ್ಲ, ಇಲ್ಲ, ಪಾಪ... ಏನು ಮಾಡುವುದು?'' ಇತ್ಯಾದಿಗಳು ಅವರ ಖಾಯಂ ಸಮಾಧಾನಗಳು.

ಅವರ ಸಂಸ್ಥೆಗಳಲ್ಲಿ ಮುಖ್ಯ ಸ್ಥಾನಗಳಲ್ಲಿರುವ ಜವಾಬ್ದಾರಿ ವ್ಯಕ್ತಿಗಳ ಊರು–ವಿಳಾಸವೇ ಅವರಿಗೆ ಗೊತ್ತಿರುವುದಿಲ್ಲ! ''ಅವರೇನು ಮೋಸ ಮಾಡಲಿಕ್ಕಿಲ್ಲ, ಅವರ ವಿಳಾಸ ನನಗೆ ಯಾಕೆ?'' ಇದು ಅವರ ವಿವರಣೆ.

ವ್ಯಾಪಾರ ವಹಿವಾಟು, ಸ್ವಗ್ರಾಮದ ವ್ಯವಹಾರ, ನಿರಂತರ ಓಡಾಟ, ಸಂಪರ್ಕ, ವಿವಿಧ ರೀತಿಯ ನೆರವು, ತಾನೇ ನಿಂತು ಮಾಡುವ–ಮಾಡಿಸುವ ನೂರಾರು ಕೆಲಸಗಳು, ಪತ್ರವ್ಯವಹಾರ, ಓದು, ಬೇಸರ ಬರಿಸುವಷ್ಟು ಮೀಟಿಂಗುಗಳು, ಸಾರ್ವಜನಿಕ ಸಭೆಗಳು... ಈ ಮಧ್ಯೆ ಬಂಧುಮಿತ್ರರು, ಸಂಸಾರ, ಸಮಾರಂಭ, ನಿತ್ಯಾನುಷ್ಠಾನ, ಪೂಜೆ–ಈ ಎಲ್ಲದರ ಮಧ್ಯೆ ಸದಾ ಸಂತಸ, ಉಲ್ಲಾಸ, ನಗೆ–ಇವು ಪುನರೂರರ ವ್ಯಕ್ತಿತ್ವದ ವಿಶೇಷತೆ. ಬೆಳಗ್ಗೆ ಉಟ್ಟ ಅಂಗಿ, ಧೋತ್ರ ಅವರು ಬದಲಾಯಿಸುವುದಿಲ್ಲ. ಕಟ್ಟಿದ ಮುಂಡಸು ಪುನಃ ಬಿಗಿದುಕೊಳ್ಳುವುದೂ ಇಲ್ಲ. ತಲೆಬಾಚುವುದು ದಿನಕ್ಕೊಮ್ಮೆ ಮಾತ್ರ. ಬ್ಯಾಗು, ಚೀಟಿ, ನೋಟು ಅವರಲ್ಲಿಲ್ಲ. ಎಲ್ಲವೂ ಅಚ್ಚುಕಟ್ಟು. ಕ್ರಮಪ್ರಕಾರ. ಅವರಲ್ಲಿ ಎಲ್ಲರಿಗಾಗಿಯೂ ಸಮಯ ಇದೆ.

ಪುನರೂರರ ಭಾಷಣ ಸಾಮಾನ್ಯವಾಗಿ ಸಂಕ್ಷಿಪ್ತ; ಮೂರರಿಂದ ಎಂಟು ನಿಮಿಷಗಳಷ್ಟು ಮಾತ್ರ. ಇದಕ್ಕಾಗಿ ಅವರು ವೇದಿಕೆಯಲ್ಲಿ ಎರಡು–ಮೂರು ತಾಸು ಕುಳಿತಿರುತ್ತಾರೆ. ಭಾಷಣವೂ ಚೊಕ್ಕ, ಸ್ಪಷ್ಟ,

ವಿಚಾರಗಳನ್ನು ಕ್ರೋಢೀಕರಿಸಲು, ಭಿನ್ನಾಭಿಪ್ರಾಯಗಳನ್ನು ಸಮನ್ವಯಗೊಳಿಸಲು ಅವರು ಬಳಸುವ (ಪ್ರಸಿದ್ಧವಾಗಿರುವ) ಒಂದು ಮಾತು- 'ಏನೇ ಇರಲಿ...!' ತನ್ನ ಅಭಿಪ್ರಾಯಗಳನ್ನು ಖಂಡತುಂಡವಾಗಿ ಮಂಡಿಸಲು ಅವರೆಂದೂ ಅಂಜಿದವರಲ್ಲ. ಪರಿಷತ್ ಅಧ್ಯಕ್ಷರಾಗಿದ್ದಾಗಲೂ ನಾಜೂಕು ಮಾತಾಡಿ ತಿಪ್ಪೆ ಸಾರಿಸುವವರು ಅವರಲ್ಲ. ದಾಕ್ಷಿಣ್ಯ ಸೌಜನ್ಯ ಇದೆ; ಆದರೆ ಮುಲಾಜು ಇಲ್ಲ. ಉಪಾಯ, ಸ್ಟ್ರಾಟಜಿ-ತಂತ್ರಗಾರಿಕೆ- ಇಲ್ಲದೆ ಅವರು ಕೊನೆವರೆಗೆ ಸಿಕ್ಕಿದ್ದೂ ಉಂಟು. ಅದರಲ್ಲೂ ಅವರಿಗೆ ಬೇಸರ ಇಲ್ಲ. ಪುನರೂರರೊಂದಿಗೆ ಭಿನ್ನಾಭಿಪ್ರಾಯ ಇರುವವರಿಗೂ ಅವರೊಂದಿಗೆ ಜಗಳವಾಡಲು ಸಾಧ್ಯವಿಲ್ಲ. ಅವರನ್ನು ದೂರಲೂ ಅಸಾಧ್ಯ. ದೂರುವವನ ಮನೆಗೂ ಅವರು ಹೋಗುತ್ತಾರೆ!

ಪುನರೂರಲ್ಲಿ ಅವರು ಕೈಗೆತ್ತಿಕೊಂಡು ಕಾರ್ಯರೂಪಕ್ಕೆ ತರುತ್ತಿರುವ 101 ಮನೆಗಳ ದಾನ ಯೋಜನೆ ಏಕವ್ಯಕ್ತಿ ನಿರ್ಮಿತವಾದ ಬಲು ದೊಡ್ಡದೊಂದು ಸಾಮಾಜಿಕ ಕಲ್ಯಾಣ ಪ್ರಕಲ್ಪ. ಕೆಲವೊಂದು ನಿಶ್ಚಿತ ರಚನಾತ್ಮಕ ಕಾರ್ಯ ಅಥವಾ ಆಪತ್ತು ಮೊದಲಾದ ಸಂದರ್ಭಗಳಿಗೆ ಅವರದು ಸುಮಾರು ಇಂತಿಷ್ಟು ನೆರವು ಎಂಬ ಅಘೋಷಿತ ನಿರ್ಣಯವೇ ಇರುತ್ತದೆ.

ಪುನರೂರರು ಒಬ್ಬರ ಕಡೆ ನಿಂತರೆಂದರೆ, ಅದು ಗಟ್ಟಿ ನಿಲುವು. ಇದು ಹಲವರ ಅನುಭವ. ಈ ಲೇಖಕನ ಸ್ವಾನುಭವ ಕೂಡ. ಸಾಂಸ್ಕೃತಿಕ ವಿಚಾರದಲ್ಲಿ ಅಭಿಪ್ರಾಯವೊಂದನ್ನು ಪ್ರಕಟಿಸಿದ ಸಂದರ್ಭದಲ್ಲಿ, ಕೆಲವರು ತಪ್ಪು ತಿಳುವಳಿಕೆ ಮಾಡಿಕೊಂಡು, ನನ್ನನ್ನು ಬಹಿರಂಗವಾಗಿ ಪ್ರತಿಭಟಿಸಿ, ಆ ಬಳಿಕ ಬಹುಶಃ ಬೇಕೆಂದೇ ತಮ್ಮ ನಿಲುವನ್ನು ಸಾಧಿಸಲೋಸುಗ ಪುನಃ ಬೇರೊಂದು ರೀತಿಯಲ್ಲಿ ಆಕ್ಷೇಪ ಹೂಡಿದ್ದ ಸನ್ನಿವೇಶ. ಆ ಸವಾಲು, ಸಂಬಂಧಪಟ್ಟ ಸಂಘಟನೆಯೊಂದಕ್ಕೆ ಪುನರೂರು ಪ್ರಮುಖರೂ ಆಗಿದ್ದರು. ಹಾಗಾಗಿ, ಆಕ್ಷೇಪಕರ ಕಡೆಗೆ ಅವರು ನಿಲ್ಲಬಹುದಾಗಿತ್ತು. ಆದರೆ, ಅದಾವುದನ್ನೂ ಲೆಕ್ಕಿಸದೆ, ಅವರು ನನ್ನನ್ನು ಬಲವಾಗಿ ಬೆಂಬಲಿಸಿದರು. ಅದೂ ಕೂಡ ನನ್ನ ಗಮನಕ್ಕೆ ಬಂದುದು ಆ ಬಳಿಕವೇ. ಅದನ್ನವರು ನನಗೆ ಮಾಡಿದ 'ಉಪಕಾರ'ವಾಗಿ ಪರಿಗಣಿಸಲಿಲ್ಲ. ಅವರ ನಿಲುವಿನಿಂದ ಅಸಮಾಧಾನಗೊಂಡರೆನ್ನಲಾದ ವ್ಯಕ್ತಿಗಳನ್ನು ಸಮಾಧಾನಪಡಿಸಲೂ ಹೋಗಲಿಲ್ಲ.

ಇಷ್ಟೆಲ್ಲ ಗುಣ ಗೌರವಗಳುಳ್ಳ ಹರಿಕೃಷ್ಣರಾಯರ ಕುರಿತು- "ಇವರಿಗೆ ಇನ್ನೂ ಒಂದಿಷ್ಟು ಸಾಹಿತ್ಯ ಪಾಂಡಿತ್ಯ ಮತ್ತು ಅಕಡಮಿಕ್ ಹಿನ್ನೆಲೆ ಇದ್ದಿದ್ದರೆ?" ಎಂದು ಅನಿಸದಿರುವುದಿಲ್ಲ. "ಹಾಗಿದ್ದರೆ ನಾನು ಹೀಗೆಲ್ಲ ಇರುತ್ತಿದ್ದೆನೆ?" ಎಂಬುದು ಅವರ ಉತ್ತರ!

ತನ್ನ ತಾರುಣ್ಯದಲ್ಲಿ, ಅವರು ಪರವೂರಿಗೆ ಉದ್ಯಮಕ್ಕಾಗಿ ಹೋಗುವ ಮೊದಲು, ಯಕ್ಷಗಾನದ ವೇಷ ಮಾಡುತ್ತಿದ್ದರಂತೆ. ಅವರ ಒಡ್ಡೋಲಗದ ಅಬ್ಬರ, ಪಟೇಲಿಕೆಯ ಪರಂಪರೆಯ ದಿಲ್‌ದಾರ್ ಗುಣ ಮತ್ತು ರೀತಿ ಇವೆಲ್ಲ ಪಟೇಲ್ ಪುನರೂರರ ವ್ಯಕ್ತಿತ್ವದಲ್ಲಿ ಮೇಳೈಸಿವೆ.

ನಮ್ಮ ಸಾರ್ವಜನಿಕ ಜೀವನಕ್ಕೆ ದೊಡ್ಡ ಪ್ರಮಾಣದ ದಾನ ಮತ್ತು ವಿಧಾಯಕ ಕೈಂಕರ್ಯಗಳನ್ನು ನೀಡಿದ, ದಿಟ್ಟ ನಿಲುವಿನ ನೇರ ಸರಳ ವ್ಯಕ್ತಿತ್ವದ, ತುಂಬು ಪ್ರೀತಿಯ ಸ್ವಭಾವದ, ಪುಟಿಯುವ ಜೀವಂತಿಕೆಯ ಪುನರೂರರನ್ನು ಮಾದರಿಯಾಗಿ ನಮ್ಮ ಸಾಮಾಜಿಕ ನೇತಾರರು, ಉದ್ಯಮಿಗಳು ಸ್ವೀಕರಿಸಲಿ. 'ಸದಾ ತರುಣ' ಪುನರೂರು ಶತಾಯುಷಿಯಾಗಲಿ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಕುದುರೆ ಇದ್ದೂ ಏರದ ಕುದುರೆ ಸವಾರ!

ಡಾ. ನಾ. ಮೊಗಸಾಲೆ



ನನ್ನನ್ನು ಚೆನ್ನಾಗಿ ಬಲ್ಲವರು ಮತ್ತು ಅಷ್ಟು ಇಷ್ಟು ಪರಿಚಿತರೆನಿಸಿಕೊಂಡವರು ಸಹ ಸಾಹಿತ್ಯಕ ಸಂಬಂಧವಾಗಿ ಲೋಕಾಭಿರಾಮವಾಗಿ ಮಾತನಾಡುವಾಗಲೆಲ್ಲ ಆಗೊಮ್ಮೆ ಈಗೊಮ್ಮೆ ಎನ್ನುವಂತೆ ಪುನರೂರು ಅವರ ಪ್ರಸ್ತಾವ ಬಾರದೆ ಇರುವುದು ತೀರ ಅಪರೂಪ. ಹಾಗೆ ಪುನರೂರು ಅವರು ನಮ್ಮ ಮಾತಿನಲ್ಲಿ ಬರುವಾಗ, 'ನಿಮಗೇನು ಪುನರೂರು ಇದ್ದಾರಲ್ಲ!?' ಎಂದು ನನ್ನ ಎಲ್ಲ ಚಟುವಟಿಕೆಗಳ ಬೆಂಗಾವಲಿಗೆ ಪುನರೂರು ಇದ್ದಾರೆ ಎಂಬ ಅರ್ಥದಲ್ಲಿ, ಇಲ್ಲವೇ 'ನೀವು ಪುನರೂರು ಅವರಿಗೆ ಒಂದು ಮಾತು ಹೇಳಿದ್ದರೆ ಆಗುತ್ತಿತ್ತು. ಅವರು ಕೈ ಹಾಕಿದರೆ ನನ್ನ ಆ ಕೆಲಸ ಆದ ಹಾಗೇ!' ಎಂಬರ್ಥದಲ್ಲಿ ನುಡಿಯುವುದುಂಟು.

ವಿವಿಧ ಕ್ಷೇತ್ರಗಳಲ್ಲಿ ಮಿಂಚುತ್ತಿರುವವರಿಗೆ ಮತ್ತು ಪ್ರತಿಫಲಾಪೇಕ್ಷೆ ಇಲ್ಲದ ಸಾಮಾಜಿಕವೋ ಸಾಂಸ್ಕೃತಿಕವೋ ಇತ್ಯಾದಿ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಪ್ರಭಾವಿಗುಣ ಇರುತ್ತದೆ ಎಂಬುದು ಅನೇಕರ ಭಾವನೆ. ನನ್ನನ್ನೂ ಕೆಲವರು ಪ್ರಭಾವಶಾಲಿ ಎಂದು ತಪ್ಪಾಗಿ ಅರ್ಥೈಸಿ ಸಂದರ್ಶಿಸಿದ ಸಂದರ್ಭಗಳು ಉಂಟು. ರಾಜಕೀಯ ವ್ಯಕ್ತಿಗಳಿಂದ ಆಗಬೇಕಾದ ಕೆಲಸಗಳಿದ್ದರೆ ಅನೇಕರು ಬಂದು 'ನೀವು ಇಂಥವರಿಗೆ ಹತ್ತಿರದವರಂತಲ್ಲ? ನನಗಾಗಿ ಒಂದು

ಕಾಂತಾವರ–574 129, ಉಡುಪಿ ಜಿಲ್ಲೆ

ಮಾತು ಹೇಳಿ!'' ಎಂದದ್ದುಂಟು. ನನಗೆ ಅಂಥ ಪ್ರಭಾವ ಇಲ್ಲ ಎಂದರೆ, ಬಂದವರು ಒಪ್ಪಿಕೊಳ್ಳಲು ಸಿದ್ಧರಿಲ್ಲ! ''ಧರ್ಮಸ್ಥಳದ ಧರ್ಮಾಧಿಕಾರಿ ಡಾ|| ವೀರೇಂದ್ರ ಹೆಗ್ಗಡೆಯವರಿಗೆ ನೀವು ಹತ್ತಿರದವರು. ದಯವಿಟ್ಟು ಅಲ್ಲಿತನಕ ಬಂದು ನೆರವಾಗಬಹುದಾ?'' ಎಂದು ಕೇಳಿದವರೂ ಉಂಟು. ಹೀಗೆ ಸಮಾಜದಲ್ಲಿ ಗಣ್ಯರೆಂದು ನಾವು ಯಾರನ್ನೆಲ್ಲ ಗೌರವಿಸುತ್ತೇವೋ ಪರಿಭಾವಿಸುತ್ತೇವೋ ಅಂಥವರ ಒಂದಿಷ್ಟು ಪರಿಚಯ ಇಲ್ಲದೇ ಸಂಪರ್ಕ ಉಂಟೆಂದಾದರೆ ಮುಗಿಯಿತು. ಇಂಥ ಸಂಪರ್ಕ ಇರುವ ನನ್ನಂಥ ಸಾಮಾನ್ಯ ವ್ಯಕ್ತಿ ಸಹ ಒಬ್ಬ 'ಪ್ರಭಾವಿ'ಯಾಗಿ ಮೆರೆಯುವುದು ನಮ್ಮ ಸಮಾಜದಲ್ಲಿ ಅಸಾಧ್ಯವಲ್ಲ!

ನನಗೆ ಪುನರೂರು ಅವರ ಪರಿಚಯ ಆದ ಮೇಲೆ ಬೆಳೆದ ಸ್ನೇಹ ಸಂಬಂಧ ಸುಮಾರು ಎರಡು ದಶಕಗಳಿಗೂ ಮಿಕ್ಕಿದ್ದು. ನಾನು ಅವರನ್ನು ಮೊದಲು ಭೇಟಿಯಾದದ್ದು ಗೆಳೆಯ ನಂದಳಿಕೆ ಬಾಲಚಂದ್ರರಾಯರ ಮೂಲಕ ಕಾಂತಾವರ ಕನ್ನಡ ಸಂಘಕ್ಕೆ ನೆರವು ಕೇಳಲು. ಆಗ ಅವರು ಲಯನ್ಸ್ ಚಟುವಟಿಕೆಯಲ್ಲಷ್ಟೇ ನಿರತರಾಗಿದ್ದರು. ಆದರೂ ಮೊದಲ ಭೇಟಿಯಲ್ಲೇ ಅವರು ಉದಾರವಾಗಿ ನಡೆದುಕೊಂಡರು, ಆತ್ಮೀಯತೆಯಿಂದ ಮಾತನಾಡಿದರು.

ಆಮೇಲೆ ತೊಂಬತ್ತರ ದಶಕ ಶುರುವಾಗುತ್ತದೆನ್ನುವ ಕಾಲಘಟ್ಟದಲ್ಲಿ ಅವರ ಆಸಕ್ತಿ ಸಾಹಿತ್ಯ ಚಟುವಟಿಕೆಗಳಾಚೆ ತಿರುಗಿತು. ಲಯನ್ಸ್ ಸಂಸ್ಥೆಯಲ್ಲಿ ಎಷ್ಟು ಎತ್ತರಕ್ಕೆ ಏರಬಹುದೋ ಆ ಎತ್ತರವನ್ನು ಏರಿ, ಅಲ್ಲಿ ಏನೇನೆಲ್ಲ ಸಾಧನೆಗಳನ್ನು ಮಾಡಬಹುದೋ ಅವನ್ನು ಮಾಡಿ ಮತ್ತೆ ಅಲ್ಲಿ ನಿಂತ ನೀರಾಗುವುದಕ್ಕಿಂತ ಇನ್ನೊಂದು ಕ್ಷೇತ್ರದಾಚೆ ಕಣ್ಣಿಟ್ಟರು. ಅದು ಸಾಹಿತ್ಯ ಕ್ಷೇತ್ರ. ಕೈ ಹಾಕಿದ ಅಥವಾ ಕಾಲಿಟ್ಟ ಎಲ್ಲಾ ಕ್ಷೇತ್ರಗಳಲ್ಲೂ ತನ್ನದೇ ಆದ ಛಾಪನ್ನು ಒತ್ತಬೇಕಾದರೆ ಎಲ್ಲ ಸಾಧನೆ-ಸಂಪನ್ಮೂಲಗಳನ್ನೂ ಬಳಸಿಯೇ ಆ ಕ್ಷೇತ್ರವನ್ನು ತನ್ನದಾಗಿಸಿಕೊಂಡಾರೇ ವಿನಾ ಸುಮ್ಮನೇ ಹೆಸರು ಪಡೆಯುವ ಜಾಯಮಾನ ಅವರದ್ದಲ್ಲ!

ಹೀಗೆ ಅವರು ಕಾಲಿಟ್ಟ ಕ್ಷೇತ್ರಗಳಲ್ಲಿ- ಮುಖ್ಯವಾಗಿ ಲಯನ್ಸ್, ಆಮೇಲೆ ಧಾರ್ಮಿಕ, ಈಗ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ- ಅವರೊಬ್ಬ ಪ್ರಭಾವೀ ವ್ಯಕ್ತಿ ಎಂದು ಸಮಾಜದಿಂದ ಗುರುತಿಸಿ ಗೌರವಿಸಲ್ಪಟ್ಟಿದ್ದಾರೆ. ಹೀಗಾಗಿ ಅವರ ಪ್ರಭಾವದಿಂದ ಅವರು ಗುರುತಿಸಿಕೊಂಡ ಎಲ್ಲ ಕ್ಷೇತ್ರಗಳಲ್ಲಿನ ಸಣ್ಣಪುಟ್ಟ, ಕೆಲವೊಮ್ಮೆ ದೊಡ್ಡದೊಡ್ಡ, ಕೆಲಸಗಳೂ 'ಪುನರೂರು ಅವರನ್ನು ಹಿಡಿದರೆ ಆಗುತ್ತದೆ' ಎಂಬ ಅಭಿಪ್ರಾಯವೂ ಬೆಳೆಯಿತು. ಅನೇಕ ಸಂದರ್ಭಗಳಲ್ಲಿ ಅವರ ಮಾತುಗಳು ಪ್ರಭಾವಿ ಆದವು. ಹೊಟೇಲ್ ಉದ್ಯಮಿಯೊಬ್ಬರು, ಆ ಉದ್ಯಮಕ್ಕಿಂತ ಭಿನ್ನವಾದ ಕ್ಷೇತ್ರಗಳಲ್ಲಿ- ಮೂಲ ಉದ್ಯಮದ ಪ್ರಭಾವ ಅಥವಾ ಸಂಬಂಧ ಇಲ್ಲದೇ- ಪ್ರಭಾವಿಯಾದ ಉದಾಹರಣೆ ಇದ್ದರೆ, ಅದು ಪುನರೂರರದು.

ನನ್ನಲ್ಲಿ ಬಂದ ಅನೇಕರ ಕೆಲಸಕಾರ್ಯಗಳು ಅವರಿಂದ ಸಾಧ್ಯವಾಗಬಹುದು ಅನ್ನಿಸಿದಾಗ ನಾನು ಅವರನ್ನು ಸಂಪರ್ಕಿಸಿ 'ನೀವು ನೆರವಾಗಬಹುದೇ?' ಎಂದು ವಿನಂತಿಸಿದ್ದಿದೆ. ಅಂಥ ಸಂದರ್ಭಗಳಲ್ಲೆಲ್ಲ ಅವರು, 'ನೋಡೋಣ, ಪ್ರಯತ್ನ ಮಾಡೋಣ, ಅವರನ್ನು ಕಳುಹಿಸಿ!' ಎಂದದ್ದೇ ಹೆಚ್ಚು. ಹಾಗೆ ಹೋದವರಿಗೆಲ್ಲ ರಾಜಕಾರಣಿಗಳ ಹಾಗೆ 'ಬರೇ ನೋಡೋಣ' ಎನ್ನಲಿಲ್ಲ. ಕೆಲವು ಸಲ 'ಆಗುವುದಿಲ್ಲ ಅಂದರೆ ಏನು?' ಎಂದು ಹಠ ಹಿಡಿದು ಅವರು ಹಗ್ಗ ಜಗ್ಗಾಡಿದ್ದೂ ಇದೆ. ಬಹುತೇಕ ಸಂದರ್ಭಗಳಲ್ಲಿ ಅವರ ಮಾತಿಗೆ ಬೆಲೆ ಸಿಕ್ಕಿದ್ದು ನನಗೆ ಗೊತ್ತು. ಕಾಲೇಜುಗಳಲ್ಲಿ ಪ್ರವೇಶದ ವಿಷಯವೂ ಆಗಿರಬಹುದು ತಾಲೂಕು ಕಛೇರಿ ಅಥವಾ ಜಿಲ್ಲಾಧಿಕಾರಿ ಕಛೇರಿಗಳಲ್ಲಿನ ಕೆಲಸಗಳೂ ಇರಬಹುದು, ಸಂಸ್ಥೆಗಳಲ್ಲಿ ಉದ್ಯೋಗಾವಕಾಶವೂ ಇರಬಹುದು, ಪೋಲೀಸ್ ಇಲಾಖೆಯಿಂದ ಆಗಬೇಕಾದ ಸಹಾಯವೂ

ಆಗಿರಬಹುದು! ಆರ್ಥಿಕ ಸಹಾಯವಾದರೆ ಆಯಿತೆಂದೇ ಅರ್ಥ!

ಇವೆಲ್ಲ ಅವರ ಚಟುವಟಿಕೆಗಳು ಜಿಲ್ಲೆಯ ('ಲಯನ್ಸ್' ಜಿಲ್ಲೆ ಕೂಡಾ) ಗಡಿಯನ್ನು ದಾಟದೇ ಇರುವ ದಿನಗಳವು. ಯಾವಾಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದರೋ ಆಮೇಲೆ ಅವರು ಪ್ರಭಾವ ಬೀರುವ ಪ್ರಭಾವಲಯವು ರಾಜ್ಯಮಟ್ಟಕ್ಕೂ ವಿಸ್ತರಿಸಿತು. ಒಂದು ಸಣ್ಣ ವಿಷಯ ಹೇಳುತ್ತೇನೆ. ಈಚೆಗೆ ಅಂದರೆ ಇದೇ ಮಾರ್ಚ್ (2005) ತಿಂಗಳ ಕೊನೆಯ ವಾರದಲ್ಲಿ ನಡೆದದ್ದು. ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯೊಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ಪಡೆದು (ನಡೆಯುವ ಭರವಸೆಯಲ್ಲಿ) ಒಂದು ವಿಶಿಷ್ಟ ಕಾರ್ಯಕ್ರಮ ನಡೆಸಿತು. ಕಾರ್ಯಕ್ರಮ ನಡೆದು ತಿಂಗಳು ಮೂರಾದರೂ ಇಲಾಖೆಯಿಂದ ಬರಬೇಕಾಗಿದ್ದ ಧನಸಹಾಯ ಬರಲಿಲ್ಲ. ಖುದ್ದಾಗಿ ಸಂಸ್ಥೆಯ ಅಧ್ಯಕ್ಷರು ಹೋಗಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳನ್ನು ಕಂಡಾಗ ಅವರು ಸರಕಾರಕ್ಕೆ ಪ್ರಸ್ತಾವನೆ ಕಳುಹಿಸಿ ನಾಲ್ಕು ತಿಂಗಳೇ ಕಳೆದಿತ್ತು ಎಂದರು. ಆದರೆ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರಿಂದ ಮಂಜೂರಾತಿ ಬಂದಿರಲಿಲ್ಲ. ಮಾರ್ಚ್ 31ರೊಳಗೆ ಇಲಾಖೆಯ ಮಂಜೂರಾತಿ ದೊರಕಿ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಹಣ ಬಿಡುಗಡೆ ಮಾಡದಿದ್ದರೆ, ಮತ್ತೆ ಅದು ಎಂದೂ ಬಿಡುಗಡೆ ಆಗುವುದು ಸಾಧ್ಯವಿರಲಿಲ್ಲ. ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ತಾವು ಸರಕಾರದ ಮೇಲೆ ಒತ್ತಡ ತರಲು ಸಾಧ್ಯವಿಲ್ಲ, ನೀವು ಯಾರಿಂದಾದರೂ ಹೇಳಿಸಿ ಎಂದರು. ಆ ಸಂಸ್ಥೆಯವರಿಗೆ ನನ್ನ ಪರಿಚಯವಿತ್ತು. ಅವರು ಬಂದು 'ನೀವು ಒಂದು ಮಾತು ಪುನರೂರು ಅವರಿಗೆ ಹೇಳಿದರೆ ನಮಗೆ ಒಂದಿಷ್ಟು ಧನಸಹಾಯ ಸಿಗುತ್ತದೆ!' ಎಂದರು. ಖಂಡಿತ ಹೇಳೋಣ ಎಂದು ನಾನು ಪುನರೂರು ಅವರನ್ನು ಸಂಪರ್ಕಿಸಿದೆ. ಪುನರೂರು ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರನ್ನು ಸಂಪರ್ಕಿಸಿದರು. ಸಂಸ್ಥೆ ಕೇಳಿದ್ದು 35 ಸಾವಿರ. 30 ಸಾವಿರ ಬಿಡುಗಡೆ ಮಾಡೋಣ ಎಂದರು ಅಧಿಕಾರಿಗಳು. ಪ್ರತಿದಿನ ಈ ಹಣ ಬಿಡುಗಡೆಯ ಪ್ರಕ್ರಿಯೆಯಲ್ಲಿ ಏನೇನು ಬೆಳವಣಿಗೆ ಆಗುತ್ತಿದೆ ಎನ್ನುವುದನ್ನು ಪುನರೂರು ಅವರು ದಿನಾ ವಿಚಾರಿಸಿ ಸಂಸ್ಥೆಯ ಅಧ್ಯಕ್ಷರಿಗೆ ವರದಿ ಒಪ್ಪಿಸುತ್ತಿದ್ದರು. ಕೊನೆಗೂ ಮಾರ್ಚ್ 26ರಂದು ಧನಸಹಾಯ ಮಂಜೂರಾಯಿತು. ಮಾರ್ಚ್ 28ರಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಆ ಸಂಸ್ಥೆಗೆ ಹಣ ಬಿಡುಗಡೆಯೂ ಆಯಿತು.

ಹೀಗೆ, ಅವರಿಗೆ ತನ್ನಲ್ಲಿ ಪ್ರಭಾವಬೀರಲು ಬಂದ ವ್ಯಕ್ತಿಯ/ಸಂಸ್ಥೆಯ ಅಹವಾಲುಗಳಲ್ಲಿ ನ್ಯಾಯ ನಿಷ್ಠುರತೆ ಇದೆ ಎಂದಾದರೆ, ಅವರು ಯಾವ ಮಂತ್ರಿ ಮಾನ್ಯರನ್ನು ಭೇಟಿಯಾಗಲು, ಇಲ್ಲವೇ ಅವರಲ್ಲಿ ವ್ಯಾಗ್ಯುದ್ಧ ಮಾಡಲೂ ಸಿದ್ಧ. ನ್ಯಾಯಬದ್ಧವಾದದ್ದನ್ನು ಕೇಳಲಿಕ್ಕೆ ಮುಜುಗರವೇಕೆ? ಹಾಗೆ ಕೇಳುವುದು ನಮ್ಮ ಹಕ್ಕು. ಒಬ್ಬನಿಗೆ ಹಾಗೆ ಕೇಳಲು ಸಾಧ್ಯವಿಲ್ಲ ಎಂದಾಗ, ಸಾಧ್ಯವುಳ್ಳವನು ಅವನ ಪರವಾಗಿ ಕೇಳುವುದೂ ಅಗತ್ಯ ಎಂಬ ನಿಲುವು ಅವರದ್ದು. ಇದು ಅವರ ಅಕೃತ್ರಿಮ ನಡವಳಿಕೆಯ, ಸಹೃದಯತೆಯ ನಿಜವಾದ ಮುಖ. ಆದರೆ ಅನೇಕ ಜನರು ಅವರನ್ನು ಪೂರ್ತಿ ಅರಿಯದೆ ಆಡಿಕೊಳ್ಳುವ ಮಾತೆಂದರೆ 'ಪುನರೂರು ಅವರ ಮಾತು ತೀರ ಕಠೋರ.'

ನಿಜ, ಅನೇಕ ಸಂದರ್ಭಗಳಲ್ಲಿ ಅವರು ಮಾಡಿದ ಸಹಾಯವೇ ಅವರ ಮಾತಿನಿಂದ ಅವರೇ ಅಳಿಸಿ ಹಾಕಿದ ಹಾಗೆ ಆಡಿದ್ದೂ ಉಂಟು! ಯಾಕೆ ಇವರು ಹೀಗೆ ಆಡಬೇಕಿತ್ತು ಎಂದು ನೊಂದುಕೊಂಡದ್ದೂ ಉಂಟು.

ಅನೇಕರು ಹಿಂದೆಯೂ, ಈಗಲೂ ತಿಳಿದುಕೊಂಡದ್ದೆಂದರೆ ಇಂಥ ವಿಷಯಗಳಲ್ಲಿ ಅವರಲ್ಲಿ ನಾನು ತಪ್ಪು ಸಂವಾದ ನಡೆಸುವಷ್ಟು ಸಲಿಗೆ ಇದೆ ಎಂದು! ನಾನು ಅವರ ಆಪ್ತವರ್ಗದಲ್ಲಿ ಒಬ್ಬ ಎಂದೂ

ಹೇಳಿಕೊಳ್ಳುವವರಿದ್ದಾರೆ. ಹೀಗೆ ಜನ ಭಾವಿಸುವುದಕ್ಕೆ ನನಗೆ ಹೆಮ್ಮೆ ಇದೆ. ಆದರೆ ಅಂತಹ ಸಲಿಗೆ ನನ್ನ ಮತ್ತು ಅವರ ನಡುವೆ ಇಲ್ಲ. ಎಲ್ಲರೂ ಅವರನ್ನು ದೂರ ಇದ್ದು ಹತ್ತಿರದಿಂದ ನೋಡಿದ ಹಾಗೆ ನಾನೂ ಸಹ ಅವರನ್ನು ಹತ್ತಿರದಲ್ಲಿ ಇದ್ದು ದೂರದಿಂದ ನೋಡಿದ್ದೇನೆ. ಆದರೆ ಅವರ ಬಗ್ಗೆ ಅವರ ಕುಟುಂಬದವರಿಗೆ ಎಂತಹ ಪ್ರೀತಿ (ಅಥವಾ ಕಾಳಜಿ) ಇದೆಯೋ ಅಷ್ಟೇ ಕಾಳಜಿ ನನಗಿದೆ. ಅವರ ಆಪ್ತರು ಎನಿಸಿಕೊಂಡವರಿಗೆಲ್ಲ ಅವರ ಬಗ್ಗೆ ಎಷ್ಟು ಗೌರವ ಇದೆಯೋ ಅಷ್ಟೇ ಗೌರವ ನನಗೂ ಇದೆ. ಹೀಗೆ ನನ್ನ ಪ್ರೀತಿ ಮತ್ತು ಗೌರವಕ್ಕೆ ಒಳಗಾದವರು- ನನ್ನ ಬಂಧುಗಳನ್ನು ಬಿಟ್ಟರೆ ಕೆಲವೇ ಮಂದಿ. ಅಂಥವರಲ್ಲಿ ಪುನರೂರು ಮುಖ್ಯರು.

ಪುನರೂರು ಅವರದ್ದು-ನಾನು ನೋಡಿದ ಹಾಗೆ (ನನ್ನ ಹಾಗೆ ಎಲ್ಲರಿಗೂ ಕಾಣಬೇಕಿಲ್ಲ.) ಮುಗ್ಧ ಸ್ವಭಾವ, ತನ್ನ ಮುಂದೆ ಬಂದು ಕರಗುವವರಿಗೆ ಕರಗುವ ಅಂತಃಕರಣ, ಪರಶುರಾಮನ ಸಾತ್ತ್ವಿಕ ಕ್ರೋಧ, ಇಷ್ಟನ್ನು ಹೇಳಿದರೆ ಪುನರೂರು ಅವರು ಕೆಲವು ಸಂದರ್ಭಗಳಲ್ಲಿ ಒಳಗಾದ ಟೀಕೆಗೆ ಇಲ್ಲವೇ ಗುರಿಯಾದ ಆರೋಪಕ್ಕೆ ಉತ್ತರ ಸಿಗಬಹುದು. ನಾಡಗೀತೆಯ ಕುರಿತಾದ 'ವಸ್ತ್ರಾಪಹರಣ' ಪ್ರಸಂಗವಾಗಲೀ, ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿಯಲ್ಲಿ ತೂಗುಹಾಕಿದ 'ಶುಭವಾಗಲಿ' ಬೋರ್ಡಿನ ಪ್ರಕರಣವಾಗಲೀ, ಎಲ್ಲದರಲ್ಲೂ ಎದ್ದು ಕಾಣುವುದು ಮುಗ್ಧತೆ, ಆ ಮುಗ್ಧತೆಯೇ ಕಾರಣವಾಗಿರುವ ಅಂತಃಕರಣ ಮತ್ತು ಅದರ ಹಿಂದೆ 'ಕುದಿಯುವ' ಸಾತ್ತ್ವಿಕತೆ.

ಇಂಥ ಪ್ರಸಂಗಗಳಲ್ಲಿ- ನಾನು ಅವರನ್ನು ಒಂದೆರಡು ಬಾರಿ ನೇರವಾಗಿ ಸಂದರ್ಶಿಸಿ 'ಯಾಕೆ ಹೀಗಾಯಿತು ಕೃಷ್ಣಣ್ಣ?' ಎಂದು ಕೇಳಿದ್ದೂ ಉಂಟು. ಅದಕ್ಕೆ ಅವರ ಸಮಜಾಯಿಷಿ, ಪತ್ರಿಕೆಯಲ್ಲಿ ಏನು ಬಂದಿತ್ತೋ ಅದಕ್ಕಿಂತ ಭಿನ್ನವಾಗಿಯೇ ಇರುತ್ತಿತ್ತು. ನಾಡಗೀತೆಯ ಕುರಿತು ಅವರು ಹೇಳುವ ಹಾಗೆ ಅವರು ತಾಲೂಕು ಸಮ್ಮೇಳನದಲ್ಲಿ ಆಡಿದ್ದು ಇಷ್ಟು -"ಕುವೆಂಪು ಅವರು ದೊಡ್ಡ ಕವಿ ನಿಜ. ಅವರು ಬರೆದ ಕವಿತೆಯೇ ನಾಡಗೀತೆ ಆಗಬೇಕೆಂಬ ಹಠ ಯಾಕೆ? ಗೋವಿಂದ ಪೈಯವರ 'ತಾಯೆ ಬಾರ' ಇಲ್ಲವೇ? ನಿಸಾರ್ ಅಹಮದ್‌ರ 'ನಿತ್ಯೋತ್ಸವ ಇಲ್ಲವೇ?' ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಇಲ್ಲವೇ?" ಎಂದು. ಈ ವಾದದಲ್ಲಿ ತಪ್ಪೇನಿಲ್ಲ; ಆದರೆ ಕುವೆಂಪು ಜನ್ಮ ಶತಮಾನೋತ್ಸವ ವರುಷದಲ್ಲಿ, ಕುವೆಂಪು ಅವರಿಗೆ ಗೌರವ ನೀಡುವ ದೃಷ್ಟಿಯಲ್ಲಿ- ಕುವೆಂಪು ಅವರ 'ಜೈ ಭಾರತ ಜನನಿಯ ತನುಜಾತೆಯೇ' ನಾಡಗೀತೆಯಾಗಬೇಕು ಎನ್ನುವುದು ಕುವೆಂಪು ಅಭಿಮಾನಿಗಳ ವಾದ. ಇದೂ ತಪ್ಪಲ್ಲ. ಆದರೆ ಪುನರೂರು ಅವರು ಮಾಧ್ವ ಬ್ರಾಹ್ಮಣರಾಗಿರುವುದು 'ಜೈ ಭಾರತ ಜನನಿ'ಯಲ್ಲಿ ಇರುವ ಮಾಧ್ವರ ಹೆಸರನ್ನು ನಾಡಗೀತೆಯಿಂದ ತೆಗೆಯಬೇಕೆಂಬ ವಾದವು ನಾಡಗೀತೆಯನ್ನು ಸರಕಾರ ಘೋಷಿಸುವ ದಿನದಲ್ಲಿ ಹುಟ್ಟಿಕೊಂಡದ್ದರಿಂದ ಅದಕ್ಕೆ ಜಾತೀಯತೆಯ ಲೇಪ ಹಚ್ಚಿಕೊಂಡಿತು. ಈ ವಿವಾದವು ತಾರಕಕ್ಕೇರಿ ಅದು ಕುವೆಂಪು ಜೀವಂತ ಇದ್ದರೆ ಅವರೇ ನೊಂದುಕೊಳ್ಳುವಂತಹ ಪುನರೂರು ವಸ್ತ್ರಾಪಹರಣದ ತನಕ ಬೆಳೆಯಿತು. ಆದರೆ, ಪುನರೂರು ಅವರ ಧೀಮಂತ ವ್ಯಕ್ತಿತ್ವ ಇರುವುದು, ಅವರ ವಸ್ತ್ರಾಪಹರಣ ಆದಾಗ ಅವರು ಉದ್ವೇಗಗೊಳ್ಳದಿದ್ದುದು ಮತ್ತು ಕೆಟ್ಟದಾಗಿ ನಡೆದುಕೊಳ್ಳದಿದ್ದುದು. 'ಅವರು ಏನು ಮಾಡುತ್ತಿದ್ದಾರೆ ಎಂದು ಅವರಿಗೇ ಗೊತ್ತಿಲ್ಲ!' ಎಂದು ವಸ್ತ್ರಾಪಹರಣಕಾರರನ್ನು ಅವರು ಕ್ಷಮಿಸಿದ್ದು! ಪ್ರಾಯಃ ನಮ್ಮ ಬುದ್ಧಿಜೀವಿಗಳಾಗಲೀ, ಸಾಹಿತಿ ಶ್ರೇಷ್ಠರೆಂದು ಸ್ವಯಂ ಘೋಷಿಸಿಕೊಳ್ಳುವವರಾಗಲೀ ಪುನರೂರು ಅವರಷ್ಟು ನಿರ್ಲಿಪ್ತರಾಗಿ ನಡೆದುಕೊಳ್ಳಲು ಸಾಧ್ಯವಿರಲಿಲ್ಲ. ಸಾಹಿತ್ಯದಿಂದ ರೂಪುಗೊಳ್ಳುವ ಸಂಸ್ಕೃತಿ ಇದು. ಆದರೆ ಸಾಹಿತ್ಯದ ಹೆಸರಿನಲ್ಲಿ ನಡೆಸಿದ

ಈ ಬೇಜವಾಬ್ದಾರಿ ವರ್ತನೆಯವರಲ್ಲಿ ಸಾಹಿತ್ಯದಿಂದ ರೂಪುಗೊಳ್ಳಬೇಕಾಗಿದ್ದ ಸಂಸ್ಕೃತಿ ರೂಪುಗೊಂಡಿರಲಿಲ್ಲ!

ಪುನರೂರು ಅವರು ತಮ್ಮ ಮೂಲ ಉದ್ಯಮವಾಗಿರುವ ಹೊಟೇಲ್ ಉದ್ಯಮದಲ್ಲಿ ಪೂರ್ತಿತೊಡಗಿದ್ದಿದ್ದರೆ, ಅವರು ಕನ್ನಡ ಭಾಷಾಭಿಮಾನಿಗಳಿಗೆಲ್ಲ ಪರಿಚಿತರಾಗಲು ಸಾಧ್ಯವಿರಲಿಲ್ಲ. ಹಾಗಾಗದೇ ಇವರಿಂದಾಗಿ ಕನ್ನಡಕ್ಕೆ ಎಲ್ಲ ಅರ್ಥದಲ್ಲೂ ಲಾಭವಾಯಿತು. ಅವರೂ ಕನ್ನಡಾಭಿಮುಖಿಯಾದುದಕ್ಕೆ ಪ್ರತಿಫಲವಾಗಿ ಸಾಕಷ್ಟು ಹೆಸರು ಪಡೆಯಲಿಲ್ಲವೇ? ಎಂದು ಇದಕ್ಕೆ ಪ್ರತಿ ಆಡುವವರೂ ಉಂಟು! ಹೆಸರೇನೋ ಬಂತು ನಿಜ; ಆದರೆ ಅವರು ಕನ್ನಡಾಭಿಮುಖದಿಂದ ಪಡೆದುಕೊಂಡ ನೋವೂ ಅಷ್ಟೇ ದೊಡ್ಡದು.

ಒಂದು ಉದಾಹರಣೆಯಾಗಿ ಹೇಳುವುದಾದರೆ, ಅವರ ಪ್ರಾಯೋಜಕತ್ವದಲ್ಲಿ ಕಳೆದ 14 ವರುಷದಿಂದ ನಡೆಯುವ ಮುದ್ದಣ ಕಾವ್ಯ ಪ್ರಶಸ್ತಿ ಯೋಜನೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಅವರನ್ನು ಹಿರಿಯ ಕವಿ ಚೆನ್ನವೀರ ಕಣವಿಯವರಿಂದ ಅತಿ ವಿಶಿಷ್ಟವಾಗಿ (ರಾಜೋಚಿತವಾಗಿ ಎನ್ನುವಂತೆ) ಕಾಂತಾವರದಲ್ಲಿ ನಾವು ಸಮ್ಮಾನಿಸಿದೆವು. ಆ ಸಂದರ್ಭದಲ್ಲಿ ಸಮ್ಮಾನ ಸ್ವೀಕರಿಸಿ ಅವರು ಆಡಿದ ಮಾತುಗಳು ತೀರಾ ಕಠೋರವಾಗಿದ್ದವು. ಸಾಹಿತಿಗಳ ಅಂತರ್ದರ್ಶನವನ್ನು ಅವರು ಮಾಡಿದರು. ಅವರಲ್ಲಿರುವ ಸಣ್ಣತನ, ಕೊಂಕು, ಮತ್ಸರ, ಅಪ್ರಾಮಾಣಿಕತೆ, ಸ್ವಪ್ರತಿಷ್ಠೆಗಳನ್ನೆಲ್ಲ ಎಳೆಎಳೆಯಾಗಿ ಬಿಡಿಸಿ 'ಬರೆಯುವುದೊಂದು ಮಾಡುವುದೊಂದು' ಎನ್ನುವುದನ್ನು ಬಿಡಿಸಿಟ್ಟರು. ಅಲ್ಲಿದ್ದ ಸಾಹಿತಿಗಳೂ ಸಹ ಮುಜುಗರಪಡುವ ಹಾಗೆ ಆ ಭಾಷಣ ಇತ್ತು. ಆದರೆ ಅವರು ಆಡಿದ ಮಾತುಗಳಲ್ಲಿ ಒಂದಿಷ್ಟೂ ಸುಳ್ಳಿಲ್ಲ ಎನ್ನುವಂತೆ ಸಾಹಿತಿಗಳೆನಿಸಿಕೊಂಡ ನಾವು ನಡೆದುಕೊಂಡಿರುವುದು 'ಪ್ರಜಾವಾಣಿ'ಯಲ್ಲಿ ನನ್ನ ಈ ಕಠೋರ ಅನುಭವವನ್ನು ನಾನು ಎರಡು ಕಂತುಗಳಲ್ಲಿ ನಾಲ್ಕು ವರುಷದ ಹಿಂದೆ ಬಿಚ್ಚಿದ್ದೂ ಇದೆ. ಆಗ ನನ್ನನ್ನು ತರಾಟೆಗೆ ತೆಗೆದುಕೊಂಡ ನನ್ನ ಸಾಹಿತಿ ಸ್ನೇಹಿತರೊಬ್ಬರು, ಅವರ ಕೃತಿಗಳು ಮುದ್ದಣ್ಣ ಕಾವ್ಯ ಪ್ರಶಸ್ತಿ ಇಲ್ಲವೇ ವರ್ಧಮಾನ ಪ್ರಶಸ್ತಿ ಆಯ್ಕೆಯ ಪರಿಶೀಲನೆಗೆ ಬಂದಾಗ ದೂರವಾಣಿಯಲ್ಲಿ 'ಅದನ್ನೆಲ್ಲ ಮರೆತುಬಿಡಿ; ಮೊನ್ನೆ ನಿಮ್ಮ ಕವಿತೆ ಇಂಥ ಪತ್ರಿಕೆಯಲ್ಲಿ ಬಂದಿತ್ತಲ್ಲ; ಎಂತಹ ಅದ್ಭುತ ಕವಿತೆ ಮಾರಾಯರೇ ಅದು!' ಎಂದು ಪರೋಕ್ಷವಾಗಿ ನನಗೆ 'ಪ್ರಶಸ್ತಿ ಕೊಡಿ' ಎಂದುಕೊಂಡದ್ದು ನೆನಪಿಗೆ ಬಂತು!

'ಸಾಹಿತಿಗಳ ಅಸಾಹಿತ್ಯಕ ಚಟುವಟಿಕೆಗಳು (ನಡವಳಿಕೆಗಳು) ಎಂಬ ಬೃಹತ್ ಗ್ರಂಥವೊಂದನ್ನು ತರುವುದಾದರೆ, ಅದರಲ್ಲಿ ಸೇರ್ಪಡೆಗೊಳ್ಳುವ ಸಾಹಿತಿಗಳಲ್ಲಿ ನಮ್ಮ ಗಣ್ಯಾತಿಗಣ್ಯರೆಂದು ನಾವು ತಿಳಿದುಕೊಂಡವರಲ್ಲಿ ಕೆಲವರೂ ಮುಖ್ಯರಾಗುತ್ತಾರೆಂಬುದು ಎಲ್ಲರಿಗೂ ಗೊತ್ತು! ಪುನರೂರು ಅವರೇ ಅದಕ್ಕೆ ಸಾಕಷ್ಟು ಪೂರಕ ಮಾಹಿತಿಗಳನ್ನು ನೀಡಬಹುದು. ಒಂದೆರಡು ಉದಾಹರಣೆ ಹೇಳುತ್ತೇನೆ. ನನ್ನ ಮೂಲಕ ಪುನರೂರು ಅವರಿಂದ ಪುಸ್ತಕ ಪ್ರಕಾಶನಕ್ಕೆ ನೆರವು ಕೇಳಿದ ಗಣ್ಯರೊಬ್ಬರಿಗೆ ಪುನರೂರು ಐದು ಸಾವಿರ ಧನಸಹಾಯ ನೀಡಿದರು. ಕೆಲವು ತಿಂಗಳ ಮೇಲೆ ಪುನರೂರು ಅವರು ಇನ್ನೊಬ್ಬ ಸಾಹಿತಿಗೆ ಹತ್ತು ಸಾವಿರ ಧನ ಸಹಾಯ ನೀಡಿದ ವಿಷಯ ಈ ಮಹಾತ್ಮನಿಗೆ ತಿಳಿಯಿತು. ನಾನು ನೆರವು ಒದಗಿಸಿ ಕೊಟ್ಟ ಈ ಮಹಾಶಯ, 'ನಿಮ್ಮ ಪುನರೂರು ಅವರಿಗೆ ಯಾರ ಯೋಗ್ಯತೆ ಏನು ಎಂದು ಗೊತ್ತಿಲ್ಲ. ನನಗೆ ಐದು ಸಾವಿರ ನೀಡಿ, 'ಅವರಿಗೆ' ಹತ್ತು ಸಾವಿರ ನೀಡುವುದು ಅಂದರೆ ಏನು?' ಎಂದು ನನ್ನಲ್ಲಿ ಅಲವತ್ತುಕೊಂಡರು. ಅದೃಷ್ಟವಶಾತ್ ಪುನರೂರು ಅವರಿಂದ ಧನಸಹಾಯ ಪಡೆದ ಇಬ್ಬರೂ ಬ್ರಾಹ್ಮಣರಾಗಿರಲಿಲ್ಲ. ಹತ್ತು ಸಾವಿರ ಪಡೆದವರು ಬ್ರಾಹ್ಮಣರಾಗಿದ್ದರೆ ಪುನರೂರು ಜಾತಿವಾದಿ,

ಸ್ವಜನಪಕ್ಷಪಾತಿ ಇತ್ಯಾದಿ ಆರೋಪಗಳನ್ನು ಕೇಳಿಸಿಕೊಳ್ಳಬೇಕಾಗಿತ್ತು!

ನನಗೆ ಗೊತ್ತಿರುವ ಹಾಗೆ, ಪುನರೂರು ರಾಜ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೂಡಲೇ ಅವರನ್ನು ರಾಜಕಾರಣಿಗಳನ್ನು ಓಲೈಸುವ ಹಾಗೇ ಸಾಹಿತಿಗಳೂ ಓಲೈಸಹತ್ತಿದರು. 'ಪುನರೂರು ಬಿಡಿ, ಅವರಿಗೇನು ಗೊತ್ತು?' ಎಂದು ಅವರನ್ನು ಕೀಳಂದಾಜಿಸುತ್ತಿದ್ದ ಪ್ರಸಿದ್ಧ ಸಾಹಿತ್ಯ ಪರಿಚಾರಕರೊಬ್ಬರು (ಅವರು ತಾವು ಸಾಹಿತ್ಯ ಪರಿಚಾರಕ ಎಂದುಕೊಳ್ಳುವುದು ಮಾತ್ರ. ವಾಸ್ತವವಾಗಿ ಅವರು ಸಾಹಿತ್ಯ ಸಂಘಟನೆಯ ನೇತೃತ್ವ ವಹಿಸಿದಾಗಲೆಲ್ಲ ಸರ್ವಾಧಿಕಾರಿಯಾಗಿ ವರ್ತಿಸುವುದೇ ಹೆಚ್ಚು. ಅವರು ನಡೆ-ನುಡಿಗಳಲ್ಲಿ ಸಾಹಿತ್ಯದ ಓದಿನಿಂದ, ಸಾತತ್ಯದಿಂದ ಬರಬೇಕಾಗಿದ್ದ ವಿನಯ, ಪ್ರೀತಿ ಮತ್ತು ಸಮಾನತೆಯ ಭಾವ ಎಳ್ಳಷ್ಟೂ ಇಲ್ಲ. ಬದಲಾಗಿ ನಾನು ಎಲ್ಲವನ್ನೂ ತಿಳಿದವ ಎಂಬ ಅಹಂಕಾರವೇ ಹೆಚ್ಚು) ಪುನರೂರನ್ನು ರಾಜ್ಯಾಧ್ಯಕ್ಷರಾದೊಡನೆ ತಮ್ಮೂರಿಗೆ ಕರೆಸಿ, ಸನ್ಮಾನಿಸಿ ಹಾಡಿ ಹೊಗಳಿದರು. ಆ ಮೂಲಕ ಪುನರೂರು ಅವರಿಗೆ 'ಹತ್ತಿರ'ವಾಗಿ ದೂರದ ಕೋಲಾರದ ತನಕವೂ ಅವರ ಕಾರಿನಲ್ಲೇ ಹೋಗಿ ಭಾಷಣ ಬಿಗಿದು (ಸೈ ಎನಿಸಿಕೊಂಡು) ಬಂದರು! ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಾಗ, ಅವರ ಸಾಧನೆಗಳ ಬಗೆಗೆ ಒಂದು ಮಾತೂ ಆಡಲಿಲ್ಲ. ಅವರಿಂದ ಯಾಚಿಸಿ ಪಡೆದ ಉಪಕಾರವನ್ನು ಸ್ಮರಿಸಲಿಲ್ಲ.

ಇದರರ್ಥ ನಾನು ಪುನರೂರು ಅವರನ್ನು ಸಮರ್ಥಿಸುತ್ತೇನೆ ಎಂದಲ್ಲ. ಖಂಡಿತವಾಗಿಯೂ ಅವರಲ್ಲಿ ನಮ್ಮ ಹಾಗೇ ಸಣ್ಣತನ ಇದ್ದರೂ ಅವರು ನಮ್ಮಷ್ಟು ಸಣ್ಣತನ ತೋರಿಲ್ಲ. ಸಾಕಷ್ಟು ಉದಾರವಾಗಿಯೇ ಅವರು ಎಲ್ಲರೊಂದಿಗೆ ನಡೆದುಕೊಂಡಿದ್ದಾರೆ. ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದವರಿಗೆ ಸರಕಾರಿ ಕಾರು, ಪ್ರಯಾಣ ಭತ್ಯೆ ಇತ್ಯಾದಿಗಳೆಲ್ಲ ಇದ್ದೂ ಅವರು ಅದನ್ನು ನಯವಾಗಿ ತಿರಸ್ಕರಿಸಿದ್ದಾರೆ. (ಅದನ್ನು ಏನು ಮಹಾ ಎಂದು ಧಿಕ್ಕರಿಸುವವರೂ ನಮ್ಮ ನಡುವೆ ಇದ್ದಾರೆ. ಧನ ಸಂಪತ್ತು ಇದ್ದವರಲ್ಲೂ ಧನದ ವ್ಯಾಮೋಹ ಎಷ್ಟಿದೆ ಎನ್ನುವುದು ನಮಗೆ ಗೊತ್ತಿರುವಾಗ, ಇಂಥ ನಿರ್ಲಿಪ್ತ ಮನೋಸ್ಥಿತಿಯನ್ನು ಬೆಳೆಸಿ ಉಳಿಸಿಕೊಳ್ಳುವುದು ಸಣ್ಣ ಮಾತಲ್ಲ.) ಅಷ್ಟೇ ಅಲ್ಲ, ಅವರ ಆಡಳಿತಾವಧಿಯಲ್ಲಿ- ರಾಜ್ಯ ಸಾಹಿತ್ಯ ಪರಿಷತ್ತಿನ ಆರ್ಥಿಕ ವ್ಯವಹಾರ ತುಂಬ ಶಿಸ್ತುಬದ್ಧವಾಗಿದ್ದವು; ಮಾತ್ರವಲ್ಲ ಅವು ಲೆಕ್ಕ ಪರಿಶೋಧಕರಿಂದಲೂ ತುಂಬ ಮೆಚ್ಚುಗೆ ಮತ್ತು ಗೌರವಕ್ಕೆ ಪಾತ್ರವಾಗಿದ್ದವು. ಇಂದಿನ ದಿನಗಳಲ್ಲಿ ಹೀಗೆ ಕೈ ಶುದ್ಧ ಇರುವುದೂ ಕೂಡಾ ಒಂದು ಸುದ್ದಿಯ ವಸ್ತು ಮತ್ತು ವ್ಯಕ್ತಿತ್ವವನ್ನು ನಿರ್ಣಯಿಸುವ ಮೌಲ್ಯಗಳಲ್ಲಿ ಮುಖ್ಯವಾದುದೂ ಕೂಡಾ.

ಪುನರೂರು ಅವರದ್ದು ವರ್ಣರಂಜಿತ ವ್ಯಕ್ತಿತ್ವ. ಅದಕ್ಕೆ ಕಾರಣ ಅವರಲ್ಲಿರುವ ಮುಗ್ಧತೆಯೇ. ನಮ್ಮ ಶ್ರೀ ಸಾಮಾನ್ಯರಿಗೆಲ್ಲ- ವರ್ಣರಂಜಿತ ಕಲ್ಪನೆಗಳಿರುತ್ತವೆ. ಆದರೆ ಧನಕನಕಾದಿಗಳು ಇಲ್ಲದಿರುವುದರಿಂದ ಅಂಥ ವ್ಯಕ್ತಿತ್ವ ನಿರ್ಮಾಣ ಅವರಿಗೆ ಸಾಧ್ಯವಾಗಿರುವುದಿಲ್ಲ. ಈ ಅರ್ಥದಲ್ಲಿ ಅವರು ಶ್ರೀ ಸಾಮಾನ್ಯನೇ. ಈಗಲೂ ಅವರು ಸಾಹಿತ್ಯ ಸಮ್ಮೇಳನದಂತಹ ಸಮಾರಂಭದಲ್ಲಿ ಸ್ವತಃ ಅತಿಥಿಗಳ ಉಪಚಾರಕ್ಕೆ (ಊಟ ಬಡಿಸಲೂ ಸಹ) ಪಂಚೆ ಮೇಲೆತ್ತಿ ಕಟ್ಟಿ ಹೊರಡುವುದುಂಟು. ಎಷ್ಟೇ ಕಹಿ ಅನುಭವವಾದರೂ, ಅವರನ್ನು ಸಾಕಷ್ಟು ಟೀಕಿಸಿದವರನ್ನೂ ಸಹ- ಮುಖಾಮುಖಿಯಾದಾಗ ಅವರೇ ಮುಗುಳುನಕ್ಕು ಮಾತನಾಡಿಸದಿರುವುದಿಲ್ಲ. 'ಬಿಡಿ! ಅವರವರ ಮರ್ಜಿ ನಮಗ್ಯಾಕೆ?' ಎನ್ನುವ ಮನೋಭಾವ ಅವರದ್ದು. ಯಾರಲ್ಲೂ ದ್ವೇಷ ಸಾಧಿಸದ, (ಆದರೆ ದ್ವೇಷ ಸಾಧಿಸಲು ಬಂದರೆ ಎಂದೂ ಬಿಟ್ಟುಕೊಡದ) ಅವರ ಮನೋಧರ್ಮ ಮತ್ತು ಒಂದು ಶಿಸ್ತಿಗೆ ತಾನೇ ಒಳಪಡಿಸಿಕೊಂಡಿರುವ ಜೀವನಕ್ರಮ ಅವರನ್ನು ನಿರೋಗಿಯಾಗಿಯೂ (ಖಿನ್ನತೆ, ಆತಂಕಗಳಿಂದ ಅವರು ಸದಾ ದೂರ) ಸದಾ

ಹಸನ್ಮುಖಿವವರನ್ನಾಗಿಯೂ, ಅವರ ಬಿಳಿಯ ಉಡುಗೆ ತೊಡುಗೆಗಳಲ್ಲಿ ಶುಭ್ರವಾಗಿಯೂ ಕಾಪಾಡಿದೆ. ಹಾಗಾಗಿ ಪುನರೂರು ಅವರನ್ನು ಇನ್ನೊಬ್ಬರಿಗೆ ಹೋಲಿಸುವುದು ಸಾಧ್ಯವಿಲ್ಲ.

ಪುನರೂರು ಅವರಿಗೆ ರಾಜಕೀಯ ಮಹತ್ವಾಕಾಂಕ್ಷೆ ಇದೆ ಎಂಬ ಮಾತು ಈಚೆಗೆ ಪತ್ರಿಕೆಯೊಂದರಲ್ಲಿ ಬಂತು. ಮೂಲ್ಕಿಯಲ್ಲಿ ನ್ಯಾಯಾಲಯ ಸ್ಥಾಪನೆಯಾಗಬೇಕು ಎಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ ಬಂದ ಈ ಮಾತು "ಪುನರೂರು ಮುಂದಿನ ಬಾರಿ ವಿಧಾನಸಭೆಗೆ ಸ್ಪರ್ಧಿಸಲಿಕ್ಕಾಗಿ ಈ ಹೇಳಿಕೆ ನೀಡಿದ್ದಾರೆ!" ಎಂದು. ದಶಕಗಳ ಹಿಂದೆಯೇ ಪುನರೂರು ರಾಜಕೀಯಕ್ಕೆ ಇಳಿಯುತ್ತಾರಂತೆ ಎಂಬ ವದಂತಿಯನ್ನು ನಾನು ಕೇಳಿದ್ದೆ! 1992ರಲ್ಲಿ ಪುನರೂರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಲು ರಾಜ್ಯ ಸರಕಾರಕ್ಕೆ ಡಾ॥ ಶಿವರಾಮ ಕಾರಂತರು ಶಿಫಾರಸ್ಸು ಮಾಡಿದ್ದರೂ, ಆಗಿದ್ದ ಕಾಂಗ್ರೆಸ್ ಸರಕಾರ ಪುನರೂರು ವಿಶ್ವ ಹಿಂದೂ ಪರಿಷತ್ತಿನ ಜೊತೆ ಗುರುತಿಸಿಕೊಂಡವರು ಎಂಬ ಕಾರಣ ನೀಡಿ, ಪ್ರಶಸ್ತಿ ನೀಡದೆ ಉಳಿಯಿತು!

ನಾನು-ಪುನರೂರು ಅವರಲ್ಲಿ ಒಮ್ಮೆಯಾದರೂ ರಾಜಕೀಯದ ಒಲವಿರುವುದು ಹೌದೇ? ಎಂದು ಕೇಳಲಿಲ್ಲ! ಒಲವಿದ್ದರೆ ತಪ್ಪೂ ಅಲ್ಲ. ನಮ್ಮ ಇಂದಿನ ಬಹುತೇಕ ರಾಜಕಾರಣಿಗಳಲ್ಲಿ ಇರುವ ಅರ್ಹತೆಗಿಂತ ಪುನರೂರು ಅವರಲ್ಲಿ ಇರುವ ಅರ್ಹತೆ ದೊಡ್ಡದೇ. ಆ ಕಾರಣದಿಂದ ಅವರು ರಾಜಕೀಯ ಸೇರುವುದು ಸ್ವಾಗತಾರ್ಹವೇ. ಆದರೆ ವೈಯಕ್ತಿಕವಾಗಿ ಹೇಳುವುದಾದರೆ ಅವರ ಈ ಅರ್ಹತೆಗಳೆಲ್ಲ (ನಿಷ್ಠುರ ಮಾತು, ಉದಾರತೆ ಮತ್ತು ಮುಗ್ಧತೆ ಇತ್ಯಾದಿ) ರಾಜಕೀಯಕ್ಕೆ ಹೇಳಿಸಿದ್ದಲ್ಲ.

ನಮ್ಮ ಸಾಹಿತಿ ಮಾನ್ಯರಿಗೆ ರಾಜಕೀಯದ ಸೆಳೆತ ಕಡಿಮೆ ಏನಿಲ್ಲ. ಶ್ರೀ ಕೃಷ್ಣ ಆಲನಹಳ್ಳಿಯಂಥವರು ಕೂಡಾ ಕಾಂಗ್ರೆಸ್ ಟಿಕೆಟ್ಟಿಗಾಗಿ ಪರಿತಪಿಸಿದ್ದನ್ನು ನಾನು ಕೇಳಿಬಲ್ಲೆ. ಅನಂತಮೂರ್ತಿಯಂಥವರೂ ಕಾಂಗ್ರೆಸ್ ಅಥವಾ ಜೆ.ಡಿ.ಎಸ್. ನಿಂದ ಆಹ್ವಾನ ಬಂದರೆ ಸ್ಪರ್ಧಿಸಲು ಸಿದ್ಧ ಎಂದು ಕಳೆದ ಲೋಕಸಭಾ ಚುನಾವಣೆಯಲ್ಲಿ ಹೇಳಿದ್ದು ನಮಗೆಲ್ಲ ಗೊತ್ತು! ವಿಧಾನ ಪರಿಷತ್ತಿನ ಸದಸ್ಯತ್ವಕ್ಕಾಗಿ ನಮ್ಮ ಸಾಹಿತಿಗಳು ರಾಜಕಾರಣಿಗಳನ್ನು ಒಲೈಸುವುದನ್ನು ನಾವು ಕೇಳಿದ್ದೇವೆ ಮತ್ತು ನೋಡಿದ್ದೇವೆ. ರಾಜ್ಯದ ಬಹುತೇಕ ಅಕಾಡೆಮಿಗಳ ಸದಸ್ಯತನದಿಂದ ಹಿಡಿದು ಅಧ್ಯಕ್ಷತೆಯ ತನಕದ ನೇಮಕಗಳೆಲ್ಲವೂ ಕೆಲವು ಸಲ ಯೋಗ್ಯತೆಗಿಂತ ಹೆಚ್ಚು ರಾಜಕೀಯ ನೇಮಕವೆಂಬುದಕ್ಕೆ ರುಜುವಾತುಗಳು ಸಿಕ್ಕಿವೆ. ಆದರೆ, ಪುನರೂರು ಮತ್ತು ಅವರಂಥವರು, ಮಾತ್ರ ರಾಜಕೀಯ ಮಹತ್ವಾಕಾಂಕ್ಷೆ ಬೆಳೆಸಿಕೊಳ್ಳುವುದು ಸರಿಯಲ್ಲ ಎಂಬ ವಾದ ನಮ್ಮದು!


ಪುನರೂರು ಕುದುರೆ ಸಾಕಿದ್ದಾರೆ. ಆದರೆ ಈ ತನಕ ಕುದುರೆ ಸವಾರಿ ಮಾಡಿಲ್ಲ (ಮಾಡಿದರೂ ತಪ್ಪಲ್ಲ). ಆದರೆ ಕುದುರೆ ಏರಿದರೂ, ಎಲ್ಲ ಕುದುರೆ ಸವಾರರ ಹಾಗೆ ಇರುವುದು ಅವರಿಗೆ ಸಾಧ್ಯವಿಲ್ಲ!

☐

ಭಾಗ: ಎರಡು
ಹೀಗಿದ್ದಾರೆ ಪುನರೂರು

ಅಪರೂಪದ ಕ್ರಿಯಾಶೀಲ ವ್ಯಕ್ತಿತ್ವ

□ ಮಹಾಬಲಮೂರ್ತಿ ಕೊಡ್ಲೆಕೆರೆ



ಧರ್ಮದರ್ಶಿ ಹರಿಕೃಷ್ಣ ಪುನರೂರು ಎಂದೂ ದಂತ ಗೋಪುರದಲ್ಲಿ ಇರಲು ಬಯಸರು. ಹೀಗಾಗಿ ಕ್ರಿಯಾಶೀಲರು ಇವರು. ಇವರ ಹೆಜ್ಜೆಗಳು ಸದಾ ನೆಲದ ಮೇಲೆ. ಇದರಿಂದಾಗಿ ನೆಲದ ಸತ್ತ್ವವನ್ನು, ನೆಲದ ಫಲವಂತಿಕೆಯನ್ನು ಸೂಕ್ತವಾಗಿ ಬಳಸಿಕೊಂಡು, ಸಾಮಾಜಿಕ ಪರಿಸರಕ್ಕೆ ಹೊಸ ಮುಗ್ಗಲನ್ನು ಒದಗಿಸಬಲ್ಲಂಥವರು. ಪಲಾಯನವಾದಿಗಳಂತೂ ಅಲ್ಲವೇ ಅಲ್ಲ. ಹೆದರಿಕೆ ಎಂಬುದು ಇವರ ನಿಘಂಟಿನಲ್ಲಿಲ್ಲ. ಸೋಲೊದಗಿದಾಗ ಕುಗ್ಗಲಾರರು. ಗೆಲುವು ಬಂದಾಗ ಹಿಗ್ಗಲಾರರು. ಇವರ ಅಂತರ್ಮನದ ಧವಕ್ಕೆ ಪ್ರಾಮಾಣಿಕತೆಯ ಸತ್ವ ಇದ್ದಿರುವುದರಿಂದ ಇಡೀ ಇವರ ವ್ಯಕ್ತಿತ್ವಕ್ಕೆ ಪಾರದರ್ಶಕತೆ ಒದಗಿದೆ.

ಪುನರೂರರ ಭಜನೆಯ ಸಾಲುಗಳಾಗಿ ಈ ಮೇಲಿನ ಮಾತುಗಳನ್ನು ನಾನು ಬರೆದಿಲ್ಲ. ನನಗೆ ಕಂಡಂತೆ, ನನ್ನ ವಿಶ್ಲೇಷಣೆ ಆತ್ಮದ ಪ್ರಾಮಾಣ್ಯದಿಂದ ಬರೆದದ್ದು. ನನ್ನ ವಿಶೇಷಣಗಳಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೆ ಅವರಿಂದ ನನಗೆ ಉಪಕಾರವಾದದ್ದಿವೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ನಾನು ಅವರನ್ನು ಮೇಲೆ ಬಿದ್ದು ಅಷ್ಟಾಗಿ ಕಂಡಿದ್ದಿಲ್ಲ. ಹಾಗ ಕಂಡಿದ್ದರೆ ಅವರಿಗೆ ನನ್ನ ಬಗೆಗೆ ಯಾವ ಅಭಿಪ್ರಾಯಗಳು ಬರಬಹುದಿತ್ತೋ ತಿಳಿಯದು. ಆದರೆ ಎದುರಾದಾಗ ಅವರು ತೋರುತ್ತಿದ್ದ ಆರ್ದ್ರತೆ, ಅಭಿಮಾನ ಅಪಾರ.

1010/11, 12ನೇ ಮುಖ್ಯರಸ್ತೆ, ಇಂದಿರಾರಸ್ತೆ, ಹನುಮಂತನಗರ, ಬೆಂಗಳೂರು-560 019

ಈ ಹಿಂದೆ ನಾನು ಕೆಲಸವಲ್ಲಿದ್ದ ಸಂಸ್ಥೆಯೊಂದರ ನಿರ್ದೇಶಕರಾಗಿ ಪುನರೂರು ಕೆಲ ಸಮಯ ಇದ್ದರು. ನನ್ನ ಬಿಕ್ಕಟ್ಟಿನ ಸಂದರ್ಭ ಒಂದರಲ್ಲಿ ಅವರು ನನಗೆ ಸಹಾಯ ಮಾಡಿದ್ದರು. ಅದೂ ನಾನು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಲಿಲ್ಲ. ಎಂಥವನು ಇವನು, ಕೈ ಜೋಡಿಸಿಕೊಂಡು ಎದುರಿಗೆ ಬರುತ್ತಿಲ್ಲವಲ್ಲ ಎಂದು ಅವರು ಯೋಚಿಸಲಾರರು ಎಂಬುದು ನನಗೆ ಖಾತ್ರಿ ಇತ್ತು. ಹೀಗಾಗಿಯೇ ನಂಬಿಗೆಯಿಂದ ಪತ್ರ ಬರೆದಿದ್ದೆ. ಪತ್ರಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ನನ್ನ ಬಿಕ್ಕಟ್ಟಿನ ನಿವಾರಣೆಯಾಗಿತ್ತು.

ಅವರು ಮಾಡಿದ ಸಕಾಲದ ಸಹಾಯವನ್ನು ನಾನು ಎಂದೂ ಮರೆಯಲಾರೆ. ಈ ಸಹಾಯಕ್ಕಾಗಿ ನಾನು ಕೃತಜ್ಞತೆಯಿಂದ ಪತ್ರವೊಂದನ್ನು ಬರೆದಿರಲೂ ಇಲ್ಲ. ಹಾಗೆ ನಿರೀಕ್ಷಿಸುವುದು ಅವರ ಜಾಯಮಾನವೂ ಅಲ್ಲ. ಅನಂತರ ಮುಖತಃ ಸಿಕ್ಕಿದಾಗ ಅವರು ಆತ್ಮೀಯವಾಗಿಯೇ ನನ್ನನ್ನು ಕಂಡರು. ನಾನು ಕೃತಜ್ಞತೆಗಳು ನಿಮಗೆ ಎಂದು ನಮಸ್ಕರಿಸಿ ಹೇಳಿದೆ. ''ಹೋ ಜಿಡಿ, ನೀವೊಂದು, ಅದೇನು ಮಹಾ!'' ಅಂದರು. ಅವು ನಟನೆಯ ಮಾತುಗಳಾಗಿರಲಿಲ್ಲ. ಅಂತರಾಳದಿಂದ ಚಿಮ್ಮಿದ ಮಾತುಗಳು ಅವಾಗಿದ್ದವು.

ಪ್ರಥಮ ಬಾರಿಗೆ ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ, ನನ್ನ ಬಗೆಗೆ ಆದರವಿದ್ದಿದ್ದ ಲಂಕೇಶರ ಬಳಿ ಪುನರೂರು ನನಗೆ ಮಾಡಿದ ಸಹಾಯದ ಬಗೆಗೆ ವಿವರಿಸಿದ್ದೆ. ಲಂಕೇಶ್ ಎಲ್ಲವನ್ನೂ ಕೇಳಿಸಿಕೊಂಡರಾದರೂ ಏನೂ ಪ್ರತಿಕ್ರಿಯೆ ತೋರಿಸಿರಲಿಲ್ಲ. ಆದರೆ ಪುನರೂರು ಆ ಬಾರಿ ಸೋತಾಗ, ''ಏನೋ, ನಿಮ್ಮಂಥವರನ್ನು ನಂಬಿ ಅವರು ಸೋತಿರಬೇಕು'' ಎಂದು ಹಾಸ್ಯ ಮಾಡಿದ್ದರು. ''ಒಮ್ಮೆ ಅವರ ಪರಿಚಯ ಮಾಡಿಸು'' ಎಂದೂ ಹೇಳಿದ್ದರು. ನಾನು ''ಖಂಡಿತ'' ಎಂದು ಹೇಳುತ್ತ ಲಂಕೇಶರ ಬಳಿ ಇನ್ನೂ ಒಂದು ಮಾತನ್ನು ಹೇಳಿದ್ದೆ.

''ನೋಡಿ ಸರ್, ಪುನರೂರು ನಡೆಯತೊಡಗಿದ ದಾರಿಯಿಂದ ಹೆಜ್ಜೆ ಕೀಳಲಾರರು. ಮುಂದಿನ ಬಾರಿ ಮತ್ತೆ ಅವರು ಚುನಾವಣೆಗೆ ನಿಲ್ಲುತ್ತಾರೆ, ಅಷ್ಟೇ ಅಲ್ಲ ಗೆಲ್ಲುತ್ತಾರೆ ಕೂಡ'' ಎಂದು ಹೇಳಿದ್ದೆ. ಲಂಕೇಶ್ ತನ್ನ ಎಂದಿನ ಕಿರುನಗು ನಕ್ಕಿದ್ದರು. ತುಸು ಸಮಯ ಬಿಟ್ಟು ''ಆಗ ಅವರನ್ನು ಅಭಿನಂದಿಸೋಣ'' ಎಂದೂ ಹೇಳಿದ್ದರು.

ನನ್ನ ಮಾತುಗಳು ನಿಜ ಆಗಿದ್ದವು. ಪುನರೂರು ಮುಂದಿನ ಚುನಾವಣೆಯನ್ನು ದೊಡ್ಡ ಅಂತರದಿಂದ ಗೆದ್ದಿದ್ದರು. ಉತ್ತಮ ಸಂಘಟಕ ಎಂದು ಜನ ಅವರನ್ನು ಸ್ವೀಕರಿಸಿದ್ದರು. ಆದರೆ ದುರ್ದೈವ ಎಂಬಂತೆ, ಆಗ ಲಂಕೇಶ್ ವಿಧಿವಶರಾಗಿದ್ದರು. ಪುನರೂರರನ್ನು ಲಂಕೇಶರಿಗೆ ಪರಿಚಯಿಸುವ ಅವಕಾಶ ಆಗಲಿಲ್ಲ ನನ್ನಿಂದ.

ಪುನರೂರು ಅವರ ಬಗ್ಗೆ ಬರೆಯುವಾಗ ಲಂಕೇಶರನ್ನು ನೆನಪಿಸಿಕೊಂಡಿದ್ದಕ್ಕೆ ಕಾರಣಗಳಿವೆ. ಲಂಕೇಶ್ ಹಾಗೂ ಪುನರೂರುಗಳದ್ದು ಬೇರೆ ಬೇರೆಯದೇ ಆದ ವ್ಯಕ್ತಿತ್ವ. ಆದರೆ ಇಬ್ಬರಲ್ಲಿನ ಒಂದು ಸಾಮ್ಯ ಎಂದರೆ ಅದು ನೇರವಾದ ಮಾತು. ವಿದ್ಯುತ್ ಪ್ರವಾಹ ಹರಿದಂತೆ ತೀಕ್ಷ್ಣವಾಗಿ ಲಂಕೇಶ್ ಮಾತುಗಳು ಇದ್ದಿರುತ್ತಿತ್ತಾದರೆ, ಪುನರೂರು ಸೌಮ್ಯವಾಗಿಯೇ ನೇರವಾಗಿ ಅನಿಸಿದ್ದನ್ನು ಹೇಳಬಲ್ಲಂಥವರು. ಹಿಂದೊಂದು, ಮುಂದೊಂದು ಇಲ್ಲವೇ ಇಲ್ಲ. ಮಾಡುತ್ತಿರುವ ಕೆಲಸದ ಬಗಗೆ ಖಚಿತತೆ ಇದ್ದೇ ಇರುತ್ತಿತ್ತು.

ನಮ್ಮಲ್ಲಿನ ಅನೇಕ ಬುದ್ಧಿವಂತರು, ಭವಿಷ್ಯವನ್ನು ಅಳೆದು, ಹೊಯ್ದು, ಸುರಕ್ಷಿತವಾಗಿರಲು ಎಲ್ಲ ಸೂಕ್ಷ್ಮಗಳನ್ನು ನಿಯೋಜಿಸಿಕೊಂಡೇ ವರ್ತಮಾನದ ಮಾತುಗಳನ್ನು ಆಡುತ್ತಿರುತ್ತಾರೆ. ದೂರದರ್ಶಿತ್ವ ಬೇಕೇ ಬೇಕು. ಇದಕ್ಕೆ ಯಾರ ವಿರೋಧವೂ ಇಲ್ಲ. ಆದರೆ ದೂರದರ್ಶಿತ್ವ ಆತ್ಮದ ಪ್ರಭೆಯನ್ನು ಮಂಕುಗೊಳಿಸುವ ಸ್ವಾರ್ಥದ ನೆಲೆಗಟ್ಟಿನಲ್ಲಿ ನಿಂತಿರಬಾರದು. ಪುನರೂರು ಅಂಥವರು ಹೀಗಾಗಿ ಎಂದೂ ಆತ್ಮದ ಬೆಳಕನ್ನು ಮಂಕುಗೊಳಿಸುವ ನೆಲೆಯವರಲ್ಲ. ಹೀಗಾಗಿ ಸೋತರೂ ಇವರ ಅಂತರ್ಯ ಕುಗ್ಗುವುದಿಲ್ಲ. ಗೆಲ್ಲುವ ಛಲವನ್ನು ಪಡೆದುಕೊಳ್ಳುತ್ತದೆ.

ಯಾರೋ ಒಬ್ಬರು ಒಂದು ಸಮಾರಂಭದಲ್ಲಿ ಮಾಮೂಲಿನಂತೆ ಅತಿಥಿಗಳ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಜೋರಾಗಿ ಶುರು ಹಚ್ಚಿ ಪುನರೂರರ ಬಗ್ಗೆ "ಇವರು ಉತ್ತಮ ಬರಹಗಾರರು. ದೊಡ್ಡ ವಾಗ್ಮಿಗಳು. ಇವರ ಕಥೆ, ಕವನಗಳು ನಾಡಿನ ವಿಮರ್ಶಕರ ಅಪಾರ ಮೆಚ್ಚುಗೆ ಗಳಿಸಿವೆ" ಎಂದು ಹರಿದ ಧಾಟಿಯಲ್ಲಿ ತಡೆಯಲಸಾಧ್ಯವಾದಾಗ, ಪುನರೂರರು "ಕ್ಷಮಿಸಿ" ಎಂದೆನ್ನುತ್ತ ನಡುವೆಯೇ ಎದ್ದು "ಯಾರೋ ಬೇರೆಯವರ ಬಗೆಗಿನ ಪರಿಚಯ ನನ್ನ ಬಗೆಗೆ ಓದುತ್ತಿದ್ದೀರಿ?" ಎಂದು ನಗುತ್ತ ಹೇಳಿದ್ದರು.

ಪುನರೂರರಿಗೆ ತಾನು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಿ ಬಂದಾಗ, ಸಾಹಿತ್ಯ ವಲಯದಲ್ಲಿ ಹೆಚ್ಚಿನ ಜನರಿಗೆ ತಾನು ಸ್ವತಃ ಸಾಹಿತಿಯಾಗಿಲ್ಲ ಎಂಬ ಕಾರಣಕ್ಕಾಗಿ ಅಸಮಾಧಾನವಿದೆ ಎಂಬುದು ಗೊತ್ತಿತ್ತು. ಆದರೆ ಕ್ರಿಯಾಶೀಲರಾಗಿದ್ದ ಅವರಿಗೆ, ಸಾಹಿತಿಯಲ್ಲದವನೂ, ಸಾಹಿತ್ಯದ ಸಂಸ್ಥೆಯೊಂದನ್ನು ಹೇಗೆ ಸಂವರ್ಧಿಸಬಲ್ಲ ಎಂಬುದು ತಿಳಿದಿತ್ತು. ಆ ಕೆಲಸವನ್ನು ತ್ರಿಕರಣಪೂರ್ವಕವಾಗಿ ಅವರು ಮಾಡಿ ತೋರಿಸಿದರು. ಪರಿಷತ್ತಿನ ಬೊಕ್ಕಸಕ್ಕೆ ಬಲ ಒದಗತೊಡಗಿತ್ತು. ಹಾಗೆಂದು ಸಾಹಿತ್ಯಿಕ ಚಟುವಟಿಕೆಗಳೂ ಹಿಂದೇನು ಬೀಳಲಿಲ್ಲ. ಹೊಸ ಉತ್ತಮ ಪುಸ್ತಕಗಳು ಸುಲಭ ಬೆಲೆಯಲ್ಲಿ ಪರಿಷತ್ತಿನಿಂದ ಹೊರಬರುವಂತೆ ನೋಡಿದರು. ಪರಿಷ್ಕೃತ ಕನ್ನಡ ರತ್ನಕೋಶವನ್ನು ಸುಲಭ ಬೆಲೆಯಲ್ಲಿ ಪರಿಷತ್ತು ಮುದ್ರಿಸಿತು. ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ವಿಶಿಷ್ಟವಾದ ಕನ್ನಡ ಪರ ಕಾರ್ಯಕ್ರಮಗಳು ನಡೆದವು.

ಪುನರೂರು ಅವರು ಅಧ್ಯಕ್ಷರಾಗಿ ಅರ್ಹವಾಗಿ ಸ್ವೀಕರಿಸಬಹುದಿದ್ದ ಭತ್ತೆಗಳನ್ನೂ ಪಡೆಯಲಿಲ್ಲ. ಮುಖ್ಯವಾಗಿ ಕನ್ನಡದ ಕೆಲಸ ನಡೆಯಬೇಕು ಎಂಬುದು ಅವರ ಇಂಗಿತ. ತಾನು ಸಾಹಿತ್ಯದ ಪರಿಚಾರಕ ಎಂದು ಗುರುತಿಸಿಕೊಳ್ಳುವಲ್ಲಿ ಅವರಿಗೆ ಹೆಮ್ಮೆ ಇತ್ತು. ನಿದ್ದೆಗೆಟ್ಟು ಅವರು ಸಾಹಿತ್ಯದ ಕಾರ್ಯಕ್ರಮಗಳಿಗೆ ಪಾರಪಿಡೀ ಕರ್ನಾಟಕದಾದ್ಯಂತ ಸುತ್ತಾಡಿದ ನಿದರ್ಶನಗಳು ಅನೇಕ.

ಅವರ ಮುಖ್ಯ ಧೋರಣೆ 'ಶುಭವಾಗಲಿ' ಎಂಬುದು. ಅವರ ಮನೆಯ ಹೆಸರೂ ಅದೇ. 'ಶುಭವಾಗಲಿ' ಎಂಬುದು ಮನೆಯ ಹೆಸರಾದುದರಿಂದ ಅವರ ಆಶ್ರಯವಾದದ್ದಲ್ಲ. ಆ ಹೆಸರಿನಲ್ಲಿ ಅವರಿಗೆ ಅದೇನೋ ನಂಬಿಗೆ, ಒಲವು. ಪ್ರತಿಯೊಬ್ಬನಿಗೂ ಶುಭವಾಗಬೇಕು ಎಂಬುದಷ್ಟೇ ಅವರ ಉದ್ದೇಶವಾಗಿತ್ತು. ಹೀಗಾಗಿ ದೇವರನ್ನು, ಸರ್ವಶಕ್ತನನ್ನು ಆರಾಧಿಸುವಂತೆ ಆ ಶಬ್ದವನ್ನು ಅವರು ಆರಾಧಿಸಿದರು. ಸರ್ವರಿಗೂ ಶುಭವಾಗಲಿ ಎಂದು; ಒಂದರ್ಥದಲ್ಲಿ ಮುಗ್ಧತೆ ಎಂದರೂ ತಪ್ಪಲ್ಲ. ಹಾಗೆ ಆ ಶಬ್ದವನ್ನು ಆರಾಧಿಸಿ, ಅದರ ಉದ್ದೇಶ ಈಡೇರುವಲ್ಲಿ ಅಕ್ಷರಶಃ ಹೆಣಗಾಡಿದರು. ಇಂದಿಗೂ ಹೆಣಗಾಡುತ್ತಿದ್ದಾರೆ. ಅವರು ಒಬ್ಬ ಪ್ರಸಿದ್ಧ ಲಯನ್.

'ಲಯನ್' ಆಗಿ ಆ ಶಬ್ದಕ್ಕೆ ಅವರು ಸದಾ ಬದ್ಧ. ಈ ಸಂಸ್ಥೆಯ ಹೆಸರಿನಲ್ಲಿ ಅವರು ಅನೇಕ ಸಾಮಾಜಿಕ ಕೆಲಸ, ಸೇವೆ ಮಾಡಿದರು. ಸ್ವಂತದ ಹಣವನ್ನೂ ಅವರು ಸಾಮಾಜಿಕ ಕೆಲಸ-ಕಾರ್ಯಗಳಲ್ಲಿ ವಿನಿಯೋಗಿಸಿದರು. ಹಾಗೆಂದು ಅವರು ಎಂದೂ ಹೇಳಿಕೊಳ್ಳಲು ಮುಂದಾಗಲಿಲ್ಲ.

ತಲೆಹರಟೆ ಅವರಿಗಾಗದು. ತಾನೂ ಮಾಡುವುದಿಲ್ಲ. ಮಾಡುವವರನ್ನೂ ಸಹಿಸುವುದಿಲ್ಲ ಅವರು. ಅನೇಕ ಸಂದರ್ಭಗಳಲ್ಲಿ ಸಾಮಾಜಿಕ ಬದ್ಧತೆಯ, ಕನ್ನಡ ಸಂವರ್ಧನೆಯ ಕೆಲಸ-ಕಾರ್ಯಗಳಿಗೆ ಭಂಗ ತಂದವರನ್ನು ಅವರು ನೇರವಾಗಿ ಎದುರಿಸಿದ್ದಾರೆ. ಕಾನೂನಿನ ಚೌಕಟ್ಟಿನೊಳಗಿಂದ ಎದುರಾಳಿಗಳನ್ನು ಅವರು ಎದುರಿಸಿದ್ದಾರೆ, ಎದುರಿಸುತ್ತಿದ್ದಾರೆ. ತರ್ಕಬದ್ಧವಾಗಿ ನಡೆದುಕೊಂಡಾಗಲೂ, ಟೀಕಿಸಿದವರಿದ್ದರೆ ಅವರಿಗೆ ತಾಳ್ಮೆಯಿಂದ ಇರಲಾಗದು. ತನ್ನ ಮನಸ್ಸನ್ನೇ ಬಿಕರಿಗಿಟ್ಟು ಎಂದೂ ನಡೆದುಕೊಂಡವರಲ್ಲ.

ಇಂದು ಮುದ್ದಣ ಕಾವ್ಯ ಪ್ರಶಸ್ತಿಗೆ ಕರ್ನಾಟಕದಾದ್ಯಂತ ಒಂದು ವಿಶಿಷ್ಟ ಮೆರಗನ್ನು ಒದಗಿಸಿದ್ದರಲ್ಲಿ ಪುನರೂರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಅದು ಕೇವಲ ಆರ್ಥಿಕ ಸ್ವರೂಪದಲ್ಲಿ ಎಂಬುದು ಮಾತ್ರ ಅಲ್ಲ. ಸಾಹಿತ್ಯಿಕ ಚಟುವಟಿಕೆಗಳನ್ನು ಗಂಭೀರವಾಗಿ, ಆಸ್ಥೆಯಿಂದ ನಡೆಸಿ, ಸಾಹಿತ್ಯಕ್ಕೆ ತನ್ನದೇ ಆದ ಮೌಲ್ಯವನ್ನು

ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯಾಭಿಮಾನಿಗಳು ಒದಗಿಸಿದ್ದಾರೆ. ಚೊಕ್ಕಾಡಿ, ಮೊಗಸಾಲೆ, ನಂದಳಿಕೆ, ಜಿ.ಕೆ. ಐತಾಳ್, ಮುರಳೀಧರ ಉಪಾಧ್ಯ ಹಿರಿಯಡಕ, ಬೊಳುವಾರ್, ಕಟ್ಪಾಡಿ, ಜಯರಾಮ ಕಾರಂತ, ಮನೋಹರ ಪ್ರಸಾದ್, ನಾ. ದಾಮೋದರ ಶೆಟ್ಟಿ, ಜನಾರ್ದನ ಭಟ್, ಕಾಸರಗೋಡು ಚಿನ್ನಾ, ಅರವಿಂದ ಚೊಕ್ಕಾಡಿ, ಮನೋರಮಾ ಭಟ್, ಡುಂಡಿರಾಜ್, ಪಿ.ಗ. ನಾಯಕ, ಸಂಧ್ಯಾ ಪೈ ಹೀಗೆ ಹೆಸರಿಸುತ್ತ ಹೋದರೆ ಒಂದು ದೊಡ್ಡ ಯಾದಿ. ಇವರೆಲ್ಲ ದಕ್ಷಿಣ ಕನ್ನಡದ ಸಾಹಿತ್ಯಿಕ, ಸಾಂಸ್ಕೃತಿಕ ಸಂದರ್ಭವನ್ನು ಜಿಲ್ಲೆಯಲ್ಲಿ, ರಾಜ್ಯವಲ್ಲಿ ಜತನದಿಂದ ಪೋಷಿಸಿಕೊಂಡು ಬಂದಿದ್ದು ಸುಳ್ಳೇನಲ್ಲ.

ಇವರೆಲ್ಲರಿಗೂ ಪುನರೂರು, ಧರ್ಮಸ್ಥಳ ವೀರೇಂದ್ರ ಹೆಗಡೆ, ಬನ್ನಂಜೆ ಗೋವಿಂದಾಚಾರ್ಯ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಅಮೃತ ಸೋಮೇಶ್ವರ ಮುಂತಾದವರೂ ಜತೆಯಾದಾಗ ಅದರ ಹುರುಪು ಹಾಗೂ ಯಶಸ್ಸು ವಿಶಿಷ್ಟ ಸ್ವರೂಪದ್ದು.

ಹೀಗಾಗಿ ಪುನರೂರು ಅವರು ನಡೆದ ದಾರಿಯ ಗುರುತು ಅವರ ಬರಹಗಳನ್ನು ಮುಂದಿಟ್ಟುಕೊಂಡು ಗುರುತಿಸಲು ಸಾಧ್ಯವಾಗದಿದ್ದರೂ, ಸಾಹಿತ್ಯಕ ಸಂದರ್ಭವನ್ನು ವಿಶಾಲ ಅರ್ಥದಲ್ಲಿ ಜೀವಂತಿಕೆಯಲ್ಲಿಡಲು ಬಯಸಿದ ಹಾಗೂ ಯಶಸ್ಸು ಸಾಧಿಸಿದ ಸಾಹಿತ್ಯದ ಪರಿಚಾರಕತ್ವದಲ್ಲಿ ಗುರುತಿಸುವುದೇ ಹೆಚ್ಚು ಅರ್ಥಪೂರ್ಣವಾದದ್ದು. ಅವರು ಬರೆಯುವುದನ್ನು ಮಾಡಿದ್ದರೆ, ಅವರ ಬರಹಗಳಿಗೆ ಒಂದು ಜೀವಂತಿಕೆ ಒದಗಬಹುದಿತ್ತೇ ವಿನಾ, ಸಾಮಾಜಿಕವಾಗಿ ಇನ್ನೂ ವಿಶಾಲವಾಗಬೇಕಾದ ಸಾಹಿತ್ಯಿಕ ಆವಶ್ಯಕತೆಗೆ ಅವರ ಬೆಂಬಲ ಕ್ಷೀಣವಾಗುವ ಅಪಾಯ ಇದ್ದೇ ಇತ್ತು. ಹೀಗಾಗಿ ಪುನರೂರರ ಸಾಹಿತ್ಯದ ಸಂದರ್ಭಕ್ಕಾಗಿನ ಬದ್ಧತೆಯನ್ನು ಹೊಸದೇ ಅರ್ಥದಲ್ಲಿ ವಿಶ್ಲೇಷಣೆಗೆ ಒದಗಿಸಬೇಕು. ಇಡೀ ಅವರ ವ್ಯಕ್ತಿತ್ವದ ಮಹತ್ವಿಕೆ ಇಂಥ ಈ ವಿಶ್ಲೇಷಣೆಯಲ್ಲಿ ಮಾತ್ರ ಪರಿಪೂರ್ಣತೆಯನ್ನು ನಿರೂಪಿಸುವಂಥದ್ದು.

ಇದೀಗ ಅವರಿಗೆ ಅರವತ್ತಾದರೂ, ಸದಾ ಶುಭ್ರ, ಶ್ವೇತ ವಸ್ತ್ರಧಾರಿಗಳಾದ, ಎತ್ತರದ ನಿಲುವಿನ ಪುನರೂರು ಅವರನ್ನು ಗಮನಿಸಿದರೆ, ಅರವತ್ತು ಅವಗನ್ನು ಆವರಿಸಿದೆ ಎಂಬುದು ತಿಳಿಯಲಾರದು. ಅವರ ನಿಲುವಿನಷ್ಟೇ ಎತ್ತರ, ಸಾಮಾಜಿಕವಾದ ಅವರ ಕಾಳಜಿಯದೂ ಕೂಡ. ಸಾಹಿತ್ಯದ ಕುರಿತಾದ, ಕನ್ನಡದ ಕುರಿತಾದ ಅವರ ಕಳಕಳಿಗೂ ಕೂಡ.

ಹೀಗಾಗಿ ಹರಿಕೃಷ್ಣ ಪುನರೂರು ಅವರಿಗೆ ನನ್ನ ವಿನಯಪೂರ್ವಕ ಶುಭಾಶಯ. ಅವರಿಗೂ, ನಮಗೂ, ಸಮಸ್ತರಿಗೂ ಶುಭವಾಗಲಿ ಎಂಬುದು ಅವರು ನಂಬಿದ, ನಾನೂ ನಂಬಿದ ಶ್ರೀದೇವಿಯಲ್ಲಿ ಪ್ರೀತಿ ತುಂಬಿದ ನನ್ನ ನಿವೇದನೆ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಸ್ವಪ್ರಯತ್ನಶೀಲ

□ ಪುತ್ತಿಗೆ ಈಶ್ವರ ಭಟ್ಟ



ಅಚ್ಚ ಬಿಳಿಯ ಸ್ವಚ್ಛ ಉಡುಪು ಧರಿಸುವ ಎತ್ತರದ ನಿಲುವಿನ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ಮುಗುಳು ನಕ್ಕು ಮಾತನಾಡುವಾಗ ಯಾರಿಗೂ ಸಂತೋಷವಾಗದಿರದು. ಒಮ್ಮೆ ಕಂಡು ಪರಿಚಯವಾದರೆ ಬಳಿಕ ಎಂದೆಂದೂ ಮರೆಯದ ಜ್ಞಾಪಕ ಶಕ್ತಿ ಅವರದು. ಬಡವನಿರಲಿ, ಧನಿಕನಿರಲಿ ಯಾರೊಡನೆಯೂ ಪ್ರೀತಿಯಿಂದ ಮಾತನಾಡುವ ಸೌಜನ್ಯವೇ ಆಕರ್ಷಣೀಯ. ಅವರನ್ನು ಕಂಡಾಗ ಅಪರಿಚಿತರಿಗೂ ಗೌರವ ಭಾವನೆ ಮೂಡದಿರದು. ಅವರ ಸಂಚಾರ ಮಧ್ಯದಲ್ಲಿ ಪರಿಚಿತರು ಸಿಕ್ಕಾಗ ವಾಹನ ನಿಲ್ಲಿಸಿ ಕರೆದೊಯ್ಯುವ ಪ್ರೀತಿ ಅವರದು.

1982ನೇ ಇಸವಿಯಲ್ಲಿ ಅವರ ಪರಿಚಯವಾಗಿತ್ತು. ನಾನು ರಚಿಸಿದ ಕೃತಿಗಳಲ್ಲಿ ಎರಡು ಕೃತಿಗಳು ಮುದ್ರಣವಾಗಲು ಆರ್ಥಿಕ ಪ್ರೋತ್ಸಾಹ ನೀಡಿದ್ದಾರೆ. ನನ್ನ ಎರಡು ಕೃತಿಗಳ ಅನಾವರಣ ಸಮಾರಂಭಕ್ಕೆ ಅಧ್ಯಕ್ಷರಾಗಿ ಎರಡು ಸಲ ಆಗಮಿಸಿ ಅನಾವರಣಗೊಳಿಸಿ ಸಂತೋಷಪಡಿಸಿದ್ದಾರೆ.

ಯಾರೇ ಆದರೂ ಎಷ್ಟು ವರ್ಷ ಬದುಕಿದರು ಎಂಬುದು ಮುಖ್ಯವಲ್ಲ. ಹೇಗೆ ಬದುಕಿದರು, ಮಾಡಿದ ಜನಹಿತ ಸಾಧನೆಗಳು ಏನು ಎಂಬುದು ಮುಖ್ಯವಾಗುತ್ತವೆ. ಗಳಿಸಿದ ಧನದಲ್ಲಿ ಸ್ವಲ್ಪ ಅಂಶವನ್ನಾದರೂ ಧರ್ಮ ಮಾಡಬೇಕು. ತಾನೂ

'ದುರ್ಗಾಪ್ರಸಾದ', ಪುತ್ತಿಗೆ ಪದವು, ಪುತ್ತಿಗೆ ಗ್ರಾಮ, ಅಂಚೆ, ಸಂಪಿಗೆ-574 272, ಮೂಡಬಿದಿರೆ, ದಕ್ಷಿಣ ಕನ್ನಡ.

ಉಪಯೋಗಿಸದೆ. ಧರ್ಮವನ್ನೂ ಮಾಡದೆ ಕೇವಲ ಸಂಗ್ರಹವನ್ನೇ ಮಾಡುತ್ತಾ ಹೋದರೆ ಏನೂ ಪ್ರಯೋಜನವಾಗಲಾರದು. ಧರ್ಮ ಮಾಡಿದಾಗಲೇ ನೆಮ್ಮದಿ, ಶಾಂತಿ ದೊರೆಯುತ್ತದೆ. ಪುನರೂರು ಅವರು ಸ್ವಲ್ಪ ಅಂಶವನ್ನಲ್ಲ- ದೊಡ್ಡ ಅಂಶವನ್ನೇ ನಿರಂತರ ಧರ್ಮ ಮಾಡುತ್ತಾ ಬಂದಿದ್ದಾರೆ- ಧರ್ಮದ ಮರ್ಮವರಿತು ಧರ್ಮವೆಸಗುತ್ತಾ ಬಂದಿದ್ದಾರೆ.

ಮನುಷ್ಯನ ಸಾರ್ಥಕ ಜೀವನ ಅಂದರೇನು? ಅರ್ಥ ಅಂದರೆ ಧನ. ಬದುಕಿನಲ್ಲಿ ಯಾರು ಎಷ್ಟು ಹೆಚ್ಚು ಹಣ ಸಂಪಾದಿಸುತ್ತಾರೋ ಅಂಥವರ ಬದುಕು ಅಷ್ಟೂ ಹೆಚ್ಚು ಸಾರ್ಥಕವಾಯಿತು ಎಂಬುದೇ ಹಲವರ ಕಲ್ಪನೆ. ಇದು ಮೂರ್ಖರ ಅಭಿಪ್ರಾಯ. ತನ್ನ ಒಬ್ಬನ ಬಾಳ್ವೆಯಿಂದ ಇತರ ಹಲವಾರು ಜನರ ಬಾಳ್ವೆಯು ಬೆಳಗಿದರೆ ಮಾತ್ರ ಅದು ಸಾರ್ಥಕವೆನಿಸುತ್ತದೆ. ಈ ವಿಚಾರದಲ್ಲಿ ಕೊಡುಗೈದಾನಿಗಳಾಗಿ ಶ್ರೇಷ್ಠ ವ್ಯಕ್ತಿತ್ವದಿಂದ, ಸಾರ್ಥಕ ಜೀವನದಲ್ಲಿ ಶೋಭಿಸುತ್ತಾರೆ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು.

ಸ್ವಪ್ರಯತ್ನ ಮತ್ತು ಸಾಧನೆಗಳಿಂದ ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡ ಮೇರು ವ್ಯಕ್ತಿತ್ವ ಅವರದು. ಯಾವುದೇ ಕೆಲಸ-ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಶಕ್ತಿ-ಸಾಮರ್ಥ್ಯ ಅವರಿಗಿದೆ. ಸದಾ ಕ್ರಿಯಾತ್ಮಕ ಸ್ವಭಾವದ ಪುನರೂರರದು ಧೈರ್ಯ, ಛಲ, ಪ್ರಾಮಾಣಿಕತೆ ಇರುವ ಸರಳ ಸಜ್ಜನ ವ್ಯಕ್ತಿತ್ವ. ಸಂಘಟನಾ ಚಾತುರ್ಯ, ಶ್ರದ್ಧೆ, ಆಸಕ್ತಿಗಳಿರುವ ಅವರಿಗೆ ಕೆಲಸ ಮಾಡಲು ಯಾವ ಹೆಚ್ಚಿನ ವಿದ್ಯಾರ್ಹತೆಯೂ ಬೇಕಾಗಿಲ್ಲ. ಹಲವು ಕ್ಷೇತ್ರಗಳಲ್ಲಿ ವಿಶಿಷ್ಟ ಛಾಪು ಮೂಡಿಸಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಅವರದು.

ಬಡವರ ಸಂಕಷ್ಟಗಳಿಗೆ ಸ್ಪಂದಿಸುವ ಸ್ವಭಾವದವರವರು. ಮನಗೆಲ್ಲುವಂತಹ ವರ್ಚಸ್ಸು, ಮನಸ್ಸು ಹಾಗೂ ಹುಮ್ಮಸ್ಸು ಅವರದು. ಈಗ ಅರವತ್ತು ವರ್ಷ ವಯಸ್ಸು ದಾಟಿದರೂ ಇಪ್ಪತ್ತರ ಉತ್ಸಾಹ, ಹುರುಪು ಅವರದು. ಇತ್ತೀಚೆಗೆ ಷಷ್ಟ್ಯಬ್ದಗಳನ್ನು ಪೂರೈಸಿ ತನ್ನ ವೈವಿಧ್ಯಮಯ ಸೇವೆಯಿಂದ ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡ ಅವರು ನೀಡಿದ ಮೊತ್ತ ಅಪಾರ. ಜನತೆಯ ಏಳಿಗೆಗಾಗಿ ತನ್ನ ಸಂಪತ್ತನ್ನು ವಿನಿಯೋಗಿಸುವ ಅಪೂರ್ವ ವ್ಯಕ್ತಿತ್ವ ಅವರದು.

ನೂರಾರು ಶಾಲಾಮಕ್ಕಳ ವಿದ್ಯಾಭ್ಯಾಸಕ್ಕೆ, ಬಡವರ ಮದುವೆಗೆ, ಸಂಕಷ್ಟದಲ್ಲಿರುವವರಿಗೆ, ಮನೆಸುಟ್ಟು ಹೋದವರಿಗೆ, ರೋಗಿಗಳ ಶುಶ್ರೂಷೆಗೆ, ಅನೇಕ ಸಾಹಿತಿಗಳ ಕೃತಿ ಪ್ರಕಟನೆಗೆ, ಶಾಲಾ ರಂಗಮಂಟಪ ನಿರ್ಮಾಣಕ್ಕೆ, ಶಾಲಾ ಕ್ರೀಡಾಂಗಣ ನಿರ್ಮಾಣಕ್ಕೆ, ಕೆಲವು ಸಂಘ-ಸಂಸ್ಥೆಗಳಿಗೆ ನೆರವು ನೀಡಿದ್ದಾರೆ. ಈಗ ಪುನರೂರಿನಲ್ಲಿ ನೂರಾ ಒಂದು ಮಂದಿ ವಸತಿ ರಹಿತ ಕಡುಬಡವರಿಗೆ ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿದ್ದಾರೆ. ಹೀಗೆ ಅವರು ಗೈದ ದಾನಗಳ ಪಟ್ಟಿಯನ್ನು ಬರೆಯುತ್ತಾ ಹೋದರೆ ನೂರಾರು ಪುಟಗಳಾದೀತು.


ಅಂತಹ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ನೂರಾರು ವರ್ಷ ಸಾರ್ಥಕ ಬಾಳನ್ನು ಬಾಳಲಿ, ಜನತೆ ಅವರಿಂದ ವಿಶಿಷ್ಟ ಸಹಕಾರವನ್ನು ಮುಂದಕ್ಕೂ ಪಡೆಯುವಂತಾಗಲೆಂದು ಹಾರೈಸುತ್ತೇನೆ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಧರ್ಮಪ್ರಜ್ಞೆಯ ಸರದಾರ

□ ವಿ.ಬಿ. ಹೊಸಮನೆ



ನಶ್ವರಾಕೃತಿ ನಾಮಮಯ ವಿಶ್ವವಾರ್ಧಿಯದು
ಶಾಶ್ವತ ಬ್ರಹ್ಮದುಚ್ಛ್ವಾಸ ಘನಬಿಂದು
ಪ್ರಶ್ವಸಿತದಲೆಗಳನೆ ಪಿಡಿದು ಗುರಿಯರಿತೀಜೆ
ವಿಶ್ವಮೂಲಾಪ್ತಿಯಲ- ಮಂಕುತಿಮ್ಮ ॥ -ಡಿ.ವಿ.ಜಿ.

ಪ್ರಕರ್ಷವಾದ ಜ್ಞಾನ ಮತ್ತು ಮುನ್ನೆಚ್ಚರಿಕೆ ಇರುವವರನ್ನು ಪ್ರಜ್ಞಾವಂತರೆನ್ನುತ್ತಾರೆ. ಪಂಡಿತೋತ್ತಮರು ಹೊಂದಿರಬೇಕಾದ ಗುಣವಿದು. ಇದನ್ನು ಜಾಗರೂಕತೆಯಿಂದ ಬಳಸಿಕೊಳ್ಳಬೇಕಾಗುತ್ತದೆ. ಜ್ಞಾನ ಎಂಬುದು ಆಕೃತಿರಹಿತ. ಲೋಕಸಾಗರದಲ್ಲಿ ಬ್ರಹ್ಮದ ಉಚ್ಛ್ವಾಸ, ಜ್ಞಾನವಾಹಿನಿಯಾಗಿ, ಗಂಧವಹನ ಸುಳಿವು ಅತಿ ಸೂಕ್ಷ್ಮ. ಸತ್ಯದ ಮೂಲವನ್ನು ಪಡೆಯಬೇಕಾದರೆ, ಬ್ರಹ್ಮದಲೆಗಳಲ್ಲಿ ಗುರಿ ಹಿಡಿದು ಈಜುವವನಿಗಷ್ಟೇ ಆ ಮೂಲದ ಪ್ರಾಪ್ತಿ ಎಂಬುದು ತತ್ತ್ವಸಿದ್ಧಾಂತ. ಈ ಅಲೌಕಿಕ ಜ್ಞಾನವನ್ನೆಲ್ಲರೂ ಪಡೆಯಲು ಸಾಧ್ಯವಾಗದು. ಸಾಧ್ಯವಾದವರಲ್ಲಿ ಎಲ್ಲರೂ ಅಲೌಕಿಕ ಜ್ಞಾನಿಗಳಾಗಿರಲಾರರು. ಯದೃಚ್ಛಯಾ ಲೌಕಿಕರೂ 'ಧರ್ಮಪ್ರಜ್ಞೆ'ಯ ಗುರಿ ಸಾಧಿಸಿರಬಹುದು. ಅದಕ್ಕೆ ಸುಯೋಗ ಎನ್ನುತ್ತಾರೆ. ಸಾಧನೆಯ ಈ ಮಾರ್ಗದಲ್ಲಿ ಯದೃಚ್ಛಯಾ ಧರ್ಮಪ್ರಜ್ಞೆಯ ಸರದಾರ ಎನ್ನಿಸಿಕೊಂಡವರು 'ಧರ್ಮದರ್ಶಿ' ಹರಿಕೃಷ್ಣ ಪುನರೂರು!

ಅವರೇ ಹೇಳಿಕೊಳ್ಳುವಂತೆಯೋ ಲೋಕ ತಿಳಿದಂತೆಯೋ

ಕಲಾದರ್ಶನ, ಕೊಂಚಾಡಿ, ಮಂಗಳೂರು-575008

ಅವರೊಬ್ಬ ಹೋಟೆಲು ಉದ್ಯಮಿ. ಕೇವಲ ಗಿರಾಕಿಗಳ ಮುಂದೆ ಕುಳಿತು ಗಳಿಸಿದ ಹೆಸರಲ್ಲ. ಕಾರ್ಮಿಕರ ಒಡನಾಟದಲ್ಲಿ, ಅವರ ಒಳಹೊಕ್ಕು ಈ ಉದ್ಯಮದ ಸವಿಯನ್ನು ಲೋಕಕ್ಕೆ ಉಣಬಡಿಸಿದ್ದಾರೆ. ತಿಂಡಿತಿನಿಸುಗಳ ಸವಿಯನ್ನು ನೋಡಿ ತಾನು ಮೆಚ್ಚಿ ಲೋಕಕ್ಕೆ ಉಣಬಡಿಸಿದ್ದಾರೆ. ಕಾರ್ಮಿಕ ಧರ್ಮವನ್ನು ಮೈಗೂಡಿಸಿಕೊಂಡಿದ್ದಾರೆ. ಅದರಲ್ಲಿ ಮಾನವೀಯತೆಯನ್ನು ಬಳಸಿಕೊಂಡಿದ್ದಾರೆ. ಯಾವ ಕಾಲಕ್ಕೆ ಯಾವುದು ಆಗಬೇಕೋ ಅದನ್ನು ಆಗು ಮಾಡುವುದರಲ್ಲಿ ಎಚ್ಚರ ವಹಿಸಿದ್ದಾರೆ. ಉದ್ಯಮದಲ್ಲಿ, ವ್ಯಾಪಾರದಲ್ಲಿ ಮಾನವೀಯ ದೃಷ್ಟಿ ಇವರದು. ಆ ದೃಷ್ಟಿ ಸೇವಾ ಕ್ಷೇತ್ರದೆಡೆಗೂ ಹರಿದಿದೆ. ಆ ಮಾನವೀಯ ದೃಷ್ಟಿಯೇ ಎಲ್ಲ ರಂಗಗಳಿಗೂ ಅವರನ್ನು ಸೆಳೆದುತಂದಿದೆ. ದಾರ್ಶನಿಕರ ದೃಷ್ಟಿಯಂತೆ ಹೇಳುವುದಾದರೆ, ಈ ಧರ್ಮದರ್ಶಿಗಳಿಗೆ ಹೋಟೆಲುದ್ಯಮವೆಷ್ಟು ಆತ್ಮೀಯವೋ, ಸಾಹಿತ್ಯ, ಸಮಾಜ ಸೇವೆ, ದೇವತಾಕಾರ್ಯ, ಕಲಾಸೇವೆ ಎಲ್ಲದರ ಮೇಲೂ ಅಷ್ಟೇ ಮಾನವೀಯ ದೃಷ್ಟಿ- ಆತ್ಮೀಯತೆ.

ಧರ್ಮನಿರ್ಣಯ ನಿನಗೆ ಜನ್ಮ ಜನ್ಮಾಂತರದ
ಕರ್ಮ ಸಂದರ್ಭದಿಂದೊಗೆವುದನರಿತು ।
ನಿರ್ಮಮದ ನಿರ್ಮಲೋತ್ಸವದೆ ನೀನಾಚರಿಸೆ
ಬ್ರಹ್ಮ ಸಾಮೀಪ್ಯವೆಲೊ-ಮಂಕುತಿಮ್ಮ॥

ಸಾಹಿತ್ಯ ಸಮಾರಂಭಗಳಲ್ಲಿ ಎಲ್ಲಿ ಭಾಗವಹಿಸಿದರೂ ಅಲ್ಲಿ ಹರಿಕೃಷ್ಣ ಪುನರೂರು ಉಪಸ್ಥಿತಿ. ಪಶ್ಚಿಮ ಕರಾವಳಿಯಲ್ಲಿ ಒಂದು ಹಂತದಲ್ಲಿ ಸಾಹಿತ್ಯ ಧರ್ಮದ ಪ್ರಜ್ಞೆಯನ್ನರಿವು ಮಾಡಿಕೊಟ್ಟವರು ಪ್ರೊ.ಎಸ್ವಿಪಿ. ಎರಡನೇ ಹಂತದಲ್ಲಿ ಸಾಹಿತ್ಯದಲೆಯನ್ನು ಹಬ್ಬಿಸಿದವರು ಧರ್ಮದರ್ಶಿ ಹರಿಕೃಷ್ಣ ಪುನರೂರು. ಈ ನಿಷ್ಕಾಮ ಕರ್ಮ ಅವರಿಗೆ ಜನ್ಮಜನ್ಮಾಂತರದ ಬಂಧನವಾಗಿಯೇ ಬಂದಿರಬೇಕು. ಸಂದರ್ಭವೊಂದು ಒದಗಿ ಬಂದರೆ, ಅದನ್ನು ನಿರ್ಮಲೋತ್ಸವವಾಗಿ ಆಚರಿಸುವುದು ಪುನರೂರು ಧರ್ಮ. ಇದನ್ನವರು ಆಚರಿಸಿಕೊಂಡೇ ಬಂದಿದ್ದಾರೆ. ತುಳುನಾಡಿನಲ್ಲಿ ದೈವ ದೇವರ್ಕಳ ಗುಡಿಗಳು, ಉತ್ಸವಗಳು ಅಸಂಖ್ಯಾತ. ವಾರ್ಷಿಕ ಜಾತ್ರೆಗಳು, ಬ್ರಹ್ಮಕಲಶಾದಿ ಸಂದರ್ಭಾನುಸಾರ ನಡೆಯುವಂಥವು ಇವುಗಳಲ್ಲೆಲ್ಲ ಪುನರೂರು ಪಾತ್ರ ಇದ್ದೇ ಇರುತ್ತದೆ. ಅಲ್ಲಿನ ನಡವಳಿಕೆಗಳ ಬಗೆಗೆ ಇವರ ಸಕಾಲಿಕ ಎಚ್ಚರಿಕೆ ಎದ್ದು ಕಾಣುವಂತಿರುತ್ತದೆ. ಕೇವಲ ಉಪದೇಶದಾನ ಮಾತ್ರವಲ್ಲ, ಆಚರಣೆಯಲ್ಲೂ ಇತರರಿಗೆ ಆದರ್ಶಪ್ರಾಯರು. ಧಾರ್ಮಿಕ ಸಮಾರಂಭಗಳಿಗೆ, ಸಾಹಿತ್ಯಕೂಟಗಳಿಗೆ, ಪುಸ್ತಕ ಪ್ರಕಾಶನಗಳಿಗೆ, ದೀನರಿಗೆ, ವಿದ್ಯಾರ್ಥಿಗಳಿಗೆ ಬೇಕಾಗುವ ಅರ್ಥದಾನದ ಔದಾರ್ಯ ಹರಿಕೃಷ್ಣ ಪುನರೂರು ಅವರದು. ಇದನ್ನು ಗಮನಿಸಿಯೇ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಇವರಿಗೆ 'ಧರ್ಮದರ್ಶಿ' ಬಿರುದನ್ನಿತ್ತು ಗೌರವಿಸಿದರು; ಇವರದು ಸಮನ್ವಯ ಪಂಥ ಎಂದರು.

ದಕ್ಷಿಣ-ಉತ್ತರ, ದ್ರಾವಿಡ-ಆರ್ಯರ
ಸಂಯೋಗದ ಸೌಗಂಧ ಶ್ರೀ;
ಹರಿ-ಹರ ಜಿನರಿಗು, ಅಲ್ಲಾ ದೇವಗು
ಏಸು ಕ್ರಿಸ್ತನಿಗು ಕ್ಷೇತ್ರಶ್ರೀ
ದೇವನೊಬ್ಬ ನಾಮ ಹಲವೆಂಬುವ
ಪರಮತ ಸಹಿಷ್ಣುಭಾವಶ್ರೀ
ಇದು ಕನ್ನಡ ನೆಲ, ಇದು ಕನ್ನಡ ಜಲ
ಇದು ಕನ್ನಡ ಕುಲಧರ್ಮಶ್ರೀ. -ಎಂ. ಅಕಬರ ಅಲಿ

ಕನ್ನಡದ ಬಗೆಗೆ ಕವಿ ಎಂ. ಅಕಬರ ಅಲಿ ಅವರ ಈ ಘೋಷಣೆ, ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ನಡೆ-ನುಡಿಗಳಿಗೆ ಸೂಕ್ತವಾಗಿಯೇ ತೋರುತ್ತದೆ. ಕನ್ನಡ ಭಾಷಾ ಚಳವಳದಲ್ಲಿ ಅವರದು ಮುಮ್ಮುಖಿ ಮುಪ್ಪುರಿಗೊಂಡ ಬಗೆ. ಸಮ್ಮೇಳನಗಳಿಂದ ಕನ್ನಡಿಗರ ಸಂಘಟನೆ, ಕನ್ನಡ ಜಾಗೃತಿ, ಕನ್ನಡ ಸಾಹಿತಿಗಳು ಮತ್ತು ಸಾರ್ವಜನಿಕರು ಪರಸ್ಪರ ಬೆರೆತುಕೊಂಡು ಕನ್ನಡದ ಏಳಿಗೆಗಾಗಿ ಶ್ರಮಿಸುವಂತೆ, ಪ್ರೇರಣೆ ಪಡೆಯುವಂತೆ ಮಾಡುವುದು, ಇವುಗಳಿಂದ ಕನ್ನಡ ನಾಡು-ನುಡಿಗಳು ಸಮೃದ್ಧಿಗೊಂಡು ಕನ್ನಡಿಗರ ಭಾವೈಕ್ಯ ಸಾಧಿಸಿದಂತಾಗಿದೆ. ಇದರೊಂದಿಗೆ ಅಲ್ಲಲ್ಲಿ ಸಣ್ಣ ಪುಟ್ಟ ಗುಂಪುಗಾರಿಕೆಗಳೂ ಇವರನ್ನು ಹಿಂಬಾಲಿಸಿಕೊಂಡು ಬಂದಿವೆ. ಅವೆಲ್ಲ ಈ ಸಾಧನೆಯ ಮುಂದೆ ಗೌಣ. 'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು' ಎಂಬ ಕವಿ ಘೋಷಣೆಗೆ, ಕವಿ ಇದಿನಬ್ಬರಂಥವರ ಉದ್ಘೋಷಣೆಗೆ ಮೈಮರೆತು ಕೇಳುವ ಆಸಕ್ತಿ ಇವರದು. ಕನ್ನಡದ ಕಾಯಕಕ್ಕೆ ನೀಡಿದ ಪ್ರೋತ್ಸಾಹ, ಕನ್ನಡ ಕವಿಗಳಿಗೆ ಒದಗಿಸಿದ ಸೌಲಭ್ಯಗಳು-ನೆರವುಗಳು ಅಗಣಿತ.

ಧರ್ಮದರ್ಶಿ ಹರಿಕೃಷ್ಣ ಪುನರೂರು ಸೇವಾಕಾರ್ಯದಲ್ಲಿ ನಿಸ್ಪೃಹರು. ಮತೀಯ ಕಾರ್ಯದಲ್ಲಿ ಸೌಹಾರ್ದ ಸ್ನೇಹಪರತೆ. ಭಿನ್ನಾಭಿಪ್ರಾಯಗಳಿಗೆ ಇಲ್ಲಿ ಆಸ್ಪದವಿಲ್ಲ. ಜಗದಾತ್ಮ ಜೀವನವೇ 'ಧರ್ಮದರ್ಶಿ'ಗಳ ಜೀವನ ತತ್ತ್ವ.

ದ್ವೈತವೇನದ್ವೈತವೇನಾತ್ಮ ದರ್ಶನಿಗೆ
ಶ್ರೌತಾದಿ ವಿಧಿಯೇನು, ತಾಪನಿಯಮವೇನು?
ನೀತಿ ಸರ್ವಾತ್ಮಮತಿಯದರಿನಮಿತ ಪ್ರೀತಿ
ಭೀತಿಯಿಲ್ಲದನವನು- ಮಂಕುತಿಮ್ಮ ॥

ನಿರ್ಭೀತಿಯಿಂದ ಒಂದು ವಿಚಾರವನ್ನು ಸಾರ್ವಜನಿಕವಾಗಿ ಘೋಷಿಸುವ ವಿಧಾನ ಹರಿಕೃಷ್ಣರದೇ ಒಂದು ವೈಶಿಷ್ಟ್ಯ. ದೇವಸ್ಥಾನಗಳಲ್ಲಿ ಅರ್ಚಕರಾಗಿದ್ದು, ಆಡಳಿತ ಧರ್ಮದರ್ಶಿಗಳಾಗಿದ್ದು, ಯಾರು-ಯಾವ ವಿಧದಲ್ಲಿ ವಂಚಕರೋ ನಿರ್ವಂಚಕರೋ ಎಂಬುದನ್ನು ಶೋಧಿಸಿ ಸಾರ್ವತ್ರಿಕವಾಗಿ, ಸಾರ್ವಜನಿಕವಾಗಿ ಘೋಷಣೆ ಮಾಡಲು ಅವರೆಂದೂ ಅಂಜುವವರಲ್ಲ. ಹಿಂದುಗಳಾಗಲಿ, ಕ್ರೈಸ್ತರಾಗಲಿ, ಮುಸಲ್ಮಾನರೇ ಆಗಲಿ ಅವರ ನ್ಯಾಯಪರ ವರ್ತನೆಗೆ ತನ್ನ ಮಾತಿನ ಒತ್ತನ್ನು ಕೂಡಿಸಿ ಸತ್ಯವನ್ನು ಲೋಕದ ಮುಂದೆ ಘೋಷಿಸಿ ಹೇಳಬಲ್ಲವರು.

ಲೋಕಧರ್ಮ-ಮಾನವಧರ್ಮ ಪರಸ್ಪರ ಹೊಂದಿ ನಡೆಯಬೇಕಾದುದು ಧರ್ಮಪ್ರಜ್ಞೆ. ಈ ಪ್ರಜ್ಞೆ ಸಾಧನೆಯ ಬಲದಿಂದಲ್ಲದೆ ಬೋಧನೆಯ ಬಲದಿಂದಾಗದು. ಇದಕ್ಕೆ ನಿದರ್ಶನ ಬೇರೆ ಬೇಕಾಗಿಲ್ಲ. ಅರಿಗಾವುದು ತಕ್ಕುದೊ ಅರಿಗಾವುದು ದಕ್ಕದೊ ಇದು ಲೋಕರಹಸ್ಯ.

ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ
ನಿಜಕುಕ್ಷಿ ಚಿಂತೆಯೇಂ ಮೊದಲು ಮನೆತಾಯ್ಗೆ।
ಭುಜಿಪ ಸತಿಸುತರೊಪ್ಪು ತುಪ್ಪವವಳೂಟಕ್ಕೆ
ಭಜಿಸು ನೀನಾವ್ರತವ-ಮಂಕುತಿಮ್ಮ॥

'ತೇನ ತ್ಯಕ್ತೇನ ಭುಂಜೀಥಾ' ಎಂಬ ಉಪನಿಷದ್ವಾಕ್ಯ ನಮ್ಮನ್ನೆಚ್ಚರಿಸಬೇಕು ಎಂಬುದು ಧರ್ಮದರ್ಶಿಗಳ ಅರಿವಿನ ತಿರುಳು. ಹಿರಿಯರನು ಕಾಪಿ, ಜಗದ ತುತ್ತನು ತಿಂದು ಬದುಕಬೇಕು. ಮಕ್ಕಳನ್ನು ಬೆಳೆಸಿ ತೃಪ್ತಿಪಡಿಸಿ ಮನೆಯನಾಳುವ ಯಜಮಾನನೇ ಜಗವನಾಳುವವನಾಗುವನು. ಒಮ್ಮನದಿಂದ ಈ ಧರ್ಮಕರ್ಮಗಳನ್ನರಿತುಕೊಂಡರೆ ಲೋಕಧರ್ಮದಂತೆ ನಡೆಯಬಲ್ಲನು. ಇತರರ

ಕೊರತೆಯನ್ನೇ ದೊಡ್ಡು ಮಾಡಿ ಹೇಳುವುದಕ್ಕಿಂತ ತನ್ನ ಕೊರತೆಗಳ ಕಡೆಗೊಮ್ಮೆ ಕಣ್ಣು ಹಾಯಿಸುವುದು ಉತ್ತಮ. ಇದನ್ನೇ ಧರ್ಮಪ್ರಜ್ಞೆ ಎನ್ನುವುದು. ಮಾನವನ ಪ್ರಜ್ಞೆಯನ್ನು ಕೆಣಕುವುದು ಉಚಿತವಲ್ಲ.

"ಬಳಲಿ ನೆಲದಲಿ ಮಲಗಿ ಮೈಮರೆತು ನಿದ್ರಿಪನ
ಕುಲುಕಿ ಹಾಸಿಗೆಯನರಸೆನುವುದು ಪ್ರಕೃತಿಯೆ?
ಒಳಿತನೆಸಗುವೆನೆಂದು ನೆಮ್ಮದಿಯ ನುಂಗದಿರು
ಸುಲಭವಲ್ಲೊಸಗೆ"-

ಈ ನೀತಿಯನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ಹಲವಾರು ಬಾರಿ ಎಚ್ಚರಿಸಿದ್ದಾರೆ. ಹಲವಾರು ಮಂದಿಗೆ ದಾನ ನೀಡಿದ್ದಾರೆ. ಅಮೂಲ್ಯ ನೀತಿ ದಾನ ಮಾಡಿದ್ದಾರೆ. ಆಚಾರಃ ಪರಮೋಧರ್ಮಃ ಎಂಬುದನ್ನು ಆಚರಿಸಿ ತೋರಿದ್ದಾರೆ. ಇದರಿಂದ ಅವರನ್ನು 'ಧರ್ಮಪ್ರಜ್ಞೆಯ ಸರದಾರ' ಎನ್ನುವುದು ಸೂಕ್ತವಾಗುತ್ತದೆ.

ಭಾಗ: ಎರಡು

ಹೀಗಿದ್ದಾರೆ ಪುನರೂರು

ಶೈಕ್ಷಣಿಕ ಪ್ರೀತಿ, ಸಾಂಸ್ಕೃತಿಕ ಕಾಳಜಿ

ಅರುಣ್‌ಕುಮಾರ್ ಎಸ್.ಆರ್.

ಪ್ರಾಮಾಣಿಕತೆ ಎಂಬುದು ಇಂದು ಎಲ್ಲೂ, ಯಾರಲ್ಲೂ, ಯಾವುದೇ ವೃತ್ತಿಯಲ್ಲೂ ಕಾಣಸಿಗದ ಮೌಲ್ಯವಾಗಿದೆ. ಸೇವೆಯಾದರೆ ಅದೊಂದು ವ್ಯವಹಾರವೆಂದೇ ಇಂದು ಹೆಚ್ಚಿನವರು ಭಾವಿಸಿದಂತಿದೆ. ನೈಜ ಸೇವಾತತ್ಪರರು ಹಲವು ಏಳುಬೀಳುಗಳೊಂದಿಗೆ ಸೇವೆಯನ್ನು ಹೋರಾಟವೆಂಬಂತೆ ನಡೆಸಿಕೊಂಡು ಬಂದು ಸಮಾಜದ ಅಭ್ಯುದಯಕ್ಕಾಗಿ ಸದಾ ಶ್ರಮಿಸುತ್ತಿರುತ್ತಾರೆ. ಮಾನಾಪಮಾನದ ಪ್ರಶ್ನೆ ಬಂದರೂ ತಮ್ಮ ಸಮಾಜಸೇವಾಪ್ರವೃತ್ತಿಯನ್ನು ಇಂಥ ವ್ಯಕ್ತಿಗಳು ಕಳೆದುಕೊಳ್ಳಲಾರರು. ಆದರೆ ಎಷ್ಟೋ ಬಾರಿ ಇಂಥ ಪ್ರಾಮಾಣಿಕ ಸೇವಾರ್ಥಿಗಳನ್ನು ಜನಸಾಮಾನ್ಯರು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಇದನ್ನು ಕಂಡಾಗ ಬೇಸರವಾಗುತ್ತದೆ.



ಇದೆಲ್ಲದರ ನಡುವೆ ನೈಜ ನಡೆನುಡಿಯೊಂದಿಗೆ, ಸರಳ ಚಿಂತನೆಯೊಂದಿಗೆ ಸಮಗ್ರ ಸಮಾಜಕ್ಕೆ ಪ್ರಾಮಾಣಿಕ ದುಡಿಮೆಯೇ ತನ್ನ ಬದುಕಿನ ಪರಮೋಚ್ಚ ಗುರಿ ಎಂದು ತಿಳಿದು, ಹೊಗಳಿಕೆ ತೆಗಳಿಕೆಗೆ ತಲೆಕೊಡದೆ ಸಮಾಜಮುಖಿಯಾಗಿ, ಜೀವನಸ್ಪಂದಿಯಾಗಿ ಕೆಲಸ ಮಾಡುತ್ತ ಬಂದಿರುವವರು ಧರ್ಮದರ್ಶಿ ಹರಿಕೃಷ್ಣ ಪುನರೂರು.

ಅವರನ್ನು ನಾನು ಹತ್ತಿರದಿಂದ ಕಂಡದ್ದು, ನಾನು ವಿಜಯಾ

ಉಪನ್ಯಾಸಕರು, ಕನ್ನಡ ವಿಭಾಗ, ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು ಉಡುಪಿ-2

ಕಾಲೇಜಿನಲ್ಲಿ (1990ರಲ್ಲಿ) ಕನ್ನಡ ಉಪನ್ಯಾಸಕನಾಗಿ ಸೇರಿಕೊಂಡ ಮೇಲೆ. ಅವರ ಜೊತೆಗಿನ ಆತ್ಮೀಯ ಸಂಬಂಧ ಗಾಢವಾಗುತ್ತ ಹೋದಂತೆ, ಅವರ ಅಂತರಂಗದ ಪರಿಚಯ ಬೇರೆ ಬೇರೆ ರೀತಿಗಳಲ್ಲಿ ಆಗುತ್ತ ಬಂದಂತೆ ಸಂತೋಷಪಟ್ಟಿದ್ದೇನೆ. ಅವರ ಬದುಕಿನಲ್ಲಿ ಅವರು ಏರಿರುವ ಎತ್ತರಕ್ಕೆ ಅವರ ಮಾನಸಿಕ ಸಿದ್ಧತೆ, ಕೆಲಸದಲ್ಲಿನ ಉತ್ಸಾಹ, ತನ್ನಿಂದ ಇತರರಿಗೆ ನೆರವು ಸಲ್ಲಬೇಕೆಂಬ ಕಡುನಿಷ್ಠೆಯೇ ಕಾರಣ ಎಂಬುದನ್ನು ಮನಗಂಡಿದ್ದೇನೆ.

ಅವರ ಶೈಕ್ಷಣಿಕ ಪ್ರೀತಿ ಹಾಗೂ ಸಾಂಸ್ಕೃತಿಕ ಕಾಳಜಿ ಎರಡೂ ಅನನ್ಯ. ಪರಂಪರೆಯ ಕುರಿತು ಗೌರವ ಹಾಗೂ ಆಧುನಿಕ ರೀತಿ–ನೀತಿಗಳ ಬಗ್ಗೆ ಕುತೂಹಲ, ಅಷ್ಟೇ ಆದರ ಹಾಗೂ ಎರಡನ್ನೂ ಸರಿದೂಗಿಸುವ ಪ್ರಗತಿಪರಮನಸ್ಸು ಅವರದು. ಇದೇ ಭಾರತೀಯ ಸಂಸ್ಕೃತಿ ಎಂದು ಅವರು ನಂಬಿದ್ದಾರೆ. ಹಾಗಾಗಿಯೇ ಶಿಕ್ಷಣ ಕುರಿತ ಅವರ ಚಿಂತನೆಗಳು ಅಪೂರ್ವ ಎನಿಸುತ್ತವೆ. ಶಿಕ್ಷಣವೆಂಬುದು ಉದ್ಯೋಗಕ್ಕೆ ಸೇತು ಮಾತ್ರವಲ್ಲ, ಅದು ಸ್ವಾನುಭವ ವಿಸ್ತಾರಕ್ಕೂ, ಸಂಸ್ಕೃತಿ ಕುರಿತ ಕಾಳಜಿಗೂ ಅನುಕೂಲ ಮಾಡಿಕೊಡಬೇಕೆಂಬುದು ಅವರ ಬಯಕೆ. ತನ್ನ ಭಾಷಣಗಳಲ್ಲಿ, ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳಲ್ಲಿರುವವರನ್ನು ಉದ್ದೇಶಿಸಿ ಆಡುವ ಮಾತುಗಳಲ್ಲಿ ಇಂಥ ಚಿಂತನೆಗಳನ್ನು ಅವರು ಹಂಚಿಕೊಳ್ಳುತ್ತಾರೆ. ಸಾಂಸ್ಕೃತಿಕ ಕಾಳಜಿಯ ಕಾರ್ಯಕ್ರಮಗಳನ್ನು ಶಿಕ್ಷಣ ಸಂಸ್ಥೆಗಳು ಹಮ್ಮಿಕೊಂಡಾಗ ತನ್ನ ನೈತಿಕ ಹಾಗೂ ಆರ್ಥಿಕ ಬೆಂಬಲ ನೀಡುತ್ತ ಬಂದಿದ್ದಾರೆ.

1992ರಲ್ಲಿ ನಾವು ವಿಜಯಾ ಕಾಲೇಜಿನಲ್ಲಿ ನಮ್ಮ ಜಾನಪದ ಸಂಘದ ಉದ್ಘಾಟನೆಗೆ ಅವರನ್ನು ಕರೆದಿದ್ದೆವು. ನಮ್ಮ ಸಂಘದ ಉದ್ದೇಶ ಅವರಿಗೆ ಸಂತೋಷ ತಂದಿತ್ತು. ಸಾಂಸ್ಕೃತಿಕ ಕಾಳಜಿಯೊಂದಿಗೆ ಇಂಥ ಸಾಂಸ್ಕೃತಿಕ ಮಧ್ಯವರ್ತಿಗಳನ್ನು, ಸಾಧಕರನ್ನು, ಹರಿಕಾರರನ್ನು ಗುರುತಿಸಿ ಗೌರವಿಸುವ ಕೆಲಸವೂ ಆಗಬೇಕು ಎಂಬ ತನ್ನ ಬಯಕೆಯನ್ನು ಅಂದು ಅವರು ವ್ಯಕ್ತಪಡಿಸಿದರು. ಇಂಥ ಕೆಲಸಕ್ಕೆ ಮುಂದಾದ ಅಧ್ಯಾಪಕರ ಕಾಳಜಿಯನ್ನು ಪ್ರಶಂಸಿಸಿದರು. ಇಂಥ ಅಧ್ಯಾಪಕರನ್ನು ಹಿಂಜರಿಯುವಂತೆ ಮಾಡಬಾರದು, ಅವರಿಗೆ ಬೆಂಬಲ ಸಿಗಬೇಕು ಎಂದು ಅವರು ಹೇಳಿದ್ದು ನೆನಪಿದೆ. ಆಮೇಲೆ ಈ ಸಂಘದ ಅಧ್ಯಾಪಕ ಸಲಹೆಗಾರನಾಗಿ ಸುಮಾರು ಒಂಬತ್ತು ವರ್ಷಗಳ ಕಾಲ ಕೆಲಸ ಮಾಡಿದೆ. ಪ್ರತಿವರ್ಷ ವಿ.ವಿ. ಮಟ್ಟದ ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಿದ್ದೆವು. ಊರಿನ ಪ್ರಮುಖ ಜನಪದ ಕಲಾವಿದರನ್ನು ಸಮ್ಮಾನಿಸುತ್ತಿದ್ದೆವು. ಅವರಿಂದ ಪ್ರಾತ್ಯಕ್ಷಿಕೆಗಳನ್ನು ಇರಿಸಿಕೊಳ್ಳುತ್ತಿದ್ದೆವು. ಇಂಥ ಕಾರ್ಯಕ್ರಮಗಳಿಗೆ ಅವರು ತುಂಬು ಸಹಕಾರ ನೀಡಿದರು. ಕಲಾವಿದರ ಸಮ್ಮಾನಕ್ಕಾಗಿ ಶಾಲು, ಹಣ್ಣು ಹಂಪಲು, ಸಮ್ಮಾನ ಪತ್ರಗಳ ಖರ್ಚು–ವೆಚ್ಚಗಳನ್ನು ತಾವೇ ಭರಿಸುತ್ತಿದ್ದರು. ಕೆಲವೊಮ್ಮೆ ಮಧ್ಯಾಹ್ನದ ಭೋಜನದ ವೆಚ್ಚವೂ ಅವರದೇ. ಶಿಕ್ಷಣ ಸಂಸ್ಥೆಯ ಬೆಳವಣಿಗೆ, ಸಂಸ್ಕೃತಿ ಕುರಿತ ಚಿಂತನೆಗಳ ಮೇಲಿನ ಆಸಕ್ತಿಯೇ ಇದಕ್ಕೆ ಕಾರಣವೆನ್ನಬೇಕು.

ಆಗ ಅವರು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮಂಗಳೂರು ತಾಲೂಕಿನ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಬೇಕಾಗಿದೆ ಎಂದು ಮಾರ್ಚ್ ಆರಂಭದಲ್ಲಿ ನನಗೆ ಹೇಳಿದರು. ಆ ತಿಂಗಳ 8ರಂದು ಪುನರೂರು ಹೋಟೇಲಿನಲ್ಲಿ ನಡೆದ ತಾಲೂಕು ಸಾಹಿತ್ಯಾಸಕ್ತರ ಸಭೆಯಲ್ಲಿ ನನ್ನನ್ನು ಕಾರ್ಯದರ್ಶಿಯನ್ನಾಗಿ ಅವರೇ ಘೋಷಿಸಿದರು. ಅದನ್ನು ನಿರೀಕ್ಷಿಸಿರದಿದ್ದ ನಾನು ಗಲಿಬಿಲಿಗೊಂಡೆ. 'ನಾವೆಲ್ಲ ಇದ್ದೇವೆ. ಕಿನ್ನಿಗೋಳಿಯ ಭುವನಾಭಿರಾಮ ಉಡುಪರು ನಿಮಗೆ ಸಹಾಯ ಮಾಡುತ್ತಾರೆ' ಎಂದರು. ಮಾರ್ಚ್ 22ರಂದು ವಿಜಯ ಕಾಲೇಜಿನಲ್ಲಿ ಸಮ್ಮೇಳನ ಎಂದು ಘೋಷಿಸಲಾಯಿತು. ಕೇವಲ 13 ದಿನಗಳಲ್ಲಿ ಎಲ್ಲಾ ರೀತಿಯ ತಯಾರಿಗಳಾಗಬೇಕು. ಜೊತೆಗೆ ಹಣಕಾಸಿನ ಜೋಡಣೆ ಕೂಡ ಆಗಬೇಕು. ಪುನರೂರು ಹಿಂದೆ ಮುಂದೆ ನೋಡಲಿಲ್ಲ. ಮೂಲ್ಕಿಯ

ಇತಿಹಾಸದಲ್ಲಿ ಮೊದಲ ಬಾರಿಗೆ ಎಂಬಂತೆ ಅವರ ನೇತೃತ್ವದಲ್ಲಿ ಮೂಲ್ಕಿ ಹಾಗೂ ಕಿನ್ನಿಗೋಳಿ ಪರಿಸರಗಳಲ್ಲಿನ ಮನೆ ಮನೆಗೆ ತೆರಳಿ ಧನಸಂಗ್ರಹ ಮಾಡಲಾಯಿತು. ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ ನೀಡುತ್ತಲೇ ಜನಸಾಮಾನ್ಯರಲ್ಲಿ ಸಾಹಿತ್ಯದ ಕುರಿತು ಜಾಗೃತಿಯನ್ನು ಮೂಡಿಸಲಾಯಿತು. ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿಯವರಿಂದ ಉದ್ಘಾಟನೆ ಹಾಗೂ ಮಂಗಳೂರಿನ ಅನಂತರಾಮರಾವ್ ರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಯಾವುದೇ ಕೊರತೆಯಿಲ್ಲದೆ ಜರುಗಿತು. ವಸ್ತುಪ್ರದರ್ಶನ, ಚಿತ್ರಪ್ರದರ್ಶನ, ಪುಸ್ತಕ ಪ್ರದರ್ಶನ ಹಾಗೂ ಮಾರಾಟದೊಂದಿಗೆ ಅತ್ಯಂತ ಯಶಸ್ವಿಯಾಗಿ ಮೂಲ್ಕಿಯ ಆಸುಪಾಸಿನ ಜನಸಾಮಾನ್ಯರೆಲ್ಲರೂ ಬೆಳಗ್ಗೆಯಿಂದ ಸಂಜೆವರೆಗೂ ಬಹಳ ಮುತುವರ್ಜಿಯಿಂದ ಪಾಲ್ಗೊಂಡಿದ್ದ ಸಾಹಿತ್ಯ ಸಮ್ಮೇಳನ ಇದಾಯಿತು.

ಸಾಹಿತ್ಯ-ಶಿಕ್ಷಣ ರಂಗದ ಆಸಕ್ತರನ್ನು ಪುನರೂರು ಅವರು ಗೌರವಿಸುತ್ತಿರುವ ರೀತಿ ಇತರರಿಗಿಂತ ಭಿನ್ನವಾದುದು. ನಾಳೆ ಇಂಥಲ್ಲಿ ಸಮ್ಮೇಳನ ಅಥವಾ ಶೈಕ್ಷಣಿಕ ಸಮಾವೇಶ; ನಾನು ಹೋಗಲಿಕ್ಕಿದೆ; ನೀವು ಬರುವುದಿದ್ದರೆ ನಾಳೆ ಇಂತಿಷ್ಟು ಹೊತ್ತಿಗೆ ಸಿದ್ಧವಾಗಿರಿ ಎಂದು ಹೇಳಿ, ತಮ್ಮ ವಾಹನದಲ್ಲಿ ನಿಮ್ಮನ್ನು ಕರೆದೊಯ್ಯುತ್ತಾರೆ. ಅಲ್ಲಿ ಭೇಟಿಯಾಗುವ ಗಣ್ಯರಿಗೆಲ್ಲ ನಿಮ್ಮ ಪರಿಚಯ ಮಾಡಿಸುತ್ತಾರೆ. ತಾನು ಹೋಗುವೆಡೆಗೆಲ್ಲ ನಿಮ್ಮನ್ನೂ ಒಯ್ಯುತ್ತಾರೆ. ಊರಿಗೆ ಮರಳುವಾಗ ನಿಮ್ಮನ್ನು ಜೊತೆಯಲ್ಲೇ ಕರೆದು ತರುತ್ತಾರೆ. ನಿಮ್ಮ ಮನೆಯವರೆಗೆ ತಲುಪಿಸಿಬಿಡುತ್ತಾರೆ. ಅವರೊಂದಿಗೆ ಹೀಗೆ ಎಷ್ಟೋ ಬಾರಿ ಪಯಣಿಸಿದ್ದೇನೆ. ನನ್ನಂತೆ ಅನೇಕರ ಅನುಭವವೂ ಇದೇ.

ಪುನರೂರು ಅವರ ಇನ್ನೊಂದು ಗುಣ ಅವರ ಪುಸ್ತಕ ಪ್ರೀತಿ! ಸಾಹಿತ್ಯ ಕೃತಿಗಳನ್ನು ಹೊರತರುವವರಿಗೆ ಅವರ ಸಹಾಯ ಇದ್ದೇ ಇದೆ. ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಅವರು ಒತ್ತಿ ಹೇಳುವ ಮಾತು ಇದು: ಪುಸ್ತಕ ಕೊಂಡು ಓದಬೇಕು; ಏಕೆಂದರೆ ಪುಸ್ತಕ ಪ್ರಕಟಣೆ ಒಂದು ದುಬಾರಿ ಕೆಲಸ. ಜೊತೆಗೇ ಅವರು ಬರಹಗಾರರನ್ನು ತಮ್ಮದೇ ರೀತಿಯಲ್ಲಿ ಪ್ರೋತ್ಸಾಹಿಸುತ್ತಾರೆ ಕೂಡ. ತಮಗೆ ಸಿಗುವ ಸಾಹಿತ್ಯ ಸಮ್ಮೇಳನಗಳ ಸಂಸ್ಮರಣ ಗ್ರಂಥಗಳನ್ನು, ಇನ್ನಿತರ ಪುಸ್ತಕಗಳನ್ನು, ಸಾಕ್ಷಿ, ಸಂಕ್ರಮಣ ಮೊದಲಾದ ಸಾಹಿತ್ಯ ಪತ್ರಿಕೆಗಳನ್ನು ಆತ್ಮೀಯರಾದವರಿಗೆ, ಮುಖ್ಯವಾಗಿ ಓದಿನಲ್ಲಿ ಪ್ರೀತಿ ಇರುವವರಿಗೆ ಕೈಯೆತ್ತಿ ನೀಡುತ್ತಾರೆ. ಅವರ ಸಾಹಿತ್ಯ ಸೇವೆಯ ಇನ್ನೊಂದು ಬಗೆ ಎಂದರೆ ಪುಸ್ತಕಗಳ ಮಾರಾಟ. ಕಾಲೇಜಿನಲ್ಲಿ ಅಥವಾ ಬೇರೆಡೆಗೆ ಸಾಹಿತ್ಯದ ಕಾರ್ಯಕ್ರಮಗಳಿಗೆ ಅವರು ಬರುತ್ತಾರೆಂದರೆ ಅವರ ಕಾರಿನಲ್ಲಿ ಸಾಹಿತ್ಯಿಕ ಪುಸ್ತಕಗಳು ಮಾರಾಟಕ್ಕಾಗಿ ಇವೆಯೆಂದು ಅರ್ಥ. ಅವರ ಜೊತೆಗೇ ಒಬ್ಬ ಹುಡುಗನೂ ಬಂದಿರುತ್ತಾನೆ. ಅವನು ಆ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟು ಮಾರಾಟಕ್ಕೆ ನಿಲ್ಲುತ್ತಾನೆ. ಪರಿಷತ್ತಿನ ಕೃತಿಗಳು ಮಾತ್ರವಲ್ಲ, ಇತರ ಪ್ರಕಾಶಕರ/ಲೇಖಕರ ಸ್ವಪ್ರಕಾಶಿತ ಕೃತಿಗಳನ್ನೂ ಹೀಗೆ ಅವರು ಎಲ್ಲೆಲ್ಲಿಗೋ ಒಯ್ದು ಮಾರಾಟ ಮಾಡಿದ್ದನ್ನು ಕಂಡಿದ್ದೇನೆ. ಇಂಥ ಕೆಲಸ ಅವರಿಗೆ ತುಂಬ ಸಂತೋಷದಾಯಕ.

ಶಿಕ್ಷಣ ಸಂಸ್ಥೆಯ ಸರ್ವಾಂಗೀಣ ಪ್ರಗತಿಯ ಕುರಿತು ಅವರಿಗಿರುವ ಕಾಳಜಿ ಶ್ಲಾಘನೀಯವಾದದ್ದು. ವಿಜಯಾ ಕಾಲೇಜಿಗೆ ಸರಿಯಾದ ಆಟದ ಮೈದಾನವಿರಲಿಲ್ಲ. ಕಾಲೇಜಿನ ಹಿಂಭಾಗದಲ್ಲಿ ದೊಡ್ಡ ಮೈದಾನದಂತಹ ಗದ್ದೆಗಳಿದ್ದುವು. ಅವನ್ನು ಸಮತಟ್ಟುಗೊಳಿಸುವ ಪ್ರಸ್ತಾವ ಹಲವಾರು ವರುಷಗಳಿಂದ ನನೆಗುದಿಗೆ ಬಿದ್ದಿತ್ತು. ಪುನರೂರು ಆ ಪ್ರಸ್ತಾವಕ್ಕೆ ಜೀವ ಬರಿಸಿದರು. ಸಂಬಂಧಿತ ವಾರೀಸುದಾರರನ್ನು ಸಂಪರ್ಕಿಸಿದಾಗ ಕೈಗೆಟುಕುವ ಬೆಲೆಗೆ ಕೊಂಡುಕೊಳ್ಳುವಂತೆ ಮಾಡಿದರು.

ಪುನರೂರುರವರು ಲಯನ್ಸ್ ಸಂಸ್ಥೆಯ ಪರಮೋಚ್ಚ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಆ ಪ್ರಶಸ್ತಿಯ ಹಿಂದೆ ಅವರ ಅನನ್ಯ ಸಾಧನೆಯಿದೆ. ಡಾ|| ಎಂ.ಸಿ. ಮೋದಿಯವರಿಂದ ಮೂಲ್ಕಿಯಲ್ಲಿ ದಾಖಲೆ

ಸಂಸ್ಥೆಯಲ್ಲಿ ಕಣ್ಣು ಪರೀಕ್ಷೆ ಹಾಗೂ ಶಸ್ತ್ರಚಿಕಿತ್ಸೆ ನಡೆಯಿತು. ಪುನರೂರು ಲಯನ್ಸ್ ಸಂಸ್ಥೆಯ ಜಿಲ್ಲಾ ಗವರ್ನರ್ ಆಗಿದ್ದಾಗ ಅವರೊಂದಿಗೆ ದುಡಿದಿದ್ದ ವಿಜಯ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದ ದಿ|| ಪ್ರೊ|| ರಾಡ್ರಿಗಸ್‌ರವರು ಅವರ ಮಾತುಗಳಿವು- 'ಪುನರೂರುರವರು ಲಯನ್ಸ್ ಸಂಸ್ಥೆಯನ್ನು ಸೇರಿ ಆ ಸಂಸ್ಥೆಗೆ ಸೇವಾ ತತ್ಪರತೆಯ ಹೊಸ ಮುಖವನ್ನು ನೀಡಿದರು. ಅವರೊಂದಿಗೆ ಕೆಲಸ ಮಾಡುವುದು ಒಂದು ಹೊಸ ಅನುಭವ. ಹಲವಾರು ಜಿಲ್ಲಾ ವ್ಯಾಪ್ತಿಯನ್ನೊಳಗೊಂಡ ಲಯನ್ಸ್ ಜಿಲ್ಲಾ ಗವರ್ನರ್ ಆಗಿದ್ದರೂ ಅವರು ತಳಮಟ್ಟದ ಕೆಲಸ ಕಾರ್ಯಗಳನ್ನ ನಿರ್ವಹಿಸುವಲ್ಲಿ ಮುಜುಗರ ಪಟ್ಟವರಲ್ಲ.'

ಮೂಲಭೂತವಾಗಿ ಉದ್ಯಮಿಯಾಗಿರುವ ಪುನರೂರು, ಆರಂಭದಲ್ಲಿ ಸಾಹಿತ್ಯೇತರ ಚಟುವಟಿಕೆಗಳಲ್ಲಿ, ಸಾಮಾಜಿಕ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ನಿಧಾನವಾಗಿ ಶೈಕ್ಷಣಿಕ ಹಾಗೂ ಸಾಹಿತ್ಯದ ಕೆಲಸಗಳಲ್ಲಿ ಸಾರ್ಥಕ್ಯ ಕಂಡವರು.

ಯಾವುದೇ ಕೆಲಸಗಳಲ್ಲೂ ಸಮರ್ಪಣಾ ಭಾವದಿಂದ ತೊಡಗಿಸಿಕೊಳ್ಳುತ್ತಾರೆ ಪುನರೂರು. ಬಡವರ ಕುರಿತಾದ ಅವರ ಕಾಳಜಿ ಜಾತಿ ಮತ ಭೇದವಿಲ್ಲದ್ದು. ಪುಸ್ತಕ ಪ್ರಕಟನೆಗೋ, ಶಿಕ್ಷಣಕ್ಕೋ, ಮನೆ ಕಟ್ಟಿಸುವುದಕ್ಕೋ ಕಡಿಮೆ ಆದಾಯವಿರುವವರು ಹೋಗಿ ಕೇಳಿದರೆ, ಅವರ ಅಗತ್ಯಕ್ಕೆ ತಕ್ಕಂತೆ ಸ್ಪಂದಿಸುವ ರೀತಿಯನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆರ್ಥಿಕವಾಗಿ ಮಾತ್ರವಲ್ಲದೆ, ಬೇರೆ ರೂಪದಲ್ಲೂ ಸಹಾಯ ಮಾಡುವ ಸ್ವಭಾವ ಅವರದ್ದು. ಕಾರ್ಯಕ್ರಮಗಳಿಗೆ ಕರೆದಾಗ ಪ್ರತಿಫಲಾಪೇಕ್ಷೆಯಿಲ್ಲದೆ ಹೋದಾರು; ಮಾತ್ರವಲ್ಲ ತಮ್ಮ ಪಾಲಿನ ಕಾಣಿಕೆಯನ್ನೂ ನೀಡಿಯಾರು. ಅವರ ಕ.ಸಾ. ಪರಿಷತ್ತಿನ ರಾಜ್ಯಾಧ್ಯಕ್ಷರಾದ ಮೇಲೆ ನಾನು ಗಮನಿಸಿದಂತೆ, ಹಲವರಿಗೆ ಸಾಹಿತ್ಯದ ಕೈಂಕರ್ಯಕ್ಕೆ ಅವಕಾಶವಿತ್ತಿದ್ದಾರೆ. ವ್ಯವಹಾರದಲ್ಲಿ ಸಮರ್ಥರಾಗಿರುವ ಅವರಿಗೆ ಆಡಳಿತ ವ್ಯವಸ್ಥೆಯ ಪೂರ್ಣ ಅರಿವಿದೆ. ತಪ್ಪು ಮಾಡಿದವರಿಗೆ ತಮ್ಮದೇ ರೀತಿಯಲ್ಲಿ, ಕೆಲವು ವೇಳೆ ನಿಷ್ಠುರವಾಗಿ ತಿಳಿ ಹೇಳುತ್ತಾರೆ.

ಕಳೆದ 14 ವರುಷಗಳಲ್ಲಿ ಅವರನ್ನು ಹತ್ತಿರದಿಂದ ನೋಡಿರುವ ನಾನು ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಕಂಡಿದ್ದೇನೆ; ಎಂದೂ ಬದಲಾಗದಿರುವ ಅವರ ನಿಲುವುಗಳನ್ನು ಗಮನಿಸಿದ್ದೇನೆ. ಚಾಣಾಕ್ಷತನ, ವ್ಯವಹಾರ ಜ್ಞಾನ, ಸಾಹಿತ್ಯಪ್ರೀತಿ, ಬಡವರ ಕುರಿತಾದ ಕಾಳಜಿ, ಶೈಕ್ಷಣಿಕ ಆಸಕ್ತಿಗಳು ಮುಂತಾದವುಗಳು ಅವರನ್ನು ಸದಾ ಚಟುವಟಿಕೆಯಿಂದ ಇರುವಂತೆ ಮಾಡಿವೆ. 'ಕಾಯಕವೇ ಕೈಲಾಸ' ಎಂಬ ಇಂಥ ಜೀವನ ಮುಖೀ ಧೋರಣೆಗಳಿಂದಾಗಿ ಅವರು ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ.

ಭಾಗ: ಎರಡು

ಹೀಗಿದ್ದಾರೆ ಪುನರೂರು

ಸಮಾಜಸೇವೆಗೆ ಸ್ವಂತ ಛಾಪು

□ ಪುಂಡಲೀಕ ಮಲ್ಯ



ಪುನರೂರು ತಾಳಿಪ್ಪಾಡಿ ಗ್ರಾಮದಲ್ಲಿಯೇ ಚಿಕ್ಕ ಊರು. ವಿಶ್ವನಾಥ ದೇವಸ್ಥಾನದ ದೆಸೆಯಿಂದ ಪ್ರಾಮುಖ್ಯ ಪಡೆದ ಊರು. ವಿಶ್ವನಾಥ ದೇವರನ್ನು ಆರಾಧ್ಯ ಮೂರ್ತಿಯಾಗಿ ಹೊಂದಿದ್ದ ಪುನರೂರಿನ ಪಟೇಲ ಮನೆತನದಲ್ಲಿ ಪರಿಕ್ಷಿತ್‌ರಾವ್ ಯಾ ಪುನರೂರು-ಇವರ ಜನನ.

ಬಾಲ್ಯದಲ್ಲಿ ಹತ್ತಿರದ ಶಿಮಂತೂರು ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಪೂರೈಸಿದ ಬಳಿಕ ಪರಿಕ್ಷಿತ್ತರು ದೂರದ ಪಾಂಪೈ ಹೈಸ್ಕೂಲಿಗೆ ಪ್ರೌಢ ಶಿಕ್ಷಣಕ್ಕೆ ಸೇರ್ಪಡೆಗೊಂಡರು. ಮನೆಯಿಂದ ಪ್ರತಿನಿತ್ಯ ಕಾಲ್ನಡಿಗೆಯಿಂದ ಶಾಲೆಗೆ ಹೋಗಲು ಐದು ಮೈಲು, ಬರಲು ಐದು ಮೈಲು-ಹೀಗೆ ಪಯಣ. ವಾಹನ ಸೌಕರ್ಯ ಇಲ್ಲದಿದ್ದ ಆ ಕಾಲದಲ್ಲಿ ಪಾಂಪೈ ಹೈಸ್ಕೂಲಿನ ಆಸುಪಾಸಿನ ಪ್ರದೇಶಗಳಾದ (ಅವು 5-6 ಮೈಲು ದೂರ ಇದ್ದರೂ) ಪುನರೂರು, ಮುಂಡ್ಕೂರು, ಕಡಂದಲೆ, ಕಟೀಲು, ಎಕ್ಕಾರುಗಳ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣಕ್ಕಾಗಿ ಪಾಂಪೈ ಹೈಸ್ಕೂಲಿಗೇನೇ ಬರಬೇಕಿತ್ತು. ಮಧ್ಯಾಹ್ನ ಊಟಕ್ಕೆ, ಜೊತೆಗೆ ತಂದ ಬೆಳಗ್ಗಿನ ಗಂಜಿ/ಅನ್ನದ ಬುತ್ತಿಯೇ ಹೆಚ್ಚಿನ ವಿದ್ಯಾರ್ಥಿಗಳ ಹಸಿವನ್ನು ತಣಿಸಬೇಕಾಗಿದ್ದರೂ, ಬಹಳ ಮಡಿವಂತಿಕೆಯ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಪರಿಕ್ಷಿತ್ತರಿಗೆ ಮಾತ್ರ ಅದು ನಿಷಿದ್ಧ. ಆದ

402, ರಾಜಮಹಲ್ ಅಪಾರ್ಟ್‌ಮೆಂಟ್ಸ್, ಬಲ್ಲಾಳ್‌ಭಾಗ, ಮಂಗಳೂರು-575 003

ಕಾರಣ ಮಧ್ಯಾಹ್ನ ಹೊಟ್ಟೆಗೆ ಹಿಟ್ಟಿಲ್ಲ. ಸಾಯಂಕಾಲ ಮನೆಗೆ ಮರಳಿದ ಬಳಿಕವೇ ಹಸಿವೆಯ ಉಪಶಮನ ನಡೆಯಬೇಕಿತ್ತು.

ಮೇಲೆ ಹೇಳಿದ ಪರಿಸ್ಥಿತಿಯೇ ಹರಿಕೃಷ್ಣ ಪುನರೂರು ಅವರ ಇಂದಿನ ಪರೋಪಕಾರ ಬುದ್ಧಿ, ಬಡ ಜನರ- ವಿಶೇಷವಾಗಿ- ವಿದ್ಯಾರ್ಥಿಗಳ ಬಗ್ಗೆ ಕಾಳಜಿ, ಸಮಾಜದ ಬಹುಮುಖೀ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ- ಇವೆಲ್ಲವುಗಳಿಗೆ ಪ್ರೇರಣೆ ಎಂದು ನಾನು ಭಾವಿಸುತ್ತೇನೆ.

ಹೈಸ್ಕೂಲಿನಲ್ಲಿ ಹರಿಕೃಷ್ಣರು ಓರ್ವ ಶಿಸ್ತುಬದ್ಧ ವಿದ್ಯಾರ್ಥಿಗಳಾಗಿದ್ದರು. ಸಹಪಾಠಿ ಗೆಳೆಯರಿಗೆ ಏನಾದರೂ ತೊಂದರೆ ಯಾ ಅನ್ಯಾಯವಾಗುವಂತಿದ್ದರೆ ಮಾತ್ರ ಅವರು ಸಿಡಿದೇಳುತ್ತಿದ್ದರು. ಅವರು, ಆ ಕಾಲದಲ್ಲಿಯೇ ಓರ್ವ ಅನಧಿಕೃತ ವಿದ್ಯಾರ್ಥಿ ನೇತಾರರಾಗಿ ರೂಪಿತರಾಗಿದ್ದರು. ಒಮ್ಮೆ ತನ್ನ ಗೆಳೆಯರಿಗೆ ಅನಗತ್ಯವಾಗಿ ಕಾಟ ಕೊಡುತ್ತಿದ್ದ ಇಬ್ಬರು ಪುಂಡಾಟಿಕೆಯ ವಿದ್ಯಾರ್ಥಿಗಳಿಗೆ, ಸಭ್ಯತೆಯಿಂದ ವರ್ತಿಸಲು ವಿನಂತಿಸಿದರೂ ಕೇಳದಿದ್ದಾಗ ಕೋಪಗೊಂಡ ಹರಿಕೃಷ್ಣರು ಅವರನ್ನು ತರಾಟೆಗೆ ತೆಗೆದುಕೊಂಡು ಮುಂದೆಂದೂ ಆ ತುಂಟ ಹುಡುಗರು ಸಭ್ಯ ವಿದ್ಯಾರ್ಥಿಗಳ ಬಳಿಗೇನೇ ಬಾರದಂತಹ ರೀತಿಯಲ್ಲಿ ಶಿಕ್ಷಿಸಿದರು. ಇದು ಇಂದೂ ನನ್ನ ಸ್ಮೃತಿಪಟಲದಲ್ಲಿ ಉಳಿದಿದೆ.

ಹೈಸ್ಕೂಲು ವಿದ್ಯಾಭ್ಯಾಸದ ಬಳಿಕ ಬಹುಶಃ ವೈಯಕ್ತಿಕ ಕಾರಣಗಳಿಂದಾಗಿ ಕಾಲೇಜು ವಿದ್ಯಾಭ್ಯಾಸ ಅವರಿಂದ ದೂರ ಉಳಿಯಿತು. ಆದರೂ ಈ ಸಮಯದಲ್ಲಿ ಇತರ ಗೆಳೆಯರು ಕಾಲೇಜು ವಿದ್ಯಾಭ್ಯಾಸ ಪಡೆಯುತ್ತಿದ್ದಾಗ, ಹರಿಕೃಷ್ಣರು ಉದ್ಯೋಗ ಅರಸುತ್ತ ಪರವೂರಿಗೆ ಹೋಗಿ ಸಂಪಾದಿಸಿದ ವ್ಯವಹಾರ ಜ್ಞಾನ ಬಹುಶಃ ಹೆಚ್ಚಿನ ಸಹಪಾಠಿಗಳ ಶೈಕ್ಷಣಿಕ ಜ್ಞಾನವನ್ನೂ ಮೀರಿಸಿತ್ತು. ಪುನಃ ತನ್ನೂರಿಗೆ ಬಂದ ಅವರು ಪುನರೂರಿನಲ್ಲಿಯೇ ಯುವಕರನ್ನು ಸಂಘಟಿಸಿದರು. ಅಣ್ಣ ಪಟೇಲ ವೆಂಕಟೇಶರಾಯರ ಜೊತೆ ಸೇರಿ ವಿಶ್ವನಾಥ ದೇವಸ್ಥಾನದ ಕೆಲಸಗಳೂ ಸೇರಿದಂತೆ, ಸಮಾಜಕ್ಕೆ ಬೇಕಾದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿದರು. ಲಯನ್ಸ್ ಸೇವಾ ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದು ಸಹಸ್ರಾರು ನೇತ್ರಹೀನ ಸಮಾಜ ಬಾಂಧವರಿಗೆ ದೃಷ್ಟಿ ಪಡೆಯಲು ನೆರವಾದರು. ಲಯನ್ಸ್ ಜಿಲ್ಲಾ ಗವರ್ನರ್ ಆಗಿ ಅವರು ಕೈಗೊಂಡ ಸಮಾಜ ಸೇವಾ ಕಾರ್ಯಗಳು ಕಿನ್ನಿಗೋಳಿ-ಮೂಲ್ಕಿ ಪರಿಸರದಲ್ಲಿ ನಿತ್ಯ ಪ್ರಶಂಸನೀಯವಾಗಿವೆ.

ಐದು ವರ್ಷಗಳ ಹಿಂದೆ ನಾನು ಬೆಂಗಳೂರಿಗೆ ಹೋದಾಗ ಪದ್ಮಶ್ರೀ ಡಾ. ಎಂ.ಸಿ. ಮೋದಿಯವರನ್ನು ಭೇಟಿಯಾದೆ. ನನ್ನನ್ನು ಕಾಣುತ್ತಲೇ ಮೋದಿಯವರು ಮೊದಲಲ್ಲಿ ಕೇಳಿದುದು ಕಿನ್ನಿಗೋಳಿಯ ಜನಪ್ರಿಯ ಉದ್ಯಮಿ ಲಯನ್ ಶಾಂತಾರಾಮ ರಾಯರನ್ನು ಹಾಗೂ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಬಗ್ಗೆ. ಈ ಇಬ್ಬರ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನು ಮೋದಿಯವರ ಬಾಯಿಯಿಂದಲೇ ಕೇಳಿದ ನಾನು, ನನ್ನ ಸಹಪಾಠಿ ಹರಿಕೃಷ್ಣರ ಬಗ್ಗೆ ಬಹಳ ಅಭಿಮಾನಗೊಂಡೆ.

ಅವರ ಸಾಹಿತ್ಯಾರಾಧನೆ ಕಾರ್ಯ ಸುಮಾರು ನಲವತ್ತು ವರ್ಷಗಳ ಹಿಂದಿನಿಂದಲೇ ಪ್ರಾರಂಭವಾಗಿದೆ. ಕಿನ್ನಿಗೋಳಿಯ ಹೆಮ್ಮೆಯ 'ಯುಗಪುರುಷ' ಸಂಸ್ಥೆಯ ಎಲ್ಲಾ ಸಾಹಿತ್ಯಿಕ-ಸಾಂಸ್ಕೃತಿಕ ಕಾರ್ಯಕ್ರಮಗಳ ಯಶಸ್ವೀ ನಿರ್ವಹಣೆಗೆ ಹರಿಕೃಷ್ಣರ ಕೊಡುಗೆ ಅಗಾಧ. ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿದವನೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಬೇಕು ಎಂಬ ಕೆಲವು ಟೀಕೆಗಳು ಕೇಳಿಬರುತ್ತವೆ. ಸಾಹಿತ್ಯ ರಚಿಸದಿದ್ದರೂ, ಹಲವಾರು ಸಾಹಿತಿಗಳಿಗೆ ಪ್ರೋತ್ಸಾಹ ನೀಡಿ ಬೆಲೆ ಬಾಳುವ ಕೃತಿಗಳು ಬೆಳಕಿಗೆ ಬರುವಂತೆ ಸಹಕರಿಸಿದ ಹರಿಕೃಷ್ಣರ ಕನ್ನಡ ಸಾಹಿತ್ಯ ಸೇವೆ ಮೆಚ್ಚತಕ್ಕದ್ದು. ಅನುಕರಣೀಯವೂ ಹೌದು. ಕಳೆದ ದಶಕದಲ್ಲಿ ಅವರ ನೇತೃತ್ವದಲ್ಲಾದ ಸಾಹಿತ್ಯ ಸಮಾರಂಭ ರಸದೌತಣವನ್ನು ಕನ್ನಡಿಗರು ಸವಿದಷ್ಟು ಈ

ಹಿಂದೆ ಎಂದೂ ನಡೆದಿರಲಿಕ್ಕಿಲ್ಲ ಎಂದೇ ನನ್ನ ಭಾವನೆ. ಅಂತಲೇ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರ ಅಧ್ಯಕ್ಷತೆ ಸೂಕ್ತವೂ ಆಗಿದ್ದು ಸಮರ್ಥನೆಯಿಂದ ಕೂಡಿದೆ ಅಂತಲೇ ಅವರು ಕನ್ನಡ ಡಿಂಡಿಮವನ್ನು ಬಾರಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಯಾವುದೇ ಹಣದ ಪ್ರಲೋಭನೆ ಇಲ್ಲದೆ, ಸಾಹಿತ್ಯ ಕ್ಷೇತ್ರಕ್ಕೆ ಮೀಸಲಾಗಿದ್ದ ಹಣವನ್ನು ಸಂಪೂರ್ಣವಾಗಿ ಸಾಹಿತ್ಯ ಪರಿಷತ್ತಿನ ಉದ್ದೇಶಗಳ ಅನುಷ್ಠಾನಕ್ಕೇನೇ ಉಪಯೋಗಿಸುವುದು ಮಾತ್ರವಲ್ಲ, ದಾನಿಗಳ ಸಹಕಾರದಿಂದ, ಭಾಷಾಭಿವೃದ್ಧಿಯ ದಿಸೆಯಲ್ಲಿ ಹಲವಾರು ದತ್ತಿನಿಧಿಗಳನ್ನು ಸ್ಥಾಪಿಸಿದುದು ಬಹುಶಃ ಕರ್ನಾಟಕದಲ್ಲಿ ಹಿಂದೆಂದೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಯಾ ಇತರೆ ಪದಾಧಿಕಾರಿಯಾಗಿ ಯಾರೂ ಮಾಡಿರಲಿಕ್ಕಿಲ್ಲ. ಹರಿಕೃಷ್ಣ ಪುನರೂರು ಅವರನ್ನು ರಾಜ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಆರಿಸಿದವರು ಧನ್ಯರು!

ಕಿನ್ನಿಗೋಳಿ ದಕ್ಷಿಣ ಕನ್ನಡದ ಚಿಕ್ಕ ಊರು. ಇಲ್ಲಿನ ನಾಗರಿಕರು ಅನ್ಯೋನ್ಯ ಸಹಕಾರ, ಪ್ರೀತಿ, ವಿಶ್ವಾಸಗಳಿಂದ ಯಾವುದೇ ಜಾತಿ, ಮತ, ಪಂಥ ಭೇದವಿಲ್ಲದೆ ಜೀವನ ಸಾಗಿಸುವ ಆದರ್ಶ ನಾಗರಿಕರೆಂದರೂ ಸರಿ. ರಾಷ್ಟ್ರಕ್ಕೆ, ನಾಡಿಗೆ ಇಲ್ಲಿನವರು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುವರು. ಸಾಹಿತ್ಯ-ಸಾಂಸ್ಕೃತಿಕ ರಂಗಗಳಲ್ಲಿ ದಿ| ಕೊಡೆತ್ತೂರು ಅನಂತ ಪದ್ಮನಾಭ ಉಡುಪರಿಂದ ಸ್ಥಾಪಿತವಾದ 'ಯುಗಪುರುಷ' ಸಂಸ್ಥೆಯ ಸೇವಾಪಾತ್ರ ಸರ್ವವಿದಿತ. ಅಂದಿನ ಮದ್ರಾಸ್ ಸರಕಾರದಿಂದ ಪುರಸ್ಕೃತರಾಗಿದ್ದ ಕವಿ ದಿ|| ಅ.ಗೌ. ಕಿನ್ನಿಗೋಳಿಯವರ ಸಾಹಿತ್ಯ ಸೇವೆ ಉಲ್ಲೇಖನೀಯ. ಕನ್ನಡಕ್ಕಾಗಿ ದುಡಿಯುತ್ತಿರುವ ಕೆ. ಗಣೇಶ ಮಲ್ಯರ ಸಾಹಿತ್ಯ ಸೇವೆ ಅನನ್ಯವಾದುದು. ಅಂತಾರಾಷ್ಟ್ರೀಯ ಖ್ಯಾತಿಯ ವೈದ್ಯಕೀಯ ಸಂಶೋಧಕ, ದಿವಂಗತ ಡಾ. ಕೆ.ಎನ್. ಉಡುಪ, ಬೆಂಗಳೂರಿನ ನಾರಾಯಣ ಹೃದಯಾಲಯದ ಆದರ್ಶ ನಿರ್ದೇಶಕರಾಗಿರುವ ಹೃದಯತಜ್ಞ ಡಾ. ದೇವಿಪ್ರಸಾದ್ ಶೆಟ್ಟಿ ಅವರೂ ಕಿನ್ನಿಗೋಳಿಯವರೇ. ಡಾ|| ಶೆಟ್ಟಿ ಪದ್ಮಶ್ರೀ ವಿಜೇತರು. ಅದು ಈ ಊರವರಿಗೊಂದು ಹೆಮ್ಮೆ.

ತನ್ನ ಗಳಿಕೆಯಲ್ಲಿನ ಶೇಕಡಾ 90ರಷ್ಟನ್ನು ಸಮಾಜ ಸೇವೆಗೆ ಮುಡಿಪಾಗಿಟ್ಟು ಅಹರ್ನಿಶಿ ದುಡಿಯುತ್ತಿರುವ ಅರವತ್ತರ ತರುಣ ಹರಿಕೃಷ್ಣ ಪುನರೂರು ಇವರೂ ಕಿನ್ನಿಗೋಳಿಯವರೆನ್ನುವುದು ಅವರ ಸಹಪಾಠಿ, ಕಿನ್ನಿಗೋಳಿಯವನಾದ ನನಗೂ ಬಹಳ ಹೆಮ್ಮೆಯ ವಿಷಯ. ಭಗವಂತನು, ಅವರ ಜೀವನದುದ್ದಕ್ಕೂ, ತಾನು ಕೈಗೊಂಡಿರುವ ಸಮಾಜ, ನಾಡು-ನುಡಿಗಳ ಸೇವೆಯನ್ನು ಮುಂದುವರಿಸಲು ಅನುಕೂಲಕರವಾದ ಆರೋಗ್ಯ, ಆಯುಷ್ಯ, ಪರಿಸರ, ಜನ ಬೆಂಬಲಗಳನ್ನು ಮುಂದೆಯೂ ಕರುಣಿಸಿ ಅವರು ಜೀವನದ ಶತಮಾನೋತ್ಸವವನ್ನು ಆಚರಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಧರ್ಮ–ಶಿಕ್ಷಣ–ಸಾಹಿತ್ಯ–ಸಂಸ್ಕೃತಿ ಪ್ರೀತಿ

☐ ಕೊಡೆತ್ತೂರು ಭುವನಾಭಿರಾಮ ಉಡುಪ



ಅಂದಚಂದದ ನುಡಿಮುತ್ತುಗಳ ಸುರಿಮಳೆ ಗರೆಯುವವರು. ಈ ಹಿಂದೆ ಎಂತೋ ಅಂತೆಯೇ ಇಂದೂ, ಬೇರೆಡೆಗಳಲ್ಲಿ ಹೇಗೋ ಹಾಗೆಯೇ ಇಲ್ಲೂ, ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತಾರೆ. ಆದರೆ ಮೋಹಕ ಮಾತುಗಳ ಮಂಟಪಕ್ಕಿಂತಲೂ ನೆಮ್ಮದಿ ನೀಡುವ ಸತ್ಕಾರ್ಯದ ಮೂಲಕ ನೊಂದವರನ್ನು, ಕಂಬನಿಗರೆಯುವವರನ್ನು ಹುರಿದುಂಬಿಸುವವರು ಹುಡುಕಿದರೂ ದೊರಕಲೊಲ್ಲರು. ಊರು–ಕೇರಿ ನೋಡದೆ, ಜಾತಿ–ಮತ ಗಮನಿಸದೆ ಬಳಿ ಬಂದವರ ಬೇಡಿಕೆಗಳನ್ನಾಲಿಸಿ ಅವರ ಆಶೋತ್ತರಗಳನ್ನು ಈಡೇರಿಸುವಲ್ಲಿ ಅಪ್ರತಿಮರೆನಿಸಿದವರು ಧರ್ಮದರ್ಶಿ ಹರಿಕೃಷ್ಣ ಪುನರೂರು.

''ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ'' ಎಂಬ ಅಮರ ವಾಕ್ಯದ ಯಥಾರ್ಥತೆ ಮೈವೆತ್ತಂತಿರುವ ಪುನರೂರುರವರ ಕೊಡುಗೈಯ ದಾನಧರ್ಮಾದಿ ಸದ್ಗುಣಗಳು ಅನುಕರಣೀಯ. ಪ್ರಾಮಾಣಿಕವಾಗಿ ದುಡಿದು ತತ್ಪ್ರತಿಫಲವಾಗಿ ಅರ್ಜಿಸಿದ ಸಂಪತ್ತನ್ನು ಜನತಾ ಜನಾರ್ದನನ ಅರ್ಚನಾರಾಧನೆಗಳಿಗೆ ಸದ್ವಿನಿಯೋಗಿಸುವ ಮಾನ್ಯ ಪುನರೂರುರವರ ಔದಾರ್ಯವನ್ನು ಕೊಂಡಾಡಿದಷ್ಟೂ ಕಡಿಮೆ.

''ಪಟೇಲಿಕೆ'' ಎಂಬುದು ಪುನರೂರುರವರ ವಂಶಜರಿಗೆ

ಸಂಪಾದಕರು, ಯುಗಪುರುಷ ಮಾಸಪತ್ರಿಕೆ, ಅಂಚೆ ಪೆಟ್ಟಿಗೆ ನಂ.1, ಕಿನ್ನಿಗೋಳಿ–574 150, ದಕ್ಷಿಣ ಕನ್ನಡ

ಪಾರಂಪರಿಕವಾಗಿ ಬಂದ ಸ್ಥಾನ-ಮಾನ. ಅಂತಲೇ ಆ ಪಟೇಲಿಕೆಯ ಛಾಪನ್ನು ಪುನರೂರುರವರು ತನ್ನ ಬಾಲ್ಯದಿಂದಲೇ ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ. ತನ್ನ ವಿದ್ಯಾರ್ಥಿ ಜೀವನದಲ್ಲಿಯೇ ದಕ್ಷನಾಯಕತ್ವದ ಗುಣಗಳನ್ನು ಪುನರೂರುರವರು ಮೈಗೂಡಿಸಿಕೊಂಡಿದ್ದರೆಂದು ಅವರ ಗುರುಗಳೂ, ಯುಗಪುರುಷ ಸಂಸ್ಥಾಪಕರೂ ಆದ ದಿ| ಕೊ.ಅ. ಉಡುಪರು ಹತ್ತು ಹಲವು ಬಾರಿ ಅಭಿಮಾನದಿಂದ ಹೇಳಿದ್ದುಂಟು.

ಮೂರು ದಶಕಗಳಿಗಿಂತಲೂ ಮಿಕ್ಕಿ ಸುದೀರ್ಘಾವಧಿಯಲ್ಲಿ ತಾಳಿಪಾಡಿಯ ಪೊಂಪೈ ಪ್ರೌಢಶಾಲೆಯಲ್ಲಿ ಶಿಕ್ಷಕ ವೃತ್ತಿಯಲ್ಲಿದ್ದ ದಿ|| ಉಡುಪರು ಅವರು ಈ ಶಿಷ್ಯನ ಬಗ್ಗೆ ಹೇಳುತ್ತಿದ್ದ ಈ ಮಾತುಗಳನ್ನೂ ಗಮನಿಸಿ- 'ಅಸಂಖ್ಯಾತ ವಿದ್ಯಾರ್ಥಿಗಳು ಯಾವನೇ ಶಿಕ್ಷಕನಿಗೆ ಶಿಷ್ಯರಾಗಿರುವುದು ಸಹಜ. ವಿದ್ಯಾಸಂಸ್ಥೆಯೊಂದರಲ್ಲಿ ಹತ್ತು ಹಲವು ಮಂದಿ ಶಿಕ್ಷಕರಿರುವಾಗ ಯಾವನೇ ಒಬ್ಬ ಅಧ್ಯಾಪಕ ಶಿಷ್ಯನ ಒಳಿತು-ಕೆಡುಕುಗಳಿಗೆ ಕಾರಣನಾಗಲೊಲ್ಲ. ಹಾಗಾಗಿಯೇ ಪ್ರತಿಯೊಬ್ಬ ನಾಗರಿಕನಿಗೂ ಸಾರ್ವಜನಿಕರ ಋಣ ಸಲ್ಲಿಸುವಷ್ಟು ಸಲ್ಲಿಸಲಿಕ್ಕಿದೆ ಎಂದರೆ ತಪ್ಪಾಗದು. ಅಂದಾಗ, ನೂರು ಮಂದಿ ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿ ಜಾಣನೆನಿಸಿ ಸಾರ್ವಜನಿಕರೆಲ್ಲರ ಮೆಚ್ಚುಗೆಯ ಮನ್ನಣೆ ಗಳಿಸಿದರೆ, ಅಂತಹ ಸ್ಥಾನಮಾನ ಓರ್ವ ಶಿಕ್ಷಕನಿಂದಾಗಿದೆ ಎಂದು ಭಾವಿಸಿದರೆ ಅದು ತೀರಾ ಅಭಾಸಕರ. ಇಂತಹ ಪ್ರಸಂಗದಲ್ಲೂ, ನೂರು ಮಂದಿ ವಿದ್ಯಾರ್ಥಿಗಳ ಪೈಕಿ ತಾನು ಸಮಾಜದಲ್ಲಿ ಗಣ್ಯನೆನಿಸಿದ್ದರೂ, ಅಂತಹ ಸ್ಥಾನಕ್ಕೆ ಅರ್ಹನಾದುದು ತನ್ನ ವಿದ್ಯಾಗುರುಗಳ ಆಶೀರ್ವಾದದಿಂದ ಎಂದು ಹೇಳಿಕೊಳ್ಳುತ್ತಿದ್ದಾರೆ ಪುನರೂರು. ಇದಕ್ಕಿಂತ ದೊಡ್ಡ ಧನ್ಯತೆ ಗುರುವಿಗೆ ಯಾವುದಿದೆ?'

ಬಾಲ್ಯದಿಂದಲೇ ಪುನರೂರುರವರದು ದಿಟ್ಟ ಸಾಹಸೀ ಸ್ವಭಾವ. ತಾನು ಸಮಾಜದಲ್ಲಿ ಸರ್ವತಂತ್ರ ಸ್ವತಂತ್ರನಾಗಿರಬೇಕೆಂಬುದೇ ಅವರ ಬಾಳಿನ ಮೂಲ ಉದ್ದೇಶವಾಗಿತ್ತು. ಅದ್ದರಿಂದಲೇ ತನ್ನ ಜೀವನಕ್ಕೆ ಅವರು ಆರಿಸಿಕೊಂಡದ್ದು ಹೋಟೇಲ್ ಉದ್ಯಮವನ್ನು. ಪ್ರಾರಂಭದ ಕೆಲಕಾಲ ಕೇರಳದಲ್ಲಿ ಹೋಟೇಲ್ ಉದ್ಯಮಿಯಾಗಿದ್ದ ಅವರಿಗೆ ತನ್ನ ತಾಯ್ನಾಡಿನಲ್ಲಿದ್ದುಕೊಂಡೇ ಏನಾದರೂ ಸಾಧಿಸಬೇಕೆಂಬ ಹಂಬಲ ಇದ್ದೇ ಇತ್ತು. ತನ್ನ ಕಠಿಣ ಪರಿಶ್ರಮದ ಫಲಶ್ರುತಿಯಾಗಿ ಮಂಗಳೂರಿನಲ್ಲಿ 'ಹೋಟೇಲ್ ಸ್ವಾಗತ್' ಆರಂಭಿಸಿ ಕರ್ಮಯೋಗಿಯಂತೆ ದುಡಿದಿದ್ದಾರೆ. ಹೋಟೆಲ್ ಉದ್ಯಮಿಗಳನ್ನೆಲ್ಲಾ ಸಂಘಟಿಸಿ, ಅವಿಭಜಿತ ದ.ಕ.ಜಿಲ್ಲಾ ಹೋಟೇಲ್ ಮಾಲಿಕರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಜಿಲ್ಲೆಯ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ವಿವಿಧ ರೀತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮೂಲ್ಕಿಯ ಪುನರೂರು ವಾಣಿಜ್ಯ ಸಮುಚ್ಚಯವನ್ನು ಸಮಾಜಕ್ಕೊಪ್ಪಿಸಿದ ಹೆಗ್ಗಳಿಕೆ ಅವರದು. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಎಂಬ ಮಾತಿನಂತೆ, ವ್ಯಾವಹಾರಿಕವಾಗಿ ತಾನು ಅರ್ಜಿಸಿದ ಸಂಪತ್ತಿನ ಒಂದಂಶವನ್ನು ನಿತ್ಯನಿರಂತರವಾಗಿ ಸಮಾಜದ ದೀನದಲಿತರ ಉತ್ಕರ್ಷೆಗೆ, ಜಿಲ್ಲೆಯ ಹತ್ತು ಹಲವು ಸಂಘ-ಸಂಸ್ಥೆಗಳಿಗೆ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳ ಪುನರುತ್ಥಾನಕ್ಕೆ ವಿನಿಯೋಗಿಸುವ ಸತ್ಸಂಕಲ್ಪವನ್ನು ಕಾರ್ಯಗತಗೊಳಿಸುತ್ತಾ ಬಂದಿದ್ದಾರೆ. ಸನಾತನ ಸಂಸ್ಕೃತಿಗೆ ಜೀವತುಂಬಿ, ಧರ್ಮದ ಬಗ್ಗೆ ವಿಶೇಷ ಆಸಕ್ತಿಯಿಂದ ದುಡಿದಿದ್ದಾರೆ. ಸಮಾಜಕ್ಕೆ ಬೆಳಕಾಗಿ ಬಹುಮುಖ ಸಮಾಜಸೇವೆಯ ಮೂಲಕ ಕೃತಕೃತ್ಯರಾಗಿದ್ದಾರೆ. ಇದಕ್ಕೆಂದೇ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು 1981ರ ತನ್ನ ಪರ್ಯಾಯ ಮಹೋತ್ಸವದ ಶುಭಾವಸರದಲ್ಲಿ ಪುನರೂರುರವರಿಗೆ 'ಧರ್ಮದರ್ಶಿ' ಎಂಬ ಬಿರುದನ್ನು ಶ್ರೀ ಕೃಷ್ಣಾನುಗ್ರಹದೊಂದಿಗೆ ನೀಡಿ ಗೌರವಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ಮಾನ್ಯ ಪುನರೂರುರವರು 'ಧರ್ಮದರ್ಶಿ'ಗಳಾಗಿಯೇ ಕಾರ್ಯ ಪ್ರವೃತ್ತರಾಗಿರುವುದು. ಬಪ್ಪನಾಡು ಶ್ರೀ

ಮಂಗಳಾಪರಮೇಶ್ವರೀ ದೇವಸ್ಥಾನ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಗಳ ಧರ್ಮದರ್ಶಿಗಳಾಗಿ ಪುನರೂರುರವರು ನಡೆಸಿದ ನಿಷ್ಕಲ್ಮಶ ದೇವತಾ ಸೇವೆ ಅವರ್ಣನೀಯ. ಲಯನ್ಸ್ ಜಿಲ್ಲೆ 324ಡಿ–4ರ ಜಿಲ್ಲಾ ರಾಜ್ಯಪಾಲರಾಗಿ, 'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನಃ' ಎಂಬ ವಿಶಿಷ್ಟ ಸಂದೇಶದೊಂದಿಗೆ **'ಸೇವಾಹಿಃ ಪರಮೋಧರ್ಮಃ'** ಎಂಬ ಆರ್ಯೋಕ್ತಿಗೆ ಸ್ಪಷ್ಟವಾದ ಅರ್ಥವನ್ನು ತನ್ನ ಆಚಾರ ವಿಚಾರಗಳಿಂದ, ನಡೆನುಡಿಗಳಿಂದ ತೋರಿಸಿಕೊಟ್ಟವರು ಅವರು.

ಸ್ವಯಂ ಸಾಹಿತಿಯಲ್ಲವಾಗಿದ್ದರೂ ಕರ್ನಾಟಕದ ಉದ್ದಗಲಗಳಲ್ಲಿ ಎಲೆಯ ಮರೆಯ ಕಾಯಿಗಳಂತಿದ್ದ ಅಸಂಖ್ಯಾತ ಬರೆಹಗಾರರಿಗೆ, ಕವಿಸಾಹಿತಿಗಳಿಗೆ, ಆಶ್ರಯದಾತರಾಗಿ ಅವರ ಸತ್ಕೃತಿಗಳು ಬೆಳಕಿಗೆ ಬರುವಂತೆ ಶ್ರಮಿಸಿ ಪ್ರೋತ್ಸಾಹಿಸಿದ್ದಾರೆ. ಪುನರೂರು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ರಾಜ್ಯದ ಮೂಲೆ ಮೂಲೆಗಳಲ್ಲಿ, ಹೋಬಳಿ ಮಟ್ಟದ, ಜಿಲ್ಲಾಮಟ್ಟದ ಹಾಗೂ ರಾಷ್ಟ್ರಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ವ್ಯವಸ್ಥಿತವಾಗಿ ಆಯೋಜಿಸಿ, ಕನ್ನಡ ಸಾರಸ್ವತ ಲೋಕದಲ್ಲಿ ಗಣ್ಯ ಸ್ಥಾನಮಾನವನ್ನು ಪಡೆದಿರುವ ಅವರು 'ಹೊಗಳಿಕೆಗೆ ಹಿಗ್ಗದ, ತೆಗಳಿಕೆಗೆ ಕುಗ್ಗದ' ಜಾಯಮಾನದವರು.

ನಮ್ಮ 'ಯುಗಪುರುಷ' ಮಾಸಪತ್ರಿಕೆಯ, ಪ್ರಕಟಣಾಲಯದ ಹಾಗೂ ನಮ್ಮ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಸಮಸ್ತ ಕಾರ್ಯಕಲಾಪಗಳ ಮಾರ್ಗದರ್ಶಕರೂ, ವಿಶಿಷ್ಟ ಹಿಂತಚಿಂತಕರೂ ಆದ ಧರ್ಮದರ್ಶಿ ಹರಿಕೃಷ್ಣ ಪುನರೂರುರವರಿಗೆ ನಮ್ಮ ಆರಾಧ್ಯಮೂರ್ತಿಯಾದ ಜಾಬಾಲಿಮುನಿಸೇವಿತೆ ಕಟೀಲಿನ ಶ್ರೀ ಭ್ರಮರಾಂಬಿಕೆಯು ಕ್ಷೇಮ, ಸ್ಥೈರ್ಯ, ವಿಜಯ, ಆಯುರಾರೋಗ್ಯ ಅಷ್ಟೈಶ್ವರ್ಯಾದಿಗಳನ್ನಿತ್ತು ಹರಸಲಿ. ನಮ್ಮ ಕ್ಷೇತ್ರದ ಆರಾಧ್ಯದೇವರಾದ ಶ್ರೀಗುರುರಾಘವೇಂದ್ರ ಸಾರ್ವಭೌಮರು ಸಮಸ್ತ ಸನ್ಮಂಗಲವನ್ನುಂಟು ಮಾಡಲಿ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಜನೋಪಕಾರ ತತ್ಪರ

□ ಕೆ. ಗೋಪಾಲಕೃಷ್ಣ ಉಪಾಧ್ಯಾಯ



ನೆಲೆ ತಪ್ಪಿದ ಒಂದು ಬ್ರಾಹ್ಮಣ ಕುಟುಂಬ. ಒಂದು ಮಠದಲ್ಲಿ ಪೂಜೆ. ಹಿರಿಯ ಮಗ ಏಳನೆಯ ತರಗತಿಯಲ್ಲಿ ಉತ್ತೀರ್ಣನಾದ. ಮುಂದೆ ಪ್ರೌಢಶಾಲೆಗೆ ಅವನನ್ನು ಸೇರಿಸಬೇಕೆಂಬುದು ಹೆತ್ತವರ ಹಂಬಲ. ಆದರೆ ಅವನಿಗೆ ಅಂಗಿ ಚಡ್ಡಿ ಹೊಲಿಸಿ ಕೊಡಲೂ ಕೈಯಲ್ಲಿ ಕಾಸಿಲ್ಲ. ಏನಾದರೂ ನೆರವು ದೊರಕೀತೆಂಬ ದೂರದ ಆಸೆಯಿಂದ ಹತ್ತಿರದಲ್ಲಿ ಸರಕಾರಿ ಪ್ರೌಢಶಾಲೆ ಇದ್ದರೂ ಸ್ವಲ್ಪ ದೂರದಲ್ಲಿದ್ದ ಖಾಸಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರನ್ನು ಕಂಡು ಹುಡುಗನ ತಂದೆ ಈ ಕುರಿತು ಮಾತನಾಡಿದರು. ಅವರು 'ನಾನು ಸ್ವಲ್ಪ ಸಹಾಯ ಮಾಡಬಹುದು; ಉಳಿದುದಕ್ಕೆ ನೀವೇ ಏನಾದರೂ ಪ್ರಯತ್ನ ಮಾಡಬೇಕಾದೀತಲ್ಲ!' ಎಂದರು. ಆಗಲೇ ಮುಖ್ಯೋಪಾಧ್ಯಾಯರಿಗೆ ಹರಿಕೃಷ್ಣ ಪುನರೂರರ ನೆನಪಾಯಿತು. ಬಡ ಮಕ್ಕಳ ಶಿಕ್ಷಣಕ್ಕೆ ಹರಿಕೃಷ್ಣ ನೆರವಿತ್ತ ವರ್ತಮಾನವಿತ್ತು. ಅವರು ಹುಡುಗನ ತಂದೆಗೆ 'ಹರಿಕೃಷ್ಣರಿಗೆ ನೆರವು ಕೋರಿ ಕಾಗದ ಬರೆಯಿರಿ; ನಿಮ್ಮ ಕೆಲಸ ಆದೀತು' ಎಂದು ಸಲಹೆ ಕೊಟ್ಟರು. ತಂದೆ ಹಾಗೆಯೇ ಮಾಡಿದರು. ಹರಿಕೃಷ್ಣರಿಂದ ಆರ್ಥಿಕ ನೆರವು ದೊರೆಯಿತು. ಪ್ರೌಢಶಾಲೆಯಿಂದ ಮೂರು ವರ್ಷವೂ ಅವನಿಗೆ ಆ ಸಹಾಯ ದೊರೆಯಿತು. ಆ ಹುಡುಗನ ಆ

ಪದ್ಮ ನಿಲಯ, ಕೊಪ್ಪಳ, ಪೆರ್ಡೂರು-576 124, ಉಡುಪಿ ಜಿಲ್ಲೆ

ಮುಖ್ಯೋಪಾಧ್ಯಾಯರು ಈಗ ನಿವೃತ್ತರು. ತೀರ ಇತ್ತೀಚೆಗೆ ಅವರಿಗೆ ಆ ಹುಡುಗನ ತಾಯಿಯ ಭೇಟಿ ಆಕಸ್ಮಿಕವಾಗಿ ಆಯಿತು. ಅವರಾಗಿಯೇ ತಮ್ಮ ಮಗ ವಿದ್ಯಾಭ್ಯಾಸ ಮುಗಿಸಿ ಈಗ ಬೆಂಗಳೂರಿನಲ್ಲಿ ಉದ್ಯೋಗ ದೊರಕಿಸಿಕೊಂಡಿದ್ದಾನೆ ಅಂದರು. ಅವರ ಕಣ್ಣುಗಳಲ್ಲಿ ಕೃತಜ್ಞತೆಯ ಬೆಳಕು ಸೂಸುತ್ತಿತ್ತು.

ಇನ್ನೊಂದು ಬಡ ಬ್ರಾಹ್ಮಣ ಕುಟುಂಬ. ತಾತ್ಕಾಲಿಕ ನೆಲೆಯಲ್ಲಿ ಒಂದು ಕಡೆಯಲ್ಲಿ ಪೂಜೆ ಮಾಡಿಕೊಂಡಿದ್ದರು. ಆ ಕೆಲಸವೂ ಹೋಯಿತು. ತಂಗಲೊಂದು ನೆಲೆಯಿಲ್ಲ; ಆಶ್ರಯವಿಲ್ಲ. ಆಗ ಅವರಿಗೆ ಯಾರೋ ಸೂಚಿಸಿದರು: ''ಹರಿಕೃಷ್ಣ ಪುನರೂರು ನೂರು ಮನೆಗಳನ್ನು ಕಟ್ಟಿಸಿ ಅರ್ಹರಿಗೆ ಕೊಡುತ್ತಿದ್ದಾರೆ; ನೀವೂ ಅದರಲ್ಲಿ ಒಂದನ್ನು ಪಡೆದುಕೊಳ್ಳಲು ಯಾಕೆ ಪ್ರಯತ್ನಿಸಬಾರದು!'' ಆ ಬಡಬ್ರಾಹ್ಮಣನಿಗೆ ಪಾಪ, ನಂಬಿಕೆ ಬರಲಿಲ್ಲ. ತನಗೆ ದೊಡ್ಡವರ ಪರಿಚಯವಿಲ್ಲ; ಶಿಫಾರಸೂ ಇಲ್ಲ. ಏನು ಮಾಡಲಿ? ಅದರೂ ಧೈರ್ಯ ಮಾಡಿ ಹರಿಕೃಷ್ಣರನ್ನು ಕಂಡು, ತನ್ನ ಶೋಚನೀಯ ಪರಿಸ್ಥಿತಿಯನ್ನು ವಿವರಿಸಿದರು. ಹರಿಕೃಷ್ಣರು ಕೂಡಲೇ ಅವರಿಗೆ ಒಂದು ಮನೆಯ ಬೀಗದ ಕೈಯನ್ನು ಕೊಟ್ಟು ಅಲ್ಲಿ ನೆಲೆಸಲು ಹೇಳಿದರು.

ಅಖಂಡ ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಕೆಲವು ಹಿರಿಯರು ''ಮಕ್ಕಳ ಸಾಹಿತ್ಯ ಸಂಗಮ'' ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಿದರು. ಇದು ಸುಮಾರು ಒಂದು ದಶಕದ ಹಿಂದೆ. ಅದಕ್ಕೆ ಹರಿಕೃಷ್ಣರನ್ನು ಪ್ರಧಾನ ಪೋಷಕರಾಗುವಂತೆ ಕೇಳಿಕೊಂಡರು. ಅವರು ಒಪ್ಪಿದರು. ಇಂದು ಆ ಸಂಘ ಮಕ್ಕಳಿಗಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಪ್ರತಿ ವರ್ಷ ನಡೆಸುತ್ತಿದೆ. ಅದರ ವಾರ್ಷಿಕ ಮಹಾಸಭೆ ಪ್ರತಿ ಬಾರಿ ನಡೆಯುವುದು ಮೂಲ್ಕಿಯ ಪುನರೂರು ಹೊಟೇಲಿನಲ್ಲಿ. ಸಭೆಗೆ ಹಾಜರಾದ ಎಲ್ಲ ಸದಸ್ಯರಿಗೂ ಮುಂಜಾನೆ ಭರ್ಜರಿ ಉಪಾಹಾರ, ಮಧ್ಯಾಹ್ನ ಊಟ ಮತ್ತು ಸಂಜೆಯ ಚಹಾ ಎಲ್ಲ ಒದಗಿಸುವುದು ಹರಿಕೃಷ್ಣರು. ಅದೇ ಸಂಘ ಪ್ರತಿ ವರ್ಷ 'ಮಕ್ಕಳ ಧ್ವನಿ' ಎಂಬ ಸಂಭ್ರಮದ ಸಮಾರಂಭವನ್ನು ಆಹ್ವಾನದ ಮೇರೆಗೆ ಯಾವುದಾದರೂ ಒಂದು ಊರಲ್ಲಿ ನಡೆಸುತ್ತದೆ. ಅಂದು ಸಮಾರಂಭದ ಒಂದು ಭಾಗ, ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಅಥವಾ ಮಕ್ಕಳ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹವನ್ನಿತ್ತ ಕೆಲವು ಹಿರಿಯರನ್ನು ಸಮ್ಮಾನಿಸುವುದು. ಆ ಸಮ್ಮಾನದ ಎಲ್ಲ ಖರ್ಚು ವೆಚ್ಚಗಳನ್ನು ಭರಿಸುವವರು ಹರಿಕೃಷ್ಣ ಪುನರೂರು.

ಇವು ಮೂರು ಉದಾಹರಣೆಗಳು. ಇಂತಹ ಹತ್ತು ಹಲವು ದೃಷ್ಟಾಂತಗಳನ್ನು ಕೊಟ್ಟು ಹರಿಕೃಷ್ಣರು ಎಂತಹ ಕಳಕಳಿಯುಳ್ಳ ವ್ಯಕ್ತಿ ಎಂಬುದನ್ನು ವಿವರಿಸಬಹುದು. ಧರ್ಮ, ಮತ, ಶಿಕ್ಷಣ, ಸಮಾಜಸೇವೆ ದುರ್ಬಲರ ರಕ್ಷಣೆ, ಅನಾಥರಿಗೆ ಸಹಾಯ ಹಸ್ತ, ನೈತಿಕ ಚಳವಳಿ, ಅನ್ಯಾಯದ ವಿರುದ್ಧ ಪ್ರತಿಭಟನೆ, ಸಾಹಿತ್ಯ ಪೋಷಕತ್ವ, ಸಜ್ಜನರಿಗೆ ಸಂಭಾವನೆ- ಯಾವ ವಿಚಾರವನ್ನೇ ತೆಗೆದುಕೊಂಡರೂ ಅಲ್ಲಿ ಹರಿಕೃಷ್ಣರಿದ್ದಾರೆ. ಸಾಂಸ್ಥಿಕ ನೆಲೆಯ ಹಿನ್ನೆಲೆಯಲ್ಲಿ ಸಮಾಜೋಪಕಾರಿ ಕೆಲಸ ಮಾಡುವವರು ಸಾಕಷ್ಟು ಜನರಿರಬಹುದು. ಆದರೆ ವ್ಯಕ್ತಿಗತ ನೆಲೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಕಾಣಸಿಕೊಂಡವರು ಹರಿಕೃಷ್ಣ ಪುನರೂರು ಮಾತ್ರ. ಅವರ ಬಾಹ್ಯ ವ್ಯಕ್ತಿತ್ವವೇ ಆಕರ್ಷಣೀಯ. ಸ್ವಲ್ಪವೂ ಡಂಬಾಚಾರವಿಲ್ಲದ ಸರಳ ಜೀವನ ಶೈಲಿ.

ಒಮ್ಮೆ ಹೀಗೇ ಮಾತನಾಡುತ್ತಿರುವಾಗ ಅವರ ಅಣ್ಣ ವೆಂಕಟೇಶ್ವರರಾಯರು 'ನನ್ನ ತಮ್ಮ ಹರಿಕೃಷ್ಣ ನಮ್ಮ ವಂಶದ ರತ್ನ' ಎಂದರು. ಅವರಿಗೆ ಉನ್ನತ ಶಿಕ್ಷಣ ದೊರಕುತ್ತಿದ್ದರೆ ಅವರು ಏನಾಗುತ್ತಿದ್ದರೋ ಎಂದು ಊಹಿಸಲೂ ಸಾಧ್ಯವಿರುತ್ತಿರಲಿಲ್ಲವೆಂದರು. ಹರಿಕೃಷ್ಣರು ಅವರ ವಂಶಕ್ಕೇ ಮಾತ್ರವಲ್ಲ, ಇಡೀ ಜಿಲ್ಲೆಗೇ ರತ್ನ ಪ್ರಾಯರು. ಯಾವ ಒಳ್ಳೆಯ ಮುಹೂರ್ತದಲ್ಲಿ ಶ್ರೀ ಪೇಜಾವರ ಶ್ರೀಪಾದರು ಅವರನ್ನು 'ಧರ್ಮದರ್ಶಿ' ಎಂದು ಕರೆದರೋ, ಅಂದಿನಿಂದ ಅವರು ಎಲ್ಲ ಅರ್ಥಗಳಲ್ಲಿಯೂ ಧರ್ಮದರ್ಶಿಗಳೆ!

ತಮ್ಮ ಉದ್ಯೋಗ, ವೃತ್ತಿ, ಹವ್ಯಾಸ ಕಾರ್ಯ ಚಟುವಟಿಕೆಗಳಿಂದ ಹರಿಕೃಷ್ಣರು ಬೇಕಾದಷ್ಟು ಟೀಕೆ, ನಿಂದೆ, ಭರ್ತ್ಸನೆ, ಅಪವಾದ, ಅವಮಾನ, ಮತ್ಸರ, ಅಸಹನೆಗಳಿಗೆ ಒಳಗಾದವರು. ಆದರೆ ತಮ್ಮ ಅಗಾಧ ವ್ಯಕ್ತಿತ್ವದ ಬಲದಿಂದ ಅವರು ಅದೆಲ್ಲವನ್ನೂ ಮೀರಿ ನಿಂತಿದ್ದಾರೆ.

ಬಾಲ್ಯದಲ್ಲಿ ಕಲಿತ ಒಂದು ಗೋವಿನ ಹಾಡು ನೆನಪಿಗೆ ಬರುತ್ತಿದೆ. ಒಂದು ಗೋವೇ ತನ್ನನ್ನು ಕುರಿತು ತಾನೇ ಹೇಳಿಕೊಂಡ ಮಾತುಗಳವು. ತನ್ನನ್ನು ಬಿಟ್ಟು ಇತರರಿಗೆ, ಮುಖ್ಯವಾಗಿ ಮನುಷ್ಯ ಜಾತಿಗೆ ತಾನು ಹೇಗೆ ಉಪಕಾರಿಯಾಗಿ ಬಾಳುತ್ತಿದ್ದೇನೆ. ಆದರೆ ಕೃತಘ್ನ ಮನುಷ್ಯ ಅದನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾನೆ ಎಂದು ಆ ಗೋವು ಹೇಳಿಕೊಳ್ಳುತ್ತದೆ. ಆ ಹಾಡಿನ ಪ್ರತಿ ಚರಣ ''ನೀನಾರಿಗಾದೆಯೋ ಎಲೆ ಮಾನವಾ। ಹರಿ ಹರಿ ಗೋವು ನಾನು'' ಎಂಬ ಮಾತಿನೊಂದಿಗೆ ಅಂತ್ಯವಾಗುತ್ತದೆ. ಆ ಹಾಡು ಹರಿಕೃಷ್ಣ ಪುನರೂರವರನ್ನು ನೆನಸಿಕೊಂಡಾಗಲೆಲ್ಲ ನೆನಪಾಗುತ್ತಿದೆ.

ಅವರು ನೂರ್ಕಾಲ ಬಾಳಲಿ.

☐

ಭಾಗ: ಎರಡು
ಹೀಗಿದ್ದಾರೆ ಪುನರೂರು

ಈ ಕೈ ಕೊಟ್ಟುದು ಆ ಕೈಗೆ ತಿಳಿಯದು

ಪು. ಶ್ರೀನಿವಾಸಭಟ್ಟ ಕಟೀಲು



"ಕೊಟ್ಟು ಕೆಟ್ಟೆನೆನಬೇಡ", "ಕೆರೆಯ ನೀರನು ಕೆರೆಗೆ ಚೆಲ್ಲಿ", "ಕೈಗಳಿಗೆ ದಾನವೇ ಭೂಷಣ", "ಇಂದು ಬಾ ನಾಳೆ ಬಾ ಎನಬೇಡ" ಎಂಬಂತಹ ನುಡಿಮುತ್ತುಗಳು ದಾಸಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ. ಈ ಪದಪುಂಜಗಳ ಮಥಿತಾರ್ಥವನ್ನು ಲಕ್ಷ್ಯದಲ್ಲಿಟ್ಟುಕೊಂಡು ಪರೋಪಕಾರ ಸ್ವಭಾವದಿಂದ ಜೀವನ ಸಾರ್ಥಕ್ಯಗೊಳಿಸಿ ಜನಪ್ರಿಯತೆಯನ್ನು ಗಳಿಸಿಕೊಂಡವರು ಧರ್ಮದರ್ಶಿ ಹರಿಕೃಷ್ಣ ಪುನರೂರು.

ಅವರ ಉನ್ನತ ವ್ಯಕ್ತಿತ್ವವನ್ನು ಪರಿಚಯಿಸುವುದೆಂದರೆ, ಸೂರ್ಯನಿಗೆ ಸೊಡರು ತೋರಿಸಿದಂತೆಯೇ ಸರಿ. ಅವರು ಸಾಮಾಜಿಕರಂಗದಲ್ಲಿ ಸಂಘ-ಸಂಸ್ಥೆಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ದೇವಾಲಯಗಳಿಗೆ ಆರ್ಥಿಕ ನೆರವಿತ್ತ ವಿಷಯ ಕೆಲ ಪತ್ರಿಕೆಗಳಲ್ಲಿ ಪ್ರಚಾರಕ್ಕೆ ಬಂದಿರುವುದು ನಿಜ. ಆದರೆ ಅವರು ಯಾವ ಕಾಲದಲ್ಲೂ ಪ್ರಚಾರವನ್ನು ಬಯಸಿದವರಲ್ಲ. "ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯಬಾರದು" ಎಂಬ ಉಕ್ತಿಯೊಂದಿದೆ. ಇದರ ಆಶಯದಂತೆ ಪುನರೂರು ನೂರಾರು ಬಗೆಯ ಸಹಕಾರಗಳನ್ನು ನೀಡುತ್ತ ಬಂದಿದ್ದಾರೆ. ಅದನ್ನು ಪಡೆದವರು ನಿತ್ಯ ನೆನಪಿಸಿಕೊಳ್ಳುವಂತಹ ಕೊಡುಗೈ ಸಹಕಾರಗಳು ಇವು. ಇವುಗಳೆಲ್ಲ ಯಾವ ಪ್ರಚಾರದ ಬಲೆಗೂ ಸಿಗಲಾರವು! ಅವರ ಮನೋಭಾವದ ದರ್ಶನಕ್ಕೆ ಈ ರೀತಿಯ, ನೂರಾರು

'ಪಂಚವಟಿ', ಅಜಾರು, ಕಟೀಲು. ಮಂಗಳೂರು ತಾಲೂಕು, ದ.ಕ.

ಉದಾಹರಣೆಗಳಿದ್ದರೂ ಒಂದೆರಡನ್ನು ಸಂಗ್ರಹಿಸಿ ಹೇಳುವ ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ.

ಕೆಲವು ವರ್ಷಗಳ ಹಿಂದೆ ಮೂಲ್ಕಿಯ ಸಮೀಪದ ಕಿಲ್ಪಾಡಿ ಕುಮಾರಮಂಗಲ ದೇವಾಲಯದ ಜೀರ್ಣೋದ್ಧಾರದ ಅವಧಿಯಲ್ಲಿ ನಡೆದ ಭಕ್ತಾಭಿಮಾನಿಗಳ ಸಭೆಯಲ್ಲಿ, ದೇವಳದವರೆಗೆ ರಸ್ತೆ ನಿರ್ಮಾಣವಾಗಬೇಕೆಂಬ ಪ್ರಸ್ತಾಪ ಬಂತು. ಸಭೆಯಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿದ್ದ ಪುನರೂರು ಇದ್ದರು. ದೇವಾಲಯಕ್ಕೆ ರಸ್ತೆ ಸಂಪರ್ಕ ಕಲ್ಪಿಸಲು ಸ್ಥಳ ಬಿಟ್ಟು ಕೊಡುವುದಾಗಿ ಸಂಬಂಧಿಸಿದವರು ವಾಗ್ದಾನವಿತ್ತರು. ಆದರೆ ಇಂತಹ ಸಭೆಗಳಲ್ಲಿ ಆಡಿದ ಮಾತುಗಳು ಹೆಚ್ಚಾಗಿ ಜಲಾಕ್ಷರಗಳು! ಇದರ ಪರಿಣಾಮವಾಗಿ ಸಭೆ ಚದುರಿದ ಬಳಿಕ ಅನೇಕ ಅಡ್ಡಿ ಆತಂಕಗಳು ಹುಟ್ಟಿಕೊಳ್ಳುವುದುಂಟು. ಇದನ್ನು ಮನಗಂಡ ಪುನರೂರು ಸಾಕಷ್ಟು ನಿಧಿ ಸಂಗ್ರಹವಿಲ್ಲದಿದ್ದರೂ ತನ್ನ ಪಾಲಿನ ಆರ್ಥಿಕ ನೆರವನ್ನು ನೀಡಿದ್ದಲ್ಲದೆ ರಸ್ತೆ ಕೆಲಸವನ್ನು ಪ್ರಾರಂಭಿಸಲು ಕಾರಣರಾದರು. ಕೊನೆ ಮುಟ್ಟಿಸಿದರು ಕೂಡ! ಈ ಕ್ಷಿಪ್ರ ಕಾರ್ಯಾಚರಣೆಯನ್ನು ದೇವಳದ ಮೊಕ್ತೇಸರ ಶ್ರೀನಿವಾಸ ಮಯ್ಯರು ಈಗಲೂ ನೆನಪಿಸಿಕೊಳ್ಳುತ್ತಾರೆ. ಈ ಅವಕಾಶ ದೇವಳದ ಪಾಲಿಗೆ ಸುವರ್ಣಾವಕಾಶವಾಗಿತ್ತು; ಇದು ತಪ್ಪಿ ಹೋಗಿದ್ದರೆ ರಸ್ತೆ ನಿರ್ಮಾಣದ ಕೆಲಸ ಕಗ್ಗಂಟಾಗುತ್ತಿತ್ತು ಎಂಬುದು ಅವರ ಅಭಿಪ್ರಾಯ.

ಪುತ್ತೂರು ಕಡೆಯಿಂದ ಬಹಳ ವರ್ಷಗಳ ಹಿಂದೆ ಈ ಕಡೆಗೆ ಬಂದು ನೆಲೆ ನಿಂತವರು ಆನಂದ ರಾಯರೆಂಬ ಸಾತ್ವಿಕ ವ್ಯಕ್ತಿ. ಅವರು ಎಲ್ಲರಿಗೂ ಸುಪರಿಚಿತರು. ತನ್ನ ಮಗಳ ಮದುವೆಯನ್ನು ತಿರುಪತಿಯಲ್ಲಿ ಮಾಡುವುದೆಂದು ನಿಶ್ಚೈಸಿದರು. ಆದರೆ ಮದುವೆಯ ದಿನ ಹತ್ತಿರ ಬಂದಾಗ ಸಕಾಲದಲ್ಲಿ ಹಣ ಸಂಗ್ರಹವಾಗದೆ ಕಂಗಾಲಾದರು. ಹಿಂದೆಯೂ ಹತ್ತು ಹಲವು ಬಾರಿ ಸಂಕಷ್ಟದಿಂದ ಪಾರು ಮಾಡಿದ್ದ ಹರಿಕೃಷ್ಣ ರಾಯರನ್ನು ಬಂದು ಬೆಳಗ್ಗೆ ಕಂಡರು. ವಿಷಯವನ್ನು ತಿಳಿಸಿದರು. ಯಥಾರ್ಥವನ್ನು ಅರಿತ ಹರಿಕೃಷ್ಣರಾಯರು ಸಂಬಂಧಪಟ್ಟವರಲ್ಲಿ ಪತ್ರ, ದೂರವಾಣಿಗಳ ಮೂಲಕ ವ್ಯವಹರಿಸಿ, ಸೂಕ್ತ ವ್ಯವಸ್ಥೆ ಮಾಡಿದರು. ತನ್ನನ್ನು ಗಂಡಾಂತರದಿಂದ ಪಾರು ಮಾಡಿದ ಅಂದಿನ ಈ ಘಟನೆಯನ್ನು ವಿವರಿಸುವಾಗ ಆನಂದ ರಾಯರಿಗೆ ಇಂದೂ ಹೃದಯ ತುಂಬಿ ಬರುತ್ತದೆ. ಪುನರೂರು ಪರಿಸರದ ಜನರಲ್ಲಿ ಮಾತಾಡಿಸಿದಾಗ ಇಂತಹ ನೂರಾರು ಘಟನೆಗಳು ನಿಮಗೆ ಕೇಳಸಿಗುತ್ತವೆ.

ಹತ್ತು ರೂಪಾಯಿ ಕೊಡಲು ಇಪ್ಪತ್ತು ಸಲ ಸತಾಯಿಸಿ ನೂರು ಮಂದಿಯಲ್ಲಿ ಪ್ರಚಾರ ಮಾಡಿ ನೀಡುವ ದಾನಿಗಳೇ ನಮ್ಮ ಸುತ್ತ ಇರುವ ಈ ದಿನಗಳಲ್ಲಿ ಯಾವ ಪ್ರತಿಫಲ-ಪ್ರಚಾರಗಳನ್ನೂ ಬಯಸದೆ ಸರಳಮನದಿಂದ ಸಹಕಾರಗಳನ್ನು ನೀಡುತ್ತಿರುವ ಪುನರೂರು ಓರ್ವ ಅಪೂರ್ವ ವ್ಯಕ್ತಿ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಪುನರೂರು ಕಟ್ಟಿಸಿದ ನೂರೊಂದು ಸೂರುಗಳ ಊರು

□ ನಾ. ಕಾರಂತ ಪೆರಾಜೆ



ಪುನರೂರು ಎಂದಾಕ್ಷಣ- ಅವರೊಬ್ಬ ಕೊಡುಗೈ ದಾನಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಸಾಮಾಜಿಕ ಸಂಘಟಕ, ಧರ್ಮದರ್ಶಿ... ಹೀಗೆಲ್ಲಾ ಅವರ ಸಮಾಜಮುಖಿ ವ್ಯಕ್ತಿತ್ವ ಥಕ್ಕನೆ ಹೊಳೆದುಬಿಡುತ್ತದೆ.

ಹರಿಕೃಷ್ಣ ಪುನರೂರು ಸಮಾಜದಲ್ಲಿ ತಮ್ಮನ್ನು ಸಕ್ರಿಯವಾಗಿ ಅನಾವರಣಗೊಳಿಸಿ, ಹಲವು ಪ್ರಥಮಗಳಿಗೆ ಕಾರಣರಾಗಿದ್ದಾರೆ. ಅವರ 'ನೂರೊಂದು ಮನೆ ಯೋಜನೆ' ಈ ಪ್ರಥಮಗಳ ಸಾಲಿಗೆ ಸೇರುತ್ತದೆ.

ಏನಿದು ನೂರೊಂದು ಮನೆ ಯೋಜನೆ? ಸರಕಾರದ್ದೇ? ಅಥವಾ ಹರಿಕೃಷ್ಣರು ತನ್ನನ್ನು ತಾನೇ ಉದ್ಘಾಟಿಸಿಕೊಳ್ಳುವ ಪರಿಯೇ? ಇದಾವುದೂ ಅಲ್ಲವೇ ಅಲ್ಲ, ಇದು ಪುನರೂರರ ಸ್ವಂತದ್ದಾದ ಕಲ್ಪನೆ. ಸರಕಾರವು ಕನಸಿನಲ್ಲೂ ಎಣಿಸದ ಯೋಜನೆ! ಇದರಲ್ಲಿರುವುದು ಕಣ್ಣೀರನ್ನು ಒರೆಸುವ ಕೆಲಸ. ಬಡವರ ಜೀವನಕ್ಕೆ ಊರುಗೋಲಾಗುವ ಉದ್ದೇಶ.

ಮಂಗಳೂರು ತಾಲ್ಲೂಕಿನ ಮೂಲ್ಕಿಯ ಪುನರೂರಿನಲ್ಲಿ ಆರು ಎಕರೆ ಜಾಗವನ್ನು ಈ ಉದ್ದೇಶಕ್ಕಾಗಿಯೇ ಖರೀದಿಸಿದ್ದಾರೆ. ಅದರಲ್ಲಿ ನೂರೊಂದು ತಾರಸಿ ಮನೆಗಳು ತಲೆಯೆತ್ತಿವೆ.

ನಾಲ್ಕು ಸೆಂಟ್ಸ್ (ಅಂದರೆ ಒಂದು ಎಕರೆಯ 25 ರಲ್ಲೊಂದು ಭಾಗ) ನಂತೆ ವಿಂಗಡಿಸಿದ ಈ ಸ್ಥಳದಲ್ಲಿ ಎರಡು ಕೋಣೆ, ಒಂದು

ಭಟ್ ಬಿಲ್ಡಿಂಗ್, ಪಳ್ಮಡಿ, ಪುತ್ತೂರು- 754 102

ಸ್ನಾನದ ಕೋಣೆ, ಶೌಚಾಲಯ ಹಾಗೂ ಚಿಕ್ಕ ಅಂಗಳದ ಆರ್.ಸಿ.ಸಿ. ಮನೆಗಳು ತಲೆಯೆತ್ತಿವೆ. ಸಣ್ಣ ಕುಟುಂಬಕ್ಕೆ ಈ ಮನೆಗಳು ಧಾರಾಳ ಸಾಕು. ಮನೆಯ ಮೇಲಿನ ಮಹಡಿಯಲ್ಲಿ ಕೈದೋಟ ಮಾಡಲು ಅಥವಾ ಶಾಮಿಯಾನ ಹಾಕಿ ಶುಭಕಾರ್ಯ ಮಾಡಲು ಅವಕಾಶವಿದೆ.

ನೀರಿಗಾಗಿ ಬಾವಿಯನ್ನು ಅರಸಬೇಕಾಗಿಲ್ಲ. ಸಾರ್ವಜನಿಕ ನಳವನ್ನು ಆಶ್ರಯಿಸಬೇಕಾಗಿಲ್ಲ. ಪ್ರತಿ ಮನೆಗೆ ನೀರು ಮತ್ತು ವಿದ್ಯುತ್ ಸಂಪರ್ಕ ಇದೆ. ಬೀದಿ ದೀಪಗಳಿಗೆ ಸೋಲಾರ್. ಪ್ರತಿ ಮನೆಗೂ ಇದೆ ಡೋರ್ ನಂಬರ್. ಈಗಾಗಲೇ ಮೂವತ್ತೈದು ಕುಟುಂಬಗಳು ಇಲ್ಲಿ ವಾಸ್ತವ್ಯ ಹೂಡಿವೆ.

ಲೇಔಟ್ ಮಧ್ಯೆ ಸುಮಾರು ಒಂದೂವರೆ ಎಕರೆಯ ಆಟದ ಮೈದಾನವಿದೆ. ಸಮಾರಂಭ ನಡೆಸಲು ವೇದಿಕೆ. ಒಂದು ಸಾವಿರ ಮಂದಿ ಕುಳಿತುಕೊಳ್ಳಬಹುದಾದ ವಿಶಾಲ ಸ್ಥಳ ಇದರೆದುರು ಇದೆ.

ನೂರು ಕುಟುಂಬಗಳು ವಾಸ್ತವ್ಯ ಹೂಡಿದರೆ ಪುನರೂರರ ಕನಸು ನನಸಾಗುತ್ತದೆ. ಆಗ ಇದೊಂದು ಸಾಂಸ್ಕೃತಿಕ ಕೇಂದ್ರವಾಗಲಿದೆ. ಆದರೆ, ತೀರಾ ಬಡವರಿಗೆ ಮಾತ್ರ ಇಲ್ಲಿ ವಾಸ್ತವ್ಯಕ್ಕೆ ಅವಕಾಶ. ಬಡವ ಎನ್ನಲು ಸರಕಾರಿ ಪ್ರಮಾಣ ಪತ್ರ ಬೇಡ. ಯಾವುದೇ ಕಡತಗಳಲ್ಲಿ ಶಾನುಭೋಗರು ಸೃಷ್ಟಿಸಿದ ದಾಖಲೆ ಬೇಡ. ಬಡವರೆಂದು ಹರಿಕೃಷ್ಣರಿಗೆ ಮನದಟ್ಟಾದರೆ ಸಾಕು. ಒಂದು ಮನೆ ನಿಶ್ಚಿತ. ಬಾಡಿಗೆಯಿಲ್ಲ. ಮುಂಗಡವಿಲ್ಲ. ಪೂರ್ತಿ ಉಚಿತ. ಒಂದು ಕುಟುಂಬ ಅಲ್ಲಿ ವಾಸ್ತವ್ಯ ಇದ್ದಷ್ಟು ಕಾಲ ಅವರದ್ದೇ ಮನೆ. ನೀರು ಮತ್ತು ವಿದ್ಯುತ್ ಶುಲ್ಕ ಕೂಡ ಉಚಿತ.

ನೂರೊಂದು ಮನೆಗಳ ಬಡಾವಣೆ 'ಲಕ್ಷ್ಮೀ ವಾಸುದೇವ ಅಗ್ರಹಾರ' ಎಂದು ನಾಮಕರಣಗೊಳ್ಳಲಿದೆ.

ಈ ವಸತಿ ಸಮುಚ್ಚಯದ ನಿರ್ಮಾಣಕ್ಕೆ ಅಂದಾಜು ಮೂರು ಕೋಟಿ ರೂಪಾಯಿ ಖರ್ಚಾಗಿರಬಹುದು. ಇಳಿಜಾರು ಭೂಮಿಯ ಸುತ್ತ ಕಗ್ಗಲ್ಲಿನ ಆವರಣ ಕಟ್ಟಿ ಭದ್ರಗೊಳಿಸಿದ ಪುನರೂರರ ಸಾಹಸವನ್ನು ನೋಡಿಯೇ ತಿಳಿಯಬೇಕು. ಸರಕಾರ ಮಾಡಬಹುದಾದ ಕಾರ್ಯವನ್ನು ಇವರೊಬ್ಬರೇ ಮಾಡಿದ್ದಾರೆ.

'ಬಡತನದ ಬಗ್ಗೆ ವೇದಿಕೆಯಲ್ಲಿ ಮಾತನಾಡುತ್ತೇವೆ. ಆದರೆ ಅನುಷ್ಠಾನವಾಗದಿದ್ದರೆ ಹೇಗೆ?' ಎನ್ನುವ ಹರಿಕೃಷ್ಣ ಪುನರೂರು, ಹೇಳಿದಂತೆ ನಡೆದಿರುವ ಸಾಹಸಿ.

ಇನ್ನೊಂದು ವಿಷಯ ಹೇಳಲೇಬೇಕು. ಹರಿಕೃಷ್ಣರ ಮನೆಯ ಸನಿಹ ಶ್ರೀ ವಿಶ್ವನಾಥ ದೇವಸ್ಥಾನವಿದೆ. ಇಲ್ಲಿ ಇವರ ಅಣ್ಣ ಪಟೇಲ್ ಶ್ರೀ ವೆಂಕಟೇಶ ರಾಯರದೇ ಮುಂದಾಳತ್ವ. ನಾಲ್ಕು ಕಲ್ಯಾಣ ಮಂಟಪಗಳೂ ಇಲ್ಲುಂಟು. ಊಟ-ನಿರ್ವಹಣಾ ವೆಚ್ಚ ಹೊರತಾಗಿ ಮಿಕ್ಕೆಲ್ಲವೂ ಇಲ್ಲಿ ಉಚಿತ! ಕಡು ಬಡವರಾದರೆ ನೂರು ಮಂದಿಯೊಳಗೆ ನಡೆಯುವ ವಿವಾಹದ ಪೂರ್ತಿ ಹೊಣೆ ಇವರದು.

ಶ್ರೀಮಂತಿಕೆಯನ್ನು ಅಳೆಯುವ ಮಾನದಂಡ ಹಣವಲ್ಲ. 'ಉತ್ತಮ ಮತ್ತು ಆರೋಗ್ಯಕರ ಮನಸ್ಸು' ಎಂಬುದನ್ನು ಹರಿಕೃಷ್ಣ ಪುನರೂರು ತಮ್ಮ ಕಾರ್ಯದ ಮೂಲಕ ತೋರಿಸಿದ್ದಾರೆ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಇಂಥ ಮನೆ ಸಿಕ್ಕಿದ್ದು ನನ್ನ ಭಾಗ್ಯ!

□ ಪಂಡಿತ ಆರ್. ಕೃಷ್ಣಮೂರ್ತಿ



ಅವರ ಬಗ್ಗೆ ನಾನು ಮಲ್ಲಾಡಿ ಹಳ್ಳಿಯಲ್ಲಿದ್ದಾಗಲೇ ದಿನ/ವಾರ ಪತ್ರಿಕೆಗಳ ಮೂಲಕ ಸಾಕಷ್ಟು ಅರಿತಿದ್ದೆ. ಸಮಾಜ ಸೇವೆ, ಧಾರ್ಮಿಕ-ಸಾಹಿತ್ಯಿಕ ರಂಗಗಳಲ್ಲಿ ಅವರು ಸಲ್ಲಿಸಿದ ಸೇವೆಯ ಬಗೆಗೂ ತಕ್ಕಷ್ಟು ಅರಿತುಕೊಂಡಿದ್ದೆ.

ನಾನೊಬ್ಬ ಆಯುರ್ವೇದ ಪಂಡಿತ. ನನ್ನಿಂದಾದಷ್ಟು ಆರೋಗ್ಯ ಸೇವೆ ಮಾಡಿಕೊಂಡು ಬಂದಿರುವವನು. ನಾನೊಂದು ರೀತಿಯ ಅನಿಶ್ಚಿತ ಸ್ಥಿತಿಯಲ್ಲಿದ್ದೆ. ನನಗೊಂದು ವಾಸ್ತವ್ಯದ ನಿವೇಶನ ಬೇಕಿತ್ತು. ಹರಿಕೃಷ್ಣ ಪುನರೂರರಲ್ಲಿ ನನ್ನ ಅಗತ್ಯವನ್ನು ಅರುಹಿಕೊಂಡರೆ ಹೇಗೆ? ಅನ್ನಿಸಿತು. ಅವರ ಸೇವಾ ಮನೋಭಾವನೆಯನ್ನು ದುರುಪಯೋಗಪಡಿಸಿಕೊಂಡಂತಾಗಲಿಕ್ಕಿಲ್ಲವೆ? ಎಂದೂ ಅನ್ನಿಸಿತು. ಆದರೆ ಆ ಅಳುಕನ್ನು ಬದಿಗೊತ್ತಿ, ಒಂದೂವರೆ- ಎರಡು ವರ್ಷಗಳ ಹಿಂದೆ, ಒಂದು ದಿನ ಅವರನ್ನು ಭೇಟಿ ಮಾಡಿದೆ. ಈ ಭೇಟಿ ನಡೆದುದು ಮೂಲ್ಕಿಯಲ್ಲಿ.

ಅವರು ನನ್ನ ಮಾತನ್ನು ತಾಳ್ಮೆಯಿಂದ ಆಲಿಸಿದರು. ನನಗೊಂದು ಮನೆಯನ್ನು ಕೊಡಿಸುವುದಾಗಿ ಆಶ್ವಾಸನೆ ನೀಡಿದರು. ಸಂತೋಷದಿಂದಲೇ ಬಸ್ ನಿಲ್ದಾಣದಲ್ಲಿರುವ ಅವರ ಉಪಾಹಾರ ಗೃಹಕ್ಕೆ ಕರೆದೊಯ್ದರು. ಹೊಟ್ಟೆತುಂಬ ಉಪಾಹಾರ ಕೊಡಿಸಿದರು. ಅವರ ನಡವಳಿಕೆ ನನ್ನ ಮನಸ್ಸಿನಲ್ಲಿದ್ದ

50, ಶ್ರೀ ಹರಿಕೃಷ್ಣ ಪುನರೂರು ಕ್ವಾರ್ಟರ್ಸ್, ಅಂಚೆ- ಪುನರೂರು, ವಯಾ- ಕಿನ್ನಿಗೋಳಿ, ದ.ಕ

ಭೀತಿ-ಆತಂಕಗಳನ್ನು ದೂರ ಮಾಡಿತು.

ನಮ್ಮ ಮೊದಲ ಭೇಟಿಯಲ್ಲಿಯೇ ನನ್ನನ್ನು ಬಹುವಾಗಿ ಸೆಳೆದದ್ದು ಅವರ ಹೃದಯ ಶ್ರೀಮಂತಿಕೆ. ಪತ್ರಿಕಾದವರ ಮನಸ್ಸಿನ ಭೀತಿ, ಆತಂಕಗಳನ್ನು ದೂರ ಮಾಡುವ ನೇರ ನಡೆ-ನುಡಿ. ಆಸರೆ ಕೋರಿ ಬಂದವನಿಗೆ ಭರವಸೆ ನೀಡುವ ಪ್ರಾಮಾಣಿಕ ಕಳಕಳಿ.

ಇತರರ ಸೇವೆಯೇ ತನ್ನ ಮುಖ್ಯ ಧ್ಯೇಯ ಎನ್ನುವುದನ್ನು ಅವರು ನನಗೊಂದು ಮನೆಯನ್ನು ಕೊಡಿಸುವ ಮೂಲಕ ಸಾಬೀತು ಮಾಡಿದರು.

ಈ ಮನೆ, ಮೂಲ್ಕಿಯ ಬಳಿ, ಶೀನಪ್ಪಯ್ಯ ಕೋಡಿ (ಎಸ್.ಕೋಡಿ) ಪರಿಸರದಲ್ಲಿ, ತಮ್ಮ ಪುನರೂರಿನ ಮನೆಯ ಆಸುಪಾಸಿನಲ್ಲೇ ಸುಮಾರು 7 ಎಕರೆ ಪ್ರದೇಶದಲ್ಲಿ ಅವರು ಕಟ್ಟಿಸಿರುವ 101 ಮನೆಗಳಲ್ಲೊಂದು. ಹಿಂದೆ ಈ ಜಾಗದಲ್ಲಿ ಕಡಿದಾದ ಗುಡ್ಡವಿತ್ತಂತೆ. ಕಡುಬಡವರಿಗೆ, ಅಂಗವಿಕಲರಿಗೆ, ನಿರಾಶ್ರಿತ ವೃದ್ಧವ್ಯಕ್ತಿಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಸಂಕಲ್ಪ ಮಾಡಿದ ಅವರು ಪೊದೆಗಳಿಂದ, ಗಿಡ-ಮರಗಳಿಂದ, ಏರು-ತಗ್ಗುಗಳಿಂದ ಕೂಡಿದ ಈ ಹಾಡಿ-ಗುಡ್ಡದ ಜಾಗವನ್ನು ಅದಕ್ಕಾಗಿ ಆಯ್ದುಕೊಂಡರು. ಲಕ್ಷಗಟ್ಟಲೆ ರೂಪಾಯಿಗಳನ್ನು ವೆಚ್ಚ ಮಾಡಿ ಈ ಜಾಗವನ್ನು ಸಮತಟ್ಟುಗೊಳಿಸಿದರು. ಸುತ್ತಲೂ 10-12 ಅಡಿಗಳಷ್ಟು ಎತ್ತರದ ಪಾಗಾರ (ಕಾಂಪೌಂಡ್) ನಿರ್ಮಿಸಿದರು. ತಲಾ 250 ಚದರ ಅಡಿಗಳ ಆರ್.ಸಿ.ಸಿ. ಮನೆಗಳ ನಿರ್ಮಾಣಕ್ಕೆ ನಕ್ಷೆ ರೂಪಿಸಿದರು. ಪ್ರತಿಮನೆಗೂ ನೀರಿನ ಸೌಲಭ್ಯ, ವಿದ್ಯುತ್ ಸಂಪರ್ಕ ಕಲ್ಪಿಸಿದರು. ವಿದ್ಯುತ್ ಸಂಪರ್ಕಕ್ಕಾಗಿ ಪ್ರತ್ಯೇಕ ಜನರೇಟರ್ ಸ್ಥಾಪಿಸಿದರು. ಪ್ರತಿಯೊಂದು ಮನೆಯ ಸುತ್ತಲೂ ಗಟ್ಟಿಮುಟ್ಟಾದ ಪಾಗಾರ ಕಟ್ಟಿಸಿದರು.

ಈ ನೂರೊಂದು ಮನೆಗಳಿರುವ ಪ್ರದೇಶಕ್ಕಿರುವ ಮಾರ್ಗ ಕಿನ್ನಿಗೋಳಿ ರಸ್ತೆಯನ್ನು ಸೇರಿಕೊಳ್ಳಲು ಬೇಕಾದ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿಸಿದ್ದು ಇವರೇನೇ. ಈ ಮನೆಗಳ ಸಮೂಹದ ಹಿಂಬದಿಯಲ್ಲಿ ವಿಶಾಲವಾದ ಕಲ್ಯಾಣ ಮಂಟಪವನ್ನೂ ಕಟ್ಟಿಸಿದ್ದಾರೆ. ಮನೆಗಳ ಪ್ರವೇಶ ದ್ವಾರಕ್ಕೆ ತಾಗಿಕೊಂಡ ಮುಂಗಡೆಯ ವಿಶಾಲ ಜಾಗವನ್ನು ಇಲ್ಲಿನ ಫಲಾನುಭವಿಗಳ ಮಕ್ಕಳು ಆಡಿಕೊಳ್ಳಲು ಅನುಕೂಲವಾಗುವಂತೆ ಅಂದವಾಗಿ ಸಮತಟ್ಟುಗೊಳಿಸಿಟ್ಟಿದ್ದಾರೆ. ಸೌರದೀಪಗಳ ಪ್ರತ್ಯೇಕ ವ್ಯವಸ್ಥೆ ಮಾಡಿರುವುದು ಅವರ ಮುಂಗಾಣ್ಕೆಯ ಪ್ರತೀಕ.

ಈ ವಸತಿ ಸಮೂಹಕ್ಕೆ ಅತ್ಯಂತ ಸಮೀಪದಲ್ಲಿದೆ ವಿಶ್ವನಾಥ ದೇವಸ್ಥಾನ. ಪ್ರಸಿದ್ಧ ಕಟೀಲು ದೇವಸ್ಥಾನಕ್ಕೆ ಇಲ್ಲಿಂದ ಕೇವಲ ಮೂರು ಕಿಲೋಮೀಟರ್ ದೂರ.

ಹರಿಕೃಷ್ಣ ಪುನರೂರು ಅವರಿಗೆ ಬಡಬಗ್ಗರ, ನಿರಾಶ್ರಿತರ ಬಗ್ಗೆ ಇರುವ ಕಳಕಳಿಯನ್ನು ಪ್ರತ್ಯಕ್ಷ ನೋಡಬೇಕಿದ್ದವರು ಈ ವಸತಿ ಸಮೂಹಕ್ಕೆ ಒಮ್ಮೆ ಭೇಟಿ ನೀಡಬೇಕು! ಇದು ಫಲಾಪೇಕ್ಷೆ ಇಲ್ಲದ ಒಂದು ಜನತಾ ಸೇವೆ.

ಈ ವಸತಿ ಸಮೂಹದ ಪಕ್ಕದಲ್ಲೇ ಇದೆ ಸುಮಾರು ಹತ್ತೂ ಚಿಲ್ಲರೆ ಎಕರೆಯಷ್ಟು ವಿಶಾಲವಾದ ಇನ್ನೊಂದು ಜಾಗ. ಅದು ಮನೆಗಳಿರುವ ಕಡೆಯಿಂದ ಸ್ವಲ್ಪ ತಗ್ಗಿನಲ್ಲಿದೆ. ಮುಖ್ಯರಸ್ತೆಗೂ ಎತ್ತರದಲ್ಲಿರುವ ವಸತಿ ಪ್ರದೇಶಕ್ಕೂ ನಡುವೆ, ವಯಸ್ಸಾದವರು ಆಯಾಸಗೊಳ್ಳದೆ ಓಡಾಡಲು ಅನುಕೂಲವಾಗುವಂತೆ ಒಂದು ಸೇತುವೆ ನಿರ್ಮಿಸಬೇಕು! ಇದು ಪುನರೂರು ಅವರ ಮನಸ್ಸಿನಲ್ಲಿ ಈಗ ಬಂದಿರುವ ಒಂದು ಹೊಸ ಯೋಚನೆ!

ವಸತಿ ಪ್ರದೇಶಕ್ಕೆ ತಾಗಿಕೊಂಡಂತೆ ಇರುವ ಹತ್ತೆಕರೆ ಸ್ವಂತ ಭೂಪ್ರದೇಶ ಎಂದೆನಲ್ಲ- ಇಲ್ಲಿ ಹಿಂದುಳಿದ ಜಾತಿ/ವರ್ಗಗಳ ಜನರಿಗೆ ತಲಾ ಐದೈದು ಸೆಂಟ್ಸ್‌ನಂತೆ ವಿತರಿಸುವ ಯೋಜನೆಯನ್ನು

ಸರಕಾರ ಹಾಕಿಕೊಂಡರೆ, ಈ ಭೂಮಿಯನ್ನು ಬಿಟ್ಟುಕೊಡಲು ಅವರು ತಯಾರಿದ್ದಾರೆ.

ಮನೆಯಿಲ್ಲದವರಿಗೆ ಮನೆ- ಎಂಬ ಮಾತನ್ನು ಸ್ವತಂತ್ರ ಭಾರತದ ಸರಕಾರಗಳು ಹಲವು ವರ್ಷಗಳಿಂದ ಹೇಳುತ್ತಲೇ ಬಂದಿವೆ. ಅದಕ್ಕೆ ಪೂರಕವಾದ ಕಾರ್ಯಕ್ರಮಗಳೂ ಆಯಾ ಸರಕಾರದ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಕಾಲಕಾಲಕ್ಕೆ ನೆರವೇರುತ್ತ ಬಂದಿವೆ. ಇದರಲ್ಲಿ ಸರಕಾರದೊಂದಿಗೆ ಸೇರಿ ಕೆಲಸ ಮಾಡುವ ಕೈಗಳು. ಬೇಕು. ಪುನರೂರರ ಕೈ ಇಂಥ ಕೈ. ಲಯನ್ಸ್ ಪದಾಧಿಕಾರಿಗಳಾಗಿದ್ದಾಗ ಅವರು, ಹಲವು ಮಂದಿ ಹಿಂದುಳಿದ/ ಬಡವರ್ಗಗಳ ಜನರಿಗೆ ಸರಕಾರದವತಿಯಿಂದ ಕೆಲವು ನಿವೇಶನಗಳನ್ನು ಕೊಡಿಸಿದ್ದಿದೆ, ಮನೆಗಳ ನಿರ್ಮಾಣದಲ್ಲಿ ಸಹಕರಿಸಿದ್ದಿದೆ. ಇಂಥ ಪ್ರತ್ಯಕ್ಷ-ಪರೋಕ್ಷ ನೆರವಿನ ಅವರ ಅಭಿಮಾನಕ್ಕೆ ಕಲಶ ಸ್ವರೂಪದಲ್ಲಿದೆ. ಪುನರೂರಲ್ಲಿ ಅವರು ಸ್ವಪ್ರೇರಿತರಾಗಿ, ಕೋಟಿಗಟ್ಟಲೆ ರೂಪಾಯಿ ವೆಚ್ಚದಲ್ಲಿ ಕಟ್ಟಿಸಿಕೊಟ್ಟಿರುವ ನೂರೊಂದು ಮನೆಗಳ ಸಮೂಹ. ಈ ಮನೆಗಳಲ್ಲಿ ಒಂದು ನನ್ನ ಪಾಲಿಗೆ ದಕ್ಕಿರುವುದು ನನ್ನ ಅದೃಷ್ಟ

□

ಭಾಗ: ಎರಡು


ಹೀಗಿದ್ದಾರೆ ಪುನರೂರು

ಸಮಾಜ ಸೇವೆಗೆ ತಾನೇ ಮುಡಿಪು

□ ಉಮೇಶರಾವ್ ಎಕ್ಕಾರು

ಶೋಧನೆ ಮಾಡುವವರು ಅನೇಕ ಮಂದಿ ಇದ್ದಾರೆ. ಆದರೆ ಸಾಧನೆ ಮಾಡುವವರು ಕಡಿಮೆ. ಬದುಕಿನಲ್ಲಿ ಎದುರಾದ ಅಡೆ-ತಡೆಗಳನ್ನು ಲೆಕ್ಕಿಸದೆ ಕೆಚ್ಚೆದೆಯಿಂದ ಮುನ್ನುಗ್ಗಿ ಯಶಸ್ಸಿನ ಸೋಪಾನಗಳನ್ನೇರುತ್ತಾ ಬಂದಿರುವವರು ನನ್ನ ಸಹಪಾಠಿ ಹರಿಕೃಷ್ಣ ಪುನರೂರು ಅವರು.

1950ರ ದಶಕದ ಕೊನೆಯ ಭಾಗದಲ್ಲಿ ಅವರು ಮತ್ತು ನಾನು ತಾಳಿ ಪಾಡಿಯ ಪಾಂಪೈ ಪ್ರೌಢಶಾಲೆಯಲ್ಲಿ ಒಟ್ಟಿಗೇ ಓದಿದವರು, ಆಡಿದವರು. ಆ ನನ್ನ ಗೆಳೆಯ ಮುಂದೊಂದು ದಿನ ರಾಜ್ಯಮಟ್ಟದಲ್ಲಿ ಖ್ಯಾತಿ ಗಳಿಸುತ್ತಾರೆ ಎಂದು ನನಗೆ ತಿಳಿದಿರಲಿಲ್ಲ.



ಅವರಲ್ಲಿ ಅಹಂಕಾರವಿಲ್ಲ, ನಯ-ವಿನಯಗಳಿವೆ. ಬಾಲ್ಯದ ಸ್ನೇಹಿತರನ್ನು ಮರೆಯದ ಸಹೃದಯ ಇದೆ. ಕಂಡಾಗ ಕರೆದು ಮಾತಾಡಿಸುವ ಸೌಜನ್ಯ ಇದೆ. 50 ವರ್ಷಗಳಿಂದಲೂ ಇದೇ ವಿಶ್ವಾಸದಿಂದ ನನ್ನೊಡನೆ ನಡೆದುಕೊಂಡಿದ್ದಾರೆ ಅವರು. ತನ್ನನ್ನು ತಾನೆ ರೂಪಿಸಿಕೊಂಡು ಸಮಾಜದ ಎಲ್ಲ ವರ್ಗಗಳ ಪ್ರೀತಿಗೆ ಪಾತ್ರರಾಗಿರುವ ಹರಿಕೃಷ್ಣರು, ಪೇಜಾವರ ಮಠದ ಸ್ವಾಮೀಜಿಯವರಿಂದ 'ಧರ್ಮದರ್ಶಿ' ಬಿರುದನ್ನು ಪಡೆದಿದ್ದಾರೆ. ಬದುಕಿನುದ್ದಕ್ಕೂ ಆ ಬಿರುದನ್ನು ಸಾರ್ಥಕಗೊಳಿಸಿಕೊಂಡು ಬಂದಿದ್ದಾರೆ.

ನಾವು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ತರಗತಿಯಲ್ಲಿ

ಎಕ್ಕಾರು ಅಂಚೆ, ಪೆರ್ಮುದೆ ಮೂಲಕ, ಮಂಗಳೂರು ತಾಲೂಕು-574 509

ಗಡ್ಡ-ಮೀಸೆ ಬಂದ ವರ್ಷೋತಿ ವಿದ್ಯಾರ್ಥಿಗಳೂ ಇದ್ದರು. ಇಂಥವರಲ್ಲಿ ಆಟ, ಊಟ, ಕಾಟಗಳಲ್ಲೇ ಪ್ರೀತಿ ಇದ್ದ ಇಬ್ಬರಿದ್ದರು. ಒಬ್ಬ ಅಣ್ಣ, ಒಬ್ಬ ತಮ್ಮ. ಪಾಠದ ಸಮಯದಲ್ಲಿ ಇತರರಿಗೆ ತೊಂದರೆ ಕೊಡುವುದು ಅವರ ಹವ್ಯಾಸ. ಅವರನ್ನು ಎದುರಿಸಲು ಇತರ ವಿದ್ಯಾರ್ಥಿಗಳು ಹೆದರುತ್ತಿದ್ದರು – ಹರಿಕೃಷ್ಣರೊಬ್ಬರ ಹೊರತು. ಅವರಿಗೆ ಆ ಹುಡುಗರನ್ನು ದಂಡಿಸುವ ಮನಸ್ಸು. ಒಂದು ದಿನ ಸಮಯ ಸಾಧಿಸಿ ಇಬ್ಬರನ್ನೂ ಡೆಸ್ಕುಗಳ ಮಧ್ಯೆ ಸಿಲುಕಿಸಿಯೇಬಿಟ್ಟರು! ಈ 'ಶಿಕ್ಷೆ'ಯಾದ ಮೇಲೆ ಆ ವಿದ್ಯಾರ್ಥಿಗಳ ಕಾಟ ಕಡಿಮೆಯಾಯಿತು. ಅನ್ಯಾಯಕ್ಕೆ ಪ್ರತಿಭಟನೆ ತೋರಿದ ಈ ಹುಡುಗ ಶಾಲೆಯ ಎಲ್ಲರ ಗಮನ ಸೆಳೆದ. ಅಲ್ಲಿನ ಶಿಕ್ಷಕರಲ್ಲಿ ಒಬ್ಬರು ಹರಿಕೃಷ್ಣರ ಊರಿನವರೇ ಆಗಿದ್ದ ಕಾಳಪ್ಪ ಶೆಟ್ಟಿಗಾರರು. ಅವರಿಂದಾಗಿ ಎಲ್ಲ ಅಧ್ಯಾಪಕರಿಗೂ ಈ ಹುಡುಗ ಪುನರೂರು ಪಟೇಲರ ಮಗ ಎಂದು ತಿಳಿಯಿತು.

ಎಸ್ಸೆಸ್ಸೆಲ್ಸಿಯ ಬಳಿಕ ಹರಿಕೃಷ್ಣರನ್ನು ಅಧ್ಯಯನಕ್ಕಿಂತ ಹೆಚ್ಚು ಆಕರ್ಷಿಸಿದ್ದು ವ್ಯಾಪಾರ. ಮದ್ರಾಸು, ಕೇರಳಗಳಲ್ಲಿ ಹೊಟೇಲು ವ್ಯಾಪಾರದಲ್ಲಿ ಅನುಭವ ಗಳಿಸಿ, ಅನಂತರ ಹುಟ್ಟೂರಿಗೆ ಮರಳಿ ಹೊಟೇಲು ಪ್ರಾರಂಭಿಸಿದರು. ಈ ಉದ್ದಿಮೆಯಲ್ಲಿ ಅವರನ್ನು ಉನ್ನತಿಗೇರುವಂತೆ ಮಾಡಿದ್ದು ದೂರದೂರುಗಳಲ್ಲಿ ಗಳಿಸಿದ್ದ ವ್ಯಾಪಾರದ ಅನುಭವ ಮತ್ತು ಹುಟ್ಟು ಬುದ್ಧಿವಂತಿಕೆ.

ಹರಿಕೃಷ್ಣರು ದೈವಭಕ್ತರು. ಸಂಪತ್ತು ಬಂದಾಗಲೂ ಸಂಪ್ರದಾಯ ಕುರಿತ ಶ್ರದ್ಧೆ ಅವರನ್ನು ಬಿಡಲಿಲ್ಲ. ಎಲ್ಲೇ ಯಾವುದೇ ಕಾರ್ಯಕ್ರಮ ಇರಲಿ, ಎಷ್ಟೇ ಬೇಗ ಪ್ರಯಾಣ ಹೊರಡಬೇಕಾಗಿರಲಿ, ದೇವರ ಪೂಜಾವಿಧಿ ಮುಗಿಸಿಯೇ ಅವರು ಮನೆ ಬಿಡುವವರು. ಪೂಜಾ ವೇಳೆಯಲ್ಲಿ ಮನೆಯವರೆಲ್ಲರೂ ಬಂದು ಎದುರಿಗಿರಲೇಬೇಕು. ದೇವರ ಭಯವೇ ಜ್ಞಾನದ ಮೂಲ; ದೈವದ ಶುಭಾಶೀರ್ವಾದ ಇದ್ದರಷ್ಟೇ ಸುಖ ಸಂಪತ್ತು ಲಭ್ಯ ಎನ್ನುವುದನ್ನು ಅವರು ಬಲ್ಲರು. ಅವರ ಬಿಳಿ ದಿರಿಸಿನಂತೆಯೇ ಅವರ ಹೃದಯವೂ ಶುಭ್ರ! 'ಶುಭವಾಗಲಿ' ಎನ್ನುವುದು ಅವರ ಧ್ಯೇಯವಾಕ್ಯ.

ಅವರು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಸಾಹಿತ್ಯರಂಗದಲ್ಲಿ ಒಂದು ರೀತಿಯ ಕ್ರಾಂತಿಯನ್ನೇ ಮಾಡಿದರು. ತಾಲೂಕು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಕಡೆ ನಡೆದವು. ಅವರ ಮೂಲಕ ಜನಸಾಮಾನ್ಯರಿಗೂ ಸಾಹಿತ್ಯ ಎಂದರೇನೆಂದು ಅರಿವಾಯಿತು. ಸಾಹಿತ್ಯ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟ ಕಂಡವು. ಅರ್ಹ ಸಾಹಿತಿ, ಕಲಾವಿದರು ಗುರುತಿಸಲ್ಪಟ್ಟರು, ಸನ್ಮಾನಿಸಲ್ಪಟ್ಟರು. ಸಾಹಿತ್ಯದ ವಿವಿಧ ಪ್ರಕಾರಗಳ ಕುರಿತು ಚರ್ಚೆ ವಿಮರ್ಶೆ ನಡೆದವು. ಸಾಹಿತಿಗಳು ಪರಸ್ಪರ ಸೇರಿ ಪರಿಚಯ ಮಾಡಿಕೊಳ್ಳುವಂತಾಯಿತು. ಅವರು ಜಿಲ್ಲಾ ಕಸಾ.ಪ. ಘಟಕಾಧ್ಯಕ್ಷರಾಗಿದ್ದಾಗ ಮಂಗಳೂರಿನಲ್ಲಿ ಅಖಿಲ ಭಾರತ 66ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿಯಾಗಿ ನಡೆದುದು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಚುನಾಯಿತರಾದಾಗ ದಕ್ಷಿಣ ಕನ್ನಡಿಗನೊಬ್ಬ ಪ್ರಥಮ ಬಾರಿಗೆ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಗದ್ದುಗೆ ಏರಿದನೆಂದು ಜಿಲ್ಲೆಯ ಎಲ್ಲರೂ ಸಂತೋಷಪಟ್ಟರು. ಆ ಮೂರು ವರ್ಷಗಳ ಅವಧಿಯಲ್ಲಿ ಅವರು ಯಾವ ರೀತಿಯ ಗೌರವಧನವನ್ನೂ ಪಡೆಯಲಿಲ್ಲ. ಸಾಹಿತ್ಯ ಸೇವೆ ಎನ್ನುವುದು ಇದನ್ನೇ.

ಈ ಮೂರು ವರ್ಷಗಳ ಆಡಳಿತಾವಧಿಯಲ್ಲಿ ಅವರು ಕಷ್ಟದಲ್ಲಿದ್ದ ಪರಿಷತ್ತನ್ನು ಲಾಭದ ಕಡೆಗೆ ಒಯ್ದರು. ಕಟ್ಟಡದ ದುರಸ್ತಿ, ಸುಣ್ಣ ಬಣ್ಣ, ಕೃತಿಗಳ ಪ್ರಕಟಣೆ, ನೂರಾರು ದತ್ತಿ ಯೋಜನೆಗಳು, ಅಮೃತ ನಿಧಿ ಸಂಗ್ರಹದಂಥ ರಚನಾತ್ಮಕ ಕಾರ್ಯಗಳು ಪರಿಷತ್ತನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸಿವೆ. 'ಕನ್ನಡ ನುಡಿ' ಪರಿಷತ್ತಿನ ಮುಖವಾಣಿ. ಅದು ಹೊಸ ರೂಪದಲ್ಲಿ ಪ್ರಕಟವಾಯಿತು. ಸಾಹಿತ್ಯ ಪರಿಷತ್ತಿನಲ್ಲಿ ರಾಶಿ ಬಿದ್ದಿದ್ದ

ಪ್ರಕಟಣೆಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಮಾಡಿದರು. ಐದು ಕೋಟಿ ಕನ್ನಡಿಗರಿಗಾಗಿ 'ತನು ಕನ್ನಡ-ಮನ ಕನ್ನಡ' ಎನ್ನುವ ಮಾತಿನಂತೆ ಅವರು ಸಲ್ಲಿಸಿದ ಸೇವೆ ಈ ತೆರನದು.

ಅವರ ಅಧ್ಯಕ್ಷತೆಯ ಅವಧಿಯಲ್ಲಿ ರಾಜ್ಯದಾದ್ಯಂತ ಮಾತ್ರವಲ್ಲದೆ ಇತರ ಜಿಲ್ಲೆಗಳಲ್ಲೂ ಕನ್ನಡ ಸಾಹಿತ್ಯ ಸಮ್ಮೇಳನಗಳು ಜರಗಿದವು. ಮೂಡಬಿದರೆಯಲ್ಲಿ 71ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಸಂಭ್ರಮದಿಂದ ಜರಗಿತು. ಸಾಹಿತ್ಯ ಸಮ್ಮೇಳನಗಳು ರಾಜ್ಯ, ಜಿಲ್ಲೆ ತಾಲೂಕು ಮಟ್ಟಗಳಿಂದ ಹೋಬಳಿ, ಗ್ರಾಮ, ಗೃಹ ಸಮ್ಮೇಳನದವರೆಗೂ ವಿಸ್ತರಿಸಿದವು. ಮೂಲ್ಕಿಯಲ್ಲಿ ಪ್ರಪ್ರಥಮ ಹೋಬಳಿ ಸಮ್ಮೇಳನ ಹಾಗೂ ಕಿನ್ನಿಗೋಳಿಯಲ್ಲಿ ಪ್ರಪ್ರಥಮ ಗೃಹ ಕನ್ನಡ ಸಾಹಿತ್ಯ ಸಮ್ಮೇಳನಗಳು ಜರಗಿದವು. ಕನ್ನಡದ ಕಾಯಕದ ಕಸ್ತೂರಿಯ ಪರಿಮಳವು ಹೀಗೆ ನಾಡಿನ ಎಲ್ಲೆಲ್ಲೂ ಹಬ್ಬಿತು. ಸಾಹಿತ್ಯ ಸಮ್ಮೇಳನಗಳಲ್ಲಿ ವಿಶ್ವದಾದ್ಯಂತ ಇದ್ದ ಕನ್ನಡಿಗರು ಕಟ್ಟಿಕೊಂಡಿದ್ದ ಕನ್ನಡ ಸಂಘಟನೆಗಳಿಗೂ ಕರೆನೀಡಿ ಪಾಲ್ಗೊಳ್ಳುವಂತೆ ಮಾಡಿದವರು ಹರಿಕೃಷ್ಣರು.

ಬಪ್ಪನಾಡು, ಕೊಲ್ಲೂರುಗಳೇ ಮೊದಲಾದ ದೇವಳಗಳ ಆಡಳಿತ ಮೊಕ್ತೇಸರರಾಗಿ ಅವರು ಅವುಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದಿದ್ದಾರೆ. ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿದ್ದಾರೆ. ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಉತ್ಸಾಹದಿಂದ ತೊಡಗಿಕೊಂಡು 'ನಭೂತೋ ನಭವಿಷ್ಯತಿ' ಎಂಬಂಥ ನೇತ್ರ ಶಿಬಿರಗಳನ್ನು ಜರಗಿಸಿ ದೃಷ್ಟಿದಾನ ಚಿಕಿತ್ಸಾ ಕಾರ್ಯದಲ್ಲಿ ಅದ್ಭುತವನ್ನು ಸಾಧಿಸಿದ್ದಾರೆ. ಆ ಸಂಸ್ಥೆಯ ಸೇವಾರ್ಥವಾಗಿ ವಿದೇಶ ಪ್ರವಾಸಗಳನ್ನು ಮಾಡಿದ್ದಾರೆ. ತನ್ನ ಸಾಧನೆಗಳಿಗಾಗಿ ನೂರಕ್ಕೂ ಹೆಚ್ಚಿನ ಸಂಘ-ಸಂಸ್ಥೆಗಳಿಂದ ಸಮ್ಮಾನಿತರಾಗಿದ್ದಾರೆ. ವಿವಿಧ ಪ್ರಶಸ್ತಿಗಳ ಸರಮಾಲೆ ಅವರನ್ನು ಅಲಂಕರಿಸಿದೆ. ಮಾತ್ರವಲ್ಲದೆ ಕರ್ನಾಟಕ ಸರಕಾರ ಈ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು 2005ರಲ್ಲಿ ನೀಡಿ ಗೌರವಿಸಿದೆ.

ಬಡ ಜನರಲ್ಲಿ ಹರಿಕೃಷ್ಣರಿಗೆ ಅತ್ಯಂತ ಕಳಕಳಿ. ಮೂರು ಕೋಟಿಗೂ ಮಿಕ್ಕಿ ವೆಚ್ಚ ಮಾಡಿ ನೂರೊಂದು ಸುಂದರ ಸುಸಜ್ಜಿತ ತಾರಸಿ ಮನೆಗಳನ್ನು ಬಡವರಿಗಾಗಿ ಕಟ್ಟಿಸಿಕೊಟ್ಟಿದ್ದಾರೆ. ಈ ರೀತಿಯಲ್ಲಿ ವ್ಯಕ್ತಿಯೊಬ್ಬರು ಇಂಥ ಕೆಲಸ ಮಾಡಿರುವುದು ರಾಜ್ಯದಲ್ಲಿ ಇದೇ ಪ್ರಥಮ. ಹಲವು ವಿದ್ಯಾಸಂಸ್ಥೆಗಳ ಸಂಚಾಲಕರಾಗಿ, ಶಿಕ್ಷಕರ ಕೊರತೆಯಿದ್ದಲ್ಲಿ ತಾನೇ ಕೈಯಿಂದ ಸಂಬಳ ಕೊಟ್ಟು ಸಹಕರಿಸಿದ್ದಾರೆ. ವರ್ಷವೊಂದಕ್ಕೆ ಇವರು ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಸುಮಾರು ಒಂದೂವರೆ ಲಕ್ಷ! ಇಷ್ಟೇ ಅಲ್ಲ, ಮೂಲ್ಕಿಯ ಅವರ ಕಾರ್ಯಾಲಯಕ್ಕೆ ಧನ ಸಹಾಯದ ನಿರೀಕ್ಷೆಯಲ್ಲಿ ಬರುವ ಜನ ಸಾಲು ಗಟ್ಟಿ ಬರುತ್ತಾರೆ.

ಅವರ ಬೇಡಿಕೆಗಳು ಹಲವು ವಿಧ. ವಿದ್ಯಾರ್ಥಿಗಳು ಕಲಿಯಲು ಹಣಕ್ಕಾಗಿ ಬರುತ್ತಾರೆ. ರೋಗಿಗಳು ಔಷಧಿ ಖರೀದಿಗೆ ನೆರವು ಕೋರಿ ಬಂದರೆ ಇತರ ಹಲವರು ಮಕ್ಕಳ ಮದುವೆ ಅಥವಾ ಇನ್ನಿತರ ವೈಯಕ್ತಿಕ/ ಕೌಟುಂಬಿಕ ಕಷ್ಟ ಸಂಕಷ್ಟಗಳನ್ನ ಮುಂದಿಟ್ಟುಕೊಂಡು ಬರುತ್ತಾರೆ. ಸಂಘ-ಸಂಸ್ಥೆಗಳ ಉತ್ಸವ ಆಚರಣೆಗಾಗಿ ದೇಣಿಗೆ ನಿರೀಕ್ಷಿಸಿ ಬರುವವರು ಕೆಲವರು. ಹರಿಕೃಷ್ಣರು ತನ್ನ ಸಂಪಾದನೆಯ ಹೆಚ್ಚಿನ ಹಣವನ್ನು ಈ ರೀತಿ ದಾನ ಮಾಡುತ್ತಾರೆ.

ಕೊಟ್ಟ ಹಣವೆಲ್ಲವೂ ಸದುಪಯೋಗವಾಗುವುದಿಲ್ಲ, ಸುಳ್ಳು ನೆಪಹೇಳಿ ಹಣ ಪಡೆದು ಈ ದುರುಪಯೋಗ ಮಾಡಬಾರದು ಎನ್ನುವ ಭಾವನೆ ಹರಿಕೃಷ್ಣರಿಗಿದೆ. ರೋಗಿಗಳಿಗೆ ತಾನು ಔಷಧಿ ಖರೀದಿಸಿಕೊಟ್ಟರೆ ಅದನ್ನೇ ಪುನಃ ಮದ್ದಿನಂಗಡಿಗೆ ಕಡಿಮೆ ಬೆಲೆಗೆ ಮಾರಿ ಸಿಕ್ಕಿದ ಹಣವನ್ನು ಕುಡಿತಕ್ಕೆ ಉಪಯೋಗಿಸಿದ ನಿದರ್ಶನಗಳನ್ನು ಗಮನಿಸಿದ್ದಾರೆ. ಮಕ್ಕಳಿಗೆ ಕಲಿಸಲು ಧನ ಸಹಾಯ ಯಾಚಿಸಿ

ಬರುವವರಿಗೆ 500-600 ರೂಪಾಯಿಗಳ ಪುಸ್ತಕಗಳನ್ನು ತೆಗೆದುಕೊಟ್ಟರೆ, ಅದೇ ಪುಸ್ತಕಗಳನ್ನು ಅಂಗಡಿಗೆ ಹಿಂದೆ ಕೊಟ್ಟು ಹಣ ಪಡೆದು ಹೋದ ಪತ್ತವರ ಉದಾಹರಣೆಗಳೂ ಇವೆ! ತನ್ನಿಂದ ಧನಸಹಾಯ ಪಡೆಯುವವರ ಈ ಬುದ್ಧಿ ಹರಿಕೃಷ್ಣರಿಗೆ ಬೇಸರ ತರಿಸುತ್ತದೆ. 'ಲೋಕದಲ್ಲಿ ಎಂತೆಂತಹ ಜನರಿದ್ದಾರೆ ನೋಡಿ!' ಎಂದು ಅವರು ಜನರ ಬುದ್ಧಿಗಾಗಿ ಮರುಗುವುದೂ ಉಂಟು.

ಒಂದು ಸಲ ವಿದ್ಯಾರ್ಥಿಯೊಬ್ಬ ನನ್ನಲ್ಲಿ ಬಂದು ತನಗೆ ಕಲಿಯಲು ಹಣವಿಲ್ಲದ್ದರಿಂದ ಏಪ್ರಿಲ್-ಮೇ ರಜೆಯಲ್ಲಿ ಅವರ ಹೋಟೇಲಿನಲ್ಲಿ ಕೆಲಸ ಮಾಡುತ್ತೇನೆ, ಬಂದ ಹಣ ಓದಿಗಾಗಿ ಬಳಸುತ್ತೇನೆ ಎಂದು ಅರಿಕೆ ಮಾಡಿಕೊಂಡ. ನಾನು ಹರಿಕೃಷ್ಣರ ಹೆಸರು ಸೂಚಿಸಿ ಪತ್ರಕೊಟ್ಟೆ. ವಿದ್ಯಾರ್ಥಿಗೆ ತನ್ನ ಹೋಟೇಲಿನಲ್ಲಿ ಉದ್ಯೋಗ ಕೊಟ್ಟರು. ಎರಡು ತಿಂಗಳು ದುಡಿದ ಸಂಬಳದೊಂದಿಗೆ ಒಂದೆರಡು ಸಾವಿರ ಹಣವನ್ನು ಹೆಚ್ಚುವರಿಯಾಗಿ ಕೊಟ್ಟು ಬೆನ್ನುತಟ್ಟಿ ಕಳುಹಿಸಿದರು. ಇಂದು ಆ ವಿದ್ಯಾರ್ಥಿ ಪದವೀಧರನಾಗಿ ಉದ್ಯೋಗ ಗಳಿಸಿದ್ದಾನೆ. ಧರ್ಮದರ್ಶಿಗಳ ಹೃದಯ ವೈಶಾಲ್ಯವನ್ನು ಸದಾ ಸ್ಮರಿಸುತ್ತಾನೆ.

ಅದೊಂದು ದಿವಸ ಕಟೀಲು ದೇವಸ್ಥಾನದಲ್ಲಿ ಅಡುಗೆ ಕೆಲಸದಲ್ಲಿದ್ದು ನಮ್ಮ ಮನೆಯ ಹತ್ತಿರ ಚಿಕ್ಕ ಬಿಡಾರದಲ್ಲಿದ್ದವರು ನಮ್ಮ ಮನೆಗೆ ಬಂದರು. 'ನಾನು ಐದು ಸೆಂಟ್ ಸ್ಥಳದಲ್ಲಿ ಮನೆ ಕಟ್ಟಿಸುತ್ತಿದ್ದೇನೆ. ಪಂಚಾಂಗ ಹಾಕಿದ್ದೇನೆ. ನಾನು ಮನೆ ಕಟ್ಟಿಸುವುದು ಹೌದೆಂದು ನೀವು ನೋಡಿ ಪತ್ರ ಕೊಡಬೇಕು ಎಂದು ಹರಿಕೃಷ್ಣರು ಹೇಳಿದ್ದಾರೆ. ಅವರು ಧನಸಹಾಯ ಮಾಡುತ್ತಾರಂತೆ' ಎಂದರು. ಹೋಗಿ ನೋಡಿ ಶಿಫಾರಸು ಪತ್ರ ಕೊಟ್ಟೆ. ಹರಿಕೃಷ್ಣರು ಅವರಿಗೆ ಹಣದ ನೆರವು ಒದಗಿಸಿದರು. ಆ ಬಡಪಾಯಿಗೆ ಸ್ವಂತ ಮನೆಯಾಯಿತು. ಕೊಟ್ಟ ಹಣ ಸಾರ್ಥಕವಾಗಿ ಉಪಯೋಗಿಸಲ್ಪಡಬೇಕು ಎನ್ನುವ ದೂರದೃಷ್ಟಿ ಇದು.

ಹಿರಿಯ ಸಾಹಿತಿ ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ವೃದ್ಧಾಪ್ಯದಲ್ಲಿ ಉಡುಪಿಯಲ್ಲಿದ್ದರು. ತೀರಾ ಅಸೌಖ್ಯದಲ್ಲಿದ್ದರು. ಧರ್ಮದರ್ಶಿಗಳು ಅವರನ್ನು ನೋಡಲು ಹೋದಾಗ ಮನೆಯಲ್ಲಿ ಪರಮೇಶ್ವರ ಭಟ್ಟರು ಪ್ರಕಟಿಸಿದ ಪುಸ್ತಕಗಳ ರಾಶಿಯನ್ನು ಕಂಡರು. 'ಕೃತಿಗಳನ್ನು ಕೊಂಡು ಓದುವವರು ಇಲ್ಲದೆ ಉಳಿದು ಬಿಟ್ಟಿವೆ' ಎಂದು ಎಸ್ವಿಪಿ ಅವರು ಮಾತಿನ ನಡುವೆ ಬೇಸರಿಸಿದಾಗ, ಹರಿಕೃಷ್ಣರು ಎಲ್ಲಾ ಪ್ರಕಟನೆಗಳನ್ನೂ ತನಗೆ ಕೊಡುವಂತೆ ನಿವೇದಿಸಿ ಒಯ್ದು ಮಾರಾಟ ಮಾಡಿ ಸಂಪೂರ್ಣ ಹಣವನ್ನು ಪರಮೇಶ್ವರ ಭಟ್ಟರಿಗೆ ಒಪ್ಪಿಸಿದರು. ಮಾತ್ರವಲ್ಲದೆ ಅವರನ್ನು ಸನ್ಮಾನಿಸಿ ಗೌರವಿಸಿದರು.

ನನ್ನಲ್ಲಿ ಅಪೂರ್ವ ಕನ್ನಡ ಪತ್ರಿಕಾ ಸಂಗ್ರಹವಿದೆ. ಇಂದಿನ-ಹಿಂದಿನ ಪತ್ರಿಕೆಗಳ ಸಂಗ್ರಹವಿದೆ. ಸಾವಿರಕ್ಕೂ ಮಿಕ್ಕಿ ಬೇರೆ ಬೇರೆ ಕನ್ನಡ ಪತ್ರಿಕೆಗಳನ್ನು ಹರಿಕೃಷ್ಣರು ನನಗೆ ಕೊಟ್ಟಿದ್ದಾರೆ. ತಾನು ಕೊಂಡ, ಪಡೆದ ಪತ್ರಿಕೆಗಳನ್ನು ನನ್ನ ಸಂಗ್ರಹಕ್ಕೆ ಒದಗಿಸಿ ನನ್ನ ಪತ್ರಿಕಾ ಸಂಗ್ರಹವನ್ನು ಬೆಳೆಸಿದ್ದಾರೆ. ತನ್ನಲ್ಲಿನ ಕೆಲವು ಪುಸ್ತಕಗಳನ್ನು ಗ್ರಂಥಾಲಯಕ್ಕೂ ಕೊಡುತ್ತಾರೆ. ತನಗೆ ಬಂದಿರುವ ಸಾವಿರಾರು ಗ್ರೀಟಿಂಗ್ ಕಾರ್ಡ್‌ಗಳನ್ನು ಕಟೀಲು ಪದವಿಪೂರ್ವ ವಿದ್ಯಾಲಯಕ್ಕೆ ಕೊಟ್ಟಿದ್ದಾರೆ. ಯಾವುದೇ ವಸ್ತು ಹಾಳಾಗಬಾರದು, ಎಲ್ಲಾದರೂ ಉಪಯೋಗವಾಗಬೇಕು ಎನ್ನುವುದು ಅವರ ಕಾಳಜಿ.

ಸಾಹಿತ್ಯ ಸಮ್ಮೇಳನವಾಗಲಿ, ಸಮಾರಂಭಗಳಾಗಲಿ, ತಾನು ತೆರಳುವಾಗ ಯಾರಾದರೂ ಅಲ್ಲಿಗೆ ಹೋಗುವವರಿದ್ದಾರೆಂದು ತನ್ನೊಂದಿಗೆ ಕರೆದುಕೊಂಡು ಹೋಗುವ ಔದಾರ್ಯ ಅವರದು.

12 ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಹುಟ್ಟಿಕೊಂಡಿತು. ಅದರ ಗೌರವಾಧ್ಯಕ್ಷ ಪುನರೂರು. ಸ್ಥಾಪನೆಯ ಸಂದರ್ಭದಲ್ಲೇ 10 ಸಾವಿರ ರೂ.ಗಳನ್ನು ಕೊಟ್ಟು ಸಹಕರಿಸಿದವರು ಪುನರೂರು. ಮಾತ್ರವಲ್ಲದೆ ಪ್ರತಿ ವರ್ಷ ಅದರ ಮಹಾಸಭೆ, ಜರಗುವುದು ಮೂಲ್ಕಿಯ ಇವರ ಟೂರಿಸ್ಟ್ ಹೋಂನ ಸಭಾಂಗಣದಲ್ಲಿ. ಆ ಕಾರ್ಯಕ್ರಮಕ್ಕೆ ಬಂದವರಿಗೆಲ್ಲಾ ಉಚಿತ ಕಾಫಿ ತಿಂಡಿ

ಊಟ ಉಪಚಾರ ಬೇರೆ. ಮಕ್ಕಳ ಸಾಹಿತ್ಯ ಸಂಗಮದ ಬೆಳವಣಿಗೆಗೆ ಹರಿಕೃಷ್ಣರದು ತುಂಬು ಮನಸ್ಸಿನ ಸಹಕಾರ.

ಈಚೆಗೆ ಹರಿಕೃಷ್ಣರ ಷಷ್ಟ್ಯಬ್ದ ಸಮಾರಂಭವು ಅದ್ದೂರಿಯಾಗಿ ಜರುಗಿದೆ. ದೂರದೂರದಲ್ಲಿರುವ ಅವರ ಕುಟುಂಬಿಕರೆಲ್ಲರೂ ಈ ಸಂದರ್ಭದಲ್ಲಿ ಬಂದಿದ್ದಾರೆ. ನೂರಾರು ಮಂದಿ ಬಂಧು-ಮಿತ್ರರು ಭಾಗಿಗಳಾಗಿದ್ದಾರೆ. ಈ ಕಾರ್ಯಕ್ರಮದಲ್ಲಿ ಪ್ರೀತಿಯ ಮಹಾಪೂರವೇ ಹರಿಯಿತು. ಅಲ್ಲಿಗೆ ಆಗಮಿಸಿದವರಿಗೆ ಕಂಡದ್ದು ಆ ಕುಟುಂಬದ ಒಗ್ಗಟ್ಟು, ಹರಿಕೃಷ್ಣರ ಬಗೆಗಿರುವ ಬಂಧುಗಳ ವಿಶ್ವಾಸ. ಕುಟುಂಬಿಕರು ಅವರನ್ನು ಸನ್ಮಾನಿಸಿದ ರೀತಿ ಅಭೂತಪೂರ್ವ. ಪತ್ರಕರ್ತರು, ಸಾಹಿತಿಗಳು, ಮಠಾಧಿಪತಿಗಳು ನಾನಾ ಸಂಘ ಸಂಸ್ಥೆಗಳವರು, ಈ ಸಂದರ್ಭದಲ್ಲಿ ಅವರ ಜೊತೆಗೆ ಇದ್ದರು.


ಎಳವೆಯಲ್ಲೇ ತಂದೆಯನ್ನು ಕಳೆದುಕೊಂಡವರು ಪುನರೂರು. ಅಣ್ಣ ಪಟೇಲ್ ವೆಂಕಟೇಶ ರಾಯರ ಶಿಸ್ತಿನ ಗರಡಿಯಲ್ಲಿ ಬೆಳೆದವರು. ಅಣ್ಣನಲ್ಲಿ ಅವರಿಗೆ ಅಪೂರ್ವ ಗೌರವ. ಗುರು-ಹಿರಿಯರಲ್ಲಿ ಭಕ್ತಿ, ಕಿರಿಯರಲ್ಲಿ ಅಪಾರ ಪ್ರೀತಿ. ತನ್ನ ಗುರುಗಳಾಗಿದ್ದ ದಿವಂಗತ ಕೊಡೆತ್ತೂರು ಅನಂತ ಪದ್ಮನಾಭ ಉಡುಪರನ್ನು, ಅವರು ಸ್ಥಾಪಿಸಿದ ಯುಗಪುರುಷ ಪತ್ರಿಕೆಯನ್ನು ವಿಶ್ವಾಸದಿಂದ ಕಂಡಿದ್ದಾರೆ. ಅದಕ್ಕೆ ಸದಾ ತನ್ನ ನೈತಿಕ ಬೆಂಬಲ ನೀಡಿದ್ದಾರೆ. ಶ್ರೀರಾಮಚಂದ್ರ-ತಂದೆಗೆ ಪ್ರೀತಿಯ ಮಗನಾಗಿ, ಪ್ರಜೆಗಳಿಗೆ ರಕ್ಷಕನಾಗಿ, ಸೀತಾಪತಿಯಾಗಿ, ಶಿಷ್ಟಪಾಲಕನಾಗಿ, ಎಲ್ಲರಲ್ಲಿಯೂ ಅವರವರ ಭಾವಕ್ಕನುಗುಣವಾಗಿ ಪ್ರೀತಿ ತೋರಿಸಿ ಮರ್ಯಾದಾ ಪುರುಷೋತ್ತಮನೆನ್ನಿಸಿದ್ದಾನೆ. ಹರಿಕೃಷ್ಣರನ್ನು ಕಂಡಾಗ ನನಗೆ ಅಂಥ ವ್ಯಕ್ತಿತ್ವ ಇವರದು ಎಂದು ಸಂತೋಷವಾಗುತ್ತದೆ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಲಯನ್ಸ್ ಸಂಸ್ಥೆಗೆ ಕನ್ನಡದ ದೀಕ್ಷೆ

☐ ಡಾ|| ಪಾ. ನ. ಮಯ್ಯ



ಸದಾ ಶುಭ್ರ ಶ್ವೇತ ವಸನಧಾರಿಯಾದ ಧರ್ಮದರ್ಶಿ ಹರಿಕೃಷ್ಣ ಪುನರೂರರದು ಆಕರ್ಷಕ ನಿಲುವು. ಎತ್ತರಕ್ಕೆ ತಕ್ಕ ಉಡಿಯಲ್ಲಿ ಬಿಗಿದುಟ್ಟ ಪಂಚೆ, ತುಂಬು ತೋಳಿನ ಬಿಳಿಷರ್ಟಾದರೂ ಸದಾ ಮಡಚಿದ ತೋಳಿನಲ್ಲಿ ಕಾಣುವ ಸೊಗಸು, ಲಗು-ಬಗೆಯ ನಡಿಗೆ, ಅಷ್ಟೇ ಅವಸರದ ಮಾತುಗಾರಿಕೆ, ಮಂಗಳೂರಿನ ಸುತ್ತ-ಮುತ್ತ ನಡೆವ ಯಾವುದೇ ಸಾಂಸ್ಕೃತಿಕ-ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಎದ್ದುಕಾಣುವ ಮುಖ ಪುನರೂರರದ್ದು ಎಂದರೆ ತಪ್ಪಾಗಲಿಕ್ಕಿಲ್ಲ. ಸರಕಾರವನ್ನೇ ತರಾಟೆಗೆ ತೆಗೆದುಕೊಳ್ಳುವ ಸಭೆ ಅಥವಾ ಪ್ರತಿಭಟನೆಯಾಗಬಹುದು, ಅಥವಾ ಕನ್ನಡಪರ ಯಾವುದೇ ಜಾಥಾವಾಗಬಹುದು ಪುನರೂರರವರು ನಿರ್ಭಿಡೆಯಿಂದ ನಾಲ್ಕು ಸೊಲ್ಲು, ತನಗೆ ಗೊತ್ತಿದಷ್ಟನ್ನು ಹೇಳುತ್ತಾ, ನೊಂದವರ ಪರನಿಲ್ಲುತ್ತಾ ಕಾರ್ಯ ಸಾಧ್ಯ ಹೆಜ್ಜೆಗಳನ್ನು ಹಾಕುತ್ತಾ ಬಂದವರು. ಸುಮಾರು ಅರವತ್ತೆರಡು ಸಾರ್ಥಕ ವಸಂತಗಳನ್ನು ಕಳೆದು ಇಡೀ ಕನ್ನಡ ನೆಲಕ್ಕೇ 'ಶುಭವಾಗಲಿ' ಎಂದು ಹರಸುವ ಚೈತನ್ಯ ಅವರದ್ದು. ಕುವೆಂಪು ಹೇಳಿದ 'ಕನ್ನಡ ಸೇನಾನಿ'ಯ ಕ್ರಿಯಾಶೀಲತೆ ಮತ್ತು ನಾಯಕತ್ವ ಅವರಲ್ಲಿದೆ. ಕನ್ನಡಕ್ಕೆ ಆತಂಕ ಎದುರಾದಾಗಲೆಲ್ಲ ಪುನರೂರರಂತಹ ವ್ಯಕ್ತಿತ್ವ ಬಹು ಮುಖ್ಯವಾಗುತ್ತದೆ ಎನ್ನುವುದು ಈ ಹಿಂದೆ ಕನ್ನಡ ಕಟ್ಟಿದ ಅನುಭವಿಗಳ ಮಾತು. ಸಾಹಿತ್ಯ

'ತಪೋವ', 3ನೇ ಅಡ್ಡರಸ್ತೆ, ಲೋವರ್ ಬೆಂದೂರು, ಕಂಕನಾಡಿ, ಮಂಗಳೂರು-575 002

ಸಮ್ಮೇಳನವನ್ನು ರಾಷ್ಟ್ರಮಟ್ಟದಿಂದ ಹೋಬಳಿ ಮಟ್ಟದವರೆಗೂ ಪ್ರಚುರಗೊಳಿಸಿ ಪುಸ್ತಕ ಸಂಸ್ಕೃತಿಯನ್ನು ಜನಪ್ರಿಯಗೊಳಿಸಿದವರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಖ್ಯೆಯಷ್ಟೇ ಪುಸ್ತಕಗಳನ್ನು ಪ್ರಕಟಿಸಿ ಅವೆಷ್ಟೋ ಯುವ, ಅರುಣ ಪ್ರತಿಭೆಗಳನ್ನು ಪ್ರೋತ್ಸಾಹಿಸಿದವರು. ಅದೆಲ್ಲಕ್ಕಿಂತ ಹೆಚ್ಚಾಗಿ ಸಾಹಿತ್ಯ ಸಮ್ಮೇಳನಕ್ಕೆ ಬಂದ ಅತಿಥಿಗಳಿಗೆ ಯಾವ ಕೊರತೆಯೂ ಆಗದಂತೆ ಸಮ್ಮೇಳನ ನಡೆಯುವ ನೆಲದ ವೈಶಿಷ್ಟ್ಯಗಳನ್ನು ಬಗೆಬಗೆಯ ಖಾದ್ಯಗಳ ಮೂಲಕವೇ ತೋರಿಸಿಕೊಟ್ಟವರು. ಕರಾರುವಾಕ್ಕಾದ ಸಮ್ಮೇಳನದ ಅನಂತರ ಅದರ ಲೆಕ್ಕ ಒಪ್ಪಿಸುವ ರೀತಿ ಕೂಡಾ ಇತರ ಅಧ್ಯಕ್ಷರಿಗೆ ಮಾದರಿಯಾದಂತಿದೆ.

ಇಂತಹ ಪುನರೂರರ ಪ್ಯಾಂಟು-ಸೂಟ್, ಟೈ ಧಾರಿ ವ್ಯಕ್ತಿತ್ವದ ಬಗ್ಗೆ ಹೆಚ್ಚಿನವರಿಗೆ ತಿಳಿದಿರಲಿಕ್ಕಿಲ್ಲ. ಪುನರೂರು ಪ್ಯಾಂಟ್ ಹಾಕುತ್ತಾರೆಯೇ ಎಂದು ಹುಬ್ಬೇರಿಸುವ ಮಂದಿ ಹಲವರಿರಬಹುದು. ಅವರನ್ನು ಲಯನ್ಸ್ ರಾಜ್ಯಪಾಲರನ್ನಾಗಿ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ವಿದೇಶದಲ್ಲಿ ಪುನರೂರರು ಯಾವ ಬಟ್ಟೆ ಹಾಕಿಕೊಳ್ಳುತ್ತಾರೆ? ಯಾವ ಭಾಷೆಯಲ್ಲಿ ಮಾತನಾಡುತ್ತಾರೆ? ಹೇಗೆ ಲಯನ್ಸ್ ಶಿಷ್ಟಾಚಾರವನ್ನು ರೂಢಿಸಿಕೊಳ್ಳುತ್ತಾರೆ? ಮುಂತಾದ ಹಲವು ಹತ್ತು ಪ್ರಶ್ನೆಗಳಿಗೆ ಉತ್ತರವಾದವರು. ಲಯನ್ಸ್ ಮತ್ತು ಲಯನಿಸಂ ಎನ್ನುವುದು ಏನಿದ್ದರೂ ಇಂಗ್ಲಿಷನ್ನು ಅರಳು ಹುರಿದಂತೆ ಉದುರಿಸಬಲ್ಲ ಮೇಧಾವಿಗಳಿಗೆ ಸೇರಿದ್ದು ಎಂಬ ಭ್ರಾಮಕ ಕಲ್ಪನೆಯಲ್ಲಿದ್ದವರು ಮಾತ್ರ ಈ ರೀತಿ ಯೋಚಿಸಬಲ್ಲರು. ಪುನರೂರು ಲಯನ್ಸ್ ರಾಜ್ಯಪಾಲರಾಗಿ ಆಯ್ಕೆಗೊಂಡಾಗ ಲಯನ್ಸ್ ಜಿಲ್ಲೆ 324-ಡಿ4ರ ವಿವಿಧ ಕಂದಾಯ ಜಿಲ್ಲೆಗಳಾದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಮಡಿಕೇರಿ, ಉತ್ತರ ಕನ್ನಡ ಜಿಲ್ಲೆಯ ಲಯನ್ಸ್ ಬಂಧುಗಳು ಆನಂದ ತುಂದಿಲರಾದರು. ದೀನ-ದಲಿತರ ಕಣ್ಣೀರೊರೆಸುವ ಲಯನ್ಸ್ ಚಳವಳಿಯ ಧ್ಯೇಯವಾಕ್ಯವೇ 'ನಾವು ಸೇವೆಗಾಗಿ' ಎಂಬುದು. ಸಮಾಜದ ಸೇವೆ ಮಾಡಲು ಹೃದಯದ ಭಾಷೆ ಸಾಕು ಎಂದು ಪುನರೂರರು ತೋರಿಸಿಕೊಟ್ಟು ಅವರನ್ನು ಟೀಕಿಸುವ ನಾಲಿಗೆಗಳೇ ಮೂಕವಾಗುವಂತೆ ಮಾಡಿದರು. ಲಯನಿಸಂನ ವಿವಿಧ ವಿನ್ಯಾಸಗಳಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸಲು ಸಾಧ್ಯ ಎಂದು ತಮ್ಮ ಸ್ವಾನುಭವ ಹೇಳಿಕೊಂಡರು. ಇಂದಿಗೂ ಕೂಡಾ ಲಯನ್ಸ್ ಪದಾಧಿಕಾರಿಗಳ 'ಪದಗ್ರಹಣ' ಸಮಾರಂಭವನ್ನು ಕನ್ನಡದಲ್ಲಿ ಮಾಡಲು ಪುನರೂರರು ಅನೇಕರಿಗೆ ಮುಖ್ಯ ಪ್ರೇರಣೆ.

1968ರಷ್ಟು ಹಿಂದೆಯೇ ಸ್ಥಾಪನೆಗೊಂಡ ಗ್ರಾಮಾಂತರ ಪ್ರದೇಶದ ಮೂಲ್ಕಿ ಲಯನ್ಸ್ ಕ್ಲಬ್ಬಿನ ಸಾಮಾನ್ಯ ಸದಸ್ಯರಾಗಿ ಸೇರಿಕೊಂಡ ಧರ್ಮದರ್ಶಿ ಹರಿಕೃಷ್ಣ ಪುನರೂರರು ಹಂತ ಹಂತವಾಗಿ ಮೇಲೇರಿ ಅನನ್ಯ ಸಂಘಟಕರೆಂದು ಖ್ಯಾತನಾಮರಾದರು. ಲಯನ್ಸ್ ಸಂಸ್ಥೆಯ ವಿವಿಧ ಹಂತಗಳಾದ ವಲಯಾಧ್ಯಕ್ಷ, ಪ್ರಾಂತೀಯಾಧ್ಯಕ್ಷ ಮುಂತಾದ ಪದವಿಗಳನ್ನೇರಿ, 1992-93ರಲ್ಲಿ ಲಯನ್ಸ್ ಜಿಲ್ಲಾ 324-ಡಿ4ರ ರಾಜ್ಯಪಾಲರಾಗಿ ಬಹುಮತದಿಂದ ಆಯ್ಕೆಗೊಂಡವರು. ಸುಮಾರು ಐದು ದಶಕಗಳ ಲಯನ್ಸ್ ಜಿಲ್ಲಾ ಇತಿಹಾಸದಲ್ಲಿ ಮೊದಲ ಬಾರಿಗೆ ಪಿ.ಎಂ.ಜೆ.ಎಫ್. (PRIVILEGE MELVIN JONES FELLOW) ಆದವರು. ಲಯನ್ಸ್ ಜಿಲ್ಲಾ ರಾಜ್ಯಪಾಲನೊಬ್ಬ ಹೊಂದಿದ ಎರಡು ಎಂ.ಜೆ.ಎಫ್.ಗಳು ಎಂದು ಈ ಉಪಾಧಿಯ ಅರ್ಥ. ಈ ದಾಖಲೆಯನ್ನು ನಮ್ಮ ಲಯನ್ಸ್ ಜಿಲ್ಲೆಯ ಬೇರೆ ಯಾವ ರಾಜ್ಯಪಾಲರಿಂದಲೂ ಮುರಿಯಲಾಗಲಿಲ್ಲ! ಲಯನ್ಸ್ ಸಂಸ್ಥೆಯ ಸ್ಥಾಪಕನಾದ ಲಯನ್ ಮೆಲ್ವಿನ್ ಜೋನ್ಸ್‌ನ ಹೆಸರಿನಲ್ಲಿ ಒಮ್ಮೆ ಎಂ.ಜೆ.ಎಫ್. ಆಗುವುದು ಬಲು ಕಷ್ಟದ ಕೆಲಸ. ಅದರಲ್ಲೂ ತಮ್ಮ ಕಾಲಾವಧಿಯಲ್ಲಿ ಎರಡು ಬಾರಿ ಎಂ.ಜೆ.ಎಫ್. ಆಗಿ ಪುನರೂರರು ಇಟ್ಟ ಹೆಜ್ಜೆ ಭೀಮಗಾತ್ರವೇ ಸರಿ. 1985-86ರಲ್ಲಿಯೇ ಅವರಿಗೆ ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯಿಂದ "ಸ್ಟೆಪ್ ಅಹೆಡ್ ಪ್ಲ್ಯಾಂಡ್" ಎಂಬ ಪದಕ ಲಭಿಸಿದೆ. ಇದು

ಕಣ್ಣಿಲ್ಲದವರಿಗೆ ಕಣ್ಣು ಮೂಡಿಸುವ ಕಾರ್ಯಕ್ರಮದ ಯಶಸ್ವಿತೆಗಾಗಿ ಪಡೆದ ಪ್ರಶಸ್ತಿಯಾಗಿದೆ. ಲಯನಿಸಂಗಾಗಿ ಮಾಡಿದ ಅನುಪಮ ಸೇವೆಗಾಗಿ ನಾಲ್ಕು ವಿಭಿನ್ನ ಅಂತಾರಾಷ್ಟ್ರೀಯ ಅಧ್ಯಕ್ಷರ ಪ್ರಶಸ್ತಿಗಳೂ ಅವರಿಗೆ ಲಭಿಸಿವೆ.

ಎಸ್. ಕೋಡಿ(ಶೀನಪ್ಪಯ್ಯ ಕೋಡಿ) ಯಲ್ಲಿ ಅವರು ನಿರ್ಮಿಸಿರುವ 'ಸೂರಿಲ್ಲದವರಿಗೆ ಸೂರು' ಕಾರ್ಯಕ್ರಮದ ಸಂದರ್ಭದಲ್ಲಿ ರಾ.ಸೇ.ಯೋ. ವಿದ್ಯಾರ್ಥಿಗಳ ಜೊತೆ ಸೇರಿ ಒಂದು ಬೃಹತ್ ಬಿದಿರ ಹಿಂಡಿಲನ್ನು ನೆಲಸಮ ಮಾಡುವ ಶ್ರಮದಾನ ಕಾರ್ಯದಲ್ಲಿ ಇವರು ವಹಿಸಿದ್ದ ನಾಯಕತ್ವ ಯಾರಿಗಾದರೂ ಅಚ್ಚರಿ ಹುಟ್ಟಿಸಬೇಕು... ಪ್ರತಿಯೊಂದು ಕ್ರಿಯಾಯೋಜನೆಯ ಹಿಂದೆ ಅವರೇ ರೂಪಿಸಿಕೊಂಡ ಶಿಸ್ತು, ಸಮಯಪ್ರಜ್ಞೆ, ಧಾರಾಳತನ, ಕೆಲಸ ಮುಗಿಯುವರೆಗಿನ ಕಟ್ಟು-ನಿಟ್ಟು ಮುಂತಾದ ವಿಚಾರಗಳು ಅವರನ್ನು ದೊಡ್ಡ ನಾಯಕನನ್ನಾಗಿ ಮಾಡಿವೆ. ಇಂದಿಗೂ ಮೂಲ್ಕಿಯ ಗ್ರಾಮಾಂತರ ಕ್ಲಬ್ಬಿನ ಎಲ್ಲ ಬಗೆಯ ಚಟುವಟಿಕೆಯಲ್ಲಿ ಪಾಲ್ಗೊಂಡು ಸೇವಾಪರ ಮನಸ್ಸನ್ನು ರೂಢಿಸಿಕೊಂಡ ಹರಿಕೃಷ್ಣ ಪುನರೂರರ ಪಾತ್ರ ವಿಶಿಷ್ಟವಾದುದು. 'ಅರೆಯ ಬಸಿರಲ್ಲಿ ನೀರ ಸೆಲೆ ಚಿಮ್ಮಿಸುವ' ಪಾತ್ರ ಅವರದ್ದಾಗಿದೆ. ಲಯನಿಸಂನಂತಹ ಚಳವಳಿ ನಮ್ಮೂರಿನ ಬಡಬಗ್ಗರಿಗಾಗಿ ಸ್ಪಂದಿಸಬೇಕಾದರೆ ಇಂತಹ ಗಟ್ಟಿ ವ್ಯಕ್ತಿತ್ವಗಳ ಬೇರು ಜನರೊಡನೆ ಬೆರೆಯಬೇಕಾದದ್ದು ಅನಿವಾರ್ಯ.

ಬಡವರಿಗಾಗಿ ಮಿಡಿಯುವ ಶ್ರೀಮಂತರ ಚೇತನ ನಗರದಲ್ಲಿರಲಿ, ಹಳ್ಳಿಯಲ್ಲಿರಲಿ ಇಂಗ್ಲಿಷ್ ಭಾಷೆ ಅಥವಾ ಪ್ಯಾಟು-ಬೂಟಿನ ರೂಪದಲ್ಲಿರಲಿ ಅಥವಾ ಪಂಚೆ-ಮುಂಡುಗಳಲ್ಲಿರಲಿ, ಸ್ಪರ್ಧಿಸಬೇಕಾದ ಆರ್ದ್ರ ಹೃದಯವಿರಬೇಕಾದದ್ದು ಮುಖ್ಯ ಎನ್ನುವುದನ್ನು ಸ್ವತಃ ಸಾಧಿಸಿ ತೋರಿಸಿ ಕೊಟ್ಟ ಪುನರೂರು ಅವರನ್ನು ಲಯನ್ಸ್ ಸಂಸ್ಥೆ ಎಂದಿಗೂ ಮರೆಯಲಾರದು. ತಮಗೂ ಪ್ಯಾಂಟು, ಸೂಟು, ಟೈ ಧರಿಸಲು ಬರುತ್ತದೆ ಎಂದು ಲಯನಿಸಂನ ಅನೇಕ ಘಟ್ಟಗಳಲ್ಲಿ ಎಂ.ಜೆ.ಎಫ್. ಲಯನ್ ಹರಿಕೃಷ್ಣ ಪುನರೂರರು ತೋರಿಸಿ ಕೊಟ್ಟಿದ್ದಾರೆ. ಹಾಗೆಯೇ ಅವರ ಪತ್ನಿ ಲಯನೆಸ್ ಉಷಾರಾಣಿಯವರು ಲಯನ್ಸ್ ಜಿಲ್ಲಾ ಪ್ರಥಮ ಮಹಿಳೆಯಾಗಿ ಲಯನ್ ರಾಜ್ಯಪಾಲ ಪುನರೂರರ ಜೊತೆಗೆ ಅನೇಕ ವೇದಿಕೆಗಳಲ್ಲಿ ಕಾಣಿಸಿಕೊಂಡಿದ್ದಾರೆ. ಗಂಡನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಹೀಗೆ ಲಯನ್ಸ್‌ನಂಥ ಅಂತಾರಾಷ್ಟ್ರೀಯ ಸಂಸ್ಥೆಗೆ ಹೇಗೆ ಸಹಜವಾಗಿ ಸಲ್ಲುತ್ತಾರೋ ಹಾಗೆಯೇ ಸಾಹಿತ್ಯ-ಸಾಹಿತಿ-ಸಂಸ್ಕೃತಿ ವಲಯದಲ್ಲಿ ಪಂಚೆ-ಷರಟು ಧಾರಣದ ಮೂಲಕ ಸಲ್ಲುತ್ತ ನಮಗೆ ಆತ್ಮೀಯರಾಗುತ್ತಾರೆ. ಇದಕ್ಕೆ ಅವರ ಸರಳತೆ-ಸೌಜನ್ಯದ ವ್ಯಕ್ತಿತ್ವವೇ ಕಾರಣ.

☐

ಭಾಗ: ಎರಡು
ಹೀಗಿದ್ದಾರೆ ಪುನರೂರು

ಕೋಮಲ ಹೃದಯದ ಕಾಯಕ ಜೀವ

☐ ಅಜ್ಜಂಪುರ ಜಿ. ಸೂರಿ



ಮನುಷ್ಯನ ಬದುಕಿನಲ್ಲಿ ಅರವತ್ತು ಅರಳು-ಮರಳಿನ ಕಾಲ ಎನ್ನುತ್ತಾರೆ. ಹರಿಕೃಷ್ಣ ಪುನರೂರು ಅಂಥವರಿಗೆ ಅದು ನಿಜಕ್ಕೂ 'ಮರಳಿ ಅರಳುವ' ಕಾಲ.

ಅವರಿಲ್ಲದೆ ಹೋಗಿದ್ದರೆ ನಮ್ಮ ರಾಜ್ಯದ ಅನೇಕ ಊರುಗಳಂತೆ ಪುನರೂರು ಕೂಡ ಅನಾಮಧೇಯವಾಗಿ ಉಳಿದುಬಿಡುತ್ತಿತ್ತು.

ಎತ್ತರದ ಆಳು
ಓರಣಗೊಳಿಸಿದ ಕಪ್ಪು ತಲೆಗೂದಲು
ಹಸನ್ಮುಖಿ
ನಗೆ ಚೆಲ್ಲುವ ದಂತಪಂಕ್ತಿ
ಶುಭ್ರ ಶ್ವೇತ ಲುಂಗಿ-ಅಂಗಿ
ಅಂತರವಿಲ್ಲದ ನಡೆ-ನುಡಿ
ತುಂಬಾ ಅಚ್ಚುಕಟ್ಟು
ಸೀದಾ-ಸಾದ
ಕ್ರಿಯಾಶೀಲ ಚೇತನ.

ಎಲ್ಲವನ್ನೂ ತಮ್ಮ ಅನನ್ಯ ಪ್ರೀತಿಯಿಂದ ಗೆಲ್ಲುವ ಸ್ವಭಾವ. ಅವರ ಸಂಘಟನಾ ಶಕ್ತಿ ಅದ್ಭುತ. ಯಾವುದೇ ಕೆಲಸಕ್ಕೆ ಕೈ ಹಾಕಿದರೂ ಅದನ್ನು ತರ್ಕಬದ್ಧವಾಗಿ, ಸಾಂಗವಾಗಿ ದಡಮುಟ್ಟಿಸಬಲ್ಲ ಸಾಹಸಿ! ಆರಂಭ ಶೂರತ್ವವಿಲ್ಲ. ಎಲ್ಲನ್ನೂ ಒಲಿ

'ಕನ್ನಡಶ್ರೀ', ಕೆ.ವಿ. ಕಾಲೋನಿ, ಕಡೂರು-577 548

ಆಯಿತೆನ್ನುವ ಬಡಾಯಿ ಇಲ್ಲವೇ ಇಲ್ಲ.

ಮುಖ ಗಂಟಿಕ್ಕಿಕೊಳ್ಳುವವರ ಬಳಿ ಸುದೈವ ಎಂದೂ ಸುಳಿಯುವುದಿಲ್ಲವಂತೆ. ಅವರು ಮುಖ ಗಂಟಿಕ್ಕಿದ್ದನ್ನು ನಾನು ಕಂಡಿದ್ದಿಲ್ಲ. ಅವರ ನಗೆಯಲ್ಲಿ ಜೀವದಾಯಕ ಶಕ್ತಿ ಇರುತ್ತದೆ. ಅದು ಅವರ ಸಂಪರ್ಕದಲ್ಲಿ ಬಂದವರೆಲ್ಲರ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ.

''ಒಮ್ಮೊಮ್ಮೆ ನಾವು ಮಾಡಬಲ್ಲ ಕೆಲಸಗಳಿಗಿಂತ ಮಾಡಲು ಸಾಧ್ಯವಾಗದ ಕೆಲಸಗಳ ಬಗ್ಗೆ ತಿಳಿದುಕೊಳ್ಳಬೇಕಾದುದು ತುಂಬಾ ಅಗತ್ಯ. ಕಷ್ಟಗಳು ಯಾವಾಗಲೂ ದುರ್ಬಲ ವ್ಯಕ್ತಿಯನ್ನು ಸದೆ ಬಡಿಯುತ್ತವೆ. ಬಲಿಷ್ಠನನ್ನು ಅಭಿವೃದ್ಧಿಪಡಿಸುತ್ತವೆ. ನಾವು ಪ್ರಪಂಚವನ್ನು ಸೃಷ್ಟಿಸಿಲ್ಲ; ಮೊದಲೇ ನೆಲೆಗೊಂಡಿದ್ದ ವ್ಯವಸ್ಥೆಯಲ್ಲಿ ಸೇರಿಕೊಂಡಿದ್ದೇವೆ. ಪ್ರಾಯೋಜಕರಾಗಿ ಇಲ್ಲಿ ಹೊಂದಿಕೊಳ್ಳಬೇಕು ಅಷ್ಟೇ..!''

ಎಂದಿದ್ದಾನೆ ಒಬ್ಬ ದಾರ್ಶನಿಕ.

ಈ ದಾರ್ಶನಿಕನ ಮಾತನ್ನು ಅವರು ಚೆನ್ನಾಗಿ ಅರ್ಥೈಸಿಕೊಂಡಿದ್ದಾರೆ. ಅವರ ಅಭಿವ್ಯಕ್ತಿಯ ಮುಖ್ಯ ನೆಲೆ ಎಂದರೆ ಸಂಘಟನೆ. ಅತ್ಯಂತ ನಿಷ್ಠೆಯಿಂದ ಅವರು ಮಾಡುವ ಸಂಘಟನೆಯ ಕೆಲಸಗಳು ಈಗಾಗಲೇ ಚಾರಿತ್ರಿಕ ದಾಖಲೆಗಳಾಗಿ ಉಳಿದಿವೆ. ಅವರು ಕೆಲಸ ಮಾಡಿಸುವವರಲ್ಲ; ಸ್ವತಃ ಮಾಡುವವರು. ಆಡಿ ಮಾಡದವರಲ್ಲ. ಆಡದೆ ಮಾಡಿ ತೋರಿಸುವವರು.

ಅವರು ಕ.ಸಾ.ಪ. ರಾಜ್ಯಾಧ್ಯಕ್ಷರಾಗಿದ್ದ ಕಾಲದಲ್ಲಿ ಅನೇಕ ಅನಿರೀಕ್ಷಿತ ಪ್ರತಿಕೂಲ ಪರಿಸ್ಥಿತಿಗಳು ಎದುರಾದಾಗಲೂ ಜಗ್ಗಲಿಲ್ಲ; ಕುಗ್ಗಲಿಲ್ಲ. ಅಂತಹ ಸಂದಿಗ್ಧತೆಯಲ್ಲಿ ಕೆಲಸ ಮಾಡುವ ಕೌಶಲ್ಯವನ್ನು ತೋರಿಸಿಕೊಟ್ಟರು. ಅವರದು ಅದಮ್ಯ ಆತ್ಮ ಉತ್ಸಾಹ. ಅವರು ನಿಂತಲ್ಲಿ ನಿಂತಿರಲಾರರು, ಕುಳಿತಲ್ಲಿ ಕುಳಿತಿರಲಾರರು; ಸದಾ ಸುತ್ತಾಟ; ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತರು. ಹೀಗಾಗಿ ಹರಿಕೃಷ್ಣ ಅವರ ಸಾಧನೆ ಸ್ಫೂರ್ತಿದಾಯಕ. ನಮ್ಮ ನಾಡಿನ ಎಲ್ಲ ಮಠಮಾನ್ಯಗಳ; ಸಾಹಿತಿ-ಕಲಾವಿದರ; ಕನ್ನಡ ಕೆಲಸಗಾರರ; ಪತ್ರಕರ್ತರ, ರಾಜಕಾರಣಿಗಳ; ಸರಕಾರದ ಗಮನ ಸೆಳೆದಿರುವ ಒಬ್ಬ ಅಪರೂಪದ ವ್ಯಕ್ತಿ. ಅವರ ಕನ್ನಡ ಪ್ರೇಮ ಸ್ವಪ್ರೇರಣೆಯಿಂದ ಕೂಡಿದ್ದು, ಸ್ವಾಭಿಮಾನದಿಂದ ಬೆಳೆದದ್ದು.

ಸಮಾಜ ಸೇವೆಯಲ್ಲಿ ಹರಿಕೃಷ್ಣ ಪುನರೂರು ಅವರಿಗೆ ಅಪಾರ ನಂಬಿಕೆ. ತಮ್ಮ ಸ್ವಂತ ಶ್ರಮ, ದುಡಿಮೆ, ಸಂಘಟನೆ, ನಿರಂತರ ಕ್ರಿಯಾಶೀಲತೆಯಿಂದ ಮೇಲೆ ಬಂದಿದ್ದಾರೆ. ಹಣದ ಜೊತೆಗೆ ಸರಳತೆ, ಸೌಜನ್ಯ, ಉಪಕಾರಗುಣ, ವಿನಯ ಹಾಗೂ ಗುಣವಂತಿಕೆ ಇದ್ದಾಗಲೇ ಶ್ರೀಮಂತಿಕೆಗೆ ಶೋಭೆ.

ಕನ್ನಡದ ಕೈಂಕರ್ಯಕ್ಕೆ ಢಣಾಡಂಗುರ ಬೇಕಿಲ್ಲ. ಮನಸ್ಸಿನ ಮೂಲೆಯಲ್ಲಿ ಸ್ವಲ್ಪ ಸಂಕಲ್ಪ ಇದ್ದರೆ ಸಾಕು. ಅಂಥವರ ಕೈಯಿಂದ ಏನೆಲ್ಲ ಅದ್ಭುತಗಳು ನಡೆಯಬಹುದು ಎಂಬುದಕ್ಕೆ ಹರಿಕೃಷ್ಣ ಪುನರೂರರೇ ಸಾಕ್ಷಿ. ಅವರು ಸ್ವತಃ ಬರಹಗಾರರಲ್ಲದಿದ್ದರೂ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕಳೆದ ಹನ್ನೆರಡು ವರ್ಷಗಳಿಂದಲೂ ನಿರಂತರ ಶ್ರಮಿಸುತ್ತಾ ಬಂದಿದ್ದಾರೆ. ಇದುವರೆಗೆ ಎಂಬತ್ತೊಂದು ತಾಲ್ಲೂಕು ಸಾಹಿತ್ಯ ಸಮ್ಮೇಳನಗಳನ್ನು, ಹದಿಮೂರು ಜಿಲ್ಲಾ ಸಮ್ಮೇಳನಗಳನ್ನು, ಮೂರು ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು 'ನ ಭೂತೋ ನ ಭವಿಷ್ಯತಿ' ಎಂಬಂತೆ ನಡೆಸಿ, ಭುವನೇಶ್ವರಿ ತಾಯಿಯ ಹೆಮ್ಮೆಯ ಪುತ್ರರೆನಿಸಿಕೊಂಡಿದ್ದಾರೆ. ಇದುವರೆಗೆ ಇಂತಹ ಅದ್ಭುತ ಸಾಧನೆ ಯಾವ ವಿದ್ವನ್ಮಣಿಯಿಂದಲೂ ಸಾಧ್ಯವಾಗಿಲ್ಲ.

ವಾಲ್ಮೀಕಿ ಮಹರ್ಷಿಗಳು ಶ್ರೀಮದ್ರಾಮಾಯಣದಲ್ಲಿ 'ನೂರರಲ್ಲಿ ಒಬ್ಬ ಶೂರ, ಸಾವಿರಕ್ಕೆ ಒಬ್ಬ ಪಂಡಿತ, ಸಹಸ್ರ ಜನರಲ್ಲಿ ಒಬ್ಬ ವಾಗ್ಮಿ ಸಿಕ್ಕಾನು; ಆದರೆ ಒಬ್ಬ ದಾನಿ ಸಿಗುತ್ತಾನೋ ಇಲ್ಲವೋ!'

ಎಂದು ಸಂಶಯ ವ್ಯಕ್ತಪಡಿಸುತ್ತಾರೆ. ಅವರೇ ಶ್ರೀ ಹರಿಕೃಷ್ಣರು ಆ ಸಂಶಯವನ್ನು ಹುಸಿಗೊಳಿಸಿದ್ದಾರೆ. ಬಡವರಿಗೆ, ದೀನರಿಗೆ, ದಲಿತರಿಗಾಗಿ ತಮ್ಮ ಸ್ವಂತ ಖರ್ಚಿನಲ್ಲಿ ನೂರಾರು ಸುಸಜ್ಜಿತ ಗೃಹ ನಿರ್ಮಾಣ ಮಾಡಿ ಉಚಿತವಾಗಿ ನೀಡಿದ್ದಾರೆ.

ಲಯನ್ಸ್ ಗವರ್ನರ್ ಆಗಿದ್ದಾಗ ಹತ್ತು ಸಾವಿರಕ್ಕೂ ಹೆಚ್ಚಿನವರಿಗೆ ಕಣ್ಣು ಕೊಟ್ಟಿದ್ದಾರೆ. ಕರ್ನಾಟಕ ಬ್ಯಾಂಕ್, ತುಳುನಾಡು ಫೈನಾನ್ಸ್ ಹಾಗೂ ಇತರ ಸಹಕಾರಿ ಸಂಸ್ಥೆಗಳಲ್ಲಿದ್ದುಕೊಂಡು ಬಡವರ ಪಾಲಿಗೆ ಆರ್ಥಿಕ ನೀತಿಯ ದಿಕ್ಸೂಚಿಯಾಗಿದ್ದಾರೆ.

ಪ್ರಕೃತಿ ವಿಕೋಪ, ಗ್ರಂಥ ಪ್ರಕಟಣೆ, ಆರ್ಥಿಕವಾಗಿ ಸಂಕಷ್ಟಕ್ಕೀಡಾದ ವಿದ್ಯಾರ್ಥಿಗಳಿಗೆ ನೆರವು ಹೀಗೆ ಸಹಸ್ರಾರು ಜನರಿಗೆ ಸಹಾಯ ಹಸ್ತ ನೀಡುತ್ತಲೇ ಬಂದಿದ್ದಾರೆ.

ಮಹಾಮಾರಿ ಏಡ್ಸ್, ಕುಟುಂಬ ಕಲ್ಯಾಣ, ಪಲ್ಸ್ ಪೋಲಿಯೋ, ಪ್ರಕೃತಿ ವಿಕೋಪ ಸಂತ್ರಸ್ತರ ನೆರವಿಗೆ ಟೊಂಕ ಕಟ್ಟಿ ದುಡಿದಿದ್ದಾರೆ.

ಕ.ಸಾ.ಪ. ರಾಜ್ಯಾಧ್ಯಕ್ಷರಾಗಿದ್ದ ಕಾಲದಲ್ಲಿ ಕೇವಲ ಜಿಲ್ಲೆ, ತಾಲೂಕಿಗಷ್ಟೇ ಸೀಮಿತವಾಗಿದ್ದ ಪರಿಷತ್ತನ್ನು ಹೋಬಳಿ ಹಾಗೂ ಗ್ರಾಮ ಮಟ್ಟಕ್ಕೆ ಎಳೆದು ತಂದ ಕೀರ್ತಿ ಪುನರೂರರಿಗೆ ಸಲ್ಲುತ್ತದೆ. ಅವರ ಕಾಲದಲ್ಲಿ ವೆಬ್‌ಸೈಟ್, ನಿಘಂಟು, ಅಮೂಲ್ಯ ಗ್ರಂಥಗಳ ಸಿ.ಡಿ., ಕುವೆಂಪು ಸಾಹಿತ್ಯವನ್ನೊಳಗೊಂಡ ನೂರು ಪುಸ್ತಕಗಳಲ್ಲದೆ ಮುನ್ನೂರು ಇತರ ಶ್ರೇಷ್ಠ ಗ್ರಂಥಗಳು ಪ್ರಕಟಗೊಂಡವು.

ಬಪ್ಪನಾಡು, ಕೊಲ್ಲೂರು, ಮಂಗಳೂರು ಮೊದಲಾದ ಅನೇಕಾನೇಕ ದೇಗುಲಗಳ ಅತಿಮುಖ್ಯರೆನಿಸಿಕೊಂಡು ದುಡಿದರು.

ಅವರಿಗೆ ಬಪ್ಪಣ್ಣನವರಲ್ಲಿ ಅಚಲ ನಂಬಿಕೆ. ದುಡಿಮೆಯನ್ನೇ ದೇವರೆಂದು ನಂಬಿದ್ದಾರೆ. ನಾಡು-ನುಡಿ, ಸಾಹಿತ್ಯ, ಸಂಗೀತ ಕಲೆ, ಇವೆಲ್ಲವುಗಳ ಪೋಷಣೆಗೆ ನಿರ್ವಂಚನೆಯಿಂದ ದುಡಿದಿದ್ದಾರೆ. ಅವರಿಗೆ ಸಾಹಸ ಮತ್ತು ಛಲ ಹುಟ್ಟಿನಿಂದ ಬಂದ ಗುಣಗಳು–

ಹರಿಕೃಷ್ಣ ಪುನರೂರು ಎಂದರೆ ಏನು? ಎನ್ನುವುದನ್ನು ಒಂದೇ ಮಾತಿನಲ್ಲಿ ವರ್ಣಿಸಿ ಹೇಳಲು ಬರುವುದಿಲ್ಲ. ಒಟ್ಟಾರೆ ಅವರು ಅನೇಕ ಶಕ್ತಿಗಳು ಸಂಯೋಜಿತವಾಗಿರುವ ಒಬ್ಬ ಸಮೀಕೃತ ವ್ಯಕ್ತಿ. ಅವರ ತಣಿಯದ, ದಣಿಯದ ಆಸಕ್ತಿಯೇ ಕನ್ನಡದ ಶಕ್ತಿ.

ಅವರಲ್ಲಿ ನಾನು ಕಂಡ ದೊಡ್ಡಗುಣವೆಂದರೆ ಸಾರ್ವಜನಿಕ ಬದುಕಿನಲ್ಲಿ ತಾವೊಬ್ಬರೇ ಬೆಳೆಯದೆ ತಮ್ಮ ಸುತ್ತಲೂ ಇರುವ ಸ್ನೇಹಿತರನ್ನೂ ಬೆಳೆಸಿದ್ದಾರೆ. ಯುವಕರನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸಿದ್ದಾರೆ.

60 ವಸಂತಗಳನ್ನು ಕಂಡಿರುವ ಅವರಲ್ಲಿ ಇನ್ನೂ ಎಷ್ಟು ಕನಸುಗಳಿವೆಯೊ ಯಾರು ಬಲ್ಲರು?

ನಿರಾಸೆಯ ಕಾರ್ಮೋಡ ಕವಿದಿರುವ ಇಂದಿನ ಉಸಿರು ಕಟ್ಟುವ ನಿರುತ್ಸಾಹದ ವಾತಾವರಣದಲ್ಲಿ ಹರಿಕೃಷ್ಣ ಪುನರೂರರಂಥವರು ಜನತೆಯ ಬಾನಂಗಳದಲ್ಲಿ ಜೀವದಾಯಕವಾದ ತಾಜಾ ಹವೆಯನ್ನು ತರುತ್ತಾರೆ.

ಈ ಸಾಹಸಿ ಯಾವ ವಿದ್ವನ್ಮಣಿಗೆ ಕಡಿಮೆ?!


'ಶತಂ ಜೀವ, ಶರದೋ ವರ್ಧಮಾನಃ'

ಇದು ಅವರ ಕುರಿತು ನಮ್ಮ ಹಾರೈಕೆ. ಇಂತಹ ಅಪೂರ್ವ ಚೇತನಕ್ಕೆ ಇದಕ್ಕಿಂತ ಹೆಚ್ಚು ಇನ್ನೇನು ಹಾರೈಸಲು ಸಾಧ್ಯ?

ಭಾಗ: ಎರಡು
ಹೀಗಿದ್ದಾರೆ ಪುನರೂರು

ಸೇವೆ ಎಂದರೆ ಪುನರೂರು

☐ ಡಾ|| ಕಿದಿಯೂರು ಗುರುರಾಜ ಭಾಗವತ



ಮನುಷ್ಯ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿದರೆ ಮಾತ್ರ ಅದನ್ನು ಸಹಿಸಿಕೊಳ್ಳುವ ಹಾಗೂ ಎದುರಿಸುವ ಸಾಮರ್ಥ್ಯ ಬರುತ್ತದೆ. ಹಣ ಸಂಪಾದನೆಯೊಂದೇ ಮನುಷ್ಯನ ಜೀವನವನ್ನು ಪಾವನ ಹಾಗೂ ಸಾರ್ಥಕಗೊಳಿಸುವುದಿಲ್ಲ. ಜೀವಿತ ಕಾಲದಲ್ಲಿ ಸಾಧನೆ, ಪರಹಿತ ಚಿಂತನೆ, ವಿನಯ, ಕರುಣೆ, ದಯೆ ಮೊದಲಾದ ಉದಾತ್ತ ಗುಣಗಳು ಬೆಳೆದು ಬಂದರೆ ಮಾತ್ರ ಅವು ಮಾನವನ ಬಾಳನ್ನು ಬೆಳಗಿಸುತ್ತವೆ.

ಪುನರೂರು ಎನ್ನುವುದು ಕರ್ನಾಟಕದ ಒಂದು ಗ್ರಾಮ. ಮೂಲ್ಕಿಯಿಂದ ಕಿನ್ನಿಗೋಳಿಗೆ ನಮ್ಮನ್ನು ಸಾಗಿಸುವ ದಾರಿಯಲ್ಲಿದೆ ಈ ಗ್ರಾಮ. ಈ ಗ್ರಾಮದ ದಿ|| ವಾಸುದೇವರಾವ್ ಮತ್ತು ಲಕ್ಷ್ಮೀ ಅಮ್ಮನವರ ಪುತ್ರ ಹರಿಕೃಷ್ಣ ಪುನರೂರು ಅವರು ಈ ಊರಿನ ಹೆಸರನ್ನು ಕರ್ನಾಟಕದ ಮೂಲೆ ಮೂಲೆಗೆ ಗೊತ್ತಾಗುವಂತೆ ಮಾಡಿದ್ದಾರೆ. ಹೇಗೆ? ಉದಾತ್ತ ಗುಣಗಳನ್ನು ಮೆರೆಯುವ ಮೂಲಕ!

ಪುನರೂರು ಅವರು ಯಾವ ಕೆಲಸಕ್ಕೆ ಕೈ ಹಾಕಿದರೂ ಅದರಲ್ಲಿ ಯಶಸ್ವಿ ಆಗುತ್ತಾರೆ. ಹೊಟೇಲು ಉದ್ಯಮ, ಇಂಡಿಯನ್ ಆಯಿಲ್ ವಿತರಣ ಕಾರ್ಯದಂಥ ವ್ಯವಹಾರಗಳಲ್ಲಿ ಅವರು ಸಾರ್ಥಕತೆ ಪಡೆದಿದ್ದಾರೆ. ಲಯನ್ಸ್ ಸೇವಾ ಸಂಸ್ಥೆಯಲ್ಲಿ ಇತರರಿಗೆ ಮಾದರಿಯೆನಿಸುವ ರೀತಿಗಳಲ್ಲಿ ದುಡಿದು

'ಅನುಗ್ರಹ', ಕಿದಿಯೂರು, ಉಡುಪಿ-575 103

ಅಂತರಾಷ್ಟ್ರೀಯ ಗೌರವ ಗಳಿಸಿಕೊಂಡಿದ್ದಾರೆ. ಕೆಲವರು ಅರ್ಹ ಬಡ ವಿದ್ಯಾರ್ಥಿಗಳಿಗೆ ಉಚಿತ ಸೌಲಭ್ಯಗಳನ್ನು ಒದಗಿಸಿ ಹೆಚ್ಚಿನ ವಿದ್ಯಾರ್ಹತೆಯನ್ನು ಗಳಿಸಿಕೊಳ್ಳಲು ಸಹಾಯ ಮಾಡಿದ್ದಾರೆ. ಸಾಹಿತ್ಯ, ಸಂಗೀತ, ನೃತ್ಯ ಕಲೆಗಳಿಗೂ ಕಲಾವಿದರುಗಳಿಗೂ, ತುಂಬು ಹೃದಯದ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಅವರು ಹಲವು ಸಾಹಿತಿಗಳನ್ನು, ಪ್ರಕಾಶಕರನ್ನು, ಪರಂಪರಾಗತ ವೈದ್ಯ ವಿಶಾರದರನ್ನು, ಜಾನಪದ ಕಲಾವಿದರುಗಳನ್ನು, ತುಳು-ಕನ್ನಡ-ಕೊಂಕಣಿ ಸಾಹಿತ್ಯ ಸೃಷ್ಟಿಕರ್ತರನ್ನು ಗುರುತಿಸಿದ್ದಾರೆ; ರಾಜ್ಯ ಕ.ಸಾ.ಪ. ಅಧ್ಯಕ್ಷತೆಯ ಮೂರು ವರ್ಷಗಳ ಅವಧಿಯಲ್ಲಿ ಕನ್ನಡದ ವಿವಿಧ ಪ್ರಕಾರಗಳ ನಾಲ್ನೂರಕ್ಕೂ ಹೆಚ್ಚು ಅಲಭ್ಯ ಅಮೂಲ್ಯ ಕೃತಿಗಳನ್ನು ಮುದ್ರಿಸಲು, ಪುನರ್ ಮುದ್ರಿಸಲು ಯೋಜನೆ ರೂಪಿಸಿ ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ.

ಇಷ್ಟೇ ಅಲ್ಲ, ನಾಡಿನ ನಾನಾ ಭಾಗಗಳಲ್ಲಿ ಕನ್ನಡ-ಸಂಸ್ಕೃತಿ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಘ-ಸಂಸ್ಥೆಗಳಿಗೆ ತಕ್ಕ ನೈತಿಕ ಪ್ರೋತ್ಸಾಹ ನೀಡುತ್ತಿದ್ದಾರೆ. ಆರ್ಥಿಕವಾಗಿಯೂ ಅವುಗಳ ಕೈ ಹಿಡಿದು ನಡೆಸುತ್ತ ಬಂದಿರುವುದು ಅವರ ಹೆಚ್ಚುಗಾರಿಕೆ.

ಮನುಷ್ಯ ಜೀವನವೆನ್ನುವುದು ನೀರಮೇಲಿನ ಗುಳ್ಳೆಯಂತೆ. ನಾವೇನು ಮಾಡಿದರೂ ಅದು ಮುಂದಿನ ಪೀಳಿಗೆಗೆ ಸುಲಭವಾಗಿ ಕಣ್ಣಿಗೆ ಬೀಳುವುದೂ ಇಲ್ಲ; ಅದರ ನೆನಪು ಸುಲಭವಾಗಿ ಉಳಿಯುವುದೂ ಇಲ್ಲ. ಯಾರಾದರೂ ಪುಸ್ತಕ ಬರೆದರೆ, ಅಂಥ ಕೃತಿಗಳು ಕೆಲವು ಕಾಲ ಉಳಿದಾವು. ದಾನ, ಧರ್ಮದ ವಿಷಯದಲ್ಲೂ ಇದೇ ಮಾತನ್ನು ಹೇಳಬೇಕಾಗುತ್ತದೆ. ದಾನ ತೆಗೆದುಕೊಳ್ಳುವ ಕೈಗಳ ಒಡೆಯರಿಗೆ ದಾನ ಕೊಟ್ಟವರ ನೆನಪು ಇದ್ದರೆ ಅವರ ಜೀವಿತದ ಉದ್ದಕ್ಕೂ ಅಂಥ ದಾನಕಾರ್ಯ ನೆನಪಾಗುತ್ತಿರುತ್ತದೆ. ನೆನಪಾಗಿ ಉಳಿಯುತ್ತದೆಯೋ, ಇಲ್ಲವೋ ಎಂಬುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಪುನರೂರು ತನ್ನ ದಾನಯಜ್ಞವನ್ನು ಮುಂದುವರಿಸಿಕೊಂಡು ಬಂದಿದ್ದಾರೆ!

ಇಂಥ ದಾನಗಳಲ್ಲಿ ಬಹಳ ದೊಡ್ಡದು ಎನ್ನಿಸುವ ದಾನವನ್ನು ಅವರು ತನ್ನ 60ನೆಯ ವರ್ಷದ ಸಂದರ್ಭದಲ್ಲಿ ಮಾಡಿ ತೋರಿಸಿದ್ದಾರೆ. ನಿರ್ಗತಿಕರಿಗೆ, ಅಂಗವಿಕಲರಿಗೆ, ಮನೆ ಎಂಬುದೇ ಇಲ್ಲದವರಿಗೆ ಅವರು ತನ್ನದೇ ಸ್ಥಳದಲ್ಲಿ ತನ್ನದೇ ಮನೆಯ ಸಮೀಪ ನೂರೊಂದು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಈ ಮನೆಗಳನ್ನು ಸತ್ಪಾತ್ರರಿಗೆ ದಾನ ಮಾಡುತ್ತಿದ್ದಾರೆ. ಈ ಮನೆಗಳಿಗೆ ನೀರು, ವಿದ್ಯುತ್ತು ಮೊದಲಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಇದರಲ್ಲಿ ನೆಲೆಸಿರುವ ಸಂಸಾರಗಳು ನೆಮ್ಮದಿಯಿಂದ ಜೀವನ ಮಾಡುತ್ತಿರುವುದನ್ನು ಕಂಡು ಸಂತೋಷಪಡುತ್ತಿದ್ದಾರೆ.

ಪುನರೂರು ಒಳ್ಳೆಯ ಸಂಘಟನಾ ಚತುರರು. ತನ್ನ ಕೆಲಸದಲ್ಲಿ ಶ್ರದ್ಧೆ, ಆಸಕ್ತಿ ಉಳ್ಳವರು. ಹಿರಿಯರಲ್ಲಿ ಗೌರವ ಉಳ್ಳವರು. ಇಂಥವರು ಯಾವ ಕೆಲಸವನ್ನೂ ಸಮರ್ಥವಾಗಿ ಮಾಡಿ ಸೈ ಎನಿಸಿಕೊಳ್ಳಬಲ್ಲರು ಎಂಬುದಕ್ಕೆ ಅವರೇ ಸಾಕ್ಷಿ. ಅವರಿಗೆ, ಅವರ ಕುಟುಂಬಕ್ಕೆ ಶ್ರೀ ದೇವರ ಪರಮಾನುಗ್ರಹ ಇರಲಿ. ಜನರಿಗೆ ಅವರಿಂದ ಇನ್ನಷ್ಟು ಪ್ರಯೋಜನ ಸಿಗಲಿ!


ಭಾಗ: ಎರಡು

ಹೀಗಿದ್ದಾರೆ ಪುನರೂರು

ಮುಖವಾಡವಿಲ್ಲದ ಮನುಷ್ಯ

ಎಚ್.ಡುಂಡಿರಾಜ್

ಹರಿಕೃಷ್ಣ ಪುನರೂರು ಅಂದಾಕ್ಷಣ ಕಣ್ಣಮುಂದೆ ಬರುವುದು ಮೊಣ ಕೈವರೆಗೆ ಮಡಚಿದ ಅಚ್ಚ ಬಿಳಿ ಅಂಗಿ ಮತ್ತು ಅಚ್ಚ ಬಿಳಿ ಪಂಚೆ ಧರಿಸಿದ ಅಜಾನುಬಾಹು ವ್ಯಕ್ತಿ. ಮೊಗದಲ್ಲಿ ಕುತೂಹಲ ಸೂಸುವ ಕಣ್ಣುಗಳು ಮತ್ತು ಕಿರುನಗೆ. 1995ರಿಂದ ನಾನವರನ್ನು ಹತ್ತಿರದಿಂದ ಗಮನಿಸುತ್ತ ಬಂದಿದ್ದೇನೆ. ಅವರ ವ್ಯಕ್ತಿತ್ವದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಹತ್ತು ವರ್ಷಗಳ ಹಿಂದೆ ಹೇಗಿದ್ದರೋ ಈಗಲೂ ಹಾಗೇ ಇದ್ದಾರೆ. ಅಷ್ಟೇ ಉತ್ಸಾಹದಿಂದ ಓಡಾಡಿಕೊಂಡಿದ್ದಾರೆ.



ಹರಿಕೃಷ್ಣ ಪುನರೂರು ಅವರು ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ಎಲ್ಲ ಸಾಹಿತಿಗಳ ಹಾಗೆ ನಾನೂ ಈ ಹೊಟೇಲ್ ವ್ಯಾಪಾರಿಗೆ ಸಾಹಿತ್ಯದ ಉಸಾಬರಿ ಯಾಕೆ ಬೇಕಿತ್ತು? ಅಂತ ಯೋಚಿಸಿದ್ದೆ. ಆದರೆ ಅವರು ಜಿಲ್ಲೆಯಲ್ಲಿ ನಡೆಸಿದ ಸಾಹಿತ್ಯ ಸಮ್ಮೇಳನಗಳ ಅಚ್ಚುಕಟ್ಟುತನವನ್ನು ಕಂಡಾಗ ನನಗೆ ಅವರ ಸಂಘಟನಾ ಸಾಮರ್ಥ್ಯದ ಅರಿವಾಯಿತು. ತಾಲೂಕು ಸಾಹಿತ್ಯ ಸಮ್ಮೇಳನವೊಂದರಲ್ಲಿ ಮೊದಲ ಬಾರಿಗೆ ಅವರ ಭಾಷಣ ಕೇಳಿದಾಗಲೂ ನನಗೆ ಖುಷಿಯಾಗಿತ್ತು. ಪುನರೂರು ಯಾರೋ ಸಾಹಿತಿಗಳು ಬರೆದುಕೊಟ್ಟ ಭಾಷಣವನ್ನು ಓದಬಹುದು ಅಂತ ನಾನು ನಿರೀಕ್ಷಿಸಿದ್ದೆ. ಆದರೆ ಅವರು ಹಾಗೆ ಮಾಡಲಿಲ್ಲ. ಅತ್ಯಂತ ಸರಳವಾದ ಭಾಷೆಯಲ್ಲಿ ತುಂಬಾ ಪ್ರಾಮಾಣಿಕವಾಗಿ

ವಲಯ ಕಛೇರಿ, ಕಾರ್ಪೊರೇಶನ್ ಬ್ಯಾಂಕ್, ಬೆಳಗಾವಿ

ಮಾತನಾಡಿದರು. "ನಾನು ಸಾಹಿತಿಯಲ್ಲ, ಸಂಘಟಕ. ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ನನ್ನಿಂದಾದ ಸೇವೆ ಸಲ್ಲಿಸಲೆತ್ನಿಸಿದ್ದೇನೆ" ಎಂದರು. ಮುಖವಾಡ ಹಾಕಿಕೊಂಡವರಿಂದ ತುಂಬಿಹೋಗಿರುವ ಇಂದಿನ ನಮ್ಮ ಸಾರ್ವಜನಿಕ ಬದುಕಿನಲ್ಲಿ ಈ ರೀತಿ ತಮ್ಮ ಮಿತಿಗಳನ್ನು ಒಪ್ಪಿಕೊಳ್ಳುವ ಸೌಜನ್ಯ ಎಷ್ಟು ಜನರಲ್ಲಿ ಇರುತ್ತದೆ?

ಕಳೆದ ವರ್ಷ ತೀರ್ಥಹಳ್ಳಿಯಲ್ಲಿ ಒಂದು ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದ್ದರು. ಶನಿವಾರ ಸಂಜೆ ಆರು ಗಂಟೆಗೆ ಆರಂಭವಾಗಲಿದ್ದ ಆ ಸಮಾರಂಭಕ್ಕೆ ಮಂಗಳೂರಿನಿಂದ ನಾನು ಒಂದು ಗಂಟೆಗೆ ಕಛೇರಿ ಮುಗಿಸಿ ಹೊರಡಬೇಕಾಗಿತ್ತು. ಬಸ್ಸಿನಲ್ಲಿ ಹೋದರೆ ತಡವಾಗುವ ಸಂಭವವಿತ್ತು. ಏನು ಮಾಡುವುದು? ಅಂತ ಯೋಚಿಸುತ್ತಿದ್ದಾಗ ಆಹ್ವಾನ ಪತ್ರಿಕೆಯಲ್ಲಿ ಪುನರೂರರ ಹೆಸರು ಕಾಣಿಸಿತು. ಆಗ ಅವರು ಕ.ಸಾ.ಪ. ಅಧ್ಯಕ್ಷರಾಗಿದ್ದರು. ಅವರಿಗೆ ಫೋನ್ ಮಾಡಿ ನಿಮ್ಮ ಜೊತೆ ಕಾರಿನಲ್ಲಿ ಬರಬಹುದೇ? ಅಂತ ಕೇಳಿದೆ. "ಮೂಲ್ಕಿಗೆ ಒಂದು ಗಂಟೆಗೆ ಬನ್ನಿ. ಒಟ್ಟಿಗೆ ಊಟಮಾಡಿ ಹೋಗುವ" ಅಂದರು. ನಾನು ಹತ್ತು ನಿಮಿಷ ಮುಂಚಿತವಾಗಿ ಮೂಲ್ಕಿಗೆ ಹೋದೆ. ಅವರು ಹೇಳಿದ ಸಮಯಕ್ಕೆ ಸರಿಯಾಗಿ ಬಂದರು. ನನ್ನ ಜೊತೆ ಅವರೂ ಅವರದೇ ಹೋಟೆಲಿನಲ್ಲೇ ಊಟ ಮಾಡಿದರು.

ತೀರ್ಥಹಳ್ಳಿಗೆ ಹೋಗುವಾಗ ದಾರಿಯಲ್ಲಿ ಚಕ್ಕುಲಿ ಉಂಡೆ ಖರೀದಿಸಿದರು. ಇಬ್ಬರೂ ಚಕ್ಕುಲಿ ಮೆಲ್ಲುತ್ತಾ ಮಾತಿಗೆ ತೊಡಗಿದೆವು. ತಾನು ಕ.ಸಾ.ಪ. ಅಧ್ಯಕ್ಷನಾಗಿ ಏನೆಲ್ಲಾ ಕೆಲಸ ಮಾಡಿದೆ? ಪರಿಷತ್ತನ್ನು ಆರ್ಥಿಕವಾಗಿ ಬಲಪಡಿಸಲು ಯಾವ ಕ್ರಮಗಳನ್ನು ತೆಗೆದುಕೊಂಡೆ? ಎಂಬುದನ್ನು ಪುನರೂರರು ವಿವರಿಸಿದರು. ಪರಿಷತ್ತಿನ ಕಾರ್ಯಕ್ರಮಗಳಿಗಾಗಿ ಟಿ.ಎ., ಡಿ.ಎ. ತೆಗೆದುಕೊಳ್ಳದೆ ಸ್ವಂತ ಕಾರಿನಲ್ಲಿ ಬೀದರ್‌ವರೆಗೆ ಓಡಾಡಿದ್ದನ್ನು ಹೇಳಿದರು.

ತಮ್ಮಿಂದಾಗಿ ಪರಿಷತ್ತಿಗಾಗಲಿ, ಕಾರ್ಯಕ್ರಮಕ್ಕೆ ಆಹ್ವಾನಿಸಿದವರಿಗಾಗಲಿ ಅನಾವಶ್ಯಕವಾಗಿ ಖರ್ಚಾಗಬಾರದು ಎಂಬುದು ಪುನರೂರು ಅವರ ಧೋರಣೆ. ಹೀಗಾಗಿ ಅವರು ಬೇರೆ ಊರುಗಳಿಗೆ ಹೋದಾಗ ವಿಶ್ರಾಂತಿ ತೆಗೆದುಕೊಳ್ಳಲು ಹೋಟೆಲ್‌ನಲ್ಲಿ ರೂಂ ಮಾಡುವುದಿಲ್ಲ. ಕಾರ್ಯಕ್ರಮ ಮುಗಿದ ಬಳಿಕ ರಾತ್ರಿ ಪ್ರಯಾಣ ಮಾಡಿ ಊರಿಗೆ ವಾಪಾಸು ಬರಲು ಪ್ರಯತ್ನಿಸುತ್ತಾರೆ. ಅನಿವಾರ್ಯವಾದರೆ ಮಾತ್ರ ಉಳಿದುಕೊಳ್ಳುತ್ತಾರೆ.

ತೀರ್ಥಹಳ್ಳಿ ಹತ್ತಿರ ಬರುತ್ತಿದ್ದಂತೆ ಪುನರೂರರು ತಮ್ಮ ಡ್ರೈವರ್‌ಗೆ ಕಾರು ನಿಲ್ಲಿಸುವಂತೆ ಹೇಳಿದರು. ರಸ್ತೆ ಬದಿಯಲ್ಲಿ ಮುಖ ತೊಳೆದುಕೊಂಡು, ತಲೆಬಾಚಿಕೊಂಡು ವೇದಿಕೆಗೆ ಹೋಗಲು ಸಿದ್ಧರಾದರು. ಕಾರ್ಯಕ್ರಮದಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಮಾಡುವ ಹಾಗೆ ತಮ್ಮ ಭಾಷಣವಾದ ಬಳಿಕ ಹೊರಟು ನಿಲ್ಲಲಿಲ್ಲ. "ನಿಮ್ಮನ್ನು ಕರೆದುಕೊಂಡು ಬಂದದ್ದು ನಾನು. ವಾಪಾಸು ಕರೆದುಕೊಂಡು ಹೋಗುವುದು ನನ್ನ ಜವಾಬ್ದಾರಿ" ಎಂದು ಸಭೆಯಲ್ಲಿ ಕುಳಿತು, ನಾನು ಭಾಗವಹಿಸಿದ ಕಾವ್ಯಗೋಷ್ಠಿಯನ್ನು ಪೂರ್ತಿಯಾಗಿ ಕೇಳಿದರು. ಅವರ ಜೊತೆ ಮೂಲ್ಕಿಗೆ ಬಂದಾಗ ರಾತ್ರಿ 12 ದಾಟಿತ್ತು. "ಇಷ್ಟು ರಾತ್ರಿಯಲ್ಲಿ ಮಂಗಳೂರಿಗೆ ಹ್ಯಾಗೆ ಹೋಗ್ತೀರಿ? ನಮ್ಮ ಹೋಟೇಲಲ್ಲೇ ಉಳಕೊಳ್ಳಿ. ಬೆಳಗ್ಗೆ ಟಿಫಿನ್ ಮಾಡಿ ನಂತರ ಹೋಗಿ" ಅಂದರು. ಹರಿಕೃಷ್ಣ ಪುನರೂರರ ಜತೆ ನಾನು ತಿರುಗಾಡಿದ್ದು ಒಂದೇ ಸಲ. ಆದರೂ ಆ ನೆನಪು ಎಂದಿಗೂ ಹಸಿರಾಗಿರುತ್ತದೆ.


ಹರಿಕೃಷ್ಣ ಪುನರೂರರಿಗೆ ನನ್ನ ಕವನಗಳೆಂದರೆ ತುಂಬಾ ಇಷ್ಟ. ಸಮ್ಮೇಳನವೊಂದರಲ್ಲಿ ಕವಿಗೋಷ್ಠಿ ಮುಗಿದ ನಂತರ, "ನನಗೆ ಅರ್ಥ ಆದದ್ದು ನಿಮ್ಮ ಕವನ ಮಾತ್ರ. ಉಳಿದವರು ಓದಿದ್ದರ ತಲೆಬುಡ ಗೊತ್ತಾಗಲಿಲ್ಲ" ಎಂದು ಎಲ್ಲರೆದುರೇ ಹೇಳಿದ್ದರು.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಹುಟ್ಟೂರಿಗೆ ಹೆಸರು ತಂದುಕೊಟ್ಟ ಪುನರೂರು

☐ ಪಿ. ರಾಮಭಟ್ಟ

ಧರ್ಮದರ್ಶಿ ಹರಿಕೃಷ್ಣರ ಬಗೆಗೆ ಹೇಗೆ ಬರೆದರೂ ಅದು ಕಡಲಿನಿಂದ ಒಂದು ಕೊಡ ನೀರನ್ನು ತಂದು ಕಡಲನ್ನೇ ತಂದಿರುವೆ ಎಂದು ಹೇಳಿದಂತಾದೀತೆಂದು ನನ್ನ ಭಾವನೆ. ಆದರೂ ಅವರೊಂದಿಗಿನ ಮೂವತ್ತು ವರ್ಷಗಳ ಒಡನಾಟದ ಅವಧಿಯ ತುಣುಕುಗಳನ್ನು ಹೆಕ್ಕಿ ತೆಗೆಯುವ ಮೂಲಕ ಈ ಲೇಖನವನ್ನು ಬರೆಯುವ ಪ್ರಯತ್ನ ಮಾಡುತ್ತೇನೆ.



ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಕುಗ್ರಾಮವಾದ ಮುಟ್ಟತ್ತೋಡಿಯಿಂದ ನನ್ನ 21ನೆಯ ವಯಸ್ಸಿನಲ್ಲಿ ಕನ್ನಡ ಬಿ.ಎ. ಪದವೀಧರನಾಗಿ ಉದ್ಯೋಗ ಅರಸಿ ಕರ್ನಾಟಕಕ್ಕೆ ಕಾಲಿರಿಸಿದ ನನಗೆ ಉದ್ಯೋಗವನ್ನು ನೀಡಿ ಆಶ್ರಯ ನೀಡಿದುದು ಈಗ ಹರಿಕೃಷ್ಣರ ಆಡಳಿತದಲ್ಲಿರುವ ಶ್ರೀ ಶಾರದಾ ಪ್ರೌಢಶಾಲೆ. (ಶಿಮಂತೂರು) ಆಗ ಇದರ ಆಡಳಿತ ಬೇರೆಯವರ ವಶದಲ್ಲಿತ್ತು. 1968ರ ಆ ದಿನಗಳಲ್ಲಿ ಹರಿಕೃಷ್ಣರು ಕೇರಳದ ಹೋಟೇಲೊಂದರಲ್ಲಿ ದುಡಿದು ಸ್ವತಃ ಹೋಟೆಲ್ ಹೊಂದಿದ್ದರು. ಅವರು ಮಂಗಳೂರಲ್ಲಿ ಹೋಟೆಲ್ ಆರಂಭಿಸುವುದಕ್ಕಾಗಿ ಊರಿಗೆ ಬಂದಾಗ, ನಮ್ಮ ಶಾಲೆಗೂ ಒಮ್ಮೆ ಬಂದಿದ್ದರು. ಆಗ ಅವರನ್ನು ಸಮೀಪದಿಂದ ಕಂಡಿದ್ದೆ.

ಮಂಗಳೂರಲ್ಲಿ ಜಿಲ್ಲಾಧಿಕಾರಿ ಕಛೇರಿ ಸಮೀಪದ "ಹೋಟೆಲ್ ಸ್ವಾಗತ್" ಆರಂಭಿಸಿದ ಬಳಿಕ ಅವರನ್ನು ಆಗಾಗ

ನಿವೃತ್ತ ಮುಖ್ಯ ಶಿಕ್ಷಕ, "ಆಶೀರ್ವಾದ" ಅಂಚೆ, ಪುನರೂರು- 574 159

ಕಾಣುವ ಅವಕಾಶವಾಯಿತು. ಮುಂದೆ ಅವರು ಮೂಲ್ಕಿಯಲ್ಲಿ "ಪೆಟ್ರೋಲ್ ಬಂಕ್" ಹೊಂದಿ, ಕಟ್ಟಡ ನಿರ್ಮಾಣ ಮಾಡಿ, ಹೊಸ ವಸತಿಗೃಹ, ವಾಣಿಜ್ಯ ಸಂಕೀರ್ಣ ಹಾಗೂ ಹೋಟೆಲ್ ಆರಂಭಿಸಿದ ಮೇಲೆ ನನಗೆ ಅವರು ಇನ್ನಷ್ಟು ಹತ್ತಿರವಾದರು.

1970ರಲ್ಲಿ ಉದ್ಯೋಗ ಅರಸಿ ಪುನರೂರಿಗೆ ಹೋದ ನನಗೆ ಬಿಡಾರ ನೀಡಿ ಹರಸಿದವರು ಹರಿಕೃಷ್ಣರ ಅಣ್ಣ ಪಟೇಲ್ ವೆಂಕಟೇಶ ರಾಯರು. 1987ರವರೆಗೆ ಒಂದೇ ಕಡೆ ನೆಲೆಸಿದ ನನಗೆ ಪುನರೂರರ ವಿವಿಧ ಮುಖಗಳ ಪರಿಚಯವಾಯಿತು. ಒಂದು ರೀತಿಯಲ್ಲಿ ನಾನು ಅವರಲ್ಲಿ ಹಿರಿಯಣ್ಣನ ಸ್ಥಾನವನ್ನು ಗುರುತಿಸಿದ್ದೆ. ಅವರ ಜೊತೆಯಲ್ಲಿ ಹಲವಾರು ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೆ. ನನ್ನನ್ನು ತಮ್ಮ ಕುಟುಂಬದ ಸದಸ್ಯನೊಬ್ಬನಂತೆ ಅವರು ನಡೆಸಿಕೊಂಡಿದ್ದರು.

ಅದೇ ಸಮಯದಲ್ಲಿ, ನಮ್ಮ ಶಾಲೆಯ ಆಡಳಿತದ ಚುಕ್ಕಾಣಿ ಅವರ ಕೈ ಸೇರಿತು. ಆಮೇಲೆ ಅವರು ನನ್ನ ಮೇಲಧಿಕಾರಿಗಳು ಆದರು. 1985ರಿಂದ 2005ರವರೆಗೆ ನಾನು ಮುಖ್ಯ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತನಾಗುವವರೆಗೆ ಹತ್ತು ಹಲವು ರೀತಿಯಲ್ಲಿ ಅವರಿಂದ ಉಪಕೃತನಾಗಿದ್ದೇನೆ.

1987ರಲ್ಲಿ ನಾನು ಸ್ವಂತ ಮನೆಗೆ ಹೋಗುವ ಸಂದರ್ಭದಲ್ಲಿಯೂ ಅವರು ತುಂಬು ಹೃದಯದಿಂದ ಹರಸಿದ್ದರು. ಈ ರೀತಿ ಪುನರೂರು ಕುಟುಂಬದ ಸದಸ್ಯರ ಸಹಕಾರ ಹಾಗೂ ಒಡನಾಟ ನನ್ನ ಜೀವನದಲ್ಲಿ ಅವಿಸ್ಮರಣೀಯವಾಗಿದೆ.

ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ಅವರು ವಹಿಸಿದ ಕಾಳಜಿ ಅಪಾರ. ಮುಚ್ಚಿಹೋಗುವ ಸ್ಥಿತಿಯಲ್ಲಿದ್ದ ಮೂರು ಶಾಲೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಂಗಳೂರು ತಾಲೂಕಿನ ಮುಲ್ಕಿ ಸಮೀಪದ 'ಕಕ್ವ'ದಲ್ಲಿರುವ ಕಿರಿಯ ಪ್ರಾಥಮಿಕ ಶಾಲೆ, ಹಳೆಯಂಗಡಿ ಸಮೀಪದಲ್ಲಿರುವ ಶ್ರೀ ಸುಬ್ರಹ್ಮಣ್ಯ ಹಿರಿಯ ಪ್ರಾಥಮಿಕ ಶಾಲೆ, ಎಳತ್ತೂರಿನಲ್ಲಿರುವ ಶ್ರೀ ಶಾರದಾ ಕಿರಿಯ ಪ್ರಾಥಮಿಕ ಶಾಲೆ, ಕಿಮಂತೂರಿನಲ್ಲಿರುವ ಶ್ರೀ ಶಾರದಾ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ಶಾರದಾ ಪ್ರೌಢಶಾಲೆ ಇವರ ನೇತೃತ್ವದಲ್ಲಿರುವ ಶಿಕ್ಷಣ ಸಂಸ್ಥೆಗಳು. ಇವುಗಳನ್ನು ವಾಸುದೇವ ರಾವ್ ಸ್ಮಾರಕ ಟ್ರಸ್ಟ್ (ರಿ) ಹಾಗೂ ಶ್ರೀ ಶಾರದಾ ಸೊಸೈಟಿ (ರಿ) ಎಂಬ ಸಂಸ್ಥೆಗಳ ಆಶ್ರಯದಲ್ಲಿ ನಡೆಸುತ್ತಿದ್ದಾರೆ. ಇದಲ್ಲದೆ ಉಡುಪಿ ಜಿಲ್ಲೆಯ ನಿಟ್ಟೂರಿನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯೂ ಇವರ ನೇತೃತ್ವದಲ್ಲಿದೆ. ಇವೆಲ್ಲಾ ಕನ್ನಡ ಮಾಧ್ಯಮ ಶಾಲೆಗಳಾಗಿವೆ. ಇಲ್ಲಿ ಶಿಕ್ಷಕರ ಕೊರತೆ ಬಂದಾಗ ಗೌರವ ಶಿಕ್ಷಕರನ್ನು ನೇಮಿಸಿ ಸಂಬಳ ನೀಡುತ್ತಿದ್ದಾರೆ. ಕಟ್ಟಡದ ಕೊರತೆ ಕಂಡುಬಂದಾಗ ಕಟ್ಟಡ ನಿರ್ಮಿಸಿ ಆಶ್ರಯ ನೀಡಿದ್ದಾರೆ. ಕುಡಿಯುವ ನೀರಿನ ಸೌಕರ್ಯ, ಶೌಚಾಲಯ, ಆವರಣ ಗೋಡೆ ಇತ್ಯಾದಿಗಳಿಗೆ ನೆರವು ನೀಡಿದ್ದಾರೆ. ಇವರ ವಿಶೇಷ ಮುತುವರ್ಜಿಯಿಂದ ಶ್ರೀ ಶಾರದಾ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶವು ಕಳೆದ ಹತ್ತು ವರ್ಷಗಳಿಂದ ಶೇ. 85ಕ್ಕಿಂತ ಅಧಿಕ ಬರುತ್ತಿದೆ.

ತಾವು ಶಿಕ್ಷಣದಿಂದ ವಂಚಿತರಾದರೂ ಬಡವರ ಮಕ್ಕಳು ಹಾಗಾಗಬಾರದೆಂಬ ದೃಷ್ಟಿಯಿಂದ ಈ ಹಿಂದುಳಿದ ಪ್ರದೇಶದ ಶಿಕ್ಷಣದ ಅಭಿವೃದ್ಧಿಗೆ ಕೊಡುಗೈಯ ದಾನ ನೀಡಿ ಕೃತಾರ್ಥರಾಗಿದ್ದಾರೆ. ಇದೆಲ್ಲವನ್ನು ಅವರು ಪ್ರಚಾರದ ದೃಷ್ಟಿಯಿಂದ ಮಾಡುತ್ತಿಲ್ಲವಾದರೂ ಅವರು ಸಾಕಷ್ಟು ಪ್ರಚಾರ ಪಡೆಯುತ್ತಿರುವುದು ಅವರ ಅದೃಷ್ಟವಾಗಿದೆ. ತಾವು ಕೃತಿಕಾರರಲ್ಲವಾದರೂ ಹಲವು ಲೇಖಕರ ಕೃತಿಗಳ ಪ್ರಕಟಣೆಗೆ ಉದಾರವಾಗಿ ಧನ ಸಹಾಯ ನೀಡಿ ಸಹಕರಿಸಿದ್ದಾರೆ. ಹೀಗೆ ಅವರು ಸಾಹಿತ್ಯ ಪೋಷಕರಾಗಿ ಕೀರ್ತಿಶಾಲಿಗಳಾಗಿದ್ದಾರೆ. "ಗೌರವಪ್ರತಿ"ಗಳನ್ನು ಉಚಿತವಾಗಿ ಸ್ವೀಕರಿಸದೆ ಆಯಾ ಕೃತಿಯ

ಮುಖಬೆಲೆಗಿಂತ ಹೆಚ್ಚು ಹಣವನ್ನು ನೀಡಿ ಕೃತಿಕರ್ತೃಗಳನ್ನು ಪ್ರೋತ್ಸಾಹಿಸುವುದು ಅವರ ಆದರ್ಶ. ''ಕೊಂಡು ಓದಿ ಸಹಕರಿಸಿರಿ'' ಎಂದೇ ಅವರು ಒತ್ತಿ ಹೇಳುವವರು. ಇಂತಹ ಹರಿಕೃಷ್ಣರ ಬಗೆಗೆ ನಮ್ಮೆಲ್ಲರಿಗೆ ಹೆಮ್ಮೆ ಇದೆ.

ಕೇವಲ ಮಾಧ್ಯಮಿಕ ಶಿಕ್ಷಣ ಮಾತ್ರ ಶಾಲಾಮುಖದಲ್ಲಿ ಪಡೆದ ವ್ಯಕ್ತಿ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮೆರೆದುದನ್ನು ಹತ್ತಿರದಿಂದ ವೀಕ್ಷಿಸಿದ ನನಗೆ ಕನ್ನಡದ ಗಾದೆ ನೆನಪಾಗುತ್ತದೆ. ''ಜಗಲಿ ಹಾರಿ, ಗಗನ ಹಾರು''. ಹರಿಕೃಷ್ಣರು ಎತ್ತರಕ್ಕೆ ಹಂತ ಹಂತವಾಗಿ ಏರಿದರು. ಆದ ಕಾರಣ ಅಲ್ಲಿ ಭದ್ರವಾಗಿ ನಿಂತು ಸಾಧಕರಾದರು. ''ಲಯನ್ಸ್ ಸಂಸ್ಥೆ''ಯ ಗವರ್ನರ್ ಸ್ಥಾನಕ್ಕೆ ಮೊದಲ ಬಾರಿ ಸ್ಪರ್ಧಿಸಿ ಸೋತಾಗ ''ಸೋಲೇ ಗೆಲುವಿನ ಸೋಪಾನ'' ಎಂದು ತಿಳಿದು ಮುಂದಿನ ಬಾರಿ ಜಯಶಾಲಿಗಳಾದರು. ಅದೇ ರೀತಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಮೊದಲ ಬಾರಿ ಸೋತರೂ, ಅದನ್ನೇ ಸವಾಲಾಗಿ ಸ್ವೀಕರಿಸಿ, ಎರಡನೇ ಬಾರಿ ಜಯಶೀಲರಾದರು. ಸಮರ್ಥವಾಗಿ ಮೂರು ವರ್ಷಗಳ ಅಧಿಕಾರಾವಧಿ ಪೂರೈಸಿದರು.

ಪುನರೂರಿನಲ್ಲಿ ವಸತಿಹೀನರಿಗಾಗಿ ಅವರು ತಮ್ಮ ಸ್ವಂತ ವೆಚ್ಚದಿಂದ ನಿರ್ಮಿಸಿದ ನೂರೊಂದು ಮನೆಗಳ ಸಂಕೀರ್ಣ ಅವರ ಉದಾರತನಕ್ಕೆ ಉದಾಹರಣೆ. ''ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ'' ತಮ್ಮ ಆದಾಯದಲ್ಲಿ ದೊಡ್ಡ ಮೊತ್ತವನ್ನು ಈ ಘನಕಾರ್ಯಕ್ಕೆ ವೆಚ್ಚ ಮಾಡಿ ಕೃತಕೃತ್ಯರಾಗಿದ್ದಾರೆ.

ಹರಿಕೃಷ್ಣರು ಎಲ್ಲಿದ್ದರೂ ಮುಂಚೂಣಿಯಲ್ಲಿ ನಿಲ್ಲುವವರು. ಇದು ಅವರ ಹುಟ್ಟುಗುಣವೋ ಅದೃಷ್ಟವೋ ತಿಳಿಯದು. ಪೇಜಾವರ ಶ್ರೀಗಳು ಅವರಿಗೆ ನೀಡಿದ ಪುರಸ್ಕಾರಗಳೂ ಅಗಣಿತ. ಇಂದಿಗೂ ಅವರು ತಮ್ಮ ವಾಸಗೃಹದ ಹೆಸರಾದ ''ಶುಭವಾಗಲಿ'' ಎಂಬ ಧ್ಯೇಯವಾಕ್ಯವನ್ನೇ ಇತರರಿಗೂ ಹೇಳುತ್ತಿದ್ದಾರೆ. ವೈರಿಯನ್ನೂಕೈ ಕುಲುಕಿ ಮಾತನಾಡಿಸುವ ವಿಶಾಲ ಹೃದಯ ಇರುವ ಇವರು ಅಜಾತಶತ್ರು ಆಗಿದ್ದಾರೆ.

ವ್ಯಕ್ತಿಯಿಂದ ಹುಟ್ಟೂರಿಗೆ ಹೆಸರು ಬಂದಿದ್ದರೆ ಅದಕ್ಕೆ ಜೀವಂತ ಉದಾಹರಣೆ ಪುನರೂರರು. ಈ ಊರು, ಹರಿಕೃಷ್ಣರು ಸಾಧನೆಯ ಸರದಾರ ಆಗದಿರುತ್ತಿದ್ದರೆ ಇಷ್ಟು ಪ್ರಚುರವಾಗುತ್ತಿರಲಿಲ್ಲ. ಹುಟ್ಟಿದ ಊರಿನ ಕೀರ್ತಿಯನ್ನು ದೇಶ ವ್ಯಾಪಿಯಾಗಿಸಿದ ಹರಿಕೃಷ್ಣರು 'ಶತಾಯುಷಿ' ಆಗಲಿ. ''ಧರ್ಮದರ್ಶಿ'' ''ಸಮದರ್ಶಿ''ಗಳಾಗಿ ಮೆರೆಯಲಿ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಎದೆ ತುಂಬ ಆತ್ಮವಿಶ್ವಾಸ

ಅಂಶುಮಾಲಿ



ಧವಳ ವಸ್ತ್ರವೇ ಉಡುಗೆಯಾಗಿರುವ ಹರಿಕೃಷ್ಣ ಪುನರೂರು ಅವರನ್ನು ಎಲ್ಲೇ ಆಗಲಿ ಗುರುತಿಸುವುದು ಸುಲಭ. ಒಂದು ವೇಳೆ ನಾವು ಗುರುತಿಸದೇ ಹೋದರೂ ಅವರೇ ಬಳಿಗೆ ಬಂದು ನಮ್ಮನ್ನು ಮಾತಾಡಿಸುವುದು ಅವರ ವಿಶಿಷ್ಟ ಸ್ವಭಾವ.

ನನಗೆ ಹರಿಕೃಷ್ಣ ಪುನರೂರು ಅವರ ನಿಕಟ ಪರಿಚಯವಾದದ್ದು ಭಾರದ್ವಾಜ ಪ್ರಕಾಶನದ ಕಲಾದರ್ಶನ ಪತ್ರಿಕೆಯ ವಿ.ಬಿ. ಹೊಸಮನೆ ಅವರ ಮೂಲಕ. ನನ್ನ 'ಕನ್ನಾನ' ಕಾವ್ಯ ಸಂಕಲನ 1991ನೇ ಸಾಲಿನ ಕಡೆಂಗೋಡ್ಲು ಕಾವ್ಯ ಪ್ರಶಸ್ತಿಯನ್ನು ಪಡೆದಾಗ, ಅದರ ಪ್ರಕಟನೆಯ ಭಾರವನ್ನು ಹೊತ್ತುಕೊಂಡವರು ಹೊಸಮನೆಯವರು. 'ಕನ್ನಾನ'ವನ್ನು ಓದಿ ಮೆಚ್ಚಿಕೊಂಡ ಪುನರೂರು ಆಕಸ್ಮಿಕವಾಗಿ ಧನ ಸಹಾಯವನ್ನೂ ನೀಡಿ ಪ್ರೋತ್ಸಾಹಿಸಿದರು.

ಡಾ|| ನಾ. ಮೊಗಸಾಲೆಯವರ ಕಾರ್ಯಾಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾಂತಾವರ ಕನ್ನಡ ಸಂಘದ 'ಮುದ್ದಣ ಕಾವ್ಯ ಪ್ರಶಸ್ತಿ' ಯೋಜನೆಯಡಿಯ 2001ರ ಸಾಲಿನ ಕಾವ್ಯ ಹಸ್ತಪ್ರತಿ ಸ್ಪರ್ಧೆಯಲ್ಲಿ ನಾನು ನನ್ನ 'ಪ್ರತಿಭಾನ' ಕವನ ಸಂಕಲನದ ಹಸ್ತಪ್ರತಿ ಮೂಲಕ ಸ್ಪರ್ಧಿಸಿದ್ದೆ. ಪುನರೂರು ಅವರ ಟ್ರಸ್ಟಿನ (ಪಟೇಲ್ ಪುನರೂರು ವಾಸುದೇವರಾವ್ ಸ್ಮಾರಕ ಟ್ರಸ್ಟಿನ) ಪ್ರಾಯೋಜಕತ್ವದಲ್ಲಿ ವರ್ಷಂಪ್ರತಿ ನಡೆಯುತ್ತಿರುವ

[illegible]-576 107

ರಾಜ್ಯಮಟ್ಟದ ಸ್ಪರ್ಧೆ ಇದು. 2001ರ ಸಾಲಿನ ಮುದ್ರಣ ಕಾವ್ಯ ಬಹುಮಾನ ನನ್ನ ಹಸ್ತಪ್ರತಿಗೇ ಬಂತು. 2002ರ ಜನವರಿಯಲ್ಲಿ ಕಾಂತಾವರದ ಶ್ರೀಕಾಂತೇಶ್ವರ ದೇವಾಲಯದ ಅಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುನರೂರು ಅವರೇ ಈ ಪ್ರಶಸ್ತಿಯ ಫಲಕ, ಬಹುಮಾನ ಮೊತ್ತ ನೀಡಿ ಶಾಲು ಹೊದೆಸಿ ಸನ್ಮಾನಿಸಿದರು. ನನ್ನ ಪಾಲಿಗೆ ಅದೊಂದು ರೋಚಕ ಅನುಭವ.

'ಸರ್ವೇ ಜನಾಃ ಸುಖಿನೋಭವಂತು' ಎಂಬ ಉಪನಿಷದ್ವಾಕ್ಯದಂತೆ ವಿಶಾಲವಾಗಿ ಚಿಂತಿಸುವ ಅವರ ಮನಸ್ಸು ಹೇಗಿದೆಯೆಂದರೆ ಅವರ ನಿವಾಸದ ಹೆಸರೇ 'ಶುಭವಾಗಲಿ.'

ನನ್ನ ಹುಟ್ಟೂರಾದ ಕನ್ಯಾನದವರೇ ಆಗಿದ್ದು ನನ್ನ ಮೇಲೆ ವಿಶೇಷ ಮಮತೆ ಇದ್ದ ಅಭಿನವ ಕಲ್ಹಣ ಕೀರ್ತಿಶೇಷ ನೀರ್ಪಾಜೆ ಭೀಮಭಟ್ಟರು ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಆತ್ಮೀಯವಾಗಿ ಆಡಿದ ಮಾತುಗಳು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿವೆ:

'ಹರಿಕೃಷ್ಣ ಪುನರೂರು ಸಾಹಿತಿ ಆಗಿಲ್ಲದೆಯೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಹೇಗಾದರು ಎಂದು ಕೆಲವರಲ್ಲಿ ವಿಸ್ಮಯವಿದೆ. ಇಂಥವರು ವಸ್ತುಸ್ಥಿತಿಯನ್ನು ಸ್ವಲ್ಪವೂ ಗಮನಿಸುವುದಿಲ್ಲ. ಸುಮ್ಮನೆ ಟೀಕೆ ಮಾಡುತ್ತ ತಾವು ದೊಡ್ಡವರಾಗಬೇಕು ಎಂದುಕೊಳ್ಳುತ್ತಾರೆ. ಪುನರೂರು ಎಂಥವರು? ಶುದ್ಧ ಮನಸ್ಸಿನ ಹುಮ್ಮಸ್ಸಿನ ಕ್ರಿಯಾಶೀಲ ವ್ಯಕ್ತಿ. ಅವರ ರಚನಾತ್ಮಕ ಶಕ್ತಿ ಏನು ಅಂತ, ಯಾರೇ ಆಗಲಿ, ಬಾಯಿ ಮುಚ್ಚಿಕೊಳ್ಳುವ ಹಾಗೆ ಮಾಡಿ ತೋರಿಸಿದ್ದಾರಲ್ಲ! ಈಗ ನಾನು ಹೀಗಿರುವುದು ಹೇಗೆ? ಅವರ ಆ ಬದುಕು ಪ್ರೇರಣೆಯಿಂದ!'

ಹಿಂದಿನಿಂದಲೂ ಅನೇಕ ಸೇವಾ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಹರಿಕೃಷ್ಣ ಅವರ ಮಾನವೀಯತೆ ಹೇಗೆ ಮಿಡಿಯುತ್ತದೆ ಎನ್ನುವುದಕ್ಕೆ ಅವರು ಅವರ ಹುಟ್ಟೂರಲ್ಲಿ ಕಟ್ಟಿಸಿರುವ ನೂರೊಂದು ಮನೆಗಳೇ ಸಾಕ್ಷಿ. ಗರಿಷ್ಠ ಸೇವಾ ಮಿತಿಯ ಚೌಕಟ್ಟಿನಲ್ಲಿ ನೂರಾ ಒಂದು ಸಂಸಾರಗಳನ್ನು ಅಡಕಗೊಳಿಸಿ ವಿನ್ಯಾಸಗೊಳಿಸುವುದೇ ಒಂದು ಕಲೆ, ಒಂದು ಸವಾಲು!

ಸೂಕ್ಷ್ಮ ದೃಷ್ಟಿಯ, ಆತ್ಮೀಯ ಸನ್ನಿವೇಶ ಸೃಷ್ಟಿಯ, ಎದೆ ತುಂಬ ಆತ್ಮವಿಶ್ವಾಸವನ್ನು ತುಂಬಿಕೊಂಡಿರುವ, ಗಂಭೀರ ವದನದಲ್ಲಿ ಒಮ್ಮೆಲೆ ಶ್ವೇತ ದಂತ ಪಂಕ್ತಿಯನ್ನು ಅರಳಿಸಬಲ್ಲ, ಅದಮ್ಯ ಚೈತನ್ಯದ ಆಜಾನುಬಾಹು ಪುನರೂರು ನನ್ನ ಸಾಹಿತ್ಯಾನುಸಂಧಾನಕ್ಕೆ ಒಂದು ಪ್ರತಿಮೆ. ಈ ವರ್ಷ ಬಂಟ್ವಾಳ ತಾಲೂಕಿನ 11ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ನನ್ನ ಪಾಲಿಗೆ ಬಂದಾಗ ಪ್ರೀತಿಯಿಂದ ಬೆನ್ನುತಟ್ಟಿ 'ಸಾಧನೆಯಲ್ಲಿ ಮುಂದೆ ಹೋಗಿರಿ' ಎಂಬ ಕಿವಿ ಮಾತು ಆಡಿದವರು ಅವರು.

ಎಲ್ಲೇ ಸಿಗಲಿ, ಕಾರಿನಲ್ಲಿ ಹತ್ತಿಸಿಕೊಂಡು ಊರಿಗೆ ಹತ್ತಿರದಲ್ಲೇ ಇಳಿಸುವ, ಸಮಾರಂಭ ಕಳೆದ ಮೇಲೆ ಅನಿವಾರ್ಯ ಉಳಕೊಳ್ಳಬೇಕೆಂದಾದರೆ ಮೂಲ್ಕಿಯ ತನ್ನ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡುವ, ಮಂಗಳೂರಿಗೆ ಹೋದಾಗ 'ಸ್ವಾಗತ' ಹೊಟೆಲಿನಲ್ಲಿ ಸ್ವಾಗತಿಸಿ ಮನೆಯಲ್ಲಿದ್ದಂತೆಯೇ ಉಪಚರಿಸಿ ಸತ್ಕರಿಸುವ ಪುನರೂರು ಅವರಿಗೆ ಆಗುವ ಲಾಭವೇನು? ಏನೂ ಇಲ್ಲ!

ಪುನರೂರು ಅವರಿಂದ ತೆರವಾದ ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಗೊಂಡ ಶ್ರೀ ಪ್ರದೀಪಕುಮಾರ ಕಲ್ಕೂರರು ಕನ್ನಡದ ಹಿರಿಮೆ ಗರಿಮೆಗೆ ಒಂದಿಷ್ಟೂ ಧಕ್ಕೆ ಬಾರದಂತೆ, ಯಾವುದೇ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸಮನ್ವಯ ಧೋರಣೆಯನ್ನು ಅನುಸರಿಸುವಂತೆ ಮಾಡುವ ಕಾರ್ಯವೈಖರಿಯ ಕೀರ್ತಿಗೆ ಪುನರೂರು ಅವರೇ ಸ್ಫೂರ್ತಿ. ಇಂದು ಉಡುಪಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಉಪ್ಪುಂದ ಚಂದ್ರಶೇಖರ ಹೊಳ್ಳ ಅವರೂ ಕನ್ನಡದ ಪ್ರೀತಿಯನ್ನು ಎಲ್ಲೆಂದರಲ್ಲಿ ಹಂಚುತ್ತಿರುವುದಕ್ಕೆ ಪುನರೂರು ಮಾದರಿಯಾದರೂ ಸ್ವಾಂತಿಕೆಯ ನೆಲೆಯಲ್ಲಿ ಸಾಹಿತ್ಯದ

ವಿಕೇಂದ್ರೀಕರಣಕ್ಕೆ ಒತ್ತು ಕೊಟ್ಟು ಅಲ್ಲಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಹಿತ್ಯ ಗೋಷ್ಠಿಗಳನ್ನು ನಡೆಸುವುದರಲ್ಲಿ ಆಸಕ್ತರು.

ಅನೇಕ ಪ್ರಸಿದ್ಧ ಲೇಖಕರ ಕೃತಿಗಳನ್ನು ಪರಿಷತ್ತಿನ ವತಿಯಿಂದ ಪುನರ್ ಮುದ್ರಣಗೊಳಿಸಿದ ಪುನರೂರು ಅವರಿಗೆ, ಏಕೋ ಗ್ರಂಥ ಸಮಸ್ಯೆಯನ್ನು ಪರಿಹರಿಸುವುದಾಗಿಲ್ಲ. ಇದೀಗ ಅಧಿಕಾರವಿಲ್ಲದೆಯೂ ಹಿಂದಿನಂತೆಯೇ ಸ್ವಯಂ ಪ್ರಭಾವದಿಂದ ಬಡ ಲೇಖಕರ ಕೃತಿಗಳಿಗೆ ನ್ಯಾಯ ಒದಗಿಸಿ ಕೊಡಲು ಸಾಧ್ಯವೆ? ಕನ್ನಡ-ಇಂಗ್ಲಿಷು ನಾಡಿನ ಎರಡು ಕಣ್ಣುಗಳಂತೆ ಎಂದು ಭಾವಿಸಿಯೂ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ತಾರತಮ್ಯವನ್ನು ನಿವಾರಿಸಲಾದೀತೆ? ಪರಿಸರ ಮಾಲಿನ್ಯವನ್ನು ತಡೆಯಲಾದೀತೇ? ಎಲ್ಲಕ್ಕೂ ಮಿಗಿಲಾಗಿ ವಿವೇಕವನ್ನೇ ಕಳೆದುಕೊಂಡ ರಾಜಕಾರಣಗಳು ನೇತ್ರಾವತಿ ನದಿಯ ಮುಖವನ್ನು ತಿರುಗಿಸುವುದನ್ನು ತಪ್ಪಿಸಲಾದೀತೆ? ಪುನರೂರು ಅವರು ಪುನಃ ಪುನಃ ಮುಂಚೂಣಿಯಲ್ಲಿ ನಿಲ್ಲಬೇಕಾಗಿದೆ. ನಿಂತು ಗೆಲ್ಲಬೇಕಾಗಿದೆ.

ಭಾಗ: ಎರಡು
ಹೀಗಿದ್ದಾರೆ ಪುನರೂರು

ಸೇವಾಭಾವಕ್ಕೆ ಸಾರ್ಥಕ ಪ್ರತಿಮೆ

☐ ಮಾರ್ಕಂಡಪುರಂ ಶ್ರೀನಿವಾಸ

ಧರ್ಮದರ್ಶಿ ಸ್ನೇಹಶೀಲ ಹರಿಕೃಷ್ಣ ಪುನರೂರು ಅವರಿಗೆ ಕಾಂತಾವರ ಕನ್ನಡ ಸಂಘ 'ಪುನರೂರು ಪುರಸ್ಕಾರ' ಎಂಬ ಅಭಿನಂದನಾ ಗ್ರಂಥ ಹೊರತರುವ ಮೂಲಕ ಅವರನ್ನು ಅಭಿನಂದಿಸುತ್ತಿರುವುದು ತುಂಬಾ ಸಂತೋಷದ ವಿಷಯ. ಅದಕ್ಕಾಗಿ ಕನ್ನಡ ಸಂಘದವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ವೃತ್ತಿಯಲ್ಲಿ ಹೊಟೇಲ್ ಉದ್ಯಮಿಯಾಗಿ, ಪ್ರವೃತ್ತಿಯಲ್ಲಿ ಕನ್ನಡ ಪರಿಚಾರಕರಾಗಿ ಅತ್ಯಂತ ಎತ್ತರಕ್ಕೇರಿದ ಕ್ರಿಯಾಶೀಲ ವ್ಯಕ್ತಿ ಮಾತ್ರವಲ್ಲ, ಒಂದು ಶಕ್ತಿ ಹರಿಕೃಷ್ಣ ಪುನರೂರು ಅವರು.



ಕರ್ನಾಟಕದಲ್ಲಿ ದಕ್ಷಿಣ ಕನ್ನಡಕ್ಕೆ ಭಾಷೆ, ಬದುಕು, ಆಚಾರ, ಸಂಸ್ಕೃತಿಗಳಲ್ಲಿ ತನ್ನದೇ ಒಂದು ಸೊಬಗಿದೆ. ಈ ಭಾಗದ ಜನ ಹೆಚ್ಚು ಕ್ರಿಯಾಶೀಲಿಗಳು, ಸ್ನೇಹಪರರು, ವಿದ್ಯೆ, ಬುದ್ಧಿ, ಆಚಾರ ವಿಚಾರಗಳಲ್ಲೂ ಇತರರಿಗೆ ಮಾದರಿ. ಈ ಭಾಗಕ್ಕೆ ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಶೈಕ್ಷಣಿಕವಾಗಿಯೂ ಸಾಮಾಜಿಕವಾಗಿಯೂ ಒಂದು ಮಹತ್ವ ಇದ್ದೇ ಇದೆ. ನಾನೂ ಸಹ ಈ ಭಾಗದ ಮಂದಿಯ ಸ್ನೇಹಪರತೆ, ಸರಳ ಸಜ್ಜನಿಕೆ, ಆದರಾಭಿಮಾನ, ಸುಸಂಸ್ಕೃತ ನಡವಳಿಕೆಗೆ ಮಾರು ಹೋದವರಲ್ಲಿ ಒಬ್ಬ. ಈ ದಿಸೆಯಲ್ಲಿ ನನಗೆ ಹಲವು ವರ್ಷಗಳಿಂದ ಪರಿಚಿತರಾಗಿ

ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು-560 002

ನನ್ನ ಮನದಾಳದಲ್ಲಿ ಮನೆ ಮಾಡಿಕೊಂಡ ಪ್ರೀತಿಯ ವ್ಯಕ್ತಿ ಹರಿಕೃಷ್ಣ ಪುನರೂರು ಅವರು.

ಹರಿಕೃಷ್ಣ ಪುನರೂರು ಅವರು ವೃತ್ತಿಯಲ್ಲಿ ಹೋಟೆಲ್ ಉದ್ಯಮಿಯಾಗಿ, ಶಿಕ್ಷಣ, ಸಮಾಜಸೇವೆ ಮತ್ತು ಕನ್ನಡ ಸೇವೆಗಳಲ್ಲಿ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಸಿಕೊಂಡು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಬಂದವರಾಗಿದ್ದಾರೆ. ಇವರಲ್ಲಿ ನಾವು ಮುಖ್ಯವಾಗಿ ಸೇವಾ ಮನೋಭಾವ, ದಾನಪ್ರವೃತ್ತಿಯನ್ನು ಕಾಣಬಹುದಾಗಿದೆ. ಮುಖ್ಯವಾಗಿ ಲಯನ್ಸ್‌ನಂಥ ಸಂಸ್ಥೆಗಳ ಮೂಲಕ ಬಹುಮುಖಿ ಸೇವಾಕಾರ್ಯಗಳಿಗೆ ಸಕ್ರಿಯವಾಗಿ ಚೈತನ್ಯ ತುಂಬಿದ್ದಾರೆ. ಅನೇಕ ಸೇವಾ ಸಂಘಟನೆಗಳಿಗೆ ನೆರವು ನೀಡಿದ್ದಾರೆ. ಹೋಟೇಲ್ ಉದ್ಯಮದ ಸಂಘಟನೆಯಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಬಡಬಗ್ಗರಿಗೆ, ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಬಡ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ.

ಹರಿಕೃಷ್ಣ ಪುನರೂರು ಅವರು ಕನ್ನಡ ಭಾಷೆ, ಸಾಹಿತ್ಯ-ಸಂಸ್ಕೃತಿಗಳಿಗೆ ನೀಡಿದ, ನೀಡುತ್ತಿರುವ ಸೇವೆ ಅನನ್ಯವಾದುದು. ಕಾಂತಾವರ ಕನ್ನಡ ಸಂಘದ ಮೂಲಕ ನಡೆಯುವ ಅನೇಕ ಕಾರ್ಯಗಳಿಗೆ ಇವರ ನೆರವು ಇದ್ದೇ ಇದೆ. ಮುಖ್ಯವಾಗಿ ಮುದ್ದಣ ಕಾವ್ಯ ಪ್ರಶಸ್ತಿಯ ಪ್ರಾಯೋಜಕರೂ ಇವರಾಗಿರುವುದು ತುಂಬಾ ಶ್ಲಾಘನೀಯ ವಿಚಾರ. ಇಲ್ಲಿ ಖ್ಯಾತ ಸಾಹಿತಿ ಡಾ|| ನಾ. ಮೊಗಸಾಲೆ, ವಿಠಲ ಬಾಳಾಡಿ, ಬೇಳಾಡಿ ರಾಮಚಂದ್ರ ಆಚಾರ್ಯ, ಜಯರಾಮ ಕಾರಂತ, ಕೆ. ಗಣಪತಿ ಭಟ್ ಮೊದಲಾದವರೊಂದಿಗೆ ಕೂಡಿ ನಡೆಸುತ್ತಿರುವ ಕನ್ನಡಪರ ಚಟುವಟಿಕೆಗಳು ಇಡೀ ನಾಡಿಗೇ ಮಾದರಿಯಾಗಿವೆ.

ದಕ್ಷಿಣ ಕನ್ನಡದ ಭಾಗದಲ್ಲಿ ನಡೆಯುವ ಬಹುತೇಕ ಕನ್ನಡಪರ ಚಟುವಟಿಕೆಗಳಲ್ಲಿ ಪುನರೂರು ಇದ್ದೇ ಇರುತ್ತಾರೆ. ಅದೇ ಅವರ ವೈಶಿಷ್ಟ್ಯ.

ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯದ ಸಮಸ್ತ ಕನ್ನಡಿಗರ ಅಭಿಮಾನದ ಪ್ರಾತಿನಿಧಿಕ ಮಹತ್ವದ ಸಂಸ್ಥೆ, ಇಂಥ ಸಂಸ್ಥೆಗೆ ಸ್ವತಃ ಸಾಹಿತಿಯಲ್ಲದವರು ಅಧ್ಯಕ್ಷರಾಗಿ ಆಯ್ಕೆಯಾಗಿ 'ಸೈ' ಎನ್ನಿಸಿಕೊಳ್ಳುವುದು ಅಷ್ಟೇನು ಸುಲಭದ ಮಾತಲ್ಲ. ಆದರೆ, ಸ್ನೇಹಶೀಲ ಹರಿಕೃಷ್ಣ ಪುನರೂರು ಇಂಥ ಸಂಸ್ಥೆಗೆ ಅಧ್ಯಕ್ಷರಾಗಿ ಸಾಹಿತಿಗಳು ಮಾತ್ರವೇ ಅಲ್ಲ, ಪ್ರೀತಿಯಿಂದ ಕನ್ನಡದ ಕೆಲಸ ಮಾಡಬಲ್ಲ ಯಾರಾದರೂ ಅಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಬಹುದು ಎಂಬುದನ್ನು ತಮ್ಮ ಅಧ್ಯಕ್ಷಾವಧಿಯಲ್ಲಿ ಸಾಬೀತುಪಡಿಸಿದ್ದಾರೆ. ಅಷ್ಟೇ ಅಲ್ಲ, ಅನೇಕ ಪ್ರಗತಿಪರ ಯೋಜನೆಗಳನ್ನು ರೂಪಿಸಿ ಇತರರಿಗೆ ಮಾದರಿಯೂ ಆಗಿದ್ದಾರೆ. ತಮ್ಮ ಅವಧಿಯಲ್ಲಿ ಅರ್ಥಪೂರ್ಣವಾಗಿ ಅದ್ದೂರಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ ಅನೇಕ ಯೋಜನೆಗಳು ಹೆಚ್ಚು ಉಪಯುಕ್ತವಾಗಿವೆ. ಇದೀಗ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಮಾಜಿಯಾದರೂ ಕನ್ನಡ ನಾಡು, ನುಡಿ, ಜಲ ಸಂಸ್ಕೃತಿಗಳ ವಿಚಾರಗಳಿಗೆ ನಿರಂತರ ಸ್ಪಂದಿಸುತ್ತಾ, 'ನಾಡಿಗಾಗಿ ನಾನಿದ್ದೇನೆ' ಎಂದು ಎಲ್ಲರ ಆದರಾಭಿಮಾನಗಳಿಗೆ ಪಾತ್ರರಾಗಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಅವರಿಗೆ ಈಗಾಗಲೇ ನಾಡಿನ ಅನೇಕ ಸಂಘ-ಸಂಸ್ಥೆಗಳು ಪ್ರಶಸ್ತಿ-ಗೌರವಗಳನ್ನು ನೀಡಿ ಸನ್ಮಾನಿಸಿದ್ದು, ಕರ್ನಾಟಕ ಸರ್ಕಾರವೂ ಸಹ 2004ನೇ ಸಾಲಿನಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿರುತ್ತದೆ. ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಯಾಗಿ, ಸ್ವತಃ ಕವಿಯಾಗಿ ಪುನರೂರು ಅವರನ್ನು ಎರಡೂ ದಿಕ್ಕಿನಿಂದ ನೋಡಿದ್ದೇನೆ. ಸದಾ ನಗುಮುಖದ ಹಾಸ್ಯ ಪ್ರವೃತ್ತಿಯ, ಮುಗ್ಧಮನಸ್ಸಿನ ಅವರ ನಡೆ, ನುಡಿ, ಪ್ರವೃತ್ತಿಗಳಿಗೆ ಮಾರುಹೋಗಿದ್ದೇನೆ. ಶ್ರೀಯುತರಿಗೆ ಇದೀಗ ಅರವತ್ತು ತುಂಬಿದೆ ಎಂಬುದೇ ಸೋಜಿಗ. ವಯಸ್ಸು ಪರಿಪಕ್ವತೆಯಲ್ಲಿ ಅವರಿಗೆ 60 ವರ್ಷ ತುಂಬಿದರೂ ಅವರು ದೈಹಿಕವಾಗಿ,


ಮಾನಸಿಕವಾಗಿ ಚಿರಯೌವನಿಗರಾಗಿಯೇ ಬಹಳ ಕಾಲ ನಮ್ಮೆಲ್ಲರ ನಡುವೆ ನಗುನಗುತ್ತಿರಲೆಂಬುದೇ ನನ್ನ ಆಶಯ. ಅವರಿಂದ ಕನ್ನಡ ನಾಡು-ನುಡಿ-ಸಂಸ್ಕೃತಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತಾಗಲಿ; ಅವರಿಗೆ, ಅವರ ಕುಟುಂಬದವರಿಗೆ ಎಲ್ಲ ರೀತಿಯಲ್ಲಿ ಭಗವಂತನು ಒಳ್ಳೆಯದು ಮಾಡಲೆಂದು ಪ್ರೀತಿಯಿಂದ ಹಾರೈಸುತ್ತೇನೆ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಸೋಲೊಪ್ಪದ ಸರದಾರ

☐ ಐರ್ಯ ಲಕ್ಷ್ಮೀನಾರಾಯಣ ಆಳ್ವ



ನಾನು ಪರಿಕ್ಕಷ್ಟ ಪುನರೂರರನ್ನು ಕಂಡುದು ಸುಮಾರು ಮೂವತ್ತು ವರ್ಷಗಳ ಹಿಂದೆ. ಅಂದಿನಿಂದ ಗಾಢ ಸಂಬಂಧ. ಮಂಗಳೂರಲ್ಲಿ ಯಾವುದೇ ಧಾರ್ಮಿಕ, ಸಾಮಾಜಿಕ ಕೆಲಸ ಕಾರ್ಯಗಳಿದ್ದರೂ ಪುನರೂರುರವರು ಮುಂಚೂಣಿಯಲ್ಲಿ ಇದ್ದೇ ಇರುತ್ತಾರೆ; ಎದ್ದೂ ಕಾಣುತ್ತಾರೆ. ಅಲ್ಲೆಲ್ಲ ಅವರ ಕೊಡುಗೆ ಇದ್ದೇ ಇರುತ್ತದೆ. ಕೆಲವೊಮ್ಮೆ ಅವರೇ ಮೊದಲಲ್ಲಿ ಕೊಡುಗೆ ಕೊಟ್ಟು ಉಳಿದವರು ಹಿಂದೆ ಸರಿಯುವಂತೆ ಮಾಡುವುದೂ ಉಂಟು.

ಮೊದಲಲ್ಲೇ ನಾನು ಪುನರೂರವರ ಮಾತಿನ ರೀತಿಯ ಬಗ್ಗೆ ಹೇಳಬೇಕು. "ಸತ್ಯಂ ಭ್ರೂಯಾತ್; ಪ್ರಿಯಂ ಭ್ರೂಯಾತ್; ನಭ್ರೂಯಾತ್ ಸತ್ಯಮಪ್ರಿಯಂ" ಎನ್ನುವ ಆರ್ಯೋಕ್ತಿ ಪುನರೂರರಿಗೆ ಬಹಳ ದೂರ. ತನಗೆ ಸತ್ಯ ಅನಿಸಿದ್ದನ್ನು ನೇರವಾಗಿ ಎಲ್ಲರ ಎದುರಲ್ಲೇ ಪಟಕ್ಕನೆ ಹೇಳಿಬಿಡುವುದು ಅವರ ಪರಿಪಾಠ. ಇದರಿಂದಾಗಿ ಬಹಳ ಕಡೆ ಅವರಿಗೆ ತೊಂದರೆಯಾದುದೂ ಉಂಟು. ಆದರೆ ಅದಕ್ಕಾಗಿ ಅವರು ತಮ್ಮ ಮಾತಿನ ರೀತಿಯನ್ನು ಬದಲಿಸಿಕೊಂಡವರಲ್ಲ.

ಪುನರೂರರ ವಿದ್ಯಾಭ್ಯಾಸ ಹೈಸ್ಕೂಲು ಮಟ್ಟವನ್ನು ಮೀರದ್ದು. ಆದರೆ ಆ ಸೀಮೆ ಆವರ ಕಾರ್ಯವ್ಯಾಪ್ತಿಗೆ, ವ್ಯವಹಾರಕ್ಕೆ ಎಂದೂ ಗಡಿ ಹಾಕಲಿಲ್ಲ; ಅಡೆ-ತಡೆಯಾಗಲಿಲ್ಲ. ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾದ ಲಯನ್ಸ್ ಕ್ಲಬ್ಬಿನ

'ಸಾಕೇತ', ಮೊಡಕಾಪು–574 219, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ

ಸದಸ್ಯರಾದರು ಪುನರೂರು. ಆ ಕ್ಲಬ್ಬಿನ ಅಧ್ಯಕ್ಷರಾದರು. ಇದು ಸ್ವಾಭಾವಿಕ ನಡೆ. ಅವರಿಗೆ ಅದು ತೃಪ್ತಿತರಲಿಲ್ಲ. ಲಯನ್ಸ್ ಡಿಸ್ಟ್ರಿಕ್ ಗವರ್ನರ್ ಆಗಬೇಕು ಅನಿಸಿತು. ಒಮ್ಮೆ ಅವರು ಯೋಚನೆ ಮಾಡಿದರೋ, ಸರಿ, ಮುಂದೆ ಕಾರ್ಯಗತ ಮಾಡಿಯೇ ಸಿದ್ಧ. ಸಿದ್ಧತೆ ಮೊದಲಾಯಿತು. ಅವರ ಡಿಸ್ಟ್ರಿಕ್‌ನ ಯಾವುದೇ ಕ್ಲಬ್ ಕಣ್ಣಿನ ಆಪರೇಶನ್ ಕ್ಯಾಂಪು ಮಾಡಿದರೆ ಹತ್ತು ಸಾವಿರ ರೂಪಾಯಿಗಳ ದೇಣಿಗೆ ನೀಡುವ ಘೋಷಣೆ ಮಾಡಿದರು. ಅದನ್ನು ಕಾರ್ಯಗತ ಮಾಡಿದರು. ಗವರ್ನರ್ ಚುನಾವಣೆ ಬಂತು. 1990–1991ರ ಚುನಾವಣೆಗೆ ನಿಂತರು. ಸೋಲಾಯಿತು. ಮತ್ತೆ ಮುಂದಿನ ವರ್ಷ 1991–1992ರ ಚುನಾವಣೆ ಬಂತು. ಸೆಣಸಿದರು. ಜಯ ಲಭಿಸಲಿಲ್ಲ- ಉಳಿದ ಯಾರೇ ಆದರೂ ಕೈಚೆಲ್ಲಿ ಕುಳಿತಿರುತ್ತಿದ್ದರು. ಆದರೆ ಪುನರೂರರ ವ್ಯಕ್ತಿತ್ವಕ್ಕೆ ಅದು ಸಲ್ಲದ ಮಾತು. ಮತ್ತೆ 1992–1993ರ ಚುನಾವಣೆಗೆ ನಿಂತು ಜಯಶ್ರೀಯನ್ನು ಎಳೆತಂದು ಕೊರಳಿಗೆ ಮಾಲೆ ಹಾಕಿಸಿಕೊಂಡರು. ಇವರು ಪುನರೂರು.

ಪುನರೂರರ ಸಾರ್ವಜನಿಕ ಬದುಕಿನ ಪ್ರಾರಂಭದ ದಿನಗಳಲ್ಲಿ ಅವರು ಧಾರ್ಮಿಕ ಕ್ಷೇತ್ರದಲ್ಲಿ ವ್ಯಾಪಕವಾಗಿ ತೊಡಗಿಸಿಕೊಂಡಿದ್ದರು. ಆ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಅವರ ಪ್ರಾಮಾಣಿಕ ಸೇವೆಯನ್ನು ಕಂಡೇ ಪೂಜ್ಯ ಪೇಜಾವರ ಸ್ವಾಮಿಗಳು ಪುನರೂರಿಗೆ ''ಧರ್ಮದರ್ಶಿ'' ಬಿರುದನ್ನು ನೀಡಿ ಗೌರವಿಸಿದ್ದರು. ಆ ದಿನಗಳಲ್ಲಿ ಪುನರೂರರಿಗೆ ಅನಿಸಿತು- ''ಒಂದು ದೇವಸ್ಥಾನದ ಆಡಳಿತ ಮೊಕ್ತೇಸರನಾಗಬೇಕು'' ಎಂದು. ಒಮ್ಮೆ ಅವರ ತಲೆಯಲ್ಲಿ ಒಂದು ಯೋಚನೆ ಸುಳಿಯಿತೋ, ಮತ್ತೆ ಅದನ್ನು ಸಾಧಿಸದೆ ಅವರಿಗೆ ನಿದ್ದೆ ಬರುವುದಿಲ್ಲ. ಯೋಚಿಸಿದರು. ಆಗ ಅವರಿಗೆ ಹೊಳೆದುದು ಇಂದಿನ ಉಡುಪಿ ಜಿಲ್ಲೆಯ ಉತ್ತರದ ಗಡಿಯಲ್ಲಿರುವ ಕೊಲ್ಲೂರು ಮೂಕಾಂಬಿಕಾ ಕ್ಷೇತ್ರ. ಅದ್ವೈತದ ಆದಿಪುರುಷ ಆದಿ ಶಂಕರಾಚಾರ್ಯ ಪ್ರತಿಷ್ಠಿತ ದೇವಸ್ಥಾನ ಅದು. ಇಡೀ ದೇಶದಲ್ಲಿ ಪ್ರಸಿದ್ಧವಾದುದು. ಸರಿ, ಕೊಲ್ಲೂರಲ್ಲಿ ಹೊಸ ಆಡಳಿತ ಮಂಡಳಿಯ ಆಯ್ಕೆಯ ಹೊತ್ತು ಬಂತು. ಮೂಲ್ಕಿಯಿಂದ ದೂರದ ಕೊಲ್ಲೂರಿಗೆ ಹೋಗಿ ನಾಮಪತ್ರ ಸಲ್ಲಿಸಿ ಬಂದರು. ಎಲ್ಲೆಲ್ಲಿ ಎಂತೆಂಥ ಸಾಹಸ ಮಾಡಿದರೋ ಗೊತ್ತಿಲ್ಲ. ಒಂದು ದಿನ ಬೆಳಿಗ್ಗೆ ನಾನು ಪತ್ರಿಕೆ ತೆರೆದಾಗ ದಪ್ಪಕ್ಷರಗಳಲ್ಲಿ ಸುದ್ದಿ ಓದಿದೆ ''ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಧರ್ಮದರ್ಶಿ ಹರಿಕೃಷ್ಣ ಪುನರೂರರ ಆಯ್ಕೆ!'' ಕೊಲ್ಲೂರು ಅದ್ವೈತದ ಕೇಂದ್ರ. ಶಂಕರಾಚಾರ್ಯರು ದಿಗ್ವಿಜಯದ ಮೊದಲ ಹೆಜ್ಜೆ ಇಟ್ಟ ತಾಣ. ಅಲ್ಲಿಗೆ ದ್ವೈತದ ನಿಷ್ಠಾವಂತ ಅನುಯಾಯಿಯೊಬ್ಬರು ಆಡಳಿತ ಮೊಕ್ತೇಸರರು. ಎಲ್ಲಿಯ ಮೂಲ್ಕಿ, ಎಲ್ಲಿಯ ಕೊಲ್ಲೂರು! ಆತ್ಮ ವಿಶ್ವಾಸದ ಅಕ್ಷವೇರಿ ಹಲವು ಹೊಳೆಗಳ ದೂರವನ್ನು ಕ್ರಮಿಸಿ ಕಡಲಕರೆಯಿಂದ ಸಹ್ಯಾದ್ರಿಯ ಸೆರಗಿನ ಕೊಲ್ಲೂರಿನ ಅಧಿಕಾರ ಸ್ಥಾನವನ್ನು ಗೆದ್ದುಕೊಂಡರು. ಇವರು ಪುನರೂರು.

ಎಲ್ಲಿ ಹೋದರೂ ಗದ್ದುಗೆಯಲ್ಲಿ ಸುಮ್ಮನೆ ಕೂತು ಬರುವವರಲ್ಲ ಪುನರೂರು. ಕೊಲ್ಲೂರಲ್ಲಿ ಸುಧಾರಣೆಗೆ ಮೊದಲಿಟ್ಟರು. ಹಾದಿ ಸುಗಮವಾಗಿರಲಿಲ್ಲ. ಆದರೆ ಪುನರೂರರು ಆರ್ಥಿಕ ಕ್ಷೇತ್ರದ ಪ್ರಾಮಾಣಿಕತೆಯಿಂದ ಆಡಳಿತದ ಪೂರ್ಣಾವಧಿಯನ್ನು ಮುಗಿಸಿದರು.

ಜಿಲ್ಲೆಯ ಭಾರತ ಸೇವಾದಳದ ಸಂಪರ್ಕ ಪುನರೂರರಿಗೆ ಹಿಂದಿನಿಂದ ಇತ್ತು. ಇದ್ದ ನೆಲೆಯನ್ನು ಮೀರದೆ ಇದ್ದರೆ ಅವರಿಗೆ ತೃಪ್ತಿಯೇ ಇಲ್ಲ. ಅವರು ಭಾರತ ಸೇವಾದಳದ ಪ್ರಾಂತೀಯ ಕೋಶಾಧಿಕಾರಿಗಳಾದರು. ಮೂರೂವರೆ ವರ್ಷಗಳ ಅವಧಿಯಲ್ಲಿ ಅವರು ಅತ್ಯಂತ ದಕ್ಷ ಪ್ರಾಮಾಣಿಕ ಕೋಶಾಧಿಕಾರಿ ಎನಿಸಿದರು. ಈಗಲೂ ಅವರು ಭಾರತ ಸೇವಾದಳದ ರಾಜ್ಯಘಟಕದ ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ.

ದಕ್ಷಿಣ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕೀಕಾನ ರಾಮಚಂದ್ರರು ಕಾರ್ಯ ನಿರ್ವಹಿಸುತ್ತಿದ್ದ 1988ರ ಸುಮಾರಿಗೆ ಹೊತ್ತಿಗೆ ಪುನರೂರರ ಕಾರ್ಯಕಾರೀ ಸಮಿತಿ ಸದಸ್ಯರಾದರು. ಕೀಕಾನರು ನಿವೃತ್ತರಾದಾಗ ಪುನರೂರರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಮುಂದೆ ಹನ್ನೆರಡು ವರ್ಷಗಳ ಕಾಲ ಅವರಿಗೆ ಜಿಲ್ಲಾ ಘಟಕದ ಅಧ್ಯಕ್ಷನ ನೆಲೆಯಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕ ನಿರಂತರ ಆಯಿತು. ಈ ಕಾಲಘಟ್ಟದಲ್ಲೇ ಅವರಿಗೆ ಬೆಂಗಳೂರಿನ ಸಾಹಿತ್ಯ ಪರಿಷತ್ ಅಧ್ಯಕ್ಷರ ಕುರ್ಚಿಯಲ್ಲಿ ಕೂತುಕೊಳ್ಳುವ ಬಯಕೆ ಮೂಡಿತು. ಮುಂದೆ ಕೇಳಬೇಕೆ? ಆದರೆ ಅದಕ್ಕಿಂತ ಮೊದಲೇ ಅವರು ಜಿಲ್ಲಾ ಘಟಕವನ್ನು ಅತ್ಯಂತ ಸಕ್ರಿಯಗೊಳಿಸಿದ್ದರು. ಜಿಲ್ಲಾ ಸಮ್ಮೇಳನ, ತಾಲೂಕು ಸಮ್ಮೇಳನ, ಹೋಬಳಿ ಸಮ್ಮೇಳನದವರೆಗೆ ಸಮ್ಮೇಳನಗಳ ಸರಮಾಲೆಯನ್ನೇ ನಡೆಸಿ, ಜಿಲ್ಲಾ ಸಾಹಿತ್ಯ ಪರಿಷತ್ತನ್ನು ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿ ನಿಲ್ಲಿಸಿದರು. ಜೊತೆಗೆ ಪ್ರತಿನಿಧಿಗಳ ನೋಂದಾವಣೆಯೂ ಭರದಿಂದ ನಡೆವಿತ್ತು. ಈ ಧೈರ್ಯದಿಂದ ಅವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗದ್ದುಗೆ ಮೇಲೆ ಕಣ್ಣಿಟ್ಟರು. 1998ರಲ್ಲಿ ಕೇಂದ್ರ ಸಾಹಿತ್ಯ ಪರಿಷತ್ತಿನ ಚುನಾವಣೆ ಬಂತು. ಪುನರೂರರು ಸ್ಪರ್ಧಿಸಿದರು. ಸೋತರು. ಸೋಲುಗಳು ಎಂದೂ ಪುನರೂರರನ್ನು ಎದೆಗೆಡಿಸುವುದಿಲ್ಲ. ಅವು ಅವರ ಮುಂದಿನ ಜಿಗಿತಕ್ಕೆ ಊರುಗೋಲಾಗುತ್ತವೆ. 2001ರಲ್ಲಿ ಮತ್ತೆ ಅಧ್ಯಕ್ಷರ ಚುನಾವಣೆ ಬಂತು. ಪುನರೂರರು ಮತ್ತೆ ಸ್ಪರ್ಧಿಸಿ ಗೆದ್ದರು. ಇದು ಪುನರೂರು.

ಇಲ್ಲಿ ಒಂದು ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳಬೇಕು. ಪುನರೂರರ ಗೆಲುವು ಆ ಸಂದರ್ಭದಲ್ಲಿ ನನಗೆ ಸಂತೋಷವನ್ನು ತಂದಿರಲಿಲ್ಲ. ಸಾಹಿತ್ಯದ ಸಂಪರ್ಕ ಇಲ್ಲದ ವ್ಯಕ್ತಿ, ಸಾಹಿತ್ಯವೆಂದು ಒಂದು ಸಾಲೂ ಬರೆಯದ ಮನುಷ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಗ್ರಸ್ಥಾನವನ್ನು ಆಕ್ರಮಿಸುವುದು ಸಾಹಿತ್ಯಾಭಿಮಾನಿಯಾದ ನನಗೆ ಹಿತವೆನಿಸಲಿಲ್ಲ. ಯಾಕೆ ಹೀಗಾಯಿತು ಎನ್ನುವ ನೋವು- ಕಾವು ನನ್ನನ್ನು ಕಾಡಿತ್ತು. ಹಿಂದೆ ಕೆಲ ಅಭ್ಯರ್ಥಿಗಳು ಸಾಹಿತ್ಯೇತರರ ಮತಗಳ ಬಲದಲ್ಲಿ ಅರ್ಹರನ್ನು ಸೋಲಿಸಿದ್ದಿತ್ತು. ಆದರೆ ಆಯ್ಕೆಯಾದುದು ಸಾಹಿತಿಗಳೆನಿಸಿಕೊಂಡವರೇ ಎನ್ನುವ ಸಮಾಧಾನವಾದರೂ ಇತ್ತು. ಈಗ ಅದೂ ಇಲ್ಲ.

ಆದರೆ ಪುನರೂರರ ಸಾಧನೆ ಮಾತ್ರ ನನಗೆ ಆಶ್ಚರ್ಯ ತಂದಿತ್ತು. ಸಾಹಿತಿಯಲ್ಲದವನೊಬ್ಬ ಸಾಹಸದಿಂದ ಸಾಹಿತ್ಯ ಕ್ಷೇತ್ರದ ಅಗ್ರಮಾನ್ಯ ಸ್ಥಾನವನ್ನು ಆಕ್ರಮಿಸುವುದು ಸಾಮಾನ್ಯ ಸಂಗತಿಯಲ್ಲ. ಅದರಲ್ಲೂ ಕರಾವಳಿಯವನೊಬ್ಬ ಸಹ್ಯಾದ್ರಿಯನ್ನು ದಾಟಿ ದಕ್ಷಿಣ ಪ್ರಸ್ಥಭೂಮಿಯ ಬೆಂಗಳೂರಿಗೆ ಧಾಳಿಯಿಟ್ಟು ಪ್ರಪ್ರಥಮವಾಗಿ ವಿಜಯಿಯಾದುದು ಕೌತುಕವನ್ನು ಮೂಡಿಸಿತು. ಏನೇ ಇರಲಿ, ಪುನರೂರರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು!

ಪುನರೂರರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನ ನನಗೆ ತುಂಬು ಸಂತೋಷವನ್ನು ತರಲು ಬೇರೆಯ ಕಾರಣಗಳು ಇದ್ದುವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ ಅನುಭವದಿಂದ ಉಳಿದ ಜಿಲ್ಲಾಧ್ಯಕ್ಷರನ್ನು ಬತ್ತಾಯಿಸಿ ಸಣ್ಣ ಪ್ರಮಾಣದ ದೇಣಿಗೆಯನ್ನು ಕೇಂದ್ರದಿಂದ ನೀಡಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ, ತಾಲೂಕು ಮಟ್ಟದ ಸಮ್ಮೇಳನಗಳನ್ನು ಜರಗಿಸಿದರು. ಹೆಚ್ಚಿನ ಕಡೆಗಳಲ್ಲಿ ಸ್ವತಃ ಹೋಗಿ ಪಾಲ್ಗೊಂಡರು. ಕಾರ್ಯಕರ್ತರ ಬೆನ್ನು ತಟ್ಟಿದರು. ಜಿಲ್ಲಾಧಿಕಾರದ ಆಡಳಿತದ ಕನ್ನಡ ಸಾಹಿತ್ಯ ಪರಿಷತ್ತಿಗೂ ಸರಿಯಾದ ಸ್ಥಾನಮಾನ ದೊರಕಿಸಿಕೊಡುವುದಕ್ಕಾಗಿ ಹೋರಾಡಿದರು. ತಾನು ಹೋದ ಕಡೆಗಳಿಗೆಲ್ಲ ತನ್ನ ಕಾರಿನಲ್ಲಿ ಸಾಹಿತ್ಯ ಪರಿಷತ್ತಿನ ಗೋಡೌನುಗಳಲ್ಲಿ ಪೇರಿಸಿಟ್ಟಿದ್ದ ಪುಸ್ತಕಗಳನ್ನು ಹೇರಿಕೊಂಡು ಹೋಗಿ ಮಾರಾಟ ಮಾಡಿಸಿದರು. ಎಷ್ಟೋ ಕಡೆಗಳಲ್ಲಿ ಅವರ ಸ್ವತಃ ಮಾರಾಟಗಾರ.

ಜೊತೆಗೇ ಹೊಸ ಪುಸ್ತಕಗಳ ಮುದ್ರಣ ಮಾಡಿಸಿದರು.

ಎಲ್ಲಕ್ಕಿಂತ ಹೆಚ್ಚಾಗಿ ಸಾಹಿತ್ಯ ಪರಿಷತ್ತಿನ ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿಯ ಮೇಲೆ ಒಂದು ಹತೋಟಿಯನ್ನು ತಂದರು. ಹಿಂದಿನ ಅಧ್ಯಕ್ಷರು ತೆಗೆದು ಖರ್ಚು ಮಾಡಿದ್ದ ನಿರಖು ಠೇವಣಾತಿಗಳನ್ನು ಮತ್ತೆ ಹಣ ತುಂಬಿ ಸರಿಪಡಿಸಿದರು. ಅಧ್ಯಕ್ಷರ ಖರ್ಚು ವೆಚ್ಚಗಳನ್ನು ನಿಯಂತ್ರಣಕ್ಕೆ ಒಳಪಡಿಸಿದರು. ಎಲ್ಲ ಕಡೆಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಪುನರೂರರಿಗೆ ಶಕ್ತಿ ಕೊಟ್ಟುದು ಹಣಕಾಸು ಕುರಿತಾದ ಅವರ ಪ್ರಾಮಾಣಿಕತೆ.

ಸಾಹಿತಿಯಲ್ಲದ ಪುನರೂರರು ಸಾಹಿತ್ಯ ಕ್ಷೇತ್ರ ಅಗ್ರಮಾನ್ಯ ಸ್ಥಾನವನ್ನು ವಹಿಸಿ ಹೆಸರು ಪಡೆದುದು ಅವರ ಪ್ರಾಮಾಣಿಕತೆ, ಶ್ರದ್ಧೆ ಶ್ರಮ, ಸಾಹಸಗಳಿಂದ. ದಕ್ಷಿಣ ಕನ್ನಡದ ಈ ಗುಣಗಳನ್ನು ಎತ್ತಿ ಹಿಡಿದ ಪುನರೂರರಿಗೆ ನನ್ನ ನಮನಗಳು.


ಸೋಲನ್ನು ಎಂದೂ ಒಪ್ಪಿಕೊಳ್ಳದ, ಸೋಲು ಗೆಲುವಿನ ಮೆಟ್ಟಲೆಂದೇ ಬಗೆದು ಮೆಟ್ಟಿ ಮುನ್ನಡೆಯುವ, ಉದ್ದೇಶಿತ ಗುರಿಯನ್ನು ಮುಟ್ಟದೆ ಎಂದೂ ವಿರಮಿಸದ ಸಾಧನೆಗಳ ಸರದಾರ ಪುನರೂರರು ಮುಂದಿನ ಬದುಕಿನಲ್ಲಿ ಇನ್ನೂ ಉತ್ತುಂಗ ಶಿಖರಗಳನ್ನು ಮುಟ್ಟಲಿ. ಈ ಸಾಹಸಯಾತ್ರೆಯಲ್ಲಿ ಪರಮಾತ್ಮನ ಪರಮಾನುಗ್ರಹ ಅವರ ಮೇಲೆ ಸದಾ ಇರಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇನೆ.

□

ಭಾಗ: ಎರಡು
ಹೀಗಿದ್ದಾರೆ ಪುನರೂರು

ಪುನರೂರು ಪುನರೂರೇ!

ಸುಬ್ರಾಯ ಚೊಕ್ಕಾಡಿ



ನನ್ನ-ಪುನರೂರು ಅವರ ನಡುವಿನ ಪರಿಚಯ, ಸ್ನೇಹ ಈಚೆಗೆ ಸುಮಾರು ಇಪ್ಪತ್ತು ವರ್ಷಗಳದ್ದು; ಅವರು ದ.ಕ. ಜಿಲ್ಲೆಯ ಕ.ಸಾ.ಪ.ದ ಅಧ್ಯಕ್ಷರಾದ ಮೇಲೆ ರೂಪುಗೊಂಡದ್ದು. ಅದುವರೆಗೆ ನಾನು ಅವರ ಹೆಸರನ್ನು ಮಾತ್ರ ಆಗಾಗ ಕೇಳಿ ತಿಳಿದಿದ್ದೆ, ಹೊರತಾಗಿ ಪರಿಚಯವಾಗಿರಲಿಲ್ಲ; ಪರಿಚಯ ಮಾಡಿಕೊಳ್ಳಬೇಕು ಅಂತ ಅನ್ನಿಸಿರಲೂ ಇಲ್ಲ. ಯಾರೋ ರೋಟರಿ, ಲಯನ್ಸ್ ಸೇವೆ ಅಂತ ಓಡಾಡುತ್ತಿರುವ ಹೋಟೇಲು ಉದ್ಯಮಿಗಳಲ್ಲಿ ಒಬ್ಬರು ಅಂತಷ್ಟೇ ತಿಳಿದಿದ್ದೆ. ಅವರು ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಲೂ, ನನ್ನಲ್ಲಿ ಆ ಬಗ್ಗೆ ಅಂತಹಾ ಆಸಕ್ತಿಯೇನೂ ಮೂಡಿರಲಿಲ್ಲ. ಯಾಕೆಂದರೆ, ಆಗ, ನಮ್ಮ ಅನೇಕ ಸಾಹಿತಿಗಳ ಹಾಗೇ ನಾನೂ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವವರು ಒಬ್ಬ ಉತ್ತಮ ಸಾಹಿತಿಯೇ ಆಗಿರಬೇಕು, ಸಾಹಿತ್ಯೇತರ ವ್ಯಕ್ತಿಯೊಬ್ಬರು ಅದರ ಅಧ್ಯಕ್ಷರಾಗುವುದು ಯೋಗ್ಯವಾದುದಲ್ಲ ಎಂದೇ ಭಾವಿಸಿದ್ದೆ. ಆದರೆ ಕ್ರಮೇಣ, ಪುನರೂರು ಅವರ ಚಟುವಟಿಕೆಗಳನ್ನು ಗಮನಿಸುತ್ತಾ ಹೋದಂತೆ, ಸಾಹಿತಿಯಾಗುವುದು ಮತ್ತು ಸಾಹಿತ್ಯ ಸಂಘಟನೆಯ ನೇತೃತ್ವ ವಹಿಸುವುದು ಬೇರೆ ಬೇರೆ ಎಂಬುದು ಮನವರಿಕೆಯಾಗುತ್ತಾ ಹೋಯಿತು.

ಸಾಹಿತ್ಯದ ಬರವಣಿಗೆ ಅಂತರಂಗಕ್ಕೆ ಸಂಬಂಧಿಸಿದ್ದು.

ಚೊಕ್ಕಾಡಿ ಅಂಚೆ, ವಯಾ: ಬೆಳ್ಳಾರೆ, ಸುಳ್ಯ ತಾಲೂಕು, ದ.ಕನ್ನಡ ಜಿಲ್ಲೆ

ಏಕಾಂತದಲ್ಲಿ ನಡೆಯುವ ಕ್ರಿಯೆ ಅದು. ಅದಕ್ಕೆ ಬಹಿರಂಗ ವಿಶೇಷ ಹಂಗೇನೂ ಇಲ್ಲ. ಆದರೆ, ಸಾಹಿತ್ಯ ಪರಿಷತ್ತಿನಂತಹ- ಸಂಘಟನೆಯನ್ನು ಬೇಡುವ- ಸಂಸ್ಥೆಗೆ ಬಹಿರಂಗವೇ ಮುಖ್ಯ. ಪರಿಷತ್ತು ಸಾಹಿತಿಗಳನ್ನಾಗಲೀ ಸಾಹಿತ್ಯವನ್ನಾಗಲೀ ಸೃಷ್ಟಿಸಲಾರದು. ಬರವಣಿಗೆಗೆ ಪ್ರೋತ್ಸಾಹವನ್ನು, ಬೆಂಬಲವನ್ನು ನೀಡಬಲ್ಲುದು ಅಷ್ಟೆ. ಹಾಗಾಗಿ ಇಂಥ ಸಂಸ್ಥೆಗಳ ಮುಖ್ಯಸ್ಥನಾಗುವವನು ಬಹಿರಂಗಕ್ಕೇ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಸಮಾಜದ ವಿವಿಧ ವರ್ಗಗಳ ಜತೆ ಒಡನಾಟ, ಹೊಂದಾಣಿಕೆ, ಮನ ಒಲಿಸಿಕೊಳ್ಳುವ ಮೂಲಕ ಎಲ್ಲರನ್ನೂ ಒಟ್ಟು ಸೇರಿಸಿಕೊಳ್ಳುತ್ತಾ ಸಂಸ್ಥೆಯನ್ನು ಮುನ್ನಡೆಸುವ ಚಾಕಚಕ್ಯತೆ ಬೇಕಾಗುತ್ತದೆ. ಅದು ಅಪಾರ ತಾಳ್ಮೆಯನ್ನು ಬೇಡುವ ಕೆಲಸ ಕೂಡಾ. ಉತ್ತಮ ಲೇಖಕನೊಬ್ಬನು ಉತ್ತಮ ಆಡಳಿತಗಾರನೂ, ಸಂಘಟನಾಕಾರನೂ ಆಗುತ್ತಾನೆ ಎಂಬುದೇನೂ ಗ್ಯಾರಂಟಿಯಿಲ್ಲ. ಅಂತರ್ಮುಖಿಯಾಗಿರುವ ಅವನಿಗೆ ಇದು ಕಷ್ಟದ ಕೆಲಸ. ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳ ನೇತೃತ್ವ ವಹಿಸುವವರು ಉತ್ತಮ ಸಂಘಟನಾಕಾರರೂ, ಆಡಳಿತ ಸೂಕ್ಷ್ಮಗಳನ್ನು ಅರಿತವರೂ, ಕೈಬಾಯಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವವರೂ, ಸಾಹಿತ್ಯ, ಸಂಸ್ಕೃತಿಗಳ ಕುರಿತಾಗಿ, ಆ ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ಕುರಿತಾಗಿ ಆಸಕ್ತಿ ಹಾಗೂ ಅಭಿಮಾನ ಇದ್ದವರೂ, ಸಂಸ್ಥೆಯ ಚಟುವಟಿಕೆಗಳ ಬಗ್ಗೆ, ಸಾಹಿತಿಗಳ, ಸಾಹಿತ್ಯಾಸಕ್ತರ ಜತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವವರೂ ಆಗಿದ್ದರೆ ಸಾಕು. ಪುನರೂರು ಅವರಲ್ಲಿ ಅಂಥ ಗುಣಗಳು ಇವೆ ಎಂದೇ, ಅವರು ಪರಿಷತ್ತಿನ ಅಧ್ಯಕ್ಷರಾದದ್ದು ತಪ್ಪೇನಲ್ಲ ಎಂದು ನಾನು ನಿಧಾನವಾಗಿಯಾದರೂ ಅಭಿಪ್ರಾಯ ಪಡುವಂತಾಯಿತು.

ಪುನರೂರು ಅವರು ಜಿಲ್ಲಾ ಕ.ಸಾ.ಪ.ದ ಅಧ್ಯಕ್ಷರಾದ ಮೇಲೆ, ಕ.ಸಾ.ಪ.ದ ಚಟುವಟಿಕೆಗಳು ಚಾಲನೆಯನ್ನು ಪಡೆದುಕೊಂಡು, ಜಿಲ್ಲೆ, ತಾಲೂಕು, ಹೋಬಳಿಗಳ ಮಟ್ಟಕ್ಕೂ ವಿಸ್ತರಿಸುತ್ತಾ ಹೋದದ್ದು ಗಮನಾರ್ಹ. ಒಂದು ವಿಭಾಗದ ಯಾರನ್ನು ಸಂಪರ್ಕಿಸಿದರೆ ಸಂಘಟನೆಯು ಚುರುಕುಗೊಳ್ಳಲು ಸಾಧ್ಯ ಎಂಬುದನ್ನು ಕ್ಷಿಪ್ರವಾಗಿ ಅರಿತುಕೊಂಡು ಕಾರ್ಯಪ್ರವೃತ್ತರಾಗಬಲ್ಲ, ಆಗಿಂದಾಗ್ಗೆ ಆ ಪ್ರದೇಶಕ್ಕೆ ಭೇಟಿ ನೀಡಿ ಕೆಲಸಗಳಿಗೆ ತಮ್ಮ ಮಾರ್ಗದರ್ಶನದ ಮೂಲಕ ಒತ್ತಾಸೆ ನೀಡಬಲ್ಲ, ಸಾಧ್ಯವಿರುವ ಆರ್ಥಿಕ ಹಾಗೂ ಇತರ ಬಗೆಯ ನೆರವನ್ನು ನೀಡಬಲ್ಲ ಶಕ್ತಿ ಹಾಗೂ ಚಾತುರ್ಯ ಅವರಲ್ಲಿತ್ತೆಂದೇ, ದ.ಕ.ದಲ್ಲಿ ಕ.ಸಾ.ಪ.ದ ಚಟುವಟಿಕೆಗಳು ನಿರಂತವಾಗಿ ನಡೆಯಲು ಸಾಧ್ಯವಾಯಿತು.

ಕಾರ್ಯದಕ್ಷತೆಯ ಈ ಹಿನ್ನೆಲೆಯೇ, ಅವರು ರಾಜ್ಯ ಕ.ಸಾ.ಪ.ದ ಅಧ್ಯಕ್ಷರಾಗಿ ಆಯ್ಕೆಗೊಳ್ಳಲೂ ನೆರವಾಯಿತು ಎಂದು ನನ್ನ ಭಾವನೆ. ಅವರು ಚುನಾವಣೆಗೆ ಸ್ಪರ್ಧಿಸಿದಾಗ ನಿಜವಾಗಿಯೂ ಧರ್ಮಸಂಕಟವೊಂದು ನನ್ನಂಥವರ ಎದುರಾಯಿತು. ಪುನರೂರು ನಮ್ಮ ಜಿಲ್ಲೆಯವರೂ, ನನ್ನ ಆತ್ಮೀಯರೂ, ಜಿಲ್ಲೆಯಲ್ಲಿ ಸಾಕಷ್ಟು ಕೆಲಸ ಮಾಡಿದವರೂ ಆಗಿದ್ದರು. ಅವರೆದುರು ಸ್ಪರ್ಧಿಸಿದ್ದ ಖ್ಯಾತ ಸಾಹಿತಿ ಚಂದ್ರಶೇಖರ ಪಾಟೀಲರು ನನ್ನ ಬಹುಕಾಲದ ಗೆಳೆಯರಾಗಿದ್ದರು. ಯಾರು ಗೆದ್ದರೂ ನನಗೆ ಸಂತೋಷವೇ. ಯಾರು ಸೋತರೂ ನನಗೆ ಬೇಸರವೇ. ಆದರೇನು? ಯಾರಾದರೊಬ್ಬರೇ ಗೆಲ್ಲಬೇಕಷ್ಟೆ! ಪುನರೂರು ಗೆದ್ದು ಅಧ್ಯಕ್ಷರಾದರು.

ಪುನರೂರು ಅವರು ಸಾಹಿತಿಯಲ್ಲ. ನಿಜ, ಆದರೆ ಅವರು ಕ.ಸಾ.ಪ.ದ ಅಧ್ಯಕ್ಷರಾಗಿ ಸಾಕಷ್ಟು ಒಳ್ಳೆಯ ಕೆಲಸಗಳನ್ನೇ ಮಾಡಿದ್ದಾರೆ. ಭೌತಿಕವಾಗಿ ಪರಿಷತ್ತು ಬಲಗೊಳ್ಳುವಂತೆ ಮಾಡಿದ್ದಾರೆ. ರಾಜ್ಯದ ಉದ್ದಗಲಕ್ಕೂ ಸ್ವಂತ ಖರ್ಚಿನಲ್ಲೇ ಸಂಚರಿಸಿ, ಪರಿಷತ್ತಿನ ಆಜೀವ ಸದಸ್ಯರ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸಿದ್ದಾರೆ; ದತ್ತಿನಿಧಿಗಳನ್ನು ಸಂಗ್ರಹಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ, ಪರಿಷತ್ತಿನಿಂದ ದೂರವೇ ಇದ್ದ ಸಾಹಿತಿಗಳನ್ನು ಪರಿಷತ್ತಿನ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿದ್ದಾರೆ. ಅನೇಕ

ಹೊಸ ಸಾಹಿತಿಗಳ ಕೃತಿಗಳ ಪ್ರಕಟನೆ, ಪ್ರಚಾರ, ಸಮ್ಮೇಳನಗಳನ್ನು ನಡೆಸಿದ್ದಾರೆ; ದಕ್ಷಿಣ ಕನ್ನಡದಲ್ಲಿನಷ್ಟು ಸಲೀಸಾಗಿ ರಾಜ್ಯಮಟ್ಟದಲ್ಲಿ ಪರಿಷತ್ತಿನ ಚಟುವಟಿಕೆಗಳನ್ನು ನಡೆಸಲು ಅನೇಕ ಅಡೆತಡೆಗಳು ಎದುರಾದರೂ, ಅವನ್ನೆಲ್ಲ ಯಶಸ್ವಿಯಾಗಿ ನಿಭಾಯಿಸಿದ್ದಾರೆ; ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಸಾಕಷ್ಟು ಗಟ್ಟಿಗೊಳಿಸಿದ್ದಾರೆ. ಇದರೊಂದಿಗೆ ಅವರು ಪರಿಷತ್ತಿನಿಂದ ನ್ಯಾಯವಾಗಿಯೇ ಪಡೆದುಕೊಳ್ಳಬಹುದಾದ ವಾಹನ ಸೌಕರ್ಯ, ಪ್ರಯಾಣ ಭತ್ಯೆ, ಮೊದಲಾದ ಸೌಲಭ್ಯಗಳನ್ನು ಪಡೆದುಕೊಳ್ಳದೆ ಔದಾರ್ಯವನ್ನು ಮೆರೆದಿದ್ದಾರೆ ಎಂಬುದು ಇಂದಿನ ದಿನಗಳಲ್ಲಿ ಮುಖ್ಯವಾದುದು... ಹಣಕಾಸಿನ ವಿಚಾರದಲ್ಲಿ ಅವರೆಂದೂ ತಮ್ಮ ಕೈ ಬಾಯಿಗಳನ್ನು ಹಾಗೂ ಮನಸ್ಸನ್ನು ಹೊಲಸು ಮಾಡಿಕೊಂಡವರಲ್ಲ.

ಪುನರೂರು ಅವರು ನೇರ ನುಡಿಯವರು. ಅನಿಸಿದ್ದನ್ನು ನೇರವಾಗಿ ಹೇಳಿಬಿಡುವವರು. ಅವರಲ್ಲಿ ಮುಚ್ಚುಮರೆ ಎಂಬುದೇ ಇಲ್ಲ. ಹಾಗೆ ಮಾತನಾಡುವ ಅವರ ಈ ಗುಣವೇ ಅವರಿಗೆ ಅನೇಕ ಸಂಕಷ್ಟಗಳನ್ನು ತಂದೊಡ್ಡಿದೆ. ಉದಾಹರಣೆಗೆ, ಕುವೆಂಪು ಅವರಿಗೆ ಸಂಬಂಧಿಸಿದಂತೆ ಅವರು ಆಡಿದ ಮಾತೊಂದು ನಾಡಿನಲ್ಲಿ ಎಬ್ಬಿಸಿದ ಕೋಲಾಹಲವನ್ನೇ ನೋಡಬಹುದು. ಅವರು ಆ ಮಾತನ್ನು ಆಡಬೇಕಾಗಿರಲಿಲ್ಲ ನಿಜ. ಹಾಗೆಂದು ಅವರು ಕುವೆಂಪು ಅವರಿಗೆ ಅವಮಾನವಾಗುವಂತಹ ಮಾತನ್ನು ಆಡಿರಲಿಲ್ಲ ಎಂಬುದೂ ನಿಜ. ಪೂರ್ವಾಗ್ರಹವಿಲ್ಲದೆ ಈ ನಿಜವನ್ನು ಅರಿತುಕೊಳ್ಳುವ ಸಮಾಧಾನದ ಚಿತ್ತ ಅಗತ್ಯ ಅಷ್ಟೆ. ಆದರೆ ಅಸಾಹಿತಿ ಎನ್ನಲಾಗುವ ಪುನರೂರು ಆಡಿದ ಮಾತುಗಳಿಗೆ, ಮಾನವೀಯ ಕಳಕಳಿಯ ಸೂಕ್ಷ್ಮ ಸಂವೇದನಾಶೀಲ ಸಾಹಿತಿಗಳು ಹಾಗೂ ಕನ್ನಡ ಪ್ರೇಮಿಗಳು ಎನ್ನಿಸಿಕೊಂಡವರು ತೋರಿದ ಪ್ರತಿಕ್ರಿಯೆ, ಸಾರ್ವಜನಿಕ ಸಭೆಯೊಂದರಲ್ಲಿ ಮಾಡಿದ 'ಪುನರೂರು ವಸ್ತ್ರಾಪಹರಣ ಪ್ರಸಂಗ' ನಿಜವಾದ ಮಾನವಂತ ಕನ್ನಡಿಗರು ಹಾಗೂ ಸಾಹಿತ್ಯ ಪ್ರೇಮಿಗಳೆಲ್ಲರೂ ತಲೆತಗ್ಗಿಸುವಂಥದು. ಪುನರೂರು ಅವರ ಅಭಿಪ್ರಾಯವನ್ನು ಟೀಕಿಸುವುದು ತಪ್ಪಲ್ಲ. ಆದರೆ ಕನ್ನಡದ ಮಾನ ಉಳಿಸುವ ಹೆಸರಲ್ಲಿ ಪುನರೂರು ಅವರ ಮೇಲೆಸಗಿದ ದೈಹಿಕ ಹಲ್ಲೆ ನಿಜಕ್ಕೂ ಅತ್ಯಂತ ಬೇಸರದ ವಿಚಾರ. ಈ ಸಂದರ್ಭದಲ್ಲಿ ಪುನರೂರು ಅವರೂ ಎಗರಾಡಬಹುದಿತ್ತು. ಆದರೆ ಅವರು ಹಾಗೆ ಮಾಡದೆ, ತಣ್ಣಗೆ ಪ್ರತಿಕ್ರಿಯಿಸಿ ತಮ್ಮ ಘನತೆಯನ್ನು ಮೆರೆದರು.

ನನಗೇ ಸಂಬಂಧಿಸಿದಂತೆ ಅವರ ನೇರ ನುಡಿಯ ರೀತಿಯನ್ನು ಸೂಚಿಸುವ ಇನ್ನೊಂದು ಪುಟ್ಟ ಘಟನೆ ನೆನಪಾಗುತ್ತದೆ. ಸುಳ್ಯ ತಾಲೂಕಿನ ಐವರ್ನಾಡಿನಲ್ಲಿ 'ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ' ನಡೆದಿತ್ತು. ನಾನು ಆ ಸಮ್ಮೇಳನದ ಅಧ್ಯಕ್ಷನಾಗಿದ್ದೆ. ಉದ್ಘಾಟನಾ ಸಮಾರಂಭ ಮುಗಿದ ಮೇಲೆ, ನಾನು ಕೆಳಬಂದು, ಕಾಫಿ ಕುಡಿದು, ಸಿಗರೇಟು ಸೇದುತ್ತಾ ನಿಂತಿದ್ದೆ. ಸುತ್ತ ಹತ್ತಾರು ಜನ ಸೇರಿಕೊಂಡಿದ್ದರು. ನಾವು ಯಾವುದೋ ವಿಚಾರ ಚರ್ಚಿಸುತ್ತಿದ್ದವು. ದೂರದಲ್ಲಿ ಪುನರೂರು ಅವರು ನಮ್ಮ ಕಡೆಗೇ ಬರುತ್ತಿದ್ದರು. ನಾನು ಅವರನ್ನು ನಮ್ಮ ಜತೆ ಸೇರಿಕೊಳ್ಳುವಂತೆ ಆಹ್ವಾನಿಸಿದೆ. ಅವರು ಸಮೀಪ ಬಂದವರೇ, 'ನೋಡಿ ಚೊಕ್ಕಾಡಿಯವರೇ, ನೀವು ಈ ಸಿಗರೇಟು ಸೇದುವುದನ್ನು ಬಿಟ್ಟು ಬಿಡಬೇಕು. ಈಗಲೇ ಬಿಡಿ, ಎಸೆದುಬಿಡಿ ಅದನ್ನು' ಎಂದು ಹೇಳಿದರು. ಮಾತ್ರವಲ್ಲದೆ, ಪಕ್ಕದಲ್ಲಿದ್ದ ನನ್ನ ಪತ್ನಿಯೊಡನೆ- 'ನೋಡಿಮ್ಮ. ಅವರು ಸಿಗರೇಟು ಸೇದಲು ನೀವು ಬಿಡಬಾರದು' ಎಂದೂ ಹೇಳಿದರು. ಆ ಕ್ಷಣದಲ್ಲಿ ನನಗೆ ಕೊಂಚ ಕಿರಿಕಿರಿಯಾಯಿತು. ಆದರೆ, ಪುನರೂರನ್ನು ಬಲ್ಲ ನಾನು, ಅದನ್ನು ಹೆಚ್ಚಾಗಿ ಹಚ್ಚಿಕೊಳ್ಳಲಿಲ್ಲ. ಅವರು ಸೂಚಿಸಿದಂತೆ, ನಾನು ಸಿಗರೇಟನ್ನು ಬಿಟ್ಟೆ. ಆದರೆ ಆಗಲೇ ಅಲ್ಲ; ಈಚೆಗೆ ನಾಲ್ಕಾರು ತಿಂಗಳ ಹಿಂದೆ! ಪುನರೂರು ಅವರ ನುಡಿಗಳು ಕೆಲವೊಮ್ಮೆ ನಮ್ಮನ್ನು ಘಾಸಿಗೊಳಿಸಬಹುದು. ಆದರೆ ಅವರ ಮಾತುಗಳ ಹಿಂದೆ ಯಾವುದೇ ಕಲ್ಮಷವಿರುವುದಿಲ್ಲ. ಅವರೊಂದಿಗೆ ತೀವ್ರ

ಭಿನ್ನಾಭಿಪ್ರಾಯವನ್ನು ಹೊಂದಿಯೂ ಅವರೊಡನೆ ಸ್ನೇಹದಿಂದಲೇ ಇರಲು ಸಾಧ್ಯ ಎನ್ನುವುದು ಅವರ ವ್ಯಕ್ತಿತ್ವದ ಹಿರಿಮೆಯಾಗಿದೆ. ಮಂಗಳೂರು, ಮೂಲ್ಕಿಗೆ ಬಂದಾಗ ಅವರ ಆತಿಥ್ಯವನ್ನು ಸವಿದು, ಅವರನ್ನು ಹಾಡಿ ಹೊಗಳಿ ಹೋದವರೇ, ಬೇರೊಂದು ವೇದಿಕೆಯಲ್ಲಿ ಅವರನ್ನು ವ್ಯಂಗ್ಯವಾಗಿ ಟೀಕಿಸುವುದನ್ನು ಅವರು ತಣ್ಣಗಿನ ಮನಸ್ಸಿನಿಂದ ಸ್ವೀಕರಿಸಬಲ್ಲರು! ಆ ಬಗ್ಗೆ ಅವರೆಂದೂ ತಲೆಕೆಡಿಸಿಕೊಂಡವರಲ್ಲ. ಆದರೆ ಒಮ್ಮೊಮ್ಮೆ ಇಂಥ ಸಮಚಿತ್ತವೂ ಕದಡಿಹೋಗುವುದು ಇದೆ. ಅಂಥ ವಿರಳ ಸಂದರ್ಭದಲ್ಲಿ ತಮ್ಮನ್ನು ಟೀಕಿಸಿದವರ ಜಾತಕವನ್ನೆಲ್ಲಾ ಯಾವುದೇ ಮುಲಾಜಿಲ್ಲದೆ ಜಾಲಾಡಿದ್ದೂ ಇದೆ. ಆದರೂ ಅವರು ಯಾರನ್ನೂ ಯಾವ ಕಾರಣಕ್ಕೂ ವೈಯಕ್ತಿಕವಾಗಿ ದ್ವೇಷಿಸಿದವರಲ್ಲ ಎನ್ನುವುದೇ ಅವರ ಹೆಚ್ಚುಗಾರಿಕೆಯಾಗಿದೆ.

ಪುನರೂರು ಅವರನ್ನು 'ಇಡ್ಲಿವಡೆ ಪುನರೂರು' ಎಂದು ಗೇಲಿ ಮಾಡುವವರು, ತಾವೇ ಪುನರೂರು ಅವರಿಂದ ಇಡ್ಲಿ ವಡೆ ಪಡೆದು ತೃಪ್ತಿ ಹೊಂದಿದ್ದನ್ನು ಮರೆಯುತ್ತಾರೆ. ಅವರಿಗೆ ಪುನರೂರು ಅವರ ಇನ್ನೊಂದು ಮುಖ ಗೊತ್ತಿಲ್ಲ. ಎಷ್ಟೋ ಜನ ಸಾಹಿತಿಗಳಿಗೆ, ಅವರ ಕೃತಿಗಳ ಪ್ರಕಟನೆಗೆ ಪುನರೂರು ಧನ ಸಹಾಯ ನೀಡಿದ್ದಾರೆ. ಸಾಹಿತಿಗಳ ಪ್ರಕಟಿತ ಕೃತಿಗಳ ಪ್ರತಿಗಳನ್ನು ಕೊಂಡುಕೊಂಡು ಇತರರಿಗೆ ದಾನ ಮಾಡಿದ್ದಾರೆ. ಕಾಂತಾವರ ಕನ್ನಡ ಸಂಘದ ಮೂಲಕ ಮುದ್ದಣ ಕಾವ್ಯ ಪ್ರಶಸ್ತಿ ನೀಡುವ ವ್ಯವಸ್ಥೆ ಮಾಡಿದ್ದು, ಪ್ರತಿವರ್ಷವೂ ರೂ. 7,500/- ಪ್ರಶಸ್ತಿಯ ಹಣವನ್ನು ಅವರೇ ನೀಡುತ್ತಿದ್ದಾರೆ ಎಂಬುದು ಅನೇಕರಿಗೆ ಗೊತ್ತಿಲ್ಲ. ಗೊತ್ತಿದ್ದವರೂ ಆ ಬಗ್ಗೆ ಬಾಯಿ ಬಿಚ್ಚುತ್ತಿಲ್ಲ. 101 ಸುಸಜ್ಜಿತ ಮನೆಗಳನ್ನು ಕಟ್ಟಿಸಿ, ಅರ್ಹ ಬಡವರಿಗೆ ನೀಡಿರುವ ವಿಚಾರ ಎಷ್ಟು ಜನರಿಗೆ ಗೊತ್ತು? ವಿವಿಧ ಸಂಘ-ಸಂಸ್ಥೆಗಳ ಮೂಲಕ ಅವರು ನೀಡುತ್ತಿರುವ ಆರ್ಥಿಕ ನೆರವಿನ ವಿವರಗಳು ನೆರವು ಪಡೆದವರಿಗೆ ಮಾತ್ರ ಗೊತ್ತು. ಈ ಎಲ್ಲ ವಿಚಾರಗಳ ಬಗ್ಗೆ ಅವರೆಂದೂ ಯಾವ ವೇದಿಕೆಯಲ್ಲೂ ಹೇಳಿಕೊಂಡವರಲ್ಲ. ಅವರದು ಕೆರೆಯ ನೀರನು ಕೆರೆಗೆ ಚೆಲ್ಲುವ ಕಾರ್ಯ; ಅದನ್ನು ಮುಕ್ತ ಮನಸ್ಸಿನಿಂದ ಅವರು ಮಾಡುತ್ತಾ ಬಂದಿದ್ದಾರೆ. ಸಾಹಿತ್ಯ ಹಾಗೂ ಸಾಹಿತ್ಯೇತರ ಕಾರ್ಯಕ್ರಮಗಳಿಗಾಗಿ ಅವರು ಸದಾ ನೆರವನ್ನು ನೀಡುತ್ತಾ ಬಂದಿರುವುದರಿಂದಲೇ ನಮ್ಮ ಜಿಲ್ಲೆಯಲ್ಲಿ ದಾಖಲೆ ಸಂಖ್ಯೆಯ ಸಮ್ಮೇಳನಗಳು ನಡೆಯುತ್ತಾ ಇವೆ; ಪುಸ್ತಕ ಪ್ರಕಟನೆಗಳು ಆಗುತ್ತಾ ಇವೆ ಎಂಬುದಂತೂ ಸತ್ಯ.

ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿದರೆ ಅಪ್ರಸ್ತುತವಾಗಲಾರದೇನೋ. ಪ್ರತಿಷ್ಠಿತ ಸಂಸ್ಥೆಯೊಂದರ ಮುಖ್ಯಸ್ಥರಾದಾಗ, ಅವರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪತ್ನಿ ಹಾಗೂ ಮಕ್ಕಳ ಪ್ರದರ್ಶನವೂ ಸಾಮಾನ್ಯವಾಗಿ ನಡೆಯುತ್ತದೆ. ವೇದಿಕೆಯಲ್ಲೂ ಅವರ ಉಪಸ್ಥಿತಿ ಇರುತ್ತದೆ. ಆದರೆ ಪುನರೂರು ಅವರ ಮನೆಯವರು ಹೆಚ್ಚಾಗಿ ಯಾವ ಕಾರ್ಯಕ್ರಮಗಳಲ್ಲೂ ಕಾಣಿಸಿಕೊಂಡವರಲ್ಲ. ಇತ್ತೀಚೆಗೆ ಅವರ ಸಮ್ಮಾನದ ಕಾರ್ಯಕ್ರಮವೊಂದರಲ್ಲಿ ಮಾತ್ರ ಅವರ ಪತ್ನಿ ಹಾಗೂ ಮಕ್ಕಳು ಕಾಣಿಸಿಕೊಂಡರು. ಸುಮಾರು 20 ವರ್ಷಗಳ ನಮ್ಮ ನಡುವಿನ ಪರಿಚಯದ ಅವಧಿಯಲ್ಲಿ ನಾನು ಅವರನ್ನೆಲ್ಲ ನೋಡಿದ್ದು ಈ ಒಂದು ಸಂದರ್ಭದಲ್ಲಿ ಮಾತ್ರ.

ಕಾಲಿಗೆ ಚಕ್ರಕಟ್ಟಿಕೊಂಡವರಂತೆ ಸದಾ ಸಂಚಾರ ಮಾಡುತ್ತಲೇ ಇರುವ ಪುನರೂರು ಅವರು ಭೇಟಿ ನೀಡದ ಊರು ದಕ್ಷಿಣ ಕನ್ನಡದಲ್ಲಂತೂ ಯಾವುದೂ ಇರಲಾರದು. ಈ ಸಂಚಾರದಿಂದಾಗಿಯೇ ಅವರಿಗೆ ಭಿನ್ನ ಭಿನ್ನ ರೀತಿಯ ವ್ಯಕ್ತಿಗಳೊಂದಿಗೆ ಹೇಗೆ ವ್ಯವಹರಿಸಬೇಕೆನ್ನುವ ಕೌಶಲ ಕರಗತವಾಗಿದೆ. ಇದರಿಂದಾಗಿಯೇ ಯಾರ ಗುಣ ಹೇಗೆ, ಯಾರ ಸತ್ವ ಎಷ್ಟು ಎಂಬುದನ್ನು ಕ್ಷಣಮಾತ್ರದಲ್ಲಿ ಅವರು ತಿಳಿದುಕೊಳ್ಳಬಲ್ಲರು. ಎಲ್ಲರನ್ನೂ ಸಮಾನ ಗೌರವದಿಂದ ಕಾಣಬಲ್ಲ ಪುನರೂರು ಅವರ ಈ


ಗುಣಗಳಿಂದಾಗಿಯೇ ಅವರ ಸಂಘಟನಾ ಶಕ್ತಿ ಹೆಚ್ಚು ಬಲಗೊಂಡಿದೆ. ಎಷ್ಟೇ ದೊಡ್ಡದಾದ, ಯಾವುದೇ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ, ಬಂದವರು ಮೆಚ್ಚಿ ಅಹುದಹುದು ಎನ್ನುವ ಹಾಗೆ- ಅವರು ನಡೆಸಿಕೊಡಬಲ್ಲವರಾಗಿದ್ದಾರೆ.

ನಮ್ಮೆಲ್ಲರೊಡನೆ ನಮ್ಮಲ್ಲೊಬ್ಬರಾಗಿ ಬೆರೆಯಬಲ್ಲ, ಗೌರವಿಸಬಲ್ಲ, ಎಲ್ಲರನ್ನೂ ದ್ವೇಷ ಕಪಟಗಳಿಲ್ಲದೆ ಪ್ರೀತಿಸಬಲ್ಲ ಪುನರೂರು ಅವರನ್ನು ಯಾರಿಗೂ ದ್ವೇಷಿಸಲು ಸಾಧ್ಯವಿಲ್ಲ- ದ್ವೇಷಿಸಲು ಕಾರಣಗಳೂ ಇಲ್ಲ. ಪುನರೂರು ಅವರೊಂದಿಗೆ ಹೋಲಿಸಬಲ್ಲ ವ್ಯಕ್ತಿಯೆಂದರೆ ಪುನರೂರು ಮಾತ್ರ!

ಭಾಗ: ಎರಡು
ಹೀಗಿದ್ದಾರೆ ಪುನರೂರು

ಹೀಗಿದ್ದಾರೆ ಪುನರೂರು!

☐ ಸುಮುಖಾನಂದ ಜಲವಳ್ಳಿ



ಎಲ್ಲೇ ಇರಲಿ, ಎದ್ದು ತೋರುವ ಹರವಾದ ಆಳ್ತನ. ದಷ್ಟಪುಷ್ಟ ನಿಲುವು. ಅಗಲವಾದ ತುಂಬು ಮೊಗ. ಮುಖ ಶೋಭೆಗೆ ಮುಕುಟಪ್ರಾಯವಾದ ಮೀಸೆ, ಹಿಡಿದ ಕಾರ್ಯವನ್ನು ಬಿಡದೆ ಸಾಧಿಸುತ್ತೇನೆ ಎಂಬ ಹಟ ಸಾಧನೆಯ ಕಣ್ಣಿಗೆ ಸಿಂಹ ನೋಟ, ವಿಶಾಲ ಮೊಗಕ್ಕೆ ಭೂಷಣವಾದ ಹರವಾದ ಹಣೆ, ನೀಳ ಮೂಗು, ಓರಣವಾಗಿ ಬಾಚಿದ ಕ್ರಾಪು ಕೂದಲುಳ್ಳ ಸಮಗಟ್ಟಿನ ತಲೆ, ಯಾವ ಆತಂಕ, ಗಡಿಬಿಡಿಯಿಲ್ಲದ ಸಮಚಿತ್ತದ ಮುಖಭಾವ, ಅರ್ಧ ತೋಳಿನ ಧವಳ ಶುಭ್ರ ಅಂಗಿ ಮತ್ತು ಪಂಚೆ, ನೇರ ನಡೆ, ಇವರು ಎಲ್ಲವರಂತಲ್ಲ, ಏನೋ ವಿಶೇಷ ಕಾರ್ಯಸಂಗತಿಯುಳ್ಳವರು ಎಂಬುದು ನೋಟ ಮಾತ್ರಕ್ಕೆ ಗೋಚರವಾಗುವ ಆಕರ್ಷಕ ರೂಪ. ಇದು ಹರಿಕೃಷ್ಣ ಪುನರೂರವರ ವ್ಯಕ್ತಿತ್ವದ ಹೊರನೋಟ.

ಪುನರೂರುರವರ ಸರಳ ಸ್ವಭಾವವೇ ಅವರಿಗೆ ಹೆಚ್ಚಿನ ಕಳೆ ತಂದಿದೆ. ಅವರ ಜನಪ್ರೀತಿ ಅಸದೃಶವಾದುದು. ಸಮಾಜ ಸುಧಾರಣಾ ಕಾರ್ಯ ಕೈಗೊಂಡ ಮಹನೀಯರು ನಮ್ಮಲ್ಲಿದ್ದಾರೆ. ಆದರೆ ಹರಿಕೃಷ್ಣರಂತೆ ಜನಗಳೊಂದಿಗೆ ಬೆರೆತು ಅವರ ನಡುವೆ ಇದ್ದು ಕಾರ್ಯಕ್ರಮಗಳನ್ನು ರೂಪಿಸಿದವರು ಬೇರೆ ಸಿಗುವುದು ಅಪರೂಪ. ಅವರನ್ನು ವಿಶೇಷವಾಗಿ ಕಾರ್ಯ ಸಂಘಟಕ ಎಂದು ಗುರುತಿಸುವುದುಂಟು. ಅದು ನಿಜವೆ. ಅವರ ಮುಖ್ಯ ಶಕ್ತಿಯೇ

ಸುಮುಖ ಪ್ರಕಾಶನ, 'ಕಾವ್ಯಶ್ರೀ' ಮೂರು ಕಾವೇರಿ, ಕಿನ್ನಿಗೋಳಿ-574 150

ಅವರು ಜನರೊಂದಿಗೆ ಬೆರೆವ, ಜನರಿಂದ ಗಳಿಸಿದ ಪ್ರೀತಿ ವಿಶ್ವಾಸ. ಜಾತಿಭೇದ, ವರ್ಗ ಭೇದ ಅವರಿಗಿಲ್ಲ.

ಈ ಸರಳತನಕ್ಕೆ ಅವರ ವಿನಯವೂ ಕಾರಣ. ಶ್ರೀಮಂತಿಕೆ ತುಂಬಿಕೊಂಡವರಲ್ಲಿ ಕಾಣಬಹುದಾದ ಅಹಂಕಾರ, ಬಿಗುಮಾನ ಹರಿಕೃಷ್ಣರಲ್ಲಿ ಇಲ್ಲವೇ ಇಲ್ಲ. ಎಲ್ಲಾ ವರ್ಗದ ಜನರೊಂದಿಗೂ ಬೆರೆವ ಸ್ವಭಾವ. ಸಾಮಾನ್ಯ ಜನ ವರ್ಗವೇ ಅವರನ್ನು ವಿಶೇಷವಾಗಿ ಪ್ರೀತಿಸಿದೆ. ಇದಕ್ಕೆ ಕಾರಣ ಅವರೊಂದಿಗೆ ಸೌಜನ್ಯದಿಂದ, ನಡೆದುಕೊಳ್ಳುವ ಪರಿ. ಯಾರೂ ಅವರ ಬಳಿಗೆ ಹೋಗಬಹುದು, ಮಾತಾಡಬಹುದು, ಕೃತ್ರಿಮ ಅಡೆತಡೆ ಅಲ್ಲಿಲ್ಲ. ಯಾರು ಯಾವ ತೊಂದರೆಯಲ್ಲಿದ್ದರೂ ಅಲ್ಲಿಗೆ ಧಾವಿಸುತ್ತಾರೆ. ಧೈರ್ಯ ಹೇಳುತ್ತಾರೆ. ಕೈಲಾದ ಸಹಾಯ ಮಾಡುತ್ತಾರೆ. ತಾನೊಬ್ಬ ಅಷ್ಟ ಮನೆತನಕ್ಕೆ ಸೇರಿದವ ಎಂಬ ಭಾವನೆಗೆ ಅವರಲ್ಲಿ ಆಸ್ಪದವಿಲ್ಲ. ಎಲ್ಲವರಂತೆ ತಾನೂ ಒಬ್ಬ- ಈ ಅರಿವೇ ಅವರನ್ನು ಘನತೆಗೇರಿಸಿದೆ.

ಅವರ ಸೇವೆಯ ಯಾವ ಕ್ಷೇತ್ರವೇ ಇರಲಿ, ಅಲ್ಲಿ ಕಾಣುವುದು ಅವರ ನಿಸ್ಪೃಹತೆ, ಒಂದು ಕೊಟ್ಟು ಎರಡು ಪಡೆವ ಮನೋಭಾವದ ಸಮಾಜಸೇವಕರಂತಲ್ಲ ಪುನರೂರು. ತಮ್ಮ ಸೇವೆ ಪೂರ್ಣರೂಪದಲ್ಲಿ ಸಮಾಜಕ್ಕೆ ಸಲ್ಲಬೇಕು, ಅದರಿಂದ ಫಲಾನುಭವಿಗಳು ಪಡುವ ಸಂತಸವೆ ಅವರು ಬಯಸುವ ಪ್ರತಿಫಲ.

ಅವರ ಬಗ್ಗೆ ಅವರಿಗೆ ಅಭಿಮಾನ ಹೇಗೋ ನಾಡು, ನುಡಿ, ಸಂಸ್ಕೃತಿಯ ಬಗ್ಗೆಯೂ ಅದೇ ರೀತಿಯ ಅಭಿಮಾನ. ಅಲ್ಲಿ ಆಗುವ ಅನ್ಯಾಯವನ್ನು ಅವರು ಸಹಿಸುವುದಿಲ್ಲ. ನೇರವಾಗಿ ಪ್ರತಿಭಟಿಸುವ ಸ್ವಭಾವ ಅವರದ್ದು. ಆದುದರಿಂದಲೇ ಕೆಲವು ಸಂದರ್ಭಗಳಲ್ಲಿ ಅವರು ನಿಷ್ಠುರವಾಗಿ ಕಾಣುತ್ತಾರೆ.

ಅವರಿಗೆ ಸಂಬಂಧಿಸಿದಂತೆ ಕೆಲವು ಘಟನೆಗಳನ್ನು ಇಲ್ಲಿ ಕೊಡಲಾಗಿದೆ. ಈ ಘಟನೆಗಳು ಅವರ ಗುಣ, ಸ್ವಭಾವಗಳ ಮೇಲೆ ಬೆಳಕು ಚೆಲ್ಲುತ್ತವೆ.

ಅವರು ಲಯನ್ಸ್ ಜಿಲ್ಲಾ ಗವರ್ನರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಂದರ್ಭ ಅದು. ಒಬ್ಬರ ಮನೆಗೆ ಚುನಾವಣೆಯ ಪ್ರಚಾರಕ್ಕೆ ಹೋಗಿದ್ದರು. ತಮಗೆ ವೋಟು ಕೊಡಿ ಎಂದು ವಿನಂತಿಸಿದರು. ಗತ್ತಿನ ಆ ಮನುಷ್ಯ ಇವರನ್ನು ಸದರವಾಗಿ ಕಂಡು ಕುಳಿತುಕೊಳ್ಳಲೂ ಹೇಳದೆ "ನಮಗೆ ಯಾರಿಗೆ ವೋಟು ಕೊಡಬೇಕೆಂದು ಗೊತ್ತಿದೆ. ಅದನ್ನು ನೀವು ಹೇಳಬೇಕಿಲ್ಲ, ಸುಮ್ಮನೆ ಹೋಗಿ" ಎಂದು ಹೇಳಿದರಂತೆ. 'ಆಗಲಿ' ಎಂದು ಹೊರಟು ಬಂದರು. ಆ ಸಂದರ್ಭ ಅವಾಗ ಮುಗಿಯಿತು. ಆದರೆ ಇದೇ ವ್ಯಕ್ತಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಮಗನಿಗೆ ಸೀಟಿಗಾಗಿ ಬಂದರು. ಸೀಟು ಸಿಗುವ ಹಾಗೆ ಕಾಣಲಿಲ್ಲ. ತುಂಬಾ ಪರದಾಡಿದರು. ಕೊನೆಗೆ ಯಾರೋ ಪರಿಚಿತರು ಹರಿಕೃಷ್ಣರ ಹೆಸರನ್ನು ಹೇಳಿದರು. ಮೂಲ್ಕಿಯ ಅವರ ಕಾರ್ಯಾಲಯಕ್ಕೆ ಆ ವ್ಯಕ್ತಿ ಬಂದರು. ಹರಿಕೃಷ್ಣರು ಸಂತೋಷದಿಂದಲೇ 'ಬನ್ನಿ, ಕುಳಿತುಕೊಳ್ಳಿ' ಎಂದು ಹೇಳಿ, ಚಹ ತರಿಸಿಕೊಟ್ಟರು. ಆಮೇಲೆ ಬಂದ ಕಾರಣವನ್ನು ವಿಚಾರಿಸಿದರು. ಅವರು ತಮ್ಮ ಸಮಸ್ಯೆಯನ್ನು ಹೇಳಿದರು. ಕೂಡಲೇ ವಿಶ್ವವಿದ್ಯಾಲಯದಲ್ಲಿದ್ದ ತಮ್ಮ ಪರಿಚಿತರೊಬ್ಬರನ್ನು ಕಂಡು ಇವರ ಮಗನ ಪ್ರವೇಶಾವಕಾಶದ ಬಗ್ಗೆ ಮಾತಾಡಿದರು. ಅವರು ಒಪ್ಪಿದರು. ಪ್ರವೇಶಾವಕಾಶ ಸಿಕ್ಕಿತು. ಆ ಮಹನೀಯರಿಗೆ ಸಂತೋಷವಾಯಿತು. ಆಮೇಲೆ ಹರಿಕೃಷ್ಣರು ನೆನಪಿಸಿದರು. "ನಾವು ವೋಟು ಕೇಳಲು ಮನೆಗೆ ಬಂದಾಗ ಕುಳಿತುಕೊಳ್ಳಲೂ ಹೇಳದೆ ಕನಿಷ್ಠ ಮಟ್ಟದ ಸೌಜನ್ಯವನ್ನು ತೋರದೆ ಸದರವಾಗಿ ಮಾತಾಡಿದಿರಿ. ಆದರೆ ನಾವು ಹಾಗೆ ಮಾಡುವವರಲ್ಲ" ಎಂದಾಗ ಆ ಮಹನೀಯರಿಗೆ ಸಾಕು ಸಾಕಾಯಿತು. ಸೌಜನ್ಯದ ಮಾತಾಡಿ ಉಪಕಾರ ಸ್ಮರಿಸಿ ತೆರಳಿದರು.

ಅದೇ ರೀತಿ, ಒಂದು ಲಯನ್ಸ್ ಸಭೆಗೆ ಹೋಗಿದ್ದಾಗ ಇವರ ಸಾದಾ ಡ್ರೆಸ್ ನೋಡಿದ ದೊಡ್ಡಸ್ತಿಕೆಯ ಒಬ್ಬ ಸದಸ್ಯರು ಇವರು ಯಾರೋ ಏನೋ ಎಂಬ ಹಾಗೆ ಕಂಡರಂತೆ. ಕಾರ್ಯಕ್ರಮ ಆರಂಭವಾಯಿತು.

ವೇದಿಕೆಗೆ ಹರಿಕೃಷ್ಣರು ಬಂದರು. ಅವರ ಪರಿಚಯ ಮಾಡಿದರು. ವೇದಿಕೆಯ ಮೇಲಿನ ಗೌರವ ಕಂಡು ತಮ್ಮ ನಡತೆಯ ಬಗ್ಗೆ ನಾಚಿಕೊಂಡ ಆ ವ್ಯಕ್ತಿ, ಹರಿಕೃಷ್ಣರು ವೇದಿಕೆಯಿಂದ ಈಚೆ ಬಂದ ಮೇಲೆ ಅವರ ಹತ್ತಿರ ಹೋಗಿ ತಮ್ಮ ತಪ್ಪನ್ನು ಹೇಳಿಕೊಂಡು ವಿಷಾದ ವ್ಯಕ್ತಪಡಿಸಿದರಂತೆ. ವ್ಯಕ್ತಿಯ ಬಗ್ಗೆ ಸರಿಯಾದ ಪರಿಚಯವಿಲ್ಲವಾಗ, ಬರೀ ಧರಿಸಿದ ಉಡುಪುಗಳಿಂದಲೇ ವ್ಯಕ್ತಿ ಯೋಗ್ಯತೆಯನ್ನು ಅಳೆಯ ಹೊರಟಾಗ ಇವೆಲ್ಲ ಸಂಭವಿಸುತ್ತದೆ ಎನ್ನುತ್ತಾರೆ ಪುನರೂರು. ಹೀಗಿದ್ದರೂ ಅವರು ವಿಚಲಿತರಾದವರಲ್ಲ. ಸಮಾಜವಲ್ಲಿ ಉಡುಪಿನಿಂದಾಗಿಯೇ ತಾನು ಕೆಲವೊಮ್ಮೆ ಅವಗಣನೆಗೊಳಗಾಗಬೇಕಾಗುತ್ತದೆ ಎಂದು ಭಾವಿಸಿದವರೂ ಅಲ್ಲ. ಅಂತಃಸತ್ವ ಗಟ್ಟಿಯಿದ್ದರೆ ಸಮಾಜದ ಗೌರವ ಅವನಿಗೆ ಸಿಕ್ಕೇ ಸಿಗುತ್ತದೆ ಎಂಬ ದೃಢ ಮನಸ್ಸಿನವರು ಅವರು.

ಉಚಿತ ನೇತ್ರ ಚಿಕಿತ್ಸಾ ಕಾರ್ಯಕ್ರಮದಿಂದ ಪ್ರಸಿದ್ಧಿ ಪಡೆದವರು ಪುನರೂರು ಎಂಬ ವಿಷಯ ಎಲ್ಲರಿಗೂ ಗೊತ್ತಿದೆ. ಮೂಲ್ಕಿಯಲ್ಲಿ ಅಂತಹ ಒಂದು ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಸಂಯೋಜಿಸಿದ್ದರು. ಅದು ಇಂದಿರಾ ಗಾಂಧಿಯವರು ಚಿಕ್ಕಮಗಳೂರಲ್ಲಿ ಚುನಾವಣೆಯ ಕಣಕ್ಕಿಳಿದ ಸಂದರ್ಭ. ಚುನಾವಣೆ ಮುಗಿದು ಮತಗಳ ಎಣಿಕೆ ನಡೆಯುತ್ತಿತ್ತು. ಇಲ್ಲಿ ನೇತ್ರ ಚಿಕಿತ್ಸೆ ನಡೆಯುತ್ತಿತ್ತು. ಮುಂಬಯಿಯ ಉದ್ಯಮಿಯೊಬ್ಬರು ಅಂದಿನ ಊಟದ ಪ್ರಾಯೋಜಕರಾಗಿದ್ದರು. ಮತಗಳೆಣಿಕೆ ಮುಗಿದು ಫಲಿತಾಂಶ ಹೊರಬಿತ್ತು. ಇಂದಿರಾ ಗಾಂಧಿಯವರು ಆಯ್ಕೆಯಾಗಿದ್ದರು. ಕರ್ನಾಟಕದ ತುಂಬಾ ವಿಜಯದ ದುಂದುಭಿ ಮೊಳಗುತ್ತಿತ್ತು. ನೇತ್ರ ಚಿಕಿತ್ಸಾರ್ಥಿಗಳಿಗೆ ಯಾರು ಹೇಳಿದರೋ, ಅಥವಾ ಅವರದ್ದೆ ಬುದ್ಧಿಯೊ, ಗೊತ್ತಿಲ್ಲ. ಇಂದಿನ ಊಟ ಇಂದಿರಾ ಗಾಂಧಿಯವರು ಚುನಾವಣೆಯಲ್ಲಿ ಗೆದ್ದ ಲೆಕ್ಕದಲ್ಲಿ ನೀಡಿದ್ದು ಅಂತ ಮಾತಾಡಿಕೊಳ್ಳತೊಡಗಿದರು. ಕಾರ್ಯಕರ್ತರನ್ನು ಅಸಡ್ಡೆಯಿಂದ ಕಾಣತೊಡಗಿದರಂತೆ. ಇಂದಿರಾ ಗಾಂಧಿಯವರೇ ಇವನ್ನೆಲ್ಲ ವ್ಯವಸ್ಥೆ ಮಾಡಿದ್ದು ಎಂದು ಇವರನ್ನೆಲ್ಲ ತಾತ್ಸಾರದಿಂದ ಮಾತಾಡತೊಡಗಿದರಂತೆ. ಇದು ಹರಿಕೃಷ್ಣರಿಗೆ ಗೊತ್ತಾಯಿತು. 'ಒಳ್ಳೆ ಊಟ ನೀಡಿದ್ದು ಮುಂಬಯಿಯ ಮಹನೀಯರೊಬ್ಬರು ಸೇವಾಭಾವದಿಂದ. ಬೆಳಗ್ಗಿನಿಂದ ಬೆವರು ಸುರಿಸಿ ದುಡಿಯುತ್ತಿರುವವರು ನಾವು. ನಮ್ಮ ಹಣವನ್ನು ಖರ್ಚು ಮಾಡಿ ಸೇವೆ ನೀಡಿದರೆ ಇಂದಿರಾ ಗಾಂಧಿ ಕೊಟ್ಟದ್ದು ಅಂತ ಮಾತಾಡುತ್ತಿರುವರಲ್ಲ. ಪರಿಶ್ರಮ ಒಬ್ಬರದ್ದು, ಹೊಗಳಿಕೆ ಇನ್ನೊಬ್ಬರದ್ದು! ಎಂಥ ಕೃತಘ್ನ ಜನ' ಎಂದು ಅಸಾಧ್ಯ ಸಿಟ್ಟೂ ಬಂದಿತು ಅವರಿಗೆ. ಎಲ್ಲರ ಕಣ್ಣಿಗೆ ಆಸಿಡ್ ಹಾಕುತ್ತೇನೆ ಎಂದು ಗರ್ಜಿಸಿದರು. ಆಗ ಎಲ್ಲಾ ತಣ್ಣಗಾದರು. ಹೀಗಂತ ಆ ಘಟನೆ ಜ್ಞಾಪಿಸಿಕೊಂಡು ನೋಡಿ ಜನರ ಬುದ್ಧಿ ಹೇಗಿರುತ್ತದೆ ಅಂತ. ಆಸಿಡ್ ಹಾಕಲಿಲ್ಲ, ಹಾಕುವಷ್ಟು ಸಿಟ್ಟು ಬಂದಿತ್ತು ಅಂತ ನಗುತ್ತಾರೆ.

ಮೂಲ್ಕಿ ಕಂಪ್ಯೂಟರ್ ಸೆಂಟರ್‌ನಲ್ಲಿ ಹರಿಕೃಷ್ಣರ ಮಗಳು ಕಂಪ್ಯೂಟರ್ ಕೋರ್ಸ್ ಕಲಿಯುತ್ತಿದ್ದರು. ಅದರ ಪರೀಕ್ಷಾ ಕೇಂದ್ರ, ಮಂಗಳೂರು. ಇಲ್ಲಿ ಕಲಿತ ಮಕ್ಕಳು ಸರ್ಟಿಫಿಕೇಟ್ ಕೋರ್ಸ್ ತೆಗೆದುಕೊಳ್ಳುವುದು ಆ ಕೇಂದ್ರದ ಹೆಸರಿನಲ್ಲೇ. ಪರೀಕ್ಷೆ ನಡೆಯುವುದೂ ಅಲ್ಲಿಯೇ. ಮಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರ ಸರ್ಟಿಫಿಕೇಟ್ ಬೇಕಾಗಿತ್ತು. ಇವರೇ ಆ ಕಾರ್ಯಾಲಯಕ್ಕೆ ಹೋದರು. ಅಲ್ಲಿ ಮಹಿಳೆಯೊಬ್ಬರು ಆ ವಿಭಾಗದಲ್ಲಿದ್ದರು. ಹರಿಕೃಷ್ಣರದ್ದು ಅದೇ ಅಂಗಿ, ಪಂಚೆ- ಸಾದಾ ಉಡುಪು ತಾನೆ? ಬಹುಶಃ ಯಾರೋ ಹಳ್ಳಿಗ ಅಂತ ತಿಳಿದುಕೊಂಡಿರಬೇಕು. ಸರ್ಟಿಫಿಕೇಟ್ ಕೊಡುವುದು ಬಿಟ್ಟು ತಮ್ಮ ಕಚೇರಿ ಬುದ್ಧಿಯಲ್ಲಿ ಅಧಿಕ ಮಾತಾಡಿ 'ಈಗ ಕೊಡುವುದಕ್ಕೆ ಆಗುವುದಿಲ್ಲ' ಎಂದರು. ಇಷ್ಟು ಮಾತಾಡುವಾಗ ಹರಿಕೃಷ್ಣರು ಸ್ವಲ್ಪ ಖಾರವಾದರು. ನ್ಯಾಯಬದ್ಧವಾಗಿಯೇ 'ಯಾಕೆ ಕೊಡುವುದಕ್ಕಾಗುವುದಿಲ್ಲ?' ಎಂದು ಕೇಳಿ ಸ್ವಲ್ಪ ಜೋರು ಮಾಡಿದರು. ಕೊಡದಿದ್ದರೆ ಹೇಗೆ

ತೆಗೆದುಕೊಳ್ಳಬೇಕು ಅಂತ ನನಗೆ ಗೊತ್ತಿದೆ ಎಂದು ಹೇಳಿ ಹೊರಬಂದರು.

ಬಂದವರು ಹರಿಕೃಷ್ಣರು ಅಂತ ಅಲ್ಲಿ ಪರಿಚಯ ಇದ್ದವರು ಆ ಮಹಿಳೆಗೆ ಹೇಳಿರಬೇಕು. ತಾವು ಅಧಿಕ ಮಾತಾಡಿದ್ದು ಪುನರೂರುರವರಿಗೆ ಎಂಬುದು ಆವಾಗ ಮನವರಿಕೆಯಾಯಿತು. ಒಂದು ರೀತಿಯ ಭಯವೂ ಆಗಿರಬೇಕು. ತಪ್ಪು ಮಾಡಿದವರಿಗೆ ಭಯ ಸಹಜ ತಾನೆ? ಮರುದಿನ ಬೆಳಗ್ಗೆ ಅದೇ ಮಹಿಳೆ ಆ ಸರ್ಟಿಫಿಕೇಟನ್ನು ಹಿಡಿದು ಅವರ ಮನೆಗೆ ಬಂದು, ಅದನ್ನು ಕೊಟ್ಟು, ಅಧಿಕ ಮಾತಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸಿದರು.

ಅದೊಂದು ಸಭಾ ಕಾರ್ಯಕ್ರಮ. ಸ್ವಾಮಿಗಳೊಬ್ಬರು ಭಾಗವಹಿಸಬೇಕಾದದ್ದು. ವೇದಿಕೆಯಲ್ಲಿ ಪಾಲ್ಗೊಳ್ಳುವ ಎಲ್ಲ ಅತಿಥಿಗಳು ಆಗಮಿಸಿದ್ದಾರೆ. ಆದರೆ ಸ್ವಾಮಿಗಳು ಮಾತ್ರ ಬರಲಿಲ್ಲ. ಅವರಿಗಾಗಿ ಕಾಯಬೇಕಾಯಿತು. ಈ ಸಮಾರಂಭದ ವೇದಿಕೆಯ ಅತಿಥಿಗಳಲ್ಲಿ ಹರಿಕೃಷ್ಣರೂ ಒಬ್ಬರು. ನಿಗದಿತ ಸಮಯಕ್ಕೆ ಕಾರ್ಯಕ್ರಮ ಶುರುವಾಗಲು ಈಗ ಸ್ವಾಮಿಗಳು ಮಾತ್ರ ಅಡ್ಡಿಯಾಗಿದ್ದರು. ಜನಗಳ ದೃಷ್ಟಿಯಲ್ಲಿ ಅವರು ಪೂಜ್ಯರಾದವರು. ಅವರು ಬಾರದೆ ಆರಂಭಿಸುವಂತಿಲ್ಲ. ಹಾಗೇನಾದರೂ ಮಾಡಿದರೆ ಅದು ಅವರಿಗೆ ಅಗೌರವ ತೋರಿದಂತಾಗುತ್ತದೆ. ಸಭಿಕರಿಗಂತೂ ಸ್ವಾಮಿಗಳಿಗೆ ಕಾಯದೆ ಕಾರ್ಯಕ್ರಮ ಆರಂಭಿಸುವುದು ಸುತಾರಾಂ ಇಷ್ಟವಿಲ್ಲ. ಆದರೆ ವೇದಿಕೆಯ ಅತಿಥಿಗಳಲ್ಲಿ ಕೆಲವರಿಗೆ ಬೇಜಾರವಾಯಿತು. ಹರಿಕೃಷ್ಣರಿಗೂ ಇದು ಸರಿ ಬರಲಿಲ್ಲ. ಸ್ವಾಮಿಗಳು ಜನರಿಗೆ ಆದರ್ಶವಾಗಬೇಕಾದವರು. ಮಾರ್ಗದರ್ಶನ ನೀಡಬೇಕಾದವರು. ಆದರೆ ಅವರೇ ತಪ್ಪಿದರೆ ಹೇಗೆ? ಜನರಿಗೆ ಆದರ್ಶ ಯಾವುದು? ಹಿರಿಯ ಸ್ಥಾನದಲ್ಲಿರುವವರು ಸರಿಯಾಗಿ ನಡೆದುಕೊಳ್ಳಬೇಕಲ್ಲವೆ? ಇದು ಆ ಸಮಯದಲ್ಲಿ ಅವರ ಮನದೊಳಗೆ ಮೂಡಿದ ವಿಚಾರ. ಅಂತೂ ಸ್ವಾಮಿಗಳು ದಯಮಾಡಿಸಿದರು. ಕಾದು ಸುಸ್ತಾದ ಜನಕ್ಕೆ ಉಸಿರಾಡಿಸುವಂತಾಯಿತು. ಹರಿಕೃಷ್ಣರು ಮಾತ್ರ ಸುಮ್ಮನಿರಲಿಲ್ಲ. ಸಮಯಪ್ರಜ್ಞೆಯಿಲ್ಲದ ಅವರನ್ನು ಇಷ್ಟು ತಡಮಾಡಿ ಸಭೆಯನ್ನು ಕಾಯಿಸಿದ್ದು ಸರಿಯೆ? ಎಂದು ಕೇಳಿಯೇಬಿಟ್ಟರು. ಏನು ಮಾಡುವುದು, ಭಕ್ತಾದಿಗಳು ಬಿಡುವುದಿಲ್ಲ ಎಂದರು ಸ್ವಾಮಿಗಳು. ಅದಕ್ಕೆ ಪುನರೂರು 'ಹಾಗಾದರೆ ಇಂಥ ಸಭಾ ಕಾರ್ಯಕ್ರಮಕ್ಕೆ ಬರಲು ಒಪ್ಪಿಕೊಳ್ಳುವುದೇಕೆ?' ಎಂದು ನೇರವಾಗಿಯೇ ಪ್ರಶ್ನಿಸಿದರು.

ಹರಿಕೃಷ್ಣರ ಹಿರಿಯ ಮಗಳ ಮದುವೆಯ ಸಂದರ್ಭ. ಇವರ ಪ್ರಸಿದ್ಧಿಯನ್ನು ತಿಳಿದ ಬೆಂಗಳೂರಿನ ಗಣ್ಯ ಪಾರ್ಟಿಯೊಂದು ಇವರ ಮಗಳನ್ನು ತಮ್ಮ ಮಗನಿಗೆ ತಂದುಕೊಳ್ಳುವ ನೆಂಟಸ್ತಿಕೆಯನ್ನು ಬಯಸಿದರು. ಈ ಕುಟುಂಬದ ಸಂಬಂಧವೇ ಆಗಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಸರಿ, ಹರಿಕೃಷ್ಣರು ಅದನ್ನು ಒಪ್ಪಿದರು. ಹುಡುಗನ ತಂದೆ-ತಾಯಿ ವಧುವನ್ನು ನೋಡುವುದಕ್ಕಾಗಿ ಪುನರೂರಿಗೆ ಬಂದರು. ಸಂತೋಷದಿಂದ ಗೌರವಪೂರ್ಣವಾಗಿ ಸ್ವಾಗತಿಸಿದರು. ಮಾತುಕತೆಗೆ ಮೊದಲು ಕಾಫಿ ತಿಂಡಿ ತಯಾರಿ ಆಯಿತು. ಹುಡುಗನ ತಾಯಿ ಕಾಫಿ-ತಿಂಡಿ ಮುಟ್ಟಲಿಲ್ಲ. ಅವರದ್ದು ಅಂಥ ಮಡಿವಂತಿಕೆ. ಇದನ್ನು ಗಮನಿಸಿದ ಹರಿಕೃಷ್ಣರು ತಮ್ಮ ಮಗಳನ್ನು ಆ ಕುಟುಂಬಕ್ಕೆ ಕೊಡಲು ಒಪ್ಪದೆ ನೇರವಾಗಿಯೇ 'ನಿಮ್ಮ ಮನೆಯ ಸಂಬಂಧ ನಮಗಿಷ್ಟವಿಲ್ಲ, ಮಗಳನ್ನು ಕೊಡುವುದಿಲ್ಲ' ಎಂದರು. ವರನ ತಾಯಿ ಪುನಃ 'ಇಲ್ಲ, ಈ ಸಂಬಂಧ ನಮಗೆ ಬೇಕು' ಎಂದು ಭಾರೀ ಹೇಳಿದರು. ಆದರೆ ಹರಿಕೃಷ್ಣರ ಮಾತು ಕಲ್ಲು ಮುರಿದಂತೆ ಇತ್ತು. ಉಪಾಯವಿಲ್ಲದೆ ಅವರು ಬಂದ ದಾರಿಯಲ್ಲೇ ಮರಳಿದರು.

ಈಗ ನಾಗಬನ ಹೋಗಿ ನಾಗರ ಕಟ್ಟೆಗಳು ನಿರ್ಮಾಣಗೊಳ್ಳುತ್ತಿವೆ. ನಾಗಬನ ಪರಿಸರವನ್ನು ಹಸಿರಾಗಿರಿಸುವಲ್ಲಿ ಸಹಕಾರಿ ಎಂಬುದು ಸತ್ಯ. ನಾಗರ ಕಟ್ಟೆಯಿಂದಾಗಿ ನಾಗಬನಗಳೆಲ್ಲ ಹೋಳು

ಬೋಳಾಗಿವೆ. ನಾಗಕ್ಕೆ ಏನು ಬೇಕು? ನೆರಳು ಬೇಕು, ತಂಪು ಬೇಕು. ಸಂಪಿಗೆ, ಕೇದಗೆ, ಸುರಹೊನ್ನೆ–ಇವೆಲ್ಲ ನಾಗಬನಗಳಲ್ಲಿ ಕಾಣುವ ವೃಕ್ಷಗಳು. ಇವು ತಂಪೂ ಹೌದು ಕಂಪೂ ಹೌದು. ನಾಗನಿಗೆ ಬೇಕಾದುದು ಅವೆ. ಆದರೆ ನಾಗರಕಟ್ಟೆ ಕಟ್ಟುವುದರಿಂದ ಏನು ಸಿಗುತ್ತದೆ? ಬಿಸಿಲ ಬೇಗೆ ತಾನೆ? ನಾಗ ಸಂತತಿ ಇದರಿಂದ ಉಳಿಯುತ್ತದೆಯೆ? ಈ ನಾಗಬನ ತೆಗೆದು ನಾಗರಕಟ್ಟೆ ಕಟ್ಟುವುದಕ್ಕೆ ಪ್ರಶ್ನೆ ಹೇಳುವವರಾದರೂ ಯಾರು? ನಾಗದರ್ಶನದಲ್ಲಿ ನಾಗಪಾತ್ರಿಗಳು. ಈ ವಿಷಯ ಹರಿಕೃಷ್ಣರಿಗೆ ಗೊತ್ತು. ಒಂದು ಸಾರಿ ಹರಿಕೃಷ್ಣರು ನಾಗದರ್ಶನದ ಸಂದರ್ಭದಲ್ಲಿ ಉಪಸ್ಥಿತರಿದ್ದರು. ದರ್ಶನವಾಗುವುದಕ್ಕಿಂತ ಮೊದಲು ಅವರು ನಾಗಪಾತ್ರಿಯಲ್ಲಿ ಮಾತುಕತೆಯಾಡಿದರು. ಆ ಸಮಯದಲ್ಲಿ ಈ ವಿಷಯ ಬಂದು. ನಾಗ ಪಾತ್ರಿಯಲ್ಲಿ 'ಹೌದು, ನೀವು ದರ್ಶನದಲ್ಲಿ ನಾಗಬನ ಕಡಿಯಬೇಕು, ನಾಗ ಕಟ್ಟೆ ಕಟ್ಟಬೇಕು ಎಂದು ಜನರಿಗೆ ಹೇಳುತ್ತೀರಿ, ಇದರಿಂದೇನಾಗುತ್ತಿದೆ. ನಾಗಬನದ ಹಸುರು ನಾಶವಾಗಿ ಸಿಮೆಂಟಿನ ಬೋಳು ಕಟ್ಟೆ ನಿರ್ಮಾಣವಾಗುತ್ತದೆ. ಹೀಗಾದರೆ ನಾಗಗಳು ವಾಸಿಸಲು ಸಾಧ್ಯವೆ? ಜೀವಂತ ನಾಗಗಳಿಗೆ ಬದುಕಲು ಅವಕಾಶವಿಲ್ಲ; ಬರಿ ನಾಗರ ಕಲ್ಲಿಗೆ ಮಾತ್ರ ಆರಾಧನೆ. ಇದರಿಂದೇನು ಪ್ರಯೋಜನ? ಜನರಿಗಂತೂ ಆ ತಿಳುವಳಿಕೆ ಇಲ್ಲ. ನಾಗದರ್ಶನದಲ್ಲಿ ಏನು ಹೇಳುತ್ತೀರೋ ಅದನ್ನೇ ನಂಬುತ್ತಾರೆ, ಹಾಗೇ ನಡೆದುಕೊಳ್ಳುತ್ತಾರೆ. ನೀವು ದರ್ಶನದಲ್ಲಿ ನಾಗಬನ ಕೆಡಿಸಬಾರದು, ಮರ ಕಡಿಯಬಾರದು ಎಂದು ಅಪ್ಪಣೆ ಕೊಡಿಸಿದರೆ ಜನರು ಅದೇ ರೀತಿ ನಡೆದುಕೊಳ್ಳುತ್ತಾರೆ" ಎಂದು ಹೇಳಿದರು. ನಾಗಪಾತ್ರಿ ಅವರ ಮಾತನ್ನು ಮೌನವಾಗಿ ಆಲಿಸಿದರು. ಸರಿ, ಮುಂದೆ ನಾಗ ಪೂಜೆ ಆಗಿ, ನಾಗದರ್ಶನಕ್ಕೆ ಆರಂಭವಾಯಿತು. ದರ್ಶನ ಬಂದ ಕೂಡಲೇ ಪಾತ್ರಿಯ ಬಾಯಿಯಿಂದ ಬಂದ ಸೊಲ್ಲು "ಮಕ್ಕಳೇ, ನೀವು ಇಲ್ಲಿ ಗಿಡಗಳನ್ನು ನೆಡಬೇಕು, ಮರಗಳನ್ನು ಬೆಳೆಸಬೇಕು" ಎಂಬುದಾಗಿ. ಅಷ್ಟರಮಟ್ಟಿಗೆ ಹರಿಕೃಷ್ಣರ ಮಾತು ಪರಿಣಾಮ ಬೀರಿತು.

ಒಬ್ಬರು ಪರಿಚಯದ ಶ್ರೀಮಂತ ಗಣ್ಯ ವ್ಯಕ್ತಿಗಳು. ಅವರ ಮಗಳ ಮದುವೆ ನಡೆಯಬೇಕಿತ್ತು. ಮಗಳು ನೈತಿಕವಾಗಿ ಸ್ವಲ್ಪ ಕೊರತೆ ತಂದುಕೊಂಡವಳು. ಅದು ಗುಟ್ಟಿನ ವಿಷಯ. ಆದರೂ ಊರಲ್ಲಿ ಕೆಲವರಿಗೆಲ್ಲ ಗೊತ್ತು. ದೊಡ್ಡವರ ಮನೆಯಾದ ಕಾರಣ ಯಾರೂ ಬಾಯಿಬಿಡುತ್ತಿರಲಿಲ್ಲ. ಹರಿಕೃಷ್ಣರಿಗೂ ಈ ವಿಷಯ ಗೊತ್ತು. ಆದರೂ ಸಂಬಂಧ ನೋಡುವುದು ಕಷ್ಟವೇ ಇತ್ತು. ಈಗ ಮುಂಬಯಿಯಿಂದ ಒಂದು ಸಂಬಂಧ ಕುದುರುವುದರಲ್ಲಿತ್ತು. ಅವರಿಗೆ ಕಟೀಲು ಸಮೀಪದ ದೇವಸ್ಥಾನದ ಅರ್ಚಕರ ಮೇಲೆ ವಿಶೇಷ ವಿಶ್ವಾಸ ಗೌರವ. "ಈ ಸಂಬಂಧಕ್ಕೆ ಒಪ್ಪಬೇಕಾದರೆ ಅರ್ಚಕರನ್ನು ಒಂದು ಮಾತು ಕೇಳಬೇಕು. ಅವರು ಒಪ್ಪಿದರೆ ಸರಿ" ಎಂಬುದಾಗಿ ಹೇಳಿದರು. ಈಗ ಈ ಸಂಬಂಧ ಗಟ್ಟಿಯಾಗುವುದು ಅರ್ಚಕರ ಮೇಲೆ ಇದೆ. ಅರ್ಚಕರಿಗೂ ಹರಿಕೃಷ್ಣರಿಗೂ ಉತ್ತಮ ಸ್ನೇಹ ಸಂಬಂಧವಿತ್ತು. ಇದನ್ನು ತಿಳಿದ ಆ ಗಣ್ಯ ವ್ಯಕ್ತಿಗಳು ಹರಿಕೃಷ್ಣರನ್ನು ಕಂಡು, ಮುಂಬಯಿಯ ಗಂಡಿನ ಕಡೆಯವರು ಬಂದಾಗ ಗೋಪಾಲಕೃಷ್ಣ ಅರ್ಚಕರು ತಮ್ಮ ಬಗ್ಗೆ ಒಳ್ಳೆಯ ಮಾತಾಡುವಂತೆ, ಈ ಸಂಬಂಧಕ್ಕೆ ಒಪ್ಪುವಂತೆ ಅವರಿಗೆ ತಾವು ಹೇಳಬೇಕು ಎಂಬುದಾಗಿ ವಿನಂತಿಸಿಕೊಂಡರು. ಈಗ ಹರಿಕೃಷ್ಣರಿಗೆ ಉಭಯ ಸಂಕಟವಾಯಿತು. ಸತ್ಯ ಮುಚ್ಚಿಟ್ಟರೆ ಅವರಿಗೆ ಮೋಸ, ಬಿಚ್ಚಿಟ್ಟರೆ ಇವರಿಗೆ ಕಷ್ಟ. ಆದರೆ ಒಂದು ಹೆಣ್ಣಿನ ಭವಿಷ್ಯದ ಪ್ರಶ್ನೆ. ತಪ್ಪು ಮಾಡದವರಾರು? ಹಾಗೆಂದುಕೊಂಡರೂ ತಪ್ಪನ್ನು ಗಮನಕ್ಕೆ ತಂದು ಪರಸ್ಪರ ಒಪ್ಪಿಕೊಂಡರೆ ಒಳ್ಳೆಯದು. ಆದರೆ ಮನುಷ್ಯ ಅಷ್ಟು ದೊಡ್ಡವನೆ? ತಪ್ಪು ಗೊತ್ತಾದ ಮೇಲೆ ಸ್ವೀಕರಿಸುವುದು ಕಷ್ಟ. ಈಗ ಎಲ್ಲಾ ಭಾರ ಆ ಅರ್ಚಕರ ಮೇಲಿದೆ. ಅವರನ್ನು ಒಪ್ಪಿಸುವ ಭಾರ ಇವರ ಮೇಲಿದೆ. ಅವರಿಗೆ 'ನೋಡುವ' ಅಂತ ಹೇಳಿ ಹರಿಕೃಷ್ಣರು, ಅರ್ಚಕರ ಬಳಿ ಬಂದು

ವಿಷಯವನ್ನು ತಿಳಿಸಿದರು. ಸುಳ್ಳು ಹೇಳುವ ವಿಷಯ. ಅದರಲ್ಲೂ ಅವರು ವಿಶ್ವಾಸದ ವ್ಯಕ್ತಿ. ನಂಬಿಕೆಗೆ ದ್ರೋಹ ಆಗಬಾರದಲ್ಲ. ಆ ಅರ್ಚಕರು ಆಲೋಚಿಸತೊಡಗಿದರು. ನಾವು ಸುಳ್ಳು ಹೇಳಿದೆವು ಅಂತ ಆಗಬಾರದು. ಇವರಿಗೂ ಸಂಬಂಧ ಮುರಿದುಹೋಗಬಾರದು. ಆ ರೀತಿಯಲ್ಲಿ ಮಾತಾಡುವ ನಿರ್ಧಾರವನ್ನು ಇಬ್ಬರೂ ತೆಗೆದುಕೊಂಡರು. ಹೇಳಿದ ದಿನ ಮುಂಬಯಿಯ ಗಂಡಿನ ಕಡೆಯವರು ಆ ಅರ್ಚಕರಲ್ಲಿ ಬಂದರು. ಈ ವಿಷಯವನ್ನು ಪ್ರಸ್ತಾಪಿಸಿ 'ಹುಡುಗಿ ಹೇಗೆ'? ಎಂದು ಕೇಳಿದರು. ಅದಕ್ಕೆ ಅರ್ಚಕರು, ಆ ಗಣ್ಯ ವ್ಯಕ್ತಿಯ ಬಗ್ಗೆ ಒಳ್ಳೆಯ ಮಾತಾಡಿ 'ಕುಟುಂಬ ಒಳ್ಳೆಯದು, ಹುಡುಗಿ ವರನಿಗೆ ಇಷ್ಟವಾದರೆ ಸಂತೋಷವಾಗಿ ಮದುವೆ ಆಗಬಹುದು' ಎಂದರು. ಹುಡುಗಿ ನೋಡುವುದಕ್ಕೆ ಲಕ್ಷಣವಾಗಿಯೇ ಇದ್ದಳು. ವರ ಮೆಚ್ಚಿಕೊಂಡ. ಮದುವೆ ನೆರವೇರಿತು. ಸತಿ-ಪತಿಗಳು ಸಂಸಾರದಲ್ಲಿ ಚೆನ್ನಾಗಿಯೇ ಇದ್ದಾರೆ.

ವಾಸುದೇವರಾವ್ ಎಂಬುವವರೊಬ್ಬರು ಸೇವಾಕರ್ತರು. ಬಳ್ಳಾರಿಯ ಒಂದು ಹಳ್ಳಿಯಲ್ಲಿ ಆಶ್ರಮವೊಂದನ್ನು ಸ್ಥಾಪಿಸಿಕೊಂಡು ಬಡಜನರ ಸೇವೆಯನ್ನು ಮಾಡುತ್ತಿದ್ದವರು. ಅಲ್ಲಿಯ ಒಂದು ಸಮಾರಂಭಕ್ಕೆ ಹರಿಕೃಷ್ಣರನ್ನು ಮತ್ತು ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಯವರನ್ನು ಬರಮಾಡಿಕೊಳ್ಳಬೇಕೆಂದು ಅವರಿಗೆ ಬಯಕೆ. ದೂರವಾಣಿಯ ಮೂಲಕ ಸಂಪರ್ಕಿಸಿದರು. ಇವರು ಬರುತ್ತೇವೆ ಎಂದು ಒಪ್ಪಿದರು. ಆದರೆ ಆ ಕಾರ್ಯಕ್ರಮದ ದಿನ ಇಬ್ಬರಿಗೂ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಬೇರೆ ತೊಂದರೆಯಿಂದಾಗಿ ಭಾಗವಹಿಸಲಾಗಲಿಲ್ಲ. ಈ ವಿಷಯವನ್ನು ಮುಂಚಿತವಾಗಿ ಅವರಿಗೆ ತಿಳಿಸಿದ್ದರೂ ಕೂಡ ವಾಸುದೇವ ರಾವ್ ರವರಿಗೆ ಬಹಳ ನಿರಾಶೆಯಾಯಿತು. ಕಾರ್ಯಕ್ರಮ ಮುಗಿದ ಮೇಲೆ ದೂರವಾಣಿಯ ಮೂಲಕ ತಮ್ಮ ನಿರಾಶೆಯನ್ನು ತಿಳಿಸಿದರು. ಆ ಸಮಯದಲ್ಲಿ ಹರಿಕೃಷ್ಣರು ಸಾಹಿತ್ಯ ಪರಿಷತ್ತಿಗೆ ನೀವು ಒಂದು ದತ್ತಿಯನ್ನು ಯಾಕೆ ನೀಡಬಾರದು? ಎಂದು ಕೇಳಿಯೇಬಿಟ್ಟರು. ಅದಕ್ಕೆ ಅವರು ಪ್ರಯತ್ನಿಸುತ್ತೇನೆ ಅಂದರು. ಕೆಲವು ದಿನ ಬಿಟ್ಟು, ಆ ಹಿರಿಯರು ಒಂದು ದತ್ತಿನಿಧಿಯನ್ನು ಹರಿಕೃಷ್ಣರಿಗೆ ಕಳಿಸಿದರು. ತಮ್ಮಲ್ಲಿಗೆ ಒಮ್ಮೆ ಬರಬೇಕು ಎಂಬ ಅವರ ಕಳಕಳಿಯ ಮಾತು ಇತ್ತು.

ಈ ವ್ಯಕ್ತಿ ಇಷ್ಟು ಪ್ರೀತಿಯಿಂದ ಬನ್ನಿ ಅಂತ ಆಮಂತ್ರಿಸುತ್ತಾರಲ್ಲ. ಹಳ್ಳಿಯಲ್ಲಿ ಏನೋ ಮಾಡುತ್ತಿದ್ದೇವೆ ಅನ್ನುತ್ತಾರಲ್ಲ. ಒಮ್ಮೆ ಹೋಗಿ ನೋಡೋಣ ಅಂತ ಹರಿಕೃಷ್ಣರಿಗೆ ಮನಸ್ಸಾಯಿತು. ಅಲ್ಲಿಗೆ ಹೋದರು. ಅವರಿಗೆ ಬಹಳ ಸಂತೋಷವಾಯಿತು. ವಯಸ್ಸಾದ ಮನುಷ್ಯ; ಆದರೂ ಸೇವಾ ಮಹಿಮೆ. ಬಹಳ ಕಷ್ಟದಿಂದ ಆಶ್ರಮವನ್ನು ನಡೆಸುತ್ತಿದ್ದಾರೆ. ಎಲ್ಲವನ್ನೂ ವಿಚಾರಿಸಿದರು. ಆರ್ಥಿಕವಾದ ಗಟ್ಟಿ ಬಲವೇನೂ ಇರಲಿಲ್ಲ. ಅವರಲ್ಲಿದ್ದದ್ದು ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಸೇವಾ ಮನೋಭಾವ. ಆಶ್ರಮವನ್ನು ನಡೆಸುವುದಕ್ಕಾಗಿ ಅವರು ಪಡುತ್ತಿರುವ ಕಷ್ಟವನ್ನು ಕಂಡಾಗ ತಾನು ಸಾಹಿತ್ಯ ಪರಿಷತ್ತಿಗೆ ದತ್ತಿನಿಧಿಯನ್ನು ಇವರಲ್ಲಿ ಕೇಳಿದ್ದು ತಪ್ಪಾಯಿತು ಅಂತ ಅನ್ನಿಸಿತು. ಆ ದತ್ತಿನಿಧಿಯನ್ನು ಸಂಗ್ರಹಿಸಿಕೊಡಲು ತುಂಬಾ ಕಷ್ಟಪಟ್ಟಿದ್ದರು ಎಂಬುದು ಕೂಡಾ ಅವರಿಗೆ ಗೊತ್ತಾಯಿತು. ಅದನ್ನು ಹೇಳಿದಾಗ "ಇರಲಿ, ಸಾಹಿತ್ಯ ಪರಿಷತ್ತು ಜನರ ಒಳಿತಿಗಾಗಿಯೇ ಇರುವ ಸಂಸ್ಥೆಯಲ್ಲವೇ" ಎಂದು ಹೇಳಿದರು.

ದಕ್ಷಿಣ ಕನ್ನಡದಿಂದ ಬೆಂಗಳೂರಿಗೆ ಹೋಗಿ ಒಬ್ಬರು ಸ್ವಾಮಿಗಳಾದ ವಿಷಯವನ್ನು ಸೊಗಸಾಗಿ ಹೇಳುತ್ತಾರೆ. ಅವರು ಈ ಕಡೆಯ ವ್ಯಕ್ತಿಯೆ. ಮಕ್ಕಳಾಗದವರಿಗೆ ತಮ್ಮ ಮಂತ್ರಶಕ್ತಿಯಿಂದ ಮಕ್ಕಳ ಫಲವನ್ನು ದಯಪಾಲಿಸುವ ಸ್ವಾಮಿ ಎಂದೇ ಬೆಂಗಳೂರು ಕಡೆಯಲ್ಲಿ ಪ್ರಸಿದ್ಧಿ ಪಡೆದ ಈ ಸ್ವಾಮಿ ಮಾಡುವುದೇನು? ಇಲ್ಲಿ ಊರಿಗೆ ಬಂದು ಒಬ್ಬ ಆಯುರ್ವೇದ ವೈದ್ಯರಿಂದ ಔಷಧವನ್ನು

ತೆಗೆದುಕೊಂಡು ಹೋಗುವುದು. ಮಂತ್ರಿಸಿಕೊಟ್ಟು ಅದನ್ನು ತೆಗೆದುಕೊಳ್ಳುವಂತೆ ಹೇಳುವುದು. ಇದರಿಂದ ಕೆಲವರು ಸಂತಾನ ಪಡೆದದ್ದೂ ಇದೆ. ಇಂಥ ನಂಬಿಕೆಗಳನ್ನು ಸೃಷ್ಟಿಸಿ ಜನರನ್ನು ಮರುಳುಗೊಳಿಸಿ ಹೆಸರು ಮಾಡಿಕೊಂಡ ಈ 'ಸ್ವಾಮಿ' ಮಾಡುವ ಇನ್ನೊಂದು ಘನ ಕಾರ್ಯವೇನು ಗೊತ್ತೆ? ಹುಡುಗಿಯರ ಮಾರಾಟ. ಇದನ್ನು ಪ್ರಸ್ತಾಪಿಸುತ್ತ ಪುನರೂರು ಹೇಳುತ್ತಾರೆ- ನಮ್ಮ ಜನಗಳಲ್ಲಿ ಇನ್ನೂ ವೈಜ್ಞಾನಿಕ ತಿಳುವಳಿಕೆ ಇಲ್ಲ. ಮಂತ್ರ ಮಾಡಿಕೊಡುವುದರಿಂದ ಮಕ್ಕಳಾಗುತ್ತವೆ ಅನ್ನುವುದಾದರೆ ಮತ್ತೆ ಮದುವೆಯಾಗುವುದೇಕೆ? ಮಕ್ಕಳಾಗುವುದಕ್ಕೆ ವೈಜ್ಞಾನಿಕ ಪ್ರಕ್ರಿಯೆ ಇರುತ್ತದೆ. ಇದು ಜನಗಳಿಗೆ ಗೊತ್ತಿಲ್ಲ. ಜನರ ಈ ಅಜ್ಞಾನವನ್ನು 'ದೇವರು', 'ಮಂತ್ರ', 'ತಂತ್ರ' ಎಂಬ ಹೆಸರಿನಿಂದ ಇಂಥ ಜನಗಳು ಬಳಸಿಕೊಂಡು ಸಮಾಜದಲ್ಲಿ ಗೌರವ ಪಡೆಯುತ್ತಾರೆ. ಪ್ರತಿಷ್ಠೆ ಸ್ಥಾಪಿಸಿಕೊಳ್ಳುತ್ತಾರೆ, ಹಣ ದೋಚಿ ಮಜಾ ಮಾಡುತ್ತಾರೆ. ಇಂಥ ಕಡೆಗಳಲ್ಲೇ ಭಕ್ತಿ-ನಂಬಿಕೆಗಳ ದುರುಪಯೋಗವಾಗುತ್ತದೆ. ಜನಗಳು ಮಾತ್ರ ಇಂಥವರ ಬಲೆಗೆ ಬೀಳುತ್ತಲೇ ಇರುತ್ತಾರೆ. ಅದಕ್ಕಾಗಿ ಜನಗಳಲ್ಲಿ ಜಾಗೃತಿ ಮೂಡಿಸುವಂಥ ಕೆಲಸವನ್ನು ಸಂಘಟಿಸಬೇಕಾದ ಅಗತ್ಯವಿದೆ.

ಅವರು ಲಯನ್ಸ್ ಜಿಲ್ಲಾ ಗವರ್ನರ್ ಸ್ಥಾನಕ್ಕೆ ಸ್ಪರ್ಧಿಸಿದ ಸಂದರ್ಭ. ಚುನಾವಣಾ ಪ್ರಚಾರಕ್ಕಾಗಿ ಘಟ್ಟದ ಕಡೆಗೆ ತೆರಳಿದ್ದರು. ಅಲ್ಲಿ ಒಂದು ಹಳ್ಳಿ. ನೀರಿನ ಅಭಾವವಿತ್ತು. ಒಂದು ಕಡೆ ಸಣ್ಣ ಝರಿ ಇತ್ತು. ಕ್ಷೀಣವಾದ ಒರತೆ ಬರುತ್ತಿತ್ತು. ದಿನಕ್ಕೆ ನಾಲ್ಕಾರು ಕೊಡ ಅಷ್ಟೆ. ಆ ನೀರೇನೂ ಸಾಕಾಗುತ್ತಿರಲಿಲ್ಲ. ಹರಿಕೃಷ್ಣರು ಹೋಗುವ ದಾರಿಯಾಗಿತ್ತು ಅದು. ನೀರಿಗಾಗಿ ಅಲ್ಲಿ ನಿಂತ ಜನರನ್ನು ಕಂಡು ಏನೆಂದು ತಿಳಿಯಲು ಅಲ್ಲಿಗೆ ಬಂದರು. ಹೌದು, ಸಣ್ಣ ಒಸರು. ನೋಡೋಣ ಎಂದು ನೂಲಿನೆಳೆಯಂತೆ ಒಸರುತ್ತಿದ್ದ ಒರತೆಯ ಬಾಯಿಯನ್ನು ಕೈಯಿಂದ ಸ್ವಲ್ಪ ಬಿಡಿಸಿದರು. ಅದೇನು ಆಶ್ಚರ್ಯವೊ, ಒರತೆ ಕಾರಂಜಿಯಂತೆ ಒಮ್ಮೆಲೆ ಜೋರಾಗಿ ಚಿಮ್ಮತೊಡಗಿತು. ಜನಗಳಿಗಂತೂ ಹರಿಕೃಷ್ಣರು ಪವಾಡ ಪುರುಷರಾಗಿಯೇ ಕಂಡರು. ಆದರೆ ಹರಿಕೃಷ್ಣರು ಹೇಳುತ್ತಾರೆ ''ಅಲ್ಲಿ ಒರತೆ ಇತ್ತು. ಅದನ್ನು ಬಿಡಿಸಿದೆ ಅಷ್ಟೆ'' ಅವರು ಹೇಳಿದ್ದು ಸರಿಯೆ. ಆದರೂ ಆ ಕೆಲಸ ಮಾಡುವುದಕ್ಕೆ ಅಲ್ಲಿಗೆ ಅವರೇ ಬರಬೇಕಾಯಿತು, ಎಂಬುದು ವಿಶೇಷವೇ.

ಪ್ರಖ್ಯಾತ ಕ್ಷೇತ್ರ ಕೊಲ್ಲೂರಿನಲ್ಲಿ ನಡೆದದ್ದು ಇದು. ಇವರು ಅಲ್ಲಿಯ ಮೊಕ್ತೇಸರರಾಗಿದ್ದ ಸಮಯದಲ್ಲಿ ಘಟಿಸಿದ್ದು. ಮಧ್ಯಾಹ್ನದ ಸಮಯವಾಗುವಾಗ ಯಾರೋ ಒಬ್ಬ ಬಡ ಹೆಂಗಸನ್ನು ಕರೆತಂದರು. ಅವಳು ಪಾರ್ಶ್ವವಾಯು ಪೀಡಿತೆಯಾಗಿದ್ದಳು. ಔಷಧೋಪಚಾರವೆಲ್ಲ ಸಾಧ್ಯವಾದಷ್ಟು ಮಾಡಿದರೂ ಕಡಿಮೆಯಾಗಲಿಲ್ಲ. ಹತಾಶಳಾಗಿ ಬೇರೆ ಮಾರ್ಗ ಕಾಣದೆ ಕೊಲ್ಲೂರಿಗೆ ಬಂದಿದ್ದಳು. ಹರಿಕೃಷ್ಣರು ಆ ಸಮಯ ಅಲ್ಲೇ ಇದ್ದರು. ಆ ಹೆಂಗಸು ಇವರ ಬಳಿಗೆ ಬಂದು ತನ್ನ ಅವಸ್ಥೆಯನ್ನು ಹೇಳಿಕೊಂಡು ಅತ್ತಳು. ಆಗ ಹರಿಕೃಷ್ಣರು ''ನನ್ನಲ್ಲಿ ಹೇಳಿಕೊಂಡರೆ ಏನು ಪ್ರಯೋಜನ? ಆ ತಾಯಿಯಲ್ಲಿ ಬೇಡಿಕೋ'' ಅಂದರು. ಅವಳನ್ನು ದೇವಿಯ ಮುಂದೆ ಕರೆತಂದು ಅರ್ಚಕರನ್ನು ಕರೆದು,''ಪ್ರಾರ್ಥನೆ ಮಾಡಿ ಇವರಿಗೆ ಪ್ರಸಾದ ಕೊಡಿ. ಗುಣವಾದ ಮೇಲೆ ದೇವಿಗೆ ಒಂದು ಕಣವನ್ನು ಕೊಡುತ್ತಾಳೆ'' ಎಂದರು. ಅರ್ಚಕರು ಹಾಗೆಯೇ ಪ್ರಾರ್ಥನೆ ಮಾಡಿ ಪ್ರಸಾದ ಕೊಟ್ಟರು. ಅದನ್ನು ಸ್ವೀಕರಿಸಿ ಆ ಹೆಂಗಸು ಮನೆಗೆ ಹೋದಳು. ಕೆಲವು ದಿನ ಬಿಟ್ಟು ಪುನಃ ಅವಳೇ ಬಂದಳು. ಈಗ ಸರಿಯಾಗಿದ್ದಳು. ಹರಿಕೃಷ್ಣರನ್ನು ಕಂಡು ''ಈಗ ನನಗೆ ಆರೋಗ್ಯ ಸರಿಯಾಗಿದೆ. ತಾವು ಪ್ರಾರ್ಥನೆ ಮಾಡಿಕೊಂಡಂತೆ ಆ ಸೇವೆಯನ್ನು ಸಲ್ಲಿಸಲು ಬಂದಿರುವೆ'' ಎಂದಳಂತೆ.

ಒಮ್ಮೆ ತಿರುವಾಂಕೂರಿನಿಂದ ಕುಟುಂಬವೊಂದು ಮಣಿಪಾಲಕ್ಕೆ ಬಂದಿತ್ತು. ಆ ಕುಟುಂಬದ

ವ್ಯಕ್ತಿಯೊಬ್ಬರು ಕ್ಯಾನ್ಸರ್‌ಗೊಳಗಾಗಿದ್ದರು. ಚಿಕಿತ್ಸೆಗಾಗಿ ಬಂದಿದ್ದರು. ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಹೊರಬರುವಾಗ ಕೈಯಲ್ಲಿ ಖಾಲಿ. ದೂರದೂರಿಂದ ಬಂದವರು. ಆಸ್ಪತ್ರೆಯಲ್ಲಿ ನಮ್ಮ ಸಮಸ್ಯೆ ಹೇಳಿಕೊಂಡರೆ ನಡೆಯುತ್ತದೆಯೇ? ಇಲ್ಲ. ಆದರೆ ಇಲ್ಲಿ ಪರಿಚಯದವರಾರೂ ಇಲ್ಲ. ತಂದ ಹಣ ಆಸ್ಪತ್ರೆಯ ಬಿಲ್‌ಗೆ ಸಂದಾಯ ಆಯಿತು. ಆಸ್ಪತ್ರೆಗೆ ಬರುವಾಗ ಬಿಲ್ ಇಂತಿಷ್ಟೇ ಆಗುತ್ತದೆ ಎಂದು ಲೆಕ್ಕ ಹಾಕಿ ಹಣ ತರಲು ಸಾಧ್ಯವೆ? ಕೊನೆಗೆ ಬಿಲ್ ಕೊಟ್ಟ ಮೇಲೆ ಅಲ್ಲವೆ ತಿಳಿಯುವುದು? ಊರಿಗೆ ಹೋಗಿ ತಲುಪಲು ಬಸ್ಸಿಗೆ ಹಣವಿಲ್ಲ. ಹೇಗೆ ಹೇಗೋ ಮಂಗಳೂರಿಗೆ ಬಂದು ತಲುಪಿದರು. ಮುಂದಿನ ಪ್ರಯಾಣಕ್ಕೆ ಕೈಯಲ್ಲಿ ಪೈಸೆಯಿಲ್ಲ. ಏನು ಮಾಡುವುದೆಂದು ತಿಳಿಯದೆ ಬಸ್ ನಿಲ್ದಾಣದಲ್ಲಿ ಪರದಾಡುತ್ತಿದ್ದರು. ಈ ವಿಚಾರ ಹರಿಕೃಷ್ಣರಿಗೆ ತಿಳಿಯಿತು. ಆ ಸಮಯ ಅವರು ತಮ್ಮ ಹೋಟೇಲ್ ಸ್ವಾಗತ್‌ದಲ್ಲೇ ಇದ್ದರು. ಕೂಡಲೇ ಈ ಕುಟುಂಬದವರನ್ನು ಕರೆದು ಹೋಟೇಲಲ್ಲಿ ಊಟೋಪಚಾರ ಮಾಡಿಸಿದರು ಮತ್ತು ಊರು ತಲುಪಲು ಖರ್ಚಿಗೆ ಬೇಕಾಗುವಷ್ಟು ಹಣವನ್ನು ಅವರ ಕೈಗಿತ್ತರು. ಕಂಗೆಟ್ಟವರಿಗೆ ದಾರಿ ಸಿಕ್ಕಿತು. ಆ ಸಂತ್ರಸ್ತ ಕುಟುಂಬದ ಸುರಕ್ಷಿತವಾಗಿ ಊರು ತಲುಪಿತು.

ಮೂಲ್ಕಿಯ ಬಳಿ ಒಮ್ಮೆ ಪೋಲೀಸರು ವ್ಯಕ್ತಿಯೊಬ್ಬನನ್ನು ಏನೋ ತಪ್ಪು ಮಾಡಿದ ಎಂದು ಹಿಡಿದು ತಮ್ಮ ಪೋಲೀಸ್ ಜೀಪಿನಲ್ಲಿ ರಸ್ತೆಯಲ್ಲೇ ಬಡಿಯುತ್ತಿದ್ದರು. ಹೊಡೆದಲ್ಲಿ ರಕ್ತ ಒಡೆಯುತ್ತಿತ್ತು. ಇದನ್ನು ಕಂಡ ಹರಿಕೃಷ್ಣರಿಗೆ ಹೇಯ ಅನ್ನಿಸಿತು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲು ಕೋರ್ಟ್ ಇದೆಯಲ್ಲ. ಅಂಥ ವ್ಯಕ್ತಿಗಳನ್ನು ಹಿಡಿದು ಕೋರ್ಟಿಗೆ ಒಪ್ಪಿಸುವುದಷ್ಟೇ ಪೋಲೀಸರ ಕೆಲಸ. ಆದರೆ ತಪ್ಪು ಸಾಬೀತಾಗುವ ಮೊದಲೇ ಅಮಾನವೀಯವಾಗಿ ಥಳಿಸುವುದು ಸರಿಯೆ? ಅದೂ ಸಾರ್ವಜನಿಕರ ಮುಂದೆ? ಪೋಲೀಸರಲ್ಲಿ ಇದನ್ನು ಪ್ರಶ್ನಿಸುವವರು ಯಾರು? ಹರಿಕೃಷ್ಣರು ಅಲ್ಲಿಗೆ ಬಂದು ‘ಈ ರೀತಿ ಹೊಡೆಯಬೇಡಿ ಬೇಕಾದರೆ ಬಂಧಿಸಿ ಕೋರ್ಟಿಗೆ ಒಪ್ಪಿಸಿ. ನೀವೇ ಈ ರೀತಿ ಕ್ರಮ ಕೈಗೆ ತೆಗೆದುಕೊಳ್ಳುವುದು ಕಾನೂನು ರೀತಿಯಲ್ಲೂ ತಪ್ಪಲ್ಲವೆ?’ ಎಂದು ಕೇಳಿದರು. ಆಮೇಲೆ ಪೋಲೀಸರು ಆ ವ್ಯಕ್ತಿಯನ್ನು ಬಿಟ್ಟರು.

ಚೈತನ್ಯದ ಅಗ್ನಿಕಣ

ಬಿ.ಎಸ್. ಕುರ್ಕಾಲ್

ಹಿಮಗಿರಿಯೊಳವಿತಿಹುದು ಚೈತನ್ಯದಗ್ನಿಕಣ
ಸ್ತಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ
ಶಮದ ಸುಂದರದ ಸಾತ್ತ್ವಿಕದ ಗಾಂಭೀರ್ಯವದು
ನಮಗೊಂದು ವೇದನಿಧಿ - ಮಂಕುತಿಮ್ಮ

ಡಿ.ವಿ.ಜಿ.ಯವರ ಈ ಸಾಲುಗಳ ಭಾವಾರ್ಥ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಮೇರು ವ್ಯಕ್ತಿತ್ವಕ್ಕೆ ಅತ್ಯಂತ ನಿಕಟವಾಗುತ್ತದೆ.



ಹಿಮಗಿರಿಯಂತೆಯೇ ನಮ್ಮ ಪುನರೂರು. ಸಾಧನೆಯ ಸಂಪನ್ನತೆಗೆ ಮತ್ತೊಂದು ಹೆಸರು. ಅವರಲ್ಲಿ ಪ್ರಚಂಡ ಕ್ರಿಯಾಶಕ್ತಿಯಿದೆ. ಭವ್ಯ ವ್ಯಕ್ತಿತ್ವದೊಂದಿಗೆ ಸಾಮಾಜಿಕ ಕಳಕಳಿಯಿದೆ. ದಲಿತರ, ದುಃಖಿತರ, ಶೋಷಿತರ ನೋವಿಗೆ ಸ್ಪಂದಿಸುವ ಹೃದಯವಂತಿಕೆಯಿದೆ. ಅನ್ಯಾಯವನ್ನು ಕಂಡು ಸಿಡಿದೇಳುವ ಅಗ್ನಿಕಣವಿದೆ. ದುರ್ಬಲರ ಪರವಾಗಿ ಹೋರಾಡುವ ಮನೋಬಲವಿದೆ. ಅಳಿಮನದ ಮಂದಿಯ ವಾಗ್ಬಾಳಿಗೆ, ಟೀಕೆ ಟಿಪ್ಪಣಿಗಳಿಗೆ ಸೊಪ್ಪು ಹಾಕದೆ ಮುನ್ನಡೆವ ಸ್ಥಿತಪ್ರಜ್ಞತೆಯಿದೆ. ಪರಪೀಡಕರ ಅನ್ಯಾಯಕ್ಕೆ ಬಲಿಪಶುಗಳಾದವರ ಪಾಲಿಗೆ ವೇದನಿಧಿ ಯಾಂತಿದ್ದಾರೆ ನಮ್ಮ ಪುನರೂರು.

'ಮನುಷ್ಯನೊಂದಿಗೆ ಇದ್ದು ನೋಡಬೇಕು; ನೀರಿನಲ್ಲಿ ಇಳಿದು ನೋಡಬೇಕು' ಎಂಬ ಮಾತೊಂದಿದೆ. ದಂತಗೋಪುರದಲ್ಲಿ

ನಂ.4, 'ಶ್ರೀರಾಮ ನಿವಾಸ' ಗೋವಂಡಿ(ಪೂರ್ವ) ಮುಂಬೈ-400 088

ಕುಳಿತವರಿಗೆ ದೀನ ದಲಿತರ ನೋವು ನಲಿವುಗಳ ಅರ್ಥವಾಗಲಾರದು.

ಹರಿಕೃಷ್ಣ ಪುನರೂರು ಅವರ ವ್ಯಕ್ತಿತ್ವದ ಮೌಲ್ಯ ಮಾಪನ ಮಾಡಬೇಕಾದರೆ ಅವರನ್ನು ಹತ್ತಿರದಿಂದ ನೋಡಬೇಕು. ಅವರ ದಿನಚರಿಯ ಕುರಿತು, ಕೆಲಸ ಕಾರ್ಯಗಳ ಕುರಿತು ಪ್ರಾಮಾಣಿಕ ಅಧ್ಯಯನ ನಡೆಸಬೇಕು. ಆಗ ಮಾತ್ರ ಅವರ ಔದಾರ್ಯದ, ಹೃದಯ ವೈಶಾಲ್ಯದ ಸ್ಪಷ್ಟ ಚಿತ್ರ ಗೋಚರಿಸಬಹುದು. ಆದರೆ ಮಾನವನ ಇಂದಿನ ಧಾವಂತ ಬದುಕಿನಲ್ಲಿ ಅದಕ್ಕೆಲ್ಲ ಸಮಯ, ವ್ಯವಧಾನ ಎಲ್ಲಿದೆ? ದೂರದಲ್ಲಿ ನಿಂತು ಪೂರ್ವಾಗ್ರಹಪೀಡಿತರಾಗಿ ನೋಡಿ 'ಅವರು ಹಾಗೆ- ಇವರು ಹೀಗೆ' ಎಂದು ತಮ್ಮಷ್ಟಕ್ಕೆ ತಾವೇ ನಿರ್ಧಾರಕ್ಕೆ ಬಂದು, ಆಧಾರವಿಲ್ಲದ ನಾಲಿಗೆಯನ್ನು ಹರಿಯಬಿಡುವಂಥ ವ್ಯಕ್ತಿಗಳೂ ಅಪರೂಪಕ್ಕೊಮ್ಮೆ ಮುಖಾಮುಖಿಯಾಗುತ್ತಾರೆ. ಕಣ್ಣಿದ್ದೂ ಕುರುಡರಂತಿರುವ ಅಂಥ ವ್ಯಕ್ತಿಗಳ ಕುರಿತು ಕನಿಕರ ಪಡಬೇಕಾಗಿದೆ.

ಪುನರೂರು ಅವರನ್ನು ಹಲವಾರು ಸಲ ಹತ್ತಿರದಿಂದ ಕಂಡಿದ್ದೇನೆ. ಅವರ ಔದಾರ್ಯ, ಹೃದಯ ವೈಶಾಲ್ಯಗಳನ್ನು ಅರ್ಥೈಸಿಕೊಂಡಿದ್ದೇನೆ.

ವಿದ್ಯಾಪ್ರಸಾರದಲ್ಲಿ ಅವಿಭಜಿತ ದ.ಕ. ಜಿಲ್ಲೆ ಕರ್ನಾಟಕ ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಆ ಯಶಸ್ಸಿನ ಸಿಂಹಪಾಲು ಖಾಸಗಿ ಶಾಲೆಗಳ ಸಂಸ್ಥಾಪಕರಿಗೆ ಸಲ್ಲುತ್ತದೆ. ತಮ್ಮ ಸ್ವಂತ ಪಟ್ಟಾ ಜಾಗದಲ್ಲಿ ಹಲವಾರು ದಶಕಗಳ ಹಿಂದೆಯೇ ಶಾಲೆಗಳನ್ನು ಕಟ್ಟಿ ನಡೆಸುತ್ತಾ ಬರುತ್ತಿದ್ದ ಸಂಚಾಲಕರಿಗೆ ಶಾಲೆಯ ಖರ್ಚು ವೆಚ್ಚಗಳಿಗೆಂದು ಸರಕಾರ ಅನುದಾನವನ್ನು ನೀಡುತ್ತಿತ್ತು. ಆದರೆ ಕೆಲವು ವರ್ಷಗಳ ಹಿಂದೆ ಆ ಅನುದಾನವನ್ನು ಸರಕಾರ ನಿಲ್ಲಿಸಿಬಿಟ್ಟಾಗ ಸಂತ್ರಸ್ತರಾದ ಸಂಚಾಲಕರ ಪರವಾಗಿ ಹೋರಾಡಲು, ಸರಕಾರಕ್ಕೆ ಮನವಿ ಸಲ್ಲಿಸಲು ಯಾರೂ ಇಲ್ಲದ ಪರಿಸ್ಥಿತಿ ಉಂಟಾಯಿತು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಭಯ ನೀಡಿ ನೆರವಾಗಲು ಬಂದವರು ಪುನರೂರು ಅವರು.

ಪುನರೂರು ಅವರ ನೇತೃತ್ವದಲ್ಲಿ ದ.ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮ್ಯಾನೇಜರರ ಸಂಘವನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಸಭೆ ಕರೆಯಲಾಯಿತು. ಮೂಲ್ಕಿಯ 'ಶುಭವಾಗಲಿ' ವಠಾರದಲ್ಲೇ ಕರೆದ ಸಭೆಗೆ ಬಂದವರಿಗೆಲ್ಲಾ ಊಟ ಉಪಾಹಾರದ ಏರ್ಪಾಡು ಪುನರೂರು ಅವರಿಂದಲೇ ಆಯಿತು. ಆದರೆ ಅವರ ಉತ್ಸಾಹ, ಆತ್ಮವಿಶ್ವಾಸದ ವೇಗದ ನಡಿಗೆಯೊಂದಿಗೆ ಹೆಜ್ಜೆಯಿಡುವಲ್ಲಿ ಸದಸ್ಯರು ವಿಫಲರಾದರು. ಅಷ್ಟರಲ್ಲಿ ದ.ಕ.ಜಿಲ್ಲೆಯ ವಿಭಜನೆಯಾಗಿ, ಸಂಘದ ಚಟುವಟಿಕೆ ತಣ್ಣಗಾಗಿ ಹೋಯಿತು.

ಹರಿಕೃಷ್ಣ ಪುನರೂರು ಅವರು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಜರಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸು ಅವರ ಸಂಘಟನಾ ಶಕ್ತಿಗೆ ಕನ್ನಡಿಯಾಯಿತು. ಅನಂತರ ಅವರಿಗೆ ಕರ್ನಾಟಕ ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿ ಸಹಜವಾಗಿ ದೊರೆಯಿತು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವರು ಮಾಡಿದ ಸುಧಾರಣೆ, ಬೆಳಗಾವಿ, ಮೂಡಬಿದಿರೆಗಳಲ್ಲಿ ಸಂಘಟಿಸಿದ ಸಾಹಿತ್ಯ ಸಮ್ಮೇಳನಗಳ ಯಶಸ್ಸು ಈಗ ಇತಿಹಾಸ. ಸಮ್ಮೇಳನದ ವೇಳೆಯ ಪೀಠದಲ್ಲಿ ಮಿಂಚಿ ಮರೆಯಾಗುವ ಆಸನ ಪ್ರಿಯರಾಗದೆ ಸಾಮಾನ್ಯ ಸ್ವಯಂ ಸೇವಕನಂತೆ ಪ್ರತಿನಿಧಿಗಳ ಬಳಿಗೆ ಬಂದು ಕೈ ಕುಲುಕುತ್ತಾ ಕುಶಲ ಸಂಭಾಷಣೆ ನಡೆಸುತ್ತಾ ಪಾದರಸದಂತೆ ರಪರಪನೆ ಓಡಾಡುತ್ತಿದ್ದ ನೋಟ ಮರೆಯಲಾಗದ ಸವಿನೆನಪಾಗಿ ಉಳಿಯುವಂತಹದು. ಅಧ್ಯಕ್ಷತನದ ಶ್ರೀಮದ್ಗಾಂಭೀರ್ಯ ಪ್ರದರ್ಶಿಸದೆ ಸಾಮಾನ್ಯರೊಂದಿಗೆ ಬೆರೆಯುತ್ತಿದ್ದ ಪುನರೂರು, ಮುಂದಿನ ಅಧ್ಯಕ್ಷರುಗಳಿಗೆ ನಾಯಕನೆಂದರೆ ಹೀಗಿರಬೇಕು ಎಂದು ಮಾರ್ಗದರ್ಶನ ಮಾಡಿದ್ದಾರೆ.

ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ
ಶುದ್ಧಿಸದೆ ನಭಧರೆಯ ಮರಮರಳಿ ಮಳೆಯಿಂ?
ಗದ್ದೆ ಕೊಯ್ಲಾಗೆ ಮಗುಳದು ಬೆಳೆಯ ಕೊಡದಿಹುದೆ?
ಬಿದ್ದ ಮನೆಯನು ಕಟ್ಟೊ – ಮಂಕುತಿಮ್ಮ

ಮಾನವನ ಪುರುಷಾರ್ಥವಿರುವುದು ಬಿದ್ದವರನ್ನು ಎತ್ತುವಲ್ಲಿ; ಕುಸಿದ ಸೌಧವನ್ನು ಮರಳಿ ಕಟ್ಟುವಲ್ಲಿ. ಕೊಳೆ ಕೊಚ್ಚೆಗಳಿಂದ ಮಲಿನವಾದ ವಸುಂಧರೆಯನ್ನು ತೊಳೆತೊಳೆದು ಶುಚಿಗೊಳಿಸುವ ಕಾಯಕವನ್ನು ಆಕಾಶ ಮಾಡುತ್ತದೆ. ಅದಕ್ಕಾಗಿ ಮತ್ತೆ ಮತ್ತೆ ಮಳೆ ಸುರಿಸುತ್ತಲೇ ಇರುತ್ತದೆ. ಒಮ್ಮೆ ಫಸಲು ನೀಡಿದ ಹೊಲವು ಅನಂತರ ಬಂಜರಾಗುವುದಿಲ್ಲ. ಪದೇ ಪದೇ ಫಲವನ್ನು ಕೊಡುತ್ತಲೇ ಇರುತ್ತದೆ. ಹೊಲ ಹಳತಾದಂತೆ ಅದರ ಫಲವತ್ತತೆಯೂ ಹೆಚ್ಚುತ್ತಲೇ ಹೋಗುತ್ತದೆ. ಅದಕ್ಕಾಗಿ ನಾವು ನಿಂತ ನೆಲಕ್ಕೆ ಸದಾ ಋಣಿಯಾಗಿರಬೇಕು. ಅದು ನಮ್ಮ ಪವಿತ್ರ ಕರ್ತವ್ಯವೂ ಹೌದು.

ಆದರೆ ಇಂತಹ ದಿವ್ಯ ತತ್ತ್ವವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವವರ ಸಂಖ್ಯೆ ಈಗ ವಿರಳವಾಗುತ್ತಿದೆ. ಇಂದು ಆಸುರೀಶಕ್ತಿಗಳು ಅಲ್ಲಲ್ಲಿ ಹೆಡೆ ಎತ್ತುತ್ತಲಿವೆ. ಅನ್ನ ಉಂಡ ಮನೆಗೇ ಕನ್ನ ಹಾಕುವ ಭಂಡತನ ಅವುಗಳದ್ದು. ದೋಚುವಷ್ಟು ದೋಚಿದ್ದಾಯಿತು. ಬಾಚುವಷ್ಟು ಬಾಚಿದ್ದಾಯಿತು. ಇನ್ನು ಇದು ಹಾಳಾಗಿ ಹೋಗಲಿ ಅಥವಾ ಮುಚ್ಚಲ್ಪಡಲಿ ಎನ್ನುವ ಮನೆ ಮುರುಕರು ಕೆಲವೊಮ್ಮೆ ಕಾಣಸಿಗುತ್ತಾರೆ.

ಸ್ವಾತಂತ್ರ್ಯಪೂರ್ವದಲ್ಲಿ ನಿರಕ್ಷರಕುಕ್ಷಿಗಳೇ ತುಂಬಿದ್ದ ಕುಗ್ರಾಮವಾಗಿದ್ದ ಕುರುಕಾಲಿನಲ್ಲಿ ವಿದ್ಯಾಸಂಸ್ಥೆಗಳನ್ನು ಕಟ್ಟಿದವರು ದಿ|| ಕುರುಕಾಲು ಗಣಪಯ್ಯ ಶೆಟ್ಟರು. ಪಂಜೆ ಮಂಗೇಶರಾಯರ ಪ್ರೀತಿಯ ಶಿಷ್ಯರಾಗಿದ್ದ ಅವರು ಇಲ್ಲಿ ಶಾಲೆ ತೆರೆಯಲು ಗುರುಗಳಿಂದಲೇ ಆದೇಶ-ಆಶೀರ್ವಾದ ಪಡೆದಿದ್ದರು. ಇಲ್ಲಿಗೆ ಜ್ಞಾನಾರ್ಥಿಗಳಾಗಿ ದೂರದ ಊರುಗಳಿಂದಲೂ ಹುಡುಗರು ಬರುತ್ತಿದ್ದರು. ಅಂಥವರಲ್ಲಿ ಮುಂದೆ ವಿಶ್ವವಿಖ್ಯಾತ ಕಲಾವಿದರಾಗಿ ಕೀರ್ತಿ ಪಡೆದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರರೂ ಒಬ್ಬರು.

80 ವರ್ಷಗಳ ಹಿಂದೆ ಕುರುಕಾಲು ಗಣಪಯ್ಯ ಶೆಟ್ಟರು ಸ್ಥಾಪಿಸಿದ್ದ ಶ್ರೀ ಕುಂಜಾರು ಗಿರಿಜಾ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಪ್ರಗತಿ ಪಥದಲ್ಲಿ ಸಾಗುತ್ತಾ ಪರಿಸರದ ಜನತೆಗೆ ಅರಿವಿನ ಬೆಳಕನ್ನು ನೀಡುತ್ತಾ ಕೀರ್ತಿ ಪಡೆದಿತ್ತು. ಸರ್ವಶ್ರೀ ಪಂಜೆ ಮಂಗೇಶರಾವ್, ಉಳ್ಳಾಲ ಮಂಗೇಶರಾವ್, ಡಾ|| ಟಿ.ಎಮ್.ಎ. ಪೈ, ಮೊಳಹಳ್ಳಿ ಶಿವರಾವ್, ಟಿ. ಅನಂತ ಪೈ ಮೊದಲಾದ ಖ್ಯಾತನಾಮರನ್ನು ತನ್ನೆಡೆಗೆ ಆಕರ್ಷಿಸಿ, ಅವರಿಂದ ಮೆಚ್ಚುಗೆ ಗಳಿಸಿದ್ದ ಈ ಶಾಲೆ ಕಳೆದೊಂದು ದಶಕದಿಂದ ಕಳಾಹೀನವಾಗಿ ಕುಂಟುತ್ತಾ ಬಂದುದನ್ನು ಊರ ಜನತೆ ಕಳವಳದಿಂದ ನೋಡುತ್ತಿದ್ದರು.

ರಾಹು-ಕೇತುಗಳಿಂದ ಗ್ರಹಣ ಪೀಡಿತ ರವಿ-ಶಶಿಗಳಂತೆ ಶಾಲೆಯ ಪರಿಸ್ಥಿತಿ. ಮೊದಲಿನ ಮುಖ್ಯೋಪಾಧ್ಯಾಯರು ನಿವೃತ್ತರಾದ ಮೇಲೆ ಆ ಸ್ಥಾನಕ್ಕೆ ಲಗ್ಗೆ ಹಾಕಿದ ವ್ಯಕ್ತಿಯೊಬ್ಬ ತನ್ನ ಸಹೋದ್ಯೋಗಿಯೊಬ್ಬನೊಂದಿಗೆ ಸೇರಿಕೊಂಡು ಶಾಲೆಯ ಸ್ಥಿತಿಯನ್ನು ಮೂರಾಬಟ್ಟೆ ಮಾಡತೊಡಗಿದಾಗ ಶಾಲಾ ಸಂಚಾಲಕಿಯಾಗಿದ್ದ ಹಿರಿಯ ಮಹಿಳೆಗೆ ದಿಕ್ಕೇ ತೋಚದಾಯಿತು.

ಈ ಇಬ್ಬರೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯಲೊಪ್ಪದ ಜೂನಿಯರ್ ಶಿಕ್ಷಕರಿಬ್ಬರನ್ನು ಶಾಲೆಯಿಂದ ಎತ್ತಂಗಡಿ ಮಾಡಲು ನಾನಾ ಹೂಟಗಳನ್ನು ಹೂಡತೊಡಗಿದರು. ಮಕ್ಕಳ ಒಟ್ಟು ಸಂಖ್ಯೆ ಕಡಿಮೆಯಾದರೆ ಸರಕಾರದ ಕಾನೂನಿನಂತೆ ಹೆಚ್ಚುವರಿ ಶಿಕ್ಷಕರು ಶಾಲೆಯಿಂದ ಹೋಗಲೇಬೇಕಾಗುತ್ತದೆ. ಅದಕ್ಕಾಗಿ ವಿವಿಧ ಕಾರಸ್ಥಾನಗಳನ್ನು ಆರಂಭಿಸಿದರು.

''ಈ ಶಾಲೆ ಸದ್ಯದಲ್ಲೇ ಮುಚ್ಚಲ್ಪಡುತ್ತದೆ. ನಿಮ್ಮ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಿರಿ. ಇಲ್ಲದೆ ಹೋದರೆ ಅವರ ಭವಿಷ್ಯಕ್ಕೆ ತೊಂದರೆಯಾದೀತು'' ಎಂದು ಪಾಲಕರನ್ನೂ, ವಿದ್ಯಾರ್ಥಿಗಳನ್ನೂ ಹೆದರಿಸತೊಡಗಿದರು. ಮಕ್ಕಳನ್ನು ಕರೆಕರೆದು ಅವರ ಸರ್ಟಿಫಿಕೇಟುಗಳನ್ನು ಕೊಟ್ಟು ಕಳುಹಿಸುತ್ತಿರುವುದನ್ನು ಜನತೆ ಅಸಹಾಯಕವಾಗಿ ನೋಡುವಂತಾಯಿತು.

ಶಾಲೆಯ ಪಾಠೇತರ ಚಟುವಟಿಕೆಗಳೂ ಒಂದೊಂದಾಗಿ ನಿಲ್ಲುತ್ತಾ ಬಂದವು. ಶೈಕ್ಷಣಿಕ ಪ್ರವಾಸವಿಲ್ಲ. ಏಳನೆಯ ತರಗತಿಯ ಮಕ್ಕಳ ವಿದಾಯ ಕೂಟವಿಲ್ಲ. ಇವೆಲ್ಲ ಸಾಲದೆಂಬಂತೆ ಗಣರಾಜ್ಯೋತ್ಸವ

ದಿನಾಚರಣೆ ನಡೆಸದೆ ರಾಷ್ಟ್ರಧ್ವಜವನ್ನೂ ಅರಳಿಸದೆ ಶಾಲೆಗೆ ರಜೆ ಸಾರಿ ತನ್ನ ಖಾಸಗಿ ಉದ್ಯಮ ನಡೆಸಲು ಹೊರಟುಹೋಗಿದ್ದರು ಮುಖ್ಯೋಪಾಧ್ಯಾಯರು.

ಶಾಲಾ ಸಂಚಾಲಕರಾದ ಹಿರಿಯ ಮಹಿಳೆಯ ಮೇಲೆ ಸುಳ್ಳು ಆರೋಪಗಳ ಸರಮಾಲೆಯನ್ನೇ ಸೃಷ್ಟಿಸುತ್ತಾ ಬೇನಾಮಿ ಅರ್ಜಿಗಳನ್ನು ಕೆಲವೊಮ್ಮೆ ಸತ್ತವರ ಹೆಸರಲ್ಲೂ- ಬರೆದು ಪುಂಖಾನುಪುಂಖವಾಗಿ ಮೇಲಧಿಕಾರಿಗಳಿಗೆ ಕಳುಹಿಸುವ ಕಾಯಕವನ್ನು ನಡೆಸುತ್ತಲೇ ಇರುವಾಗ, ಶಾಲೆಯ ಹಾಗೂ ಶಾಲಾ ಸಂಚಾಲಕರ ಹಿತಚಿಂತಕರೂ ಬರೇ ಬಾಯ್ಮಾತಿನ ಸಹಾನುಭೂತಿ ವ್ಯಕ್ತಪಡಿಸುತ್ತಾ ತಣ್ಣಗಾದರು. ಯಾಕೆಂದರೆ ಅದಾಗಲೇ ಹೇರಳ ಹಣ ಸಂಪಾದಿಸಿ ಕೊಬ್ಬಿ ಪ್ರಬಲರಾಗಿದ್ದ ಮುಖ್ಯೋಪಾಧ್ಯಾಯರು ಅನೇಕರನ್ನು- ಅಧಿಕಾರಿಗಳನ್ನೂ- ತನ್ನ ಬುಟ್ಟಿಯಲ್ಲಿ ಹಾಕಿಕೊಂಡು ಮೆರೆದಾಡುತ್ತಿದ್ದರು.

ಹೀಗೆ ಮುಳುಗುತ್ತಿದ್ದ ವಿದ್ಯಾಮಂದಿರವನ್ನು ಎತ್ತಿ ಹಿಡಿಯುವವರು ಬೇರೆ ಯಾರೂ ಇಲ್ಲದೆ ಹೋದಾಗ ಆಪದ್ಬಾಂಧವನಂತೆ ಧಾವಿಸಿಬಂದವರು ಪುನರೂರು ಅವರು. ಎಲ್ಲಾ ವಿದ್ಯಮಾನಗಳನ್ನೂ ಕೂಲಂಕಷವಾಗಿ ತಿಳಿದುಕೊಂಡ ಅವರು ಶಾಲೆಯ ರಕ್ಷಣೆಗೆ ಬಂದು ಹಿಮಗಿರಿಯಂತೆ ಭದ್ರವಾಗಿ ನಿಂತರು. ಕೂಡಲೇ ಶಾಲಾ ಸಂಚಾಲಕತ್ವವನ್ನು ವಹಿಸಿಕೊಂಡು ''ನೀವೇನೂ ಚಿಂತಿಸಬೇಡಿ. ಈ ಶಾಲೆಗೆ ತಗಲಿದ ಕೊಳೆ ಕೊಚ್ಚೆಗಳನ್ನು ತೊಳೆಯುವ ಕೆಲಸ ನಾನು ಮಾಡುತ್ತೇನೆ. ಕೊನೆಗೆ ಸತ್ಯಕ್ಕೆ ಜಯ ಸಿಗಲೇಬೇಕು'' ಎಂದು ಧೈರ್ಯ ಹೇಳುತ್ತಾ ಕಾರ್ಯಪ್ರವೃತ್ತರಾದರು.

ಕೊನೆಗೂ ಸತ್ಯಕ್ಕೆ ಜಯ ದೊರೆಯಿತು. ವಿಘ್ನ ಸಂತೋಷಿಗಳ ಕುಟಿಲ ಕಾರಸ್ಥಾನ ಅವರಿಗೇ ಮುಳುವಾಯಿತು. ಹೇಗಾದರೂ ತಮ್ಮ ಕೆಲಸ ಉಳಿದರೆ ಸಾಕು ಎಂದು ಅವರಿಗೆ ಅನಿಸಿರಬೇಕು. ಹಾಗೆ ಒಂದು ದಿನ ಅವಸರವಸರದಲ್ಲಿ ಕಿರಿಯ ಶಿಕ್ಷಕರೊಬ್ಬರಿಗೆ ಅಧಿಕಾರ ವಹಿಸಿಕೊಟ್ಟು, ಇಬ್ಬರೂ ಬೇರೆ ಬೇರೆ ಶಾಲೆಗಳಿಗೆ ಹೋಗಿ ಸೇರಿಕೊಂಡರು.

ಗ್ರಹಣಗ್ರಸ್ತವಾಗಿದ್ದ ವಿದ್ಯಾಮಂದಿರಕ್ಕೆ ಕೊನೆಗೂ ಬಿಡುಗಡೆ ದೊರೆಯಿತು. ಮತ್ತೊಮ್ಮೆ ಪರಿಶುದ್ಧ ಪರಿಸರದ ನಿರ್ಮಾಣವಾಯಿತು. ಹೀಗೆ ಕುಸಿಯುತ್ತಿದ್ದ ಶೈಕ್ಷಣಿಕ ಸಂಸ್ಥೆಯನ್ನು ಮರಳಿ ಎದ್ದು ನಿಲ್ಲಿಸಿದ ಶ್ರೇಯವನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರದಾಯಿತು. ಇಂತಹ ಆಪದ್ಬಾಂಧವನನ್ನು ಶಾಲಾ ಸ್ಥಾಪಕ ಕುರುಕಾಲು ಗಣಪಯ್ಯ ಶೆಟ್ಟರ ಕುಟುಂಬಿಕರೂ ಊರ ಜನತೆಯೂ ಸದಾ ಕತಜ್ಞತೆಯಿಂದ ಸ್ಮರಿಸುವಂತಾಯಿತು. ಪುನರೂರು ಅವರ ಸಹೃದಯತೆ, ನ್ಯಾಯಪ್ರಿಯತೆ, ಸಹಕಾರ-ಸಾಹಸಗಳ ಯಶೋಗಾಥೆ ಶಾಲೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಶೋಭಿಸುವಂತಾಯಿತು.

ಕಾರಿರುಳೊಳಾಗಸದಿ ತಾರೆ ನೂರಿದ್ದೇನು?
ದಾರಿಗನ ಕಣ್ಗೆ ಬೇಕೊಂದು ಮನೆ ಬೆಳಕು
ದೂರದಾದೈವವಂತಿರಲಿ ಮಾನುಷಸುಖನ
ಕೋರುವುದು ಬಡಜೀವ- ಮಂಕುತಿಮ್ಮ

ಭಾಗ: ಎರಡು
ಹೀಗಿದ್ದಾರೆ ಪುನರೂರು

ಎತ್ತರದವರು

ಕಮಲಾ ಹೆಮ್ಮಿಗೆ

ಧರ್ಮದರ್ಶಿ ಎಂಬ ಬಿರುದು ನಿಮಗೆ ಬೇಕಿಲ್ಲ ಪುನರೂರರೆ
ಧರ್ಮವೇ ನಿಮ್ಮನ್ನು ಉಡಿಯಲ್ಲಿಟ್ಟು ಪೊರೆವಾಗ್ಗೆ! ನಿಲ್ಲಿಸಿದಿರಿ
ಅದೆಷ್ಟು ಸಡಿಲಾದ ಪೊಳ್ಳು ಕಲಶಗಳ! ಬೆಳ್ಳಿಗೆ ಕೊಟ್ಟಿರಿ
ಚಿನ್ನದ ಲೇಪ
ಏನು ಹಿಗ್ಗು ಕನ್ನಡದ ರಥಕ್ಕೆ ತೌಳವಶ್ವಗಳ ಹೂಡುವಾಗ್ಗೆ!

ನೀವು ಸೂರಿಯಲ್ಲದಿರಬಹುದು ಆದರೂ ಕಲ್ಪಿಸಿದಿರಲ್ಲ
ದೀನರ ತಲೆಯ ಮೇಲೆ ಒಂದು ನೂರು ಸೂರ!
ಎತ್ತರದ ಆಳಪ್ಪ ಖರೇನೇ ಕೋರಿದವರಿಗೆ 'ಕಲ್ಪವೃಕ್ಷ'
ಬಳಸಿದೆಲೆ ಬಳ್ಳಿಗಳು ನಿಮ್ಮಾಶ್ರಯದಲಿ ಬಳುಕಿವೆ ಆರಾಮ



ಪುನರೂರು ರಕ್ಕಸರ ಹೆಣಬಿದ್ದ ಹಳ್ಳಿ...
ಪುನರ್ಪುಳಿಯ ಶರಬತ್ತು ಅಧರಕ್ಕು ಉದರಕ್ಕು ಸವಿ ನಿಮ್ಮ ಮಾತು
ಸರಳ ಬದುಕು ಬೆಳೆ ವಸ್ತ್ರ ಹೆಗಲ ಮೇಲಿನ ಶಲ್ಯ
ಕೋಪದ ಮಾನ ತುಸು ಹೆಚ್ಚೆ! ತತ್‌ಕ್ಷಣ ಕರಗಿ ನಗು ಸಕ್ಕರೆ

ಸಾಲದಯ್ಯಾ ನಿಮ್ಮ ಕೃಷಿ ಫಲದ ಧಾನ್ಯಗಳ ತುಂಬಲು ಹಗೇವು
ಅಳತೆಯೂ ಇಲ್ಲ ಸಾಧನಗಳನಳೆದು ಸುರಿಯಲು...

50, ಆಶೀರ್ವಾದ, ಶಿವಗಿರಿ, ಧಾರವಾಡ– 580 007


ಭಾಗ: ಎರಡು

ಹೀಗಿದ್ದಾರೆ ಪುನರೂರು

ಧರ್ಮಿಯೆನಿಸಿದ ಕರ್ಮವೀರ

□ ಬಂದಗದ್ದೆ ನಾಗರಾಜ

ಸಾಧನೆಯ ಸರದಾರ ಸಜ್ಜನ
ಗಾದಿಗಳ ಸಾಕಾರ ಬದುಕಿನ
ಹಾದಿಗಳಿಗಾಕಾರ ಮಾತಿನಲೊಂದು ಝೇಂಕಾರ ॥
ಓದುಗರ ಪುನರೂರು ರಚಿಸುವ
ಮೇಧೆಯಿಂ ಛಲಗಾರ ಸಕಲರಿ-
-ಗಾದರದ ಶುಭಕಾರನಾ ಹರಿಕೃಷ್ಣ ಪುನರೂರು ॥೧॥



ನೋಡೆ ಸಮದರ್ಶಿತ್ವ ಬಡವರ
ವಾಡೆಗಾ ದಾನಿತ್ವ ಕಂಗಳ
ಗೂಡುಗಳ ಮರುಹುಟ್ಟಿಗಾಗುವ ದೂರದರ್ಶಿತ್ವ ॥
ಕೂಡುತಾ ನಿಷ್ಠೆಯಕೆ ಮೈಮನ
ನೀಡುವಂತಾ ಮಾನವೀಯತೆ
ಹಾಡಿಗಾಗುವ ನಡೆದು ತೋರುವ ಧೀರ ಧೀಮಂತ ॥೨॥

ಧರ್ಮದರ್ಶಿಯ ಬಿರುದು ಸಾರ್ಥಕ
ಕರ್ಮದಲಿ ತೋರುವುದು ಭಾವದ
ಮರ್ಮಗಳು ಹೊಳೆಯುವವು ಗುಡಿಗುಂಡಾರ ರೂಪಿನಲಿ ॥
ಪೆರ್ಮೆಯಿಸಿತಿಲ್ಲಲ್ಲಿ ಕೇವಲ
ಕರ್ಮಕಾಗಿಯೆ ಕರ್ಮವೆನುವಾ
ಧರ್ಮಿಯೆನಿಸಿದ ಕರ್ಮವೀರನು ಜೀವನದ ಪಥದಿ ॥೩॥

ಸಂಸ್ಕೃತ ಅಧ್ಯಾಪಕರು, ಗಣಪತ ಹೈಸ್ಕೂಲು, ಮಂಗಳೂರು, ದ.ಕ

ಕನ್ನಡದ ನಾಡಿನಲಿ ಹುಟ್ಟಿದ
ಕನ್ನಡದ ಸಾಹಿತ್ಯ ಪರಿಷ-
ತ್ತನ್ನು ತಾನಧ್ಯಕ್ಷ ಪೀಠದಿ ಕುಳಿತು ಮುನ್ನಡೆಸಿ॥
ಮುನ್ನವಿರಲಿಲ್ಲಂತು ತಾ ಮ-
ತ್ತಿನ್ನು ಮುಂದಕ್ಕಿರದೆನುವ ನುಡಿ
ಯನ್ನು ಹಿರಿಯರ ಬಾಯಿಯಿಂ ಕೊಂಡಾತ ಗುಣವಂತ ॥೪॥

ಹೆಚ್ಚು ಕಡಿಮೆಗಳಿಲ್ಲ ವೆಚ್ಚದ
ಕೆಚ್ಚು ಕಲ್ಯಾಣಾಖ್ಯ ಕರ್ಮದಿ
ನಿಚ್ಚ ವಿನಿಯೋಗಿಸುವ ಮತಿಯಿಂದಾಗಿ ತಾನಾಗಿ॥
ಬೆಚ್ಚದೇ ಬೆದರದೆಯೆ ದೌಷ್ಟ್ಯವ
ನುಚ್ಚುನೂರಾಗಿಸುವ ಧೈರ್ಯದ
ಬಿಚ್ಚುಗತ್ತಿಯ ಧರ್ಮವೀರನು ಸಕಲತಲಗಳಲಿ ॥೫॥

ತಾನು ದುಡಿದಿಹ ಹಣವು ದಾನದ
ಮಾನಕೆಂಬರು ಕೆಲರು ಕಲಿಯುಗ
ದಾನಿಗರು ಕಾಣಿಕೆಯ ಹಣದಿಂದಾಗಿ ಬೆಳೆಯುವರು॥
ಏನಿದಚ್ಚರಿ ದುಡಿದ ಹಣವಂ
ದಾನ ಮಾಡುತ ಶುಭವ ಕೋರುವ
ದಾನಿಯಿವನಾ ದಾನ ವೀರನು ಸರ್ವತೆರದೊಳಗೆ ॥೬॥

ರಾಜಕೀಯದ ಹೊಲದಿ ಸಸಿಗಳ
ನೇಜಿಯಂ ತಾ ಮಾಡದೇ ನಿಜ
ರಾಜನಂತೆಯೆ ಮೆರುಗುವಡೆದಿಹನಗ್ರತೇಜದಲಿ॥
ಈ ಜಗತ್ತಿನ ಬಡವರೆಂದೇ
ಸಾಜದಿಂದಾಖ್ಯಾತ ಜನರಿಂ-
-ಗೋಜೆಯಿಂದೊಂದಗ್ರಹಾರವ ನಿರುಮಿಸಿದ ಧೀರ ॥೭॥

ಕಬ್ಬಿಗರ ಮನದೊಳಗೆ ನಿತ್ಯದಿ
ಹಬ್ಬವಾಗುವುದಿವನ ತೇಜದಿ
ಹಬ್ಬಿಹಳು ಸಾಹಿತ್ಯ ಶಾರದೆಯೊಂದು ನಿಲುವಿನಲಿ॥
ಉಬ್ಬಿಸುವ ಮಾತಲ್ಲವಾ ಪಥ-
-ದುಬ್ಬುತಗ್ಗುಗಳಲ್ಲಿ ನಡೆದಿಹ
ದಿಬ್ಬಣದ ಮಂದಿಗಳು ಪೇಳುವ ಸಹಜವಾಕ್ಯಗಳು ॥೮॥

ಏನು ಹರಿಕೃಷ್ಣಾಖ್ಯನೆಂದರ-
-ದೇನು ಪೇಳ್ವುದು ಹರಿಯೆ ಕೃಷ್ಣನೆ
ಬಾನು ಬಾನುವಿನಂತೆಯೆಂಬಂತಿರುನವವನಂತೆ ॥
ಜ್ಞಾನ ಮಾರ್ಗವೊ ಕರ್ಮಮಾರ್ಗವೊ
ಮೇನೆಯಿಲ್ಲೆರಡುಗಳು ಕರಗಿದ
ಮಾನವಾಂತಿಹುದವನಮತವೇ ನಾಮವಾಗಿಹುದು ॥೯॥

ಎಲ್ಲೆಡೆಗೆ ಶುಭವಾಗಲೆನ್ನುತ
ಸೊಲ್ಲನಿಡುತವರಂತೆ ಜೀವನ
ದಲ್ಲಿ ನಡೆವವರೇನು ಸಿಗುವರೆ ಕಲಿಯ ಕಾಲದಲಿ ॥
ಇಲ್ಲಿ ಪೇಳುವುದಿಷ್ಟೆ ಮಾನವ
ನೆಲ್ಲಯಿದು ಹಾಗಾಗಲೆನ್ನುತ-
-ಲಿಲ್ಲಿ ಬಯಸುತ ಹಾಡಗಬ್ಬವ ಹಾಡಿದೆನು ಮುದದಿ ॥೧೦॥

☐

ಭಾಗ : ಮೂರು


ಕ.ಸಾ.ಪ. ಅಧ್ಯಕ್ಷತೆಯ ದಿನಗಳು

‘ಕನ್ನಡ ನುಡಿ’ಯಲ್ಲಿ ‘ತಿಂಗಳ ಮಾತು’ಗಳು

ಭಾಗ: ಮೂರು
ಕ.ಸಾ.ಪ ಅಧ್ಯಕ್ಷತೆಯ ದಿನಗಳು

ಕೈಕಟ್ಟಿ ಕೂಡೆವು

☐ ಧರ್ಮದರ್ಶಿ ಹರಿಕೃಷ್ಣ ಪುನರೂರು



ಕನ್ನಡ ನಾಡಿನ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಅಸ್ತಿತ್ವ, ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಕನ್ನಡ ಭಾಷೆಯ ಪಾತ್ರ ಅತ್ಯಂತ ಮಹತ್ವದ್ದು. ಆದ್ದರಿಂದ ಇದನ್ನು ಕಾಯ್ದುಕೊಳ್ಳಬೇಕಾದ ಹೊಣೆಗಾರಿಕೆ ಕನ್ನಡಿಗರದ್ದು ಎಂಬುದರಲ್ಲಿ ಯಾರಿಗೂ ಸಂಶಯವಿರದು. ಈ ಗುರುತರ ಹೊಣೆಗಾರಿಕೆಯ ನಿರ್ವಹಣೆಯ ಭಾರ ಜನಾದೇಶ ಪಡೆದಿರುವ ಸರಕಾರಕ್ಕೆ ಸೇರಿದ್ದು ಎಂಬಂಶವನ್ನು ಪದೇ ಪದೇ ನೆನಪಿಸಬೇಕಾಗಿ ಬಂದಿರುವುದು ನಿಜಕ್ಕೂ ದುರದೃಷ್ಟಕರ. ಕನ್ನಡ ನಾಡು ಒಂದಾಗಿ ನಾಲ್ಕೂವರೆ ದಶಕ ಕಳೆದಿದ್ದರೂ ನಾಡಿನ ಅನೇಕ ಪ್ರಮುಖ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುವುದು ತಪ್ಪಿಲ್ಲ. ಕನ್ನಡ ಭಾಷೆಗೆ ಕುತ್ತು ಒದಗಿದಾಗ ಕನ್ನಡದ ಜನಸ್ತೋಮವೇ ಎದ್ದುನಿಂತು ಅಭೂತಪೂರ್ವವಾದ ಗೋಕಾಕ್ ಚಳುವಳಿಯ ಮೂಲಕ ಕರ್ನಾಟಕದ ರಾಜಕೀಯ ನಕಾಶೆಯನ್ನೇ ಬದಲು ಮಾಡಿದ್ದು ನಮ್ಮೆಲ್ಲ ನೆನಪಿನಲ್ಲಿ ಇನ್ನೂ ಹಸಿರಾಗಿದೆ. ಕನ್ನಡ ಜನತೆ ರೊಚ್ಚಿಗೆದ್ದರೆ ಏನನ್ನೂ ಸಾಧಿಸಲು ಸಮರ್ಥ ಎಂಬುದನ್ನು ಈ ಚಳುವಳಿ ಸಾಬೀತುಪಡಿಸಿದೆ.

''ಪರಕೀಯ ಮಾಧ್ಯಮ ನಮ್ಮ ಮಕ್ಕಳ ಮೆದುಳಿಗೆ ಆಯಾಸವುಂಟು ಮಾಡಿ, ಅವರ ನರಮಂಡಲದ ಮೇಲೆ ಮಿತಿ ಮೀರಿದ ಒತ್ತಡವನ್ನು ತಂದು ಹಾಕಿದೆ. ಅವರನ್ನು ಕಂಠಪಾಠ

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಯಾದ 'ಕನ್ನಡ ನುಡಿ' ಯಲ್ಲಿ ಪ್ರತಿ ತಿಂಗಳೂ ಪ್ರಕಟವಾದ ಬರಹಗಳಿವು. ನಿರೂಪಣೆ- ನ. ಚಕ್ರಪಾಣಿ. ಈ ಬರಹ- 'ಕನ್ನಡ ನುಡಿ' ಮಾರ್ಚ್ 2002ರ ಸಂಚಿಕೆಯಿಂದ.

ಪಟುಗಳನ್ನಾಗಿ, ಅನುಕರಣಶೀಲರನ್ನಾಗಿ ಮಾಡಿದೆ. ಸ್ವತಂತ್ರವಾಗಿ ಆಲೋಚನೆ ಮಾಡಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವರನ್ನು ಅಸಮರ್ಥರನ್ನಾಗಿಸಿದೆ" (ಮಹಾತ್ಮಗಾಂಧಿ- ಯಂಗ್ ಇಂಡಿಯಾ ಪತ್ರಿಕೆ 1-9-1921).

ಈಗ ಪರಕೀಯ ಮಾಧ್ಯಮ 'ಇಂಗ್ಲಿಷ್' ಕ್ಷೇತ್ರದಲ್ಲೂ ಆ ರಾಜ್ಯದ ಅಧಿಕೃತ ಭಾಷೆಗೇ ಅಗ್ರಸ್ಥಾನ ಲಭಿಸಬೇಕೆಂಬುದು 1956ರಲ್ಲಿ ಮಾಡಲಾದ ಭಾಷಾವಾರು ಪ್ರಾಂತರಚನೆಯ ಮೂಲ ಉದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ರೂಪುಗೊಂಡ ಇತರ ರಾಜ್ಯಗಳು ಈ ನಿಟ್ಟಿನಲ್ಲಿ ಬಹುದೂರ ಸಾಗಿವೆ, ಯಶಸ್ಸುಗಳಿಸಿವೆ. ಆದರೆ ನಮ್ಮ ರಾಜ್ಯದ ದುರಂತವೆಂದರೆ ಕನ್ನಡ ಸಮಸ್ಯೆಗಳ ಬಗ್ಗೆ ಕನ್ನಡಿಗರಾದ ನಾವು ಕನ್ನಡ ಸರಕಾರದೆದುರು ಅಂಗಲಾಚಿ ನಿಲ್ಲಬೇಕಾಗಿದೆ. ಹೋರಾಟ ನಡೆಸಬೇಕಾಗಿದೆ.

ಪ್ರಾಥಮಿಕ ಶಿಕ್ಷಣ ಹಂತದಲ್ಲಿ (1ರಿಂದ 7ನೆಯ ತರಗತಿಯವರೆಗೆ) ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಬೋಧನೆಯ ಮಾಧ್ಯಮವಾಗಿರಬೇಕೆಂಬುದು ಜಗತ್ತಿನ ಎಲ್ಲ ಶಿಕ್ಷಣ ತಜ್ಞರ ಒಕ್ಕೊರಲ ಅಭಿಪ್ರಾಯವಾಗಿದೆ. ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯವೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ. ನಮ್ಮ ಭಾಷೆಯ ಸಾಮರ್ಥ್ಯವನ್ನು ಬಲ್ಲ ಡಾ|| ಕುವೆಂಪುರವರು, ಇಂತಹುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ನಮ್ಮ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲಿಯೂ, ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ ಎನ್ನುವುದರ ಬಗೆಗೆ ಯಾರೂ ಸಂದೇಹ ಪಡಬೇಕಾಗಿಲ್ಲ" (1957 ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ). ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಕಾಲ ಕಾಲಕ್ಕೆ ಈ ಬಗ್ಗೆ ಶಿಫಾರಸು ಮಾಡುತ್ತಲೇ ಇದೆ.

ಈ ಶಿಫಾರಸನ್ನು ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ದಿವಂಗತ ಜೆ.ಎಚ್. ಪಟೇಲರ ಸರಕಾರವು ಒಪ್ಪಿಕೊಂಡಿತ್ತು. ಆದರೆ ರಾಜಕೀಯ ಒತ್ತಡದಿಂದಾಗಿ ಅದು ಸಾಧ್ಯವಾಗಲಿಲ್ಲ. (2002) ಈಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು, ಫೆಬ್ರವರಿ 15ರಂದು ತುಮಕೂರಿನಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಉದ್ಘಾಟಿಸುತ್ತಾ "ನಮ್ಮ ಸರಕಾರವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃ ಭಾಷೆ ಅಥವಾ ಕನ್ನಡ ಮಾಧ್ಯಮಕ್ಕೆ ಬದ್ಧವಾಗಿದೆ" ಎಂದು ಹೇಳುತ್ತಾ "ಈ ವಿಷಯದಲ್ಲಿ ತೊಡಕಾಗಿರುವ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಖಂಡಿತ ಕೈಗೊಳ್ಳಲಾಗುವುದು. ತಾಂತ್ರಿಕ ತೊಡಕುಗಳಿಂದ ಆಗುತ್ತಿರುವ ವಿಳಂಬವನ್ನು ಕನ್ನಡಿಗರು ತಪ್ಪಾಗಿ ಭಾವಿಸಬಾರದು" ಎಂದು ಘೋಷಿಸಿದ್ದು ಸ್ವಾಗತಾರ್ಹ ಹೇಳಿಕೆಯಾಗಿದೆ. ಈ ಬಗ್ಗೆ ಫೆಬ್ರವರಿ 17ರಂದು 5 ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಮಹಾಧಿವೇಶನದಲ್ಲಿ ಗೊತ್ತುವಳಿ ಸಹ ಸ್ವೀಕರಿಸಿ, ಅದನ್ನು ಅನುಷ್ಠಾನಕ್ಕೆ ತರಲು ಸರಕಾರಕ್ಕೆ ಕಳುಹಿಸಿ ಕೊಡಲಾಗಿದೆ.

ಕನ್ನಡ ನಾಡಿನ ಮುಖ್ಯಮಂತ್ರಿಗಳು ಪಂಚಕೋಟಿ ಕನ್ನಡಿಗರಿಗೆ ವಚನ ನೀಡಿ ಈಗಾಗಲೇ ಒಂದು ತಿಂಗಳು ಕಳೆದಿದೆ. ಆದರೆ ಈವರೆಗೂ ಸರ್ಕಾರವು ಈ ನಿಟ್ಟಿನಲ್ಲಿ ಯಾವುದೇ ಸಕಾರಾತ್ಮಕ ಕ್ರಮ ಕೈಗೊಂಡಿಲ್ಲ. ಇದಕ್ಕೆ ಪ್ರತಿಯಾಗಿ, ಶಿಕ್ಷಣ ಸಚಿವ ಎಚ್. ವಿಶ್ವನಾಥ್ ಅವರು ಮುಖ್ಯಮಂತ್ರಿಗಳ ನಿಲುವಿಗೆ ವಿರುದ್ಧವಾದ ನಿಲುವು ತಾಳಿ ದಿಢೀರನೆ 300 ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ (ಒಂದರಿಂದ ಐದನೇ ತರಗತಿವರೆಗೆ ಕನ್ನಡ ಅಥವಾ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವ ಶಾಲೆಗಳಿಗೆ ಆರನೇ ತರಗತಿ ಅನಂತರ ಇಂಗ್ಲಿಷ್ ಶಿಕ್ಷಣ ನೀಡಲು) ಅನುಮತಿ ನೀಡಿ/ನೀಡಲು ಮುಂದಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಕೋಲಾಹಲ ಉಂಟುಮಾಡಿದ್ದಾರೆ. ಅಲ್ಲದೆ ಕರ್ನಾಟಕದ ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರನ್ನು ಉದ್ಧಟತನದಿಂದ ಟೀಕಿಸಿ ಗೊಂದಲದ ವಾತಾವರಣ ಮೂಡಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ

ಅಧ್ಯಕ್ಷನಾದ ನನ್ನ ಬಗ್ಗೆಯೂ ತಪ್ಪು ಹೇಳಿಕೆ ನೀಡುತ್ತಿದ್ದಾರೆ. ನನ್ನ ಮಕ್ಕಳು ಇಂಗ್ಲಿಷ್ ಶಾಲೆಗಳಲ್ಲಿ ಓದುತ್ತಿದ್ದಾರೆಂದು ಆರೋಪಿಸಿದ್ದಾರೆ. ಇದು ನಿಜವೆಂದು ಅವರು ಸಾಬೀತುಪಡಿಸಿದರೆ ನಾನು ನನ್ನ ಹುದ್ದೆಗೆ ರಾಜೀನಾಮೆ ನೀಡಲು ಸಿದ್ಧ. ಇದೇ ರೀತಿ ಮಾನ್ಯ ಮಂತ್ರಿಗಳ ಹೇಳಿಕೆ ಸುಳ್ಳೆಂದು ಸಾಬೀತಾದರೆ ಈ ಸವಾಲು ಸ್ವೀಕರಿಸಿ ತಮ್ಮ ಹುದ್ದೆಗೆ ರಾಜೀನಾಮೆ ನೀಡುವರೆ?

ಮಾನ್ಯ ಶಿಕ್ಷಣ ಸಚಿವರ ಈ ಬೇಜವಾಬ್ದಾರಿ ಹೇಳಿಕೆಯನ್ನು ವಿರೋಧಿಸಿ ಹಾಗೂ ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ಒತ್ತಾಯಿಸಿ ಸಾಹಿತಿಗಳು ಮತ್ತು ಕನ್ನಡ ಹೋರಾಟಗಾರರು ದಿನಾಂಕ 18-3-2002ರಂದು ಸಾಂಕೇತಿಕ ಧರಣಿ ನಡೆಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಲಾಗಿದೆ.

ಮನವಿಯಲ್ಲಿನ ಮುಖ್ಯಾಂಶಗಳು : 1) 300 ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ನೀಡಲಾದ ಅನುಮತಿಯನ್ನು ಸರ್ಕಾರ ತಕ್ಷಣವೇ ರದ್ದುಗೊಳಿಸಿ ಆದೇಶ ಹೊರಡಿಸಬೇಕು. 2) ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಾತೃಭಾಷೆಗೆ ಅಥವಾ ಕನ್ನಡ ಮಾಧ್ಯಮವನ್ನು ಪೂರ್ಣ ಪ್ರಮಾಣದಲ್ಲಿ ಪ್ರಸಕ್ತ 2002-2003ರ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರುವುದಾಗಿ ಸರಕಾರ ಘೋಷಿಸಬೇಕು. ಮುಖ್ಯಮಂತ್ರಿಗಳ ಆಶ್ವಾಸನೆಯಂತೆ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯಕ್ರಮವನ್ನು ಶೀಘ್ರವೇ ಕೈಗೊಳ್ಳಬೇಕು. 3) ಸಿ.ಬಿ.ಎಸ್.ಇ. ಶಾಲೆಗಳನ್ನು ಅಂತರ ರಾಜ್ಯ ವರ್ಗಾವಣೆಯ ಸಾಧ್ಯತೆ ಇರುವ ಪೋಷಕರ ಮಕ್ಕಳಿಗೆ ಮಾತ್ರ ಸೀಮಿತಗೊಳಿಸಬೇಕು. ರಾಜ್ಯ ಸರಕಾರವು ಇಂಥ ಶಾಲೆಗಳಿಗೆ ಅನುಮತಿ ನೀಡುವ ಪೂರ್ವದಲ್ಲಿ ಈ ಮಾನದಂಡವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿ ಆದೇಶ ಹೊರಡಿಸಬೇಕು. 4) ನಾಡಿನ ಶಿಕ್ಷಣ ನೀತಿಯನ್ನ ತಿರುಚಿ, ವ್ಯಾಪ್ತಿಯನ್ನು ಸಂಕುಚಿತಗೊಳಿಸಿ ಉದ್ಧಟತನದಿಂದ ವರ್ತಿಸುತ್ತಿರುವ ಶಿಕ್ಷಣ ಸಚಿವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಭಾಷಾ ಹಿತದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತಿದೆ.

''ಕನ್ನಡ ಅಭಿವೃದ್ಧಿಗೆ ಮತ್ತು ಕನ್ನಡಿಗರ ಬೆಳವಣಿಗೆಗೆ ಧಕ್ಕೆ ತರುವ ಯಾವ ನಿರ್ಧಾರಗಳಿಗೂ ನಮ್ಮ ಸರ್ಕಾರವು ಭಾಗಿಯಾಗಲಾರದು'' ಎಂದು ಘೋಷಿಸಿರುವ ಮುಖ್ಯಮಂತ್ರಿಗಳ ಹೇಳಿಕೆಯನ್ನು ಸ್ವಾಗತಿಸುತ್ತಾ ಅವರನ್ನು ಅಭಿನಂದಿಸುತ್ತೇವೆ. ಇಡೀ ಕರ್ನಾಟಕದ ಪಂಚಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಗೋಕಾಕ್ ಚಳುವಳಿಯಂತಹ ಉಗ್ರ ಚಳುವಳಿಗೆ ಎಡೆ ಕೊಡದೆ ಕೂಡಲೇ ಶಿಕ್ಷಣ ಮಾಧ್ಯಮದ ಬಗ್ಗೆ ಸರ್ಕಾರವು ಸ್ವಾಗತಾರ್ಹ ಆದೇಶವನ್ನು ಹೊರಡಿಸುತ್ತದೆಂದು ನಂಬಿದ್ದೇವೆ.

□

ಕುವೆಂಪು ಆಶಯಕ್ಕೆ ನಾವು ಬದ್ಧ



ಕನ್ನಡಪರ ಚಟುವಟಿಕೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸದಾ ಮುಂಚೂಣಿಯಲ್ಲಿರುತ್ತದೆ. ಕನ್ನಡ ಜನಹಿತ ಕಾರ್ಯಾಚರಣೆಯಲ್ಲೂ ಸರ್ವದಾ ತನ್ನನ್ನು ತೊಡಗಿಸಿಕೊಳ್ಳುತ್ತಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಪರಿಷತ್ತು ಎಂದೂ ಹಿಂಜರಿಯುವುದಿಲ್ಲ. ಎಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸಲೂ ಸಿದ್ಧವಾಗೇ ಇರುತ್ತದೆ. ಆಡಿದ ಮಾತಿನಂತೆ ನಡೆಯುತ್ತಿದೆ. ಕನ್ನಡ ವಿರುದ್ಧ ಯಾವ ವ್ಯಕ್ತಿಯೇ ಆಗಲಿ, ಯಾವ ಸಂಘಟನೆಯೇ ಆಗಲಿ ಕಾರ್ಯಾಚರಣೆ ನಡೆಸ ಹೊರಟರೆ ಪರಿಷತ್ತು ಅವರ ವಿರುದ್ಧ ಹೋರಾಡುತ್ತದೆ ಹಾಗೂ ಹತ್ತಿಕ್ಕಿದ ನಂತರವೇ ನಿರಾಳ ಉಸಿರಾಡುತ್ತದೆ. ಕನ್ನಡ ನುಡಿ, ಕನ್ನಡ ಜನ, ಕನ್ನಡ ಸಂಸ್ಕೃತಿಯ ಸಂರಕ್ಷಣೆ ಬಗ್ಗೆ ಸರಕಾರ ಅಥವಾ ಯಾವುದೇ ಸಂಸ್ಥೆ, ಗುಂಪಿನ ಜನರೊಡನೆ ಯಾವುದೇ ವಿಧದ ರಾಜಿ ಮಾಡಿಕೊಳ್ಳಲು ಸಿದ್ಧವಿರುವುದಿಲ್ಲ.

ಶಿಕ್ಷಣ ಮಾಧ್ಯಮದ ಬಗ್ಗೆ ಹಾಗೂ ಸರ್ಕಾರದ ಆಡಳಿತ ಭಾಷೆ ಬಗ್ಗೆ ನಮ್ಮ ನಿಲುವು ಮುಂಚಿನಿಂದಲೂ ಸ್ಪಷ್ಟವಾಗಿಯೇ ಇದೆ.

'ನಮ್ಮ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ ಎನ್ನುವುದರ ಬಗ್ಗೆ

ಕನ್ನಡ ನುಡಿ, ಏಪ್ರಿಲ್ 2002, ನಿರೂಪಣೆ: ನ. ಚಕ್ರಪಾಣಿ

ಯಾರೂ ಸಂದೇಹ ಪಡಬೇಕಾಗಿಲ್ಲ' ಎಂದು 1951ರಲ್ಲಿ ಧಾರವಾಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಡಾ|| ಕುವೆಂಪುರವರು ಗುಡುಗಿದ್ದರು.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಗ್ಗೆ ದಿವಂಗತ ಪುಟ್ಟಣ್ಣಶೆಟ್ಟರು 1921ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ನುಡಿದಿದ್ದ ಮಾತು ಉಲ್ಲೇಖನೀಯ. 80 ವರ್ಷಗಳ ಅನಂತರವೂ ಆ ಅಭಿಮತ ಪ್ರಸ್ತುತ.

'ಸರ್ವಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲಿಷಿನಲ್ಲಿ ಪ್ರಾವೀಣ್ಯ ಪಡೆದು ಇಂಗ್ಲೆಂಡಿಗೋ, ಅಮೇರಿಕಾಕ್ಕೋ ಹೋಗಬೇಕೆಂಬ ಅಭಿಲಾಷೆಯಿಂದ ಕಲಿಯುವುದಿಲ್ಲ, ಹೊಟ್ಟೆಯಪಾಡಿಗಾಗಿ ಕಲಿಯುತ್ತಾರೆ. ಸರಕಾರ ಈ ಕೂಡಲೇ ಕನ್ನಡವನ್ನು ಆಡಳಿತ ಭಾಷೆಯೆಂದು ಘೋಷಿಸಿ ಚೆನ್ನಾಗಿ ಕನ್ನಡ ಬಲ್ಲವರಿಗೆ ಮಾತ್ರ ಸರ್ಕಾರದ ಎಲ್ಲಾ ಉದ್ಯೋಗಗಳು ದೊರೆಯುವಂತೆ ಮಾಡಲಿ. ಜನ ಕನ್ನಡವನ್ನು ತಾವಾಗಿ ಮನ್ನಣೆ ಮಾಡುತ್ತಾರೆ. ಕನ್ನಡ ಮಾಧ್ಯಮಕ್ಕೆ ವಿದ್ಯಾರ್ಥಿಗಳು ತಾವಾಗಿ ಒಲಿಯುತ್ತಾರೆ.'

ಕನ್ನಡ ಸಾರ್ವಭೌಮ ಸಂಸ್ಥೆಯ ಈ ಅಭಿಮತ ಇನ್ನೂ ಪೂರ್ಣ ರೀತಿಯಲ್ಲಿ ಕಾರ್ಯಗತಗೊಳ್ಳದೆ ಇರುವುದು ನಿಜಕ್ಕೂ ಶೋಚನೀಯ. ಕನ್ನಡ ಸರಕಾರಕ್ಕೂ ಇದು ಗೌರವ ತರುವ ವಿಷಯವಲ್ಲವೆಂದು ವಿಷಾದದಿಂದ ನುಡಿಯಬೇಕಾಗಿದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಗ್ಗೆ ನೂರಾರು ಆದೇಶಗಳು ಹೊರಬಿದ್ದಿವೆ. ಆದರೆ ಈ ಆದೇಶಗಳಿಗೆ ಹಲ್ಲಿಲ್ಲ. ಆದೇಶದ ಹಿಂದೆ ಜಾರಿಗೊಳಿಸುವ ದೃಢ ಸಂಕಲ್ಪವಿಲ್ಲದಿರುವುದೂ ಈ ಆದೇಶಗಳ ಸೋಲಿಗೆ ಮುಖ್ಯ ಕಾರಣವೆಂದು ಯಾರಿಗೂ ಗೋಚರವಾಗುತ್ತದೆ.

ಶಿಕ್ಷಣ ಮಾಧ್ಯಮದ ಬಗ್ಗೆ ಸುಪ್ರೀಂ ಕೋರ್ಟ್ ಸಹ ನಿಚ್ಚಳ ಅಭಿಮತವನ್ನು ವ್ಯಕ್ತಪಡಿಸಿದ್ದು ಈ ಬಗ್ಗೆ ಗೋಕಾಕ್ ಚಳುವಳಿಯಂತಹ ಚಳುವಳಿ ನಡೆದು, ಅಂದಿನ ಕನ್ನಡ ಸರಕಾರ ತಲ್ಲಣಗೊಂಡಿದ್ದರೂ ಪಟ್ಟಭದ್ರ ಹಿತಾಸಕ್ತಿಯ ಕರಡಿ ಪಂಜದಲ್ಲಿ ಸಿಲುಕಿದ್ದ ಅನಂತರದ ಸರಕಾರಗಳು ಈ ಬಗ್ಗೆ ದೃಢ ನಿಲುವು ತಳೆದು ಸೂಕ್ತ ಕಾನೂನು ರಚಿಸಿ ಕನ್ನಡ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ವಿಫಲಗೊಂಡಿವೆ.

ಶಿಕ್ಷಣ ಮಾಧ್ಯಮದ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ತೆಗೆದುಕೊಂಡ ದೃಢ ನಿಲುವಿನಿಂದಾಗಿಯೇ ಕರ್ನಾಟಕದ ಮುಖ್ಯಮಂತ್ರಿಗಳು ತುಮಕೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ 'ನಮ್ಮ ಸರಕಾರವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃ ಭಾಷೆ ಅಥವಾ ಕನ್ನಡ ಮಾಧ್ಯಮಕ್ಕೆ ಬದ್ಧವಾಗಿದೆ' ಎಂದು ಹೇಳುತ್ತಾ ಮುಂದುವರಿದು 'ಈ ವಿಷಯದಲ್ಲಿ ತೊಡಕಾಗಿರುವ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಖಂಡಿತಾ ಕೈಗೊಳ್ಳಲಾಗುವುದು; ತಾಂತ್ರಿಕ ತೊಡಕುಗಳಿಂದ ಆಗುತ್ತಿರುವ ವಿಳಂಬವನ್ನು ಕನ್ನಡಿಗರು ತಪ್ಪಾಗಿ ಭಾವಿಸಬಾರದು' ಎಂದು ಉದ್ಘೋಷಿಸಿದ್ದರು.

ಈ ಹೇಳಿಕೆ ಇನ್ನೂ ಸೂಕ್ತ ರೂಪದಲ್ಲಿ ಕಾರ್ಯಗತಗೊಳ್ಳದೆ ಇದ್ದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮುಖ್ಯಮಂತ್ರಿಗಳ ನಿಲುವಿಗೆ ವಿರುದ್ಧವಾದ ನಿಲುವು ತಾಳಿ, ಹೇಳಿಕೆಗಳನ್ನು ಕೊಡುತ್ತಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿದೆ. ಈ ಬೇಜವಾಬ್ದಾರಿ ಹೇಳಿಕೆಯನ್ನು ಪ್ರತಿಭಟಿಸಿರುವ ಸಾಹಿತಿಗಳು ಮತ್ತು ಕನ್ನಡ ಪರ ಹೋರಾಟಗಾರರು ದಿನಾಂಕ 18-3-2002ರಂದು ಸಾಂಕೇತಿಕ ಧರಣಿ ನಡೆಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದರು.

ಇದೀಗ ಶಿಕ್ಷಣ ಸಚಿವರು ದಿನಾಂಕ 6-5-2002ರಂದು ಈ ಬಗ್ಗೆ ಸಮಾಲೋಚಿಸಲು ಶಿಕ್ಷಣ ತಜ್ಞರು, ಪರಿಷತ್ತಿನ ಹಾಲಿ ಹಾಗೂ ಮಾಜಿ ಅಧ್ಯಕ್ಷರುಗಳು ಸಮ್ಮೇಳನಾಧ್ಯಕ್ಷರು ಮತ್ತು ಹಿರಿಯ ಸಾಹಿತಿಗಳ

ಸಭೆಯನ್ನು ಕರೆದಿದ್ದಾರೆ. ಈ ಸಭೆಯಲ್ಲಿ ಸಾಹಿತ್ಯ ಪರಿಷತ್ತು ತನ್ನ ಸ್ಪಷ್ಟ ನಿಲುವನ್ನು ಮತ್ತೆ ಮಂಡಿಸಿ 300 ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ನೀಡಲಾಗಿರುವ ಅನುಮತಿಯನ್ನು ಸರ್ಕಾರ ಕೂಡಲೇ ರದ್ದುಪಡಿಸಲು ಹಾಗೂ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಾತೃಭಾಷೆಗೆ ಅಥವಾ ಕನ್ನಡ ಮಾಧ್ಯಮವನ್ನು ಪೂರ್ಣ ಪ್ರಮಾಣದಲ್ಲಿ ಪ್ರಸಕ್ತ 2002-2003ರ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ಒತ್ತಾಯಿಸುತ್ತದೆ. ಮುಖ್ಯಮಂತ್ರಿಗಳ ಆಶ್ವಾಸನೆಯಂತೆ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು, ಕೇಂದ್ರ ಪಠ್ಯಕ್ರಮ ಅನುಸರಿಸುತ್ತಿರುವ ಐ.ಸಿ.ಎಸ್.ಇ. ಮತ್ತು ಸಿ.ಬಿ.ಎಸ್.ಇ. ಶಾಲೆಗಳನ್ನು ಅಂತರ ರಾಜ್ಯ ವರ್ಗಾವಣೆಯ ಸಾಧ್ಯತೆ ಇದರ ಪೋಷಕ ಮಕ್ಕಳಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಒತ್ತಾಯಿಸುತ್ತದೆ.

'ಕನ್ನಡಿಗರ ಸಂಸ್ಕೃತಿಗೆ ಪ್ರತಿಮಾರೂಪವಾಗಿರುವ ಕರ್ನಾಟಕದ ವಿಸ್ತಾರ ನಿರ್ದಿಗಂತವಾದದ್ದು. ಅದರ ಔನ್ನತ್ಯ ನಿಶ್ಶಿಖರವಾದದ್ದು. ಅಂತಹ ಸಂಸ್ಕೃತಿ ಕರ್ನಾಟಕದ ಸ್ಥಾಪನೆ, ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೇ ಸಹೃದಯಿ ಸಮಷ್ಟಿ ರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ.' ಕುವೆಂಪುರವರ ಈ ಆಶಯಗಳಲ್ಲಿ ಏಕೀಕರ್ನಾಟಕ ರಾಜ್ಯ ಮಾತ್ರ ಸ್ಥಾಪನೆ ಮಾತ್ರ ಈಡೇರಿದೆ. ಉಳಿದವುಗಳ ಪಾಲನೆಗೆ ಪರಿಷತ್ತು ಇಂದು ಕಟಿಬದ್ಧವಾಗಿದೆ ಎಂದು ಕನ್ನಡ ಜನತೆಗೆ ಆಶ್ವಾಸನೆ ನೀಡ ಬಯಸುತ್ತೇನೆ. ಶಾಂತಿ, ಸಂಯಮ ನಮ್ಮ ಉಸಿರು. ಅಹಿಂಸಾಯುತ ಹೋರಾಟ ನಮ್ಮ ಮುಂದಿನ ನಿಲುವು.

□

ಭಾಗ: ಮೂರು

ಕ.ಸಾ.ಪ ಅಧ್ಯಕ್ಷತೆಯ ದಿನಗಳು

ಪರಿಷತ್ತು- ಮುಂದೇನು?



ಕನ್ನಡ ಸಾಹಿತ್ಯ ಪರಿಷತ್ತು 1905ನೇ ಇಸವಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಮ್. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್‌ರವರ ಸದಾಶಯದ ಮೇರೆಗೆ ಜನ್ಮತಾಳಿ ತನ್ನ 87ನೇ ವರ್ಷವನ್ನು ಮುಗಿಸಿ 88ನೇ ವರ್ಷಕ್ಕೆ ಕಾಲಿಟ್ಟಿದೆ. ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಪರಮೋಚ್ಚ ಸಂಸ್ಥೆಯಾಗಿ ಬೆಳೆಯಲು ಈ ನಾಡಿನ ಸಮಸ್ತ ವರ್ಗದ ಎಲ್ಲಾ ಜನತೆ ನೀಡಿರುವ ಕೊಡುಗೆ ಅಪಾರ. ಈ ಸಂಸ್ಥೆಯ ಸರ್ವತೋಮುಖ ಬೆಳವಣಿಗೆಯಲ್ಲಿ ಪರಿಷತ್ತಿನ ಅನೇಕ ಪದಾಧಿಕಾರಿಗಳು ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಅನೇಕ ಪರಿಶ್ರಮದ ಫಲವೇ ಇಂದು ಪರಿಷತ್ತು ಈ ಪ್ರಮಾಣದಲ್ಲಿ ಬೃಹತ್ತಾಗಿ ಬೆಳೆಯಲು ಸಾಧ್ಯವಾಗಿರುವುದು. ನಾಡಿನ ಎಲ್ಲಾ ಸಾಹಿತಿಗಳು, ಕಲಾವಿದರು, ಕನ್ನಡಪರ ಹೋರಾಟಗಾರರು ಹಾಗೂ ಪರಿಷತ್ತಿನ ಸದಸ್ಯರು ಪರಿಷತ್ತಿನ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಸರಕಾರ ಕೂಡ ಪರಿಷತ್ತಿನ ಬೆಳವಣಿಗೆಗೆ ಸ್ಪಂದಿಸಿದೆ. 69 ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು ನಾಡಿನ ವಿವಿಧ ಭಾಗಗಳಲ್ಲಿ, ಹೊರನಾಡುಗಳಲ್ಲಿ ಏರ್ಪಡಿಸಿರುವ ಪರಿಷತ್ತು ಕನ್ನಡದ ಜಾಗೃತಿಯನ್ನು ಮೂಡಿಸುವಲ್ಲಿ ಸಾಕಷ್ಟು ಯಶಸ್ಸನ್ನು ಕಂಡಿದೆ. ನಾಡಿನ ಬಹುದೊಡ್ಡ ಸಾಹಿತಿಗಳು

ಕನ್ನಡ ನುಡಿ, ಮೇ 2002, ನಿರೂಪಣೆ- ನ. ಚಕ್ರಪಾಣಿ

ಸಮ್ಮೇಳನದ ಅಧ್ಯಕ್ಷರಾಗಿ ಪರಿಷತ್ತಿನ ಗೌರವವನ್ನು ಹೆಚ್ಚಿಸಿದ್ದಾರೆ. ನಾಡಿನ ಎಲ್ಲಾ 27 ಜಿಲ್ಲೆಗಳಲ್ಲಿ, 176 ತಾಲ್ಲೂಕುಗಳಲ್ಲಿ, ಅನೇಕ ಹೋಬಳಿಗಳಲ್ಲಿ ಹಾಗೂ ಗಡಿನಾಡ ಪ್ರದೇಶದಲ್ಲಿ ಪರಿಷತ್ತು ತನ್ನ ಘಟಕಗಳನ್ನು ಹೊಂದಿ ನಾಡಿನಲ್ಲೆ ಬಹುದೊಡ್ಡ ಕನ್ನಡದ ಸಂಘಟನೆಯಾಗಿ ಬೆಳೆದಿದೆ. ಪುಸ್ತಕಗಳ ಪ್ರಕಟಣೆ, ದತ್ತಿ ಕಾರ್ಯಕ್ರಮ, ವಿಚಾರ ಸಂಕಿರಣ, ಸಾಹಿತ್ಯ ಚಟುವಟಿಕೆಗಳು, ಕನ್ನಡಪರ ಹೋರಾಟಗಳ ಮೂಲಕ ಪರಿಷತ್ತು ಕನ್ನಡಿಗರ ಮನವನ್ನು ಮುಟ್ಟಿದೆ. ಆದರೆ ಪರಿಷತ್ತು ಇನ್ನೂ ಬೆಳೆಯಬೇಕಾದ ಅಗತ್ಯವಿದೆ. ಬೆಂಗಳೂರಿಗೆ ಮಾತ್ರ ಪರಿಷತ್ತು ಮೀಸಲಾಗದೆ ಗ್ರಾಮಾಂತರಮಟ್ಟಕ್ಕೂ ಮುಟ್ಟಬೇಕಾಗಿದೆ. ಪರಿಷತ್ತಿನ ಪ್ರಾಚೀನ ಕೃಷ್ಣರಾಜ ಪರಿಷನ್ಮಂದಿರ ನವೀಕರಣವಾಗಬೇಕಾದ ಅಗತ್ಯವಿದೆ. ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಪರಿಷತ್ತಿನ ಘಟಕಗಳು ತಮ್ಮದೇ ಆದ ಸ್ವಂತ ಕಟ್ಟಡಗಳನ್ನು ಹೊಂದಿ ಕನ್ನಡದ ಕೆಲಸವನ್ನು ಸುಲಲಿತವಾಗಿ ಮಾಡಬೇಕಾದ ಅಗತ್ಯವಿದೆ. ಸಾಹಿತ್ಯ ಕನ್ನಡಪರ ಕಾರ್ಯಕ್ರಮಗಳನ್ನು ಹೆಚ್ಚುಹೆಚ್ಚಾಗಿ ಗ್ರಾಮಾಂತರ ಮಟ್ಟದಲ್ಲಿ ಹಮ್ಮಿಕೊಂಡು ಕನ್ನಡದ ಜನಸಾಮಾನ್ಯರಿಗೆ ಪರಿಷತ್ತು ಮುಟ್ಟಬೇಕಾದ ಅಗತ್ಯವಿದೆ.

ದಿನಾಂಕ 7-5-2002ರಂದು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನ ತನ್ನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಮ್ಮಿಕೊಂಡಿತ್ತು. ರಸಪ್ರಶ್ನೆ ಕಾರ್ಯಕ್ರಮ, 'ಪರಿಷತ್ತು ಮುಂದೇನು?' ಎನ್ನುವ ಸಂವಾದ ಕಾರ್ಯಕ್ರಮ ಹಾಗೂ ಪರಿಷತ್ತಿಗಾಗಿ ದುಡಿದು ವೃತ್ತಿಯಿಂದ ನಿವೃತ್ತರಾದ ನೌಕರರಿಗೆ ಸಮ್ಮಾನವನ್ನು ಅಂದು ಮಾಡಲಾಯಿತು. ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ನಾಡಿನ ಹಿರಿಯ ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಆಚರಣೆಯ ವಿಶೇಷವಾಗಿದೆ. 'ಪರಿಷತ್ತು-ಮುಂದೇನು?' ಗೋಷ್ಠಿಯಲ್ಲಿ ನೀಡಿದ ಸಲಹೆಗಳನ್ನು ಕಾರ್ಯಗತಗೊಳಿಸಲು ಪರಿಷತ್ತು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ. ಶ್ರೀ ಕೃಷ್ಣರಾಜಮಂದಿರದ ನವೀಕರಣಕ್ಕಾಗಿ ಪ್ರಯತ್ನಿಸಲಾಗುವುದು. ಇದಕ್ಕೆ ಸಮಸ್ತ ಕನ್ನಡಿಗರ ಹಾಗೂ ಸರಕಾರದ ನೆರವು ತೀರಾ ಅಗತ್ಯ.

ಕನ್ನಡಿಗರು ಕಟ್ಟಿ ಬೆಳೆಸಿದ ಕನ್ನಡ ಸಾಹಿತ್ಯ ಪರಿಷತ್ತು ಈ ನಾಡಿನ ಸಮಸ್ತ ಕನ್ನಡಿಗರ ಸಂಸ್ಥೆಯಾಗಿ ಅರ್ಥಪೂರ್ಣವಾಗಿ ಬೆಳೆಯಲು ಎಲ್ಲರ ಸಹಕಾರ ತೀರಾ ಅಗತ್ಯ. ಎಲ್ಲರ ಸಲಹೆ, ಮಾರ್ಗದರ್ಶನ ಸಹಕಾರವನ್ನು ಇಂದಿನ ಅಧ್ಯಕ್ಷನಾದ ನಾನು ಬಯಸುತ್ತಿದ್ದೇನೆ. ಇದಕ್ಕೆ ಎಲ್ಲರೂ ಸ್ಪಂದಿಸುತ್ತೀರಾಗಿ ನಂಬಿದ್ದೇನೆ.

□

ಭಾಗ: ಮೂರು
ಕ.ಸಾ.ಪ ಅಧ್ಯಕ್ಷತೆಯ ದಿನಗಳು

''ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ?''

''ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ? ಎಳ್ಳು ಜೀರಿಗೆ ಬೆಳೆಯಯೋಳ'' ಎನ್ನುವ ಹಳ್ಳಿಯ ಹೆಣ್ಣು ಮಗಳ ಜೀವನ ಸಂದೇಶ ಅಪೂರ್ವವಾದದ್ದು; ಆಕೆಯ ಅಪಾರ ಜೀವನಾನುಭವದ ಹಿನ್ನೆಲೆಯಲ್ಲಿ ಅವಳಾಡುವ ಒಂದೊಂದು ಮಾತೂ ಗಾದೆಯ ಎತ್ತರಕ್ಕೆ ಬೆಳೆದು ನಿಂತಿರುತ್ತದೆ; ಸಾರ್ವತ್ರಿಕ ಸತ್ಯದ ಕಡೆ ಮುಖ ಮಾಡಿರುತ್ತದೆ; ಹೌದು ಎನ್ನಿಸುವಷ್ಟು ಸತ್ಯಸ್ಯ ಸತ್ಯವಾಗಿರುತ್ತದೆ.



ಹುಟ್ಟಿದ ಜೀವ ಅನಿವಾರ್ಯ ಮುಕ್ತಾಯದ ಕಡೆಗೆ ದಿನವೂ ಪಯಣಿಸುತ್ತಿರುವುದನ್ನು ಸಂಕೇತಿಸುವ ಎಳ್ಳು, ತರ್ಪಣ ಬಿಡುವ, ಎಳ್ಳು ನೀರು ಬಿಡುವ ಅಂತಿಮ ದರ್ಶನವನ್ನು ದಟ್ಟವಾಗಿ ಅಭಿಪ್ರಾಯಿಸುವುದನ್ನು ಕೂಗಿ ಹೇಳುತ್ತದೆ. ಹಾಗೆಯೇ ಜೀರಿಗೆ ಬೆಲ್ಲ ಮಂಗಳ ಕಾರ್ಯವನ್ನು ಸೂಚಿಸುತ್ತದೆ. ಮೊದಲು ಎಲ್ಲರಿಗೂ ಒದಗಿ ಬರುವ ಸಾವಿನ ಬಗೆಗೆ ಹೇಳುವ ಹೆಣ್ಣು ಮಗಳು, ಐಚ್ಛಿಕವೇನೊ ಈ ಸಂತೋಷ ಎಂದು ಅನಂತರ ಜೀರಿಗೆ ಬೆಲ್ಲ ಎನ್ನುತ್ತಾಳೆ.

ಇಷ್ಟೆಲ್ಲ ಜೀವನಾನುಭವ ಇರುವ ಹೆಣ್ಣು ಮಗಳು ಆಡುವ ಮಾತೆಲ್ಲ ಕವನವಂತೆ. ಅವಳ ನಿಟ್ಟುಸಿರು, ಹದಗೊಂಡ ಮಹಾಕಾವ್ಯವಂತೆ. ಅದಕ್ಕಾಗಿಯೇ ಪಾಶ್ಚಾತ್ಯ ವಿದ್ವಾಂಸರು ಹೇಳುವುದು, ರಟ್ಟೆಗಾತ್ರ ಮೀಸೆಬಿಟ್ಟ ಗಂಡಸು ರಚಿಸುವ ಕವನ,

ಕನ್ನಡ ನುಡಿ, ಜೂನ್ 2002, ನಿರೂಪಣೆ- ನ. ಚಕ್ರಪಾಣಿ

ಕಾವ್ಯವಲ್ಲ; ಕೇವಲ ಕಾವ್ಯದ ಛಾಯೆ ಮಾತ್ರ ಎಂದು.

ಹೀಗಿದ್ದರೂ ಶತಶತಮಾನಗಳಿಂದ ಅತ್ಯಂತ ಹೆಚ್ಚಿನ ಶೋಷಣೆಗೆ ಒಳಗಾಗಿರುವ ಸಾಮಾಜಿಕ ಘಟಕ ಎಂದರೆ ಅದು ಹೆಣ್ಣು. ಆ ಸಮುದಾಯವನ್ನು ಶೋಷಣೆಯ ಕಪಿಮುಷ್ಟಿಯಿಂದ ಮುಕ್ತಗೊಳಿಸಬೇಕಾದರೆ ಮೂಲಭೂತವಾಗಿ ಜಾಗೃತಿಯನ್ನು ಕ್ರಾಂತಿಕಾರಕವಾಗಿ ತರುವುದು ತೀರಾ ಅಗತ್ಯ.

ಮೂಢನಂಬಿಕೆಯ ಸುಳಿಯಿಂದ ಅವರನ್ನು ದೂರ ಇಡಬೇಕು. ಅದಕ್ಕೆ 'ವಿದ್ಯೆ' ಬಹಳ ಅಗತ್ಯ. ಅದಕ್ಕಾಗಿಯೇ, ಪ್ರಾಜ್ಞರು ಹೇಳುವುದು, 'ವಿದ್ಯೆ' ಕಳ್ಳನಪಹರಿಸದಿಹ ಧನ ಎಂದು, ವ್ಯಯ ಮಾಡಿದಷ್ಟು ಅದು ವೃದ್ಧಿ ಆಗುತ್ತದೆ. ಈ 'ಧನ' ಹೊಂದಿದ್ದರೆ ಬಹುತೇಕ ಸಮಸ್ಯೆ ಸವಾಲುಗಳನ್ನೆದುರಿಸಲು ಆತ್ಮವಿಶ್ವಾಸ ಮೂಡಿ ಬರುತ್ತದೆ ಎಂದು.

1975ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಂತರಾಷ್ಟ್ರೀಯ ಮಹಿಳಾ ವರ್ಷ ಆಚರಿಸಿದ ಸಂದರ್ಭದಲ್ಲಿ ಮಹಿಳೆಯರಿಂದಲೇ ಹಲವಾರು ವಿಚಾರಪೂರ್ಣ, ವಿಮರ್ಶಾತ್ಮಕ ಕೃತಿಗಳನ್ನು ಬರೆಸಿ ಪ್ರಕಟಿಸಲು ನಿರ್ಧರಿಸಲಾಯಿತು. ಅದರಂತೆ, ಆಯಾ ಕ್ಷೇತ್ರತಜ್ಞರಿಂದ ಹಸ್ತಪ್ರತಿಯನ್ನು ಆಹ್ವಾನಿಸಿತು. ಜೊತೆಗೆ, ಗೊತ್ತುಮಾಡಿದ ವಿಷಯಗಳ ಮೇಲೆ ಪುಸ್ತಕ ರಚಿಸುವ ಸ್ಪರ್ಧೆಯನ್ನು ಲೇಖಕಿಯರಿಗೆ ಏರ್ಪಡಿಸಿತ್ತು. ಹಾಗೆ ಬಂದ ಹಸ್ತಪ್ರತಿಗಳಲ್ಲಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅತ್ಯುತ್ತಮ ಎಂದು ಪರಿಗಣಿತವಾಗಿ ಆಯ್ಕೆಯಾದ 23 ಹಸ್ತಪ್ರತಿಗಳನ್ನು ಪರಿಷತ್ತು ಪ್ರಕಟಿಸಿತು. ಹಾಗೆ ಪ್ರಕಟವಾದ ಶೀರ್ಷಿಕೆಗಳನ್ನು ದಯವಿಟ್ಟು ಒಮ್ಮೆ ಗಮನಿಸಿ: 'ಮಹಿಳೆ ಮತ್ತು ಆಸ್ತಿಯ ಹಕ್ಕು', 'ಸಾಕ್ಷರತೆ,', 'ಕುಟುಂಬ ಯೋಜನೆ', 'ಮಕ್ಕಳ ಪೋಷಣೆ', 'ಉಳಿತಾಯ', 'ವಿಜ್ಞಾನ', 'ಸಮಾಜ ಕಲ್ಯಾಣ', 'ಉದ್ಯೋಗ', 'ದಾದಿಯರ ವೃತ್ತಿ', 'ಕಲೆ', 'ವಿವಾಹ', 'ಮಹಿಳಾ ಸ್ವಾತಂತ್ರ್ಯ', 'ಶಿಕ್ಷಣ', 'ಧರ್ಮ', 'ನಗರ ಜೀವನ', 'ಮಹಿಳೆ ಮತ್ತು ಕನ್ನಡ', 'ವಿಧವೆಯರ ಸಮಸ್ಯೆಗಳು', 'ಅನಾಥ ಮಹಿಳೆಯರು', 'ರಾಜಕಾರಣದಲ್ಲಿ ಮಹಿಳೆ', 'ಮೂಢನಂಬಿಕೆ ಮತ್ತು ಮಹಿಳೆ', 'ಗ್ರಾಮೀಣ ಮಹಿಳೆ', 'ಕೊಳಚೆ ಪ್ರದೇಶದಲ್ಲಿ ಮಹಿಳೆಯರು' ಇತ್ಯಾದಿ.

ಈ ಶೀರ್ಷಿಕೆಗಳ ಪುಸ್ತಕಗಳು ಸದ್ಯ ಲಭ್ಯವಿಲ್ಲದ ಕಾರಣ, ಈಗ ಮತ್ತೆ ಪ್ರಕಟಿಸಲಾಗಿದೆ. ಒಂದೊಂದು ಪುಸ್ತಕವೂ ತನ್ನದೇ ಆದ ವೈಶಿಷ್ಟ್ಯ ಹಾಗೂ ಮಹತ್ವವನ್ನು ಕಾಪಾಡಿಕೊಂಡಿದೆ. ಸರಳ ಹಾಗೂ ಸುಲಭ ಶೈಲಿಯಲ್ಲಿ ಮಹತ್ತರ ಮಾಹಿತಿ ನೀಡುವುದು ಈ ಪುಸ್ತಕಗಳ ಆಶಯವಾಗಿದೆ. ಇಂದಿನ ಮುದ್ರಣ ವೆಚ್ಚಕ್ಕೆ ಹೋಲಿಸಿದರೆ ಅತ್ಯಂತ ಸುಲಭ ಬೆಲೆಯನ್ನು ನಿಗದಿಪಡಿಸಲಾಗಿದೆ. ಇವರ ಲಾಭವನ್ನು ಜನತೆ ಪಡೆಯುಕೊಳ್ಳುವಂತೆ ಕನ್ನಡ ಸಾಹಿತ್ಯ ಪರಿಷತ್ತು ವಿನಯವಾಗಿ ವಿನಂತಿಸಿಕೊಳ್ಳುತ್ತದೆ.

ಭಾಗ: ಮೂರು
ಕ.ಸಾ.ಪ ಅಧ್ಯಕ್ಷತೆಯ ದಿನಗಳು

ಆತ್ಮಾವಲೋಕನವೂ ಸಿಂಹಾವಲೋಕನವೂ



ಸಾಮಾನ್ಯ ಬಡ ಕುಟುಂಬವೊಂದರಲ್ಲಿ ಜನಿಸಿದ ನನಗೆ ಸಾಹಿತ್ಯ, ಸಂಸ್ಕೃತಿ, ಸಂಘಟನೆಯಲ್ಲಿ ಅಪಾರ ಆಸಕ್ತಿ ಉಂಟಾಯಿತು. ಕಾರಣವಾದರೂ ಇಷ್ಟೆ-ನಾನು ಕರಾವಳಿಯಲ್ಲಿ ಜನಿಸಿದವ, 'ಯಕ್ಷಗಾನ' ನನ್ನ ನಾಡಿಬಡಿತದಷ್ಟು ನನಗೆ ನನ್ನದಾಯಿತು. ಆ ಮೂಲಕ ರಾಮಾಯಣ, ಮಹಾಭಾರತ ಕಾವ್ಯಗಳು ನನಗೆ ಪರಿಚಿತವಾದವು. ಭಾರತದಲ್ಲಿ ರಾಮಾಯಣ, ಮಹಾಭಾರತಗಳನ್ನು ಮಹಾಕಾವ್ಯಗಳೆಂದು ಕರೆಯುತ್ತಾರೆ. ಹಾಗೆಂದರೇನು ಎಂದು ಬಹಳವಾಗಿ ಆಲೋಚಿಸಿದೆ; ಪ್ರಾಜ್ಞರ ಮೂಲಕ ಅರ್ಥ ತಿಳಿದುಕೊಂಡೆ. ವ್ಯಕ್ತಿ ತನ್ನ ಜೀವಿತದ ಅವಧಿಯಲ್ಲಿ ಎದುರಿಸಬೇಕಾದ, ಎದುರಿಸಬಹುದಾದ ಎಲ್ಲ ಸಂದರ್ಭಗಳೂ ಅವುಗಳಲ್ಲಿ ಈಗಾಗಲೇ ಪ್ರಸ್ತಾವಿತವಾಗಿರುತ್ತವೆ, ವ್ಯಕ್ತಿಯೊಬ್ಬ ಮಹಾಕಾವ್ಯಗಳನ್ನು ಗಮನಿಸಿ ನೋಡಿದಾಗ, ಎಂಥ ಕಠಿಣ ಸಂದರ್ಭವಾದರೂ ಅಲ್ಲಿನ ಪಾತ್ರಗಳು ಕೈಗೊಳ್ಳುವ ಉಚಿತ ನಿರ್ಣಯಗಳು ವ್ಯಕ್ತಿ ಮಾರ್ಗಸೂಚಿ ಒದಗಿಸುವುದರೊಂದಿಗೆ, ಆತ್ಮ ಸ್ಥೈರ್ಯವನ್ನೂ ದಯಪಾಲಿಸುತ್ತವೆ ಎಂದೆಲ್ಲ ಅರಿತುಕೊಂಡೆ. ಈ ಗಟ್ಟಿ ನೆಲಗಟ್ಟಿನ ಹಿನ್ನೆಲೆಯಲ್ಲಿ ವ್ಯಕ್ತಿತ್ವ ರೂಪಿಸಿಕೊಂಡು ಆತ್ಮ ವಿಶ್ವಾಸ ತುಂಬಿಕೊಂಡೆ. ಸಾಹಿತ್ಯ ಸಂಸ್ಕೃತಿ ಸಂಘಟನೆಯ ಕ್ಷೇತ್ರದಲ್ಲಿ ಅಪಾರ ಪರಿಶ್ರಮ ಗಳಿಸಿಕೊಳ್ಳಲು ಶ್ರಮಿಸಿದೆ. ಕರಾವಳಿಯ ಕೌರವ್ಯ ವೃಕ್ಷಗಳು ಮನುಷ್ಯ ಮಾತ್ರನಾದವನನ್ನು ಎಷ್ಟೆಲ್ಲ

ಕನ್ನಡ ನುಡಿ, ಜುಲೈ 2002, ನಿರೂಪಣೆ- ನ. ಚಕ್ರಪಾಣಿ

ಕಿರಿಯನನ್ನಾಗಿ ಮಾಡಿ ಅಣಕಿಸುತ್ತವೆ ಎಂದು ಸದಾ ಯೋಚಿಸುತ್ತಿದ್ದೆ. ಎತ್ತರಕ್ಕೆ ಬೆಳೆಯಲು ಶ್ರಮಿಸಿದೆ, ಶ್ರಮಿಸುತ್ತಲೂ ಇದ್ದೇನೆ. ಈ ನಿರಂತರ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಯೋಚನೆಯನ್ನು ಯೋಜನೆಯನ್ನಾಗಿಸಿ ಸಾಧನೆ, ಸಿದ್ಧಿಯ ಕಡೆಗೆ ತಿರುಗಿಸಿದೆ. ಹಲವಾರು ಆತ್ಮೀಯರ ಬೆಂಬಲ, ಪ್ರೋತ್ಸಾಹವೊದಗಿತು. ಕನ್ನಡ ಸಾಹಿತ್ಯ ಪರಿಷತ್ತಿನಂಥ ಧೀಮಂತ ಸಂಸ್ಥೆಗೆ ಅಧ್ಯಕ್ಷನಾಗುವ ಅವಕಾಶವೂ ದೊರೆಯಿತು. ಹಲವು ಹತ್ತು ಯೋಜನೆಗಳನ್ನು ಹಮ್ಮಿಕೊಂಡು ಒಂದು ವರ್ಷದ ಕಾರ್ಯಗೌರವವನ್ನೂ ಪೂರ್ಣಗೊಳಿಸಿದೆ. ಹಮ್ಮಿಕೊಂಡಿದ್ದ ಯೋಜನೆಗಳು ಬಹಳಷ್ಟು ಫಲಪ್ರದವಾದವು, ಹಲವು ಬೆಳವಣಿಗೆಯ ಎಲ್ಲ ಲಕ್ಷಣವನ್ನು ತೋರಗೊಡುತ್ತಿವೆ. ಕೆಲವು ಆಶಾದಾಯಕವಾಗಿಲ್ಲ. ಈ ಅನುಭವದ ಮೇಲೆ ಮುಂದಿನ ಎರಡು ವರ್ಷಗಳ ಅವಧಿಯನ್ನು ಇನ್ನೂ ಹೆಚ್ಚಿನ ಕಾರ್ಯ ಚಟುವಟಿಕೆಗಳೊಂದಿಗೆ ಪೂರ್ಣಗೊಳಿಸಬೇಕೆಂಬ ಹಂಬಲ ಉಳ್ಳವನಾಗಿದ್ದೇನೆ.

ಪರಿಷತ್ತಿನ ಕಾರ್ಯ ಚಟುವಟಿಕೆಗಳು ನಿರಂತರವಾಗಿ ರಾಜ್ಯಾದ್ಯಂತ ನಡೆಯಬೇಕೆಂಬ ಉದ್ದೇಶದಿಂದ ದತ್ತಿ ಸಂಗ್ರಹವನ್ನು ಗಣನೀಯ ಪ್ರಮಾಣದಲ್ಲಿ ಕೈಗೊಂಡೆ. ಈವರೆಗೆ ಒಂದು ನೂರು ಇಪ್ಪತ್ತು ದತ್ತಿ ಸಂಗ್ರಹವಾಗಿದೆ. ಇತ್ತೀಚಿನ ದಿನಗಳಲ್ಲಿ ಅತ್ಯಧಿಕ ಎಂದು ಹೇಳಲಾದ 3 ಲಕ್ಷ ರೂಪಾಯಿಗಳ ಭಾರೀ ಮೊತ್ತದ ದತ್ತಿ ಶ್ರೀಮತಿ ತಾಯಮ್ಮ, ಶ್ರೀ ಎಸ್.ಸಿ. ಮಲ್ಲಯ್ಯ ಪ್ರಶಸ್ತಿ ದತ್ತಿಯನ್ನು ಪರಿಷತ್ತಿಗೆ ಪಡೆದುಕೊಂಡವು ಎಂದು ಹೇಳಲು ಹೆಮ್ಮೆಪಡುತ್ತೇನೆ.


ಜಿಲ್ಲಾ ಘಟಕಗಳ ಸಂಪನ್ಮೂಲ ವೃದ್ಧಿಗೊಳಿಸಲು ಹಾಗೂ ಸಮ್ಮೇಳನಗಳನ್ನು ನಡೆಸಲು ಕೇಂದ್ರ ಪರಿಷತ್ತು ತಲಾ 10 ಸಾವಿರ ರೂಪಾಯಿಗಳ ಆರ್ಥಿಕ ನೆರವು ಪೂರೈಸಿದೆ. ತಾಲ್ಲೂಕು ಸಮ್ಮೇಳನ ನಡೆಸಲು ತಲಾ ಐದು ಸಾವಿರ ರೂಪಾಯಿ ವಿತ್ತೀಯ ಸಹಾಯ ನೀಡಲಾಗುತ್ತಿದೆ.

ಸಾಹಿತ್ಯ ಪರಿಷತ್ತು ಆರಂಭದ ದಿನಗಳಲ್ಲಿ ಪ್ರಕಟಿಸುತ್ತಿದ್ದ 'ಕನ್ನಡ ನುಡಿ'ಯ ಮಹತ್ವವನ್ನು ಗಮನಿಸಿ, ಗತವೈಭವ ಮತ್ತೆ ಮರುಕಳಿಸುವಂತಾಗಲು ಸಮರ್ಥ ಸಂಪಾದಕರನ್ನು ತೊಡಗಿಸಿಕೊಂಡು ಈಗಾಗಲೇ ಈ ಒಂದು ವರ್ಷದ ಅವಧಿಯಲ್ಲಿ ಅಪರೂಪದ 7 ಸಂಚಿಕೆಗಳನ್ನು ಪ್ರಕಟಿಸಿದೆವು. ನಾಡು, ನಾಡಿಗೆ ಸಂಬಂಧಿಸಿದಂತೆ ಪರಿಷತ್ತು ನಿಜಕ್ಕೂ ನಿರ್ವಹಿಸಬೇಕಾದ ಕಾರ್ಯಗೌರವಕ್ಕೆ 'ಕನ್ನಡ ನುಡಿ' ಮುಖವಾಣಿಯಾಗಿ ಇರುವಂತೆ ನೋಡಿಕೊಳ್ಳಲಾಗುತ್ತಿದೆ. 'ಕನ್ನಡ ನುಡಿ' ಆಕಾಶವಾಣಿ ವಿದೇಶ ಸೇವೆಗಳ ವಿಭಾಗದಲ್ಲಿ ಕನ್ನಡ ಭಾಷೆಯ ಕಾರ್ಯಕ್ರಮ ಪ್ರಸಾರವಾಗುವಂತೆ ಹಕ್ಕೊತ್ತಾಯ ತಂದು ಯಶಸ್ಸು ಕಂಡಿದೆ. ಘನ ಸರ್ಕಾರದ ನೆರವು ಪಡೆದು ಒಂದು ನೂರು ಅತ್ಯುತ್ತಮ ಪುಸ್ತಕಗಳ ಪ್ರಕಟಣೆ ಕಾರ್ಯ ಯೋಜನೆಯ ಅಡಿಯಲ್ಲಿ ಇದುವರೆಗೆ 50ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

ಷಾಣ್ಮಾಸಿಕವಾಗಿದ್ದ ಪರಿಷತ್ಪತ್ರಿಕೆ ತ್ರೈಮಾಸಿಕವಾಗಿ ರೂಪುಗೊಂಡು ವಿದ್ವತ್ ಜನತೆಯನ್ನು ಆಕರ್ಷಿಸಿದೆ. ಉಳಿದಂತೆ ಸಿಬ್ಬಂದಿಗಳಿಗೆ ಕಂಪ್ಯೂಟರ್ ತರಬೇತಿ, ನೂತನವಾಗಿ ಪಂಪ ಸಭಾಂಗಣ ನಿರ್ಮಾಣ, ಕೃಷ್ಣರಾಜಪರಿಷನ್ಮಂದಿರಕ್ಕೆ ಹೊಸ ಪೀಠೋಪಕರಣ ಅಳವಡಿಕೆ ಇವೇ ಮುಂತಾದ ಹಲವು ಹತ್ತು ಅಭಿವೃದ್ಧಿ ಕಾರ್ಯ ಯೋಜನೆಗಳನ್ನು ಕಾರ್ಯಗತಗೊಳಿಸಿರುತ್ತೇನೆ.

ಸಾಧಿಸಬೇಕೆಂದು ಹೊರಟಿದ್ದು ನೂರಾರು. ಕಾರ್ಯಗತಗೊಂಡದ್ದು ಹಲವಾರು ಎಂಬ ಕಟು ಸತ್ಯವನ್ನು ಅರಿತ ನಾನು, ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಇನ್ನೂ ಹೆಚ್ಚಿನ ಸಾಧನೆಯನ್ನು ತಮ್ಮೆಲ್ಲರ ಸಹಕಾರದೊಂದಿಗೆ ಸಾಧಿಸ ಬಯಸುತ್ತೇನೆ.

ಬದಲಾವಣೆಯೇ ಬೆಳವಣಿಗೆ



ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ 'ಮಹಾಮನೆ'. ನಾಡು-ನುಡಿಯ ಶ್ರೇಯಸ್ಸಿಗಾಗಿ; ಕನ್ನಡಿಗರ ಪುರೋಭಿವೃದ್ಧಿಗಾಗಿ ಈ ಮಹಾನ್ ಸಂಸ್ಥೆ ಚರ್ಚಿಸದ ವಿಷಯವಿಲ್ಲ. ದೂರದರ್ಶಿತ್ವ ಇದರ ನಾಡಿಬಡಿತವಾಗಿದ್ದು ಈ ಸಾರ್ವಭೌಮ ಸಂಸ್ಥೆಗೆ ಹಿತ್ತಲಿದೆ; ಜೊತೆಗೆ ಮುಂಜಗಲಿಯೂ ಇದೆ.

ಯಾವ ಯಾವ ಸಂಸ್ಥೆಗಳು ಸ್ವಾತಂತ್ರ್ಯಪೂರ್ವದಲ್ಲಿ ಆರಂಭವಾಗಿವೆಯೋ ಅವುಗಳೆಲ್ಲವೂ ದೀರ್ಘಾಯುವಾಗಿವೆ. ಕಾರಣವಾದರೂ ಇಷ್ಟೆ, ಅವುಗಳು ತಮ್ಮ ಕಣ್ಣಮುಂದೆ ಇರಿಸಿಕೊಂಡಿದ್ದ ವಿಶಾಲವಾದ, 'ಬಹುಕಾಲ ಊರ್ಜಿತಗೊಳ್ಳುವ', ಸರ್ವಜನ ಉಪಕಾರಿಯಾದ ಕಾರ್ಯಯೋಜನೆಗಳೇ ಆಗಿವೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಈ ಗಟ್ಟಿ ನೆಲಗಟ್ಟಿನ ಮೇಲೆ ರೂಪಿಸಿದ ರೂವಾರಿಗಳೆಂದರೆ, ವಿಶ್ವವಿಖ್ಯಾತ 'ಸರ್‌ಎಂವಿ' ಅವರು, ಅಂದಿನ ನಾಡಪ್ರಭುಗಳಾಗಿದ್ದ ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಮಹಾಸ್ವಾಮಿಗಳು, ಸ್ಥಳದಾನ ಮಾಡಿದ್ದ ಮಹಾ ಮುತ್ಸದ್ದಿ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು.

ಆರಂಭದಲ್ಲಿ ಏಕೀಕರಣಕ್ಕಾಗಿ ಶ್ರಮಿಸಿದ ಈ ಸಂಸ್ಥೆ ಯಾವ ಪ್ರಕಾಶಕನೂ ಮುಂದೆ ಬಂದು ಪ್ರಕಟಿಸದಂಥ ನಿಘಂಟು, ವ್ಯಾಕರಣ, ಛಂದಸ್ಸು ಇಂಥ ಶಾಸ್ತ್ರಗ್ರಂಥಗಳನ್ನು ಪ್ರಕಟಿಸಲು

ಕನ್ನಡ ನುಡಿ, ಆಗಸ್ಟ್ 2002, ನಿರೂಪಣೆ- ನ. ಚಕ್ರಪಾಣಿ

ಮುಂದಾಯಿತು.

ಭಾರತೀಯ ಭಾಷೆಗಳಲ್ಲೇ ಅಪರೂಪವೆಂದು ಹೇಳಲಾಗುವ ಕನ್ನಡ-ಕನ್ನಡ ಬೃಹತ್ ನಿಘಂಟನ್ನು ಕೇವಲ ಅರ್ಥವನ್ನು ಮಾತ್ರ ಕೊಡುವುದಷ್ಟಕ್ಕೆ ಸೀಮಿತವಾಗಿಸದೆ ಪ್ರಯೋಗಗಳನ್ನು ನೀಡಿ ಎಂಟು ಬೃಹತ್ ಸಂಪುಟಗಳಲ್ಲಿ ಪರಿಷತ್ತು ಪ್ರಕಟಿಸಿದೆ. ಪ್ರಸ್ತುತ ಕನ್ನಡ-ಕನ್ನಡ ಇಂಗ್ಲಿಷ್ ನಿಘಂಟು ಕಾರ್ಯಯೋಜನೆಯನ್ನು ಕೈಗೆತ್ತಿಕೊಂಡು ಮೊದಲ ಸಂಪುಟವನ್ನು ಮಾರಾಟಕ್ಕೆ ಬಿಡುಗಡೆ ಮಾಡಲಿದೆ. ಹಾಗೆಯೇ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಮೂಲಪಾಠ ಹಾಗೂ ಗದ್ಯಾನುವಾದದೊಂದಿಗೆ ಪ್ರಕಟಿಸಿದೆ. ಮಕ್ಕಳ, ಮಹಿಳೆಯರ, ಸಮುದಾಯ ಮಾಲಿಕೆಗಳನ್ನು ಹೊರತಂದಿದೆ. ಕಾಲಮಾನಕ್ಕೆ ತಕ್ಕಂತೆ, ಕಂಪ್ಯೂಟರ್ ಅಳವಡಿಕೆಯನ್ನು ಮಾಡಲಾಗಿದೆ.

ಯಾವುದೇ ಸಂಸ್ಥೆ ನಿಂತ ನೀರಾಗದೆ ಎಲ್ಲಿಯವರೆಗೆ ತನ್ನ ಜಂಗಮಶೀಲತೆಯನ್ನು ಕಾಪಾಡಿಕೊಂಡಿರುತ್ತದೋ ಅಲ್ಲಿಯವರೆಗೆ ಬೆಳೆಯುತ್ತಲೇ ಮುಂದುವರಿಯುತ್ತದೆ. ಬದಲಾವಣೆಯನ್ನೇ ಬೆಳವಣಿಗೆ ಎಂದೇ ಪ್ರಾಜ್ಞರು ಕರೆಯುವುದು.

ಹೊಸ ಹೊಸ ಯೋಜನೆಗಳನ್ನು ಅಳವಡಿಸಿ, ಕಾಲಕ್ಕೆ ತಕ್ಕಂತೆ ಆಧುನೀಕರಣಗೊಳಿಸಲು, ಹೊಸ ಹೊಸ ವೈಶಾಲ್ಯವನ್ನು ರೂಪಿಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಇದೇ ದಿನಾಂಕ 16-8-2002ರಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಲಿ ಜಾರಿಯಲ್ಲಿರುವ ನಿಬಂಧನೆಗಳು, ಉದ್ದೇಶಿತ ತಿದ್ದುಪಡಿಗಳು, ಅಂಗೀಕರಿಸಬಹುದಾದ ತಿದ್ದುಪಡಿಗಳ ಕರಡನ್ನು ಮಂಡಿಸಲಾಗಿತ್ತು. ಅದರ ಪೂರ್ಣಪಾಠ ಇದೇ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗಿದೆ. ಸರ್ವೋಚ್ಚ ಸಕಲ ಸದಸ್ಯರ ಸಭೆ ಕೂಲಂಕಷವಾಗಿ ಚರ್ಚಿಸಿ ಅಗತ್ಯ ತಿದ್ದುಪಡಿಗಳನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಮಹಾಧಿವೇಶನವನ್ನು ಸವಿನಯವಾಗಿ ಪ್ರಾರ್ಥಿಸುತ್ತೇನೆ.

ಸದಸ್ಯ ಸಂಪತ್ತು ಆರಂಭದಲ್ಲಿ ಕೇವಲ ನೂರಾರಿದ್ದುದು, ಪ್ರಸ್ತುತ ಅರ್ಧ ಲಕ್ಷದವರೆಗೂ ವೃದ್ಧಿಸಿದೆ. ಕನ್ನಡಿಗರು ಸಂಸ್ಥೆಯ ಮೇಲಿರಿಸಿರುವ ಪ್ರೀತಿಯನ್ನೇ ಇದು ಸೂಚಿಸುತ್ತದೆ. ಇಷ್ಟೆಲ್ಲ ಸದಸ್ಯ ಸಂಪತ್ತನ್ನು ನೋಡಿಕೊಳ್ಳುವ, ನಿಯತಕಾಲಿಕೆಯನ್ನು ರವಾನಿಸುವ, ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ಹಾಗೂ ವಾರ್ಷಿಕಾಧಿವೇಶನಕ್ಕೆ ಆಹ್ವಾನಿಸುವ ಕಾರ್ಯಗೌರವಗಳನ್ನು ಕರ್ತವ್ಯವೆಂದು ನಿರ್ವಹಿಸಲು ಅಪಾರ ಹಣ ವಿನಿಯೋಗವಾಗಬೇಕಿದೆ. ಸೀಮಿತ ಸಂಪನ್ಮೂಲದಲ್ಲಿ ತೂಗಿಸುವುದು ಕಷ್ಟಸಾಧ್ಯವಾಗಿರುವುದರಿಂದ ಸದಸ್ಯತ್ವದ ಶುಲ್ಕವನ್ನು 500 ರೂಪಾಯಿಗಳಿಗೆ ವೃದ್ಧಿಸುವ ಸೂಚನೆಯನ್ನು ಮಂಡಿಸಲಾಗಿದೆ.

ಈಗಿರುವ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಉದ್ದೇಶಿತ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯ ಆಗದ ಕಾರಣ, ಕಾರ್ಯಕಾರಿ ಸಮಿತಿಯ ಅವಧಿಯನ್ನು ಐದು ವರ್ಷಕ್ಕೆ ಹೆಚ್ಚಿಸುವಂತೆ ಕೋರಲಾಗಿದೆ.


ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಸಮರ್ಥವಾಗಿ ಮುನ್ನುಗ್ಗುತ್ತಿರುವುದರಿಂದ ಅವರಿಗೆ ಪ್ರಾತಿನಿಧ್ಯ ನೀಡಲು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನಿಷ್ಠ ಐದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಒಬ್ಬರು ಮಹಿಳಾ ಕಾರ್ಯದರ್ಶಿಗಳು ಇರಬೇಕೆಂದು ಉದ್ದೇಶಿಸಲಾಗಿದೆ.

ಇಂತಹ ರಚನಾತ್ಮಕ ತಿದ್ದುಪಡಿಗಳೊಂದಿಗೆ ಪರಿಷತ್ತಿನ ಸರ್ವಾಂಗೀಣ ಪ್ರಗತಿಗೆ ಶ್ರಮಿಸಬೇಕಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವಮಾನ್ಯ ಸಕಲ ಸದಸ್ಯರ ಸಭೆ ಉದ್ದೇಶಿತ ತಿದ್ದುಪಡಿಗಳನ್ನು ಕೂಲಂಕಷವಾಗಿ ಪರ್ಯಾಲೋಚಿಸಿ ಅಂಗೀಕಾರದ ಒಪ್ಪಿಗೆ ನೀಡುತ್ತದೆ ಎಂದು ನಂಬಿರುತ್ತೇನೆ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಕನ್ನಡಿಗರ ಅತಿ ಸಜ್ಜನಿಕೆ !



'ಕಾವೇರಿಯಿಂದ-ಗೋದಾವರಿವರೆಗೆ ಇದ್ದ ನಾಡೇ ಕನ್ನಡ ನಾಡು' ಎಂದು ನೃಪತುಂಗ ಅಮೋಘವರ್ಷನ ಆಸ್ಥಾನದಲ್ಲಿದ್ದ, ಕವಿರಾಜ ಮಾರ್ಗಕಾರ ಶ್ರೀವಿಜಯ ಹೆಮ್ಮೆಯಿಂದ ನುಡಿಯುತ್ತಾನೆ; ಅಂದಿನ ಭೌಗೋಳಿಕ ವಿಸ್ತಾರವೆಲ್ಲಿ? ಇಂದು ಸಂಕೋಚಗೊಂಡಿರುವ ಕರ್ನಾಟಕ ರಾಜ್ಯವೆಲ್ಲಿ!

ಕಾಯುವ-ಏರಿ ಕಾವೇರಿ ಜೀವಜಲವಾಗಬೇಕಾಗಿರುವುದು ದಾವಾಗ್ನಿಯಾಗಿದೆ. ಹುಟ್ಟಿದಾರಭ್ಯ ಕನ್ನಡಿಗರ ಅತಿ ಸಜ್ಜನಿಕೆಯಿಂದಾಗಿ ಪರರಿಗೇ ಉಪಕಾರಿಯಾಗಿದೆ.

ಈ ನದಿಗೆ ಅಡ್ಡಗಟ್ಟೆ ಕಟ್ಟಲು ಆರಂಭದಿಂದಲೂ ದೊಣ್ಣೆ ನಾಯಕನ ಅಪ್ಪಣೆ ಕೇಳಬೇಕಾದ ಪರಿಸ್ಥಿತಿ ಉಂಟಾಗಿತ್ತು, 'ಸಹನದೀ ರಾಜ್ಯ'ದವರೂ ಕಂಸ ಮಾವಂದಿರಾಗಿದ್ದಾರೆ. ಈಗಂತೂ ಜಯಲಲಿತಾ ಅವರು, ಹುಟ್ಟು ಕನ್ನಡಿಗರಾದರೂ ಕನ್ನಡಿಗರಿಗೆ ದ್ರೋಹ ಎಸಗುತ್ತಿದ್ದಾರೆ.

ಹುಟ್ಟಿದ ರಾಜ್ಯದಲ್ಲಿ ಬೆಳೆದುನಿಂತ ಪೈರು ಒಣಗಿ ಹೋದರೂ ಸರಿ, ರಾಜಕೀಯ ಲಾಭಕ್ಕಾಗಿ ಅಧಿಕಾರ ಸೂತ್ರ ಹಿಡಿದಿರುವ ರಾಜ್ಯದ ಬಿತ್ತುವ ಪೈರಿಗೆ ನೀರಂತೂ ಬೇಕೇಬೇಕೆಂದು ಪಟವಂತೂ ಹಿಡಿದಿದ್ದಾರೆ. ದ್ರಾವಿಡ ಮೂಲದಿಂದ ಹಿರಿಯಣ್ಣ ನಾಗಬೇಕಾಗಿರುವ ತಮಿಳಣ್ಣ ದಾಯಾದಿಯಾಗಿ ತಕರಾರು ತಂಟೆ ಹೂಡಿದ್ದಾನೆ.

ಕನ್ನಡ ನುಡಿ, ಅಕ್ಟೋಬರ್ 2002, ನಿರೂಪಣೆ- ನ. ಚಕ್ರಪಾಣಿ

ಸಾಹಿತ್ಯ, ಸಂಗೀತ, ಕಲೆ, ನೃತ್ಯ, ನಾಟಕ, ಚಲನಚಿತ್ರ ಇವು ದೇಶದ ಸಾಂಸ್ಕೃತಿಕ ಸಂಪತ್ತನ್ನು ಪ್ರತಿನಿಧಿಸುತ್ತವೆ; ಇವಕ್ಕೆ ದೇಶ-ಭಾಷೆಯ ಇತಿಮಿತಿಗಳಿಲ್ಲ, ಇವು ಒಂದುಗೂಡಿಸುವ ತಂತುಗಳಾಗಿವೆ ಎಂದೆಲ್ಲ ಹೆಮ್ಮೆಯಿಂದ ಹೇಳಿಕೊಳ್ಳುವ ನಾವು, ತಮಿಳು ಚಲನಚಿತ್ರ ತಾರೆಗಳು ಕರ್ನಾಟಕಕ್ಕೆ ವಿದ್ಯುತ್ ಪೂರೈಕೆಯನ್ನು ತಡೆಗಟ್ಟಬೇಕೆಂದು ಮುಂದಾಗಿರುವುದರ ಬಗೆಗೆ ಏನನ್ನಬೇಕು?

ಕರ್ನಾಟಕದಲ್ಲೂ ಗಣನೀಯ ಪ್ರಮಾಣದಲ್ಲಿ ತಮಿಳರಿದ್ದಾರೆ; ಸುರಕ್ಷಿತರಾಗಿದ್ದಾರೆ, ನೆಮ್ಮದಿಯಿಂದಿದ್ದಾರೆ, ಸಂತೋಷದಿಂದಿದ್ದಾರೆ. ಆದರೆ ತಮಿಳು ಚಿತ್ರರಂಗದವರ ಹಿಜಿರೆತ್ತುವ ಕಾರ್ಯದಿಂದಾಗಿ ಶಾಂತಿ ಕದಡದೆ ಇರುತ್ತದೆಂದು ಹೇಳಲು ಸಾಧ್ಯವೆ? ತಮಿಳು ಚಿತ್ರರಂಗದಲ್ಲಿ ಖ್ಯಾತಿಗಳಿಸಿರುವ ಹುಟ್ಟು ಕನ್ನಡಿಗರು ಅನೇಕರಿದ್ದಾರೆ. ಅವರಿಗೂ 'ಉಭಯ ಸಂಕಟ'. ಹೇಳಿದರೆ ಹಾಳಾಗುವುದು; ಹೇಳದಿರೆ ಇರಲಾಗದು. ಈ ಪರಿಸ್ಥಿತಿ ಉಂಟಾಗಿದೆ. ಕನ್ನಡಿಗರಿಗಂತೂ ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲದಂತೆ ಆಗಿದೆ.

ಕರ್ನಾಟಕ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಎಸ್. ಎಂ. ಕೃಷ್ಣ ಅವರು ಈಗಾಗಲೇ ಪಾದಯಾತ್ರೆ ನಡೆಸಿದ್ದಾರೆ, ರಾಜರಾಜೇಶ್ವರಿ, ಚಾಮುಂಡೇಶ್ವರಿ ಹೀಗೆ ಎಲ್ಲ ದೇವರು-ದಿಂಡರುಗಳಿಗೆ ಹರಕೆ ಹೊತ್ತು ಕಾವೇರಿ ನದಿ ಪಾತ್ರದ ರೈತರ ಸಹಾನುಭೂತಿ ಗಳಿಸಲು ಕಾಲ್ನಡಿಗೆ ಯಾತ್ರೆ ನಡೆಸಿದ್ದಾರೆ.

ವಿರೋಧಿ ಧುರೀಣರಂತೂ ಕಾವೇರಿ ನದಿ ತಂಟೆಯನ್ನು ಸಮರ್ಪಕವಾಗಿ ನಿರ್ವಹಿಸದೆ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಕೃಷ್ಣ ಮುಂದಾಗಿದ್ದಾರೆಂದು ಆಕ್ಷೇಪಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ-ಸಿಂಗಾಪುರ ಕಲ್ಪನೆ, ಕಾಲ್ನಡಿಗೆ, ದೇವರು-ದಿಂಡರು ಇವು ಹೇಗೆ ಹೊಂದಾಣಿಕೆ ಆಗುತ್ತವೆ ಎನ್ನುವುದೇ ಸೋಜಿಗದ ಸಂಗತಿ ಆಗಿದೆ.

ಅತ್ತ ಕಿರುಗಾವಲಿನ ಅನಭಿಷಿಕ್ತ ದೊರೆ ಜಿ. ಮಾದೇಗೌಡರು ವೃದ್ಧಾಪ್ಯವನ್ನು ಬದಿಗಿರಿಸಿ ಹುಡುಗತನವನ್ನು ಮೆರೆಯುತ್ತಿದ್ದಾರೆ.

ರೈತರಂತೂ ಕಾವೇರಿ, ಕಬಿನಿಯ ಮೇಲೆ ಕಣ್ಣಾವಲಿರಿಸಿದ್ದಾರೆ. ಜಲಸಮಾಧಿಗೂ ಮುಂದಾಗಿದ್ದಾರೆ. ಕಾನೂನಿನ ಬಿಕ್ಕಟ್ಟು, ರೈತರ ಸಂಕಟ, ನೀರಿಗಾಗಿ 'ಹಾ ಹಾ ಕಾರ'. ಇದೇ ಸಂದರ್ಭದ ದುರ್ಲಾಭ ಪಡೆಯಲು ಪಕ್ಕದ ಆಂಧ್ರ ಕೃಷ್ಣಾ ನದಿಯಿಂದ ನೀರಿಗಾಗಿ ಒತ್ತಾಯಿಸುತ್ತಿದೆ. ಕಾಡುಗಳ್ಳ ವೀರಪ್ಪನ್ ಪಕ್ಕೆಲುಬು ಮುರಿಯುತ್ತಿದ್ದಾನೆ. ಒಂದೇ ಎರಡೇ, ರಾಜ್ಯ ಸಮಸ್ಯೆಗಳ ಕಗ್ಗಂಟಾಗಿದೆ.

ಎಸ್.ಎಂ. ಕೃಷ್ಣ ಅವರು ಕೃಷ್ಣರಾಜ ಸಾಗರ, ಕಬಿನಿ ಪ್ರದೇಶಕ್ಕೆ ಭೇಟಿ ನೀಡಲು ಪ್ರತಿದಿನ 12ರಿಂದ 20 ಕಿ.ಮೀ.ವರೆಗೆ ಕಾಲ್ನಡಿಗೆಯಲ್ಲಿ ಕ್ರಮಿಸಿ ಅಲ್ಲಲ್ಲಿ ಮೊಕ್ಕಾಂ ಮಾಡಿ ಜನತೆಯ ವಿಶ್ವಾಸ ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ. ಕಾವೇರಿ ನದಿ ತಂಟೆಯಂತೂ ಆರಂಭದಿಂದಲೂ ತಂಟೆಯಾಗಿಯೇ ಮುಂದುವರಿದಿದೆ.

ದಾರ ಗೋಜಲಾಗಿದೆ. ಎಳೆದರೆ ಗಂಟಾಗುತ್ತದೆ. ಒಂದೊಂದೇ ಎಳೆ ಬಿಡಿಸುವ ತಾಳ್ಮೆ ಈಗಿನ ಅಗತ್ಯವಾಗಿದೆ. ಅದರ ನೇತಾರ ಯಾರೆಂದು ಕಾದು ನೋಡಬೇಕಾಗಿದೆ.

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಮಹಾರಾಷ್ಟ್ರದ ತಂಟೆಕೋರತನ



1914ರಲ್ಲಿ ಬೆಳಗಾವಿ ಜಿಲ್ಲೆಯ ಗುರ್ಲ ಹೊಸೂರಿಗೆ ಬಂದಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರು ಕರ್ನಾಟಕ ಹಾಗೂ ಮಹಾರಾಷ್ಟ್ರದ ಜನತೆ ಒಂದು ಮಾತನ್ನು ನೆನಪಿನಲ್ಲಿಡಬೇಕು. ಒಂದಾನೊಂದು ಕಾಲಕ್ಕೆ ಎರಡೂ ಪ್ರದೇಶಗಳ ಜನರು ಆಡುತ್ತಿದ್ದ ಭಾಷೆ ಒಂದೇ ಆಗಿದ್ದಿತು; ಅದು ಕನ್ನಡ ಭಾಷೆ ಎಂದು ಸ್ಪಷ್ಟನುಡಿಗಳಲ್ಲಿ ಹೇಳಿದ್ದರು. ಈಗಲೂ ನಾವು ಮಹಾರಾಷ್ಟ್ರದ ಬಹುಭಾಗದ ಪ್ರಾಚೀನ ಇತಿಹಾಸವನ್ನು ಗಮನಿಸಿದರೆ, ಅಲ್ಲಿ ಕನ್ನಡ ನಾಡಿನ ಕುರುಹುಗಳೇ ಅಧಿಕವಾಗಿ ದೊರೆಯುತ್ತವೆ; ಅತ್ಯಂತ ಪ್ರಾಚೀನತಮ ದಾಖಲೆಗಳಾದ ಶಾಸನಗಳೂ ಕನ್ನಡ ಭಾಷೆಯಲ್ಲೇ ಇವೆ; ಆಶ್ಚರ್ಯ ಎಂದರೆ ಬೆರಳೆಣಿಕೆಯ ಶಾಸನಗಳು ಮಾತ್ರ ಮರಾಠಿ ಭಾಷೆಯವು; ಉಳಿದವರೆಲ್ಲ ಕನ್ನಡ ಭಾಷೆಯವೇ ಆಗಿವೆ.

ಈ ಹಿಂದಿನ ಸಮಿತಿಗಳು ನೀಡಿದ ಗಡಿವಿವಾದದ ವರದಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮಹಾರಾಷ್ಟ್ರ ಏಕ ಸದಸ್ಯ ಮಹಾಜನ ಆಯೋಗದ ರಚನೆಗೆ ಕಾರಣವಾಯಿತು. ಮಹಾಜನ ಆಯೋಗವು ನೀಡುವ ತೀರ್ಪಿಗೆ, ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇಂದ್ರಸರ್ಕಾರ ಒಪ್ಪಬೇಕೆಂಬ ನಿರ್ಣಯವಾಯಿತು. ಅದರಂತೆ ಕರ್ನಾಟಕ, ಈಗಲೂ ಮಹಾಜನ ವರದಿಯೇ ಅಂತಿಮ ಎಂದು ತನ್ನ ಪ್ರಾಮಾಣಿಕ ನಿಲುವಿಗೆ ಬದ್ಧವಾಗಿದೆ. ಆದರೆ

ಕನ್ನಡ ನುಡಿ, ಫೆಬ್ರವರಿ 2003, ನಿರೂಪಣೆ- ನ. ಚಕ್ರಪಾಣಿ

ಮಹಾರಾಷ್ಟ್ರ, ಗಡಿವಿವಾದವನ್ನು ಸುಪ್ರೀಂ ಕೋರ್ಟಿಗೆ ಎಳೆಯುವುದಾಗಿ ತಂಟೆಕೋರತನವನ್ನು ಮುಂದುಮಾಡಿದೆ.

ಗಡಿವಿವಾದವೇ ಆಗಲಿ, ಜಲವಿವಾದವೇ ಆಗಲಿ ಎರಡೂ ರಾಜ್ಯಗಳ ನಡುವಿನ ತಂಟೆಗಳನ್ನು ಪರಿಹರಿಸಲು ಮೊದಲು ಸಂಸತ್ತಿನಲ್ಲಿ ನಮ್ಮ ಸಂಸದರು ಸಂವಿಧಾನದ ತಿದ್ದುಪಡಿಗೆ ಶ್ರದ್ಧಾನಿಷ್ಠೆಯಿಂದ ಪ್ರಯತ್ನಿಸಬೇಕು, ಇದಕ್ಕೆ ಕೇಂದ್ರ ಸರ್ಕಾರದ ಪ್ರಮುಮನೋಭಾವವನ್ನು ಗೆಲ್ಲಬೇಕು, ಸಹರಾಜ್ಯ ಸಂಸದರ ವಿಶ್ವಾಸ ಗಳಿಸಿಕೊಳ್ಳಬೇಕು, ಕಾಯಿದೆ ಸಚಿವಾಲಯದಲ್ಲಿ ಕಾರ್ಯಾನುಸರಣೆಗೆ ವಿನಯಪೂರ್ವಕ ಒತ್ತಾಯ ತರಬೇಕು. ಈ ಎಲ್ಲ ಕಾರ್ಯಗೌರವವನ್ನು ನಿರ್ವಹಿಸಬೇಕಾದವರು ನಮ್ಮ ಸಂಸದರೇ. ಅವರ ಮೇಲೆಯೆ ಹೆಚ್ಚಿನ ಹೊಣೆಗಾರಿಕೆ ಇದೆ. ಆದರೂ ಪರಿಷತ್ತು ಜನರ ಅಭಿಪ್ರಾಯ ಮೂಡಿಸಲು ಎಂದೂ ಹಿಂದೆಬಿದ್ದಿಲ್ಲ. ಸದಾ ಮುಂಚೂಣಿಯಲ್ಲೇ ಸೇನಾನಿಯಾಗಿ ಕಾಯುತ್ತಿದೆ. ಕನ್ನಡ ನೆಲ-ಜಲ, ನಾಡ-ನುಡಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರವನ್ನು ಗಮನದಲ್ಲಿರಿಸಿ; ಈವರೆಗೆ ಅಖಿಲ ಭಾರತ ಮಟ್ಟದ 69 ಸಾಹಿತ್ಯ ಸಮ್ಮೇಳನಗಳ ಬಹಿರಂಗ ಅಧಿವೇಶನದಲ್ಲಿ ನೂರಾರು ನಿರ್ಣಯಗಳನ್ನು ಕೈಗೊಂಡಿವೆ. ಆದರೆ ಅನುಷ್ಠಾನದ ದೃಷ್ಟಿಯಲ್ಲಿ ಹಲಕೆಲವು ಮಾತ್ರ ಕಾರ್ಯಗತಗೊಂಡಿವೆ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಬಹಳಷ್ಟು ನಿರ್ಣಯಗಳು ಅನುಷ್ಠಾನಗೊಳ್ಳದೆ ಹಾಗೆಯೇ ಉಳಿದಿವೆ, ಜನಶಕ್ತಿಯನ್ನು ಸಂಘಟಿಸುವುದು, ನ್ಯಾಯೋಚಿತ ನಿರ್ಣಯಗಳು ಅನುಷ್ಠಾನಗೊಳ್ಳುವಂತೆ ಮಾಡುವುದು ಪರಿಷತ್ತಿನ ಮುಂದಿನ ಕಾರ್ಯಯೋಜನೆಗಳಾಗಿವೆ.

ಬೆಳಗಾವಿಯಲ್ಲಿ ಮಾರ್ಚ್ 7, 8 ಹಾಗೂ 9ರಂದು ಜರುಗುವ ಅಖಿಲ ಭಾರತ 70ನೇ ಸಾಹಿತ್ಯ ಸಮ್ಮೇಳನದಲ್ಲಿ ಗಡಿವಿವಾದ, ಜಲವಿವಾದ, ಭಾಷಾವಿವಾದ ಕುರಿತಂತೆ ಜನಜಾಗೃತಿ ಮಾಡೋಣ. ಕನ್ನಡಿಗರಿಗೆ ಅನ್ಯಾಯ ಆಗದಂತೆ ಸಂರಕ್ಷಿಸುವ ಪಣತೊಡೋಣ.

☐

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಸಾಹಿತ್ಯ ಜಾತ್ರೆ ಉಂಟುಮಾಡಿದ ಪರಿಣಾಮ



ಇದೇ ಮಾರ್ಚ್ 7, 8, 9 (2003)ರಂದು ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಲಕ್ಷೋಪಲಕ್ಷ ಕನ್ನಡ ಸಾಹಿತ್ಯಸಕ್ತರು ಬೆಳಗಾವಿಗೆ, ಸಾಹಿತ್ಯ ಜಾತ್ರೆಗೆ ಬಂದು ಸಮ್ಮೇಳಗೊಂಡರು. ಒಂದೇ ಮನಸ್ಸಿನ ಜನ ಒಂದೆಡೆ ಜಾತ್ರೆಗೊಂಡರು. ಸ್ಥಳೀಯ ಜನತೆ ಪುಳಕಗೊಂಡಿತು. ಊರೊಟ್ಟಿನ ಕಾರ್ಯಕ್ಕೆ ಮುಂದಾಯಿತು. ಕನ್ನಡ ಜನತೆಯ ಸಜ್ಜನಿಕೆಗೆ ಮರಾಠಿ ಮಾತನಾಡುವ ಕನ್ನಡಿಗರು ತಲೆತೂಗಿದರು. ಸಜ್ಜನಿಕೆಯಲ್ಲಿ ತಾವೂ ಭಾಗಿಗಳಾದರು. ಕನ್ನಡ ಜನತೆಯ ಆದರಾತಿಥ್ಯಕ್ಕೆ ಮುಂದಾದರು. ಬೃಹತ್ ಸಮಾವೇಶ, ಸ್ಥಳೀಯರ ಆತ್ಮವಿಶ್ವಾಸವನ್ನು ಬಲಗೊಳಿಸಿತು, ಕನ್ನಡಿಗರ ಸಂಘಟನಾಶಕ್ತಿಗೆ ಮೂಕವಿಸ್ಮಿತವಾಗಿ ಜನತೆ ನೋಡಿತು. ಕನ್ನಡತನಕ್ಕೆ ರಾಜೋಪಚಾರ ದೊರೆಯಿತು.

ಸಮ್ಮೇಳನಗಳು ಕೇವಲ ಜಾತ್ರೆ; ಇವುಗಳಿಂದ ಏನೂ ಲಾಭವಿಲ್ಲ ಎಂದು ಹೀಗಳೆಯುತ್ತಿದ್ದ; ತಮ್ಮ ಕಾಲಿಗೆ ತಾವೇ ನಮಸ್ಕರಿಸಿಕೊಳ್ಳುತ್ತಿದ್ದ ಬೆರಳೆಣಿಕೆ ಜನರು ತಮ್ಮ ಸದ್ದಡಗಿಸಿಕೊಂಡರು.

ಇಡೀ ಬೆಳಗಾವಿ ಜನತೆ, ಮೆರವಣಿಗೆಯಲ್ಲಿ ಭಾಗಿಗಳಾದ ಪ್ರತಿಯೊಬ್ಬರಿಗೂ, ಮನೆಮನೆಯಲ್ಲಿಯೂ ತಂಪು ಪಾನೀಯ ಉಪಾಹಾರ ವಿತರಣೆ ಮಾಡಿದ ದೃಶ್ಯ ನೋಡಿದರೆ ಕಣ್ಮನ

ಕನ್ನಡ ನುಡಿ, ಮಾರ್ಚ್ 2003, ನಿರೂಪಣೆ– ನ. ಚಕ್ರಪಾಣಿ

ತುಂಬಿಬರುತ್ತಿತ್ತು. ಅಪಾರ ಕನ್ನಡ ಪುಸ್ತಕಗಳು ಒಂದೆಡೆ ನೋಡಲು ಕಾಣಸಿಕ್ಕವು, ಖರೀದಿಯ ಸುಗ್ಗಿ ನಡೆಯಿತು. ತಿನ್ನುವ ಪದಾರ್ಥದಲ್ಲಿ ಬದಲಾವಣೆ, ಬದುಕುವ ವಾತಾವರಣದಲ್ಲಿ ಬದಲಾವಣೆ, ಎಲ್ಲಕ್ಕೂ ಮಿಗಿಲು ಧೀಮಂತರ ಆಲೋಚನಾ ಲಹರಿಯ ಲಾಭ.

ಇದೇ ಸಂದರ್ಭದಲ್ಲಿ ಕನ್ನಡ ಸರ್ವಾಂಗೀಣ ಪ್ರಗತಿಗೆ ಅಗತ್ಯವಾದ ಯೋಜನೆಗಳನ್ನು ಮಹಾಧಿವೇಶನದ ಮುಂದಿರಿಸಲಾಯಿತು. ರಾಜ್ಯಾಡಳಿತ ಸೂತ್ರ ಹಿಡಿದ ಎಸ್.ಎಂ. ಕೃಷ್ಣ ಅವರ ಅವಗಾಹನೆಗೆ ಹಲವು ಹತ್ತು ಯೋಜನೆಗಳ ಕಡೆ ಗಮನ ಸೆಳೆಯಲಾಯಿತು.

ಜಿಲ್ಲಾ ಪಂಚಾಯತ್‌ನಿಂದ ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಪ್ರತಿವರ್ಷ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು; ತಾಲ್ಲೂಕು ಪಂಚಾಯತ್‌ನಿಂದ, ತಾಲ್ಲೂಕು ಘಟಕಗಳಿಗೆ ತಲಾ 25 ಸಾವಿರ ರೂಪಾಯಿಗಳ ವಾರ್ಷಿಕ ಅನುದಾನವನ್ನು ನೀಡಲು ಆಯ-ವ್ಯಯದಲ್ಲಿ ಅವಕಾಶ ಕಲ್ಪಿಸಿಕೊಳ್ಳುವಂತೆ ಆದೇಶಿಸಲು ಮುಖ್ಯಮಂತ್ರಿಗಳಲ್ಲಿ ವಿನಂತಿಸಲಾಯಿತು.

ತಾಲ್ಲೂಕು ಘಟಕಗಳಿಗೆ ತಮ್ಮದೇ ಆದ ಸಾಹಿತ್ಯ ಭವನಗಳನ್ನು ಕಟ್ಟಿಕೊಳ್ಳಲು ಅಗತ್ಯವಾದ ನಿವೇಶನವನ್ನು ಉಚಿತವಾಗಿ ದಯಪಾಲಿಸುವಂತೆ ಕೇಳಲಾಯಿತು.

ಸಾಹಿತ್ಯ ಹಾಗೂ ಸಂಸ್ಕೃತಿಯ ಪ್ರಸಾರದಲ್ಲಿ ತೊಡಗಿರುವ ಕನ್ನಡ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನವನ್ನು ಸ್ಥಗಿತಗೊಳಿಸಲು ಉದ್ದೇಶಿಸಿರುವ ಆದೇಶವನ್ನು ಹಿಂದೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು.

ಐವತ್ತು ಸಾವಿರಕ್ಕೂ ಅಧಿಕ ಸದಸ್ಯ ಸಂಪತ್ತನ್ನುಳ್ಳ ಸಾಹಿತ್ಯ ಪರಿಷತ್ತಿನ ಸದಸ್ಯರಿಗೆ ಪ್ರತಿ ತಿಂಗಳು ಉಚಿತವಾಗಿ ರವಾನಿಸುತ್ತಿರುವ ಕನ್ನಡ ನುಡಿಗೆ, ಪ್ರತಿ ತಿಂಗಳು, ಘನ ಸರಕಾರ ಕನಿಷ್ಠ 50 ಸಾವಿರ ರೂಪಾಯಿಗಳ ಜಾಹೀರಾತನ್ನು ನೀಡಬೇಕೆಂದು ಕೇಳಿಕೊಳ್ಳಲಾಯಿತು.

ಈ ಎಲ್ಲ ಕೇಳಿಕೆಗಳ ಹಿಂದೆ ಇರುವುದು, ಕನ್ನಡದ ಬೆಳವಣಿಗೆಯ ತುಡಿತ, ಈ ಕನ್ನಡ ಜೋಳಿಗೆ ಹಿಡಿದಿರುವ ಕಾರಣ ಕನ್ನಡದ ಅಭಿವೃದ್ಧಿಗಾಗಿ, ನಾಡು ನುಡಿಯ ಸಂರಕ್ಷಣೆಗಾಗಿ, ಕನ್ನಡ ಜನತೆಯ ಅಭಿಮಾನ ಗಳಿಸುವುದಕ್ಕಾಗಿ ಎಂಬುದು ಮಾತ್ರ ಸತ್ಯ.

☐

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ನಿಘಂಟು ಸಂಸಾರ

ವೇದೋಪನಿಷತ್ತಿಗಿರುವಷ್ಟೇ ಹಳಮೆ ನಿಘಂಟು ಶಾಸ್ತ್ರಕ್ಕೂ ಇದೆ. ವೇದನಿಘಂಟುವೇ ಅತ್ಯಂತ ಪ್ರಾಚೀನತಮವಾದುದು ಎಂದು ಚರಿತ್ರಕಾರರು ಗುರುತಿಸುತ್ತಾರೆ.

ಆರನೇ ಶತಮಾನದಿಂದೀಚೆಗೆ ಹಲವಾರು ವಿವರಣಾತ್ಮಕ ನಿಘಂಟುಗಳು ಕಾಣಸಿಗುತ್ತವೆ.

ಹತ್ತನೇ ಶತಮಾನದ ರತ್ನಕವಿ, ಕನ್ನಡ ನಿಘಂಟು ಶಾಸ್ತ್ರದ ಗುರುವೆಂದು ಪರಿಗಣಿತನಾಗುತ್ತಾನೆ. ಆತನ **'ರತ್ನಕಂದ'** ಕನ್ನಡದ ಮೊದಲ ನಿಘಂಟೆಂದು ಪ್ರಖ್ಯಾತಗೊಂಡಿದೆ. ಎರಡನೇ ನಾಗವರ್ಮನ **'ಅಭಿಧಾನ ವಸ್ತು ಕೋಶ'**; ನಾಚಿರಾಜನ **'ನಾಚೀರಾಜೀಯ'**, ಅನಂತರದ ನಿಘಂಟು ಗ್ರಂಥಗಳಾಗಿವೆ. ಕೇಶಿರಾಜನ **'ಶಬ್ದಮಣಿದರ್ಪಣಂ'** ಕೃತಿಯಲ್ಲಿನ ಕೆಲ ಅಧ್ಯಾಯಗಳು ನಿಘಂಟುವಿನಂತೆ ಸುಮಾರು ೧೪೧೬ ಪದಗಳಿಗೆ ಅರ್ಥ ನೀಡುತ್ತವೆ. ಕನ್ನಡ ಕಾವ್ಯಗಳಲ್ಲಿನ ಸಂಸ್ಕೃತ ಪದಗಳಿಗೆ ಕನ್ನಡದ ಅರ್ಥ ನೀಡುವ ಪ್ರತಿಷ್ಠಿತ ನಿಘಂಟೆಂದರೆ ಮಂಗರಾಜನ **'ಮಂಗಾಭಿಧಾನಂ'**.



ಕಬ್ಬಿಗರ ಕೈಪಿಡಿ ಎಂದೇ ಹೆಸರು ಗಳಿಸಿರುವ **'ಕರ್ನಾಟಕ ಶಬ್ದಸಾರ'**, ಬೊಮ್ಮರಸನ 'ಚತುರಾಸ್ಯ ನಿಘಂಟು', ಲಿಂಗಮಂತ್ರಿಯ **'ಕಬ್ಬಿಗರ ಕೈಪಿಡಿ-II'**, ವಿರಕ್ತ ತೋಂಟದಾರ್ಯನ 'ಹಳಗನ್ನಡ ನಿಘಂಟು', **'ಕರ್ನಾಟಕ**

ಕನ್ನಡ ನುಡಿ, ಏಪ್ರಿಲ್ 2003, ನಿರೂಪಣೆ- ನ. ಚಕ್ರಪಾಣಿ

ಶಬ್ದಮಂಜರಿ', ಶೃಂಗಾರ ಕವಿಯ 'ಕರ್ನಾಟಕ ಸಂಜೀವನ', 'ಶಬ್ದಾಗಮ', ಕುಮಾರವ್ಯಾಸ ಭಾರತಕ್ಕೆ ಸಂಬಂಧಿಸಿದಂತೆ ಕಠಿಣ ಪದಗಳ ಅರ್ಥ ನೀಡುವ 'ಭಾರತ ನಿಘಂಟು'. ದೇವೋತ್ತಮನ 'ನಾನಾರ್ಥ ರತ್ನಾಕರ' ಸೂರ್ಯ ಕವಿಯ ಕವಿಕಂಠಹಾರಂ, ಕನ್ನಡ ನಿಘಂಟು ಕ್ಷೇತ್ರದ ಮೈಲಿಗಲ್ಲಿನ ಶಬ್ದಕೋಶಗಳಾಗಿವೆ.

ಇವೆಲ್ಲಕ್ಕೂ ಕಿರೀಟಪ್ರಾಯವಾದುದು, ರೆವರೆಂಡ್ ಫಾದರ್ ಕಿಟ್ಟೆಲ್ಲರ ಕನ್ನಡ-ಇಂಗ್ಲಿಷ್ ನಿಘಂಟು.

ಮೇಲ್ಕಂಡ ಎಲ್ಲ ನಿಘಂಟುಗಳ ಉಪಯೋಗವನ್ನು ಪಡೆದುಕೊಂಡು ಕನ್ನಡ ಸಾಹಿತ್ಯ ಪರಿಷತ್ತು ರಚಿಸಿದ ಬೃಹನ್ನಿಘಂಟುವಿನ ಆಧಾರದ ಮೇಲೆ, 1975ರಲ್ಲಿ ಸಂಕ್ಷಿಪ್ತ ಕನ್ನಡ ನಿಂಘಟನ್ನು ಸಿದ್ಧಪಡಿಸಿತು. ಇದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ದಿನನಿತ್ಯದ ಉಪಯೋಗಕ್ಕೆ ತುಂಬಾ ಸಹಕಾರಿಯಾದುದು.

ಐವತ್ತು ಸಾವಿರ ಪ್ರತಿಗಳು ಕೇವಲ ತಿಂಗಳೊಂದರಲ್ಲೇ ಮಾರಾಟವಾಗಿ ದಾಖಲೆ ಸ್ಥಾಪಿಸಿದ ಈ ನಿಘಂಟನ್ನು 1977ರಲ್ಲಿ ಪರಿಷತ್ತು ಮತ್ತೆ ಒಂದು ಲಕ್ಷ ಪ್ರತಿ ಮುದ್ರಿಸಿ ಕನ್ನಡಿಗರ ಬೇಡಿಕೆ ಪೂರೈಸಿತು.

ಪರಿಷತ್ತು ಪಡೆದುಕೊಂಡಿರುವ ನಿಘಂಟು ಶಾಸ್ತ್ರದ ಅನುಭವದ ಹಿನ್ನೆಲೆಯಲ್ಲಿ, ಮತ್ತೊಂದು ಚಿಕ್ಕ ರತ್ನಕೋಶ ನಿಘಂಟು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿರಲಿ ಎಂದು ಅತ್ಯಂತ ಉಪಯುಕ್ತ ಮಾಹಿತಿಯನ್ನು ಕಡೆಯ ಪುಟಗಳಲ್ಲಿ ನೀಡಲಾಗಿದೆ.

ಸುಮಾರು ಒಂದು ಸಾವಿರ ಪುಟದಷ್ಟಿದ್ದ ನಿಘಂಟನ್ನು ಪರಿಷ್ಕರಿಸಿ, ಸುಮಾರು ಸಾವಿರದೈನೂರು ಪುಟಗಳಿಗೆ ವಿಸ್ತರಿಸಿ ಜನತೆಗೆ ಹೆಚ್ಚಿನ ಉಪಕಾರ ಮಾಡಲು ಪರಿಷತ್ತು ನಿರ್ಧರಿಸಿ, 2001ನೇ ಇಸವಿಯಲ್ಲಿ ಮತ್ತೆ ಒಂದು ಲಕ್ಷ ಪ್ರತಿಯನ್ನು ಮುದ್ರಿಸಿ ಇದೀಗ ಕನ್ನಡ ಓದುಗರ ಬೇಡಿಕೆಯನ್ನು ಪೂರೈಸಿದೆ.

ಸಂಕ್ಷಿಪ್ತ ನಿಘಂಟನ್ನು ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟನ್ನಾಗಿ ಸಿದ್ಧಪಡಿಸುವ ಕಾರ್ಯವನ್ನು ಪರಿಷತ್ತು ಈಗ ಕೈಗೊಂಡಿದೆ. ಇದರ ಉಪಯೋಗವನ್ನು ಕನ್ನಡ ಜನತೆ ಮಾಡಿಕೊಳ್ಳಲಿ ಎಂದು ಪರಿಷತ್ತು ಆಶಿಸುತ್ತದೆ.

ಹೇರಳವಾಗಿ, ದಾಸ್ತಾನಿನಲ್ಲಿರುವ 'ರತ್ನಕೋಶ' ಹಾಗೂ 'ಸಂಕ್ಷಿಪ್ತ ಕನ್ನಡ ನಿಘಂಟ'ನ್ನು ಖರೀದಿಸಿ.

ಸಂಕ್ಷಿಪ್ತ ಕನ್ನಡ-ಕನ್ನಡ ಇಂಗ್ಲಿಷ್ ನಿಘಂಟನ್ನು ಸ್ವಾಗತಿಸಿ.

ಗೆರೆಯ ಮೇಲಣ ಗೆರೆ ; ಅದು ಗಟ್ಟಿಗೆರೆ



ದಕ್ಷಿಣ ಭಾರತದ ಜೈನಕಾಶಿ ಎಂದೇ ಪ್ರಸಿದ್ಧವಾದ ಮೂಡುಬಿದಿರೆಯಲ್ಲಿ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮುಂಬರುವ ಡಿಸೆಂಬರ್ 4ರಿಂದ 7ರವರೆಗೆ ನಾಲ್ಕು ದಿನಗಳ ಕಾಲ, ಸಡಗರ ಸಂಭ್ರಮದಿಂದ ಜರುಗಲಿದೆ. ಯಾವುದೇ ಕಾರಣಕ್ಕೂ ಸಮ್ಮೇಳನ ನಡೆಯುವ ದಿನಾಂಕವನ್ನು ಮುಂದೂಡುವುದಾಗಲಿ, ಬದಲಿಸುವುದಾಗಲಿ ಮಾಡುವುದಿಲ್ಲ ಎಂಬ ದೃಢ ಸಂಕಲ್ಪದೊಂದಿಗೆ, ಎಲ್ಲ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿವೆ.

66ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೂ, ನಾಲ್ಕು ದಿನಗಳ ಕಾಲ ಮಂಗಳೂರಿನಲ್ಲಿ ಜರುಗಿತು. ಅದೊಂದು ಅಚ್ಚುಕಟ್ಟಾಗಿ, ವ್ಯವಸ್ಥಿತ ರೀತಿಯಲ್ಲಿ, ಮಾದರಿ ಸಮ್ಮೇಳನದಂತೆ ನಡೆಯಿತು. ಆ ಸಮ್ಮೇಳನವನ್ನು ನಿರ್ವಹಿಸಿದ ದಕ್ಷ ಜನತೆಯೆ ಈಗ ಇನ್ನೂ ಹೆಚ್ಚಿನ : ಕೊಂಚವೂ ಲೋಪ ಬಾರದಂತೆ, ''ಗೆರೆಯ ಮೇಲಣ ಗೆರೆ : ಅದು ಗಟ್ಟಿಗೆರೆ'' ಎಂಬಂತೆ ಒಂದು ಸಮ್ಮೇಳನದ ನಂತರ ಮತ್ತೊಂದು ಸಮ್ಮೇಳನ ನಡೆಸಿದರೆ, ಅದು ಹಿಂದಿನ ಸಮ್ಮೇಳನಕ್ಕಿಂತ ಹೆಚ್ಚು ಯಶಸ್ವಿಯಾಗಲು ಸಾಧ್ಯ ಎನ್ನುವ ಆತ್ಮವಿಶ್ವಾಸದೊಂದಿಗೆ ಎಲ್ಲ ಸಿದ್ಧತೆಗಳನ್ನು ಭರದಿಂದ ನಡೆಸಿದೆ.

ಅನುಭವಕ್ಕಿಂತ ದೊಡ್ಡ ವಿದ್ಯೆ ಮತ್ತೊಂದಿಲ್ಲ ಎನ್ನುವಂತೆ ಹಿಂದಿನ ಸಮ್ಮೇಳನದ ವ್ಯವಸ್ಥೆಯ ಅನುಭವ, ಈಗಿನ ಸಮ್ಮೇಳನದ ವ್ಯವಸ್ಥೆಗೆ ಮಾರ್ಗಸೂಚಿ ದೊರಕಿಸಿಕೊಟ್ಟಿದೆ ಎಂದು ಆ ಜನತೆ

ಕನ್ನಡ ನುಡಿ, ಆಗಸ್ಟ್ 2003, ನಿರೂಪಣೆ– ನ. ಚಕ್ರಪಾಣಿ

ಧೈರ್ಯ ಸ್ಥೈರ್ಯಗಳಿಂದ ಮುನ್ನಡೆದಿದೆ.

1927ರಲ್ಲಿ ೧೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಿನಲ್ಲಿ ಜರುಗಿತ್ತು. 1960ರಲ್ಲಿ 42ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಧರ್ಮಸ್ಥಳದಲ್ಲಿ ನಡೆದಿತ್ತು. ಈ ಮೂರು ಸಮ್ಮೇಳನಗಳು ಮೂರು ದಿನಗಳವು.

ಈಗ ನಡೆಯುವ ಸಮ್ಮೇಳನ ದಕ್ಷಿಣ ಕನ್ನಡ ಜಿಲ್ಲೆಯ ಸಮ್ಮೇಳನವೇ ಆದರೂ ದಕ್ಷಿಣ ಕನ್ನಡ ಜಿಲ್ಲೆ ಈಗ ವಿಭಜನೆಗೊಂಡಿದೆ. ಹಾಗಾಗಿ ಅದರ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಮ್ಮೇಳನದ ವ್ಯವಸ್ಥೆ ಮಾಡುತ್ತಿರುವವರು, ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಯನ್ನು ಸೇರಿಸಿಕೊಂಡು ಬೃಹತ್ತಾದ ಮಾದರಿ ಸಮ್ಮೇಳನ ನಡೆಸಲು ಉದ್ದೇಶಿಸಿದ್ದಾರೆ.

ಮೂಡುಬಿದಿರೆ, ಮಂಗಳೂರಿನಿಂದ 22 ಮೈಲಿಗಳ ದೂರದಲ್ಲಿರುವ ಕಾರ್ಕಳ ತಾಲ್ಲೂಕಿನಲ್ಲಿ ವಿರಾಜಮಾನವಾಗಿದೆ. ತನ್ನ ಗರ್ಭದಲ್ಲಿ 18 ಜಿನ ಬಸದಿಗಳನ್ನು ಹೊಂದಿದ್ದು, ''ತ್ರಿಭುವನ ತಿಲಕ ಚೂಡಾಮಣಿ'' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಾವಿರ ಕಂಬದ ಬಸದಿಯನ್ನು ಹೊಂದಿ ಲೋಕವಿಖ್ಯಾತವಾಗಿದೆ.

ಮೂರು ಉಪ್ಪರಿಗೆಗಳನ್ನು ಹೊಂದಿರುವ ಈ ಬಸದಿ ವಾಸ್ತುಶಿಲ್ಪದ ದೃಷ್ಟಿಯಿಂದ ವಿಶ್ವ ಪರಂಪರೆಗೆ ಸೇರ್ಪಡೆಯಾಗುವಷ್ಟು ಪ್ರಸಿದ್ಧಿ ಪಡೆದಿದೆ.

ಚೀನಾ ದೇಶದ ಮಾದರಿಯ ಛಾವಣಿಗಳು, ನೇಪಾಳ ದೇಶದ ಮಾದರಿಯ ದೇವಸ್ಥಾನ, ಭಾರತದ ಜೈನ ಶೈಲಿ ಇವು ಮೂರು ಮುಪ್ಪುರಿಗೊಂಡು ಹೊಸದೊಂದು ವಿನ್ಯಾಸ ಕ್ರಮ ಇಲ್ಲಿ ಜನ್ಮತ್ತಿಯಗೊಂಡಿದೆ.

ಮೂರನೆಯ ಉಪ್ಪರಿಗೆ ಮೇಲಿನ ಹೊದಿಕೆ ತಾಮ್ರದ ರೇಕುವಿನಿಂದ ಅಲಂಕೃತಗೊಂಡಿದೆ. ಇಂಥ ಅಪರೂಪದ ದೇವಸ್ಥಾನದಿಂದ ಮೂಡುಬಿದಿರೆ ದೇವಸ್ಥಾನಗಳ ಸಾಂಸ್ಕೃತಿಕ, ವಾಸ್ತುಶಿಲ್ಪ ಹಾಗೂ ಮೂರ್ತಿ ಶಿಲ್ಪಗಳ ಅಧ್ಯಯನಕ್ಕೆ ಸಂಶೋಧಕರನ್ನು ಸದಾ ಕೈ ಬೀಸಿ ಕರೆಯುತ್ತಿದೆ.

ಇಂಥ ಪವಿತ್ರ ಸ್ಥಳದಲ್ಲಿ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಸಾಹಿತ್ಯಕ, ಸಾಂಸ್ಕೃತಿಕ ಸಮ್ಮೇಳನಕ್ಕೆ ಆಗಮಿಸುವಂತೆ ಪ್ರತಿಯೊಬ್ಬ ಕನ್ನಡಿಗನಿಗೂ ಆತ್ಮೀಯ ಆಹ್ವಾನ.

ಬಹುರಾಷ್ಟ್ರೀಯ ಕಂಪನಿಗಳು ಭಾರತದೊಳಕ್ಕೆ ನುಗ್ಗಿ ಬಂದಿವೆ. ಜಾಗತೀಕರಣದ ಹೆಸರಿನಲ್ಲಿ ಇಡೀ ವಿಶ್ವವೇ ಕುಗ್ರಾಮವಾಗಿ ಕುಸಿದು ಕುಕ್ಕರಿಸುತ್ತಿದೆ. ಐ.ಟಿ. ವಲಯ ವ್ಯಾಪಿಸುತ್ತಿದೆ. ಇಂಗ್ಲಿಷ್ ರಾರಾಜಿಸುತ್ತಿದೆ. ಇಂಥ ಇಕ್ಕಟ್ಟಿನಲ್ಲಿ ಕನ್ನಡದ ಸೊಲ್ಲು ಉಳಿಸಿಕೊಳ್ಳಲು ಪ್ರತಿಯೊಬ್ಬ ಕನ್ನಡಿಗನೂ ಈಗಿಂದೀಗಲೇ ಶ್ರಮಿಸಬೇಕಿದೆ.

ಬನ್ನಿ ಒಂದಾಗಿ ಶ್ರಮಿಸೋಣ. ಬನ್ನಿ, ಒಂದಾಗಿ ಉಳಿಯೋಣ.

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಉತ್ತರ-ಕನ್ನಡಿಯೊಳಗಿನ ಗಂಟು



ಕನ್ನಡ ಭಾಷೆ ಮೂಲದ್ರಾವಿಡರಿಂದ ಜನ್ಯ. ಪಂಚದ್ರಾವಿಡದಲ್ಲಿ ಒಂದು ಎಂದು ಅಧಿಕೃತವಾಗಿ ಪ್ರತಿಪಾದಿಸದ ದಿನಗಳಲ್ಲಿ 1937ರಲ್ಲಿ ಮಂಗಳೂರಿನಲ್ಲಿ ಜರುಗಿದ 13ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭ ಅಧ್ಯಕ್ಷ ಪೀಠದಿಂದ ಶ್ರೀ ಆರ್. ತಾತಾಚಾರ್ಯರು ''ಕನ್ನಡ ಭಾಷೆ ತಮಿಳಿನಿಂದ ಹುಟ್ಟಿದುದೆಂದು ಒಂದು ಕಡೆಯವರು ವಾದಿಸುತ್ತಾರೆ. ಮತ್ತೊಂದೆಡೆ ತೆಲುಗಿನಿಂದ ಬಂದುದೆಂದು ಕೆಲವರ ವಾದ. ಒಬ್ಬ ತಮಿಳನು ಕನ್ನಡ, ತೆಲುಗು, ಮಲೆಯಾಳ ಮೊದಲಾದ ಭಾಷೆಗಳಿಗೆ ಹೆತ್ತತಾಯಿ ತಮಿಳೆಂದು ಸ್ವಭಾಷಾ ಮಾತೆಯನ್ನು ಸ್ತುತಿಸಿರುವನು. ನಮ್ಮ ಕರ್ನಾಟ ಮಂಡಲಿಯಲ್ಲಿ ಬಹುಭಾಷಾ ವಿಶಾರದರು ಹಲವರು ಇರುವುದರಿಂದ, ಇವರು ಈ ವಿಷಯವನ್ನು ಎತ್ತಿಕೊಂಡು ಒಂದು ಚರ್ಚೆಯನ್ನು ನಡೆಯಿಸಿ, ಇತ್ಯರ್ಥ ಮಾಡುವುದು ಒಳ್ಳೆಯದು'' ಎಂದು ಕರೆಕೊಟ್ಟಿದ್ದರು. ಆಗ ಅಂದಿನ ದಿನದಲ್ಲಿ ಆ ಗೊಂದಲ ಇತ್ತು. ಈಗ ಅದು ಪರಿಹಾರವಾಗಿದೆ. ಆದರೆ ಕನ್ನಡ ಭಾಷೆ ಆಡಳಿತದ ಎಲ್ಲ ಹಂತದಲ್ಲಿ ಅನುಷ್ಠಾನಕ್ಕೆ ಬರಬೇಕೆಂದು ಕನ್ನಡ ನಾಡಿನಲ್ಲೇ ಇನ್ನೂ ಹೋರಾಡಬೇಕಾದ ಸನ್ನಿವೇಶ ಇರುವುದು ವಿಚಿತ್ರ ಆದರೂ ಸತ್ಯ.

''ಮಂತ್ರಿಗಳನ್ನೂ, ರಾಜಕಾರಣಿಗಳನ್ನೂ, ಮಠಾಧಿಪತಿಗಳನ್ನೂ ಪರಿಷತ್ತಿಗೆ ಬರಮಾಡಿಕೊಂಡು ಅವರಿಗೆ ಬಿನ್ನವತ್ತಳೆ

ಕನ್ನಡ ನುಡಿ, ಸೆಪ್ಟಂಬರ್ 2003, ನಿರೂಪಣೆ- ನ. ಚಕ್ರಪಾಣಿ

ಅರ್ಜಿಸಿ. ಅತಿಮೀರಿ ಹೊಗಳುವುದನ್ನು ಬಿಡಬೇಕು. ಪ್ರಾಧಾನ್ಯ ಇರಬೇಕಾದುದು ಸಾಹಿತಿಗಳದ್ದೇ ವಿನಾ ರಾಜಕಾರಣಿಗಳಿಗಲ್ಲ'' ಎಂದು 1960ರಲ್ಲಿ ಮಣಿಪಾಲದಲ್ಲಿ ನಡೆದ ನಲವತ್ತೆರಡನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದ ಅ.ನ. ಕೃಷ್ಣರಾಯರು ಕರೆಕೊಟ್ಟಿದ್ದರು. ಅದು ಇಂದಿಗೂ ಅನುಷ್ಠಾನಕ್ಕೆ ಬಂದಿದೆಯೇ ಅಥವಾ ಅದು ಕಾರ್ಯಸಾಧುವೇ ಎಂದು ಪುನರ್ ಪರಿಶೀಲಿಸಬೇಕಿದೆ; ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

''ನಾವು ಬಯಸಿದ್ದು 'ವಿಶಾಲ ಕರ್ನಾಟಕ'. ನಮಗೆ ದೊರೆತದ್ದು ವಿಶಾಲ ಮೈಸೂರು; ತಮ್ಮ ತಮ್ಮ ರಾಜ್ಯಗಳ ಹಿತರಕ್ಷಣೆ ಮಾಡಿಕೊಳ್ಳಲು ಆಂಧ್ರಕ್ಕೆ ಸಂಜೀವರೆಡ್ಡಿ, ಗೋಪಾಲರೆಡ್ಡಿ, ತಮಿಳುನಾಡಿಗೆ ಕಾಮರಾಜ ನಾಡಾರ್, ಸುಬ್ರಹ್ಮಣ್ಯಂ, ಮಹಾರಾಷ್ಟ್ರಕ್ಕೆ ಚವ್ಹಾಣ್. ಕೇರಳಕ್ಕೆ ಪಟ್ಟಂತಾನುಪಿಳ್ಳೆ, ಶಂಕರ್ ಇಂಥ ನಾಯಕರು ದೊರೆತರು. ನಮಗೇಕೆ ದೊರೆತಿಲ್ಲ? ಗಡಿಗಳ ಪ್ರಶ್ನೆ ಬಂದಾಗ ನಮ್ಮ ನಾಯಕರು ಹಿಂದೆ ಸರಿಯುವುದಾದರೂ ಏಕೆ? ಈ ಪ್ರಶ್ನೆ ಪ್ರಶ್ನೆಯಾಗಿಯೇ ಇನ್ನೂ ಉಳಿದಿದೆ. ಉತ್ತರ ಸಿಗುವುದಾದರೂ ಎಂದಿಗೆ?

''ರಾಜ್ಯದಲ್ಲಿ ಸ್ಥಾಪಿಸುವ ಕೇಂದ್ರದ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಶೇಕಡ 50ರಷ್ಟು ನೌಕರಿಗಳ ಪ್ರಾತಿನಿಧ್ಯ ನೀಡಬೇಕೆಂದು ಕೇಂದ್ರ ಆದೇಶಿಸಿದೆ. ಮಹಾರಾಷ್ಟ್ರ, ತಮಿಳುನಾಡು ಅಕ್ಷರಶಃ ಪಾಲಿಸುತ್ತಿದೆ. ಆದರೆ ಕರ್ನಾಟಕಕ್ಕೆ ಈ ನೀತಿಯನ್ನು ಕಡ್ಡಾಯವಾಗಿ ಜಾರಿಗೆ ತರುವ ರಾಜಕೀಯ ಧೀಶಕ್ತಿ ಒದಗಿ ಬರುತ್ತದೆಯೇ? ಎಂದು ಅನುಮಾನಿಸಬೇಕಿದೆ.

''ಭಾಷಾವಾರು ಪ್ರಾಂತ ವಿಂಗಡಣೆಯ ಸಂದರ್ಭ 7 ಸಾವಿರ ಚದರ ಮೈಲಿಗಳಷ್ಟು ವಿಸ್ತೀರ್ಣದ ಆಂಧ್ರ ಪ್ರದೇಶ ಮಹಾರಾಷ್ಟ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಸೇರಿಹೋದವು.

''ಕೈ ಬಿಟ್ಟು ಹೋಗಿರುವ ಕನ್ನಡ ನಾಡಿನ ಭಾಗಗಳನ್ನು ಪುನಃ ಪಡೆಯುವುದಕ್ಕೆ ಯಾವ ಸಂಘಟಿತ ಪ್ರಯತ್ನವೂ ನಡೆದಿಲ್ಲ'' ಎಂಬ ಅ.ನ.ಕೃ. ಅವರ ಮಾತು ಇಂದಿಗೂ ಸತ್ಯವೇ ಆಗಿದೆ.

1979ರಲ್ಲಿ ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪ್ರೊ. ಎಂ. ಗೋಪಾಲಕೃಷ್ಣ ಅಡಿಗರು ''ಸಾಹಿತ್ಯ ಪರಿಷತ್ತಿನ ನಿಯಮಗಳಿಗನುಸಾರವಾಗಿ ಅದರ ವಾರ್ಷಿಕ ಸಮ್ಮೇಳನದ ಅಧ್ಯಕ್ಷನಿಗೆ ಯಾವ ಅಧಿಕಾರವೂ ಇಲ್ಲ. ಅವನು ಕೇವಲ ಉತ್ಸವ ಮೂರ್ತಿ. ಸಾಹಿತ್ಯ ಪರಿಷತ್ತು ಪ್ರಜಾತಾಂತ್ರಿಕವಾದ ಚುನಾವಣೆಯ ಪದ್ಧತಿಯಿಂದ ರೂಪುಗೊಂಡಿದ್ದು ಅದನ್ನು ಯಾವನೇ ಒಬ್ಬ ವ್ಯಕ್ತಿ ತನ್ನ ಇಷ್ಟದಂತೆ ನಡೆಸಿಕೊಳ್ಳುವುದು ಸಾಧ್ಯವಿಲ್ಲ. ಬಹುಮತದಂತೆಯೇ ಅದು ನಡೆಯಬೇಕು'' ಎಂದು ಅಭಿಪ್ರಾಯಪಟ್ಟರು.

''ಈಗ ನಮ್ಮ ದೇಶದ ಮನಸ್ಸು ಶತಚ್ಛಿದ್ರವಾಗಿದೆ. ನಾನಾ ರೀತಿಯ ವಾದ-ವಿವಾದಗಳು, ಕುತರ್ಕಗಳು, ಮೊಂಡುವಾದಗಳು, ದುರ್ವಾದಗಳು, ಆಕ್ರೋಶಗಳು, ಚೀತ್ಕಾರಗಳು, ನಮ್ಮ ಜೀವನವನ್ನು ಗಾಯಗೊಳಿಸಿ ಕೀವು ತುಂಬಿವೆ : ಕಾರಣವೇನೇ ಇರಲಿ ರೋಗದ ಕಾರಣವನ್ನು ಕರಾರುವಾಕ್ಕಾಗಿ ಕಂಡುಹಿಡಿದು ಅವನ್ನು ಎಷ್ಟರಮಟ್ಟಿಗೆ ನಾವು ಕಾರ್ಯಗತಗೊಳಿಸಿದ್ದೇವೆ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಿದೆ.

1997ರಲ್ಲಿ ಮಂಗಳೂರಿನಲ್ಲಿ ಜರುಗಿದ 67ನೇ ಅ.ಭಾ.ಕ.ಸಾ. ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಯ್ಯಾರ ಕಿಞ್ಞಣ್ಣ ರೈ ಅವರು ''ಕೇರಳದಲ್ಲಿ ಕಾರ್ಮಿಕರು ಕೂಡ ದಿನನಿತ್ಯದ ಪತ್ರಿಕೆ ಖರೀದಿಸಿ ಓದುತ್ತಾರೆ. ಹೊಸ ಪುಸ್ತಕಗಳು ಪ್ರಕಟವಾದಾಗ ಅವುಗಳನ್ನು ಪಡೆದು ಓದುತ್ತಾರೆ. ಆದರೆ ಕನ್ನಡಿಗರು, ವಾಚನಾಲಯಗಳು ತೆರೆಯುವವರೆಗೂ ಕಾದು ದಿನಪತ್ರಿಕೆ ಓದುತ್ತಾರೆ; ಖರೀದಿಸಿ ಓದಲು

ಶಕ್ತರಿದ್ದರೂ ಬೇರೆಯವರಿಂದ ಕೇಳಿ ಪಡೆದು ಓದುತ್ತಾರೆ. ಈ ಪ್ರವೃತ್ತಿ ನಿಲ್ಲಬೇಕು'' ಎಂದು ಎಚ್ಚರಿಸಿದರು. ಖರೀದಿಸಿ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂಬ ಕೂಗು ಎಷ್ಟೋ ವರ್ಷಗಳಿಂದ ಕೇಳಿಬರುತ್ತಿದ್ದರೂ ಅದಕ್ಕೆ ರಚನಾತ್ಮಕವಾಗಿ ಸ್ಪಂದಿಸಿರುವುದು ತೀರ ಕಡಿಮೆ ಎಂಬುದಂತೂ ನಿಜ.

''ರಾಜಕೀಯವಾಗಿ ನಾವು ಸ್ವತಂತ್ರ ಭಾರತದಲ್ಲಿನ ಕರ್ನಾಟಕ ಪ್ರಜೆಗಳೆನಿಸಿದರೂ ಮಾನಸಿಕವಾಗಿ ಹಿಂದಿನ ಗುಲಾಮಗಿರಿಯ ಕೊಳೆಯನ್ನು ಸಂಪೂರ್ಣ ತೊಳೆದಿಲ್ಲ; ಈಗಲೂ ಆಂಗ್ಲ ಭಾಷೆ ವ್ಯಾಮೋಹವಿದೆ; ಆಂಗ್ಲ ಭಾಷಾ ಮಾಧ್ಯಮ ಶಾಲೆಗಳಿಗೇ ಬೇಡಿಕೆ ಹೆಚ್ಚಿದೆ'' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಆ ಅಸಮಾಧಾನ ಪರಿಹಾರವಂತೂ ಇಂದಿನ ಸಾಫ್ಟ್‌ವೇರ್ ಯುಗದಲ್ಲಿ ಸಾಧ್ಯವಿಲ್ಲವೇನೋ.

ಉಡುಪಿ, ಮಂಗಳೂರು, ಕಾಸರಗೋಡು ಈ ಪ್ರದೇಶಗಳನ್ನು ಒಳಗೊಂಡ ದಕ್ಷಿಣ ಕನ್ನಡ ಜಿಲ್ಲೆಗೆ 'ತುಳುನಾಡು' ಎಂಬ ಚಾರಿತ್ರಿಕ ಹೆಸರು ಇದೆ. ಈ ವಿಸ್ತಾರ ಪ್ರದೇಶದಲ್ಲಿನ ಲೇಖಕರಿಗೆ, ಮಾತೃಭಾಷೆ ತುಳು ಆದರೂ ವ್ಯಾವಹಾರಿಕ ಬರವಣಿಗೆಯ ಭಾಷೆ ಕನ್ನಡವೇ ಆಗಿದೆ. ಹಾಗೆಯೇ ಕೊಂಕಣಿ ಭಾಷೆಯವರ ಕನ್ನಡ ಸೇವೆಯೂ ಅಮೂಲ್ಯವಾದುದೇ.

ಭಾಷಾವಾರು ರಾಜ್ಯಗಳ ವಿಂಗಡಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಫಜುಲ್ ಅಲಿ ನೇತೃತ್ವದ ತ್ರಿಸದಸ್ಯ ಆಯೋಗವನ್ನು ರಚಿಸಿತು. ಅದರಲ್ಲಿ ಕೇರಳದ ಫಣಿಕ್ಕರ್ ಒಬ್ಬರಿದ್ದರು. ಅವರ ಪಕ್ಷಪಾತ ಧೋರಣೆಯಿಂದಾಗಿ ಕರ್ನಾಟಕಕ್ಕೆ ಅನ್ಯಾಯವಾಯಿತು.

ಅನ್ಯಾಯದ ವಿರುದ್ಧ ಪ್ರಬಲ ವಿರೋಧ ಬಂದಾಗ ಕೇಂದ್ರ ಸರ್ಕಾರ ಮಹಾಜನ ಆಯೋಗ ನೇಮಿಸಿತು. ಅದು ವರದಿ ಸಲ್ಲಿಸಿ ಆಗಿದೆ. ಜಾರಿಗೆ ತರಬೇಕಾದ ಹೊಣೆ ಹಾಗೆಯೇ ಉಳಿದಿದೆ. ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ತಂದು ಅದನ್ನು ಅನುಷ್ಠಾನಗೊಳಿಸಬೇಕಿದೆ. ರಾಜ್ಯ ಸರ್ಕಾರದ ಮೇಲೆ ಕನ್ನಡ ಜನಕೋಟಿ ಒತ್ತಡ ಹೇರಬೇಕಿದೆ.

ಬರುವ ಡಿಸೆಂಬರ್‌ನಲ್ಲಿ ನಡೆಯುವ ಸಮ್ಮೇಳನ ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಬೇಕಾದ ಕರ್ತವ್ಯವಿದೆ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಈಗ ನಿಸ್ವಾರ್ಥಿ ನೇತಾರರು ದುರ್ಬೀನಿಗೂ ಕಾಣರು!



ಶ್ರೀ ಚಾಮರಾಜೇಂದ್ರ ಒಡೆಯರು 1881ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಾಧಿಕಾರ ಪಡೆದ ನಂತರ, ಮೂವರು ಸಚಿವರನ್ನು, ಒಬ್ಬ ದಿವಾನರನ್ನು ನೇಮಿಸಿಕೊಂಡರು. ಶ್ರೀ ರಂಗಾಚಾರ್ಲು ದಿವಾನರಾಗಿ ಅಧಿಕಾರ ವಹಿಸಿಕೊಂಡ ಮೇಲೆ, ಪ್ರಜೆಗಳು ತಮ್ಮ ಕಷ್ಟ-ಸುಖಗಳನ್ನು ಸರ್ಕಾರಕ್ಕೆ ಪ್ರತ್ಯಕ್ಷವಾಗಿ ತಿಳಿಸಲು ಸಾಧ್ಯವಾಗುವಂತೆ 1881ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಈ ಸಭೆ ಪ್ರತಿವರ್ಷ ನವರಾತ್ರಿಯ ಕಾಲದಲ್ಲಿ ಮೈಸೂರಿನಲ್ಲಿ ನಡೆಯಬೇಕೆಂದು ನಿರ್ಣಯ ಮಾಡಿದರು. ಕೇವಲ ಎರಡು ವರ್ಷಗಳ ಕಾಲ ಮಾತ್ರ ಬಾಳಿ ಬದುಕಿದ ರಂಗಾಚಾರ್ಲು ಬೆನ್ನುಫಣಿ ರೋಗದಿಂದ ನಿಧನ ಹೊಂದಿದರು.

ಇವರ ತರುವಾಯ 1883ರಲ್ಲಿ ಕೆ. ಶೇಷಾದ್ರಿ ಅಯ್ಯರ್ ಅವರು ದಿವಾನರಾಗಿ ಹದಿನೆಂಟು ವರ್ಷಗಳ ಕಾಲ ಅಧಿಕಾರ ನಡೆಸಿದರು. ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಕೊಳವೆಗಳ ಮೂಲಕ ಪೂರೈಕೆ ಮಾಡಲು ಕ್ರಮ. ಶಿವನಸಮುದ್ರದ ಘೋರ್ಗರೆವ ರಭಸವನ್ನು ವಿದ್ಯುತ್ ಉತ್ಪಾದನೆಗೆ ಪರಿವರ್ತಿಸಲು ಯೋಜನೆ ರೂಪಿಸಿದರು. ಬೆಂಗಳೂರು, ಮೈಸೂರು ಚಿನ್ನದ ಗಣಿ ಪ್ರದೇಶಕ್ಕೆ ವಿದ್ಯುತ್.

ಕನ್ನಡ ನುಡಿ, ಅಕ್ಟೋಬರ್ 2003, ನಿರೂಪಣೆ- ನ. ಚಕ್ರಪಾಣಿ

ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ವ್ಯವಸ್ಥೆ ಮಾಡಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಮಾರಿಕಣಿವೆ ಕರೆ ನಿರ್ಮಾಣ ಮಾಡಿ ವಾಣೀವಿಲಾಸ ಸಾಗರ ಎಂದು ನಾಮಕರಣ ಮಾಡಿದರು.

1906ರಲ್ಲಿ ವಿ.ಪಿ. ಮಾಧವರಾಯರು ದಿವಾನರಾದರು. ಇವರು ಮೂರು ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ಇವರ ಅವಧಿಯಲ್ಲಿ ಅಂದರೆ 1908ರಲ್ಲಿ ನ್ಯಾಯ ವಿಧಾಯಕ ಸಭೆ ಸ್ಥಾಪಿತವಾಯಿತು.

ಅನಂತರ ಟಿ. ಆನಂದರಾಯರು ದಿವಾನ್ ಪದವಿಗೆ ಬಂದರು. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ''ಅರ್ಥಸಾಧಕ ಸಭೆ''ಯನ್ನು 1911ರಲ್ಲಿ ಏರ್ಪಡಿಸಿದರು. ಇವರ ಕಾಲದಲ್ಲಿ ಕೃಷ್ಣರಾಜಸಾಗರ ಜಲಾಶಯದ ಏರ್ಪಾಡುಗಳು ಆರಂಭಗೊಂಡವು. ಬೆಂಗಳೂರು, ಚಿಕ್ಕಬಳ್ಳಾಪುರ, ಕೋಲಾರ ಮಾರ್ಗವಾಗಿ ಬೌರಿಂಗ್ ಪೇಟೆಗೆ ರೈಲು ಮಾರ್ಗ ಹಾಕಿಸಿದರು. ಬೆಂಗಳೂರಿನ ದಂಡಿನ ವರ್ಷಾದಾಯದಲ್ಲಿ ಉಳಿಕೆ ಹಣ ಪ್ರತಿವರ್ಷ ಭಾರತ ಸರ್ಕಾರಕ್ಕೆ ಪಾವತಿ ಆಗುತ್ತಿತ್ತು. ಅದನ್ನು ಮೈಸೂರು ಸಂಸ್ಥಾನಕ್ಕೆ ಉಳಿಸಿಕೊಳ್ಳಬೇಕೆಂದು ತೀರ್ಮಾನ ಆಗಲು ಇವರು ಕಾರಣರಾದರು.

ಇವರೆಲ್ಲ ಕನ್ನಡ ನಾಡಿನ ಅಕ್ಕಪಕ್ಕದ ರಾಜ್ಯದಿಂದ ಬಂದ ಮಹನೀಯರು. ಇನ್ನು ಕನ್ನಡ ನಾಡಿನವರೇ ಆದ ವಿಶ್ವವಿಖ್ಯಾತ ಇಂಜಿನಿಯರ್, ಈ ರಾಜ್ಯದ ನರನಾಡಿಗಳಲ್ಲಿ ಚೈತನ್ಯ ತುಂಬಿದ ಮಹಾನ್ ಮುತ್ಸದ್ದಿ, ಮೋಕ್ಷಗುಂಡಂ ಸರ್.ಎಂ. ವಿಶ್ವೇಶ್ವರಯ್ಯನವರು 1912ರಲ್ಲಿ ದಿವಾನರಾಗಿ ಅಧಿಕಾರ ವಹಿಸಿಕೊಂಡರು. ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನದಿ, ಕಾಲುವೆ ಕಾಲುವೆಗಳಲ್ಲಿ ಹರಿದು, ಕಬ್ಬು-ಬಾಳೆ, ತೆಂಗು-ಅಡಿಕೆ, ಬತ್ತ-ರಾಗಿ, ಜೋಳ-ನವಣೆ ಬೆಳೆಗಳ ಸಮೃದ್ಧಿಯನ್ನೇ ದಯಪಾಲಿಸಿದಳು. ಇದು ಕಾರ್ಯಗತ ಆಗಲು ಶ್ರಮಿಸಿದ ನಿಸ್ವಾರ್ಥಿ ಮನಸ್ಸೆಂದರೆ ಸರ್ ಎಂವಿ ಅವರದು. ವಿಶ್ವವಿಖ್ಯಾತ ಬೃಂದಾವನ-ಕೃಷ್ಣರಾಜಸಾಗರ ನಿರ್ಮಾಣ ಮಾಡಿ ದೇಶಿ-ವಿದೇಶಿ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸಿ ವಿದೇಶಿ ವಿನಿಮಯವನ್ನು ನಿರಂತರಗೊಳಿಸಿದ ಯಶಸ್ಸು ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ರಾಜ್ಯದ ಶೈಕ್ಷಣಿಕ ಔನ್ನತ್ಯವನ್ನು ಸಾಧಿಸಲು, ಮೈಸೂರು ವಿಶ್ವವಿದ್ಯಾಲಯ, ಆರ್ಥಿಕ ವಲಯವನ್ನು ನಿಯಮಬದ್ಧಗೊಳಿಸಲು ಮೈಸೂರು ಬ್ಯಾಂಕ್, ಕೈಗಾರಿಕಾ ಕ್ಷೇತ್ರವನ್ನು ಬಲಪಡಿಸಲು ಕಬ್ಬಿಣದ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ವಾಚನಾಭಿರುಚಿ ಹೆಚ್ಚಿಸಲು ಸಾರ್ವಜನಿಕ ವಾಚನಾಲಯಗಳನ್ನು ಆರಂಭಿಸಿದ ಮಹತ್ವ ಇವರಿಗೆ ಸಲ್ಲುತ್ತದೆ. ಇವರು ಏಳು ವರ್ಷಗಳ ಕಾಲ ದಿವಾನರಾಗಿ ರಾಜ್ಯ ಸರ್ವತೋಮುಖ ಅಭಿವೃದ್ಧಿ ಕಂಡಿತು. ಅವರ ದೂರದರ್ಶಿತ್ವ, ನಿಸ್ಪೃಹ ಸೇವೆ. ಕಾರ್ಯಾನುಷ್ಠಾನ ಸಾಮರ್ಥ್ಯ, ನಿಸ್ವಾರ್ಥ ಮನೋಭಾವ ಅನುಕರಣೀಯವಾದುದು. ಹಾಗಿಲ್ಲದಿದ್ದರೆ ಮಾತ್ರ 'ಜನಸ್ಪಂದನ' ಅಥವಾ 'ಜನಸಂಘರ್ಷ' ಸಾಹಸ ಯಾತ್ರೆ ಕೈಗೊಳ್ಳಬೇಕಾಗುತ್ತದೆ. ಅದು ಯಾತ್ರೆ-ಜಾತ್ರೆಯಾಗಿ ಮತ ಬಾಚಲು ನಡೆಸುವ ಹುನ್ನಾರ ಮಾತ್ರ ಆಗುತ್ತದೆ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ನಾವಿನ್ನೂ ಅರ್ಧಚಂದ್ರ ಕುರೂಪಿಗಳೇ...



ಪೂರ್ವಾಶ್ರಮದ ವೃತ್ತಿಯ ಜಿಗುಟಿನಿಂದ ಬಿಡುಗಡೆ ಪಡೆಯುವ ವ್ಯಕ್ತಿ ನ್ಯಾಯದೇವತೆಯ ದಿರಿಸು ಧರಿಸಿದ ಮಾತ್ರಕ್ಕೆ ನ್ಯಾಯತೀರ್ಮಾನ ನೀಡುವ ಎಲ್ಲ ಅರ್ಹತೆ ಬರುತ್ತದೆ ಎಂಬುದು ಹದಿನಾರಾಣೆ ಸುಳ್ಳು; ಮನುಷ್ಯ, ಮಣ್ಣಿನ ಗೋಡೆಮಾತ್ರ, ತೊಳೆದಷ್ಟೂ ರೊಚ್ಚು, ಕೊಚ್ಚೆ ಬಿಡುತ್ತಾನೆ. ಸಾಮಾಜಿಕ ಹೊಳಪೇನೂ ತಂದುಕೊಡಲಾರ.

''ದಪ್ಪ ದಪ್ಪ ಮಾತಿನ ಬಲೂನಿಗೆ ನಿಜದ ಸೂಜಿ ಮೊನೆ ಚುಚ್ಚದ'' ನಾವು ''ಕ್ರಿಯೆಯೇ ಇಲ್ಲದೆ ಪ್ರತಿಕ್ರಿಯೆ''ಯನ್ನೇ ನಂಬಿ ಬರೆಯುವ ನಾವು, ಇಡೀ ಸಮಾಜಕ್ಕೇನೂ ಒಪ್ಪಿಗೆಯಾಗಿಲ್ಲ; ಪಾಳೇಗಾರಿಕೆ ಎಲ್ಲ ಕಾಲಕ್ಕೂ ತಲೆಕಾಯುವುದೆಂದೂ ನಂಬುವಂತಿಲ್ಲ. ಹಾಗಿದ್ದೂ ಬೇರೇನೋ ಎಂದು ಭ್ರಮಿಸುವುದು ಉಚಿತವಲ್ಲ; ನಮಗೆ ನಾವೇ ಆರೋಪಿಸಿಕೊಳ್ಳಬೇಕಿದೆ. ಏನೆಲ್ಲ ಸಾಮರ್ಥ್ಯವಿದ್ದರೂ ನಾವಿನ್ನೂ ಅನ್ವರ್ಥವಾಗಿ ಅರ್ಧಚಂದ್ರ ಕುರೂಪಿಗಳೇ.


ಸಾಹಿತ್ಯ ಸಮ್ಮೇಳನದ ಉಬ್ಬರವಿಳಿತದಿಂದ ಕಂಡುಕೊಂಡ ಸತ್ಯದ ಕಥೆಗೆ ಓದುಗರ ಗಮನ ಸೆಳೆಯಲು ಇಚ್ಛಿಸುತ್ತೇನೆ. ಮೂಡುಬಿದಿರೆಯಲ್ಲಿ ಜರುಗಿದ ಸಮ್ಮೇಳನದ ಸಂದರ್ಭ. ಉನ್ನತ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ದಂಡು, ಸೇವಾ

ಕನ್ನಡ ನುಡಿ, ಜನವರಿ 2004, ನಿರೂಪಣೆ- ನ. ಚಕ್ರಪಾಣಿ

ಕಾರ್ಯವಲ್ಲಿ ನಿರತ. ಆರಂಭದ ದಿನದಿಂದ ಸಮಾರೋಪದವರೆಗೂ ಕಾರ್ಯನಿರತರಲ್ಲಿ ಒಬ್ಬರೂ ಬವಲಿದಾವಂತೆ ಕಾಣಲಿಲ್ಲ. ಎಲ್ಲರೂ ತಾಳ್ಮೆಯ ಮೂರ್ತಿಗಳೆ, ನಗೆಮುಖದ ಚಂದಿರರೆ, ತಿಂಡಿಯ ಅನಂತರ, ಊಟದ ಅನಂತರ ಎಲೆ ಎತ್ತುವ ಕಾರ್ಯದಲ್ಲೂ ತೊಡಗಿದ್ದ ಈ ವಿದ್ಯಾರ್ಥಿಗಳಿಗೆ, ವಯಸ್ಸಿಗೆ ಮೀರಿದ ಸೇವಾತತ್ಪರತೆಗೆ ನಿಜವಾದ ಕಾರಣವೇನು ಎಂದು ಅರಿಯಲು ಕಾತರನಾಗಿ ಕೇಳಿದೆ. ಅವರೆಂದರು ''ಸರ್, ನಾವು ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್ ಶಿಕ್ಷಣ, ಬಾಹ್ಯಾಕಾಶ ವಿಜ್ಞಾನ, ಈ ಹಲವು ಹತ್ತು ಕ್ಷೇತ್ರದಲ್ಲಿ ಹೆಚ್ಚಿನ ವಿದ್ಯಾಭ್ಯಾಸಮಾಡಿ, ಹೊರದೇಶಕ್ಕೂ ಹೋಗಬೇಕೆಂದು ಉದ್ದೇಶಿಸಿದ್ದೇವೆ. ಹಾಗಾಗಿ ತಾಯ್ನಾಡಿನ ಸೇವೆಯನ್ನು ಇರುವ ಸ್ವಲ್ಪ ಅವಧಿಯಲ್ಲೇ ಗರಿಷ್ಠ ಪ್ರಮಾಣದಲ್ಲಿ ನಿರ್ವಹಿಸಬೇಕೆಂಬ ಮಹದಾಸೆ ಹೊತ್ತಿದ್ದೇವೆ'' ಎಂದರು. ಇಂಥ ಮುಗ್ಧ, ಸಹಜ, ಸರಳ ದರ್ಶನಕ್ಕೆ ಬೆಲೆಕಟ್ಟಲಾದೀತೆ? ಯುವ ಜನಾಂಗ ಹಾದಿತಪ್ಪುತ್ತಿದೆ ಎಂದು ಸಾಧಾರಣೀಕರಿಸಿ ಮಾತನಾಡುವುದಕ್ಕೆ ಹಿರಿಯರಾದ ನಾವು ಕಡಿವಾಣ ಹಾಕಿಕೊಳ್ಳುವುದೇ ಲೇಸು.

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಚುನಾವಣಾ ಜ್ವರ



ಈ ಬಾರಿ ಕಾಗದರಹಿತ ಚುನಾವಣೆ, ಎಲ್ಲ ವಿದ್ಯುನ್ಮಾನ ಮತ ಯಂತ್ರವೇ ನಿರ್ವಹಿಸುತ್ತದೆ ಎಂದೆಲ್ಲ ವ್ಯಾಪಕ ಪ್ರಚಾರ ಕೇಳಿಬರುತ್ತಿದೆ. ಇದಕ್ಕೆ ಪ್ರತಿರೋಧವಾಗಿ ನ್ಯಾಯವಾದಿಗಳು ವಿದ್ಯುನ್ಮಾನ ಮತಯಂತ್ರಕ್ಕೆ ಮುದ್ರಕಗಳನ್ನು ಅಳವಡಿಸಿ ಕಾಗದದ ಮೇಲಿನ ದಾಖಲೆಗೂ ಒತ್ತಾಯಿಸುತ್ತಿದ್ದಾರೆ; ಚುನಾವಣೆಯಲ್ಲಿನ ಗಂಭೀರತರ ತಕರಾರು-ಪರಿಹಾರಕ್ಕೆ ಇದು ತೀರಾ ಅಗತ್ಯ ಎಂಬುದು ಅವರ ವಾದ. ವಿದ್ಯುನ್ಮಾನ ಮತ ಯಂತ್ರ ಯಾವುದೇ ಕಾರಣಕ್ಕೂ ತಪ್ಪು ಮಾಹಿತಿ ನೀಡುವುದಿಲ್ಲ ಎಂಬುದಕ್ಕೆ ಭರವಸೆ ಏನು? ಎಂಬುದು ಅವರ ಪ್ರಶ್ನೆ. ಯಂತ್ರವನ್ನು ಬಳಕೆ ಮಾಡುವವನು ಮನುಷ್ಯ. ತಿಳಿದೋ ತಿಳಿಯದೆಯೋ ಮನುಷ್ಯ ಮಾಡಬಹುದಾದ ತಪ್ಪನ್ನು ಯಂತ್ರ, ಸರಿಪಡಿಸಿಕೊಂಡು ದಾಖಲಿಸುತ್ತದೆ ಎಂಬುದರ ಬಗೆಗೆ ಅಧಿಕೃತವಾಗಿ ಪ್ರಮಾಣಿಸುವವರು ಯಾರು? ಬಾಹ್ಯಾಕಾಶಕ್ಕೆ ಹಾರಿ ಬಿಡುವ ಸೂಕ್ಷ್ಮಾತಿಸೂಕ್ಷ್ಮ ತಂತ್ರಜ್ಞಾನದ ಕೃತಕ ಉಪಗ್ರಹಗಳಲ್ಲೇ ಲೋಪದೋಷಗಳು ಕಾಣಿಸಿಕೊಳ್ಳುತ್ತಿವೆ. ಇನ್ನು ವಿದ್ಯುನ್ಮಾನ ಮತ-ಯಂತ್ರದಲ್ಲಿ ಲೋಪದೋಷಗಳೇ ಇರುವುದಿಲ್ಲ ಎಂದು ಧೈರ್ಯದಿಂದ ಹೇಳಬಲ್ಲವರು ಯಾರು? ಹೀಗೆ ಅತ್ಯಾಧುನಿಕ ತಂತ್ರಜ್ಞಾನದ ಬಗೆಗೂ ಹಲವು ಹತ್ತು ಅನುಮಾನಗಳವೆ

ಕನ್ನಡ ನುಡಿ, ಮಾರ್ಚ್ 2004, ನಿರೂಪಣೆ- ನ. ಚಕ್ರಪಾಣಿ

ಎಂಬುದು ಕಟು ವಾಸ್ತವ.

ಆದರೆ ಅಪಾರ ಕಾಗದದ ನಾಶ, ಕಾಗದಕ್ಕೆ ಬಳಕೆ ಆಗುವ ಪ್ರಾಕೃತಿಕ ಸಂಪತ್ತಿನ ನಾಶವನ್ನು ವಿದ್ಯುನ್ಮಾನ ತಂತ್ರಜ್ಞಾನದ ಬಳಕೆಯಿಂದ ತಡೆಗಟ್ಟಬಹುದಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇನ್ನು ಎಣಿಕೆ ಕಾರ್ಯ ಕ್ಷಿಪ್ರವಾಗಿ ನಡೆಯುತ್ತದೆ. ಎಣಿಕೆಯಲ್ಲಿ ಮರೆವು ಇಲ್ಲದೆ ಖಚಿತ ಅಂಕಿ-ಅಂಶಗಳನ್ನು ಪಡೆಯಬಹುದಾಗಿದೆ. ಚಲಾಯಿತ ಮತಪತ್ರಗಳನ್ನು ಕಾಯುವುದೇ ಒಂದು ದೊಡ್ಡ ಜವಾಬ್ದಾರಿಯುತ ಸವಾಲಿನ ಕೆಲಸ. ಅದು ಈಗ ಹಗುರವಾಗಿ ಕಾಣುತ್ತದೆ.

ಪ್ರಾಮಾಣಿಕ ಜನ ಸೇವಕರು, ನಿಜವಾದ ಅರ್ಥದಲ್ಲಿ ಪ್ರಜೆಗಳನ್ನು ಪ್ರತಿನಿಧಿಸುವವರು. ನಿಸ್ಪೃಹ ಮುಂದಾಳುಗಳು ಇಡೀ ರಾಷ್ಟ್ರದಲ್ಲಿ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿರಬಹುದೇನೋ! ಆದರೆ ಕಡ್ಡಾಯವಾಗಿ ಇಂತಿಷ್ಟು ನಿಗದಿತ ಸಂಖ್ಯೆಯ ಪ್ರತಿನಿಧಿಗಳನ್ನು ರಾಜ್ಯಕ್ಕೆ ಹಾಗೂ ದೇಶಕ್ಕೆ ಆಯ್ಕೆ ಮಾಡಬೇಕಾದ ಪವಿತ್ರ ಕರ್ತವ್ಯ ಮತದಾರರ ಮೇಲಿದೆ. ರಹಸ್ಯ ಮತದಾನವಾದ ಕಾರಣ ಮತದಾರ ತನ್ನ ವಿವೇಕಕ್ಕೆ ಸರಿ ಎಂದು ಕಂಡುಬರುವ ಉಮೇದುವಾರನಿಗೆ ಮತ ಹಾಕಬೇಕಾಗುತ್ತದೆ. ಅದು ಅನಿವಾರ್ಯವೂ ಹೌದು. ಆದರೆ ಮತ ಚಲಾಯಿಸುವುದನ್ನು ಮಾತ್ರ ಮರೆಯಬಾರದು.

ಸಮಾಜದ ಕೆನೆಯ ಭಾಗವೆಂದು ಕರೆಸಿಕೊಳ್ಳುವ ಮೇಧಾವಿಗಳು ಮತದಾನ ಮಾಡಲು ಹೋಗುವುದೇ ಅಪರೂಪವಾಗಿದೆ. ಆದರೆ ಚುನಾವಣೆಯ ಅನಂತರ ಉದ್ದುದ್ದ ಬೌದ್ಧಿಕವಾಗಿ, ಸೈದ್ಧಾಂತಿಕವಾಗಿ ಮಾತನಾಡುವುದನ್ನು ಮಾತ್ರ ಅವರು ಮರೆಯುವುದಿಲ್ಲ.

ಪ್ರತಿಯೊಂದು ಮತದಾನವೂ, ಮತಚಲಾವಣೆ ನಿಯಂತ್ರಣಾಧಿಕಾರಿಗಳ ತಾಂತ್ರಿಕ ಹತೋಟಿಯಲ್ಲಿ ನಡೆಯುತ್ತದೆ. ಮತ ಚಲಾವಣೆಯ ಅನಂತರ ಒಂದು ರೀತಿಯ ಶಬ್ದವಾಗುತ್ತದೆ. ಆಗ ಮತದಾನ ಪೂರ್ಣವಾಗಿ ಬೀಗಗೊಳ್ಳುತ್ತದೆ. ಮತ ಚಲಾವಣೆಯ ತಾಂತ್ರಿಕ ನಿಯಂತ್ರಣಾಧಿಕಾರಿ ಮತ್ತೆ ಬೀಗ ಮುಕ್ತಗೊಳಿಸಿದರೆ ಮಾತ್ರ ಮತ್ತೊಬ್ಬ ಮತದಾರ ಮತದಾನ ಮಾಡಲು ಸಾಧ್ಯ. ಇಷ್ಟೆಲ್ಲ ಬಿಗಿ ಬಂದೋಬಸ್ತು ವಿದ್ಯುನ್ಮಾನ ಮತಯಂತ್ರದಲ್ಲಿ ಅಳವಡಿಸಲಾಗಿದೆ ಎಂದು ಚುನಾವಣೆ ಆಯೋಗ ಸ್ಪಷ್ಟಪಡಿಸಿರುತ್ತದೆ.

ವಿಶ್ವದಲ್ಲಿ ಜರುಗಿದ ವಿದ್ಯಮಾನಗಳನ್ನು ಗಮನಿಸಿದರೆ, ಸೇನಾ ಆಡಳಿತವಾಗಲಿ, ಸರ್ವಾಧಿಕಾರಿ ಆಡಳಿತವಾಗಲಿ ಹೀಗೆ ಅಂತ್ಯ ಕಾಣುತ್ತಿದೆ. ನಿಜಕ್ಕೂ ಪ್ರಜಾಪ್ರಭುತ್ವ ಎಷ್ಟು ಮಹತ್ವದ್ದು ಎಂದು ಅರಿವಿಗೆ ಬರದೆ ಇರದು.

ಸಾರ್ವಜನಿಕ ವಿಶ್ವವಿದ್ಯಾಲಯವೆಂದು ಪರಿಗಣಿತವಾಗಿರುವ ಕನ್ನಡ ಸಾಹಿತ್ಯ ಪರಿಷತ್ತು, ಪ್ರತಿಯೊಬ್ಬ ಅರ್ಹ ಮತದಾರನೂ ಅರ್ಹ ಉಮೇದುವಾರನನ್ನು ಆಯ್ಕೆ ಮಾಡಬೇಕೆಂದೂ ಮತದಾನದ ಪವಿತ್ರ ಕರ್ತವ್ಯವನ್ನು ತಪ್ಪದೆ ನಿರ್ವಹಿಸಬೇಕೆಂದೂ ವಿನಯವಾಗಿ ಪ್ರಾರ್ಥಿಸುತ್ತದೆ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಅರಣ್ಯರೋದನ



ಹೊಳೆ ಹೊಳೆಯುವ ಚಿನ್ನದ ಬೆಳ್ಳಿಯ ನಾಣ್ಯಗಳ ಬದಲಿಗೆ, ಚರ್ಮದ, ಕಾಗದದ ಪರ್ಯಾಯ ಚಲಾವಣೆ ವ್ಯವಸ್ಥೆಯ ಪರಿಕಲ್ಪನೆಯನ್ನು ವಿತ್ತೀಯ ವಲಯದಲ್ಲಿ ಪ್ರಚುರಪಡಿಸಿದ ಶತಮಾನದಷ್ಟು ಮುಂಗಾಣ್ಕೆ ಇದ್ದ, ಮೊಹಮ್ಮದ್ ಬಿನ್ ತೊಘಲಕ್ಕನ ಇತಿಹಾಸ, ಅವನ ದೂರದರ್ಶಿತ್ವ, ದರ್ಶನ ಸಾಮರ್ಥ್ಯವನ್ನು ಅರ್ಥೈಸಲಾಗದೆ 'ಹುಚ್ಚುದೊರೆ' ಎಂದು ಅವನಿಗೆ ಪಟ್ಟ ಕಟ್ಟಿತು. ಆದರೆ ಕಾಲಕ್ರಮದಲ್ಲಿ ಅರ್ಥವ್ಯವಸ್ಥೆ ಆತನ ಧೀಶಕ್ತಿಗೆ ತಲೆಬಾಗಿ ನಮಿಸಿ, ಚಿನ್ನದ ಗಟ್ಟಿಗಳನ್ನು ಭದ್ರವಾಗಿರಿಸಿ ಅದರ ಮೌಲ್ಯಕ್ಕೆ ಸರಿಹೊಂದುವಷ್ಟು ಪರ್ಯಾಯ ಚಲಾವಣೆವ್ಯವಸ್ಥೆಯನ್ನು ಜಾರಿಗೆ ತಂದಿತು. ಈಗ ನಾವು ಚಲಾವಣೆ ಮಾಡುತ್ತಿರುವ ಕಾಗದದ ನೋಟುಗಳೇ ಅದಕ್ಕೆ ಸಾಕ್ಷಿ.

ಅರ್ಥ ಸಾಮರ್ಥ್ಯವನ್ನು ಸುಭದ್ರವಾಗಿಟ್ಟುಕೊಂಡವನು ಜೀವನದಲ್ಲಿ ಸುಭದ್ರನಾಗಿರುತ್ತಾನೆ. ಅವನ ಬಹುತೇಕ ಎಲ್ಲ ಗುಣಗಳಿಗೆ ಅವನಲ್ಲಿರುವ ವಿತ್ತೀಯ ಸಾಮರ್ಥ್ಯವೇ ಕಾರಣ ಎಂದೆಲ್ಲ ಪರಿಗಣಿಸುವ ವ್ಯಾವಹಾರಿಕ ಹಂತಕ್ಕೆ ಸಮಾಜ ಬಂದು ನಿಂತಿದೆ.

ಹಣಕಾಸು ನಿರ್ವಹಣೆಗೆ ಹಾಗೂ ಅದರ ಸದುಪಯೋಗಕ್ಕೆ ಹಲವಾರು ಹಣಕಾಸು ಸಂಸ್ಥೆಗಳು ಆರಂಭಗೊಂಡವು. ಅಂಥ ಸಂಸ್ಥೆಗಳ ಆರಂಭಕ್ಕೆ ಮುಂಚೂಣಿಯಲ್ಲಿ ನಿಂತವರು, ಗಟ್ಟಿ ನೆಲಗಟ್ಟು ತಯಾರಿಸಿದವರು ಕರ್ನಾಟಕದ ಕರಾವಳಿ ಜಿಲ್ಲೆಗಳವರಾದ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದವರು.

ಕನ್ನಡ ನುಡಿ, ಏಪ್ರಿಲ್ 2004, ನಿರೂಪಣೆ- ನ. ಚಕ್ರಪಾಣಿ

ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಕ್, ಕರ್ನಾಟಕ ಬ್ಯಾಂಕ್, ವಿಜಯಾಬ್ಯಾಂಕ್-ಯಾವ ಹೆಸರು ಹೇಳಿದರೂ ಅವುಗಳ ಮೂಲ ನೆಲೆ ದಕ್ಷಿಣ ಕನ್ನಡ ಪ್ರದೇಶದಲ್ಲಿರುತ್ತದೆ.

ಬಡತನ ರೇಖೆಗಿಂತ ಕೆಳಗಿರುವ ಬಹುಸಂಖ್ಯಾತ ಜನ ಸಮುದಾಯದ ಸರ್ವತೋಮುಖ ಅಭಿವೃದ್ಧಿಯೂ ಈ ಎಲ್ಲ ಬ್ಯಾಂಕುಗಳ ಧ್ಯೇಯೋದ್ದೇಶಗಳಲ್ಲಿ ಮಹತ್ವದ ಸ್ಥಾನ ಗಳಿಸಿಕೊಂಡಿತು. ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಿ ಹೊಸ ಹೊಸ ಉದ್ದಿಮೆಗಳ ಆರಂಭಕ್ಕೆ ಸಹಾಯಹಸ್ತ ಚಾಚಿತು. ಆರಂಭದ ಈ ನೀತಿವೈಶಾಲ್ಯ, ವ್ಯಾವಹಾರಿಕ ಆಗತೊಡಗಿತು. ಸಾಲ-ಶೂಲವಾಗಲು ಮುಂದಾಯಿತು. ಪ್ರಾದೇಶಿಕತೆ, ಸ್ವಜನ ಪಕ್ಷಪಾತ, ಅವ್ಯವಹಾರ ಕಾಲಿಟ್ಟಿತು. ಹಣಕಾಸು ವ್ಯವಹಾರದಲ್ಲಿದ್ದ ಸಿಬ್ಬಂದಿಗೆ ಅಹಂ ಶುರುವಾಯಿತು. ಸಾರ್ವಜನಿಕರ, ಬಡ ಜನ ಸಮುದಾಯದ ಕಡೆ ಗಮನಿಸುವುದು ಕಡಿಮೆ ಆಯಿತು. ಭಾರೀ ಕುಳಗಳ ಕಡೆ ಗಮನ ಹರಿಯಿತು. ಒಮ್ಮೆ ಧೋರಣೆಯಲ್ಲಿ ಬದಲಾದದ್ದು ಸುಧಾರಿಸಿಕೊಳ್ಳಲು ಆಗಲೇ ಇಲ್ಲ. ಘನ ಸರಕಾರ ಮಧ್ಯೆ ಪ್ರವೇಶಿಸಲೇಬೇಕಾದ ಅನಿವಾರ್ಯ ಸ್ಥಿತಿ ಉಂಟಾಯಿತು. ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಬ್ಯಾಂಕುಗಳ ವ್ಯವಹಾರವನ್ನು ಸರಕಾರ ತನ್ನ ಹತೋಟಿಗೆ ತೆಗೆದುಕೊಂಡಿತು.

ಬಡವರ ಏಳಿಗೆಗಾಗಿ ಸರಕಾರ ರೂಪಿಸುವ ಯೋಜನೆಗಳಿಗೆ ಹಣಕಾಸು ನೆರವು ನೀಡಬೇಕಾದ ಪರಿಸ್ಥಿತಿ ಒದಗಿ ಬಂತು. ಅದು ಮುಂದುವರಿದಿದೆ. ಆವಶ್ಯಕ ಸೇವೆಯ ಅಡಿಯಲ್ಲಿ ಬರುವ ಈ ಸಿಬ್ಬಂದಿಗಳ ಧೋರಣೆಯೇ ಇತ್ತೀಚಿನ ದಿನಗಳಲ್ಲಿ ಬದಲಾಗಿದೆ. ಅವರಿಗೆ ದೊರೆತಿರುವ ಆರ್ಥಿಕ ಭದ್ರತೆ ಅವರನ್ನು ಈ ಧೋರಣೆಗೆ ತಂದಿಟ್ಟಿದೆ ಎಂಬುದಂತೂ ಸತ್ಯ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೆನರಾ ಬ್ಯಾಂಕಿನ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರನ್ನು ಭೇಟಿ ಮಾಡಬೇಕೆಂದು ಹರಸಾಹಸ ಮಾಡಿದರೂ ಸಿಬ್ಬಂದಿಗಳ ಮೊಂಡುತನದ ಧೋರಣೆಯಿಂದಾಗಿ ಅವರನ್ನು ಭೇಟಿ ಆಗಲು ಇಂದಿಗೂ ಸಾಧ್ಯವೇ ಆಗಲಿಲ್ಲ.

ಆಡಳಿತ ನಿರ್ದೇಶಕರ ಪರವಾಗಿ ಸಿಬ್ಬಂದಿಗಳೇ ಹಲವಾರು ಸಬೂಬುಗಳನ್ನು ಹೇಳಿ ಅವರ ಸಂದರ್ಶನಕ್ಕೆ ಅಡ್ಡಿ ಪಡಿಸುತ್ತಿರುವುದು ಮುಂದುವರೆದಿದೆ. ಅಧ್ಯಕ್ಷರು ತುಂಬಾ ಬಿಜಿ. ಅವರಿಗೆ ನಾಲ್ಕಾರು ಮೀಟಿಂಗ್‌ಗಳಿವೆ. ಇನ್ನೊಂದು ದಿನ ಬನ್ನಿ. ಇಂದು ಭೇಟಿ ಆಗಲು ಅವಕಾಶವಿಲ್ಲ ಎಂದು ಹೇಳಿ ಸಾಗಹಾಕುವುದೇ ಹೆಚ್ಚು.


ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗೆ ಕೆನರಾ ಬ್ಯಾಂಕ್ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಟ್ಟು ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೆನರಾ ಬ್ಯಾಂಕ್ ಯಾವುದೇ ರೀತಿಯಲ್ಲಾದರೂ ರಚನಾತ್ಮಕವಾಗಿ ಸಹಾಯ ಮಾಡಬಹುದೇ ಎಂದು ಅರಿಕೆ ಮಾಡಿಕೊಳ್ಳಲು ಪರಿಷತ್ತಿನ ಅಧ್ಯಕ್ಷರು ಪ್ರಯತ್ನಿಸುತ್ತಿದ್ದಾರೆ. ಆದರೆ ಅವರ ಪ್ರಯತ್ನ ಪ್ರಯತ್ನವಾಗೇ ಉಳಿದಿದೆ. ಭೇಟಿ ಆಗಲು ಇಂದಿಗೂ ಸಾಧ್ಯವಾಗಿಲ್ಲ ಎಂಬುದೇ ದುರಂತದ ಮಾತಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಾರ್ವಜನಿಕ ವಿಶ್ವವಿದ್ಯಾಲಯದ ಅಧ್ಯಕ್ಷರಿಗೇ ಬ್ಯಾಂಕಿನ ಆಡಳಿತ ನಿರ್ದೇಶಕರ ಭೇಟಿಗೆ ಅವಕಾಶವಾಗದ ಪರಿಸ್ಥಿತಿ ಇರುವಾಗ ಜನಸಾಮಾನ್ಯ ಆ ಹಣಕಾಸು ದೊರೆಯನ್ನು ಕಾಣುವುದಾದರೂ ಹೇಗೆ? ತನ್ನ ಆರ್ಥಿಕ ಮೊರೆ ಸಲ್ಲಿಸುವುದಾದರೂ ಹೇಗೆ ಎಂಬುದೇ ವಿಚಿತ್ರವಾಗಿದೆ. ಆದರೆ ಅದು ಕಟುವಾಸ್ತವ ಎಂಬುದು ಮಾತ್ರ ಸತ್ಯಸ್ಯ ಸತ್ಯ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಜನತೆಯ ತೀರ್ಪು ಏನೆಂದು ಯಾರೂ ಊಹಿಸಲಾರರು



ಜನತೆಯ ತೀರ್ಪು ಏನೆಂದು ಯಾರೂ ಊಹಿಸಲಾರರು

ಮತಗಟ್ಟೆ ಸಮೀಕ್ಷೆಗಳೆಲ್ಲ ಕೇವಲ ಕಲ್ಪಿತ ಅಂಕಿ, ಸಂಖ್ಯೆಗಳೆ; ಕಂತೆ ಬೊಂತೆಗಳೆ.

ಅತಂತ್ರ ಸಂಸತ್ತು ಎಂದವು ಸಮೀಕ್ಷೆಯ ಅಂಕಿ-ಸಂಖ್ಯೆಗಳು. ಆದರೆ ಜನತೆ, ಪಕ್ಷಗಳ ಒಕ್ಕೂಟವೊಂದಕ್ಕೆ ಅಗತ್ಯ ಸಂಖ್ಯೆಯನ್ನೇ ನೀಡಿತು.

ಇಂಥ ಸಮೀಕ್ಷೆಗಳಿಗೆ ಆಧಾರವೇನು? ಮತದಾರ ಮತದಾನ ಮಾಡಿ ಹೊರಬಂದಾಗ ಆತನನ್ನು ಕೇಳಿ ಗುರುತು ಹಾಕಿಕೊಂಡ ಅಂಕಿ-ಸಂಖ್ಯೆಗಳೆ.

ನಮ್ಮ ದೇಶದಲ್ಲಿ ಜಾರಿಯಲ್ಲಿರುವುದು ರಹಸ್ಯ ಮತದಾನ. ಜನತಾ ಜನಾರ್ದನನಿಗೆ ರಹಸ್ಯದ ಮಹತ್ತ್ವ ಗೊತ್ತಿಲ್ಲವೆ? ಅಥವಾ ಮತದಾರರನ್ನು ಸಮೀಕ್ಷೆದಾರರು ಹಗುರವಾಗಿ ಕಂಡು ನಾವು ಕೇಳಿದ ಮೇಲೆ ಆತ ರಹಸ್ಯ ಬಯಲು ಮಾಡಿರುತ್ತಾನೆ ಎಂಬ ತಪ್ಪು ಗ್ರಹಿಕೆಯಿಂದ ಸಮೀಕ್ಷೆಗಳನ್ನು ಸಿದ್ಧಪಡಿಸಿ, ಎಂದೂ ಘಟಿಸಬಹುದಾದ ಘಟನೆಯನ್ನು, ಸ್ಫಟಿಕ ಸ್ಪಷ್ಟವಾಗಿ ಕಂಡುಹಿಡಿದವರಂತೆ, ಮುಂಗಾಣ್ಕೆ ಇರುವ ದಾರ್ಶನಿಕರಂತೆ ಭವಿಷ್ಯ ನುಡಿಯುತ್ತಾರೆ. ಆದರೆ ಫಲಿತಾಂಶ ಪ್ರಕಟವಾದ ಮೇಲೆ, ಸಮೀಕ್ಷೆದಾರರು ಸಿದ್ಧಪಡಿಸಿರುವುದು ಹಸಿಸುಳ್ಳಿನ ಮೇಲೆ ಕಟ್ಟಿದ

ಕನ್ನಡ ನುಡಿ, ಮೇ 2004, ನಿರೂಪಣೆ- ನ. ಚಕ್ರಪಾಣಿ

ಮುಳ್ಳಿನ ಭವ್ಯ ಕಟ್ಟಡದಂತೆ ರಾಚುತ್ತದೆ.

ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಪ್ರಖ್ಯಾತವಾಗಿರುವ ಭಾರತದಲ್ಲಿ ರಹಸ್ಯ ಮತದಾನದ ವ್ಯವಸ್ಥೆ ಇರುವಾಗ ಸಮೀಕ್ಷೆದಾರರು ಮತದಾನದ ಬಗೆಗೆ ಕೇಳಿ ತಿಳಿದುಕೊಳ್ಳಬಹುದೇ? ಆ ದಿಕ್ಕಿನಲ್ಲಿ ಭಾರತದ ಸಂವಿಧಾನ ಯಾವ ಯಾವ ಅಂಕುಶಗಳನ್ನು ಕಾಯಿದೆ ಕಟ್ಟಳೆಗಳ ಅಡಿಯಲ್ಲಿ ರೂಪಿಸಿದೆ ಎಂಬ ಬಗ್ಗೆ ಜನ ಜಾಗೃತಿ ನಡೆಸಬೇಕಾದ ಅಗತ್ಯವಿದೆ. ಪ್ರಜಾಪ್ರಭುತ್ವ ಸಂರಕ್ಷಣಾ ವೇದಿಕೆಗಳು ಮತದಾರರಿಗೆ ಈ ದಿಕ್ಕಿನಲ್ಲಿ ಅರಿವು ಮೂಡಿಸಬೇಕಿದೆ. ಕಾನೂನು ತಜ್ಞರೂ ತಮ್ಮ ಹೊಣೆ ಅರಿತು ಖಚಿತ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಲು ಮುಂದಾಗಬೇಕಿದೆ. ಮಾಧ್ಯಮಗಳು ಕರ್ತವ್ಯವೆಂದು ಮೇಲಿಂದ ಮೇಲೆ ಜನ ಜಾಗೃತಿ ಮಾಡಬೇಕಿದೆ.

ಚುನಾವಣಾ ಆಯೋಗ ಸರ್ಕಾರಗಳ ಮೇಲೆ ವಿಧಿಸುವ ನೀತಿ ಸಂಹಿತೆ, ಸಮೀಕ್ಷಾದಾರರ ಮೇಲೂ ವಿಸ್ತರಿಸುವಂತಿರಬೇಕು. ಬಲಿಷ್ಠ ಮಾಧ್ಯಮಗಳು ಇಂಥ ಸಮೀಕ್ಷೆಗಳನ್ನು ಸಿದ್ಧಪಡಿಸುವುದರಿಂದ ನ್ಯಾಯಾಲಯದ ಮೊರೆ ಹೋಗಿ ಮಧ್ಯಂತರ ಆದೇಶಗಳನ್ನು ಪಡೆಯುತ್ತವೆ. ಅದಕ್ಕೆ ಕಡಿವಾಣ ಹಾಕುವಂತಹ ನಿಯಮ ನಿಬಂಧನೆಗಳ ಅಗತ್ಯವಿದೆ.

ಋತುಮಾನಗಳ ಹಾಗೂ ಪ್ರಾಕೃತಿಕ ವೈಪರೀತ್ಯದಿಂದಾಗಿ ಇಡೀ ಭಾರತದಲ್ಲಿ ಒಂದೇ ದಿನ ಚುನಾವಣೆಯ ಪ್ರಕ್ರಿಯೆ ಅಂತ್ಯಗೊಳ್ಳುವುದಿಲ್ಲ. ಮತದಾನ ಕೂಡ ಒಂದೇ ದಿನ ಮುಕ್ತಾಯವಾಗುವುದಿಲ್ಲ. ಹಾಗಾಗಿ ಮೊದಲ ಹಂತದ ಮತದಾನದ ಮರುದಿನ ಸುಳ್ಳಿನ ಆಧಾರದ ಮೇಲೆ ಸಿದ್ಧವಾಗುವ ಸಮೀಕ್ಷೆಗಳು ಮುಂದಿನ ಹಂತದ ಮತದಾನದ ಮೇಲೆ ಖಂಡಿತವಾಗಿ ಪರಿಣಾಮ ಬೀರುತ್ತವೆ.


ಇದು ಆಗದಂತಾಗಬೇಕಾದರೆ ಎಲ್ಲಾ ಹಂತದ ಮತದಾನದ ನಂತರ ಮತದಾನ ಸಮೀಕ್ಷೆ ಆಧಾರದ ಚಿತ್ರಣ ಪ್ರಕಟವಾದರೂ ಅಪಾಯ ಉಂಟಾಗುವುದಿಲ್ಲವೇನೊ? ಅದೇ ಕ್ರಮ ಕಡ್ಡಾಯವಾಗಿ ಅನುಷ್ಠಾನದಲ್ಲಿರುವಂತೆ ಚುನಾವಣಾ ಆಯೋಗ ನೋಡಿಕೊಳ್ಳಬೇಕು. ಆಗ ನಿರ್ಭಯ, ಸ್ವತಂತ್ರ, ನಿಷ್ಪಕ್ಷಪಾತ ಮತದಾನ ಆಗುತ್ತದೆ. ಮಾಧ್ಯಮಗಳ ಪರಿಣಾಮದ ವೈಲಿಗೆ ಇಲ್ಲದೆ ಪರಿಶುದ್ಧ ಮತದಾನವಾಗಿ, ನಿಜವಾದ ನೇತಾರ ಆಯ್ಕೆ ಆಗುತ್ತಾನೆ. ಸರಿಯಾದ ಅರ್ಥದಲ್ಲಿ ಜನಪ್ರತಿನಿಧಿಗಳು ಅಧಿಕಾರದ ಚುಕ್ಕಾಣಿ ಹಿಡಿಯಲು ಇದರಿಂದ ಸಾಧ್ಯವಾಗಬಹುದೇನೊ! ಹಾಗಲ್ಲದೆ, ಸಮೀಕ್ಷೆಗಳು ವಿಷಬೀಜ ಬಿತ್ತಿದ ಮೇಲೆ ಬೇವು ಬಿತ್ತಿ ಮಾವು ಬಯಸಿದಂತೆಯೆ.

ಸಂಭಾವಿತತನವೇ ಮೂರ್ತಿವೆತ್ತು ಆಡಳಿತ ಚುಕ್ಕಾಣಿ ಹಿಡಿದು ಕ್ಷಿಪ್ರಗತಿಯಲ್ಲಿ ಅಗತ್ಯ ಪ್ರಗತಿಯನ್ನೆಲ್ಲ ಸಾಧಿಸಿ ತೋರಿಸಿದರೂ ಸಮೀಕ್ಷೆಗಳು ತೋರುವ ದಿಕ್ಸೂಚಿಯಿಂದಾಗಿ ಫಲಿತಾಂಶಗಳೇ ತಲೆಕೆಳಗು ಆಗಿ, 'ತೀರ್ಪಿತ್ತ ಜನತೆ, ತಲೆಬಾಗಿದ ಘನತೆ' ಎಂದು ಸಮಾಧಾನ ಹೇಳಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗುತ್ತದೆ.

☐

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಏಕಾಗಬಾರದು, ತಪ್ಪೇನಿದೆ?



ಭಾರತದ ಪ್ರಜಾಸತ್ತಾತ್ಮಕ ಗಣರಾಜ್ಯ ತತ್ತ್ವ ಮತ್ತು ಪದ್ಧತಿಗಳ ಆಧಾರದ ಮೇಲೆ ರಾಜ್ಯಗಳು ರೂಪುತಳೆದವು. ಅವುಗಳ ರಾಜ್ಯವ್ಯವಸ್ಥೆ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಮೂಲಕ ನಿರ್ವಹಣೆ ಆಗುತ್ತದೆ.

ವಿಧಾನಮಂಡಲವೇ ಶಾಸಕಾಂಗ. ಅದರಲ್ಲಿ ಉಭಯ ಸದನಗಳಿರುತ್ತವೆ. ಜನತೆ ನೇರವಾಗಿ ಮತದಾನದ ಮೂಲಕ ಆಯ್ಕೆ ಮಾಡುವ ಜನಪ್ರತಿನಿಧಿಗಳಿರುವ ಸದನವೆ ವಿಧಾನಸಭೆ.

ವಿಧಾನಸಭೆಯ ಸದಸ್ಯರಿಂದ; ಸ್ಥಳೀಯ ಸಂಸ್ಥೆಗಳ ಸದಸ್ಯರಿಂದ; ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ, ಆಯ್ಕೆ ಆಗುವ ಸದಸ್ಯರು; ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಹಾಗೂ ಸಮಾಜಸೇವಾ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಪಡೆದಿರುವ ಹಾಗೂ ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ರಾಜ್ಯಪಾಲರು ನಾಮನಿರ್ದೇಶಗೊಳಿಸುತ್ತಾರೆ. ಇಂಥ ಪರಿಣತ ಸದಸ್ಯರ ಸದನವನ್ನು ಮೇಲ್ಮನೆ ಎಂದು ಕರೆಯುತ್ತಾರೆ. ಸಾಂಪ್ರದಾಯಿಕವಾಗಿ ವಿಧಾನ ಪರಿಷತ್ತು ಎಂದೂ ಕರೆಯಲಾಗುತ್ತದೆ.

ರಾಜ್ಯದ ಆಡಳಿತ ನಿರ್ವಹಣೆಗಾಗಿ ಹಾಗೂ ಜನತೆಯ

ಕನ್ನಡ ನುಡಿ, ಜೂನ್ 2004, ನಿರೂಪಣೆ- ನ. ಚಕ್ರಪಾಣಿ

ಕಲ್ಯಾಣಕ್ಕಾಗಿ ವಿಧಾನ ಮಂಡಲಗಳು ಕಾನೂನುಗಳನ್ನು ರಚಿಸುತ್ತವೆ. ವಿಧೇಯಕಗಳನ್ನು, ವಿಧಾನ ಸಭೆಯಲ್ಲಿ ಮಂಡಿಸಿ ವ್ಯಾಪಕ ಚರ್ಚೆಯ ಅನಂತರ ಅಂಗೀಕರಿಸಿ, ಮೇಲ್ಮನೆಯಲ್ಲಿ ಮಂಡಿಸಿ, ಅಲ್ಲಿಯೂ ಅಂಗೀಕಾರ ಪಡೆದು, ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಿ ಒಪ್ಪಿಗೆ ಪಡೆದ ನಂತರ ಅವು ಶಾಸನಗಳಾಗಿ ಅನುಷ್ಠಾನಕ್ಕೆ ಬರುತ್ತವೆ.

ಸಾರ್ವಜನಿಕ ಆಸಕ್ತಿಯುಳ್ಳ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುವ ಮೂಲಕ ಸಂಬಂಧಪಟ್ಟ ಮಂತ್ರಿಗಳಿಂದ ಸದಸ್ಯರು ಮಾಹಿತಿ ಪಡೆದುಕೊಳ್ಳಲು ಇದು ಅಧಿಕೃತ ವೇದಿಕೆ ಆಗುತ್ತದೆ. ಇಲ್ಲಿನ ಪ್ರತಿ ಚರ್ಚೆಗೂ ಮಾನ್ಯತೆ ಇರುತ್ತದೆ. ಶಾಸನ ಆಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತದೆ.

ಸಾರ್ವಜನಿಕ ಹಿತಾಸಕ್ತಿಯಿಂದ ಜರೂರಾದ ಹಾಗೂ ಮಹತ್ವದ ಘಟನೆಗಳ ಬಗ್ಗೆ ನಿಲುವಳಿ ಸೂಚನೆ ಮಂಡಿಸಿ, ಸಭೆಯ ನಿರ್ದಿಷ್ಟ ಕಾರ್ಯಕಲಾಪಗಳನ್ನು ಬದಿಗೊತ್ತಿ, ಮುಖ್ಯ ಹಾಗೂ ತುರ್ತು ವಿಷಯವನ್ನು ಚರ್ಚಿಸಿ, ನಿರ್ದಿಷ್ಟ ಕಾರ್ಯಗಳನ್ನು ಮಾಡಿಸಬಹುದಾಗಿದೆ. ಸದಸ್ಯರಿಗೆ ವಾಕ್ ಸ್ವಾತಂತ್ರ್ಯವಿದ್ದು ಸದನದ ಮುಂದೆ ಬರುವ ವಿಷಯಗಳ ಬಗ್ಗೆ ನಿರ್ಭಯವಾಗಿ ತಮ್ಮ ಅಭಿಪ್ರಾಯ ಸೂಚಿಸಲು ಅವಕಾಶವಿರುತ್ತದೆ.

ಕಾರ್ಯಾಂಗ ಪ್ರಮುಖರಾದ ರಾಜ್ಯಪಾಲರು ಅವಶ್ಯ ಎನಿಸಿದಂತೆಲ್ಲ ಕಾರ್ಯಕಲಾಪ ನಡೆಸಲು ಉಭಯ ಸದನಗಳನ್ನು ಕರೆದು, ಮುಕ್ತಾಯಗೊಳಿಸುತ್ತಾರೆ. ವಿಧಾನ ಸಭೆಯನ್ನು ವಿಸರ್ಜಿಸುವ ಅಧಿಕಾರವೂ ರಾಜ್ಯಪಾಲರಿಗಿರುತ್ತದೆ.

ಇಷ್ಟೆಲ್ಲ ಪೀಠಿಕೆಗೆ ಖಂಡಿತ ಉದ್ದೇಶ ಉಂಟು. ಕನ್ನಡಿಗರ ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶವೂ ನಾಡು-ನುಡಿಯ ಸಂರಕ್ಷಣೆ. ಅದಕ್ಕೆ ಆಂತರಿಕವಾಗಿ ಅಥವಾ ಹೊರಗಿನಿಂದ ಕಿಂಚಿತ್ ಆಘಾತವಾದರೂ ಅದನ್ನು ತುರ್ತಾಗಿ ಸರಿಪಡಿಸುವ ದಿಕ್ಕಿನತ್ತ ಜನಜಾಗೃತಿ ಮಾಡುವುದು ಸಾಹಿತ್ಯ ಪರಿಷತ್ತಿನ ಆದ್ಯ ಕರ್ತವ್ಯವಾಗಿದೆ. ಹೊರರಾಜ್ಯಗಳಲ್ಲಿ ಕನ್ನಡಿಗರಿಗೆ ಆಗುವ ಅನ್ಯಾಯ, ಮಾತೃಭಾಷೆಗೆ ಶಿಕ್ಷಣರಂಗದಲ್ಲಿ ಆಗುವ ಉಪೇಕ್ಷೆ, ನದಿನೀರು ಹಂಚಿಕೆ, ಕನ್ನಡಿಗರಿಗೆ ಉದ್ಯೋಗ ನೀಡಿಕೆಯಲ್ಲಿನ ತಾರತಮ್ಯ, ರಾಜ್ಯಕ್ಕೆ ಸೇರಬೇಕಾದ ಗಡಿಭಾಗಗಳು ಇವೇ ಮುಂತಾದ ಗಂಭೀರತರ ಸಮಸ್ಯೆಗಳ ಬಗೆಗ ಎಪ್ಪತ್ತಕ್ಕೂ ಅಧಿಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಆದರೆ ಅನುಷ್ಠಾನ ಕುರಿತಂತೆ ಒತ್ತಡ ತರಲು ಪರಿಷತ್ತಿಗೆ ಅಧಿಕೃತ ವೇದಿಕೆ ಇಲ್ಲದಂತಾಗಿದೆ. ಈ ಕೊರತೆಯನ್ನು ನೀಗಿಸಬೇಕಾದರೆ, ಸಾರ್ವಜನಿಕ ವಿಶ್ವವಿದ್ಯಾಲಯವೆಂದು ಪರಿಗಣಿತವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ವಿಧಾನ ಮಂಡಳದ ಮೇಲ್ಮನೆಗೆ ಪದ ನಿಮಿತ್ತ ನಾಮಕರಣ ಆಗುವಂತೆ ಕ್ರಮಕೈಗೊಳ್ಳಬೇಕಾದ ಅಗತ್ಯವಿದೆ.

ಹೀಗೆಂದು ಕೇಳುವ ಹಿನ್ನೆಲೆಯಲ್ಲಿ ಯಾವ ಸ್ವಾರ್ಥವೂ ಇಲ್ಲ. ನಮ್ಮ ಅಧಿಕಾರದ ಅವಧಿ ಮುಗಿಯುತ್ತಲಿದೆ. ತೊಂಭತ್ತು ವರ್ಷಗಳ ಸುದೀರ್ಘ ಇತಿಹಾಸ ಉಳ್ಳ ಕನ್ನಡ ಸಾಹಿತ್ಯ ಪರಿಷತ್ತು ಮುಂದಾದರೂ ಕಾನೂನುಬದ್ಧ ಸ್ಥಾನಮಾನ ಪಡೆದುಕೊಂಡು ಶಾಸನಗಳನ್ನು ರೂಪಿಸುವ ವಿಧಾನ ಮಂಡಲದಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸುವುದೇ ಅಲ್ಲದೆ ಅಗತ್ಯವಾಗಿ ಕಾರ್ಯಾನುಷ್ಠಾನಗೊಳ್ಳಬೇಕಾದ ವಿಷಯಗಳ ಬಗೆಗೆ ಪಕ್ಕೊತ್ತಾಯದ ಮೂಲಕ ಪ್ರತಿಪಾದಿಸಲು

ಬೆಳೆದು ನಿಲ್ಲಬೇಕಾದ ಅನಿವಾರ್ಯತೆ ಇದೆ.

ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ, ಸಮಾಜ ಸೇವಾ ಕ್ಷೇತ್ರದಲ್ಲಿನ ಪರಿಣತರು ಮೇಲ್ಮನೆಗೆ ರಾಜ್ಯಪಾಲರಿಂದ ನಾಮನಿರ್ದೇಶನಗೊಳ್ಳುತ್ತಾರೆ. ಅಂಥ ಸದಸ್ಯರಲ್ಲಿ ಒಬ್ಬರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಏಕಾಗಬಾರದು? ಅದರಲ್ಲಿ ತಪ್ಪೇನಿದೆ?

ಪ್ರಜ್ಞಾವಂತರು ಈ ದಿಕ್ಕಿನಲ್ಲಿ ಆಲೋಚಿಸಿ ಸರ್ಕಾರದ ಮೇಲೆ ಅಗತ್ಯ ಆಗ್ರಹ ತರುತ್ತಾರೆಂಬ ಭರವಸೆ ಕನ್ನಡ ಸಾಹಿತ್ಯ ಪರಿಷತ್ತಿನದಾಗಿರುತ್ತದೆ.

□

ನಾಡಗೀತೆ ವಿವಾದ: ಒಂದು ಇಣುಕು ನೋಟ

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಪರಿಷತ್ತಿನ ನಾಡಗೀತೆ– ಕನ್ನಡ ಸಾಹಿತ್ಯ ಪರಿಷತ್ತಿನ ಸ್ಪಷ್ಟೀಕರಣ



ಕನ್ನಡ ಸಾಹಿತ್ಯ ಪರಿಷತ್ತು ಸುವರ್ಣ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಒಂದು ನಾಡಗೀತೆಯನ್ನು ಆರಿಸಿದುದರ ಬಗ್ಗೆ ಪತ್ರಿಕೆಗಳಲ್ಲಿ ಪರ-ವಿರೋಧವಾದ ಕೆಲವು ಹೇಳಿಕೆಗಳು ಬಂದುದು ಎಲ್ಲರಿಗೂ ವಿದಿತವೇ ಆಗಿದೆ. ಈ ಸಂದರ್ಭದಲ್ಲಿ ಈ ಅಂಶಕ್ಕೆ ಸಂಬಂಧಿಸಿದಂತೆ ಕೆಳಗಿನ ವಿವರಣೆಯನ್ನು ನೀಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ೫೫ ವರ್ಷಗಳ ಸಾರ್ಥಕವಾದ ಬಾಳಿನಲ್ಲಿ ಅಸಂಖ್ಯಾತವಾದ ಸಭೆಗಳನ್ನು ನಡೆಸಿದೆ. ಎಷ್ಟೋ ಉತ್ಸವಗಳನ್ನು ನೆರವೇರಿಸಿದೆ. ಆದರೆ ಇಂಥ ಸಂದರ್ಭಗಳಲ್ಲಿ ಪ್ರಾರಂಭದಲ್ಲಿ ಇಂಥದೇ ಗೀತೆಯನ್ನು ಹಾಡಬೇಕು ಎಂಬ ಯಾವ ನಿಯಮವನ್ನೂ ಇದುವರೆಗೆ ಇಟ್ಟುಕೊಂಡಿರಲಿಲ್ಲ. ನಾಡಿನ ಬಗ್ಗೆ ಪ್ರೇಮ-ಅಭಿಮಾನ-ಗೌರವಗಳನ್ನು ಸೂಚಿಸುವ ಅನೇಕ ಕವನಗಳನ್ನು ಅನೇಕ ಕವಿಗಳು ರಚಿಸಿದ್ದಾರೆ. ಇವುಗಳಲ್ಲಿ ಪ್ರಾರ್ಥನೆ ಮಾಡುವವರಿಗೆ ಅನುಕೂಲವಾದ ಗೀತೆಯನ್ನು ಅವರವರು ಆರಿಸಿಕೊಳ್ಳುತ್ತಿದ್ದರು, ಅಷ್ಟೇ.

ನಾಡು ವಿಸ್ತಾರವಾಗಿರುವುದನ್ನು ಗಮನಿಸಿ ಪರಿಷತ್ತಿನ ಧೋರಣೆ, ಘನತೆಗಳಿಗೆ ಉಚಿತವಾದ ತನ್ನದೇ ಆದ ಒಂದು

ಕನ್ನಡ ನುಡಿ, ಜನವರಿ 2004, ನಿರೂಪಣೆ– ನ. ಚಕ್ರಪಾಣಿ

ನಾಡಗೀತೆ ಇರಬೇಕೆಂದು ಪರಿಷತ್ತಿನ ತ್ರೈವಾರ್ಷಿಕ ಯೋಜನೆಯಲ್ಲಿ ಈ ವಿಷಯವನ್ನು ನಾನಾ ಘಟ್ಟಗಳಲ್ಲಿ ಅನೇಕ ಸಮಿತಿಗಳಲ್ಲಿ ಚರ್ಚಿಸಲಾಯಿತು. ಈ ಕಡೆಯಲ್ಲಿ ನಾಡಗೀತೆಯನ್ನು ಆರಿಸುವುದಕ್ಕಾಗಿಯೇ ಕರೆಯಲ್ಪಟ್ಟ ಪರಿಷತ್ತಿನ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿಯೂ ಈ ವಿಷಯವನ್ನು ಮಂಡಿಸಿ ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆಯಲಾಯಿತು. ಹೀಗೆ ಆಯ್ಕೆಯಾದುದು ರಾಷ್ಟ್ರಕವಿ ಕುವೆಂಪು ಅವರ ''ಜೈ ಭಾರತ ಜನನಿಯ ತನುಜಾತೆ'' ಎಂಬ ಜನಪ್ರಿಯವಾದ ಸುಪ್ರಸಿದ್ಧ ಕವನ.

ಇದನ್ನು ಆರಿಸುವುದಕ್ಕೆ ಮುಖ್ಯ ಕಾರಣಗಳು ಇವು-

1. ಕರ್ನಾಟಕ ದೇಶವು ಭಾರತ ರಾಷ್ಟ್ರದ ಪ್ರಮುಖ ಅಂಗವಾಗಿದ್ದು ಭಾರತದ ಹಿರಿಮೆಗೆ ಪೋಷಕವಾಗುವ ಎಲ್ಲ ಗುಣಗಳನ್ನು ಪಡೆದಿದೆ ಎಂಬ ಅಭಿಪ್ರಾಯವು ಈ ಕವನದಲ್ಲಿ ಮೂಡಿ ಬಂದಿದೆ. ಅಷ್ಟೇ ಅಲ್ಲದೆ ವಿಶ್ವದ ಎಲ್ಲ ಜನಾಂಗಗಳಲ್ಲಿ ಪರಸ್ಪರ ಸೌಹಾರ್ದವಿರಬೇಕೆಂಬ ವಿಶಾಲ ಭಾವನೆ ಈ ಕವಿತೆಯಲ್ಲಿ ಅಳವಟ್ಟಿದೆ.

2. ಭಾರತದ ಭಾವೈಕ್ಯವನ್ನು ವೃದ್ಧಿಗೊಳಿಸುವುದು ಪರಿಷತ್ತಿನ ಮುಖ್ಯ ಉದ್ದೇಶಗಳಲ್ಲಿ ಒಂದು. ಅದು ಈ ಕವಿತೆಯಲ್ಲಿ ಸ್ಪಷ್ಟವಾಗಿದೆ.

3. ಕರ್ನಾಟಕ ದೇಶದ ಪ್ರಕೃತಿ ಸಂಪತ್ತನ್ನೂ ಹಿಂದಿನ ರಾಜವೈಭವವನ್ನೂ ಸಕಲಕಲಾ ವೈಭವಗಳನ್ನೂ ಕವಿ-ಕಲೆಗಾರರನ್ನೂ, ಯೋಗಿವರ್ಯರನ್ನೂ ಹೆಸರಿಸಿ, ಇವರೆಲ್ಲರೂ ಕರ್ನಾಟಕದ ಹಿರಿಮೆಗೆ ಕಾರಣರಾಗಿ, ತನ್ಮೂಲಕ ಭಾರತದ ಹಿರಿಮೆಗೆ ಪುಷ್ಟೀಕರಣ ಕೊಟ್ಟವರು ಎಂಬ ದಿವ್ಯವಾದ ಅಭಿಪ್ರಾಯವು ಈ ಕವನದಲ್ಲಿ ವ್ಯಾಪಕವಾಗಿ ಮೂಡಿ ನಿಂತಿದೆ.

4. ಕನ್ನಡ ನಾಡಿನ ಹೆಸರು ಕರ್ನಾಟಕವೆಂದಿರಬೇಕೆಂಬ ಪರಿಷತ್ತಿನ ನಿಲುವನ್ನು ಸ್ಪಷ್ಟವಾಗಿ ಸಮರ್ಥನೆ ಮಾಡುತ್ತದೆ, ಈ ಕವನ.

5. ಈ ಕವನವು ಈಗಲೂ ಅನೇಕ ಕಡೆಗಳಲ್ಲಿ ನಾಡಗೀತೆಯಂತೆಯೇ ಹಾಡಲ್ಪಡುತ್ತದೆ.

6. ಸಂಗೀತಕ್ಕೆ ಹೊಂದಿಸಲು ಈ ಕವನವು ಚೆನ್ನಾಗಿ ಅಳವಡುತ್ತದೆ.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ''ಉದಯವಾಗಲಿ ಚಲುವ ಕನ್ನಡನಾಡು ಅಥವಾ ಇತರ ಕವನಗಳನ್ನು ಸಂದರ್ಭೋಚಿತವಾಗಿ ಹಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅಂಥ ಯಾವ ಗೀತೆಯ ಸ್ಥಾನವನ್ನೂ ಆಕ್ರಮಿಸಬೇಕೆಂಬುದು ಈ ಆಯ್ಕೆಯ ಉದ್ದೇಶವಲ್ಲ. ಇಂಥ ಕವನಗಳನ್ನು ಸಂದರ್ಭಕ್ಕೆ ತಕ್ಕಂತೆ ಹಾಡಬಹುದು, ಈ ಕಾರಣಕ್ಕಾಗಿಯೇ ನಾಡು-ನುಡಿಯ ಬಗ್ಗೆ ಪೂಜ್ಯ ಭಾವನೆಯನ್ನು ಹುಟ್ಟಿಸುವ ಅನೇಕ ಕವಿತೆಗಳನ್ನು ಸಂಗ್ರಹಿಸಿ ''ಕನ್ನಡ ಬಾವುಟ''ವೆಂಬ ಉತ್ತಮ ಸಂಕಲನವನ್ನು ಪರಿಷತ್ತು ಪ್ರಕಟಿಸಿದೆ. ಈಗಲೂ ಅವುಗಳನ್ನು ಯಾರು ಯಾವಾಗ ಬೇಕಾದರೂ ಉಪಯೋಗಿಸುವುದಕ್ಕೆ ಪರಿಷತ್ತಿನ ಪ್ರೋತ್ಸಾಹವಿದ್ದೇ ಇದೆ

ಈಗ ಆಯ್ಕೆಯಾದ ನಾಡಗೀತೆಯ ಬಗ್ಗೆ ಕನ್ನಡನಾಡಿನ ನಾನಾ ಕಡೆಗಳಿಂದ ಪರಿಷತ್ತಿನ ಅಭಿಮಾನಿಗಳನೇಕರು ಕೊಟ್ಟ ಸೂಚನೆಗಳನ್ನು ಕ್ರೋಢೀಕರಿಸಿ ರಾಷ್ಟ್ರಕವಿ ಕುವೆಂಪು ಅವರ ಗಮನಕ್ಕೆ ತಂದಾಗ, ಅವರು ಮಧ್ವಾಚಾರ್ಯ ಮತ್ತು ಕುಮಾರವ್ಯಾಸರ ಹೆಸರುಗಳನ್ನು ಈ ಗೀತೆಯಲ್ಲಿ ಅಳವಡಿಸಲು ಒಪ್ಪಿ ಗೀತೆಯ ಎರಡು ಸಾಲುಗಳನ್ನು ಪರಿಷ್ಕರಿಸಿಕೊಟ್ಟಿದ್ದಾರೆ.

ಈ ವಿಷಯಗಳನ್ನು ಗಮನಿಸಿ ಸಾರ್ವಜನಿಕರು ಪರಿಷತ್ತಿನೊಂದಿಗೆ ಸಹಕರಿಸಬೇಕೆಂದು ಕೋರುತ್ತೇನೆ.

ಪರಿಷ್ಕೃತ ನಾಡಗೀತೆ :

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ

ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ
ಕವಿಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ

ತೈಲಪ ಹೊಯ್ಸಳರಾಡಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರರಂಗ
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ

ಪಾಠಾಂತರಗಳಿಗೆ ಕವಿ ಕಾರಣ
ಕುವೆಂಪು ಮೊದಲ ಪಾಠ ಹೀಗಿತ್ತು

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ (ಧರ್ಮಾರಣ್ಯ)
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ
ಕವಿಕೋಗಿಲೆಗಳ ಪುಣ್ಯಾರಾಮ!

ತಿದ್ದಿದ ಪಾಠ (ಈಗ ಆಯ್ಕೆಯಾದ ನಾಡಗೀತೆಯ ಬಗ್ಗೆ ಕನ್ನಡ ನಾಡಿನ ನಾನಾ ಕಡೆಗಳಿಂದ ಪರಿಷತ್ತಿನ ಅಭಿಮಾನಿಗಳನೇಕರು ಕೊಟ್ಟ ಸೂಚನೆಗಳನ್ನು ಕ್ರೋಢೀಕರಿಸಿ ರಾಷ್ಟ್ರಕವಿ ಕುವೆಂಪು ಅವರ ಗಮನಕ್ಕೆ ತಂದಾಗ, ಅವರು ಮಧ್ವಾಚಾರ್ಯ ಮತ್ತು ಕುಮಾರವ್ಯಾಸರ ಹೆಸರುಗಳನ್ನು ಈ ಗೀತೆಯಲ್ಲಿ ಅಳವಡಿಸಲು ಒಪ್ಪಿ ಗೀತೆಯ ಎರಡು ಸಾಲುಗಳನ್ನು ಪರಿಷ್ಕರಿಸಿ ಕೊಟ್ಟಿದ್ದಾರೆ. ಕ.ನುಡಿ, 16-2-71)-

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ
ಕವಿಕೋಗಿಲೆಗಳ ಪುಣ್ಯಾರಾಮ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಒಂದು ಆಗ್ರಹ ಪತ್ರ

☐ ದಿನಾಂಕ: 30.12.03

ಮಾನ್ಯರೇ,

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ, ವಿಧಾನಸೌಧ, ಬೆಂಗಳೂರು-560 001

ರಾಷ್ಟ್ರಕವಿ ಕುವೆಂಪು ಅವರ ಜನ್ಮ ಶತಮಾನೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ಮನುಜಮತ ವಿಶ್ವಪಥ ಧ್ವನಿಸುರುಳಿಯಲ್ಲಿ ಈ ಹಿಂದೆಯೇ ವಿವಾದಕ್ಕೆ ಒಳಗಾಗಿದ್ದ ಹಳೆಯ ಸಾಲನ್ನೇ ಪುನರಾವರ್ತನೆ ಮಾಡಿರುವ ಕಾರಣವಾದರೂ ಏನೆಂದು, ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರವನ್ನು ವಿನಯವಾಗಿ, ಆದರೆ ಆಗ್ರಹಪೂರ್ವಕವಾಗಿ ಹಕ್ಕೊತ್ತಾಯದ ಮನವಿ ಸಲ್ಲಿಸುತ್ತದೆ.



ಮಧ್ವಾಚಾರ್ಯರು ಕರ್ನಾಟಕದ ಮಹಾನ್ ದಾರ್ಶನಿಕರು, ದ್ವೈತಮತ ಸಿದ್ಧಾಂತ ಪ್ರತಿಪಾದಕರು. ಇವರ ಹೆಸರನ್ನೇ ಕೈಬಿಡಲಾಗಿದೆ.

ಭಾರತ ಕಂಡ ಮೂರು ಜನ ಆಚಾರ್ಯರು ದಕ್ಷಿಣ ಭಾರತದವರೆಂದು ಹೆಮ್ಮೆಪಟ್ಟುಕೊಳ್ಳುವ ಇತಿಹಾಸಕ್ಕೆ ಮತ್ತೆ ಇದರಿಂದಾಗಿ ಅಪಚಾರವಾಗಿದೆ. ಇದಕ್ಕೆ ಸರಕಾರವನ್ನು ನೇರ ಹೊಣೆ ಮಾಡಬೇಕಾಗುತ್ತದೆ.

ಅದ್ವೈತ ಸಿದ್ಧಾಂತದ ಆಚಾರ್ಯ, ಕೇರಳದ

ಪುನರೂರು ಪತ್ರದ ಯಥಾಪ್ರತಿ

ಶಂಕರಾಚಾರ್ಯರನ್ನು ನೆನೆಯಲು ಮರೆಯದ; ವಿಶಿಷ್ಟಾದ್ವೈತ ಸಿದ್ಧಾಂತದ ಆಚಾರ್ಯ ತಮಿಳುನಾಡಿನ ಶ್ರೀ ರಾಮಾನುಜಾಚಾರ್ಯರನ್ನು ಸ್ಮರಿಸುವ ಇಲ್ಲಿನ ಪತ್ಯ, ಕರ್ನಾಟಕದ ದ್ವೈತಮತ ಸಿದ್ಧಾಂತ ಪ್ರತಿಪಾದಕರಾದ ಮಧ್ವಾಚಾರ್ಯರನ್ನು ಮರೆತಿರುವುದು ಖಂಡನಾರ್ಹ.

'ಶಂಕರ ರಾಮಾನುಜ ವಿದ್ಯಾರಣ್ಯ. ಬಸವೇಶ್ವರರಿಹ ದಿವ್ಯಾರಣ್ಯ' ಎಂಬ ಪತ್ಯದಲ್ಲಿ ಈ ಹಿಂದೆಯೇ ''ಬಸವೇಶ್ವರ ಮಧ್ವರ ದಿವ್ಯಾರಣ್ಯ'' ಎಂದು ಪಾಠಾಂತರ ಮಾಡಲಾಗಿತ್ತು. ಅದನ್ನು ಗಮನಿಸದೆ ಕನ್ನಡ ನಾಡಿನ ಮಹಾನ್ ಆಚಾರ್ಯರನ್ನು ಅವಮಾನಿಸಲಾಗಿದೆ. ಕನ್ನಡ ಜನತೆ ಇದನ್ನು ಸಹಿಸುವಷ್ಟು ಅತಿ ಸಜ್ಜನಿಕೆಯನ್ನೇನೂ ಆರೋಪಿಸಿಕೊಂಡಿಲ್ಲ. ''ಸರ್ವಜನಾಂಗದ ಶಾಂತಿಯ ತೋಟ'' ಕೇವಲ ಬಾಯಿ ಮಾತಿನ ಸರ್ವಧರ್ಮ ಸಮನ್ವಯವಾದ ಘೋಷಣೆ ಮಾತ್ರ ಆಗುತ್ತದೆ.

ಈ ಕೂಡಲೇ ಈ ಧ್ವನಿಸುರುಳಿಯನ್ನು ಘನ ಸರ್ಕಾರ ಹಿಂದೆಗೆದುಕೊಂಡು ''ಬಸವೇಶ್ವರ ಮಧ್ವರ ದಿವ್ಯಾರಣ್ಯ'' ಪತ್ಯವನ್ನು ಸೇರಿಸಿ ಅದನ್ನೇ ಹಾಡಿಸಿ, ಧ್ವನಿಸುರುಳಿ ಬಿಡುಗಡೆ ಮಾಡಬೇಕಾಗಿ ಸಾಹಿತ್ಯ ಪರಿಷತ್ತು ಆಗ್ರಹಪಡಿಸುತ್ತದೆ. ಸಾಹಿತ್ಯ ಪರಿಷತ್ತಿನ ಹಾಗೂ ಕನ್ನಡಿಗರ ಮನವಿಗೆ ಸರಕಾರ ಸಕ್ರಿಯವಾಗಿ ಪ್ರತಿಕ್ರಿಯಿಸದಿದ್ದರೆ, ಕನ್ನಡಿಗರ ಹೋರಾಟವನ್ನು ಎದುರಿಸಬೇಕಾಗುತ್ತದೆ.

ಈ ದೇಶದ ಮಹಾನ್ ಚಿಂತಕ ರಾಷ್ಟ್ರಕವಿ ಕುವೆಂಪು ಅವರ ಜನ್ಮ ಶತಮಾನೋತ್ಸವ ವರ್ಷದಲ್ಲಿ ಅಪಸ್ವರದ ದನಿ ಕೇಳಬರದಂತೆ ಎಚ್ಚರವಹಿಸಬೇಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಘನ ಸರ್ಕಾರವನ್ನು ಆಗ್ರಹಪಡಿಸುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ


ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಕುವೆಂಪುಗೆ ಅಗೌರವ ತೋರಿಲ್ಲ: ಪುನರೂರು

☐ ವರದಿ



ಬೆಂಗಳೂರು: ನಾಡಗೀತೆ ವಿಷಯವಾಗಿ ತಾವು ರಾಷ್ಟ್ರಕವಿ ಕುವೆಂಪು ಅವರಿಗೆ ಅಗೌರವ ತೋರಿಸಿಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹರಿಕೃಷ್ಣ ಪುನರೂರು ಸ್ಪಷ್ಟಪಡಿಸಿದ್ದಾರೆ.

'ನಾಡಗೀತೆಯಾಗಿ ಘೋಷಿಸಿರುವ 'ಜೈ ಭಾರತ ಜನನಿಯ ತನುಜಾತೆ' ಗೀತೆಯ ಕೆಲವು ಚರಣಗಳನ್ನು ಸರ್ಕಾರ ಕತ್ತರಿಸಿದ್ದು ದೇಹದ ಹಲವು ಭಾಗಗಳನ್ನು ಕತ್ತರಿಸಿದಂತೆ ಆಗಿದೆ. ಇದು ವಿಶ್ವಮಾನವ ಗೀತೆಗೆ ಮಾಡಿದ ಅವಮಾನ. ಈ ರೀತಿ ಅಪಚಾರ ಮಾಡುವ ಬದಲು ಇತರ ಕವಿಗಳ ಒಳ್ಳೆಯ ಗೀತೆಯನ್ನು ನಾಡಗೀತೆಯಾಗಿ ಏಕೆ ಹಾಡಬಾರದು?' ಎಂದು ಪ್ರಶ್ನಿಸಿದ್ದೇನೆಯೇ ವಿನಾ ಕುವೆಂಪು ಅವರಿಗೆ ಅಗೌರವ ತೋರಿಸಿಲ್ಲ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಗೀತೆಯನ್ನು ನಾಡಗೀತೆಯಾಗಿ ಘೋಷಿಸುವಂತೆ ಪರಿಷತ್ತು ಬಹು ಹಿಂದಿನಿಂದಲೂ ಆಗ್ರಹಿಸುತ್ತ ಬಂದಿತ್ತು ಎಂಬುದನ್ನು ಜ್ಞಾಪಿಸಿರುವ ಅವರು, ಕುವೆಂಪು ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಸರ್ಕಾರವೇ ಈ ಹಾಡನ್ನು ನಾಡಗೀತೆಯಾಗಿ ಘೋಷಿಸಿರುವುದು ನಾಡಿನ ಜನತೆಗೆ ಹರ್ಷ ತಂದಿದೆ. ಆದರೆ ಹಾಡನ್ನು ಪೂರ್ತಿಯಾಗಿ ಹಾಡುವಂತೆ ಆದೇಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕನ್ನಡ ನುಡಿ, ಫೆಬ್ರವರಿ 2004, 'ತಿಂಗಳ ಮಾತು'– ಆಯ್ದಭಾಗ, ನಿರೂಪಣೆ– ಸ. ಚಕ್ರಪಾಣಿ

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ನಾಗರಿಕರ ಅನಾಗರಿಕ ವರ್ತನೆ

□ ಕುಲಶೇಖರಿ



ಕುವೆಂಪುರವರ 'ಕವಿತೆ' ನಾಡಗೀತೆಯಾಗುವ, ಆಗುತ್ತಿರುವ ಹಿನ್ನೆಲೆಯಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ನೋಡಿದರೆ, ನಮಗೇ ನಮ್ಮ ಸಂಸ್ಕೃತಿಯ ಬಗ್ಗೆ ಅನುಮಾನ ಮೂಡುತ್ತದೆ. ಕನ್ನಡ ಜನತೆ ಸಭ್ಯತೆ, ಉದಾರತೆ, ಸೌಹಾರ್ದತೆ, ಪರಮತ ಸಹಿಷ್ಣುತೆ, ಮಾನವೀಯತೆ ಮುಂತಾದ ಮೌಲ್ಯಗಳಿಗೆ ಬೆಲೆ ಕೊಟ್ಟು ಬದುಕಿದರು. ನಮಗೆ ಒಂದು ಸುದೀರ್ಘವಾದ ಸಾಂಸ್ಕೃತಿಕ ಪರಂಪರೆಯಿದೆ. ಇಂಥದ್ದೆಲ್ಲ ಇರುವಾಗ 'ಮಧ್ವ'ರ ಹೆಸರು ಕವಿತೆಯಲ್ಲಿ ಉಳಿಸಬೇಕೇ ಬಿಡಬೇಕೇ ಎನ್ನುವ ಚರ್ಚೆಯಲ್ಲಿ ಬುದ್ಧಿಜೀವಿಗಳೂ, ರಾಜಕಾರಣಿಗಳೂ, ಜನಸಾಮಾನ್ಯರೂ ಇಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿರುವುದು ಒಂದು ಹಂತದಲ್ಲಿ ಸಂತೋಷವೆನಿಸಿದರೆ ಮತ್ತೊಂದು ಹಂತದಲ್ಲಿ ವಿಷಾದನೀಯವೆನಿಸುತ್ತದೆ. ಕುವೆಂಪು ಅವರಿಗೆ ನ್ಯಾಯ ಸಲ್ಲಿಸುವ, ಗೌರವ, ನಿಷ್ಠೆ ತೋರಿಸುವ ಪ್ರಯತ್ನದಲ್ಲಿ, ಕುವೆಂಪು ರಕ್ಷಕದಳ, ಕನ್ನಡ ಭಾಷೆ, ಸಂಸ್ಕೃತಿ ರಕ್ಷಕದಳ, ಕಣಕ್ಕಿಳಿದು ಹೋರಾಟ ಮಾಡುತ್ತಿರುವ ರೀತಿಯ ಬಗ್ಗೆ ಕನ್ನಡದ ಎಲ್ಲ ಜಾತಿ, ಮತ, ವರ್ಗದ ಜನರು ಸ್ವಲ್ಪ ಯೋಚಿಸಬೇಕಾಗಿದೆ. ತಮ್ಮ ಆತ್ಮಸಾಕ್ಷಿಯನ್ನು ತಮ್ಮ ನಡತೆಯ, ನಡವಳಿಕೆಯ ಬಗ್ಗೆ ಪ್ರಶ್ನಿಸಿಕೊಳ್ಳಬೇಕಾಗಿದೆ. ಮಹೋನ್ನತ ಕವಿಯೊಬ್ಬರಿಗೆ, ಕನ್ನಡ ಭಾಷೆ, ಸಂಸ್ಕೃತಿಗೆ ಅಗೌರವ, ಅನ್ಯಾಯ ಆಗಿದ್ದರೆ ಅದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ್ದು ನಮ್ಮೆಲ್ಲರ ಧರ್ಮ ಮತ್ತು ಕರ್ತವ್ಯ ಎಂಬುದನ್ನು ಯಾರೂ

*'ಕ್ಷಿತಿಜ', 5ನೇ ಕ್ರಾಸ್, ಮಹಾಕವಿ ಕುವೆಂಪು ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3

ಅಲ್ಲಗಳೆಯುವುದಿಲ್ಲ. ವಿಷಯ ಸಂಬಂಧವಾಗಿ ಒಡೆದೇಳುವ ಭಿನ್ನಾಭಿಪ್ರಾಯ, ವಿರೋಧಗಳು, ಸಮಾಧಾನಗಳು- ಮುಂತಾದವುಗಳನ್ನು ಅಭಿವ್ಯಕ್ತಗೊಳಿಸುವುದಕ್ಕೆ ಬೇರೆ ಬೇರೆ ದಾರಿಗಳೂ, ರೀತಿಗಳೂ ಇರುವಾಗ ಅಸಭ್ಯವಾಗಿ, ಅನಾಗರಿಕವಾಗಿ ಯಾವುದೋ ರಾಜಕೀಯ ಸಮಸ್ಯೆಗೋ, ವೈಯಕ್ತಿಕ ಸಮಸ್ಯೆಗೋ ಸಂಬಂಧಿಸಿದಂತೆ ಹಣಾಹಣಿ, ಮಾರಾಮಾರಿ ವಿಧಾನಗಳನ್ನು ಅನುಸರಿಸ ಹೊರಟದ್ದು, ನಮ್ಮ ನಾಡಿನ, ಸಂಸ್ಕೃತಿಯ ದುರಂತ!

21ನೇ ಜನವರಿ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅದೂ ಒಂದು ಉತ್ತಮವಾದ ಸಾಹಿತ್ಯಿಕ ಕಾರ್ಯಕ್ರಮ ನಡೆಯುತ್ತಿರುವಾಗ ನಡೆದ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ನನಗೇ ತಲೆ ತಗ್ಗಿಸುವಂತಾಯಿತು. ಪುನರೂರವರ ಮೇಲೆ ಅಥವಾ ಕುವೆಂಪು ಕುರಿತಾದ ಭಾಷಣದಲ್ಲಿ ಅವರಾಡಿದ ಮಾತಿನ ಮೇಲೆ ಆಕ್ರೋಶವಿರಬಹುದು; ಅಸಮಾಧಾನವೂ ಆಗಿರಬಹುದು. ಒಂದು ಸಂದರ್ಭ, ಸನ್ನಿವೇಶಕ್ಕೆ ಒಂದೊಂದು ವರ್ಗದ ಜನರು ಬೇರೆ ಬೇರೆಯಾಗಿಯೇ ಸ್ಪಂದಿಸುವುದರಲ್ಲಿ ತಪ್ಪಿಲ್ಲ. ಆದರೆ ಆ ಸ್ಪಂದನಗಳು ಸಭ್ಯ ಶೈಲಿಯಲ್ಲಿರಬೇಕೆಂಬುದನ್ನು ಮರೆತು, ಕನ್ನಡ ಪರ ಹೋರಾಟದ ಮಂದಿ ದುಂಡಾವರ್ತಿಗಳಂತೆ, ದುಷ್ಕರ್ಮಿಗಳಂತೆ ನಡೆದುಕೊಂಡದ್ದು ಕನ್ನಡನಾಡಿಗೇ, ಕನ್ನಡ ಕುಲಕ್ಕೇ ಅವಮಾನ. ಕಾರ್ಯಕ್ರಮದ ಪ್ರಾರಂಭಕ್ಕೆ ಮೊದಲೇ ಒಂದಷ್ಟು ಜನ ಪರಿಷತ್ತಿನ ಹೊರಗಡೆ ಠಳಾಯಿಸುತ್ತ ಒಂದು ಬಗೆಯ ವಿತೂರಿಯಲ್ಲಿ ತೊಡಗಿದ್ದಂತೆ ಭಾಸವಾಗುತ್ತಿದ್ದರಾದರೂ, ವಾಸ್ತವವಾಗಿ ಅವರು ನಡೆದುಕೊಂಡ ಮಟ್ಟ ತಲುಪುತ್ತಾರೆಂದು ಯಾರೂ ಊಹಿಸಲೂ ಸಾಧ್ಯವಿರಲಿಲ್ಲ.

ಅತ್ಯಂತ ಆತ್ಮೀಯವಾದ, ಸೌಹಾರ್ದಯುತವಾದ ವಾತಾವರಣ ಕವಿದಿದ್ದು ನನ್ನ ಭಾಷಣ, ಸರೋಜಾದೇವಿ ಭಾಷಣ, ಡಾ। ಕಮಲಾ ಹಂಪನಾ ಅವರ ಭಾಷಣಗಳು ಮುಗಿದು ಸಭಿಕರು ಕಾರ್ಯಕ್ರಮವನ್ನು ಆದರಾಭಿಮಾನಗಳಿಂದ, ಸಂಭ್ರಮದಿಂದ ವೀಕ್ಷಿಸುತ್ತಿದ್ದಾಗ, ಪುನರೂರು ಅವರು ವೇದಿಕೆಯ ಮುಂದಕ್ಕೆ ಧ್ವನಿವರ್ಧಕದ ಸಮೀಪಕ್ಕೆ ಬರುತ್ತಿದ್ದಂತೆ ಅವರಿಗೆ ಧಿಕ್ಕಾರಗಳನ್ನು ಹೇಳುತ್ತಾ, ವೇದಿಕೆಯ ಮೇಲಿನ ವಸ್ತುಗಳನ್ನು ಉರುಳಿಸಿ, ನೇರವಾಗಿ ಅಧ್ಯಕ್ಷರ ಮೇಲೆ ಹಲ್ಲೆಮಾಡಿ, ಪಂಚೆಯನ್ನು ಕಿತ್ತೆಳೆದ ರೀತಿಯನ್ನು ವೇದಿಕೆಯ ಮೇಲೆ ಮತ್ತು ಕೆಳಗೆ ಸಭಿಕರ ಸಮುದಾಯದಲ್ಲಿ ಕುಳಿತಿದ್ದ ಲೇಖಕಿಯರಿಗೆ ನೋಡುತ್ತಿದ್ದಂತೆ ಅಸಹ್ಯ, ಜುಗುಪ್ಸೆಗಳಾಗಿ, ಬಿಡಿ, ಬಿಡಿ ಎಂದು ಅಂಗಲಾಚುತ್ತಿದ್ದರೂ, ನಮ್ಮ ಕೂಗಿಗೆ, ಆರ್ತಮೊರೆಗೆ ಕಿವುಡಾಗಿ ಪಂಚೆಯನ್ನು ಎಳೆದು ಎಸೆದಾಡಿ ವಿಕಟವಾಗಿ ಆನಂದಿಸಿದರು. ಒಂದಷ್ಟು ಜನ ಗಂಡಸರು ಅವರಿಗೆ ಅಡ್ಡನಿಂತು ನಿವಾರಿಸದಿದ್ದರೆ, ಅವರ ಒಳ ಉಡುಪಿಗೇ ಕೈಹಾಕುವ ಸಾಧ್ಯತೆಯಿದ್ದ ರಾಕ್ಷಸೀಭಾವ ಎದ್ದು ಕಾಣುತ್ತಿತ್ತು. ದುಶ್ಯಾಸನ, ತುಂಬಿದ ಸಭೆಯಲ್ಲಿ ಸೀರೆ ಎಳೆದದ್ದನ್ನು ನಾವು ನೋಡಿಲ್ಲವಾದರೂ 'ಗಂಡಸೊಬ್ಬನ ವಸ್ತ್ರಾಪಹರಣ'ದ ದೃಶ್ಯವನ್ನು ಪ್ರತ್ಯಕ್ಷವಾಗಿ ಕಂಡ ನನಗೆ ಇಡೀ ಕರ್ನಾಟಕ ಸಂಸ್ಕೃತಿಯ ಇತಿಹಾಸವನ್ನೋ ಕರ್ನಾಟಕ ಭಾರತ ಕಾವ್ಯವನ್ನೋ ಬರೆಯುವಾಗ ಈ ಪ್ರಸಂಗ ಅತ್ಯಂತ ರೋಚಕವಾಗಿ ಕಾಣಿಸಬಹುದೆನಿಸುತ್ತದೆ. ಇನ್ನು ಮುಂದೆ 'ದ್ರೌಪದಿ ವಸ್ತ್ರಾಪಹರಣ' ಪ್ರಸಂಗದ ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ, ಗೌರವಾನ್ವಿತರಾದ ವ್ಯಕ್ತಿಯೊಬ್ಬರ ವಸ್ತ್ರಾಪಹರಣ ಪ್ರಸಂಗವನ್ನು ನೆನಪಿಸಿಕೊಳ್ಳಲೇ ಬೇಕಾಗುತ್ತದೆ.


ಕುವೆಂಪು ಅವರು ಬದುಕಿದ್ದು ಈ ಘಟನೆಗೆ ಸಾಕ್ಷಿಯಾಗಿದ್ದರೆ ಕನ್ನಡಿಗರ, ಕನ್ನಡ ಸಂಸ್ಕೃತಿಯ ಬಗೆಗಿನ ಅವರ ಅಭಿಮಾನ, ನಿಲುವುಗಳಿಗೆ ಏನಾಗಬಹುದಿತ್ತು? ಅವರು ಇದಕ್ಕೆ ಹೇಗೆ ಸ್ಪಂದಿಸುತ್ತಿದ್ದರು ಎಂಬುದನ್ನು ನೆನೆಸಿಕೊಂಡರೆ, ಮೈ ನಡಗುತ್ತದೆ. ಈ ಪ್ರಸಂಗ ಕನ್ನಡಿಗರೆಲ್ಲರೂ ತಲೆ ತಗ್ಗಿಸುವಂತೆ ಮಾಡಿತೆಂಬುದರಲ್ಲಿ ಸಂದೇಹವಿಲ್ಲ.

☐

ಕಸಾಪ, 'ಕನ್ನಡ ನುಡಿ'ಯ 2004ರ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದ ಪತ್ರ

ಚರ್ಚೆ ವ್ಯಕ್ತಿನಿಷ್ಠವಾಗದೆ ವಸ್ತುನಿಷ್ಠವಾಗಿರಲಿ

□ ಎಸ್.ವಿ. ಶ್ರೀನಿವಾಸರಾವ್



ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ಹರಿಕೃಷ್ಣ ಪುನರೂರುರವರ ಮೇಲೆ ದಿನಾಂಕ 21-11-2004ರಂದು ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಹಲ್ಲೆ ನಡೆಸಿದ್ದನ್ನು, 'ಕನ್ನಡ ನುಡಿ'ಯ ಸಂಪಾದಕನಾಗಿ, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷನಾಗಿ, ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಖಂಡಿಸುತ್ತೇನೆ. ಪ್ರಜಾತಂತ್ರದಲ್ಲಿ ವ್ಯಕ್ತಿ ವ್ಯಕ್ತಿಗಳ ಮಧ್ಯೆ, ಸಂಘ, ಸಂಸ್ಥೆಗಳ ಮಧ್ಯೆ ಭಿನ್ನಾಭಿಪ್ರಾಯವಿರುವುದು ಸ್ವಾಭಾವಿಕ. ಇವುಗಳನ್ನು ಪರಿಹರಿಸಿಕೊಳ್ಳಲು ಪ್ರಜಾಸತ್ತಾತ್ಮಕ ಮಾರ್ಗಗಳನ್ನು ಉಪಯೋಗಿಸಿಕೊಳ್ಳದೆ ಹೀಗೆ ಅನಾಗರಿಕ ರೀತಿಯಲ್ಲಿ ಹಲ್ಲೆ ನಡೆಸುವುದು ಸರಿಯಲ್ಲ.

ಈ ಘಟನೆ ಕನ್ನಡಾಂಬೆಗೆ ಮಾಡಿದ ಅವಮಾನವಲ್ಲದೆ, ಕನ್ನಡ ನಾಡಿನ ಹೆಮ್ಮೆಯ 'ರಾಷ್ಟ್ರಕವಿ', ಸರ್ವಧರ್ಮ ಸಮನ್ವಯ ಸಾರಿದ ಶ್ರೇಷ್ಠ ಮಾನವತಾವಾದಿ, ಗೌರವಾನ್ವಿತ ಕುವೆಂಪುರವರ ಹೆಸರಿಗೂ ಕಳಂಕ ತರುವಂಥದ್ದು.

'ಕನ್ನಡನುಡಿ'ಯ 2004ರ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದ ಪತ್ರ

340, ಸೌರಭ, 4ನೆಯ ಮುಖ್ಯರಸ್ತೆ, ಬನಶಂಕರಿ 1ನೆಯ ಹಂತ ಶ್ರೀನಗರ, ಬೆಂಗಳೂರು-50

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ನಾಡಗೀತೆ ಗಲಾಟೆಯ ಉದ್ದೇಶ ಬೇರೆಯೇ ಇದೆ

☐ ಪುನರೂರು



ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯನ್ನು ಸಹಿಸದ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾಗಿ ನೇಮಿಸಿಕೊಳ್ಳುವ ಒತ್ತಡಕ್ಕೆ ಮಣಿಯದ ನನಗೆ, ಕೆಲಜನರು ಪರಿಷತ್ತಿಗೆ ಅಶುಭವನ್ನು ಬಯಸುತ್ತಿದ್ದು ಅಂತಹ ಆಚಾರವಿಲ್ಲದ ನಾಲಗೆಯುಳ್ಳ ಜನರು ನಾಮಫಲಕ ನೋಡಿದಾಗ ಒಮ್ಮೆಯಾದರೂ ಕನ್ನಡ ಸಾಹಿತ್ಯ ಪರಿಷತ್ತಿಗೆ 'ಶುಭವಾಗಲಿ' ಎಂದು ನುಡಿಯಲಿ ಎಂದು ಬರೆಸಿದೆ. ನನ್ನ ಮನೆ ಗೌರವಾನ್ವಿತ ಪಟೇಲರ ಮನೆ. ನಮ್ಮ ಮನೆ ಹೆಸರು 'ಶುಭವಾಗಲಿ' ಎಂದು ಇರಿಸಲಿಲ್ಲ ಎಂದು ಸ್ಪಷ್ಟೀಕರಿಸುತ್ತೇನೆ. ವಸ್ತುನಿಷ್ಠ ಹಾಗೂ ಸತ್ಯಸಂಧವಾಗಿ ಕೆಲಸ ಮಾಡುತ್ತ ಸಾಹಿತ್ಯ ಪರಿಷತ್ತಿನಿಂದ ಗೌರವಧನ, ಪ್ರಯಾಣ ಭತ್ಯೆಯನ್ನು ಪಡೆಯದೆ, ಪರಿಷತ್ತಿನ ಕಾರನ್ನು ಹೆಚ್ಚಿಗೆ ಬಳಸದೆ, ಜಿಲ್ಲೆಗೆ ಪ್ರವಾಸ ಹೋದಾಗ ಸರಕಾರದ ಕಾರನ್ನು ಪಡೆಯದೆ, ನನ್ನ ಸ್ವಂತ ಕಾರನ್ನು ಬಳಸಿ ಪರಿಷತ್ತಿನ ಬೆಳವಣಿಗೆಗೆ ಶ್ರಮಿಸುತ್ತಿದ್ದೇನೆ. ಹಿಂದಿನ ಅಧ್ಯಕ್ಷರು ಬಾಕಿ ಇಟ್ಟ ನೌಕರರ ಕ್ಷೇಮ ನಿಧಿಯ 30 ಲಕ್ಷ ರೂಪಾಯಿಗಳನ್ನು ಹಾಗೂ ಮೂಲನಿಧಿಯಿಂದ 25 ಲಕ್ಷ ರೂಪಾಯಿಗಳನ್ನು ತೆಗೆದದ್ದನ್ನು ತುಂಬಿಸಿದ್ದೇನೆ. ಪರಿಷತ್ತಿನ ಚಟುವಟಿಕೆಗಳನ್ನು ವೆಬ್‌ಸೈಟಿಗೆ ಅಳವಡಿಸಿದ್ದಲ್ಲದೆ, ಹಲವಾರು ಸಾಹಿತ್ಯಕ ಕೃತಿಗಳನ್ನು ಸಿ.ಡಿ.ಗೆ ಅಳವಡಿಸಿರುತ್ತೇನೆ.

150ಕ್ಕಿಂತಲೂ ಹೆಚ್ಚಿನ ಅಮೂಲ್ಯ ಪುಸ್ತಕಗಳನ್ನು ಮರುಮುದ್ರಣ ಮಾಡಿಸಿರುತ್ತೇನೆ. ಕನ್ನಡ-ಇಂಗ್ಲಿಷ್ ನಿಘಂಟನ್ನು

ಕನ್ನಡ ನುಡಿ, ಫೆಬ್ರವರಿ 2004, 'ತಿಂಗಳ ಮಾತು' ನಿರೂಪಣೆ- ನ. ಚಕ್ರಪಾಣಿ

ಪ್ರಕಟಿಸಿರುತ್ತೇನೆ. 350ಕ್ಕಿಂತಲೂ ಹೆಚ್ಚು ದತ್ತಿಗಳನ್ನು ಸಂಗ್ರಹಿಸಿ ಇದರಿಂದ ವೃದ್ಧಿಗೊಂಡ ಲಕ್ಷಾಂತರ ರೂಪಾಯಿ ಸಂಪನ್ಮೂಲದಿಂದ ದತ್ತವಾಗುವ ಬಡ್ಡಿ ಹಣದಲ್ಲಿ ರಾಜ್ಯದ ಮೂಲೆ ಮೂಲೆಗಳಲ್ಲಿ ದಿನವೂ ಕನ್ನಡದ ಒಂದಿಲ್ಲೊಂದು ಕಾರ್ಯಕ್ರಮ ನಡೆಯುವಂತೆ ಮಾಡಿರುತ್ತೇನೆ. ಹಾಗೂ ಆಜೀವ ಸದಸ್ಯರ ಸಂಖ್ಯೆ ಮೂರು ಪಟ್ಟು ಹೆಚ್ಚಿಸಿದ್ದೇನೆ. ಪರಿಷತ್ತಿನ ಹಲವಾರು ವಿಭಾಗಗಳನ್ನು ಗಣಕೀಕರಣಗೊಳಿಸಿದ್ದೇನೆ. ಪರಿಷತ್ತಿಗೆ ಆರ್ಥಿಕ ದೃಢತೆಯನ್ನು ತಂದಿದ್ದೇನೆ. 'ಪಂಪ ಭವನ' ಸಭಾಂಗಣ ಸಿದ್ಧಪಡಿಸಿ ಕೃಷ್ಣರಾಜ ಪರಿಷನ್ಮಂದಿರಕ್ಕೆ ಹೊಸ ಆಸನಗಳ ವ್ಯವಸ್ಥೆ ಹಾಗೂ ನವೀಕರಣ ಮಾಡಿಸಿರುತ್ತೇನೆ.

ಹಳೆಯ ಬಾಕಿ, ಅಮೃತ ನಿಧಿಯ ಹಣ, ಲೆಕ್ಕ ಪತ್ರ ನೀಡದವರ ಮೇಲೆ ದಾವೆ ಹೂಡಿಸಿ ಬಾಕಿ ವಸೂಲಿ ಮಾಡುವುದರ ಜೊತೆಗೆ ಪರಿಷತ್ತಿನಿಂದ ಜರುಗುವ ರತ್ನ, ಜಾಣ, ಕಾವ್ಯ ಪರೀಕ್ಷೆಗಳಲ್ಲಿ ಪಾರದರ್ಶಕತೆಯನ್ನು ತಂದಿದ್ದೇನೆ. ಇದನ್ನು ಸಹಿಸದ ಬೆಂಗಳೂರಿನ ಕೆಲವು ಸಂಘ ಸಂಸ್ಥೆಗಳು, ಕೆಲವು ಜನ ಮಹನೀಯರುಗಳು ಕತ್ತಿ ಮಸೆಯುತ್ತಿದ್ದು, ವಸ್ತ್ರಾಪಹರಣ ಹಾಗೂ ಹಲ್ಲೆಗೂ ಕಾರಣರಾಗಿದ್ದಾರೆ. ಅಂತಹವರ ನಾಲಗೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ 'ಶುಭವಾಗಲಿ' ಎಂಬ ಪದ ಹೊರಡಲಿ ಎಂದು ನಾಮಫಲಕದಲ್ಲಿ ಬರೆಸಿದೆ. ಪರಿಷತ್ತಿನ ಚಿಹ್ನೆಯನ್ನು ವಿರೂಪಗೊಳಿಸಲು ಅಲ್ಲ. ಪರಿಷತ್ತಿನ ಸುಗಮ ಕಾರ್ಯಾಚರಣೆಗೆ ಅಡ್ಡಿ ತರುವುದು, ಅದರಿಂದ ವಿಘ್ನ ಸಂತೋಷ ಅನುಭವಿಸುವುದು ಇವರ ಜಾಯಮಾನವಾಗಿದೆ. ಇಂತಹವರ ಬಗೆಗೆ ಸದಾ ಎಚ್ಚರದಿಂದಿರುವುದು ಸೂಕ್ತವಾಗಿದೆ. ಪರಿಷತ್ತಿನ ಕಟ್ಟಡದ ಮುಂದಿನ ನಾಮಫಲಕದಿಂದ 'ಶುಭವಾಗಲಿ' ಎಂದು ಬರೆದುದನ್ನು ತೆಗೆಯುವಂತೆ ನಾನೇ ಹೇಳಿದೆ. ಪರಿಷತ್ತನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸಿ ಅದು ಆಗದೇ ಇದ್ದಾಗ 'ಅಶುಭವಾಗಲಿ' ಎಂದು ಬಯಸುವ ಜನರು ಅವರಾಗಿದ್ದಾರೆ. ನಾನೇನು ಇನ್ನೊಮ್ಮೆ ಸ್ಪರ್ಧಿಸುವುದಿಲ್ಲ. ನನ್ನಿಂದ ಪರಿಷತ್ತಿನ ಬೆಳವಣಿಗೆ ಯಾವ ರೀತಿ ಆಗಿದೆ ಎಂದು ಬುದ್ಧಿಜೀವಿಗಳು ಚಿಂತಿಸಲಿ.

ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಹಾಗೂ ಗಡಿಪ್ರದೇಶಗಳಲ್ಲಿ ಸಮ್ಮೇಳನ ಮಾಡಿ ಕನ್ನಡಿಗರ ಜಾಗೃತಿಗೊಳಿಸಿದ್ದೇನೆ. ಅಲ್ಲದೇ ನನ್ನ ಒಂದೇ ಅವಧಿಯಲ್ಲಿ ಮೂರು ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ, ಸಮಸ್ತ ಕನ್ನಡಿಗರ ಪ್ರಶಂಸೆಗೆ ಪಾತ್ರನಾಗಿದ್ದೇನೆ. ಕರೆದಾಗಲೆಲ್ಲಾ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸಮ್ಮೇಳನ ಹಾಗೂ ಇತರೆ ಕನ್ನಡದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ. ನನ್ನ ಹೆಸರಿನ ಜೊತೆಗೆ ಏನು ಸೇರಿಸಬೇಕೆಂದು ಇನ್ನೊಬ್ಬರನ್ನು ಕೇಳುವ ಅಗತ್ಯವಿಲ್ಲ. 'ನಾಡಗೀತೆ' ಒಂದು ನೆಪ ಮಾತ್ರ. ಗಲಾಟೆ ಮಾಡಿದ ಉದ್ದೇಶ ಬೇರೆಯೇ ಆಗಿದೆ ಎಂದು ಕನ್ನಡಿಗರು ಗಮನಿಸಲಿ.

ನಾನಂತೂ ಪಂಚೆ ಎಳೆಸಿಕೊಳ್ಳಲೂ ಯೋಗ್ಯನಲ್ಲ ಎಂದು ಬೊಟ್ಟುಮಾಡಿ ತೋರಿದಿರಿ, ಆಗ ಮೂರು ಬೆರಳುಗಳು ಯಾರನ್ನು ಪ್ರಶ್ನೆ ಕೇಳಿತು ಎಂದು, ಎಲ್ಲಾ ತಿಳಿದ ತಮಗೆ ನಾನಂತೂ ತಿಳಿಸಲಾರೆ.

ಪಂಚೆ ಎಳೆಸಿಕೊಳ್ಳಲು ಯೋಗ್ಯರಾದವರು ಜಾತೀಯ ನೆಲಗಟ್ಟಿನಲ್ಲಿ ಮಾಡಿದ ಅಕ್ರಮಗಳೇನೆಂದು ಒಮ್ಮೆ ಆದರೂ ಆತ್ಮಾವಲೋಕನ ಮಾಡಿಕೊಂಡಿದ್ದಾರೆಯೇ ಯೋಚಿಸಿ. ವಂಶ ಪಾರಂಪರ್ಯವೆ ಉನ್ನತೋನ್ನತ ಹುದ್ದೆ? ಅಂತೂ ಗಿಟ್ಟಿಸಿಕೊಂಡಿರಿ ಹಾಗೂ ಹೀಗೂ ಎಂದು ಮುಂತಾಗಿ ಜನರಾಡುತ್ತಿರುವ, ಮಾತೇ ಬೇತಾಳ ಕಥೆಗಳಂತೆ ಸ್ವಾರಸ್ಯಕರವಾಗಿದೆ.

ಕನ್ನಡ ನೆಲದ ಮೇಧಾವಿ ಆಚಾರ್ಯರೊಬ್ಬರನ್ನು ಕನಿಷ್ಠ ಅರ್ಹತೆಯೂ ಇಲ್ಲದವರೆಂದು ಅವಮಾನಿಸಿರುವುದು ಸರಿಯೇ? ಪ್ರಜ್ಞಾವಂತರು ಯೋಚಿಸಲಿ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಕುವೆಂಪು ಹೆಸರಿಗೆ ಚ್ಯುತಿ ತರಬೇಡಿ

□ ಪುನರೂರು

...ರಸಋಷಿ ಕುವೆಂಪು ಅವರಿಗೆ, ನಾಡಗೀತೆ ರಚಿಸಿಕೊಡಿ ಎಂದೇನೂ ಯಾರೂ ಕೇಳಿಕೊಂಡಿರಲಿಲ್ಲ. ಅವರು ತಮ್ಮ ಇಚ್ಛೆಯಂತೆ ವಿಸ್ತಾರವಾಗಿ ಕನ್ನಡ ನಾಡಿನ ಹಿರಿಮೆ ವೈಶಿಷ್ಟ್ಯಗಳನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಸಂಪೂರ್ಣ ಚಿತ್ರ ನೀಡಲೇಬೇಕೆಂದು ನಿರ್ಧರಿಸಿದಂತೆ ಕಾಣುವುದಿಲ್ಲ. ಹಾಗಾಗಿ ಸಣ್ಣ ಪುಟ್ಟ ಕೊರತೆಗಳು ಕಂಡುಬಂದಿರಬಹುದು. ಅವುಗಳನ್ನು ವ್ಯವಸ್ಥಿತವಾಗಿ ತಿದ್ದುಪಡಿ ಮಾಡಲು ಅನುಮತಿ ನೀಡಿ ಉಪಕರಿಸಿದ್ದರು ಎಂಬುದು ಐತಿಹಾಸಿಕಸತ್ಯ ಎನ್ನುವುದನ್ನು ಮರೆಯುವಂತಿಲ್ಲ.



'ಶಂಕರ ರಾಮಾನುಜ ವಿದ್ಯಾರಣ್ಯ; ಬಸವೇಶ್ವರರಿದ್ದ ದಿವ್ಯಾರಣ್ಯ' ಎಂದಿದ್ದದ್ದು ಕಾಲಕ್ರಮದಲ್ಲಿ 'ಬಸವೇಶ್ವರರಿಹ', 'ಬಸವೇಶ್ವರ ಮಧ್ವರ 'ಎಂದಾಯಿತು, ಹಾಗೆಯೆ, 'ಕಬ್ಬಿಗರುದಿಸಿದ ಮಂಗಳಧಾಮ' 'ಕುಮಾರವ್ಯಾಸನ ಮಂಗಳಧಾಮ' ಆಯಿತು.

ರಾಷ್ಟ್ರಕವಿ ಕುವೆಂಪು ಅವರ ಜನ್ಮಶತಮಾನೋತ್ಸವದ ಈ ಸಂದರ್ಭದಲ್ಲಿ ಅವರ ವ್ಯಕ್ತಿತ್ವಕ್ಕೆ ಚ್ಯುತಿ ಬಾರದಂತೆ ಎಚ್ಚರ ವಹಿಸಿ ವಿವಾದವನ್ನು ಪರಿಸಮಾಪ್ತಿಗೊಳಿಸಬೇಕಾಗಿ ವಿನಂತಿ. □

ಕನ್ನಡ ನುಡಿ, ಫೆಬ್ರವರಿ 2004, 'ತಿಂಗಳ ಮಾತು' ಆಯ್ದ ಭಾಗ, ನಿರೂಪಣೆ- ನ. ಚಕ್ರಪಾಣಿ

'ಕುವೆಂಪು ಅವರೇ ಮಧ್ವರ ಹೆಸರು ಸೇರಿಸಿದ್ದರು'

- ವರದಿ



ಬೆಂಗಳೂರು: ನಾಡಗೀತೆಯಲ್ಲಿ ಕುವೆಂಪು ಅವರೇ 'ಮಧ್ವ'ರ ಹೆಸರು ಸೇರಿಸಿ ತಿದ್ದಿಕೊಟ್ಟದ್ದಕ್ಕೆ ಸಾಕಷ್ಟು ಪುರಾವೆಗಳಿವೆ ಎಂದು ಸಂಶೋಧಕ ಡಾ|| ಎಂ. ಚಿದಾನಂದಮೂರ್ತಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಅವರು, 1970ರಲ್ಲಿ ಕುವೆಂಪು ಈ ಗೀತೆಯಲ್ಲಿ ಬಸವೇಶ್ವರ ಮತ್ತು ಮಧ್ವರ ಹೆಸರು ಸೇರಿಸಲು ಒಪ್ಪಿದ್ದರು. ಈ ವಿಷಯವನ್ನು ಡಿ. ಲಿಂಗಯ್ಯನವರು ಕೂಡ ಚಿತ್ರಪಡಿಸಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುವೆಂಪು ತಮ್ಮ ಆತ್ಮಕತೆ 'ನೆನಪಿನ ದೋಣಿಯಲ್ಲಿ' 'ಸಾಹಿತ್ಯ ಪರಿಷತ್ತು ಅಂಗೀಕರಿಸಿರುವ ನಾಡಗೀತೆಯನ್ನೇ ಸರ್ಕಾರವೂ ಒಪ್ಪುತ್ತದೆ ಎಂದು ಹಾರೈಸುತ್ತೇನೆ' ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ 'ಆ ಕವನ ಪರಿಷತ್ತಿನ ಆವೃತ್ತಿಯೇ ಹೊರತು ಕುವೆಂಪು ತಿದ್ದಿ ಪ್ರಕಟಿಸಿದ ಆವೃತ್ತಿಯಲ್ಲ' ಎಂದು ತೇಜಸ್ವಿ ತಿಳಿಸಿರುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.

ಸಿ.ಪಿ.ಕೆ. ಬರೆದುಕೊಟ್ಟ ಲೇಖನವನ್ನು ಕುವೆಂಪು ಒಪ್ಪಿದ ಮೇಲೆಯೇ ಅದು 'ವಿಚಾರಕ್ರಾಂತಿಗೆ ಆಹ್ವಾನ' ಪುಸ್ತಕದಲ್ಲಿ ಪ್ರಕಟವಾಗಿದೆ. ಯಾವ ಲೇಖಕನೂ ತನ್ನದಲ್ಲದ ಅಭಿಪ್ರಾಯಗಳನ್ನು ತನ್ನದೆಂದು ಅಚ್ಚು ಮಾಡಿಕೊಳ್ಳುವುದಿಲ್ಲ.

ಕನ್ನಡ ನುಡಿ, ಫೆಬ್ರವರಿ 2004

ಕುವೆಂಪು ಕೂಡ ಅಂತಹದಕ್ಕೆ ಅವಕಾಶ ಮಾಡಿಕೊಡುವಂತಹವರಲ್ಲ ಎಂದು ಅವರು ತಿಳಿಸಿದ್ದಾರೆ.

ಕಟೂಕ್ತಿ, ವ್ಯಂಗ್ಯಗಳು ಯಾವುದೇ ವಾದದ ದೌರ್ಬಲ್ಯದ ಸಂಕೇತಗಳು ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಬಯಸುವುದಾಗಿ ಅವರು ಹೇಳಿದ್ದಾರೆ.

□

ಭಾಗ: ಮೂರು

ಕ.ಸಾ.ಪ. ಅಧ್ಯಕ್ಷತೆಯ ದಿನಗಳು


ಪುನರೂರು ಮೇಲೆ ಹಲ್ಲೆ: ಮುಖ್ಯಮಂತ್ರಿ ಖಂಡನೆ

-ವರದಿ

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹರಿಕೃಷ್ಣ ಪುನರೂರು ಅವರ ಮೇಲೆ ಗುಂಪೊಂದು ನಡೆಸಿದ ಹಲ್ಲೆಯನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತೀವ್ರವಾಗಿ ಖಂಡಿಸಿದ್ದಾರೆ.

'ಇದೊಂದು ಅನಾಗರಿಕ ಘಟನೆ' ಎಂದು ಅವರು ಬಣ್ಣಿಸಿದ್ದು, 'ಇಂತಹ ಘಟನೆಗಳಿಂದಾಗಿ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ' ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

'ಅತ್ಯುನ್ನತ ಪರಂಪರೆ ಹೊಂದಿರುವ ಸಾಹಿತ್ಯ ಪರಿಷತ್ತಿನಲ್ಲಿ ಈ ಘಟನೆ ನಡೆದಿರುವುದು ಖಂಡನೀಯ' ಎಂದೂ ಅವರು ಹೇಳಿದ್ದಾರೆ.



ಕನ್ನಡ ನಾಡಿ, ಫೆಬ್ರವರಿ 2004

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಸರಕಾರಕ್ಕೆ ಅಭಿನಂದನೆ

□-ಎಂ. ಚಿದಾನಂದಮೂರ್ತಿ, ರಾ.ನಂ. ಚಂದ್ರಶೇಖರ

ಡಾ. ಕುವೆಂಪು ಅವರೇ 1970-71ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಐದು ಪೃತ್ತಗಳ ಕವನವನ್ನು ಮೂರು ಪೃತ್ತಗಳಿಗೆ ಸಂಕ್ಷಿಪ್ತಗೊಳಿಸಿ ಮಧ್ವ, ಕುಮಾರವ್ಯಾಸ ಹೆಸರುಗಳನ್ನು ಸೇರಿಸಿ ಪರಿಷ್ಕರಿಸಿಕೊಟ್ಟರು ಎಂಬ ಸಂಗತಿ ವಿವಾದಾತೀತವಾಗಿ ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರದ 'ಜೈ ಭಾರತ' ಗೀತೆಯನ್ನು ನಾಡಗೀತೆಯಾಗಿ ಸ್ವೀಕರಿಸುವುದಕ್ಕಾಗಿ ನಾವು ಸರಕಾರಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ ವಾಸ್ತವ ಸಂಗತಿ ತಿಳಿಯದ ಬೆಂಗಳೂರಿನ ಕೆಲವು ಕನ್ನಡಪರ ಸಂಘಟನೆಗಳು ಮಧ್ವ ಪದ ಸೇರ್ಪಡೆಯಿಂದ ಕುವೆಂಪು ಅವರಿಗೆ ಅವಮಾನ ಆಗಿದೆ ಎಂಬ ಕಾರಣ ನೀಡಿ, ನಾಡಿನಾದ್ಯಂತ ಪ್ರತಿಭಟನೆ ಮಾಡುವುದಾಗಿ ಹೇಳಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಕುವೆಂಪು ತಮ್ಮ 'ನೆನಪಿನ ದೋಣಿಯಲ್ಲಿ' (ಪು. 532) ಬರೆದಿರುವುದನ್ನು ಸಾರ್ವಜನಿಕರ ಗಮನಕ್ಕೆ ತರಲು ಕರ್ನಾಟಕ ಎಂದು ನಾಮಕರಣಗೊಂಡ ಹಿನ್ನೆಲೆಯಲ್ಲಿ 1972ರಲ್ಲಿ ಕುವೆಂಪು ಬರೆದಿಟ್ಟುಕೊಂಡಿದ್ದ ಟಿಪ್ಪಣಿ ಅದು. ಈ ಟಿಪ್ಪಣಿಯ ಪ್ರತಿಯನ್ನು ನಾವು ಗಾಂಧಿ ಸ್ಮರಣೆಯ ದಿನ (30-1-04) ಬೆಳಿಗ್ಗೆ ಎಸ್. ಎಂ. ಕೃಷ್ಣರನ್ನು ಭೇಟಿಯಾಗಿ, ತಮ್ಮ ಸರಕಾರ ನಾಡಗೀತೆ



6/ಎ, ಮಿಂಚು, 4ನೆಯ ಕ್ರಾಸ್, 1ನೆಯ ಮೈನ್, ವಿಜಯನಗರ 2ನೆಯ ಹಂತ, ಬೆಂಗಳೂರು-40

ಬಗ್ಗೆ ಸರಿಯಾದ ನಿರ್ಧಾರ ಕೈಗೊಳ್ಳಲು ಸಹಾಯಕವಾಗುವ ಪ್ರಮುಖ ದಾಖಲೆ ಇದು ಎಂದು ಹೇಳಿ ಅವರಿಗೆ ನೀಡಿದೆವು. ಕುವೆಂಪು ಹಾರೈಸಿರುವಂತೆ ಅವರ ಕವನದ ಪರಿಷ್ಕೃತ ರೂಪವನ್ನು ಕರ್ನಾಟಕ ಸರಕಾರ ಒಪ್ಪಿದೆ.


ಅಲ್ಲಿಗೆ ನಾಡಗೀತೆಯ ವಿವಾದ ಶಾಶ್ವತವಾಗಿ ಮುಗಿವಂತೆ ಎಂಬುದನ್ನು ಕನ್ನಡ ಪರ ಸಂಘಟನೆಗಳು ಮನಗಾಣಬೇಕೆಂದು ಹಾರೈಸುತ್ತೇವೆ.

('ಕನ್ನಡ ನುಡಿ'ಯ ಫೆಬ್ರವರಿ 2004ರ ಸಂಚಿಕೆಯಲ್ಲಿ)

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ನಡೆದದ್ದು ಇಷ್ಟು

☐ ಧರ್ಮದರ್ಶಿ ಹರಿಕೃಷ್ಣ ಪುನರೂರು



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಷ್ಟ್ರಕವಿ ಕುವೆಂಪುರವರ ಜನ್ಮಶತಮಾನೋತ್ಸವ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಹಿರಿಯ ಸಾಹಿತಿ ಯು.ಆರ್. ಅನಂತಮೂರ್ತಿಯವರೊಂದಿಗೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನೆಂಬ ನೆಲೆಯಲ್ಲಿ ನಾನೂ ಪಾಲ್ಗೊಂಡಿದ್ದೆ. ಚಾಮರಾಜಪೇಟೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗಾಯಕ ಸಿ.ಅಶ್ವತ್ಥ್ ಅವರು ನೂರೊಂದು ಬಾಲೆಯರಿಂದ ಕುವೆಂಪು ವಿರಚಿತ 'ಜೈ ಭಾರತ ಜನನಿಯ ತನುಜಾತೆ' ಎಂಬ ರಚನೆಯನ್ನು ಹಾಡಿಸಿದರು. ಹಾಡಿನಲ್ಲಿ 'ಬಸವೇಶ್ವರ ಮಧ್ವರ ದಿವ್ಯಾರಣ್ಯ' ಎಂಬ ಸಾಲಿನಲ್ಲಿದ್ದ ಮಧ್ವರ ಹೆಸರನ್ನು ಕೈ ಬಿಡಲಾಗಿತ್ತು. ಅನಂತರ ಈ ಹಾಡಿನ ಕ್ಯಾಸೆಟ್ ಬಿಡುಗಡೆ ಆಯಿತು. ಅದರಲ್ಲೂ ಮಧ್ವರ ಹೆಸರು ಇರಲಿಲ್ಲ. ಇದು ನನಗೆ ಅಸಮಾಧಾನ ತಂದಿತು. ಮರುದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಸಿ. ಸೋಮಶೇಖರ್‌ರೊಡನೆ ವಿಚಾರಿಸಿದಾಗ 'ಹಾಡಲು ಅನುಕೂಲವಾಗುವಂತೆ ಹೀಗೆ ಮಾಡಲಾಯಿತು' ಎಂಬ ಉತ್ತರ ಸಿಕ್ಕಿತು. ಆದರೆ ಈ ಸಂಬಂಧದಲ್ಲಿ ಈ ಹಿಂದೆ ನಡೆದಿದ್ದ ಸಭೆಯಲ್ಲಿ, ಹೀಗೆ ಆ ಪದವನ್ನು ಕೈಬಿಡುವ ಬಗ್ಗೆ ಚರ್ಚೆಯಾಗಿತ್ತೆಂದು ಬೇರೆ ಮೂಲದಿಂದ ತಿಳಿದುಬಂತು. ಸಭೆಯಲ್ಲಿ ಭಾಗವಹಿಸಿದವರಲ್ಲಿ ಮಾಧ್ವರಾರೂ ಇರಲಿಲ್ಲವೆಂದು ದೃಢೀಕರಿಸಲಾಗಿತ್ತು. ಮಧ್ವ ಪದವನ್ನು ಕೈಬಿಟ್ಟ ಬಗ್ಗೆ ನಾನು ತಕರಾರೆತ್ತಲು ನಿರ್ಧರಿಸಿದೆ. ಆ ಸಮಯದಲ್ಲಿ ಕುವೆಂಪು ಅವರ ಕವಿತೆಗಳ ಸಂಕಲನ ಮುದ್ರಣಕ್ಕೆ ಹೋಗಿತ್ತು. ಅದರಲ್ಲೂ ಆ ಪದವನ್ನು ಕೈಬಿಡಲಾಗಿತ್ತು. ಈ ವಿಷಯದಲ್ಲಿ ಗಲಾಟೆಯಾದೀತೆಂದು ಗಾಬರಿಗೊಂಡ ನಿರ್ದೇಶಕರು

'ನಾಡಗೀತೆ ವಿವಾದದ ಬಗ್ಗೆ ನಾಲ್ಕು ಮಾತು ಹೇಳುತ್ತೀರಾ?' ಎಂಬ ಈ ಗ್ರಂಥದ ಸಂಪಾದಕನ ಪ್ರಶ್ನೆಗೆ ಪುನರೂರು ಉತ್ತರಿಸಿದ್ದು ಇಲ್ಲಿದೆ

ಮುದ್ರಣಾಲಯವನ್ನು ದೂರವಾಣಿ ಮೂಲಕ ಸಂಪರ್ಕಿಸಿ ಆ ಪದವನ್ನು ಸೇರಿಸಿಯೇ ಮುದ್ರಿಸುವಂತೆ ಸೂಚಿಸಿ, ಆಮೇಲೆ ಮುದ್ರಿತ ಸಂಕಲನವನ್ನು ನನಗೆ ಕಳುಹಿಸಿಕೊಟ್ಟರು.

"ಕುವೆಂಪು ಅವರಿಗೆ ಮಾಧ್ವರ ಬಗ್ಗೆ ದ್ವೇಷವೇನೂ ಇರಲಿಲ್ಲ. ಆದರೆ ಅವರು ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ಕಲಿಯುತ್ತಿದ್ದ ಸಮಯದಲ್ಲಿ ಒಂದು ಚಿಕ್ಕ ಘಟನೆ ನಡೆಯಿತು. ಅವರೊಂದಿಗೆ ಕಲಿಯುತ್ತಿದ್ದ ಮಕ್ಕಳ ಪೈಕಿ ಐದಾರು ಮಂದಿ ಮಾಧ್ವ ಹುಡುಗರೂ ಇದ್ದರು. ಆಗಿನ ಬ್ರಾಹ್ಮಣ ಹುಡುಗರು ಜುಟ್ಟು ಬಿಡುತ್ತಿದ್ದರು. ಕುವೆಂಪು ಅವರು ಈ ಬಗ್ಗೆ ತಮಾಷೆ ಮಾಡುತ್ತಿದ್ದರು. ಮಾಧ್ವ ಹುಡುಗರು ಇದರಿಂದ ಕುಪಿತರಾಗಿ ಕುವೆಂಪು ಅವರ ಮೇಲೆ ಕೈ ಮಾಡಿದರು. ಈ ಘಟನೆಯ ನೆನಪು ಕುವೆಂಪು ಅವರಿಗಿತ್ತು. 'ಮಧ್ವ' ಎಂಬುದನ್ನು ಹಾಡಿನಲ್ಲಿ ಬರೆದದ್ದೇನೋ ಹೌದು, ಆದರೆ ಆ ನೆನಪು ಮರುಕಳಿಸಿದ್ದರಿಂದ ಆಮೇಲೆ ಅದನ್ನು ಕೈಬಿಟ್ಟರು. ಆದರೆ ಮತ್ತೆ ಅನೇಕರು ಆ ಪದವನ್ನು ಸೇರಿಸಬೇಕೆಂದು ಅಪೇಕ್ಷಿಸಿದ ಕಾರಣ, ಮತ್ತೆ ಸೇರಿಸಿದರು" ಎಂದು ಬಲ್ಲ ಹಿರಿಯ ಸಾಹಿತಿಗಳು ಹೇಳಿ ನನ್ನನ್ನು ಸಮಾಧಾನಪಡಿಸಿದರು. ಆಮೇಲೆ ಇಲಾಖೆಯು 'ಹಾಡು ಬಹಳ ದೀರ್ಘ' ಎಂಬ ಕಾರಣ ನೀಡಿ ಅದರ ಕೆಲವು ಚರಣಗಳನ್ನು ಕೈಬಿಟ್ಟಿತು. ಅದರಲ್ಲಿ ಈ ಪದ ಇರುವ ಸಾಲೂ ಇತ್ತು. ನಾನು ಬಹಿರಂಗವಾಗಿ ಪ್ರತಿಭಟಿಸಿದೆ. ಪುತ್ತೂರಿನಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಮಾತಾಡುತ್ತ 'ಹಾಡನ್ನು ತುಂಡರಿಸಿ ಹಾಡುವುದು ಸರಿಯಲ್ಲ; ಹಾಡುವುದಿದ್ದರೆ ಪೂರ್ತಿ ಹಾಡಬೇಕು; ಅದು ಸಾಧ್ಯವಾಗದಿದ್ದರೆ ನಾಡಿನ ಇತರ ಕವಿಗಳ ಹಾಡನ್ನು ಹಾಡಬಹುದಲ್ಲ? ಕುವೆಂಪುರವರ ಗೌರವಕ್ಕೆ ಚ್ಯುತಿ ತರಬೇಡಿ' ಎಂದೆ. ಆದರೆ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ನನ್ನ ಈ ಹೇಳಿಕೆ ಬೇರೆಯೇ ರೀತಿಯಲ್ಲಿ ಪ್ರಕಟವಾಯಿತು. "ಜೈ ಭಾರತ ಜನನಿ" ಹಾಡನ್ನೇ ಯಾಕೆ ಒಪ್ಪಿಸಬೇಕು? ಬೇರೆ ಕವಿಗಳ ರಚನೆ, ಉದಾಹರಣೆಗೆ, 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು' ಇಂಥ ಉತ್ತಮ ರಚನೆಗಳನ್ನು ಹಾಡಬಾರದೇ ಎಂದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕರೆಕೊಟ್ಟರು" ಎಂದೆಲ್ಲ ಅಪಪ್ರಚಾರ ಮಾಡಲಾಯಿತು. ಕನ್ನಡದ ಹೆಸರಿನಲ್ಲಿ ಹೋರಾಟಕ್ಕಿಳಿಯುವ ಉತ್ಸಾಹದಲ್ಲಿದ್ದ ಬೆಂಗಳೂರಿನ ಕೆಲ ವ್ಯಕ್ತಿಗಳಿಗೆ, ಸಂಘ-ಸಂಸ್ಥೆಗಳಿಗೆ ಇಷ್ಟು ಸಾಕಾಯಿತು! ನನಗೆ 'ಪಾಠ' ಕಲಿಸಲು ತಕ್ಕ ಸಮಯ ಕಾಯುತ್ತಿದ್ದರು. ಸಾಹಿತ್ಯ ಪರಿಷತ್ತಿನ ಕಟ್ಟಡದಲ್ಲಿ ಮೇರು ನಟಿ ಬಿ. ಸರೋಜಾದೇವಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಂದು ಈ ಹೋರಾಟಗಾರರು ಜಮಾಯಿಸಿದರು. ಪರಿಷತ್ತಿನ ಇಬ್ಬರು ಪದಾಧಿಕಾರಿಗಳಿಗೆ ಈ ಬಗ್ಗೆ ಮೊದಲೇ ಸುಳಿವು ಸಿಕ್ಕಿತ್ತೆಂಬುದು ಆಮೇಲೆ ನನಗೆ ಗೊತ್ತಾಯಿತು. ನನಗೆ ಮಾತ್ರ ತಿಳಿದಿರಲಿಲ್ಲ! ನನ್ನ ಮೇಲೆ ಇದ್ದ ಸಿಟ್ಟನ್ನು, ವೇದಿಕೆ ಹತ್ತಿ ನನ್ನ ಪಂಚೆಯನ್ನು ಎಳೆದು ಹಾಕುವ ಮೂಲಕ ತೋರಿಸಿದರು. ವೇದಿಕೆಯಲ್ಲಿ ಬಿ. ಸರೋಜಾದೇವಿ, ಕಮಲಾ ಹಂಪನಾ, ಪ್ರಶಸ್ತಿ ವಿಜೇತೆ ಕುಲಶೇಖರಿ ಅಲ್ಲದೆ ಇತರ ಮಹಿಳೆಯರೂ ಇದ್ದರು. ಘಟನೆ ನಡೆದ ಬಳಿಕ ಎಲ್ಲರೂ ಇದು ಹೀನಕಾರ್ಯ ಎಂದು ಹೇಳಿಕೆ ನೀಡಿದರು, ಕಮಲಾ ಹಂಪನಾ ಅವರ ಹೊರತು!

ಈ ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ದೂರು ನೀಡಲು ಮುಂದಾಗಲಿಲ್ಲ. 'ಮಾಡಿದವರು ನಮ್ಮವರೇ', ಕ್ಷಮಿಸಿಬಿಡಿ' ಎಂದು ಹೇಳಿದೆ. ವಾಸ್ತವವಾಗಿ ಇದು ನನಗಾದ ಅವಮಾನವಲ್ಲ, ಕನ್ನಡ ನಾಡಿಗೆ, ಕನ್ನಡಿಗರಿಗೆ ಆದ ಅಗೌರವ.

ನಾಡಗೀತೆಯಲ್ಲಿ 'ಮಧ್ವ' ಪದವನ್ನು ಕೈಬಿಟ್ಟ ಬಗ್ಗೆ ಪೂಜ್ಯ ಸ್ವಾಮೀಜಿಗಳು, ಹಿರಿಯ ವಿದ್ವಾಂಸರು, ವೇದಾಂತಿಗಳು ಪತ್ರಿಕೆಗಳ ಮೂಲಕ ಸಮರ ಸಾರಿದರು. ಧರಂ ಸರಕಾರ ಈ ವಿವಾದವನ್ನು ಮುಂದುವರಿಸಲು ಇಚ್ಛಿಸದೆ ಸಂಪುಟಸಭೆಯಲ್ಲಿ ನಾಡಗೀತೆಯಲ್ಲಿ ಆ ಪದವನ್ನು ಸೇರಿಸಬೇಕೆಂದು ತೀರ್ಮಾನಿಸಿತು. ಸಭೆಯ ತೀರ್ಮಾನದ ಪ್ರತಿ ನಮ್ಮ ಕೈ ಸೇರಿದ್ದು ಮಧ್ವ ನವಮಿಯ ಪುಣ್ಯದಿನದಂದೇ. ಅಂದು ಧಾರವಾಡದಲ್ಲಿ ಪೂಜ್ಯ ಪೇಜಾವರ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸಹಸ್ರಾರು ಮಧ್ವಮತಾನುಯಾಯಿಗಳು ಮಧ್ವನವಮಿ ಉತ್ಸವವನ್ನು ಆಚರಿಸುತ್ತಿದ್ದಾಗ ರಾತ್ರಿ ಎಂಟು ಗಂಟೆಯ ಹೊತ್ತಿಗೆ ಆ ಪತ್ರ ಬಂದು ಕೈ ಸೇರಿತು. ನಮ್ಮೆಲ್ಲರ ಸಂತಸಕ್ಕೆ ಮೇರೆಯಿರಲಿಲ್ಲ.

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಪರಿಷತ್ತಿಗೆ ಕಾಯಕಲ್ಪ: ಪುನರೂರು ಕನಸುಗಳು

– ಪರಿಷತ್ ಪ್ರಕಟಣೆ



ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಪೂನರೂರು ಅವರನ್ನು ಪರಿಷತ್ತಿನ ಅಧ್ಯಕ್ಷ ಪದವಿಗೆ ಆಯ್ಕೆ ಮಾಡಿ, ಅವರ ಮೇಲೆ ಬಹಳ ಗುರುತರವಾದ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಈ ಜವಾಬ್ದಾರಿ ಬಹಳ ಕಷ್ಟಕರವಾದದ್ದೆಂದು ಅವರು ಮನಗಂಡಿದ್ದಾರೆ. ಪ್ರಮುಖವಾಗಿ ದೈನಂದಿನ ಚಟುವಟಿಕೆಗಳಿಂದ ಹಿಡಿದು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಂಪನ್ಮೂಲದ ಕೊರತೆಯೇ ಪರಿಷತ್ತಿಗೆ ಮೊದಲನೆಯ ಅಡ್ಡಿ. ಈ ಸಮಸ್ಯೆಯನ್ನು ಬಗೆಹರಿಸಲು ಅವರು ವಿವಿಧ ಮಾರ್ಗಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಷ್ಟಾದರೂ ಪರಿಷತ್ತಿನ ಚಟುವಟಿಕೆಗಳಿಗೆ ಇದೊಂದು ಕಾರಣ ಅಡ್ಡಿಬರಬಾರದೆಂಬ ಉದ್ದೇಶದಿಂದ ಅನೇಕ ನೂತನ ಯೋಜನೆಗಳ ಜೊತೆಗೆ ಈಗಾಗಲೇ ಕೈಗೆ ಬಂದಿರುವ ಕೆಲಸಗಳನ್ನು ಮಾಡಿ ಮುಗಿಸುವ ದಿಕ್ಕಿನತ್ತ ಹೆಜ್ಜೆ ಇಟ್ಟಿದ್ದಾರೆ.

ಈ ಮುಂದಿನ ದಿನಗಳಲ್ಲಿ ಅವರು ಕೈಗೊಳ್ಳಬಹುದಾದ ಯೋಜನೆಗಳ ವಿವರಗಳು ಈ ರೀತಿ ಇದೆ.

★ **ಕನ್ನಡ-ಕನ್ನಡ-ಇಂಗ್ಲಿಷ್ ಶಬ್ದಕೋಶದ ರಚನೆ**

ಈ ಹಿಂದಿನ ಆಡಳಿತ ಮಂಡಳಿ ಸರ್ಕಾರದಿಂದ ಕನ್ನಡ-ಕನ್ನಡ-ಇಂಗ್ಲಿಷ್ ಶಬ್ದಕೋಶದ ಮೊದಲ ಸಂಪುಟವನ್ನು

ಕನ್ನಡ ನುಡಿ, 2001ರ ಸಂಚಿಕೆಯಲ್ಲಿ ಪ್ರಕಟವಾದ 'ಮುನ್ನೋಟ'

ಪ್ರಕಟ ಮಾಡಲು 18. 5 ಲಕ್ಷ ರೂ.ಗಳನ್ನು ಅನುದಾನವಾಗಿ ಪಡೆದಿತ್ತು. ಕಾಲಾವಕಾಶದ ಅಭಾವದಿಂದ ಅವರು ಅದನ್ನು ಮುದ್ರಿಸಿ ಪ್ರಕಟಿಸಲು ಆಗಲಿಲ್ಲ. ಅವರು ಸಾಂಕೇತಿಕವಾಗಿ ಬಿಡುಗಡೆ ಮಾಡಿದ ಆ ಶಬ್ದಕೋಶವನ್ನು ಇನ್ನು ಆರು ತಿಂಗಳಲ್ಲಿ ಅಚ್ಚು ಮಾಡಿ ಪ್ರಕಟಿಸುವ ಗುರಿ ಹೊಂದಲಾಗಿದೆ. ಈ ಶಬ್ದಕೋಶದ ಯೋಜನೆ ಮುಂದುವರೆಯಬೇಕಾದರೆ ಮುಂದಿನ ಸಂಪುಟಗಳ ಸಿದ್ಧತೆಗೆ ಸರ್ಕಾರದಿಂದ ಪ್ರತಿ ಸಂಪುಟಕ್ಕೆ ಕನಿಷ್ಠ 25 ಲಕ್ಷಗಳಾದರೂ ಅನುದಾನದ ಅಗತ್ಯವಿದೆ. ಇದರ ಪೂರ್ಣ ಯೋಜನೆಯನ್ನು ರೂಪಿಸಿ ಅನುದಾನಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ಆದಷ್ಟು ಬೇಗ ಸಲ್ಲಿಸಲಿದ್ದಾರೆ.

★ ಕರ್ನಾಟಕ ಉಪ ಭಾಷಾ ಪರಿವೀಕ್ಷಣಾ ಯೋಜನೆ

ಕನ್ನಡ-ಕನ್ನಡ ನಿಘಂಟುವಿನ ಪರಿಷ್ಕರಣ ಕಾರ್ಯದಲ್ಲಿ ನೆರವಾಗಬಹುದಾದ ಅತ್ಯಂತ, ಅಗತ್ಯವಾಗಿ ಆಗಲೇಬೇಕಾದ ಕರ್ನಾಟಕದಾದ್ಯಂತ ಉಪಭಾಷಾ ಪರಿವೀಕ್ಷಣೆಯ ಯೋಜನೆಯನ್ನು ಇಲ್ಲಿಯವರೆಗೆ ಯಾವುದೇ ಸಂಸ್ಥೆ ಕೈಗೊಂಡಿಲ್ಲ. ಪರಿಷತ್ತು ಈ ಕಾರ್ಯವನ್ನು ಕೈಗೊಳ್ಳುವುದರಿಂದ ಕನ್ನಡ ನಾಡಿನ ಜನತೆ ವೈವಿಧ್ಯಮಯವಾದ ಶಬ್ದ ಸಂಪತ್ತು ಶಬ್ದಕೋಶಕ್ಕೆ ಬರುತ್ತದೆ. ಈ ಬೃಹತ್ ಯೋಜನೆಯ ರೂಪುರೇಷೆಗಳನ್ನು ವಿವರವಾಗಿ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಾಗುವುದು.

★ ಕೃಷ್ಣರಾಜ ಪರಿಷನ್ಮಂದಿರದ ಪುನಾರಚನೆ

ಎಂಬತ್ತು ವರ್ಷಗಳಷ್ಟು ಹಳೆಯದಾಗಿರುವ ಕೃಷ್ಣರಾಜ ಪರಿಷನ್ಮಂದಿರವನ್ನು ಅದರ ಎಲ್ಲ ಮೂಲ ಸೌಂದರ್ಯವನ್ನು ಉಳಿಸಿಕೊಳ್ಳುವುದರ ಮೂಲಕ ಅತ್ಯಾಧುನೀಕರಣಗೊಳಿಸಬೇಕೆಂಬ ಆಶಯವನ್ನು ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ಇತ್ತೀಚೆಗಷ್ಟೆ ಸಭಾಭವನಕ್ಕೆ ಹೊಸ ಪ್ಲಾಸ್ಟಿಕ್ ಕುರ್ಚಿಗಳನ್ನು ಹಾಕಿಸಲಾಗಿದೆ. ಈ ಯೋಜನೆಯನ್ನು ಹಮ್ಮಿಕೊಳ್ಳಲು ಸರಕಾರಗಳು ಮಾತ್ರವಲ್ಲದೆ ಕೊಡುಗೈ ದಾನಿಗಳು ಮುಂದೆ ಬರಬೇಕೆಂಬುದು ಪರಿಷತ್ತಿನ ಆಶಯವಾಗಿದೆ.

★ ನೂರು ಮೌಲಿಕ ಕೃತಿಗಳ ಪುನರ್ ಮುದ್ರಣ

ಸರ್ಕಾರ ಈ ಹಿಂದಿನ ವರ್ಷ ಮೌಲಿಕ ಕೃತಿಗಳ ಪುನರ್ ಮುದ್ರಣ ಯೋಜನೆಯಲ್ಲಿ ನೂರು ಪುಸ್ತಕಗಳನ್ನು ಪ್ರಕಟಿಸಲು ಸಾಹಿತ್ಯ ಪರಿಷತ್ತಿಗೆ 20 ಲಕ್ಷ ರೂ.ಗಳನ್ನು ಕೊಟ್ಟಿತ್ತು. ಈ ಯೋಜನೆಯ ಅಡಿಯಲ್ಲಿ ಈಗ ಅನುಪಲಬ್ಧವಾಗಿರುವ ಕನ್ನಡದ ಬಹಳಷ್ಟು ಬೇಡಿಕೆ ಇರುವ ಮೌಲಿಕ ಕೃತಿಗಳನ್ನು ಪ್ರಕಟಿಸಿ ಪರಿಷತ್ತಿನ ಪ್ರಕಟಣ ವಿಭಾಗವನ್ನು ಶ್ರೀಮಂತಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

★ ಕನ್ನಡ ಲೇಖಕರ ಮಾಹಿತಿ ಕೋಶ

ಪಂಪ ಪೂರ್ವ ಯುಗದಿಂದ ಹಿಡಿದು ಇಪ್ಪತ್ತನೆಯ ಶತಮಾನದ ಕೊನೆಯವರೆಗೆ ಕನ್ನಡದಲ್ಲಿ ಬಂದಿರಬಹುದಾದ ಲೇಖಕರ ವ್ಯಕ್ತಿಗತ ಮಾಹಿತಿ, ಅವರ ಕೃತಿಗಳು, ಕೃತಿಗಳನ್ನು ಕುರಿತು ಪ್ರಮುಖ ಪರಾಮರ್ಶನ ಕೃತಿಗಳ ವಿವರಗಳನ್ನು ಕೊಡುವುದು ಈ ಕೋಶದ ಉದ್ದೇಶ. ಆರ್. ನರಸಿಂಹಾಚಾರ್ಯರ ಕವಿಚರಿತೆಯಿಂದ ಹಿಡಿದು ಈ ದಿಕ್ಕಿನಲ್ಲಿ ಅನೇಕ ಪ್ರಯತ್ನಗಳು ನಡೆದಿವೆಯಾದರೂ ಒಟ್ಟಾರೆಯಾಗಿ ಕನ್ನಡ ಲೇಖಕರ ಮಾಹಿತಿ ದೊರಕಿಸಿಕೊಡಬೇಕೆಂಬುದು ಪರಿಷತ್ತಿನ ಪ್ರಧಾನ ಆಶಯವಾಗಿದೆ.

★ ಕನ್ನಡದ ಗಣ್ಯ ಲೇಖಕರ ಕೃತಿಗಳನ್ನು ಪರಿಷತ್ತಿಗೆ ಕೊಡಲು ಆಹ್ವಾನ

ಸುಮಾರು ವರ್ಷಗಳಿಂದ ಕನ್ನಡ ಹೆಸರಾಂತ ಲೇಖಕರು ಯಾರೂ ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿಲ್ಲವೆಂಬ ಗಂಭೀರವಾದ ಆರೋಪವಿದೆ. ಅದನ್ನು ದೂರಮಾಡಿ ಲೇಖಕರನ್ನು ತೊಡಗಿಸಿಕೊಳ್ಳುವ ದೃಷ್ಟಿಯಿಂದ ಸುಮಾರು 175 ಜನ ಕನ್ನಡದ ಹೆಸರಾಂತ ಲೇಖಕರಿಗೆ

'ನಿಮ್ಮ ಒಂದು ಕೃತಿಯ ಹಸ್ತಪ್ರತಿಯನ್ನು ಕೊಡಿ' ಎಂದು ಕೇಳಿಕೊಳ್ಳಲಾಗಿದೆ. ಅವರ ಕೃತಿಯನ್ನು ಪ್ರಕಟಿಸುವುದಲ್ಲದೆ ಪರಿಷತ್ತಿನ ನಿಯಮಾನುಸಾರ ಗೌರವಧನವನ್ನು ಕೊಡಲಾಗುತ್ತದೆ. ಈ ಯೋಜನೆಯಿಂದ ಪರಿಷತ್ತಿನ ಜೊತೆಗೆ ಗುರುತಿಸಿಕೊಳ್ಳುವ ಒಂದು ಅವಕಾಶ ಲೇಖಕರಿಗೆ ದೊರೆತರೆ, ಆ ಲೇಖಕರ ಕೃತಿಯನ್ನು ಪ್ರಕಟಿಸಿದ ಹೆಮ್ಮೆ ಪರಿಷತ್ತಿನದಾಗುತ್ತದೆ.

★ ಯುವ ಲೇಖಕರಿಗೆ ಪ್ರೋತ್ಸಾಹ

ಹಿರಿಯ ಲೇಖಕರ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಯುವ ಲೇಖಕರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರು ರಚಿಸಿದ ಕೃತಿ, ವಿಮರ್ಶೆ, ಸಂಶೋಧನೆ, ಕಥೆ, ಕಾವ್ಯ, ವಿಚಾರ ಸಾಹಿತ್ಯ ಹೀಗೆ ಹಲವು ಪ್ರಕಾರಗಳಲ್ಲಿ ಇರಬಹುದಾದ ಹಸ್ತಪ್ರತಿಯನ್ನು ಪರಿಷತ್ತಿಗೆ ಸಲ್ಲಿಸಲು ಕೇಳಿಕೊಳ್ಳಲಾಗುವುದು. ಹೀಗೆ ಬಂದ ವಿವಿಧ ವಿಷಯಗಳ ಹಸ್ತಪ್ರತಿಗಳನ್ನು ಆಯಾ ವಿಷಯದ ತಜ್ಞರು ಪರಿಶೀಲಿಸಿ ಪ್ರಕಟಿಸಲು ಸೂಕ್ತವೆಂದು ಶಿಫಾರಸು ಮಾಡಿದವುಗಳನ್ನು ಪರಿಷತ್ತು ಪ್ರಕಟಿಸಿ, ಲೇಖಕರಿಗೆ ಸಂಭಾವನೆಯನ್ನು ಕೂಡ ಕೊಟ್ಟು ಪ್ರೋತ್ಸಾಹಿಸುತ್ತದೆ.

★ ವಿವಿಧ ಪ್ರಕಾರಗಳ ಪ್ರಾತಿನಿಧಿಕ ಸಂಪುಟಗಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಾತಿನಿಧಿಕವಾಗಿ ಹಲವಾರು ಜನಪ್ರಿಯ ಸಂಪುಟಗಳನ್ನು ಹೊರತರಲು ಯೋಜಿಸಲಾಗಿದೆ. ಈ ಸಂಪುಟಗಳಿಗೆ ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ತಜ್ಞರನ್ನೇ ಸಂಪಾದಕರನ್ನಾಗಿ ನೇಮಿಸಲಾಗುತ್ತದೆ. ಮಕ್ಕಳ ಹಾಡುಗಳು, ಮಕ್ಕಳ ಕಥೆಗಳು, ಮಹಿಳಾ ಪ್ರಾತಿನಿಧಿಕ ಕವಿತೆಗಳು, ಜನಪ್ರಿಯ ವಚನ ಸಂಪುಟ, ಜನಪ್ರಿಯ ಕೀರ್ತನೆಗಳು, ಜನಪ್ರಿಯ ತತ್ತ್ವಪದಗಳು, ಜನಪ್ರಿಯ ಜನಪದ ಗೀತೆಗಳು, ಜನಪ್ರಿಯ ರಂಗಗೀತೆಗಳು ಮುಂತಾದವು ಈ ಯೋಜನೆಯ ವ್ಯಾಪ್ತಿಗೆ ಬರಲಿವೆ.

★ ತಿಂಗಳ ಸಮಾಲೋಚನೆ

ಕನ್ನಡ ಸಾಹಿತ್ಯದ ವಿವಿಧ ಮುಖಗಳನ್ನು ಪ್ರಸ್ತುತದಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನಕ್ಕಾಗಿ ಪ್ರತಿ ತಿಂಗಳು ಒಂದು ನಿರ್ದಿಷ್ಟ ದಿನದಲ್ಲಿ ತಜ್ಞರನ್ನು ಆಹ್ವಾನಿಸಿ ಅವರೊಂದಿಗೆ ಸಾಹಿತ್ಯ ಸಮಾಲೋಚನ-ಸಂವಾದ-ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಇದೂ ಅಲ್ಲದೆ ನಾಡಿನ ಇತರ ಭಾಗಗಳಲ್ಲಿ ಕೂಡ ಈ ಬಗೆಯ ಸಮಾಲೋಚನ ಸಭೆಗಳಲ್ಲದೆ ಸಾಹಿತ್ಯ-ಸಾಂಸ್ಕೃತಿಕ ಕಮ್ಮಟಗಳನ್ನು ಇತರ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಲಾಗುವುದು.

★ 'ಕನ್ನಡ ನುಡಿ'- ಸಾಹಿತ್ಯ ಪತ್ರಿಕೆಯಾಗಿ

'ಕನ್ನಡ ನುಡಿಯ' ಈಗಿರುವ ವಾರ್ತಾಪತ್ರದ ಸ್ವರೂಪದ ಬಗ್ಗೆ ವ್ಯಾಪಕವಾದ ವಿರೋಧ ಎಲ್ಲ ಕಡೆಗಳಿಂದಲೂ ಬಂದಿದ್ದು ಅದನ್ನು ಸಾಹಿತ್ಯ ಪತ್ರಿಕೆಯನ್ನಾಗಿ ಬದಲಾಯಿಸಬೇಕೆನ್ನುವ ಕೋರಿಕೆಗೆ ಮನ್ನಣೆಯನ್ನು ಕೊಡಬೇಕೆಂದು ತೀರ್ಮಾನಿಸಿದ್ದೇವೆ. ಕನ್ನಡ ನುಡಿಯ ಪುಟಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ 40,000 ಕ್ಕೂ ಮಿಕ್ಕು ಸದಸ್ಯರಿಗೆ ಅದನ್ನು ಉಚಿತವಾಗಿ ಕೊಡಬೇಕಾಗಿರುವುದರಿಂದ ಅದರ ವೆಚ್ಚಗಳನ್ನು ಸರಿದೂಗಿಸುವುದಕ್ಕೆ ಜಾಹೀರಾತುಗಳ ಮೂಲಕ ಪ್ರಯತ್ನಿಸಲಾಗುವುದು.

★ ತಾಲ್ಲೂಕು ಸಮ್ಮೇಳನಗಳಿಗೆ ಪ್ರೋತ್ಸಾಹ

ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಗ್ರಾಮಾಂತರ ಪ್ರದೇಶಕ್ಕೆ ತೆಗೆದುಕೊಂಡು ಹೋಗುವ ದೃಷ್ಟಿಯಿಂದ ತಾಲ್ಲೂಕುಗಳಲ್ಲಿ ಸಾಹಿತ್ಯ ಸಮ್ಮೇಳನವನ್ನು ನಡೆಸುವುದಕ್ಕೆ ಪ್ರೋತ್ಸಾಹ ಕೊಡುವ ಸಲುವಾಗಿ ಇನ್ನು ಮುಂದೆ ಪ್ರತಿ ತಾಲ್ಲೂಕಿಗೂ, ಕೇಂದ್ರ ಸಾಹಿತ್ಯ ಪರಿಷತ್ತಿನಿಂದ 5,000 ರೂ.ಗಳನ್ನು ಪ್ರೋತ್ಸಾಹ

ಧನವಾಗಿ ಕೊಡಲಾಗುವುದು.

★ **ಕನ್ನಡದಲ್ಲಿ ಅಧ್ಯಯನ ಮಾಡಿರುವವರಿಗೆ ಪ್ರೋತ್ಸಾಹ**

ಕನ್ನಡ ನಾಡಿನ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮಾಡಿ ಕನ್ನಡದಲ್ಲಿ ಮಹಾಪ್ರಬಂಧವನ್ನು ರಚಿಸಿದ ಆಯಾ ವರ್ಷದ ಸಂಶೋಧಕರನ್ನು ಪರಿಷತ್ತಿಗೆ ಕರೆದು ಸನ್ಮಾನಿಸುವ ಯೋಜನೆಯನ್ನು ಈ ವರ್ಷದಿಂದ ಹಮ್ಮಿಕೊಳ್ಳಲಾಗುವುದು. ಹಾಗೆಯೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕೂಡ ಸಮ್ಮಾನಿಸಲಾಗುವುದು.


★ ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಯಾವುದೇ ಆರೋಪಗಳಿಗೆ ಅವಕಾಶವಿಲ್ಲದಂತೆ ಮಾಡುವ ದೃಷ್ಟಿಯಿಂದ ಪ್ರೊ.ಜಿ. ಶ್ರೀನಿವಾಸರಾಜು ಅವರ ಅಧ್ಯಕ್ಷತೆಯಲ್ಲಿ ಒಂದು ಸ್ವತಂತ್ರ ಪರೀಕ್ಷಾ ಮಂಡಳಿಯನ್ನು ರಚಿಸಲಾಗಿದೆ. ಪರಿಷತ್ತಿನ ಶಾಸನ ಶಾಸ್ತ್ರ ಮತ್ತು ಜಾನಪದ ತರಗತಿಗಳು ಎಂದಿನಂತೆ ಮುಂದುವರೆಯುತ್ತವೆ. ಇವುಗಳ ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ದತ್ತಿನಿಧಿಗಳನ್ನು ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹಂಚುವುದಲ್ಲದೆ ಕೇಂದ್ರ ಸಾಹಿತ್ಯ ಪರಿಷತ್ತು ಅನೇಕ ಗಮನಾರ್ಹ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶ ಹೊಂದಿದೆ. ಈ ಎಲ್ಲ ಯೋಜನೆಗಳ ಯಶಸ್ಸು ಕನ್ನಡ ಜನತೆಯ ನಿರಂತರವಾದ ಪ್ರೋತ್ಸಾಹವನ್ನವಲಂಬಿಸಿದೆ ಎನ್ನುವುದು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಆಶಯ. ಈ ಆಶಯದ ಈಡೇರಿಕೆಗೆ ಈಗ ಅವರಿಂದ ಆರಂಭವಾಗಿದೆ, ಹೊಸ ಕನ್ನಡ ಚಿಂತನೆ.

□

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಸಂಘಟಕನ ಅಂತರಂಗ

□ ಪೃಥ್ವಿರಾಜ್ ಕವತ್ತಾರು



★ ಹರಿಕೃಷ್ಣ ಪುನರೂರು ಅವರೆ, ಉಳಿದ ಕ್ಷೇತ್ರಗಳಿಗಿಂತ ಸಾಹಿತ್ಯಕ್ಷೇತ್ರ ನಿಮ್ಮನ್ನು ಆಕರ್ಷಿಸಲು ಕಾರಣವೇನು?

– ಸುಮಾರು 12 ವರ್ಷಗಳ ಹಿಂದೆ ಈ ಜಿಲ್ಲೆಯಲ್ಲಿ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಲು ಯಾರೂ ಇರದಿದ್ದಾಗ ನಾನು ಮುಂದೆ ಬಂದೆ. ಆಗ ಪರಿಷತ್ತಿಗೆ ಅಧ್ಯಕ್ಷನಾಗಿ ನೇಮಕಗೊಂಡ ಬಳಿಕ ನನಗೆ ಸಾಹಿತ್ಯದ ಕುರಿತು ಒಲವು ಮೂಡಿತು. ಆ ಬಳಿಕ ಜಿಲ್ಲೆಯ ಸಾಹಿತಿಗಳನ್ನು ಒಟ್ಟು ಸೇರಿಸಿ ಸಾಹಿತ್ಯ ಚಟುವಟಿಕೆಗಳನ್ನು ಆರಂಭಿಸಿದೆ.

★ ಸಾಹಿತಿಯಲ್ಲದವರು ಪರಿಷತ್ತಿನ ಅಧ್ಯಕ್ಷರಾಗುವುದಕ್ಕೆ ಆಕ್ಷೇಪಗಳಿದ್ದುವಲ್ಲ?... ನಿಮ್ಮ ಪ್ರತಿಕ್ರಿಯೆಯೇನು?

– ಸಾಹಿತಿಗಳು ಪರಿಷತ್ತನ್ನು ಬೆಳೆಸಿದ್ದು ಸಾಲದು. ಸಾಹಿತಿಗಿಂತ ಸಮರ್ಥ ಸಂಘಟಕನೇ ಇಂತಹ ಸ್ಥಾನಕ್ಕೆ ಉತ್ತಮ. ಸಾಹಿತಿಗೆ ವೈಯಕ್ತಿಕತೆಯೇ ಮುಖ್ಯವಾಗಿರುತ್ತದೆ. ಆದರೆ ಸಂಘಟಕನಿಗೆ ಹಾಗಲ್ಲ; ಎಲ್ಲರನ್ನು ಒಂದುಗೂಡಿಸುವ ಮನಸ್ಸಿರುತ್ತದೆ.

★ ಮೊದಲ ಬಾರಿ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಸೋಲಾಗಲು ಕಾರಣವೇನು?

– ಕಳೆದ ಬಾರಿ ಸ್ಪರ್ಧಿಸುವಾಗ ರಾಜ್ಯದಲ್ಲಿ ಹೆಚ್ಚಿನವರಿಗೆ ನನ್ನ

ಸಂಪಾದಕರು, ಉದಯವಾಣಿ ಸಾಪ್ತಾಹಿಕ ಸಂಪದ, ಉದಯವಾಣಿ ಕಟ್ಟಡ, ಮಣಿಪಾಲ–576104

ಬಗ್ಗೆ ಗೊತ್ತಿರಲಿಲ್ಲ. ಕಳೆದ ಬಾರಿ ಸ್ಪರ್ಧಿಸಿದ್ದರಿಂದ ಜನ ನನ್ನ ಕುರಿತು ಕುತೂಹಲ ತಾಳಿದರು. ಜಿಲ್ಲೆಯಲ್ಲಿ ನನ್ನ ಚಟುವಟಿಕೆಗಳನ್ನು ಗಮನಿಸಿದರು. ಆದ್ದರಿಂದ ಈ ಸಲ ಗೆಲುವು ಸಾಧ್ಯವಾಯಿತು.

★ ಕಳೆದ ಬಾರಿಯ ಸಾಹಿತ್ಯ ಪರಿಷತ್ತಿನ ಚಟುವಟಿಕೆಯ ಬಗ್ಗೆ ಏನೆನ್ನುತ್ತೀರಿ?

– ಕಳೆದ ಬಾರಿಯ ಅಧ್ಯಕ್ಷ ಬಸವಾರಾಧ್ಯರು ತಮ್ಮ ಸಾಮರ್ಥ್ಯದ ನೆಲೆಯಲ್ಲಿ ಶ್ರಮಿಸಿದ್ದಾರೆ.

★ 'ತಾವು ಸೋಲುವುದಕ್ಕೆ ಪುನರೂರು ಗೆದ್ದದ್ದೇ ಕಾರಣ. ನಿಜವಾದ ಯುದ್ಧ ಈಗ ಶುರುವಾಗಿದೆ' ಎಂದು ಪರಾಜಿತ ಅಭ್ಯರ್ಥಿ ಚಂದ್ರಶೇಖರ ಪಾಟೀಲರು ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?

– ಇದು ಹತಾಶಭಾವ ಅಷ್ಟೇ. ಈ ಬಗ್ಗೆ ನಾನೇನೂ ಪ್ರತಿಕ್ರಿಯಿಸುವುದಿಲ್ಲ.

★ ಸಾಹಿತ್ಯ ಪರಿಷತ್ತಿನ ಈಗಿನ ಸ್ಥಿತಿ ಹೇಗಿದೆ?

– ಪರಿಷತ್ತು ಸಾಲದಲ್ಲಿದೆ. ಚುನಾವಣೆಗೆ ಅಲ್ಲಿ ಸಾಲ ಮಾಡಿದ್ದಾರೆ. ಹಣ ಸಂಗ್ರಹ ಮಾಡುವ ದೃಷ್ಟಿಯಲ್ಲಿ ಅಲ್ಲಿ ಯಾರೂ ಯೋಜನೆ ಮಾಡಿಲ್ಲ. ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ನನ್ನ ಮೊದಲ ಆದ್ಯತೆ.

★ ಅಕಾಡೆಮಿ, ಪ್ರಾಧಿಕಾರಗಳಿಗಿಂತ ಪರಿಷತ್ತನ್ನು ಭಿನ್ನವಾಗಿ ಬೆಳೆಸುವ ಯೋಜನೆಯಿದೆಯೆ?

– ಹೌದು. ಅಕಾಡೆಮಿ, ಪ್ರಾಧಿಕಾರಗಳಂತೆ ಪರಿಷತ್ತಿಗೆ ಸರಕಾರದ ನೇರ ಅವಲಂಬನೆಯಿಲ್ಲ. ಆದ್ದರಿಂದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಸಮನ್ವಯ ಭಾವದಿಂದ ಪರಿಷತ್ತನ್ನು ಕ್ರಿಯಾಶೀಲವಾಗಿಸಬೇಕೆಂಬ ಯೋಚನೆಯಿದೆ.

★ ಪರಿಷತ್ತಿನಲ್ಲಿ ಕೆಲವು ಪ್ರದೇಶಗಳಿಗೆ, ಕೆಲವು ಸಾಹಿತ್ಯ ಪ್ರಕಾರಗಳಿಗೆ ಪ್ರಾತಿನಿಧ್ಯ ಕಡಿಮೆ ಎಂಬ ಆರೋಪವಿದೆಯಲ್ಲ?

– ಈ ಸಲ ಎಲ್ಲರಿಗೂ, ಎಲ್ಲ ಕಡೆಗೂ ಸಮಾನ ಅವಕಾಶ ನೀಡುವ ಯೋಜನೆಯಿದೆ.

★ ಸರಕಾರಿ ಸಂಸ್ಥೆಯಿಂದ ದೂರ ಇದ್ದು ಚಟುವಟಿಕೆ ನಿರ್ವಹಿಸುತ್ತಿದ್ದ ನೀವು ಈಗ ಸರಕಾರದ ಪಕ್ಕದಲ್ಲಿದ್ದುಕೊಂಡು ಅಲ್ಲಿನ 'ರಾಜಕೀಯ'ದೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತೀರಿ? ಅನುದಾನ ಪಡೆಯಲು 'ಲಂಚ' ನೀಡುವ ಸಂದರ್ಭ ಬಂದರೆ ಏನು ಮಾಡುವಿರಿ?

– ಪರಿಷತ್ತು ಸ್ವಾಯತ್ತ ಸಂಸ್ಥೆ, ಸರಕಾರದ ನೇರ ಅಧೀನದಲ್ಲಿಲ್ಲ. ಆದ್ದರಿಂದ ನನಗೆ ಹೊಂದಾಣಿಕೆ ಸಮಸ್ಯೆಯಿಲ್ಲ. ಪರಿಷತ್ತಿನ ಚಟುವಟಿಕೆಗೆ ಎಲ್ಲರೂ ಸರಿಯಾಗಿ ಸ್ಪಂದಿಸುತ್ತಾರೆ ಹಾಗೂ ಅಲ್ಲಿ ಲಂಚ ನೀಡುವ ಸಂದರ್ಭ ಒದಗಿ ಬರದು ಎಂಬ ಭರವಸೆ ನನ್ನದು.

★ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಕನಸುಗಳೇನು?

– ಈವರೆಗೆ ಸಾಹಿತ್ಯ ಪರಿಷತ್ತಿನ ಚಟುವಟಿಕೆ ಕೇಂದ್ರದಲ್ಲಿಯೇ ಕೇಂದ್ರೀಕೃತವಾಗಿತ್ತು. ಇದನ್ನು ಜಿಲ್ಲಾ ಮಟ್ಟಕ್ಕೆ, ತಾಲೂಕು ಮಟ್ಟಕ್ಕೆ ಹೋಬಳಿ ಮಟ್ಟಕ್ಕೆ ತರುವುದು ನನ್ನ ಆಸೆ.

ಕ.ಸಾ.ಪ. ರಾಜ್ಯಾಧ್ಯಕ್ಷರಾದ ಬೆನ್ನಿಗೇ ನಡೆಸಿದ್ದ ಒಂದು ಮಾತುಕತೆ

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಕ.ಸಾ.ಪ : ಪುನರೂರು ಸಾಧನೆಗಳು



ಪರಿಷತ್ತಿನ ವಜ್ರಮಹೋತ್ಸವ ಕಟ್ಟಡದ ಎರಡನೇ ಮಹಡಿಯಲ್ಲಿರುವ ಪ್ರಧಾನ ಕಛೇರಿಯನ್ನು ಹಾಗೂ ಪದಾಧಿಕಾರಿಗಳ ಕೊಠಡಿಗಳನ್ನು ಮೊದಲನೇ ಮಹಡಿಗೆ ಸ್ಥಳಾಂತರಿಸಿ 2ನೇ ಮಹಡಿಯನ್ನು ಸುಸಜ್ಜಿತ 'ಪಂಪ ಸಭಾಂಗಣ' ವನ್ನಾಗಿ ಪರಿವರ್ತಿಸಿ ಸಾಹಿತ್ಯದ ಚಟುವಟಿಕೆಗೆ ತಾಣವನ್ನಾಗಿಸಲಾಗಿದೆ.

ಶ್ರೀ ಕೃಷ್ಣರಾಜ ಪರಿಷ್ಮಂದಿರ ಹಾಗೂ ಪಂಪ ಸಭಾಂಗಣಕ್ಕೆ ಉತ್ತಮವಾದ ಹೊಸ ಕುರ್ಚಿಗಳನ್ನು (500) ಕೊಂಡು ಹೊಸ ಪರದೆಗಳನ್ನು ಅಳವಡಿಸಿ ಸಭಾಂಗಣವನ್ನು ಅಂದಗೊಳಿಸಲಾಗಿದೆ.

ಹೊರನಾಡ ಸಮ್ಮೇಳನ ಚೆನ್ನೈ, ಮುಂಬಯಿ, ಹೈದರಾಬಾದ್, ಕಾಸರಗೋಡು, ಗೋವೆಗಳಲ್ಲಿ ಸಮ್ಮೇಳನ ನಡೆಸಲಾಗಿದೆ.

ಪರಿಷತ್ತಿನ ಜಿಲ್ಲಾ ಘಟಕಗಳಲ್ಲಿ ನಡೆಸಲಾದ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಿಗೆ ತಲಾ 10,000 ತಾಲ್ಲೂಕಿಗೆ 5,000, ಹೋಬಳಿಗೆ 2,000 ರೂಪಾಯಿಗಳ ಆರ್ಥಿಕ ಅನುದಾನ ನೀಡಲಾಗಿದೆ. ವರ್ಷದ ಅವಧಿಗೆ 90 ಜಿಲ್ಲಾ ಸಮ್ಮೇಳನ, 160 ತಾಲೂಕು ಸಮ್ಮೇಳನ, 200 ಹೋಬಳಿ ಸಮ್ಮೇಳನ ಮಂತ್ರಾಲಯ, ಪಾವಗಡ, ಜತ್ತಗಳಲ್ಲಿ ಗಡಿನಾಡ ಸಮ್ಮೇಳನ ನಡೆಸಲಾಗಿದೆ.

ಪರಿಷತ್ತಿನ ಮುಂಭಾಗದ ಆವರಣದಲ್ಲಿ ಹೊಸ ಗೇಟು,

ಕನ್ನಡ ನುಡಿ, ಅಕ್ಟೋಬರ್ 2004

ಕಮಾನು ಫಲಕ ಅಳವಡಿಸಿ ಸುಂದರಗೊಳಿಸಲಾಗಿದೆ.

ಪರಿಷತ್ತಿನ ಮುಖಪತ್ರ 'ಕನ್ನಡ ನುಡಿ'ಯನ್ನು ಸತ್ವಪೂರ್ಣಗೊಳಿಸಿ ಸಂಗ್ರಹಯೋಗ್ಯ ಪತ್ರಿಕೆಯನ್ನಾಗಿ ರೂಪಿಸಲಾಗಿದೆ. ಎಲ್ಲಾ 50 ಸಾವಿರ ಸದಸ್ಯರಿಗೆ ಉಚಿತವಾಗಿ ನೀಡಲಾಗುತ್ತಿದೆ.

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಷಾಣ್ಮಾಸಿಕ ಪತ್ರಿಕೆಯಾಗಿತ್ತು. ಅದನ್ನು ತ್ರೈಮಾಸಿಕ ಪತ್ರಿಕೆಯನ್ನಾಗಿ ವಿದ್ವತ್ಪೂರ್ಣ ಲೇಖನಗಳೊಡನೆ ನಿಯತವಾಗಿ ಹೊರತರಲಾಗುತ್ತಿದೆ.

ಪರಿಷತ್ತಿನ ಸದಸ್ಯತ್ವವನ್ನು 60 ಸಾವಿರಕ್ಕೂ ಮೇಲ್ಪಟ್ಟು ಹೆಚ್ಚಿಸಿದೆ.

ನಾಡಿನ ಗಣ್ಯ ಸಾಹಿತಿಗಳಿಂದ ಕೃತಿ, ಹಸ್ತಪ್ರತಿಗಳನ್ನು ಪಡೆದು, ಮುದ್ರಣ ಕರ್ತವ್ಯ ನಿರ್ವಹಿಸಲಾಗಿದೆ. ಪ್ರತಿ ಜಿಲ್ಲೆಯ ಲೇಖಕರು, ಉದಯೋನ್ಮುಖರಿಂದ ಕಥೆಗಳನ್ನು ಪಡೆದು ಜಿಲ್ಲಾ ಕಥಾ ಸಂಕಲನಗಳನ್ನು ಪ್ರಕಟಿಸಿ ಹೊಸ ಲೇಖಕರನ್ನು ಪ್ರೋತ್ಸಾಹಿಸಲಾಗಿದೆ.

ಪರಿಷತ್ತಿನ ಮುಂದಿನ ಯೋಜನೆಗಳು, ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಮತ್ತು ಪರಿಷತ್ತನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಲು ಮಾಡಬೇಕಾದ ಕ್ರಮಗಳನ್ನು ಕುರಿತು ಚರ್ಚಿಸಲು ನಾಡಿನ ಗಣ್ಯರನ್ನು, ಕನ್ನಡಪರ ಚಿಂತಕರನ್ನು ಪರಿಷತ್ತಿಗೆ ಆಹ್ವಾನಿಸಿ ಸಲಹೆ ಸೂಚನೆಗಳನ್ನು ಆಗಿಂದಾಗ್ಗೆ ಪಡೆದುಕೊಳ್ಳಲಾಗಿದೆ.

ಪರಿಷತ್ತಿನ ಜಿಲ್ಲಾ ಘಟಕಗಳ ಅಧ್ಯಕ್ಷರು ಕನ್ನಡದ ಕಾರ್ಯಗಳಿಗಾಗಿ ಜಿಲ್ಲಾದ್ಯಂತ ಹಾಗೂ ಬೆಂಗಳೂರಿಗೆ ಬಂದುಹೋಗಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಜಿಲ್ಲಾಧ್ಯಕ್ಷರಿಗೆ ಉಚಿತ 'ಬಸ್ ಪಾಸ್'ನ್ನು ಒದಗಿಸಲಾಗಿದೆ.

ಆಜೀವ ಸದಸ್ಯತ್ವದ ಮೂಲನಿಧಿಯ ಕೊರತೆ 30 ಲಕ್ಷ ಹಣವನ್ನು ಭರ್ತಿ ಮಾಡಿ ಕೊರತೆಯನ್ನು ತುಂಬಿಸಲಾಗಿದೆ.

ಪರಿಷತ್ತಿನ ನೌಕರರ ಉಪಾದಾನ (ಗ್ರಾಚ್ಯುಟಿ) ಹಣ ಪಾವತಿಗಾಗಿ, ಪರಿಷತ್ತಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತಹ ಜೀವವಿಮಾ ನಿಗಮದ ಯೋಜನೆ ಜಾರಿಯಲ್ಲಿತ್ತು. ಹಿಂದಿನ ಅಧ್ಯಕ್ಷರ ಅಧಿಕಾರಾವಧಿಯಲ್ಲಿ ವಾರ್ಷಿಕ ಕಂತಿನ ಹಣವನ್ನು ಸಲ್ಲಿಸದೇ ಇದ್ದ ಕಾರಣದಿಂದ ಯೋಜನೆ ಸ್ಥಗಿತಗೊಂಡು ಪರಿಷತ್ತಿಗೆ ಆರ್ಥಿಕ ಭಾರ ಬೀಳತೊಡಗಿತ್ತು. ಹಿಂದಿನ ವರ್ಷಗಳ ಬಾಕಿ ಹಣ ಹಾಗೂ ಹಾಲಿ ಪ್ರೀಮಿಯಂ ಹಣ 24 ಲಕ್ಷ ರೂ. ಜೀವವಿಮಾ ನಿಗಮಕ್ಕೆ ಸಲ್ಲಿಸಿ ಯೋಜನೆಯನ್ನು ಪುನರುಜ್ಜೀವನಗೊಳಿಸಿ ಪರಿಷತ್ತಿಗೆ ಆರ್ಥಿಕ ನಷ್ಟವನ್ನು ಕಡಿಮೆ ಮಾಡಲಾಗಿದೆ. ಜೊತೆಗೆ ನೌಕರರ ಹಿತವನ್ನು ರಕ್ಷಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ವೆಬ್‌ಸೈಟ್(ಅಂತರ್‌ಜಾಲತಾಣ)ವನ್ನು ನಿರ್ಮಿಸಲಾಗಿದೆ (ವಿಳಾಸ : www.kannudi.org). ಅಮೂಲ್ಯ ಗ್ರಂಥಗಳನ್ನು ಸಿ.ಡಿ. ರೂಪದಲ್ಲಿ ತರುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಈವರೆಗೆ ಬಂದಿರುವ ಗ್ರಂಥಗಳು : 1. ಕನ್ನಡ ಸಂಕ್ಷಿಪ್ತ ನಿಘಂಟು 2. ಕರ್ನಾಟಕ ಪಂಚತಂತ್ರ 3. ಪಂಪಭಾರತ 4. ಕರ್ನಾಟಕ ಕಾದಂಬರಿ 5. ವಡ್ಡಾರಾಧನೆ, ಇನ್ನಿತರ ಅಮೂಲ್ಯ ಗ್ರಂಥಗಳು.

5 ಲಕ್ಷ ರೂ. ವೆಚ್ಚದಲ್ಲಿ ಪರಿಷ್ಕೃತ ಸಂಕ್ಷಿಪ್ತ ನಿಘಂಟನ್ನು ಆಧರಿಸಿ ಪ್ರತ್ಯೇಕವಾದ ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟನ್ನಾಗಿ ಸಿದ್ಧಗೊಳಿಸಲಾಗಿದೆ.

ಕಾವೇರಿ ನದಿನೀರು ಹೋರಾಟದಲ್ಲಿ ಪರಿಷತ್ತು ಸಕ್ರಿಯವಾಗಿ ಭಾಗವಹಿಸಿದೆ.

ಕರ್ನಾಟಕ ಸರ್ಕಾರವು ಹೊಸದಾಗಿ ಮುನ್ನೂರು ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ತುಮಕೂರಿನ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳ ಪರವಾಗಿ

ಪರಿಷತ್ತು ಬಹು ದೊಡ್ಡ ಪ್ರಮಾಣದಲ್ಲಿ ಚಳುವಳಿಯನ್ನು ನಡೆಸಿ ಕನ್ನಡಿಗರ ಧ್ವನಿಯನ್ನು ಸರ್ಕಾರಕ್ಕೆ ಮುಟ್ಟಿಸಿದೆ.

ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳಲ್ಲಿ 'ಱ' ಅಕ್ಷರವನ್ನು ಕೈ ಬಿಟ್ಟ ಬಗ್ಗೆ ಶಿಕ್ಷಣ ತಜ್ಞರ ಹಾಗೂ ಸಾಹಿತಿಗಳ ಏಕಾಭಿಪ್ರಾಯವನ್ನು ರೂಢಿಸಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಹಾಗೂ 'ಱ' ಅಕ್ಷರವನ್ನು ಉಳಿಸಿಕೊಳ್ಳುವಲ್ಲಿ, ಪರಿಷತ್ತು ಗಮನಾರ್ಹವಾದ ಪಾತ್ರವನ್ನು ವಹಿಸಿದೆ.

ಬೆಂಗಳೂರಿನ ಬಳಿ ಸ್ಥಾಪಿಸಲಾದ 'ಹೈಪವರ್ ಟ್ರಾನ್ಸ್‌ಮೀಟರ್'ನಿಂದ ಕನ್ನಡ ಕಾರ್ಯಕ್ರಮಗಳು ಜಗತ್ತಿನಾದ್ಯಂತ ಪ್ರಸಾರವಾಗಲು ನಡೆಸಿದ ಚಳವಳಿಯ ನೇತೃತ್ವವನ್ನು ಪರಿಷತ್ತು ವಹಿಸಿ, ಕನ್ನಡ ಕಾರ್ಯಕ್ರಮವನ್ನು ಪ್ರಸಾರವಾಗುವಂತೆ ಮಾಡಿದೆ.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ ಕನ್ನಡದಲ್ಲಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿರುವವರನ್ನು ಕನ್ನಡ ಮಾಧ್ಯಮದಲ್ಲಿ ಬರೆದು ಹಾಗೂ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಮ್ಮಾನಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. ಪ್ರತಿ ವರ್ಷ 150ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ಸಮ್ಮಾನಿಸಲಾಗಿದೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪಡೆದವರನ್ನು ಸಮ್ಮಾನ ಮಾಡುವ ಯೋಜನೆಯನ್ನು ಪರಿಷತ್ತು ರೂಪಿಸಿದೆ. ಸತತ 3 ವರ್ಷಗಳಿಂದ 300 ಕ್ಕಿಂತಲೂ ಹೆಚ್ಚಿನ ಡಾಕ್ಟರೇಟ್ ಪಡೆದವರನ್ನು ಸಮ್ಮಾನಿಸಿ ಗೌರವಿಸಲಾಗಿದೆ.

ನಾಡು-ನುಡಿಗೆ ಸೇವೆ ಮಾಡಿದವರನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸಲಾಗಿದೆ.

'ಕನ್ನಡ ನುಡಿ'ಗೆ ಅನೇಕ ಸಂಸ್ಥೆಗಳಿಂದ ಲಕ್ಷಾಂತರ ರೂಪಾಯಿ ಜಾಹೀರಾತು ಸಂಗ್ರಹಿಸಿ, ಬ್ಯಾಂಕಿನ ಬಡ್ಡಿಯಿಂದಾದ ಆರ್ಥಿಕ ಕುಸಿತವನ್ನು ತಡೆಯಲು ಪರಿಣಾಮಕಾರಿ ಪ್ರಯತ್ನವನ್ನು ನಡೆಸಲಾಗಿದೆ.

ಪರಿಷತ್ತಿನ ನೌಕರರಿಗೆ ಕಂಪ್ಯೂಟರ್ ಜ್ಞಾನವನ್ನು ಕೊಡಿಸಬೇಕೆಂಬ ದೃಷ್ಟಿಯಿಂದ ಹಂತ ಹಂತವಾಗಿ ತರಬೇತಿಯನ್ನು ಕೊಡಿಸಲಾಗುತ್ತಿದೆ. ಕರ್ನಾಟಕ ಬ್ಯಾಂಕಿನಿಂದ 3 ಕಂಪ್ಯೂಟರ್ ಹಾಗೂ ಪ್ರಿಂಟರ್, ಕಾರ್ಪೊರೇಷನ್ ಬ್ಯಾಂಕಿನಿಂದ ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು ಉಚಿತವಾಗಿ ಪಡೆಯಲಾಗಿದೆ.

ನಾಡಿನ ಅನೇಕ ಗಣ್ಯ ಉದ್ಯಮಿಗಳನ್ನು, ಅಧಿಕಾರಿಗಳನ್ನು, ಸಂಸ್ಥೆಗಳನ್ನು ಸಂಪರ್ಕಿಸಿ ಅವರನ್ನು ಪರಿಷತ್ತಿನ ಪೋಷಕ / ದಾನಿ ಸದಸ್ಯರನ್ನಾಗಿ / ಸದಸ್ಯ ಸಂಸ್ಥೆಗಳನ್ನಾಗಿ ನೋಂದಾಯಿಸಲಾಗಿದೆ.

ಪಂಪ ಮಹಾಕವಿಯ 1100ನೇ ಜಯಂತ್ಯುತ್ಸವ ವರ್ಷದ ಅಂಗವಾಗಿ ಎಲ್ಲ ಜಿಲ್ಲೆಗಳಲ್ಲಿ ಪಂಪ ಜಯಂತಿ ಆಚರಣೆಯನ್ನು ನಡೆಸಲಾಗಿದೆ. ಅದಕ್ಕಾಗಿ ಪರಿಷತ್ತು ಅನುದಾನವನ್ನು ನೀಡಿದೆ.

ಕನ್ನಡ-ಕನ್ನಡ-ಇಂಗ್ಲಿಷ್ ಪರಿಷ್ಕೃತ ಬೃಹತ್ ನಿಘಂಟಿನ ಮೊದಲನೇ ಸಂಪುಟವನ್ನು ಸಿದ್ಧಗೊಳಿಸಿ, ಮುದ್ರಿಸಿ ಬಿಡುಗಡೆ ಮಾಡಲಾಗಿದೆ.

ವಿವಿಧ ಕಾರ್ಯಗಳಿಗೆ ಸರಕಾರ ನೀಡಿದ ಸಹಾಯಧನ ಒಂದು ಕೋಟಿಯನ್ನು ಹಿಂದಿನ ಅಧ್ಯಕ್ಷರು ಬಳಸಲು ಸಾಧ್ಯವಾಗದೆ ಉಳಿಸಿದ್ದು, ಅದನ್ನು ಹಿಂತಿರುಗಿಸಲು ಸರಕಾರ ಆದೇಶ ನೀಡಿದಾಗ ಅದರ ಮನವೊಲಿಸಿ ಸಂಕ್ಷಿಪ್ತ ಕನ್ನಡ ನಿಘಂಟು, ರತ್ನಕೋಶ, ಸುಭಾಷಿತ ಮಂಜರಿ ಹಾಗೂ 100 ಪುಸ್ತಕಗಳ ಪ್ರಕಟಣಾ ಯೋಜನೆಯನ್ನು ಮಾಡಿ ಪೂರೈಸಲು ಬಳಕೆ ಮಾಡಲಾಗಿದೆ.

ಮಹಾಜನ್ ಆಯೋಗ, ನಂಜುಂಡಪ್ಪ ವರದಿ, ಸರೋಜಿನಿ ಮಹಿಷಿ ವರದಿಗಳ ಅನುಷ್ಠಾನಕ್ಕಾಗಿ ಕಾರ್ಯತಂತ್ರ ರೂಪಿಸುವ ಸಲುವಾಗಿ ಕರ್ನಾಟಕ ಸಂಸತ್ ಸದಸ್ಯರ ಸಭೆ ಕರೆಯಲಾಗಿತ್ತು.

ಪರಿಷತ್ತಿನ ಕಾರ್ಯಕ್ರಮಗಳು ಗ್ರಾಮಾಂತರ ಮಟ್ಟದವರೆಗೂ ವ್ಯಾಪಿಸಲು ಅನುಕೂಲವಾಗುವಂತೆ

ಹೋಬಳಿ ಮಟ್ಟದ ಹಾಗೂ ಗ್ರಾಮ ಮಟ್ಟದ ಪರಿಷತ್ತಿನ ಘಟಕಗಳನ್ನು ಸ್ಥಾಪಿಸಲು ಉತ್ತೇಜನ ನೀಡಲಾಗಿದೆ. ಗ್ರಾಮ ಸಮ್ಮೇಳನಗಳನ್ನು ಅಲ್ಲಲ್ಲಿ ನೆರವೇರಿಸಿ ಆ ಪ್ರದೇಶದ ಸಾಹಿತಿಗಳಿಗೆ ಪ್ರೋತ್ಸಾಹ ನೀಡಲಾಗಿದೆ.

ತುಮಕೂರಿನಲ್ಲಿ, ಬೆಳಗಾವಿಯಲ್ಲಿ, ಮಂಗಳೂರು ತಾಲ್ಲೂಕಿನ ಮೂಡಬಿದರೆ (ಹೋಬಳಿ ಪ್ರದೇಶದಲ್ಲಿ) ಕ್ರಮವಾಗಿ ಅಖಿಲಭಾರತ 69ನೇ 70ನೇ ಹಾಗೂ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿಸಲಾಗಿದೆ.

ಪರಿಷತ್ತಿನ ನಿಬಂಧನೆ ತಿದ್ದುಪಡಿಗಳ ಕರಡನ್ನು ಅಂತಿಮಗೊಳಿಸಿ ಸಕಲ ಸದಸ್ಯರ ಸಭೆಯ ಅಂಗೀಕಾರದ ಹಂತಕ್ಕೆ ತರಲಾಗಿದೆ.

ಇತ್ತೀಚೆಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪರಿಷತ್ತಿನ ಯೋಜನೆಗಾಗಿ ಒಂದು ಕೋಟಿ ರೂ.ಗಳ ನೆರವಿನ ಆಶ್ವಾಸನೆ ಪಡೆಯಲಾಗಿದೆ. ಇದರಲ್ಲಿ 50 ಲಕ್ಷ ರೂ. ಮೀಸಲಿರಿಸಿ ಸರಕಾರದ ಆಯವ್ಯಯದಲ್ಲಿ ಸೇರಿಸಲಾಗಿದೆ.

ಶ್ರೀ ಕೃಷ್ಣರಾಜ ಪರಿಷನ್ಮಂದಿರ ಕಟ್ಟಡದ ನವೀಕರಣ ಯೋಜನೆಗೆ ಚಾಲನೆ ನೀಡಲಾಗಿದೆ. ಸಂಪೂರ್ಣ ವೆಚ್ಚವನ್ನು ಬಿ.ಡಿ.ಎ. ಭರಿಸಿ ತಾವೇ ನವೀಕರಿಸಿ ಕೊಡಲು ಒಪ್ಪಿರುತ್ತದೆ.

ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟಕ್ಕೆ ಪೂರಕ ಉಪಕರಣಗಳನ್ನು ಅಳವಡಿಸಿ, ಆಧುನೀಕರಿಸಲಾಗಿದೆ. ನಷ್ಟದಲ್ಲಿದ್ದುದನ್ನು ಲಾಭದಲ್ಲಿ ನಡೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ಸುಮಾರು 20 ಲಕ್ಷದಷ್ಟು ನಷ್ಟದಲ್ಲಿದ್ದ ಅಚ್ಚುಕೂಟವನ್ನು 20 ಲಕ್ಷ ಲಾಭಕ್ಕೆ ತರಲಾಗಿದೆ.

ದತ್ತಿನಿಧಿ ಸಂಗ್ರಹ: ದಾನಿಗಳಿಂದ ನಿರ್ದಿಷ್ಟ ಕಾರ್ಯಕ್ರಮಗಳಿಗಾಗಿ ಹಣವನ್ನು ಸಂಗ್ರಹಿಸಿ ಆ ಹಣವನ್ನು ಶಾಶ್ವತ ಠೇವಣಿಯಾಗಿರಿಸಿ, ಬಡ್ಡಿಯ ಹಣದಿಂದ ಪ್ರತಿ ವರ್ಷ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಕಲ್ಪಿಸಲಾಗಿದೆ. 'ದತ್ತಿನಿಧಿ' ಸಂಗ್ರಹ ಕಾರ್ಯವನ್ನು ಈ ಎರಡು ವರ್ಷಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. 5/3/2/1 ಲಕ್ಷ, 25 ಸಾವಿರ, 10 ಸಾವಿರ, ಹೀಗೆ ವಿವಿಧ ಮೊತ್ತದ ಒಟ್ಟು 350 ದತ್ತಿನಿಧಿ ದಾನಿಗಳಿಂದ ಸಂಗ್ರಹಿಸಿ ಒಂದು ಕೋಟಿಗೂ ಹೆಚ್ಚು ಮೊತ್ತವನ್ನು ಸಂಗ್ರಹಿಸಲಾಗಿದೆ.

ಪರಿಷತ್ತಿನ ಅತ್ಯುನ್ನತ ಮನ್ನಣೆಯಾಗಿರುವ ಗೌರವ ಸದಸ್ಯತ್ವ 5 ಜನಕ್ಕೆ ಮಾತ್ರ ನೀಡಬಹುದಾಗಿದೆ. ನಮ್ಮ ಅವಧಿಯಲ್ಲಿ ಡಾ. ಪಾಟೀಲ ಪುಟ್ಟಪ್ಪ, ಡಾ. ಎಸ್.ಕೆ. ಕರೀಂ ಖಾನ್, ಎನ್ಕೆ ಕುಲಕರ್ಣಿಯವರಿಗೆ ನೀಡಿ ಗೌರವಿಸಲಾಗಿದೆ.

ಚಾವುಂಡರಾಯ ಪ್ರಶಸ್ತಿಯನ್ನು ಡಾ.ಎಸ್.ಪಿ. ಪಾಟೀಲ, ಡಾ. ಎಲ್. ಬಸವರಾಜು, ಟಿ.ವಿ. ವೆಂಕಟಾಚಲ ಶಾಸ್ತ್ರೀಯವರಿಗೆ ನೀಡಲಾಗಿದೆ. ಬಿ. ಸರೋಜದೇವಿ ಪ್ರಶಸ್ತಿಯನ್ನು ಗೀತಾ ನಾಗಭೂಷಣ, ಉಷಾ ಪಿ. ರೈ, ಕುಲಶೇಖರಿಯವರಿಗೆ ನೀಡಲಾಗಿದೆ.

ಪರಿಷತ್ತು ನಡೆಸುವ ಪರೀಕ್ಷೆಗಳಾದ ಕನ್ನಡ ಕಾವ, ಜಾಣ, ರತ್ನ, ಪರೀಕ್ಷೆಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲೂ ಪರೀಕ್ಷಾ ಕೇಂದ್ರವನ್ನು ತೆರೆದು, ಹಿಂದಿನ ವರ್ಷಗಳ ದೂರುಗಳನ್ನು ಗಮನಿಸಿ ಈ ಮೂರೂ ವರ್ಷಗಳೂ ಅತ್ಯಂತ ಕಟ್ಟುನಿಟ್ಟಾಗಿ ಪರೀಕ್ಷೆಗಳನ್ನು ನಡೆಸಲಾಗಿದೆ.

ಪರಿಷತ್ತಿನ ಸ್ಥಾಪನಾ ದಿನಾಚರಣೆಯನ್ನು ಜಿಲ್ಲಾ ಕೇಂದ್ರಗಳಲ್ಲೂ ಆಚರಿಸಲಾಗಿದೆ. ಪರಿಷತ್ತಿನ ನಿವೃತ್ತ ನೌಕರರನ್ನು ಸಮ್ಮಾನಿಸಲಾಗಿದೆ.

ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ರಾಜ್ಯಾದ್ಯಂತ ನೆರವೇರಿಸಲು ಸಹಕಾರ ನೀಡಲಾಗಿದೆ. 70ಕ್ಕಿಂತಲೂ ಹೆಚ್ಚು ಮಕ್ಕಳ ಪುಸ್ತಕಗಳನ್ನು ಮುದ್ರಣ ಮಾಡಲಾಗಿದೆ.

ಗಮಕ ಸಾಹಿತ್ಯ ಸಮ್ಮೇಳನವನ್ನು ಹಲವು ಜಿಲ್ಲೆಗಳಲ್ಲಿ ನೆರವೇರಿಸಿ ಹಿರಿಯ ಗಮಕಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗಿದೆ. ಚುಟುಕ ಸಾಹಿತಿಗಳ ಪುಸ್ತಕ ಮುದ್ರಣ, ಸಮ್ಮೇಳನ, ಸನ್ಮಾನಕ್ಕೆ ನೆರವು ಪ್ರೋತ್ಸಾಹ ನೀಡಲಾಗಿದೆ.

ಜಾನಪದ ಗಂಡುಕಲೆಯಾದ ಯಕ್ಷಗಾನಕ್ಕೆ ಪ್ರೋತ್ಸಾಹ, ಪರಿಷತ್ತಿನಲ್ಲೇ ಪ್ರತಿ ವರ್ಷ 20 ದಿನಗಳ ಕಾಲ ಯಕ್ಷಗಾನ ಕಲಾ ಪ್ರದರ್ಶನ, ಹಿರಿಯ ಸಾಹಿತಿ, ಕಲಾವಿದರಿಗೆ ಸಮ್ಮಾನ, ನೃತ್ಯಕಲೆಗೆ ಪ್ರೋತ್ಸಾಹ ನೀಡಲು ವ್ಯವಸ್ಥೆ ಮಾಡಲಾಗಿದೆ.

ರಾಜ್ಯ ಸರಕಾರ, ಸಾಹಿತಿಗಳು ಹಾಗೂ ಪ್ರಕಾಶಕರನ್ನು ಕಡ್ಡಾಯವಾಗಿ ಮಾರಾಟ ತೆರಿಗೆ ಕಾಯ್ದೆಯಡಿ ತರುವುದೇ ಅಲ್ಲದೆ ತಮ್ಮ ಭಾವಚಿತ್ರಗಳನ್ನು ದೃಢೀಕರಿಸುವಂತೆ ಆದೇಶ ನೀಡಿದಾಗ, ಹಿರಿಯ ಸಾಹಿತಿಗಳೊಡನೆ, ಗ್ರಂಥಾಲಯ ಸಚಿವರೊಡನೆ ವಾದಿಸಿ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಮಾಡಲಾಯಿತು.

ಕರ್ನಾಟಕದಾದ್ಯಂತ ಇರುವ ಸರ್ಕಾರದ ಮಾಸಾಶನ ಪಡೆಯುತ್ತಿರುವ ಬಡ ಕಲಾವಿದರಿಗೆ ಉಚಿತ ಬಸ್‌ಪಾಸ್ ಕೊಡಿಸುವ ಬಗ್ಗೆ ಪ್ರಯತ್ನ ನಡೆದಿದೆ.

ಖಾಸಗಿ ಅನುದಾನಿತ ಕನ್ನಡ ಶಾಲೆಗಳಿಗೂ ಸರಕಾರಿ ಶಾಲೆಗಳಿಗೂ, ಇರುವ ತಾರತಮ್ಯವನ್ನು ಸರಿಪಡಿಸಲು ವಿದ್ಯಾಮಂತ್ರಿಗಳೊಡನೆ ಸಮಾಲೋಚಿಸಲಾಗಿದೆ.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪ್ರತಿ ಶಾಲೆಗಳಲ್ಲಿ ಕನ್ನಡ ಕನ್ನಡ ಸಂಕ್ಷಿಪ್ತ ನಿಘಂಟು ಮತ್ತು ರತ್ನಕೋಶ ಖರೀದಿಸುವ ಬಗೆಗೆ ಸರಕಾರದಿಂದ ಆದೇಶ ಹೊರಡಿಸಲಾಗಿದೆ. ಇದರಿಂದ ಪರಿಷತ್ತಿನಲ್ಲಿ ಸಂಗ್ರಹವಿರುವ ಇಪ್ಪತ್ತೈದು ಸಾವಿರ ನಿಘಂಟು ಮತ್ತು ರತ್ನಕೋಶ ಮಾರಾಟವಾಗಿ ಪರಿಷತ್ತಿಗೂ 20 ಲಕ್ಷ ರೂ. ಆರ್ಥಿಕ ಬಲ ಹೆಚ್ಚಲು, ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆಯಲು ಸಾಧ್ಯವಾಗಿದೆ.

'ಒಬ್ಬ ಕನ್ನಡಿಗ ಒಂದು ರೂಪಾಯಿ ಯೋಜನೆ' ಯಲ್ಲಿ 3 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿನ ಅಮೃತನಿಧಿ ಚೀಟಿಯನ್ನು ಮಾರಾಟ ಮಾಡಲಾಗಿದೆ.

ಸರಕಾರದ ಎಲ್ಲಾ ಇಲಾಖೆಗಳಲ್ಲಿ ಕನ್ನಡದ ಗಣಕ ಜಾಲತಾಣ(ವೆಬ್‌ಸೈಟ್)ಗಳನ್ನು ಬಳಸುವ ಬಗ್ಗೆ ಸುತ್ತೋಲೆ ಹೊರಡಿಸಲು ಒತ್ತಡ ತರಲಾಗಿದೆ.

ಆದ್ಯ ರಂಗಾಚಾರ್ಯರ ಕುರಿತು ಶ್ರೀರಂಗ ನಮನ, ಕೀರ್ತಿಶೇಷರ ಸ್ಮರಣೆ ಅಂಗವಾಗಿ ಡಾ. ಸೇಡಿಯಾಪು ಕೃಷ್ಣಭಟ್ಟರ ಕುರಿತು ಉಪನ್ಯಾಸ ಏರ್ಪಡಿಸಲಾಗಿದೆ.

ಹಾಸನ, ಚಿತ್ರದುರ್ಗ, ಬೀದರ್, ಮಂಡ್ಯಗಳಲ್ಲಿ ಜಿಲ್ಲಾ ಸಮಾವೇಶ ನಡೆಸಲಾಗಿದೆ.

ನಾಡಿನ ಹಿರಿಯ ಲೇಖಕರಿಂದ ಹಸ್ತಪ್ರತಿಗಳನ್ನು ತರಿಸಿ ಕಥಾ, ಕಾವ್ಯ ಸಂಕಲನಗಳನ್ನು ಪ್ರತಿವರ್ಷ ಮುದ್ರಿಸಲಾಗಿದೆ.

ಮಹಾಸಭೆ ಹಾಗೂ ಸಮ್ಮೇಳನಗಳ ಆಮಂತ್ರಣವನ್ನು ಪ್ರತ್ಯೇಕವಾಗಿ ಮುದ್ರಿಸಿ ಕಳುಹಿಸದೇ ಕನ್ನಡ ನುಡಿಯಲ್ಲಿ ಪ್ರಕಟಿಸಿ ಹತ್ತು ಲಕ್ಷ ರೂ. ಹಣವನ್ನು ಉಳಿಸಲಾಗಿದೆ.

ಮಾಜಿ ಕೇಂದ್ರ ಸಚಿವರಾದ ಅನಂತಕುಮಾರ್ ಅವರ ರಾಜ್ಯಸಭಾ ಸದಸ್ಯರ ನಿಧಿಯಿಂದ ಪರಿಷತ್ತಿನ ಗ್ರಂಥ ಭಂಡಾರಕ್ಕೆ ಪುಸ್ತಕಗಳನ್ನು ಇರಿಸಲು ಹದಿನೈದು ದೊಡ್ಡ ಬೀರುಗಳನ್ನು ಪಡೆಯುವಲ್ಲಿ ಸಫಲರಾಗಿದ್ದೇವೆ.

ಪ್ರತಿ ತಿಂಗಳು ಮುದ್ರಣವಾಗುತ್ತಿರುವ 50 ಸಾವಿರ 'ಕನ್ನಡ ನುಡಿ', ತ್ರೈಮಾಸಿಕ ಪರಿಷತ್ಪತ್ರಿಕೆಗೆ ಕೇಂದ್ರ ಸರಕಾರದಿಂದ ನ್ಯೂಸ್ ಪ್ರಿಂಟ್ ಪಡೆಯಲು ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸಚಿವರಾದ ರಾಜಶೇಖರನ್

ಈ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿರುತ್ತಾರೆ. ಅದಕ್ಕಾಗಿ ಪರಿಷತ್ತು ಅವರಿಗೆ ಕೃತಜ್ಞತೆ ಸಲ್ಲಿಸುತ್ತದೆ.

ಅಧ್ಯಕ್ಷರು ತಿಂಗಳಿಗೆ ನಲವತ್ತರಿಂದ ಐವತ್ತು ಸಾವಿರ ರೂ. ಪ್ರಯಾಣಭತ್ಯೆ, ಸಂಬಳ, ಸಾರಿಗೆಗೆ ಪಡೆಯಬಹುದಾಗಿದ್ದರೂ ಯಾವುದೇ ಹಣವನ್ನು ಪಡೆಯದೆ ಅತಿಥಿಗಳಿಗೆ ತಾವೇ ಕಾಫಿ ತಿಂಡಿಗಳನ್ನು ಒದಗಿಸಿ ಸುಮಾರು ಇಪ್ಪತ್ತು ಲಕ್ಷಕ್ಕೂ ಹೆಚ್ಚಿನ ಹಣವನ್ನು ಕನ್ನಡಮ್ಮನ ಸೇವೆಗಾಗಿ ಉಳಿಸಲಾಗಿದೆ. ಕನ್ನಡದ ಕೆಲಸಕ್ಕೆ ಕರಾವಳಿ ಪ್ರದೇಶಕ್ಕೆ ಹೋದಾಗ ಸ್ವಂತ ವಾಹನವನ್ನು ಉಪಯೋಗಿಸಿ ಪರಿಷತ್ತಿಗೆ ಉಳಿತಾಯ ಮಾಡಲಾಗಿದೆ.

ನವೆಂಬರ್ 1 ರಂದು 'ರಾಜ್ಯೋತ್ಸವ-ಕಾವ್ಯೋತ್ಸವ' ಎಂಬ ವಿಶೇಷ ಕವಿಗೋಷ್ಠಿಯನ್ನು ನಡೆಸಲಾಗಿದೆ.

ಆಧುನಿಕ ತಂತ್ರಜ್ಞಾನದ ಪ್ರಯೋಜನವನ್ನು ಸಾಹಿತ್ಯಾಕಾಂಕ್ಷಿಗಳು ಪಡೆದುಕೊಳ್ಳಬೇಕೆಂಬ ದೃಷ್ಟಿಯಿಂದ ಕಂಪ್ಯೂಟರಿನ ಮೂಲಕ ಪಂಪನ ಕಾವ್ಯಗಳ ಪ್ರಾತ್ಯಕ್ಷಿಕೆ ನಡೆಸಲಾಗಿದೆ.

ಪ್ರತಿ ತಿಂಗಳು 'ಜಾನಪದ ಝೇಂಕಾರ'ವೆಂಬ ವೈಶಿಷ್ಟ್ಯಪೂರ್ಣ ಜಾನಪದ ಕಾರ್ಯಕ್ರಮ ನಡೆಸಲಾಗಿದೆ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕನ್ನಡಿಗರ ನೇಮಕಾತಿ ಕಡಿಮೆ ಆಗುತ್ತಿರುವುದನ್ನು ಗಮನಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರನ್ನು ಒತ್ತಾಯಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ (2001-2004) ಆರ್ಥಿಕಾಭಿವೃದ್ಧಿ

ಕ್ರ.ಸಂ.	ನಿಧಿ ಬಾಬ್ತು	2001ರ ಮಾರ್ಚ್‌ನಲ್ಲಿ	2004ರಲ್ಲಿ ಸೆಪ್ಟಂಬರ್‌ನಲ್ಲಿ	ವೃದ್ಧಿ
1.	ಶಾಶ್ವತ ನಿಧಿ	63,64,043	116,16,403	52,52,360
2.	ದತ್ತಿನಿಧಿ	71,98,143	130,46,457	58,48,314
3.	ಅಮೃತನಿಧಿ	30,56,405	36,11,839	5,55,434
4.	ಸೇವಾಂತ್ಯನಿಧಿ	4,48,159	24,91,593	20,43,434
5.	ಸಾಮಾನ್ಯನಿಧಿ	1,32,74,636	1,40,59,661	7,84,925
6.	ಪುಸ್ತಕ ದಾಸ್ತಾನು	52,38,196	89,85,589	37,47,393

□

ಭಾಗ: ಮೂರು

ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಪುನರೂರು ಸಂಗ್ರಹಿಸಿದ ದತ್ತಿನಿಧಿಗಳು

ಸೌಜನ್ಯ: ಕನ್ನಡ ನುಡಿ

ಕ್ರ.ಸಂ. ಹೆಸರು/ಊರು	ದತ್ತಿ ಹೆಸರು-	ದತ್ತಿ ಮೊತ್ತ	ದತ್ತಿಕೊಟ್ಟ ದಿನಾಂಕ
ಬೆಂಗಳೂರು ಗ್ರಾಮಾಂತರ			
1. ಶ್ರೀ ಟಿ.ವಿ. ಕೃಷ್ಣಪ್ಪ ಚನ್ನಪಟ್ಟಣ	ಶ್ರೀಮತಿ ಯಶೋದಮ್ಮ ಶ್ರೀ ವಿ. ವೆಂಕಟಪ್ಪ ದತ್ತಿ	ರೂ. 10,000/-	24.6.2002
2. ಶ್ರೀ ಸಿ. ಬೋರಯ್ಯ ರಾಮನಗರ ತಾ॥	ಶ್ರೀಮತಿ ಇಂದಿರಮ್ಮ ಶ್ರೀ ಬೋರಯ್ಯ ದತ್ತಿ	ರೂ. 10,000/-	13.8.2002
3. ಶ್ರೀಮತಿ ಲಕ್ಷ್ಮಮ್ಮ ಕೋಂ ಸದಾನಂದ	ಅಭಿಮಾನ್ ನೇತ್ರಾವತಿ ಅಮರ ಪ್ರೇಮಿಗಳ ದತ್ತಿ	ರೂ. 20,000/-	29.11.2002
4. ಶ್ರೀ ಎಂ.ಎಚ್. ವಿಜಯೇಂದ್ರ ಮತ್ತು ಮತ್ತು ಸಹೋದರರು, ಚನ್ನಪಟ್ಟಣ	ಶ್ರೀ ಎಂ. ಹೊನ್ನೇಗೌಡ ಮತ್ತು ಶ್ರೀಮತಿ ವೆಂಕಟಮ್ಮ ದತ್ತಿ	ರೂ. 10,000/-	2.7.2003
5. ಶ್ರೀ ಟಿ.ಎಸ್. ಚಿಕ್ಕರಾಮಕೃಷ್ಣಪ್ಪ	ದೊಡ್ಡಬಳ್ಳಾಪುರ ತಾ॥ ಶ್ರೀಮತಿ ಕೆಂಪಮ್ಮ ಪಟೇಲ್ ಟಿ.ಸಿ. ಸುಬ್ಬೇಗೌಡ ದತ್ತಿ	ರೂ. 10,000/-	4.8.2003
6. ಶ್ರೀ ಭೂಹಳ್ಳಿ ಪುಟ್ಟಸ್ವಾಮಿ ಚನ್ನಪಟ್ಟಣ ತಾ॥	ಭೂಹಳ್ಳಿ ಸಿದ್ಧಮ್ಮ ಚಿಕ್ಕಹೈದಯ್ಯ ದತ್ತಿ	ರೂ. 10,000/-	19.11.2003
7. ಶ್ರೀ ಸಿ. ಚನ್ನಪ್ಪ ಚನ್ನಪಟ್ಟಣ ತಾ॥	ಚನ್ನೇಗೌಡ ಸ್ಮಾರಕ ದತ್ತಿ	ರೂ. 10,000/-	14.1.2004
8. ಶ್ರೀ ಜೆ. ನರಸಿಂಹಸ್ವಾಮಿ ದೊಡ್ಡಬಳ್ಳಾಪುರ ತಾ॥	ಶ್ರೀಮತಿ ಗಂಗಮ್ಮ ಜೆ. ನರಸಿಂಹಯ್ಯ ದತ್ತಿ	ರೂ. 10,000/-	18.8.2004
9. ಶ್ರೀ ಸಿ. ನಾಗರಾಜು ದೊಡ್ಡಬಳ್ಳಾಪುರ	ಶ್ರೀ ಚನ್ನಪ್ಪ ಮತ್ತು ಹೊನ್ನಮ್ಮ ದತ್ತಿ	ರೂ. 10,000/-	31.8.2004
10. ಶ್ರೀ ಎನ್. ರಂಗಶಾಮಯ್ಯ ದೊಡ್ಡಬಳ್ಳಾಪುರ ತಾ॥	ಜಿ.ಆರ್. ನರಸಿಂಹಯ್ಯ ಮತ್ತು ಬೈಲಮ್ಮ ದತ್ತಿ	ರೂ. 10,000/-	6.9.2004
11. ಶ್ರೀ ಜಿ. ಗೋಪಿನಾಥ ಭಟ್ ದೊಡ್ಡಬಳ್ಳಾಪುರ ತಾ॥	ಶ್ರೀ ಗಂಗಹನುಮಯ್ಯ ಮತ್ತು ಗಂಗಹನುಮಕ್ಕ ಸ್ಮಾರಕ ದತ್ತಿ	ರೂ. 10,000/-	6.9.2004
12. ಶ್ರೀ ಮ.ನಿ.ಪ್ರ। ಜಗದ್ಗುರು ಗುರುಸಿದ್ದರಾಜ ಯೋಗೀಂದ್ರ ಮಹಾಸ್ವಾಮಿಗಳು ಹುಬ್ಬಳ್ಳಿ	ಶ್ರೀ ಮ.ನಿ.ಪ್ರ। ಜಗದ್ಗುರು ಗುರುಸಿದ್ದರಾಜಯೋಗೀಂದ್ರ ಮಹಾಸ್ವಾಮಿಗಳ ದತ್ತಿ	ರೂ. 10,000/-	6.9.2004
13. ಶ್ರೀ ಎಸ್. ನಿಜಲಿಂಗೇಗೌಡ, ಚನ್ನಪಟ್ಟಣ ತಾ॥	ಶ್ರೀಮತಿ ಸರೋಜಮ್ಮ ಶಿವಲಿಂಗೇಗೌಡ ದತ್ತಿ	ರೂ. 10,000/-	11.10.2004
14. ಶ್ರೀ ನಿಜಲಿಂಗೇಗೌಡ, ಚನ್ನಪಟ್ಟಣ ತಾ॥	ಶ್ರೀ ಶಿವಲಿಂಗೇಗೌಡ ಸಿಂಗರಾಜಪುರ ದತ್ತಿ	ರೂ. 10,000/-	11.10.2004
15. ಡಾ॥ ಟಿ.ವಿ. ವರದಪ್ಪ ಚನ್ನಪಟ್ಟಣ	ಶ್ರೀಮತಿ ವೆಂಕಟಮ್ಮ ಮತ್ತು ವರದೇಗೌಡ ದತ್ತಿ	ರೂ. 10,000/-	11.10.2004
16. ಅಧ್ಯಕ್ಷರು, ಚನ್ನಪಟ್ಟಣ ತಾ॥ ಕ.ಸಾ.ಪ ಚನ್ನಪಟ್ಟಣ	ಚನ್ನಪಟ್ಟಣ ತಾ॥ ಕ.ಸಾ.ಪ ದತ್ತಿ	ರೂ. 10,000/-	11.10.2004

17. ಅಧ್ಯಕ್ಷರು ಚನ್ನಪಟ್ಟಣ ತಾ॥ ಕ.ಸಾ.ಪ ಚನ್ನಪಟ್ಟಣ	ಚನ್ನಪಟ್ಟಣ ತಾ. ಕ.ಸಾ.ಪ ದತ್ತಿ	ರೂ. 10,000/-	11.10.2004
ಕೋಲಾರ ಜಿಲ್ಲೆ			
1. ಪ್ರೊ. ಎಸ್. ಚಂದ್ರಪ್ಪ ಬೆಂಗಳೂರು	ಛೇರ್ಮನ್ ಎ.ಎ. ನಾರಾಯಣಪ್ಪ ಲಕ್ಕಮ್ಮ ಸ್ಮಾರಕ ದತ್ತಿ	ರೂ. 10,000/-	1.2.2004
2. ಶ್ರೀ ಗೌರಿಬಿದನೂರು ರಾಜಶೇಖರ ಗೌ. ಬಿದನೂರು	ಕೂರಾಕುಲು ನಾರಾಯಣಪ್ಪ ದತ್ತಿ	ರೂ. 10,000/-	33.4.2002
3. ಶ್ರೀಮತಿ ಆರ್. ಪಾರ್ವತಮ್ಮ ಕೆ.ಜಿ.ಎಫ್	ಶ್ರೀಮತಿ ಡಿ. ಶಾರದಾಂಬಾ ದತ್ತಿ	ರೂ. 10,000/-	18.3.2002
4. ಶ್ರೀ ಅ.ಮಾ. ಲಕ್ಷ್ಮೀನಾರಾಯಣ ಬಂಗಾರಪೇಟೆ ತಾ॥	ಶ್ರೀಮತಿ ರಾಮಕ್ಕ ಪತಿ ಮುನಿಯಪ್ಪ		
	ದಿ॥ ಗಂಗಾದರಂ ಮತ್ತು ಎ. ಚನ್ನಪ್ಪ ದತ್ತಿ	ರೂ. 10,000/-	14.1.2004
ತುಮಕೂರು ಜಿಲ್ಲೆ			
1. ಡಾ॥ ಜಿ.ಸಿದ್ದಲಿಂಗಪ್ಪ ತುಮಕೂರು	ಶ್ರೀಮತಿ ಆರ್. ಶಿವಲಿಂಗಮ್ಮ ಮತ್ತು ಡಾ॥ ಜಿ. ಸಿದ್ದಲಿಂಗಪ್ಪ ದತ್ತಿ	ರೂ. 10,000/-	22.1.2002
2. ಶ್ರೀ ರಾಧಾಕೃಷ್ಣ ಶೆಟ್ಟಿ ಮಧುಗಿರಿ ತಾ॥	ಬ್ಯಾಲ್ಯಾದ ಮೀನಾಕ್ಷಮ್ಮ ಹೆಚ್. ಬೀಮಯ್ಯ ಶೆಟ್ಟಿ ದತ್ತಿ	ರೂ. 25,000/-	19.6.2004
3. ಶ್ರೀ ಪಿ. ನಂಜಪ್ಪ ತುಮಕೂರು	ಶ್ರೀಮತಿ ಟಿ.ಪಿ. ಮಂಗಳಮ್ಮ ದತ್ತಿ	ರೂ. 10,000/-	10.2.2003
4. ಶ್ರೀ. ಮಾಕಂ ನಾರಾಯಣ ಶೆಟ್ಟಿ ಮಕ್ಕಳು ಪಾವಗಡ ತಾ.	ಶ್ರೀಮತಿ ತಿಮ್ಮರಾಜಮ್ಮ ಮಾಕಂ ನಾರಾಯಣ ಶೆಟ್ಟಿ ಸ್ಮಾರಕ ದತ್ತಿ	ರೂ. 10,000/-	4.3.2003
5. ಚೆಕ್ಕಿ ಬಟ್ಲು ಹೆಂಜಾರೆಡ್ಡಿ ಮತ್ತು ನಾರಾಯಣಮ್ಮ	ಚಾರಿಟಬಲ್ ಟ್ರಸ್ಟ್ ಪಾವಗಡ ತಾ॥ ಚೆಕ್ಕಿ ಬಟ್ಲು ಹೆಂಜಾರೆಡ್ಡಿ		
.	ಮತ್ತು ನಾರಾಯಣಮ್ಮ ದತ್ತಿ	ರೂ. 10,000/-	4.3.2003
ಚಿತ್ರದುರ್ಗ ಜಿಲ್ಲೆ			
1. ಶ್ರೀ ಕೆ.ಬಿ. ಬಸವರಾಜಪ್ಪ ಹೊಳಲ್ಕೆರೆ	ಲಿಂ. ಮುರುಗರಾಜೇಂದ್ರ ಸ್ವಾಮಿಗಳು [illegible] ಕುಂಬದ ಮಹಾಮಠ ದತ್ತಿ	ರೂ. 10,000/-	24.1.2003
2. ಡಾ॥ ಎಸ್.ಬಿ. ಸಜ್ಜನ ಹೊಳಲ್ಕೆರೆ	ಶ್ರೀಮತಿ ಬಸವಲಿಂಗಮ್ಮ ಕೊಂ [illegible]ಪ್ಪ ಸಜ್ಜನ ದತ್ತಿ	ರೂ. 10,000/-	24.1.2003
3. ಶ್ರೀ ಸಿ. ಚಂದ್ರಯ್ಯ ಹೊಳಲ್ಕೆರೆ	ಸಿರಿಗೆರೆ ಲಿಂ. ತರಳಬಾಳು ಜಗದ್ಗುರು		

		ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದತ್ತಿ	ರೂ. 10,000/-	24.1.2003
4.	ಶ್ರೀ ಕೆ.ಟಿ. ಗುರುಮುರ್ತಿ ಹೊಳಲ್ಕೆರೆ ತಾ||	ಕೆ.ಟಿ. ಗುರುಮೂರ್ತಿ ಚೀರನಹಳ್ಳಿ ದತ್ತಿ	ರೂ. 10,000/-	24.1.2003
5.	ಶ್ರೀ ಕೆ. ವೆಂಕಣಾಚಾರ್ ಚಿತ್ರದುರ್ಗ	ಕೆ. ವೆಂಕಟಣ್ಣಾಚಾರ್ ಕೆ.ಆರ್. ರಮಾದೇವಿ ದತ್ತಿ	ರೂ. 10,100/-	26.9.2003
6.	ಶ್ರೀ ಕೆ.ಎಂ. ಉಮಾಪತಿ ಹೊಸದುರ್ಗ ತಾ||	ಶ್ರೀಮತಿ ಕೊಟ್ಟಿಗೆ ಗಂಗಮ್ಮ ಮಹಾರುದ್ರಪ್ಪ ದತ್ತಿ	ರೂ. 10,000/-	1.3.2004
7.	ಶ್ರೀಮತಿ ಎಂ.ಕೆ. ತಾಜಾಪೀರ್ ಚಿತ್ರದುರ್ಗ	ದಿ|| ಟಿ.ಎಂ.ಕೆ. ಮೀರ್‌ಸಾಬ್ ದಿ|| ಎಸ್. ನಿಜಲಿಂಗಪ್ಪ ದಿ|| ಹೊ.ಚಿ. ಬೋರಯ್ಯ ಸೌಹಾರ್ದ ದತ್ತಿ	ರೂ. 10,000/-	31.3.2004

ದಾವಣಗೆರೆ ಜಿಲ್ಲೆ

1.	ಶ್ರೀ ಬಿಸಲೇರಿ ವಿರೂಪಾಕ್ಷಪ್ಪ ದಾವಣಗೆರೆ ಬಿಸಲೇರಿ	ಮಹೇಶ್ವರಪ್ಪ ಪ್ರಮೀಳಾ ಬಿಸಿಲೇರಿ ಬ್ರದರ್ಸ್ ದತ್ತಿ	ರೂ. 25,000/-	5.1.2002
2.	ಶ್ರೀ ಗೋಪಾಲಕೃಷ್ಣಪೈ ಕೆ. ದಾವಣಗೆರೆ	ಶ್ರೀಮತಿ ಮಾಲತಿ ರಂಗಪೈ ಮತ್ತು ಕೊಚ್ಚಿಕಾರ ರಂಗಪೈ ದತ್ತಿ	ರೂ. 15,000/-	25.1.2002
3.	ಪ್ರೊ. ಬಿ. ಸದಾಶಿವಪ್ಪ ದಾವಣಗೆರೆ	ಶ್ಯಾಗಲೆ ಶ್ರೀಮತಿ ಸಿದ್ದಮ್ಮ ಬೀಸನಹಳ್ಳಿ ಪರ್ವತಪ್ಪ ದತ್ತಿ	ರೂ. 10,000/-	21.1.2002
4.	ಶ್ರೀ ಎಲವಟ್ಟಿ ವೃಷಭೇಂದ್ರಪ್ಪ ದಾವಣಗೆರೆ	ಶ್ಯಾಮನೂರು ಶ್ರೀಮತಿ ಕಲ್ಲಮ್ಮ ಯಲವಟ್ಟಿ ತಿಮ್ಮಪ್ಪ ದತ್ತಿ	ರೂ. 10,000/-	21.1.2002
5.	ಶ್ರೀ ಕೆ. ಕುಬೇರಪ್ಪ ಹರಪ್ಪನಹಳ್ಳಿ ತಾ||	ಮೈದೂರು ಸಾವಿತ್ರಮ್ಮ ಕೆ. ರಾಮಪ್ಪ ದತ್ತಿ	ರೂ. 10,000/-	21.1. 2002
6.	ಶ್ರೀ ಮುದೇನೂರು ಶಂಕರಪ್ಪ ಮುಂಬೈ	ಹನಗವಾಡಿ ಶ್ರೀಮತಿ ಸಿದ್ದಲಿಂಗಮ್ಮಮುದೇನೂರು ವೀರಪ್ಪ ದತ್ತಿ	ರೂ. 10,000/-	21.1. 2002
7.	ಶ್ರೀ ಎಂ.ಟಿ. ಜಯದೇವಪ್ಪ ದಾವಣಗೆರೆ	ಕಬ್ಬೂರು ಶ್ರೀಮತಿ ಕಲ್ಲಮ್ಮ ಮಂಡ್ಲೂರು ತಿಮ್ಮಪ್ಪ ದತ್ತಿ	ರೂ. 10,000/-	21.1.2002
8.	ಶ್ರೀ ಎಲ್.ಎಸ್. ಪ್ರಭುದೇವ ಚನ್ನಗಿರಿ ತಾ||	ಲಿಂಗದಹಳ್ಳಿ ಶ್ರೀಮತಿ ನಂಜಮ್ಮ ಎಲ್. ಸಿದ್ದಪ್ಪ ದತ್ತಿ	ರೂ. 10,000/-	21.1.2002
9.	ಡಾ|| ಬಿ. ಸಿದ್ದಲಿಂಗಪ್ಪ ತುಮಕೂರು	ಶ್ರೀಮತಿ ಆರ್. ಶಿವಲಿಂಗಮ್ಮ ಡಾ|| ಬಿ. ಸಿದ್ದಲಿಂಗಪ್ಪ ದತ್ತಿ	ರೂ. 10,000/-	22.2.2002
10.	ಡಾ|| ಹೆಚ್. ವಿ. ಶಿವಶಂಕರ ದಾವಣಗೆರೆ	ಲಯನ್ಸ್ ದತ್ತಿ	ರೂ. 12,000/-	3.4.2002
11.	ಶ್ರೀ ಜಿ. ಮಲ್ಲಿಕಾರ್ಜುನಪ್ಪ ಚಿತ್ರದುರ್ಗ ಜಿಲ್ಲೆ	ದಿ|| ಭೀಮಸಮುದ್ರ ಶ್ರೀಮತಿ ಲಿಂಗಮ್ಮ ಪಟೇಲ್ ಈಶ್ವರಪ್ಪ ದತ್ತಿ	ರೂ. 15,000/-	27.5.2002
12.	ಶ್ರೀ ಕೆ.ಬಿ. ಲೋಕೇಶ್ವರಪ್ಪ ಚನ್ನಗಿರಿ ತಾ||	ಕೆಂಪನಹಳ್ಳಿ ಶ್ರೀಮತಿ ರುದ್ರಮ್ಮ ಬಸಪ್ಪ ದತ್ತಿ	ರೂ. 10,000/-	30.7.2002

13. ಡಾ|| ಬಿ.ಎಸ್. ನಾಗಪ್ರಕಾಶ್ ದಾವಣಗೆರೆ	ಶ್ರೀಮತಿ ನಾಗರತ್ನಮ್ಮ ಬ್ಯಾಡಗಿ ಸತ್ಯನಾರಾಯಣ ದತ್ತಿ	ರೂ. 15,000/-	13.8.2002
14. ಪ್ರೊ. ಎಸ್.ಜಿ. ರಂಗನಾಥ್ ದಾವಣಗೆರೆ	ಸಿದ್ದನಮಠದ ದಿ|| ನಾಡಿಗ ಬಸಪ್ಪ ಶ್ರೀಮತಿ ಕಮಲಮ್ಮ ದತ್ತಿ	ರೂ. 10,000/-	18.3.2002
15. ಡಾ|| ಉಮೇಶ್ ದಾವಣಗೆರೆ	ಜಿ.ಸಿದ್ದಪ್ಪ ಸ್ಮಾರಕ ದತ್ತಿ	ರೂ. 10,000/-	18.3.2002
16. ಶ್ರೀಮತಿ ಎಸ್.ಟಿ. ಶಾಂತ ಗಂಗಾಧರ ದಾವಣಗೆರೆ	ನವಿಲೇ ಹಾಳು ನಾಸಾಹತಿ ಸ್ಮಾರಕ ದತ್ತಿ	ರೂ. 10,000/-	18.3.2002
17. ಶ್ರೀ ಜಿ.ಹೆಚ್. ಸಿದ್ದಪ್ಪ ದಾವಣಗೆರೆ	ಸಂತೆಬೆನ್ನೂರು ಶ್ರೀಮತಿ ಲಕ್ಷ್ಮಮ್ಮ ಹಾಲಪ್ಪ ದತ್ತಿ	ರೂ. 15,000/-	18.3.2002
18. ಶ್ರೀ ಕೆ. ರಾಮಚಂದ್ರಪ್ಪ ಚನ್ನಗಿರಿ ತಾ||	ಕೆಂಪನಹಳ್ಳಿ ದಿ|| ಕಾಕನೂರು ವೀರಬಸಪ್ಪ ದತ್ತಿ	ರೂ. 10,000/-	3.2.2003
19. ಶ್ರೀಮತಿ ಶೀಲಾವತಿ ಹರಿಹರ	ಶ್ರೀಮತಿ ಎಸ್. ಶೀಲಾವತಿ ರಾಮಕೃಷ್ಣ ದತ್ತಿ	ರೂ. 10,000/-	26.3.2003
20. ಶ್ರೀ ಹಾಜಿ ಹಸನ್‌ಸಾಬ್ ನಾಯಕ್ ಹರಿಹರ	ಶ್ರೀಮತಿ ಘಡುಮ ಗಜಬರಸಾಬ್ ನಾಯಕ್ ಸ್ಮರಣಾರ್ಥ ದತ್ತಿ	ರೂ. 10,000/-	26.3.2003
21. ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ ಹರಿಹರ	ಶ್ರೀ ಶೈಲ ಜಗದ್ಗುರು ಲಿಂಗವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದತ್ತಿ	ರೂ. 15,000/-	26.3.2003
22. ಶ್ರೀ ವೀರಣ್ಣ ವಿ. ಚಿಗಟೇರಿ ದಾವಣಗೆರೆ	ಶ್ರೀ ಜಗದ್ಗುರು ಜಯಪ್ರಭಾ ವಿದ್ಯಾಸಂಸ್ಥೆ ದತ್ತಿ	ರೂ. 10,000/-	23.5.2003
23. ಶ್ರೀ ಹಾಲಾ ನಾಯಕ ಹರಪನಹಳ್ಳಿ ತಾ||	ಶ್ರೀ ಹಾಲಾ ನಾಯ್ಕ ಲಷ್ಕರಿನಾಯ್ಕ ದತ್ತಿ	ರೂ. 10,000/-	18.11.2003
24. ಶ್ರೀಮತಿ ಹೆಚ್.ಎಂ. ಲಲಿತಮ್ಮ ಮತ್ತು ಮಕ್ಕಳು ಹರಪನಹಳ್ಳಿ	ಶ್ರೀ ಟಿ.ಎಂ. ಸೋಮಲಿಂಗಯ್ಯ ದತ್ತಿ	ರೂ. 10,000/-	18.11.2003
25. ಶ್ರೀ ಕೆ.ಬಿ. ಕೊಟ್ರೇಶ್ ಹರಪನಹಳ್ಳಿ ತಾ||	ದಿ|| ಕಂಚಿಕೇರಿ ಬಿದ್ರಿ ಸಿದ್ದಪ್ಪ ವೀರಮ್ಮ ಸ್ಮಾರಕ ದತ್ತಿ	ರೂ. 10,000/-	15.12.2003
26. ಶ್ರೀ ವಡ್ನಾಳ್ ರಾಜಣ್ಣ ಶಿವಮೊಗ್ಗ	ಶ್ರೀಮತಿ ಮಲ್ಲಮ್ಮ ಶ್ರೀ ಶಿವಲಿಂಗಪ್ಪ ವಡ್ನಾಳ್ ಸ್ಮಾರಕ ದತ್ತಿ	ರೂ. 10,000/-	15.12.2003
27. ಶ್ರೀಮತಿ ಜಯಮ್ಮ ನೀಲಗುಂದ ಡಾ|| ಜಯಲಕ್ಷ್ಮಿ ಸುರೇಂದ್ರ	ಶ್ರೀ ನೀಲಗುಂದ ಸಿದ್ದರಾಮಣ್ಣ ಚನ್ನಮ್ಮ ದತ್ತಿ	ರೂ. 10,000/-	21.1.2004

28. ಶ್ರೀಮತಿ ಜಿ.ಎಂ. ಸರ್ವಮಂಗಳಮ್ಮ ಹರಿಹರ	ದಿ|| ಕೊಟ್ರಯ್ಯ ಸ್ವಾಮಿ ಗುರುದೇವರ ಮಠ ಶ್ರೀಮತಿ ಬಿ.ಎಂ. ಸರ್ವಮಂಗಳಮ್ಮ ದತ್ತಿ	ರೂ. 15,000/-	20.2.2004
29. ಶ್ರೀ ಕೆಂಚನಗೌಡ ದಾವಣಗೆರೆ	ಕೆಂಚನಗೌಡ ಶ್ರೀಮತಿ ನಾಗಮ್ಮ ಚನ್ನಬಸವನಗೌಡ ದತ್ತಿ	ರೂ. 10,000/-	4.3.2004
30. ಶ್ರೀ ಜೆ.ಬಿ. ಮಹಾಲಿಂಗಪ್ಪ ಚನ್ನಗಿರಿ	ಲಿಂ| ಪಾರ್ವತಮ್ಮ ಗೌಡ ಬಸಪ್ಪದತ್ತಿ	ರೂ. 10,000/-	5.5.2004
31. ಹೆಚ್.ವಿ. ವಾಮದೇವಪ್ಪ ದಾವಣಗೆರೆ	ಹಿರೇಕೋಗಲೂರು ಶ್ರೀಮತಿ ಪಾರ್ವತಮ್ಮ ಹಾದಿಮನಿ ವೀರಭದ್ರಪ್ಪ ದತ್ತಿ	ರೂ. 10,000/-	25.10.2004

ಶಿವಮೊಗ್ಗ ಜಿಲ್ಲೆ

1. ಶ್ರೀ ಚಿಪ್ಪಳ್ಳಿ ಗೋಪಾಲಕೃಷ್ಣರಾವ್ ಸಾಗರ	ಚಿಪ್ಪಳ್ಳಿ ಗೋಪಾಲಕೃಷ್ಣರಾವ್ ದತ್ತಿ	ರೂ. 10,000/-	15.1.2002
2. ಶ್ರೀಮತಿ ಕಮಲಮ್ಮ ಕೆ.ಜಿ. ಒಡೆಯರ್ ಸಾಗರ	ಕೆ.ಜಿ. ಒಡೆಯರ್ ದತ್ತಿ	ರೂ. 10,000/-	15.1.2004
3. ಶ್ರೀ ಕೆ. ವಾಸುದೇವಾಚಾರ್. ಶಿವಮೊಗ್ಗ	ಶ್ರೀ ಕೆ. ವಾಸುದೇವಾಚಾರ್ ದತ್ತಿ	ರೂ. 10,000/-	16.12.2001
4. ಶ್ರೀ ಬಿ.ಡಿ. ಸಿದ್ದಪ್ಪಳವರ, ಶಿಕಾರಿಪುರ ತಾ||	ದುರ್ಗನಗೌಡ-ಗುಡ್ಡನಗೌಡ-ಸಿದ್ದಪ್ಪಳವರ ದತ್ತಿ	ರೂ. 10,000/-	30.9.2001
5. ಶ್ರೀ ಡಿ.ವಿ. ಶಿವರಾಮಯ್ಯ. ಸಾಗರ ತಾ||	ದಿ. ಪಟೇಲ್ ಲಕ್ಷ್ಮೀನಾರಾಯಣರಾವ್ ಅಮಚಿ ದತ್ತಿ	ರೂ. 10,000/-	15.1.2002
6. ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ ಶಿವಮೊಗ್ಗ	ಆನಂದಪುರಂ ಜಗದ್ಗುರು ಗುರುಬಸವ ಮಹಾಸ್ವಾಮಿ ದತ್ತಿ	ರೂ. 10,000/-	15.1.2002
7. ಶ್ರೀ ಟಿ. ಮಹಾಬಲೇಶ್ವರ ಭಟ್, ಸಾಗರ	ಟಿ. ಮಹಾಬಲೇಶ್ವರ ಭಟ್ ದತ್ತಿ	ರೂ. 10,000/-	30.1.2002
8. ಶ್ರೀ ಬೆಣ್ಣೆಗೆರೆ ಬಸವನಗೌಡ್ರ ಕಡ್ಲೆಗೌಡ್ರ, ಸೊರಬ ತಾಲ್ಲೂಕು	ಶ್ರೀಮತಿ ಶಾಂತಮ್ಮ ಬಸವನಗೌಡ್ರ ದತ್ತಿ	ರೂ. 10,000/-	
9. ಶ್ರೀ ಎಂ.ಕೆ. ಸುರೇಶ್‌ಕುಮಾರ್, ಶಿವಮೊಗ್ಗ	ಎಂ.ಆರ್. ಕೃಷ್ಣಶೆಟ್ಟಿ ದತ್ತಿ	ರೂ. 10,000/-	24.8.2002
10. ಶ್ರೀ ಹೆಚ್.ಜಿ. ಜಯಣ್ಣ ಶಿಕಾರಿಪುರ	ಲಿಂ| ಶರಣ ಹೆಂಚಿನಮನೆ ಗುರುಬಸಪ್ಪ ಪತ್ನಿ ಪಾರ್ವತಮ್ಮ ಶಿಕಾರಿಪುರ ದತ್ತಿ	ರೂ. 10,000/-	9.3.2003

11. ಶ್ರೀ ಜಿ.ಬಿ. ರುದ್ರಪ್ಪ, ಶಿವಮೊಗ್ಗ	ಲಿಂ।ಶ್ರೀಮತಿ ಕಮಲ ಜಿ.ಜಿ. ರುದ್ರಪ್ಪ ಶಿವಮೊಗ್ಗ ದತ್ತಿ	ರೂ. 10,000/-	10.4.2003
12. ಶ್ರೀ ಜಿ.ಜಿ. ರುದ್ರಪ್ಪ, ಶಿವಮೊಗ್ಗ	ಲಿಂ। ಜಿ.ಆರ್. ಪ್ರವೀಣ್, ಶ್ರೀ ಜಿ.ಬಿ. ರುದ್ರಪ್ಪ ದತ್ತಿ	ರೂ. 10,000/-	10.4.2003
13. ಶ್ರೀ ಗು.ಬಿ. ಗಂಗಾಧರಪ್ಪ, ಶಿವಮೊಗ್ಗ	ದಿ॥ ಜಿ.ಬಿ. ಲಲಿತ ದತ್ತಿ	ರೂ. 10,000/-	3.5.2003
14. ಶ್ರೀ ಮ. ಮಲ್ಲಿಕಾರ್ಜುನ ಕೋರಿ, ಭದ್ರಾವತಿ	ಮ. ಮಲ್ಲಿಕಾರ್ಜುನ ಕೋರಿ ದತ್ತಿ	ರೂ. 10,000/-	13.8.2003
15. ಶ್ರೀ ಕೆ.ಸಿ. ಶಾಂತಪ್ಪ, ಶಿವಮೊಗ್ಗ	ದಿ॥ ಚನ್ನಬಸಪ್ಪ ಕಡೂರಹಳ್ಳಿ ದತ್ತಿ	ರೂ. 10,000/-	6.12.2003
16. ಡಾ।ಎಸ್.ಎಸ್. ವಿಜಯ, ಬಿಜಾಪುರ	ಸರ್ವಮಂಗಳಮ್ಮ ಶಿವಶಂಕರಯ್ಯ ಭದ್ರಾವತಿ ದತ್ತಿ	ರೂ. 10,000/-	9.2.2004
17. ಶ್ರೀ ಹುಲ್ಲತ್ತಿ ಗಣೇಶ, ಶಿಕಾರಿಪುರ ತಾ॥	ಹುಲ್ಲತ್ತಿ ಗಣೇಶಪ್ಪ ದತ್ತಿ	ರೂ. 10,000/-	14.6.2004
18. ಶ್ರೀ ಅಮಜದ್ ಹುಸೇನ್, ಶಿಕಾರಿಪುರ	ನಜೀರ್ ಪಾಷಾ ದತ್ತಿ	ರೂ. 10,000/-	14.6.2004
19. ಶ್ರೀಮತಿ ನಾಗವೇಣಮ್ಮ, ತೀರ್ಥಹಳ್ಳಿ	ಕಡಿದಾಳ್ ಎಸ್. ರಾಮಪ್ಪಗೌಡರ ಸ್ಮಾರಕ ದತ್ತಿ	ರೂ. 10,000/-	21.9.2004
ಬಿಜಾಪುರ ಜಿಲ್ಲೆ			
1. ಡಾ। ಬಿ.ಆರ್. ನಾಡಗೌಡ, ಸಿಂದಗಿ	ಡಾ। ರಾಮರಾವ್ ಮಲ್ಹಾರಾವ್ ನಾಡಗೇರ ದತ್ತಿ	ರೂ. 10,000/-	24.2.2003
2. ಶ್ರೀ ಹ.ಮ.ಪೂಜಾರ್ ಮತ್ತು ಮಕ್ಕಳು, ಸಿಂದಗಿ	ಲಿಂ। ಗುರುಬಾಯಿ ಮಣ್ಣಪ್ಪ ಮಾಸ್ತರಹೂಗಾರ ದತ್ತಿ	ರೂ. 10,000/-	18.12.2003
3. ಡಾ। ವಿಜಯ ಎಸ್.ಎಸ್. ವಿಜಾಪುರ	ಸರ್ವಮಂಗಳಮ್ಮ ಶಿವಶಂಕರಯ್ಯ ಭದ್ರಾವತಿ ದತ್ತಿ	ರೂ. 10,000/-	9.2.2004
4. ಅಧ್ಯಕ್ಷರು, ತಾ॥ ಕನ್ನಡ ಸಾಹಿತ್ಯ ಪರಿಷತ್ತು, ಬಸವನ ಬಾಗೇವಾಡಿ	ಶ್ರೀಮತಿ ಬಸವಲಿಂಗಮ್ಮ ಗುಂಡಪ್ಪ ಕುಂಬಾರ ದತ್ತಿ	ರೂ. 10,000/-	17.7.2004
ಬಾಗಲಕೋಟೆ ಜಿಲ್ಲೆ			
1. ಶ್ರೀ ಬಸವರಾಜ ಕೊಟ್ರಯ್ಯ ಗವಿಮಠ, ಇಲಕಲ್ಲ, ಹುನಗುಂದ ತಾ॥	ಲಿಂ। ಕೊಟ್ರಯ್ಯ ಬಿ. ಗವಿಮಠ ನಿ. ಮದರಖಂಡಿ ದತ್ತಿ	ರೂ. 10,000/-	4.12.2001
2. ಶ್ರೀ ಭೀಮಪ್ಪ ಅಪ್ಪಾಸಾಹೇಬ ಹುಣಸಕಟ್ಟಿ			

	ಮುಧೋಳ ತಾ॥	ಭೀಮಪ್ಪ ಅಪ್ಪಾಸಾಹೇಬ ಹುಣಸಕಟ್ಟಿ ದತ್ತಿ	ರೂ. 10,000/-	4.12.2001
3.	ಡಾ। ಎಂ.ಆರ್. ಚಂದಾವರಕರ, ಬಾಗಲಕೋಟೆ	ಡಾ. ರಾಜೀವ ಚಂದ್ರಕಾಂತ ಚಂದಾವರಕರ ದತ್ತಿ	ರೂ. 10,000/-	4.12.2001
4.	ಶ್ರೀ ಮಹಾಲಿಂಗಪ್ಪ ಪಂಡಿತಪ್ಪ ನುಚ್ಚಿ	ಮುಧೋಳ ತಾ॥ ದಿ. ಪಂಡಿತ ಯಮನಪ್ಪ ನುಚ್ಚಿ ದತ್ತಿ	ರೂ. 10,000/-	4.12.2001
5.	ಶ್ರೀ ಭೀಮಪ್ಪ ತಮ್ಮಣಪ್ಪ ನುಚ್ಚಿ, ಮುಧೋಳ ತಾ॥	ದಿ. ತಮ್ಮಣಪ್ಪ ಹನಮಪ್ಪ ಗುಡ್ಲಮನಿ ಧವಳೇಶ್ವರ ದತ್ತಿ	ರೂ. 10,000/-	4.12.2001
6.	ಶ್ರೀ ಮಹಾಲಿಂಗಪ್ಪ ಇಟ್ಟಪ್ಪ ಕೋಳಗುಡ್ಡ ಮುಧೋಳ ತಾ॥	ದಿ. ಇಟ್ಟಪ್ಪ ಮಲ್ಲಪ್ಪ ಕೋಳಗುಡ್ಡ ಮಹಾಲಿಂಗಪುರ ದತ್ತಿ	ರೂ. 10,000/-	4.12.2001
7.	ಶಿವನಗೌಡ ಕೃಷ್ಣಪ್ಪ ಯಡಹಳ್ಳಿ, ಬಾಗಲಕೋಟೆ	ದಿ.ಕೆ.ಎಸ್.ಯಡಹಳ್ಳಿ ದತ್ತಿ	ರೂ. 10,000/-	4.6.2002
8.	ಶ್ರೀ ಚಂದ್ರಕಾಂತ ವಿರೂಪಾಕ್ಷಪ್ಪ ಹದ್ಲಿ, ಬಾಗಲಕೋಟೆ	ದಿ. ಪ್ಲ.ಬಿ. ಹದ್ಲಿ ದತ್ತಿ	ರೂ. 10,000/-	4.6.2002
9.	ಅಧ್ಯಕ್ಷರು, ಬನಶಂಕರಿ ದೇವಸ್ಥಾನ, ಬಾದಾಮಿ ತಾ॥	ಶ್ರೀ ಶ್ರೀನಿವಾಸ ಭಟ್ ಮ. ಪೂಜಾರ್ ದತ್ತಿ	ರೂ. 15,000/-	22.6.2002
10.	ಶ್ರೀ. ಎಸ್.ಟಿ. ಪಾಟೀಲ, ಬಾದಾಮಿ	ಶ್ರೀಮತಿ ಸರಸ್ವತಿ ತಿಪ್ಪಣ್ಣ ಪಾಟೀಲ ದತ್ತಿ	ರೂ. 10,000/-	22.6.2002
11.	ಅಧ್ಯಕ್ಷರು, ಬಸವೇಶ್ವರ ಸಹಕಾರಿ ಬ್ಯಾಂಕ್, ಬಾಗಲಕೋಟೆ	ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ್ ದತ್ತಿ	ರೂ. 10,000/-	6.8.2002
12.	ಶ್ರೀ ಶಶಿಕುಮಾರ್ ವಾಸಣ್ಣ ದೇಸಾಯಿ, ಮುಧೋಳ	ದಿ. ಮಧುಮತಿ ವಾಸಣ್ಣ ದೇಸಾಯಿ ದತ್ತಿ	ರೂ. 10,000/-	30.9.2002
13.	ಶ್ರೀ ಎ.ಡಿ. ಮಠಪತಿ, ಮುಧೋಳ	ಲಿಂ। ದಾನಯ್ಯ ಅಡವಯ್ಯ ಮಠಪತಿ ದತ್ತಿ	ರೂ. 10,000/-	25.10.2002
14.	ಡಾ. ಅಪ್ಪಾಸಾಹೇಬ ರಾಮಪ್ಪ ಬೆಳಗಲಿ, ಮುಧೋಳ ತಾಲ್ಲೂಕು	ಲಿಂ। ಬಸಲಿಂಗಪ್ಪ ಅಪ್ಪಣ್ಣಪ್ಪ ಬೆಳಗಲಿ ದತ್ತಿ	ರೂ. 10,000/-	25.10.2005
15.	ಶ್ರೀ ಜಗದೀಶ ಎಸ್. ಗುಡಗಂಟಿಮಠ, ಜಮಖಂಡಿ ತಾಲ್ಲೂಕು	ಜಗದೀಶ ಎಸ್. ಗುಡಗಂಟಿ ದತ್ತಿ	ರೂ. 10,000/-	21.4.2003
16.	ಶ್ರೀ ವಸಂತ ಅಣ್ಣಾರಾವ್ ಕುಲಕರ್ಣಿ	ಬೀಳಗಿ ತಾಲ್ಲೂಕು ಅಣ್ಣಾರಾವ್ ಕುಲಕರ್ಣಿ ಸುರೇಖಾನ ದತ್ತಿ	ರೂ. 10,000/-	29.7.2003

17. ಶ್ರೀ ಗುರುಸ್ವಾಮಿ ಗಣಾಚಾರಿ, ಬಾಗಲಕೋಟೆ ತಾಲ್ಲೂಕು	ಲಿಂ। ಗಂಗಾಧರಸ್ವಾಮಿ ಸರಗಣಾಚಾರಿ ದತ್ತಿ	ರೂ. 10,000/-	10.9.2003
18. ಡಾ। ಎಂ.ಆರ್. ದೇಸಾಯಿ, ಬೀಳಗಿ ತಾ॥	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದತ್ತಿ	ರೂ. 10,000/-	10.9.2003
19. ಶ್ರೀ ಸಂಗಪ್ಪ ಮಲ್ಲಪ್ಪಗೌಡ ಹನಗಂಡಿ, ಬೀಳಗಿ	ಕೈಲಾಸವಾಸಿ ಮಲ್ಲಪ್ಪ ಶಿ. ಹನಗಂಡಿ ದತ್ತಿ	ರೂ. 10,000/-	10.9.2003
20. ಶ್ರೀ ಮಹಾಲಿಂಗಪ್ಪ ರುದ್ರಪ್ಪ ಹುಲಗಬಾಳಿ, ಜಮಖಂಡಿ ತಾಲ್ಲೂಕು	ರುದ್ರಪ್ಪ ಸಾತಪ್ಪ ಹುಲಗಬಾಳಿ ದತ್ತಿ	ರೂ. 21,000/-	26.9.2003
21. ಅಧ್ಯಕ್ಷರು, ಮುಧೋಳ ಸಹಕಾರಿ ಬ್ಯಾಂಕ್, ಮುಧೋಳ	ಮುಧೋಳ ಸಹಕಾರಿ ಬ್ಯಾಂಕ್ ದತ್ತಿ	ರೂ. 10,000/-	26.9.2003
22. ಅಧ್ಯಕ್ಷರು, ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ್, ಹುನಗುಂದ	ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ್ ದತ್ತಿ	ರೂ. 10,000/-	13.10.2003
23. ಅಧ್ಯಕ್ಷರು, ಇಳಕಲ್ಲು ಸಹಕಾರಿ ಬ್ಯಾಂಕ್, ಇಳಕಲ್ಲು	ಇಳಕಲ್ಲು ಸಹಕಾರಿ ಬ್ಯಾಂಕ್ ದತ್ತಿ	ರೂ. 10,000/-	13.10.2003
24. ಶ್ರೀ ಎಂ.ಚಿ. ಹಂಗರಗಿ, ಬಾದಾಮಿ ತಾ॥	ಲಿಂ। ಬಸಯ್ಯಸ್ವಾಮಿ ಹಂಗರಗಿ ನಂದಿಕೇಶ್ವರ ದತ್ತಿ	ರೂ. 10,000/-	13.10.2003
25. ಡಾ। ಉದಯ ಎಸ್. ಹೆರಂಜಾಲ್, ಬಾಗಲಕೋಟೆ	ಶ್ರೀಮತಿ ಕಮಲಾಬಾಯಿ ಸಂಜೀವರಾವ್ ಹೆರಂಜಾಲ್ ದತ್ತಿ	ರೂ. 10,000/-	12.11.2003
26. ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್, ಬೀಳಗಿ	ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ದತ್ತಿ	ರೂ. 10,000/-	26.12.2003
27. ಶ್ರೀ ಸಿದ್ರಾಮಪ್ಪ ರಾಮಪ್ಪ ಡಂಗಿ, ಮುಧೋಳ	ಶ್ರೀ ಸಿದ್ರಾಮಪ್ಪ ಆರ್. ಡಂಗಿ ದತ್ತಿ	ರೂ. 10,000/-	18.12.2003
28. ಶ್ರೀ ಶಿವಶರಣ ಮಂಟಪ ಟ್ರಸ್ಟ್ ಕಮಿಟಿ, ಮುಧೋಳ ತಾಲ್ಲೂಕು	ಶ್ರೀ ಬಸಯ್ಯ ಅಜ್ಜನವರ ದತ್ತಿ	ರೂ. 10,000/-	18.12.2003
29. ಶ್ರೀ ನಾಗಪ್ಪ ವಿರುಪಾಕ್ಷಪ್ಪ ಸಜ್ಜನ, ಬಾಗಲಕೋಟೆ	ಲಿಂ। ವಿರೂಪಾಕ್ಷಪ್ಪ ನಾಗಪ್ಪ ಸಜ್ಜನದತ್ತಿ	ರೂ. 10,000/-	18.12.2003
30. ಶ್ರೀ ಹಣಮಂತ ರುದ್ರಪ್ಪ ನಿರಾಣಿ, ಬೀಳಗಿ ತಾಲ್ಲೂಕು	ಮಹಾದೇವಪ್ಪ ನಿಂಗಪ್ಪ ನಿರಾಣಿ ದತ್ತಿ	ರೂ. 10,000/-	18.12.2003

31. ಶ್ರೀ ಅಶೋಕ ಮರಿಗೆಪ್ಪಗೌಡ ಪಾಟೀಲ, ಬಾಗಲಕೋಟೆ ತಾಲ್ಲೂಕು	ಲಿಂ। ಮುರಿಗೆಪ್ಪಗೌಡರ ದತ್ತಿ	ರೂ. 5,000/-	18.12.2003
32. ಶ್ರೀ ಶಂಕರ ವೀರಪ್ಪ ಉತ್ತೂರ್ತ, ಮುಧೋಳ,	ಮಲ್ಲೆಪ್ಪ ಉತ್ತೂರ್ತ ದತ್ತಿ	ರೂ. 10,000/-	18.12.2003
33. ಶ್ರೀ ಶಶಿಧರಸ್ವಾಮಿ ಚಂದ್ರಶೇಖರಯ್ಯ ಶಿವಮಠ, ಬಾದಾಮಿ	ಲಿಂ। ಚಂದ್ರಶೇಖರ ಶಿವಮಠ ದತ್ತಿ	ರೂ. 5,000/-	18.3.2004
34. ಶ್ರೀ ಎ.ಎಂ. ನಾಯಕ್, ಮುಧೋಳ ತಾ॥	ದಿ॥ ಮಲ್ಲಪ್ಪ ರಂಗಪ್ಪನಾಯಕ ದತ್ತಿ	ರೂ. 10,000/-	18.12.2003
35. ಶ್ರೀ ರಾಚಪ್ಪ ವಿರೂಪಾಕ್ಷಪ್ಪ ಕರೆಹೊನ್ನೆ, ಮುಧೋಳ	ದಿ॥ ವಿರೂಪಾಕ್ಷಪ್ಪ ಕರೆಹೊನ್ನೆ ದತ್ತಿ	ರೂ. 11,000/-	18.3.2004
36. ಶ್ರೀ ಬಾಲಚಂದ್ರ ಸಂಗಪ್ಪ ದೇಸಾಯಿ, ಬೀಳಗಿ	ಲಿಂ। ಸಂಗಪ್ಪ ಸಿದ್ದಲಿಂಗಪ್ಪ ದೇಸಾಯಿ ಭಾಗೀರಥಿಬಾಯಿ ಸಂಗಪ್ಪ ದೇಸಾಯಿ ದತ್ತಿ	ರೂ. 10,000/-	15.4.2004
37. ಶ್ರೀ ಬಾಲಚಂದ್ರ ಶಿವಲಿಂಗಪ್ಪ ಕೊಲ್ಹಾರ, ಮುಧೋಳ	ದಿ। ಶಿವಲಿಂಗಪ್ಪ ಮುರುಗೆಪ್ಪ ಕೊಲ್ಹಾರ ದತ್ತಿ	ರೂ. 10,700/-	15.4.2004
38. ಶ್ರೀ ಬಸವರಾಜ ಗದ್ವಾಲ, ಬಾಗಲಕೋಟೆ	ದಿ। ನೀಲಮ್ಮ ಬಸವರಾಜ ಗದ್ವಾಲ ದತ್ತಿ	ರೂ. 10,100/-	15.4.2004
39. ಶ್ರೀ ಅಶೋಕ ಚನ್ನವೀರ ರತ್ನಕಟ್ಟಿ, ಬಾಗಲಕೋಟೆ ಜಿಲ್ಲೆ	ಲಿಂ। ಶ್ರೀ ಚನ್ನವೀರಪ್ಪ ಬಸಪ್ಪ ರತ್ನಕಟ್ಟಿ ದತ್ತಿ	ರೂ. 5,000/-	15.4.2004
40. ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ಬಾಗಲಕೋಟೆ	ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ದತ್ತಿ	ರೂ. 10,000/-	20.8.2004
ಉಡುಪಿ ಜಿಲ್ಲೆ			
1. ಶ್ರೀಮತಿ ಮಾಲಿನಿ ಮಲ್ಯ, ಉಡುಪಿ ತಾ॥	ಡಾ. ಕೋಟ ಶಿವರಾಮಕಾರಂತ ಸಾಹಿತ್ಯ ದತ್ತಿ	ರೂ. 10,000/-	30.10.2001
2. ಡಾ॥ ಕಿದಿಯೂರು ಗುರುರಾಜ ಭಾಗವತ, ಉಡುಪಿ	ಡಾ॥ ಕಿದಿಯೂರು ಗುರುರಾಜ ಭಾಗವತ ಮತ್ತು ಶಾಂತಾ ಜಿ. ಭಾಗವತ ದತ್ತಿ	ರೂ. 10,000/-	10.6.2003
3. ಶ್ರೀಮತಿ ಜಾನಕಿ ವ್ಯಾಸ ಬಲ್ಲಾಳ, ಉಡುಪಿ	ಅಂಬಲಪಾಡಿ ಜಾನಕಿವ್ಯಾಸ ಬಲ್ಲಾಳ ದತ್ತಿ	ರೂ. 15,000/-	30.6.2003

ದಕ್ಷಿಣ ಕನ್ನಡ ಜಿಲ್ಲೆ

1.	ಶ್ರೀಮತಿ ಶಾರದಾ ಆರ್.ರಾವ್, ಧರ್ಮಸ್ಥಳ, ದ.ಕ.	ಶ್ರೀಮತಿ ಶಾರದಾ ಆರ್. ರಾವ್ ದತ್ತಿ	ರೂ. 5,000/-	31.10.2001
2.	ಶ್ರೀ ಕಮ್ಮಜೆ ಗಣಪತಿ ಭಟ್, ಬಂಟ್ವಾಳ ತಾಲ್ಲೂಕು	ದಿ|| ಕಮ್ಮಜೆ ಸುಬ್ಬಣ್ಣ ಭಟ್ ದತ್ತಿ	ರೂ. 10,000/-	22.3.2002
3.	ಶ್ರೀಮತಿ ತಲೆಂಗಳ ಪಾರ್ವತಿ ಅಮ್ಮ, ಸಂಪಾಡಿ	ತೋಡುಗುಳಿ ಶಂಕರಭಟ್ಟ ದತ್ತಿ	ರೂ. 10,000/-	3.4.2002
4.	ಶ್ರೀ ಪಿ.ಕೆ. ವೆಂಕಟರಮಣ ಭಟ್, ಬಂಟ್ವಾಳ ತಾ||	ಪಿ.ಕೆ. ವೆಂಕಟರಮಣ ಭಟ್ ದತ್ತಿ	ರೂ. 10,000/-	2.4.2002
5.	ಶ್ರೀ ಅಂಬಲಪಾಡಿ ಗುರುರಾಜ ಬಲ್ಲಾಳ, ಮಂಗಳೂರು	ಅಂಬಲಪಾಡಿ ವ್ಯಾಸಬಲ್ಲಾಳ ಜಾನಕಿ ದತ್ತಿ	ರೂ. 15,000/-	10.6.2002
6.	ಡಾ| ಎಂ. ಮೋಹನ್ ಮತ್ತು ಸಹೋದರರು, ಬಂಟ್ವಾಳ ತಾಲ್ಲೂಕು	ಪ್ರೊ| ಎಂ. ರಾಮಕೃಷ್ಣ ಭಟ್ ದತ್ತಿ	ರೂ. 10,000/-	22.6.2002
7.	ಡಾ|| ಜಾನಕಿ, ಮಂಗಳೂರು	ಕಳಸ ಪುಟ್ಟದೇವರಯ್ಯ ನಾಗಮ್ಮ ದತ್ತಿ	ರೂ. 10,000/-	15.7.2002
8.	ಶ್ರೀ ಬಿ. ಗಣಪತಿ ಸೋಮಯಾಜಿ ಎರಕಳಮನೆ, ಬಂಟ್ವಾಳ ತಾ||	ಶ್ರೀ ಕೃಷ್ಣ ಸೋಮಯಾಜಿ ದತ್ತಿ	ರೂ. 10,000/-	22.7.2002
9.	ಶ್ರೀ ಎಸ್. ಆರ್. ಸುಬ್ರಹ್ಮಣ್ಯ, ಸುಳ್ಯ ತಾಲ್ಲೂಕು	ಶ್ರೀ ಎಸ್. ಆರ್. ಚಂದ್ರ ಸ್ಮಾರಕ ದತ್ತಿ	ರೂ. 10,000/-	22.3.2002
10.	ಶ್ರೀ ಕೆ. ಮೋಹನರಾವ್ ಮತ್ತು ಸಹೋದರರು, ಪುತ್ತೂರು ತಾಲ್ಲೂಕು	ಪುತ್ತೂರು ಕ್ಯೊಲಾ ಶ್ರೀನಿವಾಸರಾವ್ ಶ್ರೀತಾರಾ ಸ್ಮಾರಕ ದತ್ತಿ	ರೂ. 10,000/-	22.3.2002
11.	ಶ್ರೀ ಹಾಜಿ ಅಬ್ದುಲ್ ಖಾದರ್, ದ.ಕ.ಜಿಲ್ಲೆ	ಹಾಜಿ ಜಿ. ಅಬ್ದುಲ್ ಖಾದರ್ ಹಾಜಾಜಿ [illegible] ಇಂಡಸ್ಟ್ರೀಸ್ ದತ್ತಿ	ರೂ. 10,000/-	22.3.2002
12.	ಶ್ರೀ ಸೀರ್ಕಜೆ ಸುಬ್ರಾಯ ಭಟ್, ಬಂಟ್ವಾಳ ತಾ||	ಸೀರ್ಕಜೆ ಸುಬ್ರಾಯ ಭಟ್ ಮತ್ತು ಸ[illegible]ದರರು ದತ್ತಿ	ರೂ. 10,000/-	22.3.2002
13.	ಶ್ರೀ ದಾಮೋದರಗೌಡ ಬೊಟ್ಟಕೇರಿ, ದ.ಕ.ಜಿಲ್ಲೆ	ಬಿ. ಕೊರಗಪ್ಪಗೌಡ ದತ್ತಿ	ರೂ. 10,000/-	22.3.2002
14.	ಶ್ರೀ ಪಿರ್ಯ ಚಂದ್ರಬಾಗಿ ರೈ, ದ.ಕ.ಜಿಲ್ಲೆ	ಪಿರ್ಯ ಚಂದ್ರಬಾಗಿ ರೈ ಮತ್ತು ಕೃಷ್ಣ ರೈ ದತ್ತಿ	ರೂ. 10,111/-	22.3.2002

15. ಶ್ರೀ ಕುರಿಯ ವೆಂಕಟರಮಣ ಭಟ್ಟ ಸಹೋದರರು, ಕಾಸರಗೋಡು ಜಿಲ್ಲೆ	ಕುರಿಯ ವಿಠಲಶಾಸ್ತ್ರಿರಾಮಾಶಾಸ್ತ್ರಿದತ್ತಿ	ರೂ. 10,000/-	28.3.2003
16. ಶ್ರೀ ಎಲ್.ಎಸ್. ಕೂಡೂರು, ಬಂಟ್ವಾಳ ತಾ॥	ಕೂಡೂರು ಕೃಷ್ಣಭಟ್ ದತ್ತಿ	ರೂ. 10,000/-	28.3.2003
17. ಶ್ರೀ ಉದಯಶಂಕರ ನೀರ್ಪಾಜೆ, ಬಂಟ್ವಾಳ ತಾ॥	ನೀರ್ಪಾಜೆ ಭೀಮಭಟ್ ದತ್ತಿ	ರೂ. 10,500/-	11.4.2003
18. ಶ್ರೀ ಎಳತ್ತೂರು ರಾಮಚಂದ್ರಭಟ್, ಮಂಗಳೂರು ತಾ॥	ಎಳತ್ತೂರು ಗೋಪಾಲಕೃಷ್ಣ ದತ್ತಿ	ರೂ. 30,000/-	26.7.2003
19. ಶ್ರೀ ಪಿ. ವಾದಿರಾಜರಾವ್ ಬೆಂಗಳೂರು	ಕುತ್ತೆತ್ತೂರು ಗುರುರಾಜ ಆಚಾರ್ ದತ್ತಿ	ರೂ. 15,000/-	29.7.2003
20. ಶ್ರೀ ಬಾಲಕೃಷ್ಣ ಕೊಡಂಕಿರಿ, ಸುಳ್ಯ	ಶ್ರೀ ಕೊಡಂಕಿರಿ ಕೇಶವಭಟ್ ದತ್ತಿ	ರೂ. 10,000/-	1.9.2003
ಮೈಸೂರು ಜಿಲ್ಲೆ			
1. ಡಾ॥ ಆರ್. ವೆಂಕಟೇಶ್, ಟಿ. ನರಸೀಪುರ	ವಿಶ್ವಸಮಾಜ ದತ್ತಿ	ರೂ. 10,000/-	30.7.2004
ಕೊಡಗು ಜಿಲ್ಲೆ			
1. ಶ್ರೀಮತಿ ಕೆ.ಸಿ. ವಿರಾಜಪೇಟೆ	ಮೊನ್ನಂದ ಕೆ. ಚಂಗಪ್ಪ ಜ್ಞಾಪಕ ದತ್ತಿ	ರೂ. 10,000/-	13.11.2002
2. ಶ್ರೀಮತಿ ಜಿ.ಜಿ. ವಸಂತ, ಮಡಿಕೇರಿ	ದಿ. ಕೊಡಗಿನ ಗೌರಮ್ಮ ದತ್ತಿ	ರೂ. 15,000/-	13.11.2002
3. ಶ್ರೀ ಎಸ್.ಎನ್. ವಿಜಯಶಂಕರ್, ಮಡಿಕೇರಿ	ಭಾರತಿಸುತ ಕಾದಂಬರಿ ಸಣ್ಣಕಥೆ ಸಂಕಲನ ದತ್ತಿ	ರೂ. 1,10,000/-	4.11.2003
ಕೊಪ್ಪಳ ಜಿಲ್ಲೆ			
1. ಶ್ರೀ ಗಿರಿಯಪ್ಪ ಹೊಸಕೇರಾ ಸೋದರರು, ಗಂಗಾವತಿ	ದಿ। ರಾಜಶೇಖರಪ್ಪ ಹೊಸಕೇರಾ ದತ್ತಿ	ರೂ. 10,000/-	16.4.2002
2. ಶ್ರೀ ದರಣ್ಣ ಈಶ್ವರಪ್ಪ ಮುನವಳ್ಳಿ ಸೋದರರು, ಗಂಗಾವತಿ	ದಿ। ಶ್ರೀಮತಿ ಚನ್ನಬಸಮ್ಮ ಈಶ್ವರಪ್ಪ ಮುನವಳ್ಳಿ ದತ್ತಿ	ರೂ. 10,000/-	16.4.2002
3. ಶ್ರೀ ಡಿ. ಸುಬ್ರಹ್ಮಣ್ಯ ದರೋಜಿ ಹಾಗೂ ಸೋದರರು, ಗಂಗಾವತಿ	ದಿ। ಗೋವರ್ಧನ ರಾಮಚಂದ್ರಪ್ಪ ದರೋಜಿ ದತ್ತಿ	ರೂ. 10,000/-	16.4.2004
ಗುಲ್ಬರ್ಗ ಜಿಲ್ಲೆ			

1.	ಡಾ। ರಮೇಶ ವೆಂಕಟೇಶ ಐನಾಪುರ, ಸೇಡಂ	ಶ್ರೀಮತಿ ಗೌರಮ್ಮ ವೆಂಕಟೇಶ ಐನಾಪುರ ದತ್ತಿ	ರೂ. 10,000/-	7.2.2002
2.	ಶ್ರೀ ರಾಘವೇಂದ್ರರಾವ್ ಹಣಮಂತರಾವ್ ಕುಲಕರ್ಣಿ, ಕಲಬುರ್ಗಿ	ಶ್ರೀಮತಿ ಶಕುಂತಲಾ ರಾಘವೇಂದ್ರರಾವ್ ಕುಲಕರ್ಣಿ ದತ್ತಿ	ರೂ. 10,000/-	5.3.2002
3.	ಶ್ರೀ ನರಸಿಂಗರಾವ್, ರಾಯಚೂರು	ಡಾ। ಮಂದಾಕಿನಿ ದತ್ತಿ	ರೂ. 10,000/-	17.3.2003
4.	ಡಾ।। ವಸುದೇವರಾವ್ ವೆಂಕಟರಾವ್ ಕುಲಕರ್ಣಿ, ಚಿಂಚೋಳಿ	ಶ್ರೀಮತಿ ಕಮಲಾಬಾಯಿ ವೆಂಕಟರಾವ್ ಕುಲಕರ್ಣಿ ಸಾಲೇಬೀರನಹಳ್ಳಿ ದತ್ತಿ	ರೂ. 10,000/-	23.9.2003
5.	ಶ್ರೀ ಶರಣ ಕೆ. ಕುಮಾರ್ ದೋಖಾ, ಯಾದಗಿರಿ ತಾಲ್ಲೂಕು	ಸೀತಾಬಾಯಿ ಕೇವಲಚಂದ್ ದೋಖಾ ಸೈದಾಪುರ ದತ್ತಿ	ರೂ. 10,000/-	19.11.2003
6.	ಡಾ।। ಶೈಲಜಾ ಉಡಚಣ, ಗುಲ್ಬರ್ಗಾ	ಗಿರಿಶಿಖರ ಪ್ರತಿಷ್ಠಾನ ದತ್ತಿ	ರೂ. 15,000/-	7.9.2004
7.	ಶ್ರೀ ಭೀಮಣ್ಣಗೌಡ ಮಾ.ಪಾ.ಕ್ಯಾತ್ನಾಳ, ಯಾದಗಿರಿ ತಾ।।	ಶ್ರೀಮತಿ ಸಿದ್ದಲಿಂಗಮ್ಮ-ಸಿದ್ದಣ್ಣಗೌಡ ದತ್ತಿ	ರೂ. 10,000/-	8.9.2004
ಉತ್ತರ ಕನ್ನಡ ಜಿಲ್ಲೆ				
1.	ಶ್ರೀ ಲಕ್ಷ್ಮೀನಾರಾಯಣ ಹೆಗಡೆ, ಸಿದ್ದಾಪುರ	ಡಾ. ಎಲ್.ಆರ್. ಹೆಗಡೆ ದತ್ತಿ	ರೂ. 10,000/-	5.7.2002
2.	ಡಾ. ಎಲ್.ಆರ್.ಹೆಗಡೆ, ಸಿದ್ದಾಪುರ	ಹೆಚ್.ಕೃಷ್ಣಶೇಟ್ ಸ್ಮಾರಕ ದತ್ತಿ	ರೂ. 10,000/-	7.9.2002
ಮಂಡ್ಯ ಜಿಲ್ಲೆ				
1.	ಶ್ರೀ ಟಿ.ಮನೋಹರ, ಶ್ರೀರಂಗಪಟ್ಟಣ	ಶ್ರೀಮತಿ ಸುಶೀಲಾಬಾಯಿ ದತ್ತಿ	ರೂ. 10,000/-	9.1.2002
2.	ಶ್ರೀ ಟಿ. ಮನೋಹರ ಶ್ರೀರಂಗಪಟ್ಟಣ	ದಿ. ತುಕ್ಕೋಜಿರಾವ್ ದತ್ತಿ	ರೂ. 10,000/-	9.1.2002
3.	ಶ್ರೀ ಎಲ್.ಬಿ. ಬಸವರಾಜ, ಕೆ.ಆರ್.ಪೇಟೆ ತಾ.	ಶ್ರೀಮತಿ ತಿಮ್ಮಮ್ಮ ಬಸವೇಗೌಡ ಅಲಿಯಾಸ್ ಕುಳ್ಳಪ್ಪ ದತ್ತಿ	ರೂ. 10,000/-	20.5.2002
4.	ಶ್ರೀ ಆರ್. ಎಂ. ಚಂದ್ರಶೇಖರ, ಮಳವಳ್ಳಿ	ದಿ. ಬಿ.ಪಿ. ನಾಗರಾಜಮೂರ್ತಿ ಸ್ಮಾರಕ ದತ್ತಿ	ರೂ. 10,000/-	14.3.2002
5.	ಶ್ರೀ ಎಸ್.ಎಂ. ಶಂಕರ್, ಮದ್ದೂರು	ದಿ. ಶ್ರೀಮತಿ ತಾಯಮ್ಮ ಶ್ರೀ ಎಸ್.ಸಿ. ಮಲ್ಲಯ್ಯ ಪ್ರಶಸ್ತಿ ದತ್ತಿ	ರೂ. 3,00,001/-	17.7.2002

ಧಾರವಾಡ ಜಿಲ್ಲೆ

1. ಶ್ರೀಮತಿ ಎನ್.ಐ. ಪಟ್ಟಣಶೆಟ್ಟಿ, ಹುಬ್ಬಳ್ಳಿ	ಚನ್ನಮ್ಮಾಲಾ ಈರಮ್ಮ ಪಟ್ಟಣಶೆಟ್ಟಿ ದತ್ತಿ	ರೂ. 10,000/-	1.10.2002
2. ಶ್ರೀ ಎಸ್.ಬಿ. ಯಕ್ಕುಂಡಿ ಡಿ.ಮಠ, ಹುಬ್ಬಳ್ಳಿ	ಲಿಂ। ಮಾತುಶ್ರೀ ಅಂದಾನಮ್ಮನವರು ಯಕ್ಕುಂಡಿಮಠ ದತ್ತಿ	ರೂ. 10,000/-	18.12.2003

ಬಳ್ಳಾರಿ ಜಿಲ್ಲೆ

1. ಶ್ರೀ ಅಕ್ಕಿ ಕೊಟ್ರಪ್ಪ ಹಗರಿಬೊಮ್ಮನಹಳ್ಳಿ	ಅಕ್ಕಿ ಬಸಣ್ಣ ಸ್ಮರಣಾರ್ಥ ದತ್ತಿ	ರೂ. 10,000/-	13.8.2001
2. ಶ್ರೀಮತಿ ಸುಮತಿ ವಿವೇಕಾನಂದ, ದಾವಣಗೆರೆ	ಡಾ.ಸಿದ್ದನಗೌಡ ಮತ್ತು ಶ್ರೀಮತಿ ಹನುಮಂತಮ್ಮ ದತ್ತಿ	ರೂ. 10,000/-	4.2.2002
3. ಶ್ರೀ ತೆಗ್ಗಿನಮಠದ ಚಂದ್ರಶೇಖರಯ್ಯ, ಹರಪನಹಳ್ಳಿ	ತೆಗ್ಗಿನಮಠದ ವೀರಮ್ಮ ಶಿವಶಂಕರಯ್ಯ ದತ್ತಿ	ರೂ. 10,000/-	12.11.2002
4. ಶ್ರೀ ಕೆ.ಬಿ. ಸಂಜೀವಪ್ರಸಾದ್, ಬಳ್ಳಾರಿ	ಪ್ರೊ. ಕೆ.ಬಿ. ಹನುಮಂತರಾಯರ ದತ್ತಿ	ರೂ. 10,000/-	11.12.2002
5. ಶ್ರೀಮತಿ ಕುಪ್ಪಗಲ್ಲು ಕೊಟ್ರಮ್ಮ, ಬಳ್ಳಾರಿ	ದಿ. ಕುಪ್ಪಗಲ್ಲು ನಾಗಪ್ಪನವರ ಸ್ಮರಣಾರ್ಥ ದತ್ತಿ	ರೂ. 10,000/-	2.12.2002
6. ಶ್ರೀಮತಿ ಟಿ.ಎಸ್. ಗಿರಿಜಮ್ಮ ಮೃತ್ಯುಂಜಯಪ್ಪ ಹೂವಿನ ಹಡಗಲಿ	ಟಿ.ಎಸ್. ಮೃತ್ಯುಂಜಯಪ್ಪ ದತ್ತಿ	ರೂ. 10,000/-	23.12.2002
7. ಶ್ರೀ ಪಾಟೀಲ ಸೋಮಶೇಖರಗೌಡ, ಹೂವಿನ ಹಡಗಲಿ	ಪಾಟೀಲ ಅನ್ನದಾನಗೌಡರು-ಪಾಟೀಲ ಚನ್ನಗೌಡರ ಸ್ಮಾರಕ ದತ್ತಿ	ರೂ. 10,000/-	20.5.2003
8. ಶ್ರೀ ಕೆ.ಎಂ. ಈಶ್ವರಯ್ಯ ಹೊಸಪೇಟೆ ತಾ॥	ಕೆ.ಎಂ. ಈಶ್ವರಯ್ಯ ದತ್ತಿ	ರೂ. 10,000/-	28.11.2003
9. ಅರವಿ ಬಸವನಗೌಡ, ಹೊಸಪೇಟೆ ತಾ॥	ಶ್ರೀಮತಿ ಅರವಿ ಪಾರ್ವತಮ್ಮ ಅರವಿ ಮಲ್ಲೇಶಪ್ಪ ದತ್ತಿ	ರೂ. 10,000/-	28.11.2003
10. ಶ್ರೀ ಟಿ.ಎಚ್.ಎಂ. ಬಸವರಾಜ, ಬಳ್ಳಾರಿ	ಟಿ.ಎಚ್.ಎಂ. ಶಿವಯ್ಯ ಮತ್ತು ಟಿ.ಎಚ್.ಎಂ. ಶಿವಗಂಗಮ್ಮ ದತ್ತಿ	ರೂ. 10,000/-	9.2.2001
11. ಶ್ರೀ ಹೆಚ್.ಚಂದ್ರಶೇಖರಗೌಡ, ಬಳ್ಳಾರಿ	ಶ್ರೀಮತಿ ಹೆಚ್. ಕಮಲಮ್ಮ ಡಾ॥ ಬಸವನಗೌಡ ದತ್ತಿ	ರೂ. 10,000/-	9.2.2001
12. ಶ್ರೀಮತಿ ಹೆಚ್.ಎಂ. ವಿಮಲಾ ಶಿವಾನಂದಯ್ಯ, ಹೊಸಪೇಟೆ	ಟಿ.ಹೆಚ್. ಎಂ. ಸದಾಶಿವಯ್ಯ- ಟಿ.ಹೆಚ್.ಎಂ. ಸರ್ವಮಂಗಳಮ್ಮ ದತ್ತಿ	ರೂ. 10,000/-	9.2.2001

13. ಶ್ರೀ ವೈ. ರಾಜಶೇಖರ, ಶ್ರೀ ವೈ. ಬಸವರಾಜ ಶ್ರೀ ವೈ ಚೆಂಗಳಪ್ಪ, ಬಳ್ಳಾರಿ	ರಾವ್ ಬಹದ್ದೂರ್ ಶ್ರೀ ವೈ. ಮಹಾಬಲೇಶ್ವರ ದತ್ತಿ	ರೂ. 10,000/-	9.2.2004
14. ಧರ್ಮದರ್ಶಿ ಶ್ರೀ ಎರ್ರಿಸ್ವಾಮಿ ಜಿನ ಸಮಾಧಿಮಠ, ಬಳ್ಳಾರಿ ಜಿಲ್ಲೆ	ಶ್ರೀ ಎರ್ರಿಸ್ವಾಮಿ ಸಂಸ್ಮರಣ ದತ್ತಿ	ರೂ. 10,000/-	19.2.2004
15. ಶ್ರೀ ವಿರೂಪಾಕ್ಷಪ್ಪ ತಿಪ್ಪಾರೆಡ್ಡಿ, ಕೊಪ್ಪಳ	ಗದ್ದಿಕೆರೆ ತಿಪ್ಪಾರೆಡ್ಡಿ ಷಣ್ಮುಖಪ್ಪ ಮತ್ತು ನಾಗಮ್ಮ ಸ್ಮಾರಕ ದತ್ತಿ	ರೂ. 10,000/-	27.2.2004
16. ಶ್ರೀ ಕೆ.ಎಸ್. ವೀರಭದ್ರಪ್ಪ ಸಂಡೂರು	ಶ್ರೀಮತಿ ಅನ್ನಪೂರ್ಣಮ್ಮ ಸಂಗಮ ದತ್ತಿ	ರೂ. 10,000/-	26.3.2004
17. ಶ್ರೀ ಸತೀಶಕುಮಾರ್ ಛತ್ರಿಕೆ, ಸಂಡೂರು ತಾ॥	ಛತ್ರಿಕೆ ರುದ್ರಪ್ಪ ದತ್ತಿ	ರೂ. 10,000/-	26.3.2004
18. ಡಾ। ಕೆ.ಎಂ. ಸುರೇಶ್, ಹೊಸಪೇಟೆ	ದಿ॥ ಕೌಕುಬಾಳು ಮಠದ ಜಂಬಮ್ಮ ಮತ್ತು ಪಾರ್ವತಮ್ಮ ದತ್ತಿ	ರೂ. 10,000/-	15.4.2004
19. ಶ್ರೀ ಕೆ.ಸಿ. ಕೊಂಡಯ್ಯ, ಬಳ್ಳಾರಿ	ದಿ॥ ಕೆ.ವಿ. ತಿರುಪಾಲಪ್ಪ ದತ್ತಿ	ರೂ. 1,00,000/-	26.4.2004
20. ಶ್ರೀ ಬಿ.ಸದಾಶಿವ, ಹೊಸಪೇಟೆ	ಶ್ರೀಮತಿ ದೇವರಮನಿ ಶಾರದಮ್ಮ ಚನ್ನಪ್ಪ ದತ್ತಿ	ರೂ. 10,000/-	8.7.2004
21. ಶ್ರೀ ಜಿ. ಕರುಣಾಕರರೆಡ್ಡಿ ಮತ್ತು ಸಹೋದರರು, ಬಳ್ಳಾರಿ	ಶ್ರೀಮತಿ ಜಿ. ರುಕ್ಮಿಣಮ್ಮ ಮತ್ತು ದಿ॥ ಶ್ರೀ ಜಿ. ಚಂಗಾರೆಡ್ಡಿ ದತ್ತಿ	ರೂ. 1,00,000/-	17.8.2004
22. ಶ್ರೀ ಜಿ. ಉಮೇಶ್, ಕೂಡ್ಲಿಗಿ	ಚಿಕ್ಕೋಬನಹಳ್ಳಿ ಶ್ರೀಮತಿ ಶಂಕರಮ್ಮ ದತ್ತಿ	ರೂ. 10,000/-	21.9.2004
23. ಶ್ರೀ ಚೂರನೂರು ಟಿ. ಕೊಟ್ರಪ್ಪ, ಬಳ್ಳಾರಿ	ದಿ॥ ಚೂರನೂರು ಡಾ॥ ಟಿ.ಕೆ. ಬಸವರಾಜ್‌ದತ್ತಿ	ರೂ. 10,000/-	21.9.2004
ಗದಗ ಜಿಲ್ಲೆ			
1. ಶ್ರೀ ಎಲ್.ಸಿ. ಲಿಂಬಯ್ಯಸ್ವಾಮಿ ಮಠ, ಗದಗ ಜಿಲ್ಲೆ	ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನ ದತ್ತಿ	ರೂ. 10,000/-	20.9.2001
2. ಶ್ರೀ ಶರಣ ಚನ್ನಬಸಪ್ಪ ಗುರುಲಿಂಗಪ್ಪ ಕಂಠಿ, ನರಗುಂದ	ಶರಣೆ ಶಕುಂತಲಾ ಚನ್ನಬಸಪ್ಪ ಕಂಠಿ ದತ್ತಿ	ರೂ. 10,000/-	13.3.2002
3. ಶ್ರೀ ಫಕೀರಪ್ಪ ಗುರಪ್ಪ ಗುರಣ್ಣನವರ, ಗದಗ	ಶ್ರೀಮತಿ ಸಿದ್ದು ಮತಿದೇವಿ ಎಫ್. ಗುರಣ್ಣನವರ ದತ್ತಿ	ರೂ. 10,000/-	16.4.2002
4. ಶ್ರೀ ಎಂ.ಜಿ. ಮಹಾಂತ ಶೆಟ್ರು, ಶಿರಹಟ್ಟಿ	ಶ್ರೀ ಎಂ.ಜಿ. ಮಹಾಂತ ಶೆಟ್ರು ದತ್ತಿ	ರೂ. 10,000/-	27.6.2002

5.	ಶ್ರೀ ಹರಿದಾಸ ಭಟ್, ಗದಗ	ಶ್ರೀ ನಾರಾಯಣಭಟ್ ಶಿವಪೂರ ದತ್ತಿ	ರೂ. 10,000/-	28.8.2002
6.	ಡಾ|| ಎಸ್. ಸಿ. ಮಲ್ಲಾಡದ, ಲಕ್ಷ್ಮೇಶ್ವರ	ಡಾ|| ಎಸ್.ಸಿ. ಮಲ್ಲಾಡದ ದತ್ತಿ	ರೂ. 10,000/-	28.8.2002
7.	ಶ್ರೀ ಚಂದ್ರಶೇಖರ ಹನುಮಸಾಗರ, ಗದಗ	ಶ್ರೀಮತಿ ಪಾರ್ವತಿ ಚಂದ್ರಶೇಖರ ಹನುಮಸಾಗರ ದತ್ತಿ	ರೂ. 10,000/-	28.8.2002
8.	ಶ್ರೀ ಕು.ಶಿ. ಜಯದೇವ ಭಟ್, ಗದಗ	ಕು.ಶಿ. ಸಂಸ್ಕರಣ ದತ್ತಿ	ರೂ. 10,000/-	11.9.2002
9.	ಶ್ರೀ ಶಿವಣ್ಣ ಬ. ಕೋಳಿವಾಡ, ಲಕ್ಷ್ಮೇಶ್ವರ	ಶ್ರೀ ಶಿವಣ್ಣ ಬ. ಕೋಳಿವಾಡ ದತ್ತಿ	ರೂ. 10,000/-	20.3.2003
10.	ಶ್ರೀ ಹೇಮಾದ್ರಪ್ಪ ಬಸಪ್ಪ ತಡಸದ, ನರಗುಂದ	ಶರಣೆ ಮಹಾದೇವಿ ಹೇಮಾದ್ರಪ್ಪ ತಡಸದ ದತ್ತಿ	ರೂ. 10,000/-	21.10.2003
11.	ಶ್ರೀ ಸಂಗಪ್ಪ ಬಾಳಪ್ಪ ಕುಷ್ಟಗಿ, ನರಗುಂದ	ಲಿಂ। ಶ್ರೀಮತಿ ಗೌರಮ್ಮತಾಯಿ ಬಾಳಪ್ಪ ಕುಷ್ಟಗಿ ದತ್ತಿ	ರೂ. 10,000/-	18.11.2003
ಹಾವೇರಿ				
1.	ಪ್ರೊ. ಪಿ.ಸಿ. ಹೀರೇಮಠ, ಶಿಗ್ಗಾಂವಿ	ದಿ|| ಚನ್ನವೀರಯ್ಯ ಹಿರೇಮಠ ಸ್ಮರಣಾರ್ಥ ಪಿ.ಸಿ.ಹಿರೇಮಠ ದತ್ತಿ	ರೂ. 10,000/-	5.11.2001
2.	ಶ್ರೀ ಸಿ. ಎಂ. ಪಟ್ಟಣಶೆಟ್ಟಿ-ಸಿ.ಎನ್.ಪಾಟೀಲ, ಹಾವೇರಿ	ಶ್ರೀ ಸಿ. ಎಂ. ಪಟ್ಟಣಶೆಟ್ಟಿ-ಸಿ.ಎನ್. ಪಾಟೀಲ ದತ್ತಿ	ರೂ. 10,000/-	22.2.2002
3.	ಶ್ರೀ ಬಸವರಾಜ ಗು. ಸಿಂಧೂರ, ಸವಣೂರು	ಲಿಂ। ಶ್ರೀ ಮ.ನಿ.ಪ್ರಸಿಂದಗಿ ಶಾಂತಾವೀರ ಪಟ್ಟಾಧ್ಯಕ್ಷರು ಹಾವೇರಿ ದತ್ತಿ	ರೂ. 10,000/-	5.11.2001
4.	ದಯಾಲಜಿ ಬಾಯಿ, ಸವಣೂರು	ದಯಾಲಜಿ ಬಾಯಿ ದತ್ತಿ	ರೂ. 10,000/-	5.11.2001
5.	ಶ್ರೀ ಷ.ಬ್ರ.ಒಡೆಯರ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ರಾಣೇಬೆನ್ನೂರು	ಶ್ರೀ ಶೈಲ ಜಗದ್ದುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸ್ಮಾರಕ ದತ್ತಿ	ರೂ. 25,000/-	3.4.2002
6.	ಶ್ರೀ ಮ.ನಿ.ಪ್ರ. ಗುದ್ದಲೀಶ್ವರ ಸ್ವಾಮಿ, ಹಾವೇರಿತಾ||	ಗುದ್ದಲೀಶ್ವರ ಸಂಗೀತೋತ್ಸವ ದತ್ತಿ	ರೂ. 10,000/-	1.8.2002
7.	ಶ್ರೀ ವಿಶ್ವನಾಥ ಚೌಶೆಟ್ಟಿ ಧಾರವಾಡ	ದಿ|| ಚನ್ನಪ್ಪ ಚೌಶೆಟ್ಟಿ ಸ್ಮರಣಾರ್ಥ ದತ್ತಿ	ರೂ. 15,000/-	8.3.2002
8.	ಅಧ್ಯಕ್ಷರು, ತಾ|| ಕ.ಸಾ.ಪ.ಬ್ಯಾಡಗಿ	ಮಹಿಳಾ ಸಮಗ್ರ ಸಾಹಿತ್ಯ ದತ್ತಿ	ರೂ. 15,000/-	11.11.2002
9.	ಅಧ್ಯಕ್ಷರು, ತಾ|| ಕ.ಸಾ.ಪ.ಬ್ಯಾಡಗಿ	ವಿದ್ಯಾರ್ಥಿಗಳಿಗೆ ಕಥಾ ರಚನಾ ಕಮ್ಮಟ ದತ್ತಿ	ರೂ. 15,000/-	11.11.2002

10. ಅಧ್ಯಕ್ಷರು ತಾ।। ಕ.ಸಾ.ಪ ಬ್ಯಾಡಗಿ	ತಾಲ್ಲೂಕು ದರ್ಶನ ಸಾಹಿತ್ಯ ದತ್ತಿ	ರೂ. 15,000/-	11.11.2002
11. ಅಧ್ಯಕ್ಷರು, ತಾ।। ಕ.ಸಾ.ಪ. ಬ್ಯಾಡಗಿ	ಹಾವೇರಿ ಜಿಲ್ಲಾ ಸಾಹಿತಿಗಳ ಬದುಕು-ಬರಹ ದತ್ತಿ	ರೂ. 10,000/-	11.11.2002
12. ಶ್ರೀ ರುದ್ರಪ್ಪ ವೀರಪ್ಪ ಕದರಮಂಡಲಗಿ, ಹಾವೇರಿ	ಶ್ರೀಮತಿ ಶಾಂತಮ್ಮ ಪಿ. ಕದರಮಂಡಲಗಿ ದತ್ತಿ	ರೂ. 12,000/-	15.12.2002
13. ಶ್ರೀ ವ್ಹಿ.ಬಿ. ಗಂಗನಗೌಡರು, ರಾಣೇಬೆನ್ನೂರು	ದಿ।। ಪರಮೇಶ್ವರಪ್ಪ ಹೂಲಿಹಳ್ಳಿ(ಪಾಟೀಲ) ದತ್ತಿ	ರೂ. 10,000/-	7.1.2003
14. ಶ್ರೀಮತಿ ಶೋಭಾ ರಾಜಶೇಖರ ಮೊಗಾವಿ, ಹಾವೇರಿ	ದಿ। ಪ್ರಕಾಶ ಚನ್ನಬಸಪ್ಪ ಮೊಗಾವಿ ಸ್ಮರಣಾರ್ಥ ದತ್ತಿ	ರೂ. 10,000/-	12.5.2003
15. ಶ್ರೀ ಗುರುಶಾಂತಪ್ಪ ಅಡಿವೆಪ್ಪ ಲಕ್ಷ್ಮೇಶ್ವರ, ಶಿಗ್ಗಾಂವಿ ತಾಲ್ಲೂಕು	ಗುರುಶಾಂತಪ್ಪ ಅಡಿವೆಪ್ಪ ಲಕ್ಷ್ಮೇಶ್ವರ ದತ್ತಿ	ರೂ. 10,000/-	3.3.2004
16. ವ್ಯವಸ್ಥಾಪಕರು, ಬ್ಯಾಡಗಿ ಶಿಕ್ಷಣ ಸಂಸ್ಥೆ ವರ್ತಕರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬ್ಯಾಡಗಿ	ವರ್ತಕರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ದತ್ತಿ	ರೂ. 10,000/-	18.10.2004
ಹಾಸನ ಜಿಲ್ಲೆ			
1. ಶ್ರೀ ಜಿ.ವಿ. ಸಿದ್ದಪ್ಪ ಅರಸೀಕೆರೆ	ದಿ।। ಜಿ.ಎಸ್. ವೀರಣ್ಣ ಶ್ರೀಮತಿ ಶಾರದಮ್ಮ ದತ್ತಿ	ರೂ. 10,000/-	25.11.2003
ಚಿಕ್ಕಮಗಳೂರು ಜಿಲ್ಲೆ			
1. ಶ್ರೀ ನಾಗರಾಜ ಶ್ರೇಷ್ಠಿ, ಕೊಪ್ಪ ತಾ।।	ದಿ. ಎಂ.ಎಸ್. ವೆಂಕಟರಮಣಶೆಟ್ಟಿ ಜಯಪುರ ದತ್ತಿ	ರೂ. 10,000/-	23.4.2003
2. ಶ್ರೀ ಗೌ.ಮ. ಓಂಕಾರಯ್ಯ ವ.ರುದ್ರಯ್ಯ ಸಾರಾಪುರ, ತರೀಕೆರೆ ತಾಲ್ಲೂಕು	ಶ್ರೀ ರುದ್ರಯ್ಯ ಶ್ರೀಮತಿ ಪಾರ್ವತಮ್ಮ ದತ್ತಿ	ರೂ. 10,000/-	6.5.2002
3. ಶ್ರೀ ಬಿ.ವಿ. ಯೋಗೀಶ್ ಮತ್ತು ಮಕ್ಕಳು, ತರೀಕೆರೆ	ಶ್ರೀಮತಿ ಗಿರಿಜಾ ಯೋಗೀಶ್ ದತ್ತಿ	ರೂ. 10,000/-	6.5.2002
4. ಶ್ರೀ ಕೆ.ಪಿ. ಚಂದ್ರಮೌಳಿ, ಚಿಕ್ಕಮಂಗಳೂರು ತಾ।।	ಶ್ರೀಮತಿ ಕೆ.ಪಿ. ವೆಂಕಟಲಕ್ಷ್ಮಮ್ಮ ದತ್ತಿ	ರೂ. 10,000/-	13.5.2002
5. ಶ್ರೀಮತಿ ವಸುಮತಿ ಎನ್.ಮೂರ್ತಿ, ಕೊಪ್ಪ ತಾ।।	ದಿ.ಬಸರೀಕಟ್ಟೆ ನಾರಾಯಣಮೂರ್ತಿ ದತ್ತಿ	ರೂ. 10,000/-	13.5.2002
6. ಶ್ರೀ ಬಿ.ಆರ್. ಸುಬ್ರಾವ್, ಕೊಪ್ಪ ತಾ।।	ದಿ. ಬೇಡ್ಗಾಗರ್ ಸಾವಿತ್ರಮ್ಮ ಜಾನಕಮ್ಮ ದತ್ತಿ	ರೂ. 10,000/-	13.5.2002

7.	ಶ್ರೀಮತಿ ಎಸ್.ಜಿ. ಅರುಂಧತಿಯಮ್ಮ, ಕೊಪ್ಪ ತಾ||	ದಿ|| ನಂದೀಕುಳಿ ನಾರಾಯಣ ಭಟ್ ಗಂಗಾಧರ ಭಟ್ ದತ್ತಿ	ರೂ. 10,000/-	31.5.2002
8.	ಶ್ರೀ ಹೆಚ್.ಜೆ. ಲಕ್ಷ್ಮೀನಾರಾಯಣ, ಕೊಪ್ಪ ತಾ||	ಶ್ರೀ ಜನಾರ್ದನ ಭಟ್ ದತ್ತಿ	ರೂ. 10,000/-	31.5.2002
9.	ಶ್ರೀ ಬಿ.ವಿ. ಸತ್ಯನಾರಾಯಣರಾವ್, ಚಿಕ್ಕಮಗಳೂರು ಜಿಲ್ಲೆ	ಶ್ರೀ ಕೆ.ವಿಶ್ವೇಶ್ವರಯ್ಯ ಲಕ್ಷ್ಮೀದೇವಮ್ಮ ದತ್ತಿ	ರೂ. 10,000/-	10.6.2002
10.	ಶ್ರೀ ಹೆಚ್.ಎಸ್. ಚಂದ್ರಶೇಖರ, ನರಸಿಂಹರಾಜಪುರ	ದಿ. ಹೆಚ್.ಸೂರ್ಯನಾರಾಯಣರಾವ್-ಕಮಲಮ್ಮ ದತ್ತಿ	ರೂ. 10,000/-	10.6.2002
11.	ಶ್ರೀ ಬಿ.ಆರ್. ನೀಲಕಂಠಪ್ಪ, ತರೀಕೆರೆ	ದಿ. ಶ್ರೀಮತಿ ಸಿದ್ದಮ್ಮ ರುದ್ರಪ್ಪ ಬೆಟ್ಟದಹಳ್ಳಿ ದತ್ತಿ	ರೂ. 10,000/-	10.6.2002
12.	ಶ್ರೀ ಹಿರೇಮಗಳೂರು ಕಣ್ಣನ್. ಹೀರೇಮಗಳೂರು	ಹಿರೇಮಗಳೂರು ಕಣ್ಣನ್ ದತ್ತಿ	ರೂ. 10,000/-	13.5.2002
13.	ಶ್ರೀಮತಿ ಬಿ.ಸಿ. ಗೀತ, ಚಿಕ್ಕಮಂಗಳೂರು ಜಿಲ್ಲೆ	ದಿ. ಕೆ.ಟಿ. ಚನ್ನಯ್ಯಗೌಡ ಸ್ಮರಣಾರ್ಥ ದತ್ತಿ	ರೂ. 10,000/-	13.2.2002
14.	ಶ್ರೀಮತಿ ತುಳಸಮ್ಮ ಎ.ಸಿ.ರಾಮೇಗೌಡ, ಚಿಕ್ಕಮಗಳೂರು	ಶ್ರೀಮತಿ ತುಳಸಮ್ಮ ಎ.ಸಿ. ರಾಮೇಗೌಡ ದತ್ತಿ	ರೂ. 10,000/-	27.3.2003
15.	ಶ್ರೀಮತಿ ತುಳಸಮ್ಮ ಎ.ಸಿ. ರಾಮೇಗೌಡ, ಚಿಕ್ಕಮಗಳೂರು	ಶ್ರೀಮತಿ ಮಹಾಲಕ್ಷ್ಮಮ್ಮ ಮತ್ತು ತಿಮ್ಮಪ್ಪ ದತ್ತಿ	ರೂ. 10,000/-	27.3.2003
16.	ಶ್ರೀ ಸವ್ಯಸಾಚಿ, ಚಿಕ್ಕಮಗಳೂರು	ಶ್ರೀ ಸವ್ಯಸಾಚಿ ದತ್ತಿ	ರೂ. 10,000/-	10.4.2003
17.	ಶ್ರೀಮತಿ ಆರ್.ಪಿ. ಚೇತನ, ಚಿಕ್ಕಮಗಳೂರು	ಶ್ರೀಮತಿ ಲಲಿತಮ್ಮ ಟಿ. ಮತ್ತು ಆರ್.ವಿ. ಪಾಂಡುರಂಗ ದತ್ತಿ	ರೂ. 15,000/-	10.4.2003
18.	ಶ್ರೀ ಬಿ.ಆರ್. ಸದಾಶಿವಗೌಡ, ಚಿಕ್ಕಮಗಳೂರು ಜಿಲ್ಲೆ	ಕುಮಾರ್ ಬಿ.ಎಸ್. ಶಮಂತ್ ಸದಾಶಿವಗೌಡ ದತ್ತಿ	ರೂ. 15,000/-	10.4.2003
19.	ಶ್ರೀ ಬಿ.ಆರ್. ಲಕ್ಷ್ಮಣಗೌಡ, ಮೂಡಿಗೆರೆ ತಾ||	ಕುಮಾರಿ ಬಿ.ಎಲ್. ಶರ್ಮಿಳಾ ಲಕ್ಷ್ಮಣಗೌಡ ದತ್ತಿ	ರೂ. 10,000/-	10.4.2003
20.	ಡಾ||ಎಲ್.ಕೆ. ನಾಗೇಂದ್ರ ಶ್ರೇಷ್ಠಿ ಶೃಂಗೇರಿ	ಶ್ರೀಮತಿ ರತ್ನಮ್ಮ ಮತ್ತು ದಿ|| ಲಕ್ಕವಳ್ಳಿ ಕೃಷ್ಣಯ್ಯಶೆಟ್ಟಿ ದತ್ತಿ	ರೂ.15,000/-	10.4.2003
21.	ಶ್ರೀ ಬಿ.ಎಸ್. ಶಿವರುದ್ರಪ್ಪ-ಭಾರತಿ, ಚಿಕ್ಕಮಗಳೂರು	ಲಿಂ| ಶರಣ ಚಿಕ್ಕಬಸಪ್ಪ ಶರಣೆ ನಾಗಮ್ಮ ದತ್ತಿ	ರೂ. 10,000/-	10.4.2003

22. ಶ್ರೀ ಅಜ್ಜಂಪುರ ಜಿ. ಸೂರಿ ಮತ್ತು ಮಕ್ಕಳು, ಕಡೂರು	ಶ್ರೀಮತಿ ರತ್ನಮ್ಮ ಅಜ್ಜಂಪುರ ಜಿ. ಸೂರಿ ದತ್ತಿ	ರೂ. 10,000/-	10.4.2003
23. ಶ್ರೀ ಅರೇಕಲ್ ಎಸ್. ಚಂದ್ರಶೇಖರಪ್ಪ ಬೀರೂರು	ಶ್ರೀಮತಿ ಅರೇಕಲ್ ಹೇಮಾವತಿ ಚಂದ್ರಶೇಖರ್ ದತ್ತಿ	ರೂ. 10,000/-	10.4.2003
24. ಶ್ರೀ ಹಳೇಕೋಟೆ ಎಸ್. ಕುಮಾರ್, ಮೂಡಿಗೆರೆ	ಡಾ|| ಲಲಿತ ಹಳೇಕೋಟೆ ಕುಮಾರ್ ದತ್ತಿ	ರೂ. 15,000/-	12.5.2003
25. ಶ್ರೀ ಭೀಮೇಶ್ವರ ಜೋಷಿ, ಹೊರನಾಡು ಚಿಕ್ಕಮಗಳೂರು ಜಿಲ್ಲೆ	ಶ್ರೀ ಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ದೇವಸ್ಥಾನ ಹೊರನಾಡು ದತ್ತಿ	ರೂ. 15,000/-	20.5.2003
26. ಶ್ರೀ ಬಿ.ಎಲ್. ರಾಮದಾಸ್, ಚಿಕ್ಕಮಗಳೂರು	ಶ್ರೀಮತಿ ಜಿ.ಎ. ಲಲಿತಮ್ಮ ಲೋಕಪ್ಪಗೌಡ ದತ್ತಿ	ರೂ. 15,000/-	20.5.2003
27. ಶ್ರೀ ಎಸ್.ವಿ. ಮಂಜುನಾಥ, ಚಿಕ್ಕಮಗಳೂರು	ಸಾರಗೋಡು ವೆಂಕಟಪ್ಪಗೌಡ ದತ್ತಿ	ರೂ. 10,000/-	3.6.2003
28. ಡಾ| ಟಿ.ಎಂ. ಪ್ರಸಾದ್, ಚಿಕ್ಕಮಗಳೂರು	ಸೂರ್ಯಪ್ರಸಾದ್ ದತ್ತಿ	ರೂ. 10,000/-	2.9.2003
29. ಶ್ರೀ ಲಿಂಗದಳ್ಳಿ ಹಾಲಪ್ಪ ಕಡೂರು	ದಿ|| ಸೀತಮ್ಮ ಸಿದ್ದಪ್ಪ ಲಿಂಗದಹಳ್ಳಿ ದತ್ತಿ	ರೂ. 10,000/-	6.10.2003
30. ಶ್ರೀಮತಿ ಬಿ.ಪಿ. ರತ್ನಮ್ಮ ಚಿಕ್ಕಮಗಳೂರು	ಶ್ರೀ ಬಿ.ಜಿ. ಚಿದಂಬರ್ ದತ್ತಿ	ರೂ. 10,000/-	12.11.2003
31. ಶ್ರೀ ಮಂಜುನಾಥ ನಾಯ್ಕ ಕೊಪ್ಪ ತಾ||	ದಿ|| ನಾಗಪ್ಪ ನಾಯ್ಕ ದತ್ತಿ	ರೂ. 10,000/-	22.11.2003
32. ಶ್ರೀ ಜೆ.ಪಿ. ಈಶ್ವರೇಗೌಡ, ಚಿಕ್ಕಮಗಳೂರು	ಡಾ|| ಜೆ.ಬಿ. ನಿಂಗಮ್ಮ ಕೃಷ್ಣೇಗೌಡ ದತ್ತಿ	ರೂ. 10,000/-	22.11.2003
33. ಶ್ರೀ ಹೆಚ್.ಜೆ. ಚಂದ್ರೇಗೌಡ, ಚಿಕ್ಕಮಗಳೂರು	ದಿ|| ಶ್ರೀಮತಿ ಭದ್ರಮ್ಮ ಚಂದ್ರೇಗೌಡ ದತ್ತಿ	ರೂ. 10,000/-	22.11.2003
34. ಶ್ರೀ ಹೆಚ್.ಆರ್. ಗುರುನಾಥೇಗೌಡ, ಚಿಕ್ಕಮಗಳೂರು ಜಿಲ್ಲೆ	ಶ್ರೀಮತಿ ಜೆ.ಪಿ. ಯಶೋದಮ್ಮ ರಾಮೇಗೌಡ ದತ್ತಿ	ರೂ. 10,000/-	22.11.2003
35. ಶ್ರೀ ಎ. ರಮೇಶರಾವ್. ಆರೂರು, ಕೊಪ್ಪ	ಆರೂರು ರವಿರಾವ್ ಸ್ಮಾರಕ ದತ್ತಿ	ರೂ. 10,000/-	6.12.2003
36. ಡಾ|| ಫಿಲೋಮನಾ ಫೇರಿಸ್, ನರಸಿಂಹರಾಜಪುರ ತಾ||	ಡಾ|| ಫಿಲೋಮಿನಾ ಫೇರಿಸ್ ದತ್ತಿ	ರೂ. 10,000/-	6.12.2003

37. ಶ್ರೀಮತಿ ಗಾಯತ್ರಿ ಆರ್. ಭಟ್, ಶೃಂಗೇರಿ	ಡಾ॥ ಎಸ್.ಪಿ.ರಾಮಚಂದ್ರಭಟ್ ದತ್ತಿ	ರೂ. 10,000/-	6.12.2003
38. ಶ್ರೀಮತಿ ಓ.ಕೆ. ಸುಮಿತ್ರಮ್ಮ, ಶೃಂಗೇರಿ	ದಿ॥ ಎಲ್. ಗೋಪಾಲರಾವ್ ದತ್ತಿ	ರೂ. 10,000/-	6.12.2003
39. ಶ್ರೀ ಜಿ.ಎಸ್. ಕೃಷ್ಣಮೂರ್ತಿ, ಬೆಂಗಳೂರು	ದಿ. ಜಿ.ಕೆ. ಶ್ರೀನಿವಾಸ್ (ಮುರಳಿ) ಸ್ಮಾರಕ ದತ್ತಿ	ರೂ. 10,000/-	6.12.2003
39. ಶ್ರೀ ಎಸ್. ನಾಗರಾಜಶೆಟ್ಟಿ, ತರೀಕೆರೆ	ಶ್ರೀ ಎಸ್. ಸತ್ಯನಾರಾಯಣ ಶ್ರೇಷ್ಠಿ ದತ್ತಿ	ರೂ. 10,000/–	6.12.2003
40. ಡಾ॥ ಎಸ್. ಎಂ. ಮಂಜುನಾಥ್, ಕಡೂರು	ಶ್ರೀಮತಿ ಲಲಿತಮ್ಮ ಶ್ರೀ ಎಸ್. ಮುರುಗೇಂದ್ರಯ್ಯ ದತ್ತಿ	ರೂ. 10,000/–	6.12.2003
41. ಶ್ರೀ ಬಿಎಸ್. ನಾಗಾರಾಜರಾವ್, ಕಡೂರು	ಶ್ರೀಮತಿ ಯಶೋದಾಬಾಯಿ ಶ್ರೀ ಬಿ.ಎಂ.ಶ್ಯಾಮ್‌ರಾವ್ ದತ್ತಿ	ರೂ. 10,000/–	6.12.2003
42. ಶ್ರೀ ಹೆಚ್. ಆರ್. ರಮೇಶ್, ಚಿಕ್ಕಮಗಳೂರು	ದಿ॥ ಹೆಚ್. ಹೆಚ್. ರುದ್ರೇಗೌಡ ದತ್ತಿ	ರೂ. 10,000/–	6.12.2003
43. ಶ್ರೀ ಜಿ. ಎ. ಹರೀಶ್, ಚಿಕ್ಕಮಗಳೂರು	ದಿ॥ ಶ್ರೀ ಅಣ್ಣೇಗೌಡ ಶ್ರೀಮತಿ ರತ್ನಮ್ಮ ದತ್ತಿ	ರೂ. 10,000/–	8.1.2004
44. ಶ್ರೀ ಕೆ.ಆರ್. ಬಾಲಸುಬ್ರಹ್ಮಣ್ಯಂ, ಚಿಕ್ಕಮಗಳೂರು	ದಿ॥ ಕೌಳಿ ಕೆ.ಸಿ.ರಾಮಪ್ಪಗೌಡ ಸ್ಮಾರಕ ದತ್ತಿ	ರೂ. 10,000/–	16.2.2004
45. ಶ್ರೀಮತಿ ಸಾವಿತ್ರಮ್ಮ ನಾಗರಾಜಶೆಟ್ಟಿ ಬೀರೂರು	ದಿ॥ ನಾಗರಾಜಶೆಟ್ಟಿ ಮತ್ತು ಮಕ್ಕಳು ದತ್ತಿ	ರೂ. 10,000/–	16.2.2004
46. ಶ್ರೀ ಎಸ್.ಪಿ. ಮಂಜುನಾಥಗೌಡ,ಚಿಕ್ಕಮಗಳೂರು ಜಿಲ್ಲೆ	ದಿ॥ ಪುಟ್ಟಸ್ವಾಮಿಗೌಡ ದತ್ತಿ	ರೂ. 10,000/	16.2.2004
47. ಶ್ರೀ ಕೆ.ಎಸ್. ಅಜಿತಕುಮಾರ್, ಕೊಪ್ಪ ತಾ.	ದಿ॥ ಶ್ರೀಮತಿ ಸಾವಿತ್ರಮ್ಮ ಕದ್ರವಳ್ಳಿ ಸ್ಮಾರಕ ದತ್ತಿ	ರೂ. 10,000/–	16.2.2004
48. ಶ್ರೀ ಬಿ. ಎಸ್. ಸತೀಶ, ಕಡೂರು	ಶ್ರೀಮತಿ ರುಕ್ಮಿಣೀ ಶ್ರೀ ಬಿ.ಎನ್. ಸುಬ್ಬರಾಯಶೆಟ್ಟಿ ದತ್ತಿ	ರೂ. 10,000/–	16.2.2004
49. ಶ್ರೀ ಶಂ. ನ. ಶೇಷಗಿರಿ, ಕೊಪ್ಪ ತಾ.	ದಿ॥ ಶ್ರೀ ಸವುಡ ನರಸಿಂಹಭಟ್ ಸ್ಮಾರಕ ದತ್ತಿ	ರೂ. 10,000/–	16.2.2004
50. ಶ್ರೀ ಕೌಳಿ ಶ್ರೀನಿವಾಸ್, ಚಿಕ್ಕಮಗಳೂರು	ಕೌಳಿ ಸುಬ್ರಾಯಗೌಡ ಸ್ಮಾರಕ ದತ್ತಿ	ರೂ. 10,000/–	13.2.2004
51. ಶ್ರೀ ಡಿ. ಬಿ. ಚಂದ್ರೇಗೌಡ ಮೂಡಿಗೆರೆ ತಾ.	ಶ್ರೀ ಡಿ.ಬಿ.ಚಂದ್ರೇಗೌಡ	ರೂ 10,000/–	16.2.2004
52. ಶ್ರೀ ಬಿ.ಎಸ್.ಶಿವರುದ್ರಪ್ಪ, ಚಿಕ್ಕಮಗಳೂರು	ಲಿಂ। ಬೀಕನಹಳ್ಳಿ ರುದ್ರಪ್ಪ ಸ್ಮಾರಕ ದತ್ತಿ	ರೂ 10,000/–	16.2.2004
53. ಶ್ರೀಮತಿ ರಾಜಮ್ಮ ರಾಮಣ್ಣಗೌಡ, ಶೃಂಗೇರಿ	ಶ್ರೀಮತಿ ರಾಜಮ್ಮ ರಾಮಣ್ಣಗೌಡರು ಕಾಸುವಳ್ಳಿ ದತ್ತಿ	ರೂ 10,000/–	

54. ಈಶ್ವರಸ್ವಾಮಿ ಯುವಕ ರೈತ ಸಂಘ (ರಿ), [illegible] ತಾಲ್ಲೂಕು	ಕನ್ನಡ ಕಲಾಸಂಘ ದತ್ತಿ	ರೂ 10,000/-	
55. [illegible] ಎಂ.ಜಿ.ರತ್ನಾಕರ ಹೆಗಡೆ, [illegible]	ಶ್ರೀಮತಿ ನಾಗಮ್ಮ ಗುಂಡಪ್ಪ ಹೆಗಡೆ ದತ್ತಿ	ರೂ 10,000/-	
56. ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪ	ಡಾ॥ ಹ.ಪ.ಗಣಪತಿ ಪ್ರಭು ಸ್ಮಾರಕ ದತ್ತಿ	ರೂ 15,000/-	
57. ಶ್ರೀ ಜಿ. ರಾಜಪ್ಪ ಅಧ್ಯಕ್ಷರು, ಹಿರೇನಲ್ಲೂರು ಹೋಬಳಿ ಕ.ಸಾ.ಪ., ಕಡೂರು	ತಾ. ಹಿರೇನಲ್ಲೂರು ಹೋಬಳಿ ಕ.ಸಾ.ಪ ದತ್ತಿ	ರೂ 10,000/-	10.8.2004
58. ಶ್ರೀ ಎಸ್.ಜಿ. ಮುಳ್ಳೇಗೌಡ, ಚಿಕ್ಕಮಗಳೂರು	ಶ್ರೀಮತಿ ದೇವಮ್ಮ ಬಸವೇಗೌಡ ದತ್ತಿ	ರೂ. 10,000/-	10.8.2004
ರಾಯಚೂರು ಜಿಲ್ಲೆ			
1. ಶ್ರೀ ಎಸ್. ಶರಣೇಗೌಡ, ಸಿಂಧನೂರು	ಶ್ರೀಮತಿ ಪಂಪಮ್ಮ-ಶರಣೇಗೌಡ, ಪೊ.ಪಾ. ವಿರೂಪಾಪುರ ದತ್ತಿ	ರೂ 10,000/-	5.10.2001
2. ಕಾರ್ಯದರ್ಶಿ, ತ್ರಿವೇಣಿ ಚಾರಿಟೇಬಲ್ ಟ್ರಸ್ಟ್, ಬೆಂಗಳೂರು	ತ್ರಿವೇಣಿ ಚಾರಿಟೇಬಲ್ ಟ್ರಸ್ಟ್ ದತ್ತಿ	ರೂ 12,000/-	17.1.2002
3. ಶ್ರೀ ವೆಂಕಟರಾವ್ ಸಿಂಧನೂರು	ಡಾ॥ ಪುಷ್ಪಾವತಿ ಮಾಧವರಾವ್ ಸ್ಮಾರಕ ದತ್ತಿ	ರೂ 10,000/-	16.4.2002
4. ಶ್ರೀ ಹಂಪನಗೌಡ ಬಾದರ್ಲಿ, ಸಿಂಧನೂರು	ಡಾ॥ ಶ್ರೀ ಬಸವನಗೌಡ ವೆಂಕಟರಾವ್ ಬಾದರ್ಲಿ ಸ್ಮಾರಕ ದತ್ತಿ	ರೂ 10,000/-	16.4.2002
5. ಶ್ರೀ ದಯಾನಂದ ರೆಡ್ಡಿ ಬಿ.ಪಾಟೀಲ, ಸಿಂಧನೂರು ತಾಲ್ಲೂಕು	ಶ್ರೀ ಬಸವನಗೌಡ ಮಾಲಿಪಾಟೀಲ ಹುಲ್ಲೂರು ಸ್ಮಾರಕ ದತ್ತಿ	ರೂ 10,000/-	16.4.2002
6. ಶ್ರೀ ವೆಂಕಟರಾವ್ ನಾಡಗೌಡ, ಸಿಂಧನೂರು			

ತಾಲ್ಲೂಕು	ದಿ॥ ರಾಜಾರಾಮರಾವ್ ನಾಡಗೌಡ ದತ್ತಿ	ರೂ 10,000/–	16.4.2002
7. ಶ್ರೀ ಚಂದುಸಾಬ ಮುಳ್ಳೂರು, ಸಿಂದನೂರು ತಾ.	ದಿ॥ ರಾಜಾಸಾಬ ಮುಳ್ಳೂರು ತಂದೆ ರಜಾಸಾಬ ದತ್ತಿ	ರೂ 10,000/–	16.4.2002
8. ಶ್ರೀ ಶಿವಮೂರ್ತಿ ಹಿರೇಮಠ, ಸಿಂದನೂರು	ದಿ॥ ಚೆನ್ನಬಸವಯ್ಯಸ್ವಾಮಿ ಹಿರೇಮಠ ಸ್ಮಾರಕ ದತ್ತಿ	ರೂ 10,000/–	16.4.2002
9. ಶ್ರೀ ಸಿ.ಟಿ.ಪಾಟೀಲ ತಂ. ತಿರುಕನಗೌಡ, ಸಿಂದನೂರು	ದಿ॥ ರುದ್ರಗೌಡ ಪಾಟೀಲ ಸ್ಮಾರಕ ದತ್ತಿ	ರೂ 10,000/–	16.4.2002
10. ಶ್ರೀ ಕರಿಯಪ್ಪ ಸಿಂಧನೂರು	ಕೆ. ನಾಗಪ್ಪ ಸ್ಮಾರಕ ದತ್ತಿ	ರೂ 10,000/–	16.4.2002
11. ಶ್ರೀ ಅಂದಾನಗೌಡ, ಲಿಂಗಸೂಗೂರು	ಮಹಾಂತಮ್ಮ ನಿಂಗನಗೌಡ ಬೈಯಾಪೂರ ಸ್ಮರಣಾರ್ಥ ದತ್ತಿ	ರೂ 10,000/–	16.4.2002
12. ಶ್ರೀ ಅಮರೇಗೌಡ ಕ್ಲಾರಕುಂಟಿ, ರಾಯಚೂರು	ದಿ॥ ಡಾ॥ ಚಂದ್ರಶೇಖರ ಪಾಟೀಲ ಎ. ಕಾರ್ಲಕುಂಟಿ ದತ್ತಿ	ರೂ 10,000/–	16.4.2002
13. ಶ್ರೀ ಸಿದ್ರಾಮಪ್ಪ ಬಸವಲಿಂಗಪ್ಪ ಸಾಹುಕಾರ, ರಾಯಚೂರು ಜಿಲ್ಲೆ	ಶ್ರೀ ಬಸವಲಿಂಗಪ್ಪ ಶಿವಬಸಪ್ಪ ಸಾಹುಕಾರ ಸಂತೆ ಕಲ್ಲೂರು ದತ್ತಿ	ರೂ 10,000/–	16.4.2002
14. ಡಾ॥ ಎಂ. ಬಸವರಾಜ, ಲಿಂಗಸೂಗೂರು	ಮಾತುಶ್ರೀ ಸಂಗಮ್ಮ ತಾಯಿ ಮಸ್ಕಿ ದತ್ತಿ	ರೂ 10,000/–	16.4.2002
15. ಶ್ರೀ ವೀರೇಶ ಸೌದ್ರಿ ಮಸ್ಕಿ, ಲಿಂಗಸೂಗೂರು ತಾ॥	ದಿ॥ ಮಹಾದೇವಪ್ಪ ಸೌದ್ರಿ ಸ್ಮರಣಾರ್ಥ ದತ್ತಿ	ರೂ 10,000/–	16.4.2002
16. ಶ್ರೀ ಬಿ.ಪಿ. ನಾಯಕ ದೇವದುರ್ಗ ತಾ.	ಶ್ರೀ ಕೆ. ಭಗವಂತರಾವ್ ನಾಯಕ ಅರಕೇರಾ ದತ್ತಿ	ರೂ 10,000/–	16.4.2002
17. ಶ್ರೀ ಶಿವಕುಮಾರ್ ಅಕ್ಕರಕೆ, ದೇವದುರ್ಗ	ಶ್ರೀಮತಿ ರಂಗಮ್ಮ ಗಂ.ರಂಗಪ್ಪ ಸ್ಮಾರಕ ದತ್ತಿ	ರೂ 10,000/–	16.4.2002
18. ಶ್ರೀ ಮಹಾದೇವಪ್ಪ ಬಿ. ಪಾಟೀಲ, ರಾಯಚೂರು	ಶ್ರೀಮತಿ ಬಿ.ಶರಣಮ್ಮ ಮಲ್ಲಿರೆಡ್ಡಪ್ಪ ದತ್ತಿ	ರೂ 10,000/–	16.4.2002
19. ಶ್ರೀ ಆರ್. ಸತ್ಯನರಾಯಣ ಶೆಟ್ಟಿ, ಮಾನ್ವಿ	ಶ್ರೀಮತಿ ಆರ್.ವೆಂಕಮ್ಮ ಸ್ಮಾರಕ ದತ್ತಿ	ರೂ 10,000/–	16.4.2002
20. ಶ್ರೀ ಈಶಪ್ಪ ಸಾಹುಕಾರ್, ಸಿಂಧನೂರು ತಾ.	ಶ್ರೀ ಯಂಕಣ್ಣ ಸಾಹುಕಾರ್ ಕಂ.ತಿಪ್ಪಣ್ಣ ಸಾಹುಕಾರ್ ಕುರಕುಂದಿ ದತ್ತಿ	ರೂ. 10,000/–	20.12.2002
21 ಶ್ರೀ ಶರಣ ಬಸವರಾಜ, ಸಿಂಧನೂರು	ದಿ॥ವೀರಭದ್ರಪ್ಪ ಎಲ್ಕಂದಿ ಮಟ್ಟೂರು ಸ್ಮಾರಕ ದತ್ತಿ	ರೂ 10,000	16.4.2002
22. ಶ್ರೀ ಅಮರೇಗೌಡ ಮಟ್ಟೂರು.			

	ಲಿಂಗಸೂಗೂರು ತಾಲ್ಲೂಕು	ದಿ॥ ಮಲ್ಲೇಶಗೌಡ-ಬಸನಗೌಡ ಮಟ್ಟೂರ ಸ್ಮಾರಕ ದತ್ತಿ	ರೂ. 10,000/-	29.11.2003
23.	ಶ್ರೀ ಮಹಾಂತ ಸ್ವಾಮೀಜಿ ಸಾಲಿಮಠ, ಲಿಂಗಸೂಗೂರು ತಾಲ್ಲೂಕು	ಪೂಜ್ಯ ಲಿಂ॥ ಪಂಪಯ್ಯಸ್ವಾಮಿ ಸಾಲಿಮಠ ದತ್ತಿ	ರೂ. 10,000/-	29.11.2003
24.	ಶ್ರೀ ಮಹ್ಮದ್ ರಫೀ ಸಾಹುಕಾರ, ಮಾನ್ವಿ	ಬಾಷಾಮಿಯಾ ಸಾಹುಕಾರ ದತ್ತಿ	ರೂ. 10,000/-	29.11.2003
25.	ಶ್ರೀ ದ್ಯಾಸನೂರು ರಾಮಚಂದ್ರಶೆಟ್ಟಿ, ಮಾನ್ವಿ	ಕುಮಾರಿ ಸೌಮ್ಯ ದಾಸನೂರ ದತ್ತಿ	ರೂ. 10,000/-	29-.1.2003
26.	ಶ್ರೀ ಜಂಬಣ್ಣ ಅಮರಚಿಂತ, ರಾಯಚೂರು	ದಿ॥ ಅಮರಚಿಂತ ಲಕ್ಷ್ಮಯ್ಯ ಸ್ಮಾರಕ ದತ್ತಿ	ರೂ. 10,000/-	29.11.2003
27.	ಶ್ರೀ ಹೆಚ್.ಪಂಪಯ್ಯಶೆಟ್ಟಿ, ರಾಯಚೂರು	ಹೊಸೂರು ರಾಮಸ್ವಾಮಿ ದತ್ತಿ	ರೂ. 10,000/-	29.11.2003
28.	ಡಾ॥ ಜಗದೀಶ ಆರ್. ಮಾದಿನೂರು, ಸಿಂದನೂರು	ಡಾ॥ ಅಕ್ಕಮಹಾದೇವಿ ಪಾಟೀಲ ದತ್ತಿ	ರೂ. 10,000/-	29.11.2003
29.	108 ಪಪೂ.ಶ್ರೀ ಸುಶೀಲೇಂದ್ರ ಶ್ರೀಪಾದಂಗಳವರು, ಕರ್ನೂಲ್ ಜಿಲ್ಲೆ	ಜಗದ್ಗುರು ಶ್ರೀ ಮನ್ಮಧ್ವಾಚಾರ್ಯಮೂಲ ಸಂಸ್ಥಾನ ನಂಜನಗೂಡು ಸ್ಮಾರಕ ದತ್ತಿ	ರೂ. 10,000/-	29.11.2003
30.	ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ	ಜಗದ್ಗುರು ಶ್ರೀ ಮನ್ಮಧ್ವಾಚಾರ್ಯಮೂಲ ಸಂಸ್ಥಾನ ನಂಜನಗೂಡು ಸ್ಮಾರಕ ದತ್ತಿ	ರೂ. 10,000/-	29.11.2003
31.	ಶ್ರೀ ಕೆ. ಶರಣೇಗೌಡ ದೇವರೆಡ್ಡಿ, ಸಿಂಧನೂರು	ದಿ॥ ರಾಜೇಶ್ವರಿ ದೇವರೆಡ್ಡಿ ದತ್ತಿ	ರೂ. 10,000/-	29.11.2003
32.	ಡಾ॥ ಕೆ.ಶಿವರಾಜ, ಸಿಂಧನೂರು	ಸಹನಾ ಮಕ್ಕಳ ಆಸ್ಪತ್ರೆ ದತ್ತಿ	ರೂ. 10,000/-	29.11.2003
33.	ಶ್ರೀಮತಿ ನಾಗರತ್ನ ಎಲ್. ಇಂಡಿ ದೇವದುರ್ಗ	ದಿ॥ ವೀರಣ್ಣ ಬಳೇ, ನ್ಯಾಯವಾದಿಗಳು ದೇವದುರ್ಗ ದತ್ತಿ	ರೂ. 10,000/-	20.3.2004
	ಬೆಂಗಳೂರು ನಗರ			
1.	ಡಾ॥ ನಿರುಪಮಾ, ಬೆಂಗಳೂರು	ಸಿಸು ಸಂಗಮೇಶ ಮಕ್ಕಳ ಸಾಹಿತ್ಯ ಬಹುಮಾನ ದತ್ತಿ	ರೂ. 10,000/-	31.7.2001
2.	ಶ್ರೀ ಪಿ. ಸುಬ್ರಹ್ಮಣ್ಯ ಬಾಗಿಲ್ತಾಯ, ಬೆಂಗಳೂರು	ಫಲಿಮಾರು ಬಾಗಿಲ್ತಾಯ ದತ್ತಿ	ರೂ. 10,000/-	2.8.2002

3. ಶ್ರೀ ಪಿ.ಜೆ. ಬಾಗಿಲ್ತಾಯ, ಬೆಂಗಳೂರು	ಫಲಿಮಾರು ಬಾಗಿಲ್ತಾಯ ದತ್ತಿ	ರೂ. 10,000/-	2.8.2002
4. ಶ್ರೀಮತಿ ಪಿ. ಲಕ್ಷ್ಮಿ ಬಾಗಿಲ್ತಾಯ, ಬೆಂಗಳೂರು	ಫಲಿಮಾರು ಬಾಗಿಲ್ತಾಯ ದತ್ತಿ	ರೂ. 10,000/-	2.8.2002
5. ಶ್ರೀಮತಿ ಉಷಾ ಸದಾಶಿವ, ಬೆಂಗಳೂರು	ಸಾಹಿತಿ ಬಿ. ಪುಟ್ಟಸ್ವಾಮಯ್ಯ ದತ್ತಿ	ರೂ. 10,000/-	21.8.2003
6. ಶ್ರೀಮತಿ ಉಷಾ ಹೆಚ್. ವಾಮನರಾವ್, ಬೆಂಗಳೂರು	ಪ್ರಕಾಶಕ ಆರ್.ಎನ್. ಹಬ್ಬು ದತ್ತಿ	ರೂ. 1,00,000/-	16.12.2002
7. ಶ್ರೀ ಬಿ. ಆರ್. ಸಾಯಿನಾಥ್, ಬೆಂಗಳೂರು	ಬಿ. ಆರ್. ಸಾಯಿನಾಥ ದತ್ತಿ	ರೂ. 25,000/-	24.4.2004
8. ಡಾ. ಎ. ವಿಠ್ಠಲಶೆಟ್ಟಿ, ಬೆಂಗಳೂರು	ಎ. ವಿಠ್ಠಲಶೆಟ್ಟಿ ಶೃಂಗೇರಿ ದತ್ತಿ	ರೂ. 10,000/-	29.11.2001
9. ಶ್ರೀಮತಿ ಕೆ.ಬಿ. ಚಂದ್ರಾ, ಬೆಂಗಳೂರು	ಮೀನಾಕ್ಷಿ ದತ್ತಿ	ರೂ. 25,000/-	9.8.2004
ಮಹಾರಾಷ್ಟ್ರ ಘಟಕ			
1. ಶ್ರೀ ಮನೋಹರ ಎಂ.ಕೋರಿ, ಮುಂಬಯಿ	ದಿ. ಮುಕ್ಕಾಣಪ್ಪ ಗುರುಸಂಗಪ್ಪ ಕೋರಿ	ರೂ. 10,000/-	29.11.2001
2. ಶ್ರೀ ಎಸ್.ವಿ.ಮೋಹನ್, ಮುಂಬಯಿ	ಎಸ್.ಕೆ. ವೆಂಕಟಸ್ವಾಮಿ ದತ್ತಿ	ರೂ. 10,000/-	16.5.2002
ಕೇರಳ ಘಟಕ			
1. ಕನ್ನಡ ಸಾಹಿತ್ಯ ಪರಿಷತ್ತು, ಕಾಸರಗೋಡು, ಕೇರಳ ರಾಜ್ಯ	ಹೊಸದುರ್ಗ ತಾ॥ ದ್ವಿತೀಯ ಸಾಹಿತ್ಯ ಸಮ್ಮೇಳನ ದತ್ತಿ	ರೂ. 53,474/-	15.4.2004
ಬೆಳಗಾವಿ ಜಿಲ್ಲೆ			
1. ಡಾ॥ ಸ.ಜ. ನಾಗಲೋಟಿಮಠ, ಬೆಳಗಾಂ	ಡಾ॥ ಸದಾಶಿವಯ್ಯ ಜಂಬಯ್ಯ ನಾಗಲೋಟಿ ಮಠ ದತ್ತಿ	ರೂ. 10,000/-	4.12.2001
ಬೀದರ್ ಜಿಲ್ಲೆ			
1. ಡಾ॥ ರಾಜೇಂದ್ರ ಯರನಾಳೆ, ಔರಾದ್ ತಾ॥	ಡಾ॥ ರಾಜೇಂದ್ರ ಯರನಾಳೆ (ಕುಯವೀರಾ) ದತ್ತಿ	ರೂ. 10,000/-	29.9.2004

ಭಾಗ: ಮೂರು
ಕ.ಸಾ.ಪ. ಅಧ್ಯಕ್ಷತೆಯ ದಿನಗಳು

ಕ.ಸಾ.ಪ. ರಾಜ್ಯಾಧ್ಯಕ್ಷ ಪೀಠ- ಕೆಲವು ಅನುಭವಗಳು

☐ ಧರ್ಮದರ್ಶಿ ಹರಿಕೃಷ್ಣ ಪುನರೂರು



ನನ್ನ ಮೂರು ವರ್ಷದ ಅವಧಿಯಲ್ಲಿ ಕಂಡುಕೊಂಡಂತೆ ಹೆಚ್ಚಿನ ಸಾಹಿತಿಗಳೂ, ಸದಸ್ಯರೂ ಪರಿಷತ್ತಿಗೆ ಸಲಹೆ ಸೂಚನೆಗಳನ್ನು ನೀಡುತ್ತ ಬರುತ್ತಿದ್ದು, ಅವನ್ನು ತಮ್ಮ ನಿಜ ಜೀವನದಲ್ಲಿ ಜಾರಿಗೊಳಿಸದೆ ಇರುವ ಬಗ್ಗೆ ವಿಷಾದವೆನಿಸುತ್ತದೆ. ಈಗ 60 ಸಾವಿರ ಸದಸ್ಯರ ಬಲವಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 20 ಸಾವಿರ ಜನರಲ್ಲಿ ಸ್ಕೂಟರ್, ಮೋಟರ್ ವಾಹನ, ಬೈಕ್‌ಗಳಿವೆ. ಅದರಲ್ಲಿ ಕನ್ನಡದಲ್ಲಿ ಅಂಕಿ ಬರೆಯಲು ಹಲವಾರು ಬಾರಿ ಕನ್ನಡ ನುಡಿಯಲ್ಲಿ ಪ್ರಕಟಣೆ ನೀಡಿದರೂ ಜನ ಸ್ಪಂದಿಸಲಿಲ್ಲ. ತಮ್ಮ ವ್ಯವಹಾರ ಸ್ಥಳಗಳಲ್ಲಿ ಕನ್ನಡದಲ್ಲಿ ದೊಡ್ಡದಾಗಿ ನಾಮಫಲಕ ಬರೆಸುತ್ತಿಲ್ಲ. ಪುಸ್ತಕಗಳಲ್ಲಿ ಕನ್ನಡ ಅಂಕಿ ಹಾಕುತ್ತಿಲ್ಲ. ಆದರೂ ಪರಿಷತ್ತಿಗೆ ಸಲಹೆ ಸೂಚನೆಗಳನ್ನು ಧಾರಾಳವಾಗಿ ನೀಡುತ್ತಿದ್ದಾರೆ. ಅದು ಮೆಚ್ಚಲೇಬೇಕಾದ ಸಂಗತಿ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಶ್ರೀ ಎಸ್.ಎಂ. ಕೃಷ್ಣ ಅವರ ನೇತೃತ್ವದ ಸರಕಾರ ನೀಡಿದಷ್ಟು ಸಹಕಾರ ಇಷ್ಟರವರೆಗಿನ ಯಾವ ಸರಕಾರವೂ ನೀಡಲಿಲ್ಲ. ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀಮತಿ ರಾಣಿ ಸತೀಶ್ ಕೂಡ ಕನ್ನಡ-ಕನ್ನಡ-ಇಂಗ್ಲೀಷ್ ಸಂಕ್ಷಿಪ್ತ ನಿಘಂಟಿಗೆ ೫ ಲಕ್ಷ ನೀಡಿ ಸಹಕಾರ ನೀಡಿದ್ದಾರೆ. ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶರವರು ಗಣನೀಯ ಸಹಕಾರ ನೀಡಿದ್ದಾರೆ.

ಚುನಾವಣೆಯಲ್ಲಿ ಶಾಸಕರಾಗಿ, ಲೋಕಸಭಾ ಸದಸ್ಯರಾಗಿ

ಕನ್ನಡ ನುಡಿ, ಅಕ್ಟೋಬರ್ 2004

ಆಸಕ್ತಿಯಾದ ಎಲ್ಲರಿಗೂ ಶುಭಾಶಯ ಸಲ್ಲಿಸಿ ಕನ್ನಡದ ಕೆಲಸಕ್ಕೆ ತಮ್ಮ ಸಹಕಾರ ಬಯಸುತ್ತೇನೆಂದು ಪತ್ರ ಬರೆದರೆ ಬಾಗಲಕೋಟೆ ಶಾಸಕರಾದ ಶ್ರೀ ವೀರಣ್ಣ ಚರಂತಿಮಠ ಒಡನೇ ಸ್ಪಂದಿಸಿದರು. ಮಹಿಮಜೆ ಪಾಟೀಲರು ಕೊಂಚ ತಡವಾಗಿ ಸ್ಪಂದಿಸಿದ್ದಾರೆ. ಉಳಿದ ಯಾವುದೇ ಶಾಸಕರು, ಲೋಕಸಭಾ ಸದಸ್ಯರು ಉತ್ತರಿಸುವ ಸೌಜನ್ಯವನ್ನು ತೋರಿಸಲಿಲ್ಲ. ಇವರೇ ನಮ್ಮನ್ನು ಆಳುವ ಜನನಾಯಕರು!

ಗೋವೆಯಲ್ಲಿರುವ ನಿರಾಶ್ರಿತ ಕನ್ನಡಿಗರನ್ನು ಹೊರದೂಡಿದಾಗ ಪರಿಷತ್ತು ಮೊದಲ ಧ್ವನಿ ಎತ್ತಿತು. ಸರಕಾರ ಕೇವಲ ಪ್ರಚಾರ ಮಾಡಿತು. ಯಾವುದೇ ಪ್ರಯೋಜನ ಸರಕಾರದಿಂದ ಸಿಕ್ಕಲಿಲ್ಲ.

ದಾಸ ಸಾಹಿತ್ಯಕ್ಕೆ ಪರಿಷತ್ತು ಪ್ರೋತ್ಸಾಹ ನೀಡಿತು. ಸರಕಾರ ಇನ್ನೂ ಪುಸ್ತಕಗಳನ್ನು ಮುದ್ರಿಸುವ ಹಂತದಲ್ಲಿ ಇದೆ. ಜಿಲ್ಲೆಗಳಿಗೆಲ್ಲಾ ಈ ಬಗ್ಗೆ ಪ್ರೋತ್ಸಾಹ ನೀಡಬೇಕಾಗಿದೆ.

ಜಿಲ್ಲಾ, ತಾಲ್ಲೂಕು ಪರಿಷತ್ತಿನ ಕಛೇರಿಗೆ ನಿವೇಶನ ಬಗ್ಗೆ ಅರ್ಜಿ ಸಲ್ಲಿಸಿ ಉಚಿತವಾಗಿ ನೀಡಬೇಕೆಂದು ಸರಕಾರಕ್ಕೆ ಬರೆದರೆ ಕಂದಾಯ ಇಲಾಖೆಯ ಐ.ಎ.ಎಸ್. ಅಧಿಕಾರಿಗಳು ಹಣ ನೀಡಿ ಪಡೆಯುವಂತೆ ಹಿಂಬರಹ ನೀಡುತ್ತಾರೆ. ಹಣ ನೀಡಿ ಸ್ಥಳ ಪಡೆದು ಕಟ್ಟಡ ಕಟ್ಟಿ ಕನ್ನಡದ ಕೆಲಸ ಮಾಡಬೇಕೆ ? ಸರಕಾರದ ಪ್ರೋತ್ಸಾಹ ಸಾಲದು .

ಪರಿಷತ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದವರು: ಕರ್ನಾಟಕ ಪವರ್ ಕಾರ್ಪೋರೇಶನಿನ ಎಂ.ಡಿ. ಆಗಿದ್ದ ಶ್ರೀ ಜಯರಾಂ ಅವರು, ಕರ್ನಾಟಕ ಬ್ಯಾಂಕಿನ ಅಧ್ಯಕ್ಷ ಶ್ರೀ ಅನಂತಕೃಷ್ಣ, ಕಾರ್ಪೋರೇಶನ್ ಬ್ಯಾಂಕ್ ವರಿಷ್ಠರು, ಕೇಂದ್ರದ ಮಾಜಿ ಸಚಿವರಾದ ಶ್ರೀ ಅನಂತ್‌ಕುಮಾರ್, ಮೈಸೂರು ಬ್ಯಾಂಕ್, ವಾರ್ತಾ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ.ಎಸ್.ಕೆದಾರ್ ಅವರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ನಾಡಿನಲ್ಲಿ ಅಪಾರ ಗೌರವ. ಪ್ರಧಾನಮಂತ್ರಿ, ಮುಖ್ಯಮಂತ್ರಿ, ಇತರ ಸಚಿವರನ್ನು ಸಮಯ ನಿಗದಿಪಡಿಸಿ ಕಾಲ ಕಾಲಕ್ಕೆ ಭೇಟಿ ಮಾಡಲಾಗಿದೆ. ಆದರೆ ನಾಡಿನ ಪ್ರಮುಖ ಕೆನರಾ ಬ್ಯಾಂಕಿನ ಅಧ್ಯಕ್ಷರನ್ನು ನನ್ನ ಮೂರೂವರೆ ವರ್ಷದ ಅವಧಿಯಲ್ಲಿ ಒಮ್ಮೆಯೂ ನೋಡಲಾಗಲಿಲ್ಲ. ಹಲವಾರು ಬಾರಿ ಪತ್ರ ಬರೆದು ಭೇಟಿಗೆ ಅವಕಾಶ ಕೇಳಿದುದು ಆಯಿತು. ಇತರ ಬ್ಯಾಂಕುಗಳು ಪರಿಷತ್ತಿಗೆ ಪ್ರೋತ್ಸಾಹ ನೀಡಿದಂತೆ, ಕೆನರಾ ಬ್ಯಾಂಕಿನ ಅಧ್ಯಕ್ಷರನ್ನು ನೋಡಿ ಸಹಕಾರ ಕೇಳುವ ಆಸೆ ನನ್ನದಾಗಿತ್ತು. ಅದು ನೆರವೇರಲಿಲ್ಲ. ಆದರೆ ನೆರವೇರಲಿಲ್ಲ ಎಂಬ ಬೇಸರವಿಲ್ಲ. ಒಮ್ಮೆ ಕೆನರಾ ಬ್ಯಾಂಕಿನ ಕಛೇರಿಗೆ ಬಂದೆ. ಮುಂದೆ ಪುರಭವನದ ಸಮೀಪ ಕನ್ನಡದ ಸಂಘ–ಸಂಸ್ಥೆಗಳು, ಸರಕಾರಕ್ಕೆ ಹಲವಾರು ಬೇಡಿಕೆಗಳನ್ನು ಇರಿಸಿ ಸಾವಿರಾರು ಜನ ಒಂದು ವಾರ ಸತ್ಯಾಗ್ರಹ ಹೂಡಿದ್ದರು. ನಾನು ಕೂಡ ಬೆಂಬಲ ಸೂಚಿಸಿ ಆ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದೆ. ಆ ಸಮಯದಲ್ಲಿ ನಾನು ಹಾಗೂ ಕಾರ್ಯದರ್ಶಿಗಳು ಕೆನರಾ ಬ್ಯಾಂಕಿನ ಅಧ್ಯಕ್ಷರನ್ನು ನೋಡಿ ಪರಿಷತ್ತಿಗೆ ಸಹಾಯ ಪಡೆಯುವ ಉದ್ದೇಶದಿಂದ ಬ್ಯಾಂಕಿನ ಪ್ರಧಾನ ಕಛೇರಿಗೆ ತೆರಳಿದ್ದೆವು. ಮುಖ್ಯವಾಗಿ ಇದು ಕರಾವಳಿಯಲ್ಲಿ ಹುಟ್ಟಿಕೊಂಡ ಬ್ಯಾಂಕು. ಬ್ಯಾಂಕಿನ ಅಧ್ಯಕ್ಷರು ಕರಾವಳಿಯವರು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕರಾವಳಿಯವರು. ಇದು ಕರಾವಳಿ ಕನ್ನಡಿಗರ ಬ್ಯಾಂಕು. ಆದುದರಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಸ್ಥಾಪಕರ ಹೆಸರಿನಲ್ಲಿ ಒಂದು ದತ್ತಿಯನ್ನು ಪಡೆದುಕೊಳ್ಳುವ ಅಥವಾ 50,000 ಮುದ್ರಣವಾಗುವ 'ಕನ್ನಡ ನುಡಿ'ಗೆ ಜಾಹೀರಾತು ಪಡೆಯಬಹುದೆಂಬ ಮಹದಾಸೆ ನಮ್ಮದಾಗಿತ್ತು. ಬ್ಯಾಂಕಿನ ಕಛೇರಿಗೆ ಹೋಗಿ ಸಂದರ್ಶನಕ್ಕೆ ಚೀಟಿ ನೀಡಿದ್ದೆವು. ಕುಳಿತುಕೊಳ್ಳಲು ಹೇಳಿದ ಅಲ್ಲಿನ ಅಧಿಕಾರಿ 2 ಗಂಟೆಗಳ ಕಾಲ ನಮ್ಮನ್ನು ಕುಳ್ಳಿರಿಸಿ 'ಛೇರಮನ್ ಬಿಸಿಯಾಗಿದ್ದಾರೆ. ಇನ್ನೊಂದು ದಿನ ಬನ್ನಿರಿ' ಎಂದು ತಿಳಿಸಿದರು. ಈ ಮಾತನ್ನು ಮೊದಲೇ ಹೇಳಬಹುದಿತ್ತಲ್ಲ. ಏಕೆ ಹೀಗೆ ಮಾಡಿದಿರಿ ಎಂದು ನಾನು ಅಧಿಕಾರಿಯನ್ನು ಪ್ರಶ್ನಿಸಿದೆನು. ಆತ ಮೌನ. ಕೆಳಗಡೆ ಸತ್ಯಾಗ್ರಹಿಗಳೊಡನೆ ಬ್ಯಾಂಕಿನ ವರ್ತನೆಯನ್ನು ತಿಳಿಸಿದೆ. ಸುಮಾರು ಸಾವಿರಾರು ಜನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಅವರೆಲ್ಲ ಕೆಂಡಾಮಂಡಲವಾದರು. ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯ ಅಧ್ಯಕ್ಷರಿಗೆ ಆದ ಅವಮರ್ಯಾದೆ

ಎಲ್ಲ ಕನ್ನಡಿಗರಿಗೆ ಆದ ಅಪಚಾರ. ಈ ಬಗ್ಗೆ ನಾವೇ ಈ ಕ್ಷಣದಲ್ಲೇ ಕಾರ್ಯಪ್ರವೃತ್ತರಾಗುತ್ತೇವೆಂದು ಎದ್ದಾಗ ನಾನೇ ಸಮಾಧಾನಪಡಿಸಿದೆ. ಇಲ್ಲದಿದ್ದರೆ ಬ್ಯಾಂಕಿನ ಕೇಂದ್ರ ಕಛೇರಿಯ ಸ್ವರೂಪವೇ ಬದಲಾಗುತ್ತಿತ್ತು. ಇತ್ತೀಚೆಗ ಕೂಡ ಈ ತಿಂಗಳಲ್ಲಿ ನಿವೃತ್ತರಾಗುವ ಬ್ಯಾಂಕಿನ ಛೇರ್‌ಮಾನ್ ಆರ್.ವಿ. ಶಾಸ್ತ್ರೀಯವರನ್ನು ಸಂದರ್ಶಿಸಲು ಪತ್ರ ನೀಡಿದೆ. ಉತ್ತರವಿಲ್ಲ. ದೂರವಾಣಿಯಲ್ಲಿ ಪ್ರಯತ್ನಿಸಿದಾಗ ಸಿಕ್ಕಿದರು. 5 ನಿಮಿಷ ಕಾಲ ಮಾತನಾಡಲು ಅವಕಾಶ ಕೇಳಿದೆ. ನಿಮ್ಮ ಬೇಡಿಕೆ ಬರೆದು ಕಳಿಸಿರಿ. ಸಂದರ್ಶನಕ್ಕೆ ಸಮಯವಿಲ್ಲ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ಕೇವಲ ಸಾಹಿತಿಗಳ ಒಕ್ಕೂಟ, ಸಾಹಿತಿ ಅಲ್ಲದವ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವುದು ಮಹಾಪರಾಧ ಎಂದು ಸಾಹಿತಿಗಳೂ, ಪತ್ರಿಕೆಗಳೂ, ಬಿಂಬಿಸುತ್ತಿವೆ. ವಾಸ್ತವವನ್ನು ಮರೆಮಾಚಿ ಕನ್ನಡಿಗರನ್ನು ಕತ್ತಲೆಯಲ್ಲಿ ಇಟ್ಟಿವೆ.

ಮಹಿಳಾ ಸಾಹಿತಿಗಳ ಸಂಘ, ಗಮಕ ಪರಿಷತ್ತು, ಚುಟುಕ ಪರಿಷತ್ತು ಆಯಾ ವಿಭಾಗದ ಹಿತ ಕಾಯುವ ಕೆಲಸ ಮಾಡುತ್ತಿವೆ. ಆದರೆ ಸಾಹಿತ್ಯ ಪರಿಷತ್ತು ಕನ್ನಡಿಗರ ಸಂಘಟನೆಯ ಜೊತೆಗೆ ನೆಲ, ಜಲ, ಸಂಸ್ಕೃತಿ, ಉದ್ಯೋಗ, ಭಾಷೆಯ ಬಗ್ಗೆ 90 ವರ್ಷದ ಕೆಲಸ ನಿರ್ವಹಿಸುತ್ತದೆ. ಈ ಹಿಂದೆ ಆಗಿ ಹೋದ 20 ಅಧ್ಯಕ್ಷರು ಸಾಹಿತಿಗಳಾಗಿ ಬಂದವರಲ್ಲ. ಉತ್ತಮ ಆಡಳಿತಗಾರರಾಗಿ ಜನತೆಯ ಕಷ್ಟಗಳಿಗೆ ಸ್ಪಂದಿಸಿದ್ದಾರೆ. ೨೧ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ನೂರಾರು ನಿರ್ಣಯಗಳು ಮಂಡನೆಯಾಗಿವೆ. ರೈಲ್ವೆ, ಉದ್ಯೋಗ, ಜಲ, ನೆಲ, ಪರಿಸರಗಳ ಗಡಿ ಸಮಸ್ಯೆ ಬಗ್ಗೆ ನಿರ್ಣಯಗಳು ಮಂಡಿತವಾಗಿವೆ. ಪರಿಷತ್ತು ಸಾಹಿತಿಗಳ ಒಕ್ಕೂಟ ಆಗಿದ್ದರೆ, ಈ ವಿಚಾರಗಳ ಬಗ್ಗೆ ಏಕೆ ನಿರ್ಣಯ ಮಾಡಬೇಕು? ಸದಸ್ಯರಾಗುವವರು ಸಾಹಿತಿಗಳನ್ನೇ ಪರಿಷತ್ತಿಗೆ ಸದಸ್ಯರನ್ನಾಗಿ ಮಾಡಿ ಅವರೇ ಅವರ ಸಮಸ್ಯೆಗಳನ್ನು ಅರಿಯಬಹುದಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಎಂಬ ಹೆಸರು ಇಟ್ಟದ್ದು ಕನ್ನಡಿಗರ ಸಮಸ್ತ ಸಮಸ್ಯೆಗಳ ಪರಿಹಾರದ ಉದ್ದೇಶದಿಂದಲೇ ಹೊರತು ಕೇವಲ ಸಾಹಿತಿಗಳ ವಿಚಾರವಾಗಿ ಅಲ್ಲ. ಈ ರೀತಿ ತಪ್ಪು ಮಾಹಿತಿ ಕನ್ನಡಿಗರಿಗೆ ನೀಡಿದರೆ ಮುಂದೊಂದು ದಿನ ಹೆಸರನ್ನೇ ಬದಲಾಯಿಸುವ ಸ್ಥಿತಿ ಬರಬಹುದು!

ಸಾಹಿತಿಗಳು, ಬುದ್ಧಿಜೀವಿಗಳು, ಅವರ ನಿರಂತರ ಮಾರ್ಗದರ್ಶನ ಕನ್ನಡಿಗರ ಏಳಿಗೆಗೆ ಅಗತ್ಯವಿದೆ ಎಂದು ಗೌರವವಾಗಿ ಸಾಹಿತ್ಯ ಪರಿಷತ್ತು ಎಂದು ಹೆಸರನ್ನು ಇಡಲಾಗಿದೆ. ಕರ್ನಾಟಕದ ಜನತೆಯ ಸಮಸ್ತ ವಿಚಾರಗಳ ಬಗ್ಗೆ ಸ್ಪಂದಿಸುವ ಈ ಮಹಾ ಸಂಸ್ಥೆಯನ್ನು ಈಗ ತಪ್ಪು ದಾರಿಗೆ ಎಳೆಯಲಾಗುತ್ತಿದೆ.

□


ಭಾಗ-ನಾಲ್ಕು

ಭಾಷೆ-ಧರ್ಮ-ಸಂಸ್ಕೃತಿ: ಒಂದು ಸಂವಾದ

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಭಾಷಾಧ್ಯಯನ- ಒಂದು ತಾತ್ತ್ವಿಕ ಚಿಂತನೆ

☐ ಪಾದೇಕಲ್ಲು ನರಸಿಂಹ ಭಟ್ಟ



''ಅಯನ'' ಎಂದರೆ ''ಹೋಗುವುದು'' ಎಂದು ಧಾತುಮೂಲವಾದ ಅರ್ಥ. ಸಂಸ್ಕೃತ ಭಾಷೆಯಲ್ಲಿ ಹೋಗುವಿಕೆಯ ಅರ್ಥವುಳ್ಳ ಧಾತುಗಳಿಗೆ ಅತ್ಯಂತ ನಮನೀಯ (ಸಂದರ್ಭಾನುಸಾರಿ) ಅರ್ಥಗಳಿರುತ್ತವೆ. ಪ್ರಚುರವಾಗಿ ಈ ಧಾತುಗಳನ್ನು ತಿಳಿಯುವ ಅರ್ಥದಲ್ಲಿ ಬಳಸಲಾಗುತ್ತದೆ. ಇದರಿಂದ ಅಯನ ಶಬ್ದಕ್ಕೆ ತಿಳಿಯುವುದು ಎಂಬ ಅರ್ಥ ಬರುತ್ತದೆ. ''ಅಧ್ಯಯನ'' ಎಂದರೆ ಹಿಂದಿನ ವಿಷಯವನ್ನು ಮುಂದಿನ ವಿಷಯಕ್ಕೆ ಆಧಾರವಾಗುವಂತೆ ತಿಳಿಯುತ್ತಾ ಮುಂದೆ ಹೋಗುವುದು ಎಂದು ಅರ್ಥವಾಗುತ್ತದೆ. ಮಾನವ ನಾಗರಿಕತೆಗಳಲ್ಲಿ ಈ ಅಧ್ಯಯನ ಕ್ರಿಯೆಯು ಬೇರೆ ಬೇರೆ ವಿಷಯಗಳಾಗಿ ರೂಪುಗೊಂಡಿರುತ್ತದೆ. ಭಾರತದಲ್ಲಿ ಇಂದು ಪ್ರಚಲಿತವಾಗಿರುವ ಅಧ್ಯಯನ ವಿಷಯಗಳನ್ನು ವಿಜ್ಞಾನ ವಿಷಯಗಳು ಮತ್ತು ಕಲಾ ವಿಷಯಗಳು ಎಂದು ಮುಖ್ಯವಾಗಿ ವರ್ಗೀಕರಿಸಲಾಗುತ್ತದೆ. ವಿಜ್ಞಾನ ವಿಷಯಗಳನ್ನು ''ತಾತ್ತ್ವಿಕ'' ಮತ್ತು ''ತಾಂತ್ರಿಕ'' ಎಂದು ಸ್ಥೂಲವಾಗಿ ವರ್ಗೀಕರಿಸಬಹುದು. ಕಲಾ ವಿಷಯಗಳನ್ನು ''ಭಾಷಾ ವಿಷಯಗಳು'' ಮತ್ತು ''ವಸ್ತು ವಿಷಯಗಳು'' ಎಂದೂ ಸ್ಥೂಲ ವರ್ಗೀಕರಣ ಮಾಡಬಹುದು. ಭಾಷಾ ವಿಷಯಗಳಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷ್ ಇಂತಹವು

ಅಂಚೆ- ಕರೋಪಾಡಿ, ಬಂಟ್ವಾಳ, ದ.ಕನ್ನಡ

ಅಂತರ್ಗತವಾದರೆ ವಸ್ತು ವಿಷಯಗಳಲ್ಲಿ ಇತಿಹಾಸ, ಅರ್ಥಶಾಸ್ತ್ರ- ಇಂತಹವು ಒಳಪಡುತ್ತವೆ. ವರ್ಗೀಕೃತಾಂಶಗಳ ಸಂಖ್ಯೆ ಇದ್ದಂತೆ ಇರುವುದಿಲ್ಲ. ಒಂದು ನಾಗರಿಕತೆಯಲ್ಲಿ ಇದ್ದಂತೆಯೇ ಇನ್ನೊಂದು ಒಂದು ನಾಗರಿಕತೆಯಲ್ಲಿಯೂ ಇರುವುದಿಲ್ಲ. ದೇಶ ಪ್ರಭೇದಗಳಿಂದ ಇವು ಅನಂತ ಸಂಖ್ಯೆಯವಾಗುವುದು ಸಹಜ.

ವಿಷಯಗಳು ಅನಂತಸಂಖ್ಯೆಯವಾದರೂ ಅವುಗಳೆಲ್ಲವುಗಳೊಳಗೆ ಒಂದು ತಾತ್ತ್ವಿಕ ಐಕ್ಯ ಇರಲೇಬೇಕಾಗುತ್ತದೆ. ಯಾಕೆಂದರೆ ಯಾವುದೇ ಒಂದು ಅಧ್ಯಯನ ವಿಷಯವು ವಿಸ್ತೃತಗೊಳ್ಳುವುದು ಅದು ಜೀವನಮುಖಿವಾಗಿರುವುದರಿಂದ ಮಾತ್ರ. ಆದುದರಿಂದ ಎಲ್ಲಾ ವಿಷಯಗಳೂ ಜೀವನ ಮುಖಿಗಳೇ ಆಗಿರುತ್ತವೆ. ಅರ್ಥಾತ್, ಅವೆಲ್ಲವೂ ಪರಸ್ಪರ ಪೂರಕವಾಗಿರುತ್ತವೆ. ಅತ್ಯಂತ ದಾರ್ಶನಿಕವಾಗಿ ಚಿಂತನೆ ಮಾಡುವುದಿದ್ದರೆ ಇವುಗಳಲ್ಲಿ ಯಾವುದೊಂದೂ ಇನ್ನೊಂದನ್ನು ಅಂತರ್ಗತಿಸಿಕೊಳ್ಳುವಷ್ಟು ವಿಸ್ತೃತಗೊಳ್ಳುವುದು ಸಾಧ್ಯ. ಈ ಸತ್ಯವನ್ನು ಕಂಡುಕೊಳ್ಳುವಷ್ಟು ದೃಷ್ಟಿ ಸೂಕ್ಷ್ಮತೆಯನ್ನು ಹೊಂದುವುದು ಮಾತ್ರ ಅಪರೂಪದ ಸಂದರ್ಭ. ಪ್ರಸ್ತುತ ಯುಗದಲ್ಲಿ ಇಂತಹ ಪೂರಕತ್ವದ ಮೇಲಾಗಲೀ ಪರಸ್ಪರ ಅಂಗತರ್ಗತಿಸಿಕೊಳ್ಳುವುದರ ಮೇಲಾಗಲೀ ಅವಧಾರಣೆಯಿಲ್ಲದಿರುವುದು ಮುಖ್ಯವಾಗಿ ಗಮನಿಸಬೇಕಾದ ಒಂದು ಶೈಕ್ಷಣಿಕ ದೋಷ. ಈ ಶೈಕ್ಷಣಿಕ ದೋಷದಿಂದಲಾಗಿ ಒಂದಕ್ಕೊಂದು ಹತ್ತಿರ ಬರಬೇಕಾಗಿದ್ದ ಅಧ್ಯಯನ ವಿಷಯಗಳು ಒಂದರಿಂದೊಂದು ಸಂಪೂರ್ಣ ಭಿನ್ನವಾಗಿರುವಂತೆ ತಿಳಿಯಲ್ಪಡುವುದು ಇಂದಿಗೆ ಸಾಮಾನ್ಯವಾಗಿದೆ. ಉದಾಹರಣೆಗೆ, ವಿಜ್ಞಾನ ವಿಷಯಗಳನ್ನು ಆರಿಸಿಕೊಂಡು ವೈದ್ಯರಾಗಿಯೋ ತಂತ್ರಜ್ಞರಾಗಿಯೋ ಕೆಲಸ ಮಾಡುವ ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಭಾಷೆಯಂತಹ ವಿಷಯಗಳನ್ನು ಉಪೇಕ್ಷಿಸುವುದನ್ನು ಇಂದಿಗೆ ಎಲ್ಲಾ ಕಡೆಗಳಲ್ಲಿಯೂ ಕಾಣಬಹುದು. ಇದರಿಂದಲಾಗಿ ವಿದ್ಯಾರ್ಥಿ ವರ್ಗಗಳಲ್ಲಿ ಕೀಳರಿಮೆಯಂತಹ ಭಾವನೆಗಳು ತಾಗಿ ಪರಸ್ಪರ ದ್ವೇಷವೂ ಕೆಲವೊಮ್ಮೆ ಉದ್ಭವಿಸುವುದನ್ನು ಕಾಣಬಹುದು. ಅರವತ್ತರ ದಶಕದ ಒಂದು ಘಟನೆಯನ್ನು ನೆನೆಯುವುದಿದ್ದರೆ, ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ತಂತ್ರ ಮತ್ತು ತಂತ್ರೇತರ ವಿಭಾಗಗಳೊಳಗೆ ಉಂಟಾದ ವೈಷಮ್ಯದಿಂದಲಾಗಿ ವಿಧ್ವಂಸಕಕೃತ್ಯಗಳು ನಡೆದುದು ಒಂದು ಐತಿಹಾಸಿಕ ಸತ್ಯ.

ಈ ರೀತಿಯಲ್ಲಿ ಉಪೇಕ್ಷೆಗೊಳಗಾದ ಅಧ್ಯಯನ ವಿಷಯಗಳಲ್ಲಿ ಭಾಷೆಗಳನ್ನು ಮುಖ್ಯವಾಗಿ ಹೆಸರಿಸಬಹುದು. ಭಾಷೆಗಳ ಉಪೇಕ್ಷೆಗೆ ಭಾಷೆಯ ಬಗೆಗಿನ ಕಲ್ಪನೆಗಳೂ ಮುಖ್ಯ ಕಾರಣಗಳಾಗುತ್ತವೆ. 1. ಅತಿ ಮುಖ್ಯವಾಗಿ, ಭಾಷೆ ಎಂಬುದು ಅಭಿಪ್ರಾಯ ಪ್ರಕಟಣೆಯ ಒಂದು ಸಾಧನ ಮಾತ್ರ ಆಗಿರುವುದರಿಂದ ಅದು ಗಂಭೀರಾಧ್ಯಯನಕ್ಕೆ ಯೋಗ್ಯವಾದ ವಸ್ತುವಾಗುವುದಿಲ್ಲವೆಂಬ ಅಭಿಪ್ರಾಯ ಇಂದಿಗೆ ಸಾಮಾನ್ಯವಾಗಿ ಎಲ್ಲರ ಮನಸ್ಸಿನಲ್ಲೂ ಇರುವಂತಹದು. ಭಾಷೆ ಎಂಬುದು ನಾಗರಿಕತೆಯ ಬೆಳವಣಿಗೆಯ ಸಂದರ್ಭದಲ್ಲಿ ಮನುಷ್ಯನು ಸಾಧಿಸಿಕೊಂಡ ಒಂದು ವಸ್ತುವಾಗಿದ್ದು ಅದು ಸಂಪೂರ್ಣ ಅವನ ನಿಯಂತ್ರಣಕ್ಕೆ ಒಳಪಟ್ಟಿದ್ದು. ಆದುದರಿಂದ ಅದರ ಬಗೆಗೆ ಯಾವುದೇ ಪವಿತ್ರ ಭಾವನೆಯ ಮತ್ತು ಮನುಷ್ಯಾತೀತಶಕ್ತಿಯ ಅಧೀನತೆಯನ್ನು ಇಡುವ ಅವಶ್ಯಕತೆ ಇಲ್ಲ ಎಂಬುದೂ ಇಂದಿಗೆ ಪ್ರಶ್ನಾತೀತವೋ ಎಂಬಂತೆ ಅಂಗೀಕೃತ. 2. ಭಾಷೆಯನ್ನು ರೂಢಿಯಿಂದಲೇ ಪಡೆಯಲು ಸಾಧ್ಯವಾಗುವುದರಿಂದ ಅದನ್ನು ಹೆಚ್ಚು ಹೆಚ್ಚು ವ್ಯಾವಹಾರಿಕಗೊಳಿಸುವುದೇ ಅವಶ್ಯವಲ್ಲದೆ ಅದನ್ನೊಂದು ಗಂಭೀರವಾದ ಅಧ್ಯಯನ ವಿಷಯವೆಂದು ಪರಿಗಣಿಸುವ ಅವಶ್ಯಕತೆ ಇಲ್ಲ. ವ್ಯಾಕರಣಾಂತಹದು ಅದರ ಬೆಳವಣಿಗೆಮಾರಕ. ಛಂದಸ್ಸು ಇಂದಿಗೆ ಕಾಲಬಾಧಿತ. ಅಭಿಪ್ರಾಯ ಪ್ರಕಟಣೆಯಾದರೆ ಭಾಷೆಯ ಬಳಕೆಯಾಯಿತು. ಅದರಲ್ಲಿ ನಿಯಮಗಳ ಪಾಲನೆ ಅವಶ್ಯವಲ್ಲ. ಒಂದು ನಿರ್ದಿಷ್ಟ ವೃತ್ತಿಯವನು ಆ ವೃತ್ತಿಗೆ ಸಂಬಂಧಿಸಿದ ಶಬ್ದಗಳನ್ನೋ

ಸುಡಿಗಟ್ಟುಗಳನ್ನೋ ತಿಳಿದರೆ ಸಾಕು. ಇತರ ವಿಷಯಗಳು ಅಪ್ರಸ್ತುತ. ಸಾಹಿತ್ಯದಂತಹದು ಪ್ರತಿಭೆಯಿಂದ ಸಿದ್ಧಿಸುವಂತಹದು. ಅಲ್ಲಿ ಸಹಜತೆಯೇ ಮುಖ್ಯವಾದುದರಿಂದ ಶಾಸ್ತ್ರೀಯತೆಯನ್ನು ತಿಳಿಯುವ ಆವಶ್ಯಕತೆ ಇಲ್ಲ.

ಭಾಷೆಯ ಬಗೆಗಿನ ಈ ನಿಲುವಿನಲ್ಲಿ ಸತ್ಯಾಂಶಗಳೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದರೆ ನಿಲುವು ಈ ತನ್ನ ಹೊರತಾದ ನಿಲುವುಗಳು ಇರುವ ಸಾಧ್ಯತೆಯನ್ನೇ ಗಮನಿಸದಿದ್ದುದರಿಂದ ಪೂರ್ವಗ್ರಹಪೀಡಿತ ಎಂದು ನಿಖರವಾಗಿ ಹೇಳಬಹುದು. ಯಾಕೆಂದರೆ, ಒಂದು ನಿಲುವನ್ನು ತಳೆಯುವಾಗ ಸಂಬಂಧಿತ ವಿಷಯದ ಕುರಿತಾದ ಎಲ್ಲ ನಿಲುವುಗಳನ್ನು ಮನನ ಮಾಡಿಕೊಳ್ಳಬೇಕು. ತನ್ನ ನಿಲುವು ಸರಿಯೇ ಆಗಿದ್ದರೂ ಅದರ ಬಗೆಗೆ ಪರಿಷ್ಕಾರಗಳು ಅಗತ್ಯವಾಗಿದೆಯೇ ಎಂದು ಚಿಂತನೆ ನಡೆಸಬೇಕು. ಅದಕ್ಕೆ ಬದಲಾಗಿ ಆಪಾತಸತ್ಯವನ್ನಷ್ಟೇ ಗಮನದಲ್ಲಿಟ್ಟು ತಳೆಯಲಾದ ನಿಲುವು ಪ್ರಶ್ನಾತೀತವೆಂದು ಭ್ರಾಂತಿಪಡುವುದು ಪೂರ್ವಗ್ರಹದ ಹೊರತು ಮತ್ತೇನೂ ಅಲ್ಲ.

ಋಷಿಪರಂಪರಾಗತವಾದ ಇನ್ನೊಂದು ನಿಲುವು ಪ್ರಾಚೀನ ಭಾರತದಲ್ಲಿ ವಿಸ್ತೃತಗೊಂಡು ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ವ್ಯಾಪಿಸಿನಿಂತಿದೆ. ಭಾಷಾಶಾಸ್ತ್ರದಂತಹ ಆಧುನಿಕ ವಿಚಾರ ಸರಣಿಗೂ ಕಾವ್ಯ ಮೀಮಾಂಸೆಯಂತಹ ಪರಂಪರಾಗತ ಸರಣಿಗೂ ಕಾರಣವಾಗಿದೆ. ಈ ನಿಲುವಿನ ಪ್ರಕಾರ ಭಾಷೆ ಎಂಬುದು ಕೇವಲ ಮನುಷ್ಯ ಮುಖ್ಯೋಚ್ಚಾರಿತವಾದ ವರ್ಣ ಸಂಯೋಜನೆಗಳಿಗಷ್ಟೇ ಸೀಮಿತವಾದ ಭಾವಪ್ರಕಟನ ವಿಧಾನ ಅಲ್ಲ. ಭಾಷೆ ಎಂಬುದು ವಾಗ್ರೂಪವಾದ ಒಂದು ತತ್ತ್ವ. ''ವಾಕ್'' ಎಂದರೆ ಇಲ್ಲಿ ಮನುಷ್ಯ ವ್ಯತಿರಿಕ್ತ ಪಶು ಪಕ್ಷ್ಯಾದಿ ಜೀವಿಗಳಿಗೂ ಮನುಷ್ಯಾತೀತವಾದ ಪ್ರತಿಭಾದಿತತ್ತ್ವಗಳಿಗೂ ಸಂಬಂಧಿಸಿದುದು- ಆಸ್ಪದ ತನಕವೂ ವ್ಯಾಪ್ತಿ ಹೊಂದಿರುವಂತಹದು. ಮುಖ್ಯೋಚ್ಚಾರಿತ ಅಂಶಗಳಿಗೆ ಪೂರಕವಾಗಿ ಬಳಸಲಾಗುವ ಹಾವಭಾವಗಳಂತಹ ಚಿಹ್ನೆಗಳೂ ಭಾಷೆಯ ವಿಶಾಲಾರ್ಥದಲ್ಲಿ ಅಂತರ್ಗತವಾಗತಕ್ಕವೇ.

''ಸ್ಥಿತಪ್ರಜ್ಞಸ್ಯ ಕಾ ಭಾಷಾ'' - ಇಲ್ಲಿ 'ಭಾಷಾ' ಪದವು ವ್ಯಕ್ತಿತ್ವದಷ್ಟು ವಿಶಾಲವಾದ ಅರ್ಥವನ್ನು ಕೊಡುತ್ತದೆ.

''ಚತ್ವಾರಿವಾಕ್ ಪರಿಮಿತಾ ಪದಾನಿ... ತುರೀಯಂ ವಾಚೋ ಮನುಷ್ಯಾ ವದಂತಿ'' ಎಂಬ ವೇದ ಮಂತ್ರ ಈ ಅಂಶವನ್ನು ತಿಳಿಸುತ್ತದೆ. ಈ ಮಂತ್ರದ ಪ್ರಕಾರ ವಾಕ್ ತತ್ತ್ವಕ್ಕೆ ನಾಲ್ಕು ಸ್ತರಗಳು; ಅವುಗಳಲ್ಲಿ ಮೂರು ಜ್ಞಾನಿಗಳಿಗೆ ಮಾತ್ರ ಗೋಚರಿಸತಕ್ಕವು. ನಾಲ್ಕನೆಯದಾದ ಸ್ತರವು ಮಾತ್ರವೇ ಮನುಷ್ಯ ವ್ಯವಹಾರದಲ್ಲಿ ಇರುವಂತಹದು. ಎಂದರೆ, ಮಾಡು ಎಂದು ನಾವು ರೂಢಿಯಲ್ಲಿ ಯಾವುದನ್ನು ಹೇಳುತ್ತೇವೆಯೋ ಅದು ಅದರ ಪರಿಪೂರ್ಣ ರೂಪದಲ್ಲಿ. ನಮಗೆ ಗೋಚರವಾಗುವಂತಹದು ಅದರ ನಾಲ್ಕನೆಯ ಒಂದಂಶ ಮಾತ್ರ. ಇದು ಅದರ ಅತ್ಯಂತ ಸ್ಥೂಲವಾದ ಅಂಶ. ಇದಕ್ಕೆ ಹೊರತಾದ ಮೂರು ಅಂಶಗಳು ಗುಹೆಯೊಳಗೆ ಅಡಗಿದಂತೆ ಜ್ಞಾನಕ್ಕೆ ಮಾತ್ರ ಗೋಚರವಾಗಿ ಹುದುಗಿರುತ್ತವೆ. ಆ ಸೂಕ್ಷ್ಮಸ್ತರಗಳನ್ನು ಯಾಕೆ ಒಪ್ಪಬೇಕು? ಎಂದು ವ್ಯವಹಾರವಾದಿಗಳು ಪ್ರಶ್ನಿಸಬಹುದು. ಸ್ವಲ್ಪ ಯೋಚಿಸಿದಲ್ಲಿ ಈ ಪ್ರಶ್ನೆಗೆ ಉತ್ತರ ತಾನಾಗಿಯೇ ಹೊಳೆಯುವುದು. ಅಲ್ಲದೆ, ಜ್ಞಾನಿಗಳು ಎಂದರೆ ನಮಗೆ ಸಂಪೂರ್ಣ ದೂರ ಇರುವ ಒಂದು ಪ್ರತ್ಯೇಕ ವರ್ಗವಲ್ಲ. ಎಲ್ಲರೂ ಜ್ಞಾನದ ಅಂಶಗಳನ್ನು ಬೇರೆ ಬೇರೆ ಪರಿಮಾಣಗಳಲ್ಲಿ ಹೊಂದಿರುವವರೇ. ಸಾಧಕರು ಈ ಜ್ಞಾನಾಂಶಗಳನ್ನು ಬೆಳೆಸಿ ಸೂಕ್ಷ್ಮಾತಿಸೂಕ್ಷ್ಮಗೊಳಿಸುತ್ತಾರೆ ಎಂಬುದಷ್ಟೇ ವಿಶೇಷ. ಮೂರು ಸೂಕ್ಷ್ಮಸ್ತರಗಳು ಎಂದು ಹೇಳಿರುವಲ್ಲಿ ಆ ಮೂರನ್ನು ನಿರ್ದಿಷ್ಟ ಸಂಖ್ಯೆಯ ವಸ್ತುಗಳನ್ನಾಗಿಯೇ ಗ್ರಹಿಸಬೇಕಾಗಿಲ್ಲ. ಅವುಗಳನ್ನು ಸೂಕ್ಷ್ಮವಾದ

ಒಂದೇ ಸ್ವರವೆಂದೂ ಹೇಳಬಹುದು. ತಾತ್ಪರ್ಯದಲ್ಲಿ, ಅವು ಅನುಭವವನ್ನು ಸಂಕೇತಿಸುವಂತಹವು. ಆದುದರಿಂದ ವೇದಮಂತ್ರದ ಅರ್ಥ "ಮಾತನ್ನು ಆಡುವಲ್ಲಿ ಅದಕ್ಕೆ ಹಿನ್ನೆಲೆಯಾಗಿ ಮತ್ತೆ ಅದಕ್ಕಿಂತ ಎಷ್ಟೋ ಸೂಕ್ಷ್ಮವಾಗಿ ಅನುಭವ ತತ್ತ್ವ ಕೆಲಸ ಮಾಡುತ್ತದೆ" ಎಂಬುದು. ಮಾತಿಗೆ ಹಿನ್ನೆಲೆಯಾಗಿರುವ ಅನುಭವ ಅದಕ್ಕಿಂತ ಎಷ್ಟೋ ಸೂಕ್ಷ್ಮವಾಗಿರುವಂತಹದು ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಋಷಿಪರಂಪರೆಯ ಪ್ರಕಾರ "ಭಾಷೆ" ಎಂಬ ಪರಿಕಲ್ಪನೆಯನ್ನು ವಿವೇಚಿಸುವಾಗ ಅದರ ಹಿಂದಿನ ಅನುಭವವನ್ನು ಗ್ರಹಿಸಿಯೇ ನೋಡಬೇಕು ಎಂಬುದು ಈ ಮಂತ್ರದ ಸಾರ. "ಯತೋ ವಾಚೋ ನಿವರ್ತಂತೇ..." ಎಂಬ ಇನ್ನೊಂದು ಮಂತ್ರವೂ ಮಾತು ಸತ್ಯವನ್ನು ಸಂಕೇತಿಸುತ್ತದೋ ಹೊರತು ಮಾತೇ ಸತ್ಯವಲ್ಲ ಎನ್ನುತ್ತದೆ.

ಈ ಮಂತ್ರದ ಸಾರ ಅನಂತರದ ಶಾಸ್ತ್ರಕಾರರಲ್ಲಿ ಅಲ್ಪ ವ್ಯತ್ಯಾಸಗಳೊಂದಿಗೆ ಬೇರೆ ಬೇರೆ ಪ್ರಕಾರಗಳಲ್ಲಿ ವಿಸ್ತೃತಗೊಂಡಿದೆ. ವೇದಾಂಗಕಾರರಲ್ಲಿ ವೈಯಾಕರಣರು ಮತ್ತು ದಾರ್ಶನಿಕರಲ್ಲಿ ಪ್ರತ್ಯಭಿಜ್ಞಾ ದರ್ಶನಕಾರರು ವಾಕ್ ತತ್ತ್ವವನ್ನು ವಿವೇಚಿಸಿರುತ್ತಾರೆ. ಪೂರ್ವ ಮೀಮಾಂಸಾ ದಾರ್ಶನಿಕರದ್ದೂ ಅವರ ನಿಲುವಿಗೆ ಹೊಂದಿಕೆಯಾಗುವ ವಿಸ್ತರಣೆಗಳೇ. ವೈದಿಕೇತರರೆಂದು ಕರೆಯಲ್ಪಡುವ ಬೌದ್ಧ ದಾರ್ಶನಿಕರೂ ತಮ್ಮದೇ ಕೊಡುಗೆಯನ್ನು ಈ ಕ್ಷೇತ್ರಕ್ಕೆ ನೀಡಿರುತ್ತಾರೆ.

ಶಾಸ್ತ್ರಕಾರರ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದಿದ್ದರೆ ವ್ಯವಹಾರದ ಮಾತಿಗೆ "ವೈಖರೀ" ಎಂದೂ ಸೂಕ್ಷ್ಮಸ್ತರಗಳಿಗೆ "ಪರಾ", "ಪಶ್ಯಂತೀ" ಮತ್ತು "ಮಧ್ಯಮಾ" ಎಂದೂ ಹೆಸರು. ಕೆಲವೊಮ್ಮೆ ಪರಾ ಮತ್ತು ಪಶ್ಯಂತೀಗಳನ್ನು ಏಕೀಕರಿಸುವುದೂ ಇದೆ. ಇವುಗಳಲ್ಲಿ ಪರಾ ಎಂಬುದು ಪರಮಾರ್ಥ ಸತ್ಯದೊಂದಿಗೆ ಏಕೀಕರಣಗೊಳ್ಳುವಂತಹದು. ಪಶ್ಯಂತೀ ಎಂಬುದು ಪರತತ್ತ್ವದ ಸಗುಣಸ್ವರೂಪದಂತೆ. ಎಂದರೆ, ಪರಾ ಎಂಬುದು ಸಾಧಕರಿಗೆ ಮಾತ್ರ ಗೋಚರವಾದರೆ ಪಶ್ಯಂತೀ ಎಂಬುದು ಸಾಮಾನ್ಯರಿಗೂ ಕಲ್ಪನಾ ರೂಪದಲ್ಲಿ ಗಮ್ಯ. ಮಾಧ್ಯಮಾ ಎಂಬುದು ವ್ಯವಹಾರದ ಮಾತಿನ ಹಿಂದುಗಡೆಯಲ್ಲಿ ರೂಢಿಯ ಭಾಷೆಗಳೆಲ್ಲವಕ್ಕೂ ಸಮಾನವಾಗಿ ನಿಲ್ಲುವ ಬೌದ್ಧಿಕ ಅಂಶ.

ಆಧುನಿಕರ ಸಾಮಾನ್ಯ ದೃಷ್ಟಿಯಲ್ಲಿ ಭಾಷೆ ಎಂಬುದು ಮನುಷ್ಯನ ನಿಯಂತ್ರಣಕ್ಕೆ ಒಳಪಟ್ಟದು; ಅದು ವಿಷಯ ವಾಹಕವಾಗಿ ಕೆಲಸ ಮಾಡುವಂತಹದಷ್ಟೇ ಹೊರತು ಅದುವೇ ಒಂದು ಗಂಭೀರವಾಗಿ ಪರಿಗಣಿಸಲ್ಪಡತಕ್ಕ ವಿಷಯವಲ್ಲ. ಆದುದರಿಂದ ಅಧ್ಯಯನ ಯೋಜನೆಯಲ್ಲಿ ಅದರ ಸ್ಥಾನ ಎರಡನೆಯದು; ವಿಷಯ ವಾಹಕತ್ವವಷ್ಟೇ ಅದರ ಪ್ರಯೋಜನ.

ಋಷಿಪರಂಪರಾ ದೃಷ್ಟಿಯಲ್ಲಿ ವಿವಿಧಸ್ತರಗಳನ್ನೊಳಗೊಂಡ ಭಾಷಾತತ್ತ್ವವೂ ಒಂದು ಜೀವಮಾನದುದ್ದಕ್ಕೂ ಅಧ್ಯಯನ ನಡೆಸಬಹುದಾದ ಗಂಭೀರವೂ ದಾರ್ಶನಿಕ ಮಹತ್ತ್ವವೂ ಉಳ್ಳ ವಿಷಯ. ಅವರು ರೂಪಿಸಿದ ಸಂಸ್ಕೃತ ಭಾಷೆಯ ಅಧ್ಯಯನ ಇದನ್ನು ಸಿದ್ಧಪಡಿಸಿ ತೋರಿಸುತ್ತದೆ. ಯಾವ ಒಂದು ಶಬ್ದವನ್ನೋ ವಾಕ್ಯವನ್ನೋ ಈ ಭಾಷೆಯಿಂದ ಹೆಕ್ಕಿ ತೆಗೆದರೂ ಅದೊಂದು ದಾರ್ಶನಿಕಸತ್ಯದ ಕಡೆಗೆ ಬೆರಳು ತೋರಿಸುವಂತಹದೇ. ಬಾಲಪಾಠಕ್ಕೆ ಯೋಗ್ಯವಾದ ಪುಸ್ತಕದ ಮೊದಲನೆಯ ವಾಕ್ಯವೂ ಕೂಡ ಈ ದಾರ್ಶನಿಕತೆಯನ್ನು ತೋರಿಸಬಲ್ಲುದು. ಉದಾಹರಣೆಗೆ, "ಅಜಃ ತಿಷ್ಠತಿ, ಗಜಃ ಗಚ್ಛತಿ" ಎಂಬ ವಾಕ್ಯವನ್ನು ಗಮನಿಸಿದಾಗ ಸೃಷ್ಟಿಯಲ್ಲಿರುವ ಸ್ಥಿರ-ಚರ ಅಂಶಗಳ ಕಡೆಗೆ ಗಮನ ಹರಿಯುತ್ತದೆ. ಹೀಗೆ ವಿಷಯವನ್ನೊಳಗೊಂಡೇ ಈ ಭಾಷೆಯ ಅಧ್ಯಯನ ಮುಂದುವರಿಯುತ್ತದೆ. ಇದು ಸಂಸ್ಕೃತಕ್ಕೇ ಸೀಮಿತವಾಗಬೇಕಾಗಿಲ್ಲ. ಯಾವ ಭಾಷೆಯ ಅಧ್ಯಯನವನ್ನೂ ಸಾಧಕರು ಈ ಮಟ್ಟಕ್ಕೆ ಏರಿಸಬಲ್ಲರು. ಸಂಸ್ಕೃತದಲ್ಲಿ ಸಾಧನೆ ಮೇಲ್ನೋಟಕ್ಕೇ ಕಾಣಿಸುವಷ್ಟು ಸ್ಪಷ್ಟವಾಗಿದೆ ಎಂಬುದು ವಿಶೇಷ.

ಆದುದರಿಂದ ಭಾಷೆ ಎಂಬುದು ವಾಹಕವಾಗುವುದರ ಜೊತೆಗೆ ವಾಹ್ಯವೂ ಆಗಬಲ್ಲುದು. ಇಂತಹ ಉಭಯಾತ್ಮಕತೆ ಅಥವಾ ಬಹ್ವಾತ್ಮಕತೆ ಆ ಭಾಷೆಯನ್ನು ರೂಪಿಸುತ್ತ ಹೋಗುವ ವ್ಯಕ್ತಿಯ ಅಥವಾ ಜನಾಂಗದ ಸಾಂಸ್ಕೃತಿಕ ಸಾಧನೆಗೆ ಸಾಧಕನಲ್ಲದವನಿಗೆ ಯಾವ ವೈಜ್ಞಾನಿಕ ವಿಷಯವನ್ನು ಬೋಧಿಸಿದರೂ ಹೇಳಿದಷ್ಟೇ ಕಲಿತು ಅದರಿಂದ ಜೀವನ ನಿರ್ವಹಣೆ ಮಾಡುವುದರ ಹೊರತು ಅವನೇನನ್ನೂ ಸಾಧಿಸಲಾರ. ಇಂತಹ ಸಾಧನೆಯಿಂದಲೇ ಋಷಿಗಳು ಮತ್ತು ಅವರ ಅನುಯಾಯಿಗಳು ಭಾಷೆಯನ್ನು ''ಶಬ್ದ ಪ್ರಮಾಣ'' ''ಪ್ರಶಬ್ದಬ್ರಹ್ಮ'' ಮೊದಲಾಗಿ ಕರೆಯಲ್ಪಡುವ ಪರಮಾರ್ಥಸಂಬಂಧಿ ವಿಷಯಗಳವರೆಗೂ ವಿಸ್ತರಿಸಿದರು. ಇದರ ಜೊತೆಗೇ ಆಯುರ್ವೇದ-ಜ್ಯೋತಿಷಗಳಂತಹ ಭೌತಿಕ ಸಾಧನೆಗಳನ್ನು ನಡೆಸಿ ಅವುಗಳಿಗೂ ಸತ್ಯಾನ್ವೇಷಣೆಯನ್ನೇ ಗುರಿಯನ್ನಾಗಿ ತೋರಿಸಿದರು. ಭಾಷೆ-ವಿಷಯಗಳ ಅವಿನಾಭಾವವನ್ನು ಈ ಎಲ್ಲಾ ಸರಣಿಗಳಲ್ಲಿ ಕಾಣಬಹುದು. ಭಾಷೆಗೆ ವಿಷಯದ ಮಹತ್ತ್ವ ಇಲ್ಲದಿರುತ್ತಿದ್ದರೆ ಮಹಾಭಾಷ್ಯದಂತಹ ಗ್ರಂಥಗಳನ್ನೊಳಕೊಳ್ಳುವ ವೈಯಕೀಕರಣ ಪರಂಪರೆ ಉಂಟಾಗುತ್ತಿರಲಿಲ್ಲ. ಸೂಕ್ಷ್ಮವಾಗಿ ಯೋಚಿಸಿದಾಗ ಆಧುನಿಕ ಸಾಧನೆಗಳು ಈ ತಾತ್ತ್ವಿಕ ಅಂಶಗಳ ಆಂಶಿಕ ವಿಸ್ತರಣೆಗಳಾಗಿ ಕಾಣುವುದು ಆಶ್ಚರ್ಯವಲ್ಲ.

ಒಂದು ಅಧ್ಯಯನ ವಿಷಯವು ವಿಸ್ತೃತಗೊಳ್ಳುವುದು ಅದೊಂದು ಜೀವನ ಮುಖವಾಗಿರುವುದರಿಂದ ಎಂಬುದನ್ನು ಹಿಂದೆಯೇ ಹೇಳಲಾಗಿದೆ. ಈ ಬಗ್ಗೆ ಸ್ವಲ್ಪ ವಿವೇಚನೆ ಅಗತ್ಯ; ಜೀವನಮುಖವಾಗುವುದೆಂದರೆ ಜೀವನದ ಪರಿಕಲ್ಪನೆಯನ್ನು ಸಮಗ್ರವಾಗಿ ಬಿಡಿಸುವ ಶಕ್ತಿಯನ್ನು ಹೊಂದಿರುವುದು. ಜೀವನವು ವ್ಯಕ್ತಿ ಮತ್ತು ವಿಶ್ವ ಎಂಬ ಅತಿ ಸಣ್ಣ ಮತ್ತು ಅತಿ ದೊಡ್ಡ ಘಟಕಗಳನ್ನು ಹೊಂದಿರುವಂತಹದು. ಅತಿ ಸಣ್ಣದರ ಮತ್ತು ಅತಿ ದೊಡ್ಡದರ ಸಂಬಂಧವಿವೇಚನೆ ಜೀವನ ಚಿಂತನೆಯಲ್ಲಿ ಅಗತ್ಯ. ಈ ಸಂಬಂಧವನ್ನು ಅರ್ಥ ಮಾಡಿದಲ್ಲಿ ಒಂದು ಮಟ್ಟಿಗೆ ಜೀವನ ರಹಸ್ಯವನ್ನೇ ಭೇದಿಸಿದಂತಾಗುತ್ತದೆ. ಎಲ್ಲಾ ಅಧ್ಯಯನ ವಿಷಯಗಳೂ ವಿಸ್ತೃತಗೊಂಡಾಗ ಈ ಘಟಕಗಳು ಮತ್ತು ಅವುಗಳ ಸಂಬಂಧ- ಇವುಗಳ ಕುರಿತು ಯೋಚಿಸತಕ್ಕವೇ. ಋಷಿಪರಂಪರಾಗತ ಭಾಷಾಧ್ಯಯನ ವ್ಯಕ್ತಿ ಮತ್ತು ವಿಶ್ವ ಇವೆರಡರಲ್ಲಿ ತಾತ್ತ್ವಿಕ ಐಕ್ಯವನ್ನು ಕಂಡಿದೆ. ಈ ವ್ಯಕ್ತಿ ಮಾತ್ರವಲ್ಲ, ಅಣುವಿನಂತಹ ಘಟಕದವರೆಗೂ ಈ ಐಕ್ಯವನ್ನು ವಿಸ್ತರಿಸಿದೆ. ಇದರಿಂದಲೇ ಭೌತಿಕ ಮತ್ತು ಆಧ್ಯಾತ್ಮಿಕ ಸಾಧನಗಳೆರಡನ್ನೂ ಒಟ್ಟಿಗೇ ಪ್ರವಹಿಸುವ ಭಾಷಾ ತತ್ತ್ವವನ್ನು ರೂಪಿಸಿದೆ. ಸಣ್ಣ ದೊಡ್ಡ ಘಟಕಗಳ ಐಕ್ಯ ಇತರ ನಾಗರಿಕತೆಗಳಲ್ಲೂ ಇಲ್ಲದಿಲ್ಲ. ''microcosm'' ಮತ್ತು ''macrocosm''ಎಂಬ ಪದಗಳು ಋಷಿ ಪರಂಪರೆಯ ''ಪಿಂಡಾಂಡ'' ಮತ್ತು ''ಬ್ರಹ್ಮಾಂಡ''ಗಳಿಗೆ ಸಮಾನಾಂತರವಾದವು. ಪಾಶ್ಚಾತ್ಯ ತರ್ಕದಲ್ಲಿ ''universals'' ಮತ್ತು 'perticulars' ಇವುಗಳಿಗೆ ಮುಖ್ಯ ಸ್ಥಾನವಿದೆ. ಗಾಂಧಿ ಯವರಂತಹ ಆಧುನಿಕ ಸಾಧಕರೂ ಈ ಪರಿಕಲ್ಪನೆಗಳಿಂದ ಪ್ರಭಾವಿತರೇ. ಆದುದರಿಂದಲೇ ಅವರ ಶೈಕ್ಷಣಿಕ ದೃಷ್ಟಿ ಭಾಷಾ ಸಂಬಂಧಿ ದೃಷ್ಟಿ-ಇಂತಹವು ಋಷಿಪರಂಪರೆಗೆ ಹೊಂದುವಂತಹವೇ ಆಗಿವೆ.

ಋಷಿಪರಂಪರೆಯ ಆದರ್ಶದ ಬಗೆಗೆ ಯೋಚಿಸಿದಂತೆ ಆಧುನಿಕ ಪ್ರಪಂಚದ ವ್ಯಾವಹಾರಿಕ ವಿಷಯಗಳ ಕಡೆಗೂ ಗಮನ ಹರಿಸುವುದು ಅಗತ್ಯ. ಹೀಗೆ ಗಮನಹರಿಸಿದಾಗ ಅಧ್ಯಯನಕ್ಕೆ ವಿಷಯವಾಗುವಂತಹವು ಭಾಷೆಯ ಯಾವ ಯಾವ ಮುಖಗಳು ಮತ್ತು ಇಂದಿಗೆ ಭಾಷಾಭಿಜ್ಞರು ಯಾವ ಯಾವ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುವಂತೆ ರೂಪುಗೊಳ್ಳಬೇಕು ಎಂದು ಯೋಚಿಸುವುದರ ಆವಶ್ಯಕತೆಯ ಅರಿವಾಗುತ್ತದೆ. ಭಾಷೆಯನ್ನು ಸಂಭಾಷಣೆ, ಲೇಖನ, ಗ್ರಂಥಭ್ಯಾಸ, ಅನುವಾದ, ಗ್ರಂಥ ಸಂಪಾದನೆ, ಜೀರ್ಣಯೋಗ್ಯವಾಗುವಂತೆ ಸಾರಗ್ರಾಹಿ ವಿಷಯ ಸಂಗ್ರಹ, ಸೃಷ್ಟಿ ಶೀಲವೆಂದು

ಕರೆಯಲ್ಪಡುವ ಕಥೆ, ಕವನ, ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳು- ಇತ್ಯಾದಿ ಮುಖಗಳಾಗಿ ವರ್ಗೀಕರಿಸಿ ನೋಡುವುದು ಇಂದಿಗೆ ಸಾಮಾನ್ಯವಾದ ಒಂದು ವಿದ್ಯಮಾನ. ಅಲ್ಲದೆ, ಭಾಷಾಧ್ಯಯನದಲ್ಲಿ ವ್ಯಾಕರಣ, ನಿಘಂಟು ಇತ್ಯಾದಿಗಳ ಅವಶ್ಯಕತೆ, ಭಾಷಾಧ್ಯಯನ ಮತ್ತು ಸಾಹಿತ್ಯಾಧ್ಯಯನಗಳ ಪರಸ್ಪರ ಸಂಬಂಧ ಇಂತಹವೂ ಇಂದಿಗೆ ಚರ್ಚೆಗೊಳಗಾಗುವ ವಿಷಯಗಳು. ಸಂಭಾಷಣೆ ಮೊದಲಾದವು ಜನಪ್ರಿಯಗೊಳ್ಳುತ್ತಿರುವ ಕೆಲವು ಅಧ್ಯಯನ ವಿಧಾನಗಳಾದರೂ ಶೈಕ್ಷಣಿಕವಾಗಿ ಚಿಂತಿಸಿದಾಗ ಭಾಷಾಧ್ಯಯನದಲ್ಲಿ ಮಧ್ಯರೇಖೆಯಾಗಿ ನಿಲ್ಲುವಂತಹದು ವಿದ್ಯಾರ್ಥಿಯ ನಿರೂಪಣ ಶಕ್ತಿಯನ್ನು ಭಿನ್ನ ದೇಶ, ಭಿನ್ನ ಕಾಲ-ಇಂತಹವುಗಳಿಗೆ ಹೊಂದಿಸಿ ಸಾಧನೆಗಳನ್ನು ಶಾಶ್ವತಗೊಳಿಸಬಹುದಾದ ಭಾಷಾ ಸಂಬಂಧಿ ಅಂಶ. ಭಾಷೆಯನ್ನು ಯಾವುದೇ ಶಾಸ್ತ್ರೀಯ ಅಥವಾ ಕಲಾ ಸಂಬಂಧಿ ಸರಣಿಗೆ ಹೊಂದಿಸುವಂತೆ ಈ ಅಂಶ ಇರಬೇಕು. ಬಹುಶಃ ಆಂಗ್ಲ ಭಾಷೆಯ academic ಎಂಬ ಪದ ಇದಕ್ಕೆ ಸಮೀಪವರ್ತಿಯಾಗಬಲ್ಲುದು. ಈ academic aspect ಇಂದಿಗೆ ಜನಪ್ರಿಯವಲ್ಲ. ಸಂಭಾಷಣೆಯಷ್ಟು ಪ್ರಬಂಧ ಲೇಖನ ಇಂದಿನವರಿಗೆ ಆಕರ್ಷಕವಾಗಿ ಕಾಣುವುದಿಲ್ಲ. ಗ್ರಂಥ ಸಂಪಾದನೆ, ಅನುವಾದ- ಇಂತಹವುಗಳಿಗೆ ಬೇಕಾದ ತಾಳ್ಮೆಯೂ ಇಂದಿನ ಅಧ್ಯಯನ ವಿಧಾನದಲ್ಲಿ ವಿರಳ. ಇಂದಿಗೆ ಜನಪ್ರಿಯವಾಗಿರುವ ಭಾಷಾಂಶಗಳನ್ನು ಉಪೇಕ್ಷೆಗೊಳಪಡಿಸದೆ ಉಪೇಕ್ಷಿತವಾಗಿರುವ ಗ್ರಂಥಾಧ್ಯಯನ, ಗ್ರಾಂಥಿಕ ರೂಪದ ನಿರೂಪಣೆ ಇಂತಹವನ್ನು ಗಂಭೀರವಾಗಿ ಅಧ್ಯಯನಾಂಶವಾಗಿಸುವುದು ಅಗತ್ಯ. ಭಾಷಾಧ್ಯಯನವನ್ನು ಹೀಗೆ ರೂಪಿಸುವಲ್ಲಿ ವ್ಯಾಕರಣ, ಛಂದಸ್ಸುಗಳಂತಹ ಶಾಸ್ತ್ರಗಳ ಸಾರಜ್ಞಾನವೂ ಅಗತ್ಯವಾಗುತ್ತದೆ. ವ್ಯಾಕರಣವೆಂದರೆ ಭಾಷೆಯ ಸಹಜತೆಗೆ ಮಾರಕವಾಗುವ ಕಟ್ಟುಪಾಡುಗಳೆಂದು ಭ್ರಮಿಸಬಾರದು. ಅದು ಭಾಷೆಯ ಕುರಿತ ಚಿಂತನೆ. ಛಂದಸ್ಸೆಂದರೆ ಪದ್ಯ ಸಾಹಿತ್ಯಕ್ಕೆ ಮಾತ್ರ ಅನ್ವಯಿಸುವಂತಹದಲ್ಲ. ಗದ್ಯಕ್ಕೆ ಸಂಬಂಧಿಸಿಯೂ ಛಂದಃ ಸೌಂದರ್ಯವಿದೆ. ಋಷಿಪರಂಪರೆಯಲ್ಲಿ ಭಾಷಾಧ್ಯಯನವೇ ಸಾಹಿತ್ಯಾಧ್ಯಯನವಾದುದರ ರಹಸ್ಯವೂ ಇದೇ. ಇಲ್ಲಿ ಶಿಕ್ಷಣ ಶಾಸ್ತ್ರಜ್ಞರು ಭಾಷಾಧ್ಯಯನವನ್ನು ಪುನಾರೂಪಿಸುವ ಕುರಿತು ಚಿಂತನೆ ನಡೆಸುವ ವಿಪುಲ ಅವಕಾಶವಿದೆ.

ವ್ಯಾಕರಣದ ಬಗೆಗೆ ಹಿಂದೆಯೇ ಪ್ರಸ್ತಾಪಿಸಲಾಗಿದೆಯಾದರೂ ಇನ್ನೂ ಕೆಲವು ವಿವರಗಳನ್ನು ನೀಡುವುದು ಪ್ರಸ್ತುತ ಸಂದರ್ಭದಲ್ಲಿ ಉಚಿತವಾಗಬಹುದು. ಯಾಕೆಂದರೆ, ಪ್ರಸಕ್ತ ಯುಗದಲ್ಲಿ ವ್ಯಾಕರಣದ ಬಗೆಗೆ ಪೂರ್ವಗ್ರಹದಿಂದ ನೋಡುವ ದೃಷ್ಟಿಕೋನವೇ ಹೆಚ್ಚು ಹೆಚ್ಚು ಪ್ರಚುರವಾಗುತ್ತಿರುವುದು ಕಂಡುಬರುತ್ತದೆ. ಈ ದೃಷ್ಟಿಕೋನದ ಪ್ರಕಾರ ಭಾಷೆ ಎಂಬುದು ಮನುಷ್ಯ ನಿಯಂತ್ರಿತವಾದ ವಸ್ತುವಾದುದರಿಂದ ವ್ಯಾಕರಣದಂತಹದು. ಅದರ ಮೇಲೆ ಅನಾವಶ್ಯಕ ನಿರ್ಬಂಧಗಳನ್ನು ಹೇರಿ ಅದರ ಸಹಜತೆಗೆ ಮಾರಕವಾಗುತ್ತದೆ. ವ್ಯಾಕರಣ ಜ್ಞಾನವಿಲ್ಲದ ಮಗು ಸಹಜವಾಗಿಯೇ ಅದರ ಅಭಿಪ್ರಾಯಗಳನ್ನು ಪ್ರಕಟಿಸುತ್ತದೆ. ಅನಕ್ಷರನೂ ಅಭಿಪ್ರಾಯ ಪ್ರಕಟಣೆ ಮಾಡುತ್ತಾನೆ; ಪಂಡಿತನಿಗಿಂತ ಉತ್ತಮವಾಗಿ ಜೀವನ ನಿರ್ವಹಣೆ ಮಾಡುತ್ತಾನೆ. ಜನಪದ ಸಾಹಿತ್ಯದಂತಹದು ವ್ಯಾಕರಣದ ಹಿನ್ನೆಲೆಯಿಲ್ಲದವರಿಂದಲೇ ರಚಿತವಾಗಿದ್ದರೂ ಯಾವ ಸಾಹಿತ್ಯಕ್ಕೂ ಕಡಿಮೆಯಾಗದಂತಹ ಮೌಲ್ಯವನ್ನು ಹೊಂದಿರುತ್ತದೆ. ಭಾಷೆ-ಭಾಷೆಗಳನ್ನು ಹೋಲಿಸಿದಾಗಲೂ ಇಂಗ್ಲಿಷಿನಂತಹ ಭಾಷೆಯಲ್ಲಿ ಕನ್ನಡ-ಸಂಸ್ಕೃತಗಳಲ್ಲಿರುವಂತಹ ಪ್ರೌಢ ವ್ಯಾಕರಣ ಗ್ರಂಥಗಳಿಲ್ಲ. ಮಾಧ್ಯಮಿಕ ಮಟ್ಟದ ಅನಂತರದಲ್ಲಿ ಇಂಗ್ಲಿಷ್ ಅಧ್ಯಯನ ಮಾಡುವಾಗ ವ್ಯಾಕರಣವನ್ನು ಕೈಬಿಡಲಾಗುತ್ತದೆ. ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಕರಣವೆಂದೊಂದು ವಿಷಯ ಅಧ್ಯಯನಯೋಗ್ಯವಾಗಿ ವಿಧಿಸಲ್ಪಡುವುದಿಲ್ಲ. ಅಷ್ಟೊಂದು ಸಮೃದ್ಧವಾದ ಭಾಷೆಯ ಅಧ್ಯಯನವೇ

ವ್ಯಾಕರಣ ಹಿತವಾಗಿ ಸಾಧ್ಯ ಇರುವಾಗ, ಅಲ್ಲದೆ ಅದು ವಿದೇಶೀಯವಾದರೂ ವ್ಯಾಕರಣರಹಿತವಾಗಿ ಅಧ್ಯಯನ ಮಾಡಲ್ಪಡುತ್ತಿರುವಾಗ, ನಮ್ಮದೇ ಭಾಷೆಯಾದ ಕನ್ನಡದಂತಹದಕ್ಕೆ ವ್ಯಾಕರಣ ಹೇರಿಕೆಯ ಅಗತ್ಯವೇನು? ಅದೂ ಅಲ್ಲದೆ, ಕನ್ನಡ ವೈಯಾ ಕರಣರು ತಮ್ಮ ಭಾಷೆಯೊಳಗೇ ವ್ಯಾಕರಣವನ್ನು ರೂಪಿಸಿಕೊಳ್ಳುವುದಕ್ಕೆ ಬದಲಾಗಿ ವ್ಯಾಕರಣತತ್ತ್ವಗಳನ್ನು ಸಂಸ್ಕೃತವೆಂಬ ಇನ್ನೊಂದು ಭಾಷೆಯಿಂದ ತಂದಿರುವರು. ಇದರಿಂದ ಕನ್ನಡಕ್ಕೆ ಎರಡು ರೀತಿಯ ಹೊಡೆತ. 1. ವ್ಯಾಕರಣವನ್ನು ಹೇರಿ ಸಹಜತೆಯನ್ನು ಕೆಡಿಸಿರುವುದು 2. ಇನ್ನೊಂದು ಭಾಷೆಗೆ ಕನ್ನಡವನ್ನು ಗುಲಾಮನಾಗಿಸಿರುವುದು. ಈ ವಾದವೇ ಅಧಿಕಾರ ಸ್ಥಾನದಲ್ಲಿರುವ ಬಹುಮಂದಿಗೆ ಹಿತವಾಗಿ ತಂದುದರಿಂದ ವ್ಯಾಕರಣವನ್ನು ಸ್ನಾತಕೋತ್ತರ ಮಟ್ಟದಲ್ಲಿ ಹಿಂದೆ ಬೋಧಿಸುತ್ತಿದ್ದ ವಿಶ್ವವಿದ್ಯಾಲಯಗಳಲ್ಲಿ ಈಗ ಅದನ್ನು ತೆಗೆದುಹಾಕಿರುವುದು ಒಂದು ಸಮಕಾಲೀನ ವಿದ್ಯಮಾನ.

ಈ ವಾದಕ್ಕೆ ಎದುರಾಗಿ ವಾದಿಸುವುದಿದ್ದರೆ ಭಾಷೆಯು ತನ್ನಷ್ಟಕ್ಕೇ ಬರುವುದರಿಂದ ಅದು ಅಧ್ಯಯನ ವಿಷಯವಾಗಲು ಯೋಗ್ಯವಲ್ಲದುದರಿಂದ ಭಾಷೆಯನ್ನೇ ಅಧ್ಯಯನ ಯೋಜನೆಯಿಂದ ತೆಗೆದುಹಾಕಿ ಎಂದು ವಾದಿಸಬಹುದು. ಭಾಷೆಯು ಅಧ್ಯಯನಯೋಗ್ಯವಲ್ಲದಿದ್ದರೂ ಭಾಷಾಂತರ್ಗತವಾದ ಸಾಹಿತ್ಯ ಅಧ್ಯಯನಯೋಗ್ಯವೆಂದು ವಾದಿಸಿದರೆ ಸಾಹಿತ್ಯ ಕ್ಷೇತ್ರದಲ್ಲಿಯೂ ಅಧ್ಯಯನ ಪದವಿಗಳನ್ನು ಪಡೆದವರಿಗಿಂತ ಹೊರಗಿನವರೇ ಕಾಣಿಸಿಕೊಳ್ಳುವುದನ್ನು ಗಮನಕ್ಕೆ ತರಬಹುದು. ಇಂತಹ ವಾದ ಪ್ರತಿವಾದಗಳಿಂದ ಏನೂ ಪ್ರಯೋಜನವಾಗದು. ಅದಕ್ಕೆ ಬದಲಾಗಿ ವ್ಯಾಕರಣವೆಂದರೇನು ಎಂಬುದನ್ನು ಸ್ಪಷ್ಟಪಡಿಸಿದಲ್ಲಿ, ಅದು ಬೇಕು ಅಥವಾ ಬೇಡ ಎಂಬುದು ತನ್ನಷ್ಟಕ್ಕೇ ಸಿದ್ಧಪಟ್ಟಂತಾಗುವುದು.

ಭಾಷೆ ಎಂಬುದು ಉಚ್ಚಾರಿತಾಂಶಗಳಿಗೆ ಸೀಮಿತವಾಗದೆ ಅದರ ಹಿಂದಿನ ಅನುಭವವನ್ನೂ ಒಳಗೊಳ್ಳುತ್ತದೆ ಎಂಬುದನ್ನು ಈ ಕಾರಣದಿಂದ ಭಾಷೆ ಎಂಬುದು ವ್ಯಕ್ತಿತ್ವಕ್ಕೆ ಪರ್ಯಾಯವಾಗುತ್ತದೆ ಎಂಬುದನ್ನೂ ಹಿಂದೆ ಸೂಚಿಸಲಾಗಿದೆ. ಶಾಸ್ತ್ರರೂಪವಾಗಿ ರೂಪುಗೊಳ್ಳುವಾಗ ವ್ಯಾಕರಣವು ಹೇಗೆ ಈ ಅಂಶಗಳನ್ನು ಒಳಗೊಂಡಿತು ಎಂಬುದನ್ನು ನೋಡಿದಲ್ಲಿ ಈ ಅಂಶಗಳಿಗೆ ಹೆಚ್ಚು ಪುಷ್ಟಿ ದೊರೆತಂತಾಗಬಹುದು.

ತೈತ್ತಿರೀಯೋಪನಿಷತ್ತಿನಲ್ಲಿ ಸೃಷ್ಟಿಕ್ರಿಯೆಯ ಸಂದರ್ಭದಲ್ಲಿ "... ನಾಮರೂಪೇ ವ್ಯಾಕರವಾಣಿ" ಎಂಬ ಮಾತು ಬರುತ್ತದೆ. ಎಂದರೆ "ಈ ಸೃಷ್ಟಿಯನ್ನು ನಾನು-ನಾವು ರೂಪಾತ್ಮಕವಾಗಿ 'ವ್ಯಾಕರಿಸುತ್ತೇನೆ'" ಎಂದು. ಇಲ್ಲಿ ಪ್ರಯುಕ್ತವಾದ "ವ್ಯಾಕೃ" ಎಂಬ ಉಪಸರ್ಗಸಹಿತಧಾತುವು ವ್ಯಾಕರಣಪದದ ಅತ್ಯಂತ ವಿಶಾಲವಾದ ಅರ್ಥವನ್ನು ಒಳಗೊಳ್ಳುತ್ತದೆ. ಈ ಅರ್ಥದಲ್ಲಿ ಅದು ಸೃಷ್ಟಿಗೆ ಪರ್ಯಾಯವಾಗುತ್ತದೆ. ನಾಮವೆಂದೂ ರೂಪವೆಂದೂ ಸೃಷ್ಟಿಗೆ ಎರಡು ಮುಖಗಳು. ರೂಪವೆಂದರೆ ಮೂರ್ತರೂಪದ ಭೌತಜಗತ್ತು. ನಾಮವೆಂದರೆ ಅಮೂರ್ತ ರೂಪದ ಭಾಷಾ ಸಂಪತ್ತು. ಹೀಗೆ ಭಾಷೆ ಎಂಬುದು ಭೌತಜಗತ್ತಿನ ಅಮೂರ್ತ ಪ್ರತಿರೂಪವಾಗುತ್ತದೆ. ಭಾಷೆಗಿರುವ ಈ ಅರ್ಥವೈಶಾಲ್ಯವನ್ನೂ ಪರಿಪೂರ್ಣತೆಯನ್ನೂ ಎತ್ತಿ ತೋರಿಸುವ ಶಾಸ್ತ್ರವೇ ವ್ಯಾಕರಣ ಶಾಸ್ತ್ರ. ಭೌತಜಗತ್ತೆ ಹೇಗೆ ವಿಸ್ತಾರಗೊಂಡು ತತ್ಸಂಬಂಧಿ ಅಧ್ಯಯನ ವಿಷಯಗಳನ್ನು ರೂಪಿಸುವುದು ಸಾಧ್ಯವೋ ಅಮೂರ್ತ ಜಗತ್ತೂ ಅಷ್ಟೇ ವಿಸ್ತಾರಗೊಂಡು ಅಧ್ಯೇಯಾಂಶಗಳನ್ನು ರೂಪಿಸುವುದು ಸಾಧ್ಯ. ಇವೆಲ್ಲವೂ ವ್ಯಾಕರಣಾಂಶಗಳೇ. ಆರು ವೇದಾಂಗಗಳಲ್ಲಿ ವ್ಯಾಕರಣವೂ ಒಂದು ಎಂದು ಪ್ರಸಿದ್ಧವಾಗಿದೆ. ಮಾತ್ರವಲ್ಲ ಅದು ಒಂದು ಮಟ್ಟಿಗೆ ಪ್ರಾತಿನಿಧ್ಯವೂ ಆಗಿದೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ ಮತ್ತು ಕಲ್ಪ ಎಂಬ ಆರು ವೇದಾಂಗಗಳಲ್ಲಿ ಜ್ಯೌತಿಷ ಮತ್ತು ಕಲ್ಪವೆಂಬ ಎರಡು ಮೂರ್ತ ರೂಪದ ಭೌತಪ್ರಪಂಚಕ್ಕೂ ಧಾರ್ಮಿಕ

ಆಚರಣೆಗಳಿಗೂ ಸಂಬಂಧಪಟ್ಟವು. ಉಳಿದ ನಾಲ್ಕು ಭಾಷಾ ರೂಪದ ಅಭಿವ್ಯಕ್ತಿಮಾರ್ಗಕ್ಕೆ ಸಂಬಂಧಪಟ್ಟವು. ಶಿಕ್ಷಾ ವೇದಾಂಗದಲ್ಲಿ ಅಕಾರಾದಿವರ್ಣಗಳೂ ಉದಾತ್ತಾದಿ ಸ್ವರಗಳೂ ಅಕ್ಷರಗಳ ಗುರುತ್ವಲಘುತ್ವಾಧಾರಿತವಾದ ಮಾತ್ರೆಗಳೂ ಅಲ್ಪಪ್ರಾಣ ಮಹಾಪ್ರಾಣಾದಿ ಉಚ್ಚಾರಣಸಂಬಂಧಿ ಬಲಪ್ರಯೋಗಗಳೂ ಗಾನ ವಿಶೇಷಗಳೂ ಅಂತರ್ಗತವಾಗುವುದರಿಂದ, ಇವುಗಳೇ ಅಧ್ಯಯನಕ್ಕೆ ಆದಿಯಾಗಿರುವುದರಿಂದ ಮತ್ತು ದಾರ್ಶನಿಕವಾಗಿ ಇವುಗಳಲ್ಲೇ ಅಧ್ಯಯನಾಂತಗಳನ್ನೆಲ್ಲಾ ಅಂತರ್ಗತಿಸಬಹುದಾದುದರಿಂದ "ಶಿಕ್ಷ ವಿದ್ಯೋಪಾದಾನೇ" ಎಂಬ ಧಾತುವಿನಿಂದ ನಿಷ್ಪನ್ನವಾದ ಹೆಸರನ್ನೇ ಈ ವೇದಾಂಗಕ್ಕೆ ಇಡಲಾಯಿತು. ಆಧುನಿಕವಾದ ಶಿಕ್ಷಣ ಪದಕ್ಕೂ ಒಂದು ಅರ್ಥದಲ್ಲಿ ಇದು ಪರ್ಯಾಯವಾಗುವುದು ಸಾಧ್ಯ. ಇದನ್ನು ವೇದ ಪುರುಷನ ಮೂಗು ಎಂದು ಶಾಸ್ತ್ರಕಾರರು ನಿರ್ದೇಶಿಸಿದ್ದಾರೆ. ಎಂದರೆ ವಾಸನಾಬಲದಿಂದ ಜ್ಞಾನವೃದ್ಧಿ ಮಾಡುವ ಶಾಸ್ತ್ರ ಎಂದರ್ಥವಾಗುತ್ತದೆ. ಛಂದಸ್ಸೆಂಬುದು ವರ್ಣವಿಶೇಷಗಳ ವಿನ್ಯಾಸಕ್ರಮದ ಮೇಲೆ ಆಧಾರಿತವಾಗಿರುವುದರಿಂದ ವೇದಪುರುಷನ ಚಲನೆಗೆ ಇದುವೇ ಕಾರಣವಾಗಿದ್ದು ಕಾಲು ಎನಿಸಿಕೊಳ್ಳುತ್ತದೆ. ನಿರುಕ್ತವು ನಿಘಂಟು ರೂಪದಲ್ಲಿ ಶಬ್ದಗಳಿಗೆ ಅರ್ಥವನ್ನು ವಿವರಿಸಿ ವೇದದ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕಗಳೆಂಬ ಅರ್ಥಸ್ತರಗಳಿಗೆ ಕೊಂಡೊಯ್ಯುವುದರಿಂದ ಕಿವಿ ಎನಿಸಿಕೊಂಡು ಮೂಗಿಗೆ ಪೂರಕವಾದ ಜ್ಞಾನೇಂದ್ರಿಯವಾಗುತ್ತದೆ. ಇವಿಷ್ಟೂ ಜ್ಞಾನಪ್ರಾಪ್ತಿಗೆ ಸಾಧನಗಳಾದರೆ ವ್ಯಾಕರಣವೆಂಬ ಉಳಿದ ಇನ್ನೊಂದು ವೇದಾಂಗವು ಬಾಯಿಯ ರೂಪದಲ್ಲಿ ಜ್ಞಾನಾಭಿವ್ಯಂಜಕವಾಗುತ್ತದೆ. ಅಲ್ಲದೆ ಬಾಯಿಯಲ್ಲಿ "ವಾಕ್" ಮತ್ತೆ "ರಸನಾ" ಎಂಬ ಎರಡು ಇಂದ್ರಿಯಗಳೂ ಇರುವುದರಿಂದ ಇಲ್ಲಿ ಜ್ಞಾನ ಕರ್ಮಗಳೆರಡೂ ಸಮುಚ್ಚಯ ಹೊಂದುತ್ತವೆ. ಅಲ್ಲದೆ ವ್ಯಾಕರಣದಲ್ಲಿ ಶಿಕ್ಷಾ ವೇದಾಂಗಾಂಶಗಳಾದ ವರ್ಣೋತ್ಪತ್ತಿ ಮೊದಲಾದ ವಿವರಣೆಗಳೂ ನಿರುಕ್ತಾಂಶಗಳಾದ ವರ್ಣಾಗಮ-ವರ್ಣ ವಿಪರ್ಯಯಾದಿಗಳೂ ಛಂದಃ ಸಂಬಂಧಿಗಳಾದ ಮಾತ್ರಾ ವಿವರಗಳೂ ಇರುವುದರಿಂದ ಭಾಷಾ ಸಂಬಂಧಿ ವೇದಾಂಗಗಳಲ್ಲಿ ಇದುವೇ ಪ್ರಾತಿನಿಧಿಕವಾಗಿ ಉಳಿದು ಬಂದಿದೆ.

ವೈಯಾಕರಣರ ಬಗೆಗೆ ಹೇಳುವುದಾದರೆ, ಪಾಣಿನಿ ಅತ್ಯಂತ ಪ್ರಸಿದ್ಧನಾದವನು. ಅವನಿಗಿಂತ ಮೊದಲೇ ಎಷ್ಟೋ ಮಂದಿ ವೈಯಾಕರಣರಿದ್ದರು ಎಂಬುದಕ್ಕೆ ಅವನ "ಅಷ್ಟಾಧ್ಯಾಯೀ"ಯಲ್ಲಿ ಹೇಳಿಕೆಗಳು ಸಿಗುತ್ತವೆ. ಈ ಕೃತಿಗೆ ಪೂರಕವಾಗಿ "ಗಣಪಾಠ" ಮತ್ತು "ಧಾತು ಪಾಠ"ಗಳೆಂಬ ಪಟ್ಟಿಗಳನ್ನೂ ಅವನು ರಚಿಸಿದ್ದಾನೆ. ಒಂದು ಶಿಕ್ಷಾಗ್ರಂಥವೂ ಅವನ ಹೆಸರಿನಲ್ಲಿ ಉಳಿದು ಬಂದಿದೆ. ಅಷ್ಟಾಧ್ಯಾಯಿಯಲ್ಲಿ ಮೊದಲಿಗೆ ಬರುವ ಹದಿನಾಲ್ಕು ಸೂತ್ರಗಳು ವರ್ಣಮಾಲೆಯನ್ನೊಳಗೊಂಡಿದ್ದು ಅವನ್ನು ಅವನು ಶಿವನ ಡಮರು ಶಬ್ದಗಳಿಂದ ಪಡೆದವು ಎಂದು ಹೇಳಲಾಗುತ್ತದೆ. ಕಥೆಯ ವಸ್ತುಸ್ಥಿತಿ ಏನೇ ಇದ್ದರೂ ಅವನ ಶಾಸ್ತ್ರದ ಅಖಂಡತೆಗೆ ಈ ಕಥೆ ದ್ಯೋತಕವಾಗಬಹುದು. ಹದಿನಾಲ್ಕು ಸೂತ್ರಗಳನ್ನು "ಪ್ರತ್ಯಾಹಾರ" ಎಂಬ ಪಾರಿಭಾಷಿಕ ವಿಧಾನಕ್ಕೊಳಪಡಿಸಿ ಯಾವುದೇ ವರ್ಣ ಸಮೂಹವನ್ನು ಅವನು ಎರಡೇ ಅಕ್ಷರಗಳಲ್ಲಿ ಹೇಳಬಲ್ಲನು. ಕೊನೆಯ ಸೂತ್ರವು "ಅಅ" ಎಂಬ ಪ್ರಥಮ ವರ್ಣದ ಪುನರಾವರ್ತನೆಯಾಗಿದ್ದು ಈ ವರ್ಣಕ್ಕೆ ಪ್ರಯೋಗ ಮತ್ತು ಪ್ರಕ್ರಿಯೆ ಎಂಬ ಎರಡು ಅವಸ್ಥೆಗಳಲ್ಲಿ ಉಚ್ಚಾರಣ ಭೇದವಿದೆ ಎಂದು ಈ ಸೂತ್ರದ ಅರ್ಥ. ಇಂತಹ ಅನನ್ಯವಾದ ಸಂಕ್ಷಿಪ್ತೀಕರಣ, ಇವನು ಗ್ರಂಥದುದ್ದಕ್ಕೂ ಬಳಸುವ ಕಲೆ. ಈ ಸಂಕ್ಷಿಪ್ತತೆಯ ಸೌಂದರ್ಯವನ್ನು ಮನನ ಮಾಡಿದಾಗ ಕಾವ್ಯಾತ್ಮಕವಾಗಿಯೇ ಇವನ ಗ್ರಂಥವನ್ನು ನೋಡುವುದು ಸಾಧ್ಯವಿದೆ. ವರರುಚಿ ಎಂಬುವನಿಂದ ರಚಿತವಾದ "ವಾರ್ತಿಕ"ಗಳಲ್ಲಿ ಈ ಸೂತ್ರಗಳು ಪರಿಷ್ಕೃತಗೊಂಡಿವೆ. ಪತಂಜಲಿಯಿಂದ ರಚಿತವಾದ "ಮಹಾಭಾಷ್ಯ" ಎಂಬ ಕೃತಿಪಾಣಿನಿಯ

ಸೂತ್ರಗಳನ್ನು ವಿವರಿಸುವ ಹಂತದಲ್ಲಿ ಅನೇಕ ತಾತ್ತ್ವಿಕ ಅಂಶಗಳನ್ನು ಒಳಗೊಳ್ಳುತ್ತದೆ. ವ್ಯಾಕರಣವನ್ನು ಒಂದು ದರ್ಶನವಾಗಿ ನೋಡುವ ಕ್ರಿಯೆ ಇಲ್ಲಿ ಪ್ರಕಟವಾಗುತ್ತದೆ. ಈ ಮೂರೂ ಗ್ರಂಥಕಾರರನ್ನು ''ಮುನಿತ್ರಯ''ವೆಂದು ಕರೆಯಲಾಗುತ್ತದೆ. ಈ ಮೂವರನ್ನೂ ಅನುಸರಿಸಿ ''ವಾಕ್ಯಪದೀಯ'' ಎಂಬ ಮಹತ್ವದ ದಾರ್ಶನಿಕ ಗ್ರಂಥವೊಂದನ್ನು ಭರ್ತೃಹರಿ ಎಂಬುವನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಉಚ್ಚರಿತ ಭಾಷೆಗೆ ಹಿನ್ನಲೆಯಾಗಿ ''ಸ್ಫೋಟ'' ಎಂಬ ಒಂದು ತತ್ತ್ವವನ್ನು ಇಟ್ಟುಕೊಳ್ಳಲಾಗಿದ್ದು ಭಾಷೆ ಎಂಬುದು ಒಂದು ಅಖಂಡ ಶಕ್ತಿ ಎಂಬ ಪ್ರತಿಪಾದನೆ ಇದೆ. ಎಂದರೆ ಭಾಷೆಯಲ್ಲಿ ವರ್ಣ, ಪದ, ವಾಕ್ಯ ಮೊದಲಾದ ಎಷ್ಟೇ ಖಂಡಾಂಶಗಳಿರಲಿ, ಅದು ಕೆಲಸ ಮಾಡುವುದು ಅಖಂಡವಾಗಿ ಎಂಬುದು ಇಲ್ಲಿ ಉದ್ದೇಶಿತವಾದ ಅರ್ಥ. ಭಾಷೆಯ ಖಂಡಾಂಶಗಳ ಶ್ರವಣ ಕಾಲದಲ್ಲಿ ಉಂಟಾಗುವ ಸಂಸ್ಕಾರ ಶ್ರವಣ ನಂತರವೂ ಮುಂದುವರಿಯುವುದರಿಂದ ಈ ಅಖಂಡತೆ ಸಾಧ್ಯವಾಗುತ್ತದೆ. ಪರತತ್ತ್ವ ಹೇಗೆ ವ್ಯಾಪಕವೂ ಅಖಂಡವೂ ಆಗಿರುತ್ತದೋ ಹಾಗೆಯೇ ವಾಕ್‌ತತ್ತ್ವವೂ ವ್ಯಾಪಕವೂ ಅಖಂಡವೂ ಆಗಿರುತ್ತದೆ. ವ್ಯಕ್ತಿಯು ತನ್ನ ಶಕ್ತಿಗನುಸುರವಾಗಿ ಅದರ ಅಂಶಗಳನ್ನು ಸಾಕ್ಷಾತ್ಕರಿಸಿಕೊಂಡು ಉಪಯೋಗಿಸುತ್ತಾನೆ. ಈ ಅಖಂಡತ್ವದ ವ್ಯಾಖ್ಯೆಯೇ ವ್ಯಾಕರಣ ತಿರುಳು; ಸಾಂಪ್ರದಾಯಿಕವಾದ ಪ್ರಯೋಗನಿಯಗಳಲ್ಲ. ಒಂದು ಸಾಹಿತ್ಯಕೃತಿಯಲ್ಲಿ ಎಷ್ಟೇ ಬಿಡಿ ಅಂಶಗಳಿದ್ದರೂ ಅದು ಕೊಡುವ ಅನುಭವ ಅಖಂಡವೆಂದೂ ಅದು ಸಾಂದರ್ಭಿಕವಾಗಿ ಕೆಲವೊಮ್ಮೆ ''ಧ್ವನಿ'' ಎಂದೂ ಕೆಲವೊಮ್ಮೆ ''ರಸ'' ಎಂದೂ ನಿರ್ದೇಶಿತವಾಗುತ್ತದೆ ಎಂದು ಕಾವ್ಯ ಮೀಮಾಂಸಕರು ಹೇಳುವುದಕ್ಕೆ ಒಂದು ಮೂಲ ಪ್ರೇರಣೆ ಈ ವೈಯಾಕರಣರೇ. ಆದುದರಿಂದ ವ್ಯಾಕರಣವು ಕಾರ್ಯಕ್ಕಾಗಲೀ ಕಾವ್ಯಮೀಮಾಂಸೆಗಾಗಲೀ ಮಾರಕವಲ್ಲ ಪೋಷಕ ಎಂಬುದು ಇದರಿಂದ ವೇದ್ಯವಾಗುತ್ತದೆ. ಹಿಂದೆ ಹೇಳಲಾದಂತೆ, ಅಮೂರ್ತ ಚಿಂತನೆಯೆಲ್ಲವೂ ವ್ಯಾಕರಣ ಎಂದು ಇದರಿಂದ ವೇದ್ಯವಾಗುತ್ತದೆ. ಹೀಗೆಯೇ ''ಭಾಷಾ ಶಾಸ್ತ್ರ'' ಎಂಬ ಒಂದು ಹೊಸ ಚಿಂತನೆ ಪಾಶ್ಚಾತ್ತ್ಯ ದೇಶಗಳಲ್ಲಿ ಉಂಟಾಗುವುದಕ್ಕೆ ವ್ಯಾಕರಣವೇ ಕಾರಣವಾಗಿರುತ್ತದೆ. ಇಷ್ಟೊಂದು ತಾತ್ತ್ವಿಕ ವ್ಯಾಪ್ತಿಯುಳ್ಳ ಶಾಸ್ತ್ರವನ್ನು ''ಪ್ರಯೋಗಗಳ ಸಾಧುತ್ವ-ಅಸಾಧುತ್ವ ನಿರ್ಣಾಯಕ'' ಎಂಬ ಮಟ್ಟಕ್ಕೆ ಇಳಿಸಿ, ಅದೇ ನೀರಸವೆಂದೂ ಇಂದಿಗೆ ಅನುಪಯುಕ್ತವೆಂದೂ ಭಾವಿಸುವುದು ಅಮೂರ್ತಪ್ರವಂಚದ ಕಲ್ಪನೆ ಇಲ್ಲದಿರುವುದರಿಂದ ಉಂಟಾದ ಒಂದು ತಪ್ಪು ಕಲ್ಪನೆ.

ಹೀಗೆಯೇ ಛಂದಃಶಾಸ್ತ್ರವನ್ನು ಗಣಮಾತ್ರೆಗಳ ಲೆಕ್ಕಾಚಾರವೆಂದೂ, ಪದ್ಯ ಕೃತಿಗಳಿಗಷ್ಟೇ ಸೀಮಿತವೆಂದೂ, ಇಂದಿಗೆ ಕಾಲಬಾಧಿಕವೆಂದೂ ತಿಳಿಯುವುದು ಪ್ರಸ್ತುತ ಯುಗದಲ್ಲಿಯ ಭಾಷಾಧ್ಯಯನ ವಿಧಾನದ ಒಂದು ವಿಪರ್ಯಾಸ. ದಿ. ಸೇಡಿಯಾಪು ಕೃಷ್ಣ ಭಟ್ಟರ ''ಛಂದೋಗತಿ''ಯನ್ನು ಓದಿದಲ್ಲಿ ಛಂದಸ್ಸು ಹೇಗೆ ಸಂಗೀತದಂತಹ ಶಾಸ್ತ್ರಗಳಿಗೆ ಪೂರಕವೆಂದೂ ಗದ್ಯ ಪದ್ಯಗಳೆರಡರಲ್ಲೂ ಇದರ ಅಸ್ತಿತ್ವವಿದ್ದೂ ಇದು ಇಡೀ ಭಾಷೆಗೇ ವ್ಯಾಪಕವಾಗುವಷ್ಟು ವಿಶಾಲತೆಯುಳ್ಳದ್ದೆಂದೂ ವ್ಯಕ್ತವಾಗುತ್ತದೆ. ಗದ್ಯದಲ್ಲಿಯೂ ಇದರ ಅಸ್ತಿತ್ವ ಇದೆಯೆಂಬುದನ್ನು ಈ ಲೇಖಕರು ''ಚಂಪೂ ರಾಮಾಯಣ'' ಎಂಬ ಸಂಸ್ಕೃತ ಕಾವ್ಯದ ಒಂದು ಗದ್ಯದಲ್ಲಿ ಮೃದಂಗಧ್ವನಿಗೆ ಸಂವಾದಿತ್ವವನ್ನು ಗುರುತಿಸಿಕೊಟ್ಟು ಸ್ಪಷ್ಟಪಡಿಸಿರುವುದು ಕಂಡುಬರುತ್ತದೆ.

ಸಂಸ್ಕೃತ ವ್ಯಾಕರಣವನ್ನು ಕನ್ನಡದಂತಹ ಭಾಷೆಗಳಿಗೆ ಅನ್ವಯಿಸುವಂತೆ ನೋಡುವ ಕುರಿತೂ ಎತ್ತಲಾಗುವ ಆಕ್ಷೇಪಕ್ಕೆ ಉತ್ತರ ಹೇಳುವುದಾದರೆ, ಸಂಸ್ಕೃತ ವ್ಯಾಕರಣವು ಇವು ಭಾಷಾ ತತ್ತ್ವದ ಬಗ್ಗೆಯೇ ಚಿಂತನೆ ನಡೆಸುವುದರಿಂದ ಇತರ ಭಾಷೆಗಳಿಗೂ ಇದನ್ನು ಅನ್ವಯಿಸುವುದು ತಪ್ಪಲ್ಲ. ಭಾಷಾ ಶಾಸ್ತ್ರವನ್ನೇ ಸೃಷ್ಟಿಸಿದ ಸಾಧನೆ ಅದರದು ಎಂಬಲ್ಲಿಯೇ ಈ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೆ, ಕನ್ನಡದಂತಹ ಭಾಷೆಗಳು

ಸಂಸ್ಕೃತದ ಮುನ್ನಡೆಯಾಗಿ ಮಧ್ಯದಲ್ಲಿ ಯಾವುದೇ ಭೇದಕರೇಖೆಯಿಲ್ಲದೆ ಮುಂದುವರಿಯುತ್ತಿದ್ದುದು ಐತಿಹಾಸಿಕ ಸತ್ಯ. ಇದರಿಂದ ಆ ಎರಡೂ ಭಾಷೆಗಳೂ ಪರಸ್ಪರ ಉಪಕಾರ ಹೊಂದಿವೆಯಾದುದರಿಂದ ಭಾಷಾಪ್ರಪಂಚದಲ್ಲೇ ಇದೊಂದು ಆರೋಗ್ಯಕರವಾದ ಬೆಳವಣಿಗೆ.

ಎ.ಕೆ. ರಾಮಾನುಜನ್ ಅವರು ''ಭಾರತೀಯತೆ ಎಂಬುದಿದೆಯೇ!'' ಎಂಬ ಶೀರ್ಷಿಕೆಯ ಆಂಗ್ಲ ಲೇಖನದಲ್ಲಿ ವ್ಯಾಕರಣವನ್ನು ಭಾರತಕ್ಕೆ ಪ್ರಾತಿನಿಧಿಕವಾಗುವ ಶಾಸ್ತ್ರವಾಗಿ ಸ್ವೀಕರಿಸಿದುದು ಕಂಡುಬರುತ್ತದೆ. ಇಂದಿಗೂ ಪ್ರೌಢಚಿಂತಕರು ವ್ಯಾಕರಣದ ಕಡೆಗೆ ಗಮನ ಕೊಡುತ್ತಾರೆ ಎಂಬುದು ಇದರಿಂದ ವೇದ್ಯವಾಗುತ್ತದೆ. ಶಿಕ್ಷಣ ಕ್ಷೇತ್ರದ ಮೇಲೆ ಇಂತಹ ಸಂಗತಿಗಳು ಪ್ರಭಾವ ಬೀರುವುದಿಲ್ಲ.

ಪ್ರಯೋಗಾಧಾರಿತ ವಿಜ್ಞಾನವೊಂದೇ ಸತ್ಯ ಎಂದು ಭ್ರಾಂತಿಪಡುವುದು ಇಂದಿನ ಶಿಕ್ಷಣಕ್ಷೇತ್ರದಲ್ಲಿಯ ಒಂದು ವಿದ್ಯಮಾನ. ಇದು ವಿಜ್ಞಾನ ಕ್ಷೇತ್ರದಿಂದ ಸಾಂಸ್ಕೃತಿಕ ಕ್ಷೇತ್ರಕ್ಕೆ ಹರಿದು ಸಾಹಿತ್ಯ ವಿಮರ್ಶೆಯಲ್ಲಿ ಅನ್ವಯಿಕತೆಯೇ ಗಣನೀಯವಾದುದು ಎಂದು ಭಾವಿಸಿ ಕಾವ್ಯಮೀಮಾಂಸೆಯಂತಹ ಶಾಸ್ತ್ರಗಳನ್ನು ಉಪೇಕ್ಷಿಸಲಾಗುತ್ತದೆ. ಅಲ್ಲದೆ ನೀತಿವಂತಿಕೆಯಂತಹ ಸಾಮಾಜಿಕ ಮೌಲ್ಯಗಳ ನಾಶಕ್ಕೂ ಪ್ರಯೋಗಾಧಾರಿಕತೆಯ ಮೇಲಿನ ಅತಿ ಒಲವು ಕಾರಣವಾಗುತ್ತದೆ. ನೀತಿವಂತಿಕೆಯಂತಹುದನ್ನು ಪ್ರಯೋಗ ಮಾಡಿ ತೋರಿಸಲು ಸಾಧ್ಯವಿಲ್ಲ. ಅಮೂರ್ತ ಚಿಂತನೆಗೆ ಶಿಕ್ಷಣ ಕ್ಷೇತ್ರದಲ್ಲಿ ಸರಿಯಾದ ಸ್ಥಾನವಿದ್ದರೆ ನೈತಿಕ ಶಿಕ್ಷಣದಂತಹವರ ಬಗೆಗೆ ಮಾತೆತ್ತುವ ಅವಕಾಶವೇ ಬೀಳುವುದಿಲ್ಲ. ವ್ಯಾಕರಣವು ಅಮೂರ್ತ ಚಿಂತನೆಯ ಪರಾಕಾಷ್ಠೆಯಾಗಿದ್ದು ಸಾಮಾಜಿಕವಾಗಿ ಪರಿಣಾಮಕಾರಿಯಾಗಬಲ್ಲುದು.

ಒಂದರಿಂದ ಹೆಚ್ಚು ಭಾಷೆಗಳನ್ನು ಕಲಿಯಬೇಕಾದಾಗ ಯಾವ ಶಿಸ್ತನ್ನು ಪಾಲಿಸಬಹುದು ಎಂದು ಯೋಚಿಸುವುದು ಅಗತ್ಯ. ಪ್ರಸ್ತುತ ಭಾರತದಲ್ಲಿ ಅಂತಹದೊಂದು ಸಮಸ್ಯೆ ತೀವ್ರವಾಗಿಯೇ ಇದೆ. ಮಾತೃಭಾಷೆಯನ್ನು ಕಲಿಯಬೇಕಾಗುತ್ತದೆ. ತಂತ್ರವಿಜ್ಞಾನ ಮೊದಲಾದುವುಗಳಿಗೆ ಇಂಗ್ಲಿಷ್ ಅನಿವಾರ್ಯವೆಂದು ಅದರ ಮೇಲೆ ಬಹಳ ಒಲವು ತೋರಿಸಲಾಗುತ್ತದೆ. ರಾಷ್ಟ್ರಭಾಷೆಯಾದ ಹಿಂದಿಯೂ ಕೆಲವು ಮಟ್ಟಿಗೆ ಅಗತ್ಯವಾಗುತ್ತದೆ. ಸಂಸ್ಕೃತ ಬೇರೆ ಬೇರೆ ರೀತಿಗಳಲ್ಲಿ ಉಪಯೋಗಕ್ಕೆ ಬರುತ್ತದೆ.

ಹೀಗೆ ನಮ್ಮ ದೇಶದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಮತ್ತು ಪ್ರತಿಯೊಬ್ಬ ರಕ್ಷಕನೂ ಭಾಷೆಗಳ ಗೊಂದಲಕ್ಕೆ ಸಿಲುಕಿರುತ್ತಾನೆ. ಇದು ಬಹುಮಟ್ಟಿಗೆ ವೈಯಕ್ತಿಕ ಸಮಸ್ಯೆಯಾಗಿ ಪರಿಶೀಲಿಸುವುದರಿಂದ ಎಲ್ಲರಿಗೂ ಸಮಾಧಾನ ಕೊಡುವಂತೆ ಪ್ರಶ್ನೆಗಳನ್ನು ಉತ್ತರಿಸಲು ಸಾಧ್ಯವಿಲ್ಲ. ಆದರೂ ಪ್ರಸ್ತುತ ಪ್ರಬಂಧ ವ್ಯವಹಾರಕ್ಕಿಂತ ತತ್ತ್ವದರ್ಶಗಳನ್ನೇ ಮುಖ್ಯವಾಗಿಟ್ಟುಕೊಂಡಿರುವುದರಿಂದ ಆ ನೆಲೆಯಲ್ಲಿ ಒಂದು ಸಮಾಧಾನಕರವಾದ ಭಾಷಾ ಯೋಜನೆಯನ್ನು ರೂಪಿಸಬಹುದು. ಪ್ರತಿಯೊಬ್ಬನಿಗೂ ಅತಿ ಹತ್ತಿರದ ಭಾಷೆ ಎಂದರೆ ತನ್ನ ಮಾತೃಭಾಷೆ. ಈ ಭಾಷೆಯಲ್ಲಿ ಬಂದ ಸಹಜತೆ ಇನ್ನೊಂದು ಭಾಷೆಯಲ್ಲಿ ಬರಲಾರದು. ಆ ಭಾಷೆಯ ಮೂಲಕ ನೋಡಿದಾಗ ಉಂಟಾಗುವ ಒಂದು ಹೃದಯಸ್ಪರ್ಶಿತ್ವವೇ ಬೇರೆ. ಆ ಭಾಷೆಯ ಮೂಲಕ ಅಭಿಪ್ರಾಯ ಪ್ರಕಟಿಸುವಾಗ ಉಂಟಾಗುವ ಒಂದು ನಿರರ್ಗಳತೆಯೇ ಬೇರೆ. ಕೆಲವೊಮ್ಮೆ ಕೆಲವು ವಿಚಾರಗಳಿಗೆ ಅತಿ ಹತ್ತಿರವಾದ ಭಾಷೆಯೊಂದಿರುತ್ತದೆ. ಎಂದರೆ, ತಾನು ಬೆಳೆದ ವಾತಾವರಣಕ್ಕನುಸಾರವಾಗಿ ಇಂಗ್ಲಿಷ್-ಸಂಸ್ಕೃತದಂತಹವು ಮಾತೃ ಭಾಷೆಯಲ್ಲದಿದ್ದರೂ ಮನಸ್ಸಿನ ಮೇಲಿನ ಪದರಿನಲ್ಲಿ ವಾಸವಾಗಿದ್ದು ಸ್ಪಂದನಶೀಲವಾಗುತ್ತವೆ. ಇಲ್ಲಿ ಒಂದು ರೀತಿಯ ಭಾಷಾ ಸಂಕೀರ್ಣತೆಯನ್ನು ಅನುಭವಿಸಬೇಕಾಗುತ್ತದೆ.

ಸ್ಥೂಲವಾಗಿ, ಮಾತೃಭಾಷೆ ಅತಿ ಹತ್ತಿರದ ಭಾಷೆಯಾದರೆ, ಇತರ ಭಾಷೆಗಳು ವ್ಯಕ್ತಿಯ

ರೂಪುಗೊಳ್ಳು ಪಿಕೆಗನುಸಾರವಾಗಿ ಒಂದು ನಿರ್ದಿಷ್ಟ ಶ್ರೇಣಿಗನುಸಾರವಾಗಿ ಒಳಗಾಗುವಂತೆ ಅನುಭವಿಸಲ್ಪಡುತ್ತಿರುತ್ತವೆ. ಅತ್ಯಂತ ಆರೋಗ್ಯಕರವಾದ ಭಾಷಾಧ್ಯಯನ ಯೋಜನೆಯಾದರೆ ಅದರಲ್ಲಿ ಮಾತೃ ಭಾಷೆಯಂತಹದಕ್ಕೆ ಅತಿ ಹೆಚ್ಚು ಒತ್ತು ನೀಡಬೇಕು. ಅನಂತರ ತನ್ನ ರೂಪುಗೊಳ್ಳುವಿಕೆಯ ಶ್ರೇಣಿಯನ್ನು ಸರಿಸಬೇಕು. ತಾತ್ತ್ವಿಕವಾಗಿ ನೋಡುತ್ತ ಹೋದಂತೆ ತನ್ನ ಅತಿ ಹತ್ತಿರದ ಭಾಷೆಗೆ ಆ ಎಲ್ಲಾ ಭಾಷೆಗಳನ್ನು ಗರ್ಭಿಸುವ ಶಕ್ತಿ ಇರುತ್ತದೆ ಅಥವಾ ಬರುತ್ತದೆ. ಈ ಶಕ್ತಿ ಮಾತ್ರ ಸಂಬಂಧಿತ ಭಾಷೆಗಳೆಲ್ಲವುಗಳಲ್ಲೂ ಪರಿಶ್ರಮ ತೋರಿಸುವುದರಿಂದ ಉಂಟಾಗುತ್ತದೆ. ಈ ಶಕ್ತಿಯ ಸಾಕ್ಷಾತ್ಕಾರವೇ ಭಾಷಾಧ್ಯಯನದ ಗುರಿಯಾಗಬೇಕು. ಆಗ ಭಾಷಾಧ್ಯಯನವು ತನ್ನ ಅವಶ್ಯಕತೆಗಳನ್ನು ಇತರ ಭಾಷೆಗಳಿಂದಲೂ ಇತರ ಅಧ್ಯಯನ ವಿಷಯಗಳಿಂದಲೂ ಪಡೆದು ವ್ಯಕ್ತಿತ್ವದೊಂದಿಗೆ ಸಮೀಕೃತವಾಗಬಲ್ಲುದು.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಕನ್ನಡದ ಕೆಲವು ಪ್ರಾದೇಶಿಕ ವೈಶಿಷ್ಟ್ಯಗಳು

□ ಡಾ। ಉಪ್ಪಂಗಳ ರಾಮ ಭಟ್ಟ



ಮದ್ರಾಸು, ಬೊಂಬಾಯಿ, ಹೈದರಾಬಾದು ಮೊದಲಾದ ಆಧಿಪತ್ಯಗಳಲ್ಲಿ ಹರಿಹಂಚಾಗಿ ಹೋಗಿದ್ದ ಕನ್ನಡದ ಪ್ರದೇಶಗಳೆಲ್ಲಾ ಇಂದು ಹೆಚ್ಚು ಕಡಿಮೆ ಏಕೀಕೃತವಾಗಿ ವಿಶಾಲ ಕರ್ನಾಟಕವು ರೂಪುಗೊಂಡಿದೆ. ಕನ್ನಡವು ನಮ್ಮ ಅಧಿಕೃತ ಭಾಷೆಯೆನಿಸಿದೆ. ಹಾಗಿದ್ದರೂ ನಾನಾ ಭಾಷೆಗಳನ್ನಾಡುವ ಜನ ಇಲ್ಲಿದ್ದಾರೆ, ಇತರ ಭಾಷೆಗಳನ್ನಾಡುವ ಜನರೊಡನೆ ನಮಗೆ ಸಂಪರ್ಕವಿದೆ. ಮೇಲ್ನೋಟಕ್ಕೆ ಕನ್ನಡ ಭಾಷೆಯೊಂದೇ ಎನಿಸಿದರೂ ಇದರೊಳಗೆ ಸಾಕಷ್ಟು ಪ್ರಭೇದಗಳಿವೆ. ಹಿಂದೆಯೂ ಇಂತಹ ಪ್ರಾದೇಶಿಕ ಪ್ರಭೇದಗಳಿದ್ದುವು ಎಂದು ತಿಳಿಯುತ್ತದೆ.

ದೋಷವಿದಿನಿತೆಂದು ಬಗೆದು
ದ್ಭಾಷಿಸಿ ತರಿಸಂದು ಕನ್ನಡಂಗಳೊಳೆಂದುಂ
ವಾಸಂಗಿಯುಮರಿಯಲಾರದೆ
ಬೇಸರುಗುಂ ದೇಸಿ ಬೇರೇವೇರಪ್ಪುದರಿಂ

ಎಂದು ಕ್ರಿ.ಶ. 9ನೇ ಶತಮಾನದ ಆದಿಯಲ್ಲಿ, ಕನ್ನಡದ ಉಪಲಬ್ಧ ಗ್ರಂಥಗಳೆಲ್ಲೆಲ್ಲಾ ಮೊತ್ತ ಮೊದಲಿನದಾದ ಕವಿರಾಜಮಾರ್ಗದಲ್ಲಿ ಕನ್ನಡದ ವೈವಿಧ್ಯಗಳನ್ನು ಹೇಳಲಾಗಿದೆ. ಇಲ್ಲಿ ಬಹುಶಃ ವಾಸುಕಿಯನ್ನು ಸಾವಿರ ಹೆಡೆಯ, ಎರಡು ಸಾವಿರ ನಾಲಿಗೆಯ ಮಹಾಶೇಷನಿಗೆ ಸಮನಾಗಿ ಭಾವಿಸಿದಂತಿದೆ. ಕನ್ನಡದ ದೇಶಿಗಳು ಬೇರೆ ಬೇರೆ ಆದುದರಿಂದ ವಾಸುಕಿಯೂ

'ಪರಾಶರ', ಸುಧೀಂದ್ರ ತೀರ್ಥಮಾರ್ಗ, ಕುಂಜಿಬೆಟ್ಟು, ಉಡುಪಿ–576 102

ಅರಿಯಬಾರವೆ ಪೇಸರಿಸುತ್ತಾನೆ. ಇಲ್ಲಿ ''ಕನ್ನಡಂಗಳು'' ಎಂದು ಬಹುವಚನ ಪ್ರಯೋಗದಿಂದ ಕನ್ನಡದ ವೈವಿಧ್ಯವನ್ನು ಅವನು ಸೂಚಿಸಿದ್ದಾನೆ. ಆ ಕನ್ನಡಗಳಲ್ಲಿ ''ಪುಲಿಗೆರೆಯಾ ಸದಭಿಸ್ತುತಮಪ್ಪೊಂ ಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್'' ಎಂದು ಅಲ್ಲಿನ ಕನ್ನಡವನ್ನೇ ''ತಿರುಳ್ಗನ್ನಡ'' ಅಥವಾ ಭಾಷಾ ವಿಜ್ಞಾನದ ಭಾಷೆಯಲ್ಲಿ ಹೇಳುವುದಿದ್ದರೆ ''ಪ್ರಮಾಣ ಕನ್ನಡ'' (ಸ್ಟ್ಯಾಂಡರ್ಡ್ ಲ್ಯಾಂಗ್ವೇಜ್) ಎಂದು ಸ್ವೀಕರಿಸಿದ್ದಾನೆ. ಪಂಪನೂ 'ಪುಲಿಗೆರೆಯ ತಿರುಳ್‌ಗನ್ನಡದೊಳ್' ಕಾವ್ಯ ಬರೆದದ್ದಾಗಿ ಹೇಳುತ್ತಾನೆ. ಒಂಬತ್ತನೇ ಶತಮಾನದಷ್ಟು ಹಿಂದೆಯೇ ಈ ಕವಿಗಳು ಕನ್ನಡದ ಪ್ರಾದೇಶಿಕ ಭಿನ್ನತೆಗಳನ್ನು ಮನಗಂಡಿದ್ದರೆಂಬುದು ಗಮನಾರ್ಹ. ಕವಿರಾಜಮಾರ್ಗಕಾರನು ದಕ್ಷಿಣ ಮಾರ್ಗ, ಉತ್ತರ ಮಾರ್ಗ, ಉತ್ತರೋತ್ತರ ಮಾರ್ಗವೆಂದು ವಿಭಾಗಿಸಿಯೂ ಹೇಳಿದ್ದಾನೆ. ದಂಡಿಯ 'ಕಾವ್ಯಾದರ್ಶ'ದಲ್ಲಿ ಹೇಳಿದ ವೈದರ್ಭೀ, ಗೌಡೀ ಮೊದಲಾದ ರೀತಿಗಳ ಹೇಳಿಕೆಯ ಪ್ರಭಾವವಿದೆಂದು ಕೆಲವರ ಅಭಿಪ್ರಾಯವಿದ್ದರೂ ಅವನು ಹೇಳಿದ ರೀತಿಯಲ್ಲಿ ಪ್ರಭೇದಗಳಿರುವುದು ಸತ್ಯವಾದ್ದರಿಂದ ಕನ್ನಡದ ಸಹಜ ಪ್ರಭೇದಗಳನ್ನೇ ಅವನು ಮನಗಂಡಿದ್ದಾನೆನ್ನಬಹುದು.

ಭಾಷೆಯೊಂದು ಜೀವಂತಶಕ್ತಿಯಾದುದರಿಂದ ಮನುಷ್ಯನ ಆಹಾರ, ವಿಚಾರ, ನಡೆ, ನುಡಿ, ಸಂಸ್ಕೃತಿಗಳಲ್ಲಿ ಬದಲಾವಣೆಯಾದಂತೆ ಅದು ಅವನ ಭಾಷೆಯಲ್ಲೂ ಪ್ರತಿಬಿಂಬಿಸದೆ ಸಾಧ್ಯವೇ ಇಲ್ಲ. ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಈ ಭಿನ್ನತೆ ಅನಿವಾರ್ಯವಾಗಿ ಇರುವುದು ಕಂಡುಬರುತ್ತದೆ. ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ತೋರುವ ವ್ಯತ್ಯಾಸದ ಘಟ್ಟಗಳನ್ನು ಅವಸ್ಥಾ ಭೇದಗಳೆಂದೂ ಸ್ಥಳದಿಂದ ಸ್ಥಳಕ್ಕೆ ತೋರುವ ವ್ಯತ್ಯಾಸದ ಘಟ್ಟಗಳನ್ನು ಪ್ರಾದೇಶಿಕ ಭೇದವೆಂದೂ ಹೇಳಬಹುದು, ಅವಸ್ಥಾ ಭೇದಗಳೆಂದರೆ ಪೂರ್ವದ ಹಳಗನ್ನಡ (ಸು.ಕ್ರಿ.ಶ. 450-800), ಹಳಗನ್ನಡ (ಸು.ಕ್ರಿ.ಶ.800-1,050), ನಡುಗನ್ನಡ (ಸು.ಕ್ರಿ.ಶ. 1,050-1,800), ಹೊಸಗನ್ನಡ (ಸು.ಕ್ರಿ.ಶ. 1,800-ರಿಂದ ಈಚೆಗೆ). ಪ್ರಾದೇಶಿಕ ಭೇದಗಳೆಂದರೆ ಒಂದೊಂದು ಪ್ರದೇಶದ ವೈಶಿಷ್ಟ್ಯಗಳನ್ನೊಳಗೊಂಡವು.

ಉದಾ : ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ ಇತ್ಯಾದಿ.

ಸೂಕ್ಷ್ಮವಾಗಿ ಪರಿಶೀಲಿಸಿದರೆ ವ್ಯಕ್ತಿಯಿಂದ ವ್ಯಕ್ತಿಗೆ ಭಾಷೆಯಲ್ಲಿ ಅಂತರವಿದೆ. ಒಬ್ಬನೇ ವ್ಯಕ್ತಿ ಒಂದು ಧ್ವನಿಯನ್ನು ಒಮ್ಮೆ ಉಚ್ಚರಿಸಿ ಅದನ್ನೇ ಇನ್ನೊಮ್ಮೆ ಉಚ್ಚರಿಸಿದರೆ ಮೊದಲಿನಂತೆಯೇ ಉಚ್ಚರಿಸಿದ್ದಾನೆನ್ನಲಾಗುವುದಿಲ್ಲ. ಅತ್ಯಲ್ಪ ಅಂತರವಾದರೂ ಇರಬಹುದು. ಹೀಗೆ ಅನೇಕ ವ್ಯಕ್ತಿಭಾಷೆ (ಐಡಿಯಲೆಕ್ಟ್)ಗಳು ಕೂಡಿ ಒಂದು ಭಾಷಾ ಪ್ರಭೇದವಾಗುತ್ತದೆ. ಈ ಪ್ರಭೇದ ಹಳ್ಳಿ, ತಾಲೂಕು, ಜಿಲ್ಲೆ ವರ್ಗಗಳಿಗೆ ಸೀಮಿತವಾಗಿರಬಹುದು. ಪ್ರದೇಶದ ವಿಸ್ತಾರ ಹೆಚ್ಚಿದಂತೆ ಇವುಗಳೊಳಗಿನ ಭಿನ್ನತೆ ಹೆಚ್ಚುತ್ತದೆ. ಪರಸ್ಪರ ತಿಳಿವಳಿಕೆಯ ಹಂತವನ್ನು ಮೀರಿದಾಗ ಇವು ಉಪಭಾಷಾವಲಯ (ಡಯಲೆಕ್ಟ್)ವನ್ನು ಪ್ರವೇಶಿಸುತ್ತವೆ. ಇನ್ನೂ ಅರ್ಥವಾಗದ ಹಂತಕ್ಕೆ ತಲುಪಿದಾಗ, ಭಾಷೆಯೇ ಬೇರೆ ಎನಿಸುತ್ತದೆ. ಒಂದು ಪ್ರಧಾನ ಭಾಷೆಯಲ್ಲಿ ಅನೇಕ ಉಪಭಾಷೆಗಳಿರುತ್ತವೆ. ಎಲ್ಲಾ ಭಾಷೆಗಳಿಗೂ ಇಂತಹ ಉಪಭಾಷೆಗಳಿರುತ್ತವೆ.

ಭಾಷಾ ಪ್ರಭೇದಗಳ ಕಾರಣ-ಭೌಗೋಳಿಕ. ಸಾಮಾಜಿಕ, ರಾಜಕೀಯ, ಅನ್ಯಭಾಷಾ ಸಂಪರ್ಕ ಮಾತ್ರವಲ್ಲದೆ ಆಡುವವರ ದೈಹಿಕ, ಆಂತರಿಕ ವಿಚಾರಗಳೂ ಭಾಷಾ ಪ್ರಭೇದಕ್ಕೆ ಕಾರಣವಾಗುತ್ತವೆ.

ಭೌಗೋಳಿಕ : ಭಾಷಾ ಬಳಕೆಯ ಪ್ರದೇಶ ವಿಸ್ತಾರವಾಗುತ್ತಾ ಹೋದಂತೆ ಭಾಷಾ ಭಿನ್ನತೆ ಹೆಚ್ಚುತ್ತಾ ಹೋಗುತ್ತವೆ. ಭಾಷಾ ಪ್ರಭೇದಗಳಿಗೆ ಕಾರಣವಾದ ಪ್ರಮುಖ ಭೌಗೋಳಿಕ ಅಂಶವೆಂದರೆ ಬೆಟ್ಟ, ನದಿ, ಮರುಭೂಮಿ, ಹವಾಗುಣ, ಜನರ ಆಹಾರಾಭ್ಯಾಸ ಇತ್ಯಾದಿ. ಪಶ್ಚಿಮಘಟ್ಟ ಮತ್ತು ಅರಣ್ಯ, ಕರಾವಳಿ

ಮತ್ತು ಮಲೆನಾಡುಗಳಲ್ಲಿ ಭಾಷಾ ಪ್ರಭೇದವನ್ನುಂಟುಮಾಡಿದೆ. ಭೀಮಾ, ಕೃಷ್ಣಾ, ಮಲಪ್ರಭಾ, ತುಂಗಭದ್ರಾ, ಕಾವೇರಿ, ಮುಂತಾದ ನದಿಗಳು ತಮ್ಮೆರಡು ದಂಡೆಗಳ ಭಾಷೆಗಳೊಳಗೆ ಪ್ರಭೇದವುಂಟಾಗಲು ತಕ್ಕಮಟ್ಟಿಗಾದರೂ ಕಾರಣವಾಗಿವೆ. ಸೇತುವೆ, ರಸ್ತೆ ಮೊದಲಾದ ಸಾರಿಗೆ ವ್ಯವಸ್ಥೆ ರೇಡಿಯೋ, ಚಲಚ್ಚಿತ್ರ, ವೃತ್ತಪತ್ರಿಕೆ ಮೊದಲಾದ ಸಂಪರ್ಕ ಮಾಧ್ಯಮಗಳು ಈಗ ಹೆಚ್ಚಿರುವುದರಿಂದ ಭಾಷಾ ಪ್ರಭೇದದ ಗೋಡೆ ಮುರಿದು ಶಿಷ್ಟ ಭಾಷೆಯಲ್ಲಿ ಅವು ಲೀನವಾಗತೊಡಗಿವೆ.

ಸಾಮಾಜಿಕ : ಅಂತಸ್ತು, ಜಾತಿ, ವಿದ್ಯೆ ಮುಂತಾದ ಸಾಮಾಜಿಕ ಕಾರಣಗಳಿಂದ ಭಾಷಾ ಪ್ರಭೇದಗಳಾಗುತ್ತವೆ. ವೀರಶೈವರ ಕನ್ನಡ, ಬ್ರಾಹ್ಮಣರ ಕನ್ನಡ, ಹಳ್ಳಿಯ ರೈತನ ಕನ್ನಡ, ವಿದ್ಯಾವಂತರ ಕನ್ನಡ, ಹೀಗೆ. ಉನ್ನತ ವರ್ಗದವರು ಶಿಷ್ಟ ಕನ್ನಡವನ್ನು ಬಳಸುತ್ತಾರೆ. ಈ ಎರಡರ ಮಧ್ಯಮ ವರ್ಗದವರು- ಕಾರಕೂನರು, ಗ್ರಾಮಾಂತರದ ಶಿಕ್ಷಕರು, ಮೇಸ್ತ್ರಿ ಮೊದಲಾದ ವರ್ಗದವರು ಮಧ್ಯಮ ವರ್ಗದ ಕನ್ನಡವನ್ನು ಬಳಸುತ್ತಾರೆ. ಭಾಷೆ ಕೇಳಿ ಅವನ ವರ್ಗವನ್ನು ಹೇಳಬಹುದು.

ಹವಾಗುಣ ಆಹಾರಾಭ್ಯಾಸಗಳು ಮನುಷ್ಯನ ದೇಹ ಪ್ರಕೃತಿಯ ಮೇಲೆ ಪ್ರಭಾವ ಬೀರುವುದರಿಂದ ಧ್ವನಿ ವ್ಯವಸ್ಥೆಯಲ್ಲಿ ವ್ಯತ್ಯಾಸವಾಗಬಹುದು. ಮತ, ಧರ್ಮ, ಸಂಸ್ಕೃತಿಗಳು ಜೀವನ ಕ್ರಮದ ಮೇಲೆ ಪರಿಣಾಮ ಬೀರುವುದರಿಂದ ಇವುಗಳ ಪ್ರಭಾವ ಭಾಷೆಯಲ್ಲೂ ತೋರಿಬರುತ್ತದೆ. ಅನ್ಯಪ್ರಾಂತೀಯರು, ಬೇರೆಡೆಯಿಂದ ಬಂದು ನೆಲೆಸಿದವರು, ಮಲೆಯಾಳಿ, ತೆಲುಗ, ಮರಾಠಿಗ ಮೊದಲಾದವರು ತಮ್ಮದೇ ಒಂದು ರೀತಿಯ ಕನ್ನಡ ಮಾತನಾಡುತ್ತಾರೆ.

ರಾಜಕೀಯ : ಜಿಲ್ಲೆ, ತಾಲೂಕು, ಆಡಳಿತವರ್ಗ ಇವುಗಳಲ್ಲಿ ಬದಲಾವಣೆಯಾದಾಗಲೂ ಭಾಷಾಪ್ರಭೇದಗಳಾಗಬಹುದು. ಬೀದರ್, ಕಲಬುರ್ಗಿ, ರಾಯಚೂರು, ಜಿಲ್ಲೆಗಳಲ್ಲಿ ಮಹಮ್ಮದೀಯರ ಆಡಳಿತವಿದ್ದಾಗ ಉರ್ದುವಿನ ಪ್ರಭಾವವಾಯಿತು. ಕಾಸರಗೋಡು ದಕ್ಷಿಣ ಕನ್ನಡದಿಂದ ಕೇರಳಕ್ಕೆ ಹೋದಾಗ, ಅಲ್ಲಿ ಮಲೆಯಾಳದ ಪ್ರಭಾವವಾಯಿತು. ಆಡಳಿತಗಾರರ ಭಾಷಾ ಪ್ರಭಾವ ಆ ಪ್ರದೇಶದ ಭಾಷೆಯ ಮೇಲಾಗುತ್ತದೆ. ಇಂಗ್ಲೀಷರ ಆಡಳಿತದಿಂದ ಎಲ್ಲಾ ಭಾಷೆಗಳ ಮೇಲೆ ಇಂಗ್ಲೀಷ್ ಪ್ರಭಾವವಾಯಿತು.

ಅನ್ಯಭಾಷಾ ಪ್ರಭಾವ : ಸಂಸ್ಕೃತ, ಇಂಗ್ಲಿಷ್, ಹಿಂದಿ, ಉರ್ದು ಇವುಗಳ ಪ್ರಭಾವ ಸಾಮಾನ್ಯವಾಗಿ ಕನ್ನಡದಲ್ಲಿ ಸಾರ್ವತ್ರಿಕವಾಗಿ ಆಗಿದೆ. ಕಾರವಾರ, ಬೆಳಗಾವಿ, ವಿಜಾಪುರ, ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಗಳ ಗಡಿ ಪ್ರದೇಶದಲ್ಲಿ ಮರಾಠಿ ಪ್ರಭಾವ; ಬೀದರ್, ಕಲಬುರ್ಗಿ, ಬಳ್ಳಾರಿ, ತುಮಕೂರು, ಕೋಲಾರ ಈ ಜಿಲ್ಲೆಗಳ ಪೂರ್ವಗಡಿಭಾಗಗಳಲ್ಲಿ ತೆಲುಗು ಪ್ರಭಾವ; ಮೈಸೂರು, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳು ಹಾಗೂ ಮಲಯಾಳಗಳ ಪ್ರಭಾವ- ಹೀಗೆ ಪರಭಾಷೆಗಳ ಪ್ರಭಾವದಿಂದ ಅಲ್ಲಲ್ಲಿನ ಭಾಷೆಯಲ್ಲಿ ಪ್ರಭೇದವುಂಟಾಗುತ್ತದೆ. ಈ ಪ್ರಭೇದಗಳನ್ನೆಲ್ಲಾ ಲೆಕ್ಕ ಹಾಕಿದರೆ ಕನ್ನಡವೊಂದರಲ್ಲಿ ನೂರಾರು ಭೇದಗಳಾಗಬಹುದು. ಪ್ರಪಂಚದ ನಾಲ್ಕು ಸಾವಿರ ಭಾಷೆಗಳಲ್ಲಿ ಭಾರತ ದೇಶವೊಂದರಲ್ಲೇ ಸಾವಿರದ ಐನೂರು ಭಾಷೆಗಳಿವೆಯೆಂದ ಮೇಲೆ ಭಾಷೆಯ ಈ ವಿಶ್ವರೂಪ ಅದ್ಭುತವೆನಿಸುತ್ತದೆ. ಒಂದೇ ಆದ ಮೂಲದ್ರಾವಿಡ ಪ್ರಧಾನ ಐದಾಗಿ ಮತ್ತೊಂದೊಂದರಲ್ಲಿ ಇನ್ನೆಷ್ಟೋ ಪ್ರಭೇದಗಳಾಗಿವೆ. ಪ್ರಾದೇಶಿಕತೆಯ ಪ್ರವಾಹ ಸೇರಿ ಉಪಭಾಷಾ ನದಿಗಳಾಗಿ ಭಾಷಾ ಸಮುದ್ರವಾಗುತ್ತದೆ. ಅಥವಾ ವ್ಯಕ್ತಿಭಾಷೆ ಎಲೆಗಳಾಗಿ, ಪ್ರಾದೇಶಿಕ ಉಪಶಾಖೆಗಳಿಂದ, ಉಪಭಾಷೆಗಳ ಗೆಲ್ಲುಗಳಿಂದ ಶಿಷ್ಟಭಾಷೆಯ ಕಾಂಡದಿಂದ ಭಾಷಾ ಕಲ್ಪವೃಕ್ಷ ರೂಪತಾಳುತ್ತದೆ. ಪ್ರಾದೇಶಿಕ ಭಿನ್ನತೆಯನ್ನು ಹೋಗಲಾಡಿಸಲು ಒಂದು ಪ್ರಮಾಣಭೂತಭಾಷೆ ನಿರ್ಮಾಣವಾಗುತ್ತದೆ. ಗ್ರಂಥಗಳು, ಆಕಾಶವಾಣಿ, ಸಿನೇಮಾ, ವಾರ್ತಾಪತ್ರಿಕೆ ಮೊದಲಾದ ಸಾರ್ವಜನಿಕ

ಮಾಧ್ಯಮಗಳು ಇದನ್ನೇ ಬಳಸುವುದರಿಂದ, ಈ ಭಾಷೆ ಎಲ್ಲರಿಗೂ ತಿಳಿದಿರುವುದರಿಂದ ಭಿನ್ನತೆಯ ತೊಡಕಿಲ್ಲ.

ಕರ್ನಾಟಕದಲ್ಲಿರುವ ಜಿಲ್ಲೆಗಳ ಸಂಖ್ಯೆಯ ಆಧಾರದಲ್ಲಿ ಕನ್ನಡದಲ್ಲಿನ ಪ್ರಭೇದಗಳು ಇಷ್ಟು ಎಂದು ಹೇಳಬಹುದಾದರೂ ಸ್ಥೂಲವಾಗಿ ಐದು ಕನ್ನಡದ ಪ್ರಾದೇಶಿಕ ಪ್ರಭೇದಗಳು- ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ ಮತ್ತು ಬೀದರ್ ಕನ್ನಡ. ಅಥವಾ ಉತ್ತರ ಕರ್ನಾಟಕವನ್ನೆಲ್ಲಾ ಒಂದಾಗಿಸಿ ಧಾರವಾಡ ಕನ್ನಡವೆಂದರೆ, ಮಂಗಳೂರು, ಮೈಸೂರು ಕನ್ನಡ ಹೀಗೆ ಸ್ಥೂಲವಾಗಿ ಮೂರು ಪ್ರಭೇದಗಳನ್ನು ಹೇಳಬಹುದು. ಕನ್ನಡದ ಪ್ರಭೇದಗಳಲ್ಲಿ ತೋರಿಬರುವ ಅರ್ಥ. ಪ್ರಯೋಗ ವೈವಿಧ್ಯಗಳನ್ನು ಮಂಗಳೂರು ಕನ್ನಡ ಅಥವಾ ಪ್ರಮಾಣ ಕನ್ನಡದ ಹಿನ್ನೆಲೆಯಲ್ಲಿ ಕೇವಲ ಕೆಲವು ಉದಾಹರಣೆಗಳಿಂದ ಮನಗಾಣಬಹುದು- ಬೀದರ್ ಕಲಬುರ್ಗಿಗಳ ಕನ್ನಡ ಮರಾಠಿ ಉರ್ದುಗಳಿಂದ ಹೆಚ್ಚು ಪ್ರಭಾವಿತವಾಗಿದೆ. ಬೀದರ್‌ನಲ್ಲಿ ಮರಾಠಿ ಪ್ರಭಾವದಿಂದ 'ಕಿಂಡಿ'ಯು ಖಿಂಡಿಯಾಗಿ 'ಕೆಂಡ'ವು 'ಖೆಂಡ'ವಾದರೆ ಶಿಷ್ಟರು ಕೆಂಡವಾಗಬೇಕಿಲ್ಲ'. ಆದಿ ಸ್ವರಗಳಿಗೆಲ್ಲಾ ಕಕಾರ ವ್ಯಂಜನ ಬಂದು ಅಲ್ಲಿ-ಕಲ್ಲೆಯಾಗಿ ಅದು-ಕದುವಾಗಿ ಇವ-ಕಿವನಾಗುತ್ತಾನೆ. ಶಿಷ್ಟ ಕನ್ನಡದ ಎಕಾರಾಂತವು ಬೀದರ್, ಕಲಬುರ್ಗಿ, ಧಾರವಾಡ, ರಾಯಚೂರು ಕನ್ನಡಗಳಲ್ಲಿ ಇಕಾರಾಂತವಾಗಿದೆ. ಬಡವನದಾದರೂ ಮನೆ-ಮನಿ, ಕೆರೆ-ಕೆರಿ, ಒಂಟೆ-ಒಂಟಿ, ಆನೆ-ಆನಿ, ಮಳೆ-ಮಳಿ. ಬೀದರ್ ಕನ್ನಡದಲ್ಲಿ ಸುಮ್ಮನೆ-ಸುಳ್ಳೆ ಆಗಿ ಹಲ್ಲು-ಹಳ್ಳು, ಮರೆ ಮರಿಯಾಗಿ ಬಿಡುತ್ತದೆ. ಇದ್ದಾನೆ ಎಂಬರ್ಥದ ಅಹನ್-ಹಾನ, ಇದ್ದಾಳೆ ಎಂಬರ್ಥದ ಅಹಳ್-ಹಾಳ, ಇದ್ದಾರೆ ಎಂಬರ್ಥದ ಅಹರ್-ಹಾರ ಆಗಿಬಿಡುತ್ತದೆ, ''ಮೇಲೆ ಹಾರ್ರಿ'' ಎಂದರೆ ಮೈಮೇಲೆ ಹಾರುತ್ತಾರೆಂದು ಹೆದರಬೇಡಿ-ಮೇಲೆ ಇದ್ದಾರೆ ಎಂದಷ್ಟೆ ಅರ್ಥ, ಖೂನ ಇದೆಯೋ ಅಂದರೆ ಇದೇನು ಖೂನಿ-ಕೊಲೆ ಅಂದುಕೊಳ್ಳಬೇಡಿ, ಗೊತ್ತಿದೆಯೋ ಎಂದರ್ಥ. ಇವರಿಗೆ ಉಪ್ಪಿನಕಾಯಿಯೂ ಚಟ್ಣಿಯೇ! ಜೈಪಿಗೆ ಬಂದ-ಅಂದರೆ ವೃದ್ಧಾವಸ್ಥೆಗೆ ತಲುಪಿದ. ಕೂಡಿ ಬಿದ್ದ ಅಂದರೆ ವಯಸ್ಸಾಗಿ ಇನ್ನೊಬ್ಬರ ಆಶ್ರಯಕ್ಕೆ ಬಿದ್ದ. ಉಮರ್ಕಬಂದ-ಪ್ರೌಢಾವಸ್ಥೆಗೆ ಬಂದ. ಜೀವ ಹೊಡಿ ಎಂದರೆ ಕೊಲೆಮಾಡು, ಜಾನ್‌ಹಾಕು ಅಂದರೆ ಅನ್ನ ಬಸಿ, ಹೊಲಿಗೆ ಕೆಲಸದವ ಶೇಣ್ಗ್ಯಾ. ಅಕ್ಕಸಾಲಿಗರು ಅಗಸಾಲರು. ಪಾತ್ರೆ ಸರಿಮಾಡುವವ, ಗಿಸ್ಡ್ಯಾ. ''ಚಂಜೆಪರಿ ಬಂದಿದೆ'' ಅಂದರೆ ಸಂಜೆ ಹೊತ್ತು ಬಂದಿದೆ. ಐದು ಫಕಿ ಬಂದಿದ ಅಂದರೆ ಐದು ಸಲ ಬಂದಿದೆ.

ಅಕ್ಕ-ಯಕ್ಕ, ಅಣ್ಣ-ಯಣ್ಣ, ಕೋಳಿಮರಿ-ಕೋಳಿಪಟ್ಟಿ, ಆಡಿನಮರಿ-ಆಡಿನ ಪಿಲ್ಲೆ, ಮುಹೂರ್ತ ಮೋತ್ರವಾದರೆ ಪಾಪ! ಹಾರುವರು (ಬ್ರಾಹ್ಮಣರು) ಹಾರರಾಗುತ್ತಾರೆ. ಬೀದರ್ ಭಾಷೆಯಲ್ಲಿ ಗೋಲಿ ಅಂದರೆ ಮದ್ದಿನ ಗುಳಿಗೆ; ಕೋಪಿಯ ಗುಂಡಲ್ಲ. ಕೆಲವು ಕ್ರಿಯಾಪದಗಳೊಂದಿಗೆ 'ಹಾಕು' ಸೇರಿಸುವುದೊಂದು ರೂಢಿ. ಕೊಡು-ಕೊಟ್‌ಹಾಕು, ಹರಡು-ಹರಂಚಿ ಹಾಕು; ದೊಡ್ಡಿ ಮಂಗಳೂರು ಕನ್ನಡದಲ್ಲಿ ದನ ಕಟ್ಟುವ ಜಾಗವಾದರೆ ಬೀದರ್ ಕಡೆಯಲ್ಲಿ ನಾಲ್ಕಾರು ಮನೆಗಳ ವಠಾರ ಅಥವಾ ಮನೆ ಎಂಬರ್ಥವೂ ಇದೆ, ಬಹುವಚನ ವಾಚಕವಾದ ಗಳು-ಗೊಳು, ಗೋಳು ಆದರೆ ಹೇಗೆ? ಕರು ಗೋಳು ಬಯಲಿಗೆ ತೊಂದರೆ ಕೊಟ್ಟರೆ ಗೋಳಲ್ಲದೆ ಬೇರೇನು? ಇದೆ, ಇವೆಗಳು, ಆದೆ, ಅವೆ ಆಗುತ್ತವೆ. ಅವನು ಹೋಗುತ್ತಾನೆ ಸಂಶ್ಲಿಷ್ಟವಾಗಿ ಅವನು ಹೋತ ಆದರೆ ಗಂಡು ಆಡು ಅವನೆಂದು ಭ್ರಮಿಸಬಾರದು.

ದಕ್ಷಿಣ ಕನ್ನಡದಲ್ಲಿ ಯಾವಳೇ ಸ್ತ್ರೀಯನ್ನು ಅವಳೆಂಬ ಸರ್ವನಾಮದಿಂದ ಹೇಳಬಹುದಾದರೆ ರಾಯಚೂರು ಕನ್ನಡದಲ್ಲಿ ಸೂಳೆಯರಂಥವರಿಗೇ ''ಅವಳು'' ಮೀಸಲು. ಆಕೆ ಎಂಬರ್ಥದ ಆಕಿ ಹೆಂಡತಿಗೆ ಮಾತ್ರ ಸೀಮಿತ. ಶುಭವನ್ನು ಹಾರೈಸುವಲ್ಲಿ ಆಗಲಿ-ನಿನಗೆ ಕಲ್ಯಾಣವಾಗಲಿ. ಕೇಡನ್ನು

ಹಾರೈಸುವಲ್ಲಿ "ಆಗ" ಬಳಸುತ್ತಾರೆ- ನಿನ್ನ ಮನೆ ಹಾಳಾಗ. ಆಗ ಎಂದರೆ ಆಗದು ಎಂದಲ್ಲ, ಆಗಲಿ ಎಂಬರ್ಥ. ಬರುವುದಿಲ್ಲ ಎಂಬರ್ಥದಲ್ಲಿ ಬರಂಗಿಲ್ಲ ಅಥವಾ ಬರಗಿಲ್ಲ, ಬರಬೇಕಾಗಿಲ್ಲ ಎಂಬರ್ಥವಲ್ಲ, ನೀರು ಶಿಷ್ಟಕನ್ನಡದಲ್ಲಿ ಯಾವಾಗಲೂ ಏಕವಚನವಾದರೆ ರಾಯಚೂರು ಕನ್ನಡದಲ್ಲಿ ಬಹುವಚನ- ನೀರು ಅವ. ವ್ಯಕ್ತಿಯ ವಶದಲ್ಲಿದೆಯೆಂದು ಸೂಚಿಸಲು ತಾಕ, ಕಡೆ ಬಳಕೆಯಾಗುತ್ತವೆ. ಆಕಿ ಕಡೆ ಪೆನ್ನು ಅವ. ಆತನ ತಾಕ ಐತಾ ನೋಡು. ಕೊಂದ ಎಂಬುದು ಕೊಲ್ಲಿದ, ಬಿಲ್ಲಿನಿಂದ, ಬಿಲ್ಲಿಲಿಂದ, ಕಲ್ಲಿನಿಂದ-ಕಲ್ಲಿಲಿಂದ. ನಕಾರದ ಬದಲು ಲಕಾರವಿದೆ. ಆದ್ದರಿಂದ ಎಂಬುದರ ಬದಲು 'ಕಾರಣ' ಹೇಳುತ್ತಾರೆ. ಕುರಿ ಆ ಪ್ರಾಣಿಯ ಹೆಸರಲ್ಲ. ಅದರ ಮಾಂಸಕ್ಕೆ ಆ ಹೆಸರು. ಹಗ್ಗವು ಅಗ್ಗವಾದರೆ 'ಚೀಪ್' ಎಂದು ಅರ್ಥವಲ್ಲ. ಅನ್ನ ಹನ್ನವಾಗಿ ಅಳು ಹಾಳಾಗಿ ಹೇಳು ಏಳಾಗುತ್ತದೆ. ಹೆಂಗಸು ಅಂದರೆ ಸೂಳೆಯೆಂದಾದ ಮೇಲೆ ಹೆಣ್ಮಕ್ಕಳನ್ನು ಆಯಮ್ಮ, ಆಯವ್ವ ಎನ್ನದೆ ಉಪಾಯವಿಲ್ಲ. ಮೋರೆ (ಮುಖ) ಮಾರಿಯಾದರೆ ಅವಲಕ್ಷಣವೇನಿಲ್ಲ. ಕಾಡಿಗೆಯೆಂದರೆ ಕಣ್ಣಿಗೆ ಹಾಕುವ ಕಾಡಿಗೆಯಲ್ಲದೆ ಧಾನ್ಯಗಳ ಮೇಲೆ ಬರುವ ಕಪ್ಪು ಬೂಸುರು. ಅದು ಬಹುಶಃ ಕಾಡಿಗೆಯಂತೆ ಕಪ್ಪಾದುದರಿಂದ ಅದಕ್ಕೂ ಆ ಹೆಸರು ಬಂದಿರಬೇಕು. ಬತ್ತ ಅಂದರೆ ಯಾವುದೇ ಧಾನ್ಯ. ಬತ್ತ ಎಂಬರ್ಥದಲ್ಲಿ ನೆಲ್ಲು ರೂಢಿಯಲ್ಲಿದೆ. "ಚಾಳೀಸ್" ಎಂದರೆ ಹಿಂದಿಯ 'ನಲುವತ್ತು' ಚಾಳಿಸುವುದರ ರೂಪಾಂತರವಲ್ಲ, ನಲುವತ್ತರ ಪ್ರಾಯದಲ್ಲಿ ಧರಿಸುವ ಕನ್ನಡಕ ಮಾತ್ರ. "ಏಕೆ"ಯ ಬದಲು "ಯಾಕೆ"ಯೇ ಸಾಮಾನ್ಯ. ಹಾಗೆ ಆಗಲಿ ಎಂಬುದರ ಬದಲು ಅಷ್ಟೇ ಮಾಡಿ. ಹೀಗೆ ರಾಯಚೂರು ಕನ್ನಡದಲ್ಲಿ ಪ್ರಮಾಣ ಕನ್ನಡಕ್ಕಿಂತ ಸಾಕಷ್ಟು ಅಂತರವನ್ನು ಕಾಣಬಹುದು. ಕವಿರಾಜಮಾರ್ಗಕಾರನು ಧಾರವಾಡದ ಆಸುಪಾಸಿನ ಪುಲಿಗೆರೆ ಒಕ್ಕುಂದಗಳ ಕನ್ನಡವನ್ನು ಪ್ರಮಾಣ ಕನ್ನಡವೆಂದು ಕರೆದರೂ ಅಲ್ಲೂ ಶಿಷ್ಟಕನ್ನಡಕ್ಕೆ ಭಿನ್ನವಾದ ಪ್ರಾದೇಶಿಕ ಪ್ರಭೇದವಿದ್ದೇ ಇದೆ. ಉತ್ತರ ಕರ್ನಾಟಕದ ಪ್ರಭೇದವನ್ನು ಹೆಚ್ಚುಕಡಿಮೆ ಇದರಲ್ಲೇ ಒಳಗೊಳಿಸಬಹುದು. ಧಾರವಾಡದವರು 'ಚ'ವನ್ನು 'ತ್ಸ' ಎಂಬಂತೆ ಉಚ್ಚರಿಸುತ್ತಾರೆ. ಉದಾ : ಚುಂಗು-ತ್ಸುಂಗು, ಚೂರು-ತ್ಸೂರು, ದಕ್ಷಿಣ ಕನ್ನಡದ ಚೇಳು ಚೋಳು ಎಂದಲ್ಲದೆ ತ್ಸೋಳು ಆಗುತ್ತದೆ. 'ಅಷ್ಟು, ಕಷ್ಟ ಎಂಬಂತೆ ನಕಾರ ಸಹಿತ ಉಚ್ಚಾರವಿದೆ. ಕಾವು-ಕಾಂವು, ಹಾವು-ಹಾಂವು, ಬೇಯು-ಬೇಂಯು ಎಂದು ಸಾನುನಾಸಿಕ ಉಚ್ಚಾರವಿದೆ. ದಪ್ಪಾರ(ಬ್ರಾಹ್ಮಣ) ಎಂಬರ್ಥದ ಪಾರ್ವ ಇದ್ದಲ್ಲಿ ಹಾರುವನಾಗಿ ಅಪದೆಸೆಗೆ ಒಳಗಾಗಿದ್ದಾನೆ. ರೂಪಕ ಪ್ರಕಾರವಾದ ಸಂಸ್ಕೃತದ "ಪ್ರಕರಣ"ವು ಕನ್ನಡದಲ್ಲಿ ಪಗರಣವಾಗುತ್ತದೆ. ಇದರಲ್ಲಿ ನಟಿಸುವ ಪುರುಷರು ಪಗಣರು, ಸ್ತ್ರೀಯರು ಪಗಣೆಯರು-ಪಗಣ್ಯಾರು- ಅವರೆ ಇಲ್ಲಿ [illegible] ಬರೇ ತೋರಿಕೆಯ ಜನ, ನಾಟಕೀ ಜನ. ಅಪ್ಪ ಅಮ್ಮಗಳಿಗೆ ದಕ್ಷಿಣ ಕನ್ನಡದಲ್ಲಿನ್ನೂ ದೆಸೆಗೆಟ್ಟಿಲ್ಲ. ಧಾರವಾಡದಲ್ಲಿ, ಉತ್ತರ ಕನ್ನಡದಲ್ಲೂ ಅದಕ್ಕೆ ಹೀನಾರ್ಥವೊದಗಿದೆ. ಅಪ್ಪ, ಅವ್ವ ಬೈಗುಳ ಶಬ್ದಗಳು. ಅಮ್ಮ ಅಂದರೆ ವಿಧವೆ. ಅಮ್ಮಗಳು ಅಮ್ಮಗೋಳು ಆಗಿ ಗೋಳಾಡಿಸುತ್ತದೆ. ತಾಯಿಯೆಂಬರ್ಥದಲ್ಲಿ ಅವ್ವ ಶಬ್ದವಿದೆ. ಮಂಗಳೂರು, ಮೈಸೂರುಗಳಲ್ಲಿ ದೋಸೆ ಹೊಯ್ಯುವ ಕಾವಲಿ ಧಾರವಾಡದಲ್ಲಿ ಕೊಳಕು ನೀರಿನ ಚರಂಡಿ, ಗಟಾರ. ಕಾಲ್ ವಾಯ್ ಕಾಲುವೆ. ಅಕ್ಕರಪಲ್ಲಟ ಕಾವಲಿ ಆದಾಗ ಅದಕ್ಕೆ ದೇವರೇಗತಿ. ದೋಸೆಯ ಕಾವಲಿ ಅವರಲ್ಲಿ ಹಂಚು(ಹಂಚು), ಮಂಗಳೂರಿನಲ್ಲಿ ನಾಡಿನ ಹಂಚೇ ಪ್ರಸಿದ್ಧ.

ಸ್ನಾನಮಾಡು, ಮೀಯು ಎಂಬುದಕ್ಕೆ "ಜಳಕ" ಬಂದಿದೆ. ತೊಡಗು ಎಂಬರ್ಥದಲ್ಲಿ "ಹತ್ತು", ಏರು ಎಂಬರ್ಥದಲ್ಲಿಯೂ ಇದೆ. 'ಅವನ ಮರ ಇಳ್ಯಾಕ ಹತ್ಯಾನ' ಅಂದರೆ ಮರದಿಂದ ಇಳಿಯುವುದಕ್ಕಾಗಿ ಏರಿದ್ದಾನೆಂದಲ್ಲ, ಇಳಿಯಲು ತೊಡಗಿದ್ದಾನೆ! 'ಮರ ಹತ್ತಕ ಹತ್ಯಾನ' ಅಂದರೆ ಹತ್ತಲು ತೊಡಗಿದ್ದಾನೆ. ಸಂಖ್ಯಾ ವಾಚಕಗಳಲ್ಲಿ ಮರಾಠಿ ಪ್ರಭಾವ ಎದ್ದು ತೋರುತ್ತದೆ 'ಪೌನೆ ಹತ್ತು ಸವಾ ಎರಡು,

ತೇವ್ ರೂಪಾಯಿ, ಹೀಗೆ. ಧಾರವಾಡ ಕನ್ನಡದ ಗೌರವ ಸೂಚಕವಾಗಿ ''ರಿ'' (ಹಳಗನ್ನಡದ ''ಇಕ'') ಪ್ರಯೋಗವಾಗುತ್ತದೆ. 'ಏನ್ರೀ, ಹ್ಯಾಗಿದ್ದೀರ್ರಿ' ಇತ್ಯಾದಿ. ಮಂಗಳೂರು ಕನ್ನಡದಲ್ಲಿ ಮಹಾರಾಯರೇ ಅಥವಾ ಮಾರಾಯ್ರೇ ಗೌರವ ಸೂಚಕವಾಗಿದೆ. ''ಏನು ಮಾರಾಯ್ರೇ ಹೇಗಿದ್ದೀರಿ?'' ಎಂಬಲ್ಲಿ ಸ್ಪಷ್ಟ. ಮಂಗಳೂರವರಲ್ಲಿ 'ತರಕಾರಿ' ರೂಢವಾದ ಮೇಲೆ ಸೆಟ್ಟಿಕಾಯಿ ದೂರ ಸರಿಯಿತು. ಈ ಅರ್ಥದಲ್ಲಿ ಧಾರವಾಡದ ಕಡೆ ''ಪಲ್ಯ'' ಅಥವಾ ''ಭಾಜಿ'' (ಮರಾಠಿ) ಶಬ್ದವಿದೆ. ಮಂಗಳೂರು ಕಡೆ ಪಲ್ಯ ಅಂದರೆ ವ್ಯಂಜನ ವಿಶೇಷ. ತರಕಾರಿ ಬೇಯಿಸಿ ಆರಿಸಿದ್ದು. ಮಂಗಳೂರಿನ 'ನಿಮ್ಮೊಟ್ಟಿಗೆ' ಧಾರವಾಡದಲ್ಲಿ 'ನಿಮ್ ಜೋಡಿ', ಚೆನ್ನಾಗಿದೆ ಎಂಬುದಕ್ಕೆ ಮಸ್ತಾಗಿದೆ. ಮಂಗಳೂರಿನ ತುಳು ಕನ್ನಡಗಳಲ್ಲಿ 'ಮಸ್ತ್' ಅಂದರೆ ತುಂಬ, ಕೊಬ್ಬಿದ, ಪುಷ್ಟ –ಮಸ್ತ್‌ಜನ ಸೇರಿದರು, ಕೋಣ ಮಸ್ತಾಗಿದೆ ಎಂದರೆ ಸ್ಪಷ್ಟ. ಧಾರವಾಡದಲ್ಲಿ 'ಸಂಜೆ ಮುಂದ ಪ್ಯಾಟಿಗೆ ಹೊಂಟಿಲ್ಲ' ಎಂದರೆ ಸಂಜೆ ಹೊತ್ತಿಗೆ ಪೇಟೆಗೆ ಹೋಗಿಲ್ಲ. ತಿಂಡಿ ಆಯಿತಾ ಅಂದರೆ ದಕ್ಷಿಣ ಕನ್ನಡದಲ್ಲಿ ಕೋಪಿಸುವ ಪ್ರಮೇಯವಿಲ್ಲ, ಧಾರವಾಡದವರು ಹಾಗೆಂದರೆ ಕೋಪಿಸಿಕೊಳ್ಳಬಹುದು. ತಿಂಡಿ ಅಂದರೆ ತೀಟೆ; ತುರಿಕೆ, ಮಾತ್ರವಲ್ಲದೆ ಸ್ವಲ್ಪ ಹೀನಾರ್ಥ ಅವರಲ್ಲಿ. ಆದಿತ್ಯವಾರ ನಮಗೆ ರಜೆ ಎಂದು ಅವರು ಹೇಳಲಾರರು. ಅವರಿಗೆ ಅಂದು ಸೂಟಿ. ಹಿಂದಿಯಲ್ಲಿ ಛುಟ್ಟಿ, ಮರಾಠಿಯಲ್ಲಿ ಸೂಟಿ. ಆದರೆ ಪ್ರಭಾವ ಅಲ್ಲಿನ ಕನ್ನಡಿಗರಿಗೆ. ತಿಂಗಳ ಮೊದಲಲ್ಲಿ ಅಲ್ಲಿನ ಉದ್ಯೋಗಸ್ಥರಿಗೆ ಪಗಾರ ಸಿಕ್ಕಿದರೆ (ಮರಾಠಿ) ಮಂಗಳೂರವರಿಗೆ ಸಂಬಳ ಸಿಗುವುದು. 'ನಾಲ್ಕು ದಿನ ನಮ್ಮಲ್ಲಿ ಕುತೂಕೊ' ಎಂದರೆ ಧಾರವಾಡದವರು ನಗಬಹುದು. ಅಲ್ಲಿ ಕೂತುಕೊಳ್ಳುವುದೆಂದರೆ ಕೇವಲ ಆಸನದಲ್ಲಿ ಕುಳಿತುಕೊಳ್ಳುವುದಷ್ಟೆ. ''ಇರು'' ಎಂಬ ಅರ್ಥವಿಲ್ಲ. ಅವರು ಕಾಲೇಜು ವಿದ್ಯಾರ್ಥಿಗಳನ್ನು ಮಕ್ಕಳೆನ್ನುವುದಿಲ್ಲ, ವಿದ್ಯಾರ್ಥಿಗಳೆನ್ನುತ್ತಾರೆ. ಮಂಗಳೂರು ಕನ್ನಡದಲ್ಲಿ ವಿದ್ಯಾರ್ಥಿಗಳೆಲ್ಲಾ ಮಕ್ಕಳೇ ಆಗುತ್ತಾರೆ. ಧಾರವಾಡದವರಿಗೆ ಗುಡಿಗಳಲ್ಲದೆ ದೇವಸ್ಥಾನಗಳಿಲ್ಲ. ಹನುಮಂತ ದೇವರ ಗುಡಿ, ಶಿವನ ಗುಡಿ, ಹೀಗೆ. ಮಂಗಳೂರಿನವರಿಗೆ ಗುಡಿಯೆಂದರೆ ಪಾಳುಬಿದ್ದ ದೇವಾಲಯ. ಸಾಹೇಬರೆಂದರೆ ಗೌರವವಾಚಕ, ಆಫೀಸರ್ ಎಂಬರ್ಥ. ಅವರಲ್ಲಾದರೆ 'ಏನ್ರೀ ಸಾಹೇಬ್ರೇ?' ಅಂದರೆ ಮಂಗಳೂರವರು ಕೋಪಿಸಿಕೊಂಡು ನಾನೇನು ಮುಸಲ್ಮಾನನೇ ಎಂದು ರೇಗಬಹುದು. ಮರಾಠಿಯ 'ಲವಕರ್' ಅವರಲ್ಲಿ 'ಲಗೂ' ಆಗಿ ಬೇಗ ಎಂಬರ್ಥ. 'ಲಘು' ಎಂದು ಭ್ರಮಿಸಬಾರದು. 'ಚೆನ್ನಾಗಿದ್ದೀರ?' ಅಂದರೆ 'ಹೂನ್ರಿ' ಎನ್ನುತ್ತಾರೆ ಅವರು. ಹೌದು ಎಂದು ಹೇಳುವುದಿಲ್ಲ. ಹೆಣ್ಣುಮಗಳು 'ಹೆಣಮಗಳು' ಎಂದಾದರೆ ಬೈಗಳಲ್ಲ. ಹೀಗೆ ಧಾರವಾಡದ ಕನ್ನಡವು ಹಲವು ವೈಶಿಷ್ಟ್ಯಗಳಿಂದ ಕೂಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲೂ ಕೆಲವು ವೈಶಿಷ್ಟ್ಯಗಳಿವೆ. ಇಲ್ಲಿನವರಿಗೆ 'ಸೀರೆ' 'ಸೇರಿ' ಆಗುತ್ತದೆ. ಇಲ್ಲ ಎಂಬುದನ್ನು ವಿಕಲ್ಪವಾಗಿ 'ಎಲ್ಲ' ಎನ್ನುತ್ತಾರೆ. 'ನೆಡಿ' ಎಂದರೆ ಗಿಡ ನೆಡುವುದಲ್ಲ, ನಡೆ–ನೆಡೆ 'ನೆಡಿ' ಆಗುತ್ತದೆ. ಅಮ್ಮನು ಕೆಲವೆಡೆ ವಿಧವೆಯಾದರೆ ಇನ್ನೂ ಕೆಲವೆಡೆ ಅಜ್ಜಿಯಾಗುತ್ತಾಳೆ. 'ಹೊಲಿ' ತೂರಿದನಂತರ ಬತ್ತದ ಕಾಳಿನ ರಾಶಿ 'ಹುಲಿರಾಶಿ' ಯಾದರೆ ಹೆದರಬಾರದು. ಬಿಳಿಹುಲ್ಲು 'ಸಾಕ್ರೆ' ಯಾದರೆ ಸಕ್ಕರೆಯ ಅಪಭ್ರಂಶವೆಂದು ಭ್ರಮಿಸಬೇಡಿ. 'ಕುಟ್ಟಿ' ಎಂಬುದಕ್ಕೆ ದಕ್ಷಿಣ ಕನ್ನಡದಲ್ಲಿ ಕುಳ್ಳ, ದುಂಡಗೆ (ಬಹುಶಃ ತುಳುವಿನಲ್ಲಿ) ಎಂಬರ್ಥವಿದ್ದರೆ ಮಲಯಾಳದಲ್ಲಿ ಮಗು (ಆಣ್‌ಕುಟ್ಟಿ: ಪೆಣ್‌ಕುಟ್ಟಿ), ಉತ್ತರ ಕನ್ನಡ ಜಿಲ್ಲೆಯ ಕೆಲವೆಡೆ 'ಚಿಕ್ಕಮನೆ' ಯೆಂದರ್ಥ. ಅವರಲ್ಲಿ ಮೇಲೆ–ಮೇನೆಯಾಗಿ ಅಡುಗೆ ಮನೆ ಅಡುಗೆಮುರಿಯಾಗುತ್ತದೆ. ತಿಕ್ಕು, ಉಜ್ಜು ಎಂಬರ್ಥವ 'ತೀಡು' ಅಂದರೆ ಅವರಲ್ಲಿ 'ಅಳು'. ಪ್ರಮಾಣ ಕನ್ನಡದಲ್ಲಿ ಮೊಯ್ದು ಅಂದರೆ ಹೊಡೆದ, ಅವರಲ್ಲಿ ಹೋದ ಎಂದರ್ಥ. ಇಲ್ಲಿನ ಹವ್ಯಕರಲ್ಲಿ ಮತ್ತು ದಕ್ಷಿಣ ಕನ್ನಡದ ಹವ್ಯಕರಲ್ಲೂ ಅಮ್ಮ ನಪುಂಸಕ. ಉತ್ತರ ಕನ್ನಡದಲ್ಲಿ ಕೆಲವೊಮ್ಮೆ ಪುಲ್ಲಿಂಗವೂ ಆಗಬಹುದು– ಅಮ್ಮ

ಬಂತು, ಅಮ್ಮ ಬಂದ. ಎರಡೂ ಕಡೆಯವರಲ್ಲೂ ಅಮ್ಮ ಎಂಬರ್ಥದಲ್ಲೆ ಅಬ್ಬೆಯೇ ರೂಢಿಯಲ್ಲಿದೆ.

ಮೈಸೂರು ಕನ್ನಡದಲ್ಲಿಯೂ ಕೆಲವು ವಿಶೇಷಗಳಿವೆ :

ಕಾಲುವೆ-ಕಾಪ್ಲು ಆಗಿ ಹೊಸ್ತಿಲು-ಪೊಲ್ಲು ಆದರೆ ಇದೇನು ಹೊಲಸು ಎನ್ನಬೇಡಿ. ಇಲ್ಲಿನ ವಿದ್ವಾಂಸರಲ್ಲೂ ಕೃತಜ್ಞ-'ಕೃತಗ್ನ'ನಾಗಿ ಜ್ಞಾನವು 'ಗ್ನಾನ'ವಾಗುತ್ತದೆ. ದಿನವೇ 'ಜಿನ'ನಾಗಿ ವಿದ್ವಾಂಸನು ಪಾಪ ಇದ್ದು ಮಾಂಸನಾಗಿ ಮಾಂಸಪಿರುವವನಾಗುತ್ತಾನೆ. ವೃದ್ಧಾಪ್ಯ-ರುತಾಪ್ತ, ಕಾಲಹರಣ-ಕಾಲಹರಣೆ, ಬಾನು ಬಾಣವಾಗಿ ಲಾವಣ್ಯವು ರಾವಣ್ಯವಾದರೆ ಹೆದರಬೇಕಾಗಿಲ್ಲ, ಇದೇನು ಅಚ್ಚರಿಯೆಂದು ಬಾಯಿಬಿಡಬೇಕು. ಹೆಣ್ಣುಮಕ್ಕಳು-ಯೆಮ್ಕ, ಹುಡುಗ, ಹುಡುಗಿ-ಉರ್ಗ, ಉರ್ಗಿ ಆಗುತ್ತಾರೆ.

ದಕ್ಷಿಣ ಕನ್ನಡ, ಕಾಸರಗೋಡುಗಳಲ್ಲಿ ನಾನಾ ಭಾಷೆಯವರು ಇರುವುದರಿಂದ ವ್ಯವಹಾರಕ್ಕೆ, ಪ್ರಮಾಣ ಕನ್ನಡ ಅಥವಾ ಗ್ರಾಂಥಿಕ ಕನ್ನಡವನ್ನೇ ಬಳಸುತ್ತಾರೆ. ಆದುದರಿಂದ ಇತರ ಕಡೆಗಳ ಕನ್ನಡಗಳಂತೆ ಇಲ್ಲಿನ ಕನ್ನಡದ ಮೇಲಿನ ಮಾರ್ಪಾಡು ಅಲ್ಪ ಮಾತ್ರ. ಆಡಳಿತಕ್ಕೆ ಸಂಬಂಧಿಸಿದ ಹಿಂದಿ, ಉರ್ದು, ಇಂಗ್ಲೀಷ್, ಶಬ್ದಗಳು ವ್ಯವಹಾರದಲ್ಲೂ ಇವೆ. ದಸ್ತಾವೇಜು, ದಸ್ಕತ್ತು (ದಸ್ತಖತ್) ಸಹಿ, ತಾಲೂಕು, ಜಿಲ್ಲೆ ಓಶೆ (ಓಸ್ಲಾ-ಹಿಂದಿ) ಇತ್ಯಾದಿ. ಇಲ್ಲಿನ ವ್ಯವಹಾರದ ಕನ್ನಡದಲ್ಲಿ ಮಾರ್ಪಾಡು ಕಡಿಮೆಯಾದರೂ ಮನೆಮಾತಾಗಿ ಕನ್ನಡವನ್ನಾಡುವ ಕೋಟೆ, ಕೋಟ, ಹವ್ಯಕ, ಶಿವಳ್ಳಿ, ಗೌಡ, ಮಾದಿಗ ಮೊದಲಾದ ವರ್ಗಗಳು ತಮ್ಮ ತಮ್ಮದೇ ವೈಶಿಷ್ಟ್ಯವನ್ನು ಪಡೆದಿವೆ.

ಕರ್ನಾಟಕದ ಇತರ ಜಿಲ್ಲೆಗಳಲ್ಲೂ ಹೊರಪ್ರಾಂತಗಳಲ್ಲೂ, ಇನ್ನೆಷ್ಟೋ ವೈವಿಧ್ಯಗಳಿವೆ. ಇಲ್ಲಿ ಕೆಲವನ್ನು ಮಾತ್ರ ಉದಾಹರಿಸಲಾಗಿದೆ. ಕನ್ನಡವೊಂದೇ ಭಾಷೆಯ ಈ ವೈವಿಧ್ಯದ ವಿಶ್ವರೂಪವನ್ನು ನೋಡಿದರೆ ಯಾರಿಗೂ ಅಚ್ಚರಿಯಾಗದಿರದು. ಭಾಷೆಯ ವೈಚಿತ್ರ್ಯ ಅದ್ಭುತ ಶಕ್ತಿಗಳು ನಮ್ಮನ್ನು ಬೆರಗಾಗಿಸುತ್ತವೆ. 'ವಾಸುಗಿಯುಮರಿಯಲಾರದೆ ಬೇಸರುಗುಂ ದೇಸಿ ಬೇರವೇರಪ್ಪುದರಿಂ' ಎಂಬ ಮಾತನ್ನು ನಾವೂ ಅನುಮೋದಿಸುತ್ತೇವೆ. ಎಷ್ಟು ದೊಡ್ಡ ಕನ್ನಡ ವಿದ್ವಾಂಸನಿಗೂ ಕನ್ನಡದ ಎಲ್ಲಾ ಪ್ರಭೇದಗಳೂ ಅರ್ಥವಾಗವು!

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ದಕ್ಷಿಣ ಕನ್ನಡದ ಉಪಭಾಷೆಗಳು

☐ ಪ್ರೊ. ಎ. ವಿ. ನಾವಡ



ಕಡಲ ಕರಾವಳಿಯ ಜಿಲ್ಲೆಗಳು (ದ. ಕನ್ನಡ, ಉಡುಪಿ ಜಿಲ್ಲೆ) ಕ್ರಿಸ್ತಶಕ 1ನೆಯ ಶತಮಾನದಿಂದಲೂ ವಿದೇಶಿ ಪ್ರವಾಸಿಗರನ್ನು, ರಾಜ ಮಹಾರಾಜರನ್ನು, ಮತ ಪ್ರವರ್ತಕರನ್ನು, ಕುಶಲಕರ್ಮಿಗಳನ್ನು, ವ್ಯಾಪಾರಿಗಳನ್ನು ಆಕರ್ಷಿಸಿದ ನೆಲ. ಪರಿಣಾಮವಾಗಿ ಕನ್ನಡ, ತುಳು, ಮಲಯಾಳಂ, ತಮಿಳು, ಕೊಂಕಣಿ, ಮರಾಠಿ, ಉರ್ದು, ಗುಜರಾಥಿ ಭಾಷೆಗಳು ಇಲ್ಲಿ ಚಲಾವಣೆಗೆ ಬಂದುವು. ಪಡುವಲಲ್ಲಿ ಕಡಲು, ಮೂಡಲಲ್ಲಿ ಸಹ್ಯಾದ್ರಿ, ನಡುವೆ ನೂರಾರು ನದಿಗಳಿಂದಾಗಿ ಸಂಪರ್ಕಕ್ಕೆ ಅಡೆ ತಡೆ ಬಂದು, ನೈಸರ್ಗಿಕವಾಗಿ ಭಾಷೆ- ಉಪಭಾಷೆಗಳ ಅಂತ- ಸ್ಫೋಟಕ್ಕೆ ಅನುವು ಮಾಡಿಕೊಟ್ಟಿತು. ಜೊತೆಗೆ ವ್ಯಾಪಾರ ವಹಿವಾಟಿಗಾಗಿ, ಮತಾಂತರದ ಭೀತಿಯಿಂದ ರಕ್ಷಣೆ ಪಡೆವ ಸಲುವಾಗಿ, ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುವ ಸಲುವಾಗಿ ಪರರಾಜ್ಯಗಳಿಂದ ವಲಸೆ ಬಂದವರಿಂದಲೂ ಇಲ್ಲಿ ಹತ್ತು ಹಲವು ಉಪಭಾಷೆಗಳು ನಿರ್ಮಾಣಗೊಂಡವು.

ದಕ್ಷಿಣ ಕನ್ನಡದ ಶಾಲಾ-ಕಾಲೇಜುಗಳಲ್ಲಿ, ಕೋರ್ಟು ಕಚೇರಿಗಳಲ್ಲಿ ಬಳಕೆಯಾಗುವ ಕನ್ನಡವಲ್ಲದೆ ಕೋಟ-ಕುಂದಾಪುರ ಪರಿಸರದ ಕನ್ನಡ, ಸುಳ್ಯ ಪರಿಸರದ ಅರೆಗನ್ನಡ ಅಥವಾ ಗೌಡಕನ್ನಡ, ಹವ್ಯಕ ಕನ್ನಡ, ಮಂಗಳೂರು ಪರಿಸರದ ಕೋಟದವರ ಕನ್ನಡ, ಕಾಸರಗೋಡಿನ ಕೋಟೆ/ರಾಮರಾಜ

ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಭಾಗ, ಕನ್ನಡ ವಿ.ವಿ., ಹಂಪಿ, ವಿದ್ಯಾರಣ್ಯ, ಬಳ್ಳಾರಿ–583 276

ಕ್ಷತ್ರಿಯರ ಆಡುಮಾತು, ಭೈರರ ಕನ್ನಡ ಮುಂತಾದ ಒಳಭೇದಗಳನ್ನು ಗುರುತಿಸಬಹುದು. ತುಳುಭಾಷೆಯಲ್ಲಿ ಬ್ರಾಹ್ಮಣರ ತುಳು, ಬ್ರಾಹ್ಮಣೇತರರ ತುಳು ಎಂದು ಭೌಗೋಳಿಕವಾಗಿ ಇಬ್ಬಗೆಯನ್ನು ಗುರುತಿಸಲಾಗುತ್ತದೆ. ಪ್ರಾದೇಶಿಕವಾಗಿ ತುಳುವಿಗೆ ಮೂರು ಮುಖ್ಯ ಪ್ರಭೇದಗಳನ್ನು ಗುರುತಿಸಲಾಗುತ್ತಿದೆ. ಮಂಗಳೂರು ತುಳು, ಪುತ್ತೂರು ತುಳು, ಇನ್ನೊಂದು ಕಾಸರಗೋಡು ತುಳು.

ಮರಾಠಿಯ ಉಪಭಾಷೆಯನ್ನಾಡುವ ಕರ್ಹಾಡರು (ಕಾಸರಗೋಡು) ಚಿತ್ಪಾವನರು (ಕಾರ್ಕಳ, ಉಪ್ಪಿನಂಗಡಿ), ಕುಡುಬಿಯರು ಮತ್ತು ಮರಾಠಿಗಳು ಈ ಭೂಭಾಗದಲ್ಲಿದ್ದಾರೆ.

ಕೊಂಕಣಿ ವ್ಯಾಪಕವಾಗಿ ಈ ಜಿಲ್ಲೆಯಲ್ಲಿ ಬಳಕೆಗೊಳ್ಳುವ ಭಾಷೆ. ಗೌಡಸಾರಸ್ವತರು, ಸಾರಸ್ವತರು, ರೋಮನ್ ಕೆಥೋಲಿಕರು, ಕೊಂಕಣಿ ಖಾರ್ವಿ ಮೀನುಗಾರರು ಕೊಂಕಣಿಯ ವಿವಿಧ ಪ್ರಭೇದಗಳನ್ನು ಆಡುತ್ತಾರೆ. ಒಂದು ಕಾಲದಲ್ಲಿ ತುಳುವಿನ ಉಪಭಾಷೆಯೆಂದು ಪರಿಗಣಿತವಾಗಿದ್ದು ಇಂದು ಉತ್ತರ ದ್ರಾವಿಡಭಾಷೆ ವರ್ಗಕ್ಕೆ ವಿದ್ವಾಂಸರು ಸೇರಿಸಿರುವ ಕೊರಗ, ಇನ್ನೂ ಅಧ್ಯಯನ ಆಗಬೇಕಾದ ಬೆಳಾರಿ, ಕುಮಾರ್ನ, ತಮಿಳಿನ ಉಪಭಾಷೆಯಂತಿರುವ ಪದ್ಮಸಾಲಿ, ಕಾಸರಗೋಡಿನಿಂದ ಉಳ್ಳಾಲದ ತನಕ ವ್ಯಾಪಿಸಿರುವ ಬೋವಿ ಮೀನುಗಾರರ ಮಲೆಯಾಳಂ, ಮಾಪಿಳ್ಳಾ ಮಲೆಯಾಳಂ, ತುರುಕರ ಹಿಂದುಸ್ತಾನಿ, ನಗರಪ್ರದೇಶಗಳಲ್ಲಿನ ಗುಜರಾತಿಗಳ ಆಡುಮಾತು- ಹೀಗೆ ಕರಾವಳಿ ಹಲವು ಭಾಷೆ ಉಪಭಾಷೆಗಳ ಆಡುಂಬೊಲ.

ಕರಾವಳಿ ಕನ್ನಡ

ಮಂಗಳೂರು ಪರಿಸರದಲ್ಲಿ ಬಳಕೆಯಲ್ಲಿರುವ ಮಾತಿನ ರೂಪಕ್ಕೂ ಬರಹದ ಕನ್ನಡಕ್ಕೂ ವಿಶೇಷ ವ್ಯತ್ಯಾಸವಿಲ್ಲ- ಎಂಬುದಾಗಿ ದ್ರಾವಿಡ, ಭಾಷಾವಿದರು ತಪ್ಪಾಗಿ ಭಾವಿಸಿದರು. ದ. ಕನ್ನಡದಲ್ಲಿ ಬಳಕೆಯಲ್ಲಿರುವ ವಿಶಿಷ್ಟ ಪದಕೋಶಗಳು-ಸ್ವರ, ತೋರ ಆಧಾರದ ಮೇಲೆ ಮಂಗಳೂರು ಕನ್ನಡ ಪ್ರಭೇದವನ್ನು ಗುರುತಿಸುತ್ತಾ ಬಂದರು. ಕನ್ನಡದ ಹಲವಾರು ಪ್ರಭೇದಗಳಿಂದ ಭಿನ್ನವಾದ ಇಲ್ಲಿನ ಕರಾವಳಿಯ ಕನ್ನಡದ ಅಭ್ಯಾಸದಲ್ಲಿ ವಿದ್ವಾಂಸರು ವಿಶೇಷ ಆಸಕ್ತಿ ವಹಿಸದೆ ಹೋದರು. ಇದೀಗ ಸುಮಾರು ಒಂದೂಕಾಲು ಸಾವಿರ ವರ್ಷಗಳಿಂದ ಸ್ವತಂತ್ರವಾಗಿ ಬೆಳವಣಿಗೆಯನ್ನು ಹೊಂದಿದ ಕರಾವಳಿ ಕನ್ನಡದ ಇತಿಹಾಸವನ್ನು ಪುನಾರಚಿಸಲು ವಿದ್ವಾಂಸರು ತೊಡಗಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿರುವ ಕರಾವಳಿ ಕನ್ನಡದಲ್ಲಿ ಮುಖ್ಯವಾಗಿ ಎರಡು ರೂಪಗಳನ್ನು ಗುರುತಿಸಬಹುದು. ಮೊದಲನೆಯ ರೂಪ, ಈ ಜಿಲ್ಲೆಯ ಸುಮಾರು 10 ಲಕ್ಷ ಜನರ ತಾಯಿನುಡಿಯಾಗಿರುವ ಕನ್ನಡ. ಈ ಕನ್ನಡವು ಹವ್ಯಕ, ಗೌಡ, ಕೋಟ, ಕೋಟೆ ಮುಂತಾದ ಸಾಮಾಜಿಕ ಉಪಭಾಷೆಯನ್ನು ಹೊಂದಿರುತ್ತದೆ. ಪ್ರತಿಯೊಂದು ಸಾಮಾಜಿಕ ಪ್ರಭೇದವೂ ಪ್ರಾದೇಶಿಕವಾಗಿ ಭಿನ್ನ ಭಿನ್ನ ರೂಪವನ್ನು ಪಡೆದಿವೆ. (ಮಂಗಳೂರು ಹವ್ಯಕ, ಪುತ್ತೂರು ಹವ್ಯಕ, ಕಾಸರಗೋಡು ಹವ್ಯಕ ಇತ್ಯಾದಿ). ಈ ಕರಾವಳಿ ಕನ್ನಡದ ವಿಶಿಷ್ಟ ಪ್ರಭೇದಗಳು ಇತರೆಡೆಯ ಕನ್ನಡಕ್ಕಿಂತ ಧ್ವನ್ಯಾತ್ಮಕವಾಗಿ, ವ್ಯಾಕರಣದ ದೃಷ್ಟಿಯಿಂದ ಬೇರೆಯಾಗಿ ಗೋಚರಿಸುತ್ತವೆ.

ಎರಡನೆಯದು ಬರಹದ ರೂಪಕ್ಕೆ ಸಮಾನವಾಗಿರುವ ಮಾತಿನ ರೂಪ. ಮನೆಯೊಳಗೆ ಮೊದಲು ಹೇಳಿದ ಹವ್ಯಕ, ಕೋಟ, ಕುಂದಾಪುರ ಕನ್ನಡ, ಗೌಡಕನ್ನಡ, ಬೋವಿ ಮಲೆಯಾಳಂ ಮುಂತಾದ ಭಾಷೆಗಳನ್ನಾಡುತ್ತಾ ಹೊರವ್ಯವಹಾರಗಳಲ್ಲಿ, ಶಾಲೆ-ಕಾಲೇಜುಗಳಲ್ಲಿ, ಬೋಧನದಲ್ಲಿ ಬಳಸುವ ಕಲಿತು ಬಂದ ಕನ್ನಡ- ಜೀವಂತಿಕೆಯ ಯಾವ ಲಕ್ಷಣವನ್ನೂ ತೋರದ ಈ ಗ್ರಾಂಥಿಕ ಕನ್ನಡವನ್ನೇ ಶುದ್ಧಗನ್ನಡವೆಂದು ನಮ್ಮಲ್ಲನೇಕರು ಹೆಮ್ಮೆಪಟ್ಟುಕೊಳ್ಳುತ್ತಿರುವುದು. ಬಹು ಕರ್ನಾಟಕದ ಪ್ರಮಾಣ

ಭಾಷೆಯನ್ನು ಹೋಲುವ ಇದನ್ನು ಪ್ರಾದೇಶಿಕ ವಿಶಿಷ್ಟ ಭಾಷೆಯೆಂದು ಪರಿಗಣಿಸಲು ಸಾಧ್ಯವಿಲ್ಲ. ಹೀಗಾಗಿ ಮೊದಲ ವರ್ಗದ ಭಾಷೆಯನ್ನೇ ಅಥವಾ ಭಾಷಾ ಸಮುದಾಯವನ್ನೇ ಕರಾವಳಿ ಕನ್ನಡ ಎನ್ನಬೇಕಾಗಿದೆ.

1. ಕರಾವಳಿಯ ಕನ್ನಡ ಐತಿಹಾಸಿಕವಾಗಿ ಕನ್ನಡದ ಅನೇಕ ವೈಲಕ್ಷಣ್ಯಗಳನ್ನು ಉಳಿಸಿಕೊಂಡಿದೆ. ಕರಾವಳಿಯೇತರ ಕನ್ನಡಗಳಲ್ಲಿ ಹಾಗೂ ಕನ್ನಡ ಶಾಸನಗಳಲ್ಲಿ ಸುಮಾರು ಒಂದೂಕಾಲು ಸಾವಿರ ವರ್ಷಗಳ ಹಿಂದೆ ನಡೆದಿರಬಹುದಾದ ಮಧ್ಯಸ್ವರ(ಎಏಒಓ)ಗಳು ಉಚ್ಚಸ್ವರಗಳಾಗಿ (ಇ ಈ ಉ ಊ) ಹೊಂದುವ ಮಾರ್ಪಾಟು ಕರಾವಳಿಯ ಕನ್ನಡದಲ್ಲಿ ನಡೆದಿಲ್ಲ. ಪದಗಳ ಮೊದಲಲ್ಲಿ 'ಎ' ಇಲ್ಲವೆ 'ಒ'ಕಾರ ಬಂದಿದ್ದ ಪದವಲ್ಲಿ ಒಂದು ವ್ಯಂಜನ ಮತ್ತು ಅದರೊಂದಿಗೆ ಇಕಾರ ಉಕಾರಗಳು ಬಂದಾಗ ಮೊದಲ ಅಕ್ಷರದ ಎಕಾರ ಇಕಾರವಾಗುತ್ತದೆ. ಈ ಬದಲಾವಣೆ ಎಂಟನೆಯ ಶತಮಾನದಿಂದೀಚೆಗೆ ಶಾಸನಗಳಲ್ಲಿ ನಡೆದಿದೆ. ಬದಲಾವಣೆಗೆ ಒಳಗಾಗದೆ ಇರುವ ಮೂಲಕ ಕರಾವಳಿ ಕನ್ನಡ ತನ್ನ ಹಳೆಯತನವನ್ನು ಉಳಿಸಿಕೊಂಡಿದೆ. ಉದಾಹರಣೆಗೆ

ಶಿಷ್ಟಗನ್ನಡ	ಹವ್ಯಕ	ಕೋಟ
ಕಿವಿ	ಕೆಮಿ	ಕೆಮಿ
ಇದಿರು	ಎದ್‌ರ್	ಎದ್‌ರ್
ಬಿದಿರು	ಬೆದ್ರ್	ಬೆದ್ರ್
ಇಲಿ	ಎಲಿ	ಎಲಿ
ಬಿಳಿ	ಬೆಳಿ	ಬೆಳಿ

2. ಆಧುನಿಕ ಕರಾವಳಿಯೇತರ ಕನ್ನಡಗಳು ಭೂತ, ವರ್ತಮಾನ ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಹಾಗೂ ನಿಷೇಧಾರ್ಥಕ ಪ್ರತ್ಯಯಗಳಲ್ಲಿ ಭೂತಪ್ರತ್ಯಯ ರೂಪವನ್ನು ಮಾತ್ರ ಉಳಿಸಿಕೊಂಡಿದ್ದರೆ ಕರಾವಳಿ ಕನ್ನಡ ಪ್ರಭೇದಗಳು ಭವಿಷ್ಯತ್, ಭೂತ ಹಾಗೂ ನಿಷೇಧಾರ್ಥ ಪ್ರತ್ಯಯಗಳನ್ನು ಉಳಿಸಿಕೊಂಡಿದೆ.

	ಭವಿಷ್ಯತ್	ಭೂತ	ವರ್ತಮಾನ	ನಿಷೇಧ
ಹವ್ಯಕ	ಕುಡಿವೆ	ಕುಡುದೆ	ಕುಡಿತ್ತೆ	ಕುಡಿಯೆ
ಕೋಟ	ಕುಡಿವೆ	ಕುಡ್ದೆ	ಕುಡೀತೆ	ಕುಡಿಯೆ
ಹಳಗನ್ನಡ	ಕುಡಿವೆಂ	ಕುಡಿದೆನ್	ಕುಡಿದಪೆಂ	ಕುಡಿಯೆಂ

3. ಕರಾವಳಿಯ ಕನ್ನಡ ಪ್ರಭೇದಗಳಲ್ಲಿ ಒಂದಾದ ಹವ್ಯಕದಲ್ಲಿ ಪ್ರಥಮ ಪುರುಷ ಬಹುವಚನದಲ್ಲಿ ಒಂದೇ ರೂಪವಿದೆ. 'ಹೋಗವು'- ಅವರು ಅಥವಾ ಅವು ಹೋಗಲಿಕ್ಕಿಲ್ಲ ಎಂದರ್ಥ. ಕನ್ನಡದ ಇತರ ಪ್ರಭೇದಗಳಲ್ಲಿ ಲಿಂಗವಿವಕ್ಷೆಯ ಸಂದರ್ಭದಲ್ಲಿ ಮನುಷ್ಯ-ಮನುಷ್ಯೇತರ ಎಂಬ ಭೇದ ಕಲ್ಪಿಸಿದರೆ ಹವ್ಯಕದಲ್ಲಿ ಹವ್ಯಕ ಹಾಗೂ ಹವ್ಯಕೇತರ ಎಂಬ ಭೇದ ಕಲ್ಪಿತವಾಗಿದೆ.

4. ಹವ್ಯಕದಲ್ಲಿ(ಕೋಟ ಹಾಗೂ ಗೌಡ ಕನ್ನಡಗಳಲ್ಲಿಲ್ಲ) ಇತರ ಕನ್ನಡ ಪ್ರಭೇದಗಳಲ್ಲಿ ಇಲ್ಲದ ಉತ್ತಮ ಪುರುಷ ಬಹುವಚನದಲ್ಲಿ ಸಮಾವಿಷ್ಟ (ಇನ್‌ಕ್ಲೂಸಿವ್) ಹಾಗೂ ಅಸಮಾವಿಷ್ಟ (ಎಕ್ಸ್‌ಕ್ಲೂಸಿವ್) ಎಂಬೆರಡು ಸರ್ವನಾಮಗಳು ಬಳಕೆಯಲ್ಲಿವೆ.

ಉದಾ : ಎಂಗೊ (ಸಮಾ[illegible]) ನಾವು (ಅಸಮಾವಿಷ್ಟ). ಕನ್ನಡದ ವರ್ತಮಾನದ ಯಾವ ಪ್ರಭೇದದಲ್ಲೂ ಈ [illegible] ಹತ್ತನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ಈ ರೂಪಭೇದ ಮುಂದೆ ಕನ್ನಡದಿಂದ ಜಾರಿ[illegible] ಅದಕ್ಕಾಗಿಯೇ ಕೇಶಿರಾಜ ಈ ಪ್ರಭೇದದ ಬಗ್ಗೆ ಮೌನವಹಿಸಿದ್ದಾನೆ.

5. ಹವ್ಯಕದ[illegible] ಪುರುಷ ಸರ್ವನಾಮದಲ್ಲಿ ಲಿಂಗವಿವಕ್ಷೆ ಇದ್ದಂತಿಲ್ಲ. ಹಿರಿಯರನ್ನು ಕುರಿತು

ಹೇಳುವಾಗ ಮಾತ್ರ 'ಅವು' ಎನ್ನಲಾಗುತ್ತಿದೆ.

6. ಉಡುಪಿ ಸಮೀಪದ ಕಲ್ಯಾಣಪುರ ಹೊಳೆಯ ಉತ್ತರದ ಜನ ಆಡುವ ಕೋಟಗನ್ನಡದೊಳಗೆ ಸಾಮಾಜಿಕವಾಗಿ ಅನೇಕ ಒಳಭೇದಗಳನ್ನು ಗುರುತಿಸಬಹುದು. ಮುಖ್ಯವಾಗಿ ಕರಾವಳಿ ಕೋಟಗನ್ನಡ ಹಾಗೂ ಮೂಡಲಿನ ಕೋಟಗನ್ನಡ.

ಈ ಉಪಭಾಷೆಯಲ್ಲಿ ಮಹಾಪ್ರಾಣಗಳಿಲ್ಲ.

ಗೌಡಕನ್ನಡದ ವೈಲಕ್ಷಣಗಳನ್ನು ಡಾ. ಕುಶಾಲಪ್ಪ ಗೌಡರು ಒಂದೆಡೆ ಹೀಗೆ ಹೇಳಿದ್ದಾರೆ- "ಗೌಡ ಕನ್ನಡದಲ್ಲಿ ಹವ್ಯಕದಂತೆ ಹಳಗನ್ನಡ ಸ್ವರೂಪದ ಪಳೆಯುಳಿಕೆಗಳನ್ನು ಕಾಣಬಹುದು. ಇದರಲ್ಲಿ ಹೆಚ್ಚಿನ ಸ್ವರಗಳಿವೆ. ವ್ಯಂಜನದಲ್ಲಿ ಮಹಾಪ್ರಾಣಗಳಿಲ್ಲ. ಜ ಮತ್ತು ಞ ಳಿಗೆ ದ್ವಿತ್ವರೂಪವನ್ನು ಕಾಣುತ್ತೇವೆ. ಸರ್ವನಾಮಗಳಲ್ಲಿ ನಾ, ನಾವು, ನೀ, ನೀವು, ಅಂವ, ಇಂವ, ಅದ್ ಇದ್ ಎಂದು ಪ್ರಥಮ ಪುರುಷದಲ್ಲಿ ಪುಲ್ಲಿಂಗ ಮತ್ತು ನಪುಂಸಕಗಳೆಂದು ಎರಡೇ ರೂಪಗಳು ಕಂಡುಬರುತ್ತವೆ. ಆದರೆ ಪೂರ್ಣ ಕ್ರಿಯಾರೂಪದಲ್ಲಿ ಲಿಂಗವಿವಕ್ಷೆಯಿಲ್ಲ. ಉದಾ: ಅಂವ ಬಾತ್ - ಅದ್ ಬಾತ್;- ಅವನು ಬಂದಿತು, (ಅವಳು) ಅದು ಬಂದಿತು; ಬಹುವಚನದಲ್ಲಿ ಮಹತ್ ಮತ್ತು ಮಹತ್ ಎಂಬ ಭೇದವೂ ಇಲ್ಲ. ಎರಡಕ್ಕೂ ಒಂದೇ ರೂಪವಿದೆ. ಅವು ಬಂದೊ-ಅವರು ಬಂದುವು, ಅವುಗಳು ಬಂದುವು ಎಂಬಂತೆ. ವಿಭಕ್ತಿ ಪ್ರತ್ಯಯಗಳಲ್ಲೂ ದ್ವಿತೀಯಾ ಮತ್ತು ಷಷ್ಠಿಗಳಿಗೆ ಸಮಾನ ರೂಪಗಳು ಇವೆ. ಸಪ್ತಮಿಯ ಪ್ರತ್ಯಯ ಸರ್ವನಾಮಗಳಲ್ಲಿ ಹಾಗೂ ಪ್ರಾಣಿವರ್ಗಗಳನ್ನು ನಿರ್ದೇಶಿಸುವ ನಾಮಪದಗಳಲ್ಲಿ ಬರುವುದಿಲ್ಲ. ಹಕ್ಕಲೆ, ಹತ್ತಿರ ಎಂಬ ಉಪಸರ್ಗರೂಪ ಅಲ್ಲಿ ಪ್ರಯೋಗವಾಗುತ್ತದೆ."

ಕಲ್ಯಾಣಪುರ ಹೊಳೆಯ ಉತ್ತರಕ್ಕೆ ಉಡುಪಿ ತಾಲೂಕಿನ ಕೆಲಭಾಗ ಹಾಗೂ ಕುಂದಾಪುರ ತಾಲೂಕಿನಾದ್ಯಂತ ಬಳಕೆಯಲ್ಲಿರುವ ವಿಶಿಷ್ಟ ಆಡು ನುಡಿಯನ್ನು ಕುಂದಾಪುರ ಕನ್ನಡ ಅಥವಾ ಕೋಟಗನ್ನಡ ಎಂದು ಕರೆಯಲಾಗುತ್ತದೆ.

ಈ ಆಡುನುಡಿಯಲ್ಲಿ ಪರಿಸರದ ಪ್ರಮಾಣ ಕನ್ನಡದಲ್ಲಿರದ ವಿಶಿಷ್ಟಸ್ವರ ಅ಼, ಇ಼, ಈ಼, ಎ಼, ಏ಼, ಒ಼, ಓ಼ಗಳು ಚಾಲ್ತಿಯಲ್ಲಿವೆ. ಮೇಲಿನ ಅರ್ಧಸ್ವರಗಳು ದ್ರಾವಿಡ ಭಾಷೆಗಳ ಮೂಲಸ್ವರೂಪವನ್ನು ಹೇಳುತ್ತವೆ. ತುಳುವಿನಲ್ಲೂ ಈ ಅರ್ಧಸ್ವರಗಳು ಬಳಕೆಯಲ್ಲಿರುವುದನ್ನು ಗಮನಿಸಬೇಕು. ಆದರೆ ಗ್ರಾಂಥಿಕ ಅಥವಾ ಪ್ರಮಾಣ ಭಾಷೆ ಇಂತಹ ಅರ್ಧಸ್ವರವನ್ನು ಕಳೆದುಕೊಂಡಿದೆ.

ಅನುನಾಸಿಕಗಳಾದ ಙ, ಞ, ಣ, ನ, ಮ ಗಳ ಜತೆಗೆ ಸಕಾರವೂ ಸೇರಿಕೊಂಡಿದೆ. ಉದಾ : ಸೇಮಿಂಗಿ, ಅಪೆಸ್ಕೆ, ಹೀ ಹಳಗನ್ನಡದ ಅನೇಕ ಅನುಸ್ವಾರ ಸಹಿತ ಪದಗಳು ಆಧುನಿಕ ಪ್ರಮಾಣ ಕನ್ನಡದಲ್ಲಿ ಅನುಸ್ವಾರರಹಿತವಾದರೂ ಕೋಟಗನ್ನಡದಲ್ಲಿ ಇನ್ನೂ ಆ ಗುಣವನ್ನು ಉಳಿಸಿಕೊಂಡಿದೆ.

ಉದಾ : ದಾಂಟು, ಊಂತ, ಹುಂತ, ಹಂಬು (ಹಬ್ಬು), ಸೌಂತೆ(ತಿ), ಆಂಟ, ಬೀಂಜ, ಹಾಂಗೆ, ಹೀಂಗೆ ಇತ್ಯಾದಿ.

ಉಚ್ಚಾರದಲ್ಲಿ ಸಂಕ್ಷೇಪೀಕರಣಗೊಳ್ಳುವುದು ಈ ಆಡುಮಾತಿನ ಒಂದು ವೈಲಕ್ಷಣ್ಯ :

ಉದಾ. ತೊಟ್ಟಿಲು-ತೊಟ್ಲು ತೋರಣ-ತೋರ್ಣ
ಸಿಡಿಲು-ಸೆಟ್ಲು ಬಿದಿರು-ಬೆದ್ರ್
ನೇಗಿಲು-ನೇಲು ಕಪಿಲೆ-ಕೈಲಿ

ಮದುವೆ-ಮದಿ ಗೆಲವು-ಗೆಲ

ಪರಿಸರದ ಪ್ರಮಾಣ ಕನ್ನಡದಲ್ಲಿ ಕಾಣಿಸದ ಅಸಂಖ್ಯಾತ ಆಡುಮಾತಿನ ವಿಶಿಷ್ಟ ಪದಕೋಶ ಕಾಣಸಿಗುತ್ತದೆ.

ಬಯ್ಚು-ಪರಚು ಬರ್‌ಗು-ಬಾಚಿ ಒಟ್ಟುಹಾಕು
ಲಿಂಡ್-ಹೊಂಚುಹಾಕು ಬೆಚ್ಚ್-ಇಡು
ಕಮ್ಸ್-ಗುದ್ದು ನಿವಾಳ್-ಹೊರಗೆ ಹಾಕು
ಗಿಂಡ್-ತುರಿಸು ಮೀವರಿ-ಬಚ್ಚಲು ಮನೆ

ಕೋಟಗನ್ನಡದ ಮಾದರಿ

ಅಲ್ಯಾಕೆ ನಿತ್ತಿರಿ? ಮೇಲ್ ಬಪ್ರ್ಯಲೆ! ಕೂಕಣಿ. ಅಲ್ದೆ ಈ ಕನ್ನಿ ತಿಂಗ್ಳು ಇಪ್ಪತ್ತು ಹೋಪ್ಪೊತ್ತಿಗು ಎಲಿ ಹಂದು ಗಾಳಿ ಇಲ್ದಿರೂ ಏನ್ ಮಳಿ ಹೊಡ್ತ ಮಾರಾಯ್ರೆ! ತೆಂಕಿನ್ ಗಾಳಿ ಬೀಸ್ಕರಿಲ್ಲೆ. ಗುಡ್ಸು, ಸೆಡ್ಲು, ಮಿಂಚು, ಅಲ್ಲ, ಅದೆಲ್ಲ ಎಲ್ಲಿಂದ ಬತ್‌ತ್ತೊ ಮಾರಾಯ್ರೆ! ತಕಣಿ, ಮಾರ್ಣೆ ದಿವ್ಸ ನೆರಿ. ಬತ್ತ್‌ಕ್ ಹೆಂಗೂ ರೇಟಿಲ್ಲೆ. ಎಲ್ಲಾರೂ ಎಯ್ಡು ಕಾಳು ಬತ್ತ ಅದ್ದಿದ್ರೂ ಮನಿ ತಪ್ಪುಕ್ ಬಿಡೂದಿಲ್ವೆ. ನಂಗೇನೂ ರಾಶಿಗೆದ್ದಿ ಇಲ್ಲೆ. ಇದ್ದ ಐದ್ಮುಡಿಯಾಗೂ ಮೂರ‍್ಮುಡಿ ಒಬ್ರ ಎದಿಮೇಲೆ ಹಾಯ್ಕೊಹೋಯ್ತು. ಅಲ್ಲಿ ಯಾಕೆ ನಿಂತಿದ್ದೀರಿ? ಮೇಲೆ ಬನ್ನಿಯಲ್ಲ! ಕುಳಿತುಕೊಳ್ಳಿ. ಅಲ್ರಿ, ಈ ಕನ್ಯಾ ತಿಂಗಳಲ್ಲಿ ಇಪ್ಪತ್ತು ಹೋಗುವಾಗ ಎಲೆ ಅಲ್ಲಾಡುವ ಗಾಳಿ ಇಲ್ಲದಿದ್ದರೂ, ಏನು ಮಳೆಯ ಅಬ್ಬರ ಮಾರಾಯ್ರೆ. ದಕ್ಷಿಣದ ಗಾಳಿ ಬೀಸಲಿಕ್ಕಿಲ್ಲ ಗುಡುಗು, ಸಿಡಿಲು, ಮಿಂಚು. ಅಲ್ಲ ಅದೆಲ್ಲ ಎಲ್ಲಿಂದ ಬರುತ್ತದೊ ಮಾರಾಯ್ರೆ! ತೆಗೆದುಕೊಳ್ಳಿ. ಮರುದಿವಸ ನೆರೆ. ಬತ್ತಕ್ಕೆ ಹೇಗೂ ರೇಟಿಲ್ಲ. ಎಲ್ಲಿಯಾದರೂ ಎರಡು ಕಾಳು ಬತ್ತ ಆದದ್ದಿದ್ದರೂ ಮನೆಗೆ ತರಲು ಬಿಡುವುದಿಲ್ಲ. ನನಗೇನೂ ತುಂಬ ಗದ್ದೆಗಳಿಲ್ಲ. ಇದ್ದ ಐದು ಮುಡಿಯಲ್ಲಿಯೂ ಮೂರು ಮುಡಿಯನ್ನು ಒಬ್ಬ ಮೋಸ ಮಾಡಿ ತಿಂದು ಹೋದ.

ಕುಂದಾಪುರ ಪರಿಸರದ ಕೋಟ ಬ್ರಾಹ್ಮಣರ ಒಂದು ಗುಂಪು ಇತಿಹಾಸ ಕಾಲದಲ್ಲಿ ವಲಸೆ ಬಂದು ಜಿಲ್ಲೆಯ ತೆಂಕಣ ಸರಹದ್ದಿನಲ್ಲಿ (ಬಂಟವಾಳ, ಮಂಗಳೂರು, ಪುತ್ತೂರು, ಕಾಸರಗೋಡು ತಾಲೂಕು) ನೆಲಸಿದರು. ಅವರು ಬರುವಾಗ ತಂದ ಮಾತನ್ನು ಮನೆಯೊಳಗೆ ಮಾತ್ರ ಆಡುತ್ತ ಉಳಿಸಿಕೊಂಡು ಬಂದರು. ಆದರೆ ಸುತ್ತಲಿನ ತುಳು ಈ ಆಡುಮಾತಿನ ಮೇಲೆ ಪ್ರಭಾವಬೀರದೆ ಹೋಗಲಿಲ್ಲ. ಕುಂದಾಪುರದ 'ಕೋಟ'ದವರ ಆಡುಮಾತಿನಲ್ಲಿರದ ಮಂಗಳೂರಿನ 'ಕೋಟ'ದವರಲ್ಲಿ ಮಾತ್ರ ಇರುವ ಅಪಾರ ಸಂಖ್ಯೆಯ ತುಳು ಪದಗಳನ್ನು ಕಂಡರೆ ಪದಕೋಶದ ದೃಷ್ಟಿಯಿಂದ ತುಳು ಈ ಆಡು ನುಡಿಯ ಮೇಲೆ ದಟ್ಟವಾದ ಪ್ರಭಾವ ಬೀರಿದೆ ಎನ್ನಬೇಕಾಗುತ್ತದೆ. ಈ ಆಡುನುಡಿಯಲ್ಲಿ ಕೆಲವೊಂದು ಧ್ವನಿ ಪರಿವರ್ತನೆಯನ್ನು ತರುವಲ್ಲಿಯೂ ತುಳು ಶಕ್ತವಾಗಿದೆ. ಆದರೆ ಹೇಳಿಕೊಳ್ಳುವಷ್ಟರ ಮಟ್ಟಿಗೆ ವ್ಯಾಕರಣದ ಮೇಲೆ ಪ್ರಭಾವ ಬೀರಿಲ್ಲ. ಮಂಗಳೂರು ಪರಿಸರದ ಕೋಟ ದವರ ಆಡುಮಾತಿಗೂ ಕುಂದಾಪುರ ಪರಿಸರದ ಕೋಟದವರ ಆಡು ಮಾತಿಗೂ ವ್ಯತ್ಯಾಸ ಕಂಡುಬಂದರೆ ಅದಕ್ಕೆ ತುಳುವೇ ಬಲು ಮಟ್ಟಿಗೆ ಕಾರಣ.

ದಕ್ಷಿಣ ಕನ್ನಡದ ಗೌಡ, ಹವ್ಯಕ, ಕುಂದಾಪುರ ಕನ್ನಡಗಳಲ್ಲಿ ಕಾಣಿಸುವ ಅರ್ಧ ಉಕಾರ ಎಂದು ಪರಿಚಿತವಾಗಿರುವ ಉನ್ನತ ಮಧ್ಯ ವಿವೃತ ಸ್ವರವು ತುಳುವಿನಿಂದ ಬಂತು ಎನ್ನುವ ಅಭಿಪ್ರಾಯವಿದೆ. ದಕ್ಷಿಣ ಕನ್ನಡದ ಹೊರಗೆ ಇತರ ಭಾಷೆಗಳಲ್ಲಿ ಕಾಣಿಸದಿರುವ ಈ ಧ್ವನಿ ದಕ್ಷಿಣ ಕನ್ನಡದ ತುಳುವಿನ ಸುತ್ತಮುತ್ತಲ ಉಪಭಾಷೆಯಲ್ಲಿ ಮಾತ್ರ ಕಾಣಿಸುತ್ತಿರುವುದು ತುಳುವಿನ ಪ್ರಭಾವದಿಂದಲೇ ಎನ್ನಬಹುದು.

ಮಂಗಳೂರು ಪರಿಸರದ ಕೋಟದವರ ಮನೆಮಾತಿನ ಸುಂಗ್, ತಿಸ್ಕ್, ಅದ್ರ್(=ಅಲ್ಲಾಡು) ಮುಂತಾದ ಕ್ರಿಯಾಪದಗಳಲ್ಲೂ, ಗೂಯಿಲ್ (=ಬಾವಿ) ಅಗರ್ (=ಪಾಗಾರ) ಅಡ್‌ರ್ (=ಒಣಗೆಲ್ಲು) ಮುಂತಾದ ನಾಮಪದಗಳಲ್ಲೂ ಈ ವಿಶಿಷ್ಟ ಧ್ವನಿಮಾವನ್ನು ಗುರುತಿಸಬಹುದು.

ಅವನತ ಮಧ್ಯ ವಿವೃತ ಸ್ವರ ಒ' (ɔ) ಸಾಮಾನ್ಯ ತುಳುವಿನಲ್ಲಿ ಕಾಣಿಸದ ಧ್ವನಿಮಾ. ಕುಂದಾಪುರದ ಕೋಟದವರಲ್ಲಿ ಮಾತಿನಲ್ಲಿ ಕಾಣಿಸದೆ, ಮಧ್ಯ ಪಶ್ಚಸಂವೃತ ಒ(o)ದೊಂದಿಗೆ ಐಕ್ಯವಾಗಿರುವುದು ತುಳುವಿನ ಪ್ರಭಾವವಿರಬೇಕು.

ಕುಂದಾಪುರ ಕೋಟ	**ಮಂಗಳೂರು ಕೋಟ**
ಕೋಟ (kota)	ಕೋಟ (kota)
ಹೋಪ (hopa)	ಹೋಪ (hopa)

ಕುಂದಾಪುರದ ಕನ್ನಡದಲ್ಲಿ ಧಾರವಾಡದ ಕನ್ನಡದಂತೆ ಎಕಾರಾಂತ ಪದಗಳು ಇಕಾರಾಂತವಾಗುವುದು ಸಾಮಾನ್ಯ ಸಂಗತಿ.

ಉದಾ : ಮನೆ-ಮನಿ ಎದೆ-ಎದಿ ಬೇಳೆ-ಬ್ಯಾಳಿ

ಆದರೆ ಈ ಬದಲಾವಣೆ ಮಂಗಳೂರು ಕೋಟದವರಲ್ಲಿ ಕಾಣಿಸದಿರುವುದಕ್ಕೆ ಸುತ್ತಲಿನ ತುಳುವಿನಲ್ಲಿ ಈ ಪರಿವರ್ತನೆ ನಡೆಯದಿರುವುದು ಕಾರಣವಾಗಿರಬೇಕು.

ಕುಂದಾಪುರ ಆಡುಮಾತಿನಲ್ಲಿ ಇಲ್ಲದ, ಆದರೆ ಮಂಗಳೂರು ಕೋಟದವರಲ್ಲಿ ಕಾಣಿಸುವ ಙ ಮತ್ತು ಞಗಳು ತುಳುವಿನ ಪ್ರಭಾವದಿಂದಲೇ ಬಂದಿರಬೇಕು. ಈ ಎರಡು ವರ್ಣಗಳಿಗೆ ಇವರ ಆಡುನುಡಿಯಲ್ಲಿ ವರ್ಣಾತ್ಮಕ ಸ್ಥಾನ ನೀಡಬೇಕಾಗುತ್ತದೆ.

ಮಂಗಳೂರು ಕೋಟ	**ಕುಂದಾಪುರ ಕೋಟ**	**ಅರ್ಥ**
ಞೋಳಿ	ಲೋಳಿ	ಲೋಳೆ(ಜಿಗುಟಾದ)
ಞಕ್	ನೆಗ್ಗ್	ಅಪ್ಪಚ್ಚಿಯಾಗು
ಕೊಂಞ್	ಕೊಜಲ್	ತೊದಲು
ಅಙಣ	ಅಂಗಳ	(ದೇವಾಲಯದ) ಅಂಗಳ

ಅಕಾರಾಂತ ನಪುಂಸಕ ಲಿಂಗದ ಪದಗಳು ತುಳುವಿನ ಕೆಲವು ಉಪಭಾಷೆ(ಪುತ್ತೂರು, ಸುಳ್ಯ ತುಳು)ಗಳಲ್ಲಿ ಸಾಮಾನ್ಯವಾಗಿ ಒಕಾರಾಂತವಾಗಿ ಕಂಡುಬರುತ್ತವೆ. ಆದರೆ ಕರಾವಳಿಯ ತುಳುವಿನಲ್ಲಿ ಇಂತಾಗವೆ ಕನ್ನಡದಲ್ಲಿನಂತೆ ಮರ, ಸರ ಎಂದೇ ಉಚ್ಚರಿಸಲಾಗುತ್ತದೆ. ಕುಂದಾಪುರದ ಕನ್ನಡದಲ್ಲಿ ಮರೊ, ಸರೊ, ಎಂದೇ ಉಚ್ಚರಿಸಲಾಗುತ್ತಿದ್ದು ಮಂಗಳೂರು ಕೋಟಗನ್ನಡದಲ್ಲಿ ಪರಿಸರದ ತುಳುವಿನಿಂದಾಗಿ ಮರ, ಸರ ಎಂದೇ ಉಚ್ಚರಿಸಲಾಗುತ್ತಿದೆ.

ಮಂಗಳೂರು ಕೋಟ ಆಡುನುಡಿಯ ಕೆಲವು ಪದಗಳಲ್ಲಿ ಕನ್ನಡದ ಸರಳ ಧ್ವನಿಮಾಗಳು ಪುರುಷ ಧ್ವನಿಮಾಗಳಾಗಿ ಮಾರ್ಪಟ್ಟಿರುವುದು ಸುತ್ತಲಿನ ತುಳುವಿನ ಪ್ರಭಾವವಿರಬೇಕು.

ಕುಂದಾಪುರದ ಕೋಟಕನ್ನಡ	**ಮಂಗಳೂರು ಕೋಟ ಕನ್ನಡ**	**ತುಳು**
ಕಾಗಿಲೂಕಾಕಿ	ಕಾಕೆ	ಕಕ್ಕೆ
ಮೂಗು	ಮೂಂಕು	ಮೂಂಕು
ಮೊಗ್ಗಲೂ ಮುಗ್ಗಿ	ಮುಕ್ಕೆ	ಮುಕ್ಕೆ
ತೊಂಗು	ತೂಕು	ತೂಕು

ಪ-ಹ ಪರಿವರ್ತನೆ ಕನ್ನಡದ ವಿಲಕ್ಷಣ ಗುಣ. ಮಂಗಳೂರು ಕೋಟ ನುಡಿಯ ತುಳುವಿನಿಂದ

ಸ್ವೀಕರಿಸಿದ ಪದಗಳನ್ನೂ ಪ-ಹವಾಗಿ ಮಾರ್ಪಡಿಸಿಕೊಳ್ಳುತ್ತಿದೆ.

ತುಳು	**ಮಂಗಳೂರು ಕೋಟ**	**ಕುಂದಾಪುರ ಕೋಟ**
ಪುಡೆಪು	ಹೊಡಪು	(ಧಾನ್ಯವನ್ನು) ಗೋರು
ಪುಚ್ಚೆ	ಹುಚ್ಚೆ	ಬೆಕ್ಕು
ಪುಡಾಡ್	ಹೊಡಾಡ್	ವಂದಿಸು
ಪುಣಿ	ಹುಣಿ	ಕಟ್ಟು (ಅಂಚು)
ಪಗರ	ಹಗರ	ವಿನಿಮಯ

ಆದರೆ ಕೆಳಗೆ ಕಾಣಸಿದ ಕೆಲವು ತುಳು ಪದಗಳು ಅದೇ ರೂಪದಲ್ಲಿ ಮಂಗಳೂರು ಕೋಟಗನ್ನಡದಲ್ಲಿ ಬಳಕೆಯಾಗುತ್ತವೆ. ಈ ಪದಗಳು ಕುಂದಾಪುರ ಕೋಟದವರಲ್ಲಿ ಇಲ್ಲ.

ಪನೋರು (=ಕುಳ)	ಪಾಪು (=ತೋಡಿಗೆ ಹಾಕಿದ ಅಡ್ಡ ಮರ)
ಪಿರ್ (=ಹಿಂದಿರುಗು)	ಪೆದಂಬು (=ವಕ್ರಬುದ್ಧಿ)
ಪಿಸ್ಂಟ (=ಶೀಘ್ರಕೋಪಿ) ಪುಂಡು (ಗುಂಪು)	
ಪೊಟ್ಟ (=ಕಿವುಡ)	ಪೊಡುಂಬ (=ಬುದ್ಧಿಕೇಡಿ)

ಮೂಲ ದ್ರಾವಿಡದ 'ತ'ವು ತುಳುವಿನಿಂದ ಸ್ವೀಕರಿಸಿದ ಪದಗಳಲ್ಲಿ ಮಂಗಳೂರು ಕೋಟದವರಲ್ಲಿ ಸಕಾರವಾಗಿ ಮಾರ್ಪಡುತ್ತದೆ.

ಮಂಗಳೂರು ಕೋಟ	**ತುಳು**
ಏ. ವ ಬ.ವ	ಏ.ವ. ಬ.ವ.
ಪ್ರ.ಪು. ಮಾಡಡ್ ಮಾಡಡ್	ಮಲ್ಪಡ್ ಮಲ್ಪಡ್

ಕುಂದಾಪುರ ಪರಿಸರದಿಂದ ಮಂಗಳೂರು ಪರಿಸರಕ್ಕೆ ಬಂದಾಗ ತಮ್ಮ ಮೂಲಮಾತಿನ ಪದಗಳಿಂದ ಭಿನ್ನವಾಗಿ ತುಳುವಿನಿಂದ ಎರವಲು ಪಡೆದುಕೊಂಡ ದೊಡ್ಡ ಪದಕೋಶವೇ ಇದೆ. ಲೇಖನದ ವ್ಯಾಪ್ತಿಗೆ ಮೀರಿದ ಕಾರಣ ಅದನ್ನು ಇಲ್ಲಿ ನೀಡಿಲ್ಲ.

ತುಳು ಭಾಷೆಯ ಉಪಭಾಷೆಗಳು

ಇತ್ತೀಚಿನ ತನಕ ತುಳುವಿನಲ್ಲಿ ಸಾಮಾನ್ಯ ತುಳು ಹಾಗೂ ಬ್ರಾಹ್ಮಣ ತುಳು ಎಂಬ ಎರಡು ಪ್ರಭೇದಗಳಿವೆ ಎಂದು ತಿಳಿಯಲಾಗುತ್ತಿತ್ತು. ಆದರೆ ತುಳು ಭಾಷೆಯ ಬಗೆಗೆ ಇತ್ತೀಚೆಗೆ ನಡೆದ ಸೂಕ್ಷ್ಮ ಅಧ್ಯಯನದ ಫಲವಾಗಿ ಉತ್ತರ-ದಕ್ಷಿಣ ಎನ್ನುವ ಎರಡು ಪ್ರಾದೇಶಿಕ ಉಪಭಾಷೆಗಳಿರುವುದಾಗಿ ವಿದ್ವಾಂಸರು ನಿರ್ಧಾರಕ್ಕೆ ಬಂದಿದ್ದಾರೆ. ಬ್ರಾಹ್ಮಣರ ತುಳುವಿನಲ್ಲೂ ಉತ್ತರ(ಉಡುಪಿ, ಮೂಲ್ಕಿ ಪ್ರದೇಶ)ದ ಉಪಭಾಷೆಗೂ ದಕ್ಷಿಣ (ಮಂಗಳೂರು, ಬಂಟವಾಳ, ಪುತ್ತೂರು)ದ ಉಪಭಾಷೆಗೂ ಸಾಕಷ್ಟು ವ್ಯತ್ಯಾಸ ಗೋಚರಿಸುತ್ತದೆ. ಪರಿಶಿಷ್ಟ ಜಾತಿ, ವರ್ಗಗಳವರ ತುಳು ಹಾಗೂ ಜೈನರ ತುಳುವಲ್ಲೂ ಸಾಕಷ್ಟು ವೈವಿಧ್ಯ ಕಂಡುಬರುತ್ತದೆ.

ದಕ್ಷಿಣದ ಬ್ರಾಹ್ಮಣರ ಆಡುನುಡಿಗೂ ಉತ್ತರದ ಬ್ರಾಹ್ಮಣರ ಆಡುನುಡಿಗೂ ಗಮನಾರ್ಹವಾದ ವ್ಯತ್ಯಾಸ-ಧ್ವನ್ಯಾತ್ಮಕವಾಗಿ ಹಾಗೂ ಪದಕೋಶದ ದೃಷ್ಟಿಯಿಂದ ಕಂಡುಬರುತ್ತದೆ.

ಉ. ಬ್ರಾಹ್ಮಣ ತುಳು	**ದ.ಬ್ರಾಹ್ಮಣ ತುಳು**	**ಅರ್ಥ**
ಪೊಳ್ತು	ಪೊರ್ತು	ಹೊತ್ತು
ಬಳಿ	ಬರಿ	ಕುಲ

ವಿಭಕ್ತಿ ಪ್ರತ್ಯಯಗಳಲ್ಲೂ ಉ. ಬ್ರಾಹ್ಮಣ ಹಾಗೂ ದ. ಬ್ರಾಹ್ಮಣ ಆಡುನುಡಿಗೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಉ.ಬ್ರಾ.ದಲ್ಲಿ ಪ್ರತ್ಯಯಗಳು ಘೋಷರೂಪದಲ್ಲಿರುತ್ತವೆ. ದಕ್ಷಿಣದವರಲ್ಲಿ ಅಘೋಷರೂಪದಲ್ಲಿರುತ್ತವೆ.

	ಉ.ಬ್ರಾ.	**ದ.ಬ್ರಾ.**	**ಅರ್ಥ**
ಷಷ್ಠೀ ವಿಭಕ್ತಿ	ತಾರಾಯದ	ತಾರಾಯಿತ	ಅಡಕೆಯ
ಸಹವರ್ತಿ ತೃತೀಯಾ	ಆಯಡ	ಆಯಟ	ಅವನೊಡನೆ
ಸಪ್ತಮೀ ವಿಭಕ್ತಿ	ಉಗುರುಡು	ಉಗುರುಟು	ಉಗುರಿನಲ್ಲಿ

ಪದಕೋಶದ ದೃಷ್ಟಿಯಿಂದಲೂ ಉತ್ತರ ಹಾಗೂ ದಕ್ಷಿಣದ ಬ್ರಾಹ್ಮಣರ ಆಡುನುಡಿಯಲ್ಲಿ ವ್ಯತ್ಯಾಸಗಳನ್ನು ಕಾಣಬಹುದು.

ಉ. ಬ್ರಾ.	**ದ.ಬ್ರಾ.**	**ಅರ್ಥ**
ಅಂಪು	ಮಾಂಪು	ಮಾಡು
ಕಿನ್ನಿ	ಸಿದ್ಯ	ಚಿಕ್ಕ
ಬರ್‌ತ್ರಿ	ಬತ್ತಿರಿ	ಬರಲಿಲ್ಲ
ರಾಮಣೆ	ಬುಡೆತ್ತಿ	ಹೆಂಡತಿ

ತುಳುವಿನಲ್ಲಿ ಉತ್ತರ-ದಕ್ಷಿಣ ಎಂಬ ಎರಡು ಪ್ರಮುಖ ಪ್ರಾದೇಶಿಕ ವ್ಯತ್ಯಾಸವನ್ನು ಮಾಡಬಹುದಾಗಿದೆ. ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿದಾಗ ದ. ತುಳುವಿನಲ್ಲಿ ಅಘೋಷ ಧ್ವನಿಯೂ ಉತ್ತರದ ತುಳುವಿನಲ್ಲಿ ಘೋಷಧ್ವನಿಯೂ ಕೇಳಿಸುತ್ತವೆ.

	ಉ.ಬ್ರಾ.	**ದ.ಬ್ರಾ.**	**ಅರ್ಥ**
ತೃತೀಯಾ	ಪೆತ್ತತ	ಪೆತ್ತದ	ದನದ
	ಕಲ್ಲ್‌ತ	ಕಲ್ಲ್‌ದ	ಕಲ್ಲಿನ
ಸಹವರ್ತಿ ತೃತೀಯಾ			
	ಆಯೆಟ	ಆಯೆಡ	ಅವನಲ್ಲಿ
	ಗಣೇಶಟ	ಗಣೇಶಡ	ಗಣೇಶನಲ್ಲಿ
	ದ. ತುಳು	ಉ.ತುಳು	ಅರ್ಥ
ಸಪ್ತಮೀವಿಭಕ್ತಿ	ಕೆದುಟು	ಕೆದುಡು	ಕೆರೆಯಲ್ಲಿ
	ತೆರೆಟ್	ತರೆಡ್	ತಲೆಯಲ್ಲಿ

ಉತ್ತರದ ತುಳುವಿನ ಅ ಕಾರಾಂತ ನಪುಂಸಕ ನಾಮಪದಗಳು ದಕ್ಷಿಣದ ತುಳುವಿನಲ್ಲಿ ಸಾಮಾನ್ಯವಾಗಿ ಒಕಾರಾಂತವಾಗುತ್ತವೆ.

ಉ. ತುಳು	**ದ. ತುಳು**	**ಅರ್ಥ**
ಮರ	ಮರೊ	ಮರ
ಕರ	ಕರೊ	ಪಾತ್ರೆ

ಮಗ	ನುಗೊ	ನೊಗ

ಬ್ರಾಹ್ಮಣ ತುಳುವಿನಲ್ಲಿ ಸಕಾರವಿದ್ದು ಉತ್ತರದ ಸಾಮಾನ್ಯ ತುಳುವಿನಲ್ಲಿ ತಕಾರವಿರುವ ಕಡೆಗಳಲ್ಲಿ ದಕ್ಷಿಣದ ಸಾಮಾನ್ಯ ತುಳುವಿನಲ್ಲಿ ಸಕಾರವಾಗಿಯೇ ಉಳಿದಿದೆ.

ಬ್ರಾ.ತು.	**ದ.ಸಾ. ತುಳು**	**ಉ.ಸಾ. ತುಳು**	**ಅರ್ಥ**
ಸರೆ	ಸರೆ	ತರೆ	ತಲೆ
ಸಾಂಕ್	ಸಾಂಕ್	ತಾಂಕ್	ಸಾಕು
ಸುದೆ	ಸುದೆ	ತುದೆ	ನದಿ

ಪದಕೋಶದ ದೃಷ್ಟಿಯಿಂದ ಉತ್ತರ ಹಾಗೂ ದಕ್ಷಿಣದ ಪ್ರಭೇದಗಳಲ್ಲಿ ಕಂಡುಬರುವ ಭಿನ್ನತೆಯನ್ನು ಹೀಗೆ ಅಡಕಗೊಳಿಸಬಹುದು.

ಉತ್ತರ	**ದಕ್ಷಿಣ**	**ಅರ್ಥ**
ಕಿನ್ಯೊ	ಸಿದ್ಯೊ	ಚಿಕ್ಕ
ಉಗ್ಗೆಲ್	ಗುವೆಲ್	ಬಾವಿ
ಗೆಪ್ಪು	ದೆಪ್ಪು	ತೆಗೆ
ಮಿತ್ತೆರ್	ಬಡ್ತ್	ಹತ್ತು
ಪಜಿರ್	ಪಂತಿ	ಹುಲ್ಲು

ದಕ್ಷಿಣ ಕನ್ನಡ ತುಳುವ ಜೈನರ ಆಡುನುಡಿ ಇತರ ಎಲ್ಲಾ ತುಳುವಿನ ಉಪಭಾಷೆಯಿಂದ ಭಿನ್ನವಾಗಿದೆ. ಸಾಮಾನ್ಯ ತುಳುವಿನ ತಲಾಸಕಾರಗಳು ಜೈನದಲ್ಲಿ 'ಹ'ಕಾರವಾಗುತ್ತವೆ.

ಉದಾ **ಸಾಮಾನ್ಯ ತುಳು**	**ಜೈನ ತುಳು**	**ಅರ್ಥ**
ತರೆ	ಹರೆ	ತಲೆ
ತಪ್ಪು	ಹಪ್ಪು	ಸೊಪ್ಪು
ತರ್ಕತ್ತಿ	ಹರ್ಕತ್ತಿ	ಹಲ್ಲುಗಳುಳ್ಳ ಕತ್ತಿ

ಕರಾವಳಿಯ ಪರಿಶಿಷ್ಟ ವರ್ಗದವರ ತುಳುವಿನಲ್ಲೂ ಸಾಕಷ್ಟು ಭೇದ ಕಾಣಿಸುತ್ತಿದೆ. ಶಬ್ದದ ಆದಿಯ ತಕಾರ ಇವರಲ್ಲಿ ಎರಡು ರೂಪಭೇದಗಳನ್ನು ತೋರಿಸುತ್ತದೆ. ಪುತ್ತೂರು, ಕಾಸರಗೋಡು ಪ್ರದೇಶಗಳಲ್ಲಿ ಪದಾದಿಯ ತಕಾರ ಚಕಾರವಾಗಿಯೂ, ಸುಳ್ಯ ಪ್ರದೇಶದವರ ಆಡುನುಡಿಯಲ್ಲಿ ಶೂನ್ಯಧ್ವನಿಯಾಗಿಯೂ ಪರಿವರ್ತನೆಗೊಳ್ಳುತ್ತದೆ.

ದ. ಸಾಮಾನ್ಯ ತುಳು	**ಜೈನ ತುಳು**	**ಪರಿಶಿಷ್ಟ ತುಳು**
ಸೆರೆ	ಹರೆ	ಅರೆ
ಸುದೆ	ಹುದೆ	ಎದೆ
ಸಿಗಲೆ	ಹಿಗಲೆ	ಇಗಲೆ

ಮೇಲಿನ ಎಲ್ಲ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ತುಳುವನ್ನು ಕುರಿತು ಬ್ರಾಹ್ಮಣ ತುಳು ಹಾಗೂ ಬ್ರಾಹ್ಮಣೇತರ ತುಳುವೆಂದು ಎರಡು ಸ್ಥೂಲವರ್ಗೀಕರಣ ಸಲ್ಲದೆಂಬ ನಿರ್ಧಾರಕ್ಕೆ ಬರಬಹುದು. ತುಳುವನ್ನು ಪ್ರಾದೇಶಿಕವಾಗಿ ಉತ್ತರ (ಮೂಲ್ಕಿ, ಉಡುಪಿ, ಕಾರ್ಕಳ) ಹಾಗೂ ದಕ್ಷಿಣ (ಮಂಗಳೂರು, ಪುತ್ತೂರು, ಉಜಿರೆ) ಎಂದು ಎರಡಾಗಿ ವರ್ಗೀಕರಿಸಬಹುದು. ಈ ಎರಡು ಉಪವಿಭಾಗಗಳ ಒಳಗೆ ಉತ್ತರ ಪಶ್ಚಿಮ (ಉಡುಪಿ, ಕಾಪು, ಮುಲ್ಕಿ) ಹಾಗೂ ಉತ್ತರ ಪೂರ್ವ (ಕಾರ್ಕಳ, ಮೂಡಬಿದ್ರಿ), ದಕ್ಷಿಣ ಪಶ್ಚಿಮ (ಮಂಗಳೂರು, ಕಾಸರಗೋಡು) ಹಾಗೂ ದಕ್ಷಿಣ ಮಧ್ಯ (ಪುತ್ತೂರು), ದಕ್ಷಿಣ ಪೂರ್ವ (ಸುಳ್ಯ) ಎಂದು ವರ್ಗೀಕರಿಸಬಹುದು. ಸಾಮಾಜಿಕವಾಗಿ ಬ್ರಾಹ್ಮಣರ ತುಳು, ಜೈನರ ತುಳು, ಪರಿಶಿಷ್ಟರ ತುಳು

ಎಂದು ವರ್ಗೀಕರಣ ಮಾಡಬಹುದು.

೫. ಕನ್ನಡಪಲ್ಲಿ ಕೇಳಿಸುತ್ತಿರುವ ಮಲೆಯಾಳಂ, ಹಿಂದೂಸ್ತಾನಿ, ತಮಿಳು ಕೊಂಕಣಿ ಭಾಷೆಗಳ ಉಪಭಾಷೆಗಳ ಸಮೀಕ್ಷೆ ನಡೆಸಿಲ್ಲ.

ಮಿಶ್ರೀಕರಣದ ಫಲವಾಗಿ ಭಾಷೆಗಳಲ್ಲಿನ ಬಹುರೂಪಕ್ಕೆ ಮಟ್ಟಸಗೊಳ್ಳುತ್ತಿರುವುದು ಸಹಜ.

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಕನ್ನಡದ ಕಲಿಕೆ–ಸವಾಲುಗಳು

☐ ಡಾ। ಮಹಾಬಲೇಶ್ವರ ರಾವ್

ಹಿಂದಣ ಹೆಜ್ಜೆಯ ನೋಡಿ ನುಡಿಯುವುದಾದರೆ, ಇಂದು ಕನ್ನಡ ವಾಙ್ಮಯದಲ್ಲಾಗಿರುವ ಪ್ರಗತಿ ತೃಪ್ತಿದಾಯಕವಾಗಿದೆ. ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮಗಳು, ವೈವಿಧ್ಯಮಯ ಸಾಹಿತ್ಯ ಕೃತಿಗಳು, ಬರಹಗಾರರು ಎಲ್ಲದರಲ್ಲೂ ಆಧಿಕ್ಯ-ಸಮೃದ್ಧಿ ಕಂಡುಬಂದಿದೆ. ಕಳೆದ ಐವತ್ತು ವರ್ಷಗಳಲ್ಲಿ ಶಾಲೆಗಳಲ್ಲಿ ಶಾಲೆಗಳ ಸಂಖ್ಯೆ ದುಪ್ಪಟ್ಟು ಮುಪ್ಪಟ್ಟು ಆಗಿವೆ. ಶಾಲಾ ನೋಂದಣಿ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಈಚಿನ ದಿನಗಳಲ್ಲಿ ಶಾಲಾ ಪರಿತ್ಯಜನ ಪ್ರಮಾಣವನ್ನೂ ಕಡಿಮೆ ಮಾಡಲಾಗುತ್ತಿದೆ.



ದಾರುಣ ಸ್ಥಿತಿ

''ಭಾಷೆ ಎಂಬುದು ಕರ್ತೃ ಕರ್ಮ ಕ್ರಿಯೆಯಲ್ಲ, ಅದೊಂದು ಸಾಂಸ್ಕೃತಿಕ ಅನುಭವ. ಭಾಷೆ ಸಂಸ್ಕೃತಿವಾಹಕವೂ ಹೌದು; ಸಂಸ್ಕೃತಿಪೋಷಕವೂ ಹೌದು. ಭಾಷೆಯ ಮೂಲಕ ಸಂಸ್ಕೃತಿ ಸಂರಕ್ಷಣೆಯ ಕಾರ್ಯ ಸಾಧ್ಯ. ಹಾಗೆಂದೇ ಭಾಷೆ ನಶಿಸಿದರೆ ಸಂಸ್ಕೃತಿ ನಾಶವಾದಂತೆ'' ಎಂದು ಅನಂತಮೂರ್ತಿಯವರು ನುಡಿದಿರುವರು. ''ಸಾಯುತಿದೆ ನಿಮ್ಮ ನುಡಿ'' ಎಂಬ ಕವನದಲ್ಲಿ ಕೆಲವು ದಶಕಗಳ ಹಿಂದೆಯೇ ಕುವೆಂಪು ಅವರು ಎಚ್ಚರಿಕೆ ನೀಡಿದ್ದರು. ಈ ಹೊತ್ತು ಕನ್ನಡ ಉಚ್ಛ್ರಾಯ ಸ್ಥಿತಿಯಲ್ಲಿದೆ ಎಂದು ಹೇಳುತ್ತಿರುವಾಗಲೇ ಅಪಾಯ-ಅಡಚಣೆಗಳು ಬುಸುಗುಡುತ್ತಿವೆ. ಉದ್ಯೋಗ, ಪ್ರತಿಷ್ಠೆ, ಸಾಮಾಜಿಕ ಏಣಿಯಲ್ಲಿ ಬೇಗ

ಪ್ರಾಚಾರ್ಯರು, ಡಾ. ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯ, ಕುಂಜಿಬೆಟ್ಟು, ಉಡುಪಿ-2

ಮೇಲೇರಬೇಕೆಂಬ ತಹತಹ ಇತ್ಯಾದಿ ಹಲವು ಕಾರಣಗಳಿಂದಾಗಿ ಆಂಗ್ಲ ಮಾಧ್ಯಮ ಶಿಕ್ಷಣದ ಪಿಡುಗು ವಿಪರೀತ ಹೆಚ್ಚಿದೆ. ಈ ವಿಪರೀತ ಪ್ರಕ್ರಿಯೆಗೆ ಸ್ವತಃ ಸರಕಾರಿ ಸಂಸ್ಥೆಗಳು ಬೆಂಬಲ ನೀಡುತ್ತಿವೆ. ವರ್ಷಂಪ್ರತಿ ಮುನ್ನೂರು ನಾಲ್ಕು ನೂರು ಆಂಗ್ಲ ಮಾಧ್ಯಮ ಶಾಲೆಗಳ ಸ್ಥಾಪನೆಗೆ ಹಿಂಬಾಗಿಲಿನಿಂದ ಹಾಗೂ ಮುಂಬಾಗಿಲಿನಿಂದ ಅನುಮತಿ ನೀಡಲಾಗುತ್ತಿದೆ. ಇವುಗಳಲ್ಲಿ ಹಲವು ಶಾಲೆಗಳು ಸ್ವತಃ ರಾಜಕಾರಣಿಗಳ ಆಸ್ತಿಕೆಗೆ ಒಳಪಟ್ಟಿರುತ್ತವೆ ಇಲ್ಲವೆ ಅವರ ಕೃಪಾಛತ್ರದಡಿಯಲ್ಲಿ ಬೆಳೆಯುತ್ತವೆ. ಕನ್ನಡ ಮಾಧ್ಯಮ ನೀತಿಯನ್ನು ಅರೆ ಮನಸ್ಸಿನಿಂದ ಜಾರಿಗೆ ಕೊಡುವ ಸರಕಾರ ''ಚಾಪೆಯ ಕೆಳಗೆ, ರಂಗೋಲಿಯ ಕೆಳಗೆ ತೂರಲು'' ಅವಕಾಶ ಕಲ್ಪಿಸಿ ಕಾನೂನುಗಳನ್ನು ಜಾರಿಗೆ ತರುತ್ತದೆ. ಇದೆಲ್ಲದರ ಪರಿಣಾಮವಾಗಿ ಕನ್ನಡ ನಾಡಿನಲ್ಲಿ ಕನ್ನಡ ಶಾಲೆಗಳೇ ನಾಮಾವಶೇಷವಾಗುವ ದಾರುಣವಾದ ದುರಂತ ಪ್ರಾಪ್ತವಾಗಿದೆ. ದಿನೇ ದಿನೇ ಕನ್ನಡ ಮಾಧ್ಯಮ ಶಾಲೆಗಳಲ್ಲಿ ದಾಖಲಾಗುವ ಮಕ್ಕಳ ಪ್ರಮಾಣ ಕುಸಿಯುತ್ತಿದೆ. ಇದು ಪೇಟೆ-ಪಟ್ಟಣಗಳ ಸ್ಥಿತಿ. ಹಳ್ಳಿಗಾಡಿನ ಜನ ಕನ್ನಡವನ್ನು ಕೈ ಬಿಟ್ಟಿಲ್ಲ. ಕನ್ನಡ ಉಳಿಯುವುದು ಹಳ್ಳಿಗಳಿಂದ ಎಂದು ಭಾವುಕತನದಿಂದ ಮಾತನಾಡಬಹುದು. ಆದರೆ ಹಳ್ಳಿಗಳ ಚಿತ್ರವೂ ಬದಲಾಗುತ್ತಿದೆ. ಪ್ರತಿಯೊಂದು ಹಳ್ಳಿಗೆ ಅಥವಾ ಎರಡು ಮೂರು ಹಳ್ಳಿಗೆ ಒಂದರಂತೆ ಆಂಗ್ಲ ಮಾಧ್ಯಮ ಶಾಲೆಗಳು ತಲೆ ಎತ್ತುತ್ತಿವೆ. ಅನೇಕ ಹೆತ್ತವರು ''ಬೆಲೆತೆತ್ತು'' ''ಗುಣ ಮಟ್ಟದ ಶಿಕ್ಷಣ''ವನ್ನು ಕೊಂಡುಕೊಳ್ಳಲು ಮುತ್ತಿಗೆ ಹಾಕುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಕನ್ನಡವನ್ನು ಹೇಗೆ ಕಲಿಸುವುದು? ಕಲಿಕೆಯ ಸಮಸ್ಯೆಗಳೇನು? ಎಂಬ ಸವಾಲುಗಳು ಉದ್ಭವಿಸುವುದಿಲ್ಲ. ಅದೆಲ್ಲ ಕನ್ನಡ ಉಳಿದಾಗ-ಶಾಲೆಗಳಲ್ಲಿ ಕನ್ನಡ ಕಲಿಕೆಗೆ ನೆಲೆ ಇದ್ದಾಗ ಕೇಳಬಹುದಾದ ಪ್ರಶ್ನೆಗಳು. ಈಗ ನಮ್ಮ ಮುಂದಿರುವ ದೊಡ್ಡ ಸವಾಲು- ಕರ್ನಾಟಕದ ಎಲ್ಲ ಶಾಲೆಗಳಲ್ಲಿ ಕನ್ನಡ ಬೋಧನೆ ಹಾಗೂ ಕನ್ನಡ ಮಾಧ್ಯಮದ ಕಲಿಕೆಗೆ ಭದ್ರವಾದ ನೆಲೆಯನ್ನು ಕಲ್ಪಿಸುವುದು. ''ಇದು ಮೊದಲು, ಆಮೇಲೆ ಉಳಿದುದೆಲ್ಲ.''

ಈ ಕೆಲಸ ಭಾವುಕತೆಯಿಂದ ಆಗುವಂಥದಲ್ಲ. ಬರೀ ಮಂಥನಗಳಿಂದ, ಘೋಷಣೆಗಳಿಂದ, ಬೀದಿ ಕೂಗಾಟಗಳಿಂದ ಮತ್ತು ಸಮ್ಮೇಳನಗಳಲ್ಲಿ ಕೇವಲ ಚರ್ಚೆ ನಡೆಸುವುದರಿಂದ ಏನೂ ಪ್ರಯೋಜನವಿಲ್ಲ. ಈ ಬಗೆಯ ಕೆಲಸ ಉದ್ದಕ್ಕೂ ನಡೆಯುತ್ತಲೇ ಬಂದಿದೆ. ಕಳವಳ ಹೆಚ್ಚುತ್ತಲೇ ಇದೆ.

ಚೆನ್ನಾಗಿ ಕಲಿಸಿ

ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಕುಸಿದರೇನಂತೆ? ಆಂಗ್ಲ ಮಾಧ್ಯಮ ಶಾಲೆಗಳಿಲ್ಲವೇ? ಅಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೆ ಅವಕಾಶ ಇದ್ದೇ ಇದೆಯಲ್ಲ! ಕರ್ನಾಟಕದಲ್ಲಿ ಎಲ್ಲರೂ ಶಾಲಾ ಹಂತದಲ್ಲಿ ಒಂದರಿಂದ ಹತ್ತರ ತನಕ ಕನ್ನಡವನ್ನು ಒಂದು ಭಾಷೆಯನ್ನಾಗಿ (ಪ್ರಥಮ/ ದ್ವಿತೀಯ/ ತೃತೀಯ) ಕಲಿಯುವ ಇಂದಿನ ಸ್ಥಿತಿ ಹಲವಾರು ವರ್ಷಗಳ ಚಿಂತನೆ ಹಾಗೂ ಹೋರಾಟದ ಫಲ ಎಂಬುದನ್ನು ಮರೆಯಬಾರದು. ಒಂದು ಭಾಷೆಯನ್ನು ಕಲಿಯುವುದಕ್ಕೂ ಭಾಷೆಯ ಮೂಲಕ ಕಲಿಯುವುದಕ್ಕೂ ಬಹಳ ವ್ಯತ್ಯಾಸಗಳಿವೆ. ಬಹುಮಟ್ಟಿಗೆ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡ ದ್ವಿತೀಯ/ ತೃತೀಯ ಭಾಷೆಯಾಗಿ ಕಲಿಸಲ್ಪಡುತ್ತದೆ. ಈ ಶಾಲೆಗಳಲ್ಲಿ ಕನ್ನಡಕ್ಕೆ ಪ್ರಥಮ ದರ್ಜೆಸ್ಥಾನವಂತೂ ಇಲ್ಲ. ಇಲ್ಲಿನ ವಿದ್ಯಾರ್ಥಿಗಳಿಗೆ, ಪಾಲಕರಿಗೆ ಹಾಗೂ ಆಡಳಿತ ಮಂಡಳಿಗಳಿಗೆ ಕನ್ನಡವೆಂದರೆ ಒಂದು ಬಗೆಯ ತಾತ್ಸಾರ. ಅದನ್ನು ಗಂಭೀರವಾಗಿ ಕಲಿಯಬೇಕಾಗಿಲ್ಲ. ಅದರ ಕಲಿಕೆಯಿಂದ ನಮ್ಮ 'ಇಷ್ಟಾರ್ಥ ಪ್ರಾಪ್ತಿ'ಯಾಗುವುದಿಲ್ಲ ಎಂಬ ಧೋರಣೆ. ಇಂಥ ವಾತಾವರಣದಲ್ಲಿ ಕನ್ನಡದ ಕಲಿಕೆ ಯಶಸ್ವಿಯಾಗದು. ಮೇಲಾಗಿ ಇಂಥ ಶಾಲೆಗಳಲ್ಲಿ ಕನ್ನಡವನ್ನು ಕಲಿಸುವ ಶಿಕ್ಷಕರು ಕೀಳರಿಮೆಯಿಂದ ಖಿನ್ನರಾಗುವ ಸ್ಥಿತಿಯೂ ಇದೆ. ಆದುದರಿಂದ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯಾ ಕ್ಷೀಣತೆಯನ್ನು ವಸ್ತುಸ್ಥಿತಿ ಎಂದು ಒಪ್ಪಿಕೊಂಡು

ಮುನ್ನಡೆಯುವುದಾದಲ್ಲಿ ನಾವು ಎರಡು ಕೆಲಸಗಳನ್ನು ಗಂಭೀರವಾಗಿ ಸ್ವೀಕರಿಸಬೇಕು. ಒಂದು ಅಳಿಮಳಿದ ಕನ್ನಡ ಮಾಧ್ಯಮ ಹಾಗೂ ಸರಕಾರಿ ಶಾಲೆಗಳು ಇಂಗ್ಲಿಷ್ ಭಾಷೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಲಿಸುವುದಕ್ಕೆ ಬೇಕಾದ ವ್ಯವಸ್ಥೆ ಮಾಡುವುದು. ಎರಡನೆಯದು ಆಂಗ್ಲ ಮಾಧ್ಯಮ ಹಾಗೂ ಶಾಲೆಗಳಲ್ಲಿ ಕನ್ನಡ ಕಲಿಕೆಗೆ ಗೌರವ ಹಾಗೂ ಪರಿಣಾಮಕಾರಕತೆಯನ್ನು ಒದಗಿಸುವುದು. ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ವಿಶ್ವವಿದ್ಯಾಲಯಗಳು ಈ ಕೆಲಸವನ್ನು ಪ್ರಧಾನ ಆದ್ಯತೆ ಎಂಬುದಾಗಿ ಪರಿಗಣಿಸಬೇಕು.

ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಬೋಧನೆ ಸರಿಯಾಗಿ ಆಗಬೇಕು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಹಿಂದುಳಿಯಬಾರದು ಎಂಬ ಕಾರಣಕ್ಕಾಗಿ ಮೂರನೆಯ ತರಗತಿಯಿಂದ ಇಂಗ್ಲಿಷ್ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸುವುದು ಪರಿಹಾರವಲ್ಲ. ಒಂದೆಡೆ ಮಕ್ಕಳ ಮೇಲಿನ ಕಲಿಕೆಯ ಹೊರೆ ಕಡಿಮೆ ಮಾಡಬೇಕು, ಸಂತಸದಾಯಕ ಕಲಿಕೆಯಾಗಬೇಕು ಎನ್ನುತ್ತೇವೆ. ಮತ್ತೊಂದೆಡೆ ಹೊರೆ ಹೆಚ್ಚು ಮಾಡುವ ಪ್ರಯತ್ನ ಮಾಡುತ್ತೇವೆ. ತೀವ್ರವಾದ ಒತ್ತಡ, ಭವಿಷ್ಯದ ಬಗೆಗಿನ ಭಯದಿಂದ ಪೀಡಿತರಾಗಿ ಈ ಕ್ರಮ ಕೈಗೊಂಡಿರುವುದನ್ನು ಒಪ್ಪಿಕೊಳ್ಳೋಣ. ಆದರೆ ಕಲಿಸುವ ಬಗೆ ಹೇಗೆ? ಸರಕಾರ, ತಜ್ಞರು ಈ ಬಗ್ಗೆ ಚಿಂತನ ನಡೆಸಿದ್ದಾರೆಯೇ? ಮೂರನೆಯ ತರಗತಿಯಲ್ಲಿ ಮಕ್ಕಳಿಗೆ ಹೊರೆಯಾಗದ ರೀತಿಯಲ್ಲಿ, ಸಂತಸ ನೀಡುವ ರೀತಿಯಲ್ಲಿ ಇಂಗ್ಲಿಷ್ ಬೋಧನೆ ಕಲಿಕೆ ಮಾಡುವುದಕ್ಕೆ ಶಿಕ್ಷಕರನ್ನು ಸಜ್ಜುಗೊಳಿಸಲಾಗಿದೆಯೇ? ಈ ಸಾಮರ್ಥ್ಯ ಶಿಕ್ಷಕರಲ್ಲಿದೆಯೇ?

ಹಿತ್ತಲ ಭಾಷೆ

ಔಪಚಾರಿಕ ಕಲಿಕೆ ಮಾತ್ರವೇ ಕಲಿಕೆಯಲ್ಲ. ವ್ಯಕ್ತಿಗಳು ಅನೌಪಚಾರಿಕವಾಗಿ ಹಾಗೂ ಪ್ರಾಸಂಗಿಕವಾಗಿ ಕೂಡ ಕಲಿಯಬಲ್ಲರು. ಅದರಲ್ಲೂ ಭಾಷೆಯ ಕಲಿಕೆ ಶಾಲೆಯಲ್ಲೇ ನಡೆಯಬೇಕೆಂಬ ನಿಯಮವೇನಿಲ್ಲ. ಶಾಲೆಗೆ ಸೇರುವ ಮೊದಲೇ ಮಕ್ಕಳು ಒಂದು ನಿರ್ದಿಷ್ಟ ಭಾಷೆಯನ್ನು ಕಲಿತಿರುತ್ತಾರೆ. ಅದರಲ್ಲೂ ಪ್ರಾದೇಶಿಕ ಭಾಷೆ ಅಥವಾ ಮಾತೃ ಭಾಷೆ ನಿತ್ಯವೂ ಅವರ ಕಿವಿಯ ಮೇಲೆ ಬೀಳುತ್ತಿರುತ್ತದೆ. ಹೀಗಾಗಿ ಕನ್ನಡ ಮಾಧ್ಯಮ ಶಾಲೆಗಳು ಅಳಿದರೆ ಕನ್ನಡಕ್ಕೆ ಅಳಿವಿಲ್ಲ. ಸುತ್ತಲಿನ ಪರಿಸರ ಹಾಗೂ ಮನೆಯಲ್ಲಿ ಮಕ್ಕಳು ಚೆನ್ನಾಗಿ ಕಲಿಯುತ್ತಾರೆ ಎಂದು ಹಲವರು ಸಮರ್ಥಿಸಬಹುದು. ಆದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆ, ಉದ್ಯೋಗ ನೀತಿ, ಸ್ಪರ್ಧೆ, ಭವಿಷ್ಯತ್ತಿಗಾಗಿ ಮಕ್ಕಳನ್ನು ಗುದ್ದಿ ಗುದ್ದಿ ಬೇಗ ಹಣ್ಣು ಮಾಡುವ ಪ್ರಕ್ರಿಯೆ ಇತ್ಯಾದಿಗಳಿಂದಾಗಿ ಅನೌಪಚಾರಿಕ ಶಿಕ್ಷಣ ಪ್ರಸಾರದ ನಿಯೋಗಗಳಲ್ಲಿ ಒಂದಾದ ಮನೆ ಇಂದು ಕನ್ನಡದ ಕಲಿಕೆಗೆ ಅಡ್ಡಿಯಾಗುತ್ತಿದೆ ಮತ್ತು ಮುಂದೆ ದೊಡ್ಡ ಅಡ್ಡಿಯಾಗಲಿದೆ. ಕನ್ನಡ ಇನ್ನು ಮುಂದೆ 'ಅಡುಗೆಮನೆಯ' ಅಥವಾ 'ಹಿತ್ತಲ ಭಾಷೆ' ಯಾಗಿಯೂ ಉಳಿಯಲಾರದು. ನಮ್ಮ ಮನೆಯ ಭಾಷೆಯ ಸ್ಥಾನವನ್ನು ಇಂಗ್ಲಿಷ್ ದಿನೇ ದಿನೇ ಆಕ್ರಮಿಸುತ್ತಿದೆ. ಉದ್ಯೋಗಿ ದಂಪತಿಗಳ ದೆಸೆಯಿಂದಾಗಿ ಮನೆಗಳಿಂದ ಕನ್ನಡ ಉಚ್ಚಾಟನೆಗೊಳ್ಳುತ್ತಿದೆ. ಒಂದೊಮ್ಮೆ ಕನ್ನಡ ಇಂಥ ಮನೆಗಳಲ್ಲಿ ಉಳಿದರೂ ಅದರ ಸೊಂಪು, ಸೊಗಡು ಎಲ್ಲ ಕಾಡಿಗೆ ಹೋಗಿರುತ್ತದೆ. ಅಸಹನೀಯ 'ನುಡಿ ಬೆರಕೆ' ಕಿವಿದೆರೆಗಳಿಗೆ ಬಡಿದಪ್ಪಳಿಸುತ್ತದೆ. ಕನ್ನಡದ ಅಭಿಮಾನ, ಕನ್ನಡದ ಮೇಲಿನ ಪ್ರೀತಿ ಹಾಗೂ ಕನ್ನಡದ ಸರಿಯಾದ ಕಲಿಕೆ ಮನೆಗಳಲ್ಲಿ ಆರಂಭವಾಗದೇ ಹೋದರೆ ಯಾವ ಸರಕಾರ ಏನು ಕಾನೂನು ಮಾಡಿದರೂ ಫಲಪ್ರದವಾಗದು. ನಮ್ಮ ನಮ್ಮ ಮನೆಗಳಲ್ಲಿ ಕನ್ನಡವನ್ನು ಪುನರ್‌ಸ್ಥಾಪಿಸಿ ಅದನ್ನು ಶಾಲಾ ಶಿಕ್ಷಣದಲ್ಲಿ ದೃಢಗೊಳಿಸುವ ಸವಾಲು ಇಂದು ನಮ್ಮ ಮುಂದಿದೆ.

ಸುಲಭ ಕಲಿಕೆ

ಶಾಲಾ ಹಂತದಲ್ಲಿ ಕನ್ನಡ ಕಲಿಕೆ ಸರಳವೂ ಸುಲಭವೂ ಆಸಕ್ತಿದಾಯಕವೂ ಆಗಬೇಕು. ಈ ದಿಶೆಯಲ್ಲಿ ನಮ್ಮ ಭಾಷಾ ಪಠ್ಯಪುಸ್ತಕಗಳು ಹಾಗೂ ಇತರ ವಿಷಯಗಳ ಪಠ್ಯಪುಸ್ತಕಗಳು ಆಕರ್ಷಕವೂ ರೋಚಕವೂ ಸುಲಭ ಗ್ರಾಹ್ಯವೂ ಆಗಿರಬೇಕು. ತೀರ ಈಚಿನ ದಿನಗಳಲ್ಲಿ ಪಠ್ಯಪುಸ್ತಕ ಇಲಾಖೆ ಪಠ್ಯಪುಸ್ತಕಗಳ ರಚನೆಗೆ ಹೊಸ ಸ್ವರೂಪ ನೀಡಲು ಯತ್ನಿಸುತ್ತಿದೆ. ಆದರೆ ಈ ಇಲಾಖೆ ನಡೆಯಬೇಕಾದ ದಾರಿ ತುಂಬ ನಿಡಿದಾಗಿದೆ. ಕಲ್ಲುಮುಳ್ಳುಗಳಿಂದ ತುಂಬಿದೆ. ನಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳ ರಚನೆಯಲ್ಲಿ 'ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ' ಎಂಬ ಪತ್ರಿಕೆಗಳ ಧೋರಣೆಯನ್ನು ಅಳವಡಿಸಹೋಗಬಾರದು. ಯಾವ ಹಂತದ ವಿದ್ಯಾರ್ಥಿಗಳು ಯಾರು ಯಾರನ್ನು ಓದಿಕೊಳ್ಳಬೇಕು ಎಂಬ ಸಾಂಸ್ಕೃತಿಕ ನೀತಿ ಬಹಳ ಅಗತ್ಯ. "ಮಕ್ಕಳು ಭಾಷೆಯ ಜೀವಂತ ವಾಙ್ಮಯದ ಶ್ರೇಷ್ಠ ಮಾದರಿಗಳ ಸಾಹಚರ್ಯದಲ್ಲಿ ತಮ್ಮ ಭಾಷೆಯನ್ನು ಅರಳಿಸಿಕೊಳ್ಳುವ ಹಾಗೆ ಮಾಡಬೇಕು" (ಸುಬ್ಬಣ್ಣ ಕೆ.ವಿ.). ಈ ಹಿನ್ನೆಲೆಯಿಂದ ನೋಡಿದಾಗ ಕನ್ನಡದ ವಿವಿಧ ಪ್ರಕಾರಗಳ ಅತ್ಯಂತ ಪ್ರಮುಖರನ್ನು, ಅವಶ್ಯ ಓದಲೇಬೇಕಾದ ಕೃತಿಕಾರರನ್ನು ನಮ್ಮ ಪಠ್ಯಪುಸ್ತಕಗಳು ಪರಿಚಯಿಸಬೇಕು. ಬಹಳ ಮುಖ್ಯವಾಗಿ ಪರಂಪರೆಯ ನಿರ್ಮಾಪಕರನ್ನು ಮತ್ತು ಪರಂಪರೆಯ ಶ್ರೇಷ್ಠ ಪ್ರತಿನಿಧಿಗಳನ್ನು ಕನ್ನಡ ಪಠ್ಯ ಪುಸ್ತಕಗಳು ಒಳಗೊಳ್ಳಬೇಕು. ಒಂದರಿಂದ ಏಳು, ಎಂಟರಿಂದ ಹತ್ತು ಈ ಕಾಲಖಂಡಗಳಲ್ಲಿ ನಮ್ಮ ಮಕ್ಕಳು ಯಾವುದನ್ನು ಮತ್ತು ಯಾರನ್ನು ಓದಿಕೊಳ್ಳಬೇಕು ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಬೇಕು. ಹೀಗೆ ಮಾಡುವಾಗ ಅದು ವೈಯಕ್ತಿಕ ಆಯ್ಕೆಯಾಗಿ ಉಳಿಯಬಾರದು. ವಿದ್ಯಾರ್ಥಿಗಳ ವಯಸ್ಸು, ಪಕ್ವತೆಯ ಮಟ್ಟ, ಆಸಕ್ತಿ-ಅಭಿರುಚಿ, ಆವಶ್ಯಕತೆ, ಶಿಕ್ಷಕರ ಸಿದ್ಧತೆ ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡಿರಬೇಕು. ಈ ಸವಾಲನ್ನು ನಮ್ಮ ಕನ್ನಡ ಭಾಷಾ ಪಠ್ಯ ಪುಸ್ತಕಗಳು ಸರಿಯಾಗಿ ಎದುರಿಸುತ್ತಿಲ್ಲ. ಪಠ್ಯದ ಆಯ್ಕೆಗಳಲ್ಲಿ ಶೈಕ್ಷಣಿಕ ಮನೋವೈಜ್ಞಾನಿಕ ಪರಿಗಣನೆಗಳು ಹಿಂದೆ ಸರಿದು, ಇತರ ಪರಿಗಣನೆಗಳೇ ಪ್ರಬಲವಾಗುತ್ತಿರುವುದರಿಂದ ಕನ್ನಡ ಕಲಿಕೆ ಶಾಲೆಗಳಲ್ಲಿ ನೀರಸವಾಗುತ್ತಿದೆ. ಕನ್ನಡವನ್ನು ಯಾಕೆ ಕಲಿಯಬೇಕು ಮತ್ತು ಕಲಿಸಬೇಕು? ಎಂಬ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ದೊರೆಯದಿದ್ದಾಗ ಅದು ಕಲಿಕೆಯಾಗದೇ ತೊಳಲಾಟವಾಗುತ್ತದೆ.

ಕನ್ನಡದಲ್ಲಿ ಸಮಾಜ ವಿಜ್ಞಾನ, ವಿಜ್ಞಾನ ಹಾಗೂ ಗಣಿತ ಮೊದಲಾದ ವಿಷಯಗಳನ್ನು ಕಲಿಯುವುದು ದಿನ ಹೋದಂತೆ ಇಂದು ರಮ್ಯ ಪಯಣವಾಗಿ ರೂಪುಗೊಳ್ಳದೆ ಅರ್ಥಹೀನವೂ, ಅರ್ಥ ಕ್ಲಿಷ್ಟವೂ ಕಷ್ಟವೂ ಆದ ಅನುಭವವಾಗಿ ಮಾರ್ಪಡುತ್ತಿದೆ. "ಬಿಟ್ಟರೋ ಕಾಡಲ್ಲಿ ಕಣ್ಣು ಕಟ್ಟಿ। ಕುಡಿಯಲುಪ್ಪಿನ ನೀರು, ತಿನಲು ಬೆಂಕಿಯ ಚೂರು" ಎಂಬ ಸ್ಥಿತಿ ನಿರ್ಮಾಣವಾಗಿದೆ. "ವಿಸರಣ, ವಿಸರಣ ವಾಟ, ಪ್ರವಣತೆ, ಅಭಿಸರಣ, ಕಣದಂಗ, ಸ್ವಾಂಗೀಕರಣ, ಪರಿಸರೀಯ, ಸ್ವಾಯಿಕ ಅಂಗ, ವನೀಕರಣ, ಮರುಭೂಮೀಕರಣ, ಮರುಚಕ್ರೀಕರಣ, ಅದಿಶ, ಸದಿಶ, ಅತ್ರಗ, ಅಪರಾವರ್ತ್ಯ, ಅಸಮಿತ"– ಇವೆಲ್ಲ ಈಗ ಎಂಟನೆಯ ತರಗತಿಗೆ ನಿಗದಿಯಾಗಿರುವ, ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಪರೀಕ್ಷಿಸಿ (?) ಇಲಾಖೆ ಒಪ್ಪಿಕೊಂಡು ಪ್ರಕಟಿಸಿರುವ "ವಿಜ್ಞಾನ ಹಾಗೂ ಗಣಿತ ಪುಸ್ತಕಗಳಿಂದ ಆಯ್ದ ಅಪೂರ್ವ ಪ್ರಯೋಗಗಳು". ನೀರಿಳಿಯದ ಗಂಟಲಲ್ಲಿ ಕಡುಬು ತುರುಕುವ ಈ ಬಗೆಯ ಪ್ರಯೋಗ ಖಂಡಿತಾ ಸಲ್ಲದು. ಈ ರೀತಿಯ ಕನ್ನಡವನ್ನು ಕಲಿಯುವುದಕ್ಕಿಂತ ಇಂಗ್ಲಿಷ್ ಅನ್ನು ಕಲಿಯುವುದೇ ಹೆಚ್ಚು ಶ್ರೇಯಸ್ಕರ. ಈ ಬಗೆಯ 'ಪಠ್ಯಪುಸ್ತಕದ ಕನ್ನಡ' ಕನ್ನಡದ ಅಭಿಮಾನಿಗಳನ್ನು ಬೆಳೆಸುವ ಬದಲು ವಿರೋಧಿಗಳ ಸಂಖ್ಯೆಯನ್ನು ಹೆಚ್ಚಿಸೀತು!

ವೃತ್ತಿಪರ ಶಿಕ್ಷಣದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಪ್ರಸ್ತಾಪ ಸರಕಾರದ ಮುಂದಿದೆ. ಇದು

ಆಗತ್ಯವೇ? ವೃತ್ತಿಪರ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳ ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ ಹಿನ್ನೆಲೆ ಏನು? ಶಿಕ್ಷಣ ಪೂರೈಸಿದ ಬಳಿಕ ಅವರು ಕರ್ನಾಟಕದಲ್ಲಿ ಉಳಿಯುವವರೇ? ಅವರಿಗೆ ಮತ್ತೆ ನಾವು ಪಂಪ, ರನ್ನರನ್ನು ಹೇಳಿಕೊಡಬೇಕೇ? ವೃತ್ತಿಗೆ ಸಂಬಂಧಿಸಿದ ಕನ್ನಡದ ಬಳಕೆಯನ್ನು ಕಲಿಸಬೇಕೇ? ಕನ್ನಡದಲ್ಲಿ ಸಂಬಂಧಪಟ್ಟ ವೃತ್ತಿಗೆ ಸಂಬಂಧಿಸಿದ ಸಾಹಿತ್ಯವನ್ನು ಪರಿಚಯಿಸಬೇಕೇ? ಮೊದಲಾದ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಚಿಂತನ ಮಂಥನ ನಡೆಸಿ ಸಾವಕಾಶವಾಗಿ ಕ್ರಮಗಳನ್ನು ಕೈಗೊಳ್ಳಬೇಕು; ಧಾವಂತ ಸಲ್ಲದು.

ವಸ್ತುಸ್ಥಿತಿ

ಕನ್ನಡದ ಅಭಿಮಾನ ಕನ್ನಡಿಗರಿಗೆ ಅನಿವಾರ್ಯ ಮನೋಧರ್ಮ ಎಂದು ಹೇಳುವುದು ಸುಲಭ. ಆದರೆ ಉಪಭೋಗವಾದ ಹಾಗೂ ಉಪಯುಕ್ತತಾ ವಾದಗಳೇ ಸದ್ಯ ಮೇಲುಗೈ ಪಡೆದಿರುವಾಗ ಕನ್ನಡ ಕಲಿತರೆ ಏನು ಪ್ರಯೋಜನ? ಕನ್ನಡ ಮಾಧ್ಯಮದಲ್ಲಿ ಕಲಿತರೆ ಕೆಲಸ ಸಿಗುತ್ತದಾ? ಎಂದು ಪ್ರಶ್ನಿಸುವವರ ಸಂಖ್ಯೆ ಹೆಚ್ಚಿದೆ. ಆದುದರಿಂದ ಅಂಥವರಿಗೆ ಸೂಕ್ತ ಪ್ರೋತ್ಸಾಹನ ವ್ಯವಸ್ಥೆ ಜಾರಿಗೆ ತಂದರೆ ಅಧಿಕಾಧಿಕ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಕಲಿಯಲು ಮುಂದಾಗಬಹುದು. ಮುಖ್ಯವಾಗಿ ಉದ್ಯೋಗದಲ್ಲಿ ಮೀಸಲಾತಿ, ವೃತ್ತಿಪರ ಕೋರ್ಸುಗಳ ಪ್ರವೇಶದಲ್ಲಿ ಮೀಸಲಾತಿ ಅಂಥ ಒಂದು ಉಪಕ್ರಮ. ಈಗ ಒದಗಿಸಿರುವ ಮೀಸಲಾತಿ ಪ್ರಮಾಣ ತೀರ ನಗಣ್ಯ. ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಉದ್ಯೋಗ ಹಾಗೂ ವ್ಯಾಸಂಗ ಪ್ರವೇಶದಲ್ಲಿ ಶೇ. 50 ಮೀಸಲಾತಿ ಒದಗಿಸುವುದಾದ ಪಕ್ಷದಲ್ಲಿ ಖಂಡಿತಕ್ಕೂ ಕನ್ನಡ ಕಲಿಕೆಗೆ ಒಳ್ಳೆಯ ಇಂಬು ದೊರೆಯಲಿದೆ.

ಕನ್ನಡ ಕಲಿಕೆ, ಬಳಕೆ, ಬೆಳವಣಿಗೆ ಇವೆಲ್ಲ ಮತ್ತೆ ಗಮನಿಸಬೇಕಾದ ಸಂಗತಿಗಳು. ಮೊದಲು ಕನ್ನಡ ಉಳಿಯಲಿ. ಕನ್ನಡದ ಉಳಿವಿಗಾಗಿ ಮತ್ತು ಅದರ ಘನತೆ ಕಾಪಾಡಲಿಕ್ಕಾಗಿ ಠರಾವು ಮಂಡನೆಯಂಥ ಕ್ರಮಗಳು ನಿಷ್ಪ್ರಯೋಜಕ. ಪ್ರಜಾಪ್ರಭುತ್ವವಾದಿ, ಅಹಿಂಸಾವಾದಿ, ಖಚಿತ ಸೈದ್ಧಾಂತಿಕ ನಿಲುವುಗಳುಳ್ಳ ಜನಪರ ಹೋರಾಟ ಸದ್ಯದ ಸಂದರ್ಭದಲ್ಲಿ ಅನಿವಾರ್ಯ. ಕನ್ನಡದ ಬಗ್ಗೆ ಅಭಿಮಾನದಿಂದ ಮಾತನಾಡುವವರ ಬಾಳಿನಲ್ಲಿ ಕನ್ನಡಕ್ಕೆ ಆದ್ಯತೆ ಇರಲಿ!

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಇಂಗ್ಲಿಷ್- ಒಂದರಿಂದಲೋ, ಮೂರರಿಂದಲೋ

☐ ಕೋ. ಚೆನ್ನಬಸಪ್ಪ



ಕರ್ನಾಟಕದಲ್ಲಿ ಕನ್ನಡಕ್ಕೆ ಸಿಗಬೇಕಾದ ಸ್ಥಾನಮಾನವನ್ನು ಕರ್ನಾಟಕ ರಾಜ್ಯವೆ ಹೋರಾಡಿ ಪಡೆಯಬೇಕಾದ ದೌರ್ಭಾಗ್ಯ ನಮ್ಮದು. ರಾಜ್ಯಾಡಳಿತ ಭಾಷೆ ಕನ್ನಡವೆಂದು ಶಾಸನ ಮಾಡಿದಾಗಲೂ ಅಡ್ಡಗಾಲು ಹೊಡೆದರು. ಶಿಕ್ಷಣ ಪ್ರಾಥಮಿಕ ಹಂತದಲ್ಲಿ ಕನ್ನಡ-ಮಕ್ಕಳ ಮಾತೃಭಾಷೆಯಲ್ಲೇ ಆಗಬೇಕೆಂದು ಶಾಸನವನ್ನೆ ಮಾಡಲಾಗಿದೆ. ಆ ಶಾಸನದ ಸಂವಿಧಾನ ಸಿಂಧುತ್ವವನ್ನು ಪ್ರಶ್ನಿಸಿ ಅನ್ಯಭಾಷಿಕರು, ಇಂಗ್ಲಿಷ್ ವ್ಯಾಮೋಹಿ ಪಟ್ಟಭದ್ರ ಹಿತಾಸಕ್ತಿಗಳು ಘನಘೋರ ಕಾನೂನು ಕದನವನ್ನೆ ಹೂಡಿದರು. ಸಂಸ್ಕೃತ ಭಾಷಾ ದುರಂಧರರ ಮುಂದಾಳತ್ವದಲ್ಲಿ ಉರ್ದು ಮುಂತಾದವರು ಸರ್ವೋಚ್ಚ ನ್ಯಾಯಾಲಯದವರೆಗೂ ಹೋರಾಡಿದರು. ಕರ್ನಾಟಕ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಶಿಕ್ಷಣ ಮಾಧ್ಯಮವಾಗಬೇಕೆಂದು ತೀರ್ಪು ನೀಡಿದವು. ಆಗ ಕನ್ನಡ ವಿರೋಧಿಗಳ ಕೈ ಕಟ್ಟಿತು.

ಎಲ್.ಕೆ.ಜಿ.; ಯು.ಕೆ.ಜಿ.ಯಿಂದಲೇ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವ ವಿದ್ಯಾ ವ್ಯಾಪಾರ ಸಂಸ್ಥೆಗಳು ತಮ್ಮ ಅಕ್ರಮ ಗಳಿಕೆಗೆ ಬಾಧಕ ಆಗಬಾರದೆಂದು ಸಂಚು ಮಾಡಿದವು. ಎಲ್.ಕೆ.ಜಿ; ಯು.ಕೆ.ಜಿ. ತರಗತಿಗಳಿಗೆ ವಾರ್ಷಿಕ ಇಪ್ಪತ್ತು ಮೂವತ್ತು... ಸಾವಿರ ರೂಪಾಯಿಗಳ ವಂತಿಗೆ ದರೋಡೆ

127, ವೆಸ್ಟ್‌ಆಫ್ ಕಾರ್ಡ್ ರಸ್ತೆ, 1ನೇ ಮೈನ್, ಮಹಾಲಕ್ಷ್ಮಿಪುರ, ಬೆಂಗಳೂರು-86

ಮಾಡುತ್ತಿದ್ದ ಈ ಸಂಸ್ಥೆಗಳು ಇಂಗ್ಲಿಷನ್ನು ಸರ್ಕಾರೀ, ಖಾಸಗೀ ಶಾಲೆಗಳಲ್ಲೂ ಕಲಿಸಬೇಕೆಂಬ ಬಯಕೆಯನ್ನು ಜನರ ಮನಸ್ಸಿನಲ್ಲಿ ಬಿತ್ತಿ ಅದು ಹುಲುಸಾಗಿ ಬೆಳೆಯುವಂತೆ ನಾನಾ ಋಜುಕುಟಿಲ ಉಪಾಯಗಳನ್ನು ಹೂಡಿದರು. ಇದರ ದುಷ್ಪರಿಣಾಮ ಯಾವ ಮಟ್ಟಕ್ಕೆ ಹೋಯಿತೆಂದರೆ ಸರ್ಕಾರವೂ. ನಗರಪಾಲಿಕೆಗಳೂ ಹೇಳುವಂತೆ ಕನ್ನಡ ಶಿಕ್ಷಣ ಮಾಧ್ಯಮ ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿಯುಂಟಾಯಿತಂತೆ! ಈ ಪರಿಸ್ಥಿತಿಯನ್ನು ಗಮನಿಸಿದ ಕನ್ನಡದ ಉದ್ಧಾರ, ರಕ್ಷಣೆ ಅಭಿವೃದ್ಧಿಗಾಗಿಯೇ ಸ್ಥಾಪಿಸಿದ ಕನ್ನಡದ ಅಭಿವೃದ್ಧಿ ಪ್ರಾಧಿಕಾರ (ಕಅಪ್ರಾ) ಎಂಬ ಸಂಸ್ಥೆ ಹೇಳಿತು: ''ನಾವು ಒಪ್ಪಲಿ ಬಿಡಲಿ ಇಂಗ್ಲಿಷ್ ಕಲಿಕೆಯ ಬಗ್ಗೆ ಬಹುಪಾಲು ಜನರಲ್ಲಿ ವಿಚಿತ್ರ ಆಕರ್ಷಣೆಯಿದೆ. ಆಧುನಿಕ ತಂತ್ರಜ್ಞಾನಗಳು ವಿಸ್ತಾರಗೊಳ್ಳುತ್ತಿರುವ ಈ ಕಾಲದಲ್ಲಿ ಇಂಗ್ಲಿಷ್ ಅನಿವಾರ್ಯವೆಂಬ ಭಾವನೆಯನ್ನು ಬಿತ್ತಲಾಗುತ್ತಿದೆ. ಇಂಗ್ಲಿಷ್ ಕಲಿತರೆ ಉದ್ಯೋಗದ ಅವಕಾಶಗಳು ಹೆಚ್ಚು ಎಂಬ ನಂಬಿಕೆಯನ್ನು ಬೆಳೆಸಲಾಗುತ್ತದೆ. ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸಲು ಅಭ್ಯಂತರವಿಲ್ಲ...'' ಈ ಮಾತನ್ನು ಹೇಳಿದ ಮೇಲೆ ಕಅಪ್ರಾ, ಜನವರಿ 2001 ರಲ್ಲಿ: 'ಇಂಗ್ಲಿಷನ್ನು ಒಂದು ಭಾಷೆಯಾಗಿ ಈಗಿರುವುದಕ್ಕಿಂತ ಮುಂಚೆಯೆ ಕಲಿಸಲು ಪ್ರಾರಂಭಿಸಬಹುದು' ಎಂದು ತೀರ್ಮಾನಿಸಿ ''ಪ್ರಾಥಮಿಕ ಹಂತದ ಮೂರನೆ ತರಗತಿಯಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲು ಪ್ರಾರಂಭಿಸಬೇಕು'' ಎಂಬ ಶಿಫಾರಸನ್ನು ಕ.ಅ.ಪ್ರಾ. ''ಶಿಕ್ಷಣ ಮತ್ತು ಮಾಧ್ಯಮ'' ಎಂಬ ನೀತಿ ನಿರೂಪಣಾ ವರದಿಯಲ್ಲಿ ಮಾಡಿತು. (ನೋಡಿ: ಜನವರಿ 2001 ವರದಿ–ಪುಟ17–18)

ಈ ವರದಿಯಲ್ಲಿ ಮಾಡಿದ ಮೇಲ್ಕಂಡ ಶಿಫಾರಸು, ಇಂದು ಕನ್ನಡಕ್ಕೆ ಶಿಕ್ಷಣ ಮಾಧ್ಯಮಕ್ಕೆ ಬಂದೊದಗಿದ ವಿಪತ್ತಿಗೆ ಮೂಲಕಾರಣ, ವಿಷಬೀಜ. ಇಂಗ್ಲಿಷ್ ವಿದ್ಯಾ ವ್ಯಾಪಾರದ ಉದ್ಯಮಿಗಳು ಬೀಸಿದ ಬಲೆಗೆ ಕನ್ನಡ ವಿರೋಧಿಗಳೆಂಬ ಭಯೋತ್ಪಾದಕರ ದಾಳಿಗೆ ಬಲಿಯಾಗಬೇಕಾದ ದುಃಸ್ಥಿತಿಗೆ ಇದು ಕಾರಣ. ಕನ್ನಡಕ್ಕೆ, ಅದಕ್ಕಿಂತ ಹೆಚ್ಚಾಗಿ ವಿದ್ಯೆ ಕಲಿಯುವ ಮಕ್ಕಳಿಗೆ ವಿಷಪ್ರಾಶನ ಮಾಡಿಸುವ ಪೂತನಿಯ ಕೆಲಸ! ಈ ಮಾತನ್ನು ಕುವೆಂಪು ಐವತ್ತು ವರ್ಷಗಳ ಹಿಂದೆಯೆ ಹೇಳಿದ್ದರು. ಈಗ ಪ್ರೊ. ಜಿ. ವೆಂಕಟಸುಬ್ಬಯ್ಯನವರೂ 'ಸರ್ಕಾರಿ ಶಾಲೆಗಳಲ್ಲಿ ಮೊದಲನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ಉದ್ದೇಶ ಇಷ್ಟೆ: ಕನ್ನಡವನ್ನು ಬಹುಬೇಗ ಸುಲಭವಾಗಿ ಕೊಂದುಹಾಕುವುದಾಗಿದೆ' (ಪ್ರ.ವಾ. 29–5–05 ಪು: 6) ಎಂದು ಹೇಳಿದ್ದಾರೆ. ಅದಕ್ಕೆ ಇನ್ನೊಂದು ಮಾತನ್ನು ಸೇರಿಸಬಹುದು. 'ನಮ್ಮ ಸಂಸ್ಕೃತಿಯ ನಾಶಕ್ಕೆ ನಾಂದಿಯಾಗುತ್ತದೆ.'

ಕ.ಅ.ಪ್ರಾ.ದ 2001ರ ವರದಿ ಕರ್ನಾಟಕ ಸರ್ಕಾರದ ಲಾಂಛನ ಹೊತ್ತು ಮುದ್ರಿತವಾಗಿದೆ. ಆ ವರದಿಯಲ್ಲಿ 'ಇಂಗ್ಲಿಷ್ ಕಲಿಕೆಯ ಬಗ್ಗೆ ಬಹುಪಾಲು ಜನರಲ್ಲಿ ವಿಚಿತ್ರ ಆಕರ್ಷಣೆಯಿದೆ' ಎಂಬುದಾಗಿ ಹೇಳಲಾಗಿದೆ. 'ಬಹು ಪಾಲು ಜನ' ಎಂದರೆ ಆ ಜನರು ಯಾರು? ಶಾಲಾ ಮಕ್ಕಳಂತೂ ಅಲ್ಲ. ಅವರ ಹೆತ್ತವರೆಂದು ಭಾವಿಸಿದರೆ ಆಗ ಸುಮಾರು ಎರಡು ಕೋಟಿ 6–8 ವಯೋಮಿತಿಯ ವಿದ್ಯಾರ್ಥಿಗಳ ಹೆತ್ತವರಲ್ಲಿ 'ಬಹುಪಾಲು' ಎನ್ನಬಹುದೆ? ಹಾಗಾದರೆ ಕ.ಅ.ಪ್ರಾ. ಎಷ್ಟು ಲಕ್ಷ, ಎಷ್ಟು ಸಾವಿರ, ಹೋಗಲಿ ಎಷ್ಟು ನೂರು ಹೆತ್ತವರ ಅಭಿಪ್ರಾಯ ಸಂಗ್ರಹ ಮಾಡಿತು? ಹೆತ್ತವರ ಅಭಿಪ್ರಾಯವನ್ನು ಸಂಗ್ರಹಿಸದಿದ್ದರೆ 'ಬಹುಪಾಲು ಜನ' ಎಂಬ ನಿರ್ಧಾರಕ್ಕೆ ಹೇಗೆ ಬರಲಾಯಿತು? ಆಧಾರವಿಲ್ಲದ ನಿರ್ಧಾರಕ್ಕೆ ಕವಡೆ ಬೆಲೆಯೂ ಇರದು.

ಆಗ ಈ ಶಿಫಾರಸನ್ನು ಯಾರೂ ಗಂಭೀರವಾಗಿ ಗಮನಿಸಲಿಲ್ಲ. ಆದರೆ ಈಗ ಅದನ್ನು ಗಮನಿಸುವುದೊಂದೇ ಅಲ್ಲ, ಬಲವಾಗಿ ಪ್ರತಿಪಾದಿಸಲಾಗುತ್ತಿದೆ. ಸಾರ್ವಜನಿಕರಲ್ಲಿ 'ಶಿಕ್ಷಣ ತಜ್ಞರು'

'ಬುದ್ಧಿಜೀವಿಗಳು', 'ಭಾಷಾವಿಶಾರದರು', 'ಅಧ್ಯಾಪಕ ವಿದ್ವನ್ಮಣಿಗಳು...' ಮುಂತಾದವರು ಒಂದನೆ ತರಗತಿಯಿಂದಲೆ ಇಂಗ್ಲಿಷನ್ನು ಕಲಿಸಬೇಕೆಂದು ಅಬ್ಬರವಾಗಿ ಸದ್ದು ಮಾಡುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣ ಸಚಿವರು ದಿನಾಂಕ 5-05-05ರಂದು ಕ.ಸಾ. ಪರಿಷತ್ತಿನಲ್ಲಿ ಒಂದು ಸಭೆಯನ್ನು ಕರೆದು, ಅಲ್ಲಿಗೆ ಬಂದಿದ್ದವರ ಅಭಿಪ್ರಾಯ ಸಂಗ್ರಹಿಸಿದರು. ದಿನಾಂಕ 31-5ರಂದು ಪತ್ರಿಕಾಗೋಷ್ಠಿಯಲ್ಲಿ: 'ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಕಲಿಕೆಯನ್ನು ಯಾವ ಹಂತದಿಂದ ಕಲಿಸಬೇಕು ಎಂಬುದರ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ಕೈಕೊಂಡು ಮುಂದಿನ ವರ್ಷದಿಂದ ಜಾರಿಗೆ ತರಲಾಗುವುದು' ಎಂದು ಘೋಷಿಸಿವರು (ದಿ. 1-06-05ರ ಪತ್ರಿಕೆ).

ಸಂಪುಟದ ಮುಂದಿನ ಸಾಮಗ್ರಿ ಏನು? ಸಚಿವ ಸಂಪುಟ ನಿರ್ಧಾರ ಕೈಗೊಳ್ಳಲು ಸರಕಾರದ ಮುಂದಿರುವ ತಥ್ಯಾಂಶಗಳ ಸಾಮಗ್ರಿ ಏನು? ಎಳೆ ಮಕ್ಕಳಿಗೆ ಯಾವ ಭಾಷೆಯನ್ನು ಕಲಿಸಬೇಕು ಎಂಬುದನ್ನು ಯಾರು ಹೇಳಲು ಸಮರ್ಥರು? ಹೆತ್ತವರ ಅಭಿಪ್ರಾಯ ಅಗತ್ಯ. ಯಾಕೆಂದರೆ ಎಳೆಯ ಮಕ್ಕಳು ಈ ಬಗ್ಗೆ ಅಭಿಪ್ರಾಯ ಕೊಡಲಾರರು. ಶಿವರಾಮ ಕಾರಂತರಂತೆ 'ಬಾಲವನ'ದಲ್ಲಿ ಆಟ-ಪಾಠ ಕಲಿಸಿದ ಅನುಭವಿಗಳು ಅಭಿಪ್ರಾಯ ವ್ಯಕ್ತಪಡಿಸಬಹುದು. ಇವರೆಲ್ಲರಿಗಿಂತ ಹೆಚ್ಚಾಗಿ ಸ್ವಾನುಭವವುಳ್ಳ ವಿದ್ಯಾವಂತರು, ಗಾಂಧೀಜೀ, ಠಾಕೂರ್, ಡಾ. ರಾಧಾಕೃಷ್ಣನ್, ಕೊಠಾರಿ, ಅಮರ್ತ್ಯಸೇನ್, ಡಾ. ಸಿ.ಎನ್.ಆರ್. ರಾವ್, ಡಾ. ಯು.ಆರ್. ರಾವ್ ಮುಂತಾದ ಮಹನೀಯರ ಸ್ವಾನುಭವದ ಅಭಿಪ್ರಾಯವು ಪ್ರಸ್ತುತ. ಉಳಿದವರ ಮಾತು ವೈಜ್ಞಾನಿಕವಲ್ಲ.

ಇಂಗ್ಲಿಷನ್ನು ಒಂದನೆ ತರಗತಿಯಿಂದಲೆ ಕಲಿಸಬೇಕೆಂಬ ಜನ ಹಾಗೆ ಇಂಗ್ಲಿಷ್ ಕಲಿತವರನ್ನು, ಕಲಿಯದವರನ್ನು ಸಂದರ್ಶಿಸಬೇಕು. ಇಲ್ಲವೆ ಅವರಿಗೆ ಬರೆದು ಅವರ ವಿವರಗಳನ್ನು ಪಡೆಯಬೇಕು. ಇಂಗ್ಲಿಷ್ ಕಲಿತವರು ಕಲಿಯದವರಿಗಿಂತ ಎಷ್ಟು ಉನ್ನತಿ ಸಾಧಿಸಿದ್ದಾರೆ ಎಂಬುದನ್ನು ತಿಳಿಯಬೇಕು. ಇದು ಅಸಾಧ್ಯವೇನೂ ಅಲ್ಲ. ಮೊನ್ನೆ ಫಲಿತಾಂಶ ಪ್ರಕಟವಾದ ಸಿ.ಇ.ಟಿ. ಪರೀಕ್ಷೆಗೆ ಕಟ್ಟಿದ್ದ 85,270 ವಿದ್ಯಾರ್ಥಿಗಳಲ್ಲಿ 24,273 ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಬರೆದಿದ್ದರು! ಅವರಲ್ಲಿ ಗ್ರಾಮೀಣ ವಿದ್ಯಾರ್ಥಿಗಳೆಷ್ಟು? ರ‍್ಯಾಂಕ್ ಪಡೆದವರೆಷ್ಟು? ವೈದ್ಯಕೀಯ, ಎಂಜಿನಿಯರಿಂಗ್, ಆರ್ಕಿಟೆಕ್ಚರ್ ವಿಭಾಗದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಲ್ಲಿ ಒಂದನೆ ತರಗತಿಯಿಂದಲೆ (ಕಾನ್ವೆಂಟ್ ಶಾಲೆಗಳಲ್ಲಿ ಸಿಬಿಎಸ್-ಶಾಲೆಗಳಲ್ಲಿ) ಇಂಗ್ಲಿಷ್ ಕಲಿತವರು ಎಷ್ಟು ಜನ? ಇಲ್ಲವೆ ಪ್ರೌಢಶಾಲೆಯಲ್ಲೂ ಕನ್ನಡ ಶಿಕ್ಷಣ ಮಾಧ್ಯಮದಲ್ಲಿಯೆ ಕಲಿತವರಿಗೂ, ಕೇವಲ ಇಂಗ್ಲಿಷನ್ನೇ ಕಲಿತವರಿಗೂ ಏನು ವ್ಯತ್ಯಾಸ? ಇಂಗ್ಲಿಷ್ ಕಲಿತವರು ಕಲಿಯದವರಿಗಿಂತ ಮುಂದೆ ಸಾಗಿದ್ದರೇ ಎಂಬುದನ್ನು ಇಂಗ್ಲಿಷ್ ಪರ ಇದ್ದವರು ಪರಿಶೀಲಿಸಬೇಕು.

ಕೊನೆಯದಾಗಿ, ತಂತ್ರಜ್ಞಾನ ಬೆಳೆದ ಈ ಕಾಲದಲ್ಲಿ ಇಂಗ್ಲೀಷ್ ಕಲಿಯದಿದ್ದರೆ ಗತ್ಯಂತರವಿಲ್ಲ ಎಂಬ ವಾದ ನಿರಾಧಾರ. ಅಲ್ವಿನ್ ಟಾಫ್ಲರ್ ಎಂಬ ಘನ ತಂತ್ರಜ್ಞಾನ ವಿದ್ವಾಂಸ 50 ವರ್ಷಗಳ ಹಿಂದೆ, ವಿದ್ಯುದ್ವೇಗದಲ್ಲಿ ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನದಿಂದ ಮುಂದೆ, ಓದು, ಬರಹ, ಲೆಕ್ಕಗಳನ್ನು ಶಾಲೆಯಲ್ಲಿ ಕಲಿಯಬೇಕಾದ ಅಗತ್ಯ ಇರುವುದಿಲ್ಲ. ಕ್ರಮೇಣ ಕೈಬರಹ, ಬೆರಳಚ್ಚು, ಪೆನ್ನು, ಪೇಪರ್ ವ್ಯವಹಾರಕ್ಕೆ ಅಗತ್ಯವಾಗುವುದಿಲ್ಲ. ಇಂಗ್ಲೀಷಿನ 26 ಅಕ್ಷರಗಳು ಗೊತ್ತಿದ್ದರೆ ಸಾಕು. ಕಂಪ್ಯೂಟರ್ ಕೀಬೋರ್ಡಿನ ಮೇಲೆ ಬೆರಳಾಡಿಸುವ ಪ್ರಾಥಮಿಕ ಜ್ಞಾನ ಇದ್ದರೆ ಸಾಕು' ಎಂದು ಹೇಳಿದ್ದಾನೆ. ಈ ಮಾತು ಈಗ ದಿಟವಾಗಿರುವುದನ್ನು ಕಾಣುತ್ತಿದ್ದೇವೆ. ಕೇರಳದ ಮೀನು ವ್ಯಾಪಾರಿಗಳು ತಮ್ಮ ಪ್ರಾಥಮಿಕ ಇಂಗ್ಲಿಷ್ ಪರಿಚಯದಿಂದ ವಿದೇಶಗಳಿಗೆ ಮೀನು ರಫ್ತು ಮಾಡುತ್ತಾರೆ!

ಇಂಗ್ಲಿಷ್ ಮಾತನಾಡಲು ಶಾಲೆಯಲ್ಲಿ ಇಂಗ್ಲಿಷ್ ಕಲಿಸಬೇಕೆಂಬುದೇ ಶುದ್ಧ ಅವೈಜ್ಞಾನಿಕ. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ವಾದವನ್ನು ಗೇಲಿ ಮಾಡಲು ನಮ್ಮ ಕುಲಪತಿಗಳೊಬ್ಬರು: 'ಪ್ರಾಥಮಿಕ ಶಾಲೆಯಲ್ಲಿಯೆ ಷೇಕ್ಸ್‌ಪಿಯರ್, ಮಿಲ್ಟನ್, ಷೆಲ್ಲಿ, ಕೀಟ್ಸ್, ಮುಂತಾದವರ ಇಂಗ್ಲಿಷ್ ಸಾಹಿತ್ಯವನ್ನು ಕಲಿಸುವುದೇ ಸರ್ವಶ್ರೇಷ್ಠ' ಎಂದರಂತೆ! ಇದಕ್ಕಿಂತ ಉತ್ತಮವಾಗಿ ಈ ಇಂಗ್ಲೀಷ್ ವ್ಯಾಮೋಹಿಗಳ ನೀರು ಇಳಿಸುವುದು ಸಾಧ್ಯವಿಲ್ಲ.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಇಂಗ್ಲಿಷ್ ಮುಳ್ಳಿಗೆ ಇಂಗ್ಲಿಷ್ ಸೂಜಿ!

☐ ಕೆ.ಟಿ.ಗಟ್ಟಿ



ಬ್ರಿಟಿಷರು ಭಾರತೀಯರಿಗೆ ಇಂಗ್ಲಿಷ್ ಕಲಿಸುವ ವ್ಯವಸ್ಥೆ ಮಾಡಿದ್ದು ಆಡಳಿತೆಯಲ್ಲಿನ ಅನುಕೂಲಕ್ಕೇ ಹೊರತು, ಭಾರತೀಯರಿಗೆ ಅದರಿಂದ ಒಳ್ಳೆಯದಾಗುತ್ತದೆ ಎಂದಲ್ಲ. ಭಾರತವನ್ನು ಸಮರ್ಥವಾಗಿ ಆಳುವುದಕ್ಕೆ ಇಂಗ್ಲೀಷ್ ಅವರ ಕೈಯಲ್ಲಿ ಒಂದು 'ಎಡ್ಮಿನಿಸ್ಟ್ರೇಟಿವ್ ಟೂಲ್' (ಆಡಳಿತ ಸಾಧನ) ಆಗಿತ್ತು. ಸ್ವತಂತ್ರ ಭಾರತದ ಮೊದಲ ದಿನಗಳಲ್ಲಿ ಇಂಗ್ಲಿಷ್ ಎಂಬ 'ಟೂಲ್' ದೊಡ್ಡ ಮಹತ್ವವನ್ನೇನೂ ಪಡೆದಿರಲಿಲ್ಲ. ಔತ್ತರೇಯ ರಾಜಕಾರಣಗಳ ಕುಮ್ಮಕ್ಕಿನಿಂದ ಒಂದು ಹಂತದಲ್ಲಿ ಇಂಗ್ಲಿಷನ್ನು ಓಡಿಸಿ ಆ ಜಾಗದಲ್ಲಿ ಹಿಂದಿಯನ್ನು ಕುಳ್ಳಿರಿಸುವ ಪ್ರಯತ್ನವೂ ನಡೆದಿತ್ತು. ಅದಕ್ಕೆ ದಕ್ಷಿಣ ಭಾರತದಲ್ಲಿ ಉದ್ಭವಿಸಿದ ಸಾರ್ವತ್ರಿಕ ಪ್ರತಿರೋಧದಿಂದಾಗಿ, ರಾಷ್ಟ್ರೀಯ ನೆಲೆಯಲ್ಲಿ ಹಿಂದಿಯೇ ಮುಖ್ಯವಾದರೂ- "ಇಂಗ್ಲಿಷ್ ವಿಲ್ ಕಂಟಿನ್ಯೂ ಟು ಬಿ ಯೂಸ್ಡ್ ಆ್ಯಸ್ ಎ ಲಿಂಕ್ ಲ್ಯಾಂಗ್ವೇಜ್ ಅಮಂಗ್ ದ ಸ್ಟೇಟ್ಸ್" (ರಾಜ್ಯಗಳ ನಡುವಿನ ಸಂಪರ್ಕ ಭಾಷೆಯಾಗಿ ಇಂಗ್ಲಿಷ್‌ನ ಬಳಕೆಯನ್ನು ಮುಂದುವರಿಸಲಾಗುವುದು) ಎಂದೂ ನೆಹರೂ ನೀಡಿದ ಆಶ್ವಾಸನೆ ಮುಖ್ಯವಾಗಿ ಪ್ರತಿರೋಧವನ್ನು ತಡೆಯುವ ಉದ್ದೇಶವನ್ನು ಹೊಂದಿತ್ತು.

'ವನಶ್ರೀ', ಉಜಿರೆ–574 120, ಬೆಳ್ತಂಗಡಿ ತಾಲೂಕು, ದ.ಕನ್ನಡ

ಇತ್ತೀಚೆಗಿನ ದಿನಗಳಲ್ಲಿ ಜಾಗತೀಕರಣ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ನೌಕರಿ ಮಾರುಕಟ್ಟೆ ಬಹಳ ವಿಶಾಲವಾಗಿ, ನೌಕರಿ ಮಾರುಕಟ್ಟೆಯ ಅವಿಭಾಜ್ಯ ಅಂಗವೆನಿಸಿರುವ ಇಂಗ್ಲಿಷ್ ಎಂಬ 'ಟೂಲಿ'ಗೆ ಹೆಚ್ಚಿನ ಬೇಡಿಕೆ ಉಂಟಾಯಿತು. ಹೊಸದಾಗಿ ಸೃಷ್ಟಿಯಾದ ವಿವಿಧ ರೀತಿಯ ನೌಕರಿಗಳನ್ನು ಪಡೆಯುವುದಕ್ಕೋಸ್ಕರ ನೆರವಾಗುವ ಇಂಗ್ಲಿಷ್ ಎಲ್ಲರಿಗೂ ಬೇಕಾಗುವ ಸರಕಾಯಿತು.

ಮೇಧಾಶಕ್ತಿ ಅಥವಾ ಪ್ರತಿಭೆ ಪ್ರಕಾಶಕ್ಕೆ ಬರಲು ಇಂಗ್ಲಿಷ್ ಭಾಷೆಯೇ ಆಗಬೇಕೆಂದಿಲ್ಲ. ಅದಕ್ಕೆ ಯಾವ ಭಾಷೆಯೂ ಆಗುತ್ತದೆ. ವಿಶ್ವದ ಇತರೆಲ್ಲಾ ಭಾಷೆಗಳಂತೆ ಇಂಗ್ಲಿಷ್ ಕೂಡ ಒಂದು ಭಾಷೆ. ಇತರ ಭಾಷೆಗಳು ಇಂಗ್ಲಿಷ್‌ನಂತೆ ಒಂದು ಮಾರಾಟದ ಸರಕಾಗಿಲ್ಲ ಅಷ್ಟೆ. ಇವತ್ತು ಒಳ್ಳೆಯ ಬೆಲೆಯಿರುವ ಈ ಸರಕಿಗೆ ಭಾರತದಲ್ಲಿ ಮಾತ್ರವಲ್ಲ, ಚೀನಾ, ಜಪಾನ್, ರಶ್ಯಾ ಮತ್ತು ಆಫ್ರಿಕದಲ್ಲಿ ಕೂಡ ವಿಶೇಷ ಬೆಲೆಯಿದೆ. ಆದರೆ ಭಾರತದಲ್ಲಿ ಅದು ಒಂದು ಸಾಮಾಜಿಕ ವಿಷವಾಗಿ ಪರಿಣಮಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಬೇಡವೆಂದರೂ ನಮ್ಮ ನಾಲಿಗೆಯ ಮೇಲೆಯೇ ಮೂಡಿಬಿಡುವ ಈ ಇಂಗ್ಲಿಷ್ ಎಂಬ ಭಾಷೆ ಯಾವತ್ತೂ ನಮ್ಮ ಸಂಸ್ಕೃತಿಯ ಭಾಗವಾಗಲಿಲ್ಲ; ಒಂದು ಉಪಯೋಗಕರ ವಸ್ತುವಾಯಿತು ಅಷ್ಟೆ. ಅದನ್ನು ಅತಿಯಾಗಿ ಬಳಸಿಕೊಂಡದ್ದರಿಂದಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಇದು ಒಮ್ಮೆ ಅಮೃತದಂತೆ ತೋರುವ ವಿಷವಾಗಿಯೂ ಇನ್ನೊಮ್ಮೆ ವಿಷದಂತೆ ತೋರುವ ಅಮೃತವಾಗಿಯೂ ಕಾಣಿಸುತ್ತದೆ. ಆರ್ಥಿಕವಾಗಿ ಬಲವುಳ್ಳವರು ಇದನ್ನು ಅಮೃತದಂತೆ ಸವಿಯುತ್ತಾ ದುರ್ಬಲರಿಗೆ– ''ಇದನ್ನು ನಿಮ್ಮಿಂದ ಅರಗಿಸಿಕೊಳ್ಳಲಿಕ್ಕಾಗದು. ನಿಮಗಿದು ವಿಷವಾಗಿ ಪರಿಣಮಿಸೀತು!'' ಎಂದು ಹೇಳುವಂತೆ ಭಾಸವಾಗುತ್ತದೆ. ''ಏನೇ ಆಗಿರಲಿ, ನಿಮಗೆ ಸಿಕ್ಕಿರುವುದು ನಮಗೂ ಬೇಕು'' ಎಂದು ದುರ್ಬಲರು ಹೇಳುತ್ತಿದ್ದಾರೆ. ಯಾಕೆ ಎನ್ನುವುದಕ್ಕೆ ಒಂದೆರಡು ನಿದರ್ಶನಗಳು–

ನಿದರ್ಶನ 1 : ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಶಿಕ್ಷಣ ನೀಡುವ ಹತ್ತಿರ ಹತ್ತಿರ ಒಂದು ಸಾವಿರ ವಿದ್ಯಾರ್ಥಿಗಳಿರುವ ಒಂದು ಶಾಲೆ. ಸುಮಾರು ಐವತ್ತು ವರ್ಷಗಳಿಂದ ಈ ಶಾಲೆ ತನ್ನ ಶಿಕ್ಷಣ ಮಟ್ಟಕ್ಕೆ ಇಡೀ ಜಿಲ್ಲೆಯಲ್ಲಿ ಹೆಸರು ಮಾಡಿದೆ. ಪ್ರತಿವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ಹಲವು ಮಕ್ಕಳು ಉತ್ತಮ ಶ್ರೇಣಿಯಲ್ಲಿ ಪಾಸಾಗಿರುವುದಲ್ಲದೆ, ರ್‍ಯಾಂಕುಗಳನ್ನು ಕೂಡ ಗಳಿಸಿದ್ದಾರೆ. ಇಲ್ಲಿ ಓದಿದವರಲ್ಲಿ ಬಹಳ ಮಂದಿ ಇಂಗ್ಲೆಂಡ್, ಅಮೇರಿಕಾ, ಜಪಾನ್, ಸಿಂಗಾಪುರದಲ್ಲಿ ಇಂಜಿನಿಯರು, ಡಾಕ್ಟರು ಆಗಿ ಕೆಲಸ ಮಾಡುತ್ತಿದ್ದಾರೆ. ಇನ್ನೆಷ್ಟೋ ಮಂದಿ ವಿಜ್ಞಾನಿಗಳಾಗಿ, ಪತ್ರಿಕೋದ್ಯಮಿಗಳಾಗಿ, ಲೇಖಕರಾಗಿ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿದ್ದಾರೆ.

ಏಳು ವರ್ಷಗಳ ಹಿಂದೆ ಇದರ ಪಕ್ಕದಲ್ಲಿಯೇ ಒಂದು ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭವಾಯಿತು. ಈಗ ಈ ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಸಾವಿರದ ಮುನ್ನೂರು ಮಕ್ಕಳಿದ್ದಾರೆ. ಕನ್ನಡ ಮಾಧ್ಯಮದ ಶಾಲೆಯಲ್ಲಿ ಆರು ನೂರು ಮಕ್ಕಳಿದ್ದಾರೆ. ಈ ಇಂಗ್ಲಿಷ್ ಮಾಧ್ಯಮ ಶಾಲೆಯ 'ಉತ್ಕೃಷ್ಟತೆ'ಯ ಸುದ್ದಿಯಿಂದಾಗಿ ಸುಮಾರು ಹದಿನೈದು ಚದರ ಮೈಲಿ ವಿಸ್ತಾರದೊಳಗೆ ಇರುವ ಬೇರೆ ಎರಡು ಹೈಸ್ಕೂಲುಗಳು ಇನ್ನೆರಡು ವರ್ಷಗಳಲ್ಲಿ ಮುಚ್ಚಿಕೊಳ್ಳಬಹುದೆನ್ನುವ ಸ್ಥಿತಿಯಲ್ಲಿವೆ. ಅಧ್ಯಾಪಕರು ಮನೆಗೆ ಹೋಗಬೇಕಾದೀತು ಎಂದು ಜನರಾಡಿಕೊಳ್ಳುತ್ತಿದ್ದಾರೆ. ಹೈಸ್ಕೂಲುಗಳು ಮಾತ್ರವಲ್ಲ, ಸುತ್ತಮುತ್ತಲಿನ ಪ್ರೈಮರಿ ಶಾಲೆಗಳು ಕೂಡ ಮುಚ್ಚಿಕೊಳ್ಳಬಹುದು. ಮಕ್ಕಳನ್ನು ಎಷ್ಟು ದೂರದಿಂದ ಬೇಕಾದರೂ ತರಲು

ಇಂಗ್ಲಿಷ್ ಮಾಧ್ಯಮ ಶಾಲೆ ಬಸ್ ವ್ಯವಸ್ಥೆ ಮಾಡಿದೆ. ಅಲ್ಲದೆ, ಜೀಪುಗಳು, ವ್ಯಾನುಗಳು, ಆಟೋಗಳು ಅವರ ಸೇವೆಗೆ ಸದಾ ಸಿದ್ಧ. ಒಂದು ಸಣ್ಣ ಸಂಖ್ಯೆಯ ಮಂದಿ ತಮಗೇ ಗೊತ್ತಿಲ್ಲದೆ ಒಟ್ಟಾಗಿ ನಡೆಸುವ ಈ 'ಗ್ಲಾಮರಸ್ ದಂಧೆ' ಮುಂದೊಂದು ದಿನ ಏನಾಗಿ ಕೊನೆ ಕಾಣಬಹುದು ಎಂದು ಯೋಚಿಸುವವರು ಯಾರೂ ಇಲ್ಲ. ಇಷ್ಟಕ್ಕೂ ಕನ್ನಡ ಶಾಲೆಯಲ್ಲಿ ಕನ್ನಡದಲ್ಲಿ ನಡೆಯುವುದು ಇಲ್ಲಿ ಇಂಗ್ಲೀಷ್‌ನಲ್ಲಿ ನಡೆಯುತ್ತಿದೆ ಎಂಬುದರ ಹೊರತು, ಇಂಗ್ಲಿಷ್ ಮಾಧ್ಯಮದ ವಿಶೇಷ ಸಾಧನೆ ಏನು, ಇಲ್ಲಿ ಓದಿಸುವ ತಮ್ಮ ಮಕ್ಕಳಿಗೆ ದೊರೆಯುವಂಥ 'ವಿಶೇಷ'ವಾದುದು ಏನು ಎಂದು ಹೆಚ್ಚಿನ ತಾಯಿ-ತಂದೆಯರಿಗೆ ತಿಳಿಯದು. ಕನ್ನಡ ಮಾಧ್ಯಮದಲ್ಲಿ ಓದಿದವರಲ್ಲಿ ವರ್ಷದಲ್ಲಿ ಐದು ಮಂದಿ ಇಂಜಿನಿಯರಿಂಗಿಗೆ ಹೋದರೆ, ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರಲ್ಲಿ ಮೂವತ್ತು ಮಂದಿ ಇಂಜಿನಿಯರಿಂಗಿಗೆ ಹೋಗುತ್ತಾರೆ. ಒಂದು ವೇಳೆ ಇಂಗ್ಲಿಷ್ ಮಾಧ್ಯಮವೆಂಬುದಿಲ್ಲದಿದ್ದರೆ, ಕನ್ನಡ ಮಾಧ್ಯಮದಲ್ಲಿ ಓದಿದವರಲ್ಲಿ ಮೂವತ್ತೈದು ಜನ ಇಂಜಿನಿಯರಿಂಗಿಗೆ ಹೋಗುತ್ತಿದ್ದರು ಎಂಬ ವಿಚಾರ ಬಹಳ ತಾಯಿ-ತಂದೆಯರಿಗೆ ಹೊಳೆಯುವುದೇ ಇಲ್ಲ!

ನಿದರ್ಶನ 2 : ಗ್ರಾಮೀಣ ಪ್ರದೇಶದ ಒಂದು ಪಟ್ಟಣದಲ್ಲಿರುವ ಕಾಲೇಜು. ಅಲ್ಲಿ ಒಬ್ಬಳು ಐಶ್ವರ್ಯಾ (ಹೆಸರು ಬದಲಿಸಿದೆ) ಎಂಬ ಹುಡುಗಿ ಇಂಗ್ಲಿಷ್ ಉಪನ್ಯಾಸಕಿಯಾಗಿ ಈಗಷ್ಟೇ ನೇಮಕಗೊಂಡಿದ್ದಾಳೆ. ಅದೇ ಜಿಲ್ಲೆಯಲ್ಲಿ ಸುಮಾರು 30-40 ವರ್ಷಗಳಿಂದ ಬರವಣಿಗೆಯ ಮೂಲಕ ಬಹಳ ಪ್ರಸಿದ್ಧರಾಗಿರುವ ನಾಲ್ಕೈದು ಕನ್ನಡ ಲೇಖಕರಿದ್ದಾರೆ. ಇಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಕೂಡ ಅದ್ಭುತವಾಗಿ ನಡೆಯುತ್ತಿವೆ. ಈ ಹುಡುಗಿಯೊಡನೆ ಮಾತಾಡಿದಾಗ ತಿಳಿದು ಬರುವ ವಿಚಾರವೆಂದರೆ, ಈಕೆಗೆ ಕನ್ನಡ ಸಾಹಿತ್ಯ ಪರಿಷತ್ತು ಎಂಬ ಸಂಸ್ಥೆಯ ಬಗ್ಗೆ ಏನೂ ತಿಳಿಯದು. ತನ್ನ ಜಿಲ್ಲೆಯ ಈ ಲೇಖಕರ ಹೆಸರನ್ನು ಕೂಡ ಆಕೆಗೆ ಕೇಳಿ ಗೊತ್ತಿಲ್ಲ, ಕೇಳಿಲ್ಲ. ಕನ್ನಡ ಪತ್ರಿಕೆ, ಪುಸ್ತಕ ಅವಳು ಓದುವುದಿಲ್ಲ. ತಾನು ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಮೀಡಿಯಮ್‌ನಲ್ಲಿ ಓದಿದ್ದು ಎಂದು ನಯವಾಗಿ, ಆದರೆ ಬಹಳ ಕಷ್ಟದಿಂದ ಕನ್ನಡದಲ್ಲಿ ಉತ್ತರಿಸುತ್ತಾಳೆ. ಈಕೆಯ ಮನೆಮಾತು ಕನ್ನಡ ಎನ್ನುವುದು ಇಲ್ಲಿ ಅಷ್ಟೇನೂ ಮುಖ್ಯ ಎನಿಸಲಿಕ್ಕಿಲ್ಲ. ಆದರೆ ಗ್ರಾಮೀಣ ಪ್ರದೇಶದ ಒಂದು ಪುಟ್ಟ ಪಟ್ಟಣದಲ್ಲಿ ಹುಟ್ಟಿ ಬೆಳೆದವಳು ಎನ್ನುವುದು ಮುಖ್ಯವೆನಿಸುತ್ತದೆ. (ಕನ್ನಡದಲ್ಲಿ ಹಲವಾರು ಕೃತಿಗಳನ್ನು ರಚಿಸಿರುವ ಲೇಖಕಿಯೊಬ್ಬರಿದ್ದಾರೆ. ಅವರು ಪಂಜಾಬಿ, ಅವರ ಗಂಡನೂ ಪಂಜಾಬಿ. ಕಾಲೇಜು ಓದಿರುವ ಅವರ ಮಗಳು ಸುಂದರವಾದ ಕನ್ನಡದಲ್ಲಿ ಮಾತಾಡುತ್ತಾಳೆ! ಸತ್ಯ ಸಂಗತಿ ಎಂದರೆ, 'ಮಾತೃಭಾಷೆ' ಎಂಬ ಪದದ ಕುರಿತು ನಮ್ಮಲ್ಲಿರುವ ಗೊಂದಲಕ್ಕೆ ಭಾಷಾ ತಜ್ಞರಿಂದ ಸೂಕ್ತವಾದ ಪರಿಹಾರ ಸಿಕ್ಕಿಲ್ಲ.)

ಇಲ್ಲಿ ಏಳುವ ಮುಖ್ಯವಾದ ಪ್ರಶ್ನೆ- ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಐಶ್ವರ್ಯಾಳೇ ಕನ್ನಡವನ್ನು ಕಣ್ಣೆತ್ತಿಯೂ ನೋಡಿಲ್ಲ ಎನ್ನುವುದಾದರೆ, 'ಆಂಗ್ಲ' ಮಾಧ್ಯಮದಲ್ಲಿ ಓದಿ ಎಂಜಿನಿಯರಾಗಿ ನೆಲಬಿಟ್ಟು ಹೋದವರು ಕನ್ನಡಕ್ಕೆ ಶಾಶ್ವತವಾಗಿ ನಷ್ಟವಾದಂತೆಯೇ ಅಲ್ಲವೆ? 'ಹೋಗಲಿ ಅವರು ಹೋದಲ್ಲಿಗೆ' ಎನ್ನೋಣ. ಭಾಷೆಗಿಂತ ಬದುಕು ಮುಖ್ಯ ಎನ್ನೋಣ. ಆದರೆ ಈ ನೆಲದಲ್ಲಿಯೇ ಉಳಿದು ಕನ್ನಡ ಭಾಷೆ ಅರ್ಥಾತ್ ಕನ್ನಡ ಸಂಸ್ಕೃತಿಯ ಜತೆಗೆ ಬದುಕುವ ಎಷ್ಟು ಲಕ್ಷ ಬುದ್ಧಿವಂತರು, ಮೇಧಾವಿಗಳು, ಪ್ರತಿಭಾವಂತರು ಈ ಹುಡುಗಿಯ ಹಾಗೆ ಕನ್ನಡಕ್ಕೆ ಇಲ್ಲವಾಗಿ ಹೋದರು ಎನ್ನುವುದನ್ನು ಲೆಕ್ಕಹಾಕಿ

ನೋಡಿದರೆ, ಇದು ಎಷ್ಟು ದೊಡ್ಡ ನಷ್ಟ ಎಂದು ಅರ್ಥ ಮಾಡಿಕೊಳ್ಳಬಹುದು. ಈ ನಷ್ಟ ಸ್ವತಃ ಒಂದು ದಿನ ಅವರನ್ನೂ ಬಾಧಿಸಬಹುದು ಎನ್ನುವುದು ಇನ್ನೊಂದು ಸತ್ಯ.

ನಿದರ್ಶನ 3 : ರಾಮಣ್ಣ ಮತ್ತು ಕೃಷ್ಣಪ್ಪ ಸಮಾನವಾಗಿ ಬಡವರು. ಇಬ್ಬರೂ ವಿದ್ಯಾಪ್ರೇಮಿಗಳು, ಪ್ರಜ್ಞಾವಂತರು. ರಾಮಣ್ಣ ತನ್ನ ಮಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸುತ್ತಾನೆ. ಕೃಷ್ಣಪ್ಪ ಕನ್ನಡ ಮಾಧ್ಯಮದಲ್ಲಿ ಓದಿಸುತ್ತಾನೆ. ಇಬ್ಬರಿಗೂ ತಮ್ಮ ಮಕ್ಕಳನ್ನು ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿಗೆ ಕಳಿಸುವ ಆರ್ಥಿಕ ಸಾಮರ್ಥ್ಯವಿಲ್ಲ. ಇಬ್ಬರು ಹುಡುಗಿಯರೂ ಬಿ.ಕಾಮ್.ವರೆಗೆ ಓದುತ್ತಾರೆ. ಕೃಷ್ಣಪ್ಪನ ಮಗಳು ಸಾವಿತ್ರಿ 72 ಪರ್ಸೆಂಟ್ ಮಾರ್ಕು ಪಡೆಯುತ್ತಾಳೆ. ರಾಮಣ್ಣನ ಮಗಳು ಪ್ರಿಯಾಂಕಾ 58 ಪರ್ಸೆಂಟ್ ಮಾರ್ಕು ಪಡೆಯುತ್ತಾಳೆ. ಇಬ್ಬರೂ ಒಂದು ವರ್ಷದ ಒಂದು ಕಂಪ್ಯೂಟರ್ ತರಬೇತಿ ಕೋರ್ಸು ಕೂಡ ಮಾಡಿರುತ್ತಾರೆ. ಅದರಲ್ಲಿಯೂ ಸಾವಿತ್ರಿ 'ಎ ಪ್ಲಸ್' ಗ್ರೇಡ್ ಪಡೆಯುತ್ತಾಳೆ. ಪ್ರಿಯಾಂಕಾ 'ಬಿ ಪ್ಲಸ್' ಗ್ರೇಡ್ ಪಡೆಯುತ್ತಾಳೆ. ಇಬ್ಬರೂ ಒಂದು ಬ್ಯಾಂಕಿನಲ್ಲಿ ನೌಕರಿಗೆ ಅರ್ಜಿ ಹಾಕುತ್ತಾರೆ. ಇಂಟರ್‌ವ್ಯೂ ಇಂಗ್ಲಿಷ್‌ನಲ್ಲಿ ನಡೆಯುತ್ತದೆ. ಪ್ರಿಯಾಂಕಾಳಿಗೆ ನೌಕರಿ ಸಿಗುತ್ತದೆ, ಸಾವಿತ್ರಿಗೆ ಸಿಗುವುದಿಲ್ಲ.

ತಮ್ಮ ಮಕ್ಕಳನ್ನು ಎಂಜಿನಿಯರಿಂಗ್, ಮೆಡಿಕಲ್, ಎಂಬಿಎ ಮುಂತಾದ ಕೋರ್ಸುಗಳಿಗೆ ಕಳಿಸಲಾಗದ ರಾಮಣ್ಣ ಮತ್ತು ಕೃಷ್ಣಪ್ಪನಂಥವರೇ ಸಮಾಜದಲ್ಲಿ ಬಹುಸಂಖ್ಯಾತರು. ಉತ್ಕೃಷ್ಟ ಉದ್ಯೋಗ, ವೃತ್ತಿಯನ್ನು ಪಡೆಯುವುದು ಆರ್ಥಿಕವಾಗಿ ಎತ್ತರದ ಸ್ತರದಲ್ಲಿರುವವರಿಗೆ ಮಾತ್ರ ಸಾಧ್ಯ ಎಂದು ಈ ಬಹುಸಂಖ್ಯಾತರಿಗೆ ತಿಳಿದಿದೆ. ಸಾಮಾನ್ಯ ಮಟ್ಟದ ಒಂದು ನೌಕರಿ ಪಡೆಯುವಲ್ಲಿ ಕೂಡ ಅರ್ಹತೆ ಮತ್ತು ಬುದ್ಧಿಮತ್ತೆಯನ್ನು ಇಂಗ್ಲಿಷ್ ಭಾಷೆ ಹಿಂದಕ್ಕೆ ಹಾಕುತ್ತದಲ್ಲಾ. ''ನನ್ನ ಮಗಳಿಗೆ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಸಿಕ್ಕಿದರೆ, ಅವಳು ನಿಜವಾಗಿಯೂ ಬುದ್ಧಿವಂತಳಿರುವುದರಿಂದ ಇಂಗ್ಲಿಷನ್ನೂ ಕೂಡ ಚೆನ್ನಾಗಿ ಕಲಿತುಕೊಳ್ಳಬಹುದಿತ್ತು. ಯಾವುದಾದರೊಂದು ನೌಕರಿಯನ್ನು ಪಡೆಯಲು ಅನುಕೂಲವಾಗುತ್ತಿತ್ತು'' ಎನ್ನುವುದು ಕೃಷ್ಣಪ್ಪನಂಥವರ ಅಳಲು.

ನಗರಗಳಲ್ಲಿ ವರ್ಷಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಬಲ್ಲ ಉತ್ಕೃಷ್ಟ ಮಟ್ಟದ ಪೌರರಿಗೆ ಉತ್ಕೃಷ್ಟವಾದ ಉದ್ಯೋಗ ಹಿಂದೆಯೂ ಸಿಗುತ್ತಿತ್ತು, ಈಗಲೂ ಸಿಗುತ್ತಿದೆ. ಖರ್ಚು ಮಾಡಲು ಸಾಧ್ಯವಿರುವ ಅಂಥವರಿಗಾಗಿ 'ಆಂಗ್ಲ' ಮಾಧ್ಯಮ ಮತ್ತು 'ಇಂಗ್ಲಿಷ್' ಮಾಧ್ಯಮ ಶಾಲೆಗಳು ಮಹಾನಗರಗಳ ಸರಹದ್ದಿನಲ್ಲಿ ಮಾತ್ರವಲ್ಲ, ಸಾಮಾನ್ಯ ಪಟ್ಟಣದಲ್ಲಿಯೂ ತಲೆಯೆತ್ತಿವೆ, ಕೆಲವು ಕಡೆ ಕುಗ್ರಾಮ ಹಳ್ಳಿಗೂ ಬಂದಿವೆ.

ಆದರೆ ಈ ವರ್ಷ ಕನ್ನಡದ ಶಾಲೆಗೆ ಇಂಗ್ಲಿಷ್ ಬಂದರೆ, ತಮ್ಮ ಮಗುವನ್ನು ಹತ್ತಿರದ ಶಾಲೆಗೆ ಕಳಿಸುವುದು ಎಂದುಕೊಂಡಿದ್ದ 'ಅನುಕೂಲಸ್ಥರು' ದೂರದ ಇಂಗ್ಲಿಷ್ ಸ್ಕೂಲಿಗೆ ಸೇರಿಸಿದ್ದಾರೆ. ''ಶಿಕ್ಷಣ ವರ್ಷ ಆರಂಭವಾಗಿರುವುದರಿಂದ, 'ಕನ್ನಡ ಶಾಲೆ'ಗಳಲ್ಲಿ ಒಂದನೆಯ ತರಗತಿಯಿಂದ ಈ ವರ್ಷವೇ ಇಂಗ್ಲಿಷ್ ಕೊಡುವ ವಿಚಾರ ಇಲ್ಲವೇ ಇಲ್ಲ'' ಎಂದು ಶಿಕ್ಷಣ ಸಚಿವರು ಹೇಳಿದ್ದಾರೆ. ಶೈಕ್ಷಣಿಕ ವರ್ಷ ಅವರಿಗೆ ಗೊತ್ತಿಲ್ಲದೆ ಆರಂಭವಾಗಿರುವುದರಿಂದ ಶೈಕ್ಷಣಿಕ ವರ್ಷ ಕನ್ನಡ ಮಕ್ಕಳಿಗೇ ಇನ್ನೂ ಆರಂಭವಾಗಿಲ್ಲ. 'ಬಂದೆ ಬಂದೆ' ಎನ್ನುತ್ತಾ ಶಾಲೆಯ ಹೊಸ್ತಿಲ ಬಳಿಗೆ ಕೂಡ ಬರದಿರುವ ಇಂಗ್ಲಿಷ್‌ಗೆ ಮಾತ್ರ ಶೈಕ್ಷಣಿಕ ವರ್ಷ ಆರಂಭವಾಗಿಬಿಟ್ಟಿದೆ ಎಂದರೆ ಎಂಥ ವಿರೋಧಾಭಾಸ!

ಒಂದನೆಯ ತರಗತಿಯಲ್ಲಿ ಇಂಗ್ಲಿಷ್ ಅಂದರೇನು, ಇಂಗ್ಲೆಂಡಿನ ಸಿಲಿಬಸ್ ಪ್ರಕಾರ ಪಾಠ ಮಾಡುವುದೆ? ಒಂದನೆಯ ತರಗತಿಯಲ್ಲಿ 'ದಿಸ್ ಈಸ್ ಮೈ ಪೆನ್', 'ದ್ಯಾಟ್ ಈಸ್ ಯುವರ್ ಬ್ಯಾಗ್', 'ದಿಸ್ ಈಸ್ ದ ರೋಡ್ ಟು ದ ಮಾರ್ಕೆಟ್' ಎಂದು ನೂರಿನ್ನೂರು ವಾಕ್ಯಗಳನ್ನು ಮಕ್ಕಳ ಕಿವಿಯ ಮೇಲೆ ಬೀಳಿಸಿದರೆ ಸಾಕು. ಅವರದನ್ನು ಹೇಳಲು ಕಲಿತರೆ ಸಾಕು. ಅಷ್ಟು ಮಾಡಿದರೆ, 'ಕನ್ನಡ ಮಕ್ಕಳಿ'ಗೆ ಕೂಡ 'ಇಂಗ್ಲಿಷ್ ಮಕ್ಕಳ' ಹಾಗೆ ಬೀದಿಯಲ್ಲಿ ಇಂಗ್ಲಿಷ್ ಪ್ರದರ್ಶಿಸಲು ಸಾಧ್ಯವಾಗುತ್ತದೆ. ಅಷ್ಟರಿಂದ ಅವರ ಸ್ವಂತ ಕನ್ನಡಕ್ಕೆ ಯಾವ ಅಪಾಯವೂ ಆಗುವುದಿಲ್ಲ. ಡಿಸೆಂಬರ್ ತಿಂಗಳಾದರೂ ಅಡ್ಡಿ ಇಲ್ಲ. ಒಟ್ಟಿನಲ್ಲಿ ಇಂಗ್ಲಿಷ್ ಅಂತ ಒಂದು ಭಾಷೆ ಉಂಟು, ಅದು ಹೀಗೆ ಉಂಟು ಅಂತ ಒಂದನೆಯ ತರಗತಿಯ 'ಕನ್ನಡ ಮಕ್ಕಳಿ'ಗೆ ತಿಳಿಯಬೇಕು. ಇಂಗ್ಲಿಷ್ ಶಾಲೆಗಳಲ್ಲಿ ಕಲಿಸುವ ಇಂಗ್ಲಿಷ್‌ನ ಮಟ್ಟ ಏನೆಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದಲೇ ಕಾಲೇಜು ಸೇರಿದ ಬಳಿಕ ಅವರು ಬೌದ್ಧಿಕವಾಗಿ ಹಿಂದೆ ಬೀಳುವುದಾಗಿದೆ! ಕನ್ನಡ ಶಾಲೆಯಲ್ಲಿ ಇಂಗ್ಲಿಷ್ ಕಲಿಸುವ ವಿಚಾರ ಎತ್ತಿದಾಗ ಅವರಿಗೆ 'ಕಿಂಗ್ಸ್ ಇಂಗ್ಲಿಷ್' ಕಲಿಸಬೇಕು ಎನ್ನುವಂತೆ ಇಂಗ್ಲಿಷ್ ತಿಳಿದವರು ಮಾತಾಡುವುದು ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಂತ ಹಾಸ್ಯಾಸ್ಪದ. ಇಂಟರ್‌ನೆಟ್‌ನ ಕೆಟ್ಟ ಇಂಗ್ಲಿಷ್ ವಿಜೃಂಭಿಸುತ್ತಿರುವ ಈ ದಿನಗಳಲ್ಲಿ ಇಂಗ್ಲೆಂಡ್, ಅಮೇರಿಕಾದಲ್ಲಿಯೇ ಮೆಕಾಲೆಯ ಅಥವಾ ಚರ್ಚಿಲನ ಕಾಲದ ಇಂಗ್ಲಿಷ್ ಇಲ್ಲ!

ಇಂಗ್ಲಿಷ್ ಪಂಡಿತರು ಹೇಳುವ 'ಎ ಗ್ರೇಡ್' ಐದನೆಯ ತರಗತಿಯಿಂದಲೇ ಬರಲಿ. ಈಗ ಅವರಿಗೆ ನೆರೆಕರೆಯಲ್ಲಿರುವ ತುಳು, ಕೊಂಕಣಿ, ಮಲೆಯಾಳದ ಹಾಗೆ ಇಂಗ್ಲಿಷ್ ಎಂಬುದು ಕೂಡ ಸಿಗಲಿ. ಇಂಗ್ಲಿಷನ್ನು ಕೂಡ ಅವರು ಆಟದಲ್ಲಿ, ಆಟಕ್ಕೆ, ಆಟದಂತೆ ಆಡಲಿ. ಎರಡನೆಯ ತರಗತಿಯ ಬಳಿಕ ಅವರು ಓದಲಿ, ಬರೆಯಲಿ ಮತ್ತೇನಾದರೂ ಮಾಡಲಿ. ಈಗ ಅವರು ಕೂಡ ಇಂಗ್ಲಿಷ್ ಮಕ್ಕಳಂತೆ ಟಸ್ ಪುಸ್ ಎನ್ನಲಿ, ಅವರ ಕೀಳರಿಮೆ ತೊಲಗಲಿ. ಕನ್ನಡ ಮಾಧ್ಯಮವನ್ನು 'ನಮ್ಮ ಪ್ರಾರಬ್ಧ' ಎಂದುಕೊಳ್ಳದೆ ಪ್ರೀತಿಯಿಂದ ಕಲಿಯಲಿ. ಕನ್ನಡವನ್ನು ಬಡತನಕ್ಕೆ ಮತ್ತು ಹಿಂದುಳಿಯುವಿಕೆಗೆ ತಳಕು ಹಾಕಿಕೊಳ್ಳದಿರಲಿ. ಅಷ್ಟು ಸಾಕು. ಇಷ್ಟಕ್ಕೇ ಬುದ್ಧಿಜೀವಿಗಳು ಮಕ್ಕಳ ಮನೋವಿಜ್ಞಾನದ ವಿಚಾರ ಕೈಗೆತ್ತಿಕೊಂಡು ಗಾಬರಿ ಬೀಳುವುದು ಯಾಕೆ? ಮಕ್ಕಳ ವಿಚಾರಶಕ್ತಿ, ಸೃಜನಶೀಲ ಶಕ್ತಿ ಅವರ ಮಾತೃಭಾಷೆಯಲ್ಲೇ ಬೆಳೆಯುವುದು, ಯಾರು ಅಲ್ಲವೆನ್ನುತ್ತಾರೆ? ಇಷ್ಟರಿಂದ ಅದಕ್ಕೆ ಏನೂ ತೊಂದರೆಯಾಗುವುದಿಲ್ಲ. ಇಡೀ ಭಾರತದಲ್ಲಿ ಗಾಂಧೀಜಿ, ನೆಹರೂ, ಅಂಬೇಡ್ಕರ್, ರಾಧಾಕೃಷ್ಣನ್‌ರಿಂದ ತೊಡಗಿ ಎಪಿಜೆ ಅಬ್ದುಲ್ ಕಲಾಮ್ ತನಕ ತಮ್ಮ ಹಿರಿಯ ತಲೆಮಾರಿನ ಲೇಖಕರು, ವಿಜ್ಞಾನಿಗಳು, ಚಿಂತಕರು ಎಲ್ಲರೂ ಹೀಗೇ ಕಲಿತದ್ದು. ಇಂಗ್ಲಿಷ್‌ನಿಂದ ಅವರೆಲ್ಲರಿಗೂ ಪ್ರಯೋಜನವೇ ಆಗಿತ್ತಲ್ಲ? ಅವರ ಸ್ವಂತ ಭಾಷೆ ಅವರ ಜೀವಸತ್ವವೇ ಆಗಿತ್ತಲ್ಲ?

ನಿಜವಾದ ನಷ್ಟ ತುಂಬಲಾಗದ ನಷ್ಟ ಆಗಿರುವುದು ನಮ್ಮ ಕನ್ನಡ ಸಾಹಿತ್ಯ ಲೋಕಕ್ಕೆ. ಕಳೆದ 20-25 ವರ್ಷಗಳಿಂದ ಕನ್ನಡದ ಲಕ್ಷಾಂತರ ಬುದ್ಧಿವಂತ ಹುಡುಗ- ಹುಡುಗಿಯರು 'ಇಂಗ್ಲಿಷ್ ಹುಡುಗ', 'ಇಂಗ್ಲಿಷ್ ಹುಡುಗಿ'ಯರಾಗಿ ಕನ್ನಡವನ್ನು ಓದದವರಾಗಿ ಬದಲಾದರಲ್ಲಾ, ಇಂಗ್ಲಿಷ್ ಮಾಧ್ಯಮದ ಶಾಲೆಗಳು ಮಕ್ಕಳ ಮನಸ್ಸಿನಲ್ಲಿ ಕನ್ನಡವನ್ನು ಕೀಳಾಗಿ ಕಾಣುವ ಮನೋಭಾವವನ್ನುಂಟುಮಾಡಿದರಲ್ಲಾ; ಅದರಿಂದಾಗಿ ಸಾವಿರಾರು ಮನಸ್ಸುಗಳು ಸಾಂಸ್ಕೃತಿಕವಾಗಿ ಕಲುಷಿತವಾದುವಲ್ಲಾ, ಇದು ಬಹಳ ದೊಡ್ಡ

ನಷ್ಟ. ಇಂಗ್ಲಿಷ್ ಮಾಧ್ಯಮದಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಪ್ರೀತಿಯನ್ನು ಬೆಳೆಸುವುದು ಸಾಧ್ಯವಿರಲಿಲ್ಲವೇ? ಅಗತ್ಯವಿರಲಿಲ್ಲವೇ? ಇಂಗ್ಲಿಷ್ ಮಾಧ್ಯಮದಲ್ಲಿ ಓದುವ ಮಕ್ಕಳನ್ನು ಮತ್ತು ಅವರ ಮನೆಯವರನ್ನು ಕನ್ನಡಕ್ಕೆ ಪರಕೀಯರು ಎನ್ನುವಂಥ ಪರಿಸರ ಸೃಷ್ಟಿಯಾಯಿತಲ್ಲಾ ಅದು ಇನ್ನೂ ದೊಡ್ಡ ನಷ್ಟ.

ಇಂಗ್ಲಿಷ್ ಸಿಕ್ಕಿಬಿಟ್ಟರೆ ಕೇವಲ ಅದರ ಬಲದಿಂದ ತಮ್ಮ ಮಕ್ಕಳಿಗೆ ಇಂಜಿನಿಯರಿಂಗ್ ಓದಿಸಲು ಸಾಧ್ಯವಿಲ್ಲ ಅಂತ ಬಡವರಿಗೆ ಗೊತ್ತಿದೆ. ಅವರ ಬೇಸರ ಮುಖ್ಯವಾಗಿ, ಈ ಟಸ್‌ಪುಸ್ ಇಂಗ್ಲಿಷ್‌ನ ದೆಸೆಯಿಂದ ತಮ್ಮ ಮಕ್ಕಳಿಗೆ ಚಿಕ್ಕ-ಪುಟ್ಟ ನೌಕರಿಗಳೂ ಕೂಡ ಸಿಗುತ್ತಿಲ್ಲವಲ್ಲಾ ಎಂಬುದು. ಆದ್ದರಿಂದ ಅವರು ಆ ಇಂಗ್ಲಿಷ್ ತಮ್ಮ ಮಕ್ಕಳಿಗೆ ಕೂಡ ಸಿಗಲಿ ಎಂದು ಆಸೆಪಡುವುದು ಸ್ವಾಭಾವಿಕವೇ ಆಗಿದೆ. 'ಶೈಕ್ಷಣಿಕ ವರ್ಷ ಆರಂಭವಾಗಿಬಿಟ್ಟಿದೆ' ಎಂದು ಶಿಕ್ಷಣ ಸಚಿವರು ಕುಂಟು ನೆಪ ನೀಡುವುದು ಬೇಡ. ಒಂದನೆಯ ತರಗತಿಗೆ ಇಂಗ್ಲಿಷ್ ಆಗಸ್ಟ್‌ನಲ್ಲಿ ಕೊಟ್ಟರೂ ಸಾಕು, ಡಿಸೆಂಬರ್‌ನಲ್ಲಿ ಕೊಟ್ಟರೂ ಸಾಕು.

'ಅನುಕೂಲಸ್ಥರ' ಸಂಖ್ಯೆ ಮತ್ತು ಹೇಗಾದರೂ ಅನುಕೂಲಸ್ಥರೆನಿಸಿಕೊಳ್ಳಬೇಕು ಎನ್ನುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿರುವುದಕ್ಕೆ ಇಂಗ್ಲಿಷ್ ಶಾಲೆಗಳ ಸಂಖ್ಯೆ ಏರುತ್ತಿರುವುದು ಕೂಡ ಒಂದು ನಿದರ್ಶನ. ಇದರ ಪರಿಣಾಮವಾಗಿ ಈಗಾಗಲೇ ಸೊರಗುತ್ತಿರುವ ಕನ್ನಡ ಶಾಲೆಗಳು ನಾಳೆ ಬಾಗಿಲು ಮುಚ್ಚಿಕೊಳ್ಳಬಹುದು. ಈಗ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಹೈಸ್ಕೂಲು ಶಿಕ್ಷಕರು ಕೂಡ ಕೆಲಸ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಬಹುದು. ಆದ್ದರಿಂದ ಅವರು ತಮ್ಮ ಇಂಗ್ಲಿಷನ್ನು ಉತ್ತಮಪಡಿಸಿಕೊಂಡು ಅಲ್ಲಿಂದ-ಇಲ್ಲಿಂದ ಸ್ಪೋಕನ್ ಇಂಗ್ಲಿಷನ್ನು ಹೆಕ್ಕಿಕೊಂಡು ತಮ್ಮ 'ಜಾಬ್' ಉಳಿಸಿಕೊಳ್ಳುವ ಪ್ರಯತ್ನ ಮಾಡುವುದೊಳ್ಳೆಯದು. 'ಆಂಗ್ಲ' ಮಾಧ್ಯಮದಲ್ಲಿರುವವರು 'ನಮಗೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಬೇಡ, ನಮಗೆ ಇಂಗ್ಲಿಷ್ ಮಾತ್ರ ಸಾಕು' ಎಂದರೆ ನಾವೇನು ಮಾಡಲಾದೀತು? ಎಸ್.ಎಸ್.ಎಲ್.ಸಿ. ತನಕ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನಡೆಯಬೇಕು ಎನ್ನುವುದು ಎಂದೂ ಈಡೇರದ ಬೇಡಿಕೆಯ ಒಂದು ಶಾಶ್ವತ ರೋದನದಂತೆ ಕೇಳಿಸುತ್ತಿಲ್ಲವೆ?

ಇವತ್ತು ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲಿಷನ್ನು ಒಂದು 'ವಿಷಯ'ವಾಗಿ ಚೆನ್ನಾಗಿ ಕಲಿಸಲು ಶಿಕ್ಷಕರಿಗೆ ಬೇಕಾದ ತರಬೇತಿಯ ವ್ಯವಸ್ಥೆಯನ್ನು ಸರಕಾರ ಮತ್ತು ಸಮಾಜ ಮಾಡಿದರೆ, ಇಂಗ್ಲಿಷ್ ಮಾಧ್ಯಮಕ್ಕೆ ಹೋಗಲು ಸಿದ್ಧರಾಗಿರುವ ಮಕ್ಕಳಲ್ಲಿ ಹೆಚ್ಚಿನವರನ್ನು ಕನ್ನಡ ಶಾಲೆಯ ಕಡೆಗೆ ತಿರುಗುವಂತೆ ಮಾಡಬಹುದು. ಮುಳ್ಳನ್ನು ತೆಗೆಯಲು ಮುಳ್ಳೇ ಬೇಕು! 'ಒಂದನೆಯ ತರಗತಿಯಿಂದಲೇ ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಕಲಿಕೆ' ಎನ್ನುವುದು ಯಾವುದೋ ರಾಜಕಾರಣದ ಉದ್ದೇಶ ಸಾಧನೆಯ ಸಾಧನವಾಗಬಾರದು. ಅಥವಾ ಒಂದು ಸರಕಾರ ಕೊಟ್ಟದ್ದನ್ನು 'ಹೇಗೆ ಸೋತಿತು ನೋಡಿ!' ಎಂದು ಜನರನ್ನು ವಂಚಿಸುವ ಸಾಧನವಾಗಬಾರದು. ಕನ್ನಡ ಶಾಲಾ ಶಿಕ್ಷಕರು 'ಬಿಸಿಯೂಟದಂತೆ ಇದೂ ಒಂದು ಶನಿ' ಎಂದು ಭಾವಿಸಿದರೆ, ಕನ್ನಡದ ಗೋರಿಯನ್ನೂ ತಮ್ಮ ಗೋರಿಯನ್ನೂ ಒಟ್ಟಿಗೇ ತೋಡಿಕೊಂಡಂತೆ ಆದೀತು. 'ಒಂದನೆಯ ತರಗತಿಯಿಂದ ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಕಲಿಕೆ' ಇಂಗ್ಲಿಷ್ ಮಾಧ್ಯಮದ ಮುಳ್ಳನ್ನು ತೆಗೆಯುವ ಸೂಜಿ ಆಗಬೇಕು. ವಿಷವನ್ನು ತೆಗೆಯುವ ಔಷಧಿಯಾಗಿ ಅದೇ ವಿಷದಿಂದ

ತಯಾರಿಸಿದ ಪ್ರತಿ ವಿಷವನ್ನು ಪ್ರಯೋಗಿಸುವ ಚಿಕಿತ್ಸಾ ಪದ್ಧತಿಯೊಂದಿದೆ. ಕನ್ನಡ ಮಾಧ್ಯಮದಲ್ಲಿ ಕಲಿಸುವ ಇಂಗ್ಲಿಷ್ ಅಂಥ ಪ್ರತಿವಿಷ ಆಗಬೇಕು. 'ಕನ್ನಡ ಶಾಲೆಗಳಲ್ಲಿ ಯಾವುದೂ ಸರಿಯಾಗಿಲ್ಲ' ಎಂಬ ಗೋಗರೆತದಲ್ಲಿ 'ಇಂಗ್ಲಿಷ್ ಸ್ಕೂಲುಗಳಲ್ಲಿ ಎಲ್ಲಾ ಚೆನ್ನಾಗಿದೆ' ಎಂಬ ಒಳದನಿಯಿಲ್ಲವೆ? ಹೀಗೆ ಗೋಗರೆಯುವುದು ನಾಚಿಕೆಯ ವಿಷಯವಲ್ಲವೆ? ಯಾವುದೂ ಸರಿಯಾಗಿಲ್ಲದಲ್ಲಿ ಇಂಗ್ಲಿಷನ್ನು ಮಾತ್ರ ಅತ್ಯಂತ ಆದರ್ಶವಾಗಿ ಕಲಿಸಬೇಕು ಎನ್ನುವುದು ಎಂಥ ವಾದ? ಮೆಕಾಲೆ ಭಾರತೀಯರಿಗೆ ಇಂಗ್ಲಿಷ್ ಕೊಡಿಸಿದಾಗಲೂ ಇಂಗ್ಲಿಷ್ ಕಲಿಕೆ ಆರಂಭವಾದದ್ದು ಹೀಗೆಯೇ. ಎಲ್ಲಾ ಶಾಲೆಗಳಲ್ಲಿ ಬ್ರಿಟಿಷ್ ಅಧ್ಯಾಪಕರಿರಲಿಲ್ಲ! ಇಂಗ್ಲಿಷ್‌ನ ಮಾತಂತಿರಲಿ, ಕನ್ನಡವನ್ನು ಅಷ್ಟು ಆದರ್ಶವಾದ ರೀತಿಯಲ್ಲಿ ಎಷ್ಟು ಶಾಲೆಗಳಲ್ಲಿ ಕಲಿಸಲಾಗುತ್ತದೆ?

ಇಂಗ್ಲಿಷ್ ಮಾಧ್ಯಮದ ಕೇಜಿಗಳಲ್ಲಿ ಅಥವಾ ಮೊದಲ ತರಗತಿಯಲ್ಲಿ ಅನುಸರಿಸುವ ಅವೈಜ್ಞಾನಿಕ ಕಲಿಕೆ ವಿಧಾನವನ್ನು ತಿರಸ್ಕರಿಸಬೇಕು. ಮಗು ತನ್ನ ಸ್ವಂತ ಭಾಷೆಯನ್ನು ಯಾವ ರೀತಿ ಆಲಿಸುವ ಮತ್ತು ಆಲಿಸಿದ್ದನ್ನು ಅನುಕರಿಸಿ ಮಾತಾಡುವ ಮೂಲಕ ಕಲಿಯುತ್ತದೆಯೋ ಈ ರೀತಿಯಲ್ಲಿ ಕಲಿಸಬೇಕು. ಎರಡು ವರ್ಷಗಳ ಕಾಲ ಕೇವಲ ಮಾತು. ಅಂದರೆ, ಮಾತನ್ನು ಆಲಿಸುವುದು ಮತ್ತು ಆಡುವುದು. ಇದಕ್ಕೋಸ್ಕರ ಮಕ್ಕಳಿಗೆ ಪುಸ್ತಕ ಬೇಡ. ಏನು ಕಲಿಸಬೇಕು, ಹೇಗೆ ಕಲಿಸಬೇಕು ಎಂದು ತಿಳಿಸುವ ಪುಸ್ತಕವನ್ನು ಶಿಕ್ಷಕರಿಗೆ ಒದಗಿಸಬೇಕು. ತಾಯಿ-ತಂದೆಯರಿಗೂ ಕೊಡಬಹುದು. ಮಕ್ಕಳು ನೂರಾರು ವಾಕ್ಯಗಳನ್ನು ಮಾತಾಡಲು ಕಲಿತ ಮೇಲೆ, ಮೂರನೆಯ ವರ್ಷದಲ್ಲಿ ಓದು ಆರಂಭ ಮಾಡಿ, ಆ ಬಳಿಕ ಓದು ಮತ್ತು ಅದರ ಜತೆಯಲ್ಲಿ ಬರವಣಿಗೆ ನಡೆಸಬಹುದು. ಬರವಣಿಗೆ ಅಂದರೆ ಎಬಿಸಿಡಿಯ ಮೂಲಕ ಅಲ್ಲ, ಮಾತಾಡಿದ ಮತ್ತು ಓದಿದ ವಾಕ್ಯಗಳನ್ನೇ ಬರೆಯುವುದು. ಅಕ್ಷರಮಾಲೆಯ ಪಠನ ಮತ್ತು ಬರೆಯುವಿಕೆಯನ್ನು ನಿಷೇಧಿಸಬೇಕು. ಮಾತಾಡುವುದು ಎಂದರೆ 'ದಿಸ್ ಈಸ್ ಮೈ ನೋಸ್', 'ದ್ಯಾಟ್ ಈಸ್ ಯುವರ್ ನೋಸ್' ಎಂಬ ಉಪಯೋಗಕ್ಕಿಲ್ಲದ ತಲೆಹರಟೆ ಅಲ್ಲ. ಮಕ್ಕಳಿಗೆ ಶಾಲೆಯಿಂದ ಹೊರಗಿನ ಪರಿಸರದಲ್ಲಿರುವ ಎಲ್ಲಾ ವಸ್ತುಗಳನ್ನು ತೋರಿಸಬೇಕು. ಎಲ್ಲದರ ಬಗ್ಗೆಯೂ ಹೇಳಬೇಕು. ಹಾಗೆಯೇ ಅವರಿಗೆ ಯೋಚಿಸಿ ಹೇಳಲು ಕಲಿಸಬೇಕು. ಯೋಚಿಸಿ ಮಾತಾಡುವ ಮೂಲಕ ಮಾತ್ರವೇ ನಮಗೆ ಯಾವ ಭಾಷೆಯಲ್ಲಿಯೇ ಆಗಲಿ ಮಾತಾಡುವ ಸಾಮರ್ಥ್ಯ, ಆಮೇಲೆ ಬರೆಯುವ ಸಾಮರ್ಥ್ಯ ಲಭಿಸುವುದು. ಮಗು ಮಾಹಿತಿ ಪೆಟ್ಟಿಗೆಯಲ್ಲ. ಹೇಳಿಕೊಟ್ಟ ವಾಕ್ಯಗಳು ಮಾತ್ರ ಮಗುವಿನ ಭಾಷಾಸಂಪತ್ತಲ್ಲ. ಮಗು ಸ್ವತಂತ್ರವಾಗಿ ಯೋಚಿಸಬಲ್ಲ ಮತ್ತು ಯೋಚನೆಗಳನ್ನು ತನ್ನ ಸ್ವಂತ ಮಾತುಗಳಲ್ಲಿ ಅಭಿವ್ಯಕ್ತಿಸಬಲ್ಲ ವ್ಯಕ್ತಿ ಎನ್ನುವುದನ್ನು ನಾವು ಮರೆಯಬಾರದು. ಹಾಗೆ ಮಾಡಲು ಆತನಿಗೆ ಬೇಕಾದ್ದು ನಮ್ಮ ಸಮರ್ಥ ನಿರ್ದೇಶನವೇ ಹೊರತು ನಮ್ಮ ಮಾತುಗಳನ್ನು ಕಂಠಪಾಠ ಮಾಡಿಸುವ ಪಾಠವಲ್ಲ. ಅನಕ್ಷರಸ್ಥನಾದ ಒಬ್ಬ ರೈತ ಅವನ ಹೊಲ, ಬೆಳೆ, ಮಳೆ ಇತ್ಯಾದಿಗಳ ಬಗ್ಗೆ ನೀವು ಕೇಳಿದ ಪ್ರಶ್ನೆಗಳಿಗೆ ಹೇಗೆ ಯೋಚಿಸಿ ತಡವರಿಸದೆ ಉತ್ತರ ನೀಡುತ್ತಾನೆ ನೋಡಿ! ಕನ್ನಡವನ್ನೇ ಆಗಲಿ, ಇಂಗ್ಲಿಷನ್ನೇ ಆಗಲಿ, ಮಗು ಆ ರೀತಿ ಮಾತಾಡಬೇಕಾದರೆ, ಒಂದು ಭಾಷೆಯಲ್ಲಿ ಮಗು ಮಾತಾಡುವ ಮತ್ತು ಬರೆಯುವ ಪ್ರಾವೀಣ್ಯ ಹಾಗೂ ಆತ್ಮವಿಶ್ವಾಸವನ್ನು ಗಳಿಸುವವರೆಗೆ ಮಗುವಿಗೆ ಬರೆಯುವ ಕೆಲಸ ಕೊಡಬಾರದು. 'ಗ್ರಾಮರ್' ಬಗ್ಗೆ ಉಸಿರೆತ್ತಬಾರದು!

ಈ ಶೈಕ್ಷಣಿಕ ಪರಿಕ್ರಮ ಆರಂಭಿಸುವ ಮೊದಲು, ಪತ್ರಿಕೆ, ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ಇವರ ರೀತಿ-ನೀತಿಗಳ ಬಗ್ಗೆ ವ್ಯಾಪಕ ಮಾಹಿತಿ ಪ್ರಚಾರ ನೀಡಬೇಕು. ಹಾಗೆ ಮಾಡದಿದ್ದರೆ-''ಹೀಗೆ ಕಲಿತರೆ ಆ ಇಂಗ್ಲಿಷ್ ಮೀಡಿಯಮ್ ಮಕ್ಕಳಿಗೆ ಇಂಗ್ಲಿಷ್ ಬರುವ ಹಾಗೆ ನಮ್ಮ ಮಕ್ಕಳಿಗೆ ಬರಲಿಕ್ಕಿಲ್ಲ. ನಮ್ಮ ಮಕ್ಕಳು ಎಂಜಿನಿಯರ್ ಆಗಲಿಕ್ಕಿಲ್ಲ'' ಎಂದುಕೊಂಡು ಮನೆಯಲ್ಲಿ ಮೇಷ್ಟ್ರನ್ನು ಜೈಯುತ್ತಾ ಮಕ್ಕಳಿಂದ ಎಬಿಸಿಡಿ ಬರೆಸಿ, ಹಿಂಸೆ ನೀಡಿಯಾರು! ಅಥವಾ ಸಾಲ-ಸೋಲ ಮಾಡಿ ಇಂಗ್ಲಿಷ್ ಮೀಡಿಯಮ್‌ಗೆ ಕಳಿಸಿಯಾರು. ಅಪ್ಪ-ಅಮ್ಮಂದಿರು ಇಂಗ್ಲಿಷನ್ನು ಅದರ ಹೊರಗಿನ ಅಂದಕ್ಕಾಗಿ ಪ್ರೀತಿಸುತ್ತಿರುವಾಗ ಮಕ್ಕಳು ಇಂಗ್ಲಿಷನ್ನು ತಮ್ಮೊಳಗೇ ದ್ವೇಷಿಸುವ ಪರಿಸ್ಥಿತಿ ನಿರ್ಮಾಣವಾದೀತು!

ಎಲ್ಲಕ್ಕಿಂತ ಮುಖ್ಯವಾದ ಒಂದು ವಿಚಾರವೆಂದರೆ, ಒಂದನೆಯ ತರಗತಿಯಿಂದಲೇ ಕನ್ನಡವನ್ನು ಕೂಡ ಈಗ ಕಲಿಸುವುದಕ್ಕಿಂತ ಹೆಚ್ಚು ಚೆನ್ನಾಗಿ ಕಲಿಸುವ ಸಕಲ ಪ್ರಯತ್ನಗಳೂ ನಡೆಯಬೇಕು. ನಮಗೆ ಬೇಕಾದ್ದು ಅದು! ಸಶಕ್ತ ಕನ್ನಡ, ಅಗತ್ಯಕ್ಕೆ ಬೇಕಾದಷ್ಟು ಇಂಗ್ಲಿಷ್! ಅದಕ್ಕಿಂತ ಹೆಚ್ಚು ಬೇಕೆನ್ನುವ ಮಕ್ಕಳು ಮತ್ತು ತಾಯಿ-ತಂದೆ, ಹೆಚ್ಚುವರಿ ಪುಸ್ತಕಗಳನ್ನು ಕೊಂಡುಕೊಂಡು, ಸ್ವಲ್ಪ ಹಣ ಖರ್ಚು ಮಾಡಿ, ಹೆಚ್ಚು ಕಲಿಸುವ ಪ್ರಯತ್ನ ಮಾಡಿಯಾರು. ವಾಸ್ತವದಲ್ಲಿ ಅದಕ್ಕೆ ಸರಕಾರದ ಪರವಾನಗಿ ಕೂಡ ಬೇಡ. ಕನ್ನಡ ಶಾಲೆಯಲ್ಲಿ ಮಕ್ಕಳನ್ನು ಓದಿಸುವ ತಾಯಿ-ತಂದೆ ಇಂಗ್ಲಿಷ್ ಮೇಷ್ಟ್ರನ್ನು ಗೊತ್ತು ಮಾಡಿಕೊಂಡು ಖಾಸಗಿಯಾಗಿ ಇಂಗ್ಲಿಷ್ ಕಲಿಸುವುದನ್ನು ತಡೆಯಲು ಸರಕಾರಕ್ಕೆ ಕೂಡ ಹಕ್ಕಿದೆಯೇ?


ಕನ್ನಡ ಮಾಧ್ಯಮ ಶಾಲೆಯಲ್ಲಿ ಶಿಕ್ಷಣ ಕನ್ನಡದಲ್ಲಿಯೂ ಸಮೃದ್ಧವಾಗಿದ್ದು, ಇಂಗ್ಲಿಷ್‌ನಲ್ಲಿಯೂ ಒಪ್ಪಿಕೊಳ್ಳಬಹುದಾದಷ್ಟು ಚೆನ್ನಾಗಿದ್ದರೆ, ಇಂಗ್ಲಿಷ್ ಮೀಡಿಯಮ್‌ನ ಅಗತ್ಯ ಇಲ್ಲ ಎನ್ನುವ ದಿನ ಬರುತ್ತದೆ. ಲಕ್ಷಾಂತರ ಎಂಜಿನಿಯರುಗಳು ಕೆಲಸವಿಲ್ಲದೆ ಅಲೆಯುವ ಒಂದು ದಿನ ಕೂಡ ಬಂದೇ ಬರುತ್ತದೆ. ಆಗ ಕೇವಲ ಇಂಗ್ಲಿಷ್ ಕಲಿತದ್ದು ಉಪಯೋಗಕ್ಕೆ ಬರಲಿಕ್ಕಿಲ್ಲ. ಇಂಗ್ಲಿಷ್ ಮತ್ತು ಕನ್ನಡ ಎರಡನ್ನೂ ಚೆನ್ನಾಗಿ ಕಲಿತುಕೊಂಡಿದ್ದರೆ ಬದುಕುವ ದಾರಿ ಕಾಣಿಸಬಹುದು.

□

ಭಾಗ: ನಾಲ್ಕು
ಭಾಷೆ-ಧರ್ಮ-ಸಂಸ್ಕೃತಿ: ಒಂದು ಸಂವಾದ

ಶಿಕ್ಷಣ ಸಂಸ್ಥೆಯಲ್ಲೂ ಜೀತಪದ್ಧತಿ!

☐ ವಿಷ್ಣು ನಾಯ್ಕ



ಆ ವ್ಯಕ್ತಿಯ ಹೆಸರು ನಾನೀಗ ಬರೆದು ಬಿಡಬಹುದು. ಆದರೆ ಬರೆಯುತ್ತಿಲ್ಲ; ಬರೆಯಲಾರೆ. ಯಾಕೆಂದರೆ ಹಾಗೆ ಬರೆಯುವುದರಿಂದ ಆತನ ಈಗಿರುವ ಕಷ್ಟ-ನಷ್ಟ ಇನ್ನೂ ಹೆಚ್ಚಬಹುದು.

ಆತನಿಗೆ ಸುಮಾರು ನಲ್ವತ್ತೆರಡು ವರ್ಷ. ಮೊನ್ನೆ ಆತ ನಮ್ಮ ಮನೆಗೆ ಬಂದದ್ದು ತನ್ನ ತಮ್ಮನ ಕೆಲಸಕ್ಕಾಗಿ. ಶಿಕ್ಷಣ ಇಲಾಖೆಯ ಒಂದು ಕಾರ್ಯಾಲಯದ ಟೇಬಲ್ಲಿನ ಮೇಲಿರುವ ಅವನ ತಮ್ಮನ ನೇಮಕಾತಿ ಪ್ರಸ್ತಾವನೆಯ ವಿಚಾರದಲ್ಲಿ ಚರ್ಚಿಸುವುದಕ್ಕಾಗಿ. ಪ್ರಸ್ತಾವನೆಯ ಪ್ರತಿಯೊಂದು ಕೇಸಿಗೂ ಇಲಾಖೆಯ ಕಾರ್ಯಾಲಯದಲ್ಲಿ 50,000 ರೂ. ದರ ನಿಗದಿಯಾಗಿದೆಯೆಂಬ ವಿಚಾರ ಹೊರಬಿತ್ತು.

ಶೇಕಡಾ ೯೫ರಷ್ಟು ಕಡೆ ಪ್ರತಿಯೊಂದು ನೇಮಕಾತಿಯ ಸಂದರ್ಭದಲ್ಲೂ ಪ್ರತಿ ಅಭ್ಯರ್ಥಿಯ ತುಲಾಭಾರವನ್ನು ಆಡಳಿತ ಮಂಡಳಿಗಳು ಲಕ್ಷಗಳ ಲೆಕ್ಕದಲ್ಲಿ ನಡೆಸುತ್ತಿವೆ. ಅಷ್ಟೂ ಸಾಲದೆಂಬಂತೆ ಈಗ ಇಲಾಖಾ ವಲಯದಲ್ಲೂ ಪ್ರತಿ ಅನುಮೋದನೆಗೆ ಅರ್ಧ ಲಕ್ಷ ರೇಟು!

ಆತ್ಮವಂಚನೆಗೆ ಸಿದ್ಧರಿಲ್ಲದ ಇನ್ನುಳಿದ ಶೇಕಡಾ ೫ರಷ್ಟು ಆಡಳಿತ ಮಂಡಳಿಗಳು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವ

'ಪರಿಮಳ', ಅಂಬಾರಕೊಡ್ಲ ಅಂಕೋಲಾ; ಉ.ಕ.-581 314

ವಿಚಾರವೂ ನಮ್ಮ ಚರ್ಚೆಯ ಮಧ್ಯ ಬಂತು. ಮೇನೇಜ್‌ಮೆಂಟಿಗೆ ದುಡ್ಡುಕೊಡದೆ- ಯೋಗ್ಯತೆಯ ಆಧಾರದ ಮೇಲೆ- ಆಯ್ಕೆಯಾದವರ ಅನುಮೋದನೆಯ ರೇಟು ಇಲಾಖೆಯಲ್ಲಿ ಎರಡು ಪಟ್ಟು ಜಾಸ್ತಿ ಎಂಬ ಕಠೋರ ಸತ್ಯವನ್ನು- ಆ ಸಂದರ್ಭದಲ್ಲಿ ಜತೆಗಿದ್ದ- ಹೊಣೆಗಾರ ವ್ಯಕ್ತಿಯೊಬ್ಬರು ತಿಳಿಸಿದರು.

ಈ ವಿಚಾರದಲ್ಲಿ ಮುಂದೇನು ಮಾಡಬೇಕು, ಯಾರ ಮೂಲಕ ಹೇಳಿಸಬೇಕು, ಒಂದು ಲಕ್ಷದ ಮಾತು ಹಾಗಿರಲಿ, ಒಂದು ನೂರು ರೂಪಾಯಿ ಕೂಡ ಕೊಡುವ ತಾಕತ್ತಿಲ್ಲದ ತನ್ನ ತಮ್ಮನ ಭವಿಷ್ಯದ ಗತಿಯೇನು ಎಂಬೆಲ್ಲ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ಬಂದ ವ್ಯಕ್ತಿ ಆತ. ನನ್ನ ಮಿತಿಯಲ್ಲಿ ಸಾಧ್ಯವಿರುವ ಭರವಸೆಯನ್ನು ಕೊಟ್ಟು, 'ತಮ್ಮನ ವಿಚಾರ ಹಾಗಿರಲಿ, ನಿನ್ನ ಸರ್ವಿಸ್ ಎಷ್ಟಾಯಿತು?' ಎಂದು ಕೇಳಿದೆ.

ಆತನೂ ಒಬ್ಬ ಶಿಕ್ಷಕ ಎಂಬುದು ನನಗೆ ಗೊತ್ತಿತ್ತು. ನಮ್ಮದೇ ಜಿಲ್ಲೆಯ ಒಂದು ಅನುದಾನರಹಿತ ಸಂಸ್ಥೆಯಲ್ಲಿ ಅವನ ಸೇವೆ.

'19 ವರ್ಷ ಆಯಿತು' ಎಂದ.

'ಅನ್ಯಥಾ ಭಾವಿಸುವುದಿಲ್ಲವೆಂದಾದರೆ ನಿನ್ನ ವೇತನ ಕೇಳಬಹುದೇ?...' ನನ್ನ ಪ್ರಶ್ನೆ.

'ನಾಲ್ಕು ನೂರು ರೂಪಾಯಿಗೆ ಸೇರಿದ್ದೆ ಈಗ 1,000 ರೂ. ಕೊಡ್ತಾರೆ ಸರ್' ಅಂದ.

ನನಗೆ ತಲೆಸುತ್ತಿ ಬಂದಂತಾಯಿತು. ೧೯ ವರ್ಷದಿಂದ ಶಿಕ್ಷಕನಾಗಿರುವ ಅನುಭವಿಗೆ ಈ ತುಟ್ಟಿ ಕಾಲದಲ್ಲಿ ಮಾಸಿಕ ಸಂಬಳ 1,000 ರೂಪಾಯಿ!

'ನಿಮ್ಮ ಆಡಳಿತ ಮಂಡಳಿಯವರು ಪ್ರೊವಿಡೆಂಡ್ ಫಂಡ್ ಸೌಲಭ್ಯ ಒದಗಿಸಿದ್ದಾರಾ?'

'ಇಲ್ಲ ಸರ್.'

'ಎಷ್ಟು ವರ್ಷದಿಂದ ನಿಮ್ಮ ಸಂಸ್ಥೆ ನಡೆಯುತ್ತಿದೆ?'

'ಇಪ್ಪತ್ತು ವರ್ಷದಿಂದ'.

'ಗ್ರ್ಯಾಂಟಿಗೆ ಪ್ರಯತ್ನಿಸಿಲ್ಲವಾ?'

'ಅವರು (ಆಡಳಿತ ಮಂಡಳಿ) ಏನು ಮಾಡುತ್ತಾರೆಂಬುದೇ ನಮಗೆ ಗೊತ್ತಾಗುತ್ತಿಲ್ಲ. ಕೇಳಿದರೆ, ಕಲಿಸುವುದಷ್ಟೇ ನಿಮ್ಮ ಕೆಲಸ ಅನ್ನುತ್ತಾರೆ'.

'ಈ ಪರಿಸ್ಥಿತಿ ಆ ಶಾಲೆಯಲ್ಲಿ ನಿನಗೊಬ್ಬನಿಗೋ ಅಥವಾ ಎಲ್ಲರಿಗೊ?'

'ಯಾರೂ ಮಾತನಾಡುವ ಸ್ಥಿತಿಯಲ್ಲಿಲ್ಲ. ಮಾತನಾಡಿದವರು ಕೆಲಸ ಕಳೆದುಕೊಂಡು ಮನೆಗೆ ಹೋಗಬೇಕಾಗುತ್ತದೆ'- ಅವನ ವಿವರಣೆ.

ಪೂರಕ ಪ್ರಶ್ನೆಗಳ ಮೂಲಕ ಆ ಸಂಸ್ಥೆಯ ಆಡಳಿತ ಮಂಡಳಿ ಮುಖ್ಯಸ್ಥರ ಜಾತಕ ತಿಳಿದುಕೊಂಡೆ. ಸಂಸ್ಥೆಯ ದೈನಂದಿನ ಆಡಳಿತ ಮುಖ್ಯಸ್ಥರ ವಿಚಾರವೂ ಗೊತ್ತಾಯಿತು. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಶಿಕ್ಷಣ ಸಂಸ್ಥೆಗಳು ಇದೇ ರೀತಿ ನಮ್ಮ 'ಬಿ.ಎ., ಬಿ.ಎಡ್. ಯುವಕ'ರನ್ನು ಜೀತದ ಆಳಂತೆ ದುಡಿಸಿಕೊಳ್ಳುತ್ತಿರುವ ನಿದರ್ಶನಗಳು ನನ್ನ ಕಣ್ಣೆದುರು ಹಾದುಹೋದವು.

ಈ ವ್ಯಕ್ತಿಯ ಶಾಲೆಯಲ್ಲಿ ಇವನಿಗಿಂತ ಹೆಚ್ಚು ವಯಸ್ಸಾದ ಇನ್ನೊಬ್ಬ ವ್ಯಕ್ತಿ ಅನುಭವಿಸುತ್ತಿರುವ ಬವಣೆಯನ್ನು ಪಕ್ಕದಲ್ಲಿ ನಿಂತಿದ್ದ ನನ್ನ ಹೆಂಡತಿ ನೆನಪಿಗೆ ತಂದಳು. ಅರ್ಧಾಯುಷ್ಯ ಕಳೆದರೂ ಮದುವೆ, ಮನೆ, ಮಕ್ಕಳ ಬಗ್ಗೆ ಯೋಚಿಸುವ ಆತ್ಮವಿಶ್ವಾಸವನ್ನೇ ಕಳೆದುಕೊಂಡಿದ್ದ ಮಾಸ್ತರ ಆತ. ಶಿಕ್ಷಣ ಎಂಬ ಪವಿತ್ರ ಕ್ಷೇತ್ರವನ್ನು ಈ ಬಗೆಯಲ್ಲಿ 'ಕತ್ತಲ ಲೋಕದ ವ್ಯಾಪಾರಿ ಕೇಂದ್ರ'ವಾಗಿ ನಮ್ಮ ನಡುವೆಯೇ ನಡೆಸಿಕೊಂಡು ಹೋಗುತ್ತಿರುವ ಕ್ರೂರ ಮನಸ್ಸುಗಳ ಬಗ್ಗೆ ಹೇಸಿಗೆ ಆಯಿತು.

'18-20 ವರ್ಷಗಳಿಂದ ಕೊಟ್ಟ ಕೆಲಸ ಮಾಡುತ್ತ ನಿಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಒಂದು

ಪ್ರಶ್ನೆ ಕೂಡ ಕೇಳಲಾರದ ನೀವು ಶಿಕ್ಷಣ ರಂಗದ ಜೀತದಾಳುಗಳೇ?' ಎಂದು ಆತನನ್ನು ಪ್ರಶ್ನಿಸಿದೆ.

'ಪರಿಸ್ಥಿತಿ ಹಾಗಿದೆ ಸರ್'- ಆತ ಸಮಜಾಯಿಷಿ ಕೊಡ ಹೊರಟ. ನನಗೆ ಸಿಟ್ಟು ತಡೆಯಲಾಗಲಿಲ್ಲ. 'ನೀವೆಲ್ಲ ಕೂಡಿ ನಿಮ್ಮ ಆಡಳಿತ ಮಂಡಳಿಯ ಮುಂದೆ ಒಂದು ಅಹವಾಲು ಹೇಳಿಕೊಳ್ಳಲಾಗುವುದಿಲ್ಲ ಎಂದರೇನು? ಜೀತಕ್ಕೆ ಒಳಪಡುವವರ ಮುಖ ನೋಡಬೇಕೆಂದು ನನಗೆ ಅನಿಸುವುದಿಲ್ಲ' ಎಂದು ಗುಡುಗಿ ಒಳನಡೆದೆ.

ನನ್ನ ಹೆಂಡತಿ ಬಳಿ ಆತ ಹೇಳುತ್ತಿದ್ದ:

'ಸರ್'ಗೆ ಬೇಜಾರಾಗಿದೆ. ನಮ್ಮ ಪರಿಸ್ಥಿತಿಯೇ ಹಾಗಿದೆ. ನಾವು ಏನೂ ಕೇಳುವಂತಿಲ್ಲ. ನಮಗೆ ರಜಾ ಅವಧಿಯಲ್ಲಿ ವೇತನ ಇಲ್ಲ. ಕೇಳಿದರೆ ಕೆಲಸದಿಂದ ತೆಗೆದು ಹಾಕುತ್ತಾರೆ'.

★★★

ಆತ ಕೆಲವು ವರ್ಷಗಳಷ್ಟು ಹಿಂದೆ ತನ್ನ ಮದುವೆ ಆಮಂತ್ರಣ ಪತ್ರಿಕೆ ನೀಡುವುದಕ್ಕಾಗಿ ಸ್ವತಃ ಬಂದದ್ದು -ಸ್ನಾನಕ್ಕೆ ನಿಂತಾಗ ನೆನಪಾಯಿತು. ಆತ ಕೈತುಂಬ ವರದಕ್ಷಿಣೆ ತೆಗೆದುಕೊಂಡಿದ್ದಾನೆ ಎಂಬ ಖಾತ್ರಿಯಿದ್ದುದರಿಂದ- ಅಂದು ನನಗೆ ಬಿಡುವಿದ್ದರೂ- ಆ ಮದುವೆಗೆ ನಾನು ಹೋಗಿರಲಿಲ್ಲ.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಕನ್ನಡ ತಂಟೆಗೇನ್ರ ಬಂದ್ರೆ...

ಡಾ|| ನಾ. ದಾಮೋದರ ಶೆಟ್ಟಿ



ಕಾಸರಗೋಡಿನ ಕನ್ನಡಿಗರ ಪಾಲಿಗೆ 1956 ಕರಾಳ ವರ್ಷ. ಅಲ್ಲಿಂದ ಮೊದಲ್ಗೊಂಡು ಕಾಸರಗೋಡು ಮತ್ತೆ ಕನ್ನಡ ನಾಡಾಗುವುದರ ಬಗ್ಗೆ ಕನಸು ಕಾಣುತ್ತಲೇ ಮಲಯಾಳದ ಕರಿನೆರಳಲ್ಲಿ ಬದುಕಿದವರು ಕನ್ನಡಿಗರು. ಬಹು ನಿಧಾನವಾಗಿ ಕನ್ನಡ ಕರಗುತ್ತ ಬರುತ್ತಿರುವ ದೃಶ್ಯವನ್ನು ಕಾಣುತ್ತಲೇ ಇಲ್ಲಿನ ಕನ್ನಡಿಗರೂ ಕರಗಿ ಹೋಗುತ್ತಲಿದ್ದಾರೆ.

ಇಪ್ಪತ್ತು ವರ್ಷಗಳ ಹಿಂದಿನ ಮಾತು. ಅಂದು ಕಾಸರಗೋಡಿನ ರಾಜಬೀದಿಯಲ್ಲಿ ಸಂಚರಿಸುತ್ತಿದ್ದೆ. ಸಂಜೆಯ ಹೊತ್ತು. ಜನಸಂಚಾರ ಕಡಿಮೆಯಿತ್ತು. ಯಾಕೆ ಹೀಗೆ ಎಂದುಕೊಳ್ಳುತ್ತಲೇ ಒಬ್ಬಾತ ದಾರಿಹೋಕನನ್ನು ಪ್ರಶ್ನಿಸಿದೆ. ಆತ ಕನ್ನಡಿಗ. ಅಲ್ಲಿ ಓಡಾಡುತ್ತಿದ್ದವರೆಲ್ಲರೂ ಕನ್ನಡಿಗರೇ. ಮಲಯಾಳಿಗಳ ಸೊಲ್ಲೇ ಇರಲಿಲ್ಲ; ಪೂರ್ತಿ ಕನ್ನಡದ ವಾತಾವರಣ. ನನ್ನ ಪ್ರಶ್ನೆಗೆ ಆತನೆಂದ : 'ಇವತ್ತು ಓಣಂ, ಮಲಯಾಳಿಗಳೆಲ್ಲ ಕೇರಳಕ್ಕೆ ಹೋಗಿದ್ದಾರೆ!'

ಬಳಿಕ ಇಪ್ಪತ್ತು ವರ್ಷಗಳು ಕಳೆದಿವೆ. ಮತ್ತೊಮ್ಮೆ ಅದೇ ಓಣಂ ದಿವಸ ಕಾಸರಗೋಡಿಗೆ ಹೋದೆ. ರಸ್ತೆಗಳೆಲ್ಲ ಗಿಜಿಗಿಡುತ್ತಿದ್ದವು. ಓಣದ ಸಂತೆಗಳು, ಮಾವೇಲಿ ಅಂಗಡಿಗಳು. ಮಹಿಳೆಯರೆಲ್ಲ ಓಣಪ್ಪುಡವ ಧರಿಸಿ, ಅಡ್ಡನಾಮ ಎಳೆದು ಹಣ್ಣುಕಾಯಿಗಳೊಂದಿಗೆ ದೇವಸ್ಥಾನಕ್ಕೋ ಸಿಹಿತಿಂಡಿಗಳೊಂದಿಗೆ ನೆಂಟರ ಮನೆಗೋ ಹೋಗುತ್ತಿದ್ದರು. ಓಣಂ ಹಬ್ಬದ ದಿನ ಮಲಯಾಳಿಗಳೆಲ್ಲ ಕೇರಳಕ್ಕೆ

'ಪ್ರಸಾಧನ', ಭಾರತೀನಗರ, ಬಿಜ್ಜೈ, ಮಂಗಳೂರು– 575 004

ಹೋಗಿರಬಹುದು ಎಂದುಕೊಂಡರೆ ಯಾರೂ ಕಾಸರಗೋಡು ಬಿಟ್ಟು ಕದಲಲಿಲ್ಲ. ಅವರ ಪಾಲಿಗೆ ಈಗ ಕಾಸರಗೋಡೇ ಕೇರಳವಾಗಿಬಿಟ್ಟಿದೆ!

ಯಾರಾದರೂ 'ಹೇಗಿದ್ದಾರೆ ಕಾಸರಗೋಡು ಕನ್ನಡಿಗರು?' ಎಂದು ಕೇಳಿದರೆ ಹೇಳುವುದಕ್ಕೆ ಮುಜುಗರ ಹುಟ್ಟಿಸುವ ಸಂಗತಿ.

ಕನ್ನಡಿಗರು ಹೇಗಿದ್ದಾರೆ ಎಂದರೆ ಮಲಯಾಳಿಗಳೊಂದಿಗೆ ಚೆನ್ನಾಗಿ ಮಲಯಾಳಂ ಮಾತನಾಡಬಲ್ಲವರಾಗಿದ್ದಾರೆ. ಮಲಯಾಳಿಗಳು ಏನೇ ಆದರೂ ಕನ್ನಡ ಕಲಿಯುವವರಲ್ಲ. ಕನ್ನಡಿಗರು ಹಾಗಲ್ಲ. ಮಲಯಾಳವನ್ನು ಓದಲೂ ಬರೆಯಲೂ ಕಲಿತು, ಅವರೊಂದಿಗೆ ಅವರದೇ ಭಾಷೆಯಲ್ಲಿ ವ್ಯವಹರಿಸುತ್ತಾರೆ. ಮಲಯಾಳದ ಗಾಳಿ ವಿಪರೀತವಾಗಿ ಸೋಂಕಿದ್ದರ ಪರಿಣಾಮವಾಗಿ ಕನ್ನಡಿಗರು ಕನ್ನಡವನ್ನೂ ಮಲಿಯಾಳದಲ್ಲಿ ಮಾತನಾಡುತ್ತಿದ್ದಾರೆ!

ಪಣಿಕ್ಕರ್ ವರದಿಯಿಂದ ಕನ್ನಡಿಗರಿಗಾದ ಅನ್ಯಾಯವನ್ನು ಕುರಿತು ಐದು ದಶಕಗಳಿಂದಲೂ ಕಾಸರಗೋಡಿನ ಕನ್ನಡಿಗರು ಪ್ರತಿಭಟಿಸುತ್ತಲೇ ಬಂದಿದ್ದಾರೆ. ಮಹಾಜನ ವರದಿ ಜಾರಿಯಾಗಲೇಬೇಕು ಎಂದು ಕೂಗೆಬ್ಬಿಸುತ್ತಲೇ ಬಂದಿದ್ದಾರೆ. ಆ ಕೂಗು ಪೋಲಿಸರ ಲಾಟಿಯೇಟುಗಳಲ್ಲಿ ಶಮನಗೊಂಡ ಸಂದರ್ಭಗಳೇ ಹೆಚ್ಚು. ಇಂದಿಗೂ ಕಾಸರಗೋಡು ಕರ್ನಾಟಕಕ್ಕೆ ಸೇರಲೇಬೇಕೆಂಬ ಕೂಗನ್ನು ಕಯ್ಯಾರ ಕಿಞ್ಞಣ್ಣ ರೈಯವರಂಥ ಹಿರಿಯ ನಾಯಕರು ಮೊಳಗಿಸುತ್ತಲೇ ಇದ್ದಾರೆ.

ಕಳೆದ ಶತಮಾನದ ಅರವತ್ತರ ದಶಕದಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಕಳ್ಳಿಗೆ ಮಹಾಬಲ ಭಂಡಾರಿಯವರೂ ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಯು.ಪಿ. ಕುಣಿಕುಳ್ಳಾಯರೂ ಎಂ.ಎಲ್.ಎ.ಗಳಾಗಿ ಆಯ್ಕೆಯಾದರು. ಆಗ ಕರ್ನಾಟಕ ಸಮಿತಿಗೆ ಕನ್ನಡವನ್ನು ರಕ್ಷಿಸುವ ತಾಕತ್ತಿತ್ತು. ಕನ್ನಡದ ಶಾಲೆಗಳಿಗೆ ಎಲ್ಲ ಕಡೆಯೂ ಪ್ರೋತ್ಸಾಹವಿತ್ತು. ನೀಲೇಶ್ವರದಿಂದೀಚೆಗೆ ಶಾಲೆಗಳಲ್ಲಿ ಕನ್ನಡವಿತ್ತು. ನೀಲೇಶ್ವರ ರಾಜಾಸ್ ಹೈಸ್ಕೂಲಿನಲ್ಲೂ ಕನ್ನಡ ಕಲಿಸುತ್ತಿದ್ದರು. ಇಂದಿಗೂ ಕೇರಳದ ತಳಿಪ್ಪರಂಬ, ಕಣ್ಣೂರುವರೆಗೆ ರಸ್ತೆ ಬದಿಯ ಅಂಗಡಿಗಳಲ್ಲಿ ಹಳೆಯ ಕನ್ನಡದ ನಾಮಫಲಕಗಳಿವೆ. ಅಲ್ಲಿ ಯಾರಾದರೂ ಹಳಬರಿದ್ದರೆ ಅವರ ಜೊತೆ ಕನ್ನಡದಲ್ಲೂ ಮಾತನಾಡಬಹುದು.

ಈಗ ಕಾಸರಗೋಡಿನ ಪರಿಸ್ಥಿತಿ ಬಹಳ ಬದಲಾಗಿದೆ. ಕನ್ನಡ ಶಾಲೆಗಳಷ್ಟೇ ಇದ್ದ ಕಾಲದಿಂದ ಕನ್ನಡ-ಮಲಯಾಳ ಶಾಲೆಗಳ ಹಂತಕ್ಕೆ ಬಂದು, ಇದೀಗ ಮಲಯಾಳವಷ್ಟೇ ಇರುವ ಶಾಲೆಗಳ ತನಕ ಕಾಸರಗೋಡಿನ ಇತಿಹಾಸ ನಡೆದುಕೊಂಡು ಬಂದಿದೆ. ಕರ್ನಾಟಕ ಪ್ರಾಂತೀಕರಣ ಸಮಿತಿ ಒಂದು ಕಡೆ 'ಕಾಸರಗೋಡು ಕನ್ನಡನಾಡು, ಮಹಾಜನ ವರದಿ ಜಾರಿಯಾಗಲೇಬೇಕು' ಎಂದು ಹುಯ್ಯಲಿಡುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಮಲಯಾಳಿಗಳು 'ಮಲಯಾಳ ಸಂರಕ್ಷಣ ಕ್ರಿಯಾಸಮಿತಿ' ಮಾಡಿಕೊಂಡರು. ಕನ್ನಡದ ಏನೇನು ಚಳುವಳಿಗಳು ನಡೆಯುತ್ತವೆಯೋ ಅದಕ್ಕೆ ಪ್ರತಿ ಚಳುವಳಿಗಳನ್ನು ಮಾಡಲಾರಂಭಿಸಿದರು!

ಆಡಳಿತದಲ್ಲಿ ಕನ್ನಡ ಹಂತ ಹಂತವಾಗಿ ಮಾಯವಾಗತೊಡಗಿದಾಗ ಕನ್ನಡಿಗರು ಮತ್ತೆ ಮತ್ತೆ ದನಿಯೆಬ್ಬಿಸಿದರು. ಕನ್ನಡ ಪಠ್ಯಪುಸ್ತಕಗಳು ಸಕಾಲಕ್ಕೆ ಬಾರದೇ ಹೋದಾಗ ಕನ್ನಡಿಗರು ಸುಮ್ಮನೆ ಕೂರಲಿಲ್ಲ. ಉದ್ಯೋಗಗಳನ್ನು ಮಲಯಾಳಿಗಳೇ ಕಬಳಿಸತೊಡಗಿದಾಗ ಕನ್ನಡಿಗರು ಮುಷ್ಕರ ಹೂಡಿದರು. ಈ ಎಲ್ಲಾ ಸಂದರ್ಭಗಳಲ್ಲೂ ಮಲಯಾಳ ಸಂರಕ್ಷಣ ಕ್ರಿಯಾ ಸಮಿತಿ ಗದ್ದಲವೆಬ್ಬಿಸಿ ಕನ್ನಡಿಗರ ಸದ್ದಡಗಿಸುವ ಪ್ರಯತ್ನಪಡುತ್ತಿತ್ತು. ಇಷ್ಟೆಲ್ಲ ಜೀವನ್ಮರಣ ಹೋರಾಟದ ನಡುವೆಯೂ ಕನ್ನಡದ ಕೈಂಕರ್ಯ ಕಾಸರಗೋಡಿನ ಮಣ್ಣಿನಲ್ಲಿ ನಡೆದೇ ಇತ್ತು, ಇದೆ. ಯುವನಿಕಾ, ಗಡಿನಾಡ ಕಲಾವಿದರು, ನಟನಾ ಕಾಸರಗೋಡು, ಅಪೂರ್ವ ಕಾಸರಗೋಡು ಮುಂತಾದ ರಂಗತಂಡಗಳು ಕನ್ನಡ ನಾಟಕಗಳನ್ನಾಡುತ್ತ

ಕನ್ನಡ ಸಂಸ್ಕೃತಿಯ ಪ್ರಕಾಶವನ್ನರಳಿಸುವ ಪ್ರಯತ್ನ ಮಾಡುತ್ತಲೇ ಇವೆ.

ಯಕ್ಷಗಾನದ ತವರೂರು ಕಾಸರಗೋಡು. ಇಂದೀಗ ಕರ್ನಾಟಕದ ಅನೇಕ ಕೇಂದ್ರಗಳಲ್ಲಿ, ಅದರಲ್ಲೂ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ ಜನಜನಿತ. ಪಾರ್ತಿ ಸುಬ್ಬನ ತವರೂರಿನಲ್ಲಿ ಕೂಡ್ಲುಮೇಳ, ಕುಂಬಳೆಮೇಳ, ಮಧೂರು ಮೇಳ, ಎಡನೀರು ಮೇಳ- ಇತ್ಯಾದಿ ಯಕ್ಷಗಾನ ತಂಡಗಳು ಹುಟ್ಟಿ ಬೆಳೆದು ಕಾಯಕವೆಸಗುತ್ತಿದ್ದುವು.

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ 'ಮನೆಮನೆಗಳಲ್ಲಿ ಕನ್ನಡದ ಅಭಿಯಾನ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ನೂರಾರು ಕನ್ನಡದ ಮನೆಗಳಲ್ಲಿ ಸಾಹಿತ್ಯದ ಕಾರ್ಯಕ್ರಮ ನಡೆಸಲಾಯಿತು. ಪರಿಷತ್ತಿನ ಕಾಸರಗೋಡು ಘಟಕದ ಆಗಿನ ಅಧ್ಯಕ್ಷರಾಗಿದ್ದ ಡಾ। ಲಲಿತಾ ಎಸ್. ಭಟ್ ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸಿದ್ದರು. ಇಂದೀಗ ಅವರೂ ನಿಧನರಾಗಿ ಆ ಕಾರ್ಯಕ್ರಮ ಹೆಚ್ಚುಕಮ್ಮಿ ಸ್ಥಗಿತಗೊಂಡಿದೆ. ರಂಗನಟ ಕಾಸರಗೋಡು ಚಿನ್ನಾ ಅವರ ನಾಯಕತ್ವದಲ್ಲಿ ನಡೆದ ಲಾರಿ ನಾಟಕ, ಸಂಗೀತ ರಥ, ಯಕ್ಷತೇರು ಮುಂತಾದವು ಅವಿಸ್ಮರಣೀಯ ಸಾಂಸ್ಕೃತಿಕ ಕಲೋತ್ಸವಗಳು. ಕಾಸರಗೋಡಿನ ಮೂಲೆ ಮೂಲೆಗಳಲ್ಲೂ ಕನ್ನಡದ ಅಭಿಮಾನವನ್ನು ಮತ್ತೆ ಮತ್ತೆ ಮೂಡಿಸುವ ಕೆಲಸವನ್ನು ಇವು ಮಾಡಿದವು. ಸಂಗೀತರಥದಲ್ಲಿ ಕನ್ನಡ ಸುಗಮ ಸಂಗೀತ ಕ್ಷೇತ್ರದ ಮೇರು ವ್ಯಕ್ತಿತ್ವಗಳೆಲ್ಲ ಭಾಗವಹಿಸಿದ್ದಷ್ಟೇ ಅಲ್ಲ ಕನ್ನಡದ ಪ್ರಸಿದ್ಧ ಕವಿಗಳ ಹಾಡುಗಳನ್ನು ಕಾಸರಗೋಡು ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲೂ ಹಾಡಿ ಕನ್ನಡದ ಧ್ವನಿಯನ್ನು ಮೊಳಗಿಸಿದ್ದು ಮರೆಯಲಾಗದ ಅನುಭವ. ಮತ್ತೆ ಮತ್ತೆ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು; ಕನ್ನಡದ ಧ್ವನಿ ಮೊಳಗುತ್ತಲೇ ಇರಬೇಕು.

ಒಂದೊಮ್ಮೆ ಕಾಸರಗೋಡಿನಲ್ಲಿ ಕೆ.ವಿ. ತಿರುಮಲೇಶ್, ಗಂಗಾಧರ ಭಟ್, ವೇಣುಗೋಪಾಲ ಕಾಸರಗೋಡು, ಎಂ. ವ್ಯಾಸ ಮುಂತಾದ ಕವಿಗಳು ನವ್ಯ ಸಾಹಿತ್ಯ ಸಂಘವನ್ನು ಸ್ಥಾಪಿಸಿ ನವ್ಯ ಕತೆ, ಕಾದಂಬರಿ, ಕವನಗಳ ಬಗ್ಗೆ ಚರ್ಚೆಗಳನ್ನೇರ್ಪಡಿಸಿ ಸಾಹಿತ್ಯದ ಪರಿಚಾರಿಕೆಯನ್ನು ಮಾಡಿದರು. ಕಳೆದೊಂದು ದಶಕದಿಂದೀಚೆಗೆ ಸಾಹಿತ್ಯ ಸಂಘ ತನ್ನ ಚಟುವಟಿಕೆಗಳನ್ನು ಕುಂಠಿತಗೊಳಿಸಿದೆ. ಅದು ಮತ್ತೊಮ್ಮೆ ಪುಟಿದೇಳಬೇಕಾಗಿದೆ.

ಕಳ್ಳಿಗೆ ಮಹಾಬಲ ಭಂಡಾರಿ, ಯು.ಪಿ. ಕುಣಿಕುಳ್ಳಾಯ ಮುಂತಾದ ಧುರೀಣರು ಕಟ್ಟಿದ ಕರ್ನಾಟಕ ಪ್ರಾಂತೀಕರಣ ಸಮಿತಿ ರಾಷ್ಟ್ರದ ರಾಜಕೀಯ ಪಕ್ಷಗಳಿಂದ ಪ್ರೇರಿತವಾದುದಾಗಿರಲಿಲ್ಲ, ಕನ್ನಡದಿಂದ ಪ್ರೇರಿತವಾದುದಾಗಿತ್ತು. ಕನ್ನಡದ ವಿಧಾನಸಭಾ ಸದಸ್ಯರು ಕೇರಳದ ವಿಧಾನಸಭೆಯಲ್ಲಿ ಕುಳಿತು ಕನ್ನಡದಲ್ಲಿ ಮಾತನಾಡಿದ ದಿನಗಳವು. ಇಂದು ಕನ್ನಡದ ವಿಧಾನಸಭಾಸದಸ್ಯನೊಬ್ಬನನ್ನು ಸಂಪಾದಿಸುವ ಶಕ್ತಿ ಎರಡೂ ವಿಧಾನ ಸಭಾಕ್ಷೇತ್ರದ ಕನ್ನಡ ಮತದಾರರಿಗಿಲ್ಲ. ಒಂದೊಮ್ಮೆ ರಾಷ್ಟ್ರಕವಿ ಗೋವಿಂದ ಪೈಯವರು ಕನ್ನಡದ ಬಗೆಗೆ ಅಭೂತಪೂರ್ವ ಕಾಳಜಿ ತೋರಿದ್ದರು.

'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ'

ಎಂಬುದಾಗಿ ಹಾಡಿದ ಗೋವಿಂದ ಪೈ ಅವರು ಬಹುಭಾಷಾ ಪಂಡಿತರು. ದೇಶ-ವಿದೇಶದ ಚರಿತ್ರೆಯನ್ನು ಬಲ್ಲವರು. ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿ ಕರ್ನಾಟಕದ ಕನ್ನಡಿಗರನ್ನೂ ತಟ್ಟಿ ಎಬ್ಬಿಸಿದರು. ಕವಿ ಕಯ್ಯಾರ ಕಿಞ್ಞಣ್ಣ ರೈಯವರು,

'ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ' ಎಂಬುದಾಗಿ ಕಾಸರಗೋಡಿನ ಪರಿಸ್ಥಿತಿಯನ್ನು ಕುರಿತು ಹಾಡಿದರು. ಇಂದಿಗೂ ಕಾಸರಗೋಡು ಕರ್ನಾಟಕದಿಂದ ಹೊರಗಿದೆ ಎಂಬ ಮಾತು ಬಂದಾಗ ಅವರ

ಕವಿಚೇತನ ಗದ್ಗದವಾಗುತ್ತದೆ.

ಕನ್ನಡದ ಕಾಯಕ ಮಾಡುವುದಕ್ಕಾಗಿ ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅದರ ಸಹಸಂಸ್ಥೆಗಳಾದ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ನೃತ್ಯ ಮತ್ತು ಸಂಗೀತ ಅಕಾಡೆಮಿಗಳು ಗಡಿನಾಡ ಸದಸ್ಯರನ್ನು ನಿಯೋಜಿಸುತ್ತಿದ್ದ ದಿನಗಳಿದ್ದುವು. ಇತ್ತೀಚೆಗಿನ ದಿವಸಗಳಲ್ಲಿ ಗಡಿನಾಡ ಕನ್ನಡಿಗರನ್ನು ಕೇಳುವವರಿಲ್ಲ. ಇಂದೀಗ ಕರ್ನಾಟಕದ ಯಾವ ಅಕಾಡಮಿಗಳಲ್ಲೂ 'ಕನ್ನಡದ ಮಣ್ಣು ಹೊರು' ಎಂದು ಬೇಡಿಕೊಳ್ಳಲು ಒಬ್ಬ ಸದಸ್ಯನೂ ಇಲ್ಲ. ಆದರೂ ಕಾಸರಗೋಡಿನ ಕನ್ನಡಿಗರು ಆಶಾವಾದಿಗಳು.

ಭಾಷಾ ಅಲ್ಪಸಂಖ್ಯಾತ ಆಯೋಗದಲ್ಲಿ ಕನ್ನಡದ ಜನರಿಗೆ ಪ್ರಾತಿನಿಧ್ಯ ದೊರಕದೇ ಹೋದಾಗ, ಕನ್ನಡದ ಪಠ್ಯಪುಸ್ತಕ ರಚನೆಯಲ್ಲಿ ಕೇರಳ ಸರಕಾರ ನಿರುತ್ಸಾಹ ತೋರಿದಾಗ, ಕನ್ನಡಿಗರು ಮಲಯಾಳ ಪರೀಕ್ಷೆಗಳಲ್ಲಿ ಪಾಸಾಗದಿದ್ದರೆ ಉದ್ಯೋಗದಲ್ಲಿ ಪರಿಗಣನೆ ಇಲ್ಲ ಎಂದು ಕೇರಳ ಸರಕಾರ ಬೊಬ್ಬಿರಿದಾಗ, ಲೋಕಸೇವಾ ಆಯೋಗದ ಕೇರಳ ಘಟಕದಲ್ಲಿ ಕನ್ನಡಕ್ಕೆ ಪ್ರಾತಿನಿಧ್ಯ ದೊರಕದೇ ಹೋದಾಗ ಕಾಸರಗೋಡಿನ ಕನ್ನಡಿಗರೆಲ್ಲ ಒಂದಾಗಿ ವಿವಿಧ ರೀತಿಯ ಮುಷ್ಕರಗಳನ್ನು ನಡೆಸಿದರು. ಅದಕ್ಕೆ ತಕ್ಕಮಟ್ಟಿಗೆ ಯಶಸ್ಸೂ ಲಭಿಸಿತು.

ಗಡಿನಾಡಿನ ಎಲ್ಲ ಕನ್ನಡ ಶಾಲೆಗಳಲ್ಲಿ ಕನ್ನಡಕ್ಕೆ ಸರಿಸಮಾನವಾಗಿ ಮಲಯಾಳದ ತರಗತಿಗಳನ್ನು ಆರಂಭಿಸಿ ಕನ್ನಡವನ್ನು ನಿರ್ನಾಮ ಮಾಡಲೆತ್ನಿಸಿದ ಮಲಯಾಳಿಗಳ ವಿರುದ್ಧ ಆಕ್ರೋಶದ ದನಿಯೆತ್ತುವಲ್ಲಿ ಗಡಿನಾಡಿನ ಅಳಿದುಳಿದ ಕನ್ನಡಿಗರೆಲ್ಲ ಒಂದಾದರು. 'ಐಕ್ಯವೊಂದೇ ಮಂತ್ರ, ಐಕ್ಯದಿಂದೆ ಸ್ವತಂತ್ರ' ಎಂದು ಮುಗಿಲು ಮುಟ್ಟುವ ತನಕ ಕೂಗಿದರು. ಇಂಥ ಒಕ್ಕೊರಲಿನ ದನಿಯ ನಡುವೆಯೂ ಕಾಸರಗೋಡಿನ ಕನ್ನಡಿಗರು ಪೂರ್ತಿಯಾಗಿ ಏಕಾಭಿಪ್ರಾಯ ಉಳ್ಳವರಾಗಿರಲಿಲ್ಲ. ಗುಂಪುಗಾರಿಕೆಯೂ ಸಾಕಷ್ಟು ಪ್ರಮಾಣದಲ್ಲಿ ಇತ್ತು.

ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎಂಬ ವಾದ ಇತ್ತೀಚೆಗಿನ ದಿನಗಳಲ್ಲಿ ಕಾವನ್ನು ಕಳೆದುಕೊಂಡಿದೆ. ಕನ್ನಡಿಗರಿಗೆ ಅನ್ಯಾಯವಾದಾಗ ಪ್ರತಿಭಟನೆ ನಡೆಸಿ ಆದ ಅನ್ಯಾಯವನ್ನು ಸರಿಪಡಿಸಿಕೊಂಡರೆ ಸಾಕು ಎನ್ನುವ ಅಭಿಪ್ರಾಯವುಳ್ಳ ಗುಂಪೂ ಅಲ್ಲಿದೆ.

ಕೇರಳ ಸರಕಾರಕ್ಕೂ ಮಹಾಜನ ವರದಿಗೆ ಅನುಗುಣವಾಗಿ ಕಾಸರಗೋಡು ಕರ್ನಾಟಕಕ್ಕೆ ಸೇರಿಬಿಡಬಹುದೆಂಬ ಭೀತಿಯಿತ್ತು. ಹಾಗಾಗಿಯೇ 1956ರಿಂದ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಯಾವ ಬಗೆಯ ಅಭಿವೃದ್ಧಿಯನ್ನೂ ಮಾಡದೆ, ಯಾವ ಕೈಗಾರಿಕೆಗಳನ್ನೂ ಪ್ರಾರಂಭಿಸದೆ, ಯಾವ ಪ್ರಮುಖ ಕಚೇರಿಗಳನ್ನೂ ತೆರೆಯದೆ ನಿರುತ್ಸಾಹದಿಂದಿತ್ತು. ಆದರೆ ಕಳೆದ ಎರಡು ದಶಕಗಳಿಂದ ಮಂಜೇಶ್ವರದಿಂದ ಕಾಞಂಗಾಡಿನ ತನಕದ ವಿಸ್ತಾರವುಳ್ಳ ಕಾಸರಗೋಡು ಜಿಲ್ಲೆಯನ್ನು ರಚಿಸಿ, ಕಾಸರಗೋಡನ್ನು ಜಿಲ್ಲಾ ಕೇಂದ್ರವಾಗಿಸಿದರು. ಅಲ್ಲಿಂದ ಮೊದಲ್ಗೊಂಡು ಕಾಸರಗೋಡಿನಲ್ಲಿ ಅಭಿವೃದ್ಧಿ ಕಾರ್ಯ ಆರಂಭಗೊಂಡಿತು. ಅದರ ಬೆನ್ನಲ್ಲೇ ವಿವಿಧ ಕಚೇರಿಗಳಲ್ಲಿ, ಕೈಗಾರಿಕೆಗಳಲ್ಲಿ ಮಲಯಾಳಿಗಳ ದಂಡೇ ದೂರದೂರದಿಂದ ಬಂದು ನೆಲೆಸತೊಡಗಿತು. ಈಗಂತೂ ಮಲಯಾಳಕ್ಕೆ ವಿಶೇಷ ಪ್ರಾಬಲ್ಯ, ಪ್ರಾತಿನಿಧ್ಯ ಲಭಿಸಿಬಿಟ್ಟಿದೆ.

ಇಷ್ಟಾಗಿಯೂ ಕನ್ನಡದ ಕೆಲಸ ಕಾಸರಗೋಡು ಪರಿಸರದಲ್ಲಿ ನಡೆಯುತ್ತಿಲ್ಲವೆನ್ನಲಾಗದು.

ಹತ್ತಿರದಲ್ಲೇ ಕರ್ನಾಟಕ ರಾಜ್ಯವಿರುವುದರಿಂದ ಕಾಸರಗೋಡು ಜಿಲ್ಲೆಯ ಕನ್ನಡಿಗರು ಉನ್ನತ ವ್ಯಾಸಂಗಕ್ಕಾಗಿ ಮಂಗಳೂರಿಗೆ ತೆರಳುವುದು, ಆರೋಗ್ಯ ವಿಚಾರಗಳಿಗಾಗಿ ಮಂಗಳೂರಿನ ಆಸ್ಪತ್ರೆಗಳಿಗೆ ದಾಖಲಾಗುವುದು, ವ್ಯಾಪಾರಕ್ಕಾಗಿ ಮಂಗಳೂರನ್ನು ಅವಲಂಬಿಸುವುದು ನಡೆದೇ ಇದೆ. ಕಾಸರಗೋಡಿನ

ಪತ್ತಿರದ ಅತಿ ದೊಡ್ಡ ನಗರ ಮಂಗಳೂರೇ ಆಗಿರುವುದರಿಂದ ಕನ್ನಡದ ಪ್ರಭಾವವನ್ನು ಅಷ್ಟು ಸುಲಭದಲ್ಲಿ ನಿರಾಕರಿಸುವಂತಿಲ್ಲ. ಆದರೆ ಕಳೆದ ಒಂದೂವರೆ ದಶಕದಿಂದೀಚೆಗೆ ಮಂಗಳೂರಿವರೆಗೆ ಮಲಯಾಳದ ಪ್ರಭಾವ ಹರಡಿದೆ. ವಿದ್ಯಾಭ್ಯಾಸಕ್ಕಾಗಿ ಕೇರಳದಿಂದ ಮಂಗಳೂರಿಗೆ ಬರುವ ಮಲಯಾಳಿಗಳ ಸಂಖ್ಯೆ ಗಣನೀಯವಾಗಿ ಏರಿದೆ.

ಇದೆಲ್ಲವನ್ನು ಗಮನಿಸಿದಾಗ ನಮಗೆ ತೋಚುವುದೊಂದೆ. ಕನ್ನಡ ನಾಡು ನುಡಿ ಸಂಸ್ಕೃತಿಗಳನ್ನು ಕಾಸರಗೋಡು ಜಿಲ್ಲೆಯ ಉದ್ದಗಲಗಳಲ್ಲಿ ಜಾಗೃತಗೊಳಿಸುವ ಸಲುವಾಗಿ ಸತತ ಕನ್ನಡ ಕಾರ್ಯಕ್ರಮಗಳನ್ನು ನಡೆಸುತ್ತಿರಬೇಕು. ಮನೆಮನೆಗಳಲ್ಲಿ ಕನ್ನಡ ಕಾರ್ಯಕ್ರಮಗಳನ್ನೇರ್ಪಡಿಸಿ ಯುವ ಪೀಳಿಗೆಯನ್ನು ಅದರಲ್ಲಿ ಭಾಗಿಯಾಗುವಂತೆ ಮಾಡಬೇಕು. ಕರ್ನಾಟಕ ಸರಕಾರದೊಂದಿಗೆ ಸತತ ಸಂಪರ್ಕದಲ್ಲಿರಬೇಕು. ಕರ್ನಾಟಕದ ಅಕಾಡೆಮಿಗಳಲ್ಲಿ ಗಡಿನಾಡ ಕನ್ನಡಿಗರಿಗೆ ಪ್ರಾತಿನಿಧ್ಯ ದೊರಕುವಂತೆ ಮಾಡಲು ಹೋರಾಟ ನಡೆಸಬೇಕು. ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ವೃತ್ತಿಪರತೆಯ ಕಲಿಕೆಯಲ್ಲಿ ಗಡಿನಾಡ ಕನ್ನಡಿಗರಿಗೆ ಸೀಟು ಕಾಯ್ದಿರಿಸಬೇಕು– ಹೀಗೆ ನಿರಂತರವಾಗಿ ಸುದ್ದಿಯಲ್ಲಿರಬೇಕಾದ ಅಗತ್ಯ ಕೇರಳದ ಕನ್ನಡಿಗರಿಗಿದೆ.

ಈ ದೃಷ್ಟಿಯಲ್ಲಿ ಕಾಸರಗೋಡಿನ ಸರಕಾರಿ ಕಾಲೇಜಿನ ಕನ್ನಡ ವಿದ್ಯಾರ್ಥಿಗಳು ಮಾಡುತ್ತಿರುವ ಕನ್ನಡದ ಕೆಲಸ ಶ್ಲಾಘನೀಯ. ಅವರು ನಿರಂತರವಾಗಿ ಹೊರತರುತ್ತಿರುವ 'ಸ್ನೇಹರಂಗ' ಪತ್ರಿಕೆ ಕನ್ನಡದ ಮುಖವಾಣಿ. ಇತರ ಸ್ಥಳೀಯ ಕನ್ನಡ ಪತ್ರಿಕೆಗಳು ಸಂಜೆ ಪತ್ರಿಕೆಗಳಾಗಿಯಾದರೂ ಕೆಲಸ ಮಾಡುತ್ತಿವೆ. ಅಂಗಡಿ, ಕಛೇರಿಗಳಿಗೆ ನಾಮಫಲಕ ಬರೆಯುವಾಗ ಕನ್ನಡಕ್ಕೂ ಅವಕಾಶ ನೀಡುತ್ತಾರಾದರೂ ಅವೆಲ್ಲ ಕಲಬೆರಕೆಯಾಗಿವೆ. ಕನ್ನಡದ ನಾಮಫಲಕಗಳಲ್ಲಿ ಸಂಸ್ಕೃತಿ ನಿಲಯ ಎಂದಿರಬೇಕಾದಲ್ಲಿ 'ಸಾಂಸ್ಕಾರಿಕ ನಿಲಯ' ಎಂದೂ ' ಮಹಮ್ಮದ್ ಎಂಡ್ ಕಂಪೆನಿ' ಎಂದಿರಬೇಕಾದಲ್ಲಿ 'ಮಹಮ್ಮದ್ ಎಂಡ್ ಕಂಬನಿ' ಎಂದೂ ಬರೆಯುವುದನ್ನು ಕಂಡಾಗ ಕನ್ನಡದಲ್ಲಿ ಇವರೇಕೆ ಬರೆಯಬೇಕು– ಎಂದೂ ಅನ್ನಿಸಿಹೋಗುತ್ತದೆ.

1956ರಲ್ಲಿ ಕಾಸರಗೋಡು ಕೇರಳಕ್ಕೆ ಸೇರಿಹೋದ ಆ ದಿನಗಳಲ್ಲಿ ನಿರ್ದಿಷ್ಟ ಪ್ರಕಾರದ ರಕ್ತಕ್ರಾಂತಿಯೇ ನಡೆಯುತ್ತಿದ್ದರೆ ಪರಿಣಾಮ ವ್ಯತ್ಯಸ್ತವಾದುದಾಗಿರುತ್ತಿತ್ತು. ಈಗ ಮಲಯಾಳದ ಮಂದಿ ಸರಿಸುಮಾರು ಕೈಗೆ ಕೈ ಮಿಲಾಯಿಸುವಷ್ಟು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲ ಇದೇ ಮಣ್ಣಿನಲ್ಲಿ ಸ್ಥಿರವಾಗಿ ಬೇರೂರಿದ್ದಾರೆ. 'ಕಿತ್ತುಕೊಂಡು ಹೋಗಿ ನಿಮ್ಮೂರಿಗೆ' ಎಂಬುದಾಗಿ ಹೇಳುವುದರಲ್ಲಿ ಮಾನವೀಯತೆಯ ಹುರುಳೇ ಕಾಣುವುದಿಲ್ಲ. ಆದ್ದರಿಂದ 'ನೀವೂ ಇರಿ, ನಾವೂ ಇರ್ತೇವೆ. ನಮ್ಮ ತಂಟೆಗೆ ಬಾರದಿರಿ, ನಮ್ಮ ಸವಲತ್ತುಗಳನ್ನು ಕೀಳದಿರಿ. ಹಾಗೇನಾದರೂ ಮಾಡಿದರೆ ರಾಜರತ್ನಂ ಹೇಳಿದ ಹಾಗೆ 'ಕನ್ನಡ ತಂಟೇಗೇನ್ರ ಬಂದ್ರೆ ಮಾನ ಉಳ್ಸಾಕಿಲ್ಲ'– ಎಂದು ಹೇಳುವುದಕ್ಕೂ ಕಾಸರಗೋಡಿನ ಕನ್ನಡಿಗರು ಹಿಂಜರಿಯಲಾರರು.

ಭಾಗ: ನಾಲ್ಕು
ಭಾಷೆ-ಧರ್ಮ-ಸಂಸ್ಕೃತಿ: ಒಂದು ಸಂವಾದ

ನ್ಯಾಯಾಲಯದಲ್ಲಿ ಕನ್ನಡ ಕಡ್ಡಾಯವೇ?

ಡಾ। ಶಂಕರ ಖಂಡೇರಿ



ರಾಜ್ಯಾಡಳಿತದಲ್ಲಿ ಕನ್ನಡದ ಬಳಕೆ ಇವ್ವರೆ ಸಾಕು. ನ್ಯಾಯಾಡಳಿತದಲ್ಲೂ ಕನ್ನಡವನ್ನು ಕಡ್ಡಾಯಗೊಳಿಸುವ ಅವಶ್ಯಕತೆ ಏನು ಎಂದು ಗೊಣಗಿರುವ ಸರಕಾರದ ಉನ್ನತ ಅಧಿಕಾರಿಗಳಿದ್ದಾರೆ. ಅವರ ವಿರೋಧವನ್ನು ಸಮರ್ಥಿಸಿದ ನ್ಯಾಯಾಧೀಶರೂ ನ್ಯಾಯವಾದಿಗಳೂ ಹಾಗೂ ಇಂಗ್ಲಿಷ್ ವ್ಯಾಮೋಹದ ಬುದ್ಧಿಜೀವಿಗಳೂ ಇದ್ದಾರೆ. ನ್ಯಾಯಾಲಯದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವುದಕ್ಕೆ ವಿರೋಧ ವ್ಯಕ್ತಪಡಿಸಲು ಅವರು ನೀಡಿರುವ ಕಾರಣವೆಂದರೆ, ಇಂಗ್ಲಿಷಿನಲ್ಲೇ ಈ ಕೆಲಸವನ್ನು ನೂರಾರು ವರ್ಷಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಿಲ್ಲವೇ? ಸರ್ವೋಚ್ಚ ನ್ಯಾಯಾಲಯದ ಕಲಾಪಗಳು ಮತ್ತು ತೀರ್ಪುಗಳು ಇಂಗ್ಲಿಷಿನಲ್ಲೇ ಇರುವುದರಿಂದ ಅವುಗಳನ್ನನುಸರಿಸಲು ನಮ್ಮ ನ್ಯಾಯಾಧೀಶರಿಗೆ ಮತ್ತು ನ್ಯಾಯವಾದಿಗಳಿಗೆ ಅನನುಕೂಲವಾಗುವುದಿಲ್ಲವೇ? ಅದೂ ಅಲ್ಲದೆ ರಾಷ್ಟ್ರೀಯ ಭಾವೈಕ್ಯ ಸಾಧಿಸಬೇಕಾದರೆ ಭಾರತದ ಎಲ್ಲ ನ್ಯಾಯಾಲಯಗಳಲ್ಲಿ ಒಂದೇ ಭಾಷೆ ಅನುಸರಿಸುವುದು ಅತೀ ಅಗತ್ಯ ಎಂಬ ವಾದ.

ರಾಜ್ಯ ಪುನರ್ವಿಂಗಡನಾ ಅಧಿನಿಯಮದ ಮುಖ್ಯ ಉದ್ದೇಶ ಆಯಾ ಪ್ರಾಂತ್ಯಗಳಲ್ಲಿ ಸ್ಥಳೀಯ ಭಾಷೆಗಳಲ್ಲಿಯೇ ಆಡಳಿತ

ನಿವೃತ್ತ ನ್ಯಾಯಾಧೀಶರು, ದರ್ಭೆ, ಪುತ್ತೂರು-574 202

ನಡೆಸುವಂತಾಗಿ, ಆಯಾ ಪ್ರಾಂತ್ಯಗಳ ಜನತೆಯು, ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬಾಳಿನ ಪರಿಪೂರ್ಣತೆಯನ್ನು ಸಾಧಿಸಲು ಅನುಕೂಲವೇ ಆಗಿದೆ. ಭಾಷೆಯು ಮನುಷ್ಯನ ಮನೋಭಾವನೆಗಳ ವಾಹಕ. ಅದು ಜನರ ಆಡುಭಾಷೆಯಲ್ಲಿದ್ದರೆ ಮಾತ್ರ ಅನುಕೂಲ. ಆದರಿಂದ ಮಾತ್ರ ಪರಸ್ಪರ ಚೆನ್ನಾಗಿ ಅರಿತುಕೊಳ್ಳಲು ಸಾಧ್ಯ. ಅಂತಲೇ ಸರಕಾರದ ಆಡಳಿತದ ಇತರ ಇಲಾಖೆಗಳಿಗಿಂತ ನ್ಯಾಯಾಲಯಗಳ ವ್ಯವಹಾರಗಳು ಜನರ ಭಾಷೆಯಲ್ಲಿರಬೇಕಾದುದು ಅತೀ ಅಗತ್ಯ. ನ್ಯಾಯಾಲಯಗಳ ವ್ಯವಹಾರಗಳು ಜನ-ಜೀವನದ ಮೇಲೆ, ಅದಕ್ಕೂ ಮಿಗಿಲಾಗಿ ಜನರ ಮನೋಭಾವನೆಗಳ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರುತ್ತವೆ. ಪರಕೀಯ ಭಾಷೆಯಲ್ಲಿ ನ್ಯಾಯಾಲಯಗಳ ವ್ಯವಹಾರ ನಡೆದಾಗ, ಪರಕೀಯ ಭಾಷೆಯಲ್ಲಿ ಪಾಂಡಿತ್ಯ ಪಡೆದವರಿಗಷ್ಟೇ ಪ್ರಾಶಸ್ತ್ಯ ದೊರೆತು ನಿಜವಾಗಿ ಯಾವ ಮುಗ್ಧ ಜನರಿಗೆ ನ್ಯಾಯಾಂಗ ವ್ಯವಹಾರಗಳ ಲಾಭ ದೊರೆಯಬೇಕಾಗಿತ್ತೋ ಅವರಿಗೆ ನ್ಯಾಯ ದೊರಕದೇ ಇರುವ ಸಾಧ್ಯತೆಗಳೇ ಹೆಚ್ಚು. ನ್ಯಾಯಾಲಯಗಳ ತೀರ್ಪುಗಳು ಪಕ್ಷಗಾರರನ್ನು ಪ್ರತಿನಿಧಿಸುವ ವಕೀಲರ ಜಾಣ್ಮೆ, ಚಾತುರ್ಯ, ಸಾಕ್ಷಿಗಳ ಸತ್ಯಾಸತ್ಯತೆ ಮತ್ತು ನ್ಯಾಯಾಧೀಶರ ಕರ್ತೃತ್ವ ಶಕ್ತಿ ಹಾಗೂ ಪರಾಮರ್ಶೆಯ ಶಕ್ತಿಯನ್ನಾಧರಿಸಿ ಬರುತ್ತವೆ. ತನ್ನ ಪರವಾಗಿ ಮಂಡಿಸಲಾದ ವಾದ ಸರಣಿ ಸಮರ್ಪಕವಾಗಿದೆಯೇ ಅಥವಾ ವಕೀಲರು ಮಂಡಿಸಿದ ವಾದವನ್ನು ನ್ಯಾಯಾಧೀಶರು ಸರಿಯಾಗಿ ಗ್ರಹಿಸಿದ್ದಾರೆಯೇ ಎಂಬ ವಿಷಯ ಕಕ್ಷಿದಾರನಿಗೆ ಗೊತ್ತಾಗಬೇಕಾದರೆ ನ್ಯಾಯಾಲಯದ ವ್ಯವಹಾರಗಳು ಅವನಿಗೆ ಗೊತ್ತಿರುವ ಭಾಷೆಯಲ್ಲಿ ನಡೆದಾಗ ಮಾತ್ರ. ನ್ಯಾಯಾಲಯದಲ್ಲಿ ನಡೆದಿರುವ ಅಧಿವಿಚಾರಣಾ ಪ್ರಕ್ರಿಯೆ ಒಂದು, ವ್ಯವಹಾರದ ಭಾಷೆ ತಿಳಿಯದ ಪಕ್ಷಗಾರರು ಮತ್ತು ಸಂಬಂಧಪಟ್ಟ ಇತರರು ಅರ್ಥ ಮಾಡಿಕೊಂಡದ್ದೇ ಮತ್ತೊಂದು. ಪರಿಣಾಮ ನ್ಯಾಯಾಲಯದ ವ್ಯವಹಾರದ ವಿರುದ್ಧ, ನ್ಯಾಯಾಧೀಶರ ವಿರುದ್ಧ ಸಾರ್ವಜನಿಕರು ಸಿಡಿದೆದ್ದ ಪ್ರಕರಣವೊಂದು ಹೀಗಿದೆ :

ಮದುವೆಯಾಗಿ ಇನ್ನೂ ಮೂರು ತಿಂಗಳು ಪೂರ್ತಿಯಾಗದ ಯುವತಿಯನ್ನು ಕತ್ತಿಯಿಂದ ಕಡಿದು ಕೊಲೆ ಮಾಡಲಾಗಿತ್ತು. ತನಿಖಾಧಿಕಾರಿ ಮೃತಳ ಗಂಡನನ್ನೇ ದಸ್ತಗಿರಿ ಮಾಡಿ, ತನಿಖೆ ನಡೆಸಿ ಅವನ ವಿರುದ್ಧ ಕೊಲೆ ಆರೋಪ ಹೊರಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದ. ಅದರಲ್ಲಿ ಆರೋಪಿ ಅಂದೇ ಸಾಯಂಕಾಲ ಮೃತಳಿಗೆ ಶೀಲವನ್ನು ಶಂಕಿಸಿ ಹೊಡೆದಿದ್ದ. ಅವಳು ಆರಕ್ಷಕ ಠಾಣೆಗೆ ದೂರು ಸಲ್ಲಿಸಿದ್ದಳು. ಠಾಣೆಯಲ್ಲಿ ಆರೋಪಿ, ಹೆಂಡತಿಗೆ ಇನ್ನು ಮುಂದೆ ಹೊಡೆಯುವುದಿಲ್ಲ, ಬಡಿಯುವುದಿಲ್ಲ, ಚಿತ್ರಹಿಂಸೆ ನೀಡುವುದಿಲ್ಲ ಎಂದು ಮುಚ್ಚಳಿಕೆ ಬರೆದು ಕೊಟ್ಟಿದ್ದ. ಅಲ್ಲಿಂದ ಹೆಂಡತಿಯನ್ನು ಮನೆಗೆ ಬಿಟ್ಟು ಬಾರಿಗೆ ಕುಡಿಯಲು ಹೋಗುತ್ತಿದ್ದ. ತಡರಾತ್ರಿ ಮನೆಗೆ ಹಿಂದಿರುಗಿದ್ದ. ಬೆಳಗ್ಗೆ ಹೆಂಡತಿಯ ಶವ ರಕ್ತದ ಮಡುವಿನಲ್ಲಿತ್ತು. ಶರೀರದಲ್ಲಿ ಒಂದಲ್ಲ ಎರಡಲ್ಲ ನಾಲ್ಕು ಕತ್ತಿಯಿಂದ ಕಡಿದ ಗಾಯಗಳಿದ್ದುವು. ಆರೋಪಿ ಮನೆಯಲ್ಲಿರಲಿಲ್ಲ. ಅವನನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಿ ಪ್ರಶ್ನಿಸಿದಾಗ ತಾನು ಮೃತಳನ್ನು ಕೊಲೆ ಮಾಡಿರುವುದನ್ನು ಒಪ್ಪಿಕೊಂಡಿರುತ್ತಾನೆ. ತನಿಖಾಧಿಕಾರಿಯೇ ಅವನ ತಪ್ಪೊಪ್ಪಿಗೆ ಹೇಳಿಕೆಯನ್ನು ಬರೆದುಕೊಂಡಿದ್ದಾನೆ.

ಪ್ರತಿ ಕಕ್ಷಿ ವಕೀಲ ಬೇರೆಯೇ ಒಂದು ಕಥೆ ಕಟ್ಟಿ ಅದನ್ನು ಸಾಕ್ಷಿಗಳ ಪಾಟಿ ಸವಾಲಿನಿಂದ ಸಾಧಿಸಿ ತೋರಿಸಿದರು! ಆರೋಪಿಯ ಸುಮಾರು ಮೂವತ್ತು ವರ್ಷದ ಮಲತಾಯಿ ಅದೇ ಮನೆಯಲ್ಲಿದ್ದಳು. ಅವಳ ಶೀಲದ ಬಗ್ಗೆ ಬೇಸರಪಟ್ಟು ಅವಳ ಗಂಡ, ಅಂದರೆ ಆರೋಪಿಯ ತಂದೆ ಮನೆಗೆ ಬರುತ್ತಿದ್ದುದೇ ಅಪರೂಪದಲ್ಲಿ ಅಪರೂಪ. ಅವನಿಗೆ ತನ್ನ ಎರಡನೇ ಹೆಂಡತಿ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಮಧ್ಯೆ

ಅನೈತಿಕ ಸಂಬಂಧ ಇದೆ ಎಂಬ ಸಂಶಯ. ಅದೇ ಇನ್ಸ್‌ಪೆಕ್ಟರ್ ಈ ಕೊಲೆ ಪ್ರಕರಣದ ತನಿಖಾಧಿಕಾರಿ! ಮೃತಳ ಶೀಲದ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದೇ ಆರೋಪಿಯ ಮಲತಾಯಿ. ಪೊಲೀಸರಿಗೆ ದೂರು ನೀಡುವಂತೆ ಮೃತಳನ್ನು ಒತ್ತಾಯಿಸಿದ್ದೇ ಮಲತಾಯಿ. ಆರೋಪಿ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟಿದ್ದಾನೆ ಎಂದು ಮಲತಾಯಿಗೆ ಖುದ್ದಾಗಿ ಗೊತ್ತಿತ್ತು. ಇವಿಷ್ಟು ಸಾಕ್ಷಿಗಳ ಪಾಟಿ ಸವಾಲಿನಲ್ಲಿ ಪ್ರತಿ ಕಕ್ಷಿ ವಕೀಲರು ಸಾಧಿಸಿದ್ದು. ಅವರ ಬಾಯಿ ಮಾತಿನ ವಾಗ್ಝರಿ ಇಂಗ್ಲಿಷಿನಲ್ಲಿ ಈ ರೀತಿಯಿತ್ತು :

ಮದುವೆಯಾದ ಮೇಲೆ ಆರೋಪಿ ಮತ್ತು ಮೃತಳು ಮನೆಯಲ್ಲಿರುತ್ತಿದ್ದರು. ಅದರಿಂದಾಗಿ ಆರೋಪಿಯ ಮಲತಾಯಿಗೆ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್‌ನಿಗೆ ತಮ್ಮ ಅನೈತಿಕ ಸಂಬಂಧ ಮುಂದುವರಿಸಲು ತೊಂದರೆಯಾಯಿತು. ಅದಕ್ಕಾಗಿಯೇ ಆರೋಪಿಗೆ ಅವನ ಹೆಂಡತಿಯ ಶೀಲದ ಬಗ್ಗೆ ಸಂಶಯವುಂಟು ಮಾಡಿದರು. ಅವನು ಅದರ ಕುರಿತು ವಿಚಾರಿಸಿದಾಗ ಅದೇ ಠಾಣೆಗೆ ದೂರು ಕೊಟ್ಟು ಆರೋಪಿಯಿಂದ ಮುಚ್ಚಳಿಕೆ ಬರೆದು ಕೊಡುವಂತಹ ಸಂದರ್ಭ ಉಂಟುಮಾಡಿದರು. ಆರೋಪಿ ಮೃತಳನ್ನು ಮನೆಯಲ್ಲಿ ಬಿಟ್ಟು ಮನೆಯಿಂದ ಹೊರಗೆ ಹೋದಾಗ ಅತ್ತೆಯೇ ಸೊಸೆಗೆ ಕತ್ತಿಯಿಂದ ಬರ್ಬರವಾಗಿ ಕಡಿದು ಕೊಲೆ ಮಾಡಿದಳು. ರಾತ್ರಿ ಶವ ಕಂಡ ಆರೋಪಿ ಹೆದರಿ ಪರಾರಿಯಾದ. ಅವಳ ಮಲತಾಯಿಯ ಉದ್ದೇಶ ತನ್ನ ಅನೈತಿಕ ದಂಧೆಗೆ ಅಡ್ಡಿಯಾಗಿದ್ದ ಸೊಸೆಯನ್ನು ಕೊಂದು ಮಲಮಗನನ್ನು ಜೈಲಿಗೆ ಅಟ್ಟುವುದಾಗಿತ್ತು. ಅದಕ್ಕೆ ಸಂಪೂರ್ಣ ಕುಮ್ಮಕ್ಕು ನೀಡಿರುವುದು ತನಿಖಾಧಿಕಾರಿ ಪೊಲೀಸ್ ಇನ್ಸ್‌ಪೆಕ್ಟರ್!

ಆರೋಪಿಯ ಪರವಾಗಿ ಮಂಡಿಸಿದ ವಾದ ಸಂಶಯಾತೀತವಾಗಿ ಸಾಬೀತಾಗಲಿಲ್ಲ ನಿಜ. ಆದರೆ ಅದು ಸಾಧ್ಯವಿರುವುದು ಹೌದು. ಅಭಿಯೋಜಕರು ಮಂಡಿಸಿದ ವಾದ ಮತ್ತು ಪ್ರತಿಕಕ್ಷಿ ಮಂಡಿಸಿದ ವಾದ ಎರಡೂ ನಡೆಯಲಿಕ್ಕೆ ಸಾಧ್ಯವಿದ್ದರೆ, ಆರೋಪಿಯನ್ನು ಬಿಡುಗಡೆಗೊಳಿಸಬೇಕು ಎಂಬುದು ಅಪರಾಧಿತ ಕಾನೂನಿನ ಒಂದು ತತ್ತ್ವ. ಅಂತಲೇ ಆರೋಪಿಯನ್ನು ಬಿಡುಗಡೆಗೊಳಿಸಲಾಯಿತು. ಈ ಕಾನೂನಿನ ತತ್ತ್ವವೂ ಸಾರ್ವಜನಿಕರಿಗೆ ಅರಿವಿಲ್ಲ. ಅದು ಹೇಗೆ ಸಾಧ್ಯ ಎಂದು ಪ್ರತಿಕಕ್ಷಿ ವಕೀಲರು ಇಂಗ್ಲಿಷಿನಲ್ಲಿ ವಾದಿಸಿರುವುದು ಗೊತ್ತಾಗಲಿಲ್ಲ. ಪರಿಣಾಮ ನ್ಯಾಯಾಲಯದ ವ್ಯವಹಾರದ ಮೇಲೆ ಮತ್ತು ನ್ಯಾಯಾಧೀಶರ ಪ್ರಾಮಾಣಿಕತೆಯ ಮೇಲೆ ಪಕ್ಷಗಾರರು ಮತ್ತು ಇತರರು ಸಂಶಯಪಟ್ಟು ಸಿಡಿದೇಳುವಂತಾಗಿರುವುದು ಅಸಹಜವಲ್ಲ.

ಈ ಇಡೀ ಪ್ರಕರಣ ಸಾರ್ವಜನಿಕರಿಗೆ ಅರ್ಥವಾಗುವ ಸರಳ ಕನ್ನಡ ಭಾಷೆಯಲ್ಲಾಗುತ್ತಿದ್ದರೆ ಸಾರ್ವಜನಿಕರು ಸಿಡಿದೇಳುವ ಪ್ರಮೇಯವೇ ಇರುತ್ತಿರಲಿಲ್ಲ. ಆರೋಪಿಗೆ ತನ್ನನ್ನು ಬಿಟ್ಟು ಬಿಟ್ಟರೆ ಸಾಕು. ಆದರೆ ಫಿರ್ಯಾದಿಗೆ, ಸಾಕ್ಷಿ ನುಡಿದವರಿಗೆ ಮತ್ತು ಪ್ರಕರಣಕ್ಕೆ ಸಂಬಂಧಪಟ್ಟವರಿಗೆ ತಾವೆಲ್ಲಿ ಸೋತಿದ್ದೇವೆ, ಯಾಕೆ ಸೋತಿದ್ದೇವೆ ಎಂದು ತಿಳಿಯುವುದು ಅತೀ ಅಗತ್ಯ. ನ್ಯಾಯಾಲಯದ ಎಲ್ಲ ಕಾರ್ಯಕಲಾಪಗಳು ಸಾರ್ವಜನಿಕರಿಗೆ ಸುಲಭದಲ್ಲಿ ಅರ್ಥವಾಗುವ ಭಾಷೆಯಲ್ಲಿರಬೇಕು. ಹಾಗಾದರೆ ಎಷ್ಟೋ ವ್ಯಾಜ್ಯಗಳು ನ್ಯಾಯಾಲಯದ ಕಟಕಟೆ ಹತ್ತುವುದಕ್ಕೆ ಮೊದಲೇ ಇತ್ಯರ್ಥಗೊಳ್ಳುವ ಸಾಧ್ಯತೆಯೇ ಹೆಚ್ಚು. ನಮ್ಮಲ್ಲಿರುವ ಬಹುತೇಕ ವ್ಯಾಜ್ಯಗಳ ಕಾರಣ ನ್ಯಾಯಾಲಗಳ ವ್ಯವಹಾರ ಕಕ್ಷಿಗಾರರಿಗೆ ಅರ್ಥವಾಗದ ಭಾಷೆಯಲ್ಲಿ ನಡೆಸುತ್ತಿರುವುದೇ ಆಗಿದೆ ಎಂದು ತಜ್ಞರ ಅಭಿಪ್ರಾಯ. ಅದು ಸತ್ಯಕ್ಕೆ ಹತ್ತಿರ.

☐

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಸಾಹಿತ್ಯ ಮತ್ತು ಸಂಘಟನೆ

ಡಾ। ಬಿ. ಜನಾರ್ದನ ಭಟ್



ಸಾಹಿತ್ಯ ಕ್ಷೇತ್ರದ ಉನ್ನತಿಗೆ ಸಂಘಟನೆಗಳು ನೆರವಾಗುತ್ತವೆಯೆ ಇಲ್ಲವೆ ಎನ್ನುವುದು ಪರಿಶೀಲಿಸತಕ್ಕ ಒಂದು ವಿಷಯವಾಗಿದೆ. ಯಾಕೆಂದರೆ ಸಾಹಿತ್ಯದ ಕೆಲವು ಸಮಾನ ಮನಸ್ಕರು ಸೇರಿ ಸಂಘಟನೆಗಳನ್ನು ಕಟ್ಟಿಕೊಂಡುದು, ಇಂಥ ಸಂಘಟನೆಗಳು ವಿಘಟಿತವಾದಾಗ ಅದಕ್ಕೆ ಕಾರಣರೆಂದು ಅವರಿವರನ್ನು ದೂಷಿಸಿದುದು, ಸಂಘಟನೆ ಮತ್ತೆ ಬಲವಾಗಲಿ ಎಂದು ಆಶಿಸಿದುದು ಇವೆಲ್ಲ ನಮ್ಮ ಕಣ್ಣೆದುರು ನಡೆದಿವೆ. ಈ ಕಾರಣದಿಂದ ಯಾವುದೇ ಒಂದು ಮಾದರಿಯ ಸಾಹಿತ್ಯ ಸಂಘಟನೆಯನ್ನು ಉದ್ದೇಶಿಸದೆ, ಒಟ್ಟಾರೆ ಸಾಹಿತ್ಯಕ್ಕೂ ಸಂಘಟನೆಗೂ ಇರುವ ಸಂಬಂಧವನ್ನು ಚರ್ಚಿಸಬೇಕಾಗಿದೆ.

ಸಾಹಿತ್ಯ ಒಂದು ಆಸೆಯಾದಾಗ ಸಂಘಟನೆಗಳು ಹುಟ್ಟುತ್ತವೆ, ಆಶಯವಾಗಿದ್ದಾಗ ಚಳುವಳಿಯಾಗಿ ಗುರುತಿಸಲ್ಪಡುತ್ತದೆ. ಸಾಹಿತ್ಯ ಒಂದು ಆಸೆಯಾಗುವುದು ಎಂದರೇನು? ಆಸೆ ಯಾವಾಗಲೂ ವೈಯಕ್ತಿಕ ಅಥವಾ ತಮ್ಮವರೆಂಬ ಗುಂಪಿನವರ ಸ್ವಲಾಭವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದರಿಂದ ಉದ್ಭವವಾಗುತ್ತದೆ. ಇದು ಸಮಾಜದ ಸಮಸ್ತರ ಸುಖವನ್ನೂ ಬಯಸುವಂಥದ್ದಲ್ಲ, ಲೋಕ ಸಂಚಯವನ್ನು ಗಮನದಲ್ಲಿಟ್ಟುಕೊಂಡಿರುವುದಿಲ್ಲ.

ಸಂಘಟನೆ ಸಾಹಿತ್ಯಕ್ಕಿಂತ ಮುಂಚೆ ಸೃಷ್ಟಿಯಾದಾಗ ಅದು

'ಅಕ್ಷರ', ದೇವಸ್ಥಾನ ರಸ್ತೆ, ಬೆಳ್ಮಣ್ಣು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಒಂದು ಉದ್ದೇಶವನ್ನು, ಆಸೆಯನ್ನು ಇಟ್ಟುಕೊಂಡಿರುವುದೇ ಹೆಚ್ಚು. ಜತೆಗೆ ಇನ್ನು ಯಾವುದೋ ಗುಂಪನ್ನು, ಸಂಘಟನೆಯನ್ನು ವಿರೋಧಿಸುವ ಛಲವನ್ನು ಸಾಂದರ್ಭಿಕವಾಗಿ ಮೈಗೂಡಿಸಿಕೊಂಡಿರಬಹುದು. ಇಂಥ ಅಘೋಷಿತ ಘಟನೆಯನ್ನು ಹೊಂದಿರುವ ಒಂದು ಸಂಘಟನೆ ಪ್ರಕೃತಿ ಸಹಜ ದಾರಿಯಲ್ಲಿ ನಡೆದು ಒಂದು ಕೊನೆಯನ್ನು ಕಾಣುತ್ತದೆ. ಭಗವದ್ಗೀತೆ ಇದನ್ನು ಹೀಗೆ ಹೇಳುತ್ತದೆ: 'ಸಂಗಾತ್ ಸಂಜಾಯತೇ ಕಾಮಃ, ಕಾಮಾತ್ ಕ್ರೋಧೋಭಿ ಜಾಯತೇ, ಕ್ರೋಧಾತ್ ಭವತಿ ಸಮ್ಮೋಹಃ, ಸಮ್ಮೋಹಾತ್ ಸ್ಮೃತಿ ವಿಭ್ರಮಃ, ಸ್ಮೃತಿ ಭ್ರಂಶಾತ್ ಬುದ್ಧಿನಾಶಃ, ಬುದ್ಧಿನಾಶಾತ್ ಪ್ರಣಶ್ಯತಿ.''

ಎಲ್ಲ ಸಂಘಟನೆಗಳಿಗೂ ಇದೇ ಗತಿಯೆಂದು ಹೇಳಲಾಗದು. ಮೂಲದಲ್ಲೇ ಹಳಿ ತಪ್ಪದಿದ್ದರೆ, ಸಂಘಟನೆಯು ಆಸೆಗಳ ಬೆನ್ನು ಹತ್ತಿ ಹೋಗದಿದ್ದರೆ, ಸಂಘಟನೆಯು ಲೋಕಹಿತಕಾರಿಯಾಗಿ ಇರಬಲ್ಲುದು, ಬೆಳೆಯಬಲ್ಲುದು. ಆದರೆ ಇದೂ ಕೂಡ ಸಾಹಿತ್ಯಕ್ಕೆ ಆಶ್ರಯವನ್ನು ಕೊಡಬಲ್ಲುದೆ ಹೊರತು, ಅದರ ಗೊತ್ತು ಗುರಿಗಳನ್ನು ನಿರ್ದೇಶಿಸಲಾರದು.

ಯಾಕೆ ಅಂದರೆ, ಸಾಹಿತ್ಯವು ಸ್ವತಃ ಒಂದು ಸಂಘಟನೆ. ಅದರೆದುರು ನಾವು ಸಂಘಟನೆಗಳೆಂದು ಕರೆಯುವಂಥವೆಲ್ಲ ಕೇವಲ ಘಟನೆಗಳು. ಸಾಹಿತ್ಯ ಒಂದು ಸಂಘಟನೆ, ಯಾಕೆಂದರೆ ಅದು ಸ್ವತಃ ಸಮಗ್ರವಾಗಿರುವಂಥ ಒಂದು ಮೌಲ್ಯ ವ್ಯವಸ್ಥೆ, ಸರ್ವಸಮಾನತ್ವವನ್ನು ಒಪ್ಪುವ ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆ. ಸಾಹಿತ್ಯ ಕೃತಿಯೊಂದು ಹಲವು ಬಗೆಯ ವಿಭಿನ್ನ ಮೌಲ್ಯಗಳ ಮುಖಾಮುಖಿಯಾಗದೆ ಮೌಲಿಕವಾಗಲಾರದು, ಸಮಗ್ರವಾಗಲಾರದು, ಲೋಕಪ್ರಿಯವಾಗಿ ಕಾಲಾಬಾಧಿತವಾಗಿ ಉಳಿಯಲಾರದು. ನಮ್ಮ ಸಂಘಟನೆಗಳೋ ಹಾಗಲ್ಲ. ಅವು ಸಮಾನ ಮನಸ್ಕರ ಕೂಟಗಳು. ಹಾಗಾಗಿ ಸಾಹಿತ್ಯ ಯಾವ ವೈವಿಧ್ಯಮಯ ಮೌಲ್ಯಗಳಿಗೆ ವೇದಿಕೆಯಾಗುತ್ತದೋ, ಅವನ್ನೆಲ್ಲ ಒಪ್ಪುವ ಬಹುಮುಖೀ ಸಂವೇದನೆ ಈ ಕೂಟದ ಸದಸ್ಯರಿಗೆ ಇರಲಾರದು.

ಸಾಹಿತ್ಯವು ಪರ-ವಿರುದ್ಧ ಮೌಲ್ಯಗಳನ್ನು ಮಥಿಸಿ ಲೋಕಹಿತಕಾರಿಯಾದ ಮೌಲ್ಯವನ್ನು ಜನರಿಗೆ ತೋರಿಸಿಕೊಡುತ್ತದೆ ಅಥವಾ ಕೊಡಬೇಕು. ಹೀಗೆ ಮಾಡಿದ ಸಾಹಿತ್ಯ ಮಾತ್ರ ಉಳಿಯುತ್ತದೆ. ಜಾತಿಯ ಬಣ್ಣದ ಕನ್ನಡಕದಿಂದ ಲೇಖಕನಾಗಲಿ ಓದುಗನಾಗಲಿ ನೋಡತೊಡಗಿದರೆ ಕೃತಿಯೊಂದು ಸಾಹಿತ್ಯವಾಗಿ ಉಳಿಯಲಾರದು. ಉದಾಹರಣೆಗೆ ರಾಮಾಯಣದಲ್ಲಿ ರಾಮನ ಜಾತಿ ವರ್ಣ ಕ್ಷತ್ರಿಯ, ರಾವಣ ಬ್ರಾಹ್ಮಣ, ಈ ಕಾವ್ಯ ಬ್ರಾಹ್ಮಣ ವಿರೋಧಿ ಕಾವ್ಯ ಎಂಬ ವಿಮರ್ಶೆ ಬಂತೆಂದು ಇಟ್ಟುಕೊಳ್ಳೋಣ. ಈ ರೀತಿ ವಾಲ್ಮೀಕಿಯೂ ಯೋಚಿಸಿರಲಿಲ್ಲ, ಈಗಿನ ಓದುಗರೂ ಯೋಚಿಸುವುದಿಲ್ಲ. ಕೆಟ್ಟ ಮೌಲ್ಯಗಳಿಗೆ (ಮೌಲ್ಯ ಎನ್ನುವ ಶಬ್ದವನ್ನು ಬಳಸಬಹುದಾದರೆ) ಅಂತಿಮವಾಗಿ ಸೋಲುಂಟಾಗುತ್ತದೆ. ಒಳ್ಳೆಯ ಮೌಲ್ಯಗಳನ್ನು ಪ್ರತಿನಿಧಿಸಿದ ರಾಮ ಎಲ್ಲ ಜಾತಿಯವರಿಗೂ ದೇವರಾಗುತ್ತಾನೆ. ಮಹಾಭಾರತದಲ್ಲಿ ಬ್ರಾಹ್ಮಣನಾದ ಅಶ್ವತ್ಥಾಮ ಲೋಕಕ್ಕೆ ಮಾರಕವಾದ ಅಸ್ತ್ರವನ್ನು ಪ್ರಯೋಗಿಸಿದಾಗ ಹುಟ್ಟಿನಿಂದ ಶೂದ್ರನಾಗಿದ್ದು ಅನಂತರ ಕ್ಷತ್ರಿಯ ಸಮಾನನಾದ ಕೃಷ್ಣನಿಂದ ಶಪಿತನಾಗಿ, ಸಾವಿಲ್ಲದೆ ಸದಾ ನೋವುಗಳೊಂದಿಗೆ ಅಲೆಯುವ ಕರ್ಮಕ್ಕೆ ಬಾಧ್ಯನಾಗುತ್ತಾನೆ. ಇಂಥ ಸಂದರ್ಭಗಳಲ್ಲಿ ಜಾತಿಗಳನ್ನು ಸೂಚಿಸುವುದು ಅನಗತ್ಯವೆಂದು ಎಲ್ಲರಿಗೂ ಅರಿವಾಗುತ್ತದೆ. ಸಾಹಿತ್ಯ ಮೌಲ್ಯಗಳ ಸಂಘರ್ಷವನ್ನು ತೋರಿಸುತ್ತದೆಯೇ ಹೊರತು ಜಾತಿಗಳ ಸಂಘರ್ಷವನ್ನಲ್ಲ. ಅಥವಾ ಹೀಗೆನ್ನಬಹುದೇನೋ : ಜಾತಿಗಳ ಸಂಘರ್ಷವನ್ನು ಹೇಳುವ ಕೃತಿಯೂ ಅಂತಿಮವಾಗಿ ಮೌಲ್ಯಗಳ ಸಂಘರ್ಷವನ್ನೇ ಧ್ವನಿಸಿ, ಸರ್ವರಿಗೂ ಅಂದರೆ ಲೋಕಕ್ಕೆ ಹಿತಕರವಾದ ಮೌಲ್ಯಗಳನ್ನು ಸ್ಥಾಪಿಸಿದರೆ ಅಂಥ ಸಾಹಿತ್ಯ ಕೃತಿ ಉಳಿಯುವುದು.

ಸಾಂದರ್ಭಿಕವಾಗಿ ಇಲ್ಲಿ ಸಾಹಿತ್ಯ ಕೃತಿಗಳು ಉಳಿಯುವ ಬಗ್ಗೆ ಒಂದು ಮಾತು ಸೇರಿಸಬೇಕಾಗುತ್ತದೆ.

ಯಾವ ಕೃತಿಯು ಜನರ ಹಿತಕ್ಕಾಗಿ ಇರುತ್ತದೋ ಅದು ಉಳಿಯುತ್ತದೆ. ಯಾವುದು ಜನರಿಗೆ ಅಗತ್ಯವಿಲ್ಲವೋ ಅದು ಉಳಿಯುವುದಿಲ್ಲ.

ಸಂಘಟನೆಗಳ ಬಗ್ಗೆ ಹೇಳುವುದಾದರೆ, ಲೋಕಹಿತಕಾರಿಯಾದ ಸಂಘಟನೆಯಿಂದ ಸಾಹಿತ್ಯಕ್ಕೆ ಪ್ರೇರಣೆ, ಒತ್ತಾಸೆ ದೊರೆಯಬಹುದಲ್ಲವೆ ಎಂದು ಯೋಚಿಸಬಹುದು. ಸಂಘಟನೆ ಆಶ್ರಯ ಕೊಡುವ ಕೆಲಸವನ್ನು ಮಾಡಬಹುದು. ಹಿಂದೆ ಸಾಹಿತ್ಯಕ್ಕೆ ರಾಜಾಶ್ರಯ ದೊರಕುತ್ತಿತ್ತು. ಅದು ದೊರಕಿದಲ್ಲೆಲ್ಲ ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಿದೆ ಅಥವಾ ಒಳ್ಳೆಯ ಸಾಹಿತ್ಯಕ್ಕೆ ರಾಜಾಶ್ರಯವೇ ಕಾರಣ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿಲ್ಲ. ಕಾಳಿದಾಸನಿಗಾಗಲಿ, ಶೇಕ್‌ಸ್ಪಿಯರಿಗಾಗಲಿ ಲಭಿಸಿದ್ದ ರಾಜಮಿತ್ರತ್ವ ಅವರ ಸಾಹಿತ್ಯ ಸೃಷ್ಟಿಯನ್ನು ಪ್ರೇರೇಪಿಸಿದ್ದು ನಮಗೆ ತಿಳಿಯುವುದಿಲ್ಲ. ಶೇಕ್‌ಸ್ಪಿಯರನ ನಾಟಕಗಳಂತೂ ಜನರಿಗಾಗಿ ಸೃಷ್ಟಿಯಾದವು, ಇರಲಿ. ಸಂಘಟನೆಗಳು ರಾಜಾಶ್ರಯದ ಮಾದರಿಯಲ್ಲಿ ಸಾಹಿತಿಗಳಿಗೆ ಆಶ್ರಯ, ಧೈರ್ಯಗಳನ್ನು ಕೊಡಬಹುದು. ಲಾಬಿ ಮಾಡುವ ಮೂಲಕ ಪ್ರಶಸ್ತಿಗಳನ್ನು ಕೊಡಿಸಬಹುದು. ಕನ್ನಡದ ಸಂದರ್ಭದಲ್ಲಿ ಪುಸ್ತಕಗಳನ್ನು ಪ್ರಕಟಿಸುವುದೂ ಕೂಡ ರಾಜಾಶ್ರಯವೇ ಆಗಿರುವುದರಿಂದ ಆ ಸಹಾಯವನ್ನೂ ಸಂಘಟನೆಗಳು ಮಾಡಬಹುದು. ಇವುಗಳಿಂದಾಗಿ ಕೃತಿಗಳನ್ನು ರಚಿಸುತ್ತಲೇ ಹೋಗುವುದು ಲೇಖಕನಿಗೆ ಸಾಧ್ಯವಾಗಬಹುದು. ಆದರೆ ಅಂತಿಮವಾಗಿ ಅದರ ಮೌಲ್ಯಗಳನ್ನು ನಿರ್ಧರಿಸುವುದು ಮಾತ್ರ ಸಂಘಟನೆಗಳಲ್ಲ.

ಸಂಘಟನೆಗಳು ಪೂರ್ವಭಾವಿಯಾಗಿ ನಿರ್ಧರಿಸಿ ಘೋಷಿಸುವ ಮ್ಯಾನಿಫೆಸ್ಟೋಗಳು, ಚುನಾವಣಾ ಪ್ರಣಾಳಿಕೆಗಳಂತೆ ಇರುತ್ತವೆ. ಇದರಿಂದ ಒಂದು ಕಡೆ ಲೇಖಕರನ್ನು, ಇನ್ನೊಂದು ಕಡೆ ಓದುಗರನ್ನು ಪ್ರಭಾವಿಸಲು ಸಂಘಟನೆಗಳು ಪ್ರಯತ್ನಿಸುತ್ತವೆ. ಮೂಲದಲ್ಲೇ ಏಕಮುಖೀ ಚಿಂತನೆ, ಸ್ವಾರ್ಥ, ಜಾತಿ ಪೂರ್ವಾಗ್ರಹ ಇಂತಹ ಯಾವುದಾದರೊಂದು ಮಿತಿಯಿಂದ ನಿರ್ಬಂಧಿಸಲ್ಪಟ್ಟ ಸಂಘಟನೆಗಳು ಆ ಕಾರಣದಿಂದಲೇ ವಿಫಲವಾಗುತ್ತವೆ. ಇಂಥ ಸಂಘಟನೆಗಳ ಪ್ರೇರಣೆಯಿಂದ ಸೃಷ್ಟಿಯಾದ ಸಾಹಿತ್ಯವೂ ಹಾಗೆಯೇ, ಅದೇ ಕಾರಣದಿಂದ ವಿಫಲವಾಗುತ್ತದೆ ಅಥವಾ ಮಾತ್ರ ಸಂಘಟನೆಯ ಪ್ರಣಾಳಿಕೆಯ ವಿವರಣೆಯಾಗಿ ಮಾತ್ರ ಸಾರ್ಥಕ್ಯವನ್ನು ಪಡೆಯುತ್ತದೆ.

ಸಂಘಟನೆಗಳು ನಿರ್ಬಂಧಗಳನ್ನು ವಿಧಿಸದೆ ಸಾಹಿತಿಗಳಿಗೆ ಬರೆಯುವ ಅವಕಾಶ, ಸೌಲಭ್ಯಗಳನ್ನು ಒದಗಿಸುವುದು, ಕೃತಿಗಳನ್ನು ಪ್ರಕಟಿಸುವುದು ಇಂತಹ ಕೆಲಸಗಳನ್ನು ಮಾಡಿದರೆ ಸಾಹಿತ್ಯಕ್ಕೆ ಧನಾತ್ಮಕವಾದ ಪ್ರಯೋಜನವುಂಟಾಗಬಹುದು. ಉನ್ನತ ಧ್ಯೇಯದಿಂದ ಸಂಘಟಿತರಾದ ಋಷಿ ಸದೃಶ ಸಾಹಿತಿಗಳಿಂದ ಮನುಕುಲಕ್ಕೆ ಬೇಕಾದ ಸಾಹಿತ್ಯ ಸೃಷ್ಟಿಯಾಗಬಾರದೆಂದೇನೂ ಇಲ್ಲ. ಇತ್ತೀಚಿನ ಶತಮಾನಗಳಲ್ಲಿ ಹಾಗಾದ ಉದಾಹರಣೆಗಳಿಲ್ಲ. ಪೂರ್ವ ಕಾಲದಲ್ಲಿ ಉದಾಹರಣೆಗಳು ಸಿಗಬಹುದು; ಬಹುಶಃ ತಮಿಳು, ಜಪಾನೀ ಸಾಹಿತ್ಯಗಳಲ್ಲಿ. ಆದರೆ ಇವು ಹಕ್ಕುಗಳನ್ನು ರಕ್ಷಿಸಿಕೊಳ್ಳಲಿಕ್ಕೆ, ಹೋರಾಡಲಿಕ್ಕೆ ಕಟ್ಟಿದ ಸಂಘಟನೆಗಳಂತೆ ಇದ್ದಿರಲಾರವು.

ಹಕ್ಕುಗಳನ್ನು ರಕ್ಷಿಸಿಕೊಳ್ಳಲಿಕ್ಕೆ, ಯಾರದೋ ಶೋಷಣೆಯ ವಿರುದ್ಧ ಹೋರಾಡಲಿಕ್ಕೆ ರೂಪಿಸಲ್ಪಟ್ಟ ಸಂಘಟನೆಗಳು ಕಾರ್ಮಿಕ ಸಮುದಾಯಕ್ಕೆ ಹೆಚ್ಚು ಪ್ರಸ್ತುತವಾಗುತ್ತವೆ. ತಮ್ಮೆಲ್ಲರ ಶ್ರಮದ ಫಲವಾಗಿ ಸಿಗುವ ಲಾಭಾಂಶದಲ್ಲಿ ತಮಗೆ ನ್ಯಾಯಬದ್ಧವಾದ ಪಾಲು ಬೇಕೆಂದು ಕೇಳಿ ಪಡೆಯುವುದಕ್ಕೆ ಈ ಸಂಘಟನೆಗಳು ನೆರವಾಗುತ್ತವೆ. ಇಲ್ಲಿಯೂ ಕೂಡ ಕಾಮದಿಂದ ಕ್ರೋಧ, ಕ್ರೋಧದಿಂದ ಸಮ್ಮೋಹ, ಸಮ್ಮೋಹದಿಂದ ಸ್ಮೃತಿ ವಿಭ್ರಮ, ಇದರಿಂದ ಬುದ್ಧಿನಾಶ, ಅನಂತರ ಸರ್ವನಾಶ ಆಗಬಾರದೆಂದಿಲ್ಲ. ಸಂಘಟನೆ ಅಂದರೆ ತಾನೇ, ಬೇರೆಯವರು ಸಂಘಟನೆ ಮಾಡಬಾರದು ಎಂದು ಉಳಿದವರನ್ನು ಗೂಂಡಾಗಿರಿಯ ಮೂಲಕ

ನಿವಾರಿಸಿದ ಕಾರ್ಮಿಕ ನಾಯಕರ ಉದಾಹರಣೆ ನಮ್ಮ ಕಣ್ಣೆದುರು ಇದೆ. ಆದರೆ ಸಾಹಿತ್ಯ ಲೋಕದಲ್ಲಿ ಇದಕ್ಕೆ ಸಂವಾದಿಯಾದ ಉತ್ಪಾದನೆ, ಮಾರಾಟ, ಲಾಭ ಎಂಬ ಅಂಶಗಳಿಲ್ಲ. ಯಾವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು, ಯಾರ ವಿರುದ್ಧ ಹೋರಾಡಲು ಯಾವ ಲಾಭದಲ್ಲಿ ಪಾಲು ಪಡೆಯಲು ಎಂಬ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳದೆ ಸಂಘಟನೆಗಳು ಹೆಚ್ಚೇನೂ ಸಾಧಿಸಲಾರವು.

ಸಾಹಿತ್ಯದಲ್ಲಿ ಆಶಯ ಪ್ರಧಾನವಾಗಿದ್ದಾಗ ಚಳವಳಿಗಳು ಅಥವಾ ಪಂಥಗಳು ರೂಪುಗೊಳ್ಳುತ್ತವೆ. ಚಳವಳಿಗಳು ಸಂಘಟನೆಗಳಿಗಿಂತ ತುಂಬ ಭಿನ್ನವೇನೂ ಅಲ್ಲ. ಸಂಘಟನೆ ಸಾಹಿತ್ಯ ಸೃಷ್ಟಿಗಿಂತ ಮುಂಚೆಯೇ ಹುಟ್ಟಿಕೊಂಡುದಾದರೆ ಚಳುವಳಿ ಸಾಹಿತ್ಯ ಕೃತಿಗಳ ಹುಟ್ಟಿನಿಂದಾಗಿ ಗುರುತಿಸಲ್ಪಡುವ ಆಶಯ ಸಮಾನತೆಯೆಂಬ ವಿದ್ಯಮಾನ. ಇಲ್ಲಿಯೂ ಸಂಘಟನೆಯ ಮಾದರಿಯಲ್ಲೇ ಒಬ್ಬಿಬ್ಬರು ಕುಳಿತು ಪ್ರಣಾಳಿಕೆಗಳನ್ನು ಮೊದಲೇ ರಚಿಸಿರುವ ಸಾಧ್ಯತೆಯಿದೆ. ರಮ್ಯಪಂಥದ ಇಂಗ್ಲಿಷ್ ಪ್ರವರ್ತಕರಾದ ವಿಲಿಯಂ ವರ್ಡ್ಸ್‌ವರ್ಥ್ ಮತ್ತು ಕೋಲರಿಜ್, ತಮ್ಮ ಹೊಸ ಕಾವ್ಯ ಹೇಗಿರಬೇಕೆಂದು ಚಿಂತಿಸಿ ಚರ್ಚಿಸಿ ಅದಕ್ಕೊಂದು ರೂಪು ಕೊಟ್ಟಿದ್ದರು. ನಮ್ಮಲ್ಲಿನ ನವ್ಯ ಕಾವ್ಯವು ಕೂಡ ಇಂಥದೇ ಚಿಂತನೆಗಳ, ಪ್ರಣಾಳಿಕೆಗಳ ಫಲವಾಗಿ ತಂದುಕೊಂಡುದಾಗಿತ್ತು. ಉದಾಹರಣೆಗೆ ಗೋಪಾಲಕೃಷ್ಣ ಅಡಿಗರು ತಮ್ಮ ಸಮಗ್ರ ಕಾವ್ಯದ ಮುನ್ನುಡಿಯಲ್ಲಿ ತಾವು ತಮಗಾಗಿ ರೂಪಿಸಿಕೊಂಡ ಮಾರ್ಗದರ್ಶೀ ಸೂತ್ರಗಳನ್ನು ಅಥವಾ ಪ್ರಣಾಳಿಕೆಯನ್ನು ಹೇಳುತ್ತಾರೆ. ಅವುಗಳಲ್ಲಿ ಒಂದೆರಡು ಹೀಗಿವೆ :

1. ಮನಸ್ಸಿನ ಮೇಲ್ಪದರುಗಳನ್ನಷ್ಟೆ ಒಳಗೊಳ್ಳುವ ಹಾಗೆ ಕಾವ್ಯ ರಚನೆಯಾದರೆ ಉತ್ತಮ ಕಾವ್ಯ ಸಿದ್ಧಿಸುವುದಿಲ್ಲ. ಪ್ರಜ್ಞೆಯ ಜೊತೆಗೆ ಪ್ರಜ್ಞೆಯ ತಳದಲ್ಲಿ ಅಥವಾ ಅದರ ಮೇಲಕ್ಕೆ ಇರುವ ಎಲ್ಲ ಒಳ ಅಂಶಗಳೂ ಹಠಾತ್ತಾಗಿ ಸೇರಿದರೆ ಉತ್ತಮ ಕಾವ್ಯ ಆಗುತ್ತದೆ. ಇದಕ್ಕೆ ನಿರಂತರ ಪರಿಶ್ರಮ ಹೇಗೋ ಹಾಗೆ ಅಸಾಧಾರಣವಾದ ತಾಳ್ಮೆಯಿಂದ ತಕ್ಕ ಮುಹೂರ್ತಕ್ಕಾಗಿ ಕಾಯುವುದೂ ಅಗತ್ಯ.

2. ರೂಢಿಯಾದದ್ದರ ಒಳಹೊಕ್ಕು ಸಿಡಿಮದ್ದಿನ ಹಾಗೆ ಸ್ಫೋಟಿಸಿ ಅದನ್ನು ಅಸ್ತವ್ಯಸ್ತಗೊಳಿಸದೆ,ಹೊಸಕಾಲದ ಹೊಸ ಬದುಕಿಗೆ ಅತ್ಯಗತ್ಯವಾದ ಮೌಲ್ಯಗಳನ್ನು ಬೆಳೆಯುವುದು ಸಾಧ್ಯವಾಗುವುದಿಲ್ಲ. ಆದ ಕಾರಣ ಯಾಂತ್ರಿಕ ವ್ಯವಸ್ಥೆಯಲ್ಲಿ ಸೇರಿದ ನಮ್ಮ ಸಂಸ್ಕೃತಿಯ ಮೌಲ್ಯಗಳ ತಿರುಳನ್ನು ಶೋಧಿಸಿ ಮೂಲಬೀಜಗಳನ್ನು ಹೊರತೆಗೆದು, ಅವಕ್ಕೆ ಇಂದಿಗೆ ತಕ್ಕ ರೂಪಗಳನ್ನು ಸಿದ್ಧಪಡಿಸುವುದೇ ಬುದ್ಧಿಯ ಮೂಲಕ ಕೆಲಸ ಮಾಡುವವನ ಕರ್ತವ್ಯ.

ಹೀಗೆ ಸಾಹಿತ್ಯದಲ್ಲಿ ಹೊಸ ಮಾರ್ಗವನ್ನು ತುಳಿಯುವ ಸಾಹಿತಿಗಳ ಮಾರ್ಗವನ್ನು ಹಲವರು ಅನುಸರಿಸಿದಂತೆ ಒಂದು ಪಂಥ ಅಥವಾ ಚಳುವಳಿ (ಮೂವ್‌ಮೆಂಟ್ ಎನ್ನುವ ಅರ್ಥದಲ್ಲಿ) ರೂಪುಗೊಳ್ಳುತ್ತದೆ. ಇವರೆಲ್ಲರೂ ಸೃಷ್ಟಿಸುವ ಸಾಹಿತ್ಯ ಕೃತಿಗಳಲ್ಲಿ ಸಮಾನವಾದ ಆಶಯಗಳಿರುತ್ತವೆ. ಆ ಆಶಯಗಳನ್ನು ಆಸೆಯ ಮಟ್ಟಕ್ಕೆ ಇಳಿಸಿ, ಒಂದೇ ಆಸೆಯ ಎಲ್ಲ ಸಾಹಿತಿಗಳೂ ಒಂದು ಅಮೂರ್ತ ಸಂಘಟನೆಯಂತೆ ವರ್ತಿಸಿದಾಗ ಚಳುವಳಿಗಳ ಕೊನೆಗಾಲವು ಸಮೀಪಿಸುತ್ತದೆ. ಆಗ ಇನ್ನೊಂದು ಪಂಥದ ಆಗಮನಕ್ಕಾಗಿ ಸಾಹಿತ್ಯಲೋಕ ಕಾಯುತ್ತದೆ. ಅದು ತತ್‌ಕ್ಷಣ ಸಂಭವಿಸುತ್ತದೆ ಎಂದೇನೂ ಅಲ್ಲ. ಇಂಥ ಕಾಯುವ ಸ್ಥಿತಿ ಕನ್ನಡದಲ್ಲಿ ಈಗ ಇದೆಯೆನಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲ ಸಾಹಿತ್ಯ

□ ಇಂದಿರಾ ಹಾಲಂಬಿ (ಗಿರಿವಾಸಿನಿ)



ಮಕ್ಕಳ ಸಾಹಿತ್ಯ, ಬಾಲ ಸಾಹಿತ್ಯ ಶಿಶುಸಾಹಿತ್ಯ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುವ ಬರವಣಿಗೆ ಎಳೆಯರಿಗಾಗಿಯೇ ರಚಿತವಾದದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮಕ್ಕಳೇ, ದೇವರು, ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂಬಿತ್ಯಾದಿ ನುಡಿಗಟ್ಟುಗಳನ್ನು ಎಲ್ಲರೂ ಧಾರಾಳವಾಗಿ ಉಪಯೋಗಿಸುವುದು ರೂಢಿಯ ಮಾತೇ ಆಗಿದೆ. ಆದರೆ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಒತ್ತು ಕೊಡುವ, ಮನಕ್ಕೆ ಮುದ ಕೊಡುವ ಪ್ರತ್ಯೇಕವಾದ ಕತೆ, ಕವನ, ನಾಟಕಗಳು ನಮ್ಮ ಜಿಲ್ಲೆಯಲ್ಲಿ 19ನೇ ಶತಮಾನದ ಮಧ್ಯಭಾಗದವರೆಗೂ ಇದ್ದಿರಲಿಲ್ಲ ಎಂದೇ ಹೇಳಬೇಕಾಗುತ್ತದೆ. ಓದು, ಬರಹ, ಎಲೆ (ಓ.ಬ.ಲೆ.)ಗಳೊಂದಿಗೆ ಕೆಲವು ಪ್ರಾಚೀನ ಕಾವ್ಯ ಭಾಗಗಳು, ಪಂಚತಂತ್ರದ ಕಥೆಗಳು... ಇವನ್ನೆಲ್ಲ ಬಾಯಿಪಾಠ ಮಾಡಿಕೊಳ್ಳುವುದಷ್ಟೇ ಮಕ್ಕಳ ಓದಿನ ಮಿತಿ ಆಗಿತ್ತು. ಹಾಗೆಯೇ ಮುಂದೆ ಜಾನಪದ, ಯಕ್ಷಗಾನ ಇವೆಲ್ಲ ಲಭ್ಯವಾಗಬಹುದಿತ್ತು ಅಷ್ಟೆ.

ಆದರೆ ಬಾಲಬೋಧೆ, ಕನ್ನಡ ಕವಿತೆ, ಕನ್ನಡ ಒಂದನೆಯ ಪುಸ್ತಕ, ಮೊದಲಾದ ಹೆಸರಿನಲ್ಲಿ ಮಕ್ಕಳಿಗಾಗಿ ಹೊಸಗನ್ನಡದ ಪ್ರಯೋಗವನ್ನು ಬಳಕೆಗೆ ತರುವ ಮೂಲಕ ಬಾಲಸಾಹಿತ್ಯವು ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯವರಿಂದ, ಆಮೇಲೆ ಬಾಲಸಾಹಿತ್ಯ ಮಂಡಲಿಯಿಂದ ಪ್ರಾರಂಭಗೊಂಡದ್ದು

‘ಸಂದೀಪ ಸಾಹಿತ್ಯ’, ಆತ್ರಾಡಿ, ಉಡುಪಿ–576 107

ಅವಿಸ್ಮರಣೀಯ ಅಂಶ.

19ನೆಯ ಶತಮಾನದ ಕೊನೆಯ ಹಂತದಲ್ಲಿ ಎಸ್.ಜಿ. ನರಸಿಂಹಾಚಾರ್ಯರು, ಎಂ.ಎಸ್. ಪುಟ್ಟಣ್ಣ, ಜಯರಾಮಾಚಾರ್ಯ, ರಾಮಶೇಷ ಶಾಸ್ತ್ರಿ, ಸೋಸಲೆ ಅಯ್ಯಾಶಾಸ್ತ್ರಿ ಮೊದಲಾದವರು ಬಾಲ ಸಾಹಿತ್ಯದ ಸ್ವರೂಪವನ್ನು ಸ್ಥೂಲವಾಗಿಯಾದರೂ ಗುರುತಿಸಿ, ಅಂತಹ ಕೆಲವು ಕೃತಿಗಳನ್ನು ರಚಿಸಿದರು. ಇವನ್ನೆಲ್ಲ ಮೊತ್ತಮೊದಲು ಪ್ರಚುರಪಡಿಸಿದವರು ಬಾಸೆಲ್ ಮಿಶನ್ ಸಂಸ್ಥೆಯವರೇ.

20ನೆಯ ಶತಮಾನದ ಆರಂಭಿಕ ದಶಕಗಳಲ್ಲಿ ಪಂಜೆ ಮಂಗೇಶ್‌ರಾಯರು, ಮಕ್ಕಳ ಮನಸೂರೆಗೊಳ್ಳುವ ಅಪೂರ್ವ ಶೈಲಿಯಿಂದ ಗದ್ಯ, ಪದ್ಯಗಳನ್ನು ರಚಿಸಿ ಬಾಲ ಸಾಹಿತ್ಯದ ಆದ್ಯ ಹಾಗೂ ಅಧಿಕೃತ ಪ್ರವರ್ತಕರು ಎನಿಸಿದರು. ಇದರಿಂದಾಗಿ ಕನ್ನಡ ಸಾಹಿತ್ಯಕ್ಕೆ ಹೊಸ ಕಳೆಯನ್ನು ದೊರಕಿಸಿಕೊಟ್ಟು ಹಿರಿಯರ ಮತ್ತು ಕಿರಿಯರ ಮೆಚ್ಚುಗೆಗೆ ಪಾತ್ರರಾದರು. ಅಂದಿನಿಂದಲೇ ಈ ಅವಿಭಜಿತ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯದ ಕುರಿತು ಒಂದು ನಿಶ್ಚಿತ ಧ್ಯೇಯ ಧೋರಣೆಗೆ ಪ್ರೇರಣೆಯಾಯಿತೆನ್ನಬಹುದು.

ಪ್ರಾರಂಭದ ಈ ದಿಸೆಯಲ್ಲಿ ಜಿ.ಪಿ. ರಾಜರತ್ನಂ, ಸುಬೋಧ ರಾಮರಾವ್ ಎಂ.ಎನ್.ಕಾಮತ್, ಜಿ.ಎನ್. ಲಕ್ಷ್ಮಣರಾವ್, ಕೊರಡ್ಕಲ್ ಶ್ರೀನಿವಾಸರಾವ್, ಐರೋಡಿ ಶಿವರಾಮಯ್ಯ, ಕೋಟ ಶಿವರಾಮ ಕಾರಂತ, ಮಟ್ಟಿಮಲೆ ಶಂಕರ ನಾರಾಯಣರಾವ್, ಅಂಬಲಪಾಡಿ ಮುಖ್ಯಪ್ರಾಣ, ಹೊನ್ನಯ್ಯ ಶೆಟ್ಟಿ ಮೊದಲಾದವರು ಮಕ್ಕಳ ಸಾಹಿತ್ಯದ ಸತ್ತ್ವವನ್ನು ಬೆಳೆಸಲು ಗಟ್ಟಿ ತಳಪಾಯವನ್ನು ಹಾಕಿದರು. ಹೀಗೆ ಮಕ್ಕಳ ಸಾಹಿತ್ಯಕ್ಕೆ ಸುಮಾರು 140 ವರ್ಷಗಳ ಇತಿಹಾಸ ಇದೆ.

ಶಿಶು ಸಾಹಿತ್ಯದ ಜನಕರೆನಿಸಿದ ಪಂಜೆ ಮಂಗೇಶರಾಯರು 1926ಕ್ಕೆ ಪೂರ್ವದಲ್ಲಿ ತಮ್ಮ ಕೃತಿಗಳನ್ನು ತಮ್ಮ ಹೆಸರಿನಲ್ಲಿ ಪ್ರಕಟಿಸುತ್ತಿದ್ದಿಲ್ಲ. ಪ್ರಾಯಶಃ ಅವರ ಸಂಕೋಚ ಸ್ವಭಾವದಿಂದಾಗಿ ಬೇರೆ ಬೇರೆ ಗುಪ್ತ ನಾಮಗಳಿಂದ ತಮ್ಮ ಬರಹಗಳನ್ನು ಪ್ರಕಟಿಸುತ್ತಿದ್ದರು. 1939ರ ಅನಂತರ 'ಕವಿಶಿಷ್ಯ' ಎಂಬ ಕಾವ್ಯನಾಮದಲ್ಲಿ ಕವಿತೆಗಳನ್ನು ಬರೆದರು. ಪಂಜೆಯವರಿಗೆ ಬಾಸೆಲ್ ಮಿಶನ್ ಸಂಸ್ಥೆಯವರು ತುಂಬ ಪ್ರೋತ್ಸಾಹ ನೀಡಿದ್ದರು. (ಶತಮಾನದ ಮಧ್ಯ ಭಾಗದಿಂದ ಪ್ರಾರಂಭಿಸಿ ಸುಮಾರು 70 ವರ್ಷಗಳವರೆಗೆ ಈ ಸಂಸ್ಥೆ ಕಾಯಕವಾಗಿತ್ತು). ಪಂಜೆಯವರು ರಚಿಸಿದ 'ಮೂರು ಕರಡಿಗಳು', 'ಅಂಗಳಮಗ್ಗು' ಇತ್ಯಾದಿ ಕತೆಗಳು, 'ನಾಗರಹಾವೇ ಹಾವೊಳು ಹೂವೇ', 'ಮೂಡುವನು ರವಿ ಮೂಡುವನು', 'ಬಂತೈ ಬಂತೈ ಬಿರುಗಾಳಿ' ಮೊದಲಾದ ಕವನಗಳು, ಐತಿಹಾಸಿಕ ಕಿರುಕಾದಂಬರಿ 'ಕೋಟಿ ಚೆನ್ನಯ' ಇವುಗಳನ್ನು ಹಾಡಿ ಓದಿ ಹೇಳಿ, ಕೇಳಿ ಆನಂದಿಸದವರಿಲ್ಲ.

ಹಾಗೆಯೇ ಮಟ್ಟಿಮಲೆ ಶಂಕರ ನಾರಾಯಣರಾಯರ 'ಮಂಗನ ಉಪವಾಸ', ಹೊನ್ನಯ್ಯ ಶೆಟ್ಟರ 'ಬಾನೊಳವೆ ಬಾನೊಳವೆ', ರಾಜರತ್ನಂರ 'ಬಣ್ಣದ ತಗಡಿನ ತುತ್ತೂರಿ', 'ನಾಯಿಮರಿ, ನಾಯಿಮರಿ ತಿಂಡಿಬೇಕೆ?' ಇಂಥವೆಲ್ಲ ಮರೆಯಲಾಗದ ರಚನೆಗಳು. ಮಕ್ಕಳಿಗೆ, ಶಿಕ್ಷಕರಿಗೆ ಖುಷಿಯನ್ನೂ, ನೀತಿಯನ್ನೂ ನೆನಪಿಸುವ ಕೃತಿಗಳು!

ಮುಂದಿನ ದಶಕಗಳಲ್ಲಿ ನೂರಾರು ಮಂದಿ ಲೇಖಕರು ಮಕ್ಕಳ ಸಾಹಿತ್ಯದ (ನಾಟಕ, ಕತೆ) ಕಣಜವನ್ನು ತುಂಬಿದರು. ಅಂಥವರಲ್ಲಿ ಕಾಸರಗೋಡಿನ ಬೇಕಲ ರಾಮನಾಯಕ, ಸಿರಿಬಾಗಿಲು ವೆಂಕಪ್ಪಯ್ಯ, ಗಣಪತಿ ದಿವಾಣ, ಹಾಗೆಯೇ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಮೊದಲಾದವರು ಪ್ರಮುಖರು. ಕಾಸರಗೋಡಿನ ಧೀಮಂತ ಕವಿ ಕಯ್ಯಾರ ಕಿಞ್ಞಣ್ಣ ರೈಯವರು ಡಾ॥ ಶಿವರಾಮ ಕಾರಂತರಂತೆ ಮಕ್ಕಳಿಗಾಗಿ ಪಠ್ಯಪುಸ್ತಕಗಳ ರಚನೆ, ಪ್ರಕಟನೆಯನ್ನು ಉತ್ತಮ ರೀತಿಯಲ್ಲಿ ಸಾಧಿಸಿ ತೋರಿಸಿದವರು. ಅವರ ಪುಸ್ತಕಗಳಲ್ಲಿ ಮಕ್ಕಳ ಮನಸೂರೆಗೊಳ್ಳುವ ಸುಂದರ ಕವಿತಾ ರಚನೆಗಳಿವೆ. ''ಆಕಳೇ...

ಅಳಿಲೇ...'' ಯಿಂದ ತೊಡಗಿ ''ನೀ ನನಗಿದ್ದರೆ ನಾ ನಿನಗೆ'', ''ಕುಂಟನೊಬ್ಬ ಕುರುಡನೊಬ್ಬ'' ದಂಥ ಕವನಗಳು ಮತ್ತು ಐಕ್ಯಗಾನದಂಥ ಕನ್ನಡ ಪ್ರೀತಿಯ ಕವನಗಳಿಂದಲೂ ಪ್ರಸಿದ್ಧರಾಗಿರುವ, ಈಗಲೂ ಕ್ರಿಯಾಶೀಲರಾಗಿರುವ ಇವರು ಕನ್ನಡದ ಹೆಮ್ಮೆಯ ಕವಿ.

ಮುಂದಿನ ದಶಕಗಳಲ್ಲಿ ಬಾಲ ಸಾಹಿತ್ಯ ರಚನೆಯಲ್ಲಿ ಪಳಕಳ ಸೀತಾರಾಮ ಭಟ್ಟರ ಹೆಸರು ಮಕ್ಕಳ ಸಾಹಿತ್ಯ ರಂಗದಲ್ಲಿ ಮರೆಯಲಾಗದು. ಕತೆ, ಕವಿತೆ, ಕಿರುಕಾದಂಬರಿ, ನಾಟಕ, ಲೇಖನ ಇತ್ಯಾದಿ ವೈವಿಧ್ಯಮಯ ಶಿಶುಸಾಹಿತ್ಯ ರಚನೆಯನ್ನು ಮಾಡುತ್ತ ಬಂದಿರುವ ಇವರು 120 ಕೃತಿಗಳನ್ನು ಮಕ್ಕಳಿಗಾಗಿ ರಚಿಸಿ ಪ್ರಕಟಿಸಿದ್ದಾರೆ.

ಈ ಕ್ಷೇತ್ರದಲ್ಲಿ ಕೃಷಿ ಮಾಡಿದ-ಮಾಡುತ್ತಿರುವ ಇತರ ಸಾಹಿತಿಗಳೆಂದರೆ ಪಿ.ಜಿ. ಹೊಸಮನೆ, 'ಎಳೆಯರ ಗೆಳೆಯ' ಮುಳಿಯ, ಪ. ರಾಮಕೃಷ್ಣ ಶಾಸ್ತ್ರಿ ಕೂರಾಡಿ ಸೀತಾರಾಮ ಅಡಿಗ, ನ.ಭ.ನೆಂಪು ವಾಸುದೇವ ವರ್ಣ, ಪರಮೇಶ್ವರ ಭಟ್ ಬಾಳಿಲ, ಸುಮುಖಾನಂದ ಜಲವಳ್ಳಿ, ಇಂದಿರಾ ಹಾಲಂಬಿ (ಗಿರಿವಾಸಿನಿ), ಸವಿತಾ ಎಸ್.ಭಟ್, ಬಾಲ ಮಧುರಕಾನನ, ಗಾಯತ್ರಿ ಉಡುಪ, ಕೆ.ಎಂ. ಶೆಟ್ಟಿ ಮೊದಲಾದವರು. ವೈದೇಹಿಯವರು ಮಕ್ಕಳಿಗಾಗಿ ರಚಿಸಿದ ನಾಟಕಗಳು ಒಳ್ಳೆಯ ಹೆಸರು ಪಡೆದಿವೆ. ಇಂದಿರಾ ಹಾಲಂಬಿ ಬರೆದ 'ಜೊತೆಯಲ್ಲಿ ಇರುವವರು' ಮಕ್ಕಳ ಕಥಾ ಸಂಕಲನ ಹಲವಾರು ಪ್ರಶಸ್ತಿ ಬಹುಮಾನಗಳನ್ನು ಗಳಿಸಿದೆ. ಶ್ರೀಮತಿ ಯಶೋದಾ ಜೆನ್ನಿ, ಶಕುಂತಳಾ ಭಟ್ ಇವರೂ ಮಕ್ಕಳ ಸಾಹಿತ್ಯ ರಚಿಸಿದವರು. ಹೀಗೆ ಈ ಪಟ್ಟಿ ಬೆಳೆಯುತ್ತಿದೆ.

ಈಗ ಅವಿಭಜಿತ ಜಿಲ್ಲೆಯಲ್ಲಿ ಮಕ್ಕಳ ಮತ್ತು ಶಿಕ್ಷಕರ, ರಕ್ಷಕರ ಮನೆಮಾತಾಗಿರುವ ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ (ರಿ) ಎಂಬ ಸಂಘಟನೆ ಕೂರಾಡಿ ಸೀತಾರಾಮ ಅಡಿಗರ ಮುನ್ನೋಟದಂತೆ ಪಳಕಳ ಸೀತಾರಾಮ ಭಟ್ಟ, ರಾ.ಮೋ. ವಿಶ್ವಾಮಿತ್ರ, ಹೊಸಬೆಟ್ಟು ಸೀತಾರಾಮ ಆಚಾರ್ಯ, ಶ್ರೀನಿವಾಸರಾವ್, ಭುವನಾಭಿರಾಮ ಉಡುಪ ಮತ್ತು ಇತರ ಕೆಲವು ಮಂದಿ ಸಾಹಿತ್ಯಾಸಕ್ತರ ಮುಖಂಡತ್ವದಲ್ಲಿ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಸಹಕಾರದೊಂದಿಗೆ ದಿನಾಂಕ 1993ರ ಜೂನ್ 13ರಂದು ಮೂಲ್ಕಿಯ ಟೂರಿಸ್ಟ್ ಹೋಮ್‌ನಲ್ಲಿ ಉದ್ಘಾಟನೆಗೊಂಡಿತು. 2003ರಲ್ಲಿ ಈ ಸಂಸ್ಥೆಯ ದಶಮಾನೋತ್ಸವ ಅದ್ದೂರಿಯಾಗಿ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಡಾ|| ಡಿ. ವೀರೇಂದ್ರ ಹೆಗ್ಗಡೆಯವರ ಸಹಕಾರ ಮತ್ತು ಪ್ರಾಯೋಜಕತ್ವದಲ್ಲಿ ಧರ್ಮಸ್ಥಳದ ಬಳಿಯ ಉಜಿರೆಯಲ್ಲಿ ಸಂಪನ್ನಗೊಂಡಿತು. ಅದೇ ಸಂದರ್ಭದಲ್ಲಿ ದಶಮಾನದ ಸಂಸ್ಕರಣ ಸಂಚಿಕೆ 'ಮಕ್ಕಳ ಧ್ವನಿ' ವಿಶೇಷ ಪುರವಣಿ ಬಿಡುಗಡೆಗೊಂಡಿತು. 11ನೆಯ ವರ್ಷದ ಸಂಭ್ರಮಾಚರಣೆಯ ಅಂಗವಾಗಿ ಪುನರೂರು ದೇವಸ್ಥಾನದಲ್ಲಿ ನಡೆದ, ಧರ್ಮದರ್ಶಿ ಹರಿಕೃಷ್ಣ ಪುನರೂರು ನಿರ್ದೇಶನದ 'ಮಕ್ಕಳ ಧ್ವನಿ' ಕಾರ್ಯಕ್ರಮದಲ್ಲಿ ಪ್ರತಿ ವರ್ಷದ ಚಟುವಟಿಕೆಗಳ ಜೊತೆಗೆ ಹನ್ನೊಂದು ಮಂದಿ ಮಕ್ಕಳ ಸಾಹಿತಿಗಳನ್ನು ಸಮ್ಮಾನಿಸಲಾಯಿತು. ಮಕ್ಕಳ ಸಾಹಿತ್ಯ ಪ್ರಗತಿಯಲ್ಲಿ ಪತ್ರಿಕೆಗಳ ಕೊಡುಗೆ, ಮಕ್ಕಳ ಪುಟಗಳು ಗಮನಾರ್ಹ. ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿ ಈ ಮೂರು ಜಿಲ್ಲೆಗಳ ಸಾವಿರಾರು ಮಂದಿ ಮಕ್ಕಳ ಸಾಹಿತ್ಯ ಸಂಗಮದ ಈ ಸದಸ್ಯರೆಂಬ ನೆಲೆಯಲ್ಲಿ ಇದರ ಜೊತೆಗಿದ್ದಾರೆ. ಪ್ರಾರಂಭದ ದಿನದಿಂದ ಈವರೆಗೂ ಬಿ. ಶ್ರೀನಿವಾಸರಾವ್ ಅವರು ಇದರ ಕಾರ್ಯದರ್ಶಿಯಾಗಿ ಸಮರ್ಥ ನಿರ್ವಹಣೆ ನಡೆಸುತ್ತಿದ್ದಾರೆ. ಪ್ರತಿವರ್ಷ ಅಧ್ಯಕ್ಷರ ಚುನಾವಣೆ ಮತ್ತು ಕಾರ್ಯಕಾರಿ ಸಮಿತಿಯ ಆಯ್ಕೆ ಇರುತ್ತದೆ. ಮಕ್ಕಳಿಗಾಗಿ, ಮಕ್ಕಳ ಸಾಹಿತ್ಯಕ್ಕಾಗಿ ಶಾಲಾ ಹಸ್ತಪ್ರತಿ ಸಂಚಿಕೆಗಳಿಗಾಗಿಯೂ ಹಲವಾರು ಸ್ಪರ್ಧೆಗಳಿವೆ. ವರ್ಷಕ್ಕೊಮ್ಮೆ ನಡೆಯುವ 'ಮಕ್ಕಳ ಧ್ವನಿ' ಎಂಬ ವಿಶಿಷ್ಟ ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನಗಳು, ಓರ್ವ

ಮಕ್ಕಳ ಸಾಹಿತಿಗೆ ಸಮ್ಮಾನ, ಮಕ್ಕಳ ಪ್ರತಿಭಾ ಪ್ರದರ್ಶನ ನಡೆಯುತ್ತವೆ. ಶ್ರೀಮತಿ ಸಾವಿತ್ರಿ ಎಸ್. ರಾವ್ ಮಕ್ಕಳ ಸಾಹಿತ್ಯ ಕಮ್ಮಟದ ಮುಖ್ಯ ಕಾರ್ಯಕರ್ತರೆನಿಸಿದ್ದಾರೆ.

ಕತೆ, ಕವನ, ಚಿತ್ರಕಲೆ, ಅಭಿನಯ, ಹಾಡುವಿಕೆಗಳ ಪ್ರಗತಿಯನ್ನು ಧ್ಯೇಯವಾಗಿರಿಸಿಕೊಂಡು ದುಡಿಯುತ್ತಿರುವ ಈ ಸಂಸ್ಥೆಯಿಂದ ಬಹಳಷ್ಟು ನಿರೀಕ್ಷೆ ಇರಿಸಿಕೊಳ್ಳುವುದು ಸಾಧ್ಯವಾಗಿದೆ. ಡಾ|| ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು, ಕೂರಾಡಿ ಸೀತಾರಾಮ ಅಡಿಗರು ಈ ಸಂಘಟನೆಯ ಮಹಾಪೋಷಕರು. ಇತರ ಕೆಲವರು ಪೋಷಕರೂ ಪ್ರೋತ್ಸಾಹಕರೂ ಆಗಿ 'ಸಂಗಮ'ಕ್ಕೆ ಆಧಾರಸ್ತಂಭಗಳೆನಿಸಿದ್ದಾರೆ. ಮಕ್ಕಳ ಉತ್ತಮ ಭವಿಷ್ಯದ ಹಿತಚಿಂತಕರೆಲ್ಲರನ್ನೂ ಈ ಸಂಸ್ಥೆ ಸ್ವಾಗತಿಸುತ್ತದೆ.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಜಾಗತೀಕರಣದ ಸಾಂಸ್ಕೃತಿಕ ಪರಿಣಾಮಗಳು

☐ ಅರವಿಂದ ಚೊಕ್ಕಾಡಿ



ಜಾಗತೀಕರಣ–ಖಾಸಗೀಕರಣ–ಉದಾರೀಕರಣಗಳು ಈ ದೇಶದ ಮೇಲೆ ಬೀರುವ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಪರಿಣಾಮಗಳ ಬಗ್ಗೆ ನಾನು ಬೇಕಷ್ಟು ಬಾರಿ ಚರ್ಚಿಸಿದ್ದೇನೆ. ಈ ಹಿನ್ನೆಲೆಯಲ್ಲಿ ನನ್ನ ಗ್ರಹಿಕೆಗಳು ಇವು:

1. ಜಾಗತೀಕರಣದಿಂದ ದೇಶದಲ್ಲಿ ಆಗುವ ಅಭಿವೃದ್ಧಿ ಅಭದ್ರ ಅಭಿವೃದ್ಧಿಯಾಗಿದೆ. ಈ ದೇಶದ ರಾಜಕೀಯ ಪರಮಾಧಿಕಾರಕ್ಕೆ ಒಳಪಡದ ಯಾವುದೇ ಸಂಸ್ಥೆ ತನಗೆ ಪ್ರತಿಕೂಲ ಸನ್ನಿವೇಶ ಉಂಟಾದಾಗ ಹೂಡಿಕೆಯನ್ನು ಹಿಂತೆಗೆದುಕೊಳ್ಳಬಹುದು. ಆಗ ಅದರ ಚರಾಸ್ತಿಗಳೆಲ್ಲವೂ ಹೊರಟುಹೋಗುತ್ತದೆ. ಈ ಚರಾಸ್ತಿಗಳು ರೂಪಿಸಿರುವ ಭ್ರಮಾತ್ಮಕ ಅಭಿವೃದ್ಧಿಯ ಪರದೆ ಹರಿದುಹೋಗುತ್ತದೆ.

2. ಜಾಗತೀಕರಣ ಕಾಣಿಸುವಂತಹ ಅಭಿವೃದ್ಧಿಯೇನಿದೆಯೋ ಅದು ಬರಿಯ ಆರ್ಥಿಕಾಭಿವೃದ್ಧಿಯಷ್ಟೇ ಆಗಿದ್ದು ಆ ಆರ್ಥಿಕಾವೃದ್ಧಿ ಕೂಡ ಸಮಾಜದ ಮೇಲು–ಸ್ತರವನ್ನು ಅಭಿವೃದ್ಧಿಯ ಪ್ರಕ್ರಿಯೆಗೆ ಒಳಪಡಿಸುತ್ತದೆಯೇ ಹೊರತು ಕೆಳಸ್ತರದಲ್ಲಿ ಅಭಿವೃದ್ಧಿ ಪ್ರಕ್ರಿಯೆ ನಡೆಯುವುದಿಲ್ಲ.

3. ಜಾಗತೀಕರಣದ ಸಾಂಸ್ಕೃತಿಕ ಪರಿಣಾಮಗಳು ಸಾಂಸ್ಕೃತಿಕ ಕಾರಣಗಳಿಗಾಗಿ ತಾರತಮ್ಯ ಉಳ್ಳ ಈ ಸಮಾಜವನ್ನು

ಕೋಡಂಗಲ್ಲು, ಮೂಡಬಿದಿರೆ, ದ.ಕ.–574 197

ತಾರತಮ್ಯರಹಿತ ಸಮಾಜವಾಗಿ ರೂಪಿಸಲು ಅಶಕ್ತವಾಗಿವೆ. ಇದಕ್ಕೆ ಬಹಳ ಮುಖ್ಯವಾದ ಎರಡು ಕಾರಣಗಳಿವೆ. ಮೊದಲನೆಯದಾಗಿ, ಒಂದು ಆರ್ಥಿಕ ಧೋರಣೆಯಾಗಿ ಬಂದಿರುವ ಜಾಗತೀಕರಣಕ್ಕೆ ತಾರತಮ್ಯರಹಿತ ಸಮಾಜ ನಿರ್ಮಾಣದ ಯಾವ ಉದ್ದೇಶವೂ ಇಲ್ಲ. ಅದು ಈ ದೇಶದ ಸಾಮಾಜಿಕ ತಾರತಮ್ಯದ ನೆಲೆಗಳ ಆಳ ಅಭ್ಯಾಸಕ್ಕೆ ತೊಡಗಿಯೂ ಇಲ್ಲ ಮತ್ತು ದೇಶದ ಸಾಮಾಜಿಕ ತಾರತಮ್ಯದ ನೆಲೆಗಳು ಯಥಾಸ್ಥಿತಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ಜಾಗತೀಕರಣದ ಸಾಂಸ್ಕೃತಿಕ ಪರಿಣಾಮವನ್ನು ಹಿಮ್ಮೆಟ್ಟಿಸಬಲ್ಲಷ್ಟು ಬಲಿಷ್ಠವಾಗಿವೆ. ತಾರತಮ್ಯರಹಿತ ಸಮಾಜ ನಿರ್ಮಾಣದ ಉದ್ದೇಶವು ಅಂತರಂಗದ ತುಡಿತವಾಗಿ ಬಂದಂತಹ ಕ್ರಿಯೆಗಳನ್ನೇ ಬಹುಮಟ್ಟಿಗೆ ಹಿಮ್ಮೆಟ್ಟಿಸಲು ಸಶಕ್ತವಾದ ಯಥಾಸ್ಥಿತಿವಾದಿ ನೆಲೆಗಳಿಗೆ ಅಂತಹ ಯಾವ ತುಡಿತವೂ ಇಲ್ಲದಿರುವ ಜಾಗತೀಕರಣವನ್ನು ಎದುರಿಸುವುದು ಅಸಾಧ್ಯದ ಮಾತೇನಲ್ಲ. ಈ ವಿಚಾರಕ್ಕೆ ಪೂರಕವಾಗಿ ಎರಡನೆಯ ಕಾರಣ ತೆರೆದುಕೊಳ್ಳುತ್ತದೆ. ಜಾಗತೀಕರಣದ ಸಾಂಸ್ಕೃತಿಕ ದಾಳಿಗೆ ಪರ್ಯಾಯವೇನೋ ಎಂಬ ಭ್ರಮಾತ್ಮಕ ನೆಲೆಯಲ್ಲಿ ರೂಪುಗೊಂಡಿರುವ ಮತೀಯವಾದಿ ನೆಲೆಗಳು ಸಾಮಾಜಿಕ ಯಥಾಸ್ಥಿತಿಯನ್ನು ಕಾಯ್ದುಕೊಂಡುಬಿಡುತ್ತವೆ. ಈ ವಿಚಾರಕ್ಕೆ ಎರಡು ಸ್ವರೂಪಗಳಿವೆ. ಮೊದಲನೆಯದಾಗಿ, ಮತೀಯವಾದಿ ನೆಲೆಗಳು ಸಂಸ್ಕೃತಿಯನ್ನು ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸುತ್ತವೆ. ಅದು ಏಕಧರ್ಮದ ಅಧಿಪತ್ಯವಿರುವ ಸಮಾಜದಲ್ಲಿ ಸಂಸ್ಕೃತಿ ನಿಷ್ಠವಾಗಬಹುದಾದರೂ ಯಾವುದೇ ಬಹುಜನಾಂಗೀಯ ವ್ಯವಸ್ಥೆಯಲ್ಲಿ ಸಂಸ್ಕೃತಿಯನ್ನು ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸಿದಾಗ ಅದು ಸಾಮಾಜಿಕ ತಾರತಮ್ಯವನ್ನು ಎತ್ತಿಹಿಡಿಯುತ್ತದೆ. ಬಹುಜನಾಂಗೀಯ ವ್ಯವಸ್ಥೆಯಲ್ಲಿ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸುವುದೇ ಅತ್ಯಗತ್ಯವಾಗಿರುತ್ತದೆ. ಆದರೆ ಮತೀಯವಾದಿ ನಿಲುವುಗಳು ದಟ್ಟವಾಗಿರುವಾಗ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಗ್ರಹಿಸುವ ಶಕ್ತಿಗಳು ದುರ್ಬಲವಾಗುತ್ತವೆ. ಅಲ್ಲದೆ ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸಲ್ಪಡುವ ಸಂಸ್ಕೃತಿ ಅತ್ಯಂತಿಕವಾಗಿ ಯಥಾಸ್ಥಿತಿಯದಾಗಿರುತ್ತದೆ. ಇದರ ಎರಡನೆಯ ಸ್ವರೂಪವೆಂದರೆ, ಮತೀಯವಾದಿ ನಿಲುವುಗಳು ಸಂಸ್ಕೃತಿಯ ಮುಖೇನ ಪ್ರತಿಪಾದಿಸುವ ಆರ್ಥಿಕ ಧೋರಣೆಯೂ, ಜಾಗತೀಕರಣವು ನೇರವಾಗಿ ಪ್ರತಿಪಾದಿಸುವ ಆರ್ಥಿಕ ಧೋರಣೆಯೂ ಒಂದೇ ಆಗಿದ್ದು, ಅವು ತಾರತಮ್ಯವುಳ್ಳ ಸಮಾಜಕ್ಕೆ ನಿಷ್ಠವಾಗಿಯೇ ಇವೆ. ತಾರತಮ್ಯಪರವಾದ ಆರ್ಥಿಕ ಧೋರಣೆ ಉಳ್ಳ ಶಕ್ತಿಗಳಿಂದ ತಾರತಮ್ಯರಹಿತ ಸಮಾಜ ನಿರ್ಮಾಣ ಸಾಧ್ಯವಾಗುವುದಿಲ್ಲ. ನೆಹರೂ ಕಲ್ಪನೆಯ ನಗರೀಕರಣ ಹಾಗೂ ಶಿಕ್ಷಣದಿಂದ ಸಾಮಾಜಿಕ ತಾರತಮ್ಯ ನಿವಾರಣೆಯ ಸಾಧ್ಯತೆಗಳು ಸುಳ್ಳು ಎನ್ನುವುದು ಕಣ್ಣಿಗೆ ರಾಚುತ್ತಿರುವ ಸಂಗತಿಯಾಗಿದೆ. ಸುಶಿಕ್ಷಿತರೇ ಮತೀಯವಾದಿ ತೆಕ್ಕೆಯೊಳಗಿರುವುದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಶಿಕ್ಷಿತರು ಯಾಕೆ ಮತೀಯವಾದಿ ತೆಕ್ಕೆಯೊಳಗಿದ್ದಾರೆಂಬುದರ ನಾನಾ ಕಾರಣಗಳ ಚರ್ಚೆ ಈ ಲೇಖನಕ್ಕೆ ಅನಗತ್ಯವಾದ್ದರಿಂದ ಈ ಅಂಶವನ್ನು ವಿಸ್ತರಿಸುವುದಿಲ್ಲ. ಒಟ್ಟಾರೆಯಾಗಿ ಜಾಗತೀಕರಣದ ಸಾಂಸ್ಕೃತಿಕ ಪರಿಣಾಮದಿಂದ ಸಾಮಾಜಿಕ ತಾರತಮ್ಯ ನಿವಾರಣೆ ಅಸಾಧ್ಯ.

4. ವಿಶ್ವ ಸಮಾಜದ ಪರಿಕಲ್ಪನೆ ನಾಗರಿಕ ಸಮಾಜದ ಸದಾ ಕಾಲದ ತುಡಿತವಾಗಿದ್ದರೂ ಅದು ಆದರ್ಶವೇ ಹೊರತು ವಾಸ್ತವವಲ್ಲ. ಪ್ರತಿಯೊಂದು ನಾಗರಿಕ ಸಮಾಜವೂ ಅದರದೇ ಆದ ರಾಜಕೀಯ ಅಧಿಕಾರ ಕೇಂದ್ರವನ್ನು ಹೊಂದಿರುತ್ತದೆ. ಈ ಅಧಿಕಾರವು ಕಾಲಕಾಲಕ್ಕೆ ಬೇರೆ ಬೇರೆ ಸ್ವರೂಪದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದೆ. ಎಲ್ಲಿಯತನಕ ರಾಷ್ಟ್ರೀಯತೆಯ ಪರಿಕಲ್ಪನೆ ಇರುತ್ತದೋ ಅಲ್ಲಿಯ ತನಕ ವಿಶ್ವಸಮಾಜದ ಪರಿಕಲ್ಪನೆ ಅವಾಸ್ತವಿಕವೇ ಆಗಿರುತ್ತದೆ. ಜಾಗತೀಕರಣಕ್ಕೆ ವಿಶ್ವಸಮಾಜದ

ಕಡೆಗೆ ಮುಂದಡಿಯಿಡುವ ಪ್ರಾಥಮಿಕ ಪೂರ್ವಸಿದ್ಧತೆಯೂ ಇಲ್ಲ. ಹಾಗಿರುವಾಗ ಈಗ ಬಂದಿರುವ ಜಾಗತೀಕರಣದ ಆಶ್ರಯದಲ್ಲಿ ಯಾವುದೇ ರೀತಿಯಲ್ಲೂ ವಿಶ್ವಭ್ರಾತೃತ್ವದ ಅಂಶಗಳನ್ನು ಗುರುತಿಸಲು ಸಾಧ್ಯವಿಲ್ಲ.

ಈ ಹಿನ್ನೆಲೆಯನ್ನಿಟ್ಟುಕೊಂಡು ಹೇಳುವುದಾದರೆ, ಇವತ್ತು ಯಾವ ಡಾ. ಮನಮೋಹನ್ ಸಿಂಗರನ್ನು ಜಾಗತೀಕರಣದ ಪ್ರವಾದಿಯೋಪಾದಿಯಲ್ಲಿ ಈ ದೇಶ ಗ್ರಹಿಸಬೇಕಾಗಿದೆಯೋ ಅವರಿಗಿಂತ ಚೆನ್ನಾಗಿ, ಜಾಗತೀಕರಣದಿಂದ ಈ ದೇಶಕ್ಕೆ ಒಳ್ಳೆಯದಾಗುವುದಿಲ್ಲವೆಂದು ತಿಳಿದಿರುವ ಮತ್ತೊಬ್ಬರಿರಲು ಸಾಧ್ಯವಿಲ್ಲ ಎಂಬುದು ನನ್ನ ನಂಬಿಕೆ. ಯಾಕೆಂದರೆ ಅರ್ಥಶಾಸ್ತ್ರ ಎನ್ನುವ ಅಧ್ಯಯನ ಶಾಖೆ ನಿಂತಿರುವುದೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೇಲೆ. ಅಂಥಲ್ಲಿ ಅರ್ಥಶಾಸ್ತ್ರದ ಪ್ರಾಥಮಿಕ ತಿಳಿವಳಿಕೆಯುಳ್ಳ ಯಾರೊಬ್ಬರಿಗೂ ಜಾಗತೀಕರಣವು ಸಾಮಾಜಿಕ ನ್ಯಾಯವನ್ನು ಸಾಧಿಸುವುದಿಲ್ಲ ಎಂದು ಗೊತ್ತಿರುತ್ತದೆ. ಹಾಗಿರುವಾಗ ಈ ದೇಶದ ಅತ್ಯುತ್ತಮ ಅರ್ಥಶಾಸ್ತ್ರಜ್ಞರಲ್ಲೊಬ್ಬರಾದ ಪ್ರಧಾನಿ ಡಾ. ಸಿಂಗರಿಗೆ ಅದು ಗೊತ್ತಿಲ್ಲವೆಂದರೆ ಅದಕ್ಕಿಂತ ದೊಡ್ಡ ಜೋಕ್ ಬೇರೆ ಇರಲು ಸಾಧ್ಯವಿಲ್ಲ.

ಆದರೂ ಡಾ. ಸಿಂಗರೇಕೆ ಜಾಗತೀಕರಣದ ಪರ ವಾದಿಸುತ್ತಾರೆ ಎನ್ನುವುದು ಇಲ್ಲಿನ ಕೇಂದ್ರಪ್ರಶ್ನೆ. ಈ ಪ್ರಶ್ನೆ ಕೇವಲ ಡಾ. ಸಿಂಗರದಾಗಿರದೆ, ವಿಶ್ವದ ಎಲ್ಲ ದುರ್ಬಲ ದೇಶಗಳ ಕಾರ್ಯಾಂಗ ಮುಖ್ಯಸ್ಥರ ಪ್ರಶ್ನೆಯೂ ಹೌದು. ಇದಕ್ಕೆ ಎಲ್ಲರಿಗೂ ಗೊತ್ತಿರುವ ಉತ್ತರ, ಅಮೇರಿಕ ಮತ್ತದರ ಮಿತ್ರಕೂಟದ ಒತ್ತಡ. ಆದರೆ ಈ ಒತ್ತಡ ಇಂದಿರಾ ಗಾಂಧಿಯವರನ್ನೇಕೆ ಬಾಧಿಸಲಿಲ್ಲ ಅಥವಾ ಬಾಧಿಸಿದರೂ ಅವರು ಒತ್ತಡವನ್ನು ಮೀರಿ ನಿಲ್ಲಲು ಹೇಗೆ ಸಾಧ್ಯವಾಯಿತು ಎನ್ನುವುದನ್ನು ಜಾಗತಿಕ ರಾಜಕೀಯ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಇಂತಹ ನೋಟ ಈ ದೇಶವನ್ನು ತನ್ನದೇ ಶಕ್ತಿಯಲ್ಲಿ ಕಟ್ಟಿ ನಿಲ್ಲಿಸಲು ಸಾಧ್ಯವಾಗುವ ಪ್ರಕ್ರಿಯೆಗಳತ್ತ ಬೆಳಕು ಚೆಲ್ಲಬಲ್ಲುದು.

ಇಂದಿರಾ ಅವರ ತಂದೆಯೂ, ಪಾಂಡಿತ್ಯದಲ್ಲಿ ಇಂದಿರಾಗಿಂತ ಉನ್ನತ ಮಟ್ಟದಲ್ಲಿದ್ದವರೂ ಆದ ನೆಹರೂ ಅವರಿಗೆ ವಾಸ್ತವವಾದಿ ನೆಲೆಯಲ್ಲಿ ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ಭಾರತವನ್ನು ಹೇಗೆ ಸಶಕ್ತಗೊಳಿಸಬಹುದು ಎನ್ನುವ ಕಲ್ಪನೆ ಇಂದಿರಾಗಿಂತ ಕಡಿಮೆ ಇತ್ತೆಂದು ತೋರುತ್ತದೆ. ನೆಹರೂ ಭಾರತದ ಪ್ರಭಾವವನ್ನು ಅಂತಾರಾಷ್ಟ್ರೀಯ ವೇದಿಕೆಯಲ್ಲಿ, ಬೃಹತ್ ಕಾರ್ಖಾನೆಗಳಲ್ಲಿ ಕಾಣಲು ಯತ್ನಿಸಿದರೆ, ಇಂದಿರಾ ದೇಶದ ತಳಮಟ್ಟದ ಬಲಸಂವರ್ಧನೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತ ಪ್ರಭಾವಶಾಲಿಯಾಗುವುದಕ್ಕೂ ಕಾರಣವಾಗುತ್ತದೆ ಎಂಬುದನ್ನು ಗ್ರಹಿಸಿದ್ದರು. ಇಂದಿರಾ ಅವರ ದರ್ಪ, ಸರ್ವಾಧಿಕಾರಿ ಮನೋಧರ್ಮಗಳೇ ಮೊದಲಾದ ಅವರ ಮಿತಿಗಳ ನಡುವೆಯೂ ಭೂ ಸುಧಾರಣೆ, ಇಪ್ಪತ್ತು ಅಂಶಗಳ ಕಾರ್ಯಕ್ರಮಗಳಂತಹ ಪ್ರಭಾವಶಾಲಿ ಅಭಿವೃದ್ಧಿ ಪ್ರಕ್ರಿಯೆಗಳು ಒಂದಷ್ಟು ಜನರನ್ನು ಮೇಲೆತ್ತಲು ಸಾಧ್ಯವಾಗಿದ್ದರೆ ಅದರ ಕೀರ್ತಿ ಇಂದಿರಾ ಅವರಿಗೇ ಸಲ್ಲುತ್ತದೆ. ಈ ಅಂಶಕ್ಕೆ ನಾನು ಒತ್ತು ಕೊಡುತ್ತಿರುವುದಕ್ಕೆ ಕಾರಣವಿದೆ. ಯಾವುದೇ ಅಭಿವೃದ್ಧಿ ದೃಷ್ಟಿಕೋನದಲ್ಲಿ ಎರಡು ಕೇಂದ್ರಗಳಿರುತ್ತವೆ. ಮೊದಲನೆಯದು ನೆಹರೂ ಮಾದರಿಯದು. ಈ ಮಾದರಿಯ ದೃಷ್ಟಿಯಲ್ಲಿ ಯಥಾಸ್ಥಿತಿಯ ಸಮಾಜದಲ್ಲಿ ಯಾರು ಕೇಂದ್ರಸ್ಥಾನದಲ್ಲಿರುತ್ತಾರೋ ಅವರೇ ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾಗುವ ಮೊದಲ ಪಾಲುದಾರರಾಗಿರುತ್ತಾರೆ. ಅವರು ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾದಾಗ ಉಂಟಾಗುವ ಪರಿಣಾಮವು ಅವರಿಗೆ ಪೂರಕವಾಗುವಂತೆ ಅನ್ಯಕೇಂದ್ರಸ್ಥಾನವಾದ ದುರ್ಬಲರು, ದಲಿತರು, ಆದಿವಾಸಿಗಳು, ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಅಭಿವೃದ್ಧಿ ಪ್ರಕ್ರಿಯೆಗೆ ಒಳಪಡಿಸುತ್ತದೆ. ಎರಡನೆಯದು ಅಂಬೇಡ್ಕರ್ ಮಾದರಿಯ ಅಭಿವೃದ್ಧಿ. ಅದು ಪಾಶ್ಚಿಮಾತ್ಯ ರೀತಿಯ ಅಭಿವೃದ್ಧಿಯನ್ನು ಮನ್ನಿಸುತ್ತಿದ್ದು ಅದರ ಸಾಂಸ್ಕೃತಿಕ

ಲೋಪ-ದೋಷಗಳೇನೇ ಇದ್ದರೂ ಅದು ಅನ್ನ ಕೇಂದ್ರಸ್ಥಾನವಾದ ವ್ಯವಸ್ಥೆಯ ತಳಮಟ್ಟವನ್ನೇ ಅಭಿವೃದ್ಧಿ ಪ್ರಕ್ರಿಯೆಯ ನಾಯಕ ಸ್ಥಾನದಲ್ಲಿರಿಸುತ್ತದೆ. ಇಂದಿರಾ ಅವರ ಕ್ರಮಗಳು ಅಂಬೇಡ್ಕರ್ ದೃಷ್ಟಿಯನ್ನು ಆಧರಿಸದೆ ಇದ್ದರೂ ನೆಹರೂ ಮಾದರಿಗಿಂತ ಕೊಂಚ ಭಿನ್ನವಾಗಿ ಅಂಬೇಡ್ಕರ್ ದೃಷ್ಟಿಯತ್ತ ಒಲವಿರಿಸಿಕೊಂಡಿರುವುದಾಗಿತ್ತು. ಸಾಮಾಜಿಕ ಮುಗ್ಗಟ್ಟೆಯ ಹಿನ್ನೆಲೆಯಲ್ಲಿ ಇಂದಿರಾ ಅವರ ಕ್ರಮಗಳು ಎಷ್ಟು ಬಲಶಾಲಿಯಾದವೆಂದರೆ ಇವತ್ತಿಗೂ ಅನ್ನಕೇಂದ್ರಸ್ಥಾನ ಕಾಂಗ್ರೆಸ್ ಪರವಾದ ಒಲವಿರಿಸಿಕೊಂಡಿದ್ದರೆ ಅದಕ್ಕೆ ಇಂದಿರಾ ಅವರೇ ಮೂಲ ಕಾರಣರಾಗಿದ್ದಾರೆ. ಇಂದಿರಾ ಅವರ ಮಗನೂ, ಇಂದಿರಾ ನೀತಿಗಳ ಪಾಲಕರೂ, ಶಿಕ್ಷಣದ ಬಗ್ಗೆ ಭಾರತದ ಪ್ರಧಾನಿಗಳಲ್ಲೇ ಅತ್ಯಂತ ಹೆಚ್ಚು ಕಾಳಜಿ-ಕಳಕಳಿ-ಪ್ರಾಮಾಣಿಕತೆ ಮಾತ್ರವಲ್ಲದೆ ಧೈರ್ಯವನ್ನೂ ಇರಿಸಿಕೊಂಡಿದ್ದ ರಾಜೀವ್ ಗಾಂಧಿಯವರೂ ಇಂದಿರಾ ಗಮನಿಸಿದ ಶಕ್ತಿ ಕೇಂದ್ರಗಳನ್ನು ಅವರಷ್ಟು ಸಮರ್ಥವಾಗಿ ಗಟ್ಟಿಸಲು ಸಾಧ್ಯವಾಗಲಿಲ್ಲ.

ಎರಡನೆಯ ಸಂಗತಿಯೆಂದರೆ, ಇಂದಿರಾ ಅವರ ಕಾಲಘಟ್ಟದಲ್ಲಿ ಅಮೇರಿಕಕ್ಕೆ ಅತ್ಯಂತ ಸಶಕ್ತ ಪ್ರತಿಸ್ಪರ್ಧಿಯಾದ ಯುಎಸ್ ಎಸ್ ಆರ್ ಅಮೇರಿಕದ ವಿಸ್ತರಣಾ ನೀತಿಗೆ ತಡೆ ಒಡ್ಡಿತ್ತು. ಎರಡು ಟಗರುಗಳು ಪರಸ್ಪರ ಜಗಳವಾಡುತ್ತಿರುವಾಗ ಚಿಕ್ಕ ಆಡುಗಳು ಕೊಂಚ ನೆಮ್ಮದಿಯಿಂದಿರಲು ಸಾಧ್ಯವಾಗುತ್ತದೆ. ಇಂದಿರಾ ಅವರು ಈ ಅವಕಾಶವನ್ನು ಭಾರತದ ಬಲವರ್ಧನೆಗೆ ಬಳಸಿಕೊಂಡಿದ್ದರು. ಹಾಗಂತ ಅದು ಯಶಸ್ವಿಯಾಗಿದೆಯೆಂದೇನಲ್ಲ. ಯಶಸ್ವಿಯಾಗಿರುತ್ತಿದ್ದರೆ ಇವತ್ತು ಮನಮೋಹನ್ ಸಿಂಗರು ಒತ್ತಡಕ್ಕೆ ಮಣಿಯಬೇಕಾದ ಅಗತ್ಯವಿರಲಿಲ್ಲ. ಈ ನಿಟ್ಟಿನಲ್ಲಿ ಯಾಕೆ ಯಶಸ್ವಿಯಾಗಲಿಲ್ಲ ಎನ್ನುವುದಕ್ಕೂ ಯುಎಸ್ ಎಸ್ ಆರ್‌ನತ್ತಲೇ ನೋಡಬೇಕಾಗುತ್ತದೆ. ನೆಹರೂ, ಇಂದಿರಾ, ಶಾಸ್ತ್ರಿ ಇವರೆಲ್ಲರ ಕಾಲದ ಅಭಿವೃದ್ಧಿ ಪ್ರಕ್ರಿಯೆಗಳು ಮೂಲಭೂತವಾಗಿ ಯುಎಸ್ ಎಸ್ ಆರ್ ಕೃಪಾಶ್ರಯದಲ್ಲೇ ನಡೆದವುಗಳು ಹೊರತು ದೇಶೀಯವಾದದ್ದೇನಲ್ಲ. ಯುಎಸ್ ಎಸ್ ಆರ್‌ನ ಕೃಪೆಯನ್ನು ಪಡೆದಿದ್ದರೆ ಅದರಿಂದಾಗಿಯೇ ಯಾವ ತೊಂದರೆಯೂ ಆಗಬೇಕಿರಲಿಲ್ಲ. ಆದರೆ ಯುಎಸ್ ಎಸ್ ಆರ್ ಮಾದರಿಯ ಅಭಿವೃದ್ಧಿಗೆ ತೊಡಗುವುದರ ಬದಲಿಗೆ ಯುಎಸ್ ಎಸ್ ಎಸ್ ಆರ್‌ನವರ ದೇಶೀ ಮಾದರಿಯ ಅಭಿವೃದ್ಧಿಗೆ ತೊಡಗಿಸಿಕೊಳ್ಳಬೇಕಾಗಿತ್ತು. ವಾಸ್ತವವಾಗಿ ಯುಎಸ್ ಎಸ್ ಆರ್ ಮಾದರಿಯ ಅಭಿವೃದ್ಧಿ ನೆಹರೂ ಮಾದರಿಗಿಂತ ಭಿನ್ನವಾದುದೇನೂ ಅಲ್ಲ. ಈ ನಿಟ್ಟಿನಲ್ಲಿ ಇಂದಿರಾ ಯುಎಸ್ ಎಸ್ ಆರ್ ಮಾದರಿಗಿಂತ ಕೊಂಚ ಆಚೆ ಚಲಿಸಿದರಾದರೂ ಅದು ಯುಎಸ್ ಎಸ್ ಆರ್ ಮಾದರಿ ಅಥವಾ ನೆಹರೂ ಮಾದರಿಯ ವಿಶಾಲ ಸ್ವರೂಪವಾಯಿತೇ ಹೊರತು ಮೂಲಭೂತವಾಗಿ ಅನ್ನಕೇಂದ್ರವನ್ನುದ್ದೇಶಿಸಿದ ಅಭಿವೃದ್ಧಿಯಾಗಲಿಲ್ಲ. ಇದನ್ನು ಯುಎಸ್ ಎಸ್ ಆರ್ ಒತ್ತಡ ಎನ್ನುವುದಕ್ಕಿಂತ ಯುಎಸ್ ಎಸ್ ಆರ್ ಪ್ರಭಾವ ಎನ್ನುವುದು ಸೂಕ್ತವಾಗುತ್ತದೆ. ಪ್ರಾಯಃ ಇಂದಿರಾ ಅಭಿವೃದ್ಧಿ ಕ್ರಮಗಳಿಗೆ ಸೈದ್ಧಾಂತಿಕ ಹಿನ್ನೆಲೆಯಿರದೆ ನೆಹರೂವಿಯನ್ ಪರಿಕಲ್ಪನೆಯೊಳಗೆ ಹಂತಹಂತವಾಗಿ ಸೇರಿಹೋಯಿತೆಂದು ತೋರುತ್ತದೆ.

ಮುಂದಿನದು ಯುಎಸ್ ಎಸ್ ಆರ್ ಕುಸಿತ. ಇವತ್ತು ಅದೇ ಯುಎಸ್ ಎಸ್ ಆರ್ ಇರುತ್ತಿದ್ದರೆ ಯುಎಸ್ ಎ ಇರಾಕ್ ಮೇಲೆ ಆಕ್ರಮಣ ಮಾಡಲು ಸಾಧ್ಯವಿರುತ್ತಿರಲಿಲ್ಲ. ಯುಎಸ್ ಎ ಯುದ್ಧನೌಕೆಗಳು ಹೊರಡುವ ಮೊದಲೇ ಯುಎಸ್ ಎಸ್ ಆರ್‌ನ ಯುದ್ಧನೌಕೆಯೊಂದು ಗಲ್ಫ್ ಪ್ರದೇಶದಲ್ಲಿ ಲಂಗರು ಹಾಕಿರುತ್ತಿತ್ತು. ಯುಎಸ್ ಎ ಮಿತ್ರಕೂಟ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಆರ್ಥಿಕ ಒಪ್ಪಂದಗಳನ್ನು ಮಾಡಿಕೊಳ್ಳುವಾಗಲೆಲ್ಲ ಯುಎಸ್ ಎಸ್ ಆರ್ ಅಡ್ಡಗಾಲು ಹಾಕುತ್ತಿತ್ತು. ಕನಿಷ್ಠ ಈ ಶಕ್ತಿ ಸಮತೋಲನವು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಅಮೇರಿಕದ ಒತ್ತಡದಿಂದ ಹೊರಗಿರಲು ಸಹಾಯ ಮಾಡುತ್ತಿತ್ತು. ಆದರೆ

ಯುಎಸ್ಎಸ್ಆರ್ ಕುಸಿಯಿತು. ಅದರ ಕುಸಿತಕ್ಕೆ ಕಾರಣರಾದ ಮಿಖೈಲ್ ಗೋರ್ಬಚೇವ್ ಮಹಾನ್ ಜನತಾಂತ್ರಿಕ ಪ್ರವಾದಿಯೆಂಬ ಪ್ರಚಾರವನ್ನು ಪಡೆದರು. ಆದರೆ ಗೋರ್ಬಚೇವ್ ಅಮೇರಿಕ ಕೇಂದ್ರಿತ ದೃಷ್ಟಿಯಲ್ಲಿ ಅರ್ಥೈಸಿದಾಗಲಷ್ಟೆ ನಾಯಕರೆನಿಸುತ್ತಾರೆ. ಅಭಿವೃದ್ಧಿಶೀಲ ದೇಶಗಳ ಅನ್ಯಕೇಂದ್ರಸ್ಥಾನದ ದೃಷ್ಟಿಯಲ್ಲಿ ಅರ್ಥೈಸಿದಾಗ ಅವರೊಬ್ಬ ಖಳನಾಯಕ. ಇತ್ತಂಡಗಳಿಗೂ ಸೇರದೆ ಅರ್ಥೈಸಿದಾಗ ವಾಸ್ತವವನ್ನು ಎದುರಿಸುವ ಶಕ್ತಿ-ಸಾಮರ್ಥ್ಯಗಳಿಲ್ಲದ ದುರ್ಬಲ ನಾಯಕ.

ಅದೇನೇ ಇದ್ದರೂ ಈ ವಿದ್ಯಮಾನಗಳು ಅಂತಿಮವಾಗಿ ಒಂದೇ ಕಡೆಗೆ ಬೆಳಕು ಚೆಲ್ಲುತ್ತವೆ. ಸ್ವಂತಿಕೆಯಿಂದ ಅಭಿವೃದ್ಧಿ ಸಾಧಿಸದೆ ಯಾರು ಯಾರದೋ ಆಶ್ರಯದಲ್ಲಿ ಅಭಿವೃದ್ಧಿ ಪ್ರಕ್ರಿಯೆಗೆ ತೊಡಗಿಕೊಂಡರೆ ಆಶ್ರಯ ಕೊಟ್ಟವರ ಅವನತಿಯೊಂದಿಗೆ ನಮ್ಮ ಅವನತಿಯೂ ಸಂಭವಿಸುತ್ತದೆ. ಈ ವಿಚಾರ ಈಗಲೂ ಪ್ರಸ್ತುತ. ಅಂದು ಯುಎಸ್ಎಸ್ಆರ್‌ನ ಆಶ್ರಯದಲ್ಲಿದ್ದ ಭಾರತ ಇಂದು ಯುಎಸ್ಎ ಆಶ್ರಯದಲ್ಲಿದೆ. ಯುಎಸ್ಎಯೇನಾದರೂ ಮುಗ್ಗರಿಸಿದರೆ ಭಾರತದ ಆರ್ಥಿಕತೆಯ ಮೇಲ್ಪದರದಲ್ಲಿ ಕಾಣಿಸುತ್ತಿರುವ ಅಭಿವೃದ್ಧಿ ಕೂಡ ಮುಗ್ಗರಿಸಿ ಹೋಗಲಿದೆ. ಸ್ವತಃ ಅಮೇರಿಕವೇ ತನ್ನ ರೈತರಿಗೆ 85% ಸಬ್ಸಿಡಿ ಕೊಡಲು ತೊಡಗಿರುವುದು, ಹೊರಗುತ್ತಿಗೆ ವಿಚಾರದಲ್ಲಿ ಅದು ತಳೆದಿರುವ ನಿಲುವು ಮುಂತಾದವು ಅಮೇರಿಕ ತಾನು ಪ್ರತಿಪಾದಿಸುತ್ತಿರುವ ಆರ್ಥಿಕ ನೀತಿಯಲ್ಲಿ ಈಗಾಗಲೇ ಮುಗ್ಗರಿಸತೊಡಗಿದೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಇಂಥಲ್ಲಿ ಮನಮೋಹನ್ ಸಿಂಗ್ ಪ್ರಣೀತ, ಅಮೇರಿಕ ಮಿತ್ರಕೂಟ ಪ್ರಣೀತ ಜಾಗತೀಕರಣ ಸನ್ನಿವೇಶ ದೇಶವನ್ನು ಯಾವ ರೀತಿ ವಿಭಜಿಸುತ್ತದೆ ಎಂಬುದನ್ನು ನೋಡಬೇಕು. ಈ ಸನ್ನಿವೇಶ ಜಾಗತೀಕರಣದಿಂದಲೇ ಹುಟ್ಟಿಕೊಂಡಿರುವುದಾಗಿರದೆ ಪಶ್ಚಿಮ ಪ್ರಣೀತ ಆಧುನಿಕತೆಯಿಂದ ಹುಟ್ಟಿಕೊಂಡಿದ್ದು ಜಾಗತೀಕರಣದಿಂದ ಹೆಚ್ಚು ತೀವ್ರಗೊಳ್ಳುತ್ತಿರುವುದಾಗಿದೆ. ಸಾಪೇಕ್ಷವಾಗಿ ಅಲ್ಲಲ್ಲಿ ಆಗಾಗ ಅನ್ಯಕೇಂದ್ರಸ್ಥಾನ ಆಧರಿತ ಅಭಿವೃದ್ಧಿ ನಡೆದರೂ ಒಟ್ಟೂ ಆಧುನಿಕ ಅಭಿವೃದ್ಧಿ ಪ್ರಕ್ರಿಯೆಗಳು ಪಶ್ಚಿಮ ಪ್ರಣೀತ ಆಧುನಿಕತೆಯನ್ನೇ ಆಧರಿಸಿವೆ. ಅದರ ತೀವ್ರತೆಯನ್ನು ಒಂದೆರಡು ಉದಾಹರಣೆಗಳ ಮೂಲಕ ಮುಂದುವರಿಸುತ್ತೇನೆ. ಇತ್ತೀಚೆಗೆ ಕಂಪ್ಯೂಟರ್ ಕೇಂದ್ರಿತ ಅಭಿವೃದ್ಧಿ ತುಂಬಾ ಮಹತ್ವ ಪಡೆದಿದೆ. ನಿಜವಾಗಿಯೂ ಕಂಪ್ಯೂಟರ್ ಅಭಿವೃದ್ಧಿಯ ಒಂದು ಸಾಧನವೆನ್ನುವಲ್ಲಿ ಎರಡನೆ ಮಾತು ಬರುವುದಿಲ್ಲ. ಕಂಪ್ಯೂಟರ್‌ನ ಅವಶ್ಯಕತೆಯನ್ನು ನಿರಾಕರಿಸುವ ಪ್ರಶ್ನೆಯೂ ಇಲ್ಲ. ಆದರೆ ಕಂಪ್ಯೂಟರ್ ಅನ್ನು ಅಭಿವೃದ್ಧಿಗೆ ಬಳಸಿಕೊಳ್ಳುವುದೇ ಬೇರೆ, ಕಂಪ್ಯೂಟರ್‌ನ ಮೂಲಕ ಅಭಿವೃದ್ಧಿ ಸಾಧಿಸುವುದೇ ಬೇರೆ; ಕಂಪ್ಯೂಟರೇ ಅಭಿವೃದ್ಧಿಯ ಸಂಕೇತವೆನಿಸುವುದೇ ಬೇರೆ. ಒಂದನೆ ಹಂತದಲ್ಲಿ ಮನುಷ್ಯ ಅಭಿವೃದ್ಧಿಯ ಕೇಂದ್ರಸ್ಥಾನದಲ್ಲಿ ಆತನಿಗೆ ಪೂರಕವಾಗಿ ಕಂಪ್ಯೂಟರನ್ನು ಉಪಯೋಗಿಸಲಾಗುತ್ತದೆ. ಎರಡನೆ ಹಂತದಲ್ಲಿ ಕಂಪ್ಯೂಟರ್‌ಗೆ ಪೂರಕವಾಗಿ ಮನುಷ್ಯನನ್ನು ಹೊಂದಿಸಲಾಗುತ್ತದೆ. ಮೂರನೇ ಹಂತದಲ್ಲಿ ಮನುಷ್ಯ ಅಮುಖ್ಯನಾಗಿ ಕಂಪ್ಯೂಟರೇ ಅಭಿವೃದ್ಧಿ ಸಾಮ್ರಾಜ್ಯದ ಚಕ್ರವರ್ತಿಯಾಗಿರುತ್ತದೆ!

ಎರಡು ಮತ್ತು ಮೂರನೆ ಹಂತಗಳು ಎಷ್ಟು ಪ್ರಭಾವಿಯಾಗಿವೆ ಎನ್ನುವುದನ್ನು 'ಕಂಪ್ಯೂಟರ್ ಇಲ್‌ಲಿಟರೇಟ್' ಎನ್ನುವ ಪದಬಳಕೆಯ ಮನೋಧರ್ಮದಲ್ಲಿ ಗ್ರಹಿಸಬಹುದು. ಕಂಪ್ಯೂಟರ್ ಗೊತ್ತಿಲ್ಲದವನನ್ನು ಕಂಪ್ಯೂಟರ್ ಇಲ್‌ಲಿಟರೇಟ್ ಅಂತ ಅನ್ನುವುದು ಸೂಕ್ತವೆನ್ನುವುದಾದರೆ 'ಸಯನ್ಸ್ ಇಲ್‌ಲಿಟರೇಟ್', 'ಆರ್ಟ್ಸ್ ಇಲ್‌ಲಿಟರೇಟ್', 'ಲಿಟರೇಚರ್ ಇಲ್‌ಲಿಟರೇಟ್', 'ಪ್ರಿಂಟಿಂಗ್ ಟೆಕ್ನಾಲಜಿ ಇಲ್‌ಲಿಟರೇಟ್', 'ಹೋಮ ಇಲ್‌ಲಿಟರೇಟ್' (ಹೋಮ ಮಾಡಲು ಗೊತ್ತಿಲ್ಲದವನು!), 'ಬೂದಿ ಇಲ್‌ಲಿಟರೇಟ್' (ಬೂದಿ ಸೃಷ್ಟಿಸಲು ಗೊತ್ತಿಲ್ಲದವನು!) ಎಂದೆಲ್ಲ ವಿಂಗಡಿಸಬೇಕಾಗುತ್ತದೆ. ಯಾಕೆಂದರೆ

ಎಲ್ಲವನ್ನೂ ಬಲ್ಲವರು ಯಾರೂ ಇಲ್ಲ. ಹಾಗಿರುವಾಗ ಕಂಪ್ಯೂಟರ್ ಗೊತ್ತಿಲ್ಲದವನು ಮಾತ್ರ 'ಇಲ್‌ಲಿಟರೇಟ್' ಆಗಿಬಿಡುವುದು ಹೇಗೆ? ಅರ್ಥಾತ್ ಈ ಪದಬಳಕೆ ಒಟ್ಟೂ ವ್ಯವಸ್ಥೆಯನ್ನು ಅಕ್ಷರ ಸಂಸ್ಕೃತಿಯಿಂದ ಕಂಪ್ಯೂಟರ್ ಸಂಸ್ಕೃತಿಯತ್ತ ಕೊಂಡೊಯ್ಯುವ ಉದ್ದೇಶಹೊಂದಿದೆ. ಅದಕ್ಕೆ ಸರಿಸಮನಾದ ಸ್ಥಾನಮಾನವನ್ನು ಕಂಪ್ಯೂಟರ್‌ಗೆ ಕೊಡುತ್ತಿದೆ. ಈ ವ್ಯವಸ್ಥೆಯು ಅಕ್ಷರ ಸಂಸ್ಕೃತಿಯ ಆಶ್ರಯದಲ್ಲಿ ನಾವು ಕಟ್ಟಿಕೊಂಡಿರುವ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ, ಸಾಹಿತ್ಯಿಕ ಪರಿಕಲ್ಪನೆಗಳನ್ನೆಲ್ಲ ನಾಶ ಮಾಡಬಯಸುತ್ತದೆ. ಇಲ್ಲಿ ಪಶ್ಚಿಮ ಕೇಂದ್ರಿತ ಏಕರೂಪಿ ಸಂಸ್ಕೃತಿಯ ಪ್ರತಿಪಾದನೆ ನಡೆಯುತ್ತದೆ ಎನ್ನುವಷ್ಟೇ ಪ್ರಮುಖವಾದ ವಿಚಾರ ಇನ್ನೊಂದಿದೆ. ಅದು ಈ ಮಾದರಿಯ ಅಭಿವೃದ್ಧಿ ಬಹು ದೊಡ್ಡದಾದ ಪ್ರತ್ಯೇಕ ಸಮಾಜವೊಂದನ್ನು ರೂಪಿಸುತ್ತದೆ ಎಂಬುದು. ಹೇಳುವುದಕ್ಕೇನೋ ಬಹು ಸುಲಭವಾಗಿ 2010ರಲ್ಲಿ, 2020ರಲ್ಲಿ ಕಂಪ್ಯೂಟರ್ ಲಿಟರೇಟ್ ಭಾರತವನ್ನು ರೂಪಿಸುತ್ತೇವೆ ಎಂದು ಘೋಷಿಸಬಹುದು. ಇಂತಹ ಘೋಷಣೆ ಕೊಡುವವರಿಗೆ ಗ್ರಾಮಭಾರತ ಅರ್ಥವೇ ಆಗುವುದಿಲ್ಲ. ನಿರ್ದಿಷ್ಟ ಕಾಲಮಿತಿಯಲ್ಲಿ ಇಡೀ ಭಾರತವನ್ನು ಈ ರೀತಿ ಮಾಡಬಹುದು ಎಂಬ ಕಲ್ಪನೆಯನ್ನು ಅನ್ಯಕೇಂದ್ರಸ್ಥಾನಗಳು ನಿರಾಕರಿಸುತ್ತವೆ. 50 ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆಯನ್ನೇ ಸಾಧಿಸಲು ಸಾಧ್ಯವಾಗಿಲ್ಲ. ಹಾಗಿರುವಾಗ ದಿಢೀರ್ ಅಂತ ಕಂಪ್ಯೂಟರ್ ಸಾಕ್ಷರತೆ ಸಾಧಿಸಲಾಗುತ್ತದೆ ಎನ್ನುವುದು ತಪ್ಪು ಕಲ್ಪನೆಯಾಗುತ್ತದೆ. ಹಾಗೆಂದರೆ ವಾಸ್ತವವಾಗಿ ಕಂಪ್ಯೂಟರ್ ಕ್ರಾಂತಿಯಲ್ಲಿ ತೊಡಗಿಕೊಂಡಿರುವವರಿಗೆ ಅನ್ಯಕೇಂದ್ರಸ್ಥಾನಗಳಲ್ಲಿರುವ ಬಡ ಕೃಷಿಕರು, ಕೂಲಿ ಕಾರ್ಮಿಕರು, ವೇಶ್ಯೆಯರು, ಆದಿವಾಸಿಗಳು, ಕೊಳಚೆ ಪ್ರದೇಶ ನಿವಾಸಿಗಳು ಇವರನ್ನೆಲ್ಲ ಕಂಪ್ಯೂಟರ್ ಸಾಕ್ಷರರನ್ನಾಗಿ ಮಾಡಬೇಕೆಂಬ ತುಡಿತವೇನೂ ಇಲ್ಲ. ಒಂದು ವೇಳೆ ಕಂಪ್ಯೂಟರ್ ಸಾಕ್ಷರತೆಯನ್ನು ದಾಖಲೆಯಲ್ಲಿ ತೋರಿಸಿದರೂ ವಾಸ್ತವವಾಗಿ ಸಂಪೂರ್ಣ ಕಂಪ್ಯೂಟರ್ ಸಾಕ್ಷರತೆ ಅಸಾಧ್ಯ. ಯಾಕೆಂದರೆ ಅನ್ಯ ಕೇಂದ್ರಸ್ಥಾನಗಳು ಪ್ರಭುತ್ವದಿಂದಲೇ ನಿರ್ಲಕ್ಷಿಸಲ್ಪಟ್ಟಿವೆ. ಪ್ರಭುತ್ವ ಆಸಕ್ತಿವಹಿಸುವ ಕೇಂದ್ರಸ್ಥಾನದಲ್ಲಿ ಕೂಡ ಒಂದು ಗುಂಪಿಗೆ ಕಂಪ್ಯೂಟರ್ ಒಗ್ಗದ ಕಷಾಯವಾಗಿ ಅದರಿಂದ ದೂರ ಉಳಿದುಬಿಡುತ್ತಾರೆ. ಅದು ಅವರವರ ಜೀವನದೃಷ್ಟಿಗೆ ಸಂಬಂಧಿಸಿದ ಪ್ರಶ್ನೆಯಾಗಿರುತ್ತದೆ.

ಮುಂದಿನ ಅಭಿವೃದ್ಧಿಯ ಹಂತ ಸಮಾಜವನ್ನು ಮತ್ತಷ್ಟು ಪ್ರತ್ಯೇಕಿಸುತ್ತದೆ. ಯಾರು ಕಂಪ್ಯೂಟರ್ ಸಾಕ್ಷರರಲ್ಲವೋ ಅವರನ್ನೆಲ್ಲ ನಿರಾಕರಿಸಿ ಪಥ ಮುನ್ನಡೆಯುತ್ತದೆ. ಆಗ ಈ ಕಂಪ್ಯೂಟರ್ ಅನಕ್ಷರಸ್ಥರನ್ನು ಪ್ರತಿನಿಧಿಸುವ ಯಾವುದೇ ಶಕ್ತಿ ಇಲ್ಲವಾಗುತ್ತದೆ. ಅಂಥಲ್ಲಿ ಕಂಪ್ಯೂಟರ್ ಅನಕ್ಷರಸ್ಥರು ತಮ್ಮದೇ ಆದ ಹೊಸ ಪ್ರಾತಿನಿಧಿಕ ಶಕ್ತಿಯನ್ನು ಹುಡುಕುತ್ತಾ ಹೋಗುತ್ತಾರೆ. ಅದು ಸಮಾಜದಲ್ಲಿ ಪ್ರತ್ಯೇಕತೆಗೆ ಬಲವಾದ ಶಕ್ತಿಯಾಗುತ್ತದೆ.

ಇನ್ನೊಂದು ಉದಾಹರಣೆಗೆ ಬನ್ನಿ. ಇತ್ತೀಚೆಗೆ ಎಜುಸ್ಯಾಟ್ ಉಪಗ್ರಹವನ್ನು ಹಾರಿಸಿ ಶಿಕ್ಷಣ ಕ್ಷೇತ್ರದಲ್ಲಿ ಭಾರೀ ಕ್ರಾಂತಿಯನ್ನು ನಿರೀಕ್ಷಿಸಲಾಗಿದೆ. ಆ ನಿರೀಕ್ಷೆಗಳೆಲ್ಲ ಈಡೇರಿದರೆ ಮುಂದಿನ ಎರಡು ಮೂರು ದಶಕಗಳಲ್ಲಿ ಶಿಕ್ಷಕರು ಪ್ರಾಮುಖ್ಯ ಕಳೆದುಕೊಳ್ಳುತ್ತಾರಲ್ಲದೆ ಶಿಕ್ಷಕ ಉದ್ಯೋಗದಲ್ಲಿ ಭಾರೀ ಪ್ರಮಾಣದ ಇಳಿಕೆಯಾಗಲಿದೆ. ಇದರಿಂದ ಶಿಕ್ಷಕ-ವಿದ್ಯಾರ್ಥಿಗಳ ನಡುವೆ ಏರ್ಪಡುವ ಸಂಬಂಧಗಳು; ಆ ಮುಖೇನ ಒದಗುವ ಜ್ಞಾನ ಇಲ್ಲವಾಗುತ್ತದೆ ಎನ್ನುವುದು ಅದರ ಸಾಂಸ್ಕೃತಿಕ ಪರಿಣಾಮ. ಅಷ್ಟೇ ಮುಖ್ಯವಾದ ಇನ್ನೊಂದು ಪರಿಣಾಮ ಉಂಟಾಗಲಿದೆ. ಎಜುಸ್ಯಾಟ್‌ನ ಉಪಯೋಗ ಪಡೆಯಲು ವಿದ್ಯಾರ್ಥಿಗಳು ವಾರ್ಷಿಕ ಒಂದು ಸಾವಿರ ರೂ. ಶುಲ್ಕ ತೆರಬೇಕಾದೀತೆಂದು ಡಾ. ಯು.ಆರ್.ರಾವ್ ಸಲಹೆ ಮಾಡಿದ್ದಾರೆ. ಈ ಮೊತ್ತ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಆದರೆ ಆ ಶುಲ್ಕವನ್ನು ತೆರಲಾಗದ ಗುಂಪು

ಇವೇ ಇರುತ್ತದೆ. ಇಡೀ ಶೈಕ್ಷಣಿಕ ಅಭಿವೃದ್ಧಿ ಎಜುಸ್ಯಾಟ್ ಅನ್ನು ಅವಲಂಬಿಸುವಂತಾದಾಗಲೂ ಈ ಗುಂಪು ಶಿಕ್ಷಕರನ್ನೇ ಅವಲಂಬಿಸುತ್ತದೆ. ಆದರೆ ಅಭಿವೃದ್ಧಿಯ ನಿರ್ದೇಶಕ ಶಕ್ತಿಗಳು ಈ ಗುಂಪನ್ನು ನಿರ್ಲಕ್ಷಿಸುತ್ತವೆ. ಆ ಗುಂಪು ತಮ್ಮ ಪ್ರಾತಿನಿಧಿಕ ಶಕ್ತಿಗಳನ್ನು ಹುಡುಕತೊಡಗುವಲ್ಲಿ ಪ್ರತ್ಯೇಕತೆಗೆ ಮತ್ತೊಂದು ಪ್ರೇರಣೆ ಒದಗುತ್ತದೆ.

ಇವೆರಡು ಪಶ್ಚಿಮ ಕೇಂದ್ರಿತ ಅಭಿವೃದ್ಧಿಯ ಪರಿಣಾಮವನ್ನು ವಿಶದಪಡಿಸಲು ನಾನು ಸಾಂಕೇತಿಕವಾಗಿ ತೆಗೆದುಕೊಂಡ ಉದಾಹರಣೆಗಳಷ್ಟೇ. ಹಲವಾರು ಸ್ತರಗಳಲ್ಲಿ ನಡೆಯುವ ಈ ಪಶ್ಚಿಮ ಮಾದರಿಯ ಅಭಿವೃದ್ಧಿ ಕ್ರಮೇಣ ಅಭಿವೃದ್ಧಿಯ ನಿರ್ದೇಶಕ ಶಕ್ತಿಗಳಿಂದ ನಿರ್ಲಕ್ಷಿಸಲ್ಪಟ್ಟ ಪರ್ಯಾಯ ಸಮಾಜವೊಂದನ್ನು ರೂಪಿಸುತ್ತಾ ಹೋಗುತ್ತದೆ. ಆ ಪರ್ಯಾಯ ಸಮಾಜವು ತನ್ನನ್ನು ಪ್ರತಿನಿಧಿಸುವ ರಾಜಕೀಯ ಶಕ್ತಿಯನ್ನು ಹುಡುಕಾಡುವ ಪ್ರಯತ್ನದಲ್ಲಿ ಪ್ರತ್ಯೇಕತಾವಾದ ತಲೆಯೆತ್ತುತ್ತದೆ. ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಈ ಪರ್ಯಾಯ ಸಮಾಜದಲ್ಲೇ ಪರಸ್ಪರ ವಿರೋಧಾತ್ಮಕವಾದ ಲಕ್ಷಣಗಳಿರುವುದರಿಂದ ಅವು ಒಗ್ಗೂಡದೆ ಹೋಗುತ್ತಿವೆ. ಅದರಿಂದಾಗಿ ರಾಷ್ಟ್ರೀಯ ಏಕತೆ ಎನ್ನುವುದು ಉಳಿದುಕೊಂಡಿದೆ. ಅದಲ್ಲದಿದ್ದರೆ ಐ.ಕೆ. ಗುಜ್ರಾಲ್, ದೇವೇಗೌಡ, ವಿ.ಪಿ.ಸಿಂಗ್, ಚಂದ್ರಶೇಖರ್, ವಾಜಪೇಯಿ, ಮನಮೋಹನ್ ಸಿಂಗ್, ಸರಕಾರಗಳೆಲ್ಲ ಅಲ್ಪಮತ ಪಡೆದ ಸರಕಾರಗಳಾಗಿದ್ದು ಸಮಾಜದ ಯಾವುದೋ ಒಂದು ಬೃಹತ್ ಗುಂಪು ಯಾವುದೇ ರಾಜಕೀಯ ಪಕ್ಷದಲ್ಲೂ ವಿಶ್ವಾಸವಿರಿಸಿಕೊಂಡಿಲ್ಲ ಎಂಬುದನ್ನು ಅರಿತು ಅನ್ಯಕೇಂದ್ರಸ್ಥಾನದಲ್ಲಿರುವ ಪರ್ಯಾಯ ಸಮಾಜದ ಶಕ್ತಿಗಳು ಸದಾಕಾಲವೂ ಪರಸ್ಪರ ಕಚ್ಚಾಡುತ್ತಲೇ ಇರುತ್ತವೆಯೆಂದು ಭಾವಿಸಬೇಕಾಗಿಲ್ಲ. ಯಾವುದೋ ಒಂದು ಅನಿವಾರ್ಯತೆ ಅವರನ್ನು ಒಗ್ಗೂಡಿಸಿ ಬಿಡಲು ಸಾಧ್ಯವಿದೆ. ಅಂಥ ಸಂದರ್ಭದಲ್ಲಿ ಅಲ್ಲಿಂದ ಬರುವ ರಾಜಕೀಯ ಶಕ್ತಿ ಹಿಂಸಾತ್ಮಕ ಸ್ವರೂಪದಲ್ಲಿರಬಹುದು- ಅಹಿಂಸಾತ್ಮಕ ಸ್ವರೂಪದಲ್ಲಿರಬಹುದು; ಆದರೆ ಈಗಿರುವ ಸ್ವರೂಪದ ರಾಷ್ಟ್ರೀಯ ಏಕತೆಗೆ ಧಕ್ಕೆ ತರುತ್ತವೆ.

ಈ ಹಿನ್ನೆಲೆಯಲ್ಲಿ ಮನಮೋಹನ್ ಸಿಂಗ್ ಮೆಂಟಾಲಿಟಿಯ ರಾಜಕೀಯ ಶಕ್ತಿಗಳು ಒಂದು ವಿಚಾರವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ತಾವು ಕೇಂದ್ರಸ್ಥಾನದಲ್ಲಿದ್ದುಕೊಂಡು ಅಭಿವೃದ್ಧಿಗೆ ಒಳಪಡಿಸುತ್ತಿರುವ ಯಾವ ಸಾಮಾಜಿಕ ಶಕ್ತಿಗಳೂ ಅಮೇರಿಕ ಮಿತ್ರಕೂಟದ ಒತ್ತಡವನ್ನು ಎದುರಿಸಲು ತಮಗೆ ಶಕ್ತಿ ಒದಗಿಸಲಾರವು ಎಂಬ ವಿಚಾರ ಮನದಟ್ಟಾಗಬೇಕು. ಯಾಕೆಂದರೆ ಈ ಶಕ್ತಿಗಳು ಅಂತರಂಗದಲ್ಲಿ ಪಶ್ಚಿಮಾಭಿಮುಖಿಯಾಗಿಯೇ ಇವೆ. ಅಂಥಲ್ಲಿ ಅನ್ಯಕೇಂದ್ರಸ್ಥಾನದಲ್ಲಿರುವ ಪರ್ಯಾಯ ಸಮಾಜವನ್ನು ನಾಯಕ ಸ್ಥಾನದಲ್ಲಿರಿಸಿ; ಕನಿಷ್ಠ ಸಮಾನ ಸ್ಥಾನದಲ್ಲಿರಿಸಿ ಅಭಿವೃದ್ಧಿಯನ್ನು ಪುನರ್ನಿರ್ವಚಿಸಬೇಕಾದ ಅಗತ್ಯವಿದೆ.

ಈ ವಿಚಾರವನ್ನು ಪ್ರಸ್ತಾಪಿಸಿದ ತತ್‌ಕ್ಷಣ ಒಂದು ಹೆಸರನ್ನು ಉಲ್ಲೇಖಿಸದಿರಲು ಸಾಧ್ಯವಾಗುವುದೇ ಇಲ್ಲ. ಅದು-ಗಾಂಧಿ. ಸಾಂಕೇತಿಕವಾಗಿ ಗಾಂಧೀ ಮಾದರಿ ಅಭಿವೃದ್ಧಿಯ ಒಂದು ವಿಚಾರವನ್ನು ಎತ್ತಿಕೊಳ್ಳುತ್ತೇನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣಕ್ಕೆ ದೊರೆತ ಸಂಸ್ಥಾರೂಪದಲ್ಲಿ ಪ್ರಧಾನವಾಗಿರುವುದು ಪಾಶ್ಚಿಮಾತ್ಯ ಶಿಕ್ಷಣ ಮಾದರಿ. ಅದಕ್ಕೆ ಪರ್ಯಾಯವಾಗಿ ಅಲ್ಲಲ್ಲಿ ನಡೆಯುತ್ತಿರುವ ಪ್ರಯತ್ನಗಳು ಗುರುಕುಲ ಪದ್ಧತಿಯನ್ನು ಆಧರಿಸಿವೆ. ಆದರೆ ಈ ಎರಡೂ ಮಾದರಿಗಳು ಬಹುಮುಖ್ಯವಾದ ಜೀವಂತಿಕೆ ಇರುವ ಶಿಕ್ಷಣವನ್ನು ನಿರ್ಲಕ್ಷಿಸಿವೆ. ಒಬ್ಬ ಕಮ್ಮಾರನ, ಒಬ್ಬ ಬಡಗಿಯ, ಒಬ್ಬ ನೇಕಾರನ ತಿಳುವಳಿಕೆಯನ್ನು ಶಿಕ್ಷಣ ವ್ಯವಸ್ಥೆಯಿಂದ ಬಹುಮಟ್ಟಿಗೆ ಹೊರಗಿರಿಸಿವೆ. ವಾಸ್ತವವಾಗಿ ಬದುಕುವ ಶಕ್ತಿಯನ್ನು ಕೊಡುವ ಆ ತಿಳಿವಳಿಕೆಗಳೇ ನಿಜವಾದ ಶಿಕ್ಷಣವಾಗಿದೆ. ಆಯಾ

ಪ್ರದೇಶಕ್ಕನುಗುಣವಾಗಿ ಸ್ಥಳೀಯ ತಿಳಿವಳಿಕೆಗಳೇ ನಿಜವಾದ ಶಿಕ್ಷಣವಾಗಿವೆ. ಆಯಾ ಪ್ರದೇಶಕ್ಕನುಗುಣವಾಗಿ ಸ್ಥಳೀಯ ತಿಳಿವಳಿಕೆಗೆ ವ್ಯವಸ್ಥಿತ ಶಿಕ್ಷಣದ ರೂಪ ಕೊಡುವ ಕೆಲಸವನ್ನು ಪ್ರಭುತ್ವ ಮಾಡಬೇಕಾಗುತ್ತದೆ. ಇವತ್ತು ಜಾಗತೀಕರಣದ ಆರ್ಥಿಕ ಮತ್ತು ಸಾಂಸ್ಕೃತಿಕ ದಾಳಿಯೆರಡನ್ನೂ ತಡೆಯಲು ಇರುವ ಏಕೈಕ ಶಕ್ತಿಯೆಂದರೆ ಗಾಂಧೀ ಮಾದರಿಯ ಅಭಿವೃದ್ಧಿ.

ಆದರೆ ಗಾಂಧೀ ಮಾದರಿಯ ಅಭಿವೃದ್ಧಿಗೆ ಇರುವ ಬಹುದೊಡ್ಡ ಮಿತಿಯೆಂದರೆ ರಾಜಕೀಯ ಶಕ್ತಿಯ ಕುರಿತ ಅದರ ಬಹುವಾದ ನಿರ್ಲಕ್ಷ್ಯ. ಅದರಿಂದಾಗಿ ಪ್ರತಿಭಟನಾ ಶಕ್ತಿಯಾಗಿ ಬಹುವಾಗಿ ಯಶಸ್ಸು ಪಡೆಯುವ ಗಾಂಧೀ ಮಾದರಿ ಒಂದು ವ್ಯವಸ್ಥೆಯಾಗಿ ಕ್ರಿಯೆಯನ್ನು ಸೃಷ್ಟಿಸುವಲ್ಲಿ ಹಿನ್ನಡೆ ಅನುಭವಿಸುತ್ತದೆ. ಈ ನಿಟ್ಟಿನಲ್ಲಿ ಗಾಂಧೀ ಮಾದರಿಗಿಂತ ಹೆಚ್ಚು ಸತ್ವಶಾಲಿಯಾಗಿರುವಂಥದು ಅಂಬೇಡ್ಕರ್ ಮಾದರಿ. ಅಂಬೇಡ್ಕರ್ ಮಾದರಿ ಈ ದೇಶಕ್ಕೆ ವಿಶೇಷವಾದದ್ದೇನನ್ನೂ ಮಾಡದೆ ಹೋಗಿರಬಹುದು; ಆದರೆ ಯಾವುದೇ ವ್ಯವಸ್ಥೆ ಬಂದರೂ ಅದು ಅನ್ಯಕೇಂದ್ರಶಕ್ತಿಗಳ ಬಗ್ಗೆ ಒಂದು ಮಟ್ಟಿನ ಕ್ರಿಯಾಶೀಲತೆಯನ್ನು ಪ್ರದರ್ಶಿಸಲೇಬೇಕಾದ ಮಟ್ಟಿನ, ರಾಜಕೀಯ ಪ್ರಜ್ಞೆಯನ್ನು ಹುಟ್ಟುಹಾಕಿದೆ. ಭಾರತದಂತಹ ದೇಶಕ್ಕೆ ಇದು ಅಂಬೇಡ್ಕರ್ ಕೊಟ್ಟಿರುವ ಮಹತ್ವದ ದೇಣಿಗೆ ಎನ್ನುವಲ್ಲಿ ಭಿನ್ನಾಭಿಪ್ರಾಯವಿರಲಾರದು.

ಈ ಹಿನ್ನೆಲೆಯಲ್ಲೇ ಗಾಂಧೀ ಮಾದರಿಯ ಸಾಮಾಜಿಕ ಮಿತಿಗಳನ್ನೂ ಹೇಳಬೇಕು. ಈ ದೇಶಕ್ಕೆ ವಿಶೇಷವಾಗಿ ಕಾಡುತ್ತಿರುವ ಜಾತಿ ಆಧಾರಿತ ತಾರತಮ್ಯಕ್ಕೆ ಗಾಂಧೀ ಬಳಿ ಇ[illegible] ನೈತಿಕ ಪ್ರಜ್ಞೆಯ ಪರಿಕರ. ಪ್ರಾಯಶಃ ಸಾಮಾಜಿಕ ಸಂದರ್ಭದ ಈ ನೈತಿಕ ಪ್ರಜ್ಞೆಯ ಪರಿಕರಕ್ಕೆ ಆರ್ಥಿಕ ಪರಿಕರಗಳಲ್ಲೊಂದಾದ 'ಧರ್ಮದರ್ಶಿತ್ವ'ವೇ ಮೂಲ ನೆಲೆಯೆಂದು ತೋರುತ್ತವೆ. ಪ್ರಸಕ್ತ ಸಾಮಾಜಿಕ ಸನ್ನಿವೇಶದಲ್ಲಿ ಕೇವಲ ಅಂತಃಕರಣವೇ ಜಾತಿತಾರತಮ್ಯ ನಿವಾರಿಸೀತು ಎನ್ನಲು ಬರುವುದಿಲ್ಲ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಮಾದರಿ ಹೆಚ್ಚು ಶಕ್ತಿಯುತವಾದದ್ದು. ಗಾಂಧೀವಾದಕ್ಕಿಂತ ಅಂಬೇಡ್ಕರ್ ವಾದದ ವ್ಯಾಪ್ತಿ ಚಿಕ್ಕದಿರಬಹುದು. ಆದರೆ ದಲಿತ ವಿಮೋಚನೆಯ ನಿಟ್ಟಿನಲ್ಲಿ ಗಾಂಧೀವಾದದ್ದು ಗ್ರಹಿಕೆಗಳಾಗಿದ್ದರೆ ಅಂಬೇಡ್ಕರ್‌ವಾದದ್ದು ಅನುಭವಜನ್ಯ ತಿಳಿವಳಿಕೆಗಳಾಗಿವೆ. ದಲಿತ ವಿಮೋಚನೆಯ ವಿಚಾರಕ್ಕಷ್ಟೆ ಸೀಮಿತಗೊಳಿಸಿ ಹೇಳುವುದಾದರೆ ಅಂಬೇಡ್ಕರ್ ವಾದ ಗಾಂಧೀವಾದಕ್ಕಿಂತ ಹೆಚ್ಚು ಆಳವಾದದ್ದು; ತೀವ್ರ ತುಡಿತದಿಂದ ಕೂಡಿರುವಂಥದ್ದು. ಆದರೆ ಈ ತುಡಿತ, ಅದಕ್ಕೆ ಕೊಟ್ಟಿರುವ ಆಕ್ರೋಶದ ಹೊಳಪು ಅಂಬೇಡ್ಕರ್‌ವಾದದ ಶಕ್ತಿಯೂ ಹೌದು. ಮಿತಿಯೂ ಹೌದು. ನಾನಾ ರೀತಿಯ ದಾಳಿಗಳಿಗೆ ಅಂಬೇಡ್ಕರ್‌ವಾದದಲ್ಲಿರುವ ಆಕ್ರೋಶದ ಶಕ್ತಿಯೇ ಕಾರಣವಾಗಿದೆ. ಹಾಗೆಯೇ ದಲಿತ ಚಳವಳಿಯನ್ನು ದಲಿತೇತರ ಸಮುದಾಯಗಳತ್ತ ಒಯ್ಯಲು ಉಂಟಾಗಿರುವ ತೊಡಕುಗಳಿಗೂ ಅದರ ಆಕ್ರೋಶವೇ ಕಾರಣವಾಗಿದೆ.

ಈ ಸಂದರ್ಭದಲ್ಲಿ ಚರ್ಚಾರ್ಹವಾದ ಇನ್ನೊಂದು ಸಂಗತಿಯತ್ತ ಗಮನ ಸೆಳೆಯಬೇಕಾಗಿದೆ. ಗಾಂಧಿ-ಅಂಬೇಡ್ಕರ್ ಇಬ್ಬರೂ ಸಹ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅರ್ಥೈಸಿದವರೇ. ಆದರೆ ಗಾಂಧೀ ಅರ್ಥೈಸುವಿಕೆಯ ಕ್ರಮ ಆಧ್ಯಾತ್ಮಿಕ ಹಿನ್ನೆಲೆಯನ್ನು ಇಟ್ಟುಕೊಳ್ಳುತ್ತದೆ. ಆಧ್ಯಾತ್ಮಿಕ ಹಿನ್ನೆಲೆಯು ಯಾವುದೇ ವಿಚಾರಕ್ಕೆ ಬಹಳ ವ್ಯಾಪಕವಾದ ವೇದಿಕೆಯನ್ನು ಒದಗಿಸುವುದರೊಂದಿಗೆ ಯಾರು ಬೇಕಾದರೂ ಅವರವರ ದೃಷ್ಟಿಕೋನಕ್ಕೆ ತಕ್ಕಂತೆ ಅರ್ಥೈಸಬಲ್ಲ ನಮ್ಯತೆಯನ್ನೂ ಒದಗಿಸಿಕೊಡುತ್ತದೆ. ಅಮೂರ್ತ ಸಂಗತಿಗಳನ್ನು ವಾದದ ಹಿನ್ನೆಲೆಯಾಗಿ ಇಟ್ಟುಕೊಂಡಾಗ ಉದ್ಭವಿಸುವ ತೊಡಕು ಇದು. ಅದರಿಂದಾಗಿ ಒಬ್ಬ ದಲಿತ ಹೋರಾಟಗಾರನೂ, ಒಬ್ಬ ಪುರೋಹಿತಶಾಹಿಯೂ, ಒಬ್ಬ ವೈಚಾರಿಕನೂ, ಒಬ್ಬ ಮತೀಯವಾದಿಯೂ ತನಗೆ ಬೇಕಾದಂತೆ ಗಾಂಧಿಯನ್ನು ಅರ್ಥೈಸಿಬಿಡಬಹುದು! ಆದರೆ

ಅಂಬೇಡ್ಕರ್ ಅನ್ನು ಈ ರೀತಿ ಬಳಸಿಕೊಳ್ಳಲು ಆಗುವುದಿಲ್ಲ. ಅಂಬೇಡ್ಕರ್ ಅವರು ಸಂಸ್ಕೃತಿಯನ್ನು ಅರ್ಥೈಸುವಾಗ ಹಿನ್ನೆಲೆಯಾಗಿ ಇಟ್ಟುಕೊಂಡದ್ದು ರಾಜಕೀಯವನ್ನು. ಅಂಬೇಡ್ಕರ್ ಬೌದ್ಧ ಧರ್ಮದತ್ತ ಸರಿದಂತೆ ಅವರು ಅರ್ಥೈಸುವ ಕ್ರಮದಲ್ಲಿ ಕೊಂಚ ಬದಲಾವಣೆಯಾಗಿದ್ದರೂ ಅದನ್ನು ಅಂಬೇಡ್ಕರ್ ಅವರ ಮೂಲ ಧೋರಣೆಯಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ಯಾಕೆಂದರೆ ಬೌದ್ಧ ಧರ್ಮದತ್ತಣನ ಅಂಬೇಡ್ಕರ್ ಒಲವುಗಳು ಅವರ ಮೂಲ ಧೋರಣೆಯನ್ನು ಇಡಿಯಾಗಿ ಬದಲಿಸುವಂತಹದೇನೂ ಆಗಿರಲಿಲ್ಲ.

ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ, ಗಾಂಧೀ ಮಾದರಿ ಅಭಿವೃದ್ಧಿಯನ್ನು ತೆಗೆದುಕೊಳ್ಳುವಾಗ ಒಟ್ಟೂ ಅಭಿವೃದ್ಧಿಗೆ ಬಹುದೊಡ್ಡ ತಡೆಯೂ, ಅವಾಸ್ತವಿಕವೂ ಆಗಿರುವ ಗಾಂಧಿಯನ್ 'ಧರ್ಮದರ್ಶಿತ್ವ'ಕ್ಕೆ ಪರ್ಯಾಯವನ್ನು ಹುಡುಕುವುದಕ್ಕಾಗಿ. ಅಂಬೇಡ್ಕರ್ ಮಾದರಿಯಲ್ಲಿರುವ 'ರಾಜಕೀಯ' ಪರಿಕರ ಅದಕ್ಕೆ ಅತ್ಯಂತ ಸೂಕ್ತವಾದ ಪರ್ಯಾಯವಾಗಿದೆ. ಆದರೆ ಅಂಬೇಡ್ಕರ್ ಮಾದರಿಯ ಮೇಲೆ ಪಶ್ಚಿಮ ಮಾದರಿಯ ಅಭಿವೃದ್ಧಿ ಪರಿಕಲ್ಪನೆಯ ದಟ್ಟ ಪ್ರಭಾವವಿದ್ದು ದಲಿತ ವಿಮೋಚನೆಯ ಸಂದರ್ಭದ ಬಳಿಕ ಅದೂ ಸಹ ಪಶ್ಚಿಮದತ್ತಲಿನ ಏಕರೂಪೀ ಸಂಸ್ಕೃತಿಯ ಕಡೆಗೇ ಕೊಂಡೊಯ್ಯುತ್ತದೆ. ಆ ಕಡೆಗೆ ನಡೆಯುವುದರ ಆತ್ಯಂತಿಕ ಪರಿಣಾಮ ಜಾಗತೀಕರಣಕ್ಕೆ ಅಥವಾ ಅಮೇರಿಕ ಮಿತ್ರಕೂಟಕ್ಕೆ ಶರಣಾಗತಿಯೇ ಆಗುತ್ತದೆ. ಇದನ್ನು ತಡೆಯುವುದಕ್ಕಿರುವ ಏಕೈಕ ಶಕ್ತಿ ಗಾಂಧೀ ಮಾದರಿಯೇ. ಅದಕ್ಕಾಗಿ ಸಾಮಾಜಿಕ ಕಾರಣ ಎಂದಿರುವುದು ಆರ್ಥಿಕೇತರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಿಗಾಗಿ ಹತಾಶೆಗೆ ತಲುಪಿರುವ ಎಲ್ಲರನ್ನೂ ದೃಷ್ಟಿಯಲ್ಲಿರಿಸಿಕೊಂಡು.

ಈ ಸಮನ್ವಯ ಮಾದರಿಯ ಅಭಿವೃದ್ಧಿಗೆ ಪ್ರಭುತ್ವ ಚಾಲನೆ ಒದಗಿಸಬೇಕು. ಅದಕ್ಕೆ ತಕ್ಕಂತಹ ಸಾಮಾಜಿಕ ಒತ್ತಡವೊಂದು ಸೃಷ್ಟಿಯಾಗಬೇಕು. ಆ ಒತ್ತಡವು ಆಕ್ಟಿವಿಸ್ಟಿಕ್ ನೆಲೆಯಲ್ಲಿ ನಡೆಯಬೇಕಾಗುತ್ತದೆ. ಈ ಚಳುವಳಿ ಪ್ರಮುಖವಾದ ಮೂರು ನೆಲೆಗಳಲ್ಲಿ ಒಂದಕ್ಕೊಂದು ಪೂರಕವಾಗಿ ನಡೆಯಬೇಕಾಗುತ್ತದೆ.

ಮೊದಲನೆಯದಾಗಿ, ಸಾಂಸ್ಕೃತಿಕ ನೆಲೆಯನ್ನು ತೆಗೆದುಕೊಳ್ಳುತ್ತೇನೆ. ವಿಷಯವನ್ನು ವಿಸ್ತರಿಸುವುದಕ್ಕಾಗಿ ಒಟ್ಟೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಎರಡು ಸಂಸ್ಥೆಗಳ ಸಂಕೇತದ ಮೂಲಕ ಮುಂದಿಡುತ್ತೇನೆ. ಒಂದನೆಯದು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ಕಾಂತಾವರ ಕನ್ನಡ ಸಂಘ. ಪುಟ್ಟ ಗ್ರಾಮವೊಂದರಲ್ಲಿ ಇದು ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳು ನಿಜಕ್ಕೂ ಬೆರಗಾಗಿ ನೋಡುವಂಥದು. ಆದರೆ ಅದರ ಎಲ್ಲ ಚಟುವಟಿಕೆಗಳು ಫೆಯಿಲ್ಯೂರ್ ಓರಿಯೆಂಟೆಡ್ ಸಕ್ಸಸ್ ಆಗಿದೆ. ಈ ಮಾತು ಯಾಕೆ ಹೇಳುತ್ತಿದ್ದೇನೆಂದರೆ ಸಂಘವು ಸಂಸ್ಕೃತಿ-ಸಾಹಿತ್ಯ ವಿಚಾರಗಳ ಬಗ್ಗೆ ಏನೇನೂ ಗೊತ್ತಿಲ್ಲದ ದಟ್ಟ ದರಿದ್ರರನ್ನೂ, ತೀರಾ ಹಿಂದುಳಿದ ಜಾತಿಗಳನ್ನೂ, ಸ್ತ್ರೀಯರನ್ನೂ, ಮಕ್ಕಳನ್ನೂ ಒಂದೇ ಕಡೆ ಸಾವಿರ ಸಾವಿರ ಸಂಖ್ಯೆಯಲ್ಲಿ ಸಂಘಟಿಸುತ್ತದೆ. ಆದರೆ ತನ್ನ ಕಾರ್ಯಕ್ರಮಗಳು ಈ ಜನರನ್ನೂ ತಲುಪಿದೆಯೇ ಎಂದು ಅದು ಮೌಲ್ಯೀಕರಣ ಮಾಡಿಕೊಳ್ಳುವುದಿಲ್ಲ. ಈ ಜನರನ್ನು ತಲುಪಲು ಯಾವ ವಿಧಾನವನ್ನು ಅನುಸರಿಸಬೇಕು ಎಂದು ಯೋಚಿಸುವುದಿಲ್ಲ. ತುಳು ಭಾಷೆಯಲ್ಲಿ ಭಾಷಣ ಮಾಡಿದರೆ ಒಳ್ಳೆಯದಿತ್ತು ಎನ್ನುವ ಜನರಿಗೆ ಕನಿಷ್ಠ ಅವರಿಗೆ ಅರ್ಥವಾಗುವ ಕನ್ನಡದಲ್ಲಾದರೂ ಹೇಳುವವರು ಬೇಕು. ಇಂಥಲ್ಲಿ ದೂರದೂರದಿಂದ ವಿದ್ವಾಂಸರನ್ನು ಕರೆಸಿ ವಿದ್ವಾಂಸರ ಭಾಷೆಯಲ್ಲಿ ಉಪನ್ಯಾಸ ಕೊಡಿಸಿದರೆ ವಾಸ್ತವವಾಗಿ ಜನರ ಮೇಲೆ ಆಗುವ ಪರಿಣಾಮ ನಿಷ್ಕ್ರಿಯವಾಗಿರುತ್ತದೆ. ''ಭಾಷಣ ತುಂಬಾ ಚೆನ್ನಾಗಿತ್ತು. ಆದರೆ ಏನು ಹೇಳಿದರೆಂದು ನೆನಪಿಲ್ಲ. ಊಟ ಮಾತ್ರ ಭಾರೀ ಚೆನ್ನಾಗಿತ್ತು'' ಎನ್ನುವಂತಾಗಿಬಿಡುತ್ತದೆ.

ಎರಡನೇ ರೀತಿಯ ಸಂಸ್ಥೆಗಳಿಗೆ ಸಾಂಕೇತಿಕವಾಗಿ ನೀನಾಸಮ್ ಸಂಸ್ಕೃತಿ ಶಿಬಿರವನ್ನು ಪ್ರಸ್ತಾಪಿಸುತ್ತೇನೆ. ಅಲ್ಲಿನ ಕಾರ್ಯಕ್ರಮಗಳನ್ನು ಸಂಘಟಕರು ಮೌಲ್ಯೀಕರಣ ಮಾಡುತ್ತಾರೆ. ಅಂತಲೇ ಉದ್ದೇಶ ಬಹುಮಟ್ಟಿಗೆ ಈಡೇರುತ್ತದೆ ಕೂಡ. ಆದರೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಒಂದು ಹಂತದ ತಿಳಿವಳಿಕೆ ಉಳ್ಳವರು. ಅವರೇನೋ ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಾರೆ. ಆದರೆ ನಿಜವಾಗಿಯೂ ವಾಸ್ತವದ ತಿಳಿವಳಿಕೆ ಹೆಚ್ಚು ಅಗತ್ಯವಿರುವ ಜನಸಾಮಾನ್ಯರನ್ನು ತಲುಪುವುದು ಕಷ್ಟವಾಗಿಬಿಡುತ್ತದೆ. ಕಾಂತಾವರ ಕನ್ನಡ ಸಂಘ ಕ್ವಾಂಟಿಟಿಯನ್ನು ಕಾಯ್ದುಕೊಂಡರೆ ನೀನಾಸಮ್ ಕ್ವಾಲಿಟಿಯನ್ನು ಕಾಯ್ದುಕೊಳ್ಳುತ್ತದೆ; ಜೊತೆಗೆ ಕ್ವಾಂಟಿಟಿ ಕೂಡ. ಆದರೆ ಕ್ವಾಂಟಿಟಿ ಎಲ್ಲಿಂದ ಬರಬೇಕೋ ಅಲ್ಲಿಂದ ಬರುತ್ತಿಲ್ಲ.

ಎರಡನೆಯದು ಸಾಮಾಜಿಕ ನೆಲೆಗಳು. ಶರಾಬು ನಿಷೇಧ ಸಮ್ಮೇಳನಗಳು, ಸಾಕ್ಷರತಾ ಸಮ್ಮೇಳನ, ಬಾಲಕಾರ್ಮಿಕ ವಿರೋಧೀ ಜಾಥಾ, ಮಹಿಳಾ ಸಬಲೀಕರಣ ಕಾರ್ಯಕ್ರಮಗಳು, ಮಾನವ ಹಕ್ಕುಗಳ ರ್‍ಯಾಲಿ, ದಲಿತರ ಹಕ್ಕುಗಳ ಕುರಿತ ಕಾರ್ಯಕ್ರಮಗಳು- ಹೀಗೆ ಈ ಸ್ತರದ ವಿಪುಲವಾದ ಚಟುವಟಿಕೆಗಳು ನಡೆಯುತ್ತಿವೆ. ಈ ನಡೆಗಳು ಪ್ರಾಮಾಣಿಕ ಶ್ರದ್ಧೆಯ ದಿಟ್ಟ ಹೆಜ್ಜೆಗಳೇ ಆಗಿದ್ದರೂ ಸಾಮಾಜಿಕ ನೆಲೆಯ ಚಳುವಳಿಗಾರರು ತಮ್ಮ ಪ್ರಭಾವವಲಯದಲ್ಲಿರುವ ಜನವರ್ಗವನ್ನು ಇನ್ನೆರಡು ನೆಲೆಗಳತ್ತ ಒಯ್ಯಬೇಕಾದ ಅಗತ್ಯವನ್ನು ಮನಗಾಣುತ್ತಿಲ್ಲ. ಈ ವಿಚಾರವನ್ನು ಮುಂದೆ ಚರ್ಚಿಸುತ್ತೇನೆ.

ಮೂರನೆಯದು ಆರ್ಥಿಕ ನೆಲೆಗಳು. ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಳಿಗೆ ಹೋಲಿಸಿದರೆ ಆರ್ಥಿಕ ನೆಲೆಯ ಆ್ಯಕ್ಟಿವಿಸ್ಟ್‌ಗಳು ತೀರಾ ಕಡಿಮೆಯೆಂದೇ ಹೇಳಬೇಕು. ಅಷ್ಟೇ ಅಲ್ಲ ಒಟ್ಟೂ ಭಾರತೀಯ ಸಮಾಜವೇ ಸ್ವತಂತ್ರ ಆರ್ಥಿಕ ಚಿಂತನಧಾರೆಯೊಂದರ ಜರೂರತ್ತನ್ನು ಮನಗಾಣುತ್ತಿಲ್ಲ. ಇಂಥಲ್ಲಿ ಬಹಳ ಮುಖ್ಯವಾದ ಆರ್ಥಿಕ ಆ್ಯಕ್ಟಿವಿಸ್ಟ್ ನೆಲೆಗಳು ಅವುಗಳ ಪಾರಂಪರಿಕವಾದ ಯುಎಸ್‌ಎಸ್‌ಆರ್ ಮಾದರಿಗಳನ್ನು ಮುಂದಿಟ್ಟುಕೊಂಡು ಗ್ರಾಮ ಭಾರತಕ್ಕೆ ಹೋದಾಗ ಅಲ್ಲಿನ ಸಾಂಸ್ಕೃತಿಕ ಸನ್ನಿವೇಶಗಳು ಈ ಮಾದರಿಗಳನ್ನು ಸ್ವೀಕರಿಸಲಾರದೆ ಹೋಗುತ್ತವೆ. ಅಲ್ಲದೆ ಕಮ್ಯುನಿಸ್ಟರು ಅತ್ಯಂತ ಪ್ರಭಾವಶಾಲಿಯಾದ ಕಾಂಗ್ರೆಸ್‌ಗೆ ಮುಖಾಮುಖಿಯಾಗಬೇಕಾಗುತ್ತದೆ. ಈ ರೀತಿಯ ಮುಖಾಮುಖಿಯಲ್ಲಿ ಏಕಕಾಲಕ್ಕೆ ಸೋಷಿಯಲಿಸ್ಟಿಕ್ ಹಾಗೂ ಕ್ಯಾಪಿಟಲಿಸ್ಟಿಕ್ ಧೋರಣೆ ಹೊಂದಿರುವ ಕಾಂಗ್ರೆಸ್ ಎರಡೂ ನೆಲೆಯ ಅಭಿವೃದ್ಧಿಯನ್ನು ತನ್ನದೆಂದು ಕಬಳಿಸಿಕೊಂಡು ಬಿಡುತ್ತದೆ. ಮತ್ತೆ ಇಂದಿರಾ ಅವರ ಭೂಸುಧಾರಣೆ, ಬ್ಯಾಂಕ್ ರಾಷ್ಟ್ರೀಕರಣಗಳನ್ನು ನೆನೆಪಿಸಿಕೊಂಡರೆ ಅವುಗಳ ಯಶಸ್ಸು ಇಂದಿರಾರದೇ ಆದರೂ ಅದರ ಹಿಂದಿನ ಅಪಾರ ಶ್ರಮ-ಶ್ರದ್ಧೆ- ಪ್ರಮಾಣಿಕ ಹೋರಾಟ ಕಮ್ಯೂನಿಸ್ಟರದಾಗಿತ್ತು. ಆದರೆ ಫಲಾನುಭವಿಗಳೇ ಅದನ್ನು ಮರೆತುಬಿಟ್ಟಿದ್ದಾರೆ. ಕಾಂಗ್ರೆಸ್‌ನ ಈ ಕಬಳಿಸುವ ಗುಣದಿಂದಾಗಿ ಅದಕ್ಕೆ ಪ್ರತಿಶಕ್ತಿಯಾಗಿ ನಿಲ್ಲಬೇಕಾದರೆ ಬಿ.ಜೆ.ಪಿ.ಯಂತಹ ಒಂದು ಪಕ್ಷ ಭಾವನಾತ್ಮಕವಾದ 'ಧರ್ಮ'ವನ್ನು ಆಧರಿಸಬೇಕಾಯಿತು. ಈ ಕುರಿತಾಗಿ ಒಂದು ಒಳ್ಳೆಯ ಜೋಕ್ ಇದೆ. ಇವತ್ತು ಅಯೋಧ್ಯೆಯಲ್ಲಿ ರಾಮದೇವಾಲಯ ಕಟ್ಟಿಯೆಂದು ಮುಸಲ್ಮಾನರೆಲ್ಲ ಒಪ್ಪಿಕೊಂಡರೂ ಬಿ.ಜೆ.ಪಿ. ರಾಮದೇವಸ್ಥಾನ ಕಟ್ಟುವುದಿಲ್ಲ. ಯಾಕೆಂದರೆ ಕಟ್ಟಿದ ಬಳಿಕ ಅದರ ಪ್ರಸ್ತಾಪ ಮಾಡುವಂತಿಲ್ಲವಲ್ಲ. ಆಮೇಲೆ ಬಿ.ಜೆ.ಪಿ.ಯವರಿಗೆ ಮಾತನಾಡಲು ಬೇರೆ ವಿಷಯಗಳೇ ಇಲ್ಲ! ಈ ಜೋಕ್‌ನ ಹಿಂದೆ ಒಂದು ವಾಸ್ತವವೂ ಇದೆ. ಯಾರದೇ ಪ್ರಯತ್ನದ ಫಲವನ್ನು ಪಡೆಯುವಲ್ಲಿ ಕಾಂಗ್ರೆಸ್ಸೇ ಮುಂದಿರುತ್ತದೆ. ಕಮುನಿಸ್ಟರ ಮಟ್ಟಿಗಂತೂ ಈ ಮಾತು ನೂರಕ್ಕೆ ನೂರು ದಿಟ. ಇತ್ತೀಚೆಗಂತೂ ಮತೀಯವಾದಿಗಳನ್ನು ಎದುರಿಸುವ ಧಾವಂತದಲ್ಲಿ ಕಮ್ಯುನಿಸ್ಟರು ತಮ್ಮ ಮೂಲ ಆರ್ಥಿಕ ಧೋರಣೆಯನ್ನೇ ಮರೆತುಬಿಟ್ಟದ್ದಾರೇನೋ ಅಂತ

ಅನಿಸುತ್ತಿದೆ. ಈ ನಿಟ್ಟಿನಲ್ಲಿ ಕಮ್ಯುನಿಸ್ಟರು ತಮ್ಮ ಕ್ರಿಯೆಗಳನ್ನು ಪುನರ್ವಿಮರ್ಶಿಸಬೇಕಾದ ಅಗತ್ಯವಿದೆ.

ರೈತ ಸಂಘಟನೆಗಳು ಈ ನೆಲದ ತಲಸ್ಪರ್ಶಿ ತಿಳಿವಳಿಕೆ ಉಳ್ಳವುಗಳು. ಜಾಗತೀಕರಣಕ್ಕೆ ಪ್ರತಿಯಾಗಿ ಗ್ರಾಮಭಾರತವನ್ನು ಕಟ್ಟಿನಿಲ್ಲಿಸಲು ನಿಜವಾಗಿಯೂ ಶಕ್ತಿ ಇರುವಂಥವು. ಆದರೆ ಅವುಗಳ ವ್ಯಾಪ್ತಿ ತುಂಬಾ ಸೀಮಿತ. ಮತ್ತು ನಾನಾ ಪ್ರದೇಶಗಳಲ್ಲಿ ನಾನಾ ರೀತಿಯಾಗಿ ಅಸ್ತಿತ್ವದಲ್ಲಿರುವ ಅವುಗಳನ್ನು ಏಕಸೂತ್ರದಡಿಯಲ್ಲಿ ತರಲು ಕಷ್ಟವಾಗುತ್ತದೆ. ಬಹುಶಃ ಇತರೆಲ್ಲ ಆ್ಯಕ್ಟಿವಿಸ್ಟ್ ಗ್ರೂಪ್‌ಗಳು ಈ ಕಾರ್ಯಕ್ಕೆ ತೊಡಗುವುದರಿಂದ ಕೊಂಚ ಪ್ರಯೋಜನವಾದೀತೇನೋ. ಅದಾಗಬೇಕಾದರೆ ಸಾಂಸ್ಕೃತಿಕ-ಸಾಮಾಜಿಕ ಮತ್ತು ಆರ್ಥಿಕ ಆ್ಯಕ್ಟಿವಿಸ್ಟರ ನಡುವೆ ಅಂತರ್‌ಸಂಬಂಧೀ ತಿಳಿವಳಿಕೆಗಳು ಏರ್ಪಡಬೇಕು. ಅದೇ ಏರ್ಪಡುತ್ತಿಲ್ಲ. ತಮ್ಮ ತಮ್ಮ ಚಟುವಟಿಕೆಗಳನ್ನು ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆಸುವ ಅವು ಬೇರೆ ಆ್ಯಕ್ಟಿವಿಸ್ಟರೊಂದಿಗೆ ಸ್ನೇಹ, ಸಹಾನುಭೂತಿ, ಪ್ರೀತಿ, ಭಾಗವಹಿಸುವಿಕೆಯನ್ನು ಹೊಂದಿರಬಹುದು. ಆದರೆ ಅದು ಅಂತರ್‌ಸಂಬಂಧೀ ತಿಳಿವಳಿಕೆಯಾಗಿ ಮಾರ್ಪಾಟು ಹೊಂದಿಲ್ಲ.


ಇಂಥಲ್ಲಿ ಅಂತರ್‌ಸಂಬಂಧೀ ತಿಳಿವಳಿಕೆಯ ಅಗತ್ಯವನ್ನು ಮನಗಾಣಬೇಕಾದದ್ದು ಅಗತ್ಯವಾಗಿದೆ. ಯಾವುದೇ ವ್ಯವಸ್ಥೆಯ ಸಂಸ್ಕೃತಿ ಉಳಿಯಬೇಕಾದರೆ ಸಂಸ್ಕೃತಿಯ ವಾಹಕಗಳಾದ ಜನರಲ್ಲಿ ಸಾಮಾಜಿಕ ಪ್ರಜ್ಞೆ, ಆರ್ಥಿಕ ಸಶಕ್ತತೆ ಇರಬೇಕಾಗುತ್ತದೆ. ಒಂದು ಸಾಮಾಜಿಕ ಪ್ರಜೆಯನ್ನು ಸಾಂಸ್ಕೃತಿಕ ಹಾಗೂ ಆರ್ಥಿಕ ಸನ್ನಿವೇಶಗಳು ನಿರ್ಧರಿಸುತ್ತವೆ. ಒಂದು ಸಶಕ್ತ ಆರ್ಥಿಕ ಸಮುದಾಯವನ್ನು ಸಾಮಾಜಿಕ ಪ್ರಜ್ಞೆ ಮತ್ತು ಪ್ರಬುದ್ಧ ಸಾಂಸ್ಕೃತಿಕ ಸನ್ನಿವೇಶಗಳು ರೂಪಿಸುತ್ತವೆ. ಅಂತಲೇ ಅಭಿವೃದ್ಧಿ ಪ್ರಕ್ರಿಯೆಗೆ ಅಂತರ್‌ಸಂಬಂಧೀ ತಿಳಿವಳಿಕೆಯುಳ್ಳ ಆ್ಯಕ್ಟಿವಿಸ್ಟರ ಅನಿವಾರ್ಯತೆ ಇದೆ. ಆ್ಯಕ್ಟಿವಿಸ್ಟರ ಜೊತೆಗೆ 'ಈತ ಸಕಾರಣವಿಲ್ಲದೆ ಹೇಳಿರಲಾರ' ಎನ್ನುವ ಜನಾಭಿಪ್ರಾಯ ಉಳ್ಳ, ಜನರ ನಂಬಿಕೆಗೆ ಅರ್ಹರಾದ ಇನ್‌ಆ್ಯಕ್ಟಿವಿಸ್ಟ್ ಥಿಂಕರ್ಸ್ ಕೂಡ ಇರಬೇಕಾಗುತ್ತದೆ. ಇವೆಲ್ಲವೂ ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾದಾಗ ಒಟ್ಟೂ ವ್ಯವಸ್ಥೆಯೊಂದು ರೂಪು ತಳೆಯುತ್ತದೆ. ಆಗ ಪ್ರಾಯಶಃ ಡಾ. ಮನಮೋಹನ್ ಸಿಂಗ್ ಕೂಡ 'ಜಾಗತೀಕರಣ ಅನಿವಾರ್ಯ'ವೆಂದು ಹೇಳಲಾರರು.

ಈ ಬರಹದ ಒಂದೆರಡು ಅಂಶಗಳ ವಿಸ್ತರಣೆಗೆ ಡಾ. ಎಚ್.ಎಸ್. ರಾಘವೇಂದ್ರರಾವ್ ಅವರೊಂದಿಗೆ ನಡೆಸಿದ ವೈಯಕ್ತಿಕ ಸಂವಾದದಲ್ಲಿ ಸಿಕ್ಕ ಹೊಳಹನ್ನು ಬಳಸಿಕೊಂಡಿದ್ದೇನೆ.– ಲೇಖಕ

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಲೋಗರ ಸೃಷ್ಟಿ – ಲೋಕದೃಷ್ಟಿ

□ ಪ್ರೊ. ಬಿ.ಎ. ವಿವೇಕ ರೈ



ಸಂಸ್ಕೃತಿಯೊಂದು ತನ್ನ ಸುತ್ತಲಿನ ಗತ್ತಿನೊಂದಿಗೆ ತನ್ನ ಸಂಬಂಧವನ್ನು ಕಾಣುವ ಮತ್ತು ಅಭಿವ್ಯಕ್ತಿಸುವ ರೀತಿಯನ್ನು ಅಂತಹ ಸಂಸ್ಕೃತಿಯ 'ಲೋಕದೃಷ್ಟಿ' (ವರ್ಲ್ಡ್‌ವ್ಯೆವ್) ಎಂದು ಕರೆಯಲಾಗುತ್ತದೆ. ಸಮಾನವಾದ ಸನ್ನಿವೇಶಗಳು ಯಾವುದೇ ಮನುಷ್ಯರ ದೃಷ್ಟಿಗೆ ಸಮಾನವಾದ ರೀತಿಗಳಲ್ಲಿ ಕಾಣಿಸಿಕೊಳ್ಳುತ್ತವೆ ಎನ್ನುವ ಅಭಿಪ್ರಾಯವು ಒಂದು ಕಾಲದಲ್ಲಿ ಪ್ರಚಲಿತವಾಗಿತ್ತು. ಆದರೆ ಈ ಅಭಿಪ್ರಾಯ ಇವತ್ತು ಬದಲಾಗಿದೆ. ನೋಡುವವರ, ಗ್ರಹಿಸುವವರ ರೀತಿಗೆ ಅನುಗುಣವಾಗಿ ವಸ್ತುನಿಷ್ಠತೆ ಎನ್ನುವುದು ಬದಲಾಗುತ್ತಿರುತ್ತದೆ. ಸಾಂಸ್ಕೃತಿಕ ಮತ್ತು ಭಾಷಿಕ ಅಂಶಗಳು ಸಂಸ್ಕೃತಿಯೊಂದು ಜಗತ್ತನ್ನು ನೋಡುವ ಕ್ರಮಗಳ ಮೇಲೆ ಪ್ರಭಾವವನ್ನು ಬೀರುತ್ತಿರುತ್ತವೆ. ಹೋಪಿ ಎನ್ನುವ ಜನಾಂಗದ ಮಿದುಳಿನ ವಿಶ್ಲೇಷಣೆ ಮಾಡಿದ ಸಂಶೋಧಕರ ತಂಡವೊಂದು ಕಂಡುಕೊಂಡ ತೀರ್ಮಾನದಲ್ಲಿ ಹೋಪಿ ಜನಾಂಗದ ಮಕ್ಕಳು ತಮ್ಮ ಮಿದುಳಿನ ಬಲಪಾರ್ಶ್ವವನ್ನು ಹೋಪಿ ಭಾಷೆಯನ್ನು ಕೇಳಲು ಮತ್ತು ಮಾತನಾಡಲು ಬಳಸುತ್ತಿದ್ದರು. ತಮ್ಮ ಮಿದುಳಿನ ಎಡಪಾರ್ಶ್ವವನ್ನು ಇಂಗ್ಲಿಷ್ ಭಾಷೆಯನ್ನು ಕೇಳಲು ಮತ್ತು ಮಾತನಾಡಲುಬಳಸುತ್ತಿದ್ದರು. ವಿಭಿನ್ನ ಭಾಷೆಗಳನ್ನು ಆಡುವ ಜನರು ಮೂಲಭೂತವಾಗಿ ವಿಭಿನ್ನ ರೀತಿಗಳಲ್ಲಿ ವಸ್ತುಗಳನ್ನು

ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ–5832 276

ಗ್ರಹಿಸುತ್ತಾರೆ ಎನ್ನುವ ಪರಿಕಲ್ಪನೆಯನ್ನು ಇಂತಹ ಸಂಶೋಧಕರು ಸಾರುತ್ತಾರೆ. ಭಿನ್ನ ಸಂಸ್ಕೃತಿಯ ಜನರು ತಮ್ಮದಲ್ಲದ ಸಂಸ್ಕೃತಿಯ ಜನರೊಂದಿಗೆ ಅಭಿಪ್ರಾಯಭೇದವನ್ನು ತಾಳುತ್ತಾರೆ ಎನ್ನುವುದು ಮೇಲ್ನೋಟದ ತೋರಿಕೆಯ ಆಲೋಚನೆ. ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ವಿಶಿಷ್ಟವಾದ ರೀತಿಯಲ್ಲಿ ಯೋಚನೆ ಮಾಡುತ್ತದೆ ಮತ್ತು ಅದನ್ನು ತನ್ನ ಎಳೆಯ ಪೀಳಿಗೆಯವರಿಗೆ ದಾಟಿಸುತ್ತದೆ ಮತ್ತು ಯೋಚನೆ ಮಾಡುವ ಇಂತಹ ರೀತಿಯು ಆ ಸಂಸ್ಕೃತಿಯ ಭಾಷೆಯಲ್ಲಿ ಆಳವಾಗಿ ಬೇರೂರಿರುತ್ತದೆ.

ಒಂದು ಸಂಸ್ಕೃತಿಯ ಜನರು ವಾಸ್ತವವನ್ನು ಗ್ರಹಿಸುವ ವಿಧಾನವೆಂದರೆ ಆ ಸಂಸ್ಕೃತಿಯು ತಮಗೆ ಒದಗಿಸಿದ ಆಲೋಚನೆ, ತತ್ತ್ವ ಮತ್ತು ವಿಚಾರ ಇವುಗಳ ಮೂಲಕ. ಹೀಗಾಗಿಯೇ ವಾಸ್ತವಿಕತೆಯ ಜಗತ್ತು ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಯಾಗುತ್ತಾ ಹೋಗುತ್ತದೆ. ಮನುಷ್ಯರ ಮನಸ್ಸು ತಾನು ಹೊಂದಿರುವ ವಾಸ್ತವಿಕತೆಯ ಪರಿಕಲ್ಪನೆಗೆ ಅನುಗುಣವಾಗಿ ನಿರ್ದಿಷ್ಟ ಲೋಕದೃಷ್ಟಿಯನ್ನು ಉಳ್ಳದ್ದಾಗಿರುತ್ತದೆ. ಇಂತಹ ಲೋಕದೃಷ್ಟಿಗೆ ಅನುಗುಣವಾಗಿ ಮನುಷ್ಯರ ಅಭಿವ್ಯಕ್ತಿಯ ಎಲ್ಲ ಸ್ತರಗಳಲ್ಲಿ ಹೋಲಿಕೆಗಳನ್ನು ಮತ್ತು ಸಮಾನಾಂತರ ಸಂಗತಿಗಳನ್ನು ಸೃಷ್ಟಿಸುತ್ತಿರುತ್ತದೆ. ಮನೆಗಳ ನಿರ್ಮಾಣಗಳಿಂದ ತೊಡಗಿ ಪುರಾಣಗಳ ರಚನೆಗಳವರೆಗೆ ಸಂಸ್ಕೃತಿಯೊಂದರ ಲೋಕದೃಷ್ಟಿಯು ಎಲ್ಲಾ ಹಂತಗಳಲ್ಲೂ ಕ್ರಿಯಾಶೀಲವಾಗಿರುತ್ತದೆ. ಹೀಗಾಗಿ ಯಾವುದೇ ಸಂಸ್ಕೃತಿಯ ಕಲಾವಸ್ತುಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳು ಆ ಸಂಸ್ಕೃತಿಯು ಜಗತ್ತಿನ ವಾಸ್ತವಿಕತೆಯನ್ನು ನೋಡುವ ರೀತಿಯನ್ನು ಪ್ರತಿನಿಧಿಸುತ್ತವೆ.

ಪ್ರತಿಯೊಂದು ಮಗುವೂ ಅನೇಕ ರೀತಿಯ ಸಾಂಸ್ಕೃತಿಕ, ವೈಯಕ್ತಿಕ ಮತ್ತು ಭೌತಿಕ ವೈಶಿಷ್ಟ್ಯಗಳಿಂದ ಆವೃತವಾಗಿ ಬೆಳೆಯುತ್ತದೆ. ಈ ಹಂತದಲ್ಲಿ ಮಗುವಿನ ಕಲಿಯುವ ಕ್ರಿಯೆಯಲ್ಲಿ ಯಾವುದು ಹೆಚ್ಚು ಸಂಸ್ಕೃತಿ ವಿಶಿಷ್ಟವಾದುದು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಮಗುವಿಗೂ ಕುಟುಂಬದ ಆವರಣವೊಂದು ಅದರ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆದರೆ ಕುಟುಂಬ ಅಂದರೆ ಏನು, ಅದರಲ್ಲಿ ಯಾರೆಲ್ಲ ಸೇರ್ಪಡೆಗೊಳ್ಳುತ್ತಾರೆ ಎನ್ನುವ ಸಂಗತಿಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಇದಕ್ಕೆ ಅನುಗುಣವಾಗಿಯೇ ಕುಟುಂಬದಲ್ಲಿ ಜನಿಸಿದ ಮಗುವಿನ ಮೇಲೆ ಕುಟುಂಬದ ಪ್ರಭಾವವು ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ಮಗುವಿಗೆ ಒಂದಲ್ಲ ಒಂದು ರೀತಿಯ ಆಶ್ರಯವು ಕುಟುಂಬದಲ್ಲಿ ದೊರೆಯುತ್ತದೆ. ಸಾಮಾನ್ಯವಾಗಿ ಮನೆ ಎಂದು ಕರೆಯಲಾಗುವ ಇಂತಹ ಆಶ್ರಯಸ್ಥಾನವು ಎಲ್ಲ ಸಂಸ್ಕೃತಿಗಳಲ್ಲಿಯೂ ಸ್ವರೂಪದಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಮಗು ಬೆಳೆಯುವ ಆರಂಭದ ಹಂತದಲ್ಲಿ ಅದು ಕಣ್ಣು ತೆರೆದು ನೋಡುವ ಭೌತಿಕ ಆವರಣವು ಅದರ ಲೋಕದೃಷ್ಟಿಯನ್ನು ರೂಪಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಮಗುವನ್ನು ಮಲಗಿಸಿದ ಕೋಣೆಯ ಮಾಡಿನ ರಚನೆಯು ಮಗುವಿನ ಲೋಕದೃಷ್ಟಿಯನ್ನು ರೂಪಿಸುವಲ್ಲಿ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ. ಮಾಡಿನ ರಚನೆಯು ಅರ್ಧವರ್ತುಲಾಕಾರವಿರಬಹುದು, ಕೋನಾಕಾರವಿರಬಹುದು ಅಥವಾ ಸಮತಲ ರೂಪದಲ್ಲಿಯೂ ಇರಬಹುದು. ಮುಳಿಹುಲ್ಲಿನ ಮಾಡಿನ ಅಥವಾ ಹಂಚಿನ ಮಾಡಿನ ಮನೆಗಳಲ್ಲಿ ಅಟ್ಟಕ್ಕೆ ಹಲಗೆಯ ಮುಚ್ಚಿಗೆಯನ್ನು ಹಾಕದಿದ್ದರೆ ತೊಟ್ಟಿಲಲ್ಲಿ ಅಂಗಾತ ಮಲಗಿರುವ ಮಗುವಿನ ದೃಷ್ಟಿಯೂ ಕೋನಾಕಾರದ ಅಥವಾ ಕೆಲವೊಮ್ಮೆ ಅರ್ಧವರ್ತುಲಾಕಾರದ ಭೌತಿಕ ರಚನೆಯ ಕಡೆಗೆ ಕೇಂದ್ರೀಕೃತವಾಗಿರುತ್ತದೆ. ಹಲಗೆಯ ಮುಚ್ಚಿಗೆ ಹಾಕಿದ ಮನೆಗಳಲ್ಲಿ ಅಥವಾ ಈಗಿನ ಕಾಂಕ್ರೀಟ್ ಮನೆಗಳಲ್ಲಿ ಸರಳರೇಖೆಯ ಆಕಾರದ ಸಮತಲದ ರಚನೆಗಳ ಮೇಲೆ ಮಗುವಿನ ದೃಷ್ಟಿ ಸದಾ ನೆಟ್ಟಿರುತ್ತದೆ.

ಭೌತಿಕ ಆವರಣದ ಜೊತೆಗೆಯೇ ಮನುಷ್ಯರ ಸಂಸರ್ಗಗಳು ಕೂಡಾ ಮಗುವಿನ ಸಾಂಸ್ಕೃತಿಕ

ಧೋರಣೆಯ ನಿರ್ಮಾಣದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಎಳೆಯ ಮಗುವಿನ ಮೇಲೆ ಜನಪದ ಕತೆಗಳು ಬೀರುವ ಪರಿಣಾಮ ವಿಶಿಷ್ಟವಾದುದು. ಈ ಕತೆಗಳ ಜಗತ್ತಿನಲ್ಲಿ ಮಕ್ಕಳಲ್ಲಿ ಅತ್ಯಂತ ಕಿರಿಯವನು ತನ್ನ ಬುದ್ಧಿವಂತಿಕೆ ಮತ್ತು ಶಕ್ತಿಯಿಂದ ಜಯಶಾಲಿಯಾಗಿ, ರಾಜಕುಮಾರಿಯ ಕೈ ಹಿಡಿಯುತ್ತಾನೆ. ಗಾದೆಗಳು ಸಾಂಸ್ಕೃತಿಕವಾಗಿ ಸಮುಚಿತವಾದ ವಿಚಾರಗಳನ್ನು ಮತ್ತು ನಡವಳಿಕೆಗಳನ್ನು ಕಿರಿಯರಿಗೆ ಹೇಳಿಕೊಡುತ್ತವೆ. ಜೋಗುಳದ ಹಾಡುಗಳು ಮಗು ನಿದ್ರಿಸುವುದಕ್ಕೆ ಅನುಕೂಲವಾಗುವಂತೆ ಪ್ರಚೋದನೆಯನ್ನು ಕೊಡುತ್ತವೆ. ಜೋಗುಳದ ಹಾಡುಗಳ ವಸ್ತು ಕೂಡ ಅನೇಕ ಬಾರಿ, ತಾಯಿಯಾದವಳು ಮಗುವನ್ನು ಕಳೆದುಕೊಳ್ಳುವ ಭಯವನ್ನು ಅಥವಾ ತಂದೆಯಾದವನು ಮಗುವನ್ನು ಪೋಷಿಸಬೇಕಾಗಿರುವ ಜವಾಬ್ದಾರಿಯನ್ನು ಒತ್ತಿ ಹೇಳುತ್ತಿರುತ್ತದೆ. ಕುಟುಂಬದಲ್ಲಿ ಸದಸ್ಯರ ಜವಾಬ್ದಾರಿ ಮತ್ತು ತಲ್ಲಣಗಳನ್ನು ಜೋಗುಳದ ಮೂಲಕ ಮಗುವಿನ ಮನಸ್ಸಿಗೆ ದಾಟಿಸುವ ಕೆಲಸ ನಡೆಯುತ್ತದೆ. ಮಗು ಬೆಳೆಯುತ್ತಾ ಬಂದಂತೆಲ್ಲ ಸ್ಥಳ ಮತ್ತು ಕಾಲಕ್ಕೆ ಹೊಂದಿಕೊಳ್ಳುವ ಕ್ರಮವನ್ನು ಸಂಸ್ಕೃತಿಯೊಂದು ಕಲಿಸುತ್ತದೆ. ಸರಳರೇಖೆ ಮತ್ತು ವರ್ತುಲದ ರೂಪಗಳನ್ನು ಮನಸ್ಸಿನಲ್ಲಿ ನಾಟಿಸಿಕೊಂಡಿರುವ ಮಕ್ಕಳು ಅವುಗಳ ಕಲ್ಪನೆಗಳನ್ನು ತಮ್ಮ ಬದುಕಿನ ಭಿನ್ನ ಸನ್ನಿವೇಶಗಳಲ್ಲಿ ಅನ್ವಯಿಸಲು ತೊಡಗುತ್ತಾರೆ. ಮನೆ, ಮನೆಯ ಸುತ್ತಲಿನ ಆವರಣ;ಗದ್ದೆ, ಗದ್ದೆಯ ಆವರಣವಾದ ಕಟ್ಟುಪುಣಿ; ತೋಟ, ಅದಕ್ಕಿರುವ ಬೇಲಿ; ಊರು, ಅದಕ್ಕಿರುವ ಗಡಿ; ರಾಜ್ಯ ಮತ್ತು ದೇಶ, ಅವುಗಳಿಗಿರುವ ಮೇರೆಗಳು- ಹೀಗೆ ಸ್ಥಳ ಅಥವಾ ಪ್ರದೇಶಗಳು ನಿರ್ದಿಷ್ಟ ರೇಖೆಗಳ ಮೂಲಕ ಆವರಣಗಳ ಕಲ್ಪನೆಗಳನ್ನು ಕೊಡುತ್ತಾ ಹೋಗುತ್ತವೆ. ಸ್ಥಳಾವಕಾಶವನ್ನು ಬಳಸುವ ರೀತಿಗಳೂ ಕೂಡಾ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ಜನರ ಮನೋಭೂಮಿಕೆಗಳಿಗೆ ಅನುಸಾರವಾಗಿರುತ್ತವೆ. ಅಪರಿಚಿತ ಸ್ಥಳವೊಂದರಲ್ಲಿ ಯಾರೇ ಆದರೂ ದಾರಿ ತಪ್ಪುತ್ತಾರೆ. ಏಕೆಂದರೆ ಆ ಸ್ಥಳದ ಮಾರ್ಗಗಳು, ವೃತ್ತಗಳು ಯಾವುವೂ ಅವರ ಮನೋಭೂಮಿಕೆಯ ಭಾಗವಾಗಿರುವುದಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪಟ್ಟಣದವರು ಪ್ರಯಾಣಿಸುವಾಗ ದಾರಿ ಮತ್ತು ಅಂತರಗಳ ಕುರಿತು ತಮಗೆ ಅಪರಿಚಿತವಾದ ವಿವರಣೆಗಳಿಂದ ಗೊಂದಲಕ್ಕೀಡಾಗುತ್ತಾರೆ. ನಿರ್ದಿಷ್ಟ ದೂರದ ಅಳತೆಯ ಮಾನಗಳ ರೂಪದ ಅಳೆಯುವಿಕೆಗಳಿಗೆ ಪರಿಚಿತವಾಗಿರುವ ಪಟ್ಟಣಿಗರು ಹಳ್ಳಿಗಳಲ್ಲಿ ಸಂಚರಿಸುವಾಗ ಇಂತಹ ಕಲ್ಪನೆಗಳಿಗಿಂತ ಭಿನ್ನವಾಗಿ ಸ್ಥಳ ಮತ್ತು ದೂರಗಳನ್ನು ಗುರುತಿಸುವ ಹಳ್ಳಿಗರ ಪರಿಭಾಷೆಯನ್ನು ಅರ್ಥ ಮಾಡಿಕೊಳ್ಳಲಾಗದೆ ಗಲಿಬಿಲಿಗೊಳ್ಳುತ್ತಾರೆ. ಯಾವುದೇ ಸ್ಥಳದ ಮಾಹಿತಿ ಕೇಳಿದಾಗಲೂ 'ಓ ಇಲ್ಲೇ ಹತ್ತಿರದಲ್ಲಿ' ಎನ್ನುವ ಮಾತಿನ ಮೂಲಕ ದೂರವನ್ನು ಹತ್ತಿರವೆಂದು ಭಾವಿಸುವ ಲೋಕದೃಷ್ಟಿಯ ಜನರ ಮಾತುಗಳು ಅಂತಹ ಕಲ್ಪನೆಯಿಲ್ಲದ ಹೊರಗಿನವರಿಗೆ ಅರ್ಥವಾಗುವುದಿಲ್ಲ.

ಕಾಲದ ಅಳತೆಯಲ್ಲೂ ಸಂಸ್ಕೃತಿಯಿಂದ ಸಂಸ್ಕೃತಿಗೆ ಲೋಕದೃಷ್ಟಿಯ ಭಿನ್ನತೆಗಳನ್ನು ಗಮನಿಸಬಹುದು. ಪರಂಪರಾಗತ ಸಂಸ್ಕೃತಿಗಳಲ್ಲಿ ಕಾಲವನ್ನು ಒಂದು ಚಕ್ರದಂತೆ ಅಳೆಯುತ್ತಾರೆ. ಆಧುನಿಕರು ಕಾಲವನ್ನು ಒಂದು ಸರಳರೇಖೆಯಂತೆ ಅಳೆಯುತ್ತಾರೆ. ಸಮಯಕ್ಕೆ ಸರಿಯಾಗಿ ಹಾಜರಾಗುವುದು, ಸಮಯವನ್ನು ಹಾಳು ಮಾಡದಿರುವುದು, ವೇಳಾಪಟ್ಟಿಯನ್ನು ಸಿದ್ಧಮಾಡುವುದು- ಇವು ಆಧುನಿಕರು ಕಾಲವನ್ನು ನೋಡುವ ದೃಷ್ಟಿ. ಕಾಲವನ್ನು ಒಂದು ಸರಳರೇಖೆಯ ರೀತಿಯಲ್ಲಿ ಭಾವಿಸಿ ಅದನ್ನು ಮುಂದಕ್ಕೆ ಮುಂದಕ್ಕೆ ಚಲಿಸುವ ರೀತಿಯಲ್ಲಿ ಕಾಣುವ ಭವಿಷ್ಯರೂಪೀ ಚಿಂತನೆ ಆಧುನಿಕರ ಮುಖ್ಯ ಲೋಕದೃಷ್ಟಿ. ಗಡಿಯಾರಗಳು, ಕ್ಯಾಲೆಂಡರ್‌ಗಳು ಇಂತಹ ಭವಿಷ್ಯಸಂಬಂಧಿ ಕಾಲ ನಿರ್ಣಯದ ಸಂಕೇತಗಳು. ಅರ್ಥ ವ್ಯವಸ್ಥೆಯಲ್ಲಿ ಹಣ ಹೂಡುವುದು, ಹವಾಮಾನದ ಮುನ್ಸೂಚನೆ, ವಾರ-ವರ್ಷ ಭವಿಷ್ಯವನ್ನು ತಿಳಿದುಕೊಳ್ಳುವುದು- ಇವು ಆಧುನಿಕ ಬದುಕಿನ ಮುಖ್ಯ ಕಾಳಜಿಗಳಾಗಿವೆ. ಉಳಿತಾಯ ಯೋಜನೆಗಳು,

ಪಂಚವಾರ್ಷಿಕ ಯೋಜನೆಗಳು ಇಂತಹ ಭವಿಷ್ಯಸಂಬಂಧಿ ಚಿಂತನೆಯ ಫಲಗಳು. ಆಧುನಿಕ ಜಗತ್ತಿನಲ್ಲಿ ಜನರ ಬದುಕಿನಲ್ಲಿ ಗಡಿಯಾರಗಳು ಎಷ್ಟೊಂದು ಮಹತ್ವವನ್ನು ಪಡೆದಿವೆ ಎಂದರೆ ಜಗತ್ತಿನ ಎಲ್ಲ ಗಡಿಯಾರಗಳನ್ನು ನಾಶಮಾಡಿದರೆ, ಗಡಿಯಾರದಂಗಡಿಗಳನ್ನೆಲ್ಲ ಮುಚ್ಚಿದರೆ ಜನ ತಲ್ಲಣಗೊಳ್ಳಬಹುದು. ಇಂತಹ ಸರಳರೇಖಾತ್ಮಕ ರೀತಿಯಲ್ಲಿ ಕಾಲದ ಮಾಪನ ಆರಂಭವಾಗುವ ಪೂರ್ವದಲ್ಲಿ ನಿಸರ್ಗದ ಋತುಗಳು ತಮ್ಮ ಪುನರಾವರ್ತನೆಯ ಮೂಲಕ ಕಾಲಕ್ಕೆ ಚಕ್ರದ ರೂಪವನ್ನು ತಂದುಕೊಟ್ಟಿದ್ದುವು. ಹೀಗಾಗಿ ಕಾಲ ಪುನರಾವರ್ತನೆ ಆಗುತ್ತದೆ ಎಂಬುದು ಒಂದು ಜನಪ್ರಿಯ ನಾಣ್ಣುಡಿಯಾಗಿತ್ತು.

ನಿಸರ್ಗ ಅದು ಸಂಪೂರ್ಣವಾಗಿ ಕಾಲಬದ್ಧವಲ್ಲ. ಮಳೆಗಾಲ ಸಾಮಾನ್ಯವಾಗಿ ಇಂತಹ ಹೊತ್ತಿಗೆ ಬರಬಹುದು ಎಂದು ನಿರೀಕ್ಷೆ ಮಾಡಿದರೂ ಅದು ಇಂತಹ ದಿವಸ, ಇಷ್ಟು ಗಂಟೆಗೆ ಇಷ್ಟು ನಿಮಿಷಕ್ಕೆ, ಇಷ್ಟು ಸೆಕೆಂಡಿಗೆ ಬರುತ್ತದೆ ಎಂಬ ನಿಯಮವೇನಿಲ್ಲ. ಬರುವುದು ಅದರ ಇಷ್ಟ, ಹೋಗುವುದೂ ಅದರ ಇಷ್ಟ. ಪ್ರಕೃತಿಯನ್ನು ನಿಯಮಿತಗೊಳಿಸುವ ಮತ್ತು ಅದರ ಮೇಲೆ ಯಜಮಾನ್ಯವನ್ನು ಸ್ಥಾಪಿಸುವ ಉದ್ದೇಶ ನಮ್ಮ ಸಾಂಸ್ಕೃತಿಕ ಸಜ್ಜುಗೊಳ್ಳುವಿಕೆಯಲ್ಲಿ ಇರುತ್ತದೆ. ಕಾಲವನ್ನು ಮತ್ತು ಸ್ಥಳವನ್ನು ಸರಳರೇಖೆಯ ರೂಪದಲ್ಲಿ ಬಳಸುವುದು ಆಧುನಿಕ ಕಾಲದಲ್ಲಿ ಮನುಷ್ಯರ ಅಸ್ತಿತ್ವವನ್ನು ಸ್ಥಾಪಿಸುವ ಮುಖ್ಯ ಬಗೆ. ಮಹಾಯುದ್ಧದ ವೇಳೆಗೆ ಜರ್ಮನ್ ಯುದ್ಧ ವಿಮಾನಗಳ ಚಾಲಕರಿಗೆ ಕೊಟ್ಟಿದ್ದ ಆದೇಶವೆಂದರೆ ಆಕಾಶದಲ್ಲಿ ಎತ್ತರದಿಂದ ವಿಮಾನದ ಮೂಲಕ ನೋಡಿದಾಗ ಸರಳರೇಖೆಯ ಹಾಗೆ ಎಲ್ಲಿ ಕಾಣಿಸುತ್ತದೆಯೋ ಅಲ್ಲಿಗೆ ಬಾಂಬ್‌ಗಳನ್ನು ಹಾಕಬೇಕು ಎಂದು. ಮನುಷ್ಯರ ವಸತಿಗಳು ಸರಳರೇಖೆಯ ರೂಪದಲ್ಲಿ ಇರುತ್ತವೆ ಎನ್ನುವ ತಿಳುವಳಿಕೆಯಿಂದಲೇ ಇಂತಹ ಆದೇಶವನ್ನು ಹೊರಡಿಸಲಾಗಿತ್ತು. ಕಾಲ ಮತ್ತು ಸ್ಥಳದ ಸರಳರೇಖಾತ್ಮಕ ಬಳಕೆಯನ್ನು ಆಧುನಿಕ ಸಂದರ್ಭಗಳಲ್ಲಿ ಎಲ್ಲ ರಂಗಗಳಲ್ಲೂ ಕಾಣಬಹುದು. ಅಂಕೆಗಳನ್ನು ಮತ್ತು ಅಕ್ಷರಗಳನ್ನು ಬರೆಯುವ, ಓದುವ ಕ್ರಮ (1, 2, 3, 4... ಅ, ಆ, ಇ, ಈ... ಇತ್ಯಾದಿ), ಪ್ರಬಂಧಗಳನ್ನು ಬರೆಯುವ ಕ್ರಮ (ಪ್ರಸ್ತಾವನೆ, ವಿಷಯ, ಉಪಸಂಹಾರ), ಸರಳರೇಖಾತ್ಮಕವಾಗಿ ಸಂವಿಧಾನ ರಚನೆಯುಳ್ಳ ಕಾದಂಬರಿಗಳು, ಸಾಲಿನಲ್ಲಿ ಶಿಸ್ತುಬದ್ಧವಾಗಿ ನಡೆಯುವುದು, ಉತ್ಪಾದನೆಯ ಸರಳರೇಖಾತ್ಮಕ ಪರಿಕಲ್ಪನೆಗಳು (ಸಂಪನ್ಮೂಲ, ಉತ್ಪಾದನೆ, ಉತ್ಪಾದನೆಗೊಂಡ ವಸ್ತು ಅಥವಾ ನಷ್ಟ) ಇಂತಹ ನಿದರ್ಶನಗಳು ಅನೇಕ, ಬೇರೆಯವರ ಕುರಿತು ಮಾತಾಡುವಾಗ 'ಅವರ ನಡತೆ ನೇರವಾದುದು, ಅವರು ಮುಖಾಮುಖಿಯಾಗಿ ಮಾತಾಡುತ್ತಾರೆ' ಇಂತಹ ಪ್ರಯೋಗಗಳು ರೂಢಿಯಲ್ಲಿವೆ. ಒಬ್ಬ ವ್ಯಕ್ತಿ ಮಾನಸಿಕವಾಗಿ ಸರಿಯಿಲ್ಲ ಎನ್ನುವುದನ್ನು ಹೇಳಲು ಕಿವಿಯ ಸುತ್ತ ತೋರುಬೆರಳಿನಿಂದ ವೃತ್ತವೊಂದನ್ನು ಮಾಡುವ ಸಂಜ್ಞೆಯೊಂದನ್ನು ಸಾಮಾನ್ಯವಾಗಿ ಬಳಸುತ್ತಾರೆ. ವೃತ್ತ, ವಕ್ರತೆ ಇವು ಋಣಾತ್ಮಕ ಗುಣವನ್ನು ಸಮಾಜದಲ್ಲಿ ಪಡೆದಿವೆ. ಅವನು ಬಳಸು ಮಾತಿನಲ್ಲಿ ಮಾತಾಡುತ್ತಾನೆ. ನಿನ್ನ ತರ್ಕ ವಕ್ರವಾದುದು. ಅವರ ಮಾತು ಕೇಳಿ ನನ್ನ ತಲೆ ತಿರುಗಿತು. ಅವರ ಭಾಷಣ ಕೇಳಿ ತಲೆಸುತ್ತು ಬರುತ್ತಿದೆ. ಹೀಗೆ ವರ್ತುಲ, ಸುತ್ತು, ವಕ್ರರೇಖೆಗಳು ದೋಷದ ರೂಪದಲ್ಲಿ ಪ್ರಯೋಗವಾಗುತ್ತವೆ. ವ್ಯಂಗ್ಯಚಿತ್ರಗಳಲ್ಲಿ ತಲೆ ಸುತ್ತು ಬರುವುದನ್ನು ತೋರಿಸಲು ತಲೆಯ ಮೇಲ್ಭಾಗವಲ್ಲಿ ವರ್ತುಲ ಆಕಾರದ ಚಿತ್ರವನ್ನು ಬರೆಯುತ್ತಾರೆ.

ಭಿನ್ನ ಸಂಸ್ಕೃತಿಗಳ ಲೋಕದೃಷ್ಟಿಯ ಭಿನ್ನತೆಗಳು ಅನೇಕ ಬಾರಿ ಒಂದೇ ಗುರಿಯನ್ನು ಪರಸ್ಪರ ವಿರುದ್ಧವಾಗಿ ನೋಡುವ ಸಾಧ್ಯತೆಗಳಿರುತ್ತವೆ. ವಿಯೆಟ್ನಾಂ ಯುದ್ಧಕ್ಕೆ ಪರಿಹಾರ ಕಂಡುಕೊಳ್ಳುವ ಪ್ಯಾರಿಸ್ಸಿನ ಶಾಂತಿ ಮಾತುಕತೆಯಲ್ಲಿ ಉತ್ತರ ವಿಯೆಟ್ನಾಮಿಗಳು ಮಾತುಕತೆಗೆ ದುಂಡಗಿನ ಮೇಜನ್ನು ಇಡಲು ಬಯಸಿದರು. ಆದರೆ ಅಮೇರಿಕನ್ನರು ಇದಕ್ಕೆ ಒಪ್ಪದೆ ಚೌಕಾಕಾರದ ಮೇಜನ್ನೇ ಇಡಬೇಕು

ಎಂದು ಒತ್ತಾಯಿಸಿದರು. ಅಮೇರಿಕನ್ನರು ಮಾತುಕತೆಯ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಆಸಕ್ತರಾಗಿಲ್ಲ ಎನ್ನುವ ಗ್ರಹಿಕೆಯನ್ನು ವಿಯೆಟ್ನಾಮೀಯರೂ, ವಿಯೆಟ್ನಾಮೀಯರು ಪರಿಹಾರದ ಗಂಭೀರವಾದ ಉದ್ದೇಶವನ್ನು ಇಟ್ಟುಕೊಂಡಿಲ್ಲ ಎಂಬ ಪೂರ್ವಾಗ್ರಹವನ್ನು ಅಮೇರಿಕನ್ನರೂ ಈ ಮೇಜುಗಳ ಆಕಾರದ ಆಧಾರದ ಮೇಲೆ ಇಟ್ಟುಕೊಂಡಿದ್ದರು.

ನಿರ್ದಿಷ್ಟ ಜನಾಂಗಗಳ ಲೋಕದೃಷ್ಟಿಯು ಅವರ ನಡವಳಿಕೆಗಳ ಮೂಲಕ ಪ್ರಕಟವಾಗುತ್ತದೆ. ಅನೇಕ ಜನಾಂಗಗಳಲ್ಲಿ ಗಟ್ಟಿಯಾಗಿ ಮಾತನಾಡುವುದು ಒಂದು ಸಹಜ ಲಕ್ಷಣ. ಆಫ್ರಿಕಾದ ಅನೇಕ ಜನಾಂಗಗಳ ಜನರಲ್ಲಿ ಈ ಸ್ವಭಾವವಿದೆ. ಆದರೆ ಆಧುನಿಕ ಪಾಶ್ಚಾತ್ಯ ನಾಗರಿಕತೆಯು ಮೆತ್ತಗೆ ಮಾತನಾಡುವುದನ್ನು ಸೌಜನ್ಯ ಎಂದು ಭಾವಿಸುತ್ತದೆ. ಜನಪದ ಹಾಡುಗಳಲ್ಲಿ ಹೆಚ್ಚಾಗಿ ಕಾಣಿಸುವ ಗಟ್ಟಿಯಾದ ಸ್ವರ ಆಧುನಿಕ ಕಿವಿಗಳಿಗೆ ಕರ್ಕಶ ಎಂದು ಅನ್ನಿಸಬಹುದು. ಹೀಗಾಗಿಯೇ ಕರ್ಕಶ ಮತ್ತು ಮಧುರ ಎನ್ನುವ ಗುಣಗಳು ಕೂಡಾ ಸಾಪೇಕ್ಷವಾದುವು ಮತ್ತು ಸಂಸ್ಕೃತಿ ವಿಶಿಷ್ಟವಾದುವು.

ಆತ್ಮೀಯರು ಪರಸ್ಪರ ಭೇಟಿಯಾದಾಗ ತಮ್ಮ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸುವುದು ಕೂಡಾ ಆಯಾ ಸಂಸ್ಕೃತಿಯ ಲೋಕದೃಷ್ಟಿಗೆ ಅನುಸಾರವಾಗಿದೆ. ಆಲಿಂಗಿಸಿಕೊಳ್ಳುವುದು, ಕೈಕುಲುಕುವುದು, ಮುತ್ತಿಕ್ಕುವುದು, ಕಾಲು ಹಿಡಿಯುವುದು, ಗಲ್ಲ ಸವರುವುದು ಇಂತಹ ಅನೇಕ ರೀತಿಗಳಲ್ಲಿ ದೇಹವನ್ನು ಸ್ಪರ್ಶಿಸಿ, ಪ್ರೀತಿ, ಗೌರವಗಳನ್ನು ಪ್ರಕಟಿಸುವ ಬಗೆಗಳು ಇರುತ್ತವೆ. ಆದರೆ ಅನೇಕ ಸಂಸ್ಕೃತಿಗಳಲ್ಲಿ ದೇಹವನ್ನು ಪರಸ್ಪರ ಸ್ಪರ್ಶಿಸುವುದು ಅಸಭ್ಯ, ಅಶ್ಲೀಲ ಎಂದು ಪರಿಗಣಿಸುತ್ತಾರೆ. ದಿನದಲ್ಲಿ ಮೊದಲ ಬಾರಿ ಭೇಟಿಯಾದಾಗ ಸಾಂಪ್ರದಾಯಿಕವಾಗಿ ಕುಶಲ ವಿಚಾರದ ಮಾತುಗಳನ್ನು ಆಡುವುದರಿಂದ ತೊಡಗಿ ಕೇವಲ ಮುಖ ನೋಡಿ ಮುಗುಳ್ನಗುವವರೆಗೆ ಪರಸ್ಪರ ಸಂದೇಶಗಳನ್ನು ವಿನಿಮಯ ಮಾಡುವ ವಿವಿಧ ರೀತಿಗಳು ಇರುತ್ತವೆ. ಇಲ್ಲೆಲ್ಲ ಆ ಸಂಸ್ಕೃತಿಯ ಲೋಕದೃಷ್ಟಿ ಸರಿ ತಪ್ಪುಗಳನ್ನು ನಿರ್ಧರಿಸುತ್ತದೆ; ವಿಶ್ವಾಸ, ಅವಿಶ್ವಾಸಗಳನ್ನು ಪ್ರಕಟಿಸುತ್ತದೆ.

ಆಧುನಿಕತೆಯು ಸಂಸ್ಕೃತಿ ವಿಶಿಷ್ಟವಾದ ಲೋಕದೃಷ್ಟಿಯನ್ನು ನಿಧಾನವಾಗಿ ಬದಲಾಯಿಸುತ್ತದೆ. ಟಿ.ವಿ.ಯ ಮುಂದೆ ಕುಳಿತು ವೀಕ್ಷಿಸುವ ಒಂದೇ ಮನೆಯ ಒಂದೇ ಕುಟುಂಬದ ಸದಸ್ಯರು ಪರಸ್ಪರ ಮಾತನಾಡಿಕೊಳ್ಳುವುದಿಲ್ಲ. ಎಲ್ಲರ ಕಣ್ಣುಗಳೂ ಟಿ.ವಿ. ಪರದೆಯ ಮೇಲೆ. ಹೀಗಾಗಿ ವಾಚಾಳಿ ಸಂಸ್ಕೃತಿಯಲ್ಲಿ ಬೆಳೆದು ಬಂದವರು ಮೌನಿಗಳಾಗಬೇಕಾಗುತ್ತದೆ. ಗಂಡು-ಹೆಣ್ಣು ಪರಸ್ಪರ ಒಟ್ಟಿಗೆ ಕುಳಿತುಕೊಳ್ಳುವ ಪದ್ಧತಿ ಇಲ್ಲದ ಮನೆಗಳಲ್ಲಿ ಟಿ.ವಿ. ಬಂದ ಬಳಿಕ ಎಲ್ಲರೂ ಒಂದೇ ಕೊಠಡಿಯಲ್ಲಿ ಒಟ್ಟಿಗೆ ಕುಳಿತು ನೋಡುವ ಬದಲಾವಣೆ ಸಾಧ್ಯವಾಗಿದೆ. ಹೀಗೆ ಆಧುನಿಕ ತಂತ್ರಜ್ಞಾನ ಒಂದು ಕಡೆ ಮನುಷ್ಯರ ನಡುವೆ ಸಂವಾದವನ್ನು ಕುಂಠಿತಗೊಳಿಸಿದರೆ, ಇನ್ನೊಂದು ಕಡೆ ಒಟ್ಟು ಸೇರಲಾರದ ಮನುಷ್ಯರನ್ನು ಒಟ್ಟು ಸೇರಿಸಲು ಶಕ್ತವಾಗಿದೆ.

ಭಿನ್ನ ಸಂಸ್ಕೃತಿಗಳ ಲೋಕದೃಷ್ಟಿಗಳು ಪರಸ್ಪರ ವಿರುದ್ಧವಾಗಿದ್ದಾಗಲೂ ಅವು ಸಂಘರ್ಷದ ಅಥವಾ ಯುದ್ಧದ ರೂಪವನ್ನು ತಾಳಲು ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಸಂಗತಿಗಳು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದ್ದು ಕಾರಣ. ಜನಾಂಗಗಳ ನಡುವಿನ ಸಂಘರ್ಷಕ್ಕೆ ಲೋಕದೃಷ್ಟಿಗಳ ಭಿನ್ನತೆ ಕಾರಣವಲ್ಲ. ಭಿನ್ನ ಲೋಕದೃಷ್ಟಿಗಳನ್ನು ರಾಜಕೀಯ, ಆರ್ಥಿಕ, ಧಾರ್ಮಿಕ ರಂಗಗಳಲ್ಲಿ ದುರುಪಯೋಗಪಡಿಸಿಕೊಂಡದ್ದು ಕಾರಣ. ಹೀಗಾಗಿಯೇ ಜನಾಂಗೀಯ ಘರ್ಷಣೆಗಳನ್ನು ನಿವಾರಿಸಲು ಆ ಜನಾಂಗಗಳ ಲೋಕದೃಷ್ಟಿಯನ್ನೇ ನಿವಾರಿಸಬೇಕಾಗಿಲ್ಲ. ಲೋಕದೃಷ್ಟಿಗಳ ಭಿನ್ನತೆಗಳನ್ನು ಮತ್ತು ಅದರ ಕಾರಣಗಳನ್ನು ಅರ್ಥ ಮಾಡಿಕೊಂಡರೆ ಸಾಕಾಗುತ್ತದೆ. ಪ್ರಾಥಮಿಕ ಶಾಲೆಯ ತರಗತಿಗಳಲ್ಲಿ ಕೆಲವು


ಮಕ್ಕಳು ಗಟ್ಟಿಯಾಗಿ ಕಿರಿಚುವುದನ್ನೂ, ಕೆಲವು ಮಕ್ಕಳು ಮೆಲುದನಿಯಲ್ಲಿ ಮಾತಾಡುವುದನ್ನೂ ಅರ್ಥ ಮಾಡಿಕೊಂಡ ಹಾಗೆ; ಕೆಲವು ಮಕ್ಕಳು ಸ್ಪಷ್ಟವಾಗಿ ಕನ್ನಡದಲ್ಲಿ ಮಾತಾಡುವುದನ್ನೂ, ಕೆಲವು ಮಕ್ಕಳು ಕನ್ನಡದ ಅಲ್ಪಪ್ರಾಣ ಮಹಾಪ್ರಾಣಗಳ ನಡುವೆ,ಲ-ಳಗಳ ನಡುವೆ ಕಕ್ಕಾಬಿಕ್ಕಿಯಾಗುವುದನ್ನೂ ಅರ್ಥ ಮಾಡಿಕೊಂಡ ಹಾಗೆ. ಏಕೆಂದರೆ ಶಾಲಾ ಸಮವಸ್ತ್ರದ ಒಳಗೆಯೂ ಮಕ್ಕಳು ಒಂದೇ ರೀತಿಯಲ್ಲಿ ನಗಬೇಕಾಗಿಲ್ಲ, ಒಂದೇ ಧಾಟಿಯಲ್ಲಿ ಹಾಡಬೇಕಾಗಿಲ್ಲ, ಒಂದೇ ಎತ್ತರಕ್ಕೆ ಜಿಗಿಯಬೇಕಾಗಿಲ್ಲ. ಅವರು ನಕ್ಕರೆ, ಹಾಡಿದರೆ, ಜಿಗಿದರೆ ಅದು ಭಾಗ್ಯ.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಟಿ.ವಿ. ಪೆಟ್ಟಿಗೆಯೊಳಗೆ ಯಕ್ಷಗಾನ!

□ ಉದ್ಯಾವರ ಮಾಧವ ಆಚಾರ್ಯ



ಅಪಾರ ಪ್ರದರ್ಶನ ಸಾಧ್ಯತೆಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುವ ನಮ್ಮ ಯಕ್ಷಗಾನ ತೀರ ಆಧುನಿಕವಾದ ಟಿ.ವಿ. ಪರದೆಯ ಮೇಲೆ ಹೇಗೆ ಚಿತ್ರಿತವಾಗಬೇಕು ಎನ್ನುವುದರ ಬಗೆಗೆ ಚಿಂತನೆ ಇಂದಿನ ಅಗತ್ಯ. ರಂಗಸ್ಥಳ ಮತ್ತು ಚಿತ್ರೀಕರಣ (ಕೆಮರಾಕಾಣ್ಕೆ) ಈ ಎರಡೂ ಕ್ಷೇತ್ರಗಳಲ್ಲಿ ಕಲಾತ್ಮಕ ಮತ್ತು ತಾಂತ್ರಿಕ ಪರಿಣತರಾದವರಿಂದ ಮಾತ್ರ ಇಂಥ ಚಿಂತನೆ ಮತ್ತು ಕಾರ್ಯಾಚರಣೆ ಹೆಚ್ಚು ಫಲದಾಯಕ. ಸದ್ಯ ಮೊದಲ ಹೆಜ್ಜೆಗಳನ್ನಷ್ಟೆ ಈ ದಿಸೆಯಲ್ಲಿ ಆಸಕ್ತರು ಇಡುತ್ತಿರುವುದರಿಂದ 'ಚಿಂತನೆ-ಸಿದ್ಧತೆ'ಯ ದಾರಿದ್ರ್ಯ ಈ ಪ್ರಯತ್ನಗಳ ಮುಖ್ಯ ದೌರ್ಬಲ್ಯವಾಗಿದೆ ಎಂದು ಹೇಳಿದರೆ ಅದು ಟೀಕೆಗಿಂತ ಹೆಚ್ಚು ಒಂದು ಎಚ್ಚರದ ಮಾತಾದೀತು ಎಂದು ನನ್ನೆಣಿಕೆ. ಹೀಗೆನ್ನಿಸಿ ಕೆಲವು ವಿಚಾರಗಳನ್ನು ಈ ಲೇಖನದ ಮೂಲಕ ವಿಶ್ಲೇಷಿಸಲು ಪ್ರಯತ್ನಿಸುತ್ತಿದ್ದೇನೆ.

ಯಕ್ಷಗಾನ ಮತ್ತು ಟಿ.ವಿ. ಎರಡೂ ಭಿನ್ನ ಮಾಧ್ಯಮಗಳು. ಯಕ್ಷಗಾನ ಒಂದು ಸ್ವತಂತ್ರ ಮಾಧ್ಯಮ. ಟಿ.ವಿ. ಅಂಥ ಸ್ವತಂತ್ರ ಕಲಾ ಮಾಧ್ಯಮಗಳನ್ನು ಬಿತ್ತರಿಸುವ ಒಂದು ಸಾಧನವಾಗುವುದರೊಂದಿಗೆ ಆ ಬಿತ್ತರಕ್ಕೆ ಹೊಸ ಎತ್ತರವನ್ನೊ, ವಿಸ್ತಾರವನ್ನೊ, ವೈಶಿಷ್ಟ್ಯವನ್ನೊ ನೀಡುವ ತಾಂತ್ರಿಕ ಮತ್ತು

ಸಿರಿಮನೆ, 6-1-82 ರ, ಚಿಟ್ಪಾಡಿ, ಉಡುಪಿ

ಕಲಾತ್ಮಕ ಸಾಧ್ಯತೆಗಳ ಒಂದು ವಿಶೇಷ ಸಂಗಮ. ಕಣ್ಣುಗಳಿಗೆ ನೇರವಾಗಿ ದೃಶ್ಯವಾಗುವ ಒಂದು ಚಿತ್ರಣ ಕ್ಯಾಮರಾದ ಮೂಲಕ ಹಾಗೆಯೇ ಕಾಣಿಸುವುದಕ್ಕಿಂತ ಭಿನ್ನವಾಗಿ ಕಾಣುತ್ತದೆ; ಕಾಣುವುದು ಸಾಧ್ಯ ಮತ್ತು ಭಿನ್ನವಾಗಿ ಕಂಡುಬರಬೇಕು. ಈ ಮಾತು ದೃಶ್ಯ, ಶ್ರವ್ಯ, ಚಲನ ವೈಭವವನ್ನು ಹೊಂದಿರುವ ನಮ್ಮ ಯಕ್ಷಗಾನದ ಮಟ್ಟಿಗೆ ಹೆಚ್ಚು ಸಂಗತ. ಯಕ್ಷಗಾನವನ್ನು ಟಿ.ವಿ.ಪರದೆಯ ಮೂಲಕ ಪ್ರದರ್ಶಿಸುವಾಗ ಈ ಅರಿವು ಮೊದಲ ಅಗತ್ಯ. ಕೇವಲ ದಾಖಲಾತಿ ಅಥವಾ ಕೇವಲ ಒಂದು ಪ್ರದರ್ಶನದ ಯಥಾವತ್ ಅಭಿವ್ಯಕ್ತಿಯಾಗಿಸದೆ ದೃಶ್ಯ-ತಾಂತ್ರಿಕ ಸಾಧನಗಳ ಮೂಲಕ ಯಕ್ಷಗಾನದ ಕಲಾ ವೈಭವವನ್ನೂ, ಆ ವೈಭವದ ಹೊಸ ಪರಿಣಾಮವನ್ನೂ ಏಕಕಾಲದಲ್ಲಿ ಸಹೃದಯರಿಗೆ ನೀಡುವ ಉದ್ದೇಶವನ್ನು ಸಾಧಿಸಲು ಈ ಅರಿವು ಬೇಕೇ ಬೇಕು. ಯಕ್ಷಗಾನದ ಮೂಲ ವೇದಿಕೆಯಾದ ಬಯಲು ರಂಗಸ್ಥಳದಲ್ಲಿ ನಡೆಯುವ ಪ್ರದರ್ಶನವನ್ನು ನೇರವಾಗಿ ಕ್ಯಾಮರಾದ ಮೂಲಕ ಚಿತ್ರಿಸುವುದು, ಈ ಚೌಕಟ್ಟನ್ನು ಹೆಚ್ಚು-ಕಡಿಮೆ ಕಲ್ಪಿಸಿ ಟಿ.ವಿ. ಚಿತ್ರೀಕರಣ ಮಂದಿರ(ಸ್ಟುಡಿಯೋ)ದೊಳಗೆ ಅಂಥದೇ ಪ್ರದರ್ಶನವನ್ನು ಚಿತ್ರಿಸುವುದು- ಇವೆರಡಕ್ಕಿಂತ ಭಿನ್ನವಾದ ಪರಿಣಾಮವನ್ನು ಈ ಉದ್ದೇಶ ಸಾಧಿಸುತ್ತದೆ.

ಈ ಭಿನ್ನತೆಯನ್ನು ಸ್ಪಷ್ಟಪಡಿಸಲು ಸದ್ಯದ ಟಿ.ವಿ. ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥೂಲ ಪರಿಚಯ ಮಾಡಿಕೊಳ್ಳೋಣ. ನಮ್ಮ ಹೆಚ್ಚಿನ ಚಾನಲ್ಲುಗಳ ಪ್ರಸಾರ ಅವಧಿಯಲ್ಲಿ ಸುಮಾರು ತೊಂಬತ್ತು ಶೇಕಡಾ ಸಿನಿಮಾದ ನೇರ ಅಥವಾ ಸಿನಿಮಾ ಹಾಡು ಕುಣಿತ ಆಧಾರಿತ ಜನಪ್ರಿಯ ಕಾರ್ಯಕ್ರಮಗಳಿಗೆ ಮತ್ತು ಧಾರಾವಾಹಿಗಳಿಗೆ ಮೀಸಲು. ಉಳಿದಂತೆ ಚರ್ಚೆ, ಜ್ಞಾನ-ವಿಜ್ಞಾನ ವಿಚಾರ ಮಂಥನ, ಸುದ್ದಿ ಪ್ರಸಾರ ಹಾಗೂ ಕಲಾ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತವೆ. ಈ ಕಲಾ ಕಾರ್ಯಕ್ರಮಗಳ ಗುಂಪಿನಲ್ಲಿ ರಂಗಭೂಮಿ, ನಾದನೃತ್ಯ, ಜಾನಪದ ಪ್ರಮುಖವಾಗಿ ಕಾಣಿಸಿಕೊಳ್ಳುವ ವಿಭಾಗಗಳು. ಯಕ್ಷಗಾನ ಇವುಗಳೊಳಗೇ ಸೇರಿಕೊಂಡಿದೆ. ಗೌರವಧನ, ಅಂತಸ್ತು ಇತ್ಯಾದಿಗಳ ಮಾನದಂಡ ಏನೇ ಇರಲಿ. ನನ್ನೀ ಲೇಖನದ ವಿಷಯಕ್ಕೆ ಸಂಬಂಧಿಸಿ ಹೇಳುವುದಾದರೆ ಯಕ್ಷಗಾನವು ರಂಗಭೂಮಿಯ ಒಂದು ಸಾಧ್ಯತೆಯಾಗಿ, ನಾದ ನೃತ್ಯದ ಶೈಲಿಯಾಗಿ, ಜಾನಪದ ಆವರಣ ಹೊಂದಿ-ಈ ಎಲ್ಲದರ ಸಂಗಮವಾಗಿ ಟಿ.ವಿ. ಪರದೆಯ ಮೂಲಕ ಕಾಣಿಸಿಕೊಳ್ಳಬೇಕಾದ ದೃಶ್ಯಶ್ರವ್ಯ ಮಾಧ್ಯಮ ಆದುದರಿಂದ ಉಳಿದ ವಿಭಾಗಗಳಿಗಿಂತ ಯಕ್ಷಗಾನ ಚಿತ್ರೀಕರಣ ತುಸು ಸಂಕೀರ್ಣ.

ನಾಟಕವನ್ನು ಗಮನಿಸಿ. ಒಂದು ಸಿದ್ಧಕೃತಿ, ರಂಗಚಲನೆ, ರಂಗಪರಿಕರ, ರಂಗವ್ಯಾಪಾರ ಎಲ್ಲ ಸಾಕಷ್ಟು ಅಭ್ಯಾಸಕ್ಕೆ ಒಳಗಾಗಿ ನಿರ್ದೇಶನ ಕಲ್ಪನೆಯಂತೆ ವೇದಿಕೆಯಲ್ಲಿ ಆಕಾರ ಪಡೆದಿರುತ್ತದೆ. ಅದರ ಮರು ನಿರ್ಮಾಣ ಕ್ಯಾಮರಾದ ಮುಂದೆ ಸಾಕಾರಗೊಳ್ಳುತ್ತದೆ. ದೂರ-ಹತ್ತಿರ ನೋಟಗಳ ಸೆರೆ, ವಿವಿಧ ಕೋನಗಳಲ್ಲಿ ಚಿತ್ರೀಕರಣ- ಇತ್ಯಾದಿ ಕೆಲವು ತಾಂತ್ರಿಕ ಸಾಧ್ಯತೆಗಳಿಗೆ ಮಾತ್ರ ಇಲ್ಲಿ ಕನಿಷ್ಠ ಅವಕಾಶ. ನೃತ್ಯಕ್ಕೆ ಬಂದರೂ ಇಷ್ಟೆ. ಕ್ಯಾಮರಾದ ಮುಂದೆ ನಿರ್ದಿಷ್ಟಪರಿಧಿಯೊಳಗೆ ನಡೆಯಬೇಕಾದ ಯಾವತ್ತು ಚಲನೆಗಳೋ ಕಲಾತ್ಮಕ ಮನೋಧರ್ಮ ನಿರೂಪಣೆಯೋ ಮೊದಲೇ ಸಿದ್ಧಗೊಂಡಿರುತ್ತದೆ. ಜಾನಪದಕ್ಕೆ ಸಂಬಂಧಿಸಿಯೂ ಚಿತ್ರೀಕರಣದಲ್ಲಿ ವೈವಿಧ್ಯವನ್ನು ನಾವು ಹೆಚ್ಚು ಕಲ್ಪಿಸಲಾರೆವು. ಏಕತಾನತೆಯನ್ನು ಹೋಗಲಾಡಿಸಲು ಅಲ್ಲಲ್ಲಿ ಕೆಲವು ವ್ಯತ್ಯಾಸಗಳು ನಡೆಯಬಹುದು. ಮುಖ್ಯ ಹಾಡುಗಾರನ ಮೇಲೆ ಕೇಂದ್ರೀಕೃತವಾದ ಕ್ಯಾಮರಾ ವಾದಕರ ಮೇಲೆ ಹಾಯಬಹುದು, ದೂರ ನೋಟದಲ್ಲಿ ಎಲ್ಲರನ್ನೂ ಒಳಗೊಂಡದ್ದು ನಿಧಾನವಾಗಿ ಒಬ್ಬೊಬ್ಬರ ಮೇಲೆ ಸಾಂದ್ರಗೊಳ್ಳಬಹುದು ಯಾ ಕೆಲವೊಮ್ಮೆ ಕೇವಲ ವಾದನದ ಅಥವಾ ವಾದನ ನುಡಿಸುವ ಬೆರಳುಗಳ ಮೇಲೆ ಸಾಧನೆಗೊಳ್ಳಬಹುದು. ಇದೇ ರೀತಿ ನೃತ್ಯದ ದೃಷ್ಟಿಬೇಧ, ಹಸ್ತ ವಿನ್ಯಾಸ, ಮುದ್ರೆ, ಭಂಗಿ,

ಪಾದಚಲನೆಗಳೆಡೆ ಕ್ಯಾಮರಾ ಕಣ್ಣು ತೀಕ್ಷ್ಣಗೊಳ್ಳುವುದೂ ಒಂದು ಮುಖ್ಯ ಸಾಧ್ಯತೆ. ಹವ್ಯಾಸಿಗಳ ಕಾರ್ಯಕ್ರಮದಲ್ಲಿ ಇವೆಲ್ಲ ಬೇಕಾಬಿಟ್ಟಿಯಾಗಿ ನಡೆಯುವ ಅಪಾಯವೂ ಇದೆ. ಕೇವಲ ನೋಟಕನಾಗಿ ಇಂಥ ಕೆಲವು ಅವಸರದ ತೀರ್ಮಾನಗಳನ್ನು ಮಾಡುತ್ತಿದ್ದೇನೆ ಎಂಬುದರ ಅರಿವು ನನಗಿದೆ. ಹೀಗೆ ಪ್ರಸ್ತಾಪಿಸಲು ಮುಖ್ಯ ಕಾರಣ ಯಕ್ಷಗಾನದ ಟಿ.ವಿ. ಪ್ರದರ್ಶನದಲ್ಲಿ ಏನೆಲ್ಲ ಭಿನ್ನ ಯೋಚನೆಗಳು ಸಾಧ್ಯ ಎಂಬುದರ ಬಗೆಗೆ ನನಗಿರುವ ಕುತೂಹಲ.

ಏಕೆ ಸಂಕೀರ್ಣ? ಏಕೆ ಭಿನ್ನ ಯೋಚನೆಗಳು? ಉತ್ತರ ಸಾಮಾನ್ಯ ಗ್ರಹಿಕೆಗೆ ನಿಲುಕುವಂಥದ್ದೆ. ಯಕ್ಷಗಾನ ಒಂದು ರಂಗಭೂಮಿ. ಬಲವಾದ ರಂಗಭೂಮಿ. ಆದರೆ ಅದು ಕೇವಲ ಸಿದ್ಧ ನಾಟಕ ಮಾತ್ರ ಅಲ್ಲ. ಯಕ್ಷಗಾನದಲ್ಲಿ ನಾದ ನೃತ್ಯಕ್ಕೆ ಸಾಕಷ್ಟು ಸ್ಥಾನವಿದೆ. ಆದರೆ ಅದೇ ಎಲ್ಲ ಅಲ್ಲ. ವಿಶಿಷ್ಟ ಆಹಾರ್ಯದ ಭಾರವಿದೆ. ಆದರೆ ವೇಷಭೂಷಣ ಮಾತ್ರ ಅದರ ಸ್ಥಿರಭಾವವಲ್ಲ. ರಂಗಭೂಮಿಯ ನಾಲ್ಕೂ ಅಂಗಗಳೂ ಸೂಕ್ಷ್ಮ ಸಂಚಾರೀ ಭಾವವನ್ನು ಪರಸ್ಪರ ಹೊಂದಾಣಿಕೆಯಿಂದ ಕ್ರಿಯಾಶೀಲಗೊಳ್ಳುತ್ತ ಮಿಂಚಬೇಕಾದುದರಿಂದ ಟಿ.ವಿ. ಪರದೆಯ ಮೇಲೆ ಅದು ಭಿನ್ನವಾಗಿ ರೂಪುಗೊಳ್ಳುವುದು ಸಾಧ್ಯ. ರೂಪುಗೊಳ್ಳಬೇಕಾದುದು ಒಂದು ಕಲಾ ಸಾಧನೆ.

ಹೇಗೆ ಈ ಕಲಾಸಾಧನೆ ಸಾಧ್ಯ? ಟಿ.ವಿ.ಯ ನಿರ್ಮಾಪಕ ತಂಡ ಹಾಗೂ ಯಕ್ಷಗಾನ ಕಲಾ ತಂಡ-ಇವುಗಳ ಪರಸ್ಪರ ತಿಳಿವಳಿಕೆ, ಹೊಂದಾಣಿಕೆ ಮತ್ತು ಸಾಮರಸ್ಯದಿಂದ ಮಾತ್ರ ಸಾಧ್ಯ. ಈ ಸಹಯೋಗಕ್ಕೆ ಎರಡೂ ತಂಡಗಳಲ್ಲಿ ಸಾಕಷ್ಟು ಸಿದ್ಧತೆ ಮತ್ತು ಮುನ್ನೋಟಗಳು ಅಗತ್ಯ. ಮೊದಲ ತಂಡದ ಸಿದ್ಧತೆ, ಮುನ್ನೋಟ ತಾಂತ್ರಿಕತೆಗೆ ಹೆಚ್ಚು ಸಂಬಂಧಿಸಿದ್ದು. ಇದು ಪ್ರತ್ಯೇಕವಾಗಿ ಚರ್ಚಿಸಬೇಕಾದ ವಿಷಯ. ಆದರೆ ಈ ತಂಡದ ಯಾವತ್ತು ತಾಂತ್ರಿಕ ಆವಿಷ್ಕಾರಕ್ಕೆ ಅನುಕೂಲವಾಗುವಂಥ ಹೊಂದಿಕೊಳ್ಳುವಂಥ ಅರ್ಹ ಸಿದ್ಧತೆ ಎರಡನೆಯ ತಂಡದಿಂದ ನಡೆಯಬೇಕಾದುದು ಅನಿವಾರ್ಯ. ಭಿನ್ನ ತಾಂತ್ರಿಕ ಅಭಿವ್ಯಕ್ತಿಗೆ ಸೂಕ್ತವಾದ ಯಕ್ಷಗಾನ ರಂಗಕೃತಿಯ ಸಿದ್ಧತೆಯನ್ನು ಈ ಎರಡನೆಯ ಅಂದರೆ ಯಕ್ಷಗಾನ ಕಲಾತಂಡ ಯೋಚಿಸಿ, ಯೋಜಿಸಿ. ನಡೆಸಿದ್ದರೆ ಮಾತ್ರ ಅಂಥ ಪ್ರಯುಕ್ತ ತಾಂತ್ರಿಕ ಸಾಧ್ಯತೆಗಳ ಚಿತ್ರೀಕರಣವನ್ನು ಅನಿವಾರ್ಯಗೊಳಿಸುತ್ತದೆ. ಚಾಲ್ತಿಯ ರಂಗಸ್ಥಳ ನಡೆಯ ಒಂದು ಆಟವನ್ನು ಯಾ ಆಟದ ಸಂಕ್ಷಿಪ್ತ ಓಟವನ್ನು- ಕ್ಯಾಮರಾವನ್ನು ಉದ್ದೇಶಿಸಿ ಪ್ರದರ್ಶಿಸುವುದಕ್ಕಿಂತ ಹೆಚ್ಚಿನ ಸಿದ್ಧತೆ ಬೇಕು ಎನ್ನುವುದೇ ಈ ಲೇಖನದ ಮುಖ್ಯ ಆಶಯ. ಈ ಕುರಿತು ಒಂದಷ್ಟು ಚಿಂತನೆಗಳಷ್ಟೆ ಈ ಲೇಖನದ ಮುಂದಿನ ಭಾಗ.

ಟಿ.ವಿ. ಯಕ್ಷಗಾನ ಪ್ರಯತ್ನಕ್ಕೆ ಒಬ್ಬ ನಿರ್ದೇಶಕ ಅಗತ್ಯ. ಕೇವಲ ವ್ಯಕ್ತಿಯಾಗಿ ಅಲ್ಲ, ಒಟ್ಟು ಕೃತಿ ಹೇಗೆ ರೂಪುಗೊಳ್ಳಬೇಕು ಎಂದು ಸಂಕಲ್ಪಿಸುವ ಶಕ್ತಿಯಾಗಿ. ಯಕ್ಷಗಾನದಲ್ಲಿ ಭಾಗವತನೇ ನಿರ್ದೇಶಕ, ಯಕ್ಷಗಾನಕ್ಕೆ ನಿರ್ದೇಶನ ಬೇಕು-ಬೇಡ ಎಂಬೆಲ್ಲ ವಾದ ಏನೇ ಇರಲಿ. ಭಿನ್ನ ಮಾಧ್ಯಮದ ಮೂಲಕ ಯಕ್ಷಗಾನದ ಮೂಲಕ ಸ್ವರೂಪದ ಆಯಕಟ್ಟಿನೊಳಗೇ ಒಂದು ರಂಗಕೃತಿಯನ್ನು ನಿರ್ಮಿಸಿ ಪ್ರದರ್ಶಿಸಲು ಪೂರ್ವ ಯೋಜನೆ ಮತ್ತು ಆ ಯೋಜನೆಯ ಹಿಂದೆ ಶಕ್ತಿಶಾಲಿ ಕಲ್ಪನೆ ಬೇಕು ಎನ್ನುವುದು ಇಲ್ಲಿಯ ಇಂಗಿತ. ಇಲ್ಲಿ ನಿರ್ದೇಶನ ಎಂದರೆ ಕೇವಲ ಸಂಯೋಜನೆಯಲ್ಲ. ಚಾಲ್ತಿಯಲ್ಲಿರುವ ಪ್ರಸಂಗದ ನಡೆಗೆ ಒಂದು ಮಾರ್ಗದರ್ಶನವೂ ಅಲ್ಲ. ಬದಲು ಆಯ್ದ ಕಥಾ ಭಾಗದ ಆ ನಡೆಯನ್ನೇ ಟಿ.ವಿ. ಪರದೆಗಾಗಿ ಪಳಗಿಸುವ, ಶಿಸ್ತುಬದ್ಧಗೊಳಿಸುವ ಮತ್ತು ತಾತ್ವಿಕವಾಗಿ ರಂಗವ್ಯಾಖ್ಯಾನಗೊಳಿಸುವ ಕನಸು ಮತ್ತು ಮನಸು. ಇಂಥ ಕಲಾತ್ಮಕ ಪೂರ್ವ ಯೋಜನೆ ಚಾಲ್ತಿಯ ಆ ನಡೆಗೆ ಹೊಸ ಮೆರುಗು, ವೈಶಿಷ್ಟ್ಯ, ರಂಗಧ್ವನಿ ನೀಡಬಲ್ಲುದು.

ಚಾಲ್ತಿಯ ಸಿದ್ಧ ನಡೆಯನ್ನೊ, ಪಾತ್ರಧಾರಿಗಳ ವೈಯಕ್ತಿಕ ಛಾಪು ಒನಪುಗಳನ್ನೊ ಸಂಪೂರ್ಣ ಅವಗಣಿಸದೆ ಆ ನೆರಳಿನಲ್ಲೆ ಒಟ್ಟು ರಂಗಕೃತಿಯನ್ನು ಸುಸಂಬದ್ಧಗೊಳಿಸಬೇಕಾದುದು ನಿರ್ದೇಶಕನ ಮುಖ್ಯ ಹೊಣೆಗಾರಿಕೆ. ವೈಯಕ್ತಿಕ ಹಿರಿಮೆಯ ಒಬ್ಬ ಪ್ರಸಿದ್ಧ ಕಲಾವಿದನ ರಂಗಕಾರ್ಯವನ್ನೊ ಉದಾಹರಣೆಗೆ, ಕೀಚಕನಾಗಿ ಒಬ್ಬ ಖ್ಯಾತ ಕಲಾವಿದನ ರಂಗಚಮತ್ಕಾರಗಳನ್ನೊ- ಕುರಿತಂತೆ ನಿರ್ದೇಶಕನಲ್ಲಿ ಬಲವಾದ ಪೂರ್ವ ಕಲ್ಪನೆ ಇದ್ದಲ್ಲಿ ಒಟ್ಟು ರಂಗಕೃತಿಗೆ ಪೂರಕವಾಗುವಂತೆ ಪಳಗಿಸುವುದು ಸಾಧ್ಯ. ಓರಣಗೊಳಿಸುವುದು ಸಾಧ್ಯ. ಆದರೆ ಟಿ.ವಿ. ಕಾರ್ಯಕ್ರಮವೆಂದೊಡನೆ ಅದಕ್ಕೊಂದು ನಿಶ್ಚಿತ ಅವಧಿ ಇದೆ. ಆ ಅವಧಿಗೆ ಅನುಗುಣವಾಗಿಯೇ ಸಮತೂಕಗೊಳಿಸಬೇಕು ಎನ್ನುವುದೇ ಇಲ್ಲಿ ಗಮನಿಸಬೇಕಾದ ಅಂಶ.

ಭಿನ್ನ ಆಯಾಮ ನೀಡುತ್ತ ಸಮತೂಕಗೊಳಿಸುವ ದಾರಿಯಲ್ಲಿ ಮೊದಲ ಹೆಜ್ಜೆಯೇ ರಂಗಕೃತಿ ನಿರ್ಮಾಣ. ಯಕ್ಷಗಾನದ ಪ್ರಸಂಗಗಳೇ ಇಲ್ಲಿ ಮೂಲಾಧಾರ. ಅನ್ಯ ಸಾಹಿತ್ಯ ಕೃತಿಗಳನ್ನೂ ಉದಾಹರಣೆಗೆ ಪ್ರಸಿದ್ಧ ಕವಿಗಳ ಕಥನ ಕವನ ಇತ್ಯಾದಿ ಬಳಸಿ ಯಕ್ಷಗಾನ ಚೌಕಟ್ಟಿನಲ್ಲಿ ರಂಗ ನಿರ್ಮಾಣ ಸಾಧ್ಯ. ಈಗಾಗಲೇ ಅಂಥ ಪ್ರಯೋಗಗಳು ನಡೆದಿವೆ. ಆದರೆ ಯಕ್ಷಗಾನದ ಪ್ರಸಂಗ ಸಾಹಿತ್ಯಕ್ಕೇ ಈ ಬರಹ ಸೀಮಿತ. ರಾತ್ರಿ ಇಡೀ ನಡೆಯುವ ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವ ಈ ಪ್ರತ್ಯೇಕ ವಿಶೇಷ, ಪ್ರಸಂಗ (ಸಾಹಿತ್ಯ) ಕೃತಿಗಳಲ್ಲಿ ಯಾವುದಾದರೂ ಒಂದನ್ನು ಆಯ್ದು ಟಿ.ವಿ. ಪ್ರದರ್ಶನದ ಅವಧಿಗೆ ಸರಿಯಾಗಿ ಎಷ್ಟು ಬೇಕೋ ಅಷ್ಟು ಪದ್ಯಗಳನ್ನು ಆಧಾರವಾಗಿಸಿಕೊಳ್ಳುವುದು ಮೊದಲ ಕೆಲಸ. ಚಾಲ್ತಿಯ ಪ್ರದರ್ಶನಗಳು ಹಾಗೂ ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಕಾಲಮಿತಿ ಪ್ರದರ್ಶನಗಳಿಗೂ ಇಂಥ ಆಯ್ಕೆ-ಸಂಪಾದನೆ (ಎಡಿಟಿಂಗ್) ನಡೆಯುತ್ತಿದೆಯಾದರೂ ಟಿ.ವಿ.ಯ ಕಾಲ ಮತ್ತು ರಂಗ ಚೌಕಟ್ಟಿಗೆ ಸರಿಯಾಗಿ ನಿರ್ದೇಶಕ ಪ್ರಸಂಗವನ್ನು ಸಂಯೋಜಿಸುವಾಗ ಹೆಚ್ಚಿನ ನಿರ್ಬಂಧವನ್ನು ಎದುರಿಸಬೇಕಾಗುತ್ತದೆ. ಅಲ್ಲದೆ ಅವಧಿಗೆ ಸರಿಯಾಗಿ ಕುಗ್ಗಿಸುವ ಈ ಪ್ರಕ್ರಿಯೆ ಕೇವಲ ಪದ್ಯಗಳನ್ನು ಬಿಡುವ-ತುಂಡರಿಸುವ ಕಾರ್ಯ ಮಾತ್ರವಲ್ಲ. ಕ್ಯಾಮರದ ಮೂಲಕ ನಿರ್ದೇಶಕ-ನಿರ್ಮಾಪಕ ಯಕ್ಷಗಾನ ರಂಗಭೂಮಿಯ ಮೆರುಗನ್ನು ಭಿನ್ನಗೊಳಿಸಲು, ಕಲ್ಪಿಸಲು ಈ ಎಡಿಟಿಂಗ್ ಪೂರ್ಣ ಸಹಕಾರಿ ಎಂಬ ಪೂರ್ವ ಸಂಕಲ್ಪದ, ಕಾರ್ಯಾಚರಣೆಯೇ ಈ ರಂಗಕೃತಿ ನಿರ್ಮಾಣ.

ಇಲ್ಲಿಯೇ ಹೇಳಬೇಕು- ಎಲ್ಲ ಕಥಾಭಾವ ಸಂದರ್ಭಗಳ ಕೊಂಡಿ ಜೋಡಿಸುತ್ತ ಸಾಗುವ ಮೆಗಾ ಧಾರಾವಾಹಿಯ (ಅ)ಕ್ರಮ ಯಕ್ಷಗಾನದ ಧಾರಾವಾಹಿಗೂ ಆಗದ ಮಾತು. ಕಾರಣ ಅದು ಕೇವಲ ಕಥಾ ಪ್ರವಾಹದ ವಾಹಕ ಮಾತ್ರ ಅಲ್ಲ. ತನ್ನ ನಾಲ್ಕೂ ಅಂಗಗಳಲ್ಲಿ ಅನೇಕ ಕಲಾತ್ಮಕ ಸೂಕ್ಷ್ಮಗಳನ್ನು ಹೊಂದಿರುವ ವಿವಿಧ ಪರಿಕರಗಳ ಸಮುಚ್ಚಯ ಅದು. ಧಾರಾವಾಹಿಯಲ್ಲದ ಒಂದು ನಿಶ್ಚಿತ ಅವಧಿಯ ಕಿರು ಪ್ರದರ್ಶನದ ಸಂದರ್ಭದಲ್ಲಂತೂ ಈ ಸೂಕ್ಷ್ಮಗಳ ಆಯ್ಕೆ ಮತ್ತು ಸಂಯೋಜನೆ ಇನ್ನಷ್ಟು ಜಟಿಲ. ಎಲ್ಲ ಕುಣಿತ-ದಿಗಿಣ- ಸಂಭಾಷಣೆ-ರಂಗ ನಡೆಯನ್ನು ಒಂದು ಕಿರು ಪ್ರದರ್ಶನದಲ್ಲಿ ಹುದುಗಿಸ ಹೊರಟರೆ ಮೂಗಿಗಿಂತ ಮೂಗುತಿ ಭಾರವಾದಂತಾದೀತು. ಟಿ.ವಿ. ಯಕ್ಷಗಾನದ ಒಂದು ಕಿರು ಪ್ರದರ್ಶನ ಆ ಅಳತೆಯಲ್ಲಿ ಮಾಧ್ಯಮದ ಕಲಾ ವೈಶಿಷ್ಟ್ಯವನ್ನೂ ರಸಸ್ಥಾಪನೆಯನ್ನೂ ಸಾಧಿಸಲು ರಂಗಕೃತಿಯ ರೂಪುರೇಷೆ ಸಿದ್ಧತೆಯಲ್ಲೇ ನಿರ್ದೇಶಕ ಸ್ಪಷ್ಟ ಚಿತ್ರಣವನ್ನು ತನ್ನಲ್ಲಿ ಖಾತ್ರಿ ಮಾಡಿಕೊಳ್ಳಬೇಕಾಗುತ್ತದೆ.

ಹೇಗೆ? ರಂಗಕೃತಿಯ ನಿರ್ಮಾಣ ಈ ಕೆಲವು ಪ್ರಶ್ನೆಗಳಿಗೆ ನಿರ್ದೇಶಕ ಕಂಡುಕೊಳ್ಳುವ ಉತ್ತರಗಳ ಮೂಲಕ ತನ್ನ ನಿಶ್ಚಿತ ಸ್ವರೂಪವನ್ನು ಪಡೆಯುತ್ತದೆ. ಪ್ರಸಂಗದ ಯಾವೆಲ್ಲ ಪದ್ಯಗಳನ್ನು

ಆಯ್ದುಕೊಳ್ಳಬೇಕು? ಪೂರ್ಣ ಕಥಾ ಭಾಗವನ್ನೊಳಗೊಳ್ಳಬೇಕೆ ಯಾ ಒಂದು ಕಥೆಯ ಒಂದೆರಡು ರಸಘಟ್ಟಗಳಿಗೆ ಪ್ರದರ್ಶನ ಮಿತಗೊಳ್ಳಬೇಕೆ? ರಾಮಾಯಣ-ಮಹಾಭಾರತದ ಆಖ್ಯಾನಗಳಿಗೇ ಹೆಚ್ಚು ಪ್ರಾಶಸ್ತ್ಯ ಕೊಡುವ ಯಕ್ಷಗಾನದ ಆ ವಸ್ತುಗಳನ್ನು ನಿರ್ದೇಶಕ ಆಧರಿಸುತ್ತಾನೆಂದಾದಲ್ಲಿ ತಾನು ಆಯ್ದ ಪ್ರಸಂಗವನ್ನು ಕಲಾಸೃಷ್ಟಿಯ ನೆಲೆಯಲ್ಲಿ ಹೇಗೆ ರೂಪಿಸಬೇಕು? ಯಾವೆಲ್ಲ ಯಕ್ಷಗಾನ ಪರಿಕರ ತಂತ್ರಗಳನ್ನು ಬಳಸಬೇಕು ಮತ್ತು ಹೇಗೆ, ಯಾವ ಅಳತೆಯಲ್ಲಿ? ಇದಕ್ಕನುಸಾರವಾಗಿ ಆಶು ಸಂಭಾಷಣೆಯೇ ಒಂದು ವೈಶಿಷ್ಟವಾಗಿರುವ ಈ ಮಾಧ್ಯಮದ ಪ್ರದರ್ಶನಕ್ಕಾಗಿ ಪಾತ್ರಧಾರಿಗಳಿಗೆ ಎಂಥ ಸೂಚನೆ ಸುಳಿವುಗಳನ್ನು ನೀಡಬೇಕು? ಭಾಗವತಿಕೆ-ವಾದನ ಪರಿಣಾಮಗಳನ್ನು ಹೇಗೆ ಪೂರಕ ಹಿನ್ನೆಲೆಯನ್ನಾಗಿಸುವುದು? ವೇಷಭೂಷಣ-ರಂಗಚಲನೆಯಲ್ಲಿ ಯಾವ ನಿಶ್ಚಿತ ರೇಖೆಗಳನ್ನು ಮತ್ತು ನಡೆ-ನಿಲುವು-ಭಂಗಿಗಳಲ್ಲಿ ಸ್ಥಾನಕಗಳನ್ನು ಸ್ಥೂಲವಾಗಿ ಹೇಗೆ ಖಚಿತಗೊಳಿಸಬೇಕು? ನಿರ್ದೇಶಕ ಚಿಂತಿಸಿದಷ್ಟೂ ಹೆಚ್ಚುತ್ತ ಹೋಗುವ ಇಂಥ ಪ್ರಶ್ನೆಗಳೇ ರಂಗಕೃತಿ ನಿರ್ಮಾಣಕ್ಕೆ ಮುಖ್ಯ ಆಧಾರ. ಚಾಲ್ತಿಯಲ್ಲಿರುವ ರಂಗ ನಡೆಯನ್ನೆ ಇದ್ದಕ್ಕಿದ್ದ ಹಾಗೆ ಸಮಯಕ್ಕೆ ಹೊಂದಿಸಿ ಕ್ಯಾಮರಾದ ಮುಂದೆ ಅನುಸರಿಸ ಹೊರಟರೆ ಈ ಯಾವ ಪ್ರಶ್ನೆಗಳೂ ಉದ್ಭವಿಸುವುದಿಲ್ಲ. ಪ್ರತ್ಯೇಕ ನಿರ್ದೇಶನದ ಅನಿವಾರ್ಯತೆಯೂ ಒದಗಿಬರುವುದಿಲ್ಲ. ಇಂಥ ರಂಗಕ್ರಿಯೆಗೂ, ಆವರಿಸಿರುವ ತಾಂತ್ರಿಕತೆಗೂ ಪರಸ್ಪರ ಭಾವೈಕ್ಯತೆ ಒದಗದೆ ಹೋದಾಗ ಏನೆಲ್ಲ ಅಭಾಸ, ಅವ್ಯವಸ್ಥೆ, ಅಸಂಗತ ಚಿತ್ರಣಗಳು ನಿರ್ಮಾಣವಾಗುತ್ತವೆಯೋ ಅವನ್ನೆಲ್ಲ ಹೋಗಲಾಡಿಸಲು ಟೀವಿ ಯಕ್ಷಗಾನದ ಬಗೆಗೆ ಪೂರ್ವ ಯೋಜನೆ ಅಗತ್ಯ.

ಅಂಥ ಪೂರ್ವಸಂಕಲ್ಪದ ಸ್ಥೂಲ ರೂಪುರೇಷೆಯನ್ನು ಒಂದು ಮಾದರಿಯಾಗಿ ಲೇಖನದ ಮುಂದಿನ ಭಾಗ ಒಳಗೊಂಡಿದೆ. ಅಂದರೆ ಟಿ.ವಿ. ಯಕ್ಷಗಾನದ ನಿರ್ದೇಶನ ಚೌಕಟ್ಟು ಹೇಗೆ ಸಾಗಬೇಕು, ವಿಸ್ತಾರಗೊಳ್ಳಬೇಕು ಎನ್ನುವುದರ ಬಗೆಗೆ ಒಂದು ಕಿರು ಮಾರ್ಗದರ್ಶಿಕೆಯು ಮೇಲೆ ಪ್ರಸ್ತಾಪಿಸಿದ ಕೆಲವು ಪ್ರಶ್ನೆಗಳ ವಿಶ್ಲೇಷಣೆಯ ಮೂಲಕ ಹೀಗೆ ಸಾಗಿತು-

ಪೂರ್ಣ ಪ್ರಸಂಗದ ಸಂಕ್ಷಿಪ್ತ ಜೋಡಣೆಯಾಗಲಿ ಅಥವಾ ಒಂದು ಭಾವ ಸಂದರ್ಭದ ಬಿಡಿ ಭಾಗವಾಗಲಿ ನಿರ್ದಿಷ್ಟವಾದ ಸಾಂಸ್ಕೃತಿಕ ಆಶಯವನ್ನು ಹೊಂದಿರಲೇಬೇಕು. ಅದು ಪಾತ್ರ ಚಿತ್ರಣವಾಗಬಹುದು ಯಾ ಮೌಲ್ಯಸ್ಥಾಪನೆಯಾಗಬಹುದು ಅಥವಾ ಭಾವ ನಿರ್ಮಾಣವಾಗಬಹುದು. ಚಾಲ್ತಿಯ ವಿಸ್ತೃತ ಯಕ್ಷಗಾನದಲ್ಲಿ ಪ್ರತಿಭಾವಂತ ಕಲಾವಿದರು ಮಾತು ಮತ್ತು ರಂಗಸ್ಥಳದ ತಮ್ಮ ಕಾರ್ಯಾಚರಣೆಯ ಮೂಲಕ ಇದನ್ನೂ ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಅತಿಕಾಯ, ಸುಧನ್ವರಂಥ ಪಾತ್ರಗಳ ಮೂಲಕ ಭಕ್ತಿಸಮರ್ಪಣ ಭಾವ ಪ್ರಕಟಣೆ, ಕೌರವ, ರಾವಣ ಮುಂತಾದ ಪಾತ್ರಗಳ ಮೂಲಕ ಖಳನಾಯಕನಾಗಿಯೂ ಒಂದು ಧೀರೋದಾತ್ತ ಭಾವಸ್ಥಾಪನೆ- ಇತ್ಯಾದಿ. ಇಂಥ ಪ್ರತಿಭಾ ಫಲಿತಾಂಶವನ್ನು ಒಟ್ಟು ರಂಗಕೃತಿಯ ಆಶಯವನ್ನಾಗಿಸಬೇಕಾದುದು ಟಿ.ವಿ. ಯಕ್ಷಗಾನದ ನಿರ್ದೇಶಕನ ಮುಖ್ಯ ಹೊಣೆಗಾರಿಕೆ. ಮಾತು, ಕುಣಿತ ಇತ್ಯಾದಿಗಳನ್ನೆಲ್ಲ ಎಲ್ಲ ಪಾತ್ರಧಾರಿಗಳ ಸ್ವತಂತ್ರ ಭೂಮಿಕೆಗೆ ಬಿಟ್ಟರೆ ಆಶಯದ ಸಮಗ್ರತೆ ಸಾಧ್ಯವಾಗದು. ಒಬ್ಬ ಚಿತ್ರಕಲಾವಿದ ತನ್ನ ಕ್ಯಾನ್‌ವಾಸಿನ ಮೇಲೆ ರೇಖಿಸುವ ಎಲ್ಲ ಸೂಕ್ಷ್ಮ ಚಿತ್ತಾರಗಳು ಒಂದು ಸಮಷ್ಟಿ ಕಲ್ಪನೆಯನ್ನು ಸಾಕಾರಗೊಳಿಸುವಂತೆ ಕ್ಯಾಮರಾದ ಮುಂದೆ ಕಥೆ-ಪಾತ್ರಗಳು ರಂಗಸಂಗತಿಗಳ ಜೋಡಣೆಯಾಗಬೇಕು.

ಬಹು ಮುಖ್ಯ ಅರ್ಥದಲ್ಲಿ ನಿರ್ದೇಶಕ ನಿಗದಿಗೊಳಿಸುವ ರಂಗಕೃತಿಯ ಈ ಆಶಯವೇ ಒಟ್ಟು

ನಿರ್ಮಾಣದ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ರೂಪ ಗುಣ ಆಯಾಮಗಳನ್ನು ನಿರ್ಧರಿಸುತ್ತದೆ. ರಂಗ ಪರಿಕರಗಳ ನಡೆಯನ್ನು ವಿನ್ಯಾಸಗೊಳಿಸುತ್ತದೆ. ಮಾತಿನ ತಿರುಳನ್ನು, ಗತಿಯನ್ನು, ನಡುವಿನ ಮೌನವನ್ನು ಸೂಚಿಸುತ್ತದೆ. ಭಕ್ತಿ ಪ್ರತಿಪಾದನೆಯಾದರೆ ಒಂದು ತೆರ, ವೈರತ್ವ ಮುಖ್ಯವಾದರೆ ಇನ್ನೊಂದು ರಭಸ. ಶೃಂಗಾರ, ಅನುರಾಗ, ಆನಂದಗಳೇ ಮುಖ್ಯವೆನಿಸಿದರೆ ಮತ್ತೊಂದು ಓಟ ಹೀಗೆ. ಪೌರಾಣಿಕ ಸತ್ವವನ್ನು ಆಧುನಿಕಗೊಳಿಸುವ ಪ್ರಯತ್ನವಾದರೆ ಇನ್ನಷ್ಟು ಪೂರ್ವ ಕಲ್ಪನೆ ಅಗತ್ಯ. ಚಾಲ್ತಿಯ ನಡೆಯನ್ನು ಇನ್ನಷ್ಟು ಶಿಸ್ತಿಗೆ ಒಳಪಡಿಸಿ ಕಲಾವಿದರ ವಾಕ್-ಭಾವ ಮನೋಧರ್ಮದ ಸ್ವಾತಂತ್ರ್ಯವನ್ನು ಹಿತವಾಗಿ ನಿಯಂತ್ರಿಸಿ, ಒಟ್ಟು ಸ್ವರೂಪದ ಕುರಿತಾದ ತನ್ನ ಕಲ್ಪನೆಯನ್ನು ಕಲಾತ್ಮಕವಾಗಿಸಲು ಯಕ್ಷಗಾನ ರಂಗಭೂಮಿಯ ವೈಶಿಷ್ಟ್ಯಗಳನ್ನೆ ಪೋಣಿಸಿದರೆ ಮಾತ್ರ ನಿರ್ದೇಶಕ ಸೃಜಿಸಹೊರಟ ಆಶಯ ಈಡೇರುತ್ತದೆ! ಒಂದೇ ವಸ್ತುವನ್ನು ಯಾ ಕಥಾ ಸಂದರ್ಭವನ್ನು ಭಿನ್ನವಾಗಿ ಚಿತ್ರಿಸಲೂ ಈ ಆಶಯ ಆಧಾರ. ಉದಾಹರಣೆಗೆ ಅಭಿಮನ್ಯುವಿನ ಕಥಾಭಾಗ ರಾಜಕೀಯ ತಂತ್ರದ ಮಜಲನ್ನೇ ಮುಖ್ಯವಾಗಿಸಬಹುದು, ಎಳೆಯನ ಶೌರ್ಯವೇ ಪ್ರಧಾನವಾಗಬಹುದು ಅಥವಾ ತಾಯಿ ಮಗನ ಭಾವ ಪ್ರಕಟಣೆಯಲ್ಲಿ ಕೇಂದ್ರೀಕೃತಗೊಳ್ಳಬಹುದು. ಹೀಗೆ ಭಿನ್ನ ಆಶಯಗಳನ್ನು ಯೋಚಿಸುವುದೆಂದರೆ, ಕೇವಲ ಘಟನೆಗಳ ಜೋಡಣೆ ಮಾತ್ರವಲ್ಲವೇ ಎಂಬ ಪ್ರಶ್ನೆ ಕಾಡಬಹುದು. ಹಾಗಲ್ಲ. ಯಕ್ಷಗಾನ ರಂಗಭೂಮಿಯ ಯಾವತ್ತು ಪರಿಕರಗಳನ್ನು ದುಡಿಸಿಕೊಳ್ಳುವ ಧಾಟಿಯೇ ಈ ಆಶಯಗಳಿಗನುಗುಣವಾಗಿ ವ್ಯತ್ಯಾಸಗೊಳ್ಳುತ್ತದೆ. ಒಂದು ಆಶಯಕ್ಕೆ ಒಡ್ಡೋಲಗದ ವಿಸ್ತೃತ ಬಳಕೆಯೇ ಅದು ಬಯಸುವ ಏರಿಕೆಯ ಆವರಣವನ್ನು ಕೊಟ್ಟರೆ ಇನ್ನೊಂದು ಆಶಯಕ್ಕೆ ಅದೇ ಒಡ್ಡೋಲಗದ ಭಿನ್ನ ಗತಿ ಅದು ಬಯಸುವ ಭಿನ್ನ ಧ್ವನಿಯನ್ನು ನೀಡುವುದು ಸಾಧ್ಯ. ಮಾತು, ಕುಣಿತ, ಹಾಡುಗಾರಿಕೆಯಲ್ಲೂ ಸೂಕ್ತ ವ್ಯತ್ಯಯ ಬೇರೆ ಬೇರೆ ಪರಿಣಾಮ ಬೀರಬಲ್ಲುದು. ಇರುವ ಅದೇ ಅಭಿಮನ್ಯು ಪ್ರಸಂಗದ ಪದ್ಯಗಳ ಸಂಯೋಜನೆಯಲ್ಲೇ ಯಕ್ಷಗಾನದ ಪರಿಕರಗಳ ಬಳಕೆಯ ಮೂಲಕ ಭಿನ್ನ ದೃಷ್ಟಿಕೋನ ಹೊಂದುವುದು ಸಾಧ್ಯ.

ಇಷ್ಟನ್ನು ಕರಾರುವಾಕ್ಕಾಗಿ ನಿರ್ಧರಿಸಿ ಅದಕ್ಕೆ ತಕ್ಕಂತೆ ಪ್ರಸಂಗ ಪದ್ಯಗಳನ್ನು ಆಯ್ದ ಮೇಲೆ ಟಿ.ವಿ. ಯಕ್ಷಗಾನಕ್ಕಾಗಿ ನಿರ್ದೇಶಕ ತನ್ನ ಅನುಭವದ ಬಲದಿಂದ ಪ್ರದರ್ಶನದ ಪ್ರತಿಯೊಂದು ಹೆಜ್ಜೆಯನ್ನೂ ಅಷ್ಟೇ ಕರಾರುವಾಕ್ಕಾಗಿ ನಿರ್ಧರಿಸಬೇಕು. ಸೂಕ್ತ ತಾಲೀಮನ್ನು ನಡೆಸಬೇಕು. (ಕೇವಲ ಆಶಯದ ಹಂತದಲ್ಲೆ ನಿಂತರೆ ಟಿ.ವಿ. ಯಕ್ಷಗಾನ ಹೊಸತೇನನ್ನೂ ಸಾಧಿಸಲಾರದು. ಆಶಯದ ನಿರ್ಧಾರ ನಿರ್ದೇಶಕನ ನೆಲೆಯಲ್ಲಾಗಲಿ ಯಾ ಮುಖ್ಯಪಾತ್ರಧಾರಿಗಳ ನೆಲೆಯಲ್ಲಾಗಲಿ ಚಾಲ್ತಿಯ ಪ್ರದರ್ಶನದಲ್ಲೂ ನಡೆಯುತ್ತದೆ). ಅಂದರೆ ಪ್ರತಿಯೊಂದು ಹೆಜ್ಜೆಯನ್ನೂ ಖಚಿತವಾಗಿ ಲಿಖಿತಗೊಳಿಸಬೇಕು. ಪೂರ್ಣ ಪ್ರಮಾಣದ ರಂಗಪಠ್ಯ (ಸ್ಕ್ರಿಪ್ಟ್)ದ ರಚನೆಯಾಗಬೇಕು.

ಪ್ರತ್ಯೇಕವಾಗಿ ರಚಿಸುವ ಈ ರಂಗಪಠ್ಯ ನಿರ್ದೇಶಕನ ಆಶಯಕ್ಕೆ ಮುಖವಾಣಿ. ಏಕಕಾಲದಲ್ಲಿ ಆಶಯದ ಅಂತರ್ಯವನ್ನೂ, ಅದು ಸಾಗಬೇಕಾದ ಪರಿಯನ್ನೂ ನಿಶ್ಚಯಿಸುವ ವಿವರಣಾತ್ಮಕ ಮಾರ್ಗಸೂಚಿ. ಪ್ರಸಂಗದ ಪದ್ಯಗಳೇ ಆದರೂ ಅವುಗಳ ಆಯ್ಕೆಯಲ್ಲಿ, ಅನುಕ್ರಣಿಕೆಯಲ್ಲಿ, ಆವರ್ತದಲ್ಲಿ, ಅರ್ಥಗಾರಿಕೆಯ ಇತಿಮಿತಿಯಲ್ಲಿ ಮತ್ತು ರಂಗನಡಾವಳಿಯಲ್ಲಿ ಆಶಯಕ್ಕನುಗುಣವಾಗಿ ಏನೆಲ್ಲ ವ್ಯತ್ಯಾಸಗಳಾಗಬೇಕೋ ಅವುಗಳನ್ನು ಸೂಚಿಸುವ ಮಾರ್ಗದರ್ಶಕ ಈ ಪಠ್ಯ. ನಡೆಯಲ್ಲಿರುವ ಒಂದು ಪದ್ಯ ಇದ್ದಲ್ಲಿ ಸೇರದೇ ಹೋಗಬಹುದು. ಪದ್ಯದ ಒಂದು ಭಾಗ ಮಾತ್ರ ಅಲ್ಲಲ್ಲಿ ಆವರ್ತನಗೊಳ್ಳ [illegible] ಮುಂದಾಗಬಹುದು. ಅರ್ಥಗಾರಿಕೆಯ ವಸ್ತುವಿನಲ್ಲಿ,

ಪ್ಯಾಕ್ಟ್‌ಯಲ್ಲಿ, ಪರಿಕಿತದಲ್ಲಿ ನಡೆಗಿಂತ ಭಿನ್ನತೆ ಸೂಚಿತವಾಗಬಹುದು. ನಡೆಯಲ್ಲಿರುವ ಮುಖ್ಯವಲ್ಲದ ಪಾತ್ರಗಳು ಮುಖ್ಯವಾಗಬಹುದು. ಕೆಲವು ಪಾತ್ರಗಳು ಸೇರಿಕೊಳ್ಳಬಹುದು ಮತ್ತು ಈ ಎಲ್ಲ ವ್ಯತ್ಯಾಸಗಳಿಗನುಗುಣವಾಗಿ ರಂಗಸ್ಥಳದ ಕುಣಿತ, ಅಭಿನಯ ಇತ್ಯಾದಿಗಳೆಲ್ಲ ನಡೆಗಿಂತ ಭಿನ್ನ ಸೂಚನೆಗಳನ್ನು ಪಡೆಯಬಹುದು. ಒಡ್ಡೋಲಗ, ಪ್ರಯಾಣ ಕುಣಿತ, ಯುದ್ಧನೃತ್ಯ ಹಾಗೂ ಇನ್ನಿತರ ವಸ್ತು ಶಿಸ್ತುಗಳೆಲ್ಲ ಭಿನ್ನ ರೀತಿಯಲ್ಲಿ ಸಾಗಬಹುದು. ಅಂದರೆ ಈ ಎಲ್ಲದರ ಅರ್ಥ ಎಲ್ಲವನ್ನೂ ಬದಲಿಸುವುದೇ ಒಂದು ಮಹತ್ ಸಾಧನೆ ಎಂದಲ್ಲ, ಬದಲಾವಣೆಯೇ ಒಂದು ಅನಿವಾರ್ಯ ಎಂದಲ್ಲ, ವ್ಯತ್ಯಾಸಗಳೇ ಇಲ್ಲಿ ಮುಖ್ಯ ಅಲ್ಲ. ಚಿಕ್ಕ ಚೊಕ್ಕ ಸಮಗ್ರ ಕಲಾಸೃಷ್ಟಿ, ಮೇಳ ಪ್ರಾಪ್ತಿ ಇಲ್ಲಿ ಮುಖ್ಯ.

ಇಂಥ ವಿಸ್ತೃತ ರಂಗಪಠ್ಯದ ಸಾಧನೆಗಳು ಅನೇಕ. ಔಚಿತ್ಯವೇ ಅದರ ಮುಖ್ಯ ಸಾಧನೆ. ವ್ಯತ್ಯಾಸಗಳನ್ನು ಸೂಚಿಸಲಿ ಯಾ ಸೂಚಿಸದೆ ನಡೆಯನ್ನೆ ಪರಿಪಾಲಿಸಲಿ, ಹೆಜ್ಜೆ ಹೆಜ್ಜೆಗೆ ಸಾಗುವ ರಂಗಕ್ರಿಯೆ ಏಕೆ ಹೇಗೆ ಎಂಬುದನ್ನು ಅದು ಸ್ಪಷ್ಟಪಡಿಸುತ್ತದೆ. ಅನಗತ್ಯ ಲಂಬನವನ್ನೋ ಅಥವಾ ಸಂಕೋಚವನ್ನೋ ಅದು ಹೋಗಲಾಡಿಸುತ್ತದೆ. ಅಸ್ತವ್ಯಸ್ತ ಅವಸರವನ್ನು ಹದಕ್ಕೆ ತರುತ್ತದೆ. ಪ್ರತಿಯೊಂದು ಪಾತ್ರದ ಆಗಮನ ನಿರ್ಗಮನ ಚಲನೆ ನಿಲುವು ನಿಲುಗಡೆಗಳನ್ನು ವ್ಯವಸ್ಥಿತಗೊಳಿಸುತ್ತದೆ. ಪಾತ್ರ ಪಾತ್ರಗಳ ನಡುವಿನ ಭಾವ ಸಂಬಂಧವನ್ನು ಸಾಕಾರಗೊಳಿಸುತ್ತದೆ. ಒಟ್ಟಿನಲ್ಲಿ ಟಿ.ವಿ. ಪರದೆಯ ಮೇಲೆ ಕಥಾನಕದ ಅಂತಃಸತ್ತ್ವಕ್ಕನುಗುಣವಾಗಿ ಪಾತ್ರಗಳು, ಘಟನೆಗಳು ಮತ್ತು ರಂಗ ಸಂಗತಿಗಳು ಗಲಿಬಿಲಿಗೊಳ್ಳದೆ ಅನುಭವದ ವಾಹಕಗಳಾಗುವಂತೆ, ರಸಸೃಷ್ಟಿಗೆ ಪೂರಕವಾಗುವಂತೆ ಮತ್ತು ಕ್ಯಾಮರಾದ ಪ್ರತಿಬಿಂಬದಲ್ಲಿ ಅಚ್ಚುಕಟ್ಟಾಗಿ ಒಂದು ಕೆತ್ತನೆಯ ಕಟ್ಟೋಣಕ್ಕೆ ಒಳಗಾಗುವಂತೆ ಈ ರಂಗಪಠ್ಯ ಆಧಾರಿತ ನಿರ್ದೇಶನ ನೋಡಿಕೊಳ್ಳುತ್ತದೆ. ಸದ್ಯ ಚಾಲ್ತಿಯ ಯಕ್ಷಗಾನದ ರಂಗ ನಡೆಯಲ್ಲಿರುವ ಸಂಗತಿಗಳು ಅವುಗಳಿಗೆ ಒಗ್ಗಿದ ಯಕ್ಷಗಾನ ಉಸಿರಾದ ನಮಗೆ ಸಹ್ಯವಾದರೂ ಒಗ್ಗಿದರೂ ಬಾಹ್ಯ ಮಾಧ್ಯಮದ ಮೂಸೆಗೆ ಹೊಂದುವುದಿಲ್ಲ ಎಂಬ ಅನಿಸಿಕೆಯಿಂದ ನನ್ನೀ ಚಿಂತನೆ ಸಾಗಿದೆ.

ಈ ರೀತಿಯ ಮುನ್ನೋಟವಿಲ್ಲದಿದ್ದರೆ ಕ್ಯಾಮರಾದ ಮೂಲಕ ಸಾಗುವ ಕಲಾರಚನೆ, ವಿವಿಧ ನೆಲೆಗಳಲ್ಲಿ- ಹಿಮ್ಮೇಳ ಮುಮ್ಮೇಳದ ಸಂಬಂಧ, ಒಡ್ಡೋಲಗ ಇತ್ಯಾದಿ ಪರಿಕರಗಳ ಬಳಕೆ, ವೇಷಭೂಷಣ, ಸಂಭಾಷಣೆ, ಪಾತ್ರಗಳ ರಂಗಸ್ಥಾನ- ಇತ್ಯಾದಿ ನೆಲೆಗಳಲ್ಲಿ ಅವ್ಯವಸ್ಥೆಗೆ ಒಳಗಾಗುತ್ತದೆ ಎಂಬುದನ್ನು ಇಂದಿನ ಅನೇಕ ಪ್ರಯತ್ನಗಳಲ್ಲಿ ನಾವು ಗಮನಿಸಬಹುದು. ದೋಷಾರೋಪಣೆ ಇಲ್ಲಿ ಉದ್ದೇಶವಲ್ಲ. ವಿವೇಚನೆಯ ಮೂಲಕ ಸೂಕ್ತ ನೆಲೆಯ ಶೋಧನೆ ಇಲ್ಲಿ ಮುಖ್ಯ ಕಾಳಜಿ. ಕ್ಯಾಮರದ ಎದುರು ನಡೆಯುವ ಇಂಥ ಪ್ರಯತ್ನಗಳು ಎತ್ತುವ ಕೆಲವು ಪ್ರಶ್ನೆಗಳಿಗೆ ಪರಿಹಾರ ಅರಸುವುದು ಇಲ್ಲಿನ ಉದ್ದೇಶ. ಯೋಚಿಸಿ ಅದ್ಭುತ ಪಾತ್ರ ಕಟ್ಟೋಣ ಹೊಂದಿರುವ ಯಕ್ಷಗಾನ ವೇಷಗಳನ್ನು ಕುಗ್ಗಿಸುವಂತೆ ಹಿಮ್ಮೇಳ ಅನಗತ್ಯ ಎತ್ತರದ ಸ್ಥಾನವನ್ನು ಹೊಂದಬೇಕೆ? ಯಾವ ಯಾವ ಸಂದರ್ಭದಲ್ಲಿ ಹಿಮ್ಮೇಳದವರು ಕಾಣಿಸಿಕೊಳ್ಳಬೇಕು? ಎದುರಿರುವ ಒಂದು ಪ್ರಮುಖ ಪಾತ್ರ, ತೀಕ್ಷ್ಣ ಭಾವ ಸಂದರ್ಭವನ್ನು ಅಭಿವ್ಯಕ್ತಿಸುವಾಗ ಒಮ್ಮೆಂದೊಮ್ಮೆಯೆ ಭಾಗವತರ ಮುಖ ಮೂಡಿಬಂದರೆ ಏನನ್ನು ಸಾಧಿಸಿದಂತಾಗುತ್ತದೆ? ವಿಶಿಷ್ಟ ಚಾಲು ಕುಣಿತದ ಹೆಜ್ಜೆಗಾರಿಕೆ, ಅದಕ್ಕೆ ತಕ್ಕ ಪೂರ್ಣ ಪ್ರಮಾಣದ ವೇಷದ ರಂಗಚಲನೆ, ಆಂಗಿಕಾಭಿನಯ, ಇವುಗಳನ್ನೆಲ್ಲ ಕಲಾತ್ಮಕವಾಗಿ ದರ್ಪಣದ ಮೂಲಕ ಪ್ರತಿಬಿಂಬಿಸಬೇಕಾದ ಕ್ಷಣದಲ್ಲಿ ಚಂಡೆಯ ಕೋಲುಗಳ ಚಲನೆ ಮಾತ್ರ ಮೂಡಿಬಂದರೆ ಯಕ್ಷಗಾನದ ಒಂದು ರಂಗವೈಭವವೇ ಕಳೆದುಹೋದಂತಾಗುವುದಿಲ್ಲವೇ? ಒಂದು ಪಾತ್ರದ ಪದ್ಯ ಸಾಗುತ್ತ ಆ ಪಾತ್ರಧಾರಿ ಅದನ್ನು ಅಭಿನಯಿಸುತ್ತಿರುವ ಸಮಯ ಆತ ಮರೆಯಾಗಿ ಸಹಪಾತ್ರಧಾರಿಯ ಸಮೀಪ

ವರ್ತನ ಯಾ ತುಂಡು ದರ್ಶನವಾದರೆ ಪಾತ್ರಶಿಲ್ಪ ಸಾಧ್ಯವೇ? ಪಾತ್ರಧಾರಿಯ ನಿರ್ಗಮನ ಯಾವುದೋ ಮೂಲೆಗೆ ಸಾಗಿ, ಆಗಮನವು ಪದ್ಯದ ನಿಶ್ಚಿತ ಧಾತುವಿಗಾಗದೆ- ಹೀಗೆ ರಂಗಸ್ಥಳದ ಆಯತಪ್ಪಿಸಿ ಪಾತ್ರಗಳ ಚಲನೆಗಳು ದರ್ಪಣದ ಮೂಲಕ ಮೂಡಿಬಂದರೆ ಸಂತೆ ವ್ಯಾಪಾರದ ಚಿತ್ರೀಕರಣದಂತಾಗದೇ? ಇವೆಲ್ಲ ತೀರ ಸಾಮಾನ್ಯ ತಾಂತ್ರಿಕ ಅಸಂಗತಿಗಳು. ಈ ಸಾಮಾನ್ಯ ಅಸಂಬದ್ಧತೆಗಳನ್ನು ಸಾಕಷ್ಟು ಮುಂಚಿತವಾಗಿ ಚಿಂತಿಸಿದರೆ ಅಥವಾ ಊಹಿಸಿದರೆ ಮಾತ್ರ ರಂಗಪಠ್ಯವನ್ನು ಸಶಕ್ತ ಮಾರ್ಗಸೂಚಿಯಾಗಿಸುವುದು ಸಾಧ್ಯ.

ಇಂಥ ರಂಗಪಠ್ಯ ಚಿತ್ರೀಕರಣಕ್ಕೆ ಅನುಕೂಲವಾಗುವಂತೆ ಆಯ್ದ ಯಕ್ಷಗಾನ ಪ್ರದರ್ಶನವನ್ನು ಸಿದ್ಧಗೊಳಿಸುತ್ತದೆ. ಉದಾಹರಣೆಗೆ-ಕಥಾ ಪ್ರಾರಂಭವನ್ನು ಸೂಕ್ತ ರಂಗದಲ್ಲಿ ಭಾಗವತರು, ಘೋಷಿಸುವಾಗ ಪೂರ್ಣ ಹಿಮ್ಮೇಳ ಟಿ.ವಿ. ತೆರೆಯ ಮೇಲೆ ಕಾಣಿಸಿಕೊಂಡು ಆಲಾಪನೆಯ ಮುಕ್ತಾಯಕ್ಕೆ ಚಂಡೆಯ ಅಬ್ಬರ ಸಾಗುವಂತೆ ಸಮವಸ್ತ್ರದ ತೆರೆಯವರು ಲಯಬದ್ಧವಾಗಿ ರಂಗಸ್ಥಳದ ತೆರೆಯನ್ನು ಜಿಡಿಸುತ್ತ ಬಂದಂತೆ ಈ ತೆರೆಯ ಹಿಂದೆ ಒಡ್ಡೋಲಗದ ಪಾತ್ರಧಾರಿಗಳು ಲಯಬದ್ಧ ಹೆಜ್ಜೆ ಇರಿಸಿ ಪ್ರವೇಶಿಸುತ್ತಿರುವಾಗ ಕ್ಯಾಮರಾ ನೋಟ ರಂಗಸ್ಥಳ ತೆರೆಯ ಮೇಲಿನಿಂದ ನಿಧಾನವಾಗಿ ಕೆಳಗಿನ ಪಾದಗಳೆಡೆಗೆ ಸಾಗಿ ಮುಂದೆ ಒಡ್ಡೋಲಗದ ನುಡಿತಕ್ಕೆ ತಕ್ಕಂತೆ ಪಾತ್ರಧಾರಿಗಳ ಶರೀರ ವಿನ್ಯಾಸಗಳೆಡೆಗೆ ಕೇಂದ್ರೀಕೃತಗೊಳ್ಳಬೇಕು-ಎನ್ನುವಂಥ ಹಂತ ಹಂತದ ಕಲ್ಪನಾತ್ಮಕ ಸೂಚನೆಗಳನ್ನು ರಂಗಪಠ್ಯ ಒಳಗೊಳ್ಳಬೇಕಾಗುತ್ತದೆ. ಪದ್ಯದ ಅಳತೆ, ಹೊಂದಿಸಬೇಕಾದ ನೃತ್ಯ, ಕುಣಿಯುವ ಪಾತ್ರಧಾಯನ್ನು ಯಾವ ಚಾಲು ಕುಣಿತದ ಘಟ್ಟದಲ್ಲಿ ಪೂರ್ಣವಾಗಿ ತೋರಿಸಬೇಕು, ಎಲ್ಲಿ ಭಾಗಶಃ ಚಿತ್ರೀಕರಣಗೊಳ್ಳಬೇಕು, ಆ ಸಂದರ್ಭದ ಇನ್ನುಳಿದ ಪಾತ್ರಗಳು ಯಾವ ಅಂತರದಲ್ಲಿ ಯಾವ ಭಂಗಿಯಲ್ಲಿ ನಿಂತು ಎಂಥ ಭಾವ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು, ಹೀಗೆ ಅನೇಕ ಪಾತ್ರಗಳು ಜೊತೆಯಾಗಿರುವಾಗ ಪದ್ಯದ ಯಾವ ಮಿಡಿತಕ್ಕೆ ಸಹ ಪಾತ್ರಧಾರಿಯ ಮುಖಭಾವವನ್ನು ಬಿಂಬಿಸಬೇಕು ಎಂಬಿತ್ಯಾದಿ ಪ್ರತಿಯೊಂದು ಸೂಕ್ಷ್ಮವನ್ನೂ ನಿರ್ದೇಶಕ ತಾನಿರಿಸಿಕೊಂಡ ಮೂಲ ಆಶಯಕ್ಕನುಗುಣವಾ।। ನಿರ್ಧರಿಸಿ ಅದರಂತೆ ತಂಡದ ಅಭ್ಯಾಸ ನಡೆಸಬೇಕು. ಆಶು ಸಂಭಾಷಣೆಯೇ ಯಕ್ಷಗಾನದ ಜೀವಾಳವಾದರೂ ಬಿಂಬದೃಶ್ಯ ಮಾಧ್ಯಮದ ಚೌಕಟ್ಟಿಗೆ ಮಾತುಗಳ ರಭಸ ನಿಲುಗಡೆ, ನಡುನಡುವೆ ಮೌನ, ಅದಕ್ಕೆ ತಕ್ಕ ಮುಖಭಾವ ಮತ್ತು ಆಂಗಿಕ ನಿಲುವು ಹಾಗೂ ಸಹಪಾತ್ರಧಾರಿಯ ರಂಗಲೇಖ ಕೆಡದ ಪ್ರತಿಕ್ರಿಯಾತ್ಮಕ ನಿಲುವು ಎಲ್ಲವೂ ನಿರ್ದೇಶಕನ ಕಲ್ಪನೆಯಲ್ಲಿ ಖಚಿತಗೊಂಡು ರಂಗಪಠ್ಯ ನಿರ್ಮಾಣವಾದರೆ ಚಿತ್ರೀಕರಣದ ನಡೆ ಖಚಿತಗೊಳ್ಳುವುದು ಸಾಧ್ಯ. ಯಾರದೋ ಪದ್ಯ ಬರುವಾಗ ಆ ಪಾತ್ರಧಾರಿ ಆ ಪದ್ಯಕ್ಕೆ ಸೂಕ್ತವಾಗಿ ಕುಣಿದು ಅಭಿನಯಿಸುವಾಗ ಭಿನ್ನಗೊಳ್ಳದೆ ಆ ಅಭಿನಯದ ಪರಿಣಾಮವನ್ನು ಸೆರೆಹಿಡಿಯಬೇಕಾದರೆ ಇಂಥ ಪೂರ್ವ ಸಿದ್ಧತೆ ಖಂಡಿತ ಅಗತ್ಯ. ಒಟ್ಟಾರೆಯಾಗಿ ವೇಷಗಳು ಕಾಣುತ್ತ ಹೋಗುವುದು, ನೃತ್ಯದ ವೈಶಿಷ್ಟ್ಯ ಕಾಣದೆ ಹೋಗುವುದು, ಭಾವಾಭಿನಯವೇನೂ ಇಲ್ಲದ ಪೂರ್ಣಮುಖ ಕಾಣಿಸಿಕೊಳ್ಳುವುದು, ಅರ್ಧ ವೇಷ ಅಂಚಿನಲ್ಲಿ ಕಾಣಿಸಿಕೊಳ್ಳುವುದು, ಅರ್ಧ ಕೇಗದೆ ಮುಂದಲೆಯೇ ಮುಂಡಾಸೋ, ಕೈಕಟ್ಟೋ ಅರ್ಥಶೂನ್ಯವಾಗಿ ಕಾಣಿಸಿಕೊಳ್ಳುವುದು, ಮಾತನಾಡುವ ಪಾತ್ರಧಾರಿಯ ಮಾತು ಮಾತ್ರ ಕೇಳಿಸುತ್ತ ಅನಗತ್ಯ ಸಹಪಾತ್ರ ಮುಖ್ಯವಾಗಿ ಕಾಣಿಸಿಕೊಳ್ಳುವುದು, ಹೀಗೆ ಅಸಂಖ್ಯ ಅವ್ಯವಸ್ಥೆಗಳನ್ನು ಹೋಗಲಾಡಿಸಲು ಪ್ರತಿಯೊಂದು ಸೂಕ್ಷ್ಮಗಳ ಬಗೆಗೆ ರಂಗಪಠ್ಯ ವಿವರಗಳನ್ನು ಒಳಗೊಂಡಿರಬೇಕು. ತಾಂತ್ರಿಕ ಪರಿಣತರಿಂದ ಇಂಥ ವಿವರಗಳ ಸಾಧ್ಯಾಸಾಧ್ಯತೆಗಳ ಬಗೆಗೆ ಪೂರ್ವ ಸಹಚಿಂತನೆ ನಡೆದು, ಅದರಂತೆ ಸಾಕಷ್ಟು ತರಬೇತಿ

ನಡೆದು ಚಿತ್ರೀಕರಣಗೊಂಡಾಗ ಭಿನ್ನ ಮಾಧ್ಯಮದಿಂದ ಹೊಸ ಕಲಾ ಸೃಷ್ಟಿ ಸಾಧ್ಯ.

ತೀರ ಪ್ರಾಥಮಿಕ ರೂಪುರೇಖೆಯನ್ನಷ್ಟೆ ಒಳಗೊಂಡ ಈ ಲೇಖನದ ಮುಖ್ಯ ಉದ್ದೇಶ- ಆಧುನಿಕ ತಂತ್ರಜ್ಞಾನದ ನೆರವಿನಿಂದ ಅದ್ಭುತ ದೃಶ್ಯ ರಂಗವಾದ ಯಕ್ಷಗಾನವನ್ನು ಅದರ ಮೂಲ ಸ್ವರೂಪದಲ್ಲಿ ಇನ್ನಷ್ಟು ಸಹ್ಯ-ಹೃದ್ಯಗೊಳಿಸುವ ಆಶಯದ ಅಭಿವ್ಯಕ್ತಿ ಅಥವಾ ಎರಡು ಮುಖ್ಯ ವಿಚಾರಗಳನ್ನು ಈ ದಿಸೆಯಲ್ಲಿ ಕ್ರಿಯಾಶೀಲರಾದವರು ಗಮನಿಸಿದರೆ ಪರಿಣಾಮ ಭಿನ್ನವಾದೀತು ಎಂಬುದರ ನಮ್ರ ಸೂಚನೆ. ಆ ಎರಡು ವಿಚಾರಗಳು- ಭಿನ್ನ ಮಾಧ್ಯಮ(ಟಿ.ವಿ.)ದ ಮೂಲಕ ಕಥಾಪ್ರಸಂಗ ಅಭಿವ್ಯಕ್ತಿಸಬೇಕಾಗಿದೆ ಎಂಬ ಎಚ್ಚರ ಹಾಗೂ ಸಾಂಪ್ರದಾಯಿಕ ಯಕ್ಷಗಾನದ ಪ್ರೇಕ್ಷಕರಲ್ಲದವರೂ ಕಾಣಬಹುದಾದ ಮಾಧ್ಯಮದ ಮೂಲಕ ಪ್ರದರ್ಶಿಸುತ್ತಿದ್ದೇವೆ ಎಂಬ ತಿಳುವಳಿಕೆ. ವೇಷಧಾರಿಗಳಾದಿಯಾಗಿ ಮೇಳದ ಎಲ್ಲರಲ್ಲೂ ಈ ಎರಡು ವಿಚಾರಗಳು ದೃಢ ಪ್ರಜ್ಞೆಯಾಗಿರಬೇಕಾದುದು ಅತಿ ಅಗತ್ಯ. ಕ್ಯಾಮರಾದ ಕಣ್ಣುಗಳಲ್ಲಿ ತಾನು ನಿಲ್ಲುವ ಭಂಗಿ, ಆಂಗಿಕ ಚಲನೆ, ವೇಷ ವಿನ್ಯಾಸ ಒಂದು ನಿಶ್ಚಿತ ರೇಖೆಯಾಗಿ, ಪಾತ್ರವಾಗಿ ಕಾಣಿಸಿಕೊಳ್ಳಬೇಕೆಂಬ ಕನಸು ಇಲ್ಲಿ ಕೆಲಸ ಮಾಡಲೇಬೇಕು. ತಾನು ಯಾವ ಪಾತ್ರ ವಹಿಸುತ್ತಿದ್ದೇನೆ- ಕರ್ಣನೊ ಇನ್ಯಾರೋ ಎಂಬುದು ನೋಟಕನಿಗೆ ಮೊದಲ ಪ್ರವೇಶದಲ್ಲೆ ಅರಿವಾಗುವಂತೆ ಪಾತ್ರ ನಿರ್ವಹಣೆ ನಡೆಯಬೇಕಾಗುತ್ತದೆ. ಅದ್ಭುತ ವೇಷ ಮತ್ತು ರಂಗಕ್ರಿಯೆಯ ಬಣ್ಣದ (ಹೆಣ್ಣು ಗಂಡು ರಾಕ್ಷಸ ವೇಷ) ವೇಷವೋ, ಕಿರಾತನ ವೇಷವೋ ಯಾ ಇನ್ನುಳಿದ ಆಕರ್ಷಕ ಕಟ್ಟೋಣದ ಯಕ್ಷಗಾನದ ವೇಷಗಳ ಪ್ರವೇಶ, ನಿಲುವು, ವರ್ಣಿಕೆ ಮುಖಾಮುಖಿ, ಸಂಭಾಷಣೆಯ ಖಚಿತತೆ ಮತ್ತು ಭಾವದೃಷ್ಟಿ ಎಲ್ಲವೂ ಖಚಿತವಾಗಿ ರೂಪುಗೊಳ್ಳುವಂತೆ ಒಂದು ತಂಡ ಪೂರ್ವ ಸಿದ್ಧತೆ ನಡೆಸಬೇಕು ಇದನ್ನರಿತು ತಾಂತ್ರಿಕತೆ ಅಪಾರ ಸಾಧ್ಯತೆಗಳನ್ನು ಮೇಳೈಯಿಸುವ ಟಿ.ವಿ. ನಿರ್ವಹಣೆ ನಡೆಯಬೇಕು. ಇಂಥ ಮೇಳ ಸಾಧಿಸಬಹುದಾದ ಟಿ.ವಿ. ಯಕ್ಷಗಾನದ ಕಲಾತ್ಮಕ ಸೊಗಸಿನ ಕನಸೇ ನನ್ನೀ ಲೇಖನದ ಮುಖ್ಯ ತಿರುಳು.

ಯಕ್ಷಗಾನ ಮಾರುಕಟ್ಟೆ: ಒಂದು ಪರಿಶೀಲನೆ

ಡಾ. ಎಂ. ಪ್ರಭಾಕರ ಜೋಶಿ



ಯಕ್ಷಗಾನ ಬಯಲಾಟವೆಂಬ ಜನಶಿಕ್ಷಣ, ಜನರಂಜನೆಗಳ ಒಂದು ಶ್ರೀಮಂತ ಸಾಹಿತ್ಯ ಪ್ರಕಾರವನ್ನು ಕಲೆ, ಸಾಹಿತ್ಯ, ಸಮಾಜ ಶಾಸ್ತ್ರ, ರಾಜನೀತಿ ಮೊದಲಾದ ದೃಷ್ಟಿಗಳಿಂದ ಹೇಗೆ ಅಧ್ಯಯನ ಮಾಡಬಹುದೋ ಹಾಗೆಯೇ ಆರ್ಥಿಕ ದೃಷ್ಟಿಯಿಂದಲೂ ಅಭ್ಯಸಿಸಬಹುದು. ಅಂತಹ ಕೆಲವು ಅಂಶಗಳ ಪರಿಶೀಲನೆ ಈ ಲೇಖನದ ಉದ್ದೇಶ. ಇಲ್ಲಿ ಆರ್ಥಿಕ, ವಾಣಿಜ್ಯ, ಮಾರುಕಟ್ಟೆ ಮೊದಲಾದ ಪದಗಳನ್ನು ಶಾಸ್ತ್ರೀಯವಾಗಿ, ಆಕಡಮಿಕ್ ಆಗಿ ಬಳಸಿದೆ ಹೊರತು, ಪರ–ಯಾ ವಿರೋಧಾರ್ಥ–ಯಾ ನಿಂದಾರ್ಥಕವಾಗಿ ಅಲ್ಲ.

ಯಕ್ಷಗಾನದ ಮಾರುಕಟ್ಟೆ ಅಂದರೇನು? ಅದರ ಸ್ವರೂಪ ಸ್ವಭಾವಗಳೇನು? ಇತಿಹಾಸವೇನು? ಈಗ ಅದರ ಸ್ಥಿತಿ–ಗತಿ ಏನು? ವ್ಯಾವಸಾಯಿಕತೆ, ವೃತ್ತಿಪರತೆಗಳ ಪಾತ್ರ ಪರಿಣಾಮ ಹೇಗೆ? ಇಂದಿನ ಒಟ್ಟು ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶದಲ್ಲಿ ಯಕ್ಷಗಾನದ ಆರ್ಥಿಕ, ವ್ಯಾವಸಾಯಿಕ ಭವಿಷ್ಯವೇನು? ಮೊದಲಾದವುಗಳನ್ನು ಒಂದಿಷ್ಟು ಪರಿಶೀಲಿಸಬಹುದು.

–2–

ಬಯಲಾಟಗಳು ದೇವಾಲಯ ಸೇವಾರ್ಥವಾಗಿ ಆರಂಭವಾಗಿ, ಶತಮಾನಗಳ ಕಾಲ ಹಾಗೆಯೇ ಇದ್ದಾಗಲೂ, ಅಲ್ಲಿ ಅದಕ್ಕೆ 'ಗ್ರಾಹಕ', 'ನೀಡುವವ', 'ಫಲಾನುಭವಿ' (ಬಯರ್,

ಪೀಸ್‌ಲ್ಯಾಂಡ್ ಅಪಾರ್ಟ್‌ಮೆಂಟ್ಸ್, ಕದ್ರಿಕಂಬ್ಳ, ಮಂಗಳೂರು, ದ.ಕ.

ಸೆಲ್ಲರ್, ಕನ್ಸ್ಯೂಮರ್) ಮೊದಲಾದವರು ಇಲ್ಲಿ ಇರುತ್ತಾರೆ. ಒಂದು 'ಕ್ರಯ'ವೂ ಇದೆ. ಆದರೆ ಅದಕ್ಕೆ ವಾಣಿಜ್ಯ ರೂಪದ 'ಬೆಲೆ' ಎಂಬ ಅರ್ಥಕ್ಕಿಂತ, ಗೌರವ ಸಂಭಾವನೆ ಎಂಬ ಅರ್ಥವೇ ಇದ್ದುದು. ಹಾಗಾಗಿಯೇ ಮೇಳಕ್ಕೆ ಕೊಡುತ್ತಿದ್ದ ಮೊತ್ತಕ್ಕೆ 'ವೀಳ್ಯ'ವೆಂದು ಹೆಸರು. ವಸಾಹತು ಕಾಲ ಮತ್ತು ಯುದ್ಧ ಸಂಕ್ರಾಂತಿಗಳ ಬಳಿಕವೂ ಈ ಹೆಸರೂ, ಪದ್ಧತಿಯೂ ಉಳಿದು ಬಂದವು. ಸುಮಾರು 1940ವರೆಗೂ, ನಾವೀಗ ಬೆಳೆಸುವ ಅರ್ಥದ ಮಾರುಕಟ್ಟೆ ವ್ಯವಸ್ಥೆ ಮಾರ್ಕೆಟ್ ಮೆಕ್ಯಾನಿಸಂ ಅಲ್ಲಿ ಇರಲಿಲ್ಲ. 1940ರ ಸುಮಾರಿಗೆ (ಈ ಕಾಲದಲ್ಲಿ ಅಂದರೆ 1925-40ರ ಅವಧಿಯಲ್ಲಿ ಯುದ್ಧಾಂತರಕಾಲ (interwar period) ವಸ್ತುಗಳ ಅಭಾವ; ಕೃಷಿ ಧಾರಣೆಗಳ ಕುಸಿತದ ಪರಿಣಾಮವಾಯಿತು. ಮುಖ್ಯವಾಗಿ ಯಕ್ಷಗಾನದ ಬೆಂಬಲ ನೆಲೆಯಾದ ಅಡಿಕೆ ಬೆಲೆ ಕುಸಿದು ಯಕ್ಷಗಾನಗೊಂಬೆಯಾಟವಂತೂ ವಿನಾಶದಂಚಿಗೆ ತಲುಪಿತು.) ನಮ್ಮ ಎಲ್ಲ ಸಂಸ್ಥೆ, ವ್ಯವಸ್ಥೆಗಳಲ್ಲಿ 'ಪಾಶ್ಚಾತ್ಯ ಆಧುನಿಕತೆ'ಯ ರೂಪವು ಹೆಚ್ಚು ಸ್ಪಷ್ಟವಾಗಿ ಕಾಣಸಿದ್ದು ಸಹಜ. ಆಗ ಯಕ್ಷಗಾನ ಮಾರುಕಟ್ಟೆಯ ರೂಪದ ಆರಂಭವನ್ನು ಗುರುತಿಸಬಹುದು.

1930-40ರ ಅವಧಿಯಲ್ಲಿ ಯಕ್ಷಗಾನ ಮಾರುಕಟ್ಟೆಯ ಉಗಮದ ಸಂಗತಿಗಳೆನ್ನಬಹುದಾದ ಎರಡು-ಮೂರು ಘಟನೆಗಳು ಜರಗಿದವು.

1. ಅಂದಿನ ನಾಟಕ ಕಂಪೆನಿಗಳ ಆದರ್ಶದಲ್ಲಿ, ಪುತ್ತೂರಿನಲ್ಲೂ, (ಬಹುಶಃ ಮಂಗಳೂರಲ್ಲೂ) ಜರುಗಿದ ಯಕ್ಷಗಾನ ನಾಟಕ ಸಭಾ ಪ್ರದರ್ಶನಗಳು. ಇವುಗಳು ಮಡಲು ಮತ್ತು ಬಟ್ಟೆಗಳ ಡೇರೆಯೊಳಗೆ, ಶಾಲೆಗಳ ಪೀಠೋಪಕರಣಗಳನ್ನಿರಿಸಿ, ಟಿಕೇಟು ಪ್ರವೇಶದ ಪ್ರದರ್ಶನಗಳು. ಇದೇ ಸುಮಾರಿಗೆ ಹೊನ್ನಾವರ ಪರಿಸರದಲ್ಲೂ ಬಿಡ್ಡ, ಗುಡಿಸಲು ಡೇರೆಗಳು (ಹಟ್ ಟೆಂಟ್) ಇದ್ದುವು. ಅಲ್ಲಿ ಟೆಂಟು ಹಾಕುವುದು ಮೇಳವಲ್ಲ. ಟೆಂಟು ಹಾಕುವವನೊಬ್ಬ ಸ್ವತಂತ್ರ ವ್ಯಕ್ತಿ, ನೀಡುವುದು. ತಿರುಗಾಟಕ್ಕೆ ಬರುವ ಮೇಳಗಳಿಗೆ ಆ ಟೆಂಟು ಬಾಡಿಗೆಗೆ ನೀಡುವುದು ಅಥವಾ ಆತನೇ ಕಂಟ್ರಾಕ್ಟುದಾರನಾಗಿ ಏರ್ಪಡಿಸುವುದಾಗಿತ್ತು. ಈ ಮೊದಲೇ 1926ರಲ್ಲಿ ಖಾಸಗಿ ಸ್ಥಳವಾದ ಅಡಕೆ ಬಂಡಸಾಲೆ (ವಖಾರಿ)ಯೊಂದರಲ್ಲಿ, ಟಿಕೇಟಿನ ದರವಿದ್ದ ಆಟದ ಪ್ರದರ್ಶನದ ಒಂದು ದಾಖಲೆ ದೊರಕಿದೆ. ಇದನ್ನು ನನಗೆ ಒದಗಿಸಿದವರು ಉ.ಕ. ಅಂಚೆ ಇಲಾಖೆಯ ಉದ್ಯೋಗಿ ಎಸ್.ಎಸ್. ಭಟ್‌ರವರು. ಇದೇ ಈಗ ಲಭ್ಯವಿರುವ ಟಿಕೇಟು ಯಕ್ಷಗಾನದ ಮೊತ್ತ ಮೊದಲ ದಾಖಲೆ.

ಹೀಗೆ ಪ್ರಾರಂಭಗೊಂಡ ಟೆಂಟು ಪದ್ಧತಿಯು ವಿಕಾಸಗೊಂಡು, 1950ರಲ್ಲಿ ಮೇಳವೇ ಸ್ವಂತ ಡೇರೆಯನ್ನು ಹೊಂದಿ, ಸಂಚಾರ ಮಾಡುವ ಕ್ರಮ ಬೆಳಕಿಗೆ ಬಂತು.

2. 1940ಕ್ಕೆ ಪೂರ್ವದಲ್ಲಿ, ಮೇಳದ ಸಂಚಾಲಕತ್ವವನ್ನು ('ಯಜಮಾನ'ವೆಂದು ಯಕ್ಷಗಾನ ಪರಿಭಾಷೆ) ಮೇಳದ ಭಾಗವತ ಅಥವಾ ಕಲಾವಿದರಲ್ಲೊಬ್ಬನು ನಡೆಸುತ್ತಿದ್ದ. ಅವನಿಗೆ ಯಜಮಾನಿಕೆಯ ಗಳಿಕೆ ಎಂಬುದು ಗೌಣ, ಸ್ಥಾನವೇ ಮುಖ್ಯ. ಆತನ ಗಳಿಕೆಗಳು ಎರಡು-ಒಂದು, ಕಲಾವಿದನಾಗಿ ಆತನ ಸಂಬಳವಷ್ಟು. ವೀಳ್ಯದ ಉಳಿಕೆ, ಅಂದರೆ ಎರಡು ಸಂಬಳ. ಎರಡು-ಮೇಳದ ಸಾಮಾನಿನ ಉಳಿಕೆ (ಇದ್ದರೆ) ಅವನಿಗೆ ಈ ಗಳಿಕೆಯೂ ಮೇಳದ ಅಡುಗೆ-ನಿತ್ಯವೆಚ್ಚ. ಆದರೂ ಆ ಕಾಲದಲ್ಲೂ ಕಷ್ಟ ಹೊಂದಿದ ಯಜಮಾನರೆಷ್ಟೋ ಇದ್ದರು.

ಮುಂದಿನ ಹಂತದಲ್ಲಿ ಸಂಘಟನೆಯ ಹೊಣೆ, ಸಾಂದರ್ಭಿಕ ಅಗತ್ಯಗಳು ಜಟಿಲಗೊಳ್ಳುವಾಗ, 'ಕಲಾವಿದರಲ್ಲದ ಯಜಮಾನ', ಅರ್ಥಾತ್ ಪೂರ್ಣಾವಧಿ ಯಜಮಾನ-ಗುತ್ತಿಗೆದಾರರ (ಫುಲ್‌ಟೈಂ ಆರ್ಗನೈಸರ್ ಕಾಂಟ್ರಾಕ್ಟರ್) ಕಾಲ ಆರಂಭವಾಯಿತು. ಕಲಾವಿದರ ಸಂಭಾವನೆ, ತಿರುಗಾಟ, ವೀಳ್ಯ ನಿರ್ಣಯ, ಲಾಭ-ನಷ್ಟ ಮೊದಲಾದ ಎಲ್ಲವೂ ಇವರ ಹೊಣೆಗೆ ಸಂದಿತು. ಈ ಹೊಸ ಯಜಮಾನ

ಯುಗ ಯಕ್ಷಗಾನ ಸಂಘಟನೆ ಮತ್ತು ಆರ್ಥಿಕತೆಗಳಲ್ಲಿ ದೊಡ್ಡ ಬದಲಾವಣೆಗಳನ್ನು ಕಂಡಿತು. ಮಾರುಕಟ್ಟೆಯ ಅಂಗಗಳಾದ- ವಸ್ತು, ಬೇಡಿಕೆ, ನೀಡಿಕೆ, ವಿತರಣೆ, ಸಾರಿಗೆ, ಪ್ರಚಾರ, ನಾಮಧೇಯ, ಪೂರಣ, ಸಂಘಟನೆ, ಅಭಿರುಚಿ ಮುಂತಾದವುಗಳಲ್ಲೆಲ್ಲ ಪರಿವರ್ತನೆಗಳು ಉಂಟಾದವು.

3. ಹವ್ಯಾಸಿ, ವ್ಯವಸಾಯಗಳ ಮಿಶ್ರಣದೊಂದಿಗೆ, ನಾಟಕ ವೇಷಗಳಿಂದ ಪ್ರದರ್ಶಿತವಾದ 'ಯಕ್ಷಗಾನ ನಾಟಕ'ವೆಂಬ ಪ್ರಕಾರವೂ, ಅಂತೆಯೇ ಯುದ್ಧನಿಧಿ (ವಾರ್ ಫಂಡ್) ಸಹಾಯಾರ್ಥ ತಾಳಮದ್ದಲೆಗಳೂ, ಯಕ್ಷಗಾನವನ್ನು ಹರಕೆವಾರನ ಪ್ರೋತ್ಸಾಹದ ಬದಲು, ಹಲವರಿಂದ ಅರ್ಥಾತ್ ಪ್ರವೇಶಧನ ಮೂಲಕ ಆರ್ಥಿಕ ನಿರ್ವಹಣೆಯ ಮತ್ತು ಲಾಭದ ಸಾಧ್ಯತೆಯನ್ನು ತೋರಿಕೊಟ್ಟವು.

–3–

1950ರಲ್ಲಿ ಪ್ರಾರಂಭಗೊಂಡ ಡೇರೆ ಮೇಳಗಳ ಪದ್ಧತಿಯಿಂದಾಗಿ ಯಕ್ಷಗಾನದ ಸಂಘಟನೆ ಮತ್ತು ನೀಡಿಕೆಯ ವಿಧಾನ ಎರಡು ರೀತಿಯಾಗಿ ಬೆಳೆಯಿತು. ಸೇವಾದಾರರು ಉಚಿತವಾಗಿ ಏರ್ಪಡಿಸುವ ಹರಕೆ ಬಯಲಾಟಗಳು ಮುಖ್ಯವಾಗಿ, ಆ ಮೇಳದ ದೇವಾಲಯ ಕುರಿತ ಶ್ರದ್ಧೆಯಿಂದ ಪ್ರೇರಿತ. ಹಾಗಾಗಿ, ಗ್ರಾಹಕನನ್ನು ಒಲೈಸುವ, ತೃಪ್ತಿಪಡಿಸುವ ಮಾರುಕಟ್ಟೆ ಒತ್ತಡ, ಹರಕೆ ಆಟಗಳ ಮೇಳಗಳ ಮೇಲೆ ಇಲ್ಲ. ಆದರೆ, ಡೇರೆ ಆಟಗಳ ಮೇಳಗಳು ಗ್ರಾಹಕನ ಅಭಿರುಚಿಯನ್ನು ಗಮನಿಸಿ, ಸತತವಾಗಿ ಪರಿವರ್ತನೆಸಹಿತ ಆಟಗಳನ್ನು ನೀಡುವ ಅಗತ್ಯ ಅನಿವಾರ್ಯವಾಯಿತು.

ಇದರ ಫಲವಾಗಿಯೆ ಆಟಗಳು, ಕಲಾದೃಷ್ಟಿಯಿಂದ ಕೆಲವು ನ್ಯೂನತೆಗಳಿದ್ದರೂ, ಒಬ್ಬ ಬೆಂಬಲದ ಬದಲು, ನೂರಾರು ಜನರ ಬೆಂಬಲದ ಅಗತ್ಯದಿಂದಾಗಿ ಕಲೆ ಒಂದು ಅರ್ಥದಲ್ಲಿ ಜನಪರವಾಯಿತು. ಡೇರೆ ಆಟಗಳಲ್ಲಿ ಪ್ರೇಕ್ಷಕನಿಗೆ ಸುಧಾರಿತ ಆಸನ ವ್ಯವಸ್ಥೆ, ತಲೆಯ ಮೇಲೆ ಆಚ್ಛಾದನ ಸಿಕ್ಕವು. ಇದರಿಂದಾಗಿ, ಹರಕೆ ಆಟಗಳಲ್ಲೂ ಪ್ರೇಕ್ಷಕನಿಗೆ ಆಸನ ವ್ಯವಸ್ಥೆ ಮಾಡುವ ಕ್ರಮ, ಅಂಶತಃ ರೂಢಿಗೆ ಬಂತು.

ಡೇರೆ ಆಟಗಳಿಂದ ಪ್ರಸಂಗಗಳು, ಪ್ರದರ್ಶನ ಸ್ವರೂಪ, ಕ್ಯಾಂಪ್ ವ್ಯವಸ್ಥೆ, ಪ್ರಚಾರ ಮೊದಲಾದುವುಗಳಲ್ಲೂ ಬದಲಾವಣೆಗಳಾದವು. ಒಂದು ವಾರ, ಮೂರು ದಿನ–ಹೀಗೆ ಒಂದೇ ಕಡೆ ಕ್ಯಾಂಪು ಮಾಡಿದ ಡೇರೆ ಮೇಳಗಳು ಇದರ ಗಳಿಕೆ ಸಾಲದಾಗಿ, ದಿನ ಕ್ಯಾಂಪು (ಪ್ರತಿದಿನ ಬೇರೆ ಊರು) ಮಾಡಬೇಕಾಗಿ ಬಂತು. ಹಾಗೆಯೇ ಕಳೆದ ಐವತ್ತು ವರ್ಷಗಳಲ್ಲಿ ಕನಿಷ್ಠ ಐನೂರು ಪ್ರಸಂಗಗಳಾದರೂ, ಡೇರೆ ಮೇಳಗಳ 'ನೂತನ ಪ್ರಸಂಗ'ದ ಅಪೇಕ್ಷೆಗಾಗಿ ರಚಿತವಾದವುಗಳು. ಪ್ರಸಂಗ ರಚನೆಯಲ್ಲಿ ಮಾರುಕಟ್ಟೆ ಸ್ಫೋಟ ಕಾಣಿಸಿಕೊಂಡಿತು.

ಹರಕೆ ಆಟಗಳಿಗೆ ಮುದ್ರಿತ ಕರಪತ್ರ ಯಾ ಪತ್ರಿಕಾ ಪ್ರಚಾರ ಇದ್ದುದು ತೀರ ವಿರಳ. ಪ್ರಚಾರ ಇದ್ದುದು, ಮೌಖಿಕ ಆಹ್ವಾನ ಅಥವಾ 'ಟಂಕಿಫಾಯಸ್' (ತಾಸೆ ಬಡಿದು, ಹೇಳುತ್ತ ಹೋಗುವುದು), ತುತ್ತೂರಿ ಪ್ರಚಾರ ಹಾರ್ನ್ ಎನೌನ್ಸ್‌ಮೆಂಟ್ ಇಷ್ಟೆ. ಅಲ್ಲದೆ, ಹರಕೆ ಆಟದ ತಾಳಮದ್ದಲೆ ಸೇವೆ, ಗುಡ್ಡದ ಅಬ್ಬರಗಳೂ ಪ್ರಚಾರಗಳು.

ಟೆಂಟು ಮೇಳಗಳ ಯುಗದಲ್ಲಿ, ಕರಪತ್ರ, ನಿತ್ಯಪತ್ರಿಕಾ ಜಾಹೀರಾತು, ವಿಶೇಷ ಜಾಹೀರಾತು, ಭಿತ್ತಿಪತ್ರ (ವಾಲ್‌ಪೋಸ್ಟರ್), ಧ್ವನಿವರ್ಧಕ ಮೂಲಕ ಪ್ರಚಾರ, ಹ್ಯಾಂಗಿಂಗ್ ಕಾರ್ಡ್‌ಗಳು, ಬಣ್ಣದ ಪೋಸ್ಟರ್ ಮೊದಲಾದುವು ಹಂತ ಹಂತವಾಗಿ ಬಳಕೆಗೆ ಬಂದುವು. ಈಗ ಹರಕೆ ಮೇಳಗಳೂ ನಿತ್ಯ ಪತ್ರಿಕಾ ಪ್ರಚಾರ ಕೈಗೊಳ್ಳುತ್ತಿವೆ.

–4–

ಡೇರೆ ಮೇಳಗಳ ವಿಧಾನದ ಒಂದು ನೇರ ಪರಿಣಾಮ ಎಂದರೆ– ತೆಂಕುತಿಟ್ಟು ಯಕ್ಷಗಾನ ಪ್ರದೇಶದಲ್ಲಿ

(ಇದು ತುಳುನಾಡು) ತುಳು ಯಕ್ಷಗಾನದ ಪ್ರಾದುರ್ಭಾವ, ಪ್ರಸಾರ, ಜನಮನ್ನಣೆ, ಬಡ ಮತ್ತು ಮಧ್ಯಮ ವರ್ಗದ ತುಳುವರನ್ನಿದು ವಿಶೇಷವಾಗಿ ಆಕರ್ಷಿಸಿ, ಹಣತೆತ್ತು ನೋಡಲು ಪ್ರೇರಿಸಿತು. ಇದು ಭಾಷಾ ಅಸ್ಮಿತೆಯ ಸಾಂಸ್ಕೃತಿಕ ಕ್ರಾಂತಿಯ ಒಂದು ಅಭಿವ್ಯಕ್ತಿ. ತುಳು ವಾಙ್ಮಯದ ಒಂದು ವಿಶಿಷ್ಟ ಸಾಧನೆ ಎನಿಸಿದ 'ತುಳು ಯಕ್ಷಗಾನ'ವು, ಹೀಗೆ ಮಾರುಕಟ್ಟೆ ಶಕ್ತಿಯ ಪರಿಣಾಮವೇ. ತೆಂಕು, ಬಡಗು ತಿಟ್ಟುಗಳೆರಡರಲ್ಲೂ, ಸಾಂಪ್ರದಾಯಿಕ ಪ್ರಸಂಗಗಳ ಸ್ಥಾನದಲ್ಲಿ ನೂರಾರು- ಜಾನಪದ, ಐತಿಹಾಸಿಕ, ಕಾಲ್ಪನಿಕ, 'ಕಲ್ಪಿತ ಪೌರಾಣಿಕ ರೂಪ'ದ, ಸಿನಿಮೀಯ ಮೊದಲಾದ ಕಥಾನಕಗಳು ಬಂದುದೂ ಮಾರುಕಟ್ಟೆ ಅವಶ್ಯಕತೆಯ ಪ್ರಭಾವವೇ. ಬರಬರುತ್ತ ಇದು 'ಅತಿ ವಾಣಿಜ್ಯೀಕರಣ'ಕ್ಕೆ ದಾರಿ ಮಾಡಿತು.

ಪ್ರಸಂಗಗಳಲ್ಲಿ ಮಾತ್ರವಲ್ಲ, ಪ್ರದರ್ಶನದ ಅಳವಡಿಕೆಯಲ್ಲೂ ವಿಶೇಷ ಆಕರ್ಷಣೆಗಳ ರೂಪದಲ್ಲೂ, 'ನಾವೀನ್ಯ'ಗಳು ಬಂದುವು. ಆರಂಭದಲ್ಲಿ ಕಥಾಪ್ರದರ್ಶನಕ್ಕೆ ಮೊದಲು, ಸಭಾಲಕ್ಷಣ (ಪೂರ್ವರಂಗ)ದ ಸ್ಥಾನದಲ್ಲಿ ದಕ್ಷಿಣಾದಿ ಸಂಗೀತ, ಭರತನಾಟ್ಯಗಳ ಅಳವಡಿಕೆ ಬಂದಿತು. ಆ ಬಳಿಕ ಬಂದ ದೊಡ್ಡ ಅಳವಡಿಕೆ- ಸೀನು ಸೀನರಿಗಳೊಂದಿಗೆ ಪ್ರದರ್ಶನ. ಇದು ಕಂಪನಿ ನಾಟಕಗಳ ಟ್ರಾನ್ಸ್‌ಫರ್ ಸೀನರಿ ಪದ್ಧತಿಯ, ವಾಸ್ತವಿಕತಾ ವಿಧಾನದ (ರಿಯಲಿಸ್ಟಿಕ್) ಮಿಶ್ರಣ. ಆದರೆ, ಯಕ್ಷಗಾನದ ರಂಗಭಾಷೆಗೆ, ದೃಶ್ಯಗಳ ಕಾಲ್ಪನಿಕತೆ, ಸಾಂಕೇತಿಕತೆಗಳ ಮೌಲಿಕ ಕಲ್ಪನೆಗೆ ಇದು ವಿರುದ್ಧವಾದ ಹೇರಿಕೆ. ಅಲ್ಲದೆ, ನಿತ್ಯ ತಿರುಗಾಟದ ದೃಷ್ಟಿಯಿಂದಲೂ, ಅಳವಡಿಸಲು ಕಠಿಣ. ಬೇಕಾಗುವ ಬಂಡವಾಳವೂ ಅಧಿಕ. ಈ ಕಾರಣಗಳಿಂದ ಇದು ಉಳಿದು ಬರಲಿಲ್ಲ.

ಮುಂದಿನ ಹಂತದಲ್ಲಿ ಮಾತಿನ ಪ್ರಾಧಾನ್ಯ, ಅತಿಥಿ ನಟರ ಆಗಮನ, ವಿವಿಧ ನೃತ್ಯಗಳ ಸಮ್ಮಿಲನ ಮುಂತಾದವು ವಿಶೇಷ ಆಕರ್ಷಣೆಗಳಾದವು. ಇವು ಬೇರೆ ಬೇರೆ ರೂಪಗಳಲ್ಲಿ ಈಗಲೂ ಚಾಲ್ತಿಯಲ್ಲಿವೆ. ಉತ್ತರ ಕನ್ನಡದ ಭಾಗವತರು ಮತ್ತು ವೇಷಧಾರಿಗಳು ದಕ್ಷಿಣ ಕನ್ನಡದ ಮೇಳಗಳಲ್ಲಿ ಬಂದುದರ ಪರಿಣಾಮವಾಗಿ, ಒಂದು ಹೊಸ ಅಲೆಯಾಗಿ, ಒಂದು ಬಲವಾದ ಶಾಕ್ ಎಂಬಂತೆ ಬಂದ ಪದ್ಯಗಳ ಅಭಿನಯ, ಪದಾಭಿನಯ, ಶಬ್ದಾಭಿನಯಗಳು- ಯಕ್ಷಗಾನದ ರಂಗ ವಿಧಾನಕ್ಕೆ ಹೊಸ ತಿರುವು ನೀಡಿದರೂ, ಅದೂ ಕ್ರಮಶಃ ಸರಿಯಾದ ಅಭ್ಯಾಸವಿಲ್ಲದೆ, ಅವಿಚಾರಿತ ಆಕರ್ಷಣೆಯಾಗಿ, ಮಾರುಕಟ್ಟೆ ಸಾಮಗ್ರಿಯೆ ಆಯಿತು.

-5-

ಕಲಾ ವ್ಯವಹಾರದ ವಾಣಿಜ್ಯೀಕರಣವಾಗಲಿ, ವ್ಯಾವಸಾಯಿಕತೆಯಾಗಲಿ ಮೂಲತಃ ತಪ್ಪಲ್ಲ, ಬಾಧಕವಲ್ಲ. ಕಲೆಯ ನಿರಂತರತೆ ಉಳಿಯುವುದು ವ್ಯಾವಸಾಯಿಕತೆಯಿಂದಲೆ. ಆದರೆ, ಶತಮಾನಗಳ ಕಾಲ ಬೆಳೆದು ಬಂದಿರುವ, ಒಂದು ಖಚಿತ ಶೈಲಿ ಸ್ವರೂಪಗಳಿರುವ, ಸಾಂಪ್ರದಾಯಿಕವಾದ ಕಲೆಯನ್ನು ಎಷ್ಟು ವಾಣಿಜ್ಯಪರವಾಗಿಸಬಹುದು, ಎಷ್ಟು ವ್ಯಾವಸಾಯಿಕವಾಗಿಸಬಹುದು? ಈ ಹದವನ್ನು ಕಂಡುಕೊಳ್ಳುವಲ್ಲಿ ಯಕ್ಷಗಾನವು ಯಶಸ್ವಿಯಾಗಲಿಲ್ಲ. ಅತಿವಾಣಿಜ್ಯಪರತೆಯ ವಿಕಾರಗಳಿಗೆ, ದುಷ್ಪರಿಣಾಮಗಳಿಗೆ ಯಕ್ಷಗಾನದ ವರ್ತಮಾನದಲ್ಲಿ ದೃಷ್ಟಾಂತಗಳು ಬೇಕಾದಷ್ಟಿರುವುವು.

"ಯಕ್ಷಗಾನವನ್ನು ಉಳಿಸಲು ಇದೆಲ್ಲ ಅನಿವಾರ್ಯ" ಎಂಬ ವಾದವೂ ಇದೆ, ಸರಿ. ಆದರೆ- ಇದರಿಂದ ಉಳಿದು ಬಂತೆ? ಎಂದರೆ ಅದೂ ಇಲ್ಲ. ಡೇರೆ ಮೇಳಗಳ ಭವಿಷ್ಯವೆ ಡೋಲಾಯಮಾನವಾಗಿದ್ದು ಮುಂದಿನ ಹತ್ತು ವರ್ಷಗಳಲ್ಲಿ ಡೇರೆ ಯಕ್ಷಗಾರ ಮೇಳಗಳ ಸಂಖ್ಯೆ ಒಂದೆರಡಕ್ಕೆ ಇಳಿದರೆ ಅಥವಾ ಶೂನ್ಯವಾದರೆ ಆಶ್ಚರ್ಯವಿಲ್ಲ. ಇದು ಸದ್ಯ ಕಾಣುವ, ಅಪ್ರಿಯವಾದರೂ, ನಿಜವಾದ ಪರಿಸ್ಥಿತಿ.

1950-1985, ಯಕ್ಷಗಾನ ವ್ಯವಸಾಯ ಮಾರುಕಟ್ಟೆಗಳ ಏರಿಕೆಯ ಕಾಲ. ಆ ಬಳಿಕ ಇಳಿಗಾಲ, ಈಗ ಕಷ್ಟಕಾಲ. ಒಂದೆಡೆ ಹರಕೆ ಆಟಗಳ ಸಂಖ್ಯೆ ಏರುತ್ತಿದೆ, ಹಲವು ಮೇಳಗಳಿಗೆ ನಾಲ್ಕಾರು ವರ್ಷಗಳಿಗೆ ಆಟಗಳು ನಿಗದಿ (ಬುಕಿಂಗ್) ಆಗಿವೆ. (ಆ ಹರಕೆ ಆಟಗಳ ಗುಣಮಟ್ಟ ಸಾಮಾನ್ಯ. ಆ ಮಾತು ಬೇರೆ). ಈ ಕಡೆ ಟೆಂಟಿನ ಮೇಳಗಳು ಬಿಕ್ಕಟ್ಟುಗಳನ್ನು ಇದಿರಿಸುತ್ತಿವೆ. ಪಕ್ಕನೆ ಒದಗಿದ ಈ ಇಳಿತಕ್ಕೆ ಕಾರಣಗಳೇನು? ಇದನ್ನು ಯಕ್ಷಗಾರದ ಮಾರುಕಟ್ಟೆಯನ್ನು ಒಟ್ಟಾಗಿ ಆರ್ಥಿಕ, ಸಾಮಾಜಿಕ ಪರಿವೇಶದಲ್ಲಿಟ್ಟು ವಿಶ್ಲೇಷಿಸಿದರೆ ಒಂದಿಷ್ಟು ಅರ್ಥ ಮಾಡಿಕೊಳ್ಳಬಹುದು.

ಆಟಗಳಿಗೆ ಪ್ರೇಕ್ಷಕ ಸಂಖ್ಯೆ ಕಡಿಮೆ ಆಗಲು ಕಾರಣಗಳು ಹಲವು-

1. ವೇಗವಾಗಿ ವರ್ಧಿಸುತ್ತಿರುವ ನಗರೀಕರಣ. ಇದರಿಂದ ಎಲ್ಲರೂ ವ್ಯಸ್ಥ(ಬ್ಯುಸಿ)ರಾಗಿ ಬಿಟ್ಟಿರುವುದು.

2. ಕೂಡು ಕುಟುಂಬಗಳೆ ಇಲ್ಲವಾಗಿ, ಸ್ವತಂತ್ರ (ನ್ಯೂಕ್ಲಿಯಸ್ ಫ್ಯಾಮಿಲಿ) ಕುಟುಂಬಗಳ ಆಧಿಕ್ಯ. ಇದರಿಂದಾಗಿ, ಆಟಗಳಿಗೆ ಬರಲು ತೊಡಕು.

3. ಹೆಚ್ಚುತ್ತಿರುವ ಕಾನೂನು ಸುವ್ಯವಸ್ಥೆಯ ಅಭದ್ರತೆ (ಲಾ ಆ್ಯಂಡ್ ಆರ್ಡರ್ ರಿಸ್ಕ್) ಮನೆ, ಸೊತ್ತುಗಳ ಕುರಿತು ಹಿಂದೆ ಇದ್ದ ನಿಶ್ಚಿಂತತೆ ಈಗ ಇಲ್ಲ.

4. ಒಟ್ಟು ಬೆಳೆದಿರುವ ಸೌಲಭ್ಯ, ಸೌಕರ್ಯಗಳಿಂದ, ಕಾಲ ಪ್ರಭಾವದಿಂದ, ಇಡಿ ರಾತ್ರಿ ನಿದ್ದೆಗೆಡುವ ಉತ್ಸಾಹ ಒಮ್ಮೆಲೆ ಮಾಯವಾಗಿರುವುದು.

5. ಸುಲಭವಾಗಿ ಮನೆಯಲ್ಲಿ ದೊರಕುವ ಮನರಂಜನೆ, ಟಿ.ವಿ., ಕ್ಯಾಸೆಟ್, ಇಲೆಕ್ಟ್ರಾನಿಕ್ ರಂಜನೆಗಳು.

6. ಕಾಮೋಚಿತವಾಗಿ ಯಕ್ಷಗಾನವು ತನ್ನ ಸೆಳೆತದ ಶಕ್ತಿಯನ್ನು ಉಳಿಸಿಕೊಳ್ಳದಿರುವುದು.

7. ಕೃಷಿ ಕ್ಷೇತ್ರದಲ್ಲಿ ಏರುಪೇರು- ಮತ್ತು ಈ ಎಲ್ಲದಕ್ಕಿಂತ ಮುಖ್ಯವಾಗಿ-

8. ಕಾಂಟ್ರಾಕ್ಟ್ ಪದ್ಧತಿಯೆಂಬ, ಆಕರ್ಷಕ ಆಪತ್ತು.

ಮೇಲೆ ಹೇಳಿದ ಎಂಟನೆಯ ಅಂಶ, ಕಾಂಟ್ರ್ಯಾಕ್ಟ್ ಪದ್ಧತಿಯನ್ನು ತುಸು ವಿವೇಚಿಸೋಣ. ಈ ಅಂಶದ ವಿಶ್ಲೇಷಣೆಯು ಕಲಾವಿದ, ಸಂಘಟಕ ಶ್ರೀ ಕೆರೆಮನೆ ಶಂಭು ಹೆಗಡೆಯವರು ನಡೆಸಿದ ಒಂದು ವಿಮರ್ಶೆಯನ್ನು ಆಧರಿಸಿದೆ.

ಕಾಂಟ್ರಾಕ್ಟು ಪದ್ಧತಿ ಎಂದರೆ- ಡೇರೆ ಆಟವನ್ನು ಒಬ್ಬ ವ್ಯಕ್ತಿ ಯಾ ಸಂಸ್ಥೆಯು ನಿಶ್ಚಿತ ವೀಳ್ಯನೀಡಿ, ಆ ಆ ದಿನದ ಮಟ್ಟಿಗೆ ಗುತ್ತಿಗೆ ವಹಿಸಿಕೊಳ್ಳುವುದು. ಪ್ರಸಂಗ, ಪ್ರಚಾರ, ಪ್ರವೇಶದರ, ಲಾಭನಷ್ಟ ಸಂಭಾವ್ಯ ವಿಶೇಷ ಆಕರ್ಷಣೆ ಇವೆಲ್ಲವೂ ವಹಿಸಿಕೊಂಡವನಿಗೆ ಸೇರಿದ್ದು. ಕಾಂಟ್ರಾಕ್ಟು ನಿಗದಿಸುವಾಗಲೆ ಆತನು ಮೇಳಕ್ಕೆ ವೀಳ್ಯದ ಮೊತ್ತದ ಒಂದು ಪಾಲು (ಸಾಮಾನ್ಯವಾಗಿ ಅರ್ಧ ಅಥವಾ ಮೂರನೆಯ ಒಂದು ಅಂಶ) ನೀಡಿ, ಎಡ್ವಾನ್ಸ್ ಬುಕಿಂಗ್ ಮಾಡಿಕೊಳ್ಳಬೇಕು. ಇದಕ್ಕಾಗಿಯೆ ಮೇಳವು ತಿರುಗಾಟಕ್ಕೆ ಮೊದಲು (ಸುಮಾರಾಗಿ ಅಕ್ಟೋಬರ್ ತಿಂಗಳಲ್ಲಿ) ಬುಕಿಂಗ್‌ಗಾಗಿ ವ್ಯವಸ್ಥೆಯನ್ನು ಮಾಡಿ, ಕರೆ ನೀಡುತ್ತದೆ.

ಈ ಪದ್ಧತಿಯಲ್ಲಿ ಕೆಲವು ಅನುಕೂಲತೆಗಳಿವೆ. ಮುಖ್ಯವಾಗಿ ಮೇಳಕ್ಕೆ ಸೀಸನ್ ಗಳಿಕೆಯ ಭದ್ರತೆ. ಒಟ್ಟು ಸಿಗುವ 180-200 ಆಟಗಳಲ್ಲಿ ಸುಮಾರು 100 ಆಟಗಳು ಕಾಂಟ್ರಾಕ್ಟು ಮೂಲಕ ನಿಗದಿಯಾದರೆ- ಮೇಳದ ದೊಡ್ಡ ಹೊರೆ ಇಳಿಯುತ್ತದೆ.

ಮುಂಗಡ ದೊರೆತ ಹಣದಿಂದ ಸಾಮಗ್ರಿ, ಸರಂಜಾಮು, ವಾಹನ ಮತ್ತು ಕಲಾವಿದರ ಸಂಬಳದ

ಒಂದು ಅಂತ ಇವುಗಳಿಗೆ ವ್ಯವಸ್ಥೆ ಆಗುತ್ತದೆ. ಕ್ಯಾಂಪು, ಬಿಡಾರ, ಲೈಸನ್ಸ್ ವ್ಯವಸ್ಥೆ, ಪ್ರಚಾರ, ಸ್ಥಳೀಯ ಏರ್ಪಾಡುಗಳು ಮೊದಲಾದ ಯಾವುದಕ್ಕೂ ಮೇಳದ ಯಜಮಾನರು ಗಮನ ಹರಿಸಬೇಕಿಲ್ಲ. ಮೇಳಕ್ಕೆ ಇದೊಂದು ಬಗೆಯ ಇನ್ಶೂರೆನ್ಸ್.

ಕಾಂಟ್ರಾಕ್ಟುದಾರನಿಗೂ, ಇದು ಅನುಕೂಲವೇ. ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ ಸುಮಾರು ಒಂದು ತಿಂಗಳ ಪರಿಶ್ರಮ ಮತ್ತು ಸೀಮಿತವಾದ ಹಣ ಹೂಡಿಕೆಯಿಂದ ಗಣನೀಯವಾದ ಗಳಿಕೆ ಸಾಧ್ಯ. ಮೇಳವು ತನ್ನ ಸ್ವಂತದ ಆಟಗಳಿಗೆ ನಿಗದಿಪಡಿಸಿದ ಟಿಕೇಟು ದರಗಳನ್ನು ಇವರು ಅನುಸರಿಸುವ ಬದ್ಧತೆ ಇಲ್ಲ. ಏರಿಸಬಹುದು, ಏರಿಸುತ್ತಾರೆ, ಗೌರವ ಪ್ರವೇಶಪಂಜ ತರಗತಿಯನ್ನೂ ಸೇರಿಸುತ್ತಾರೆ.

ಈ ಪದ್ಧತಿಯು ಮೊದಲ ಹಂತದಲ್ಲಿ (1960-1980) ಯಶಸ್ವಿಯಾಯಿತು. ಹೆಚ್ಚಾಗಿ ಸಂಸ್ಥೆಗಳ ಸಹಾಯಾರ್ಥ ಪ್ರದರ್ಶನಗಳಿಗಿದು ಬಳಕೆಯಾಗುತ್ತಿತ್ತು. ಸಂಸ್ಥೆಗಳಾದುದರಿಂದ ದರ ಏರಿಕೆಯೂ "ಒಪ್ಪಿಗೆ ಪಡೆಯಿತು" ಅಥವಾ "ಕ್ಷಮಿಸಲ್ಪಟ್ಟಿತು." ಇಷ್ಟು ಸರಿ.

ಆದರೆ ಬರಬರುತ್ತ ಈ ಪದ್ಧತಿಯು,

"... ಯತ್ತದಗ್ರೇ ಅಮೃತೋಪಮಮ್, ಪರಿಣಾಮೇ ವಿಷಮಿವ" ಎಂಬಂತೆ ಆಯಿತು. ಮೊದಲು ಸಿಹಿ, ಆಡಳಿತ ಕಹಿ. ಅದು ಹೀಗೆ :

1. ಕಾಂಟ್ರಾಕ್ಟು ವಹಿಸಿಕೊಳ್ಳುವಿಕೆ ಎಂಬುದು ಒಂದು ಪ್ರದರ್ಶನಕ್ಕೆ ಸೀಮಿತ. ಏರ್ಪಡಿಸುವವರಿಗೆ, ಯಕ್ಷಗಾನದ ಕಾಳಜಿ, ಮೇಳದ ಬೆಳವು, ಭವಿಷ್ಯಗಳ ಕಾಳಜಿ ಇರುವುದಿಲ್ಲ. ಅವರ ಲಕ್ಷ್ಯ ಒಂದು ಪ್ರದರ್ಶನದಿಂದ ಗರಿಷ್ಠ ಗಳಿಕೆ. ಅದಕ್ಕಾಗಿ ವಿವಿಧ ಉಪಾಯ. ವಿಶೇಷ ಆಕರ್ಷಣೆ ಇತ್ಯಾದಿಗಳು. ಇದರಿಂದ ನಿಧಾನವಾಗಿ ಪ್ರತಿಕೂಲ ಪರಿಣಾಮ. ಒಂದು ಉದಾಹರಣೆಯಾಗಿ ಅತಿಥಿ ಕಲಾವಿದರ ಪ್ರವೇಶ. ಇದು ಹಂಗಾಮಿ ವ್ಯವಸ್ಥೆ. ಮೇಳದ ಸ್ವಂತ ಆಟಕ್ಕೆ ಇದು ಅಲ್ಲದಿದ್ದಾಗ ಆ ಅಂಶದ 'ಆಕರ್ಷಣೆ' ಮೋಸ. ಇದರಿಂದ ಮೇಳದ ಪ್ರಸಿದ್ಧಿಗೂ ತೊಂದರೆಯೆ.

2. ಯಕ್ಷಗಾನದ ಮುಖ್ಯ ಪ್ರೇಕ್ಷಕ ವರ್ಗವೆಂದರೆ ಬಡ ಮತ್ತು ಮಧ್ಯಮ ವರ್ಗ. ಕಂಟ್ರಾಕ್ಟುದಾರರು ದರ ಏರಿಸಿದಾಗ ಯಕ್ಷಗಾನದ ಸಹಜ ಮುಖ್ಯ ಪ್ರೋತ್ಸಾಹಕ ವರ್ಗ ಅದನ್ನು ತರಲಾರದು. ಉದಾ-ರೂ. 500, 250, 100 ಇತ್ಯಾದಿ ಟಿಕೇಟು ದರ. ಕಾಂಟ್ರಾಕ್ಟುದಾರ ಒತ್ತಾಯದ ಮಾರಾಟ, ದಾಕ್ಷಿಣ್ಯ ಮಾರಾಟ ತಂತ್ರದಿಂದ, ಒಮ್ಮೆಗೆ 'ದೊಡ್ಡ ಕಲೆಕ್ಷನ್' ತಂದರೂ, ನಿತ್ಯ ಗಳಿಕೆಯ 'ಗೇಟ್ ಕಲೆಕ್ಷನ್' ಇಳಿಮುಖವಾಯಿತು. ಇವರಿಂದ ಒಂದು ತಲೆಮಾರಿನ ಪ್ರೇಕ್ಷಕರನ್ನೆ ಕಾಂಟ್ರಾಕ್ಟು ಪದ್ಧತಿ ಆಟಗಳಿಂದ ದೂರ ಓಡಿಸಿತು. ಅತ್ತ, ದಾಕ್ಷಿಣ್ಯಕ್ಕಾಗಿ ಟಿಕೇಟು ಕೊಂಡವರು ಆಟಕ್ಕೆ ಬರಲಿಲ್ಲ. "ಕಲೆಕ್ಷನ್ ತುಂಬ, ಡೇರೆಯಲ್ಲಿ ಜನ ಇಲ್ಲ" ಎಂಬಂತಾಯಿತು. ಯಕ್ಷಗಾನ ತನ್ನ ಸಹಜ ಶಕ್ತಿ ಮೂಲವನ್ನು ಕಳೆದುಕೊಂಡು, ಕಾಂಟ್ರಾಕ್ಟು ಪದ್ಧತಿಯ ಆಕ್ಸಿಜನ್‌ನಿಂದ ಬದುಕಲಾರಂಭಿಸಿದಾಗ, ಒಂದು ಹಂತದಲ್ಲಿ ನಿರೀಕ್ಷೆಯಂತೆ 'ಪ್ರೇಕ್ಷಕನಷ್ಟ' ಉಂಟಾಯಿತು.

3. ಕಾಂಟ್ರಾಕ್ಟು ವಿಧಾನವು ರೂಪಿಸಿದ ವಿಕೃತ ಅಭಿರುಚಿಗಳಿಂದ, ಯಕ್ಷಗಾನದ ರೂಪ ವಿಘಟನೆಗೆ ದಾರಿಯಾಯಿತು.

ಜೊತೆಗೆ, ವಿವಿಧ ಮೇಳಗಳ ಉತ್ತಮ ಕಲಾವಿದರನ್ನು ಆಯ್ದು ಏರ್ಪಡಿಸುವ ಮಳೆಗಾಲದ (ಆಫ್ ಸೀಸನ್ ಶೋಸ್) ಆಟಗಳು, ಯಕ್ಷಗಾನದ ಗುಣಮಟ್ಟ ನಿರೀಕ್ಷೆಯ ಪ್ರೇಕ್ಷಕ ವರ್ಗಕ್ಕೆ ತೃಪ್ತಿ ನೀಡಿದುವು. ಮೇಳದ ಆಟಗಳಲ್ಲಿ ಸಿಗಲಾರದ್ದು, ಮಳೆಗಾಲದ ಆಟಗಳಲ್ಲಿ ಸಿಗುವಂತಾದುದರಿಂದ, ಮೇಳಗಳ ಸ್ವಂತ ಆಟಗಳಿಗೆ ಗಳಿಕೆ ಕಡಿಮೆ ಆದುದೂ ಸಹಜ.

ಇತ್ತ ಬೆಲೆ ಏರಿಕೆ, ಖರ್ಚು ಏರಿಕೆಗಳಿಂದ ಆಟದ ವೀಳ್ಯವು ಸಹಜವಾಗಿ ಏರಿತು. (ಇದೀಗ ಡೇರೆ ಆಟದ ದಿನವೊಂದರ ವೀಳ್ಯ ರೂ. 12 ಸಾವಿರದಿಂದ 16 ಸಾವಿರದವರೆಗಿದೆ. ಕಾಂಟ್ರಾಕ್ಟುದಾರನಿಗೆ ಹೆಚ್ಚುವರಿ ವೆಚ್ಚ ಆರೆಂಟು ಸಾವಿರ ಇದ್ದೇ ಇದೆ. ಇಷ್ಟು ಹೂಡಿಕೆಗೆ ತಕ್ಕ ಗಳಿಕೆ ಯಕ್ಷಗಾನದ ಮಾರುಕಟ್ಟೆಯ ಸ್ಥಿತಿಗೆ ಮೀರಿದ ವಿಷಯ. ಇದರಿಂದಾಗಿ ಬೇಡಿಕೆ ಇಳಿಬು, ಕಂಟ್ರಾಕ್ಟು ಪದ್ಧತಿ ಕುಸಿಯಿತು. ಮೇಳದ್ದಾದ ಆಟಗಳಿಗೆ ಗಳಿಕೆ ಇಲ್ಲವಾಗಿ- ಉಭಯ ಭ್ರಷ್ಟತೆ ಉಂಟಾಯಿತು.

–8–

ಚಂದ್ರಗಿರಿಯಿಂದ ಕಾಳಿನದಿವರೆಗೆ, ಕರಾವಳಿ ತೀರದಿಂದ ಮಲೆನಾಡಿನ ಆಚೆಯ ತನಕದ ಸುಮಾರು ಸುಮಾರು 200 ಕಿಲೋಮೀಟರ್ ಉದ್ದ, 120 ಕಿಲೋಮೀಟರ್ ಅಗಲದ ಅಯತ ಕ್ಷೇತ್ರ ಯಕ್ಷಗಾನದ ಮುಖ್ಯಭೂಮಿ, ಮುಖ್ಯ ಮಾರುಕಟ್ಟೆ (ಮೇಯಿನ್ ಲ್ಯಾಂಡ್, ಮೆಯಿನ್ ಮಾರ್ಕೆಟ್ ಏರಿಯಾ). ಇದರಲ್ಲಿರುವ ಜನಸಂಖ್ಯೆಯ ಒಂದು ಚಿಕ್ಕ ಭಾಗ ಮಾತ್ರ ಯಕ್ಷಗಾನದ ಸತತ ನಿಷ್ಠ ಪ್ರೇಕ್ಷಕರು. ಆಗೊಮ್ಮೆ ಈಗೊಮ್ಮೆ ಮಾತ್ರ ಅಥವಾ ಹರಕೆ ಆಟಗಳನ್ನು ಮಾತ್ರ ನೋಡುವ ಜನರನ್ನುಬಿಟ್ಟರೆ, ಹಣ ತೆತ್ತು ನೋಡುವ ಪ್ರೇಕ್ಷಕರ ಸಂಖ್ಯೆ ಸುಮಾರು ಮೂರು ಲಕ್ಷ. ಇದರಲ್ಲಿ ತಿರುಳು ಪ್ರೇಕ್ಷಕರು (ಹಾರ್ಡ್‌ಕೋರ್) ಇನ್ನೂ ಕಡಿಮೆ. ಈ ಸಂಖ್ಯೆ ಎಷ್ಟು ಡೇರೆ ಆಟಗಳನ್ನು ಪೋಷಿಸೀತು? ಎಂಬುದನ್ನು ಆಲೋಚಿಸಿದರೆ ಇಂದಿನ ಪರಿಸ್ಥಿತಿ ಸಹಜವೇ ಆಗಿ ಕಾಣುತ್ತದೆ. ಇದಕ್ಕೆ ಪರಿಹಾರವಾಗಲಿ, ಪುನರುಜ್ಜೀವನ ಮಾರ್ಗವಾಗಲಿ ಸುಲಭವಲ್ಲ.

–9–

ಕಾಲಮಿತಿ ಪ್ರಯೋಗ ಒಂದು ಪರಿಹಾರ. ಯಕ್ಷಗಾನದ ಸೊಬಗನ್ನು ಅಚ್ಚುಕಟ್ಟಾಗಿ, ಅಂದಗೆಡಿಸದೆ, ಆಧುನಿಕ ಪ್ರೇಕ್ಷಕನಿಗೆ ಮೆಚ್ಚುಗೆ ಆಗುವಂತೆ ಎರಡು, ಮೂರು ಗಂಟೆಗಳಲ್ಲಿ ನೀಡಲು ಸಾಧ್ಯ. ಈ ಪ್ರಯತ್ನಗಳಾಗಿವೆ, ಆಗುತ್ತಿವೆ. ಯಕ್ಷಗಾನಕ್ಕೆ ಕಾಲಮಿತಿ ಎಂಬುದು ಕಾಲದ ಕರೆ, ಅದನ್ನು ಕೇಳದಿದ್ದರೆ ಕಲೆಗೆ ಕಾಲಗರ್ಭದ ಕರೆ ಬಂದೀತು.

ಕ್ಷೇತ್ರ ವಿಸ್ತಾರ ಇನ್ನೊಂದು ತುರ್ತಿನ ಕೆಲಸ. ಕನ್ನಡ ಭಾಷೆ ಬಲ್ಲ ಎಲ್ಲ ಪ್ರದೇಶಗಳಿಗೆ, ಯಕ್ಷಗಾನವನ್ನು ಕೆಲವೊಂದು ಗ್ರಾಹಕಸ್ನೇಹಿ ಬದಲಾವಣೆಗಳನ್ನು, ಅಗತ್ಯ ಮಾರ್ಪಾಡುಗಳನ್ನು ಮಾಡಿ, ಕೊಂಡೊಯ್ಯಬಹುದು. ಅದಕ್ಕೆ ತಂಡ ರಚನೆ, ಪಾತ್ರ ವಿತರಣೆ, ಪ್ರದರ್ಶನ ಯೋಜನೆ ಮೊದಲಾದುವುಗಳಲ್ಲಿ ಕಟ್ಟುನಿಟ್ಟಾದ ಶಿಸ್ತು ಯೋಜನೆ, ನಿರ್ವಹಣೆ ಅತ್ಯಗತ್ಯ.

ಮಾರುಕಟ್ಟೆ ಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ- ಉತ್ಪಾದನೆ, ನೀಡಿಕೆ, ವಿತರಣೆ, ವಿಸ್ತರಣೆ, ಪ್ಯಾಕೇಜಿಂಗ್, ಪ್ರಚಾರ, ಪ್ರಸಾರ, ಗುಣಮಟ್ಟ ನಿರ್ವಹಣೆ, ಡಿಸೈನಿಂಗ್, ಬೆಲೆನೀತಿ ಮೇಳದ ಹೆಸರಿನ ಬಲ, ಅಪಾಯ ನಿರ್ವಹಣೆ, ಸಂಶೋಧನೆ, ಗ್ರಾಹಕ ಪರತೆ, ನಿಯಂತ್ರಣ, ಮೌಲ್ಯವೃದ್ಧಿ, ಮಾರುಕಟ್ಟೆ ಆಡಳಿತ ಪ್ರಾಯೋಗಿಕತೆಯ ಉದ್ಯಮ ಸಾಹಸಗಳಿಂದ ಯಕ್ಷಗಾನದ ಮಾರುಕಟ್ಟೆಯನ್ನು ಪುನರುಜ್ಜೀವನಗೊಳಿಸಬಹುದು, ಅದರ ವ್ಯಾಪ್ತಿಯನ್ನು ಹೆಚ್ಚಿಸಬಹುದು.

ದೇಶ, ಕಾಲ, ವಸ್ತು, ಧೋರಣೆ, ವಿಧಾನ- ಇವುಗಳ ಪ್ರಶ್ನೆಗಳು ಮಾರ್ಕೆಟಿಂಗ್‌ನಲ್ಲಿ ಸಾರ್ವಕಾಲಿಕ. ಸಂಪ್ರದಾಯ ವೃತ್ತಿ, ಸಂಸ್ಕೃತಿಯನ್ನು ಮಾರುಕಟ್ಟೆಗೆ ಅಳವಡಿಸುವಾಗ ಹೆರಿಟೇಜ್ ಮಾರ್ಕೆಟಿಂಗ್, ಕಲ್ಚರಲ್ ಮಾರ್ಕೆಟಿಂಗ್ ಬಹುವಿಧ ಜಾಗ್ರತೆ ಅಗತ್ಯ, ಜವಾಬ್ದಾರಿಯೂ ಮುಖ್ಯ.

ಯಕ್ಷಗಾನ ಆಟಗಳ ಸೀಡಿ ಚಕ್ರಗಳು ಈಗ ಸಾಕಷ್ಟು ಬಂದಿದೆ. ಈ ಲಭ್ಯತೆಯು ಮುಂದೆ ನೇರ ಪ್ರದರ್ಶನಗಳ ಮೇಲೆ ಮಾಡುವ ಪರಿಣಾಮವು ಕುತೂಹಲಕರ. ಪ್ರಾಯಃ ಇದು ಪ್ರತಿಕೂಲ ಪರಿಣಾಮ

ಜೀರುವ ಸಾಧ್ಯತೆ ಹೆಚ್ಚು. ಆದರೆ ಇದೂ ಆಧುನಿಕತೆಯ ಅನಿವಾರ್ಯ ಫಲಕ.

-10-

ಮಾರುಕಟ್ಟೆಯ ನಿರ್ವಹಣೆ ಎಂಬುದೊಂದು ಸರ್ವಾಂಗೀಣ ಪರಿಕಲ್ಪನೆ. ಅದರಲ್ಲಿ ಕಲೆಯ ರಕ್ಷಣೆ, ಭವಿಷ್ಯದ ಕಾಳಜಿ, ಕಲಾವಿದನ ಹಿತ, ಅಭಿರುಚಿ, ಜಾಗೃತಿಗಳು, ಜೊತೆಗೆ ನೀಡುವವನ ಹಿತವೂ ಮುಖ್ಯ. ಯಜಮಾನನ ಬದ್ಧತೆ ಮತ್ತು ಆತನ ಭದ್ರತೆ, ಹಿತರಕ್ಷಣೆಗೂ ಗಮನ ಹರಿಯಬೇಕು. ನೀಡಿಕೆದಾರನು ದುರ್ಬಲನಾದರೆ, ವಸ್ತುವೇ ನಾಶನಾಗುತ್ತದೆ.

ಈ ಎಲ್ಲ ಬೇಕುಗಳ ಪೂರೈಕೆಯನ್ನು ಸದ್ಯದ ಪರಿಸ್ಥಿತಿಯಲ್ಲಿ, ಮಾರುಕಟ್ಟೆಯ ಸಹಜ ವ್ಯವಸ್ಥೆ ತಾನಾಗಿ ಜರುಗುವ ಪ್ರಕ್ರಿಯೆ(ನ್ಯಾಚುರಲ್ ಪ್ಲೇ ಆಫ್ ಮಾರ್ಕೆಟ್ ಫೋರ್ಸಸ್)ಯಿಂದ ಸಾಧ್ಯವಲ್ಲ. ಹಾಗಾಗಿ-ದೇವಾಲಯ, ಯಜಮಾನ, ಕಲಾವಿದ, ಪೋಷಕ, ವಿಮರ್ಶಕ, ಖಾಸಗಿ ವೇದಿಕೆಗಳು ಮತ್ತು ಸರಕಾರಗಳ ಸಂಯೋಜಿತ ಸಹಕಾರದಿಂದ ಮಾತ್ರ ನೈಜವಾದ ಮಾರುಕಟ್ಟೆ ವ್ಯವಸ್ಥೆ ಏರ್ಪಡಲು ಸಾಧ್ಯ.

☐

ಶಾಸ್ತ್ರೀಯ ಸಂಗೀತದ ವರ್ತ'ಮಾನ'

□ ಎ. ಈಶ್ವರಯ್ಯ



ವಿಕಾಸ ಅನ್ನುವುದು ಕಲೆಯಲ್ಲಿನ ಸಹಜವೂ ಅನಿವಾರ್ಯವೂ ಆದ ಒಂದು ಗುಣ. ಇದಕ್ಕೆ ಕಾರಣ ಕಲೆಯ ಹುಟ್ಟು, ಆಕಾರ, ಅಭಿವ್ಯಕ್ತಿಯ ಆಯಾಮ ಎಲ್ಲವೂ ನಮ್ಮ ಅಂತರಂಗದ ಪಾತಳಿಯಲ್ಲಿ ನಿರ್ಧಾರಗೊಳ್ಳುವುದು. ನಮ್ಮ ಸಂವೇದನೆಗಳು ನಿರಂತರವಾಗಿ ಹಲವು ಬಗೆಯ ಪ್ರಭಾವಗಳಿಗೆ ಪಕ್ಕಾಗುತ್ತ ಅವುಗಳಿಗೆ ಪ್ರತಿಸ್ಪಂದಿಸುತ್ತ ಇರುತ್ತವೆ. ಪ್ರತಿಯೊಂದು ಕಾಲಘಟ್ಟದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪ್ರಜ್ಞೆ ನಮ್ಮ ಅನುಭವದ ಮೂಲ ಘಟಕವಾಗಿದೆ. ಈ ಅನುಭವದ ಮೂಸೆಯಲ್ಲಿ ರೂಪು ಪಡೆಯುವ ಕಲೆ ಎಂದೂ ತಟಸ್ಥವಾಗಿರಲು ಸಾಧ್ಯವಿಲ್ಲ. ಪರಂಪರೆಯ ಬಸಿರಲ್ಲಿ ನಿಯತವಾಗಿ ಕಲೆಯ ಭ್ರೂಣಗಳು ಹುಟ್ಟಿ ಬೆಳೆಯುವುದರಿಂದಲೇ ಕಲೆಯನ್ನು ಕಾಲದ ಕೈಗೂಸೆಂದು ನಾವು ಕರೆಯುವುದು.

ಲಕ್ಷ್ಯ ಪ್ರಧಾನವಾದ ಶಾಸ್ತ್ರೀಯ ಸಂಗೀತ ಕಾಲಕಾಲಕ್ಕೆ ಅಭಿವ್ಯಕ್ತಿಯನ್ನು ಮಾತ್ರವಲ್ಲ, ತನ್ನ ಆಶಯವನ್ನೂ ಬದಲಾಯಿಸುತ್ತ ಬಂದಿರುವುದನ್ನು ನಾವು ಕಾಣುತ್ತೇವೆ. ಸಂಪ್ರದಾಯ ಸಂಗೀತದಿಂದ ಕವಲೊಡೆದಾಗ ಶಾಸ್ತ್ರೀಯ ಸಂಗೀತ ತನ್ನ ನೀತಿ ಬೋಧಕ (ಡೈಡಾಕ್ಟಿಕ್) ಆಧ್ಯಾತ್ಮಿಕ ಆಶಯಗಳಿಂದ ಕಳಚಿಕೊಂಡಿತ್ತು. ಸಂಗೀತ ತ್ರಿಮೂರ್ತಿಗಳ ಬಳಿಕ ಅದು ತನ್ನ

ಹಿರಿಯ ಸಂಪಾದಕರು, ಉದಯವಾಣಿ, ಮಣಿಪಾಲ–576 104

ದೈವಿಕ ಪ್ರಭಾವಳಿಯನ್ನೂ ತೊರೆದು ಪ್ರಕೃತ ಶುದ್ಧ ಕಲಾ ಪ್ರಕಾರವಾಗಿ ನಮ್ಮ ನಡುವೆ ಇದೆ. ಕರ್ನಾಟಕ ಸಂಗೀತ ಭಕ್ತಿ ಪ್ರಧಾನ ಸಾಹಿತ್ಯವನ್ನು ಹೊಂದಿರುವುದಾದರೂ ವೇದಿಕೆಯಲ್ಲಿ ಅದು ಪ್ರಕಟಗೊಂಡಾಗ ರಸಾನುಭವಕ್ಕಿಂತ ಭಿನ್ನವಾದ ಆಶಯವೊಂದನ್ನು ಅದರ ಮೇಲೆ ನಾವು ಹೇರುವಂತಿಲ್ಲ.

ನಮ್ಮ ಶಾಸ್ತ್ರೀಯ ಸಂಗೀತದ ವಿಕಾಸ ಪಥದಲ್ಲಿ ಮೂಲ ವಿಚಾರಗಳು ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಒಂದು-ಬದಲಾಗುವ ಕಲಾವಿದನ ಸಂವೇದನೆಗಳು, ಎರಡು ಕಲಾ ಪರಿಸರ ಮತ್ತು ಮೂರನೆಯದು ಕಲಾವಿದ ಶ್ರೋತೃ ನಡುವಿನ ಸಂಬಂಧ.

ಸಂವೇದನೆ

ಕಳೆದ ಶತಮಾನದ ಆದಿ ಭಾಗದಲ್ಲಿ ಮಹಾರಾಜರ ಸಮ್ಮುಖದಲ್ಲೊ, ಬಳೇಪೇಟೆ ಮನೆಯೊಂದರ ಮಹಡಿಯಲ್ಲೋ ಹಾಡುತ್ತಿದ್ದ ಮೈಸೂರು ವಾಸುದೇವ ಆಚಾರ್ಯರ ಮನೋಭೂಮಿಕೆಗೂ ಇಂದು ಷಿಕಾಗೋದಲ್ಲಿ ಎನ್.ಆರ್.ಐ. ವಿದೇಶಿ ಶ್ರೋತೃಗಳ ನಡುವೆ ಕುಳಿತು ಹಾಡುತ್ತಿರುವ ಉಣ್ಣಿಕೃಷ್ಣನ್ ಅವರ ಮನಃಸ್ಥಿತಿಗೂ ನಡುವೆ ಬಹಳ ವ್ಯತ್ಯಾಸವಿದೆ. 1930ರ ಸುಮಾರಿಗೆ ಅಂಜುತ್ತ ಅಳುಕುತ್ತ ಸಂಗೀತ ಕ್ಷೇತ್ರವನ್ನು ಪ್ರವೇಶಿಸಿದ ಡಿ.ಕೆ. ಪಟ್ಟಮ್ಮಾಳ್ ಮತ್ತು ಇಂದು ಐದಂಕಿಯ ಸಂಭಾವನೆ ಪಡೆಯುತ್ತಿರುವ ನಿತ್ಯಶ್ರೀ ಮಹಾದೇವನ್ ಅವರ ಸಂಗೀತದ ಕುರಿತ ದೃಷ್ಟಿಕೋನವನ್ನು ಹೋಲಿಸಲಾಗದು. ಗುರುಕುಲ ವಾಸದಲ್ಲಿ ಸಂಗೀತ ಬಿಟ್ಟು ಬೇರೇನೂ ಅರಿಯದ ಸಂಗೀತ ಕಲಾವಿದರ ದೊಡ್ಡ ಸಮುದಾಯ ಹಿಂದೆ ಇತ್ತು. ಇಂದು ಶೈಕ್ಷಣಿಕವಾಗಿ ಮುಂದಿರುವ, ಕಲೆಯನ್ನು ಬೌದ್ಧಿಕ ಮಟ್ಟದಲ್ಲೂ ಗ್ರಹಿಸಬಲ್ಲ, ಸಂವಹನಿಸಬಲ್ಲ ಸಂಗೀತಗಾರರು ನಮ್ಮ ನಡುವೆ ಇದ್ದಾರೆ. ಸಮಕಾಲೀನ ಸಂವೇದನೆಗಳಿಂದ ಮುಕ್ತಗೊಂಡು ಸಂಗೀತದ ವಿಚಾರದಲ್ಲಿ ಮಾತ್ರ ಹಿಂದಿನ ಪೀಳಿಗೆಯವರಂತೆ ಅವರು ವ್ಯವಹರಿಸಬೇಕು ಎಂದು ನಾವು ಅಪೇಕ್ಷಿಸಿದರೆ ಅದು ಸರಿ ಅಂತನಿಸಲಾರದು. ಕಲಾವಿದನ ಗ್ರಹಿಕೆಯೂ ಸ್ಪಂದನವೂ ಸೂಕ್ಷ್ಮವಾದಂತೆ ಆತನ ಕಲೆಯೂ ಅದಕ್ಕನುಗುಣವಾಗಿ ರೂಪುಗೊಳ್ಳುವುದು ಸಹಜ.

ಸನ್ನಿವೇಶ

ಇಂದು ನಾವು ನೋಡುತ್ತಿರುವ ಸಂಗೀತದ ಸನ್ನಿವೇಶ ಹಿಂದಿನದಕ್ಕಿಂತ ತೀರ ಭಿನ್ನವಾಗಿದೆ. ಕಲಾವಿದನಿಗೆ ಪ್ರಕೃತ ಜಾಗತಿಕ ವೇದಿಕೆ ಲಭ್ಯವಿದೆ. ಆಕಾಶವಾಣಿ, ಟಿ.ವಿ., ಕ್ಯಾಸೆಟ್, ಸಿ.ಡಿ., ಇಂಟರ್ನೆಟ್ ಮೊದಲಾದ ಅಭಿವ್ಯಕ್ತಿ ಮಾಧ್ಯಮಗಳು ಆತನನ್ನು ಮುತ್ತಿಕೊಳ್ಳಲು ಸಿದ್ಧವಾಗಿವೆ. ಇಂದಿನ ಕಲಾವಿದ ಒಂದು ಸ್ಫೋಟ ಯುಗದಲ್ಲಿ ಬದುಕುತ್ತಿದ್ದಾನೆ. ಹಲವು ಬಗೆಯ ಪರ-ವಿರುದ್ಧ ಸೆಳೆತಗಳ ನಡುವೆ ಆತ ಸಂಗೀತ ಕ್ಷೇತ್ರದಲ್ಲಿ ಕಾಲೂರಬೇಕಾಗಿದೆ, ಉಳಿಯಬೇಕಾಗಿದೆ. ವೃತ್ತಿ ಕಲಾವಿದನಂತೂ ಆರ್ಥಿಕ ಮೂಲದ ಒತ್ತಡಗಳಿಂದ ತಪ್ಪಿಸಿಕೊಳ್ಳುವಂತಿಲ್ಲ. ಯಾವುದೇ ವಿಧದಲ್ಲಿ ಚಲಾವಣೆಯಲ್ಲಿರಬೇಕಾದ ಅನಿವಾರ್ಯತೆ ಆತನನ್ನು ಸದಾ ಕಾಡುತ್ತಿರುತ್ತದೆ. ಸಂಗೀತ ಆತನಿಗೆ ಕಲೆ, ಸಾಧನ, ಮಾಧ್ಯಮ ಏನೆಲ್ಲವೂ ಆಗುವ ಸಾಧ್ಯತೆ ಇದೆ.

ಸಂವಹನ

ಹಿಂದಿನ ಕಾಲದಲ್ಲಿ ಸಂಗೀತಗಾರ ಮತ್ತು ಶ್ರೋತೃಗಳ ನಡುವಿನ ಸಂಬಂಧ ಸ್ಪಷ್ಟವಾಗಿತ್ತು. ಸಂವಹನದಲ್ಲಿ ಅನಿಶ್ಚಿತತೆ ಕಾಡುವ ಪ್ರಮೇಯವಿರಲಿಲ್ಲ. ಆತ ದೊರೆಗಳ ದರ್ಬಾರ್‌ಗಳಲ್ಲಿ, ದೇವಾಲಯಗಳಲ್ಲಿ ಅಥವಾ ಸಿದ್ಧಗೊಂಡ ರಸಿಕರ ಮುಂದೆ ಕಲಾ ವ್ಯವಹಾರವನ್ನು ನಡೆಸುತ್ತಿದ್ದ. ಸಂವಹನದ ಗುರಿ ಯಾರು ಎನ್ನುವುದರಲ್ಲಿ ದ್ವಂದ್ವವಿರಲಿಲ್ಲ. ಪ್ರಕೃತ ಹೆಚ್ಚಿನ ಸಂದರ್ಭಗಳಲ್ಲಿ ದುಡ್ಡು ಕೊಟ್ಟು ಟಿಕೇಟು ಪಡೆದುಕೊಂಡವರಿಗಾಗಿ ಆತ ಹಾಡಬೇಕಾಗಿದೆ. ಅವರ ಮೆಚ್ಚುಗೆ ಗಳಿಸಬೇಕಾಗಿದೆ,

ಉಳಿಸಿಕೊಳ್ಳಬೇಕಾಗಿದೆ. ಧ್ವನಿ ಸುರುಳಿ ನಿರ್ಮಾಪಕರ ಮರ್ಜಿಗನುಗುಣವಾಗಿ ಆತ ನಡೆದುಕೊಳ್ಳಬೇಕಾಗಿದೆ. ಆರ್ಥಿಕ ರಂಗದಲ್ಲಿ ಸಂಗೀತ ಒಂದು ವ್ಯವಹಾರದ ವಸ್ತುವಾದಾಗ ಅದರ ಮಾರಾಟ ಸಾಮರ್ಥ್ಯದ ಅಂಶಗಳು ಮುಖ್ಯವಾಗಿ ಬಿಡುತ್ತವೆ.

ಕಲೆಯಲ್ಲಿ ಎರಡು ಬಗೆಯ ಬದಲಾವಣೆಗಳು ಕಾಣಿಸಿಕೊಳ್ಳಲು ಸಾಧ್ಯ. ಒಂದು ಅಂತರಂಗದ ವಿಕಾಸ, ಇನ್ನೊಂದು ಬಾಹ್ಯ ಬೆಳವಣಿಗೆ. ಮೊದಲನೆಯದು ಕಲೆಯ ಸಹಜ ಪ್ರಕ್ರಿಯೆ, ಅದು ಜೀವಂತವಾಗಿರುವ ಲಕ್ಷಣ. ವಸ್ತು, ಶೈಲಿ, ತಂತ್ರಗಳ ಸಾಧ್ಯತೆಗಳನ್ನು ಹಿಗ್ಗಿಸುತ್ತ ಕಲಾಪ್ರಕಾರದ ಚೌಕಟ್ಟನ್ನು ಮುರಿಯದೆ ಪರಿಧಿ ವಿಸ್ತರಿಸುವಂತೆ ಮಾಡುವುದು ಕಲೆಯಲ್ಲಿ ನಡೆಯುತ್ತಲೆ ಇರಬೇಕಾದ ಕೆಲಸ. ಇದು ಕಲೆಯಲ್ಲಿ ತೊಡಗಿಸಿಕೊಂಡವರ ನವನವೋನ್ಮೇಷ ಶಾಲಿನಿ ಪ್ರವೃತ್ತಿಯಿಂದ ಉಂಟಾಗುತ್ತದೆ. ನಿಜವಾದ ಅರ್ಥದಲ್ಲಿ ಪ್ರತಿಭಾ ವಿಕಸನ.

ಅಂತರಂಗದಲ್ಲಿ ಬೆಳೆಯದೆ ಬಾಹ್ಯ ರೂಪದಲ್ಲಷ್ಟೆ ಬದಲಾವಣೆಗಳನ್ನು ಮಾಡಿಕೊಳ್ಳುವ ಯತ್ನವೂ ಕಲೆಯಲ್ಲಿ ನಡೆಯುವುದಿದೆ. ಹೆಚ್ಚಿನ ಸಂದರ್ಭಗಳಲ್ಲಿ ಇದಕ್ಕೆ ಕಲಾವಿದನ ತಾತ್ಕಾಲಿಕ ಅಗತ್ಯಗಳು, ಭ್ರಮೆಗಳು ಕಾರಣವಾಗಿರುವುದರಿಂದ ಕಲೆಯ ವಿಕಾಸಕ್ಕೆ ಇದು ದಾರಿ ಮಾಡಿಕೊಡುವುದಿಲ್ಲ.

ಈ ನಿಟ್ಟಿನಲ್ಲಿ ನಾವು ಕರ್ನಾಟಕ ಸಂಗೀತದಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಬೇಕು.

ಕಚೇರಿಯ ಕಾಲಾವಧಿ

ಹಿಂದೆಲ್ಲ ಮೂರು-ನಾಲ್ಕು ಗಂಟೆಗಳ ಕಾಲ ನಡೆಯುತ್ತಿದ್ದ ಕಛೇರಿಯ ಗಾತ್ರ ಪ್ರಕೃತ 120-150 ನಿಮಿಷಗಳಲ್ಲಿ ಸ್ಥಿರಗೊಂಡಿದೆ. ಸಂಗೀತ ಕಲಾವಿದರು, ವಿದ್ಯಾರ್ಥಿಗಳ ಬಾಹುಳ್ಯವಿರುವ ಸಭೆಯಲ್ಲಿ ಮೂರೂವರೆ ತಾಸಿನ ಕಚೇರಿ ನಡೆಯಬಹುದಾದರೂ ಸಾಮಾನ್ಯ ಶ್ರೋತೃವರ್ಗವಿರುವ ಕಛೇರಿಗೆ 120 ನಿಮಿಷಗಳ ಅವಧಿಯ ಸೂಕ್ತವೆನಿಸುತ್ತದೆ. ಇಂದಿನ ಪೀಳಿಗೆ ದೀರ್ಘಕಾಲದ ಉಪಸ್ಥಿತಿಗೆ ಮಾನಸಿಕವಾಗಿ ತರಬೇತಿ ಪಡೆದವರಲ್ಲ. ಜೈವಿಕ ಗಡಿಯಾರ 'ಟಿಕ್' ಅಂದೊಡನೆ, ಕಛೇರಿಯಲ್ಲಿ ನಡೆಯುವ ಶ್ರೋತೃಗಳ ಸಾಮೂಹಿಕ ಸಭಾತ್ಯಾಗವೂ ಇದರಿಂದಾಗಿ ವಿರಳಗೊಳ್ಳಬಹುದು. ಎಂಟು ಗಂಟೆಗಳ ಕಾಲ ನಡೆಯುತ್ತಿದ್ದ ಯಕ್ಷಗಾನ, ಕಥಕಳಿ ಪ್ರದರ್ಶನಗಳು ಪ್ರಕೃತ ಮೂರು ತಾಸುಗಳಿಗೆ ಇಳಿದಿಲ್ಲವೇ?

ಎರಡು ತಾಸಿನ ಕಾರ್ಯಕ್ರಮದಲ್ಲಿ ಕಛೇರಿಯ ಪೂರ್ಣ ಅಭಿವ್ಯಕ್ತಿ ದೊರೆಯಲು ಸಾಧ್ಯವಿಲ್ಲ ಅನ್ನುವ ಮಾತಿನಲ್ಲೂ ಹುರುಳಿಲ್ಲ. ವಿಳಂಬ ಕಾಲದ ಪ್ರಸ್ತುತಿಗೆ ಎರಡು ಪ್ರಧಾನ ರಾಗಗಳ ಪೂರ್ಣ ಆಯ್ಕೆ, ಮಧ್ಯಮ ಕಾಲದ ಕೃತಿಗಳು, ದೇವರನಾಮ, ತಿಲ್ಲಾನ ಜಾವಳಿ, ತನಿ ಆವರ್ತನಗಳ ನಿರ್ವಹಣೆ ಈ ಅವಧಿಯಲ್ಲಿ ಸಾಧ್ಯ.

ಅಭಿವ್ಯಕ್ತಿ

ಇಂದಿನ ಸಂಗೀತ ಕಛೇರಿಗಳಲ್ಲಿ ಕೃತಿ ಬಾಹುಳ್ಯವಿದೆ. ಜನರಂಜನೆಯ ಹಗುರ ತಂತ್ರಗಳೂ ಅತಿಯಾಗಿವೆ ಅನ್ನುವುದು ಸಮಾನ್ಯವಾಗಿ ಕೇಳಿಬರುತ್ತಿರುವ ಆರೋಪ. ಇದರಲ್ಲಿ ಸತ್ಯಾಂಶವಿದೆ. ಕಲಾ ಸಂಗೀತದ (ಆರ್ಟ್ ಮ್ಯೂಸಿಕ್) ಮೂಲ ದ್ರವ್ಯಗಳಾದ ರಾಗಾಲಾಪನೆರವಲ್ ಸ್ವರ ಪ್ರಸ್ತಾರ ಇವೆಲ್ಲ ನಾಮಮಾತ್ರಕ್ಕಿದ್ದು, ಕೃತಿಗಳ ನಿರೂಪಣೆಯು ಕಛೇರಿ ಅನಿಸುತ್ತಿರುವುದನ್ನು ನಾವು ಹಲವೆಡೆಗಳಲ್ಲಿ ಕಾಣಬಹುದು. ಇದಕ್ಕೆ ಶ್ರೋತೃಗಳ ಅಭಿರುಚಿಯ ಬಗೆಗೆ ಕಲಾವಿದರ ಆತಂಕವೇ ಮುಖ್ಯ ಕಾರಣವೆನ್ನಬಹುದು. ಯಾವ ಬಗೆಯ ಸಂಗೀತದಿಂದ ಇವರನ್ನು ಮೆಚ್ಚಿಸಬಹುದು ಎನ್ನುವ ಸಂದೇಹದಿಂದ ಪಾರಾಗಲು ಆತ ಸುವರ್ಣ ಮಾಧ್ಯಮಕ್ಕೆ ಜೋತುಬೀಳುತ್ತಾನೆ. ಸರಾಸರಿ ಸೂತ್ರದಲ್ಲಿ 'ಸರಿ' ಸಮೀಪದಲ್ಲಿರುತ್ತದೆ ಅನ್ನುವ ಖಾತರಿ ಇಲ್ಲ. ಸುಲಭಗ್ರಾಹ್ಯ ಕೃತಿಗಳು ಪುಟುಪುಟು ನೆಗೆತದ

ಮಧ್ಯಮಕಾಲ, ಮೃದಂಗದ ಸೊಲ್ಲುಕಟ್ಟುಗಳೊಂದಿಗಿನ 'ರೆಡಿಮೇಡ್' ಸ್ವರಪ್ರಸ್ತಾರ ಎಲ್ಲರನ್ನೂ ಮೆಚ್ಚಿಸಬಹುದು ಎನ್ನುವ ನಂಬಿಕೆಯಿಂದ ಆ ಬಗೆಯ ಕಛೇರಿಯನ್ನು ಇಂಥ ಸಂದರ್ಭಗಳಲ್ಲಿ ಕಲಾವಿದ ರೂಪಿಸಿಕೊಳ್ಳುತ್ತಾನೆ. ಕಲಾ ಸಂಘಟಕರು ಪ್ರಜ್ಞಾಪೂರ್ವಕವಾಗಿ ತಮ್ಮ ಶ್ರೋತೃವರ್ಗದ ಅಭಿರುಚಿಯ ಖಚಿತ ಗ್ರಹಿಕೆ ಅವರಿಗಿದ್ದಲ್ಲಿ ಕಲಾವಿದರಿಂದ ತಮಗೆ ಬೇಕೆನಿಸಿದ ರೀತಿಯಲ್ಲಿ ಕಛೇರಿಯನ್ನು ರೂಪಿಸಿಕೊಳ್ಳುವುದು ಸಾಧ್ಯ. ಉದಾಹರಣೆಗೆ ಮೈಸೂರು ನಾಗರಾಜ ಅಥವಾ ಯು. ಶ್ರೀನಿವಾಸ್ ತಮ್ಮ ತಾಂತ್ರಿಕ ಪಾರಮ್ಯದಿಂದ ಶ್ರೋತೃಗಳನ್ನು ದಂಗುಪಡಿಸಬಲ್ಲರು. ಅಷ್ಟೆ ಸಮರ್ಥವಾಗಿ ಗಂಭೀರವಾದ ಪ್ರಸ್ತುತಿಯನ್ನೂ ನೀಡಬಲ್ಲರು. ಶ್ರೋತೃಗಳ ಅಪೇಕ್ಷೆ ಮೊದಲೇ ಕಷ್ಟವಾದರೆ ಅದಕ್ಕನುಗುಣವಾದ ಕಛೇರಿಯನ್ನು ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಇಂಥ ಸಾಮರ್ಥ್ಯ ಇಲ್ಲದಿದ್ದರೂ "ಶ್ರೋತೃಗಳಿಗೆ ಬೇಕು, ಅದಕ್ಕಾಗಿ ಕೊಡುತ್ತಿದ್ದೇವೆ" ಎನ್ನುವ ಕುಂಟು ನೆಪದಿಂದ ತಮ್ಮ ಗಿಮಿಕ್‌ನ್ನೇ ಬಂಡವಾಳವಾಗಿರಿಸಿಕೊಂಡು 'ದೊಡ್ಡ ಜನ' ಅಂತನಿಸಿಕೊಂಡಿರುವ ಕಲಾವಿದರೂ ಇದ್ದಾರೆ.

ಅಧಿಕ ಲಾಭ, ಜನಪ್ರಿಯತೆಯ ನಿಟ್ಟಿನಲ್ಲಿ ಶಾಸ್ತ್ರೀಯ ಸಂಗೀತಗಾರರಿಗೆ ಇನ್ನೊಂದು ಕವಲುದಾರಿ ನಿರ್ಮಾಣಗೊಂಡಿರುವುದು ವರ್ತಮಾನದ ಒಂದು ವಿಶೇಷ. ನಮ್ಮ ಹಲವು ಗಾಯಕ ಗಾಯಕಿಯರು ಲಘು ಸಂಗೀತ, ಚಲನಚಿತ್ರ ಗಾಯನವನ್ನೂ ಸಮಾನಾಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಚಲನಚಿತ್ರ ಮಾಧ್ಯಮ ಶಾಸ್ತ್ರೀಯ ಸಂಗೀತಗಾರರನ್ನು ಬಳಸಿಕೊಳ್ಳುವುದು ಹೊಸದೇನಲ್ಲ. ಎಂ.ಎಸ್. ಸುಬ್ಬುಲಕ್ಷ್ಮಿ, ವಸಂತಕುಮಾರಿ, ಪಟ್ಟಮ್ಮಾಳ್, ಜಿ.ಎನ್.ಬಿ., ರಾಧಾ ಜಯಲಕ್ಷ್ಮಿ, ಸುಂದರಾಂಬಾಳ್, ಎಸ್.ಜಿ. ಕಿಟ್ಟಪ್ಪ, ಇವರೆಲ್ಲ ಚಲನಚಿತ್ರಕ್ಕೆ ಕಂಠದಾನ ಮಾಡಿದವರೇ ಆಗಿರುತ್ತಾರೆ. ಆದರೆ ಅದು ಅವರ ಜೀವಿತದಲ್ಲಿ ಒಂದು ಸರಿಯುವ ಘಟ್ಟವಾಗಿ ಮಾತ್ರ ಬಂದಿತ್ತು. ಆದರೆ ಇಂದು ಎರಡೂ ರಂಗಗಳಲ್ಲಿ ಭದ್ರವಾಗಿ ಕಾಲೂರಿರುವ ಕಲಾವಿದರು ನಮ್ಮಲ್ಲಿದ್ದಾರೆ. ಉದಾಹರಣೆಗೆ ನಿತ್ಯಶ್ರೀ ಮಹಾದೇವನ್, ಉನ್ನಿಕೃಷ್ಣನ್, ಜೇಸುದಾಸ್, ಮೊದಲಾದವರು.

ಪಡೆದದ್ದು-ಕಳೆದುಕೊಂಡದ್ದು

ನಮ್ಮ ಸಂಗೀತ ಕಾಲ ಯಾನದಲ್ಲಿ ಕಳೆದುಕೊಂಡದ್ದೂ ಇದೆ, ಪಡೆದುಕೊಂಡದ್ದೂ ಇದೆ. ಕ್ಲಾರಿನೆಟ್, ಸ್ಯಾಕ್ಸೋಫೋನ್, ಮ್ಯಾಂಡೋಲಿನ್ ಗಿಟಾರ್ ಹೊಸದಾಗಿ ರಂಗಪ್ರವೇಶ ಮಾಡಿದ ವಾದ್ಯಗಳು. ಜಲತರಂಗ, ಮುಖವೀಣೆ, ಹಾರ್ಮೋನಿಯಂ ಕರ್ನಾಟಕ ವೇದಿಕೆಯಿಂದ ಕಣ್ಮರೆಯಾಗಿವೆ. ತಂಬೂರದ ಸ್ಥಾನವನ್ನು ಇಲೆಕ್ಟ್ರಾನಿಕ್ ಶ್ರುತಿ ಪೆಟ್ಟಿಗೆ ಆಕ್ರಮಿಸಿಕೊಂಡಿದೆ. ಈ ಹೊಸ ವಾದ್ಯ ಸಾಧನಗಳ ಬಗೆಗೆ ಸಂಪ್ರದಾಯಸ್ಥರ ಅಸಮ್ಮತಿ ಇದ್ದರೂ ಮಂತ್ರದಂಡದಿಂದ ಅವನ್ನು ಮಾಯ ಮಾಡಲು ಬರುವುದಿಲ್ಲ. ಅವು ನಮ್ಮ ನಡುವೆ ಇವೆ. ಶ್ರೋತೃಗಳು, ಕಲಾವಿದರು ಅವನ್ನು ಸ್ವೀಕರಿಸಿರುತ್ತಾರೆ. ಲಭ್ಯ ಇರುವುದನ್ನು ಹೇಗೆ ನಮ್ಮ ಅನುಕೂಲಕ್ಕೆ ಸರಿಯಾಗಿ ದುಡಿಸಿಕೊಳ್ಳಬಹುದು ಅನ್ನುವುದು ನಮ್ಮ ಧೋರಣೆಯಾಗಿರಬೇಕೇ ಹೊರತು ಹಪಹಪಿಕೆ ಅಲ್ಲ. ಪಾಲಘಾಟ್ ಮಣಿ ಅಯ್ಯರ್ ಅವರಂಥವರಿಗೂ ಮೈಕಾಸುರನನ್ನು ಕಛೇರಿ ವೇದಿಕೆಯಿಂದ ಉಚ್ಚಾಟಿಸಲು ಸಾಧ್ಯವಾಯಿತೆ? ಟೇಪ್‌ರೆಕಾರ್ಡರ್, ಸಿ.ಡಿ., ಡಿ.ವಿ.ಡಿ., ಕಂಪ್ಯೂಟರ್ ಇವೆಲ್ಲ ಅನೇಕ ಸಾಧ್ಯತೆಗಳನ್ನು ತೆರೆದಿಡಬಲ್ಲ ಸಾಧನಗಳಾಗಿವೆ. ಶಾಸ್ತ್ರೀಯ ಸಂಗೀತಕ್ಕಾಗಿ ಇವನ್ನು ಸಮರ್ಥವಾಗಿ ದುಡಿಸಿಕೊಳ್ಳುವುದರಲ್ಲಿ ನಮ್ಮ ಜಾಣತನವಿದೆ.

ವಿಕಾಸವಾದದ ಗಟ್ಟಿತನ ಮತ್ತು ನಮ್ಯತೆ ತತ್ತ್ವ ನಮ್ಮ ಸಂಗೀತದ ಅಭಿವ್ಯಕ್ತಿಗೂ ಸಾಧನಗಳಿಗೂ ಅನ್ವಯವಾಗುತ್ತದೆ. ಕಾಲಾನುಕ್ರಮದಲ್ಲಿ ಹಲವಾರು ರಾಗ, ಕೃತಿಗಳು ಗಟ್ಟಿಯಾಗಿ ಉಳಿದುಕೊಂಡಿರುವುದು, ಅನೇಕ ರಾಗ, ಕೃತಿ, ತಾಳಗಳು ಮಸುಕಾಗಿರುವುದೂ ಇದೇ ಕಾರಣದಿಂದ.

ಸೂಕ್ಷ್ಮ ಹಾಗೂ ಸಂಕೀರ್ಣ ವಾದ್ಯಗಳಾದ ವೀಣೆ, ಗೋಟ್ಟುವಾದ್ಯಗಳು ಮುಂದೆ ಈ ಅಪಾಯವನ್ನು ಎದುರಿಸಬೇಕಾಗಿ ಬರಬಹುದು. ಇದೇ ಸಂದರ್ಭದಲ್ಲಿ ಅನೇಕ ಹೊಸ ಕೃತಿಗಳು, ತಿಲ್ಲಾನಗಳು ರಚನೆಗೊಂಡಿರುವುದನ್ನೂ ನಾವು ಗಮನಿಸಬೇಕು.

ಪ್ರಯೋಗಗಳು

ಎಲ್ಲ ಕಲಾ ಪ್ರಕಾರಗಳಂತೆ ಶಾಸ್ತ್ರೀಯ ಸಂಗೀತದಲ್ಲೂ ಹಲವು ಬಗೆಯ ಪ್ರಯೋಗಗಳು ನಡೆದಿವೆ, ನಡೆಯುತ್ತಿವೆ. ಅರವತ್ತರ ದಶಕದಲ್ಲಿ ಎನ್. ರಮಣಿ ಮತ್ತು ಹರಿಪ್ರಸಾದ ಚೌರಾಸಿಯಾ ಈ ಕರ್ನಾಟಕ-ಹಿಂದುಸ್ತಾನಿ ಜುಗಲ್‌ಬಂದಿ ನಡೆಸಿದ ಬಳಿಕ ಆ ಪ್ರಯೋಗ ಗಾಯನ ಕ್ಷೇತ್ರಕ್ಕೂ ವಿಸ್ತರಿಸಿ ಒಂದು ವರ್ಗದ ಶ್ರೋತೃಗಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಪಾಶ್ಚಾತ್ಯ ಶೈಲಿಯೊಂದಿಗಿನ 'ಫ್ಯೂಷನ್' ಇನ್ನೊಂದು ಬಗೆಯ ಪ್ರಯೋಗ. ವಾದ್ಯ ಸಂಗೀತ ಸಂಯೋಜನೆ, ಥೀಮ್ ಮ್ಯೂಸಿಕ್ ಮೊದಲಾದ ನಿಟ್ಟಿನಲ್ಲೂ ಪ್ರಯೋಗಗಳು ನಡೆದಿವೆ. ಪ್ರಯೋಗ ವಿಕಾಸದ ಮೊದಲ ಅಸ್ಪಷ್ಟ ಹೆಜ್ಜೆ. ಹಾಗಾಗಿ ಅವುಗಳನ್ನು ನಾವು ಸಾರಾಸಗಟಾಗಿ ತಿರಸ್ಕರಿಸಬೇಕಾದ್ದಿಲ್ಲ. ಆದರೆ ಪ್ರತಿಯೊಂದು ಪ್ರಯೋಗವೂ ಕೆಲವೊಂದು ಪ್ರಶ್ನೆಗಳನ್ನು ಉತ್ತರಿಸುವ ಅಗತ್ಯವಿದೆ: 1. ಪ್ರಯೋಗದ ಹಿಂದಿರುವ ತಾತ್ತ್ವಿಕ ನಿಲುವೇನು? 2. ಕಲಾ ಸೌಂದರ್ಯದ ದೃಷ್ಟಿಯಿಂದ ಅದು ಹಿತಕರವೇ? 3. ಕಲಾ ಪ್ರಕಾರ ಬೆಳೆಸಿಕೊಂಡು ಬಂದಿರುವ ಸಾಂಸ್ಕೃತಿಕ ಪರಂಪರೆಗೆ ಪ್ರಯೋಗ ಪೂರಕವಾಗಿದೆಯೆ? ರಸಿಕರ ರಸಾನುಭವವನ್ನು, ಕಲಾವಿದನ ಅಭಿವ್ಯಕ್ತಿ ಸಾಮರ್ಥ್ಯವನ್ನು ಎತ್ತರಿಸುವ ಯತ್ನ ಅಲ್ಲಿದೆಯೆ? ಈ ಪ್ರಶ್ನೆಗಳನ್ನು ಉತ್ತರಿಸುವಲ್ಲಿ ಸೋಲುವ ಪ್ರಯೋಗಗಳ ಹಿಂದೆ ಒಂದೋ ವಾಣಿಜ್ಯದ ಸೆಳೆತ ಅಥವಾ ಕಲಾವಿದನ ವೈಯಕ್ತಿಕ ತೀಟೆ ಇರುವುದು ಸ್ಪಷ್ಟ. ಇಂಥವನ್ನು ಸ್ಪಷ್ಟವಾಗಿ ತಿರಸ್ಕರಿಸಲು ರಸಿಕನಲ್ಲಿ ಯಾವ ಗೊಂದಲವೂ ಇರಲಾರದು.


ಶತಮಾನಗಳಿಂದ ಆಳವಾಗಿಯೂ ವಿಸ್ತಾರವಾಗಿಯೂ ಹರಿದು ಬಂದಿರುವ ಕರ್ನಾಟಕ ಸಂಗೀತ ವಾಹಿನಿ ಬತ್ತುವ, ದಿಕ್ಕು ತಪ್ಪುವ ಭಯ ನಮ್ಮನ್ನು ಕಾಡಬೇಕಾದ್ದಿಲ್ಲ. ಅತ್ಯಂತ ಪ್ರತಿಭಾವಂತ ಯುವ ಕಲಾವಿದರು, ಸಂಗೀತಜ್ಞರು ನಮ್ಮ ನಡುವೆ ಇದ್ದಾರೆ. ಪೋಷಣೆ ನೀಡಬಲ್ಲ ಸಂಘ-ಸಂಸ್ಥೆಗಳು, ಪ್ರಾಯೋಜಕರು ಇದ್ದಾರೆ. ಶ್ರೋತೃಗಳಾದ ನಮ್ಮಿಂದ ಬದ್ಧತೆಯನ್ನು, ನಿಷ್ಠೆಯನ್ನು ಮತ್ತು ಪ್ರೋತ್ಸಾಹವನ್ನು ಮಾತ್ರ ಅದು ಅಪೇಕ್ಷಿಸುತ್ತದೆ.

ಭಾಗ: ನಾಲ್ಕು

ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ನೃತ್ಯಕಲಿಕೆ- ಉಳಿಕೆಯ ಸಾಧ್ಯತೆಗಳು

□ ಕುದ್ಕಾಡಿ ವಿಶ್ವನಾಥ ರೈ



ಕರಾವಳಿಯಲ್ಲಿ ನೃತ್ಯಕಲೆಯನ್ನು ಉಳಿಸಿ. ಬೆಳೆಸುವುದಕ್ಕೆ ಇರುವ ಸಮಸ್ಯೆಗಳು, ಅವುಗಳ ಕಾರಣಗಳು, ಪರಿಹಾರದ ಸಾಧ್ಯತೆಗಳ ಬಗ್ಗೆ ಒಂದು ಕಿರುನೋಟ ಹರಿಸುವ ಯತ್ನವೇ ಈ ಲೇಖನ. ಒಬ್ಬ ಶಿಕ್ಷಕನಾಗಿ, ಪ್ರದರ್ಶನಕಾರನಾಗಿ, ವಿದ್ಯಾರ್ಥಿಯ ನೆಲೆಯಲ್ಲಿ ಈ ನಿಟ್ಟಿನಲ್ಲಿ ನನ್ನ ಚಿಂತನೆಗಳು ಹೀಗಿವೆ-

ನೃತ್ಯ ಶಿಕ್ಷಕರಿಗಿರುವ ಸಮಸ್ಯೆಗಳಲ್ಲಿ ಮೊದಲನೆಯದು ಅವರ ಕೀಳರಿಮೆ. ಅವರಲ್ಲಿ ನೃತ್ಯಕ್ಕೆ ಪೂರಕವಾದ ಸಮನ್ವಯ ತಿಳುವಳಿಕೆಯ ಕೊರತೆಯಿದೆ. ಮಾತ್ರವಲ್ಲ ತಿಳಿದುಕೊಳ್ಳಬೇಕು ಎಂಬ ಆಸಕ್ತಿಯ ಕೊರತೆಯೂ ಇದೆ. ಆರ್ಥಿಕ ಕೊರತೆ ಇರಬಹುದು ಅಥವಾ ಸಮಾಜದಲ್ಲಿರುವ ಪರಂಪರೆಯ ಬಿಗಿ ಹಿಡಿತವಾಗಿರಬಹುದು ಅಥವಾ ಇಷ್ಟೇ ಸಾಕೆಂಬ ಅಲ್ಪತೃಪ್ತಿಯೂ ಆಗಿರಬಹುದು. ಇಲ್ಲಿ 'ಶಾಸ್ತ್ರೀಯ' ಎಂಬ ಭರತನಾಟ್ಯದ ಪರಂಪರೆಯು ಕಳೆದ ಐವತ್ತು ವರ್ಷ-ನೂರು ವರ್ಷಗಳಷ್ಟು ಹಿಂದೆ ಹೊರ ರಾಜ್ಯಗಳ ಕಲಾವಿದರಿಂದ ಪ್ರೇರಿತವಾಗಿ ಪ್ರಕಾಶಕ್ಕೆ ಬಂದುದು ಎನ್ನುವುದು ನಿಜ. ಅದೇ ವೇಳೆ, ಈ ನೆಲದಲ್ಲಿ ಅದು ಸುಪ್ತವಾಗಿತ್ತು ಎಂಬುದೂ ನಿಜ.

ನೃತ್ಯ, ಸಂಗೀತಾದಿ ಕಲೆಗಳು [illegible] ಕಾಲದಲ್ಲಿ ಕೆಳವರ್ಗದ ಜನಪದರಲ್ಲಿದ್ದು ಅದು ಮತ್ತೆ ದೇಶೀಯವಾಗಿ, ಮಾರ್ಗೀಯ

ಅಧ್ಯಕ್ಷರು, ಕರಾವಳಿ ನೃತ್ಯ ಕಲಾ ಪರಿಷತ್ತು, ಸುಳ್ಯ ಪದವು, ಪುತ್ತೂರು - 574 313

ಮಟ್ಟವನ್ನು ಮುಟ್ಟುವುದು. ಕರಾವಳಿಯಲ್ಲಿ ಜನಪದ ನೃತ್ಯ ಸಂಗೀತಗಾರರು ಇಲ್ಲಿಯ ಆರಾಧನೆಯ ಅವಿಭಾಜ್ಯ ಅಂಗವಾಗಿದ್ದರು. ಅವರ ಹಾಡು, ಲಯ-ವಾದ್ಯಗಳ ನುಡಿತ, ಕುಣಿತದ ಹೆಜ್ಜೆಗಾರಿಕೆ, ಬಣ್ಣಗಾರಿಕೆ, ವೇಷಭೂಷಣ-ಅಲಂಕಾರ-ವಿನ್ಯಾಸಗಳ ಸ್ವರೂಪಗಳೆಲ್ಲವನ್ನೂ ಅರಗಿಸಿಕೊಂಡು ಯಕ್ಷಗಾನವೆಂಬ ಒಂದು ಅತಿ ರಂಜನೀಯ ದೇಶೀ ನಾಟ್ಯಪ್ರಕಾರ ಜನಸಮುದಾಯವನ್ನು ತನ್ನ ತೆಕ್ಕೆಯಲ್ಲಿ ಇಟ್ಟುಕೊಂಡುದರಿಂದ, ಇಲ್ಲಿ ಭರತ ನಾಟ್ಯ ಮಾತ್ರವಲ್ಲ, ಇತರ ಶಾಸ್ತ್ರೀಯ ನೃತ್ಯ ಸಂಗೀತಗಳಿಗೂ ಜನರನ್ನು ಸೆಳೆಯುವುದು ಸುಲಭ ಸಾಧ್ಯವಾಗಿಲ್ಲ.

ಇತ್ತೀಚೆಗೆ ವಿದ್ಯಾವಂತರಾದವರು, ಅನುಕೂಲವಂತರು ತಮ್ಮ ಮಕ್ಕಳಿಗೆ ನೃತ್ಯವನ್ನು ಕಲಿಸುತ್ತಿದ್ದಾರೆ. ಭರತ ನಾಟ್ಯ ಗುರುಗಳಿಗೆ ಉತ್ತಮ ಬೇಡಿಕೆ ಇದೆ ಎಂಬುದಾಗಿ ಮೇಲ್ನೋಟಕ್ಕೆ ಕಂಡುಬಂದರೂ ಇತರ ವೃತ್ತಿಗಳಿಗಿರುವ ಆಕರ್ಷಣೆ ನೃತ್ಯಕಲೆಗೆ, ನೃತ್ಯ ಗುರುಗಳಿಗೆ ಈ ಕರಾವಳಿಯಲ್ಲಿ ಇನ್ನೂ ಬಂದಿಲ್ಲ. ಇಲ್ಲಿಯ ನೃತ್ಯಗುರುಗಳು ಇತರರ ಆಶ್ರಯವಿಲ್ಲದೆ ಸ್ವಾಭಿಮಾನದಿಂದ, ನಮ್ಮದೂ ಒಂದು ಪ್ರತಿಷ್ಠಿತ ವೃತ್ತಿ, ಉತ್ತಮ ನೌಕರಿಯಾಗಿದೆ ಎಂದು ತೋರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಶ್ರೀಮಂತರ ಕೃಪಾಶ್ರಯವಿಲ್ಲದೆ ಇಲ್ಲಿಯ ನೃತ್ಯಗುರುಗಳು ಸಂಘಟಿತವಾಗಿ ಒಂದು ಉತ್ತಮ ಪ್ರಯೋಗ ಪ್ರದರ್ಶನ ನೀಡುವುದಕ್ಕೆ ಚಡಪಡಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಈ ಸಮಸ್ಯೆಗೆ ಪರಿಹಾರ ಇಲ್ಲವೇ- ಎಂದರೆ ಇದೆ. ಶಿಕ್ಷಣ ಸಂಸ್ಥೆಗಳಲ್ಲಿ ಇತರ ಪಠ್ಯೇತರ ವಿಷಯಗಳಂತೆ ನೃತ್ಯಕಲೆಯೂ ಉಚಿತವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಸಿಗುವಂತಾಗಲು ನೃತ್ಯ ಶಿಕ್ಷಕರುಗಳ ನೇಮಕಾತಿಯಾದರೆ ಚೆನ್ನ. ಯಕ್ಷಗಾನವೂ ನಾಟ್ಯ ಶಾಸ್ತ್ರದಲ್ಲಿ ತಿಳಿಸಿದ ಅಂಶಗಳೆಲ್ಲವನ್ನು ಒಳಗೊಂಡ ಒಂದು ನಾಟ್ಯ ಪ್ರಕಾರವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಂಡರೆ ಮುಂದಿನ ಬೆಳವಣಿಗೆಗೆ ಒಂದು ದಾರಿಯಾಗುತ್ತದೆ. ವಾಸ್ತವವಾಗಿ ನಮ್ಮದು ಕಸ್ತೂರಿ ಮಗದ ಪಾಡಾಗಿದೆ. ಕೂಚುಪುಡಿ, ಮೋಹಿನಿ ಆಟ್ಟಂ ಇತ್ಯಾದಿಗಳನ್ನು ಪರೀಕ್ಷೆಗಳಿಗೆ ಇಟ್ಟ ನಮ್ಮ ಬುದ್ಧಿವಂತ ನೃತ್ಯಗುರುಗಳು, ಮಂಟಪ ಉಪಾಧ್ಯಾಯರಂಥವರು ಯಕ್ಷಗಾನದಲ್ಲಿ ಕಂಡುಕೊಂಡ ನೃತ್ಯ ನಾಟ್ಯ ಪ್ರಕಾರ ಪ್ರಯೋಗವನ್ನು ಪರೀಕ್ಷೆ ದೃಷ್ಟಿಯಿಂದಲೂ ಗಮನಿಸಿಲ್ಲವೆನ್ನುವುದು ಕಟುವಾಸ್ತವ.

ನಮಗೆ-ನೃತ್ಯಗುರುಗಳಿಗೆ, ನೃತ್ಯ ಸಂಗೀತಗಳಲ್ಲಿ ಮತ್ತು ಹಿಮ್ಮೇಳ ವಾದ್ಯ ನುಡಿತಗಳಲ್ಲಿ ಪ್ರಶಿಕ್ಷಣ ಕಮ್ಮಟ, ಪುನಶ್ಚೇತನ ಕಾರ್ಯಾಗಾರಗಳಿರಬೇಕು. ಇವುಗಳಲ್ಲಿ ನಾವು ದೈಹಿಕವಾಗಿ, ಮಾನಸಿಕವಾಗಿ ಲವಲವಿಕೆ ಪಡೆಯುವುದು ಒಳ್ಳೆಯದು. ಅಲ್ಲಿ ನಮ್ಮ ಹಿರಿತನ, ಕಿರಿತನಗಳನ್ನು ಮರೆತು ಒಂದು ಕಲಾ ಸಂಸಾರವಾಗಿ ಕಾರ್ಯನಿರ್ವಹಿಸುವುದು ಬಹುಶಃ ಸಾಧ್ಯವಾದೀತು.

ನಮ್ಮ ಶಾಲೆ, ಕಾಲೇಜುಗಳಲ್ಲಿ, ಕ್ಯಾಸೆಟ್ ಹಾಕಿ ಕುಣಿಯುವುದು, ಯಾವುದೋ ಹಾಡುಗಳನ್ನು ಅನುಕರಣೆ ಮಾಡಿ ಹಾಡುವುದು ಇತ್ಯಾದಿ ಚಾಳಿಗಳಿಗೆ ಮುಖ್ಯ ಕಾರಣ ಅವರಿಗೆ ಪರ್ಯಾಯವಾಗಿ ಬೇರೆ ನೃತ್ಯ ಕಲಾಪ್ರಕಾರ ಸುಲಭದಲ್ಲಿ ಸಿಗದಿರುವುದು. ಆ ರೀತಿ ಮಾಡುವುದಕ್ಕೆ-ಪ್ರದರ್ಶನ ನೀಡುವುದಕ್ಕೆ ಹೆಚ್ಚು ಪ್ರೋತ್ಸಾಹ ಸಿಗುವುದರಿಂದ ಅದನ್ನು ಮಾಡುತ್ತಾರೆ. ಜನ ಸಮುದಾಯವನ್ನು ಮುಟ್ಟುವ, ಉನ್ನತ ಮಟ್ಟದ ಪ್ರದರ್ಶನವನ್ನು ನೀಡಿದರೆ ಯಾರೂ ಬೇಡವೆನ್ನುವುದಿಲ್ಲ. ಅಂತಹ ಪ್ರದರ್ಶನ ಇನ್ನು ಯಾವಾಗ ಬರುತ್ತದೆ ಎಂದು ಕಾಯುತ್ತಿರುತ್ತಾರೆ. ಸಮುದಾಯದತ್ತ ಶಾಲೆ ಎಂಬ ಶಿಕ್ಷಣ ತತ್ತ್ವದಂತೆ, ಕಲೆಯತ್ತ ಸಮುದಾಯ ಬರುವುದಲ್ಲ- ಸಮುದಾಯದತ್ತ ಕಲೆ ಹೋಗಬೇಕೆಂಬ ಬದುಕುವ ಕಲೆಯನ್ನು ನಾವು ಅಳವಡಿಸಿಕೊಳ್ಳಬೇಕಾಗುತ್ತದೆ.

ಉತ್ತಮ ನೃತ್ಯ ಪ್ರದರ್ಶನವನ್ನು ಆಸ್ವಾದಿಸಲು ಸರಳ ವ್ಯವಸ್ಥೆಯು ಸಾಕಾಗುತ್ತದೆ. ಇದಕ್ಕೆ ಹಣ ಖರ್ಚು

ಮಾಡುವುದಕ್ಕಿಂತ ಬುದ್ಧಿ ಖರ್ಚು ಮಾಡಿದರೆ, ಕಲಾತ್ಮಕವಾದ, ವೈಚಾರಿಕವಾದ, ಹೃದಯವನ್ನು ಮುಟ್ಟುವ ಪ್ರದರ್ಶನ ನೀಡುವುದು ಸಾಧ್ಯವಾಗಬಹುದು. ಭರತನಾಟ್ಯದಲ್ಲಿ ಪರೀಕ್ಷೆಗಳಿವೆ. ವಿದ್ವತ್ ಮಾಡಿದವರು ಅವರಿರುವಲ್ಲಿಯೇ ಒಂದು ನೃತ್ಯ ತರಗತಿಯನ್ನು ಸ್ವತಂತ್ರವಾಗಿ ನಡೆಸಬಹುದು. ನೃತ್ಯ ಸಂಗೀತಗಳ ಅಭ್ಯಾಸ, ಸುಂದರ ಬದುಕಿಗೆ, ಸ್ವಾವಲಂಬಿ ವೃತ್ತಿಗೆ ಭದ್ರ ಬುನಾದಿಯೂ ಹೌದು.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಸಾಂಸ್ಕೃತಿಕ ವಸ್ತುಗಳನ್ನು ಸುಡುವ ಪಿಡುಗು

☐ ಪ್ರೊ। ಅಮೃತ ಸೋಮೇಶ್ವರ



ದಿನ ಬೆಳಗಾದರೆ ದಿನಪತ್ರಿಕೆಗಳಲ್ಲಿ ಅನೇಕ ದೇವಸ್ಥಾನ, ದೈವಸ್ಥಾನ, ಆಲಡೆ, ನಾಗಬನ ಇತ್ಯಾದಿಗಳ ನವೀಕರಣ, ಬ್ರಹ್ಮಕಲಶೋತ್ಸವ ಇತ್ಯಾದಿಗಳ ಹಾಗೂ ವಿವಿಧ ವಿಶಿಷ್ಟ ಉತ್ಸವಗಳ ಜಾಹೀರಾತು, ಪರಿಚಯ ಲೇಖನ- ಇಂಥವುಗಳನ್ನು ನೋಡಬಹುದು. ಜನರಲ್ಲಿ ಇತ್ತೀಚೆಗೆ ಭಕ್ತಿ ಉಕ್ಕೇರಿದೆ ಎಂದೇನೂ ಇದರ ಅರ್ಥವಲ್ಲ. ಅನೇಕ ವೇಳೆ ಇಂಥ ಜೀರ್ಣೋದ್ಧಾರ, ನವೀಕರಣ ಕಾರ್ಯಗಳು, 'ಇನ್ನೊಬ್ಬರಿಗಿಂತ ನಾವೇನು ಕಡಿಮೆ?' ಎಂಬ ಸ್ಪರ್ಧಾತ್ಮಕ ಬುದ್ಧಿಯಿಂದ ನಡೆಯುತ್ತವೆ. ಜೀರ್ಣೋದ್ಧಾರದ ಅಗತ್ಯ ಇಲ್ಲದಲ್ಲಿಯೂ ನಾನಾ ಕಾರಣಗಳಿಂದ ಜೀರ್ಣೋದ್ಧಾರ ಕಾರ್ಯ ನಡೆಯುತ್ತದೆ! ಈಗ ಜನರ ಕೈಯಲ್ಲಿ ಹಣ ಚೆನ್ನಾಗಿ ಓಡಾಡುತ್ತದೆ. ಸಾಹಿತ್ಯ, ವಿದ್ಯೆ, ಕಲೆ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ಕೆಲಸಗಳಿಗೆ ಕೈಯೆತ್ತಿ ದಾನ ಕೊಡದ ಮಂದಿ, ಧಾರ್ಮಿಕ ಕಾರ್ಯಗಳಿಗೆ ಧಾರಾಳ ದಾನ ನೀಡುತ್ತಾರೆ. ಹಾಗಾಗಿ ವಿಧವಿಧದ ಜೀರ್ಣೋದ್ಧಾರದ ಕೆಲಸಗಳು ಅನಾಯಾಸವಾಗಿ ನಡೆಯುತ್ತವೆ.

ಹಲವು ಸಂದರ್ಭಗಳಲ್ಲಿ ಇಂಥ ಉತ್ಸವಗಳ ಉತ್ಸಾಹದಲ್ಲಿ ಜೀರ್ಣೋದ್ಧಾರದ ಹೆಸರಿನ ಹೊಸ ಕಟ್ಟಡಗಳ ಸೃಷ್ಟಿ ವೈಭವದಲ್ಲಿ ಎಂಥ ಸಂಸ್ಕೃತಿ ನಾಶದ ಕೆಲಸಗಳು ನಡೆಯುತ್ತವೆ. ಎಂಬುದನ್ನು

ಒಲುಮೆ, ಕೋಟೆಕಾರು, ಮಂಗಳೂರು–575 022

ಹೆಚ್ಚಿನವರು ಗಮನಿಸುವುದಿಲ್ಲ. 'ಪ್ರತಿಯೊಂದು ಪ್ರದೇಶಕ್ಕೂ ಸಂಬಂಧಪಟ್ಟಂತೆ ಆರಾಧನಾ ಮಂದಿರಗಳಲ್ಲಿ ವಿಶಿಷ್ಟ ವಾಸ್ತುಶೈಲಿ ಬೆಳೆದು ಬಂದಿರುತ್ತದೆ. ನವೀಕರಣದ ಭ್ರಮೆಯಲ್ಲಿ ಅನೇಕ ದೇವಾಲಯ, ದೈವಸ್ಥಾನಗಳಿಗೆ ಸಂಬಂಧಪಟ್ಟ ಕಟ್ಟಡಗಳು ಆಯ, ಆಕಾರ, ಕಲಾತ್ಮಕತೆ, ಶಿಲ್ಪಶೈಲಿ ಪರಂಪರೆಗಳನ್ನು ಕಳಕೊಂಡು ಅಥವಾ ಕೆಡಿಸಿಕೊಂಡು, ಯಾವುದೋ ಪ್ರದೇಶದ ಶಿಲ್ಪ ವಿನ್ಯಾಸವನ್ನು ಅನುಕರಣೆಯಿಂದ ಅಳವಡಿಸಿಕೊಂಡು, ಕಾಂಕ್ರೀಟಿನ ಕಟ್ಟಡ ಸಂಕೀರ್ಣಗಳಾಗಿ ತಲೆಯೆತ್ತುತ್ತಿವೆ. ಅಂಗಣಕ್ಕೂ ಅಮೃತಶಿಲೆ ಹಾಸುವಷ್ಟು ಔದಾರ್ಯ ಬೆಳೆಯುತ್ತಿದೆ.

ಗಿಡಮರ ಬಳ್ಳಿಗಳಿಂದ ಸದಾ ನಿಬಿಡವಾಗಿರಬೇಕಾದ ನಾಗಬನಗಳು ಕಾಂಕ್ರೀಟಿನ ಬೋಳು ಕಟ್ಟೆಗಳಾಗಿ ಬಿಸಿಲಿನ ಬೇಗೆಯಲ್ಲಿ ಬೇಯತೊಡಗಿವೆ.

ಇಂಥ ಸಾಂಸ್ಕೃತಿಕ ವಿಕಾರಗಳು ದಿನದಿನಕ್ಕೂ ಹೆಚ್ಚುತ್ತಿರುವುದು ವಿಷಾದಕರ.

ದೇವಸ್ಥಾನ, ದೈವಸ್ಥಾನ ನವೀಕರಣ ಸಂದರ್ಭಗಳಲ್ಲಿ ಕೆಲವು ವೇಳೆ, ಅಗತ್ಯವಿದ್ದೋ ಇಲ್ಲದೆಯೋ ವಿಗ್ರಹ, ಮುಖವಾಡ, ಕಡ್ತಲೆ ಮೊದಲಾದ ಆಯುಧಗಳು, ಪೂಜಾ ಪರಿಕರಗಳು, ಪಲ್ಲಕ್ಕಿ, ರಥ ಇತ್ಯಾದಿ ವಾಹನಗಳು, ಉಯ್ಯಾಲೆ, ಮಂಚ, ಪೀಠೋಪಕರಣಗಳು, ಒಡವೆ ವಸ್ತುಗಳು, ಛೇತಾಳ, ಗರುಡ, ಟಕ್ಕೆಪಕ್ಕೆ, ಕೊಡೆ, ಗಡಾಯಿ, ಮಕರ ತೋರಣಾದಿಗಳು ಇಂಥವುಗಳನ್ನು ಹೊಸತಾಗಿ ನಿರ್ಮಿಸುತ್ತಾರೆ. ಎಷ್ಟೋ ವೇಳೆ ಹೊಸತಾಗಿ ರಚಿಸುವ ಯಾವ ಅಗತ್ಯವೂ ಇಲ್ಲದಿದ್ದರೂ ಅಷ್ಟಮಂಗಲ ಪ್ರಶ್ನೆಯಲ್ಲಿ ಇಂಥ ವಿಚಾರಗಳನ್ನು ಒತ್ತಿ ಹೇಳಲಾಗುತ್ತದೆ.

ಹೊಸ ವಸ್ತುಗಳನ್ನು ಶುದ್ಧೀಕರಿಸಿ ಅನುಷ್ಠಾನಕ್ಕೆ ಅಳವಡಿಸಿಕೊಳ್ಳುವಾಗ ಹಳೆಯ ವಸ್ತುಗಳನ್ನು ಏನು ಮಾಡಬೇಕು ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ನಮ್ಮ ಜ್ಯೋತಿಷದಲ್ಲಿ, ತಂತ್ರಿಗಳಲ್ಲಿ ಹಾಗೂ ದೈವಾವೇಶ ಹೊಂದತಕ್ಕ ಮಂದಿಯಲ್ಲಿ ಅತಿ ಸುಲಭವಾದ ಸಿದ್ಧ ಉತ್ತರ ಇರುತ್ತದೆ. ಸಂಪ್ರದಾಯದಂತೆ ಭಿನ್ನವಾದ, ಶಿಥಿಲವಾದ, 'ಚೈತನ್ಯ' ಕಳಕೊಂಡ ವಸ್ತುಗಳನ್ನು ದೇಗುಲದಲ್ಲಿ ಇರಿಸಿಕೊಳ್ಳುವಂತಿಲ್ಲ. ಅವುಗಳನ್ನು ಸಮುದ್ರದಲ್ಲೋ, ಹೊಳೆಯಲ್ಲೋ, ಕೆರೆಯಲ್ಲೋ, ವಿಧಿವತ್ತಾಗಿ ಜಲಸಮಾಧಿ ಮಾಡಬೇಕು ಅಥವಾ ದಹಿಸಬೇಕು, ಇಲ್ಲವೇ ಆಳವಾದ ಹೊಂಡ ತೆಗೆದು ಹೂತುಬಿಡಬೇಕು! ಇದು ನೆರವೇರಿದರೆ ಅವರ ಸಮಸ್ಯೆ ಮುಗಿಯಿತು!

ಹೀಗೆ ಪರಿಹಾರ ಹೇಳಿ ಕೈ ತೊಳೆದುಕೊಳ್ಳುವ ಜನ, ತಾವು ಎಂಥ ಘೋರವಾದ ಸಾಂಸ್ಕೃತಿಕ ನಷ್ಟಕ್ಕೆ ಕಾರಣರಾಗುತ್ತಾರೆ ಎಂದು ವಿಚಾರ ಮಾಡುವುದಿಲ್ಲ. ಶಾಸ್ತ್ರ, ಪೂರ್ವಪದ್ಧತಿಗಳ ನೆಪಹೇಳಿ ಪಾರಾಗುತ್ತಾರೆ. ಯಾರಾದರೂ ಈ ಕುರಿತು ಆಕ್ಷೇಪ ಸೂಚಿಸಿದರೂ ಅಂಥವರನ್ನು ಧರ್ಮದ್ರೋಹಿಗಳೆಂದು ಸಾರಿ, ಸಾಂಸ್ಕೃತಿಕ ಮೌಲ್ಯದ ವಸ್ತುಗಳನ್ನು ಶಾಸ್ತ್ರೀಯವಾಗಿ ನಾಶಮಾಡಿ ತಾವು ಧಾರ್ಮಿಕ ಪದ್ಧತಿಯನ್ನು ಉಳಿಸಿದೆವೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ! ಶಾಸ್ತ್ರಗೊಡ್ಡಾಗುವುದು ಇಂಥವರಿಂದ.

ಇಂಥ ವಿಚಾರಗಳಲ್ಲಿ ಸಕಾಲಿಕ ವಿಮರ್ಶೆ ಅಗತ್ಯ. ಪೂಜಾದಿಗಳಿಗೆ ಪ್ರಸ್ತುತವಲ್ಲದ ಹಳೆಯ ಅಪೂರ್ವ ವಸ್ತುಗಳನ್ನು ಅನಗತ್ಯವಾಗಿ ನಾಶಪಡಿಸುವುದಕ್ಕಿಂತ ದೇಗುಲಗಳ ಪರಿಸರದಲ್ಲಿ ಸೂಕ್ತ ಸ್ಥಳದಲ್ಲಿ ಒಂದು ವಸ್ತುಸಂಗ್ರಹಾಲಯ ಮಾಡಿ ವ್ಯವಸ್ಥಿತವಾಗಿ ಅವುಗಳನ್ನು ರಕ್ಷಿಸುವುದು ಇಷ್ಟಕರ. ಒಂದೊಂದು ಹಳೆಯ ವಸ್ತುವಿನಲ್ಲೂ ಒಂದೊಂದು ವೈಶಿಷ್ಟ್ಯವಿದೆ; ಇತಿಹಾಸವಿದೆ. ಅಧ್ಯಯನಶೀಲರಿಗೆ ಅಂಥ ವಸ್ತುಗಳಲ್ಲಿ ಅಪೂರ್ವ ಜ್ಞಾನ ನಿಕ್ಷೇಪವಾಗಿರುತ್ತದೆ. ಅವನ್ನು ಶಾಸ್ತ್ರದ ಹೆಸರಿನಲ್ಲಿ ನಾಶಪಡಿಸುವುದು ಅಕ್ಷಮ್ಯ ಅಪರಾಧ. ಸರಕಾರವು ಕೂಡಾ ಐತಿಹಾಸಿಕ ಅವಶೇಷಗಳನ್ನು ರಕ್ಷಿಸುವ ಹೊಣೆ ಹೊತ್ತಿದೆ. ಚಾರಿತ್ರಿಕ

ಸಾಂಸ್ಕೃತಿಕ ವಸ್ತುಗಳ ನಾಶವನ್ನು ಶಿಕ್ಷಾರ್ಹ ಅಪರಾಧ ಎಂದು ಸಾರುತ್ತದೆ. ಒಂದು ವೇಳೆ – ದೈವಸ್ಥಾನಗಳಲ್ಲಿ ಹಳೆಯ ವಸ್ತುಗಳನ್ನು ಇರಿಸುವ ವ್ಯವಸ್ಥೆ ಇಲ್ಲವಾದರೆ, ಅವುಗಳನ್ನು ನಾಡಿನ ವಸ್ತುಸಂಗ್ರಹಾಲಯ, ಮಂಗಳೂರಿನ ಸೀಮಂತೀನಿಬಾಯಿ ಮ್ಯೂಸಿಯಂ, ಮಂಗಳೂರು ವಿಶ್ವವಿದ್ಯಾನಿಲಯ, ಸಂತ ಅಲೋಶಿಯಸ್ ಕಾಲೇಜು, ಎಸ್.ವಿ. ಎಸ್. ಕಾಲೇಜು, ಬಂಟ್ವಾಳ ಮೊದಲಾದ ಕಡೆಗಳಲ್ಲಿರುವ ವಸ್ತು ಸಂಗ್ರಹಾಲಯಗಳಲ್ಲಿ ನಮ್ಮ ನಾಡಿನ ಅಪೂರ್ವ ಸಾಂಸ್ಕೃತಿಕ ವಸ್ತು ಪರಿಕರಗಳು ಜೋಪಾನವಾಗಿ ಇರಿಸಲ್ಪಟ್ಟುದನ್ನು ನಾವು ನೋಡಬಹುದು. ಇಂಥ ವಸ್ತು ಸಂಗ್ರಹಾಲಯಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಎಷ್ಟೊಂದು ಪೂರಕ ಎಂದು ಪ್ರತ್ಯೇಕ ಹೇಳಬೇಕೆಂದಿಲ್ಲ.

ಈಚೆಗೆ ಒಂದು ದೈವಸ್ಥಾನಕ್ಕೆ ಸಂಬಂಧಪಟ್ಟ ಹಳೆಯ 'ಗರುಡ'ನ ಬದಲಿಗೆ ಹೊಸ ಗರುಡನನ್ನು ನಿರ್ಮಾಣ ಮಾಡಲಾಯಿತು. ಹೊಸ ಗರುಡನಿಗೆ ಶುದ್ಧಿ ಕಲಶ ನಡೆಸಿ ಅಧಿಕೃತಗೊಳಿಸಿದಾಗ ನೂರೈವತ್ತು ವರ್ಷದ ಇತಿಹಾಸವುಳ್ಳ ಹಳೇ ಗರುಡನನ್ನು ಏನು ಮಾಡುವುದೆಂಬ ಪ್ರಶ್ನೆ ಬಂತು. "ಅದನ್ನು ಸುಟ್ಟುಬಿಡಿ!" ಎಂದು ಆದೇಶವಿತ್ತರಂತೆ ತಂತ್ರಿಗಳು. ಚಕಾರಶಬ್ದವೆತ್ತದೆ ವಿಶಿಷ್ಟವಾದ ಆ ವಸ್ತುವಿನ ಮೌಲ್ಯವನ್ನು ಅರಿಯದೆ, ಜನ ಅದನ್ನು ಸಂಭ್ರಮದಿಂದ ಹೊತ್ತೊಯ್ದು ಸುಟ್ಟು ಬೂದಿ ಮಾಡಿಬಿಟ್ಟು, ಒಂದು ಬಗೆಯ ವೀರ ಧಾರ್ಮಿಕ ಕ್ರಿಯೆ ನೆರವೇರಿಸಿದ ಸಾರ್ಥಕಭಾವದಿಂದ ಹಿಂದಿರುಗಿದರು. ತಾವು ಐತಿಹಾಸಿಕ ವಸ್ತುವೊಂದನ್ನು ಸುಟ್ಟು ಹಾಕಿ ಎಂಥ ಅಚಾತುರ್ಯ ಮಾಡಿದೆವೆಂಬ ಪರಿವೆ ಆ ಜನಕ್ಕಿರಲಿಲ್ಲ.

ಇಂಥ ಅಜ್ಞಾನಜನ್ಯ ಕ್ರಿಯೆಗಳು ಧರ್ಮದ ಹೆಸರಿನಲ್ಲಿ ದಿನವೂ ಎಂಬಂತೆ ಊರೂರುಗಳಲ್ಲಿ ನಡೆಯುತ್ತಿವೆ. ಸಾಂಸ್ಕೃತಿಕ ಮೌಲ್ಯವಿರುವ ಅದೆಷ್ಟೋ ಕಲಾಕೃತಿಗಳು, ವಸ್ತು ಪರಿಕರಗಳು, ಜಲಸಮಾಧಿ ಭೂಸಮಾಧಿ, ಅಗ್ನಿಸಂಸ್ಕಾರಗಳಿಗೆ ಬಲಿಯಾಗುತ್ತಿವೆ. ಇದಕ್ಕೆ ಪ್ರೇರಕರಾದ, ಸಾಮಾನ್ಯವಾಗಿ ಕರ್ಮಠರಾದ ಜ್ಯೋತಿಷ್ಕರು, ದೈವಪಾತ್ರಿಗಳು ಹಾಗೂ ತಂತ್ರಿಗಳು ಆಧುನಿಕ, ವೈಚಾರಿಕ ದೃಷ್ಟಿಕೋನ ಹೊಂದಿರುವುದು ವಿರಳ (ಎಲ್ಲೋ ಕೆಲವರು ಇರಬಹುದಷ್ಟೆ). ರೂಢಿಪರಂಪರೆ ಎಂಬ ಪಾಶದಿಂದ ಕಟ್ಟಲ್ಪಟ್ಟು, ಅನೇಕರು ನಿಸ್ಸಹಾಯಕರಾಗಿರುತ್ತಾರೆ. ಸ್ವತಂತ್ರ ನಿರ್ಧಾರಕ್ಕೆ ಬೇಕಾದ ಧೈರ್ಯವೂ ಅಂಥವರಲ್ಲಿ ಇರುವುದಿಲ್ಲ; ಭಕ್ತ ಸಮುದಾಯದ ಮನೋವೃತ್ತಿಯೂ ಅದಕ್ಕೆ ಸರಿಯಾಗಿ ಇರುತ್ತದೆ.

ಧಾರ್ಮಿಕ ನೇತಾರರೆನಿಸಿದವರು ಇಂಥ ಮುಖ್ಯ ವಿಚಾರಗಳ ಬಗೆಗೆ ನಿಷ್ಕೃಷ್ಟವಾಗಿ ಏನೂ ಆಡುವುದಿಲ್ಲ. ಆದರೆ ಧರ್ಮ ಸಂಸ್ಕೃತಿ ರಕ್ಷಣೆಯ ಕುರಿತು ಮಾತ್ರ ತಪ್ಪದೇ ಆಡುತ್ತಾರೆ. ಇಂಥ ಅಪೂರ್ವ ಐತಿಹಾಸಿಕ ವಸ್ತುಗಳ ರಕ್ಷಣೆಯೂ ಸಮಾಜದ ಧರ್ಮ ಎಂಬ ಪ್ರಜ್ಞೆ ನಮ್ಮಲ್ಲಿ ಮೂಡಬೇಕಾಗಿದೆ. ಹಳೆಯ ವಸ್ತುಗಳ ಅಪರ ಸಂಸ್ಕಾರವೀರರು ಅಂಥ ಕೆಲಸಕ್ಕೆ ಧಾವಿಸುವ ಮುನ್ನ ಒಂದು ಗಳಿಗೆ ನಿಂತು ಯೋಚಿಸಬೇಕಾಗಿದೆ.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಪರಿಸರ ರಕ್ಷಿಸಲು 'ನಾಗಬನ'

☐ ಕೆ.ಎಲ್. ಕುಂಡಂತಾಯ



ನಾಗ-ವೃಕ್ಷ ಸಂಬಂಧವನ್ನು ನಮ್ಮ ಸಂಸ್ಕೃತಿಯ ಮೂಲದಲ್ಲಿ ಗುರುತಿಸುವ ಸಂಶೋಧಕರು ಅವು ಅವಳಿ ಚೇತನಗಳೆಂದು ವ್ಯಾಖ್ಯಾನಿಸುತ್ತಾರೆ. ಆದುದರಿಂದಲೇ ಸದಾ ತಂಪನ್ನು ಬಯಸುವ ಮತ್ತು ತಂಪಾಗಿರುವ ಹುತ್ತ, ಮರದ ಬೇರುಗಳು, ನೆರಳಿರುವ ಜಾಗವನ್ನು ಆಶ್ರಯಿಸುವ ಸರ್ಪದ ಜೀವನ ವಿಧಾನಕ್ಕೆ ಪೂರಕವಾದ 'ನಾಗಸಂಕಲ್ಪಗಳ' ಮೂರ್ತಸ್ವರೂಪವಾಗಿ 'ನಾಗಬನ'ಗಳು ರೂಢವಾದವು.

ಲೋಕಪ್ರಿಯ ಆದಿಮೂಲ ಆರಾಧ್ಯದೈವ ನಾಗನಿಗೆ ತಂಪೆರೆಯುವ ಕ್ರಿಯೆಯಲ್ಲಿ ಮತ್ತು 'ಸಂಕಲ್ಪಿಸುವ ತಾಣ'ದಲ್ಲಿ ಈ ಉಪಾಸನಾ ವಿಧಾನದ ಆಶಯವಿದೆ. ಇಲ್ಲಿ ಕಟ್ಟಳೆಗಳೇ ಪ್ರಧಾನವಾಗಿರುವುದಲ್ಲದೆ ಕಟ್ಟಡ ಮುಖ್ಯವಲ್ಲ... ಉಡುಪಿ, ದ.ಕ. ಜಿಲ್ಲೆಗಳಲ್ಲಿ ಇದನ್ನು ಪುಷ್ಟೀಕರಿಸಲು ವಿಪುಲ ಆಧಾರಗಳಿವೆ.

ಆದರೆ ಇದೀಗ ಮುಗ್ಧ ಭಕ್ತಿ, ವೈಭವೀಕರಣದಿಂದ ಜೀರ್ಣೋದ್ಧಾರದ ಹೆಸರಿನಲ್ಲಿ ತಪ್ಪು ಹಾದಿ ಹಿಡಿದಂತೆ ಭಾಸವಾಗುತ್ತಿದೆ. ಆರಾಧನೆಯ ಮೂಲ ಆಶಯವನ್ನು ಮರೆತು 'ನಾಗಬನ'ದ ಪುರಾತನ ಮರಗಳು ಉರುಳಿ ಬೀಳುತ್ತಿವೆ. ಕಾಂಕ್ರೀಟ್ ಬಳಸಿ ನಿರ್ಮಿಸಿದ ಗುಡಿಗಳು ಎದ್ದು ನಿಲ್ಲುತ್ತಿವೆ. ವೈದಿಕ ಮಂತ್ರಘೋಷಗಳೊಂದಿಗೆ ನಾಗದೇವರ ಪುನಃ ಪ್ರತಿಷ್ಠೆ

ಉಪಸಂಪಾದಕರು, ಉದಯವಾಣಿ, ಮಣಿಪಾಲ–576 104

ನಡೆಯುತ್ತದೆ. ಈಗ ಯೋಚಿಸೋಣ –ತಂಪನ್ನು ಆಶ್ರಯಿಸುವ ಪ್ರಾಣಿ ನಾಗ ಈ ಕಾಂಕ್ರೀಟ್ ಗುಡಿಯ ವಿಗ್ರಹಂಥನದಲ್ಲಿ ಅರೆಗಳಿಗೆಯಾದರೂ ಸಾನ್ನಿಧ್ಯ ವಹಿಸಲು ಸಾಧ್ಯವೇ? ಬೇಸಗೆಯಲ್ಲಂತೂ ಕಾಂಕ್ರೀಟ್ ಮನೆಗಳಲ್ಲಿ ವಾಸಿಸುವ ಮನುಷ್ಯರು ಪಡುವ ಬವಣೆಯನ್ನು ಗಮನಿಸಿದರೆ ಸೂಕ್ಷ್ಮ ಶಾರೀರಿಕ ಸೌಷ್ಠವ ಹೊಂದಿರುವ ಸರ್ಪ ತನಗಾಗಿ ನಿರ್ಮಿಸಲ್ಪಟ್ಟ ಗುಡಿಯಿಂದ ಎಷ್ಟು ದೂರ ಹರಿದು ಹೋಗಲಿಕ್ಕಿಲ್ಲ?

ಹುತ್ತಕ್ಕೂ ಅಂತರ್ಜಲಕ್ಕೂ ನೇರ ಸಂಬಂಧವಿದೆ ಎಂಬುದೀಗ ಖಚಿತವಾಗಿದ್ದು, ನಾಗಬನದ ಮಹತ್ತ್ವ ನಾವು ಇನ್ನಷ್ಟು ತಿಳಿಯಲಿಕ್ಕಿದೆ.

ದೇವಾಲಯ, ಗುಡಿ, ಮಂದಿರಗಳೆಲ್ಲ ಬೇರೆ ಬೇರೆ ಕಲ್ಪನೆಯ ಅನುಸಂಧಾನಗಳು. ದೇವಾಲಯವು ದೇವಾಲಯವಾಗಿಯೇ ಇರಬೇಕು, ಗುಡಿ, ಮಂದಿರಗಳು ಅವುಗಳಂತೆಯೇ ರಚಿಸಲ್ಪಡಬೇಕು.

ನಾಗ ಸಂಕಲ್ಪದ ನಾಗಬನವನ್ನು ಯಾವ ಕಾರಣಕ್ಕೂ ಗುಡಿಯಾಗಿಯೋ, ಮಂದಿರವಾಗಿಯೋ ಪರಿವರ್ತಿಸ ಹೊರಟಲ್ಲಿ ನೂತನ ನಿರ್ಮಾಣ ಮಾಡಿದ ಹೆಗ್ಗಳಿಕೆ ಪ್ರಾಪ್ತಿಯಾದೀತೇ ಹೊರತು ಮೂಲ ಆಶಯವನ್ನು ಮರೆತ, ನಾಗದೇವರನ್ನು ನಾಗಬನದಿಂದ ಓಡಿಸಿದ ತಪ್ಪು ಮಾತ್ರ ನಮ್ಮ ಬೆನ್ನ ಹಿಂದೆ ಗುರುತಿಸಲ್ಪಡಲಿಕ್ಕಿಲ್ಲವೇ?

ನಾಗಬನ ನಾಶವಾಗಿ, ನಾಗ ಗುಡಿ, ನಾಗವೇದಿಕೆ ಮುಂತಾದ ಹಲವು ರಚನಾ ವೈವಿಧ್ಯದ ಹೆಸರುಗಳೊಂದಿಗೆ ನೂತನ ನಿರ್ಮಾಣ ಇಂದು ಕರಾವಳಿಯ ಉಡುಪಿ ಮತ್ತು ದ.ಕ. ಜಿಲ್ಲೆಗಳಲ್ಲಿ ಸಾಮಾನ್ಯ ಸಂಗತಿಯಾಗಿ ನಡೆಯುತ್ತಿದೆ.

ಮುಂದೆ ಒಂದು ದಿನ ನಮ್ಮ ಭವಿಷ್ಯದ ಪೀಳಿಗೆಗೆ 'ನಾಗಬನ' ಎಂದು ಹೆಸರಿಸುವ 'ನಾಗ ಗುಡಿಗಳನ್ನು' ನಾವು ತೋರಿಸಬೇಕಾಗಬಹುದು. ಹೇಗಿದೆ ನಮ್ಮ ಮುಗ್ಧ ಭಕ್ತಿಯನ್ನು ದುರುಪಯೋಗಪಡಿಸಿಕೊಳ್ಳುವ, ಆಧುನೀಕರಣದ ಸೋಗಿನ ಹುನ್ನಾರ!

ಒಂದು ನಾಗಬನದಲ್ಲಿ ಕನಿಷ್ಠ 60 ವೃಕ್ಷ ಪ್ರಭೇದ, 20–30 ಬಗೆಯ ಔಷಧೀಯ ಸಸ್ಯಗಳು, ವಿವಿಧ ಜಾತಿಯ ಹೂವುಗಳು, ಬಳ್ಳಿಗಳನ್ನು ಗುರುತಿಸಬಹುದು. ಪಕ್ಷಿ ಸಂಕುಲಗಳಿಗೆ ಆ ಬನಗಳು ಆಶ್ರಯ ಸ್ಥಾನವಾಗಿವೆ.

ಇಂತಹ ನಿಸರ್ಗ ಸುಂದರ ಪರಿಸರದಲ್ಲಿ ಸಂತಾನ, ಸಂಪತ್ತು, ಕೃಷಿ ಸಮೃದ್ಧಿ ಮುಂತಾದ ಅಪೂರ್ವ ಅನುಗ್ರಹಕಾರಕನಾದ ನಾಗದೇವರನ್ನು ಆರಾಧಿಸುವ ತಾಣವೇ ನಾಗಬನ.

ಈಗ ನಾಗಬನ ಎಂದರೇನು? ಹೇಗಿರಬೇಕು? ಎಂದು ನಾವು ಪರಿಭಾವಿಸಬಹುದಲ್ಲವೇ?

ಆದರೆ, ಜ್ಯೋತಿಷಿಗಳು, ನಾಗಪಾತ್ರಿಗಳು, ಅರ್ಚಕರು ನಾಗಾರಾಧನೆಯ ಆಶಯಗಳನ್ನು ಗಮನಿಸಿದಂತಿಲ್ಲ, ಪರಿಣಾಮವಾಗಿ ಇಂತಹ ನಾಗಬನ ನಾಶದಂತಹ ಪ್ರಕೃತಿಯ ಮೇಲಿನ ಅತ್ಯಾಚಾರ ನಿರಂತರ ನಡೆದು ಬಂದಿದೆ.

ಹಾಗಿದ್ದರೆ ನಮ್ಮ ನಾಗಬನಗಳನ್ನು ಉಳಿಸುವವರಾರು? ಪರಿಸರ ಉಳಿಕೆ, ಶುದ್ಧಗಾಳಿ–ನೀರು, ಅಂತರ್ಜಲ ಮುಂತಾದವುಗಳ ಕುರಿತು ಮಾತನಾಡುವ, ಆಂದೋಲನ ನಡೆಸುವ ಪರಿಸರಾಸಕ್ತ ಸಂಸ್ಥೆಗಳು, ಸಂಘಟನೆಗಳು 'ನಾಗಬನ'ಗಳನ್ನು ಉಳಿಸುವ ವಿಷಯವನ್ನೂ ತಮ್ಮ ಅಭಿಯಾನದಲ್ಲಿ ಸೇರಿಸಿಕೊಂಡರೆ ನಾಗಬನಗಳು ಉಳಿದುಕೊಳ್ಳಬಲ್ಲುವು ಅನ್ನಿಸುತ್ತದೆ.

'ನಾಗರಪಂಚಮಿ' ನಾಗನ ಆರಾಧನೆಯ ಪರ್ವಕಾಲ. ತಮ್ಮ ಮೂಲನಾಗನನ್ನು ಹುಡುಕಿಕೊಂಡು ಹೋಗುವ ಆಸ್ತಿಕರು ನಾಗರಪಂಚಮಿಯಂದು ತಮ್ಮ ನಾಗನಿಗೆ ತಂಪೆರೆಯಿಸುತ್ತಾರೆ.

ಈ ಸಂದರ್ಭವನ್ನು ಬಳಸಿಕೊಂಡು, ನಾಗನ ಮೇಲಿನ ಭಕ್ತಿಯ ಭಾವನೆಯನ್ನು

ಸದುಪಯೋಗಪಡಿಸಿಕೊಂಡು 'ನಾಗರಪಂಚಮಿ'ಯು 'ವೃಕ್ಷಾರೋಪಣ' ದಿನವಾಗಿಯೂ ಮಾರ್ಪಡುವಂತೆ ಏಕೆ ಪ್ರಯತ್ನಿಸಬಾರದು?

ಈ ಪ್ರಯತ್ನಕ್ಕೆ ಸಂಸ್ಕೃತಿಯ ಮೂಲದಲ್ಲಿ ಆಧಾರಗಳಿವೆ; ನಾಗ-ವೃಕ್ಷ ಅವಳಿ ಚೇತನಗಳೆಂಬ ನಂಬಿಕೆ ನಮ್ಮಲ್ಲಿದೆ.

ಕರ್ಕಾಟಕ ಮಾಸದ ಅಮಾವಾಸ್ಯೆಯಂದು ಜಿಲ್ಲೆಯಲ್ಲಿ ನಾಗಬನಗಳನ್ನು ಕಡಿಯುವ (ಪ್ರವೇಶಿಸಲು ಅವಕಾಶವಾಗುವಂತೆ ಮತ್ತು ಮಳೆ, ಗಾಳಿಯಿಂದ ಉರುಳಿದ ಮರಗಳನ್ನು ತೆಗೆದು ಸ್ವಚ್ಛಗೊಳಿಸಲು) ಒಂದು ಅವಕಾಶವಿದೆ.

ಮುಂದಿನ ಐದನೇ ದಿನ ನಾಗರಪಂಚಮಿ. ನಾಗಬನವನ್ನು ಸ್ವಚ್ಛಗೊಳಿಸುವ ಈ ಕ್ರಮದೊಂದಿಗೆ ಗಿಡ ನೆಟ್ಟು ಬೆಳೆಸುವ ಪ್ರಜ್ಞೆಯನ್ನು ಮೂಡಿಸಿದರೆ 'ನಾಗರಪಂಚಮಿ' ನಾಗನ ಆರಾಧನೆಯೊಂದಿಗೆ ಗಿಡ ನೆಡುವ ಪರ್ವ ದಿನವಾದರೆ 'ನಾಗಬನ'ಗಳು ಉಳಿದುಕೊಳ್ಳಬಲ್ಲವು.


ಪರಿಸರಾಸಕ್ತರು ಇತ್ತ ಕಡೆ ಗಮನಹರಿಸಬೇಕು.

☐

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಮಂದಿರಗಳು ಮತ್ತು ಮಠಗಳು: ಆಗಮಶಾಸ್ತ್ರದ ದೃಷ್ಟಿಯಲ್ಲಿ

□ ಪ್ರೊ. ಎಂ. ಶ್ರೀಪತಿ ತಂತ್ರಿ



ಕರಾವಳಿಯ ಪ್ರದೇಶದಲ್ಲಿ ದೇವಸ್ಥಾನವೆನ್ನುವಾಗ, ದೂರದಿಂದಲೇ ಎದ್ದು ಕಾಣುವ ದೇವಸ್ಥಾನದ ಮಾಡು, ಗೋಪುರ, ಎಲ್ಲಕ್ಕಿಂತಲೂ ಎತ್ತರವಾದ ಧ್ವಜಸ್ತಂಭ, ಧ್ವಜಸ್ತಂಭದಿಂದ ಬಾಗಿಲಿಗೆ ಹೋಗುವಾಗ ನಡುವೆ ಬಲಿಪೀಠ, ದ್ವಾರ, ದ್ವಾರದ ಇಕ್ಕೆಲಗಳಲ್ಲಿ ಮಂಟಪವೆನ್ನುವ ಜಗಲಿಯ ರಚನೆ, ಮುಂದೆ ಮಾಡು ಇಲ್ಲದ ನಾಲ್ಕೂ ಸುತ್ತ ಒಂದು ಅಂಗಣ, ಇದಿರಿನಲ್ಲಿ ಎತ್ತರದ ಮಂಟಪ, ಅದಕ್ಕಿಂತ ಮುಂದಕ್ಕೆ ಗರ್ಭಗೃಹ, ಅದರೊಳಗೆ ಪಾಣಿಪೀಠದ ಮೇಲೆ ಪ್ರಧಾನ ದೇವತೆಯ ವಿಗ್ರಹ, ಪಕ್ಕದಲ್ಲೊಂದು ಬಲಿಮೂರ್ತಿ, ಗರ್ಭಗೃಹದ ಸುತ್ತ ಒಳಸುತ್ತಿನಲ್ಲಿ ಅಷ್ಟದಿಕ್ಪಾಲಕರ ಬಲಿಪೀಠಗಳು, ಈ ಅಂಗಣದ ಸುತ್ತುವರಿದು ಜಗುಲಿ ಮತ್ತು ಗೋಡೆಗಳು, ಹೊರಗಿನ ಸುತ್ತಿನಲ್ಲೂ ಬಲಿಕಲ್ಲುಗಳು, ದೇವಸ್ಥಾನದ ಹೊರಸುತ್ತಿನ ಎಡಭಾಗದಲ್ಲಿ ಕ್ಷೇತ್ರಪಾಲನ ಪೀಠ–ಇವೆಲ್ಲವೂ ಸಾರ್ವತ್ರಿಕವೂ ಸಾಮಾನ್ಯವೂ ಆಗಿ ಕಾಣಬರುವ ದೃಶ್ಯ. ಧ್ವಜಾರೋಹಣ ಮಾಡಿ ಪೂರ್ಣ ಪ್ರಮಾಣದ ಉತ್ಸವವಿಲ್ಲದ ದೇವಸ್ಥಾನಗಳಲ್ಲಿ ಧ್ವಜಸ್ತಂಭವಿರದಿರುವುದೂ ಇದೆ. ಅಲ್ಲಿ ಅಯನ, ರಂಗಪೂಜೆ, ಬಲಿಗಳಂಥ ಸೇವೆಗೆ ಇದಿರಲ್ಲಿ ಬಲಿಪೀಠ ಮಾತ್ರ ಇರುತ್ತದೆ. ಈ ಎಲ್ಲ ರಚನೆಯಲ್ಲಿ ಮಾನ–ಪ್ರಮಾಣದ ಅಗತ್ಯವಿದೆ. ಅದು

ಪ್ರಾಂಶುಪಾಲರು, ಮಾಧವಪೈ ಮೆಮೋರಿಯಲ್ ಕಾಲೇಜು, ಮಣಿಪಾಲ–576 104

ತಂತ್ರೋಕ್ತವಾಗಿಯೇ ಇರಬೇಕು. ಪ್ರಾತಃಕಾಲ, ಮಧ್ಯಾಹ್ನ ಹಾಗೂ ರಾತ್ರಿಯ ಪೂಜೆಗಳು, ರಂಗಪೂಜೆ, ಬಲಿ ಇತ್ಯಾದಿಗಳು ತಂತ್ರಾಗಮದಲ್ಲಿ ಹೇಳಿದ ಕ್ರಿಯಾಪದದ ವಿವರದಂತೆಯೇ ನಡೆಯಬೇಕು. ವೈದಿಕ ಬ್ರಾಹ್ಮಣ ಕುಟುಂಬದ ಗೃಹಸ್ಥಾಶ್ರಮಿ ವೇದಜ್ಞ ಬ್ರಾಹ್ಮಣನು, ಅಂತಃಶುದ್ಧಿ ಮತ್ತು ಶರೀರ ಶುದ್ಧಿಯನ್ನು ಮಾಡಿಕೊಂಡು, ಆಗಮದ ಮಂತ್ರಪಾದದಲ್ಲಿ ವಿವರಿಸಿದ ರೀತಿಯಲ್ಲಿ ಪೂಜಾದಿ ಕ್ರಿಯೆಗಳನ್ನು ನೆರವೇರಿಸಬೇಕು. ಆಗಮಗಳ ಪ್ರಕಾರ ಆತ ಬ್ರಹ್ಮಚಾರಿ ಅಥವಾ ಸನ್ಯಾಸಿಯಾಗಿದ್ದಲ್ಲಿ ಆಗಮೋಕ್ತವಾದ ದೇವಸ್ಥಾನದಲ್ಲಿ ಅರ್ಚಕನಾಗಲು ಅನರ್ಹನಾಗುತ್ತಾನೆ. ಪೂಜಾದಿಗಳ ಕಾಲದಲ್ಲಿ ತಾಮಿಲ, ಡೋಲುಘಂಟೆಗಳು ಅವಶ್ಯ ವಾದ್ಯ ಪ್ರಕಾರಗಳು. ಪ್ರತಿಯೊಂದು ಬಲಿ ದೇವತೆಗೆ ತನ್ನದೇ ಆದ ತಾಳ-ನಾದಗಳಿವೆ. ಅವುಗಳಲ್ಲಿ ವ್ಯತ್ಯಾಸವಾದರೆ ಪ್ರಮಾದವಾಗುವ ಸಂಭವವಿದೆ. ತಂತ್ರಿಗಳು ಬಲಿಯಲ್ಲಿ ನಿರತರಾಗಿರುವಾಗ ತಾಮಿಲ ಬಾರಿಸುವವನಿಗೆ ತಾಳದ ನಿರ್ದೇಶನ ನೀಡುತ್ತಿರುತ್ತಾರೆ. ಕೇರಳ ಮತ್ತು ಕರ್ನಾಟಕದ ಕರಾವಳಿಯ ಪ್ರದೇಶದಲ್ಲಿ ಈ ರೀತಿ ಆಗಮೋಕ್ತ ದೇವಾಲಯಗಳು ಮೇಲ್ನೋಟಕ್ಕೆಯೇ ಉಳಿದ ಧಾರ್ಮಿಕ ಕೇಂದ್ರಗಳಾದ ಮಠ ಮತ್ತು ದೈವಸ್ಥಾನಗಳಿಗಿಂತ ಭಿನ್ನವಾಗಿ ಕಾಣುತ್ತವೆ.

ದೇವಸ್ಥಾನದ ಪ್ರಧಾನ ಉದ್ದೇಶ ಸಾಮೂಹಿಕವಾಗಿ, ಗ್ರಾಮ, ಸೀಮೆ ಹಾಗೂ ಎಲ್ಲ ಭಕ್ತಾದಿಗಳು ಸೇರಿ ಭಗವಂತನನ್ನು ಅರ್ಚಿಸುವುದು, ಉತ್ಸವಾದಿ ಸೇವೆಗಳಿಂದ ತಂತಮ್ಮ ಧಾರ್ಮಿಕ ಕರ್ತವ್ಯವನ್ನು ಪೂರೈಸಿ ದೇವರ ಅನುಗ್ರಹವನ್ನು ಪಡೆಯುವುದು, ಮಠಗಳ ಪ್ರಧಾನ ಉದ್ದೇಶ. ಪಾಠ ಪ್ರವಚನಗಳು, ಸೈದ್ಧಾಂತಿಕ ಜ್ಞಾನವನ್ನು ಹೇಳಿಕೊಡುವುದು, ಧಾರ್ಮಿಕ ಮತಪರಂಪರೆಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವಿಸ್ತರಿಸುವ ಕಾರ್ಯ. ಆಚಾರ್ಯರೂ ಶಿಷ್ಯರೂ ಸೇರಿ ತಮ್ಮ ನಿತ್ಯ ನೈಮಿತ್ತಿಕ ಕರ್ಮಾದಿಗಳಿಗೆ ಅಗತ್ಯವಾಗಿ ಮಾಡಿಕೊಂಡ ಒಂದು ದೇವಗೃಹ ಅಥವಾ ದೇವರಗುಡಿಯು ಪ್ರತಿಯೊಂದು ಮಠದ ಕೇಂದ್ರ ಸ್ಥಾನದಲ್ಲಿರುತ್ತದೆ. ಇದರ ರಚನೆ, ವಿನ್ಯಾಸವು ಸರಳ. ಅದು ತಂತ್ರಾಗಮೋಕ್ತ ವಿಧಿಯಲ್ಲೇ ಇರಬೇಕೆಂದಿಲ್ಲ. ಅದರಲ್ಲಿ ವಿಗ್ರಹ ಸ್ಥಾಪನೆ, ನಿತ್ಯಪೂಜೆ, ಪರ್ವಕಾಲದ ವಿಶೇಷ ಪೂಜೆಗಳು- ಇತ್ಯಾದಿಗಳೆಲ್ಲ ಆಯಾ ಮಠದವರ ಪೂರ್ವಾಚಾರ್ಯರುಗಳು ವಿಧಿಸಿದ ರೀತಿಯಲ್ಲಿ ನಡೆಯುತ್ತವೆ. ಅರ್ಚಕರು ಆಯಾ ಮಠದ ಆಚಾರ್ಯರು ಮತ್ತು ಅವರು ನಿಯೋಜಿಸಿದ ಶಿಷ್ಯರುಗಳೇ ಆಗಿರುತ್ತಾರೆ. ಅಲ್ಲಿ ಗೃಹಸ್ಥಾಶ್ರಮದ ಅರ್ಚಕನ ಅಗತ್ಯವಿಲ್ಲ. ಪ್ರಧಾನ ಆಚಾರ್ಯನಿಂದ ದೀಕ್ಷೆ ಪಡೆದ ಶಿಷ್ಯರು, ಬ್ರಹ್ಮಚಾರಿ-ಸನ್ಯಾಸಿಗಳು ಅರ್ಚಕರಾಗುತ್ತಾರೆ. ಅದೊಂದು ರೀತಿಯ ಆಚಾರ್ಯ ಗೃಹ. ಮಠದ ಮಧ್ಯದಲ್ಲಿರುವುದನ್ನು ದೇವಸ್ಥಾನವೆಂದು ಕರೆಯುವುದಿಲ್ಲ. 'ದೇವರಗುಡಿ', 'ಗುಂಡ' (ಶ್ರೈನ್) ಎಂದು ಕರೆಯುತ್ತಾರೆ. ಇದರ ಸುತ್ತ ಆಗಮೋಕ್ತವಾದ ಬಲಿ ಕಲ್ಲುಗಳಿಲ್ಲ. ಕಾಲಾದಿಗಳಲ್ಲಿ ನಡೆಸುವ ಸುತ್ತು ಬಲಿಗಳಿಲ್ಲ. ತಂತ್ರಿಗಳು ಇಲ್ಲಿ ಪ್ರಧಾನ ಅರ್ಚಕರಲ್ಲ. ತಂತ್ರಾಗಮದ ಯಾವತ್ತು ವಿಧಿಗಳು ಇಲ್ಲಿ ಅನಗತ್ಯ. ಬಲಿಯಲ್ಲಿ ಉಪಯೋಗಿಸುವ ಕುಚ್ಚಿಗೆ ಅಕ್ಕಿ, ಕುಂಟಾಲು ಸೊಪ್ಪು, ಕೈ ಬಟ್ಟಲಿನ ಪ್ರೋಕ್ಷಣೆ ಇತ್ಯಾದಿಗಳು ಯಾವುದರ ಪ್ರಯೋಗವೂ ಇಲ್ಲಿ ಇರುವುದಿಲ್ಲ. ಪೂಜಾದಿ ಕೈಂಕರ್ಯಗಳೆಲ್ಲ ಆಯಾ ಮಠ ಪರಂಪರೆಯ ಸಂಪ್ರದಾಯದ ಪ್ರಕಾರ ನಡೆಯುತ್ತವೆ.

ದಕ್ಷಿಣ ಕನ್ನಡದ ಮಠಗಳ ವಿನ್ಯಾಸ ಹೀಗಿದೆ. ಇವು ಚತುರಸ್ರ (ಚೌಕಿ) ರಚನೆಗಳು. ನಾಲ್ಕೂ ಸುತ್ತ ಗೋಡೆಗಳಿದ್ದು, ಗೋಡೆಯ ಒಳಭಾಗದ ಪೂರ್ವ, ದಕ್ಷಿಣ ಮತ್ತು ಉತ್ತರದ ಭಾಗಗಳಲ್ಲಿ ಬೇರೆ ಬೇರೆ ಕೋಣೆಗಳು ಮತ್ತು ಜಗುಲಿಗಳಿದ್ದು, ನಡುವಿನ ಅಂಗಳದಲ್ಲಿ ದೇವರಗುಡಿಯು ಒಂದು ಕೋಣೆಯ ಪ್ರಮಾಣದಲ್ಲಿರುತ್ತದೆ. ಇದರ ರಚನೆಯು ದೇವಾಲಯದ ಬದಲು ಗೃಹವಾಸ್ತುವಿನ ಆಧಾರದಲ್ಲಿರುತ್ತದೆ. ಗರ್ಭಗುಡಿಯ ಮೇಲೆ ಸಿಂಹಮುಖ, ಮುಗುಳಿ(ಕಳಶ)ಗಳಿರಬಹುದು. ದ್ವಾರದಲ್ಲಿ ಗೃಹವಾಸ್ತುವಿಗೆ

ಪಿತವಾದ ಕೆತ್ತನೆಯಿರಬಹುದು. ದೇವರಗುಡಿಯ ಗೋಡೆಯಲ್ಲಿ ಮತೀಯವಾದ ಕೆತ್ತನೆ, ತೈಲಚಿತ್ರ ಇತ್ಯಾದಿಗಳಿರಬಹುದು. ಧ್ವಜಸ್ತಂಭ, ಅಷ್ಟದಿಕ್ಪಾಲಕರ ಪೀಠ, ದ್ವಾರದ ಮುಂದೆ ಬಲಿ ಕಲ್ಲು-ಇವು ಯಾವುವೂ ಇರುವುದಿಲ್ಲ. ಗುಡಿಗೆ ಇದಿರಾಗಿ ಒಂದು ತೀರ್ಥಪ್ರಸಾದವನ್ನು ನೀಡುವ ಮಂಟಪವಿರಬಹುದು. ಅದರ ಪಶ್ಚಿಮಕ್ಕೆ ಮಠದ ಹಿರಿಯ ಅಥವಾ ಪ್ರಾಚಾರ್ಯರು ಕುಳಿತುಕೊಂಡು ಪಾಠ ಪ್ರವಚನ ನಡೆಸುವ ವಿಶಾಲವಾದ ಚಂದ್ರಶಾಲೆಯಿರುತ್ತದೆ. ಅದರ ಹಿಂದೆ ಪಶ್ಚಿಮದ ಗೋಡೆ ಇರುತ್ತದೆ. ಸುತ್ತ ಚೌಕಿಯಲ್ಲಿ ಉಪ್ಪರಿಗೆಯನ್ನುವ ಮತ್ತೊಂದು ಅಂತಸ್ತೂ ಇರಬಹುದು. ಅಲ್ಲಿಯೂ ವಾಸದ ಕೊಠಡಿಗಳಿರಬಹುದು. ಅದೂ ಸಾಲದ ಪಕ್ಷಕ್ಕೆ ರಾಜಗೃಹಗಳಂತೆ ಪಕ್ಕದಲ್ಲಿ ಮತ್ತೊಂದು ಚೌಕಾಕಾರದ ಕಟ್ಟಡವೂ ಇರಬಹುದು. ಇಲ್ಲಿ ಪಾಕಶಾಲೆ, ಭೋಜನ ಗೃಹ, ಅತಿಥಿಗಳ ವಸತಿಯ ವ್ಯವಸ್ಥೆಯಿರುತ್ತದೆ. ಒಟ್ಟು ಮಠದ ಕಟ್ಟಡ ವಾಸ್ತು ವಿನ್ಯಾಸವು ಆಯಾ ಪ್ರದೇಶದ ರಾಜಗೃಹಗಳ ವಿನ್ಯಾಸವನ್ನೇ ಅವಲಂಬಿಸಿರುತ್ತದೆ. ಮಠಕ್ಕೆ ಅನತಿ ದೂರದಲ್ಲೇ ವಿಶೇಷವಾಗಿ ಉತ್ತರ-ಪೂರ್ವಭಾಗದ ಗದ್ದೆಯಲ್ಲಿ ಗತಿಸಿದ ಮಠದ ಆಚಾರ್ಯರ, ಯತಿಗಳ ಸಮಾಧಿಯಿರುತ್ತವೆ. ದೇವಸ್ಥಾನದ ಅರ್ಚಕರ ಅಥವಾ ಆಡಳಿತ ವರ್ಗದ ಸಮಾಧಿಯನ್ನು ದೇವಸ್ಥಾನದ ಪಕ್ಕದಲ್ಲಿ ರಚಿಸುವಂತಿಲ್ಲ.

ಮಠದ ಉತ್ತರಾಧಿಕಾರದ ನಿಯಮವು ಆಯಾ ಮಠದ ಸ್ಥಾಪನಾಚಾರ್ಯರು ಸ್ಥಾಪಿಸಿದ ನಿಯಮದ ಆಧಾರದಲ್ಲಿ ಮುಂದುವರಿಯುತ್ತದೆ. ಒಬ್ಬ ಹಿರಿಯ ಯತಿಯು ಒಬ್ಬರು ಅಥವಾ ಅನೇಕ ಶಿಷ್ಯರನ್ನು ದೀಕ್ಷೆಯ ಮೂಲಕ ತನ್ನ ಉತ್ತರಾಧಿಕಾರಕ್ಕೆ ಸೇರಿಸಿಕೊಳ್ಳಬಹುದು. ಆತನು ದೀಕ್ಷೆ ಕೊಟ್ಟ ಯತಿಗಳು ಮಾತ್ರ ಮಠದ ದೇವರ ಪೂಜೆಯಿಂದ ಹಿಡಿದು ಎಲ್ಲ ಧಾರ್ಮಿಕ-ಶೈಕ್ಷಣಿಕ ಕ್ರಿಯೆಗಳಿಗೆ ಹೊಣೆಗಾರರಾಗುತ್ತಾರೆ, ಹಕ್ಕುದಾರರಾಗುತ್ತಾರೆ. ಅವೆಲ್ಲವೂ ಅವರ ಖಾಸಗಿ ಹಕ್ಕು ಬಾಧ್ಯತೆಗಳಾಗುತ್ತವೆ.

ಇವೆಲ್ಲ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಉಡುಪಿಯ ಕೃಷ್ಣದೇವರ ಮಠ ಶತಮಾನಗಳಿಂದ ಸಾಗಿ ಬಂದ ಮಠವೇ ಹೊರತು ದೇವಸ್ಥಾನವಲ್ಲ. ದ್ವೈತ ಮತದ ಸಮರ್ಥನೆ ಮತ್ತು ಪ್ರಚಾರವು ಈ ಮಠದ ಪ್ರಧಾನ ಉದ್ದೇಶ. ಮಧ್ವಾಚಾರ್ಯರು ತಂತ್ರಾಗಮಕ್ಕಿಂತ ಭಿನ್ನವಾದ ಮತೀಯ ನೆಲೆಯಲ್ಲಿ ಪೂಜಿಸುವ, ಸೇವಿಸುವ ಉದ್ದೇಶಕ್ಕಾಗಿ, ತನ್ನ ಹರಿ ಸರ್ವೋತ್ತಮತ್ವ ಸಿದ್ಧಾಂತದ ರೀತಿಯಲ್ಲಿ ಉಪಾಸಿಸಲು ಕೃಷ್ಣನ ವಿಗ್ರಹವನ್ನು ಮಠದ ಆರಾಧ್ಯಮೂರ್ತಿಯಾಗಿ ಸ್ಥಾಪಿಸಿ, ಅದನ್ನು ಎರಡೆರಡು ತಿಂಗಳಿಗೆ ಅರ್ಚಿಸುವ ಹಕ್ಕನ್ನು ಕೇವಲ ತನ್ನ ಎಂಟು ಶಿಷ್ಯರಿಗೆ ಮಾತ್ರ ನೀಡಿದರು. ಬಳಿಕ 16ನೆಯ ಶತಮಾನದ ಅಂತ್ಯದಲ್ಲಿ, ವಾದಿರಾಜ ಯತಿಗಳ ನೇತೃತ್ವದಲ್ಲಿ ಎರಡು ವರ್ಷಗಳ ಪರ್ಯಾಯ ವ್ಯವಸ್ಥೆ ರೂಢಿಗೆ ಬಂತು. ಮೊದಲು ಎಲ್ಲ ಎಂಟು ಯತಿಗಳೂ ಈ ಮಠದ ಸುತ್ತ ಇರುವ ಬೇರೆ ಬೇರೆ ಕೋಣೆಗಳಲ್ಲಿದ್ದವರು ಕ್ರಮೇಣ ಎರಡು ವರ್ಷದ ಪರ್ಯಾಯ ವ್ಯವಸ್ಥೆಯ ಪದ್ಧತಿಯಲ್ಲಿ ಅಗತ್ಯವಿದ್ದವರು ಮಾತ್ರ ಅಲ್ಲಿ ಉಳಿದು, ಇತರರು ಬೇರೆ ಊರುಗಳಲ್ಲಿ ತಂತಮ್ಮ ಪ್ರತ್ಯೇಕ ಮಠಗಳನ್ನು ಸ್ಥಾಪಿಸಿ, ಅಲ್ಲಿ ವಾಸಿಸಲಾರಂಭಿಸಿದರು. ಈ ರೀತಿ ಮೊತ್ತಮೊದಲು ಸ್ಥಾಪಿಸಿದ ಬೇರೆ ಬೇರೆ ಎಂಟು ಮಠಗಳು, ಅದಮಾರು, ಪಲಿಮಾರು, ಪೇಜಾವರ, ಕಾಣಿಯೂರು, ಶೀರೂರು, ಪುತ್ತಿಗೆ, ಕೃಷ್ಣಾಪುರ ಹಾಗೂ ಸೋದೆಯೆಂಬ ಗ್ರಾಮಗಳಲ್ಲಾದ ಕಾರಣ ಮುಂದಿನ ಯತಿಗಳಿಗೆ ಇದೇ ಹೆಸರುಗಳು ಅವರ ನಾಮಾಖ್ಯೆ ಪರಂಪರೆಯಾಗಿ ವಾಡಿಕೆಯಲ್ಲಿ ಬೆಳೆದು ಬಂತು. ಮೊದಲು ಸ್ಥಾಪಿಸುವುದಕ್ಕೆ ಕಾರಣ, ಆ ಗ್ರಾಮಗಳಲ್ಲಿ ತಮ್ಮ ಶಿಷ್ಯ ಬಾಹುಲ್ಯವಿದ್ದುದು. ಕ್ರಮೇಣ ಉಡುಪಿಯಲ್ಲೂ ಪ್ರತ್ಯೇಕ ಎಂಟು ಮಠಗಳನ್ನು ಖಾಸಗಿಯಾಗಿ ಕಟ್ಟಿಕೊಂಡರು- ತಂತಮ್ಮ ಶಿಷ್ಯ ವರ್ಗ, ಒಕ್ಕಲಿನವರು ಉಡುಪಿಗೆ ಬಂದಾಗ ಅವರಿಗೆ ವಸತಿ ಮತ್ತು ಊಟದ ವ್ಯವಸ್ಥೆಗೆ ಅನುಕೂಲವಾಗುವಂತೆ. ಈ ಕಾರಣಕ್ಕಾಗಿಯೇ ಉಡುಪಿಯ ನಾಲ್ಕು ಬೀದಿಯ ಸುತ್ತ ಇರುವ ಎಂಟು

ಮಠಗಳು ಬೇರೆ ಬೇರೆ ಊರುಗಳ ಹೆಸರಿನಿಂದ ಪ್ರಸಿದ್ಧವಾಗಿರುವುದು.


ಪ್ರತ್ಯೇಕ ಮಠಗಳು ಸೃಷ್ಟಿಯಾದ ಬಳಿಕ ಕೃಷ್ಣಮಠದೊಳಗೆ ಪರ್ಯಾಯ ಯತಿಗಳ ಹೊರತು ಉಳಿದವರು ತಂತಮ್ಮ ಮಠದಲ್ಲೇ ವಾಸಿಸತೊಡಗಿದಾಗ, ಸುತ್ತಣ ಬೇರೆ ಬೇರೆ ಕೋಣೆಗಳ ಅಗತ್ಯವು ಕಡಿಮೆಯಾಯಿತು. ಹಾಗಾಗಿ ಕ್ರಮೇಣ 20ನೆಯ ಶತಮಾನದ ಜೀರ್ಣೋದ್ಧಾರದ ಗಾಳಿಯಲ್ಲಿ ಒಂದೊಂದಾಗಿ ಈ ಕೋಣೆಗಳೂ ಮಾಯವಾಗಿ ಉಪಯೋಗಕ್ಕೆ ತಕ್ಕಂತೆ ಸುತ್ತ ಚಾವಡಿಗಳ ನಿರ್ಮಾಣವಾಯಿತು. ಒಟ್ಟು 20ನೆಯ ಶತಮಾನದಲ್ಲಿ ಕೃಷ್ಣದೇವರ ಮಠದ ರಚನೆಯಲ್ಲಿ ಅನೇಕ ಹಂತದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಇಂಥ ಬದಲಾವಣೆಗಳಾದಾಗ ಹಿಂದೆಂದೂ ಆಗದ ವಾದ-ವಿವಾದ ಗೊಂದಲವು ಇದೀಗ ಮಠದ ವತಿಯಿಂದ ಕಟ್ಟಲಾದ 'ಕಟ್ಟಪಂಜರ'ವೆನ್ನುವ ಒಂದು ಶಿಖರದ ರಚನೆಯನ್ನು ಕೆಡವಿ ಪುನರ್ನಿರ್ಮಾಣಕ್ಕೆ ತೊಡಗಿದಾಗ ಸೃಷ್ಟಿಯಾಗಿದೆ. ಕಿಟಕಿಯ ಹೊರಗೆ ನಿರ್ಮಿಸಿರುವ ಈ ಶಿಖರವು ದೇವಸ್ಥಾನಕ್ಕಾಗಲೀ ಮಠಕ್ಕಾಗಲೀ ಇರಬೇಕಾದ ಅಗತ್ಯವಾದ ವಾಸ್ತುವಿನ ಮಹತ್ತ್ವವಿರುವ ರಚನೆಯಲ್ಲ. ಇದೊಂದು ಕೇವಲ ಆಲಂಕಾರಿಕ ರಚನೆಯೆಂದೇ ಸ್ವೀಕರಿಸಬೇಕು.

□

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಹಿಂದೂ ದೇವಾಲಯಗಳು ಮತ್ತು ಹೊಸ ಕಾನೂನು

ಪ್ರೊ. ಕೆ.ವಿ. ಕೇಶವ ಕಾರಂತ



ಕರ್ನಾಟಕ ರಾಜ್ಯವು 1956ರಲ್ಲಿ ನಾಲ್ಕು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹಂಚಿಹೋದ ಭಾಗಗಳನ್ನು ಒಟ್ಟುಗೂಡಿಸಿ ನಿರ್ಮಾಣವಾಯಿತು. ದೇವಾಲಯಗಳ ಆಡಳಿತಕ್ಕೆ ಆಯಾ ಸರಕಾರಗಳು ರಚಿಸಿದ್ದ ನಾಲ್ಕು ಪ್ರಾದೇಶಿಕ ಕಾನೂನುಗಳ ಬದಲಿಗೆ ಏಕರೂಪ ಕಾನೂನು ಜಾರಿಗೆ ತರಬೇಕೆಂದು ಸರ್ವೋಚ್ಚ ನ್ಯಾಯಾಲಯವು 1983ರಲ್ಲಿ ಹೇಳಿದ್ದರೂ, ಕರ್ನಾಟಕ ರಾಜ್ಯ ಸರಕಾರವು ಹಿಂದೂ ಧಾರ್ಮಿಕ ಸಂಸ್ಥೆಗಳ ಹಾಗೂ ಧರ್ಮಾದಾಯ ದತ್ತಿಗಳ ವಿಧೇಯಕ ಕಾನೂನು 1997 ಮತ್ತು ನಿಯಮಾವಳಿ 2002ನ್ನು ಮೇ 2003ರಿಂದ ಜ್ಯಾರಿಗೊಳಿಸಿದೆ.

ಎಲ್ಲಾ ಹಿಂದೂ ದೇವಾಲಯಗಳ ಆಡಳಿತಕ್ಕಾಗಿ ಕಾನೂನನ್ನು ಜಾರಿಗೆ ತಂದರೂ ಕಾನೂನಿನಲ್ಲಿ ಮಠ ಮತ್ತು ಅದಕ್ಕೆ ಸೇರಿದ ದೇವಸ್ಥಾನಗಳನ್ನು ಒಂದು ಹಿಂದೂ ಧಾರ್ಮಿಕ ಪಂಗಡದವರು ಸ್ಥಾಪಿಸಿ, ವ್ಯವಸ್ಥೆಗೊಳಿಸಿ ಆಡಳಿತ ನಡೆಸುತ್ತಿರುವ ದೇವಸ್ಥಾನಗಳನ್ನು ಮತ್ತು ಜೈನ, ಬೌದ್ಧ ಅಥವಾ ಸಿಖ್ಖರ ದೇವಸ್ಥಾನಗಳನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಡಲಾಗಿದೆ. (ಸಂವಿಧಾನದಲ್ಲಿ ಹಿಂದೂ ಎಂಬ ಶಬ್ದದಲ್ಲಿ ಜೈನ, ಬೌದ್ಧ, ಸಿಖ್ಖರನ್ನು ಸೇರಿಸಲಾಗಿದೆ.)

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮದ್ರಾಸ್

ಬಿ. 8, ಕೈಲಾಸ ಕ್ವಾರ್ಟರ್ಸ್, ಮಣಿಪಾಲ–576 104

ಧಾರ್ಮಿಕ ದತ್ತಿ 1951ರ ವಿಧೇಯಕ ಕಾನೂನು ಈವರೆಗೆ ಜಾರಿಯಲ್ಲಿದ್ದು, ಹೊಸ ಕಾನೂನು ಈಗ ಎಲ್ಲಾ ಹಿಂದೂ ದೇವಸ್ಥಾನ, ಭೂತದ ಗುಡಿ, ನಾಗನಕಟ್ಟೆ ಇತ್ಯಾದಿಗಳನ್ನು ಸರಕಾರದ ನಿಯಂತ್ರಣಕ್ಕೆ ತಂದಿದೆ. ಕ್ರಿಶ್ಚಿಯನ್ನರ ಮತ್ತು ಮುಸಲ್ಮಾನರ ಪ್ರಾರ್ಥನಾ ಮಂದಿರಗಳ ಮೇಲೆ ಯಾವ ಹಸ್ತಕ್ಷೇಪವನ್ನೂ ಮಾಡಲು ಬಯಸದ ಸರಕಾರವು ಹಿಂದೂಗಳ ದೇವಾಲಯಗಳ ಮೇಲೆ ಸಂಪೂರ್ಣ ಅಧಿಕಾರ ಚಲಾಯಿಸುವ ಈ ಕಾನೂನಿನ ಮೂಲಕ ದೇವಾಲಯಗಳನ್ನು ರಾಷ್ಟ್ರೀಕರಣ ಮಾಡಿದೆ. ದೀರ್ಘ ಪರಂಪರೆಯನ್ನು ಉಳಿಸಿ ಸಮರ್ಪಕವಾಗಿ ದೇವಾಲಯಗಳನ್ನು ನಡೆಸಲು ಬೇಕಾದ ಪತಿಗಳ ಅಭಿಪ್ರಾಯವನ್ನು ಪಡೆಯದೆ, ಶಾಸಕರು, ಇಲಾಖಾಧಿಕಾರಿಗಳು ಈ ಶಾಸನವನ್ನು ರೂಪಿಸಿದ್ದಾರೆ. ಸರ್ಕಾರವು ಮದ್ರಾಸ್ ಕಾನೂನಿನಲ್ಲಿದ್ದಂತೆ ಆಡಳಿತ, ಆರ್ಥಿಕ ಅವ್ಯವಹಾರಗಳು ನಡೆಯದಂತೆ ಮಾತ್ರ ಹಿಡಿತದಲ್ಲಿರಿಸಿಕೊಂಡು ಆಯಾ ದೇವಸ್ಥಾನಗಳ ಭಕ್ತಾದಿಗಳು ಭಯ–ಭಕ್ತಿಯಿಂದ ನಡೆಸಿಕೊಂಡು ಬಂದ ಕ್ರಮವನ್ನು ಮುಂದುವರಿಸುವ ಬದಲು, ಅಧಿಕಾರಶಾಹಿ ಆಡಳಿತಕ್ಕೆ ಆಸ್ಪದವನ್ನಿತ್ತಿದೆ. ಅರ್ಚಕರ ನೇಮಕ, ಪೂಜಾ ಕ್ರಮದಲ್ಲಿ ನಿಯಂತ್ರಣ, ದೇವಸ್ಥಾನದ ಸಿಬ್ಬಂದಿ ನೇಮಕ, ಅಲ್ಲಿ ಸಂಗ್ರಹವಾಗುವ ಹಣದ ನಿಯಂತ್ರಣ ಎಲ್ಲವೂ ಈಗ ಸರಕಾರದ ವ್ಯಾಪ್ತಿಗೆ ಬಂದು ಧರ್ಮವನ್ನು ರಾಜಕೀಯದ ವ್ಯಾಪ್ತಿಗೆ ತಂದಿದೆ.

ಮಠಗಳನ್ನು ಪೂರ್ತಿಯಾಗಿ ಕಾನೂನಿನ ವ್ಯಾಪ್ತಿಯಿಂದ ಹೊರಗಿಟ್ಟದ್ದರಿಂದ ಸಾರ್ವಜನಿಕರಿಂದ ಬರುವ ಕಾಣಿಕೆ, ಮಠಕ್ಕಿರುವ ಜಮೀನು, ಚಿನ್ನಾಭರಣಗಳೆಲ್ಲವನ್ನೂ ಇಚ್ಛಾನುಸಾರವಾಗಿ ವಿನಿಯೋಗಿಸಲು ಅವಕಾಶ ಮಾಡಿದೆ. ಮಠದ ಸ್ವಾಧೀನದಲ್ಲಿರುವ ದೇವಾಲಯಗಳು ಆಯಾ ಊರಿನ ದೇವಾಲಯಗಳ ಆಡಳಿತ ನಡೆಸಲಿಕ್ಕಾಗದೇ ಮಠದ ಆಡಳಿತಕ್ಕೆ ಬಿಟ್ಟುಕೊಟ್ಟಂಥವು. ಇದರಿಂದ ದೇವಸ್ಥಾನವನ್ನು ಊರವರ ಹಕ್ಕಿನಿಂದ ಕಸಿದುಕೊಂಡಂತಾಗಿದೆ.

ಹಿಂದೂ ಪಂಗಡಗಳ ದೇವಾಲಯಗಳು ಸಾರ್ವಜನಿಕ ದೇವಾಲಯಗಳು. ಆಯಾ ಪಂಗಡದವರಿಂದ ಸ್ಥಾಪಿಸಿ ನಡೆಸಲ್ಪಡುವವು. ಆ ದೇವಸ್ಥಾನಗಳಿಗೆ ಆ ಪಂಗಡದವರಲ್ಲದೆ ಇತರ ಹಿಂದೂಗಳೂ ಹೋಗುತ್ತಿದ್ದು, ಕಾಣಿಕೆ ಸಲ್ಲಿಸುತ್ತಿರುವುದರಿಂದ ಆಯಾ ಪಂಗಡಗಳ ಆಡಳಿತ ಮುಂದುವರಿದರೂ, ಇತರ ದೇವಸ್ಥಾನಗಳಂತೆ ಆಡಳಿತ ಅವ್ಯವಹಾರ ನಡೆಯದಂತೆ ಕಾನೂನಿನ ಹಿಡಿತದಲ್ಲಿರಿಸಬೇಕಿತ್ತು. ಈಗ ಅದಕ್ಕೆ ಆಸ್ಪದವಿಲ್ಲ.

ಸಂವಿಧಾನದ ಪ್ರಕಾರ 'ಹಿಂದೂ' ಎಂಬ ಪದದ ಅರ್ಥದಲ್ಲಿ ಜೈನ, ಬೌದ್ಧ, ಸಿಖ್ಖರು ಸೇರಿದ್ದರೂ, ಅವರ ದೇವಸ್ಥಾನಗಳನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಟ್ಟಿದ್ದಾರೆ. ಆದರೆ ಅಂಥ ದೇವಸ್ಥಾನಗಳಿಗೂ ಹಿಂದೂಗಳು ಹೋಗಿ ಕಾಣಿಕೆ ಸಲ್ಲಿಸುತ್ತಾರೆ. ಕಾನೂನಿನ ನಿಯಮ ನಿಬಂಧನೆಗಳು ಸಂವಿಧಾನ ಕೊಟ್ಟಂತಹ ಖಾತರಿ ವಿಧೇಯಕ 14 (ಎಲ್ಲರಿಗೂ ಒಂದೇ ಕಾನೂನು) ಮತ್ತು ವಿಧೇಯಕ 25,26,27 ಮತ್ತು 28 (ಧಾರ್ಮಿಕ ಸ್ವಾತಂತ್ರ್ಯ)ಕ್ಕೆ ವಿರುದ್ಧವಾಗಿವೆ.

ಕಾನೂನಿನ ವಿಧೇಯಕ 1 (6)ರಲ್ಲಿ ಸಂಸ್ಥೆಗಳ ಮತ್ತು ಅದರ ಆದಾಯದ ಮೇಲೆ ಮಾಲಕತ್ವವನ್ನು ಹೊಂದಿರುವ ವಂಶಪಾರಂಪರ್ಯ ನ್ಯಾಸಧಾರಿಯು ನಿರ್ವಹಿಸುತ್ತಿರುವ ಸಂಸ್ಥೆಗಳನ್ನು ಹೊರಗಿಟ್ಟಿದೆ. ವಿಧೇಯಕ 1 (27)ರಲ್ಲಿ ದೇವಸ್ಥಾನಗಳ ವಿವರಣೆಯಲ್ಲಿ ಸಾರ್ವಜನಿಕರಿಂದ ಆರಾಧಿಸಿಕೊಂಡು ಬರುವ ಎಲ್ಲಾ ಸಂಸ್ಥೆಗಳನ್ನು ದೇವಸ್ಥಾನಗಳೆಂದು ಪರಿಗಣಿಸಬೇಕೆಂದಿದ್ದರೂ ಕೆಲವು ದೇವಸ್ಥಾನಗಳಿಗೆ ಮಾತ್ರ

ಪೂರ್ತಿ ವಿನಾಯಿತಿಯನ್ನು ನೀಡಲಾಗಿದೆ.

ವಿಧೇಯಕ 9(2)ರಲ್ಲಿ ಅರ್ಚಕರಲ್ಲಿ ಒಬ್ಬನನ್ನು ಪ್ರಧಾನ ಅರ್ಚಕನೆಂದು ತೀರ್ಮಾನಿಸಬೇಕೆಂದಿದೆ. ಸರದಿ ಪ್ರಕಾರ ಆಗಿದಾಗ್ಗೆ ಬದಲಾಗುತ್ತಿರುವ ಅರ್ಚಕರ ಕುಟುಂಬದಲ್ಲಿ ಓರ್ವನನ್ನು ಪ್ರಧಾನ ಅರ್ಚಕನೆಂದು ಮಾಡಿ, ಅವನೇ ಆಡಳಿತ ಸಲಹಾ ಸಮಿತಿಯಲ್ಲಿ ಮೋಕ್ತೇಸರನಾಗಿ ಇರಬೇಕೆಂದಿದೆ. ಸರದಿ ಪ್ರಕಾರ ಇನ್ನೊಬ್ಬ ಅರ್ಚಕ ಪ್ರಧಾನ ಅರ್ಚಕನಾದಾಗ ಆಡಳಿತದಲ್ಲಿ ಅಂಥವರ ಕಚ್ಚಾಟದಿಂದ ಗೊಂದಲವುಂಟಾಗುತ್ತದೆ. ಕಾನೂನಿನಂತೆ ಅರ್ಚಕನು ಅಥವಾ ಉಪಾಧಿವಂತನು 65 ವರ್ಷ ಪ್ರಾಯದವನಾದಾಗ ನಿವೃತ್ತನಾಗಬೇಕು. 21 ವರ್ಷದಿಂದ 45 ವರ್ಷ ಪ್ರಾಯದೊಳಗಿನವನನ್ನು ಅರ್ಚಕನನ್ನಾಗಿ ನೇಮಕ ಮಾಡುವಾಗ ಜಾತಿ ಮತ ಭೇದವಿಲ್ಲದೆ ಯಾವುದಾದರೂ ಸಂಸ್ಕೃತ ಪಾಠಶಾಲೆಯಲ್ಲಿ ಪ್ರವೀಣ ಪರೀಕ್ಷೆಯಲ್ಲಿ ಉತ್ತೀರ್ಣನಾದವನನ್ನು ತಂತ್ರಿ, ಆಗಮಿಕನನ್ನಾಗಿಯೂ, ಗುರುತಿಸಲ್ಪಟ್ಟ ವೇದಪಾಠಶಾಲೆಯಲ್ಲಿ ವೇದ ಪರೀಕ್ಷೆಯಲ್ಲಿ ಉತ್ತೀರ್ಣನಾದವನನ್ನು ಅರ್ಚಕನನ್ನಾಗಿಯೂ ನೇಮಿಸಬೇಕೆಂದಿದೆ. ಒಬ್ಬ ಅರ್ಚಕನು 65 ವರ್ಷ ಪ್ರಾಯದವನಾದಾಗ, ದೇವಳದ ಪರಿಚಾರಕರು 60 ವರ್ಷ ಪ್ರಾಯದವರಾದಾಗ ನಿವೃತ್ತರಾಗಬೇಕೆಂದಿದೆ. ಅಂತಹ ಹುದ್ದೆ ಖಾಲಿಯಾದಾಗ ಬದಲಿ ವ್ಯವಸ್ಥೆ ಮಾಡಲು ಯಾವ ಅವಕಾಶವೂ ಆಡಳಿತ ಮಂಡಳಿಗಿಲ್ಲ. ನಿಯಮ 12ರಂತೆ ಆಡಳಿತ ಸಮಿತಿ ಅಧ್ಯಕ್ಷ ಅಥವಾ ಕಾರ್ಯನಿರ್ವಹಣಾಧಿಕಾರಿ ಸರಕಾರದ ದೇವಳ ನಿಯಂತ್ರಣಾಧಿಕಾರಿಗೆ ತಿಳಿಸಿ ಹುದ್ದೆ ಖಾಲಿ ಇರುವ ಬಗ್ಗೆ ಪ್ರಕಟಣೆ ನೀಡಿ, ಅರ್ಹರಿಂದ ಬಂದ ಅರ್ಜಿಗಳನ್ನು ಆಯ್ಕೆ ಸಮಿತಿಯವರು (ಕಾರ್ಯ ನಿರ್ವಹಣಾಧಿಕಾರಿ, ಆಡಳಿತ ಸಮಿತಿ ಅಧ್ಯಕ್ಷ, ಧಾರ್ಮಿಕ ದತ್ತಿ ಇಲಾಖೆಯ ಪ್ರತಿನಿಧಿ ಮತ್ತು ಇನ್ನೊಂದು ದೇವಸ್ಥಾನದಿಂದ ಆಹ್ವಾನಿಸಲ್ಪಟ್ಟ ಅರ್ಚಕ) ಅರ್ಜಿದಾರನ ವಿದ್ಯಾರ್ಹತೆ ಪರಿಶೀಲಿಸಿ, ಸಂದರ್ಶನ ನಡೆಸಿ, ಆತನು ಆಗಮ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳ ಆಧಾರದಮೇಲೆ ಆಯ್ಕೆ ಪಟ್ಟಿ ತಯಾರಿಸಿ, ಬೆಂಗಳೂರಿನಲ್ಲಿರುವ ಧಾರ್ಮಿಕ ದತ್ತಿ ಆಯುಕ್ತರಿಗೆ ಕಳುಹಿಸಿಕೊಡಬೇಕು. ಆಯುಕ್ತರು ಆ ಪಟ್ಟಿಯನ್ನು ಪರಿಶೀಲಿಸಿ ಅನುಮತಿ ನೀಡಬಹುದು, ಬದಲಾವಣೆ ಮಾಡಬಹುದು ಅಥವಾ ಸಂಪೂರ್ಣ ರದ್ದು ಮಾಡಬಹುದು. ಆಗ ಪುನಃ ಅರ್ಜಿ ಕರೆದು, ಸಂದರ್ಶನ ನಡೆಸಿ, ಇನ್ನೊಂದು ಪಟ್ಟಿಯನ್ನು ಅವರಿಗೆ ಸಲ್ಲಿಸಬೇಕು. ಇದರಿಂದ ಒಬ್ಬ ತಂತ್ರಿ, ಅರ್ಚಕ ಯಾ ಪರಿಚಾರಕನ ಹುದ್ದೆಗೆ ನೇಮಕ ಮಾಡಲು ತಿಂಗಳುಗಳೇ ಬೇಕಾದೀತು. ಮತ್ತು ಇವರೆಲ್ಲರ ಆಯ್ಕೆಯಲ್ಲಿ ದೇವಸ್ಥಾನದ ಆಡಳಿತ ಮಂಡಳಿಗೆ ಯಾವ ಅಧಿಕಾರವೂ ಇಲ್ಲ, ಎಲ್ಲ ಅಧಿಕಾರವೂ ಸರಕಾರದ ಅಧಿಕಾರಿಗಳ ಕೈಯಲ್ಲಿ ಇದೆ.

ಈವರೆಗೆ ದೇವಸ್ಥಾನದ ತಂತ್ರಿಗಳು, ಅರ್ಚಕರು, ದೇವರ ನೈವೇದ್ಯ ಬೇಯಿಸುವವರು, ಉಪಾಧಿ ವಂತರು, ದೇವಕಾರಿ, ಪಾಕಶಾಲೆಯಲ್ಲಿ ಅಡಿಗೆ ಮಾಡುವವರು, ಊಟ ಬಡಿಸುವವರು ಇವೆಲ್ಲ ಹುದ್ದೆಗಳಿಗೂ ಬ್ರಾಹ್ಮಣರನ್ನೇ ಆಯಾ ದೇವಸ್ಥಾನಗಳ ಸಂಪ್ರದಾಯದಂತೆ ನೇಮಿಸಲಾಗುತ್ತಿತ್ತು. ಸರಕಾರವು ಈಗ ಯಾವ ಜಾತಿಯವನನ್ನಾದರೂ ಕನಿಷ್ಠ ವಿದ್ಯಾರ್ಹತೆ ಆಧಾರದ ಮೇಲೆ ನೇಮಿಸಬಹುದು. ಪ್ರಾಣಿ ಬಲಿ ಕೊಡುವ ಮತ್ತು ಮಾಂಸ, ಮದ್ಯ ನೈವೇದ್ಯ ಮಾಡುವ ಸಂಪ್ರದಾಯವಿರುವ ದೇವಸ್ಥಾನಗಳು, ಭೂತದ ಗುಡಿಗಳಲ್ಲಿ ಹಿಂದಿನಿಂದಲೂ ಬ್ರಾಹ್ಮಣೇತರರೇ ಅರ್ಚಕರಾಗಿರುವ ಸಂಪ್ರದಾಯವಿತ್ತು. ಈಗ ಹಿಂದೂ ಆಗಿದ್ದರೆ ಎಲ್ಲಾ ದೇವರಿಗೂ ಇಲಾಖಾ

ಕಾನೂನಿನಂತೆ ಪೂಜೆ ಮಾಡುವ ಹಕ್ಕು ಮತ್ತು ಅರ್ಹತೆಯನ್ನು ಕೊಟ್ಟಿದ್ದಾರೆ. ಬ್ರಾಹ್ಮಣರು ಪೂಜೆ ಮಾಡುವ ದೇವಸ್ಥಾನಗಳಲ್ಲಿ ಆಗಮಶಾಸ್ತ್ರ ಪದ್ಧತಿಯಂತೆ ವೇದಮಂತ್ರಗಳಿಂದ ಪೂಜೆ ಮಾಡಲ್ಪಡುತ್ತಿದೆ. ಈಗ ಕನ್ನಡದಲ್ಲೇ ಅರ್ಚನೆ ಮಾಡಲು ಪುಸ್ತಕವನ್ನು ತಯಾರಿಸಿ ದೇವಸ್ಥಾನಗಳಿಗೆ ಸರ್ಕಾರವು ಹಂಚಿದೆ. ಹಿಂದೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದ ಸಂಪ್ರದಾಯ ಸರಕಾರದ ಹಸ್ತಕ್ಷೇಪದಿಂದ ಕೊನೆಗಾಣಲಿದೆ. ದೇವರಿಗೆ ಪೂಜೆ ಮಾಡುವ ಕ್ರಮ, ಮೂಲಮಂತ್ರ ಪಠನ (ಇದು ಉಪದೇಶ ಪಡೆದವರು ಮಾತ್ರ ಮಾಡಬಹುದು), ಜಾತ್ರೆ ಕ್ರಮ, ಎಲ್ಲಾ ವಂಶ ಪಾರಂಪರ್ಯ ಸಂಪ್ರದಾಯದಿಂದ ಒಂದೇ ಕ್ರಮದಂತೆ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಶೈವಾಗಮ, ವೈಷ್ಣವಾಗಮ, ವೈಖಾಸನಾಗಮ, ವಾತಾಲ್ಯಾದ್ಯಾಗಮ, ಶಾಕ್ತಾಗಮ, ಗಾಣಪತ್ಯಾಗಮ ಎಂದು ಬೇರೆ ಬೇರೆ ಪೂಜಾ ಕ್ರಮಗಳಿವೆ. ಈಗ ಅವೆಲ್ಲವನ್ನೂ ಕೊನೆಗಾಣಿಸಿ, ದೇವಸ್ಥಾನದ ಸಂಪ್ರದಾಯದ ಬಗ್ಗೆ ಏನೂ ತಿಳುವಳಿಕೆ ಜ್ಞಾನ ಇಲ್ಲದವರು ನೇಮಕಗೊಂಡು ಪೂಜೆ ನಡೆಸಲು ಹೊಸ ಕಾನೂನು ಅನುವು ಮಾಡಿಕೊಟ್ಟಿದೆ. ಈಗಿನ ಸರಕಾರದ ಧೋರಣೆಯಂತೆ ಜಾತಿ ಭೇದವಿಲ್ಲದೆ ಯಾವನಾದರೂ ಒಬ್ಬ ಹಿಂದೂವನ್ನು ನೇಮಿಸುವಂತೆ ಆದೇಶ ನೀಡಲು ಆಯುಕ್ತರಿಗೆ ಅಧಿಕಾರವಿದೆ. ತಂತ್ರಿಗಳ ಮತ್ತು ಅರ್ಚಕರ ಹುದ್ದೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಮಂಗಳೂರಿನ ಬಿಲ್ಲವ ಸಮಾಜದವರ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಒಂದು ವರ್ಷದ ಮಂಗಳೂರು ವಿಶ್ವವಿದ್ಯಾನಿಲಯದವರ ಆಗಮ ಡಿಪ್ಲೊಮ ತರಗತಿಯನ್ನು ಈ ವರ್ಷದಿಂದ ಪ್ರಾರಂಭಿಸಿದ್ದಾರೆ (ಇದಕ್ಕೆ ಮೊದಲು ಕಟೀಲಿನಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲೂ ಇದು ಆರಂಭವಾಗಿದೆ. ಈ ತರಗತಿಗಳು ಕೆಲವು ವರ್ಷಗಳಿಂದ ನಡೆಯುತ್ತಿವೆ). ಉಡುಪಿಯ ಬಳಿ ಇರುವ ಕೊಡಂಕೂರಿನಲ್ಲಿ ವಿಶ್ವ ಕರ್ಮ ಸಮಾಜದವರು ನಡೆಸುವ ಸಂಸ್ಕೃತ ವಿದ್ಯಾಪೀಠದಲ್ಲಿ ಧಾರ್ಮಿಕ ದತ್ತಿ ಇಲಾಖೆಯವರು ಐದು ವರ್ಷದ ಆಗಮ ಪರೀಕ್ಷೆ ತರಗತಿಗಳನ್ನೀಗ ಕೆಲವು ವರ್ಷಗಳಿಂದ ನಡೆಸುತ್ತಿದ್ದಾರೆ. ಹಾಗಾಗಿ ಒಳ್ಳೆ ಉತ್ಪತ್ತಿ ಇರುವ ದೇವಸ್ಥಾನಗಳಲ್ಲಿ ಆನುವಂಶಿಕ ತಂತ್ರಿ, ಅರ್ಚಕರ ಬದಲಿಗೆ ಹೊಸ ಪೀಳಿಗೆಯ ತಂತ್ರಿ, ಅರ್ಚಕ, ಉಪಾಧಿವಂತ, ದೇವಕಾರಿಗಳು ನೇಮಕವಾಗಲಿದ್ದಾರೆ. ಇದೀಗ ಈ ವಿಧೇಯಕದಿಂದ ತಲೆಮಾರುಗಳಿಂದ ದೇವಸ್ಥಾನಗಳ ತಂತ್ರ ಪೂಜೆ ಪರಿಚಾರಿಕೆ ಮಾಡಿಕೊಂಡಿದ್ದ ಬ್ರಾಹ್ಮಣ ಸಮುದಾಯದವರು ನಿರ್ಗತಿಕರಾಗಲಿದ್ದಾರೆ.

ಎಲ್ಲಾ ದೇವಸ್ಥಾನಗಳ ಆಡಳಿತ ಮೇಲ್ವಿಚಾರಣೆಗೆ ಒಂದು ಸಲಹಾ ಸಮಿತಿಯನ್ನು ರಚಿಸಲಿದ್ದಾರೆ (ವಿಧೇಯಕ 20ರಂತೆ). ಇದಕ್ಕೆ ಮುಜರಾಯಿ ಮಂತ್ರಿಗಳನ್ನು ಅಧ್ಯಕ್ಷರನ್ನಾಗಿಯೂ, ಆಯುಕ್ತರನ್ನು ಕಾರ್ಯದರ್ಶಿಯನ್ನಾಗಿಯೂ, ಒಂಬತ್ತು ಮಂದಿಯನ್ನು ಸದಸ್ಯರನ್ನಾಗಿಯೂ ನೇಮಿಸಲಿದ್ದಾರೆ (ಒಬ್ಬ ಪರಿಶಿಷ್ಟ, ಇಬ್ಬರು ಮಹಿಳೆಯರು, ಹಿಂದೂ ಪಂಗಡಗಳ ಮುಖಂಡರು ಇತ್ಯಾದಿ). ಪೂಜಾ ಪದ್ಧತಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಸಂಪ್ರದಾಯಕ್ಕನುಗುಣವಾಗಿರುವುದರಿಂದ ಆಯಾ ಪ್ರದೇಶದ ಪದ್ಧತಿಗಳಿಗೆ ಸರಿಯಾದ ಧಾರ್ಮಿಕ ಸಲಹೆಗಾರರ ನೇಮಕಕ್ಕೆ ಅವಕಾಶವಿದ್ದಂತಿಲ್ಲ.

ಇದೇ ರೀತಿ ಮೋಕ್ತೇಸರರ ಆಯ್ಕೆಯಲ್ಲಿ ಸರಕಾರ (ವಿಧೇಯಕ 25ರಂತೆ) ಒಂಬತ್ತು ಜನ ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯ ನೇಮಕಕ್ಕೆ ಕಾನೂನು ರಚಿಸಿದೆ. ಆಯಾ ದೇವಸ್ಥಾನದ ಭಕ್ತ ಸಮುದಾಯದಿಂದಲೇ ಆಯ್ಕೆಯಾಗುತ್ತಿರುವ ಸಂಪ್ರದಾಯವನ್ನು ರದ್ದು ಮಾಡಿದೆ. ಒಬ್ಬ ಪರಿಶಿಷ್ಟ,

ಒಬ್ಬ ಹಿರಿಯ ಅರ್ಚಕ, ಇಬ್ಬರು ಮಹಿಳೆಯರು ಸೇರಿದಂತೆ ಐದು ಮಂದಿ ದೇವಸ್ಥಾನದ ಸುತ್ತುಮುತ್ತಲಿರುವವರನ್ನು ಕಡ್ಡಾಯವಾಗಿ ಮೂರು ವರ್ಷಗಳ ಅವಧಿಗೆ ನೇಮಿಸಬೇಕೆಂದಿದೆ. ಸಮಿತಿಗೆ ನೇಮಕ ಮಾಡಲು ಸಹಾಯಕ ಆಯುಕ್ತರು ನೋಟೀಸು ಜಾರಿ ಮಾಡಿ, ಗ್ರಾಮ ಪಂಚಾಯತ್, ತಾಲೂಕು ಕಛೇರಿ, ಸಹಾಯಕ ಆಯುಕ್ತರ ಕಛೇರಿ, ದೇವಸ್ಥಾನದ ಸೂಚನಾ ಫಲಕದಲ್ಲಿ ಪ್ರಕಟಿಸುತ್ತಾರೆ. ಆಸಕ್ತರಿಂದ ಬಂದ ಅರ್ಜಿಗಳನ್ನು ನೋಡಿ ಸಹಾಯಕ ಆಯುಕ್ತರು ಒಂಬತ್ತು ಸದಸ್ಯರನ್ನೊಳಗೊಂಡ ಆಡಳಿತ ಸಮಿತಿಯನ್ನು ರಚಿಸುತ್ತಾರೆ. ಮೊಕ್ತೇಸರನಾಗಲು ವಯೋಮಿತಿ ಕನಿಷ್ಠ 25 ವರ್ಷ, ಗರಿಷ್ಠ ಮಿತಿ ಸೂಚಿಸಿರುವುದಿಲ್ಲ. ವಿದ್ಯಾರ್ಹತೆ ಸೂಚಿಸಿಲ್ಲ. ಇದರಿಂದಾಗಿ ಕರ್ನಾಟಕದ ರಾಜಧಾನಿಯಲ್ಲಿ ಯಾವ ರಾಜಕೀಯ ಪಕ್ಷ ಆಡಳಿತ ನಡೆಸುತ್ತದೋ ಆ ಪಕ್ಷದ ವ್ಯಕ್ತಿಗಳೇ ದೇವಸ್ಥಾನಗಳಲ್ಲಿ ಮೊಕ್ತೇಸರರಾಗಿ ಅಧಿಕಾರ ಚಲಾಯಿಸಲಿದ್ದಾರೆ. ನಿಜವಾದ ಧಾರ್ಮಿಕ ಶ್ರದ್ಧೆ ಇದ್ದವರು, ದೇವಸ್ಥಾನದ ಹಿತ ರಕ್ಷಣೆಯಲ್ಲಿ ಆಸಕ್ತಿ ಇದ್ದವರು ಮೊಕ್ತೇಸರನಾಗಲು ಸಾಧ್ಯವಿಲ್ಲ. ಹೆಚ್ಚು ಉತ್ಪತ್ತಿ ಇರುವ ದೇವಸ್ಥಾನಗಳಲ್ಲಿ ರಾಜಕೀಯ ವ್ಯಕ್ತಿಗಳೇ ಸೇರಿ ದೇವಸ್ಥಾನದ ಆಡಳಿತ ನಡೆಸಬಹುದು. ತಸ್ತೀಕು ಪಟ್ಟಿಯಲ್ಲಿ ಇರುವ ಸಣ್ಣಪುಟ್ಟ ಎಲ್ಲಾ ತರದ ದೇವಸ್ಥಾನಗಳೂ, ಭೂತದ ಗುಡಿಗಳೂ, ನಾಗನ ಕಟ್ಟೆಗಳೂ ಎಲ್ಲವನ್ನೂ ಸೇರಿಸಿ ಹೊಸ ಕಾನೂನು ವ್ಯಾಪ್ತಿಯಲ್ಲಿ ತಂದಿದ್ದಾರೆ. ಆದರೆ ಉತ್ಪತ್ತಿ ಇಲ್ಲದ ದೇವಸ್ಥಾನಗಳಲ್ಲಿ ಜನರು ಆಸಕ್ತರಾಗದಿದ್ದಲ್ಲಿ ಸಮಿತಿಯ ರಚನೆಯೂ ಕಷ್ಟಸಾಧ್ಯವಾಗಿ ಅಲ್ಲಿ ನಡೆಯತಕ್ಕ ಪೂಜೆ ಉತ್ಸವಗಳು ಉತ್ಪತ್ತಿ ಇಲ್ಲದೆ ನಿಂತುಹೋಗಲಿವೆ. ಆಡಳಿತ ಮಂಡಳಿಯ ಅಧಿಕಾರಾವಧಿಯನ್ನು ಈವರೆಗಿದ್ದ ಐದು ವರ್ಷಗಳ ಬದಲು ಮೂರು ವರ್ಷಗಳಿಗೆ ಇಳಿಸಲಾಗಿದೆ. ಸರಕಾರದ ಆಯುಕ್ತರ ಕಛೇರಿ ಅಧಿಕಾರಿಗಳ ಕೆಂಪು ಪಟ್ಟಿಯ ವಿಳಂಬದಿಂದ ಯಾವುದೊಂದು ಅಭಿವೃದ್ಧಿ ಕೆಲಸವೂ ಪೂರ್ಣವಾಗಲಾರದು.

ಸಾಮಾನ್ಯ ಸಂಗ್ರಹಣಾ ನಿಧಿ

ವಿಧೇಯಕ 17ರಂತೆ ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಕಾನೂನಿನಂತೆ ಸ್ಥಾಪಿಸಲಿದ್ದಾರೆ. ಇದಕ್ಕೆ ಎಲ್ಲಾ ದೇವಸ್ಥಾನಗಳು ಅವುಗಳ ಒಟ್ಟು ಆದಾಯದ ಶೇ. 5ರಷ್ಟು ಹಣವನ್ನು ಸಾಮಾನ್ಯ ಸಂಗ್ರಹಣಾ ನಿಧಿಗೆ ಪಾವತಿಸಬೇಕು. ಸರಕಾರದಿಂದ ಹಣದ ಬಗ್ಗೆ ಬೇಡಿಕೆ ಬಂದಾಗ ಅವರು ಕೇಳಿದಷ್ಟು ಹಣವನ್ನು ಪಾವತಿಸಬೇಕು. ಆ ನಿಧಿಯನ್ನು ಧಾರ್ಮಿಕ ದತ್ತಿ ಆಯುಕ್ತರು ನಿರ್ವಹಿಸಲಿದ್ದು, ಅವರಿಗೆ ಬೇಡಿಕೆ ಸಲ್ಲಿಸಿದ ಬಡ ದೇವಸ್ಥಾನಗಳು, ಸಂಸ್ಥೆಗಳು, ವೇದ ಪಾಠಶಾಲೆಗಳು ಮತ್ತಿತ್ತರರಿಗೆ ಅವರೇ ಹಣವನ್ನು ಹಂಚಲಿದ್ದಾರೆ. ಆಯಾ ದೇವಸ್ಥಾನಗಳಲ್ಲಿ ಮಿಕ್ಕುಳಿದ ಹಣವನ್ನು ಅಭಿವೃದ್ಧಿಗೆ ವಿನಿಯೋಗಿಸುವಂತಿಲ್ಲ. ಅದಕ್ಕೂ ಸಾಮಾನ್ಯ ಸಂಗ್ರಹಣಾ ನಿಧಿಯಿಂದಲೇ ಬರಬೇಕು.

ರಾಜ್ಯ ಸರಕಾರವು ಕಾರ್ಯನಿರ್ವಹಣಾಧಿಕಾರಿಯನ್ನು ವಿಧೇಯಕ 26ರಂತೆ ಯಾವುದೇ ಅಧಿಸೂಚಿತ ದೇವಸ್ಥಾನಕ್ಕೆ ನೇಮಿಸಬಹುದು. ಆಡಳಿತ ಸಮಿತಿಗೆ ಮತದಾನದ ಹಕ್ಕು ಹೊಂದಿದ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿ ನಾಮ ನಿರ್ದೇಶಿಸಬಹುದು. ಕಾರಣವಿಲ್ಲದೆ ಇಷ್ಟ ಬಂದಂತೆ ಅಧಿಕಾರ ಚಲಾಯಿಸಲು ಇಲಾಖೆಯು ತಮಗೆ ಬೇಕಾದವರನ್ನು ಕಾರ್ಯ ನಿರ್ವಹಣಾಧಿಕಾರಿಯಾಗಿ ನೇಮಿಸಿ ಅಧಿಕಾರ ದುರುಪಯೋಗ ಮಾಡಲು ಅವಕಾಶ ಕಲ್ಪಿಸಿದೆ.

ಕಂಪ್ಯೂಟರ್ ಇರಿಸಿದ ಕೋಣೆಯೊಳಗೆ ಹೋಗುವಾಗ ಧೂಳಿನಿಂದ ಯಂತ್ರ,

ಮಾಲಿನ್ಯವಾಗುವುದನ್ನು ತಡೆಯಲು ಪಾದರಕ್ಷೆಗಳನ್ನು ಹೊರಗಿಡಲು, ಆಸ್ಪತ್ರೆಯ ಆಪರೇಶನ್ ಥಿಯೇಟರ್ ಒಳಗೆ ಹೋಗುವ ರೋಗಿ, ದಾದಿ, ವೈದ್ಯರೆಲ್ಲರೂ ಅವರು ಧರಿಸಿದ ಉಡುಪನ್ನು, ಪಾದರಕ್ಷೆಯನ್ನು ತೆಗೆದಿರಿಸಿ, ಆಸ್ಪತ್ರೆಯವರು ಮಡಿಮಾಡಿಸಿಟ್ಟ ಉಡುಪನ್ನು ಧರಿಸಬೇಕೆಂದು ಕಡ್ಡಾಯ ಮಾಡುತ್ತದೆ. ಶಸ್ತ್ರಚಿಕಿತ್ಸಾ ವೈದ್ಯನು ಆಪರೇಷನ್ ಥಿಯೇಟರ್ ನಿಯಮಗಳನ್ನು ಪಾಲಿಸದಿದ್ದರೆ ಶಸ್ತ್ರಚಿಕಿತ್ಸೆ ಮಾಡಿಕೊಂಡ ರೋಗಿ ಸೋಂಕಿನಿಂದ ಸಾವನ್ನಪ್ಪುತ್ತಾನೆ. ಹಾಗೆ ದೇವರ ಪೂಜೆಯನ್ನು ಮಾಡಲು ತಂತ್ರಿ, ಅರ್ಚಕನಾಗಿ ಬರುವವನಿಗೆ ಬರೇ ವಿದ್ಯಾರ್ಹತೆ ನಿಗದಿಪಡಿಸಿ ಪೂಜೆ ಮಾಡಲು ಬೇರೆ ಯಾವ ಅರ್ಹತೆಯನ್ನೂ ಕಾನೂನಿನಲ್ಲಿ ಕಾಣಿಸದಿರುವುದು ವಿಷಾದಕರ.

ಧರ್ಮಶಾಸ್ತ್ರದಂತೆ ಅರ್ಚಕರು ಪಾಲಿಸಬೇಕಾದ ನಿಯಮಗಳು:

ಪತಂಜಲಿ ಮಹಾಋಷಿಗಳ ಯೋಗದರ್ಶನದಲ್ಲಿ ರಾಜಯೋಗದ ಬಗ್ಗೆ ಹೇಳುವಾಗ ಎಂಟು ಸಾಧನೆಗಳನ್ನು ಹೇಳಿದ್ದಾರೆ.

ಯಮ-ಕೆಟ್ಟ ವಿಚಾರವನ್ನು ನಡವಳಿಕೆಯಿಂದ ದೂರ ಮಾಡುವುದು, ಅಹಿಂಸೆ (ಪ್ರಾಣಿ ಹಿಂಸೆ ಮಾಡದಿರುವುದು), ಸತ್ಯ (ಸುಳ್ಳು ಹೇಳದಿರುವುದು), ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ (ಏಕಪತ್ನೀ ವ್ರತ), ಅಪರಿಗ್ರಹ (ಇತರರ ವಸ್ತುವಿಗೆ ಆಶೆ ಪಡದಿರುವುದು).

ನಿಯಮ- ಮಂತ್ರ, ಪೂಜೆ, ತಪಸ್ಸು ಮಾಡುವುದು, ಸಿಕ್ಕಿದ್ದರಲ್ಲೇ ತೃಪ್ತಿ ಪಡುವುದು.

ಆಸನ- ಧ್ಯಾನಕ್ಕಾಗಿ ಪದ್ಮಾಸನ ಹಾಕಿ ಕೂರುವುದು.

ಪ್ರಾಣಾಯಾಮ- ಉಸಿರನ್ನು ಕ್ರಮದಂತೆ ನಿಯಂತ್ರಿಸುವುದು.

ಪ್ರತ್ಯಾಹಾರ-ಇಂದ್ರಿಯ ನಿಗ್ರಹ, ಮನಸ್ಸನ್ನು ಒಂದೇ ಕಡೆ ನಿಲ್ಲಿಸುವುದು.

ಧಾರಣ- ಮಂತ್ರದ ಅರ್ಥ ತಿಳಿದುಕೊಳ್ಳುವುದು.

ಧ್ಯಾನ-ಮನಸ್ಸನ್ನು ಮಂತ್ರದ ಅರ್ಥದಲ್ಲೇ ನೆಟ್ಟಿರುವುದು.

ಸಮಾಧಿ-ಮನಸ್ಸಿನ ಅಲೆಗಳೆಲ್ಲವನ್ನೂ ಅಳಿಸಿ ಶಾಂತವಾಗಿರಿಸುವುದು.

ಇವೆಲ್ಲವುಗಳಿಂದ ಉಪನಯನವಾದ ಬ್ರಾಹ್ಮಣನಿಗೆ ಸಹಜ ಸಂಸ್ಕಾರದಿಂದ ಮಾಡಲು ಸುಲಭಸಾಧ್ಯವಾಗುತ್ತದೆ.

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ-ಗೀತೆ (16-24- ಇದನ್ನು ಮಾಡಬಹುದು, ಮಾಡಕೂಡದೆಂದು ನಿಶ್ಚಯಿಸಲು ಶಾಸ್ತ್ರವನ್ನೇ ಪ್ರಮಾಣವಾಗಿ ತೆಗೆದುಕೊಳ್ಳಬೇಕು). ಕಾನೂನು ರಚನೆ ಮಾಡುವಾಗ ಧರ್ಮಶಾಸ್ತ್ರಗಳ ಬಗ್ಗೆ ಲಕ್ಷ್ಯಗೊಡದೆ ಲೌಕಿಕ ವೃತ್ತಿಯಂತೆ ತಂತ್ರಿ, ಅರ್ಚಕನ ವೃತ್ತಿಯೆಂದು ತಿಳಿದು ಸರಕಾರದವರು ಈ ಬದಲಾವಣೆ ಮಾಡಿದ್ದಾರೆ.

ಈ ಕಾನೂನಿನ ವಿರುದ್ಧ ದಕ್ಷಿಣ ಕನ್ನಡ-ಉಡುಪಿ ಜಿಲ್ಲಾ ದೇವಸ್ಥಾನಗಳ ಧರ್ಮದರ್ಶಿಗಳ ಮತ್ತು ಅರ್ಚಕರ ಸಂಘ, ಉಡುಪಿ ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಕಿ ತಡೆ ತಂದಿದ್ದಾರೆ. ಹಲವು ದೇವಸ್ಥಾನಗಳೂ ಹೊಸ ಕಾನೂನು ಹೇರುವುದಕ್ಕೆ ತಡೆ ಪಡೆದಿವೆ. ಅವರೆಲ್ಲರೂ ಆನುವಂಶಿಕ ಮೊಕ್ತೇಸರರನ್ನು, ಅರ್ಚಕರನ್ನು ಉಳಿಸಿಕೊಳ್ಳುವ ಬಗ್ಗೆ, ಆನುವಂಶಿಕ ಅರ್ಚಕರನ್ನು 65 ವರ್ಷ ಪ್ರಾಯವಾದ ಮೇಲೂ ಹುದ್ದೆಯಲ್ಲಿ ಮುಂದುವರಿಸುವ ಬಗ್ಗೆ, ಅಲ್ಲದೆ ಈ ಕಾನೂನು ಎಲ್ಲಾ

ಹಿಂದೂ ದೇವಸ್ಥಾನಗಳಿಗೆ ಅನ್ವಯವಾಗುವಂತೆ ಏಕರೂಪ ಕಾನೂನನ್ನು ಜಾರಿಗೆ ತರುವ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಸರಕಾರವು ಅದರ ಅಧಿಕಾರಶಾಹಿ, ಅಧಿಕಾರಿಗಳ ಮೂಲಕ ಆಡಳಿತದಲ್ಲಿ ಕೈ ಹಾಕುವ ಬಗ್ಗೆ, ಬ್ರಾಹ್ಮಣೇತರ ಅರ್ಚಕರ ನೇಮಕದ ಬಗ್ಗೆ, ಹಿಂದಿನಿಂದ ಬಂದ ಸಂಪ್ರದಾಯ, ಧರ್ಮಶಾಸ್ತ್ರಗಳಲ್ಲಿ ಹೇಳಿದ್ದರ ವಿರುದ್ಧವಾಗಿ ತಮಗೆ ತೋರಿದ್ದೇ ಸರಿ ಎಂದು ಮಾಡಿದ ಬದಲಾವಣೆಯ ಬಗ್ಗೆ ಯಾರೂ ಪ್ರತಿಭಟನೆ ಮಾಡದಿರುವುದು ಖೇದಕರ.

ಭಾಗ: ನಾಲ್ಕು
ಭಾಷೆ–ಧರ್ಮ–ಸಂಸ್ಕೃತಿ: ಒಂದು ಸಂವಾದ

ಹೊಟೇಲ್ ಉದ್ಯಮದಲ್ಲಿ 'ಉಡುಪಿ' ಹೆಸರಿನ ಮಾಂತ್ರಿಕತೆ

❑ ಪ್ರೊ. ಪಿ. ಶ್ರೀಪತಿ ತಂತ್ರಿ



ಭಾರತದ ಒಳಗೆ 'ಉಡುಪಿ' ಎನ್ನುವ ಹೆಸರು ಸಾಮಾನ್ಯ ಅವಿದ್ಯಾವಂತರಿಗೂ ಪರಿಚಿತವಾದದ್ದು. ಇದಕ್ಕೆ ಕಾರಣ ಉಡುಪಿಯ ಕೃಷ್ಣಮಠವೆಂದು ಕೆಲವರು ಹೇಳಿಯಾರು. ಆದರೆ ಅದಲ್ಲ ಕಾರಣ. ಉಡುಪಿಯ ಉಪಾಹಾರ-ಊಟದ ಹೋಟೇಲುಗಳು. ಉಡುಪಿಯ ಕೃಷ್ಣನೂ ಪ್ರಸಿದ್ಧನೇ. ದಕ್ಷಿಣ ಭಾರತದ ಅತ್ಯಂತ ಪವಿತ್ರವಾದ ಪುಣ್ಯಕ್ಷೇತ್ರಗಳಲ್ಲಿ ಉಡುಪಿಯ ಕೃಷ್ಣಮಠವೂ ಒಂದು. ಆದರೆ ಅದು ಭಕ್ತಾದಿಗಳಿಗೆ ಸೀಮಿತವಾದದ್ದು. ಆದರೆ ಉಡುಪಿಯ ಹೋಟೇಲುಗಳು ಜಾತಿ- ಧರ್ಮವೆನ್ನದೆ ಎಲ್ಲರೂ ತಂತಮ್ಮ ಊರಲ್ಲೇ ಸಂದರ್ಶಿಸುವ, ಹೆಚ್ಚಿನವರು ನಿತ್ಯ ಸಂದರ್ಶಿಸುವ ಕೇಂದ್ರಗಳು. ಅವುಗಳಲ್ಲಿ ಹಿಂದಿನ ದಶಕಗಳಲ್ಲಿ, ಅದರಲ್ಲೂ ಹೆಚ್ಚಾಗಿ, 20ನೆಯ ಶತಮಾನದ ಮಧ್ಯಭಾಗದವರೆಗಿನ ಹೆಚ್ಚಿನ ಹೊಟೇಲುಗಳು, ಕೇವಲ ಉಡುಪಿಯಲ್ಲಿ ಉಡುಪಿ ಕೃಷ್ಣನ ಹೆಸರನ್ನು ಹೊತ್ತೇ ವ್ಯಾಪಾರಕ್ಕೆ ಅಂದರೆ, ಜನರ ಅನ್ನಾಹಾರ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿರುವುದು. ಉಡುಪಿ ಶ್ರೀಕೃಷ್ಣ ಭವನ, ಉಡುಪಿ ಕೃಷ್ಣವಿಲಾಸ, ಕೃಷ್ಣಕೆಫೆ, ಕೃಷ್ಣ ಲಾಡ್ಜ್, ಕೃಷ್ಣ ಲಂಚ್ ಹೋಮ್, ಉಡುಪಿ ಬ್ರಾಹ್ಮಣರ ಊಟದ ಹೊಟೇಲು, ಉಡುಪಿ ಬ್ರಾಹ್ಮಣರ 'ಉಪಾಹಾರಗೃಹ' ಇತ್ಯಾದಿ. ಕೆಲವೊಮ್ಮೆ ಕೃಷ್ಣನ ಬದಲು ಉಡುಪಿಯ ಜತೆಗೆ ಇತರ ದೇವ ದೇವಿಯರ ಹೆಸರುಗಳೂ ಕಾಣುತ್ತಿದ್ದುವು. ಉದಾ: ಲಕ್ಷ್ಮೀನಿವಾಸ, ದುರ್ಗಾಭವನ, ಮೋಹಿನಿವಿಲಾಸ, ದುರ್ಗಾ ಲಾಡ್ಜ್,

ಪ್ರಾಂಶುಪಾಲರು, ತಾ। ಟಿ.ಎಂ.ಎ. ಪೈ ಪದವಿ ಕಾಲೇಜು, ಮಣಿಪಾಲ–576 104

ಇತ್ಯಾದಿ. ಆದರೆ ಇವೆಲ್ಲವುಗಳ ಜತೆಗೆ ಇದು ಉಡುಪಿಯ ಬ್ರಾಹ್ಮಣರದ್ದು ಎಂಬುವುದನ್ನು ತಿಳಿಸಲು ನಾಮಫಲಕದಲ್ಲಿ ಉಡುಪಿ ಹೆಸರು ತಪ್ಪದೆ ಇರುತ್ತಿತ್ತು. ಕ್ರಮೇಣ ಜಾತಿಯ ಬದಲು ಆ ಜಾಗದಲ್ಲಿ 'ಉಡುಪಿ ಶಾಕಾಹಾರ' ಎಂಬ ಉಲ್ಲೇಖವು ಕಾಣಲಾರಂಭವಾಯಿತು. ಜಾತಿಯ ಮಹತ್ವ ಕ್ರಮೇಣ ಕ್ಷೀಣಿಸುತ್ತಾ ಬಂದುದರ ಸಂಕೇತವಿದು.

ಉಡುಪಿ ಹೋಟೇಲುಗಳು ಈ ರೀತಿ ಭಾರತದಾದ್ಯಂತ ವ್ಯಾಪಿಸಿ ಜನಪ್ರಿಯವಾಗಿ ಬೆಳೆಯಲು ಕಾರಣವೇನು? ಈ ಪ್ರಶ್ನೆಯನ್ನು ಸಾಮಾನ್ಯವಾಗಿ ಉಡುಪಿಯವರನ್ನು ಭೇಟಿಯಾದಾಗ ಕೇಳುವುದು ಸಹಜ. ಯಾವುದೇ ಒಂದು ಸಾಮಾಜಿಕ ಪ್ರಕ್ರಿಯೆಯನ್ನು ಗುರುತಿಸುವಷ್ಟು ಅದರ ಹಿಂದಿನ ಪ್ರೇರಣೆಯನ್ನು ಕಂಡುಹಿಡಿಯುವುದು ಸುಲಭವಲ್ಲ. ಪೌರೋಹಿತ್ಯ, ವೇದಾಧ್ಯಯನದಲ್ಲಿ ಶತಮಾನಗಳ ಕಾಲ ಸಾಗಿಬಂದ ಈ ಪ್ರದೇಶದ ಬ್ರಾಹ್ಮಣರು, ಈ ಶತಮಾನದ ಉದ್ಯಮೀಕರಣ, ನಗರೀಕರಣದ ಸ್ವರೂಪದ ಸಾಮಾಜಿಕ ಪರಿವರ್ತನೆಯ ಗತಿಯಲ್ಲಿ ಅದರ ಒಂದು ಅವಿಭಾಜ್ಯ ಅಂಗವಾಗಿ ಊಟ-ಉಪಾಹಾರ-ವಸತಿಗೃಹದ ಪೂರೈಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡುದು ಕುತೂಹಲದ ಅಂಶ. ಸಮಾಜದ ಯಾವುದೇ ಒಂದು ವರ್ಗ, ತನ್ನ ಪೂರ್ವದ ಜೀವನ ಪದ್ಧತಿ ಮತ್ತು ವೃತ್ತಿಯು ಬದುಕಲು ಅನುಕೂಲಕರವಾದ ಮಾಧ್ಯಮವಾಗದೆ ಹೋದಾಗ, ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವುದು ಅಗತ್ಯವಾಗುತ್ತದೆ. ಆಗ ತನ್ನಲ್ಲಿ ಅಡಕವಾದ ಇತರ ಪರ್ಯಾಯ ಸಾಮರ್ಥ್ಯವನ್ನು ಗುರುತಿಸಿಕೊಂಡು, ಅದನ್ನೇ ಹೊಸಜೀವನ ಮಾಧ್ಯಮವಾಗಿ ಆರಿಸಿಕೊಂಡು, ಅದನ್ನು ಬೆಳೆಸಿಕೊಂಡು, ತನ್ಮೂಲಕ ಹೊಸ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತದೆ. ಸಮಾಜದ ಎಲ್ಲ ಪರಿವರ್ತನೆಗಳಲ್ಲೂ ಈ ಅಂಶವು ಸಾಮಾನ್ಯವಾಗಿರುತ್ತದೆ. ಇಂದು ಇದನ್ನು 'ಮಾನವ ಸಂಪನ್ಮೂಲ'ವೆಂದು ನಾವು ಕರೆಯುತ್ತೇವೆ. ಆದರೆ ಇದು ವ್ಯಕ್ತಿ ವೈಶಿಷ್ಟ್ಯವಾಗಿರದೆ, ಸಮೂಹ ಅಥವಾ ವರ್ಗ ವೈಶಿಷ್ಟ್ಯವಾಗಿರುವಾಗ ಇದನ್ನು 'ಸಮಾಜ ಸಂಪನ್ಮೂಲ'ವೆಂದರೆ ಹೆಚ್ಚು ಸಮರ್ಪಕವಾದೀತು. ಶತಮಾನಗಳ ಕಾಲದಿಂದ ಪಾರಂಪರಿಕವಾಗಿ ಸಮಾಜದ ಬೇರೆ ಬೇರೆ ವರ್ಗಗಳು ತಮ್ಮದೇ ಆದ ವಿಶಿಷ್ಟ ವೃತ್ತಿ ಜ್ಞಾನ ಅಥವಾ ನೈಪುಣ್ಯವನ್ನು ಬೆಳೆಸಿಕೊಂಡು ಬಂದಿರುತ್ತವೆ. ಅವುಗಳನ್ನೇ ಸಮಕಾಲೀನ ಬದುಕಿಗೆ ಪರಿವರ್ತನಗೊಳಿಸಿ, ಪರ್ಯಾಯರೂಪದಲ್ಲಿ ಬೆಳೆಸಿದಾಗ ಅದೇ ಆಯಾ ಸಮಾಜದ ಜೀವನದ ಬಂಡವಾಳವಾಗಲು ಸಾಧ್ಯವಿದೆ. 'ಸಾಮಾಜಿಕ ಬೆಳವಣಿಗೆ'ಯನ್ನು ಈ ರೀತಿ ಸಾಧಿಸುವುದು ಹೆಚ್ಚು ಪರಿಣಾಮಕಾರಿ. ಅದು ಕೇವಲ ಆರ್ಥಿಕ ಬೆಳವಣಿಗೆಯಲ್ಲ ಎಂಬುದನ್ನೂ ನಾವು ತಿಳಿಯುವುದು ಅಗತ್ಯ. ನಮ್ಮಲ್ಲಿನ ಶತಮಾನಗಳ ಸಂಪತ್ತಾದ ಜಾತಿ ಆಧಾರಿತ ವೃತ್ತಿ ನೈಪುಣ್ಯವನ್ನೇ ನಾವು ಪರ್ಯಾಯ ರೂಪದಲ್ಲಿ ಆಧುನಿಕ ಸ್ವರೂಪದಲ್ಲಿ ಪುನರ್ನಿರ್ಮಾಣ ಮಾಡಿಕೊಳ್ಳುವ ಯೋಜನೆಯು ಹೆಚ್ಚು ಸೂಕ್ತ ಹೆಜ್ಜೆಯಾದೀತು- ಈ ನಿಟ್ಟಿನಲ್ಲಿ!

ಉಡುಪಿಯ ಬ್ರಾಹ್ಮಣರ, ಅರ್ಥಾತ್ ಉಡುಪಿ ಶ್ರೀಕೃಷ್ಣನ ಜತೆಗೆ ಗುರುತಿಸುವ ಅವಿಭಜಿತ ದಕ್ಷಿಣ ಕನ್ನಡದ ಬ್ರಾಹ್ಮಣರನ್ನು ಈ ದೃಷ್ಟಿಯಿಂದ ನೋಡಿದಾಗ ಅವರ ವೃತ್ತಿ ನೈಪುಣ್ಯವೇನು? ಸಾಮಾನ್ಯವಾಗಿ ಬ್ರಾಹ್ಮಣರ ವೃತ್ತಿ ದೇವಾಲಯಗಳಲ್ಲಿ ಅರ್ಚಕರಾಗಿರುವುದು, ಹೋಮ ಹವನಾದಿಗಳ, ಜಾತಕರ್ಮಾದಿ ಷೋಡಶ ಕರ್ಮಗಳ ಹಾಗೂ ಇತರ ವೈದಿಕ ಪೌರಾಣಿಕ ವಿಧಿಗಳ ಪೌರೋಹಿತ್ಯ, ಜ್ಯೋತಿಷ- ಮುಂತಾದುವುಗಳು. ಇಲ್ಲಿಯ ಬ್ರಾಹ್ಮಣರ ವೃತ್ತಿಗಳೂ ಇವೇ ಆಗಿದ್ದವು. ಇವುಗಳನ್ನು ಸಾಮೂಹಿಕವಾಗಿ ಮಾಡುವಾಗ ಅನ್ನಸಂತರ್ಪಣೆ ಮತ್ತು ಬ್ರಾಹ್ಮಣ ಭೋಜನವು ಇದರ ಅವಿಭಾಜ್ಯ ಅಂಗ. ಹೀಗಿರುವಾಗ, ಬ್ರಾಹ್ಮಣರ ಒಂದು ಭಾಗ ಬಾಣಸಿಗ ವೃತ್ತಿಯನ್ನು ಅವಲಂಬಿಸಿ, ಅದರ ನೈಪುಣ್ಯವನ್ನು ಬೆಳೆಸಿಕೊಳ್ಳುವುದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಸಹಜ. ಪೌರೋಹಿತ್ಯದ ಜತೆಗೆ ಬಾಣಸಿಗ ವೃತ್ತಿಯೂ ಬ್ರಾಹ್ಮಣರ ಜಾತಿಕಸುಬಾಗಿ ಈ ಪ್ರದೇಶದಲ್ಲಿ ಶತಮಾನಗಳಿಂದ ಅನುಸರಿಸಿಕೊಂಡು ಬಂದ ಕಲೆಯಾಗಿತ್ತು. ಅಲ್ಲದೆ ಪ್ರತಿಯೊಂದು ಗ್ರಾಮ-ಸೀಮೆಗಳಲ್ಲಿ ದೇವಾಲಯಗಳಿದ್ದು, ಅಲ್ಲಿ ಉತ್ಸವ, ಲಕ್ಷದೀಪ, ಅಯನ, ರಾಶಿಪೂಜೆ ಮುಂತಾದ ಕಾಲಕಾಲಕ್ಕೆ ಜರುಗುವ ಸೇವೆಯಲ್ಲಿ ನೂರಾರು-ಅಲ್ಲ

ಸಾವಿರಾರು ಜನರಿಗೆ ಅನ್ನಸಂತರ್ಪಣೆಯು ಒಂದು ಅವಶ್ಯ ಅಂಗವಾಗಿತ್ತು. ಪ್ರತಿಯೊಬ್ಬ ಬ್ರಾಹ್ಮಣನ ಮನೆಯಲ್ಲೂ ಆಗಾಗ್ಗೆ ಹೋಮ, ಹವನ, ಶ್ರಾದ್ಧವೇ ಇತ್ಯಾದಿ ಕಾಮ್ಯ ಹಾಗೂ ನಿಯತ ಕರ್ಮಗಳನ್ನು ಮಾಡುವುದು ಸಾಮಾನ್ಯ ದೃಶ್ಯ. ಇವುಗಳಲ್ಲಿ ಬ್ರಾಹ್ಮಣ ಭೋಜನವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿತ್ತು. ಇವಲ್ಲದೆ ಗ್ರಹಶಾಂತಿಯೇ ಮುಂತಾದ ಅನೇಕ ವಿಧದ ಶಾಂತಿ ಹೋಮಗಳೂ ಈ ಪ್ರದೇಶದ ಬ್ರಾಹ್ಮಣರಲ್ಲಿ ಪ್ರಸಿದ್ಧ.

ಇವೆಲ್ಲವುಗಳ ಪರಿಣಾಮವಾಗಿ ಇಲ್ಲಿ ಬಾಣಸಿಗ ವೃತ್ತಿಗೆ ಶತಮಾನಗಳ ಹಿಂದಿನಿಂದಲೂ ಬೇಡಿಕೆಯಿತ್ತು. ಇದನ್ನೇ ಪಾರಂಪರಿಕ ವೃತ್ತಿಯಾಗಿ ಪ್ರತಿಗ್ರಾಮದಲ್ಲಿ ಕೆಲವು ಕುಟುಂಬಗಳು ಅನುಸರಿಸಿಕೊಂಡು ಬರುತ್ತಿದ್ದವು.

ಒಂದು ಗ್ರಾಮದ ಸ್ವಜಾತಿಯ ಜನಸಂಖ್ಯೆಯ ಹೆಚ್ಚಳ, ಕುಟುಂಬದ ಆಸ್ತಿಯ ವಿಭಜನೆಯಾಗುವುದು- ಇತ್ಯಾದಿ ಕೆಲವರನ್ನಾದರೂ ತಮ್ಮ ಊರಿನಿಂದ ವೃತ್ತಿಯನ್ನರಸಿ ಹೊರವಲಸೆ ಹೋಗುವುದಕ್ಕೆ ಕಾರಣವಾಗುತ್ತದೆ. ಒಟ್ಟಿನಲ್ಲಿ ಪ್ರತಿ ಊರಿನಲ್ಲೂ ಜನಸಂಖ್ಯೆಯು ಹೆಚ್ಚಾದಾಗ, ದೂರದ ಪೇಟೆ- ಪಟ್ಟಣಗಳಿಗೆ ಸಾಗುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಹಿಂದೆಯೇ ಅರ್ಚಕ ಮತ್ತು ಪೌರೋಹಿತ್ಯ ವೃತ್ತಿಯ ಬ್ರಾಹ್ಮಣರು ಕೇರಳಕ್ಕೆ ಹೋಗಿ ಅಲ್ಲಿಯ ದೇವಾಲಯಗಳಲ್ಲಿ ಅರ್ಚಕರಾಗುತ್ತಿದ್ದರು. ಹಾಗೆಯೇ ಕೆಲವರು ಅವರ ಜತೆಗೆ ಬಾಣಸಿಗರಾಗಿಯೂ ಹೋಗುತ್ತಿದ್ದರು. ಇಪ್ಪತ್ತನೆಯ ಶತಮಾನದ ಉದ್ಯಮೀಕರಣ, ನಗರೀಕರಣ, ಇತ್ಯಾದಿಗಳು ಇವೇ ಬ್ರಾಹ್ಮಣರನ್ನು ಆರಂಭದಲ್ಲಿ ಹತ್ತಿರದ, ಕ್ರಮೇಣ ದೂರದ ಪೇಟೆ- ಪಟ್ಟಣಗಳಲ್ಲಿ ಊಟ ತಿಂಡಿಯ ಅಗತ್ಯವನ್ನು ಪೂರೈಸಲು ಆಕರ್ಷಿಸತೊಡಗಿದವು. ನಿತ್ಯ ಬೇಡಿಕೆಯ ಪೇಟೆ ಪಟ್ಟಣಗಳನ್ನು ಹುಡುಕುತ್ತ ಬ್ರಾಹ್ಮಣರು ಸಾಗುವಂತಾಯಿತು. ವೇದಾಧ್ಯಯನ, ಪೌರೋಹಿತ್ಯ, ಶಾಸ್ತ್ರಾಧ್ಯಯನವನ್ನು ಹೆಚ್ಚಾಗಿ ಮಾಡದ ಬ್ರಾಹ್ಮಣವರ್ಗ ಮತ್ತು ಬಾಣಸಿಗ ವರ್ಗ ಜತೆಯಾಗಿ ಈ ದಿಸೆಯಲ್ಲಿ ಸಾಗಲಾರಂಭಿಸಿತು. ವೈದಿಕ ವೃತ್ತಿಯಲ್ಲಿದ್ದವರು ಉಡುಪಿಯ ಮಠಗಳು, ತೀರ್ಥ ಕ್ಷೇತ್ರಗಳು, ಕೇರಳದ ದೇವಾಲಯಗಳತ್ತ ಸಾಗುತ್ತಿದ್ದರೆ, ಉಳಿದವರು ಊಟ- ಉಪಾಹಾರಗಳ 'ಕೃಷ್ಣ ವಿಲಾಸ', 'ದುರ್ಗಾವಿಲಾಸ'ಗಳನ್ನು ಬೆಂಗಳೂರು, ಮೈಸೂರು, ಮದ್ರಾಸು, ಮುಂಬಯಿಯಂತಹ ದೂರದ ನಗರಗಳಲ್ಲಿ ತೆರೆದು ಜೀವಿಸಲಾರಂಭಿಸಿದರು. ಇದಕ್ಕೆ ಬೇಕಾದ ಸಿಬ್ಬಂದಿಗಳನ್ನೂ ತಂತಮ್ಮ ನೆರೆಕರೆಯ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಬಡ ಕುಟುಂಬಗಳಿಂದ ತಮ್ಮೊಡನೆ ಕೊಂಡೊಯ್ಯಲಾರಂಭಿಸಿದರು. ನುರಿತ ಅಡುಗೆಯವರು, ತಿಂಡಿ ನೀಡಲು, ಊಟ ಬಡಿಸಲು ಸಪ್ಲೈಯರ್, ಗ್ಲಾಸು, ತಟ್ಟೆ ತೊಳೆಯಲು ಕ್ಲೀನರ್- ಈ ಮೂರು ವರ್ಗದ ಸಿಬ್ಬಂದಿಗಳು, ದೊಡ್ಡಪ್ರಮಾಣದ ವ್ಯಾಪಾರವಾದರೆ, ಗಲ್ಲದಲ್ಲಿ ಕೂತು ಹಣ ಸ್ವೀಕರಿಸುವವ, ಬಿಲ್ಲು ಬರೆಯುವವ ಹಾಗೂ 'ಸೂಪರ್‌ವೈಸರ್' - ಈ ವರ್ಗದವರ ಅಗತ್ಯವೂ ಇತ್ತು. ಇವೆಲ್ಲವುಗಳ ಸಿಬ್ಬಂದಿಗಳ ಪರೀಕ್ಷೆ ಮತ್ತು ಆಯ್ಕೆ ಹೋಟೇಲಿನ ಮಾಲೀಕನದ್ದು. ಕ್ಲೀನರ್ ಮತ್ತು ಸಪ್ಲೈಯರ್ ವರ್ಗದಲ್ಲಿ ಬಾಲಕಾರ್ಮಿಕರಿಗೂ ಅವಕಾಶವಿತ್ತು.

ಬಾಲ್ಯದಲ್ಲಿ ಸಪ್ಲೈಯರ್ ಕೆಲಸಕ್ಕೆ ಸೇರಿದವರೇ ಕ್ರಮೇಣ ತಮ್ಮದೇ ಆದ ಉಪಾಹಾರ ಗೃಹಗಳನ್ನು ತೆರೆದು ಮಾಲೀಕರಾದರು. ಕೆಲವು ವರ್ಷಗಳಲ್ಲಿ ಬಂಡವಾಳವನ್ನು ಸೇರಿಸಿ ದೊಡ್ಡ ನಗರಗಳಲ್ಲಿ ವಸತಿಗೃಹಗಳನ್ನೂ ಸ್ಥಾಪಿಸಿದರು. ಮನೆಯಿಂದ ಬರಿಗೈಯಲ್ಲಿ ಹೋದವರು ಹತ್ತೋ ಇಪ್ಪತ್ತೋ ವರ್ಷದ ದುಡಿಮೆಯಲ್ಲಿ ಬಂಡವಾಳವನ್ನು ಶೇಖರಿಸಿ, ಸ್ವಂತ ಉಪಾಹಾರಗೃಹ, ವಸತಿಗೃಹವನ್ನು ಸ್ಥಾಪಿಸಿ, ಅಭಿವೃದ್ಧಿಯ ಮಾರ್ಗದಲ್ಲಿ ಸಾಗಿದವರೇ ಬಹುತೇಕ ಸುಪ್ರಸಿದ್ಧ ಹೋಟೇಲು ಮಾಲೀಕರು. ದಕ್ಷಿಣ ಭಾರತದ ಮಹಾನಗರಗಳಲ್ಲಿ ದಶಕಗಳ ಹಿಂದಿನಿಂದ ಉತ್ತಮ ಸೇವೆಗೆ ಹೆಸರಾದ ಪ್ರಸಿದ್ಧ ಹೋಟೇಲು ವಸತಿಗೃಹಗಳ ಸ್ಥಾಪಕರೆಲ್ಲ ಈ ವರ್ಗಕ್ಕೆ ಸೇರಿದವರು. ಇವರಲ್ಲಿ ಹೆಚ್ಚಿನವರು 10-12 ವಯಸ್ಸಿನ ಬಾಲ್ಯದಲ್ಲೇ ಈ ವೃತ್ತಿಯನ್ನರಸಿ ಮನೆಬಿಟ್ಟು ತೆರಳಿದವರು. ಹೆಚ್ಚುಕಡಿಮೆ ಸ್ವಾತಂತ್ರ್ಯದ ಅನಂತರದಲ್ಲೂ ಎರಡು ಮೂರು ದಶಕಗಳವರೆಗೆ ಹೋಟೇಲು ಉದ್ದಿಮೆಗಳಿಗೆ ಬ್ಯಾಂಕು ಮುಂತಾದ ಹಣಕಾಸು ಸಂಸ್ಥೆಗಳಿಂದ ಸಾಲವು ದೊರೆಯುತ್ತಲೂ ಇರಲಿಲ್ಲ ಅಥವಾ ಆ ರೀತಿ ಸಾಲ ಪಡೆಯುತ್ತಲೂ ಇರಲಿಲ್ಲ.

ತಮ್ಮ ವ್ಯಾಪಾರದಿಂದ ಶೇಖರಿಸಿಟ್ಟ ಮೊತ್ತದಿಂದಲೇ ಹೆಚ್ಚಿನವರು ದೊಡ್ಡ ಪ್ರಮಾಣದಲ್ಲಿ ಉದ್ಯಮವನ್ನು ಅಭಿವೃದ್ಧಿ ಪಡಿಸಿದ್ದು.

ಮದರಾಸು, ಮೈಸೂರು, ಉದಕಮಂಡಲವೇ ಮುಂತಾದ ಸ್ಥಳಗಳಲ್ಲಿ ದಾಸಪ್ರಕಾಶವೆಂಬ ಹೆಸರಿನಲ್ಲಿ ಪ್ರತಿಷ್ಠಿತ ಉಪಾಹಾರ- ವಸತಿ ಗೃಹಗಳನ್ನು ಸ್ಥಾಪಿಸಿ ದಿ। ಕುತ್ತೆತ್ತೂರು ಸೀತಾರಾಮರಾಯರು, ಮದರಾಸು, ಬೆಂಗಳೂರು, ಮುಂಬಯಿ ನಗರಗಳಲ್ಲಿ 'ಫುಡ್ ಲ್ಯಾಂಡ್' ಹೆಸರಿನಲ್ಲಿ ಸ್ಥಾಪಿಸಿದ ದಿ। ಕಡಂದಲೆ ಕೃಷ್ಣಭಟ್ಟರು, ಹೈದರಾಬಾದ್ ಸಿಕಂದರಾಬಾದ್‌ನ ತಾಜಮಹಲುಗಳ ಸ್ಥಾಪಕ ದಿ। ಬಾಬುರಾಯ, ಸುಂದರರಾಯ ಸೋದರರು, ವಿಜಯವಾಡದ ಹೆಜಮಾಡಿ ವಾಸುದೇವರಾಯರು, ಮುಂಬಯಿಯ ಮೋಡರ್ನ್ ಹಿಂದೂ ಹೋಟೇಲಿನ ಸಂಕಣ್ಣ ಹೆಬ್ಬಾರರು, ವೆಲ್‌ಕಮ್ ಹೋಟೇಲಿನ ಕಾಪು ವೆಂಕಟರಾಯರು, ರಾಮದೇವ್ ಹೋಟೇಲಿನ ನರಸಿಂಗರಾಯರು, ಬಳ್ಳಾರಿಯ ಮೀನಾಕ್ಷಿ ಗ್ರೂಪಿನ ಕುದಿಗ್ರಾಮ ಶ್ರೀನಿವಾಸ ಆಚಾರ್ಯರು, ಗುಲ್ಬರ್ಗ ಮೋಹನ ಲಾಡ್ಜ್‌ನ ಪಾದೂರು ರಾಮಕೃಷ್ಣ ತಂತ್ರಿಯವರು, ಕೇರಳದ ತಿರುವನಂತಪುರದ ಹಯಗ್ರೀವ ಪೋತಿಯವರು, ಎರ್ನಾಕುಲಂನ ರಾಮಕೃಷ್ಣರಾವ್ ಸೋದರರು, ಮಧುರೆಯ ನರಸಿಂಗರಾಯರು, ಹುಬ್ಬಳ್ಳಿಯ ರಾಮಚಂದ್ರರಾಯರು, ಉಚ್ಚಿಲ ಅನಂತಭಟ್ಟರು, ಹೈದರಾಬಾದ್‌ನ ಸೀತಾರಾಮರಾಯರು, ದೆಹಲಿಯ ಕೇಂದ್ರ ಕನ್ನಾಟ್ ಪ್ಲೇಸ್‌ನಲ್ಲಿ 1930ರ ದಶಕದಲ್ಲೇ ಮದ್ರಾಸ್ ಹೊಟೇಲ್ ಸ್ಥಾಪಿಸಿದ ದಿ। ಸುಬ್ಬರಾಯರು ಹೀಗೆ ಅನೇಕಾನೇಕ ಉಡುಪಿ ಮತ್ತು ಮಂಗಳೂರ ಸುತ್ತಮುತ್ತಲಿನ ವೈದಿಕ ಮನೆತನದ ವ್ಯಕ್ತಿಗಳು ತಮ್ಮ ಬಾಲ್ಯದಲ್ಲೇ ಬರಿಗೈಯಲ್ಲಿ ಮನೆಬಿಟ್ಟು ತೆರಳಿ, ತಮ್ಮ ಸ್ವಂತ ಶ್ರಮದಿಂದ ಹಂತ ಹಂತವಾಗಿ ಪ್ರಗತಿ ಸಾಧಿಸಿ, ತಾವು ನೆಲೆನಿಂತ ನಗರದಲ್ಲಿ ದೊಡ್ಡ ಹೆಸರಾಗಿ ಬದುಕಿ, ಅನಂತರದ ಪೀಳಿಗೆಗೆ 'ಮಾದರಿ' ವ್ಯಕ್ತಿಗಳಾಗಿ ಹೊಟೇಲು ಉದ್ಯಮದ ಐತಿಹಾಸಿಕ ವ್ಯಕ್ತಿಗಳಾಗಿ ಇಪ್ಪತ್ತನೆಯ ಶತಮಾನದ ಆದಿಯಿಂದ ಉತ್ತರಾರ್ಧದ ನಡುಭಾಗದವರೆಗೆ ಬಾಳಿ ಬದುಕಿದವರು. ಇದೇ ರೀತಿ ಎರಡನೆಯ ಹಂತದಲ್ಲಿ ಕೋಟದ ಪರಿಸರದವರೂ ಈ ವೃತ್ತಿಗಿಳಿದು, ಬಹುತೇಕ ಕರ್ನಾಟಕ, ಆಂಧ್ರಪ್ರದೇಶದಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಆರಿಸಿಕೊಂಡು ಪ್ರಸಿದ್ಧರಾದರು. ಬೆಂಗಳೂರಿನ ಸುಪ್ರಸಿದ್ಧ ಮಾವಳ್ಳಿಯ ಮಯ್ಯರು, ಜನತಾ ಸಮುಚ್ಚಯವೇ ಇತ್ಯಾದಿ ಉಪಹಾರ ಗೃಹಗಳ ನೇರಂಬಳ್ಳಿ ನಾರಾಯಣರಾಯರು, ವೆಂಕಟರಾಯರು, ಆನಂದರಾಯರು ಇತ್ಯಾದಿ ಕೋಟೇಶ್ವರ ಬ್ರಾಹ್ಮಣರ ಹೆಸರನ್ನೂ ಇಲ್ಲಿ ಉಲ್ಲೇಖಿಸುವುದು ಅಗತ್ಯ. ಅದೇ ರೀತಿ ಮಹಾರಾಷ್ಟ್ರದ ಸತಾರ, ನಾಸಿಕವೇ ಮುಂತಾದ ಅನೇಕ ಕಡೆ ಉಪಾಹಾರಗೃಹಗಳ ಸರಮಾಲೆಯನ್ನೇ ಸ್ಥಾಪಿಸಿದ ಅಲೆವೂರು ಶ್ಯಾಮರಾಯರನ್ನೂ ಇಲ್ಲಿ ಸ್ಮರಿಸಬೇಕಾಗಿದೆ. ಮುಂದಕ್ಕೆ ಕಾಮತ್ ಹೊಟೇಲುಗಳೂ ಇದೇ ಮಾದರಿಯಲ್ಲಿ ಹೆಚ್ಚಿನಂಶ ಕರ್ನಾಟಕದಾದ್ಯಂತ ಹಬ್ಬಿಕೊಂಡುದನ್ನು ಕಾಣುತ್ತೇವೆ. ಉತ್ತರ ಕನ್ನಡದ ಗೌಡಸಾರಸ್ವತರ ಕೊಡುಗೆಯಿದು.

ಈ ಉದ್ದಿಮೆಯ ಎರಡನೆಯ ಹಂತದಲ್ಲಿ ಶಾಖಾಹಾರಿ ಹೋಟೇಲುಗಳ ಹರಿಕಾರರಾಗಿ ಬ್ರಾಹ್ಮಣೇತರರೂ ಸೇರಿಕೊಳ್ಳುವುದನ್ನು ಕಾಣುತ್ತೇವೆ. ಇದು ಮೊದಲಿಗೆ ಮುಂಬಯಿ, ಪೂನಾ ಮುಂತಾದ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದು, ಕ್ರಮೇಣ ಕರ್ನಾಟಕವನ್ನು ವ್ಯಾಪಿಸಿತು. ಮೊದಮೊದಲು ಶಾಖಾಹಾರದ ಪಾಕಶಾಸ್ತ್ರದ ಪ್ರವೀಣರಾಗಿ ಬ್ರಾಹ್ಮಣರನ್ನು ಕರೆಸಿಕೊಳ್ಳುತ್ತಿದ್ದರು. ಅವರ ಕೆಳಗೆ ಬ್ರಾಹ್ಮಣೇತರರೂ ಅಡುಗೆ, ತಿಂಡಿ ಮಾಡುವುದನ್ನು ಕ್ರಮೇಣ ಕಲಿತರು. ಆ ಬಳಿಕ ಜಾತಿಭೇದವಿಲ್ಲದೆ, ಬಂಟರು, ಬಿಲ್ಲವರು ಹಾಗೂ ಇತರರೂ ಈ ಉದ್ಯಮದ ನೈಪುಣ್ಯವನ್ನು ಗಳಿಸಿ, ಉಡುಪಿಯ ಪರಂಪರೆಯನ್ನು ಇನ್ನಷ್ಟು ವ್ಯಾಪಕವಾಗಿ, ಜನಪ್ರಿಯವಾಗಿ ಬೆಳೆಸಲು ಕಾರಣರಾದರು. ಇಂದಿಗೆ ಮುಂಬಯಿಯಾದ್ಯಂತ ಬಹುತೇಕ ಜನರಿಗೆ ತಿಂಡಿ, ಊಟವನ್ನು ನೀಡುವವರೆಂದರೆ, ದಕ್ಷಿಣ ಕನ್ನಡ- ಉಡುಪಿ ಜಿಲ್ಲೆಯ ಬಂಟರು, ಬಿಲ್ಲವರು, ಇತ್ಯಾದಿ ಎಲ್ಲ ಸ್ತರದವರು. ಇಲ್ಲಿ ಉಡುಪಿ ಅಡುಗೆಯು ಕೇವಲ ಬ್ರಾಹ್ಮಣರ ಸ್ವಾಮ್ಯವಲ್ಲ. ಈ ಪ್ರದೇಶದವರ ಸ್ವಾಮ್ಯವಾಗಿ ಇದು ಬೆಳೆದು ಬಂದಿದೆ.

ಉಡುಪಿಯ ಬ್ರಾಹ್ಮಣರು ಉಡುಪಿಯ ಶ್ರೀ ಕೃಷ್ಣನ ಲಾಂಛನವನ್ನು ಹೊತ್ತು ತಮ್ಮ ವ್ಯಾಪಾರವನ್ನು ಆರಂಭಿಸಿ

ಹಣ ಸ್ವೀಕರಿಸುವ ಗಲ್ಲಾಪೆಟ್ಟಿಗೆಯ ಹಿಂದೆ ಶ್ರೀಕೃಷ್ಣನ ಚಿತ್ರವನ್ನು ತೂಗುಹಾಕುತ್ತಿದ್ದರು. ಇದರ ಜತೆಗೆ ತಮ್ಮ ಊರಿನ ಅಥವಾ ಕುಲದೇವತೆಯ ಚಿತ್ರ ಅಥವಾ ಮಂತ್ರಾಲಯದ ರಾಘವೇಂದ್ರನ ಚಿತ್ರ ಇತ್ಯಾದಿಗಳೂ ಇರಬಹುದು. ಕೋಟ ಬ್ರಾಹ್ಮಣರು ಉಡುಪಿ ಕೃಷ್ಣನ ಬದಲು ಸಾಲಿಗ್ರಾಮದ ನರಸಿಂಹದೇವರ ಭಾವಚಿತ್ರವನ್ನು ತೂಗುಹಾಕುವುದು ವಾಡಿಕೆ. ಆದರೆ ಮುಂಬಯಿ, ಪೂನಾ ಮುಂತಾದ ಬ್ರಾಹ್ಮಣೇತರ ವರ್ಗದವರು ಹಿಂದೆ ವಜ್ರೇಶ್ವರಿಯಲ್ಲಿ ಆಶ್ರಮದಲ್ಲಿದ್ದ ಸ್ವಾಮಿ ನಿತ್ಯಾನಂದರ ಸಂಪರ್ಕಕ್ಕೆ ಬಂದುದರ ಪರಿಣಾಮವಾಗಿ ಹೆಚ್ಚುಕಡಿಮೆ ಇವರೆಲ್ಲರ ಹೋಟೇಲುಗಳಲ್ಲಿ ನಿತ್ಯಾನಂದರ ಭಾವಚಿತ್ರ ತಪ್ಪದೆ ಇರುತ್ತಿತ್ತು. ಇದು ಎಷ್ಟು ಸಾರ್ವತ್ರಿಕವಾಯಿತೆಂದರೆ, ಮುಂಬಯಿ, ಪೂನಾ ಮುಂತಾದ ಮಹಾರಾಷ್ಟ್ರದ ಯಾವುದೇ ಹೋಟೇಲಿನ ಒಳ ಹೊಕ್ಕಾಗ ನಿತ್ಯಾನಂದರ ಭಾವಚಿತ್ರವಿದ್ದರೆ, ನೀವು ಧೈರ್ಯವಾಗಿ ಅಲ್ಲಿ ಗಲ್ಲಾಪೆಟ್ಟಿಗೆಯ ಮುಂದೆ ಕುಳಿತವನೊಡನೆ ತುಳುವಿನಲ್ಲಿ ಮಾತನಾಡಬಹುದಾಗಿತ್ತು. ಇದೇ ರೀತಿ ಇಲ್ಲಿಯ ಬಿಲ್ಲವರ ಮೇಲೆ ಗಾಢವಾದ ಆಧ್ಯಾತ್ಮಿಕ ಪ್ರಭಾವವನ್ನು ಬೀರಿದವರು, ನಾರಾಯಣ ಗುರುಗಳು. ಹಾಗಾಗಿ ಬಿಲ್ಲವರ ಯಾವುದೇ ಉದ್ಯಮದಲ್ಲಿ ತಮ್ಮ ಈ ಗುರುಗಳ ಅನುಗ್ರಹವನ್ನು ಕೋರಿ, ಅವರನ್ನು ಭಾವಚಿತ್ರವಿಟ್ಟು ಪೂಜಿಸುವ ಸಂಪ್ರದಾಯ. ಹೀಗಾಗಿ ಬಿಲ್ಲವ ಸ್ವಾಮ್ಯದ ಹೋಟೇಲುಗಳಲ್ಲಿ ಶ್ರೀ ನಾರಾಯಣ ಗುರುಗಳ ಭಾವಚಿತ್ರವಿರುವುದು ಸಾಮಾನ್ಯ.

ಹೀಗೆ ಮೊದಮೊದಲು ಉಡುಪಿ ಬ್ರಾಹ್ಮಣರ ಹೋಟೇಲುಗಳೆಂದು ನಾಮಫಲಕ ಹೊತ್ತು ವ್ಯಾಪಾರ ನಡೆಸುತ್ತಿದ್ದ ಸಂಸ್ಥೆಗಳು ಕ್ರಮೇಣ ಉಡುಪಿ ಹೋಟೇಲುಗಳೆಂದು ಕರೆಯಲ್ಪಟ್ಟು ಆ ಬಳಿಕ 'ಉಡುಪಿ' ಎಂಬ ಪದವೂ ಮಾಯವಾಗಿ, ಕೇವಲ 'ಶಾಕಾಹಾರದ ಹೋಟೇಲು'ಗಳೆಂದು ಕರೆಯಲ್ಪಡುವ ಹಂತಕ್ಕೆ ಬಂದಾಗ, ಇವನ್ನು ಉಡುಪಿಯವರ ಹೋಟೇಲುಗಳೆಂದು ಗುರುತಿಸಬೇಕಾದರೆ, ಒಳಗೆ ಗಲ್ಲಾಪೆಟ್ಟಿಗೆಯ ಹಿಂದೆ ಉಡುಪಿ ಕೃಷ್ಣ ಅಥವಾ ಈ ಪ್ರದೇಶದ ಯಾವುದೇ ದೇವಸ್ಥಾನದ ದೇವರ ಅಥವಾ ಸ್ವಾಮಿ ನಿತ್ಯಾನಂದ, ನಾರಾಯಣಗುರು ಮುಂತಾದ ಮಹಾಸಂತರ ಭಾವಚಿತ್ರವು ನೆರವಾಗುತ್ತಿವೆ.

ಇಷ್ಟೆಲ್ಲ ಸ್ಥಿತ್ಯಂತರವು ಕಳೆದ ಕೆಲವು ದಶಕಗಳಲ್ಲಾದರೂ, ಉಡುಪಿಯವರ ತಿಂಡಿ ತಿನಿಸುಗಳು, ಊಟ-ಇವು ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿವೆ. ಆದರೆ ಇತ್ತೀಚಿನ ಒಂದೆರಡು ದಶಕಗಳಿಂದ ಈ ಉದ್ಯಮದಲ್ಲಿಯೂ ಪರಕೀಯರ ಪ್ರಭಾವವು ಬೆಳೆಯುತ್ತಿರುವುದನ್ನು ಕಾಣಬಹುದು. ಶಾಕಾಹಾರಿ ಹೋಟೇಲುಗಳ ಬದಲು ಇಂದಿಗೆ ನಮ್ಮವರು 'ಬಾರ್ ಅಂಡ್ ರೆಸ್ಟೋರೆಂಟ್', 'ಉತ್ತರ ಭಾರತದ ಶೈಲಿ' 'ಲೇಡೀಸ್ ಬಾರ್' ಇತ್ಯಾದಿ ಶೈಲಿಗೆ ಆಕರ್ಷಿತರಾಗುತ್ತಿರುವುದು ಈ ಜಿಲ್ಲೆಯ ವಿಶಿಷ್ಟಪಾಕಕಲಾಪಕ್ಕೆ ಮಾರಕವಾಗುತ್ತಿದೆ. ಇವುಗಳಿಂದ ಜಿಲ್ಲೆಯ ಸುಪ್ರಸಿದ್ಧಿಯ ಬದಲು ಕುಪ್ರಸಿದ್ಧಿಯೂ ಬೆಳೆಯುವ ಸಾಧ್ಯತೆಯಿದೆ.

ಉಡುಪಿ ಹೋಟೇಲುಗಳು ಊಟ-ಉಪಾಹಾರದ ತಮ್ಮತನವನ್ನು ಉಳಿಸಿಕೊಳ್ಳಬೇಕು. ಅವುಗಳ ಬೇಡಿಕೆ ಚಿರಂತನ. ಅಲ್ಲದೆ ಈ ಉಡುಪಿಯ ತಿಂಡಿಯ ರುಚಿಗೆ ಭಾರತದ ಹೊರಗಿನ ಪೂರ್ವ-ಪಶ್ಚಿಮದ ಕಡೆಯಿಂದಲೂ ಆಕರ್ಷಣೆಯು ಹೆಚ್ಚುತ್ತಿರುವಾಗ, ಇವುಗಳನ್ನು ಬಿಟ್ಟು ಬೇರೆ ಶೈಲಿಗೆ ನಮ್ಮವರು ಆಕರ್ಷಿತರಾಗುವುದು ಸರಿಯಲ್ಲ. ನಮ್ಮವರು ಅಮೇರಿಕ, ಸಿಂಗಾಪುರ, ಮುಂತಾದೆಡೆಗೆ ನುಗ್ಗಿ, ಅಲ್ಲಿಯ ಜನರನ್ನು ಆಕರ್ಷಿಸತೊಡಗಿದ್ದಾರೆ. ಹೀಗಿರುವಾಗ ಇಂದು ನಾವು ಕೇವಲ ಪಾಶ್ಚಾತ್ಯ ಮಾದರಿಯ ಕೇಟರಿಂಗ್ ಕಾಲೇಜು ತೆರೆಯುವ ಬದಲು, ಈ ಪ್ರದೇಶದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ 'ಹೋಟೆಲ್ ಮ್ಯಾನೇಜ್‌ಮೆಂಟ್-ಉಡುಪಿಯ ಮಾದರಿ'ಯ ಕೋರ್ಸ್‌ಗಳನ್ನು ಯಾಕೆ ತೆರೆಯಬಾರದು? ಇದಕ್ಕೆ ಪರರಾಷ್ಟ್ರದ ವಿದ್ಯಾರ್ಥಿಗಳಿಂದಲೂ ಸಾಕಷ್ಟು ಬೇಡಿಕೆಯು ಬರಲು ಸಾಧ್ಯವಿದೆ. ಪ್ರಾದೇಶಿಕ ವೈಶಿಷ್ಟ್ಯವನ್ನು ಗುರುತಿಸಿಕೊಂಡು ನಮ್ಮ ಉನ್ನತ ಶಿಕ್ಷಣವನ್ನು ರೂಪಿಸುವಲ್ಲಿ ಇದೊಂದು ಉತ್ತಮ, ಅರ್ಥಪೂರ್ಣ ಹೆಜ್ಜೆಯಾದೀತು.


□

ಭಾಗ- ಐದು
ಪುನರೂರು- ಸಮೀಪಚಿತ್ರ

ಭಾಗ: ಐದು
ಪುನರೂರು-ಸಮೀಪ ಚಿತ್ರ

ಇವರೆಂದರೆ ನನಗೆ ಹೆಮ್ಮೆ

☐ ಉಷಾರಾಣಿ



ನನ್ನ ಪತಿ ಪುನರೂರರ ಬಗ್ಗೆ ಮಾತಾಡುವುದೆಂದರೆ ನನಗೆ ಸಂತೋಷದ ವಿಷಯವೇ. ಇವರು ಸಾರ್ವಜನಿಕ ಜೀವನದಲ್ಲಿ ಒಂದೊಂದೇ ಹಂತವನ್ನು ಏರುತ್ತ ಹೋಗುವಾಗ ಬಹಳ ಖುಷಿಪಟ್ಟಿದ್ದೇನೆ. ಸ್ವಲ್ಪ ಮಟ್ಟಿಗೆ ನಾನೂ ತ್ಯಾಗ ಮಾಡಬೇಕಾಗುತ್ತದೆ. ಹೆಚ್ಚು ಸಮಯವನ್ನು ಮನೆಯಲ್ಲಿ ಕಳೆಯಲು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ ಇದು ಅನಿವಾರ್ಯ.

ನನಗೆ ಮೊದಲು ಕನ್ನಡವೇ ಬರುತ್ತಿರಲಿಲ್ಲ. ನನ್ನ ಊರು ಉಡುಪಿ ಜಿಲ್ಲೆಯ ಎಲ್ಲೂರು. ಆದರೂ ನಾನು ಬೆಳೆದದ್ದು ತಮಿಳ್ನಾಡಿನಲ್ಲಿ. ನಮ್ಮದೂ ದೊಡ್ಡ ಕುಟುಂಬವೇ. ಇವರನ್ನು ಮದುವೆಯಾದ ಮೇಲೆಯೇ ಕನ್ನಡ ಕಲಿತದ್ದು ನಾನು. ಚಿಕ್ಕಂದಿನಿಂದಲೇ ಸ್ವಲ್ಪ ಕಷ್ಟದಿಂದಲೇ ಬೆಳೆದಿದ್ದ ನನಗೆ ಪುನರೂರರ ಅವಿಭಜಿತ ದೊಡ್ಡ ಕುಟುಂಬದೊಡನೆ ಹೊಂದಿಕೊಳ್ಳಲು ಯಾವ ಕಷ್ಟವೂ ಆಗಲಿಲ್ಲ. ಪಟೇಲಿಕೆಯನ್ನೂ ಮನೆಯ ಉಸ್ತುವಾರಿಯನ್ನೂ ಭಾವನವರು ನೋಡಿಕೊಳ್ಳುತ್ತಿದ್ದರು.

ನನ್ನ ಪತಿಗೆ ಕುಟುಂಬದ ಎಲ್ಲರ ಮೇಲೂ ಅಗಾಧ ಪ್ರೀತಿ, ವಿಶ್ವಾಸ. ಆದರೆ ಮೇಲು ನೋಟಕ್ಕೆ ತುಂಬ ಗಂಭೀರ. ನಮ್ಮ ಮೂವರು ಹೆಣ್ಣು ಮಕ್ಕಳಾದ ರಾಧಿಕಾ, ಮಲ್ಲಿಕಾ ಮತ್ತು

'ಶುಭವಾಗಲಿ,' ಮೂಲ್ಕಿ, ದ.ಕ.

ಚಂದ್ರಿಕಾರಲ್ಲಿ ಹೆಚ್ಚು ಸಲುಗೆಯಿದ್ದದ್ದು ರಾಧಿಕಾಳೊಡನೆ. ಅವಳು ಕೂಡಾ ಏನಾದರೂ ಅಪ್ಪನೊಡನೆ ಹೇಳಬೇಕೆಂದರೆ ನೇರವಾಗಿ ಹೇಳುವವಳು. ಬೆಳಗ್ಗೆ ಐದು- ಐದೂವರೆಗೆ ಇವರು ಏಳುತ್ತಾರೆ. ಸ್ನಾನ ಪೂಜೆ ಎಲ್ಲ ಕ್ರಮಪ್ರಕಾರ ನಡೆಯಬೇಕು. ಮನೆಯಲ್ಲಿ ಯಾರು ಯಾವ ಕೆಲಸವನ್ನೇ ಮಾಡುತ್ತಿರಲಿ, ಪೂಜೆಯ ವೇಳೆಗೆ ಎಲ್ಲರೂ ದೇವರ ಕೋಣೆಗೆ ಬರಬೇಕು. ಸಾಮೂಹಿಕವಾಗಿ ಮನೆಯ ಎಲ್ಲರೂ ದೇವರ ಪ್ರಾರ್ಥನೆ ಮಾಡುವಾಗ ಒಂದು ಒಗ್ಗಟ್ಟಾದ ಶಕ್ತಿ ಮನೆಯಲ್ಲಿ ಮೂಡುತ್ತದೆ ಎಂದು ಇವರು ಯಾವಾಗಲೂ ಹೇಳುತ್ತಿರುತ್ತಾರೆ. ಇವರ ಸಾರ್ವಜನಿಕ ಕೆಲಸಗಳಿಂದಾಗಿ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ವೈಯಕ್ತಿಕ ಗಮನ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟಕ್ಕೂ ಇವರಿಗೆ ವ್ಯವಹಾರದ ಅನುಭವಗಳ ಮೇಲೆ ಹೆಚ್ಚು ನಂಬಿಕೆ. ಈಗ ದೇವಪ್ರಸಾದ(ನಮ್ಮ ಮಗ)ನಿಗೆ ತಮ್ಮ ವ್ಯವಹಾರದ ಹೊಣೆಗಾರಿಕೆಯನ್ನು ನೀಡುತ್ತಿದ್ದಾರೆ.

ಅವರು ಲಯನ್ಸ್ ಗವರ್ನರ್ ಆಗಿದ್ದಾಗ ನಾನೂ ಅನೇಕ ಊರುಗಳಿಗೆ ಅವರೊಂದಿಗೆ ಹೋಗಿದ್ದೆ. ನೇತ್ರತಜ್ಞ ಮೋದಿಯವರಿಂದ ಇವರು ನೇತ್ರ ಚಿಕಿತ್ಸಾ ಶಿಬಿರಗಳನ್ನು ಪುನರೂರಿನಲ್ಲಿ ಏರ್ಪಡಿಸುತ್ತಿದ್ದರು. ಆಗ ಅನೇಕ ಮಂದಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಇನ್ನು ಅನೇಕ ಸಂದರ್ಭಗಳಲ್ಲಿ ಡಾ। ಶಿವರಾಮ ಕಾರಂತರು, ಹಾ.ಮಾ.ನಾಯಕರು ಮುಂತಾದ ಹಿರಿಯ ಸಾಹಿತಿಗಳೂ ಮನೆಗೆ ಬಂದು ಉಳಿಯುತ್ತಿದ್ದರು. ಸಾಹಿತಿಗಳೊಂದಿಗೆ ನಮ್ಮವರಿಗೆ ವಿಶೇಷವಾದ ಗೌರವವಿದೆ.

ಸಂಪ್ರದಾಯಗಳ ಹಾಗೆ ಜ್ಯೋತಿಷವೆಂದರೂ ಇವರಿಗೆ ಬಹಳ ನಂಬಿಕೆಯಿದೆ. ನನ್ನ ಜಾತಕದಲ್ಲಿ ಏನೋ ದೋಷವಿರುವುದನ್ನು ತಿಳಿದು ಆ ಬಗ್ಗೆ ಹೋಮವನ್ನು ಮಾಡಿಸಿದ್ದರು. ಆದರೆ ಇಂಥ ನಂಬಿಕೆಯಲ್ಲಿ ಕೂಡ ಅವಿವೇಕವಾದುದನ್ನು ಅವರು ಒಪ್ಪುವುದಿಲ್ಲ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರು ಹೆಚ್ಚು ಸಮಯವನ್ನು ಬೆಂಗಳೂರಿನಲ್ಲಿ ಕಳೆಯಬೇಕಾಗಿತ್ತು. ಬೇರೆ ಯಾರೇ ಆಗಿದ್ದರೂ ಆ ಹುದ್ದೆಗೆ ಸರಕಾರದಿಂದ ಸಿಗುವ ಎಲ್ಲ ಲಾಭಗಳನ್ನು ಖಂಡಿತವಾಗಿ ಪಡೆದುಕೊಳ್ಳುತ್ತಿದ್ದರು. ಆದರೆ ಇವರು ಆ ಹುದ್ದೆಯ ಯಾವುದೇ ಲಾಭವನ್ನು ಪಡೆಯಲು ಪ್ರಯತ್ನಿಸಲಿಲ್ಲ. ಬದಲಾಗಿ ತಮ್ಮಿಂದಾದಷ್ಟು ಆರ್ಥಿಕ ಸಹಾಯವನ್ನು ಪರಿಷತ್ತಿಗೇ ಮಾಡಿದ್ದಾರೆ. ಈ ಬಗ್ಗೆ ನನಗೆ ಬಹಳ ಹೆಮ್ಮೆಯಿದೆ. ಬೆಂಗಳೂರಿನಲ್ಲಿ ಇರುವಾಗಲೂ ನಮ್ಮ ಮಗಳ ಮನೆಯಲ್ಲೇ ಇರುತ್ತಿದ್ದರು. ಅಲ್ಲಿಂದ ಬರುವಾಗ ಸ್ವಂತ ಕಾರಿನಲ್ಲೇ ಬರುತ್ತಿದ್ದರು. ಮೊನ್ನೆ ರಾಜ್ಯೋತ್ಸವ ಪ್ರಶಸ್ತಿ ಬಂತಲ್ಲ, ಅದಕ್ಕಾಗಿ ಅವರು ಯಾರಿಂದಲೂ ಶಿಫಾರಸ್ಸು ಮಾಡಿಸಲು ಹೋಗಲಿಲ್ಲ. ವ್ಯವಹಾರದಲ್ಲಿ ನೇರವಾಗಿರುವುದರಿಂದಲೇ ಅವರು ಯಾರಿಗೂ ಹೆದರುವುದಿಲ್ಲ.

ಮನೆಯ ಹೊರಗೆ ಅವರು ಉಳಿದುಕೊಳ್ಳುವುದು ಬಹಳ ಅಪರೂಪ. ಲಯನ್ಸ್ ಸಮಾರಂಭಗಳಲ್ಲಿ ಭಾಗವಹಿಸಲು ದೂರದ ಊರುಗಳಿಗೆ ಪ್ರಯಾಣಿಸಿದಾಗ ಅನಿವಾರ್ಯವಾಗಿ ಉಳಿದುಕೊಳ್ಳಬೇಕು. ಇಲ್ಲವಾದಲ್ಲಿ ಒಂಭತ್ತು-ಒಂಭತ್ತೂವರೆಯೊಳಗೆ ಮನೆಗೆ ಬರಲೇಬೇಕು. ತಮ್ಮ ನೂರಾರು ಚಟುವಟಿಕೆಗಳ ನಡುವೆಯೂ ನಮ್ಮೊಡನೆ ಕೆಲವು ಕಾಲ ಆತ್ಮೀಯವಾಗಿ ಕಳೆಯುವಷ್ಟು ಪುರುಸೊತ್ತು ಮಾಡಿಕೊಳ್ಳುತ್ತಾರಲ್ಲ, ಅದರಿಂದಲೇ ನನಗೆ ಅವರ ಬಗ್ಗೆ ಹೆಮ್ಮೆ.

(ನಿರೂಪಣೆ: ಸುಜಾತಾ)

□

ಭಾಗ: ಐದು
ಪುನರೂರು–ಸಮೀಪ ಚಿತ್ರ

ನನ್ನ ತಮ್ಮ ಹರಿಕೃಷ್ಣ

□ ಪಟೇಲ್ ಪುನರೂರು ವೆಂಕಟೇಶರಾವ್



ನನ್ನ ತಮ್ಮ ಹರಿಕೃಷ್ಣನ ಬಗ್ಗೆ ಮೊದಲೇ ಒಂದು ಮಾತು ಹೇಳಬೇಕು. ಅವನಿಗೆ ವಿಷಯವನ್ನು ಅಡಗಿಸಿಟ್ಟು ಗೊತ್ತಿಲ್ಲದ ಹಾಗೆ ನಟಿಸುವುದು, ಸಂದರ್ಭ ಬಂದಾಗ ಬತ್ತಳಿಕೆಯಿಂದ ಬಾಣ ತೆಗೆದುಬಿಟ್ಟಂತೆ ಮಾತಿನಲ್ಲಿ ಚುಚ್ಚುವುದು ಇದು ಯಾವುದೂ ಇಲ್ಲ. ಅವನಿಗೆ ನೇರವಾಗಿ ನುಡಿಯಬೇಕು, ಹಾಗೆಯೇ ನಡೆಯಬೇಕು. ನಿಷ್ಠುರವಾದಿ; ಸ್ವಲ್ಪ ದುಡುಕ ಕೂಡ. ಆದರೆ ಇದು ಸಾತ್ತ್ವಿಕವಾದ ದುಡುಕು ಎಂದೇ ಹೇಳಬೇಕಾಗುತ್ತದೆ.

ನಮ್ಮದು ಪುನರೂರು ಪಟೇಲರ ಮನೆತನ. ನಮ್ಮ ತಂದೆ ವಾಸುದೇವರಾಯರಿಗೆ ಮೂವರು ಗಂಡುಮಕ್ಕಳು. ನಾನೇ ಹಿರಿಯವನು. ಎರಡನೆಯವನು ರಾಮಮೂರ್ತಿ. ಹರಿಕೃಷ್ಣ ಕೊನೆಯವನು. ನನಗೂ ಅವನಿಗೂ 16 ವರ್ಷಗಳ ಅಂತರ. ಹರಿಕೃಷ್ಣ ಏಳು ವರ್ಷದ ಬಾಲಕನಾಗಿರುವಾಗಲೇ ನಮ್ಮ ತಂದೆ ತೀರಿಕೊಂಡದ್ದರಿಂದ, ನನ್ನ ಬಗ್ಗೆ ಪಿತೃಗೌರವವನ್ನು ಇರಿಸಿಕೊಂಡೇ ಬೆಳೆದ. ಈಗಲೂ ಅದೇ ಗೌರವವನ್ನು ಇರಿಸಿಕೊಂಡಿದ್ದಾನೆ. ಎಸ್ಸೆಸ್ಸೆಲ್ಸಿಯವರೆಗೆ ಓದಿದ ಅನಂತರ ಸ್ವಂತ ಉದ್ಯೋಗ ಅಂತ ಮೈಸೂರು, ಮದ್ರಾಸು, ಕೇರಳ ಅಂತ ತುಂಬ ವರ್ಷ ಮನೆಯಿಂದ ಹೊರಗಿದ್ದ. ನನ್ನ ಮೊದಲ ತಮ್ಮ ರಾಮಮೂರ್ತಿಯ ಜತೆಗೆ ಕೇರಳದಲ್ಲಿದ್ದು, ಏನೇನೋ ಸಾಹಸ ಮಾಡಿ ಕೊನೆಗೆ ಊರಿಗೆ ಬಂದು ಹೊಟೇಲ್ ಉದ್ಯಮಕ್ಕೆ ಕೈ ಹಾಕಿದ. ಕೇರಳದಲ್ಲಿ ಸ್ವಲ್ಪ ಕಾಲ

ಪಟೇಲ್ ಹೌಸ್, ಪುನರೂರು, ದಕ್ಷಿಣ ಕನ್ನಡ

ಸರ್ಕಸ್ ಕಂಪನಿ ಕೂಡಾ ನಡೆಸಿದ್ದ ಅಂದರೆ ಅವನ ಸಾಹಸ ಎಷ್ಟು ಅಂತ ನಿಮಗೆ ಅರ್ಥವಾದೀತು! ಹಿರಿಯರಿಂದ ಬಂದ ಪಟೇಲಿಕೆಯ ಮನೆ, ಆಸ್ತಿಯಲ್ಲಿ ಹರಿಕೃಷ್ಣ ಒಂದು ಪೈಸೆಯ ಪಾಲನ್ನೂ ಪಡೆಯಲಿಲ್ಲ. ಈಗಲೂ ಒಮ್ಮೊಮ್ಮೆ ನಾನೇ ಒಂದಿಷ್ಟು ಅಕ್ಕಿ, ತೆಂಗಿನಕಾಯಿ ಇತ್ಯಾದಿಗಳನ್ನು ಅವನಲ್ಲಿಗೆ ಒಯ್ದುಕೊಟ್ಟರೆ ನನ್ನ ಮೇಲೆ ಗೌರವದಿಂದ, ನನಗೆ ಬೇಸರವಾಗಬಾರದು ಅಂತ, ಒಪ್ಪಿಕೊಳ್ಳುತ್ತಾನೆ. ದೇವಸ್ಥಾನದ ಬಳಿ ಜಾಗ ಖರೀದಿಸಿದ್ದು, ಮೂಲ್ಕಿ, ಮಂಗಳೂರುಗಳಲ್ಲಿ ಪೆಟ್ರೋಲ್ ಪಂಪು, ಹೋಟೇಲು ಇವೆಲ್ಲವನ್ನು ಅವನ ಸ್ವಂತ ಪರಿಶ್ರಮದಿಂದ ಮಾಡಿದ್ದು. ಆದರೆ ಪ್ರತಿ ಸಲವೂ ನನ್ನ ಸಲಹೆ ಕೇಳಿದ್ದಾನೆ.

ಭೂಮಸೂದೆ ಜಾರಿಗೆ ಕೆಲವು ಮನೆಯವರು ಸುಮ್ಮನೆ ಉಪಟಳ ನೀಡಿದರು. ಅಂತಹ ಸಂದರ್ಭಗಳಲ್ಲಿ 'ದಂಡಂ ದಶಗುಣಂ ಭವೇತ್' ಅನ್ನುವುದು ಹರಿಕೃಷ್ಣನ ನಂಬಿಕೆ. ಸ್ವಲ್ಪ ಜನರನ್ನು ಕರೆತಂದು ಅನ್ಯಾಯಿಗಳಿಗೆ ಬುದ್ಧಿ ಕಲಿಸಬೇಕಾಯಿತು. ಇಂತಹ ಸಿಟ್ಟು ಆಗಾಗ ನಮಗೆ ಬೇಕು. ಇಲ್ಲವಾದಲ್ಲಿ ನಮ್ಮನ್ನು ಮೆಟ್ಟಿ ನಿಲ್ಲುವವರೇ ಹೆಚ್ಚು. ಒಂದು ಸಂದರ್ಭದಲ್ಲಿ ಕಟೀಲಿನ ಓರ್ವ ಪ್ರತಿಷ್ಠಿತರ ಮೇಲೆ ಮಹಿಳೆಯೊಬ್ಬಳು ಸುಳ್ಳು ದೂರು ನೀಡಿದಳು. ದೂರಿನಲ್ಲಿ ಸತ್ಯಾಂಶವಿರದಿದ್ದರೂ, ದೂರಿನ ಗಂಭೀರತೆಯಿಂದ ಅವರನ್ನು ಬಂಧಿಸುವ ಸಾಧ್ಯತೆ ಇತ್ತು. ಅವರು ಹರಿಕೃಷ್ಣನ ಬಳಿಗೆ ಬಂದರು. ಆ ದಿನದ ಮಟ್ಟಿಗೆ ಅವರ ಬಂಧನವಾಗದಂತೆ ನೋಡಿಕೊಂಡ ಹರಿಕೃಷ್ಣ, ಆ ಮಹಿಳೆಯ ವಕೀಲರನ್ನು ಕಂಡು, ಇದಿರು ಪಾರ್ಟಿಯವರು ಆ ಮಹಿಳೆಯ ಮೇಲೆ ಮತ್ತೊಂದು ಗಂಭೀರವಾದ ದೂರು ದಾಖಲಿಸಿದ್ದಾರೆಂದು ತಿಳಿಸುವಂತೆ ಕೇಳಿಕೊಂಡರು. ತನ್ನ ವಕೀಲರಿಂದ ಈ ಸುದ್ದಿ ತಿಳಿದ ಆ ಧೂರ್ತ ಮಹಿಳೆ ಅದೇ ರಾತ್ರಿ ಊರನ್ನೇ ಬಿಟ್ಟು ಓಡಿಹೋದಳು. ಇಂಥವಲ್ಲಿ ಚಾಣಾಕ್ಷತನವನ್ನು ಈ ಕಾಲದಲ್ಲಿ ತೋರಿಸಬೇಕಾಗುತ್ತದೆ.

ಹರಿಕೃಷ್ಣನನ್ನು ಸಾರ್ವಜನಿಕ ಜೀವನಕ್ಕೆ ಎಳೆದದ್ದು 'ಯುಗಪುರುಷ' ಪ್ರಕಟಣಾಲಯದ ಅನಂತ ಪದ್ಮನಾಭ ಉಡುಪರೇ. ಆದ್ದರಿಂದಲೇ 'ಯುಗಪುರುಷ'ದ ಬಗ್ಗೆ ಹರಿಕೃಷ್ಣನಿಗೆ ಬಹಳ ಅಭಿಮಾನ. ಪೇಜಾವರ (ವಿಶ್ವೇಶ್ವರ ತೀರ್ಥ) ಸ್ವಾಮೀಜಿಯವರಿಗೂ, ಶ್ರೀ ಕ್ಷೇತ್ರ ಧರ್ಮಸ್ಥಳದ (ವೀರೇಂದ್ರ) ಹೆಗ್ಗಡೆಯವರಿಗೂ ಹರಿಕೃಷ್ಣನ ಮೇಲೆ ಅಪಾರ ನಂಬಿಕೆ, ಪ್ರೀತಿ. ಪಟೇಲಿಕೆಯೊಡನೆ ನಾನು ಪುನರೂರು ವಿಶ್ವನಾಥ ದೇಗುಲದ ಮೊಕ್ತೇಸರನಾಗಿ ದುಡಿಯುವಾಗ ನನಗೆ ಎಲ್ಲ ರೀತಿಯ ಸಹಕಾರಗಳನ್ನು ಹರಿಕೃಷ್ಣ ನೀಡಿದ್ದಾನೆ, ಈಗಲೂ ನೀಡುತ್ತಿದ್ದಾನೆ.

ಹರಿಕೃಷ್ಣನಿಗೆ ಜಾತಿ-ನೀತಿಗಿಂತ ಮನುಷ್ಯತ್ವದಲ್ಲಿ ನಂಬಿಕೆ ಹೆಚ್ಚು. ನಂಬಿದವರು ಮೋಸ ಮಾಡಿದರೆ ಅತ್ತ ತಿರುಗಿಯೂ ಮತ್ತೆ ನೋಡುವವನಲ್ಲ. ಬಪ್ಪನಾಡು ದೇವಸ್ಥಾನದ ಮೊಕ್ತೇಸರನಾಗಿ ಅದನ್ನು ತುಂಬ ಅಭಿವೃದ್ಧಿ ಪಡಿಸಿದ. ಆದರೆ ಅಲ್ಲಿ ನಂಬಿದವರೇ ಮಾತು ತಪ್ಪಿದಾಗ, ಅದನ್ನು ಬಿಟ್ಟೇ ಬಿಟ್ಟ. ಅವನು ಅಲ್ಲಿದ್ದ ಸಮಯದಲ್ಲಿ ಅಲ್ಲಿ ಎಷ್ಟೆಷ್ಟೋ ಒಳ್ಳೆಯ ಕಾರ್ಯಕ್ರಮಗಳು ನಡೆದು ಬಪ್ಪನಾಡಿನ ಹೆಸರು ನಾಡಿನ ಮೂಲೆಮೂಲೆಗೆ ಕೇಳಿಸುವಂತಾಯಿತು. ಆದರೆ ಈಗ ಮತ್ತೆ ಮೂಲೆ ಸೇರಿಬಿಟ್ಟಿದೆ. ಇನ್ನೊಮ್ಮೆ ಅಲ್ಲಿ ಮೊಕ್ತೇಸರನಾಗಬೇಕೆಂದು ಸ್ಥಳೀಯರು ಒತ್ತಾಯಿಸಿ, ನಾನೂ ಒಂದು ಮಾತು ಹೇಳಬೇಕು ಎಂದು ನನ್ನನ್ನು ಕೇಳಿಕೊಂಡರು. ಅಲ್ಲಿನ ವಿಷಯ ಬೇರೆ ಎಂದು ನಯವಾಗಿ ಅದನ್ನು ನಿರಾಕರಿಸಿದ. ನಾನು ಮತ್ತೆ ಒತ್ತಾಯಿಸಲಿಲ್ಲ.

ಈ ಕಾಲ ಹೇಗೆಂದರೆ, ಜನರಿಗೆ ಏನೇ ಉಪಕಾರ ಮಾಡಿದರೂ ಕೊನೆಗೆ ಏನೇನೋ ಮಾತುಗಳನ್ನು ಕೇಳಬೇಕಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಪೈಸೆ ಸಂಬಳ ತೆಗೆದುಕೊಳ್ಳದೆ, ಕೈಯಿಂದಲೇ ಕಾಸು ಹಾಕಿ ಕನ್ನಡದ ಕೆಲಸ ಮಾಡಿದರೂ, ಬೆಂಗಳೂರಿನ ಒಂದು ಪ್ರಭಾವಶಾಲೀ ಗುಂಪು ಅವನ

ಕಾಲೆಳೆಯುವ ಕೆಲಸ ಮಾಡಿತು. ತೀರಾ ಬಡವರಿಗೆ ನೂರು ಮನೆ ಕಟ್ಟಿಸಿಕೊಡುವ ಯೋಜನೆ ಗೊತ್ತುಂಟಲ್ಲ? ಎಷ್ಟೋ ಮಂದಿಗೆ ಉಪಕಾರವಾಗಿದೆ. ಆದರೂ ಕೆಲವರಿಗೆ 'ಅವರಲ್ಲಿ ಇದೆ, ಕೊಟ್ಟಿದ್ದಾರೆ, ಇಲ್ಲದಿದ್ದರೆ ಕೊಡುತ್ತಿದ್ದರೇ?' ಎಂದು ಹೇಳುವಾಗ ಬೇಸರವಾಗುತ್ತದೆ. ಇರುವವರು ಎಷ್ಟು ಮಂದಿ ಕೊಡುತ್ತಾರೆ?

ಹರಿಕೃಷ್ಣ ಪ್ರತಿದಿನವೂ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಮಾಡಿಯೇ ಎಲ್ಲಿಗಾದರೂ ಹೊರಡಬೇಕು. ಮನೆಯಲ್ಲಿಯೂ ಅಷ್ಟೇ-ಎಲ್ಲರಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡಬೇಕು. ಇಂತಹ ಕ್ರಮಗಳು ನಮ್ಮ ಮನಸ್ಸಿನ ಮೇಲೆ ನೇರ ಪರಿಣಾಮವನ್ನು ಉಂಟುಮಾಡುತ್ತವೆ ಎಂದು ಹರಿಕೃಷ್ಣನಿಗೆ ಗೊತ್ತು. ಪುನರೂರು ದೇವಸ್ಥಾನದ ಹೆಸರು ಇಷ್ಟು ಪ್ರಸಿದ್ಧಿಗೆ ಬರಲು ಹರಿಕೃಷ್ಣನೂ ಕಾರಣ.

ಪಟೇಲಿಕೆಯ ನಮ್ಮ ಹಿರಿಯರ ಮನೆಯಲ್ಲಿ ನಾವು ಆಗಾಗ ಒಟ್ಟುಗೂಡುತ್ತಿರುತ್ತೇವೆ. ಇಂತಹ ಸಂದರ್ಭಗಳನ್ನು ನಾವು ತಪ್ಪಿಸಿಕೊಳ್ಳುವುದೇ ಇಲ್ಲ. ಹರಿಕೃಷ್ಣನ ವ್ಯವಹಾರ ಮತ್ತು ಸಾರ್ವಜನಿಕ ಬದುಕಿನ ಗಡಿಬಿಡಿಗಳ ನಡುವೆ ಈ ರೀತಿಯ ಕೂಟಗಳು ನೆಮ್ಮದಿ ಕೊಡುತ್ತವೆ.

(ನಿರೂಪಣೆ: ಬಿ. ಸೀತಾರಾಮ ಭಟ್ ಮತ್ತು ಶ್ರೀಧರ ಡಿ.ಎಸ್.)

□

ನನ್ನ ಧನಿಗಳ ಗುಣ

ಸುಂದರ



ಕೇರಳದ ಕಾಸರಗೋಡು ಜಿಲ್ಲೆಯ ಬದಿಯಡ್ಕ ತಾಲೂಕಿನಲ್ಲಿರುವ ದೇಲಂಪಾಡಿ ನನ್ನ ಊರು. ನನಗೀಗ ನಲವತ್ತು ವರ್ಷ. ಇಪ್ಪತ್ತೆರಡು ವರ್ಷಗಳ ಹಿಂದೆ ಕೆಲಸ ಹುಡುಕಿಕೊಂಡು ಈ ಕಡೆಗೆ ಬಂದದ್ದು ನಾನು. ನನ್ನ ಅಣ್ಣ ಲಾರಿಯಲ್ಲಿ ಡ್ರೈವರ್ ಆಗಿದ್ದರಿಂದ ನನಗೂ ಸಹಜವಾಗಿಯೇ ಡ್ರೈವಿಂಗ್ ಕಲೆ ಕರಗತವಾಯಿತು. ನಮ್ಮ ಮನೆಯಿಂದ ಪಟೇಕರಿಸ್ವಾಮಿಯ (ತರಕಾರಿ ವ್ಯಾಪಾರಿ) ಅಂಗಡಿಗೆ ಜೀಪಿನಲ್ಲಿ ತರಕಾರಿ ತರುತ್ತಿದ್ದೆ. ಡ್ರೈವಿಂಗ್ ಲೈಸನ್ಸ್ ಪಡೆಯಲು ನನ್ನ ವಯಸ್ಸಿನ ಬಗ್ಗೆ ಸ್ವಲ್ಪ ಸುಳ್ಳು ಹೇಳಬೇಕಾಯಿತು. ಬ್ರಹ್ಮಾವರದಲ್ಲಿ ಗೋಕುಲ್ ಡೈರಿಯಲ್ಲಿ ಡ್ರೈವರ್ ಕೆಲಸ ಇದೆ ಅಂತ ಊರಿನಿಂದ ಈ ಕಡೆಗೆ ಬಂದೆ. ಆದರೆ ಸ್ವಲ್ಪವೇ ಸಮಯದಲ್ಲಿ ಡೈರಿ ಮುಚ್ಚಿತು. ಆಮೇಲೆ ಮಂಗಳೂರಿಗೆ ಹೋಗಿ ಅಲ್ಲಿನ ಗೋಕುಲ್ ಡೈರಿಯಲ್ಲಿ ಹಾಲು ವಿತರಿಸುವ ಜೀಪಿನ ಡ್ರೈವರ್ ಆಗಿ ಕೆಲಸಕ್ಕೆ ಸೇರಿದೆ.

ಈ ಸಮಯದಲ್ಲಿ ನನಗೆ ಧನಿಗಳ ಪರಿಚಯವಾದದ್ದು. ಗೋಕುಲ ಡೈರಿಯಿಂದ ಹಾಲನ್ನು ಧನಿಗಳ ಸ್ವಾಗತ್ ಹೋಟೇಲಿಗೆ ಕೊಂಡೊಯ್ದು ಕೊಡುತ್ತಿದ್ದೆವು. ಧನಿಗಳು ಯಾರು ಎಂದೂ ನನಗೆ ಗೊತ್ತಿರಲಿಲ್ಲ. ಅವರ ಪರಿಚಯವಾದದ್ದು ಒಂದು ವಿಶೇಷ ರೀತಿಯಲ್ಲಿ. ಒಂದು ದಿನ ಜೀಪಿನಲ್ಲಿ ಹಾಲು ತಂದು ಹೋಟೇಲಿನ ಮುಂದೆ ಜೀಪು ನಿಲ್ಲಿಸಿ, ಹಾಲು ವಿತರಿಸುತ್ತಿದ್ದೆ. ನನ್ನ ಜೀಪಿನ

ಕೇರಾಫ್ ಧರ್ಮದರ್ಶಿ ಹರಿಕೃಷ್ಣ ಪುನರೂರು, 'ಶುಭವಾಗಲಿ', ಮೂಲ್ಕಿ, ದ.ಕ.

ಎದುರು ಧನಿಗಳ ಕಾರು ಇತ್ತು. ಅದನ್ನು ಹೊರತೆಗೆಯಲು ನನ್ನ ಜೀಪು ಅಡ್ಡವಾಗಿತ್ತು. ಧನಿಗಳು ಬಂದವರೇ ಜೀಪನ್ನು ನೋಡಿ "ಇದು ಯಾರ ಜೀಪು?" ಎಂದು ನನ್ನನ್ನೇ ಕೇಳಿದರು. ನನಗೆ ಅವರೇ ಹರಿಕೃಷ್ಣ ಪುನರೂರರು ಮತ್ತು ಸ್ವಾಗತ್ ಹೋಟೇಲಿನ ಧನಿಗಳು ಎಂದು ಗೊತ್ತಿರಲಿಲ್ಲ. ಅವರನ್ನು ನಾನು ಆವರೆಗೆ ನೋಡಿರಲೂ ಇಲ್ಲ. ಹಾಗಾಗಿ ಸ್ವಲ್ಪ ತಮಾಷೆಯಾಗಿ "ದುಡ್ಡು ಕೊಟ್ಟವರದ್ದು" ಎಂದು ಹೇಳಿದೆ. ಅವರಿಗೆ ರೇಗಿಹೋಯಿತು. "ಜೀಪನ್ನು ಆಚೆಗೆ ತೆಗೆ ಎಂದು ಹೇಳಿದ್ದು ನಾನು" ಎಂದರು, ಸ್ವಲ್ಪ ಜೋರಾಗಿ. ತಕ್ಷಣ ಜೀಪನ್ನು ಆಚೆಗೆ ತೆಗೆದೆ. ಆ ಮೇಲೆ ನನಗೆ ಹೋಟೇಲಿನವರು ಹೇಳಿದರು- "ಅವರು ಯಾರೆಂದು ಗೊತ್ತಿಲ್ಲವೇ ನಿನಗೆ? ಅವರೇ ಧನಿಗಳು!" ನನಗೆ ಸ್ವಲ್ಪ ಮುಜುಗರವಾಯಿತು. ಮುಂದೆ ಇವರ ಬಳಿಯೇ ಕೆಲಸ ಮಾಡುತ್ತೇನೆಂದು ಆಗ ನಾನು ಎಣಿಸಿರಲಿಲ್ಲ. ನಾನು ಕೆಲಸ ಮಾಡುತ್ತಿದ್ದ ಗೋಕುಲ ಡೈರಿಯಲ್ಲಿ ಯಾವಾಗಲೂ ಮಧ್ಯಾಹ್ನ ಊಟದ್ದೊಂದು ರಗಳೆ. ಹನ್ನೆರಡು ಗಂಟೆಗೆ ಬೆಳಗಿನ ಹಾಲು ವಿತರಿಸಿ ಬಂದು ಜೀಪು ನಿಲ್ಲಿಸಿ ಮತ್ತೆ ಎರಡು ಗಂಟೆಗೆ ಹೊರಡಬೇಕಿತ್ತು. ಅಲ್ಲೇ ನಮಗೆ ಊಟದ ವ್ಯವಸ್ಥೆಯೂ ಇತ್ತು. ಆದರೆ ಮನೆಯ ಯಜಮಾನಿ ಬೇಕೆಂದೇ ತಡವಾಗಿ ಅನ್ನಕ್ಕಿಟ್ಟು ಊಟ ತಡವಾಗುವಂತೆ ಮಾಡುತ್ತಿದ್ದಳು. ಹಾಗೆಂದು ಊಟ ಮಾಡದೆ ಹೊರಟರೆ ಪಿರಿಪಿರಿ ಮಾಡುತ್ತಿದ್ದಳು. ಒಂಥರಾ ವಿಚಿತ್ರ ಹೆಂಗಸು. ಬೇರೆಲ್ಲಿಯಾದರೂ ಕೆಲಸ ಸಿಕ್ಕಿದರೆ ಇದನ್ನು ಬಿಟ್ಟು ಬಿಡಬೇಕೆಂದು ಯೋಚಿಸುತ್ತಿದ್ದೆ. ಅದೇ ಸಮಯದಲ್ಲಿ ಹರಿಕೃಷ್ಣ ಪುನರೂರಿಗೆ ದಾವಣಗೆರೆಗೆ ಹೋಗಿಬರಲು ಒಬ್ಬ ಡ್ರೈವರ್ ಬೇಕು ಎಂದಾಯಿತು. ನನ್ನನ್ನು ಅವರ ಪರಿಚಯದವರೊಬ್ಬರು ಕೇಳಿ, ಹೊಂದಿಸಿಕೊಂಡರು. ಧನಿಗಳು ಮೊದಲು ನನ್ನನ್ನು ಗಮನಿಸಲಿಲ್ಲ. ಕಾರಿನಲ್ಲಿ ನನ್ನನ್ನು ನೋಡಿ "ಓಹೋ, ನೀನೋ!" ಅಂದು ನಕ್ಕರು. ಧನಿಗಳ ಸ್ವಭಾವವೇ ಹಾಗೆ, ಒಮ್ಮೆ ಜೋರು ಸಿಟ್ಟು. ಅದು ಆಗಲೇ ಪ್ರದರ್ಶನವಾಗಿ, ಹಾರಿಹೋಗಬೇಕು. ಆಮೇಲೆ ಸಿಟ್ಟುಪಟ್ಟು ಏನೂ ಇಲ್ಲ. ಮಗುವಿನ ಹಾಗೆ.

ಇದಾದ ಸ್ವಲ್ಪ ಸಮಯದಲ್ಲಿ ಖಾಯಂ ಆಗಿ ಅವರ ಕಾರಿಗೆ ಚಾಲಕನಾಗುವಂತೆ ಆಹ್ವಾನ ಬಂತು. ಇದಕ್ಕೆ ಮೊದಲು ಉಪ್ಪಿನಂಗಡಿಯ ಒಬ್ಬನನ್ನು ಧನಿಗಳು ಡ್ರೈವರ್ ಆಗಿ ನೇಮಿಸಿದ್ದರಂತೆ. ಅವನು ನನ್ನನ್ನು ಮೊದಲೇ ಭೇಟಿಯಾಗಿ 'ಧನಿಗಳಿಗೆ ಸಿಟ್ಟು ಜಾಸ್ತಿ ಮಾರಾಯ. ಅಲ್ಲಿ ಕೆಲಸಕ್ಕೆ ಸೇರಿದರೆ ನಿನ್ನನ್ನು ಎಲ್ಲಿಯಾದರೂ ದಾರಿಯಲ್ಲಿ ಬಿಟ್ಟುಬಿಡುತ್ತಾರೆ' ಎಂದು ಹೆದರಿಸಿದ! ಅದರ ಕಾರಣವೂ ಆಮೇಲೆ ನನಗೆ ತಿಳಿಯಿತು. ಕಾರು ನಿಲ್ಲಿಸಿ ಅವರು ಅತ್ತ ಹೋದಾಗ, ಇವನು ಗುಟ್ಟಾಗಿ ಬೀಡಿ ಸೇದಿದ. ಅಂತಹ ಮುಚ್ಚುಮರೆಯೆಲ್ಲ ಧನಿಗಳಿಗೆ ಸೇರುವುದಿಲ್ಲ. ಅದಾಗಲೇ ಸಮಾರಂಭಕ್ಕೆ ಹೊತ್ತು ಮೀರುತ್ತಿದ್ದುದರಿಂದ ಸ್ವಲ್ಪ ವೇಗವಾಗಿ ಕಾರು ಚಲಾಯಿಸುವಂತೆ ಹೇಳಿದರು. ಅದಕ್ಕೆ ಅವನು 'ನನ್ನದು ಯಾವಾಗಲೂ ಇದೇ ಸ್ಪೀಡು' ಎಂದು ಉತ್ತರ ಕೊಟ್ಟ. ಆಗ ಧನಿಗಳು ಮಾತಾಡಲಿಲ್ಲ. ಹಿಂದಿರುಗುವಾಗ ಉಪ್ಪಿನಂಗಡಿಯ ಬಳಿ ಕಾರು ನಿಲ್ಲಿಸುವಂತೆ ಹೇಳಿ ಅವನನ್ನು ಇಳಿಸಿದರು. ಅವನಿಗೆ ಇಪ್ಪತ್ತು ರೂಪಾಯಿ ಕೊಟ್ಟು, ಇನ್ನು ಬರಬೇಕಾದಲ್ಲಿ ಒಂದೆರಡು ದಿನದಲ್ಲಿ ಹೇಳಿ ಕಳಿಸುತ್ತೇನೆ ಎಂದು ಅವನನ್ನು ಕಳಿಸಿಯೇಬಿಟ್ಟರು! ಈ ಸಂಗತಿಯನ್ನು ಅವನೇ ನನ್ನ ಬಳಿ ಹೇಳಿದ. ನಾನು ಹೇಳಿದೆ; 'ನನ್ನನ್ನು ಬೊಂಬಾಯಿಯಲ್ಲಿ ಬೇಕಾದರೆ ಬಿಟ್ಟು ಬರಲಿ. ಹಿಂದೆ ಬರುವುದು ಹೇಗೆ ಅಂತ ಗೊತ್ತುಂಟು.' ಹಾಗೆ ಕೆಲಸಕ್ಕೆ ಸೇರಿದವನು ಇಪ್ಪತ್ತೊಂದು ವರ್ಷಗಳಿಂದ ಧನಿಗಳ ಜೊತೆಗೆ ಇದ್ದೇನೆ. ಎರಡು ವರ್ಷದ ಹಿಂದೆ ಸಣ್ಣದೊಂದು ಕಾರಣಕ್ಕೆ ನನಗೆ ಸಿಟ್ಟು ಬಂದು ಒಮ್ಮೆ ಕೆಲಸ ಬಿಟ್ಟರೂ, ಎರಡು ತಿಂಗಳಾದ ಮೇಲೆ ಮತ್ತೆ ಬಂದು ಕೆಲಸಕ್ಕೆ ಸೇರಿಕೊಂಡೆ.

ಧನಿಗಳ ಒಂದು ಸ್ವಭಾವ ಅಂದರೆ, ದುಡ್ಡು ರಾಶಿಹಾಕಿ ಕೋಟ್ಯಧಿಪತಿ ಆಗಬೇಕು ಎನ್ನುವ ಅತಿಯಾಸೆ ಇಲ್ಲವೇ ಇಲ್ಲ. ಯಾರಿಗಾದರೂ ಸಹಾಯ ಮಾಡಿದರೆ, ಅದಕ್ಕೆ ಲೆಕ್ಕ ಇಟ್ಟುಕೊಳ್ಳುವವರೂ ಅಲ್ಲ. ಏನೋ

ದೇವರು ಕೊಟ್ಟಿದ್ದಾನೆ, ಅದನ್ನು ಹಂಚಿಕೊಳ್ಳುತ್ತೇನೆ ಎನ್ನುವ ಮನಸ್ಸು. ಅವರ ಕೆಳಗೆ ಕೆಲಸ ಮಾಡುವ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಉಪಕಾರ ಮಾಡಿದ್ದಾರೆ. ಕೆಲಸಬಿಟ್ಟು ಯಾರಾದರೂ ಹೋಗುವಾಗ ನಿನಗೆ ಒಳ್ಳೆಯದಾಗುವುದಿದ್ದರೆ ಖಂಡಿತ ಹೋಗು ಎಂದು ಅವನಿಗೆ ಒಂದಿಪ್ಪತ್ತೈದು ಸಾವಿರ ರೂಪಾಯಿಯಾದರೂ ಕೊಟ್ಟು ಕಳಿಸುವ ದೊಡ್ಡ ಗುಣ ಅವರದ್ದು. ಕಳೆದ ವರ್ಷ ನಮ್ಮ ಹೋಟೇಲಿನಲ್ಲಿ ಕೆಲಸ ಮಾಡಿದ ಇಬ್ಬರ ಹೆಣ್ಣು ಮಕ್ಕಳ ಮದುವೆಗೆ ದುಡ್ಡು ಕೊಟ್ಟದ್ದು ನನಗೆ ಗೊತ್ತುಂಟು. ಒಬ್ಬರ ಮಗಳಿಗೆ ವರದಕ್ಷಿಣೆ ಅಂತ ಐವತ್ತು ಸಾವಿರ ಕೇಳಿದ್ದನ್ನು ಇವರೇ ಕೊಟ್ಟರು. ಹೀಗೆ ಎಷ್ಟೋ ಮಂದಿಗೆ ಸಹಾಯ ಮಾಡಿದ್ದಾರೆ. ಧನಿಗಳ ಹಿರಿಮಗಳ ಮದುವೆಗೆ ಹೋಟೇಲಿನ ಎಲ್ಲ ಕೆಲಸದವರನ್ನು ಕುಲ್ಯಾಡಿಕಾರ್ಸ್ ಅಂಗಡಿಗೆ ಕಳಿಸಿ, ಅವರಿಗೆ ಇಷ್ಟವಾಗುವ ಪ್ಯಾಂಟು, ಶರ್ಟುಗಳನ್ನು ಆಯ್ಕೆಮಾಡಿಕೊಳ್ಳುವಂತೆ ಹೇಳಿದ್ದರು. ಯಾರು ಇಷ್ಟು ಉದಾರಿಯಾಗಿರುತ್ತಾರೆ?

ಧನಿಗಳು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಬೆಂಗಳೂರಿನಲ್ಲಿ ಕೆಲವರು ನನ್ನನ್ನು ಗುಟ್ಟಾಗಿ ಕೇಳಿದ್ದುಂಟು- ಇವರ ಮಕ್ಕಳು ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ ಕಲಿತದ್ದಾ ಅಂತ. ನಾನು ವಿಷಯವನ್ನು ವಿವರಿಸಿದ ಮೇಲೆ ಸುಮ್ಮನಾಗುತ್ತಿದ್ದರು.

ಧನಿಗಳದ್ದು ಒಂದು ವಿಶೇಷ ಅಂದರೆ, ಮೂರು ಸಲವೂ ಎರಡನೇ ಬಾರಿ ಚುನಾವಣೆಯಲ್ಲಿ ಜಯಗಳಿಸಿದ್ದು (ಲಯನ್ಸ್‌ಗವರ್ನರ್ ಹುದ್ದೆಗೆ, ಕರ್ನಾಟಕ ಬ್ಯಾಂಕ್ ಡೈರೆಕ್ಟರ್ ಹುದ್ದೆಗೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹುದ್ದೆಗೆ) ಅವರಿಗೆ ಒಂದು ಸರಳವಾದ ಪಂಚೆ ಮತ್ತು ಬಿಳಿ ಅಂಗಿಯೇ ಇಷ್ಟ. ಲಯನ್ಸ್ ಸಮಾರಂಭಗಳಿಗೆ ಹೋಗುವಾಗ ಪ್ಯಾಂಟು ಹಾಕಿಕೊಂಡು, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮೊದಲಿನ ಸರಳ ಉಡುಪಿಗೆ ಹಿಂತಿರುಗುತ್ತಾರೆ.

ಒಂದು ಕೆಲಸವನ್ನು ಹಿಡಿದರೆ, ಅದನ್ನು ಆಗಲೇ ಮಾಡಿಬಿಡಬೇಕು. ಕೊಡಚಾದ್ರಿ ಬೆಟ್ಟದ ಮೇಲೆ ಶಂಕರಾಚಾರ್ಯರ ಮೂರ್ತಿ ಸ್ಥಾಪಿಸಲಿಕ್ಕೆ ನಾನು ಕೂಡಾ ಹೋಗಿದ್ದೆ. ಇನ್ನು ಹಲವು ಮಂದಿ ಒಂದು ಜೀಪಿನಲ್ಲಿ ಹೊಯ್ಗೆ, ಸಿಮೆಂಟು ಎಲ್ಲ ಹಾಕಿಕೊಂಡು ಹೋಗಿದ್ದೆವು. ಆ ರಾತ್ರಿಯ ಕಷ್ಟವನ್ನು ಹೇಳತೀರದು. ಮರುದಿನ ಬೆಳಗ್ಗೆ ಪ್ರತಿಷ್ಠಾಪನೆ ಎಂದಿತ್ತು. ಆದರೆ ಅವರಿಗಾಗದ ಗುಂಪು ಇದಕ್ಕೆ ಸ್ಟೇ ತಂದಿದ್ದಾರೆ ಎಂದು ರಾತ್ರಿಯೇ ಗೊತ್ತಾಯಿತು. ಆ ರಾತ್ರಿ ಆ ಚಳಿಯಲ್ಲಿ ಮತ್ತು ಪಿರಿಪಿರಿ ಮಳೆಯಲ್ಲಿ ನಾವೆಲ್ಲ ಎಲ್ಲೆಲ್ಲೋ ಬಿದ್ದುಕೊಂಡೆವು. ಮರುದಿನ ಬೆಳಗಾಗುವ ಮೊದಲೇ, ಅಂದರೆ ಸ್ಟೇ ಆರ್ಡರು ಅಲ್ಲಿಗೆ ತಲುಪುವ ಮೊದಲೇ ಪ್ರತಿಷ್ಠಾಪನೆ ಆಗಬೇಕಿತ್ತು. ಅದಕ್ಕೆ ರಾತ್ರಿ ಮೂರು ಗಂಟೆಗೆ ಎದ್ದು ನಾವೆಲ್ಲ ಕೆಲಸ ಮಾಡಿದೆವು. ದೇವಸ್ಥಾನದ ಮಾಡು ಹತ್ತಿ ಮುಗುಳಿ(ಕಳಸ) ಇಡಬೇಕಿತ್ತು. ಭಯಂಕರ ಚಳಿ ಮತ್ತು ಜಾರುವುದು ಬೇರೆ. ಯಾರೂ ಕೂಡ ಮಾಡು ಹತ್ತಲು ಸಿದ್ಧರಾಗಲಿಲ್ಲ, ಆಗ ಧನಿಗಳೇ ಸೀದಾ ಮಾಡು ಹತ್ತಿದರು. ಮಾಡು ತುಂಬಾ ಜಾರುತ್ತಿದ್ದುದರಿಂದ ಅವರು ಕೆಳಗಿಳಿದಾಗ ನಾವೆಲ್ಲ ಒಬ್ಬರ ಮೇಲೊಬ್ಬರು ನಿಂತು ಸಹಾಯ ಮಾಡಿದೆವು. ಅಂತೂ ಬೆಳಗಾಗುವುದರೊಳಗೆ ಪ್ರತಿಷ್ಠಾಪನೆ ಪೂರ್ಣವಾಯಿತು. ಬೆಳಗ್ಗೆ ಸ್ಟೇ ಆರ್ಡರು ಹಿಡಿದುಕೊಂಡು ಪೋಲೀಸರು ಬಂದಾಗ ಮತ್ತೇನೂ ಮಾಡಲಾಗದೆ ಒಟ್ಟಿಗೆ ಫೋಟೋ ತೆಗೆಸಿಕೊಂಡು ಹಿಂದಿರುಗಿದರು. ಹೀಗೆ ಧನಿಗಳಿಗೆ ಆಗಬೇಕು ಅಂದರೆ ಆಗಲೇಬೇಕು!

ನನಗೂ ಸಂದರ್ಭ ಬಿದ್ದಾಗ ಧನಿಗಳು ತುಂಬ ಉಪಕಾರ ಮಾಡಿದ್ದಾರೆ. ನನಗೆ ಎಂದರೆ ನನಗಲ್ಲ, ನನ್ನ ಸಂಬಂಧಿಯೋರ್ವರಿಗೆ. ಅವರಿಗೆ ಮದುವೆಗೆ ಐದು ಸಾವಿರ ರೂಪಾಯಿ ಅರ್ಜೆಂಟಾಗಿ ಬೇಕಾಗಿತ್ತು. ಕಷ್ಟಪಟ್ಟು ಕೇಳಿದೆ. ಮಾತಾಡದೆ ದುಡ್ಡು ತೆಗೆದುಕೊಟ್ಟರು. ಒಮ್ಮೆ ಕೊಟ್ಟ ಮೇಲೆ ಅದರ ನೆನಪು ಧನಿಗಳಿಗೆ ಇರುವುದಿಲ್ಲ. ಹಿಂದೆ ಕೇಳುವ ಅಭ್ಯಾಸವೇ ಇಲ್ಲ.

ಅನೇಕರು ಧನಿಗಳಿಂದ ಏನಾದರೂ ಕೆಲಸವಾಗಬೇಕಿದ್ದರೆ ಮೆಲ್ಲನೆ ನನ್ನ ಹತ್ತಿರ ಹೇಳುವುದುಂಟು. 'ಸುಂದರಣ್ಣ, ನೀವು ಹೇಳಿದರೆ ಆಗ್ತದೆ' ಅಂತ. ಅದು ವಿಷಯ ಹಾಗಲ್ಲ. ಯಾವಾಗಲೂ ಧನಿಗಳು ಶಾಂತವಾಗಿದ್ದಾಗ ವಿಷಯ ಪ್ರಸ್ತಾಪವನ್ನು ಯಾರೇ ಮಾಡಿದರೂ ಒಪ್ತಾರೆ. ಅದು ಬಿಟ್ಟು, ಅವರು ತುಂಬಾ ಗಡಿಬಿಡಿಯಲ್ಲಿರುವಾಗ ಹೋಗಿ ಏನೇನೋ ತಡ ಬಡಾಯಿಸಿದರೆ ಅವರಿಗೆ ಸಿಟ್ಟು ಬರದೆ ಇರುತ್ತದಾ? ನಾನಾದರೆ ಅಂತಹ ಸಂದರ್ಭ ನೋಡಿಯೇ ಏನಾದರೂ ಮಾತು ಕಿವಿಗೆ ಹಾಕ್ತೇನೆ. ಅಲ್ಲದೆ ಅವರಿಗೆ ಸುತ್ತು ಬಳಸಿ ಹೇಳುವುದು ಇಷ್ಟವೇ ಅಲ್ಲ. 'ನಿಮ್ಮ ವಿಷಯ ಏನು ಅಂತ ಮೊದಲು ತಿಳಿಸಿ'- ಇದು ಅವರನ್ನು ಭೇಟಿಯಾಗಲು ಬರುವವರೊಂದಿಗೆ ಅವರು ಮಾತಾಡುವ ಬಗೆ.

ಧನಿಗಳದ್ದು ಇನ್ನೊಂದು ಗುಣವೆಂದರೆ, ಯಾರು ಸಮಾರಂಭಕ್ಕೆ ಕರೆದರೂ ದೊಡ್ಡಸ್ತಿಕೆ ತೋರಿಸುವುದಿಲ್ಲ. ಹೋಗುತ್ತಾರೆ. ಅನೇಕ ಸಲ ಏನನ್ನೂ ಹೊಟ್ಟೆಗೆ ತೆಗೆದುಕೊಳ್ಳಲಾಗದೆ ಮನೆಗೆ ಬಂದು ನೀರು ಕುಡಿದು ಮಲಗಿಬಿಡುತ್ತಾರೆ! ಆದರೂ ಅವರಿಗೆ ಈ ಬಗ್ಗೆಯೆಲ್ಲಾ ಬೇಸರವಿಲ್ಲ. ಯಾರಾದರೂ ಹಿಂದಿನಿಂದ ಆಟ ಆಡತೊಡಗಿದರೆ ಮಾತ್ರ ಭಯಂಕರ ಕೋಪ. ಎಷ್ಟು ಮಾತ್ರಕ್ಕೂ ಬಿಡುವವರೇ ಅಲ್ಲ;

ಹೀಗಿದ್ದಾರೆ, ನಮ್ಮ ಧನಿಗಳು!


(ನಿರೂಪಣೆ: ಬಿ. ಸೀತಾರಾಮ ಭಟ್)

□

ಭಾಗ: ಐದು
ಪುನರೂರು–ಸಮೀಪ ಚಿತ್ರ

ಪುನರೂರು ನೆನಪುಗಳು

☐ ಧರ್ಮದರ್ಶಿ ಹರಿಕೃಷ್ಣ ಪುನರೂರು



ನನ್ನ ವಿದ್ಯಾಭ್ಯಾಸ

ನನ್ನ ತಂದೆ 1950ರಲ್ಲಿ ವಿಷಹಾವಿನ ಕಡಿತದಿಂದ ಮರಣ ಹೊಂದಿದರು. ಆಗ ನಾನು ಶಿಮಂತೂರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಮುಂದೆ ಆರನೆಯ ತರಗತಿ ಓದಲು ಸೈಂಟ್ ಮೇರೀಸ್ ಹೈಯರ್ ಪ್ರೈಮರಿ ಸ್ಕೂಲಿಗೆ ಸೇರಿದೆ. ಆ ಸಮಯದಲ್ಲಿ ನಮ್ಮ ಮನೆಯವರಿಗೆಲ್ಲರಿಗೂ ಟೈಫಾಯ್ಡ್ ಜ್ವರ. ನಾನು ಸುಮಾರು ಆರು ತಿಂಗಳ ಕಾಲ ಟೈಫಾಯ್ಡ್ ಜ್ವರದಲ್ಲಿ ಮಲಗಿದೆ. ನಮ್ಮ ಅಣ್ಣ (ವೆಂಟಕಟೇಶರಾವ್) ಊರ ಪಟೇಲರಾದ್ದರಿಂದ ಶಾಲೆಯಲ್ಲಿ ರಿಯಾಯಿತಿ ತೋರಿ ನನ್ನನ್ನು ಆ ವರ್ಷ ಉತ್ತೀರ್ಣಗೊಳಿಸಿದರು. ಇದರಿಂದ ನನ್ನ ಇಂಗ್ಲಿಷ್ ಹಾಗೂ ಹಿಂದಿ ಕಲಿಕೆಗೆ ದೊಡ್ಡ ಕುತ್ತು ಒದಗಿತು. ಶಾಲೆಯಲ್ಲಿ ಯಾರೂ ನನಗೆ ಗದರಿಸಿ ವಿಶೇಷ ತರಬೇತಿ ನೀಡಲಿಲ್ಲ. ಇಂಗ್ಲಿಷ್, ಹಿಂದಿ ನನ್ನ ತಲೆಗೆ ಹತ್ತುತ್ತಲೇ ಇರಲಿಲ್ಲ. ಉಳಿದ ಎಲ್ಲ ವಿಷಯಗಳಲ್ಲೂ ಪಾಸು! ಹೀಗೆ ಹನ್ನೊಂದನೆಯ ತರಗತಿಯವರೆಗೆ ಮುಂದುವರಿದೆ. ಪಬ್ಲಿಕ್ ಪರೀಕ್ಷೆಯಲ್ಲಿ ನಪಾಸಾದೆ. ಅಲ್ಲಿಗೆ ನನ್ನ ವಿದ್ಯಾಭ್ಯಾಸ ನಿಂತಿತು.

ನನ್ನ 15ರ ಪ್ರಾಯದ ಹೊತ್ತಿಗೆ ನಾನೂ ನನ್ನ ಗೆಳೆಯರೂ ಸೇರಿ ಪುನರೂರಿನಲ್ಲಿ ಯುವಕ ಮಂಡಲವೊಂದನ್ನು ಕಟ್ಟಿದೆವು. ತೋಕೂರಿನ ಶರ್ಮಾ ಅವರು ಈ ಯುವಕ ಸಂಘದ ಅಧ್ಯಕ್ಷರಾಗಿ ನಮಗೆ ಮಾರ್ಗದರ್ಶನ ನೀಡುತ್ತಿದ್ದರು. ನಾವೇ ಒಂದು

ಯಕ್ಷಗಾನ ಸಂಘವನ್ನೂ ಕಟ್ಟಿಕೊಂಡಿದ್ದೆವು. ನಾನು ಕಂಸ, ದೇವೇಂದ್ರ ಮೊದಲಾದ ಪಾತ್ರಗಳನ್ನು ಮಾಡಿ ಕುಣಿಯುತ್ತಿದ್ದೆ. ಸ್ತ್ರೀ ಪಾತ್ರಗಳನ್ನೂ ಮಾಡಿದ್ದುಂಟು. ಕೆಲವು ನಾಟಕಗಳಲ್ಲೂ ಪಾತ್ರ ವಹಿಸಿದ್ದುಂಟು.

ಮೊದಲ ಅಂಚೆ ಕಛೇರಿ

1995ರ ಸಮಯ. ಪುನರೂರಿನಲ್ಲೊಂದು ಅಂಚೆ ಕಛೇರಿ ಸ್ಥಾಪಿಸಲು ಪ್ರಯತ್ನ ನಡೆಯುತ್ತಿತ್ತು. ಕಛೇರಿ ಪ್ರಾರಂಭಿಸಲು ಅನುಮತಿ ದೊರೆಯಿತು. ಆಗ ಪುನರೂರು ಸ್ವತಂತ್ರಗ್ರಾಮ. ಗೋಳಿಜೋರ, ಶೀನಪ್ಪಯ್ಯ ಕೋಡಿ ಇವೂ ಪುನರೂರಿನ ಪ್ರದೇಶಗಳೇ. (ಆಮೇಲೆ ಪುನರೂರು ತಾಳಿಪ್ಪಾಡಿ ಗ್ರಾಮದೊಂದಿಗೆ ವಿಲೀನಗೊಂಡಿತು). ಈ ಅಂಚೆ ಕಛೇರಿ ತಮ್ಮಲ್ಲೇ ಆಗಬೇಕೆಂದು ಈ ಪ್ರದೇಶಗಳ ಜನರು ಬಯಸಿದರು. ಪ್ರಯತ್ನಿಸಿದವರು ನಾವು; ಅನುಮತಿ ದೊರೆತೊಡನೆ ಅದು ತಮ್ಮಲ್ಲೇ ಇರಬೇಕೆಂದು ಉಳಿದವರು ಪ್ರಯತ್ನಿಸಿದ್ದು ನಮಗೆ ಸರಿ ಕಾಣಲಿಲ್ಲ.

ನನ್ನ ಅಳಿಯ, ಎಲ್ಲೂರು ನಾರಾಯಣ ಉಡುಪರು ಬೆಂಗಳೂರಿಗೆ ಹೋಗಿ ಆಗಿನ ಪೋಸ್ಟ್ ಮಾಸ್ಟರ್ ಜನರಲ್(ಪಿಎಂಜಿ)ರನ್ನು ಕಂಡರು; ಅವರಿಗೆ ಉಣ್ಣೆಯ ಪ್ಯಾಂಟು, ಕೋಟುಗಳನ್ನು ಉಡುಗೊರೆಯಾಗಿ ನೀಡಿದರು; ಕಛೇರಿ ವಿಷಯ ವಿವರಿಸಿ ಅರಿಕೆ ಮಾಡಿಕೊಂಡರು. ಅವರು ಕೂಡಲೇ ಪಡುಬಿದ್ರಿ (ಉಡುಪಿ ಬಳಿ) ಅಂಚೆ ನಿರೀಕ್ಷಕ(ಇನ್‌ಸ್ಪೆಕ್ಟರ್)ರಿಗೆ ಫೋನ್ ಮಾಡಿ 'ಇಂದೇ ಪುನರೂರು ದೇವಸ್ಥಾನದ ಹತ್ತಿರ ಅಂಚೆ ಕಛೇರಿ ತೆರೆದು ಕೂಡಲೇ ವರದಿ ಸಲ್ಲಿಸಬೇಕು' ಎಂದು ಆದೇಶ ಹೊರಡಿಸಿದರು. ಆ ದಿನ ಕಛೇರಿಯ ಪರಿಚಾರಕ (ಪಿಯೋನ್) ರಜಾ ಹಾಕಿದ್ದ; ಇನ್‌ಸ್ಪೆಕ್ಟರರೇ ಸೀಲು ಹಾಗೂ ಇನ್ನಿತರ ಪರಿಕರಗಳೊಂದಿಗೆ ಬಂದು ಪುನರೂರು ಅಂಚೆ ಕಛೇರಿಯನ್ನು ಉದ್ಘಾಟನೆ ಮಾಡಿದರು.

ನಮ್ಮ ಅಣ್ಣನೇ ಮೊದಲ ಅಂಚೆ ಪಾಲಕರು. ಆಮೇಲೆ ನಾನು ಆ ಕೆಲಸವನ್ನು ನಿರ್ವಹಿಸಿದೆ. ಆಗ ನನಗೆ 27 ರೂಪಾಯಿ ಸಂಬಳ. ಸ್ವಲ್ಪ ಸಮಯ ಆ ಕೆಲಸ ಮಾಡಿದೆ.

ಉದ್ಯೋಗಕ್ಕಾಗಿ ಚೆನ್ನೈಗೆ

ಕಲಿತ ವಿದ್ಯೆ ಸರಿಯಾದ ಉದ್ಯೋಗ ದೊರಕಿಸಲು ಸಾಲದಾಗಿತ್ತು. ಮುಂದೆ ಉಳಿದುದು ಒಂದೇ-ಬ್ರಾಹ್ಮಣರ ಪಾಲಿಗೆ ಬದುಕುವ ದಾರಿ ಎನಿಸಿರುವ ಹೋಟೆಲ್ ಉದ್ಯಮ. ಆಗ ಕುತ್ತೆತ್ತೂರು ಸೀತಾರಾಮ ಆಚಾರ್ಯರು ನಮ್ಮ ಸಮಾಜದ ಗಣ್ಯ ವ್ಯಕ್ತಿ. ಅವರ ತಂದೆ ಹಣದ ಮುಖ ನೋಡದ ಸಾತ್ತ್ವಿಕ ಮನುಷ್ಯ. ಕುತ್ತೆತ್ತೂರಿನಿಂದ ಪುನರೂರಿಗೆ, ತನ್ನ ತಾಯಿಯ ಮನೆಗೆ, ಎಂದರೆ ನನ್ನ ಭಾವ ವಾಸುದೇವರಾಯರ ಮನೆಗೆ ಬಂದು ಭಜನೆ ಮಾಡುತ್ತಿದ್ದವರು. ಉಡುಪಿಗೂ ಹೋಗಿ ಅಲ್ಲಿನ ಶ್ರೀಕೃಷ್ಣ ಮಠದಲ್ಲೂ ಭಜನೆಕಾರ್ಯ ನಡೆಸುತ್ತಿದ್ದರು. ಕೃಷ್ಣ ಅವರ ಭಕ್ತಿಗೆ ಒಲಿದ. ಅವರ ನಾಲ್ವರು ಮಕ್ಕಳೂ ಕೋಟಿಪತಿಗಳಾದರು. ಮೇಲೆ ಹೇಳಿದ ಸೀತಾರಾಮ ಆಚಾರ್ಯರು ಆ ನಾಲ್ಕೂ ಮಂದಿಯ ಪೈಕಿ ಭಾರೀ ಹಣವಂತ. ಮದ್ರಾಸ್ (ಚೆನ್ನೈ), ಮೈಸೂರುಗಳಲ್ಲಿ ದಾಸ್‌ಪ್ರಕಾಶ್ ಹೋಟೇಲನ್ನು ನಡೆಸುತ್ತಿದ್ದರು. ದೊಡ್ಡ ದೊಡ್ಡ ರೈಲ್ವೇ ಕ್ಯಾಂಟೀನುಗಳು ಅವರ ಕೈಯಲ್ಲಿದ್ದವು. ಆದರೆ ಅವರ ಒಂದು ಮರ್ಜಿ ಎಂದರೆ ಯಾರೇ ಆಗಲಿ ಅವರನ್ನು ಕಂಡರೆ, ರಸ್ತೆಯಲ್ಲಾದರೆ ರಸ್ತೆಯಲ್ಲಿ, ದೀರ್ಘದಂಡನಮಸ್ಕಾರ ಮಾಡಬೇಕಿತ್ತು. ಮೈಸೂರಿನ ಹೋಟೇಲಿಗೆ ಕೆಲಸಕ್ಕೆ ಬೇಕೆಂದು ನನ್ನನ್ನು ಕರೆಸಿಕೊಂಡರು. ನಾನು ಹೋಗಿ ಸೇರಿದೆ. ಒಮ್ಮೆ ಅವರು ರಸ್ತೆಯಲ್ಲಿ ಬರುತ್ತಿದ್ದುದನ್ನು ಕಂಡೆ, ಬಾಗಿ ನಮಸ್ಕರಿಸಿದೆ. ಅದು ಅವರಿಗೆ ತೃಪ್ತಿ ತರಲಿಲ್ಲ. ಹೋಟೆಲಿಗೆ ಹೋದವರೇ ಹೇಳಿ ಕಳುಹಿಸಿದರು, ಹೋದೆ. ಸಾಷ್ಟಾಂಗ ನಮಸ್ಕರಿಸಿದೆ. 'ನಿನಗೆ

ದೊಡ್ಡವರಿಗೆ ಗೌರವ ಕೊಡಲು ಗೊತ್ತಿಲ್ಲ ಅಲ್ವ?' ಎಂದವರೇ, 'ಇರಲಿ, ಮದ್ರಾಸ್ ಹೋಟೇಲಲ್ಲಿ (ಸರಿಯಾದ) ಜನ ಇಲ್ಲ, ಅಲ್ಲಿಗೆ ಬಾ!' ಎಂದರು. ಇದು ಸುಮಾರು 1962ರಲ್ಲಿ.

ಮದ್ರಾಸಿಗೆ ತೆರಳಿ ಅವರ ದಾಸ್‌ಪ್ರಕಾಶ್ ತಲುಪಿದಾಗ ಅವರು ಕಾರಿನ ಬಳಿ ಇದ್ದರು. ಬಾಗಿ ನಮಿಸಿದೆ. ಅವರಿಗೆ ಸಮಾಧಾನವಾಗಲಿಲ್ಲ. ಹತ್ತಿರದಲ್ಲೇ ಇದ್ದ ತನ್ನ ಮನೆಗೆ ಬರುವಂತೆ ತಿಳಿಸಿದರು. ನನ್ನೆದುರೇ ಹತ್ತಾರು ಮಂದಿ ಅವರಿಗೆ ರಸ್ತೆಯಲ್ಲೇ ದೀರ್ಘದಂಡ ನಮಸ್ಕಾರ ಮಾಡಿದರು. ನಾನು ಅವರ ಮನೆ ತಲುಪಿ ಗೇಟಿನ ಬಳಿ ನಿಂತೆ. ವಾಚ್‌ಮನ್‌ನಲ್ಲಿ 'ನಾನು ಬಂದಿದ್ದೇನೆ' ಎಂದು ತಿಳಿಸಲು ಕೇಳಿಕೊಂಡೆ. ಪೋರ್ಟಿಕೋದಲ್ಲಿ ಅವರ ವೃದ್ಧ ತಾಯಿ ಕುಳಿತಿದ್ದರು. ಬಂದವರು ಯಾರೆಂದು ವಿಚಾರಿಸಿ, ಪುನರೂರು ವಾಸುದೇವರಾಯರ ಮಗನೆಂದರಿತು, ಸಂತೋಷದಿಂದ ಒಳಬರಹೇಳಿದರು. ಅವರಿಗೆ ನಮಸ್ಕರಿಸಿ ಕೆಳಗೆ ಕುಳಿತುಕೊಂಡೆ. ನಮ್ಮ ಮನೆಯವರ ಬಗ್ಗೆ, ನನ್ನ ತಂಗಿಯ ಬಗ್ಗೆ ವಿಚಾರಿಸಿದರು.

ಆಗ ಆಚಾರ್ಯರು ಹೊರಬಂದರು. ನಾನು ಎದ್ದು ಸಾಷ್ಟಾಂಗ ನಮಸ್ಕಾರ ಮಾಡಿದೆ. ಕೋಪದಿಂದ "ನಿನಗೆ ಒಳಗೆ ಬರಲು ಯಾರು ಹೇಳಿದ್ದು? ನಿನಗೆ ದೊಡ್ಡವರಿಗೆ ಗೌರವ ಕೊಡಲು ಗೊತ್ತಿಲ್ಲ!' ಎಂದು ಗುಡುಗಿದರು. "ನಿಮ್ಮ ಅಮ್ಮನೇ ಬರಹೇಳಿದ್ದರಿಂದ ಒಳ ಬಂದೆ " ಎಂದೆ. "ವಾಚ್‌ಮ್ಯಾನ್! ಇವನ ಕುತ್ತಿಗೆ ಹಿಡಿದು ಹೊರದಬ್ಬು!" ಎಂದರು. ಆಗ ನನಗೂ ಕೋಪಬಂತು.

"ವಾಚ್‌ಮ್ಯಾನ್ ನನ್ನ ಮೈಮುಟ್ಟಿದರೆ ನಿಮಗೆ ಹೊಡೀತೇನೆ! ಆಮೇಲೆ ನೀವು ಏನು ಬೇಕಾದರೂ ಮಾಡಿ. ಪೊಲೀಸರು ನನ್ನನ್ನು ಏನು ಮಾಡಿದರೂ ನನಗೆ ಚಿಂತೆ ಇಲ್ಲ. ಆದರೆ ನಿಮ್ಮಂಥ ಒಬ್ಬ ಕೋಟ್ಯಧೀಶನಿಗೆ 'ಹೊಡೆದರಂತೆ' ಅಂತ ಪ್ರಚಾರವಾದರೆ ನಿಮ್ಮ ಗೌರವಕ್ಕೆ ಚ್ಯುತಿ!" ಎಂದೆ. ಆಗ ಅವರಿಗೆ ಕೊಂಚ ಜ್ಞಾನೋದಯವಾಯಿತು. "ಇನ್ನು ನಿಮ್ಮಲ್ಲಿ ಕೆಲಸ ಮಾಡುವುದಿಲ್ಲ! ತಾಯಿಯನ್ನು ದೇವರು ಅನ್ನುವವರು ತಾಯಿಯ ಮಾತಿಗೆ ಬೆಲೆ ನೀಡಲಿಲ್ಲ!" ಎಂದವನೇ ಗೇಟು ದಾಟಿ ಹೊರಬಿದ್ದೆ. ಅವರು ಪೆಚ್ಚು ಮುಖ ಮಾಡಿ ನನ್ನನ್ನೇ ನೋಡುತ್ತಿದ್ದರು.

ಗೂಡಂಗಡಿ ಕೆಲಸ

ನನ್ನ ಎಲ್ಲೂರು ಭಾವ ರಾಮಚಂದ್ರ ಉಡುಪರ ಮೊದಲ ಪತ್ನಿಯ ಮಗ ಸೀತಾರಾಮ ಉಡುಪರು ಮದ್ರಾಸಿನ ಮೌಂಟ್ ರೋಡಿನಲ್ಲಿದ್ದ ಹೋಟೆಲಿನಲ್ಲಿ ಒಬ್ಬ ಪಾಲುದಾರರು. ಅವರಲ್ಲಿಗೆ ಹೋದೆ. ಪಾಲುದಾರರಾದ ತಂದೆ-ಮಕ್ಕಳಲ್ಲಿ, ಅಣ್ಣ-ತಮ್ಮಂದಿರಲ್ಲಿ, ಅವರದೇ ಕಾರಣಗಳಿಗಾಗಿ ಜಗಳವಿತ್ತು. ನನ್ನ ಅಕ್ಕನ ಮಗ ನಾರಾಯಣ ಉಡುಪರು ಇತರ ಸೋದರರೊಂದಿಗೆ ಹೋಟೇಲಿನ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಅವರ ತಮ್ಮ ವೆಂಕಟರಮಣ ಉಡುಪ, ಆ ಕಟ್ಟಡದಡಿಯಲ್ಲೇ ಇದ್ದ ಒಂದು ಬೀಡ-ಬೀಡಿ ಅಂಗಡಿ ನೋಡಿಕೊಳ್ಳುತ್ತಿದ್ದರು. ನನ್ನನ್ನು ಆ ಅಂಗಡಿಯಲ್ಲಿ ನಿಲ್ಲಿಸಿದರು. ಅದರ ಉಸ್ತುವಾರಿಗಿದ್ದ ವೆಂಕಟರಮಣ ಉಡುಪ ಸಂಶಯ ಪಿಶಾಚಿ. 10X10 ಸುತ್ತಳತೆಯ ಚಿಕ್ಕ ಅಂಗಡಿ ಅದು. ಇದ್ದುದು ನಾವಿಬ್ಬರೇ. ಆದರೂ ಸಂಶಯ! ನನಗೆ ಸಹಿಸಲಾಗಲಿಲ್ಲ. "ಹಾಗೆಲ್ಲ ಸಂಶಯ ಪಡಬೇಡಿ. ಹಣ ಮಾಡುವುದಾದರೆ ಎಲ್ಲೂ ಮಾಡಬಹುದು, ಇಲ್ಲೂ ಮಾಡಬಹುದು!" ಎಂದೆ. ಅವರೂ ಸಂಶಯದಿಂದ ನೋಡುವುದನ್ನು ಬಿಡಲಿಲ್ಲ. ಹಲವು ತಿಂಗಳು ಉರುಳಿದ ಮೇಲೆ ಅವರ ಧೋರಣೆಗೆ ಪಾಠ ಕಲಿಸಬೇಕು ಎಂದುಕೊಂಡೆ. ಚಿಲ್ಲರೆಯನ್ನು ಬೆರಳ ಸಂದಿಯಲ್ಲಿರಿಸಿ ಬನಿಯನಿನ ಒಳಗೆ ಹಾಕುವುದು. ಹೀಗೆ ದಿನವೂ ಹತ್ತು ರೂಪಾಯಿ ತೆಗೆದಿರಿಸುತ್ತ ಬಂದೆ. ಒಂದು ವಾರದ ಅನಂತರ

''ನೋಡಿ!'' ಎಂದು ಅವರಿಗೆ ಒಟ್ಟಾಗಿಸಿದ್ದ ಹಣವನ್ನು ತೋರಿಸಿದೆ. ''ಹಣ ಮಾಡುವುದು ಹೀಗೆ!'' ಎಂದೆ. ಅವರು ಇಂಗು ತಿಂದ ಮಂಗನಂತಾಗಿದ್ದರು.

ಆದರೆ ನಾರಾಯಣ ಉಡುಪರು ಕೈಯಲ್ಲಿ ಹಣವಿದ್ದರೆ ಮಹಾರಾಜ! ತಾವೂ ತಿನ್ನಬೇಕು, ಇತರರಿಗೂ ತಿನ್ನಿಸಬೇಕು ಎಂಬ ದೊಡ್ಡ ಮನಸ್ಸು. ಅವರು ನಡೆಸುತ್ತಿದ್ದ ಹೋಟೇಲಿನಲ್ಲಿ ಊಟ ಇರಲಿಲ್ಲ. ಹೊರಗಡೆ ಹೋಗಿ ಊಟ ಮಾಡಿಕೊಂಡು ಬರಲು 10-15 ರೂಪಾಯಿ ಕೊಡುತ್ತಿದ್ದರು. ನಾನು ಅದನ್ನು ಖರ್ಚು ಮಾಡದೆ ಅಂಚೆ ಕಚೇರಿಯಲ್ಲಿ ಖಾತೆ ತೆರೆದು ಜಮಾ ಮಾಡುತ್ತ ಬಂದೆ. ಒಂದು ದಿನ ಆ ಪಾಸ್ ಪುಸ್ತಕ ವೆಂಕಟರಮಣ ಉಡುಪರ ಕೈಗೆ ಸಿಕ್ಕಿತು. ಸುಮಾರು 2,000 ರೂಪಾಯಿಗಳಷ್ಟು ಜಮಾ ಆಗಿತ್ತು. ''ಇದು ಇವನು ಅಂಗಡಿಯಿಂದ ಕದ್ದ ಹಣ'' ಎಂದು ವೆಂಕಟರಮಣ ಉಡುಪರು ತಂದೆ ಹಾಗೂ ಅಣ್ಣಂದಿರಲ್ಲಿ ತಿಳಿಸಿ ದೊಡ್ಡ ರಂಪ ಮಾಡಿದರು. ನಾನು ಸತ್ಯ ಸಂಗತಿ ವಿವರಿಸಿದರೂ ನಂಬಲಿಲ್ಲ. ಅಣ್ಣ ನಾರಾಯಣ ಉಡುಪರು ''ನಾನೇ ಕೊಟ್ಟ ಹಣ ಅದು'' ಎಂದರೂ ಉಳಿದವರು ನಂಬಲಿಲ್ಲ. ''ಹಣ ವಾಪಸ್ ಮಾಡು!'' ಎಂದು ಉಳಿದವರು ತಾಕೀತು ಮಾಡಿದರು. ನಾನು ನಿರಾಕರಿಸಿದೆ. ಇದೇ ಸಂದರ್ಭದಲ್ಲಿ ತಂದೆ -ಮಕ್ಕಳ ನಡುವೆ ಕಟ್ಟಡದ ಪಾಲುದಾರಿಕೆ ಕುರಿತಂತೆ ಎದ್ದಿದ್ದ ಜಗಳ ತಾರಕಕ್ಕೇರಿತು. ನರಸಿಂಹ ಉಡುಪ (ಭಾವನ ಮೊದಲ ಪತ್ನಿಯ ಮಗ) ತಂದೆ-ಮಕ್ಕಳು ಒಟ್ಟಿಗೆ ಇದ್ದಿದ್ದ ಒಂದು ಮಧ್ಯಾಹ್ನ, ''ನಮ್ಮ ಎಲ್ಲ ಜಗಳಗಳಿಗೂ ಈ ಹರಿಕೃಷ್ಣನೇ ಕಾರಣ'' ಎಂದು ಆಪಾದಿಸಿದ್ದಲ್ಲದೆ, ಅವಾಚ್ಯ ಶಬ್ದಗಳಿಂದ ನನ್ನನ್ನು ಬೇಕಾಬಿಟ್ಟಿ ಬೈದರು. ''ಇದರಲ್ಲಿ ಅವನ ಪಾತ್ರ ಇಲ್ಲ'' ಎಂದು ಭಾವನಾಗಲಿ, ಅವರ ಮಗ ಸೀತಾರಾಮ ಉಡುಪರಾಗಲಿ ಹೇಳದೇ ಹೋದರು. ಇದರಿಂದ ಕೋಪಗೊಂಡ ನಾನು ನೇರವಾಗಿ ಎದ್ದು ನರಸಿಂಹ ಉಡುಪರಿಗೆ ಹೊಡೆಯಲು ಹೋದೆ. ಅವರು ಹೆದರಿ ರಸ್ತೆಗೆ ಓಡಿ ತಪ್ಪಿಸಿಕೊಂಡರು. ನನಗೆ ರೋಸಿಹೋಯಿತು. ಇಂಥ ಜನರೊಡನೆ ಕೆಲಸ ಮಾಡಲೇಬಾರದು ಎನ್ನಿಸಿತು. ಇದು 1962ರಲ್ಲಿ.

ಭಾವನ ಹೋಟೇಲಿನಲ್ಲಿ

ಇದೇ ಸಮಯದಲ್ಲಿ ನನ್ನ ಇನ್ನೊಬ್ಬ ಭಾವ ಶ್ರೀನಿವಾಸರಾಯರು ಐಸ್‌ಹೌಸ್‌ನಲ್ಲಿ 'ಪೂರ್ಣಿಮಾ ಲಂಚ್ ಹೋಂ' ಎಂಬ ಹೊಟೇಲನ್ನು ಪ್ರಾರಂಭಿಸಿದರು. 'ಬರುತ್ತೀಯಾ?' ಎಂದು ಕೇಳಿದರು. ಹೊಟೇಲು ಅಲ್ಲೇ ಹತ್ತಿರದಲ್ಲಿತ್ತು. ವ್ಯಾಪಾರವೂ ಚೆನ್ನಾಗಿತ್ತು.

ಕಾಫಿ ಗಲಾಟೆ

ಅದು ಸ್ವಲ್ಪ ಮಟ್ಟಿಗೆ ರೌಡಿಗಳ ಪ್ರದೇಶ. ಒಂದು ದಿನ ಒಬ್ಬ ಟ್ಯಾಕ್ಸಿ ಡ್ರೈವರ್ ಕಾಫಿ ಕುಡಿಯಲು ಬಂದವನು, ಅರ್ಧ ಕುಡಿದು ಗ್ಲಾಸನ್ನು ಬಿಸುಟು 'ಕಾಫಿ ಬಿಸಿ ಇಲ್ಲ' ಎಂದು ಕೂಗಾಡಿ ಹೊರನಡೆದ. ನಾನು ಅವನನ್ನು ಹಿಂಬಾಲಿಸಿ, ಅವನ ಕಾಲರ್ ಹಿಡಿದು ಹಿಂದಕ್ಕೆ ಎಳೆದುಕೊಂಡು ಬಂದೆ. ''ಕಾಫಿ ಬಿಸಿ ಬೇಕಾದರೆ ಹಾಗೆ ಹೇಳು, ಹಣ ಕೊಡದೇ ಎದ್ದು ಹೋಗು. ಗ್ಲಾಸನ್ನು ಎಸೆಯುವ ಹಕ್ಕು ನಿನಗೆ ಯಾರು ಕೊಟ್ಟರು?'' ಎಂದು ಗದರಿದೆ. ಕೆಳಗೆ ಕಾಫಿ ಚೆಲ್ಲಿತ್ತು. ಅದನ್ನು ಅವನೇ ಒರೆಸುವ ಹಾಗೆ ಮಾಡಿದೆ. ಅವನ ಕೈಯಲ್ಲೇ ಗ್ಲಾಸನ್ನು ಬಿದ್ದಲ್ಲಿಂದ ಎತ್ತಿಸಿ ಮೇಜಿನ ಮೇಲೆ ಇಡಿಸಿದೆ.

ಟ್ಯಾಕ್ಸಿ ಡ್ರೈವರ್ ಎಂದ ಮೇಲೆ ಕೇಳಬೇಕೆ? ''ಇನ್ನರ್ಧ ಘಂಟೆಯೊಳಗೆ ನಿನ್ನ ಹೋಟೇಲನ್ನು ಹುಡಿ ಮಾಡಿಸುತ್ತೇನೆ'' ಎಂದು ಅಬ್ಬರಿಸಿ ಕಾಲ್ತೆಗೆದ. ಪ್ರಕರಣ ದೊಡ್ಡದಾದೀತು ಎನ್ನಿಸಿ, ಹತ್ತಿರದ ಪೊಲೀಸ್ ಸ್ಟೇಶನಿಗೆ ಹೋಗಿ ನನ್ನ ಪರಿಚಯದ ಪೋಲೀಸ್ ಇನ್‌ಸ್ಪೆಕ್ಟರರಿಗೆ ವಿಷಯ ತಿಳಿಸಿದೆ. ಸಹಾಯ ಮಾಡುವಂತೆ

ಕೇಳಿಕೊಂಡೆ. ಅವರು ನಾಲ್ವರು ಪೇದೆಗಳೊಂದಿಗೆ ತಾವೇ ಬಂದು ಹೋಟೇಲಿನ ಬದಿಯಲ್ಲಿ ಕಾವಲು ನಿಂತರು.

ಅರ್ಧ ಗಂಟೆ ಸರಿದಿರಬಹುದು. ಸುಮಾರು 30 ಟ್ಯಾಕ್ಸಿ ಡ್ರೈವರ್‌ಗಳು ಹಾಗೂ ರೌಡಿಗಳು ಹೋಟೇಲಿಗೆ ಬಂದು ಗಲಾಟೆ ಎಬ್ಬಿಸಿದರು. ಅಷ್ಟರಲ್ಲಿ ಪೊಲೀಸರು ಬಂದು ಅವರನ್ನು ತಡೆದರು. "ನಿಮ್ಮ ಡ್ರೈವರ್ ಮಿತ್ರ ಮಾಡಿದ್ದು ಸರಿಯಲ್ಲ. ಕಾಫಿ ಚೆನ್ನಾಗಿಲ್ಲ ಎಂದಾದರೆ ಅಲ್ಲೇ ಬಿಟ್ಟು ಹೊರಡಬೇಕಿತ್ತು. ಗ್ಲಾಸನ್ನು ಎಸೆಯುವುದಲ್ಲ. ಗಲಾಟೆ ಮಾಡಿದರೆ ನಿಮ್ಮನ್ನೆಲ್ಲ ಒಳಗೆ ಹಾಕಬೇಕಾಗುತ್ತದೆ!" ಎಂದು ಎಚ್ಚರಿಸಿದರು. ಬಂದವರು ಭಯಗೊಂಡು ಹಿಂದಿರುಗಿದರು.

ಸೈಕಲ್ ಪ್ರಸಂಗ

ಆ ಸಮಯದಲ್ಲಿ ನಾನು ಸೈಕಲಿನಲ್ಲಿ ಓಡಾಡುತ್ತಿದ್ದೆ. ಒಂದು ರಾತ್ರಿ ಡೈನಮೋ ಹಾಕಿಕೊಂಡು ಹೋಗುತ್ತಿದ್ದೆ. ಸೈಕಲಿನಲ್ಲಿ ಬೆಳಕು ಇರಲಿಲ್ಲವೆಂದು ಗೊತ್ತಾಗಲಿಲ್ಲ. ಒಬ್ಬ ಟ್ರಾಫಿಕ್ ಪೊಲೀಸ್ ಅದೇ ದಾರಿಯಲ್ಲಿ ಬರುತ್ತಿದ್ದವನು ನನ್ನನ್ನು ಹಿಡಿದುಕೊಂಡ. "ಡೈನಮೋ ಹಾಕಿಯೇ ಸವಾರಿ ಮಾಡುತ್ತಿದ್ದೆ, ಅದು ಬೆಳಗದೇ ಇದ್ದುದು ಗೊತ್ತಾಗಲಿಲ್ಲ. ದಯಮಾಡಿ ಕ್ಷಮಿಸಬೇಕು" ಎಂದೆ. ಆದರೆ ಅವನಿಗೆ ಹಣ ಬೇಕಿತ್ತು. ಕೊಡುವುದಕ್ಕೆ ನನಗೆ ಇಷ್ಟವಿರಲಿಲ್ಲ. ಅವನ ಜೊತೆಗೇ ಸುಮಾರು ಒಂದು ಕಿಲೋಮೀಟರ್‌ವರೆಗೆ ಸೈಕಲ್ ದೂಡುತ್ತಾ ಹೋದೆ. 'ಹಣ ಕೊಡು' ಎಂದು ಪೀಡಿಸುತ್ತಲೇ ಇದ್ದ. ಸ್ಟೇಶನ್ ಹತ್ತಿರ ಬಂದಾಗ ಹೇಳಿದೆ : "ನೋಡಿ, ಇದು ನನಗೆ ತಿಳಿಯದೇ ಆದ ತಪ್ಪು.ನೀವು ನನ್ನನ್ನು ತಿಳಿದುಕೊಳ್ಳದೆ ಹೋದಿರಿ. ನಾಳೆ ನಿಮ್ಮ ಕೈಯಿಂದಲೇ ಸೈಕಲನ್ನು ನನ್ನ ಹೋಟೆಲಿಗೆ ತರಿಸಿಕೊಳ್ತೇನೆ, ನೋಡುತ್ತಿರಿ!" ಸೈಕಲನ್ನು ಸ್ಟೇಶನ್‌ನಲ್ಲಿ ಇಟ್ಟು ಹಿಂದಿರುಗಿದೆ.

ಐಸ್‌ಹೌಸ್‌ನ ಸರ್ಕಲ್ ಇನ್ಸ್‌ಪೆಕ್ಟರ್ ನನ್ನ ಆತ್ಮೀಯರು. ನಡೆದ ವಿಚಾರವನ್ನು ಅವರಲ್ಲಿ ತಿಳಿಸಿದೆ. ಅವರು ಕೂಡಲೇ ಸ್ಟೇಶನಿಗೆ ಫೋನ್ ಮಾಡಿ ಪೊಲೀಸ್ ಪೇದೆಯನ್ನು ಸಂಪರ್ಕಿಸಿದರು. ಅವನು ಸೈಕಲನ್ನು ತಂದು ನನಗೆ ಒಪ್ಪಿಸಿದ. ನಾನು ಅವನನ್ನು ಒಳಕ್ಕೆ ಕರೆದು ಕೂರಿಸಿ ಚಹಾ ತಿಂಡಿ ನೀಡಿ 10 ರೂ. ನೀಡಿ ಕಳುಹಿಸಿಕೊಟ್ಟೆ.

ಈ ಸಮಯದಲ್ಲಿ ನನ್ನ ಭಾವ ಶ್ರೀನಿವಾಸರಾಯರು ಊರಿಗೆ (ಹೆಜಮಾಡಿಯ ತನ್ನ ಮನೆಗೆ) ಹೋಗಿದ್ದರು. ನನ್ನ ಅಳಿಯ ವೆಂಕಟರಮಣ ಉಡುಪ(ಗೂಡಂಗಡಿ ಪ್ರಕರಣದವರು) ನನ್ನನ್ನು ಹುಡುಕಿಕೊಂಡು ಬಂದರು. "ಹೋಟೇಲು ಮಾಡಬೇಕೆಂದಿದ್ದೇನೆ. ನಿನ್ನ ಸಹಾಯ ಬೇಕು" ಎಂದರು. ಕೂಡಲೇ ಐದು ಸಾವಿರ ರೂಪಾಯಿ ತೆಗೆದುಕೊಟ್ಟೆ. ಶ್ರೀನಿವಾಸರಾಯರು ಊರಿಂದ ಮರಳಿದಾಗ ಈ ವಿಷಯ ತಿಳಿದು "ನಾನಿಲ್ಲದಾಗ ಹಣ ಕೊಟ್ಟೆಯಲ್ಲ" ಎಂದು ಆಕ್ಷೇಪ ತೆಗೆದರು. "ಕೂಡಲೇ ರೂಪಾಯಿ ವಾಪಸ್ ತೆಗೆದುಕೊಂಡು ಬಾ" ಎಂದರು. "ನೋಡಿ ಭಾವ, ನಾನು ಎರಡು ವರ್ಷಗಳಿಂದ ದುಡಿಯುತ್ತ ನಿಮಗೆ ಹಣ ಸಂಪಾದಿಸಿ ಕೊಟ್ಟಿದ್ದೇನೆ. ಚಿಕ್ಕಾಸು ಸಂಭಾವನೆ ಪಡೆಯಲಿಲ್ಲ. ನನಗೆ ಅವಮರ್ಯಾದೆ ಮಾಡಿದಿರಿ. ಇನ್ನು ಇಲ್ಲಿ ಕೆಲಸ ಮಾಡುವುದಿಲ್ಲ" ಎಂದೆ.

ಕೇರಳಕ್ಕೆ ಹೋದೆ

ಕೇರಳದಲ್ಲಿ ನನ್ನ ಭಾವ ವಾಸುದೇವರಾಯರು ಚೋಟಾನಿಕ್ಕರದಲ್ಲಿ ನನಗೊಂದು ಹೋಟೇಲು ಮಾಡಿಕೊಟ್ಟರು. ಐಸ್‌ಹೌಸಿನ ಹೋಟೇಲನ್ನು ಆಮೇಲೆ ಮುಚ್ಚಿದರು. ಹೆಜಮಾಡಿ

ಭಾವ(ಶ್ರೀನಿವಾಸರಾಯರು) ಅತಂತ್ರರಾದರು. ಅವರಿಗೊಂದು ಹೊಟೇಲು ಬೇಕಾಗಿತ್ತು. ನಾವು ನಡೆಸುತ್ತಿದ್ದ ಹೊಟೇಲನ್ನು ಅವರಿಗೆ ನಡೆಸಲು ಕೊಟ್ಟೆ.

1964ರಲ್ಲಿ ಕೇರಳದ ಎರ್ನಾಕುಳಂ ಜಿಲ್ಲೆಯ ಪುರಾಣ ಪ್ರಸಿದ್ಧ ತಿರುಪುಣಾತ್ತೆಯಲ್ಲಿ ನಾನು ಹಾಗೂ ನನ್ನ ಇನ್ನೊಬ್ಬ ಅಣ್ಣ ರಾಮಮೂರ್ತಿರಾವ್ ಹೋಟೇಲ್ ಉದ್ಯಮದಲ್ಲಿ ತೊಡಗಿದೆವು. ನನ್ನ ಸ್ವಂತ ಭಾವ ವಾಸುದೇವರಾಯರು ಈ ಹೊಟೇಲನ್ನು ತಾವೇ ಹಣ ಹಾಕಿ ನಮಗೆ ಬಾಡಿಗೆ ಮಾಡಿಕೊಟ್ಟದ್ದು. ಅವರು ಸುಮಾರು 50 ಸಾವಿರ ರೂಪಾಯಿ ಹಣ ಹಾಕಿದ್ದರೂ ಯಾವುದೇ ದಾಖಲೆಗಳಿಗೆ ನಮ್ಮಿಂದ ಸಹಿ ಪಡೆದುಕೊಂಡಿರಲಿಲ್ಲ. ಆದರೆ ಆ ಕಾಲದಲ್ಲಿ ತಮ್ಮ ಹಣಕ್ಕೆ ಶೇ. 24ರಂತೆ ಬಡ್ಡಿ ಪಡೆದುಕೊಳ್ಳುತ್ತಿದ್ದರು. ಬಡ್ಡಿಯನ್ನು ನೀಡಿಯೂ ನಾವೂ ಹಣ ಸಂಪಾದಿಸಿದೆವು. ಎರಡು ವರ್ಷ ಚೆನ್ನಾಗಿ ವ್ಯಾಪಾರ ಮಾಡಿದೆವು.

ಸೂರಿಸ್ವಾಮಿ ಎಂಬ ರೌಡಿ

ಹೊಟೇಲಿನ ಕಟ್ಟಡದ ಒಡೆಯ ಸೂರಿಸ್ವಾಮಿ (ಸೂರ್ಯ ನಾರಾಯಣ ಅಯ್ಯರ್). ಹೊಟೇಲಿನ ಅವಶ್ಯಕತೆಗಾಗಿ ನಾವೇ ಬಾವಿ ತೋಡಿಸಿ ನೀರನ್ನು ಉಪಯೋಗಿಸುತ್ತಿದ್ದೆವು. ಬಟ್ಟೆ ಪಾತ್ರೆಗಳನ್ನು ತೊಳೆದ ನೀರು ಹತ್ತಿರದ ಪಿಡಬ್ಲ್ಯೂಡಿ ಕಛೇರಿ ಬದಿಯಿಂದಾಗಿ ರಸ್ತೆಯ ತೋಡಿಗೆ ಹೋಗುತ್ತಿತ್ತು. ಪಿಡಬ್ಲ್ಯೂಡಿ ಕಛೇರಿ ಇದ್ದ ಕಟ್ಟಡವೂ ಸೂರಿಸ್ವಾಮಿಗೆ ಸೇರಿದ್ದೇ. ಅಲ್ಲಿಯ ನೌಕರರು ''ಕೊಳಚೆ ನೀರಿನ ವಾಸನೆ ಬರುತ್ತದೆ'' ಎಂದು ಅವರಲ್ಲಿ ದೂರಿಕೊಂಡರು. ನಮ್ಮೊಡನೆ ಹೇಳದೆಯೇ ನೀರು ಹೋಗುವ ದ್ವಾರವನ್ನು ಮುಚ್ಚಿದರು. ನೀರು ಹೋಟೇಲಿನ ಒಳಗಡೆ ನಿಲ್ಲತೊಡಗಿತು. ನಾನಿಲ್ಲದ ಸಮಯದಲ್ಲಿ ಅಣ್ಣ ನೀರಿನ ದ್ವಾರವನ್ನು ತೆರವುಗೊಳಿಸಿದರು. ಸೂರಿಸ್ವಾಮಿಗೆ ಇದು ತಿಳಿದೊಡನೆ ಅಣ್ಣನಿಗೆ ಕರೆ ಕಳುಹಿಸಿದರು. ಅವರನ್ನು ತರಾಟೆಗೆ ತೆಗೆದುಕೊಂಡು ಅಂಗಿ ಹಿಡಿದು ಜಗ್ಗಿ ಹಿಂಸಿಸಿದರು. ಆ ಹೊತ್ತಿಗೆ ಹೊರಗಡೆ ಹೋಗಿದ್ದ ನಾನು ಹೊಟೇಲಿಗೆ ಬಂದಾಗ ನಮ್ಮ ಹೊಟೇಲಿನ ನೌಕರರು ಗಲಾಟೆ ಆಗಿರುವ ವಿಷಯ ತಿಳಿಸಿದರು. ಒಡನೆಯೇ ಆ ಜಾಗಕ್ಕೆ ಹೋದೆ. ''ನೀವು ಹೊಟೇಲನ್ನು ಬಾಡಿಗೆಗೆ ಕೊಟ್ಟ ಮೇಲೆ ನೀರು ಹೋಗುವ ವ್ಯವಸ್ಥೆ ಮಾಡಿಕೊಡುವ ಕರ್ತವ್ಯ ನಿಮ್ಮದು. ಈ ನೀರನ್ನು ಎಲ್ಲಿಗೆ ಬಿಡಲಿ?'' ಎಂದು ಕೇಳಿದೆ. ಸೂರಿಸ್ವಾಮಿ ಒರಟಾಗಿ ಉತ್ತರಿಸಿದರು. ನನ್ನ ತಾಯಿಯ ಬಗ್ಗೆ ದುಶ್ಶಬ್ದ ಬಳಸಿ ಮಾತಾಡಿದರು. ಅವರು ಮಾತು ಮುಗಿಸುವ ಮೊದಲೇ ಅವರ ಮುಖಕ್ಕೆ ಹೊಡೆದೆ. ಅವರ ಮಗ ಮುಂದೆ ಬಂದ. ನನ್ನನ್ನು ಹಿಡಿದುಕೊಂಡ. ಅವನನ್ನೆತ್ತಿ ಕೊಳಕು ನೀರಿನ ಟಾಂಕಿಗೆ ಎಸೆದೆ.

ಸೂರಿಸ್ವಾಮಿ ಆ ಊರಿನ ದೊಡ್ಡ ರೌಡಿ. ಅವರ ಹೆಸರು ಕೇಳಿದರೆ ಸಾಕು, ಊರೆಲ್ಲ ನಡುಗುತ್ತಿತ್ತು. ಕೋಟ್ಯಧೀಶ್ವರ. ಎರಡು ಸಿನಿಮಾ ಥಿಯೇಟರ್, ಸಾಕಷ್ಟು ಬಾಡಿಗೆ ಬರುವ ಜಾಗ ಇತ್ತು. ಹಾಗಾಗಿ ಅವರು ಹೇಳಿದ್ದೇ ವೇದವಾಕ್ಯ. ಹೊಟೇಲಿನ ಪಕ್ಕದಲ್ಲೆ ವಿದ್ಯುತ್ ಸಾಮಗ್ರಿಗಳನ್ನು ಜೋಡಿಸುವ ವರ್ಕ್‌ಶಾಪ್. ಅದರಲ್ಲಿ 30ಕ್ಕಿಂತಲೂ ಹೆಚ್ಚಿನ ಯುವಕರು ದುಡಿಯುತ್ತಿದ್ದರು. 'ನಮ್ಮ ಧನಿಗಳ ಮೇಲೆ ಇಷ್ಟರವರೆಗೆ ಯಾರೂ ಕೈ ಮಾಡಲಿಲ್ಲ, ಯಾವುದೋ ಊರಿನಿಂದ ಬಂದ ಮಾಣಿ ನಮ್ಮ ಧನಿಗಳ ಮತ್ತು ಸಣ್ಣ ಧನಿಗಳ ಮೇಲೆ ಕೈ ಮಾಡುವುದೇ? ಇವನನ್ನು ಈಗಲೇ ಮುಗಿಸಬೇಕು' ಎಂದು ಸುತ್ತಿಗೆ, ಕಬ್ಬಿಣದ ಸರಳು ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಧಾವಿಸಿ ಬಂದರು. 'ಬನ್ನಿ! ಎಲ್ಲರನ್ನೂ ಮುಗಿಸುತ್ತೇನೆ' ಎಂದು ಗರ್ಜಿಸಿದೆ. ನನ್ನ ರೋಷವನ್ನು ಕಂಡು ಎಲ್ಲರೂ ಹೆದರಿದರು. ಯಾರೂ ಹತ್ತಿರ ಬರಲಿಲ್ಲ. ನಾನು ನೇರವಾಗಿ ಹೊಟೇಲಿಗೆ ಹೋದೆ. ಅನಂತರ ಊರವರು ನನ್ನ ಬಳಿ ಬಂದು, ಇಂದೇ

ರಾತ್ರಿ ನಿಮ್ಮ ಕೊಲೆಯಾದೀತು; ಅವನಿಗೆ ಜನಬಲ, ಧನಬಲ, ಪೊಲೀಸ್ ಬಲ ಇದೆ; ನಿಮ್ಮ ಅಣ್ಣ-ತಮ್ಮಂದಿರಿಬ್ಬರ ಮೇಲೆ ಈಗಾಗಲೇ ಕೇಸು ದಾಖಲಾಗಿದೆ" ಎಂದು ಎಚ್ಚರಿಸಿದರು. ನನಗಂತೂ ಮದುವೆ ಆಗಿರಲಿಲ್ಲ; ಬಿಸಿರಕ್ತ. ರಾತ್ರಿಯೇ ನನ್ನನ್ನು ಎಳೆದುಕೊಂಡು ಹೋಗುವುದು ಬೇಕಾಗಿಲ್ಲ ಎಂದು ಯೋಚಿಸಿ ಹೋಟೇಲಿನ ಹತ್ತಿರದಲ್ಲೇ ಇದ್ದ ಸೂರಿಸ್ವಾಮಿಯದೇ ಸಿನೆಮಾ ಟಾಕೀಸಿಗೆ ಒಬ್ಬನೇ ಹೋದೆ. ಜನ ವಿರಳವಾಗಿದ್ದ ಸ್ಥಳದಲ್ಲಿ ಕುಳಿತು ಸಿನಿಮಾ ನೋಡಲಾರಂಭಿಸಿದೆ. ಆದರೆ ದೈವಬಲವಿದ್ದರೆ ಯಾರೂ ಏನೂ ಮಾಡುವಂತಿಲ್ಲ! 'ಇವನು ಒಬ್ಬನೇ ಇರಬೇಕಾದರೆ ಇವನಲ್ಲೂ ರೌಡಿ ತಂಡ ಇರಬಹುದು. ಇವನನ್ನು ಆಮೇಲೆ ನೋಡಿಕೊಳ್ಳೋಣ, ಈ ದಿನ ಬೇಡ' ಎಂದು ತನ್ನ ಕಾರ್ಯಾಚರಣೆಯನ್ನು ಕೈಬಿಟ್ಟರು ಸೂರಿಸ್ವಾಮಿ.

ಆಮೇಲೆ ಸೂರಿಸ್ವಾಮಿ ಯೋಚನೆಯಲ್ಲಿ ಬಿದ್ದರು. 'ನನ್ನ ಹೆಸರು ಕೇಳಿದರೆ ಜನ ಗಡಗಡ ನಡುಗುತ್ತಿದ್ದಾರೆ. ನನಗೆ ಹೀಗೇಕಾಯಿತು? ಬಹುಶಃ ನನ್ನ ಗ್ರಹಗತಿ ಚೆನ್ನಾಗಿಲ್ಲ' ಎಂದು ಚಿಂತಿತರಾದರು. ಗ್ರಹಚಾರ ಶಮನಕ್ಕಾಗಿ ಹೋಮ-ಹವನ ಮಾಡಿಸಲು ಹೊರಟರು. ಚಂಡಿಯಾಗ, ರುದ್ರಯಾಗ ಮಾಡಿಸಿ ನನ್ನನ್ನೂ ಅಣ್ಣನನ್ನೂ ಆಹ್ವಾನಿಸಿದರು. ಹಿತೈಷಿಗಳು 'ಹೋಗಬೇಡಿ' ಎಂದು ದುಂಬಾಲು ಬಿದ್ದರು. 'ಆತ ವಿಷ ಹಾಕಲೂ ಹೇಸದವನು. ನಿಮ್ಮನ್ನು ಮುಗಿಸುತ್ತಾನೆ' ಎಂದು ತಿಳಿಹೇಳಿದರು. ಆದರೆ ಬಿಸಿರಕ್ತದ ನನಗೆ 'ಹೋಗಿಯೇ ಬಿಡುವಾ' ಎಂಬ ಉತ್ಸಾಹ. ಇಬ್ಬರೂ ಹೋಗಿ ಅವರ ಮನೆಯಲ್ಲಿ ಒಟ್ಟಿಗೆ ಕುಳಿತು ಊಟ ಮಾಡಿ ಹಿಂದಿರುಗಿದೆವು.

ಎರ್ನಾಕುಲಂ ಕೋರ್ಟಿನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಕೇಸು ನಡೆಯುತ್ತಿತ್ತು. ವಿಚಾರಣೆಗಾಗಿ ನಿಗದಿತ ವಾಯಿದೆಗೆ ಅವರು ಬರಬೇಕಿತ್ತು. ಆದರೆ ಹೇಗೆ ಬಂದಾರು? ಅವರಿಗೆ ಎಲ್ಲರ ಪರಿಚಯ. 'ಸ್ವಾಮಿ, ನೀವು ಇಲ್ಲಿಗೇಕೆ ಬಂದಿರಿ?' ಎಂದು ಯಾರಾದರೂ ಕೇಳಿದರೆ 'ನಮ್ಮ ಬಾಡಿಗೆದಾರ ಹೊಡೆದ' ಎನ್ನಲು ಸಾಧ್ಯವೆ? ನಾಲ್ಕು ವಾಯಿದೆಗಳಾದಾಗ ಸೂರಿಸ್ವಾಮಿ ನನ್ನನ್ನು ಕರೆದು ಕೇಸನ್ನು ಕೈಬಿಡೋಣ ಎಂದರು. ರಾಜಿ ಅರ್ಜಿ ಸಲ್ಲಿಸಿ ಹೊರಬಂದೆವು. ಈ ಒಂದೇ ಕೇಸಿನಿಂದ ಆ ಊರಿನಲ್ಲಿ ನಾನೇ ದೊಡ್ಡ 'ರೌಡಿ' ಎನ್ನಿಸಿಕೊಂಡೆ. ಆ ಸಮಯದಲ್ಲಿ ಸಾಕಷ್ಟು ಹಣವೂ ಆಗಿತ್ತು.

ಮುಷ್ಕರ ಎದುರಿಸಿದೆ

ನಮ್ಮ ಹೋಟೇಲಿನ ಮುಂದುಗಡೆ ಕೊಚ್ಚಿ ಮಹಾರಾಜರ ವಾಹನ ಚಾಲಕರ ಭವ್ಯ ಬಂಗಲೆ. ಅದನ್ನು ಖರೀದಿಸಿದೆವು. ನಮ್ಮೂರಿನ ಕೆಲವು ಮಕ್ಕಳಿಗೆ ಹೋಟೇಲಿನಲ್ಲಿ ಕೆಲಸ ಕೊಟ್ಟೆವು. ಕೇರಳ ಕಮ್ಯುನಿಸ್ಟ್ ಪ್ರದೇಶ. ತಿರುಪುಣಾತ್ರೆಯ ಶಾಸಕರು ಕಮ್ಯುನಿಸ್ಟ್. ಅವರು ಕೇರಳ ಸರಕಾರದ ಮಂತ್ರಿ. ಹೋಟೇಲಿನಲ್ಲಿನ ನೌಕರರನ್ನು ನಾವು ಚೆನ್ನಾಗಿ ನೋಡಿಕೊಂಡಿದ್ದರೂ ಅವರ ತಲೆ ತಿರುಗಿಸಿ ಮುಷ್ಕರ ಹೂಡಿಸಿದರು. ಹೋಟೇಲು ಮುಚ್ಚಿತು. ನೌಕರರು ಹೋಟೇಲಿನ ಹಿಂಬದಿಯಲ್ಲಿ (ಅವರ ಬಿಡಾರದಲ್ಲಿ), ನಾವು ನಮ್ಮ ಮನೆಯಲ್ಲಿದ್ದೆವು. ನೌಕರರು ನಮ್ಮೂರಿನ ಮಕ್ಕಳನ್ನು ಎದುರು ಮಾಡಿಕೊಂಡು ಸತ್ಯಾಗ್ರಹ ಪ್ರಾರಂಭಿಸಿದರು. ಹೇಳಿಕೊಳ್ಳುವಂಥ ಬೇಡಿಕೆಯೇನೂ ಇರಲಿಲ್ಲ. 100 ದಿನ ಉರುಳಿದರೂ ಸತ್ಯಾಗ್ರಹ ನಿಲ್ಲಲಿಲ್ಲ. ದಿನವೂ ಹೋಟೇಲಿನ ಮುಂದೆ ಸತ್ಯಾಗ್ರಹದ ದಿನವನ್ನು ನಮೂದಿಸುತ್ತಿದ್ದರು. ನಮಗಿದು ತುಂಬಾ ತಡವಾಗಿ ತಿಳಿಯಿತು. ಪೊಲೀಸರಿಗೆ ದೂರು ಕೊಟ್ಟೆವು. ಸಬ್ ಇನ್ಸ್‌ಪೆಕ್ಟರ್ ಸ್ಥಳ ಪರಿಶೀಲಿಸಿ ಕೇಸು ದಾಖಲಿಸಿದರು. ಪರಿಶೀಲನೆಗೆ ಬಂದವರು 'ನೀವು ಯಾವ ಅಕ್ಕಿ ಊಟ ಮಾಡುವುದು?' ಎಂದು

ಕೇಳಿದರು. ಕುಚ್ಚಿಲಕ್ಕಿ ಎಂದೆ. ಒಡನೆಯೇ ಅವರು ಎರಡು ಕ್ವಿಂಟಾಲ್ ಅಕ್ಕಿಯನ್ನು ನನ್ನ ಕಾರಿನಲ್ಲಿರಿಸಿ ಮನೆಗೆ ಕಳಿಸುವಂತೆ ಹೇಳಿದರು. ಅಷ್ಟು ಮಾಡಿದ ಬಳಿಕವೇ ಕೇಸಿನ ವಿಚಾರಣೆ. ಕಮ್ಯುನಿಸ್ಟ್ ಕಾರ್ಯಕರ್ತರು ನಮ್ಮ ನೌಕರರೊಂದಿಗೆ ನಮ್ಮ ಮನೆಯ ಗೇಟಿನ ಎದುರೇ ಸತ್ಯಾಗ್ರಹಕ್ಕೆ ಕುಳಿತಿದ್ದರು. ನಮ್ಮ ಕಾರು ಹೊರತರುವುದಕ್ಕೆ ಅಸಾಧ್ಯವಾಯಿತು. ರಾತ್ರಿಯಲ್ಲಿ ಅಲ್ಲೇ ಮಲಗಿರುತ್ತಿದ್ದರು. ನನಗೆ ವಿಪರೀತ ರೋಷ ಉಕ್ಕಿತು. ಮೂರು ತಿಂಗಳಿಂದ ವ್ಯಾಪಾರವೂ ಇಲ್ಲ, ಖರ್ಚು ವೆಚ್ಚವೂ ಜಾಸ್ತಿಯಾಗುತ್ತಿದೆ, ಕಾರು ಹೊರಗಡೆ ತೆಗೆಯುವಂತೆಯೂ ಇಲ್ಲ! ಏನಾದರಾಗಲಿ, ಒಂದು ತೀರ್ಮಾನಕ್ಕೆ ಬರಲೇಬೇಕು ಎಂದುಕೊಂಡು ಧರಣಿ ನಿರತನಾಗಿದ್ದ(50 ಮಂದಿ)ವರಲ್ಲಿ ಹೇಳಿದೆ– 'ದಯಮಾಡಿ ಬದಿಯಲ್ಲಿ ಕುಳಿತು ಸತ್ಯಾಗ್ರಹ ಮಾಡಿ. ದಾರಿ ಬಿಡಿ'. ಪ್ರಯೋಜನವಾಗಲಿಲ್ಲ. ಅವರಿಗೆ ಮತ್ತೆ ಎಚ್ಚರಿಕೆ ಕೊಟ್ಟು ಕಾರುಚಾಲೂ ಮಾಡಿದೆ. ಮತ್ತೆ 'ಗೇಟಿನಿಂದಾಚೆ ಸರಿಯಿರಿ' ಎಂದೆ. ಯಾರೂ ಸೊಪ್ಪು ಹಾಕಲಿಲ್ಲ. 'ದಾರಿ ಬಿಡದಿದ್ದರೆ ನಿಮ್ಮ ಮೇಲೆ ಕಾರು ಹರಿಸುತ್ತೇನೆ' ಎಂದೆ. ಕಾರನ್ನು ಗೇಟಿನತ್ತ ವೇಗವಾಗಿ ಒಯ್ದು ತಟ್ಟನೆ ಬ್ರೇಕ್ ಹಾಕಿದೆ. ಭಯಪಟ್ಟು ಓಡಿದರು.

ಪಾಠ ಕಲಿಸಿದೆ

ಆ ದಿನ ತುಸು ಹೆಚ್ಚು ಕಮ್ಮಿ ಆಗಿದ್ದರೂ ನಾಲ್ಕಾರು ಹೆಣ ಬೀಳುತ್ತಿದ್ದವು. ನಾನು ಕಂಬಿ ಎಣಿಸಬೇಕಿತ್ತು. ಆದರೆ ಜನ ಓಡಿದ್ದರಿಂದ ಹಾಗೂ ಅವರು ಆಮೇಲೆ ಈ ವಿಷಯದಲ್ಲಿ ಭಯಪಟ್ಟಿದ್ದರಿಂದ ರಾಜಿ ಪಂಚಾಯಿತಿ ನಡೆದು ಮುಷ್ಕರ ಕೊನೆಗೊಂಡಿತು. 140 ದಿನಗಳ ಬಳಿಕ ಹೋಟೇಲನ್ನು ತೆರೆದೆವು. ಊರಿಂದ ಬಂದು ಕೆಲಸಕ್ಕೆ ಸೇರಿದ್ದ ಇಬ್ಬರು ಹುಡುಗರು ಊರಿಗೆ ಹಿಂದಿರುಗಿದ್ದರು. ಅವರು ಸತ್ಯಾಗ್ರಹದಲ್ಲಿ ಮುಂಚೂಣಿಯಲ್ಲಿದ್ದದ್ದು ನನಗೆ ಅಸಮಾಧಾನ ತಂದಿತ್ತು. ಇವರಿಗೆ ಕಲಿಸಬೇಕು ಎಂದುಕೊಂಡೆ. ಇಬ್ಬರ ಮೇಲೂ ಕಳವು ಕೇಸು ದಾಖಲಿಸಿದೆ. ಇಬ್ಬರು ಪೊಲೀಸರೊಂದಿಗೆ ಊರಿಗೆ ಬಂದೆ. ಮೂಲ್ಕಿ ಪೊಲೀಸರು ಹೇಗೂ ಪರಿಚಯದವರಾಗಿದ್ದುದರಿಂದ ಕೇರಳದ ಪೊಲೀಸರನ್ನು ಇಲ್ಲಿಗೆ ಕರೆ ತರುವುದು ಸಾಧ್ಯವಾಯಿತು. ಅವರನ್ನೂ ಇಲ್ಲಿಯ ಪೊಲೀಸರನ್ನೂ ಜೊತೆ ಮಾಡಿಕೊಂಡು ಇಬ್ಬರು ಮಕ್ಕಳ ಮನೆಗೂ ಹೋಗಿ ಕಳವು ಸೊತ್ತುಗಳ ಹುಡುಕಾಟ ನಡೆಸಿದಂತೆ ಮಾಡಿ ಇಬ್ಬರನ್ನು ಪೊಲೀಸ್ ಸ್ಟೇಶನಿಗೆ ಕರೆತಂದು ಲಾಕಪ್‌ಗೆ ಹಾಕಿಸಿದೆವು. ಮರುದಿನ ಅವರನ್ನು ಕಾರಿನಲ್ಲಿ ತಿರುಪುಣಾತ್ರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಜೈಲರ್ ನಮ್ಮ ಪರಿಚಯದವನು. ಅವನಿಗೆ ಹಣದ ಆಮಿಷ ಒಡ್ಡಿದೆ. ಆ ಕಾಲದ ಒಂದು ರೂಪಾಯಿ (ರಪರಪ ಅಂತ ತಟ್ಟುವುದು), ಎರಡು ರೂಪಾಯಿ (ಸರಿಯಾಗಿ ಜಾಡಿಸಿ ಒಂದು ಪೆಟ್ಟು), ಐದು ರೂಪಾಯಿ (ಪ್ರೀತಿಯಿಂದ ಮಾತಾಡಿ ಮುಂಗೈಯಿಂದ ತಟ್ಟನೆ ಜಾಡಿಸಿ ಕೊಡುವುದು) ಏಟುಗಳ ರುಚಿ ಕಂಡರು ಆ ಖೈದಿಗಳು. ಮುಂದಿನ ವಾಯಿದೆಗೆ ನಾನೇ ಅವರನ್ನು ಜಾಮೀನಿನಲ್ಲಿ ಬಿಡಿಸಿದೆ, ನನ್ನ ಹೊಟೇಲಿನಲ್ಲೇ ಕೆಲಸಕ್ಕೆ ಇರಿಸಿಕೊಂಡೆ. ಕೇಸು ನಡೆಯುತ್ತಿದ್ದಾಗ ನಾವು ಎದುರುಬದುರು. ಅನಂತರ ಒಟ್ಟಿಗೆ ನನ್ನ ಕಾರಿನಲ್ಲೇ ಹೋಟೆಲಿಗೆ ಬಂದು ಕೆಲಸ. ಎರಡು ವರ್ಷಗಳ ಬಳಿಕ ಆ ಮಕ್ಕಳು ನನ್ನ ಕಾಲು ಹಿಡಿದು 'ನಮ್ಮನ್ನು ರಕ್ಷಿಸಬೇಕು' ಎಂದು ಬೇಡಿಕೊಂಡರು. ಕೋರ್ಟಿನಲ್ಲಿದ್ದ ಕೇಸನ್ನು ಹಿಂದೆಗೆದುಕೊಂಡೆ. 'ಇನ್ನು ನನ್ನಲ್ಲಿ ಕೆಲಸವಿಲ್ಲ, ಬೇರೆಲ್ಲಾದರೂ ನೋಡಿ' ಎಂದು ಹಣ ಕೊಟ್ಟು ಕಳುಹಿಸಿದೆ.

ಕಮ್ಯುನಿಸ್ಟ್ 'ಮಿತ್ರ'ನ ಮೋಸ

ಆ ಸಮಯದಲ್ಲಿ ನನ್ನ ಮಿತ್ರನಾಗಿದ್ದ ಒಬ್ಬ ಕಮ್ಯುನಿಸ್ಟ್ ವ್ಯಕ್ತಿ ನಮ್ಮ ಮನೆಯ ಮುಂದುಗಡೆ ಗೂಡಂಗಡಿ ಇಡುತ್ತೇನೆಂದು ಕೇಳಿಕೊಂಡ. ನಾನು ಒಪ್ಪಿದೆ. ಒಂದು ವರ್ಷ ಆಗುತ್ತಲೇ ಮೆಲ್ಲಮೆಲ್ಲನೆ ನನ್ನ ಕಾಂಪೌಂಡಿನ ಒಳಗಡೆ ತನ್ನ ಅಂಗಡಿಯನ್ನು ವಿಸ್ತರಿಸಿದ. 'ಅಂಗಡಿ ಖಾಲಿ ಮಾಡು' ಎಂದೆ. 'ಐದು ಸೆಂಟ್ಸ್ ಜಾಗ ಕೊಡಿ. ಇಲ್ಲವಾದರೆ ನಿಮ್ಮನ್ನೇ ಓಡಿಸುವೇನು' ಎಂದ. ವಿಶ್ವಾಸ ದ್ರೋಹವಾಯಿತು. ರಾತ್ರಿಯಲ್ಲಿ ನಾವೆಲ್ಲಾದರೂ ಆ ಅಂಗಡಿಯನ್ನು ತೆಗೆದುಹಾಕಿದರೆ! ಎಂಬ ಸಂಶಯದಿಂದ ಅಂಗಡಿಯಲ್ಲೇ ಮಲಗುತ್ತಿದ್ದ. ಸ್ವಲ್ಪ ದಿನ ಕಳೆಯಿತು. ಒಂದು ದಿನ ಒಂದು ಉಪಾಯ ಮಾಡಿದೆ. ರಾತ್ರಿ ನನ್ನ ಆಪ್ತರೊಡನೆ ಹರಟೆ ಹೊಡೆಯುತ್ತಿದ್ದಾಗ ಏರು ದನಿಯಲ್ಲಿ 'ನಾಳೆ ರಾತ್ರಿ ಈ ಅಂಗಡಿಗೆ ಪೆಟ್ರೋಲ್ ಹಾಕಿ ಸುಡುತ್ತೇನೆ; ಅಲ್ಲಿಗೆ ಈ ಪ್ರಕರಣ ಮುಗಿಯುತ್ತದೆ. ಅವನೂ ಸತ್ತುಹೋಗ್ತಾನೆ' ಎಂದೆ. ಅವನು ಹೆದರಿದ. 'ಈ ಮನುಷ್ಯ ಹೇಳಿದಂತೆ ಮಾಡಲು ಹೇಸುವವನಲ್ಲ' ಎಂದುಕೊಂಡವನೇ ಸಾಧ್ಯವಾದಷ್ಟು ಹೆಚ್ಚು ಹಣ ಪಡೆಯೋಣ ಎಂದು ಲೆಕ್ಕಹಾಕಿ ಆ ಊರಿನ ದೊಡ್ಡ ಮನೆಯಲ್ಲಿ ದೂರುಕೊಟ್ಟ. ಆದರೆ ಅವನಿಗೂ ನನ್ನ ಬಗ್ಗೆ ಭಯ. ಆತ ಕರೆದು ಪಂಚಾಯಿತಿ ಮಾಡಿ 10 ಸಾವಿರ ಕೊಡುವಂತೆ ನನ್ನನ್ನು ಒಪ್ಪಿಸಿ ಅಂಗಡಿ ತೆರವುಗೊಳಿಸಿದ. ತೆರವುಗೊಳ್ಳದೆ ಇದ್ದಿದ್ದರೆ ನಮಗೆ ಯಾವುದೇ ಅಭಿವೃದ್ಧಿ ಕೆಲಸ ಸಾಧ್ಯವಾಗುತ್ತಿರಲಿಲ್ಲ.

ಹೊಟೇಲ್ ಸ್ವಾಗತ್‌ನ ಹಿನ್ನೆಲೆ

1974ರ ಹೊತ್ತಿಗೆ ದೇವರಾಜ ಅರಸರ 'ಉಳುವವನೇ ಹೊಲದೊಡೆಯ' ಕಾಯ್ದೆ ಬಂದಾಗ ಊರಿಗೆ ಮರಳಿದೆ. ಮಂಗಳೂರಿನಲ್ಲಿ ಹೊಟೇಲ್ ಸ್ವಾಗತ್ ಆರಂಭಿಸಿದೆ. ನಮ್ಮ ಕಟ್ಟಡದ ಧನಿಗಳು ನ್ಯಾಯವಾದಿಗಳಾಗಿದ್ದವರು. ಓರ್ವ ಮುಸ್ಲಿಂ. ನನ್ನಿಂದ 1974ರ ಮೇ 6ರಂದು 11 ತಿಂಗಳ ಬಾಡಿಗೆ ನೀಡುವಂತೆ ಹೇಳಿ ಎರಡು ಒಪ್ಪಂದಗಳಿಗೆ ಸಹಿ ಹಾಕಿಸಿಕೊಂಡರು. ಒಂದು 600 ರೂಪಾಯಿಗಳ ಒಪ್ಪಂದ. ಇದು ಮುನಿಸಿಪಾಟಿಲಿಗೆ ತೋರಿಸಲಿಕ್ಕಾಗಿ. ಇನ್ನೊಂದು 1,800 ರೂಪಾಯಿಗಳ ಬಾಡಿಗೆಯ ನೈಜ ಒಪ್ಪಂದ. ಈ ಕಟ್ಟಡ ಕಟ್ಟಿ ಓರ್ವ ಮುಸ್ಲಿಮನಿಗೆ ನೀಡಲಾಗಿತ್ತು. ಸಸ್ಯಾಹಾರ, ಮಾಂಸಾಹಾರದ ಹೊಟೇಲ್ ಮಾಡಿದ್ದರೂ ಅವರಿಗೆ ವ್ಯಾಪಾರವಾಗುತ್ತಿರಲಿಲ್ಲ. ಆಗ ನಾವು ಸಂಪರ್ಕಿಸಿ ನಮಗೆ ಕೊಡುವಂತೆ ವಿನಂತಿಸಿದ್ದೆವು. ಅವರು ಕಟ್ಟಡದ ಮಾಲೀಕರ ಒಪ್ಪಿಗೆ ಪಡೆದು ನಮಗೆ ನೀಡಿದ್ದರು. ನಮ್ಮ ವ್ಯಾಪಾರ ಕಂಡು ಮಾಲೀಕರಿಗೆ ಸಹಜವಾಗಿಯೇ ಮತ್ಸರ ಪ್ರಾರಂಭವಾಯಿತು. ನಮಗೆ ಇಲ್ಲಸಲ್ಲದ ಕಿರುಕುಳ ಪ್ರಾರಂಭಿಸಿದರು. ಅಲ್ಲದೆ ಇದೇ ಪ್ರದೇಶಕ್ಕೆ ಉನ್ನತ ಪೊಲೀಸ್ ಅಧಿಕಾರಿಯಾಗಿದ್ದ ಅವರ ಮಗಳ ಗಂಡನ ಮೂಲಕ ಹೊಟೇಲು ಖಾಲಿ ಮಾಡುವಂತೆ ಒತ್ತಡ ಹಾಕಿದರು. ನಾನು ಜಗ್ಗಲಿಲ್ಲ. ಹೋರಾಟಕ್ಕೆ ಇಳಿದೆ. ಹೊಸ ಕಟ್ಟಡಕ್ಕೆ ಐದು ವರ್ಷಗಳು ತುಂಬಿದರೆ ಅದರ ಬಾಡಿಗೆ ವ್ಯವಹಾರ ರೆಂಟ್ ಕಂಟ್ರೋಲಿಗೆ ಒಳಪಡುತ್ತದೆ. ನ್ಯಾಯಾಲಯದಲ್ಲಿ ಕೇಸು ಹಾಕುವುದರ ಜೊತೆಗೆ ರೆಂಟ್ ಕಂಟ್ರೋಲ್ ಕೇಸನ್ನೂ ದಾಖಲಿಸಿದೆ. ಅವರು ಕಟ್ಟಡದ ವಿಸ್ತೀರ್ಣವನ್ನು ವಾಸ್ತವಕ್ಕಿಂತ ಕಡಿಮೆ ತೋರಿಸಿದ್ದುದರಿಂದ ತಿಂಗಳಿಗೆ 350 ರೂಪಾಯಿ ಬಾಡಿಗೆ ಎಂದು ತೀರ್ಮಾನವಾಯಿತು. ಅವರು ವಾಯಿದೆಗೆ ಅಪೀಲು ಮಾಡಲಿಲ್ಲ. ಅಪೀಲಿನ ವಾಯಿದೆ ಮುಗಿದ ಬಳಿಕ ನಾನು ಅವರನ್ನು ಸಂಪರ್ಕಿಸಿ 'ವಾಸ್ತವವಾಗಿ ನಾನು ಇನ್ನು ಮುಂದೆ ತಿಂಗಳಿಗೆ 350 ರೂಪಾಯಿ ಬಾಡಿಗೆ ಕೊಟ್ಟರೆ ಸಾಕು! ನಿಮ್ಮ ಅಪೀಲಿನ ಸಮಯವೂ ದಾಟಿದೆ. ಆದರೆ ನಾನು ಆ ರೀತಿ ವರ್ತಿಸುವುದಿಲ್ಲ. ನಿಮ್ಮ ಕಟ್ಟಡದಲ್ಲಿ ವ್ಯಾಪಾರ ಮಾಡಿ ಒಳ್ಳೆಯದಾಗಿದ್ದೇನೆ. ನಿಮಗೆ ಎಷ್ಟು ಬಾಡಿಗೆ ನೀಡಬೇಕೆಂದು ನೀವೇ ಹೇಳಿ. ಆದರೆ ನನ್ನದೊಂದು ಕೋರಿಕೆ ಇದೆ. ಎಲ್ಲಾ ಕೇಸುಗಳನ್ನು

ಹಿಂವಕ್ಕೆ ಪಡೆದು ನನಗೆ ಕಿರಿಕಿರಿಯಾಗದಂತೆ ಸಹಕರಿಸಬೇಕು' ಎಂದು ವಿನಂತಿಸಿದೆ. ಇದಕ್ಕೆ ಉತ್ತರವಾಗಿ ಅವರು, ಮೊದಲ ಐದು ವರ್ಷಗಳ ಅವಧಿಗೆ 6,000 ರೂಪಾಯಿಗಳನ್ನು, ಮುಂದಿನ ಪ್ರತಿ ಐದು ವರ್ಷಗಳಿಗೆ ಒಂದು ಸಾವಿರದಂತೆ ಹೆಚ್ಚುವರಿ ಮಾಸಿಕ ಬಾಡಿಗೆ ಕೊಡುವಂತೆ ಹೇಳಿದರು. ನಾನು ಒಪ್ಪಿ ಬಾಡಿಗೆ ನೀಡುತ್ತ ಬಂದೆ. ನೀರಿನ ಆಶ್ರಯಕ್ಕಾಗಿ ಹತ್ತಿರದಲ್ಲೇ ಒಂದು ಬಾವಿ ತೋಡಿದರು. ಅದಕ್ಕೆ ತಗಲಿದ ವೆಚ್ಚದಲ್ಲೂ ಸಮಪಾಲನ್ನು ನೀಡಿದೆ. ಕಟ್ಟಡದ ಮಾಲೀಕರು ತೀರಿಕೊಂಡರು. ಈಗ ಅವರ ಏಕಮಾತ್ರ ಪುತ್ರನ ಆಡಳಿತ. ಈ ಹೊಟೇಲನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲ, ತಮ್ಮ ಕೈಲಿದ್ದ ಭಾಗವನ್ನು ನಮಗೆ ನೀಡಿದರೆ ಒಳ್ಳೆಯ ಬೆಲೆ ಬಂದೀತು; ಅದನ್ನು ಠೇವಣಿ ಇರಿಸಿದರೆ ಈಗ ಬರುವ ಬಾಡಿಗೆಯ ಮೂರು ಪಟ್ಟು ಬಡ್ಡಿ ಮೊತ್ತ ಬಂದೀತು ಎಂದು ಆಲೋಚಿಸಿ, ನನ್ನೊಡನೆ ಈ ವಿಚಾರವನ್ನು ಚರ್ಚಿಸಿದರು. ನಾನು ಒಪ್ಪಿ ನನ್ನ ವಶದಲ್ಲಿದ್ದ ಜಾಗವನ್ನು ಖರೀದಿಸಿದೆ.

ಹೊಟೇಲಿಗರ ಸಂಘದ ಅಧ್ಯಕ್ಷ

ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷನಾಗಿದ್ದೆ. ತಾಜ್‌ಮಹಲ್‌ನ ಮಾಲೀಕರೇ ಖಾಯಂ ಅಧ್ಯಕ್ಷರಾಗಿದ್ದರು. ಆ ವರ್ಷ (1975-1976) ನನ್ನನ್ನು ಆರಿಸಿದರು. ಅದು ತುಂಬಾ ಕಷ್ಟಕಾಲ. ಹೊಟೇಲಿಗರ ಮೇಲೆ ಅಧಿಕಾರಿಗಳ ಕೆಂಗಣ್ಣು. ಆಹಾರವನ್ನು ಅವರು ನಿಗದಿಪಡಿಸಿದ ಬೆಲೆಗೇ ವಿಕ್ರಯಿಸಬೇಕು. ಊಟಕ್ಕೆ ನೀಡುವ ಅನ್ನದ ತೂಕ ಇಂತಿಷ್ಟು ಗ್ರಾಂ ಇದ್ದೇ ತೀರಬೇಕು. ಕಮ್ಮಿಯಾದರೆ ಕೇಸು ದಾಖಲು! ಲೈಸನ್ಸ್ ರದ್ದು! ಆಗ ಜಿಲ್ಲಾಧಿಕಾರಿಯಾಗಿದ್ದವರು ಹೊಟೇಲಿಗರ ಸಭೆ ಕರೆದು ನಿಗದಿಪಡಿಸಿದ ದರಕ್ಕೆ ತಿಂಡಿಗಳನ್ನು ನೀಡಬೇಕೆಂದು ಆಜ್ಞೆ ಮಾಡಿದರು. ಹೊಟೇಲಿಗರು ಅಸಮಾಧಾನಗೊಂಡರು. ಜಿಲ್ಲಾಧಿಕಾರಿಗಳು ನನಗೆ 'ನೀವು ಹೊಟೇಲು ಒಡೆಯರ ಸಂಘದ ಅಧ್ಯಕ್ಷರು; ನಾಳೆಯಿಂದಲೇ ನಿಗದಿತ ಬೆಲೆಗೆ ತಿಂಡಿಗಳನ್ನು ನೀಡುವಂತೆ ನೋಡಿಕೊಳ್ಳಬೇಕು' ಎಂದು ಎಚ್ಚರಿಕೆ ನೀಡಿದರು. 'ನಾನು ಎಲ್ಲರಲ್ಲೂ ವಿನಂತಿಸಬಹುದಷ್ಟೇ. ವಿನಂತಿಯಂತೆ ನಡೆಯದಿದ್ದರೆ ನಾನು ಏನೂ ಮಾಡುವಂತಿಲ್ಲ. ಆದರೆ ನನ್ನ ಹೊಟೇಲಿನಲ್ಲಿ ನೀವು ಹೇಳುವ ದರಕ್ಕೆ ನೀಡುವುದು ಸಾಧ್ಯ. ಅಷ್ಟು ಮಾಡುತ್ತೇನೆ. ಉಳಿದವರನ್ನು ಹೇಳಿದಂತೆ ಮಾಡಿಸಲು, ಶಿಕ್ಷಿಸಲು ನನಗೆ ಅಧಿಕಾರವಿಲ್ಲ' ಎಂದು ತಿಳಿಸಿದೆ. ಜಿಲ್ಲೆಯ ಹೋಟೇಲಿಗರ ಪೈಕಿ ಯಾರೂ ಬೆಲೆ ನಿಗದಿಗೆ ಒಪ್ಪಲಿಲ್ಲ. ಜಿಲ್ಲಾಧಿಕಾರಿಗಳು ಕೋಪಗೊಂಡರು. ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಆರೋಗ್ಯ, ನೌಕರರ ಪ್ರಾವಿಡೆಂಟ್ ಫಂಡು, ಮೊದಲಾದ ಹಲವಾರು ಸರಕಾರಿ ಕಛೇರಿಯವರನ್ನು, ನಗರ ಆಯುಕ್ತರ ನೇತೃತ್ವದಲ್ಲಿ, ಪೊಲೀಸಧಿಕಾರಿಗಳು ಹಾಗೂ 100ಕ್ಕಿಂತಲೂ ಅಧಿಕ ಪೊಲೀಸ್ ಸಿಬ್ಬಂದಿಗಳೊಂದಿಗೆ ನನ್ನ ಹೊಟೇಲಿಗೆ ಧಾಳಿ ಮಾಡಿಸಿದರು. ಹೊಟೇಲನ್ನು ಮುಚ್ಚಿಸಲಾಯಿತು. ಮೂರು ಮಂದಿ ಕ್ಲೀನಿಂಗ್ ಮಕ್ಕಳನ್ನು ವೆನ್‌ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪ್ರಾಪ್ತ ವಯಸ್ಕ ಮಕ್ಕಳನ್ನು ದುಡಿಸುತ್ತಿದ್ದಾರೆಂಬ ಆರೋಪದಲ್ಲಿ ಕೇಸು ದಾಖಲಿಸಿ ನನ್ನನ್ನು ಸೆರೆಮನೆಗೆ ತಳ್ಳುವ ಉದ್ದೇಶ ಈ ಕಾರ್ಯಾಚರಣೆಯ ಹಿಂದಿತ್ತೆಂದು ಕಾಣುತ್ತದೆ. ಅಲ್ಲಿಯ ವೈದ್ಯರು ಎಲ್ಲ ದಾಖಲೆಗಳನ್ನು ಬರೆದ ಮೇಲೆ, 'ಈ ಮಕ್ಕಳು ಯಾವ ಹೊಟೇಲಿನವರು?' ಎಂದು ವಿಚಾರಿಸಿದರು. 'ಹೊಟೇಲ್ ಸ್ವಾಗತ್'ನವರೆಂಬ ಉತ್ತರ ಬಂದೊಡನೆ ವೈದ್ಯರು ತಾನು ಬರೆದ ವರದಿಯನ್ನು ಹರಿದು ಹಾಕಿ 'ನಾಳೆ ಬೆಳಗ್ಗೆ ಹತ್ತು ಘಂಟೆಗೆ ಕರೆದುಕೊಂಡು ಬನ್ನಿ; ಯಂತ್ರದ ಮೂಲಕ ಪರೀಕ್ಷಿಸಿದರೆ ಮಾತ್ರ ವಯಸ್ಸು ಹೇಳಬಹುದು' ಎಂದರು.

ಅಧಿಕಾರಿಗಳು ಏನೇನೋ ವಾದಿಸಿದರೂ ವೈದ್ಯರು ಒಪ್ಪಲಿಲ್ಲ. ಆಯುಕ್ತರು ಈ ಮಕ್ಕಳನ್ನು ಕಾರ್ಮಿಕ ಅಧಿಕಾರಿಗಳ ವಶಕ್ಕೆ ನೀಡಿ, ಮರುದಿನ ಬೆಳಗ್ಗೆ ಕರೆದುಕೊಂಡು ಬರುವಂತೆ ತಿಳಿಸಿದರು. ಆಗ ಕಾರ್ಮಿಕ ಅಧಿಕಾರಿಗಳು 'ಇದು ನನ್ನ ಅಧಿಕಾರದ ವ್ಯಾಪ್ತಿಗೆ ಬರುವುದಿಲ್ಲ' ಎಂದರು. ಯಾವ ಅಧಿಕಾರಿಗಳೂ ಜವಾಬ್ದಾರಿ ತೆಗೆದುಕೊಳ್ಳಲು ಒಪ್ಪಲಿಲ್ಲ. ಇನ್ನೇನು ಮಾಡುವುದು ಎಂದು ಪೊಲೀಸರು ಚಿಂತಿತರಾದರು. ಆ ಮಕ್ಕಳನ್ನು ಹೋಟೇಲಿಗೆ ಕರೆದೊಯ್ದು ಮರುದಿನ ಬೆಳಗ್ಗೆ 10 ಗಂಟೆಗೆ ಆಸ್ಪತ್ರೆಗೆ ಕರೆತರುವಂತೆ ತಿಳಿಸಿದರು.

ನಾನು ಒಪ್ಪಿದೆ. ಆದರೆ ಅಂದು ರಾತ್ರಿಯೇ ಆ ಮಕ್ಕಳಿಗೆ ನೀಡಬೇಕಾಗಿದ್ದ ಹಣವನ್ನು ಲೆಕ್ಕಾಚಾರ ಮಾಡಿ ಅವರ ಕೈಗಿತ್ತು, ಅವರವರ ಮನೆಗೆ ಕಳುಹಿಸಿದೆ. ಬೆಳಗ್ಗೆ ಪೊಲೀಸರು ಬಂದು ಮಕ್ಕಳನ್ನು ಆಸ್ಪತ್ರೆಗೆ ಕರೆತರುವಂತೆ ಹೇಳಿದಾಗ 'ಮಕ್ಕಳು ಹೆದರಿ ರಾತ್ರಿಯಲ್ಲೇ ನನಗೆ ತಿಳಿಸದೇ ಓಡಿ ಹೋಗಿದ್ದಾರೆ' ಎಂದೆ. ಏನು ಮಾಡಲೂ ಸಾಧ್ಯವಾಗದೆ ಹಿಂದಿರುಗಿದರು.

ವೆನ್‌ಲಾಕ್‌ನ ಆ ವೈದ್ಯರ ಸಹಕಾರದಿಂದಾಗಿ ನನಗೆ ಸಿಗಬೇಕಿದ್ದ ಶಿಕ್ಷೆ ಹೀಗೆ ತಪ್ಪಿತು. ಎರಡು ದಿನಗಳ ಬಳಿಕ ಅದೇ ವೈದ್ಯರು ಬಂದು ನನ್ನನ್ನು ಕಂಡರು. ಈ ಹಿಂದೆ ನಾನು ಅವರಿಗೆ ಮಾಡಿದ್ದ ಉಪಕಾರವನ್ನು ನೆನೆಸಿಕೊಂಡರು. ನನಗೂ ನೆನಪಿಗೆ ಬಂತು.

ಅದು ನಡೆದದ್ದು ಮೂರು ವರ್ಷಗಳ ಹಿಂದೆ. ಅವರಿಗೆ ರಿವಾಲ್ವರ್ ಲೈಸೆನ್ಸ್ ಆಗಬೇಕಿತ್ತು. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅವರಿಗೆ ಯಾರೂ ಪರಿಚಿತರು ಇರಲಿಲ್ಲ. ಯಾರೋ ಕೆಲಸ ಮಾಡಿಸಿ ಕೊಡಲು ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿದ್ದ ನನಗೆ ಇವರ ಪರಿಚಯ ಆಯಿತು. ತಾನು ಬಂದ ಉದ್ದೇಶದ ಬಗ್ಗೆ ಹೇಳಿಕೊಂಡರು. ನಾನು ಅವರನ್ನು ಕರೆದುಕೊಂಡು ನನ್ನ ಪರಿಚಿತರಾದ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್‌ರ ಕಛೇರಿಗೆ ಹೋಗಿ, 'ಈ ವೈದ್ಯರು ವೆನ್‌ಲಾಕ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಪರಿಚಿತರು. ಇವರು ರಿವಾಲ್ವರ್ ಲೈಸೆನ್ಸಿಗೆ ಅರ್ಜಿ ಹಾಕಿದ್ದಾರೆ' ಎಂದು ಪರಿಚಯ ಮಾಡಿಕೊಟ್ಟೊಡನೆ ಫೈಲ್ ತರಿಸಿ ಲೈಸೆನ್ಸ್ ನೀಡಿದ್ದರು. ಇದಾಗಿ ಮೂರು ವರ್ಷಗಳಾದ ಮೇಲೆ ನನ್ನ ಕೇಸು ಇವರ ಬಳಿ ಬಂದಿತ್ತು! ಅಂದು ಯಾವುದೇ ಪ್ರತಿಫಲ ಬಯಸದೆ ನಾನು ಮಾಡಿದ್ದ ಕೆಲಸಕ್ಕೆ ಇಂದು ಈ ರೀತಿ ಫಲ ದೊರಕಿತ್ತು. ನನ್ನ ಮಾನ ಉಳಿಯಿತು.

ಜಿಲ್ಲೆಯ ಎಲ್ಲಾ ಹೋಟೇಲಿಗರು ಸತತ ಮೂರು ದಿನಗಳ ಕಾಲ ಬಾಗಿಲೆಳೆದುಕೊಂಡು ಪ್ರತಿಭಟನೆ ನಡೆಸಿದರು. ನಾನು ಮುಖ್ಯಮಂತ್ರಿ ಗುಂಡೂರಾಯರನ್ನು ಸಂಪರ್ಕಿಸಿದೆ (ಒಂದು ಕಾಲದಲ್ಲಿ ಅವರಿಗೆ ಸಹಕಾರ ನೀಡಿದ್ದೆ). ಅವರು ಜಿಲ್ಲಾಧಿಕಾರಿಗಳಿಗೆ ಫೋನು ಮಾಡಿ 'ಕೂಡಲೇ ಹೋಟೇಲು ತೆರೆಯಲು ಅನುಮತಿ ನೀಡಿ ಅವರನ್ನು ನಿಮ್ಮಲ್ಲಿಗೆ ಕಳುಹಿಸಿಕೊಡುತ್ತೇನೆ. ಮಾತಾಡಿ' ಎಂದು ಹೇಳಿದರು. ನಾನು ಹೋಗಿ ಜಿಲ್ಲಾಧಿಕಾರಿಗಳನ್ನು ನೋಡಿದೆ. ಮುಖ್ಯಮಂತ್ರಿಗಳೇ ಹೇಳಿದ ಮೇಲೆ ಅವರು ಏನು ಮಾಡಿಯಾರು? 'ನೀವು ಮುಖ್ಯಮಂತ್ರಿಗಳನ್ನು ನೋಡಿದರೂ ಇಲ್ಲಿಗೆ ಬರಲೇಬೇಕು- ತಲೆಗೆ ಸುರಿದ ನೀರು ಕಾಲಿಗೆ ಬರುವಂತೆ. ಹೋಗಿ, ಹೋಟೇಲು ತೆರೆಯಿರಿ' ಎಂದರು. ಅಂತೂ ಜಿಲ್ಲೆಯ ಹೋಟೇಲುಗಳು ತೆರೆದವು. ಆ ಸಮಯದಲ್ಲಿ, ಹಿಂದೊಮ್ಮೆ ನನ್ನಿಂದ ಪ್ರಯೋಜನ ಪಡೆದಿದ್ದ ರಾಜ್ಯಸಭಾ ಸದಸ್ಯರೊಬ್ಬರನ್ನು ಸಂಪರ್ಕಿಸಿ 'ಈ ಜಿಲ್ಲಾಧಿಕಾರಿಗಳೊಡನೆ ಸ್ವಲ್ಪ ಮಾತಾಡಿ ವಾತಾವರಣ ತಿಳಿಗೊಳಿಸುತ್ತೀರಾ?' ಎಂದು ವಿನಂತಿಸಿದ್ದೆ. ಆದರೆ ಅವರಿಗೆ ತಮ್ಮ ಸ್ವಂತ ಕುಟುಂಬದ ಸಮಸ್ಯೆಯೇ ಹೆಚ್ಚಾಗಿತ್ತು.

ಸಮ್ಮಾನ-ದುಮ್ಮಾನ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದಾಗ ಬೆಂಗಳೂರಿನ ಹೊಟೇಲ್ ಮಾಲಿಕರು ಸಂಭ್ರಮದಿಂದ ನನಗೊಂದು ಸಮ್ಮಾನ ಕಾರ್ಯಕ್ರಮ ಏರ್ಪಡಿಸಿದ್ದರು. ಸಮ್ಮಾನಕ್ಕೆ ಉತ್ತರಿಸುತ್ತ ಹೀಗೆ ಹೇಳಿದೆ :

'ಸಾಹಿತಿಯಲ್ಲದಿರುವ ಒಬ್ಬ ಹೊಟೇಲ್ ಉದ್ಯಮಿ ಕನ್ನಡ ಜನತೆಯ ಮುಂದಾಳು ಆಗುವುದು ಸುಲಭವಲ್ಲ ನಿಜ. ಆದರೆ ಕಷ್ಟಪಟ್ಟರೆ ಯಾರೂ ಈ ಹುದ್ದೆಗೆ ಬರಬಹುದು! ಬೆಳಗ್ಗಿನಿಂದ ರಾತ್ರಿತನಕ ಹೊಟೇಲ್ ಒಳಗಿನ ದುಡಿತದಲ್ಲೇ ಮುಳುಗಿರುತ್ತ, ಕೇಳಿದವರಿಗೆಲ್ಲ ದಾನನೀಡುತ್ತ ಇರುವ ನೀವು ಜನರು ಮಾತಾಡಿಸಿದಾಗ ನಿಮ್ಮಷ್ಟಕ್ಕೇ ಇರುವುದು ಸರಿಯಲ್ಲ! ಒಳ್ಳೆ ಕೆಲಸಗಳಿಗೆ ಹಣ ನೀಡುತ್ತಿದ್ದೀರಲ್ಲ, ಜನರು ಕರೆದಾಗ ಹೋಗಿ ಭಾಗವಹಿಸಲೂಬೇಕು. ಕಲೆ, ಸಂಸ್ಕೃತಿ, ಸಾಹಿತ್ಯದಲ್ಲಿ ಸ್ವಲ್ಪ ಸಮಯ ಕಳೆಯಿರಿ. ಈ ರೀತಿ ಹೊರಬಂದು ಯಾರಾದರೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಿರಿ ಎಂದರೆ, ಐದು ಲಕ್ಷ ಬಹುಮಾನ ನೀಡುತ್ತೇನೆ!'

ಕೆಲವು ಹೊಟೇಲಿಗರು ನನ್ನ ಈ ಪ್ರೋತ್ಸಾಹದ ಮಾತನ್ನು ಅವಮಾನಿಸುವ ಉದ್ದೇಶದ್ದೆಂದು ತಪ್ಪು ತಿಳಿದರು. ಕರ್ನಾಟಕ ಮಟ್ಟದಲ್ಲಿ ಈ ಬಗ್ಗೆ ದುಮ್ಮಾನದ ವಾದ-ವಿವಾದ ನಡೆಯಿತು. ಆದರೆ ಮಾನ್ಯ ಬಾಗಿಲ್ತಾಯರು, ಟೂರಿಸ್ಟ್ ಹೊಟೇಲಿನ ವಾದಿರಾಜರಾಯರು, ಉಡುಪಿ ಅಂಬಲಪಾಡಿ ವಾದಿರಾಜರಾಯರು ಇವರನ್ನು ಹೊರತುಪಡಿಸಿ ಕರ್ನಾಟಕ ಹೊಟೇಲಿಗರಾರೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ಇರಿಸಲು ಮುಂದೆ ಬರಲಿಲ್ಲ.

ಶಬರಿಮಲೆ ಯಾತ್ರೆ

1967ರಲ್ಲಿ ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ಮೊದಲ ಬಾರಿ ಹೋದೆ. ಆಗ ಸುಮಾರು 40 ಮೈಲು ನಡೆಯಬೇಕಿತ್ತು. ಆನೆಗಳನ್ನು ಓಡಿಸಲು ಅಲ್ಲಲ್ಲಿ ಶಬ್ದ ಹೊರಡಿಸುವ ಮದ್ದುಗುಂಡುಗಳನ್ನಿಟ್ಟಿದ್ದರು. ಭಯಭಕ್ತಿಯಿಂದ ಧನುರ್‌ಮಾಸದಲ್ಲಿ ಚಳಿಯನ್ನು ಲೆಕ್ಕಿಸದೆ ಎಲ್ಲರ ಒಟ್ಟಿಗೆ ನಡೆದು ಹೋದೆ. ಅಲ್ಲಿ ಪಂಪಾನದಿಯಲ್ಲಿ ಸ್ನಾನಮಾಡಿ ಆಹಾರ ಸೇವಿಸಿ ಮುಂದಕ್ಕೆ ಮಲೆ ಏರಬೇಕು. ಪಂಪೆಯಲ್ಲಿ ಸಾವಿರಾರು ಜನ ಅಲ್ಲಲ್ಲೇ ಮಲವಿಸರ್ಜನೆ ಮಾಡಿ, ಸಮೀಪದಲ್ಲೇ ಸ್ನಾನ, ಅಡುಗೆ ಮಾಡುತ್ತಿದ್ದರು. ಮೇಲಿನಿಂದ ಹರಿದುಬರುತ್ತಿದ್ದ ನೀರಿನಲ್ಲಿ ಮಲ ತೇಲಿಬಂದರೂ ಜನ ಅದನ್ನು ದೂರಕ್ಕೆ ಸರಿಸಿ ಮುಳುಗು ಹಾಕುತ್ತಿದ್ದರು. ಅದೇ ನೀರಿನಲ್ಲಿ ಅಡುಗೆ ಮಾಡಿಕೊಳ್ಳುತ್ತಿದ್ದರು. ನಮ್ಮ ತಂಡವೂ ಅದನ್ನು ಅನುಸರಿಸಿತು. ಅಲ್ಲಿಂದ ನಡೆದು ಶಬರಿಮಲೆ ಸನ್ನಿಧಿಗೆ ಹೋದೆವು. ಅಲ್ಲಿ ಭಸ್ಮಕೊಳದಲ್ಲಿ ಸ್ನಾನ ಮಾಡಿ ದೇವರ ದರ್ಶನ. ಬೆಳಿಗ್ಗೆ 4 ಗಂಟೆಗೇ ಆ ಚಳಿಯಲ್ಲಿಯೂ ಕೆರೆಯಲ್ಲಿ ಸ್ನಾನಕ್ಕೆ ಇಳಿದೆ. ಮೇಲೆ ಬಂದಾಗ ದೇಹವೆಲ್ಲಾ ಮೂತ್ರದ ವಾಸನೆ. ಮುದುಕರು ಕೊಳದಲ್ಲಿ ಸ್ನಾನಕ್ಕೆ ಇಳಿದರೆ ಅವರಿಗೆ ಅರಿವಿಲ್ಲದೆಯೇ ಮೂತ್ರಶಂಕೆಯಾಗುತ್ತಿತ್ತು. ನಾನು ಅಲ್ಲಿಂದ ತೆರಳಿ ನೀರಿನ ಕೊಳವೆ ಇರುವಲ್ಲಿಗೆ ಹೋಗಿ ಸೋಪು ಹಾಕಿ ಮಿಂದೆ. ಬಿದಿರಿನ ತಟ್ಟಿ ಮಾಡಿ ಮೂರು ಅಂತಸ್ತಿನ ಮಲಗುವ ಮಂಚವನ್ನು ತಯಾರಿಸಿದ್ದರು. ಅದರಲ್ಲಿ ಮಲಗಿದೆ. ರಾತ್ರಿಯಲ್ಲಿ ನಾಲ್ಕಾರು ರಕ್ತ ಹೀರುವ ಎರಡು ತಲೆಯ ಚೇಳುಗಳು ಕಚ್ಚಿದವು. ನಾನು ಹೋದ ಸಂದರ್ಭದಲ್ಲಿ ಅಲ್ಲಿ ನಮ್ಮೂರಿನ (ಪಡುಬಿದ್ರೆಯ) ಅರ್ಚಕರು ಇದ್ದರು. ತುಪ್ಪ ಅಭಿಷೇಕ, ಭಸ್ಮ ಅಭಿಷೇಕ ಅಲ್ಲಿ ಪ್ರಧಾನ ಸೇವೆಗಳು. ತೆಂಗಿನಕಾಯಿಯಲ್ಲಿ ತುಪ್ಪ ತುಂಬಿಸಿ ಇರುಮುಡಿ ಕಟ್ಟಿ ಅಲ್ಲಿಗೆ ತೆರಳಿದವರು ಅಲ್ಲಿ ಕಾಯಿಯನ್ನು ಒಡೆದು ತುಪ್ಪವನ್ನು ಬೇರ್ಪಡಿಸಿ ಪಾತ್ರೆಯಲ್ಲಿ ಹಾಕಿ ಅಭಿಷೇಕಕ್ಕೆ ಒಪ್ಪಿಸಬೇಕು. ತುಪ್ಪ ತೆಗೆದ

ತೆಂಗಿನಕಾಯಿಯನ್ನು ಅಲ್ಲಿಯ ಹೋಮಕುಂಡದಲ್ಲಿ ಅರ್ಪಿಸಬೇಕು. ದೇವಳದ ಹದಿನೆಂಟು ಮೆಟ್ಟಿಲುಗಳ ಎದುರಲ್ಲಿ ಹೋಮಕುಂಡ ಇದೆ. ನಾನು ಮೊದಲ ಯಾತ್ರೆ ಮಾಡಿದ್ದ ವರ್ಷ, ಹೋಮಕುಂಡ ನೆಲದ ಒಳಗೆ ಇತ್ತು. ಅದಕ್ಕೆ ಯಾವುದೇ ಆವರಣ ಇರಲಿಲ್ಲ. ಭಕ್ತರು ಮುಕ್ತಿಗಾಗಿ ಆ ಕುಂಡಕ್ಕೆ ಹಾರಲು ಪ್ರಾರಂಭಿಸಿದಾಗ ಕುಂಡದ ಆವರಣ ಗೋಡೆ ಏರತೊಡಗಿತು. ಮುಕ್ಕನ ಬೇಲಿ ಹಾಕಿ ಹತ್ತು ಅಡಿ ಎತ್ತರ ಮಾಡಿದರು. ಈಗ ತೆಂಗಿನ ಕಾಯಿಯನ್ನು ಮೇಲಕ್ಕೆ ಬಿಸಾಡಬೇಕು. ಮೊದಲ ಸಾರಿ ಬಂದಾತ ಹದಿನೆಂಟು ಮೆಟ್ಟಿಲುಗಳನ್ನು ಏರಬೇಕಾದರೆ, ಮೊದಲ ಮೆಟ್ಟಿಲಿಗೆ ಕಾಯಿ ಒಡೆದು ಆಮೇಲೆ ಹತ್ತಬೇಕು. ದರ್ಶನ ಮಾಡಿ ಇಳಿಯುವಾಗ ಮೇಲಿನಿಂದ ಮೊದಲ ಮೆಟ್ಟಿಲಿಗೆ ತೆಂಗಿನ ಕಾಯಿ ಒಡೆದು ಇಳಿಯಬೇಕು. 2ನೆಯ ವರ್ಷಕ್ಕೆ 2ನೆಯ ಮೆಟ್ಟಿಲು. ಹೀಗೆ ಪ್ರತಿವರ್ಷ ಹೋಗುವವರು ಆಯಾಸಂಖ್ಯೆಯ ಮೆಟ್ಟಿಲಿಗೆ ಕಾಯಿ ಒಡೆಯಬೇಕು. ಇದು ಸಂಪ್ರದಾಯ. ಈಗ ಯಾತ್ರಿಕರ ಸಂಖ್ಯೆ ಜಾಸ್ತಿಯಾದ್ದರಿಂದ ಹೀಗೆ ಮಾಡಲು ಅವಕಾಶವಿಲ್ಲ. ನಾನು ಮೆಟ್ಟಲು ಹತ್ತಿ ಮೇಲೆ ಹೋದೆ. ಅರ್ಚಕರು ನನ್ನನ್ನು ಮಾತನಾಡಿಸಿದರು. ಪ್ರಧಾನ ಅರ್ಚಕರೂ ಕೂಡಾ ಗರ್ಭಗುಡಿಯ ಒಳಗಿನಿಂದ ಯಾವುದೇ ಭಕ್ತರಿಗೆ ಅಥವಾ ರಾಜಕಾರಣಿಗಳಿಗೆ ಪ್ರಸಾದ ನೀಡುವಂತಿಲ್ಲ. ಆದರೆ ಅರ್ಚಕರು ನನಗೆ ನೀಡಿದರು. ಇದನ್ನು ನೋಡಿದ ಇತರ ಭಕ್ತರು ಅರ್ಚಕರನ್ನು ತರಾಟೆಗೆ ತೆಗೆದುಕೊಂಡರು. ಆಗ ಅರ್ಚಕರು 'ಇವರು ನನ್ನ ಮನೆಯವರು. ನಾನೇನೂ ಭಕ್ತರಿಗೆ ಪ್ರಸಾದ ನೀಡಲಿಲ್ಲ. ಮನೆ ಮಂದಿಗೆ ನೀಡಿದ ಬಗ್ಗೆ ನೀವು ಆಕ್ಷೇಪ ವ್ಯಕ್ತಪಡಿಸುವುದು ಸರಿಯಲ್ಲ' ಎಂದು ಹೇಳಿ ಸಮಾಧಾನಪಡಿಸಿದರು. ಅಂತೂ ಯಾತ್ರೆ ಮುಗಿಸಿ ಎರ್ನಾಕುಲಂ ಜಿಲ್ಲೆಯ ತಿರುಪ್ಪುಣಾತ್ರಯ ನಮ್ಮ ಹೋಟೇಲಿಗೆ ಬಂದೆ. ಮುಂದೆ ಹಲವಾರು ಸಲ ಹೋಗಿಬಂದೆ.

ಬದರಿಯಾತ್ರೆ

ಪೇಜಾವರ ಮಠದ ಕಿರಿಯ ಯತಿ ವಿಶ್ವಪ್ರಿಯತೀರ್ಥರು ಹೃಷೀಕೇಶದಿಂದ ಬದರಿಕಾಶ್ರಮಕ್ಕೆ ಇರುವ ಸುಮಾರು ನೂರೈವತ್ತು ಮೈಲು ದೂರದ ದಾರಿಯನ್ನು ಕಾಲ್ನಡಿಗೆಯಲ್ಲಿ ಕ್ರಮಿಸುವ ಯಾತ್ರೆಯೊಂದನ್ನು ನಡೆಸಲು ನಿರ್ಧರಿಸಿ ತಮ್ಮೊಂದಿಗೆ ಬರಲು ಬಯಸುವವರಿಗೂ ಯಾತ್ರೆಯ ಅವಕಾಶ ಮಾಡಿಕೊಟ್ಟರು. ನಾನೂ ಹಾಗೂ ಪ್ರದೀಪ್ ಕಲ್ಕೂರ (ಕ.ಸಾ.ಪ. ದ.ಕ. ಘಟಕಾಧ್ಯಕ್ಷ) ಸಹಿತ ಸುಮಾರು ನೂರು ಜನ ಪಾದಯಾತ್ರೆಯಲ್ಲಿ ಸೇರಿಕೊಂಡೆವು. ರಾತ್ರಿಯಲ್ಲಿ ಕಾಡಿನಲ್ಲೇ ವಾಸ್ತವ್ಯ. ಹೊಳೆಯ ಬದಿಯಲ್ಲಿ ಅಡುಗೆ, ಪೂಜೆ, ಪ್ರಸಾದ. ಅಂತೂ ಬದರಿ ಕ್ಷೇತ್ರದ ದೇವರ ದ್ವಾರ ತೆರೆಯುವುದಕ್ಕೆ ಇನ್ನು ಎರಡು ದಿನಗಳಿರುವಾಗ ಅಲ್ಲಿಗೆ ತಲುಪಿದೆವು. ಅಲ್ಲಿ ನೀರು, ವಿದ್ಯುತ್ ಯಾವುದೂ ಇಲ್ಲ. ಕೊರೆಯುವ ಚಳಿ. ಎಲ್ಲಾ ಭಕ್ತರು, ಅಧಿಕಾರಿಗಳು, ಅರ್ಚಕರು ಮರುದಿನವೇ (ಬಾಗಿಲು ತೆರೆಯುವ ದಿನವೇ) ಅಲ್ಲಿಗೆ ಬರಬೇಕು. ನಾವು ಅಲ್ಲಿ ಪೇಜಾವರ ಮಠದಲ್ಲಿ ತಂಗಿದೆವು. ದ್ವಾರ ತೆರೆಯುವ ದಿನ ಬೆಳಗ್ಗೆ ಸ್ನಾನ ಮಾಡಿ ಮಡಿಯುಟ್ಟುಕೊಂಡು ದೇವರ ದ್ವಾರದ ಬಳಿ ನಿಂತು ಸಹಸ್ರನಾಮ ಪಠಿಸುತ್ತಿದ್ದೆವು. ಸಾವಿರಾರು ಜನರು ಸರತಿ ಸಾಲಿನಲ್ಲಿ ನಿಂತಿದ್ದರು. ಆರು ತಿಂಗಳ ಹಿಂದೆ ಮುಚ್ಚಿದ್ದ ಬಾಗಿಲನ್ನು ತೆರೆದಾಗ ಅರ್ಚಕರ ಜೊತೆ ಮೊದಲ ದರ್ಶನ ಮಿಲಿಟರಿ ಅಧಿಕಾರಿಗಳಿಗೆ. ಯಾವುದೇ ರಾಜಕಾರಣಿಗಳಿಗೆ ಗಣ್ಯಾತಿಗಣ್ಯರಿಗೆ ಅವಕಾಶವಿಲ್ಲ. ಒಂಭತ್ತು ಗಂಟೆ ಹೊತ್ತಿಗೆ ಎರಡು ಹೆಲಿಕಾಪ್ಟರ್‌ಗಳಲ್ಲಿ ಮಿಲಿಟರಿ ಕಮಾಂಡರ್‌ಗಳು ಬಂದರು. ಒಳಗೆ ಹೋಗುವ ದ್ವಾರದ ಬಾಗಿಲಿನ ಪಕ್ಕದಲ್ಲಿ ನಾವಿಬ್ಬರೂ ಮಂತ್ರ ಪಠಿಸುತ್ತಾ ನಿಂತಿದ್ದೆವು. ಒಳಗೆ ಹೋಗದೆ ಮೊದಲು ತಿರುಗಿ ನೋಡಿದ ಅಧಿಕಾರಿಗಳು 'ಆವೋ ಭಾಯಿ' ಎಂದು ನಮ್ಮ ಹೆಗಲಿಗೆ

ಕ್ಕೆ ಹಾಕಿ ನಮ್ಮನ್ನು ಒಳಗೆ ಕರೆದುಕೊಂಡು ಹೋದರು. ದ್ವಾರ ತೆರೆದಾಗ ಆರು ತಿಂಗಳ ಮೊದಲು ಉರಿಸಿದ್ದ ನಂದಾದೀಪ ಉರಿಯುತ್ತಲೇ ಇತ್ತು. ಹೀಗೆ ಅಧಿಕಾರಿಗಳ ಜೊತೆ, ಮೊದಲ ದರ್ಶನ ನಮಗಾಯಿತು. ಮನುಷ್ಯನಿಗೆ ಇದಕ್ಕಿಂತ ದೊಡ್ಡ ಭಾಗ್ಯ ಇನ್ನೇನಿದೆ. ಅರ್ಚಕರು ಕೇರಳೀಯರು. ಮೊದಲ ಪ್ರಸಾದ ಪಡೆದ ಧನ್ಯತೆ ನಮಗೆ. ಅಲ್ಲಿಂದ ಮರುದಿನ ವ್ಯಾಸ ಗುಹೆದರ್ಶನ. ಅಲಕಾನಂದ ನದಿ, ಗುಪ್ತಗಾಮಿನಿ ಸರಸ್ವತಿ, ಅಲ್ಲಿಯವರೆಗೆ ಹರಿದು ಬಂದು ಗುಪ್ತವಾಗಿ ಅಲ್ಲಿಂದ ಮುಂದುವರಿಯುವುದನ್ನು ನೋಡಿದೆವು. ಚೀನಾದ ಗಡಿಯಲ್ಲಿರುವ ವಸುಧಾರಾ ಎಂಬ ಸ್ಥಳಕ್ಕೆ ನಾವು ಕೇವಲ ನಾಲ್ಕಾರು ಜನರು ಅಲ್ಲಿಗೆ ಹೋದೆವು. ಅಲ್ಲಿಗೆ ಪ್ರವೇಶ ನಿಷೇಧಿಸಿದ್ದಾರೆ. ಅಲ್ಲಿ ಎಲ್ಲಾ ಪ್ರದೇಶವೂ ಹಿಮಮಯ; ಮಣ್ಣು ಕಾಣುವುದಿಲ್ಲ. ಕಾಲು ಜಾರಿದರೆ ವೈಕುಂಠವೇ ಗತಿ! ನಾವು ಅಲ್ಲಿ ಹೋಗಿ ದರ್ಶನ ಮಾಡಿ ಹಿಂತಿರುಗಿದುದೇ ದೇವರ ದಯೆಯಿಂದ. ವಸುಧಾರಾದಲ್ಲಿ ನಿಂತು ನೋಡಿದರೆ ಪರ್ವತದಿಂದ ಮಂಜುಗಡ್ಡೆಗಳು ಉರುಳಿ ಬರುತ್ತಿವೆ. ಭಯದ ವಾತಾವರಣ. ನಾವು ನಮ್ಮ ವಸತಿಗೆ ಹಿಂದಿರುಗಿ ಬಂದಾಗ ಎಲ್ಲರೂ ಆಕ್ಷೇಪಿಸಿದರು. ಒಟ್ಟಿಗೆ ಬಂದ ಅನಂತರ ಈ ರೀತಿ ಬೇರೆಯಾಗಿ ಹೋಗಬಾರದೆಂದು ಎಚ್ಚರಿಸಿದರು. ಅಲ್ಲಿಂದ ಬಸ್ಸಿನಲ್ಲಿ ಹಿಂದಿರುಗಿದೆವು. ಮತ್ತೆ ಕೇದಾರನಾಥಕ್ಕೆ ನಡಿಗೆ. ನಮ್ಮೊಡನೆ ಜಯಪ್ರಕಾಶ್ ಇಂಜಿನೀಯರ್, ಭೂವರಾಹ ಪುರಾಣಿಕರೂ ಇದ್ದರು. ಅವರು 'ಕುದುರೆ ಹತ್ತಿ ಹೋಗುವ' ಎಂದರೆ, ನಾನು 'ನಡೆದುಕೊಂಡೇ ಹೋಗುವ' ಎಂದೆ. ಅವರಿಗೆ ಅಸಮಾಧಾನವಾದರೂ ನಮ್ಮೊಡನೆ ನಡೆದುಕೊಂಡೇ ಕೇದಾರನಾಥಕ್ಕೆ ಬಂದರು. ಅಲ್ಲಿ ದೇವರನ್ನು ಮುಟ್ಟಿ ಪೂಜಿಸುವ ಅವಕಾಶವಿದೆ. ಅಲ್ಲಿಂದ ಹೃಷೀಕೇಶದ ಪೇಜಾವರ ಮಠಕ್ಕೆ ಹಿಂತಿರುಗಿದೆವು. ಆ ದಾರಿಯನ್ನು ನೆನೆದರೆ ನಮಗೆ ಈಗಲೂ ಭಯವಾಗುತ್ತಿದೆ. ನಮ್ಮ ಮುಂದುಗಡೆಯೇ ಗುಡ್ಡ ಜರಿದು ವಾಹನವೊಂದು ಪಾತಾಳಕ್ಕೆ ಹೋದದ್ದನ್ನೂ ಕಂಡಿದ್ದೆವು. ಆ ಜಾಗಕ್ಕೆ ಯಾರಿಗೂ ಹೋಗಲು ಸಾಧ್ಯವಾಗದೆ ಇದ್ದದ್ದು ಬೇಸರ ತಂದಿತು. ಅಂತೂ ಯಾತ್ರೆ ಮುಗಿಸಿ ಡೆಲ್ಲಿ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗಿದೆವು.

ಇನ್ನೊಮ್ಮೆ ಬದರಿ ಯಾತ್ರೆ

ನಮ್ಮ ಮಾತೃಶ್ರೀಯವರಾದ ಲಕ್ಷ್ಮೀ ಅಮ್ಮನವರು 90 ವರ್ಷಗಳ ಸಾರ್ಥಕ ಜೀವನವನ್ನು ಬಾಳಿ ಕಾಲಾಧೀನರಾದರು. ಅವರ ಮರಣ ಸಂಭವಿಸಿದ ಒಂದು ವರ್ಷದ ಒಳಗೆ ಅವರ ಅಸ್ಥಿಯನ್ನು ಕಾಶಿಗೆ ಹೋಗಿ ಗಂಗೆಯಲ್ಲಿ ವಿಲೀನಗೊಳಿಸಬೇಕು. ನಮ್ಮ ದೊಡ್ಡ ಅಣ್ಣ ವೆಂಕಟೇಶರಾವ್, ಇನ್ನೊಬ್ಬ ಅಣ್ಣ ರಾಮಮೂರ್ತಿರಾವ್, ಅವರ ಪತ್ನಿ ಸಾವಿತ್ರಿ, ನನ್ನ ಮಡದಿ ಉಷಾರಾಣಿ, ನಮ್ಮ ಕುಲಗುರುಗಳಾದ ಸುಬ್ರಹ್ಮಣ್ಯ ಆಚಾರ್ಯರು ಹೀಗೆ ಆರು ಮಂದಿ ವಿಮಾನದಲ್ಲಿ ಕಾಶಿಗೆ ಹೊರಟೆವು. ಅಲ್ಲಿ ನನ್ನ ಅಳಿಯ (ಅಕ್ಕನ ಮಗ) ಎ.ವಿ.ಕೆ. ಮೂರ್ತಿ ವಿಜಯ ಬ್ಯಾಂಕಿನ ಮ್ಯಾನೇಜರ್‌ನ ಮನೆಗೆ ಹೋದೆವು. ಅವರಿಗೆ ಅಲ್ಲಿ ಎಲ್ಲರ ಪರಿಚಯವಿತ್ತು. ಹಿಂದಿ ಭಾಷೆಯೂ ಗೊತ್ತು. ಕಾಶಿ ವಿಶ್ವನಾಥ ದೇವಾಲಯಕ್ಕೆ ತೆರಳಿ ಗಂಗೆಯಲ್ಲಿ ಅಸ್ಥಿ ವಿಸರ್ಜನೆ, ಪಿಂಡಪ್ರದಾನ ವಿಧಿಗಳನ್ನು ನೆರವೇರಿಸಿದೆವು. ಅಲ್ಲಿಂದ ಗಯಾಕ್ಕೆ ತೆರಳಿ ಧಾರ್ಮಿಕ ವಿಧಿಗಳನ್ನು ಮುಗಿಸಿದೆವು. ವಿಧಿಗಳು ಸರಿಯಾಗಿ ನಡೆದಿವೆ ಎಂದು ಆಶೀರ್ವಾದ ಮಾಡಲು ಅಲ್ಲಿಯ ಅರ್ಚಕರಿಗೆ ತೃಪ್ತಿಯಾಗುವಷ್ಟು ದಕ್ಷಿಣೆ ಸಲ್ಲಿಸಬೇಕು! ಅಲ್ಲಿಂದ ಅಯೋಧ್ಯೆಗೆ ಪ್ರಯಾಣಿಸಿ ರಾಮಜನ್ಮಭೂಮಿಯನ್ನು ಸಂದರ್ಶಿಸಿದೆವು. ಅಲ್ಲಿಂದ ಮುಂದೆ ಪ್ರಯಾಣ ಕೈಗೊಂಡು ಹೃಷಿಕೇಶ, ಬದರಿ, ಕೇದಾರಗಳನ್ನು ದರ್ಶನ ಮಾಡಿದೆವು. ಹೀಗೆ ಎರಡನೆಯ ಬಾರಿ ಕುಟುಂಬಿಕರೊಂದಿಗೆ ಬದರಿಗೆ

ಹೋಗಿಬರುವ ಅವಕಾಶ ದೊರಕಿತು. ಆ ದಾರಿಯಲ್ಲಿ ಹೋಗಿ ಹಿಂತಿರುಗಿದರೆ, ಅದೇ ಪುನರ್‌ಜನ್ಮ! ಹೋಗುವಾಗ ಬಲಕ್ಕೆ ಎತ್ತರದ ಗುಡ್ಡ. ಎಡಕ್ಕೆ ಕಣಿವೆ. ಗುಡ್ಡ ಜರಿದರೂ ಕಣಿವೆಗೆ ವಾಹನ ಬಿದ್ದರೂ ಅಲ್ಲಿಗೆ ಜನ್ಮ ಮುಗಿದಂತೆಯೇ ಸರಿ!

ಕಾಶಿಯಲ್ಲಿಯ ಅನುಭವ

ಕಾಶಿ ವಿಶ್ವನಾಥ ಮಂದಿರದ ಮುಂದುಗಡೆ ಮಸೀದಿ ಇದೆ. ಅದಕ್ಕೆ ನೂರಾರು ಪೋಲೀಸರ ಸರ್ಪಗಾವಲು. ದೇವಾಲಯಕ್ಕೆ ಹೋಗುವ ದಾರಿಯೂ ಸರಿ ಇಲ್ಲ. ನನ್ನ ಅಳಿಯನೇ ವಿಜಯ ಬ್ಯಾಂಕಿನ ಮ್ಯಾನೇಜರ್ ಆದ ಕಾರಣ, ಅಲ್ಲಿಯ ಅರ್ಚಕರ ವ್ಯವಹಾರ ಅದೇ ಬ್ಯಾಂಕಿನಲ್ಲಿರುವುದರಿಂದ, ದೇವಸ್ಥಾನದಲ್ಲಿ ನಮಗೆ ರಾಜ ಮರ್ಯಾದೆ. ಸರತಿ ಸಾಲಿನಲ್ಲಿ ನಿಲ್ಲಬೇಕೆಂದಿಲ್ಲ. ಅಲ್ಲಿ ಹಲವಾರು ಬಾರಿ ದೇವರ ದರ್ಶನ, ಪೂಜೆ, ಅಭಿಷೇಕ ಮಾಡಿಸಿದೆವು. ಮರುದಿನ ನಮಗೆ ರೈಲಿನಲ್ಲಿ ಅಯೋಧ್ಯೆಗೆ ಹೋಗಬೇಕಿತ್ತು. ಟಿಕೇಟು ಕಾದಿರಿಸಿದೆವು. ಬೆಳಗ್ಗೆ ಹನ್ನೆರಡು ಗಂಟೆಗೆ ರೈಲು. ನಾವು ಹೊರಡುವ ದಿನ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ವಾರಣಾಸಿಗೆ ಬಂದು ಭಾಷಣ ಮಾಡಲಿದ್ದರು. ಲಕ್ಷಾಂತರ ಜನರು ಸೇರಿದ್ದಾರೆ. ರಸ್ತೆಯಲ್ಲಿ ಯಾವುದೇ ವಾಹನ ಸಂಚಾರವಿಲ್ಲ. ಸಾವಿರಾರು ಪೋಲೀಸರು ಕಾವಲು ಕಾಯುತ್ತಿದ್ದರು. ಅವರೆಲ್ಲರ ಕೈಯಲ್ಲೂ ಬಂದೂಕು. ಆದರೆ ಅವರ ಮಾತನ್ನು ಯಾರೂ ಕೇಳುತ್ತಿರಲಿಲ್ಲ. ಜನರು ಅವರನ್ನು ದಬ್ಬಿಕೊಂಡೇ ಹೋಗುತ್ತಿದ್ದರು! ನಮಗೆ ರೈಲಿನ ಸಮಯವಾಯಿತು. ನಡೆದು ಹೋಗೋಣವೆಂದರೆ ಬಲುದೂರ. ಕೈಯಲ್ಲಿ ನಮ್ಮ ಸರಂಜಾಮುಗಳು. ವಾಹನದಲ್ಲಿ ಹೋಗಲು ಸಾಧ್ಯವಿಲ್ಲ. ಆ ದಿನ ಹೋಗದಿದ್ದರೆ ನಮ್ಮ ಎಲ್ಲಾ ಪ್ರಯಾಣ ಏರುಪೇರಾಗುತ್ತದೆ. ನಾವು ದೇವರನ್ನೇ ಧ್ಯಾನಿಸಿದೆವು. ಆ ಸಮಯದಲ್ಲಿ ಒಬ್ಬ ಭಯ್ಯಾ (ಹಾಲಿನ ವ್ಯಾಪಾರಿ) ನಮ್ಮ ಹತ್ತಿರ ಬಂದು ಏನಾಗಬೇಕೆಂದು ವಿಚಾರಿಸಿದ. ನಾವು ನಮ್ಮ ಕಷ್ಟವನ್ನು ತಿಳಿಸಿದೆವು. ನೀವು ಐದುನೂರು ರೂಪಾಯಿ ಕೊಡುವುದಾದರೆ ನಿಮ್ಮ ವಾಹನವನ್ನು ಈ ಜನಜಂಗುಳಿಯ ಮಧ್ಯದಿಂದಲೇ ದಾಟಿಸುವುದಾಗಿ ಹೇಳಿದ. ನಾವು ಒಪ್ಪಿದೆವು. ಆತ ತನ್ನ ಹಟ್ಟಿಯಿಂದ ಹತ್ತು ಕರೆಯುವ ಎಮ್ಮೆಗಳನ್ನು ರಸ್ತೆಗೆ ಹೊಡೆದುಕೊಂಡು ಬಂದ. ನಾನು ಇದನ್ನು ಮುಂದುಗಡೆ ಓಡಿಸಿಕೊಂಡು ಹೋಗುತ್ತೇನೆ. ನೀವು ಇದರ ಹಿಂದಿನಿಂದ ಕಾರಿನಲ್ಲಿ ಬನ್ನಿರಿ ಎಂದು ಹೇಳಿದ. ನಾವು ಹಾಗೆಯೇ ಮಾಡಿದೆವು. ಅಂತೂ ನಾವು ಸಮಯಕ್ಕೆ ಸರಿಯಾಗಿ ರೈಲ್ವೆ ಸ್ಟೇಶನ್‌ಗೆ ಹೋಗಲು ಸಾಧ್ಯವಾಯಿತು. ಪೋಲೀಸರಿಂದ ಮಾಡಲಾಗದ ಕೆಲಸವನ್ನು ಒಬ್ಬ ಭಯ್ಯಾ ಮಾಡಿದ. ಜೊತೆಗೆ ನಾವು ಆ ಸಭೆಯನ್ನು ದಾಟಿದ ಅನಂತರ 'ನಿಮಗೆ ಸಮಾಧಾನವಾದರೆ ಮಾತ್ರ ಹಣ ನೀಡಿ' ಎಂದ. ಅವನ ನಿಯತ್ತಿಗೆ ಮೆಚ್ಚಿದೆವು. ಶ್ರೀರಾಮನ ದರ್ಶನಕ್ಕೆ ಹೊರಟವರಿಗೆ ಶ್ರೀರಾಮಚಂದ್ರನೇ ಭಯ್ಯನ ರೂಪದಲ್ಲಿ ಬಂದು ದಾರಿ ಬಿಡಿಸಿದ, ಅನ್ನಿಸಿತು.

ಆಸ್ತಿಗಾಗಿ ಹೋರಾಟ

ಊರಲ್ಲಿದ್ದ ತಂದೆಯವರ ಆಸ್ತಿ ಭೂಮಸೂದೆಯಿಂದಾಗಿ ಕೈತಪ್ಪಿ ಹೋಗುತ್ತಿದೆ ಎಂಬ ಸುದ್ದಿ ತಿಳಿದಾಗ ಊರಿಗೆ ಬಂದೆ (1974).

ನಮ್ಮ ಮನೆಯ ಪಕ್ಕದಲ್ಲೇ ಶೀನಪ್ಪ ಪೂಜಾರಿ ಎಂಬವನಿಗೆ ಸುಮಾರು ಮೂರು ಎಕ್ರೆಗಳಷ್ಟು ಜಾಗವನ್ನು ಗೇಣಚೀಟಿಯ ಮೂಲಕ ಹಾಗೂ ಸುಮಾರು ನಾಲ್ಕು ಎಕ್ರೆಗಳಷ್ಟು ಸ್ಥಳವನ್ನು ಬಾಯ್ಮಾತಿನ ನಂಬಿಕೆಯ ಮೇಲೆ ಸಾಗುವಳಿಗೆಂದು ಕೊಟ್ಟಿದ್ದೆವು. ಅವನು ವರ್ಷಕ್ಕೆ 33 ಮುಡಿ (ಒಂದು ಮುಡಿ ಎಂದರೆ

42 ಸೇರು) ಅಕ್ಕಿಯನ್ನು ನಮಗೆ ಒಪ್ಪಿಸಬೇಕಿತ್ತು. ಅವನಲ್ಲಿ ದಾಖಲೆ ಇರದಿದ್ದರೂ ನಮ್ಮ ಅಣ್ಣ ವೆಂಕಟೇಶರಾಯರು ಗೇಣಿಅಕ್ಕಿ ಸಂದ ಬಗ್ಗೆ ರಶೀದಿ ನೀಡುತ್ತಿದ್ದರು.

ಕಾಯ್ದೆ ಬಂದೊಡನೆ ಶೀನಪ್ಪ ಪೂಜಾರಿ ಗುಡ್ಡ, ಬಯಲು ಎಲ್ಲ ಸೇರಿ ಸುಮಾರು 15 ಎಕ್ರೆಗಳಷ್ಟು ಜಾಗಕ್ಕೆ ಡಿಕ್ಲರೇಶನ್ ಕೊಟ್ಟ. ಆಗ ನಾನು– 'ನೋಡು, ನಿನ್ನಲ್ಲಿ ಈಗ ದಾಖಲೆಯಲ್ಲಿ ಕಾಣಿಸಿರುವ ಮತ್ತು ಕಾಣಿಸದೇ ಇರುವ ಸುಮಾರು ಆರು ಎಕ್ರೆ ಜಾಗ ಉಂಟು. ಆರು ಲಕ್ಷ ರೂಪಾಯಿ ಕೊಡುತ್ತೇನೆ. ಜಾಗ ಬಿಟ್ಟು ಕೊಡು' ಎಂದು ಹೇಳಿದೆ. 'ಈಗ ಎಕ್ರೆಗೆ ಒಂದು ಲಕ್ಷ ರೂಪಾಯಿ ಕೊಡುವವರು ಯಾರೂ ಇಲ್ಲ. ನಾನು ಕೊಡುತ್ತೇನೆ' ಎಂದೂ ಹೇಳಿದೆ. ಅವನು ಒಪ್ಪಲಿಲ್ಲ.

ಆ ದಿನಗಳಲ್ಲಿ ಬಿಲ್ಲವ ಸಂಘಟನೆ ಬಹಳ ಪ್ರಬಲವಾಗಿತ್ತು. ಮೂಲ್ಕಿ-ಮೂಡಬಿದಿರೆ ಕ್ಷೇತ್ರಕ್ಕೆ ಶಾಸಕರಾಗಿದ್ದವರು ಬಿಲ್ಲವ ಸಮಾಜದ ಮುಖಂಡರೇ ಆಗಿದ್ದ ದಾಮೋದರ ಮೂಲ್ಕಿಯವರು. 1974ರ ಅಗಸ್ಟ್ 15ರಂದು ಮಂಗಳೂರಿನಿಂದ ಸುಮಾರು 50 ಜನರನ್ನು ಕರೆದುಕೊಂಡು ಹೋಗಿ ನಾವು ನೀಡದೆ ಇದ್ದಿದ್ದ ಜಾಗದಲ್ಲಿ ಶೀನಪ್ಪ ಪೂಜಾರಿ ಅನಧಿಕೃತವಾಗಿ ಕಟ್ಟಿಕೊಂಡಿದ್ದ ಹಟ್ಟಿ (ಕೊಟ್ಟಿಗೆ) ಯನ್ನು ನೆಲಸಮ ಮಾಡಿಸಿದೆ. ಪೊಲೀಸರು ನಮ್ಮ ಅಣ್ಣನನ್ನು ಬಂಧಿಸಿದರು. ನಾನು ತಪ್ಪಿಸಿಕೊಂಡೆ. ಆಮೇಲೆ ಮೂಡಬಿದಿರೆಯ ಮಿತ್ರರಾದ ಅಮರನಾಥ ಶೆಟ್ಟರ (ಮುಂದೆ ಇವರು ಇದೇ ಕ್ಷೇತ್ರದ ಶಾಸಕರಾದರು) ಪ್ರಯತ್ನದಿಂದ ಕೇಸನ್ನು ಬರಖಾಸ್ತು ಮಾಡಿದೆವು. ಕಾರ್ಕಳದ ವಕೀಲ ವಿಜಯಕುಮಾರರನ್ನೂ ಈ ಸಂದರ್ಭದಲ್ಲಿ ಸಂಪರ್ಕಿಸಿದ್ದೆವು. ಈ ಸಂದರ್ಭದಲ್ಲಿ ತಾನು ನೆರವಾಗುವನೆಂದು ಹೇಳಿದ್ದ ನಮ್ಮ ಹತ್ತಿರದ ಬಂಧುವೊಬ್ಬರು (ಅವರೂ ವಕೀಲರೇ) ತಾನು ಹೇಳಿದಂತೆ ನಡೆಯದೆ ನಮ್ಮನ್ನು ಪೆಚ್ಚಾಗಿಸಿದರು.

ಕಾಂಗ್ರೆಸ್ ಮುಖಂಡ!

1975ರಲ್ಲಿ ನಾನು ಯುವ ಕಾಂಗ್ರೆಸ್ ಮುಖಂಡನಾಗಿದ್ದೆ. ಆ ವರ್ಷ ಮಂಗಳೂರು ಬಂದರಿನ ಉದ್ಘಾಟನೆ. ಉದ್ಘಾಟನೆ ನೆರವೇರಿಸಿದವರು ಆಗಿನ ನೌಕಾಯಾನ ಸಚಿವ ಥಿಲ್ಲಾನ್ ಅವರು. ಆ ಸಮಯದಲ್ಲಿ ಹಲವು ಮಂದಿ ಕಾಂಗ್ರೆಸ್ ಯುವಕರು ನನ್ನೊಂದಿಗೆ ಇದ್ದರು. ಜೋಕಟ್ಟೆ ಇಬ್ರಾಹಿಂ ಅವರೂ ಈ ಯುವಕರ ಗುಂಪಿನಲ್ಲಿ ಇದ್ದರು. ಎಲ್ಲ ಮುಖಂಡರಿಗೂ ನಾನೇ 'ಪೋಷಕ'. ಆದುದರಿಂದ ನಾನೇ ಮುಖಂಡ! ಸಚಿವರು ಬಜಪೆಗೆ ವಿಮಾನದಲ್ಲಿ ಆಗಮಿಸಿದಾಗ ಅವರನ್ನು ಹಾರ ಹಾಕಿ ಬರಮಾಡಿಕೊಂಡವನು ನಾನೇ. ಮುಂದೆ ಬಂದರಿನ ಉದ್ಘಾಟನೆ ಕಾರ್ಯಕ್ರಮ. ಅದರ ಬಳಿಕ ಬಂದರನ್ನು ವೀಕ್ಷಿಸುವ ಸಮಯದಲ್ಲೂ ನಾವೆಲ್ಲ ಸಚಿವರ ಜೊತೆಗೇ ಇದ್ದೆವು. ಈಗಿನ ರಾಜಕೀಯ ಸಂದರ್ಭದಲ್ಲಿ ಸಚಿವರೊಬ್ಬರು ಭೇಟಿಗೆಂದು ಒಂದು ಕಡೆಗೆ ಬಂದಾಗ ಅವರ ಜೊತೆಗೆ ಹಿಂದಿನಷ್ಟು ನಿಕಟವಾಗಿ ಓಡಾಡುವುದು ಸಾಧ್ಯವಾಗದ ಮಾತು.

ಯುವ ಕಾಂಗ್ರೆಸ್ ಮುಖಂಡರಾಗಿ ರಘುಪತಿ, ಗುಂಡೂರಾವ್ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ವಾರಕ್ಕೆರಡು ಬಾರಿ ನಮ್ಮ ಮರಿ ರಾಜಕಾರಣಿಗಳನ್ನು ಬೆಂಗಳೂರಿಗೆ ನನ್ನ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದೆ. ಖರ್ಚು ವೆಚ್ಚಗಳನ್ನು ನಾನೇ ಭರಿಸಬೇಕಾಗಿತ್ತು. ಗುಂಡೂರಾಯರ ಮನೆಯಲ್ಲಿ ಇಬ್ರಾಹಿಂ ಅವರಿಗೆ ರಾಜ್ಯಸಭಾ ಸದಸ್ಯತನ ನೀಡುವಂತೆ ಒತ್ತಾಯ. ಇಬ್ರಾಹಿಂ ಅವರು ಆಗ ಕೋರ್ಟಿನಲ್ಲಿ ಎ.ಪಿ.ಸಿ. ಆಗಿ ಕೆಲಸ ಮಾಡುತ್ತಿದ್ದರು. ರಾಜ್ಯಸಭೆಯ ಸದಸ್ಯತ್ವ ದೊರಕಿಸಿಕೊಳ್ಳುವ ಪ್ರಯತ್ನದಿಂದಾಗಿ ಆ ಕೆಲಸವನ್ನು ಬಿಟ್ಟರು. ಆಮೇಲೆ ಇಲ್ಲಿ ಏನೂ ಕೆಲಸ ದೊರಕದೆ

ಇದ್ದಾಗ ಟಿ.ಎ. ಪೈಗಳನ್ನು ಕಂಡು ಗೋವಾದಲ್ಲಿ ಒಂದು ಕೆಲಸ ದೊರಕಿಸಿಕೊಂಡರು. ಅಲ್ಲಿಗೆ ಹೋಗಲು ಅವರಿಗೆ ನನ್ನ ವಾಹನವನ್ನೇ ನೀಡಿದ್ದೆ. ಮುಂದೆ ಅವರಿಗೆ ರಾಜ್ಯಸಭಾ ಸದಸ್ಯತ್ವ ದೊರಕಿತು. ಮುಂದೆ ರಾಜಕಾರಣಗಳ ಖರ್ಚು ವೆಚ್ಚಗಳನ್ನು ಭರಿಸುವುದು ನನ್ನಿಂದ ಆಗದ ಕಾರಣದಿಂದ ರಾಜಕಾರಣದಿಂದಲೇ ದೂರವಾದೆ!

ಧಾರ್ಮಿಕ ಸೇವೆಯಲ್ಲಿ

ಮೂಲ್ಕಿಯ ಸಮೀಪದ ಊರಾದ ಮುಕ್ಕದ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದಾಗ ನಡೆದ ಸಂಗತಿ ಇದು. ಬ್ರಹ್ಮಕಲಶದ ಹೊತ್ತಿಗೆ ಗರ್ಭಗುಡಿಯ ಕಳಸ(ಶಿಖರ)ವನ್ನು ಏರಿಸುವಾಗ ಕಳಸದ ಒಳಗಿನ ಸಲಾಕಿ ಉದ್ದವಾಗಿದ್ದುದರಿಂದ ಕಳಸ ಅರ್ಧದಲ್ಲೇ ನಿಂತಿತು. ಅದನ್ನು ತುಂಡರಿಸಿ ಚಿಕ್ಕದಾಗಿಸಲು ರಾತ್ರಿಯ ಹೊತ್ತಿನಲ್ಲಿ ಯಾರೂ ಸಿಗಲಿಲ್ಲ. ಬಹಳ ಪ್ರಯಾಸದಿಂದ ಸರಳನ್ನು ತುಂಡರಿಸಿ ಕಳಸವನ್ನು ಸರಿಯಾಗಿ ಇರಿಸಲು ಹರಸಾಹಸ ಮಾಡಬೇಕಾಯಿತು.

ಆ ದೇವಳದ ಮೊಕ್ತೇಸರರು ಸಾಯಂಕಾಲ ನಾಲ್ಕು ಗಂಟೆಗೆ ಮೊದಲು ಪ್ರಸಾದ (ಊಟ)ದ ವ್ಯವಸ್ಥೆಗೆ ಮುಂದಾಗುತ್ತಿರಲಿಲ್ಲ! ಇಲ್ಲಿ ನನ್ನ ಜವಾಬ್ದಾರಿ. ಆಗ ನಮ್ಮ ಪುನರೂರಿನಲ್ಲಿ ವೇದಪಾಠಶಾಲೆಯನ್ನು ವಿಶ್ವೇಶ್ವರ ಭಟ್ಟರು ನಡೆಸುತ್ತಿದ್ದರು. ಅಲ್ಲಿನ 20 ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ವೇದಪಠನ ಮಾಡಿಸಿದೆ. ಸರಿಯಾಗಿ 12 ಗಂಟೆಗೆ ಪಲ್ಲಪೂಜೆ(ಅನ್ನದ ರಾಶಿಗೆ ಪೂಜೆ) ಮುಗಿಸಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆಯನ್ನು ಬಿಟ್ಟುಕೊಟ್ಟೆ. ಒಳಗಿನಿಂದ ಬ್ರಾಹ್ಮಣರಿಗೆ ಬೇರೆಯ ಅಡುಗೆಯಾಗಿತ್ತು. ಬ್ರಾಹ್ಮಣರ ಸಂಖ್ಯೆ ನಿರೀಕ್ಷೆಗೂ ಮೀರಿತ್ತು. ಮೊದಲ ಸುತ್ತಿಗೆ ಅನ್ನ ಬಡಿಸುವಾಗಲೇ ಖಾಲಿಯಾಯಿತು. ಊಟಕ್ಕೆ ಕುಳಿತಾಗಿದೆ, ಆಗಲೇ ಅನ್ನ ತಯಾರಿಸಲು ಸಾಧ್ಯವೆ? ಒಂದು ಉಪಾಯ ಮಾಡಿದೆವು. ಹಿಂದಿನ ಬಾಗಿಲಿನಿಂದ ಸಾರ್ವಜನಿಕ ಅನ್ನ ಸಂತರ್ಪಣೆಯ ಪಲ್ಲ(ರಾಶಿ)ದಿಂದ ಅನ್ನ ತಂದು ಬಡಿಸಿದೆವು. ಸಂಪ್ರದಾಯನಿಷ್ಠರಿಗೆ ಇದು ತಿಳಿಯಲಿಲ್ಲ.

ಪಂಕ್ತಿ ಜಗಳ

ಸುರತ್ಕಲ್ಲಿನ ಇಡ್ಯದ ದೇವಸ್ಥಾನದ ಬ್ರಹ್ಮಕಲಶ ಸಂದರ್ಭದಲ್ಲಿ ನಾಗಮಂಡಲ ಸಮಿತಿಯಲ್ಲಿ ನಾನಿದ್ದೆ. ಬ್ರಾಹ್ಮಣರಿಗೆ ಮತ್ತು ಸಾರ್ವಜನಿಕರಿಗಾಗಿ ಪ್ರತ್ಯೇಕ ಅಡುಗೆ ವ್ಯವಸ್ಥೆಯಾಗಿತ್ತು. ಬ್ರಾಹ್ಮಣರು ಮೊದಲು ಊಟ ಮುಗಿಸಿ ಉಳಿಕೆಯನ್ನು ನಮಗೆ ಬಡಿಸುತ್ತಾರೆ ಎಂಬ ಕೂಗು ಕೇಳಿಬರುತ್ತಿತ್ತು. ಅವರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಬಾರದೆಂದು ಒಂದು ವರ್ಗದ ಜನ ಬೊಬ್ಬಿಡುತ್ತಿದ್ದರು.

ಇದನ್ನು ಮನಗಂಡ ನಾನು 'ಸಾರ್ವಜನಿಕರಿಗೆ ಮೊದಲೇ ಹಾಕುವ. ಒಂದು ಬಾರಿ ಊಟ ಮುಗಿಸಿ ಹೋದರೆ ಮತ್ತೆ ಅಸಮಾಧಾನ ಇರುವುದಿಲ್ಲ' ಎಂದು ಸಲಹೆ ಇತ್ತೆ. ಕೆಲವು ಮಡಿವಂತರಿಗೆ ಅದು ಒಪ್ಪಿಗೆಯಾಗಲಿಲ್ಲ.

ದೇವಸ್ಥಾನದ ಸುತ್ತ ಬ್ರಾಹ್ಮಣರಿಗೆ ಎಲೆ ಹಾಕಿದರು. ಧ್ವಜ ಸ್ತಂಭದ ಬಳಿ ಒಬ್ಬ ವ್ಯಕ್ತಿ ಬಂದು ಕುಳಿತ. ಕೆಲವರು ಆತನನ್ನು ಸಮಾಧಾನಿಸಿ ಎಬ್ಬಿಸಲು ಪ್ರಯತ್ನಿಸಿದರು. ಆತ ಕೇಳಲಿಲ್ಲ. ಇನ್ನೊಬ್ಬ ಬಂದು ಆತನ ಮುಂದೆ ಬಡಿಸಿದ ಎಲೆಯನ್ನು ಎತ್ತಿಬಿಟ್ಟ. ಕುಳಿತವನು ಹತ್ತಿರದ ಬ್ರಾಹ್ಮಣನ ಎಲೆಯನ್ನು ತನ್ನ ಮುಂದೆ ಎಳೆದುಕೊಂಡ. ಇನ್ನೊಬ್ಬ ಬ್ರಾಹ್ಮಣ ಬಂದು ತುಳುವಿನಲ್ಲಿ 'ನಿನಗೆ ಭಾಷೆ ಗೊತ್ತಾಗುವುದಿಲ್ಲವೇ? ಇದು ಬ್ರಾಹ್ಮಣರ ಪಂಕ್ತಿ' ಎಂದ. ಆಗ ಆತ ಕೇಳಿದ :

'ಅಂದ ಭಟ್ಟ! ಕೋಡೆ ಕೂಳೂರ್ ಬಾರ್‌ಡ್ ನಮ ಒಟ್ಟುಗೆ ಇತ್ತ! ಇತ್ತೆ ಮಲ್ಲ ಬ್ರಾಣ ಅತಾ!' (ಹೌದಾ ಭಟ್ಟ! ನಿನ್ನೆ ಕೂಳೂರ್ ಬಾರಿನಲ್ಲಿ ಒಟ್ಟಿಗೇ ಇದ್ದೆವು. ಈಗ ದೊಡ್ಡ ಬ್ರಾಹ್ಮಣ ಅಲ್ವ?) ಎಂದು ಬೈದು ಬ್ರಾಹ್ಮಣರ ಅಡುಗೆ ಕೋಣೆ ಹೊಕ್ಕು ಎಲ್ಲ ಪದಾರ್ಥಗಳನ್ನೂ ಮುಟ್ಟಿ ಎದ್ದು ಹೋದ. ಇದನ್ನು ನೋಡಿ ಸಹಿಸಲಾರದೆ ನಾನು ಅಲ್ಲಿಂದ ನಿರ್ಗಮಿಸಿದೆ.

ಪಾಣಿಪೀಠ ಬದಲಿಸಿದ್ದು

ಮಂಗಳೂರಿನ ಮಂಗಳಾದೇವಿ ದೇವಸ್ಥಾನ ಪುರಾತತ್ತ್ವ ಇಲಾಖೆಗೆ ಸೇರಿದೆ. ನಾಮದೇವ ಶೆಣೈ ಆಡಳಿತ ಮೊಕ್ತೇಸರರಾಗಿದ್ದರು. ಆಗ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಸಮಿತಿಗೆ ನಾನು ಅಧ್ಯಕ್ಷ. ದೇವರನ್ನು ಕುಳ್ಳಿರಿಸುವ ಪಾಣಿಪೀಠ ಭಿನ್ನ(ಭಗ್ನ)ವಾಗಿತ್ತು. ಅದನ್ನು ಬದಲಿಸಲು ಪುರಾತತ್ತ್ವ ಇಲಾಖೆ ಅನುಮತಿ ನೀಡಲಿಲ್ಲ. ನಾವು ಅದನ್ನು ಬದಲಿಸುತ್ತೇವೆ, ಆದರೆ ಮೂಲ ಸ್ವರೂಪ ಬದಲಿಸುವುದಿಲ್ಲ ಎಂದು ಅಧಿಕಾರಿಗಳಿಗೆ ಸಮಾಧಾನ ಹೇಳಿ ಧೈರ್ಯದಿಂದ ಮುಂದಿನ ಹೆಜ್ಜೆ ಇರಿಸಿದೆವು. ಬಳ್ಳಾರಿಯಿಂದ ಆ ಅಧಿಕಾರಿಗಳು ಬರುವ ಮೊದಲೇ ಪಾಣಿಪೀಠ ಬದಲಿಸಿದೆವು. ಅಧಿಕಾರಿಗಳು ಬಂದು ತಲುಪುವಷ್ಟರಲ್ಲಿ ಬ್ರಹ್ಮಕಲಶ ಕಾರ್ಯ ಪೂರ್ಣಗೊಂಡಿತ್ತು. ಪರಿಶೀಲನೆಗೆಂದು ಅವರು ಒಳಗೆ ಹೋಗುವ ಹಾಗಿರಲಿಲ್ಲ.

ಮಂಗಳೂರಿನ ಕದ್ರಿ(ಕದಿರೆ)ಕ್ಷೇತ್ರದ ಬ್ರಹ್ಮಕಲಶದಲ್ಲಿಯೂ ನಾನು ಭಾಗವಹಿಸಿದ್ದೆ. ಪ್ರಧಾನ ಕಲಶವನ್ನು ತಂತ್ರಿಗಳು ಅತಿ ಗಣ್ಯರಿಗೆ, ಮಡಿ ಉಡದ ಬ್ರಾಹ್ಮಣರಿಗೆ ಮತ್ತು ಇತರರಿಗೆ ಮುಟ್ಟಿಸಿ ಒಳಗೊಯ್ದು ಅಭಿಷೇಕ ಮಾಡಿದಾಗ ನಾನು ಪ್ರತಿಭಟಿಸಿದೆ. 'ಆಚಾರ ವಿಚಾರಗಳಲ್ಲಿ ನಮ್ಮ ಸಂಪ್ರದಾಯವನ್ನು ನಾವು ಸ್ವಲ್ಪವೂ ತಪ್ಪದೆ ಆಚರಿಸದಿದ್ದರೆ ಹೇಗೆ?' ಎಂದು ನೇರವಾಗಿ ಹೇಳಿ, ಎದ್ದು ಬಂದೆ.

ಆನೆಗುಡ್ಡೆ-ಕಳಸದ ಕಥೆ

ಉಡುಪಿಯ ಸಮೀಪದ ಆನೆಗುಡ್ಡೆ ಗಣಪತಿ ದೇವಸ್ಥಾನದ ಜೀರ್ಣೋದ್ಧಾರದ ಬಳಿಕ ನಡೆದ ಬ್ರಹ್ಮಕಲಶದ ಸಂದರ್ಭ. ನಮ್ಮ ಪುನರೂರು ವಿಶ್ವನಾಥ ದೇವಸ್ಥಾನದಿಂದಲೇ ಅಡುಗೆಯ ಮತ್ತು ಬಡಿಸುವ ಪಾತ್ರೆಗಳನ್ನು ತರಿಸಿದ್ದೆ. ಬಾವಿಗೆ ತಾತ್ಕಾಲಿಕ ನೀರಿನ ಮೋಟಾರನ್ನು ಅಳವಡಿಸಿದ್ದೆ. ಬ್ರಹ್ಮಕಲಶದ ದಿನದ ಹಿಂದಿನ ರಾತ್ರಿ ಧಾರಾಕಾರ ಮಳೆ. ಕಳಸ(ಮುಗುಳಿ) ಇರಿಸುವ ಜಾಗದ ರಕ್ಷಣೆ ಒಂದು ಸಮಸ್ಯೆಯೇ ಆಯಿತು. ಟಾರ್ಪಲ್ ಹಾಕಿ ಆ ಜಾಗವನ್ನು ರಾತ್ರಿ 11 ಗಂಟೆಯವರೆಗೆ ಕಾದೆವು. ಮಳೆ ನಿಂತಿತು. ನಾನು ಮನೆಗೆ ಹಿಂದಿರುಗಿ ನಿತ್ಯಾಹ್ನಿಕ ಮುಗಿಸಿ ಬೆಳಗಿನ ಜಾವ 5 ಗಂಟೆಗೇ ಅಲ್ಲಿಗೆ ತೆರಳಿದ್ದೆ. ಗರ್ಭಗುಡಿಯ ಮೇಲೆ ಬಂಗಾರದ ಕಳಸ ಇರಿಸುವ ಕಾರ್ಯಕ್ರಮ. ಅದಾದ ಬಳಿಕ ಏಳು ಗಂಟೆಗೆ ಪೂರ್ಣಕುಂಭ ಅಭಿಷೇಕ ಆಗಬೇಕಿತ್ತು. ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥಸ್ವಾಮೀಜಿ ಬಂದು ಗರ್ಭಗುಡಿಗೆ ತೆರಳಿದರು. ದೇವಸ್ಥಾನದ ಮುಂದುಗಡೆ ಉಕ್ಕಿನ ಕಳಸ ಇರಿಸಲು ಯಾರೂ ಬಾರದಿದ್ದಾಗ ನಾನೇ ಮೇಲೆ ಹತ್ತಿ ಇರಿಸಿದೆ. ಆದರೆ ಬಂಗಾರದ ಕಳಸ ಇರಿಸುವಾಗ ಊರವರು ಎಲ್ಲರೂ ಎತ್ತಿಕೊಂಡು ಮೇಲೆ ಹೋದರು. ಮುಗುಳಿ ಇರಿಸಿದರು. ಅದು ಅರ್ಧದಲ್ಲೇ ನಿಂತಿತು. ಪೇಜಾವರ ಸ್ವಾಮಿಯವರಿಂದ ಅಭಿಷೇಕವೂ ಮುಗಿಯಿತು. ಮುಗುಳಿಯನ್ನು ಮತ್ತೆ ಎತ್ತುವಂತಿಲ್ಲ. ಹೊರತೆಗೆದರೆ ಮತ್ತೆ ಬ್ರಹ್ಮಕಲಶ ಆಗಬೇಕು. ಬೆಳಗ್ಗೆ ಏಳರಿಂದ 11ರವರೆಗೆ ನೂರಾರು ಜನರು ಪ್ರಯತ್ನಿಸಿದರು. ಯಾವ ಯತ್ನವೂ ಫಲಕಾರಿಯಾಗಲಿಲ್ಲ. ಆಡಳಿತ ಮೊಕ್ತೇಸರರು ಬಹಳ ಬೇಸರದಿಂದ 'ನಾನು ಬ್ರಹ್ಮಕಲಶ ಮಾಡಿ ಆಡಳಿತವನ್ನು ಹಸ್ತಾಂತರಿಸಬೇಕೆಂದಿದ್ದೆ.

ಗಣಪತಿಯ ಇಚ್ಛೆ ಬೇರೆಯಾಗಿದೆ. ಮುಗುಳಿಯ ಕೆಳಭಾಗಕ್ಕೆ ಸಿಮೆಂಟ್ ಹಾಕಿ ಸರಪಡಿಸುವುದೊಂದೇ ಮುಂದಿನ ಮಾರ್ಗ' ಎಂದು ಹೇಳಿಕೊಂಡು ಅತ್ತರು.

'ಮುಗುಳಿಯನ್ನು ಮಾಡಿಸುವಾಗ ಅದರ ಮಧ್ಯದ ಸರಳಿನ ಒಳಗೆ ಮುಗುಳಿ ಹೋಗುತ್ತದೆಯೆ, ಇಲ್ಲವೆ ಎಂದು ಪರಿಶೀಲಿಸಲಿಲ್ಲವೆ?' ಎಂದು ಕೇಳಿದೆ. 'ಹಳೆಯ ಮುಗುಳಿಗೆಯೇ ನಾವು ಬಂಗಾರದ ಲೇಪ ಹಾಕಿಸಿದ್ದು. ಹಾಗಾಗಿ ತೆಗೆದ ರಂಧ್ರದಲ್ಲಿ ಹೋಗಲೇಬೇಕು' ಎಂದು ತಿಳಿಸಿದರು. 'ನಾನು ಒಮ್ಮೆ ಪ್ರಯತ್ನಿಸುತ್ತೇನೆ' ಎಂದು ಹೇಳಿ ದೇವರಿಗೆ ನಮಸ್ಕರಿಸಿ ಮೇಲೆ ಹತ್ತಿದೆ. ಮುಗುಳಿಯನ್ನು ಅಲುಗಾಡಿಸಿದಾಗ ಮುಗುಳಿ ಕೆಳಗಡೆ ಇಳಿಯಿತು. ಸರಿಯಾಗಿ ಕುಳಿತುಕೊಂಡಿತು. ನೆರೆದ ಭಕ್ತವೃಂದ ಜಯಕಾರ ಹಾಕಿದರು. 'ಗಣಪತಿಯ ಇಚ್ಛೆ, ನಿಮ್ಮ ಕೈಯಿಂದಲೇ ಮುಗುಳಿ ಇರಿಸಬೇಕೆಂದಿದ್ದರೆ ಯಾರು ಎಷ್ಟು ಪ್ರಯತ್ನಿಸಿದರೂ ಫಲಕಾರಿಯಾಗಲು ಸಾಧ್ಯವೇ?' ಎಂದು ಸಂತಸಪಟ್ಟರು. ಮಾತನಾಡುವ ಗಣಪನಾಗಿ ಇಷ್ಟಾರ್ಥಸಿದ್ಧಿ ಮಾಡುತ್ತಿರುವ ಆನೆಗುಡ್ಡೆ ವಿನಾಯಕನ ದೇವಸ್ಥಾನದ ಬ್ರಹ್ಮಕಲಶ ಕಾರ್ಯಕ್ರಮ ಒಳ್ಳೆಯ ರೀತಿಯಲ್ಲಿ ನಡೆಯಿತು.

ಬಾವಿಗೆ ಬಿದ್ದ ಮಗು

ಸಪ್ತಕ್ಷೇತ್ರಗಳಲ್ಲಿ ಒಂದೆಂದು ಪ್ರಖ್ಯಾತವಾದ ಕುಂಭಾಶಿಯ ಈಶ್ವರ ದೇವಸ್ಥಾನ. ಮೇಲೆ ಹೇಳಿದ ಆನೆಗುಡ್ಡೆ ದೇವಳದ ಕೆಳಗೆ ಇರುವ ದೇವಸ್ಥಾನ ಇದು. ರಾಷ್ಟ್ರೀಯ ಹೆದ್ದಾರಿಗೆ ಹತ್ತಿರ. ಆ ದೇವಸ್ಥಾನದ ಬ್ರಹ್ಮಕಲಶ. ಧಾರ್ಮಿಕ ಸಭೆಗೆ ಧರ್ಮಸ್ಥಳದ ಡಿ. ವೀರೇಂದ್ರ ಹೆಗ್ಗಡೆಯವರು, ಅದಮಾರು ಮತ್ತು ಪೇಜಾವರ ಸ್ವಾಮೀಜಿಗಳು, ಜೊತೆಗೆ ನಾನು ಕೂಡ ಅತಿಥಿಗಳು. ನಾನು ಅಲ್ಲಿಗೆ ತಲುಪಿದಾಗ ಅತಿಥಿಗಳೆಲ್ಲರೂ ಆಗಮಿಸಿಯಾಗಿತ್ತು.

ವೇದಿಕೆಗೆ ಹೋಗುವ ಮೊದಲು ದೇವರದರ್ಶನ ಮಾಡಲೆಂದು ದೇವಳದೊಳಗೆ ಹೋದೆ. ಮೈಕಿನ ಶಬ್ದದಿಂದಾಗಿ ಯಾರು ಮಾತನಾಡಿದರೂ ಕೇಳಿಸುತ್ತಿರಲಿಲ್ಲ. ದೇವರ ಪ್ರದಕ್ಷಿಣೆ ಪಥದಲ್ಲಿಯೇ ತೀರ್ಥಬಾವಿ. ಹೆಚ್ಚು ಆಳವಿಲ್ಲ. ಅದರಲ್ಲಿ ಒಂದು ಮಗು ಬಿದ್ದಿದೆ. ತಾಯಿ ಬೊಬ್ಬೆ ಹಾಕುತ್ತಿದ್ದಾಳೆ. ನೂರಾರು ಜನ ನೋಡುತ್ತಿದ್ದಾರೆ. ಮಗುವನ್ನು ಎತ್ತುವ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ. ನಾನೇ ಓಡಿಹೋಗಿ ಕೈಚಾಚಿ ಮಗುವನ್ನು ಎತ್ತಿದೆ. ತಾಯಿಯ ಕೈಗೆ ನೀಡಿದೆ. ಮಗು ನೀರು ಕುಡಿದಿತ್ತು. ಪ್ರಾಣಾಪಾಯದಿಂದ ಪಾರಾಗಿತ್ತು. ಮಗುವನ್ನು ಎತ್ತುವ ಅವಸರದಲ್ಲಿ ನನ್ನ ಬಿಳಿ ಬಟ್ಟೆ ಸ್ವಲ್ಪ ಕೊಳೆಯಾಯಿತು.

ವೇದಿಕೆಯಲ್ಲಿ ಪೇಜಾವರ ಶ್ರೀಗಳ ಸಮೀಪ ಕುಳಿತಿದ್ದೆ. ಅಂಗಿಯ ಕೊಳೆಯನ್ನು ಕಂಡು 'ಏನಾಯಿತು?' ಎಂದು ವಿಚಾರಿಸಿದಾಗ ವಿಷಯ ವಿವರಿಸಿದೆ. ಪೂಜ್ಯರು ತಮ್ಮ ಅನುಗ್ರಹ ಭಾಷಣದಲ್ಲಿ ಈ ವಿಚಾರ ಎತ್ತಿದರು. 'ದೇವರು ಯಾರ್‍ಯಾರಿಂದ ಯಾವ್ಯಾವ ಸಮಯದಲ್ಲಿ ಯಾವ್ಯಾವ ರೀತಿಯ ಸೇವೆ ಪಡೆಯುತ್ತಾನೆ ಎಂಬುದಕ್ಕೆ ಇದು ಒಂದು ನಿದರ್ಶನ. ಆ ಮಗುವಿಗೇನಾದರೂ 'ಆಗಬಾರದ್ದು' ಆಗಿರುತ್ತಿದ್ದರೆ ಬ್ರಹ್ಮಕಲಶ, ರಥೋತ್ಸವ, ಧಾರ್ಮಿಕ ಸಭೆ ಸಮಾರಂಭಗಳಿಗೆ, ದೇವಳದ ಕೀರ್ತಿಗೆ ಎಂಥಾ ಬಾಧಕವಾಗಿಬಿಡುತ್ತಿತ್ತು! ಹಾಗಾಗಲಿಲ್ಲವಲ್ಲ!' ಎಂದು ಸಮಾಧಾನ ವ್ಯಕ್ತಪಡಿಸಿದರು.

ಕುಂದಾಪುರದ ಬಳಿಯ ಹಟ್ಟಿಯಂಗಡಿ ವಿನಾಯಕ ಕ್ಷೇತ್ರದಲ್ಲಿನ ಜೀರ್ಣೋದ್ಧಾರ-ಬ್ರಹ್ಮಕಲಶ ಕಾರ್ಯಕ್ರಮದಲ್ಲೂ ನನ್ನ ಪಾತ್ರವಿತ್ತು. ಮಂಗಳೂರಿನ ಕಾರಣಿಕ ಕ್ಷೇತ್ರವಾದ ಹನುಮಂತ ದೇವಸ್ಥಾನದಲ್ಲಿ

ಕಳೆದ 30 ವರ್ಷಗಳಿಂದ ಆಡಳಿತ ಧರ್ಮದರ್ಶಿಯಾಗಿ ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯುತ್ತ ಬಂದಿದ್ದೇನೆ.

ಕೊಲ್ಲೂರು ದೇವಸ್ಥಾನದ ಟ್ರಸ್ಟಿ

ಕೊಲ್ಲೂರು ಮುಕಾಂಬಿಕಾ ದೇವಸ್ಥಾನದ ಟ್ರಸ್ಟಿಯಾಗಿ ಅಮ್ಮನ ಸೇವೆ ಮಾಡುವ ಭಾಗ್ಯ ದೊರಕಿತು. ಆಡಳಿತ ಮೋಕ್ತೇಸರರ ಹಾಗೂ ಅರ್ಚಕ ಮೊಕ್ತೇಸರರೊಬ್ಬರ ನಡುವಿನ ವೈಮನಸ್ಯ ಮೇರೆ ಮೀರಿತ್ತು. ಅರ್ಚಕರೇ ಆಡಳಿತ ಮೊಕ್ತೇಸರರಾಗುವುದು ಬೇಡವೆಂದು ಹೊರಗಿನ ಒಬ್ಬರನ್ನು ಆರಿಸಿದ್ದೆವು. ಹಿಂದುಳಿದ ವರ್ಗದ ಪ್ರತಿನಿಧಿಯಾಗಿ ಆಯ್ಕೆಯಾದ ಮೊಕ್ತೇಸರರೊಬ್ಬರು ಹುಂಡಿ ಏಣಿಕೆ ಸಮಯದಲ್ಲಿ 3 ಗ್ರಾಂ ತೂಕದ ಚಿನ್ನದ ಸರವೊಂದನ್ನು ಎಗರಿಸಿದರೆಂದು ಕಾರ್ಯ ನಿರ್ವಹಣಾಧಿಕಾರಿ ಆರೋಪಿಸಿದರು. ನಮ್ಮನ್ನು ಪೆಚ್ಚಾಗಿಸಲು ಹೂಡಿದ ಆಟ ಅದು! 'ಕಳವು ಮಾಡಿದ್ದಾರೆಯೇ? ಕಳ್ಳರ ಜೊತೆಗೆ ನಾವು ನಿಲ್ಲುವವರಲ್ಲ, ತಪಾಸಣೆ ಮಾಡಿ!' ಎಂದೆ. ಆದರೆ ಕಾರ್ಯನಿರ್ವಹಣಾಧಿಕಾರಿಗೆ ನಮ್ಮ ಟ್ರಸ್ಟ್ ಬೋರ್ಡಿನ ಮೇಲೆಯೇ ಸಮಾಧಾನವಿರಲಿಲ್ಲ. ಚಿನ್ನದ ಸರದ ಆರೋಪಿ ಮೊಕ್ತೇಸರರನ್ನು ಹತ್ತು ಜನರ ಎದುರೇ ಪರೀಕ್ಷಿಸುವ ಇರಾದೆ ನಮ್ಮದು. ಆದರೆ ಕಾರ್ಯನಿರ್ವಹಣಾಧಿಕಾರಿ, ಮೊಕ್ತೇಸರರು ನಮ್ಮನ್ನು ಸಮೀಪಿಸುವ ಮೊದಲೇ, ಎಂದರೆ ಹೊರಗೆ ಜನರ ಮಧ್ಯೆ ನಿಂತಿದ್ದಾಗಲೇ ಹೋಗಿ ಅವರ ಕಿಸೆಗೆ ಕೈಹಾಕಿ ಚಿನ್ನದ ಸರ 'ತೆಗೆದು' ಎಲ್ಲರೆದುರು ಹಿಡಿದರು. ನನಗಿದು ಒಪ್ಪಿಗೆಯಾಗಲಿಲ್ಲ. 'ಆರೋಪಿಸುವವರೇ ಪರೀಕ್ಷಿಸುವುದು ಸರಿಯಲ್ಲ, ಪರೀಕ್ಷೆ ಮಾಡಿಸಬೇಕಾಗಿದ್ದುದು ಇತರ ಒಬ್ಬರಿಂದ. ನಿಮಗೆ ನಮ್ಮೊಡನೆ ಸಮಾಧಾನ ಇಲ್ಲ! ಆದ್ದರಿಂದ ನೀವೇ ಏಕೆ ಸರವನ್ನು ಮೊದಲೇ ಬೆರಳ ಸಂದಿಯಲ್ಲಿಟ್ಟುಕೊಂಡಿದ್ದು, ಆಮೇಲೆ ತೆಗೆದ ನಾಟಕ ಮಾಡಿರಬಾರದು?' ಎಂದು ಗದರಿಸಿದೆ. ಅಧಿಕಾರಿ ಹೆದರಿದರು. ಮತ್ತೆ ಎರಡು ದಿನಗಳ ಕಾಲ ಪೊಲೀಸರಿಗೆ ದೂರು ನೀಡುವಲ್ಲಿ ಮೀನ-ಮೇಷ ಎಣಿಸಿದರು.

ಕೊನೆಗೂ ಪೊಲೀಸರಿಗೆ ದೂರು ನೀಡಲಾಯಿತು. ದೂರಿನ ಕಾರಣ ನೀಡಿ ನಮ್ಮ ಟ್ರಸ್ಟ್ ಬೋರ್ಡನ್ನು ಅಮಾನತಿನಲ್ಲಿ ಇಡಲಾಯಿತು. ಇದನ್ನು ಪ್ರತಿಭಟಿಸಿ ಅಪಲೇಟ್ ಟ್ರಿಬ್ಯೂನಲ್ ಮೊರೆ ಹೊಕ್ಕೆ. 'ಕಳವು ಆಗಿಯೇ ಇಲ್ಲ; ಕಳವು ಆಗಿದ್ದರೆ ಆರೋಪಿ ಟ್ರಸ್ಟಿಯನ್ನಷ್ಟೇ ಅಮಾನತುಗೊಳಿಸಬೇಕಿತ್ತು, ಟ್ರಸ್ಟಿಗಳ ಬೋರ್ಡನ್ನಲ್ಲ' ಎಂಬ ನನ್ನ ವಾದಕ್ಕೆ ಜಯ ಲಭಿಸಿತು. ಅಪಲೇಟ್ ಟ್ರಿಬ್ಯೂನಲ್ ನಮ್ಮ ವಾದ್ಯತ್ತಿ ಹಿಡಿಯಿತೆಂದರೆ ಅದರ ಅರ್ಥ ಸರಕಾರ ನಮ್ಮದು ತಪ್ಪಿಲ್ಲವೆಂದು ಒಪ್ಪಿಕೊಂಡಂತೆಯೇ. ಆದರೆ ಅದೇ ಸರಕಾರ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿತು! ಜೊತೆಗೆ, ಇಲಾಖಾ ತನಿಖೆ ಆದೇಶ! ಇದರ ಹಿಂದಿನ ಉದ್ದೇಶ ನಮಗೆ ಗೊತ್ತಿತ್ತು. ನಮ್ಮ ಬೋರ್ಡಿನ ಐದು ವರ್ಷಗಳ ಅವಧಿ ಮುಗಿಯುವವರೆಗೆ ನಮ್ಮನ್ನು ದೂರ ಇರಿಸಬಹುದಲ್ಲ! ಆದರೆ ಉಚ್ಚ ನ್ಯಾಯಾಲಯ ನ್ಯಾಯ ಒದಗಿಸಿತು. ಇಲಾಖಾ ತನಿಖೆಯಲ್ಲಿ ಸಾಕಷ್ಟು ವಿಳಂಬವಾದಾಗ, ಉನ್ನತ ನ್ಯಾಯವಾದಿಗಳಿಂದ ಒತ್ತಡ ತಂದ ಮೇಲೆ, ಈ ಕೇಸಿನಲ್ಲಿ ಹುರುಳಿಲ್ಲವೆಂದು ಕೈ ಬಿಡಲಾಯಿತು. ಆದರೆ ನಮ್ಮ ಸುಮಾರು ಮೂರು ವರ್ಷದಷ್ಟು ಅಧಿಕಾರಾವಧಿಯನ್ನು ಈ ಕೇಸು ತಿಂದು ಹಾಕಿತ್ತು! ನ್ಯಾಯಲಯದ ಆಜ್ಞೆಯಂತೆ ಮತ್ತೆ ನಮಗೆ ಅಧಿಕಾರವನ್ನು ಹಸ್ತಾಂತರಿಸಿದರು. ನಾನು ಮೂರು ತಿಂಗಳ ಅವಧಿಗೆ ಆಡಳಿತ ಮೊಕ್ತೇಸರನಾಗಿ ಕೆಲಸ ಮಾಡಿದೆ. ನಾನು ನಮ್ಮ ಅಮಾನತಿನ ಅವಧಿಯನ್ನು ತುಂಬಿಕೊಡುವಂತೆ ಸರಕಾರವನ್ನು ವಿನಂತಿಸಿದೆ; ಆದರೆ ರಾಜಕೀಯ ಒತ್ತಡ ಹಾಗೂ ನನ್ನ ಹಿಂದಿನ ಆಡಳಿತ ಮೊಕ್ತೇಸರರ 'ಪ್ರಯತ್ನ'ದಿಂದಾಗಿ ಅವಧಿ ವಿಸ್ತರಣೆಗೆ ಅವಕಾಶ

ದೊರೆಯಲಿಲ್ಲ. ಮುಂದಿನ ಐದು ವರ್ಷಗಳ ಅವಧಿಗೆ ಅಪ್ಪಣ್ಣ ಹೆಗ್ಗಡೆಯವರು ಆಡಳಿತ ಮೊಕ್ತೇಸರರಾಗಿ ಬಂದರು; ನನ್ನ ಪೂರ್ವಾಧಿಕಾರಿಯ ಆಟ ನಡೆಯಲಿಲ್ಲ.

ಇದಕ್ಕೆ ಮೊದಲು ಕೊಲ್ಲೂರಿನ ಕಾರ್ಯ ನಿರ್ವಹಣಾಧಿಕಾರಿಯಾಗಿ ಇದ್ದವರು ಹಲವು ವರ್ಷಗಳಿಂದ ಅಲ್ಲೇ ಬೇರೂರಿದ್ದವರು. ಶುದ್ಧಹಸ್ತರು, ದಕ್ಷರು; ಆದರೆ ಆಡಳಿತ ಮಂಡಳಿಗೆ ಚಿಕ್ಕಾಸು ಬೆಲೆ ಕೊಡುತ್ತಿರಲಿಲ್ಲ. ಅದರ ಸದಸ್ಯರಿಗೆ ಒಂದು ಕಛೇರಿಯೆನ್ನುವುದು ಇರಲಿಲ್ಲ; ಕಛೇರಿ ಒದಗಿಸಿ ಎಂದು ಹಲವು ಬಾರಿ ವಿನಂತಿಸಿದರೂ ಪ್ರಯೋಜನವಾಗಲಿಲ್ಲ. ದೇವಸ್ಥಾನಕ್ಕೆ ಬರುವ ವಿಶೇಷ ಅತಿಥಿಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ ಕರೆತರುವುದು, ರಥೋತ್ಸವಕ್ಕೆ ಅವರನ್ನೇ ವಿಶೇಷ ಗೌರವದೊಂದಿಗೆ ಕರೆತರುವುದು, ದೇವರ ಮುಂದೆ ತೆಂಗಿನಕಾಯಿ ಇರಿಸುವ ಮರ್ಯಾದೆ ಇವೆಲ್ಲ ತನಗೆ ಸಲ್ಲತಕ್ಕ ಹಕ್ಕಿನ ಗೌರವಗಳೆಂಬ ಭಾವನೆ. ಇದನ್ನು ಸಹಿಸಲಾಗದ ನಾನು ಹೋರಾಟಕ್ಕಿಳಿದೆ. ಕೇವಲ ಸುಗಮ ಆಡಳಿತ, ಲೆಕ್ಕಪತ್ರ ಪರಿಶೀಲನೆಗಾಗಿ ಇರುವವರು ನೀವು; ದೇವಸ್ಥಾನದಿಂದ ಸಂಬಳ ಪಡೆಯುವ ನೌಕರ. ನಾವು ನಮ್ಮದೇ ಖರ್ಚಿನಿಂದ ಬಂದು ಗೌರವದಿಂದ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವವರು. ಮೇಲಿನ ಎಲ್ಲ ಗೌರವ ಆಡಳಿತ ಮೊಕ್ತೇಸರರಿಗೆ ಸಲ್ಲತಕ್ಕದ್ದು ಎಂದು ವಾದಿಸಿದೆ. ಎಲ್ಲವೂ ಒಂದೊಂದಾಗಿ ನಮ್ಮ ಪಾಲಿಗೆ ಲಭಿಸಿತು. ಮುಂದೆ ಅವರನ್ನು ಬೆಂಗಳೂರಿಗೆ ವರ್ಗ ಮಾಡಿದರು.

ಇವರ ಬಳಿಕ ಬಂದವರು 'ಕಳವಿನ ಪ್ರಸಂಗ'ದ ಹೊತ್ತಿಗೆ ಇದ್ದವರು. ನಾವು ಅಧಿಕಾರ ವಹಿಸಿಕೊಂಡ ಮೇಲೆ ಹುಂಡಿ ಹಣವನ್ನು ಒಂದು ಕೋಣೆಯಲ್ಲಿ ಲೆಕ್ಕ ಮಾಡಲಾಗುತ್ತಿತ್ತು. ಇವರು ಕಾರ್ಯ ನಿರ್ವಹಣಾಧಿಕಾರಿಯಾದ ಹಲವು ತಿಂಗಳ ಬಳಿಕ ಹುಂಡಿಯನ್ನು ತೆರೆಯುವ ದಿನದಂದು ನಮ್ಮ ಹೊಟೇಲಿನ ಹತ್ತು ನೌಕರರನ್ನು ಲೆಕ್ಕ ಮಾಡಲೆಂದು ಕರೆದುಕೊಂಡು ಹೋದೆ. ಹಣವನ್ನು ಕೋಣೆಯ ಹೊರಗಡೆಯೇ ಲೆಕ್ಕ ಮಾಡುವಂತೆ ಹೇಳಿ ನಾನೇ 'ಕಾವಲು' ಕುಳಿತೆ. ಹರಕೆಯ ರೂಪದಲ್ಲಿ ನೂರರ ನೋಟುಗಳೇ ಹೆಚ್ಚಾಗಿ ಇರುತ್ತವೆ. ನೂರು ನೂರು ನೋಟುಗಳ ಕಟ್ಟುಗಳನ್ನಾಗಿಸಿ ಒಂದು ಬ್ಯಾಂಕಿಗೆ ಹಾಕುವುದು ಕ್ರಮ. ಬ್ಯಾಂಕಿನ ನೌಕರರೂ ಎದುರಲ್ಲೇ ಇರುತ್ತಾರೆ. ನಾನು ಒಂದು ಕಟ್ಟನ್ನು ಮರು ಎಣಿಕೆಗಾಗಿ ಎತ್ತಿಕೊಂಡೆ. ಆಗ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಬ್ಯಾಂಕಿನ ನೌಕರರು ಪ್ರತಿಭಟಿಸಿದರು. ಇನ್ನೂ ಲೆಕ್ಕ ಮಾಡಲು ಇರುವಾಗ, ಲೆಕ್ಕ ಮುಂದುವರಿಸುವುದನ್ನು ಬಿಟ್ಟು ಈಗಾಗಲೇ ಎಣಿಸಿದ್ದನ್ನು ಮರುಎಣಿಕೆ ಮಾಡುವುದು ಸರಿಯಲ್ಲ ಎಂದು ವಾದಿಸಿದರು. ಮರುಎಣಿಕೆಯಿಂದಾಗುವ ನಷ್ಟವಾದರೂ ಏನು ಎಂದು ಮರು ವಾದಿಸಿದರೆ, ಇಲ್ಲಿ ಆ ಕ್ರಮ ಇಲ್ಲ ಎಂದರು. ಇಲ್ಲದಿದ್ದರೇನಂತೆ, ನಾವೇ ಪ್ರಾರಂಭಿಸಿದರಾಯಿತು ಎಂದೆ. ಈ ರೀತಿ ಅಧಿಕ ಪ್ರಸಂಗ ಮಾಡಿದರೆ ನೀವು ಊರಿಗೆ ಹೋಗಲು ಸಾಧ್ಯವಿಲ್ಲ! ಎಂದು ಬೆದರಿಸಿದರು. 'ನಾನಿಲ್ಲಿಗೆ ಭಕ್ತನಾಗಿ ಅಥವಾ ಕೆಲಸಗಾರನಾಗಿ ಅಲ್ಲ, ಮೊಕ್ತೇಸರನ ಅಧಿಕಾರದಿಂದ ಇದ್ದೇನೆ; ಇದು ನನ್ನ ಕರ್ತವ್ಯ' ಎಂದು ನಾನು ಸೊಂಟದಲ್ಲಿದ್ದ ರಿವಾಲ್ವರ್ ತೆಗೆದು ತೋರಿಸಿ, 'ನನ್ನನ್ನು ಮುಟ್ಟಿದರೆ ಇತಿಶ್ರೀ ಮಾಡುತ್ತೇನೆ' ಎಂದು ಎಚ್ಚರಿಸಿದೆ. ಎಲ್ಲರೂ ಸ್ತಬ್ಧರಾದರು. ತಿಂಗಳಿಗೆ ಒಂದು ಲಕ್ಷವಷ್ಟೂ ಹುಂಡಿ ಹಣದ ಆದಾಯ ಇಲ್ಲದಿದ್ದ ದೇವಸ್ಥಾನದಲ್ಲಿ ಆ ತಿಂಗಳಲ್ಲಿ ನಾಲ್ಕು ಲಕ್ಷ ರೂಪಾಯಿ ಸಂಗ್ರಹ!

ಹೀಗೆ ತೆಂಗಿನಕಾಯಿ, ಬೇಳೆಕಾಳು, ಬಾಳೆಲೆ, ಬಾಳೆಹಣ್ಣು ಎಲ್ಲದರಲ್ಲೂ, ಹೆಚ್ಚೇಕೆ, ಜನರೇಟರಿನ ಸೀಮೆಎಣ್ಣೆಯಲ್ಲೂ ಕಳವು ನಿರ್ವಹಣೆ. ಅರ್ಚಕರು ದೇವಸ್ಥಾನದ ಹೆಸರಿನಲ್ಲಿ ಸೇವಾಪಟ್ಟಿ ಮುದ್ರಿಸಿಯೂ ಹಣ ಮಾಡುತ್ತಿದ್ದರು. ನನ್ನಿಂದಾದಷ್ಟು ಕಡಿವಾಣ ಹಾಕಿದೆ. ಇವೆಲ್ಲದರ ಫಲಶ್ರುತಿಯೆಂದರೆ ಕಾಣಿಕೆ ಹುಂಡಿಯ ತಪಾಸಣೆಯ ಹೊತ್ತಿಗೆ ಹಿಂದುಳಿದ ವರ್ಗದ ಬಡಪಾಯಿ ಮೊಕ್ತೇಸರರ ಮೇಲೆ ಕಳವಿನ

ಆರೋಪ, ಇಡೀ ಆಡಳಿತ ಮಂಡಳಿಯ ಅಮಾನತು!

ದೇವಸ್ಥಾನದಲ್ಲಿ ಹಗಲು ಹೊತ್ತಿನಲ್ಲಿ ಸ್ವಲ್ಪ ಜನರಿಗೆ ಊಟ ಹಾಕುತ್ತಿದ್ದುದಿತ್ತು. ರಾತ್ರಿ ಅದರ ವ್ಯವಸ್ಥೆ ಇರಲಿಲ್ಲ. ಆಗಿನ ಜಿಲ್ಲಾಧಿಕಾರಿಗಳೊಡನೆ ಮಾತಾಡಿ, ಯಾತ್ರಿಕರಿಗೆ ಹಗಲೂ ರಾತ್ರಿಯೂ ಪ್ರಸಾದದ ಊಟದ ವ್ಯವಸ್ಥೆ ಖಾಯಂಗೊಳಿಸಿದೆ. ನನ್ನ ವೆಚ್ಚದಲ್ಲೇ ಬಾಯ್ಲರ್ ಒಂದನ್ನು ಖರೀದಿಸಿ ಸೇವಾರೂಪದಲ್ಲಿ ದೇವಸ್ಥಾನಕ್ಕೆ ಒಪ್ಪಿಸಿದೆ.

ಇಲ್ಲಿ ಹರಕೆಯ ರಥೋತ್ಸವ ನಡೆಯುತ್ತದೆ. ಓರ್ವ ಮಲಯಾಳಿ ಭಕ್ತರು ರಥೋತ್ಸವ ಹರಕೆ ನೀಡಿದಾಗ ಚಿಕ್ಕ ವಿವಾದವೊಂದು ಎದ್ದಿತು. ರಥ ಎಳೆಯುವ ಮೊದಲು ಸೇವೆ ನೀಡುವವರಿಂದ ಹಣ್ಣುಕಾಯಿ ಸಮರ್ಪಣೆ ಮಾಡಿಸುವ ಕ್ರಮವಿದೆ. ಓರ್ವ ಅರ್ಚಕರು ಕಾಯಿ ಇಟ್ಟು ಪೂಜೆ ಮಾಡಬೇಕೆಂದು, ಇನ್ನೋರ್ವ ಅರ್ಚಕರು ಪೂಜೆ ಮುಗಿದ ಮೇಲೆ ಪ್ರಾರ್ಥನೆ ಮಾಡಿ ಕಾಯಿ ಇಡಬೇಕೆಂದು ನೆರೆದ ಸಾರ್ವಜನಿಕರ ಮುಂದೆಯೇ ಜಗಳ ಆರಂಭಿಸಿದರು. ಅರ್ಚಕರಿಬ್ಬರೂ ತಮ್ಮ ವಾದಕ್ಕೆ ಪೂರಕವಾಗಿ ಶ್ಲೋಕಗಳನ್ನು ಉದ್ಧರಿಸಿ ಸಮರ್ಥಿಸಿಕೊಳ್ಳುತ್ತಿದ್ದರು. ಆಗ ಅಲ್ಲಿಗೆ ತಲುಪಿದ ನಾನು ಬಿಸಿ ವಾತಾವರಣವನ್ನು ತಣ್ಣಗಾಗಿಸಲು ಪ್ರಯತ್ನಿಸಿದೆ. ಸಾಧ್ಯವಾಗದೆ ಹೋದಾಗ ನಾನೇ ಒಂದು ತೀರ್ಮಾನ ತೆಗೆದುಕೊಂಡು ಹೇಳಿದೆ- 'ಕಾಯಿ ಇಟ್ಟು ಪ್ರಾರ್ಥಿಸುವುದು ಗಣಪತಿಗೆ. ಅವನಿಗೇ ಮೊದಲ ಪೂಜೆ. ಯಾವುದೇ ಮಂಗಳ ಕಾರ್ಯಕ್ಕೆ ಮೊದಲು ಕಾಯಿ ಇಟ್ಟು ನಮಸ್ಕಾರ ಸಲ್ಲಿಸಿಯೇ ಮುಂದುವರಿಯುವುದು ಕ್ರಮ. ಆದ್ದರಿಂದ ಮೊದಲು ಕಾಯಿ ಇರಿಸಿ ಪೂಜೆ ಮಾಡಿ' ಎಂದೆ. ಜಗಳ ಬಗೆಹರಿಯಿತು.

ದೇವಸ್ಥಾನದಲ್ಲಿ ಮಧ್ಯಾಹ್ನ ಪೂಜೆ ಮುಗಿಸಿ ಒಂದು ಗಂಟೆಗೆ ಬಾಗಿಲು ಹಾಕಿದರೆ ಮತ್ತೆ ದರ್ಶನಕ್ಕೆ ಆರು ಗಂಟೆಯವರೆಗೆ ಕಾಯಬೇಕಿತ್ತು. ದೇವಸ್ಥಾನದಲ್ಲಿ ರಾತ್ರಿ ಊಟ ಇಲ್ಲದ (1993ರ) ಕಾಲ. ವಸತಿಯೂ ಇಲ್ಲ. ಹೊರ ರಾಜ್ಯದ ಭಕ್ತರಿಗೆ ದರ್ಶನ ಮಾಡಿ ಹೋಗೋಣ ಎಂದರೆ ಸಾಧ್ಯವಾಗುತ್ತಿರಲಿಲ್ಲ. ಆರು ಗಂಟೆಯ ಅನಂತರ ದೂರದ ಊರುಗಳಿಗೆ ಹೋಗಲು ಬಸ್ಸಿನ ಸೌಕರ್ಯವಿರಲಿಲ್ಲ. ಅರ್ಚಕರೊಡನೆ ಚರ್ಚಿಸಿ ಐದೂವರೆ ಗಂಟೆಗೆ ದೇವರ ದರ್ಶನಕ್ಕೆ ಅನುವು ಮಾಡದಂತೆ ಪ್ರಯತ್ನಿಸಿದೆ. ಆದರೆ ಸಫಲನಾಗಲಿಲ್ಲ. ಆಗಿನ ಜಿಲ್ಲಾಧಿಕಾರಿ ಕೃಷ್ಣ ಅವರು ಬಹಳ ಒಳ್ಳೆಯವರು. ಅವರೊಡನೆ ವಿಚಾರ ವಿನಿಮಯ ಮಾಡಿ ಭಕ್ತರ ಕಷ್ಟಕ್ಕೆ ಸ್ಪಂದಿಸುವಂತೆ ವಿನಂತಿಸಿದೆ. ಅವರು ಒಪ್ಪಿದರು. ಕೊಲ್ಲೂರಿನ ಅರ್ಚಕರಿಗೆ ಸೇವಾ ಕಮಿಶನ್ ಕೋಟ್ಯಂತರ ರೂಪಾಯಿ ಪಾವತಿ ಬಾಕಿಯಿತ್ತು. ಯಾವುದೋ ಕಾರಣದಿಂದ ಅದು ಪಾವತಿಯಾಗಿರಲಿಲ್ಲ. ಇದನ್ನು ಜಿಲ್ಲಾಧಿಕಾರಿಗಳು ಈ ಸಂದರ್ಭಕ್ಕೆ ಸರಿಯಾಗಿ ಉಪಯೋಗಿಸಿಕೊಂಡರು. ಅರ್ಚಕ ಪರಿವಾರದವರ ಸಭೆ ಕರೆದು ಅವರ ಕುಂದುಕೊರತೆಯನ್ನು ವಿಚಾರಿಸಿದರು. ಮಾತಿನ ನಡುವೆ, ದೇವಳದ ಬಾಗಿಲು ಸ್ವಲ್ಪ ಮೊದಲು ತೆರೆದರೆ ದೋಷವಿದೆಯೆ? ಎಂದು ಕೇಳಿದರು. ತಂತ್ರಿಗಳ ಸಮೇತ ಎಲ್ಲರೂ ಏನೂ ದೋಷವಿಲ್ಲವೆಂದರು. ಜಿಲ್ಲಾಧಿಕಾರಿಗಳು ಅಲ್ಲಿಂದ ತೆರಳುವಾಗ ದೇವಸ್ಥಾನದ ದ್ವಾರ ಮಧ್ಯಾಹ್ನ ಎರಡು ಗಂಟೆಗೆ ಮುಚ್ಚಿ ಮೂರು ಗಂಟೆಗೆ ಮತ್ತೆ ತೆರೆಯುವಂತೆ ಆದೇಶಿಸಿದರು. ಆಗ ಅರ್ಚಕರು ನನ್ನೊಡನೆ ಬಂದು 'ನಾವು ಐದೂವರೆ ಗಂಟೆಗೆ ತೆರೆಯಲು ಮಾತ್ರ ಬದ್ಧರು. ದಯಮಾಡಿ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಈ ಆದೇಶವನ್ನು ಹಿಂತೆಗೆಯುವಂತೆ ವಿನಂತಿಸುತ್ತೀರಾ?' ಎಂದರು. ಸಾರ್ವಜನಿಕರಿಗೆ, ಪರವೂರಿನ ಭಕ್ತರಿಗೆ ಆದ ಸೌಕರ್ಯದ ಕಡಿತಕ್ಕೆ ನಾನು ಒಪ್ಪಲಿಲ್ಲ. ಈಗ ದೇವಾಲಯದ ದ್ವಾರ ಅಪರಾಹ್ನ ಎರಡು ಗಂಟೆಗೆ ಮುಚ್ಚಿ

ಮೂರು ಗಂಟೆಗೆ ತೆರೆಯುತ್ತಿದೆ.

ಬಪ್ಪನಾಡು ದೇವಸ್ಥಾನ

ಬಪ್ಪನಾಡಿನ ಶ್ರೀ ದುರ್ಗಾ ಪರಮೇಶ್ವರಿ ಸುತ್ತ ಒಂಬತ್ತು ಮಾಗಣೆಗಳ 35 ಗ್ರಾಮಗಳ ಅಧಿದೇವತೆ. ಇಲ್ಲಿನ ಧ್ವಜಾರೋಹಣವಾದರೆ ಎಂಟು ದಿನಗಳ ಕಾಲ ಈ ಮಾಗಣೆಯ ಮನೆಗಳಲ್ಲಿ ಮಾಂಸಾಹಾರ, ಯಾವುದೇ ಶುಭಶೋಭನಾದಿ ಕಾರ್ಯಗಳು ಇರುವುದಿಲ್ಲ. ಇಷ್ಟು ಪ್ರಸಿದ್ಧವಾದ ದೇವಸ್ಥಾನದ ಅಭಿವೃದ್ಧಿ ಕುಂಠಿತವಾಗಿತ್ತು. ಅಲ್ಲಿನ ಜ್ಞಾನಮಂದಿರದ ಕೆಲಸ ಅರ್ಧದಲ್ಲಿ ನಿಂತಿತ್ತು.

ಜ್ಞಾನಮಂದಿರ ಕಟ್ಟಡದ ಕೆಲಸ ಪೂರ್ಣಗೊಳಿಸುವ ಹಾಗೂ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಾದ ವ್ಯಕ್ತಿಯೊಬ್ಬನ ಆಯ್ಕೆಯ ಪ್ರಯತ್ನ ನಡೆಯುತ್ತಿತ್ತು. ಪರಸ್ಪರ ಸಮಾಧಾನವಿಲ್ಲದಿದ್ದ ಆಡಳಿತ ಮಂಡಳಿಯ ಸದಸ್ಯರಿಗೆ ಸರಿಹೊಂದುವ ವ್ಯಕ್ತಿ ಎಂದು ನನ್ನನ್ನು ಆಯ್ಕೆ ಮಾಡಲಾಯಿತು. 1981ರಲ್ಲಿ ದೇವಸ್ಥಾನದ ಆಡಳಿತ ಮೊಕ್ತೇಸರನಾಗಿ ಆಯ್ಕೆಯಾದೆ. ಹರಿಪೂಂಜ ಅವರು ಹಿಂದಿನ ಆಡಳಿತ ಮೊಕ್ತೇಸರ. ಅವರ ಸಂಪೂರ್ಣ ಸಹಕಾರದಿಂದ ಕಟ್ಟಡದ ಕೆಲಸ ಪೂರ್ಣಗೊಂಡಿತು, ಉದ್ಘಾಟನೆಯೂ ಆಯಿತು.

ದೇವಸ್ಥಾನದಲ್ಲಿಯ ಹಳೆಯ ಕ್ರಮಗಳು ಈಗಿನ ತಲೆಮಾರಿಗೆ ಸಮಾಧಾನ ತರುತ್ತಿರಲಿಲ್ಲ. ಆದ್ದರಿಂದ ಕೆಲವಕ್ಕೆ ತಿದ್ದುಪಡಿ ಮಾಡಲು ಮುಂದಾದೆ.

ಜಾತ್ರೆಗೆ ಪೂರ್ವಭಾವಿಯಾಗಿ 'ಅಂಕುರ' ಕಾರ್ಯಕ್ರಮ ನಡೆಯುತ್ತದೆ. ದೇವಸ್ಥಾನದ ತಂತ್ರಿಗಳು ಗದ್ದೆಯಿಂದ ಮೃತ್ತಿಕೆ (ಮಣ್ಣು) ತಂದು ದವಸ-ಧಾನ್ಯಗಳನ್ನು ಬಿತ್ತಿ, ಮೊಳಕೆ ಬರಿಸುವ ಕಾರ್ಯಕ್ರಮ. ಬಲಿಜಾತ್ರೆ ಮುಗಿದ ಮೇಲೆ ನಡುರಾತ್ರಿಯಲ್ಲಿ ತಂತ್ರಿಗಳು ಗದ್ದೆ ಇರುವಲ್ಲಿಗೆ ಹೋಗಿ ಮೃತ್ತಿಕೆ ತರುತ್ತಾರೆ. ಹಾಗೆ ಹೋಗುವಾಗ ಅವರ ಜೊತೆ ವಾದ್ಯ, ದೀವಟಿಗೆ, ಡೋಲುಗಂಟೆಯವರೆಲ್ಲರೂ ಹೋಗಬೇಕು. ನಡುರಾತ್ರಿ ಗದ್ದೆಯಲ್ಲಿ ಹೀಗೆ ತಂತ್ರಿಗಳಿಂದ ಮಂತ್ರ-ತಂತ್ರ ಇತ್ಯಾದಿ ಕ್ರಿಯೆಗಳು ನಡೆಯುತ್ತಿರುವಾಗ ಜೊತೆಗೆ ಹೋದವರಿಗೆ ನಿದ್ದೆಯ ಮಂಪರು. ಗದ್ದೆಯಲ್ಲಿ ನಡೆಯುವ ಈ ಕ್ರಿಯೆಗೆ ಒಂದು ಗಂಟೆಗಿಂತಲೂ ಹೆಚ್ಚು ಸಮಯ ತಗಲುತ್ತದೆ. ತಂತ್ರಿಗಳಲ್ಲಿ ಮಾತಾಡಿ, ಹೊಲದಲ್ಲಿ ಕನಿಷ್ಠ ಮಂತ್ರ ಹೇಳಿದರೆ ಸಾಕು, ಉಳಿದುದನ್ನು ದೇವಾಲಯಕ್ಕೆ ಮರಳಿದ ಮೇಲೆ ಪಠಿಸುವಂತೆ ಸಲಹೆ ನೀಡಿದೆ. ಅವರು ಒಪ್ಪಿದರು. ಎಲ್ಲ ಸರಿಹೋಯಿತು.

ದೀವಟಿಗೆ ಹಿಡಿಯುವಾತ ಬಲಿ ಹೊರಡುವ ಮೊದಲು ದೇವರ ದೀವಟಿಗೆ ಹಿಡಿದ ಕಹಳೆಯವನ ಜೊತೆಗೆ ಹಲವು ಮಂದಿ ಗಣ್ಯರ ಮನೆಗಳಿಗೆ ಹೋಗಿ 'ಬಲಿ ಹೊರಡುವ ಸಮಯವಾಯಿತು, ಬರಬೇಕು' ಎಂದು ವಿನಂತಿಸಿ ಬರಬೇಕಿತ್ತು. ಆ ಕ್ರಮವನ್ನು ನಿಲ್ಲಿಸಿದೆ. ಬಲಿ ಮುಗಿದ ಮೇಲೆ ಸೇವಾಕರ್ತನನ್ನು ವಾಲಗ ಸಹಿತ ದೇವಳದ ದ್ವಾರದವರೆಗೆ ಕರೆದೊಯ್ದು ಬಿಡುವ ಕ್ರಮವಿತ್ತು. ಅದನ್ನು ನಿಲ್ಲಿಸಿದೆ. ಅವರು ಖಾಯಂ ಸೇವಾಕರ್ತರೆಂಬುದಕ್ಕೆ ದಾಖಲೆ ದೇವಸ್ಥಾನದಲ್ಲಿ ಇರಲಿಲ್ಲವಾದರೂ ಹಿಂದಿನ ಆಡಳಿತ ಮಂಡಳಿ 'ಗೌರವ'ಕ್ಕೆಂದು ಈ ಕ್ರಮವನ್ನು ಅನುಸರಿಸಿಕೊಂಡು ಬರುತ್ತಿತ್ತು.

ಉತ್ಸವ ಮುಗಿದ ಬಳಿಕ ಉತ್ಸವ ಮೂರ್ತಿಯನ್ನು ಚಿಕ್ಕ ರಥದಲ್ಲಿ (ಚಂದ್ರಮಂಡಲ) ಕೂರಿಸಿ ಪೇಟೆ ಸವಾರಿ ಕಟ್ಟೆ, ಕಡಪಿನ ಬಾಗಿಲು, ಕೋಟೆಕೇರಿ, ಅಕ್ಕಸಾಲಿಕೇರಿಗಳಿಗೆ ಎಳೆದುಕೊಂಡು ಹೋಗಬೇಕಿತ್ತು. ನಡುರಾತ್ರಿಯ ಹೊತ್ತು ಅದು. ತೇರಳೆಯಲು ಹೆಚ್ಚು ಜನ ಇರದ ಸಮಯ. ಬಂಗಾರದ

ಅಟ್ಟೆ, ಪಘಾವಳಿ, ಲಕ್ಷಾಂತರ ರೂಪಾಯಿ ಬೆಲೆಬಾಳುವ ಆಭರಣಕ್ಕೆ ರಕ್ಷಣೆ ಇಲ್ಲ! ಆಯಾ ಮನೆ ಬಾಗಿಲಿಗೆ ಚಂದ್ರಮಂಡಲ(ತೇರು) ಬಂದಾಗ ಆ ಮನೆಯವರು ಬಾಗಿಲು ತೆರೆದು ಆರತಿ ಮಾಡಿ ನಾಲ್ಕಾಣೆ ಕಾಣಿಕೆ ನೀಡಿ ಬಾಗಿಲು ಮುಚ್ಚಿಕೊಳ್ಳುತ್ತಿದ್ದರು. ಮಾರ್ಗಕ್ಕೆ ಬೆಳಕಿನ ವ್ಯವಸ್ಥೆ ಇಲ್ಲ. ಈ ರೀತಿಯಲ್ಲಿ ಕಟ್ಟೆ ಪೂಜೆ ಮಾಡುವುದೆ? ಮುಂದಿನ ವರ್ಷ ಆ ಮಾರ್ಗದಲ್ಲಿನ ಕಟ್ಟೆ ಪೂಜೆಗಳನ್ನು ನಿಲ್ಲಿಸಿದೆ. ಮರುವರ್ಷ ಆ ಪ್ರದೇಶದ ಗಣ್ಯರು ನನ್ನನ್ನು ಸಮೀಪಿಸಿ 'ಹಳೆಯ ಸಂಪ್ರದಾಯ; ಬಿಡದೆ ಮುಂದುವರಿಸಬೇಕು' ಎಂದು ವಿನಂತಿಸಿದರು. ಆಗ ನಾನು ಅವರಿಗೆ ವಿಚಾರ ವಿವರಿಸಿ ಹೇಳಿದೆ : 'ನೀವೆಲ್ಲರೂ ಚಂದ್ರಮಂಡಲವನ್ನು ಎಳೆಯಲು ಬರಬೇಕು, ಮಾರ್ಗಕ್ಕೆ ವಿದ್ಯುದ್ದೀಪ ಹಾಕಿಸಲು ಮುಂದಾಗಬೇಕು, ಉತ್ಸವ ಮೂರ್ತಿಯ ಆಭರಣಗಳ ರಕ್ಷಣೆಗೆ ನಿಲ್ಲಬೇಕು. ಎಲ್ಲರೂ ಈ ಮೆರವಣಿಗೆಯಲ್ಲಿ ಭಾಗಿಯಾಗಲು ಒಪ್ಪಿದರೆ ಈ ವರ್ಷ ಚಿಕ್ಕ ರಥ ಮತ್ತೆ ಈ ದಾರಿಯಲ್ಲಿ ಬರುವಂತೆ ಮಾಡುತ್ತೇನೆ!' ಅವರೆಲ್ಲ ಸಂತೋಷದಿಂದ ಒಪ್ಪಿದರು. ಆ ವರ್ಷದಿಂದ ಮತ್ತೆ ಚಂದ್ರಮಂಡಲ ಉತ್ಸವ ವಿಜೃಂಭಣೆಯಿಂದಲೇ ನೆರವೇರುತ್ತ ಬರುತ್ತಿದೆ.

ಹಗಲ ರಥೋತ್ಸವದ ಬಳಿಕ ರಾತ್ರಿ ಶಯನಕ್ಕೆ ಮಲ್ಲಿಗೆ ಹೂವಿನ ಸೇವೆ. ಬಡ ಭಕ್ತಾಧಿಗಳು ಲಕ್ಷಾಂತರ ರೂಪಾಯಿ ಮೌಲ್ಯದ ಮಲ್ಲಿಗೆ ಹೂವನ್ನು ದೇವಿಗೆ ಅರ್ಪಿಸುತ್ತಾರೆ. ಮರುದಿನ ಕವಾಟೋದ್ಘಾಟನದ ಬಳಿಕ ಹೂ ಅರ್ಪಿಸಿದ ಭಕ್ತರಿಗೆ ಸ್ವಲ್ಪ ಸ್ವಲ್ಪ ವಿತರಿಸಲಾಗುತ್ತದೆ; ಬಳಿಕ ದಂಡಿಯಾಗಿ ಉಳಿಯಲು ಹೂವನ್ನು ಬೆಳ್ಳಿ ಪಾಲಕಿಯಲ್ಲಿರಿಸಿ, ಅದರ ಜೊತೆಗೆ ಬಾಳೆಗೊನೆ ಇಟ್ಟು, ದೀವಟಿಗೆ-ಕೊಂಬು ಗೌರವಸಹಿತ ಆಹ್ವಾನ ನೀಡಲಾಗುತ್ತಿದ್ದ ಮನೆಗಳಿಗೆ ಒಯ್ದುಕೊಟ್ಟು, 'ಜಾತ್ರೆಯನ್ನು ಚೆನ್ನಾಗಿ ನಡೆಸಿದಿರಿ' ಎಂದು ಕೃತಜ್ಞತೆ ಹೇಳಿ ಬರುವುದು ಕ್ರಮ. ಭಕ್ತರು ಸಲ್ಲಿಸುವ ಹೂವನ್ನು ಹೀಗೆ ಒಯ್ದುಕೊಡುವ ಸಂಪ್ರದಾಯ ನಿಲ್ಲಿಸಿದೆ. ಇದರಿಂದ ಎಷ್ಟೋ ಗಣ್ಯರಿಗೆ ನನ್ನ ಮೇಲೆ ಅಸಮಾಧಾನವಾಯಿತು.

ನವರಾತ್ರಿ ಉತ್ಸವದ ಒಂಬತ್ತನೆಯ ರಾತ್ರಿ ದೇವರಿಗೆ ವಿಶೇಷ ಪೂಜೆ. ನವವಿಧ ಭಕ್ಷ್ಯಗಳು, ಕಡುಬು ಸಮರ್ಪಣೆ. ಮರುದಿನ ನೌಕರರು ಸುಮಾರು 40 ಮನೆಗಳಿಗೆ ಪ್ರಸಾದ ಒಯ್ದು ಕೊಡುವುದು ಸಂಪ್ರದಾಯ. ದೇವರಿಗೆ ಶಾಸ್ತ್ರ ರೀತ್ಯಾ ಆ ರಾತ್ರಿ ನವವಿಧ ಭಕ್ಷ್ಯಗಳನ್ನು ಅರ್ಪಿಸಿದರೆ ಸಾಕು; ಯಾವ ಮನೆಗೂ ಒಯ್ದು ಕೊಡಬೇಕಾಗಿಲ್ಲ; ಆ 40 ಮನೆಗಳವರು ನವರಾತ್ರಿಯ ದಿನಗಳಲ್ಲಿ ದೇವಾಲಯಕ್ಕೆ ಬಾರದಿದ್ದರೆ ಅಂಥವರಿಗೆ ಅವರ ಮನೆಗೇ ಒಯ್ದು ಕೊಡುವುದು ಯಾಕೆ? ಎಂದು ಅದನ್ನು ನಿಲ್ಲಿಸಲಾಯಿತು. ಇದರ ಬದಲಿಗೆ ದೇವಾಲಯದಲ್ಲಿ ಪ್ರತಿದಿನವೂ ಅನ್ನ ಸಂತರ್ಪಣೆ ಕ್ರಮ ಪ್ರಾರಂಭಿಸಿ, ಒಂದೊಂದು ದಿನ ಒಂದೊಂದು ಸಕ್ಕರೆ ಭಕ್ಷ್ಯ (ಹೋಳಿಗೆ, ಲಾಡು, ಜಿಲೇಬಿ ಇತ್ಯಾದಿ) ಬಡಿಸುವ ವ್ಯವಸ್ಥೆ ಜಾರಿಗೆ ಬಂದಿತು.

ಬಪ್ಪನಾಡು ಯಕ್ಷಗಾನ ಮೇಳವನ್ನೂ ಪ್ರಾರಂಭಿಸಿದೆ. ಬಪ್ಪನಾಡು ಡೋಲು ಬಹಳ ಪ್ರಸಿದ್ಧ. ಆ ಬೃಹದಾಕಾರದ ಡೋಲಿಗೆ ಕಾಯಕಲ್ಪ ಮಾಡಿಸಿ ದೇವಾಲಯದ ಎದುರುಗಡೆ ಎಲ್ಲರ ಕಣ್ಣಿಗೆ ಕಾಣಿಸುವಂತೆ ಇಡಿಸಿದೆ. ದೇವಾಲಯಕ್ಕೆ ಸುಗಮವಾಗಿ ಸಾಗಿಬರಲು ಮಾರ್ಗಮಾಡಿಸಿದೆ. ದೇವಳದ ಎದುರು ಬದಿಯ ಹೊಲ ಭೂ ಮಸೂದೆಯ ಕಾರಣದಿಂದ ಕೈತಪ್ಪಿ ಹೋಗಿತ್ತು. ಅದನ್ನು ಹಣ ತೆತ್ತು ಹಿಂದೆ ಪಡೆದು ಮೈದಾನ ಮಾಡಿಸಿದೆ. ದೇವಸ್ಥಾನಕ್ಕೆ ಸರಿಯಾದ ನೀರಿನ ವ್ಯವಸ್ಥೆ ಇರಲಿಲ್ಲ. ಎದುರುಗಡೆ ಮನೆಯ ಮಹಾಬಲ ಶೆಟ್ಟಿ ಎಂಬ ಮಹನೀಯರನ್ನು ವಿನಂತಿಸಿ ನೀರಿನ ವ್ಯವಸ್ಥೆ ಮಾಡಿಸಿದೆ. ರಸ್ತೆ ಬದಿಯಲ್ಲಿ ಕಾಣಿಕೆ ಡಬ್ಬಿ ಇಡಿಸಿದೆ. ದೇವಾಲಯದ ವರಮಾನ ಗಣನೀಯವಾಗಿ ಹೆಚ್ಚಿತು. 1981ರಲ್ಲಿ ನಾನು ಆಡಳಿತವನ್ನು ವಹಿಸಿಕೊಂಡಾಗ ದೇವಸ್ಥಾನಕ್ಕೆ 35 ಸಾವಿರ ರೂಪಾಯಿ ಸಾಲ; 25 ಸಾವಿರ ರೂಪಾಯಿ

ಉತ್ಪತ್ತಿ ಇತ್ತು. ನನ್ನ ಸೇವಾವಧಿಯ ಹತ್ತು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ 35 ಲಕ್ಷ ರೂಪಾಯಿಗಳಷ್ಟು ಉತ್ಪತ್ತಿ ಹೆಚ್ಚಿತು. ದೇವಾಲಯದ ಮುಂದುಗಡೆ ಅಂಗಡಿ ಸಾಲು ನಿರ್ಮಿಸಿದ್ದಲ್ಲದೆ ಶಾಂಭವಿ ಹೊಳೆಯ ಬದಿಗೆ ಸಾಗುವುದಕ್ಕಾಗಿ ಮಾರ್ಗವೊಂದನ್ನೂ ಮಾಡಿಸಿದೆ. ಒಳಗಡೆ ಅಂಬಲದ ಗೋಡೆಗಳಲ್ಲಿ ಸುಂದರ ಚಿತ್ರಪಟಗಳನ್ನು ಮಾಡಿಸಿದೆ. ಬ್ರಹ್ಮರಥಗಳನ್ನು ದುರಸ್ತಿ ಮಾಡಿಸಿ ಒಳಾಂಗಣಕ್ಕೆ ಕಲ್ಲುಗಳನ್ನು ಹಾಸುವ ಕಾರ್ಯವನ್ನೂ ಪೂರ್ಣಗೊಳಿಸಿದೆ.

ದೇವಸ್ಥಾನದಲ್ಲಿ ಅನಂತ ಚತುರ್ದಶಿಯಂದು ಕಲಶ ಪ್ರತಿಷ್ಠೆ ನಡೆಯುತ್ತದೆ. ಅದೇ ದಿನ ಹೊಸತು ಊಟ. ಹೊಳೆಯಿಂದ ಪವಿತ್ರ ನೀರನ್ನು ವೈಭವದಿಂದ ತಂದು ವಿಧಿವತ್ತಾಗಿ ಕಲಶಪ್ರತಿಷ್ಠೆಯಾಗಿ, ವಿಶೇಷ ಪೂಜೆ. ಸಮುದ್ರದ ಪವಿತ್ರಜಲವನ್ನು ತರುವ ದಾರಿ ಸರಿಯಿರಲಿಲ್ಲ. ಗದ್ದೆಗಳ ಬದುಗಳ ಮೇಲೆ ಸಾಗಿಬರಬೇಕಿತ್ತು. ಈ ತೊಡಕನ್ನು ತಪ್ಪಿಸಲು ದೇವಸ್ಥಾನದಿಂದ ಸಮುದ್ರಕ್ಕೆ ಸಾಗುವ ರಸ್ತೆಯೊಂದನ್ನು ಮಾಡಿಸಲು ಮುಂದಾದೆ. ಹಲವರಿಗೆ ಹಣಪಾವತಿಸಿ, ಕೆಲವರಿಂದ ಸೇವಾರೂಪವಾಗಿ ಒಂದು ಕಿಲೋಮೀಟರ್‌ನಷ್ಟು ಜಾಗವನ್ನು ಪಡೆದು ಸುಮಾರು ಮೂರು ಲಕ್ಷದಷ್ಟು ವೆಚ್ಚ ಮಾಡಿ ನಿರ್ಮಿಸಿದ ರಸ್ತೆ ಇದು. 1985ರಲ್ಲಿ ರಸ್ತೆ ಕೆಲಸ ಪೂರ್ಣಗೊಂಡಿತು. ರಸ್ತೆಯ ಪಕ್ಕಗಳಲ್ಲಿ ಸಾಲು ಮರಗಳನ್ನು ನೆಡಿಸಿದೆ. ಸಮುದ್ರದ ಬದಿಯಲ್ಲಿ ಮಣ್ಣುಕುದುರು(ದಿಬ್ಬ) ಇದೆ; ಅಲ್ಲಿಯವರೆಗೂ ಈ ರಸ್ತೆ ಸಾಗುತ್ತದೆ. ಕುದುರಿನಲ್ಲಿ ಸಾವಿರಾರು ಗಿಡಗಳನ್ನು ನೆಡಿಸಿದೆ. ಮಾರ್ಗದಿಂದ ಕುದುರಿನವರಿಗೆ ತೂಗು ಸೇತುವೆ ಮಾಡಿಸಬೇಕು, ದೇವಸ್ಥಾನಕ್ಕೆ ಬರುವ ಭಕ್ತರು ವಾಯುವಿಹಾರಕ್ಕಾಗಿ ಇಲ್ಲಿಗೂ ಬರುವಂತಾಗಬೇಕು, ಮಕ್ಕಳು ಮರಿಗಳು ಮನೋರಂಜನೆ ಪಡೆಯುವಂತಾಗಬೇಕು ಎಂಬ ಬಯಕೆಯಿಂದ ಮಾರ್ಗದ ಕೊನೆಯಲ್ಲಿ (ದೇವಸ್ಥಾನದ್ದೇ ಜಾಗದಲ್ಲಿ) ಒಂದು ಕಟ್ಟಡ ನಿರ್ಮಿಸಿ, ಒಂದು ಟಿ.ವಿ. ಸೆಟ್ಟನ್ನೂ ಇಡಿಸಿದೆ. ಮಹಿಳೆಯರಿಗಾಗಿ ಶೌಚಾಲಯ ಮಾಡಿಸಿದೆ. ದುರದೃಷ್ಟವಶಾತ್ ಕೆಲವರಿಗೆ ಇದೆಲ್ಲ ಹಿಡಿಸಲಿಲ್ಲ. ಅಪಸ್ವರ ಎತ್ತಿದರು. ಆಡಬಾರದ ಮಾತುಗಳನ್ನು ಆಡಿದರು.

ಪುರಸಭೆಯ ಅಧ್ಯಕ್ಷರೊಬ್ಬರು ಮುಂದೆ ಈ ರಸ್ತೆಯಿಂದ ಬಹಳಷ್ಟು ಪ್ರಯೋಜನ ಪಡೆದರು. ದೇವಸ್ಥಾನದ ರಸ್ತೆಯಲ್ಲವೇ, ಗೋಪುರ ಕಟ್ಟಿಸಲು ಒಂದು ಲಕ್ಷ ರೂಪಾಯಿ ದೇಣಿಗೆ ನೀಡುತ್ತೀರಾ ಎಂದು ಕೇಳಿದಾಗ ಹಿಂದೇಟು ಹಾಕಿದರು. ನಾನು ಅಧಿಕೃತವಾಗಿ ಆ ರಸ್ತೆ ಬಳಸದಂತೆ ಕ್ರಮ ಕೈಗೊಂಡಾಗ ಪೊಲೀಸರಿಗೆ ದೂರು ನೀಡಿದರು. ಪೊಲೀಸ್ ವರಿಷ್ಠರಾಗಿದ್ದ ಕೆಂಪಯ್ಯ ಸ್ಥಳ ತನಿಖೆಗೆ ಬಂದು, ನನ್ನ ಬಂಧುಗಳಾದ ಕಟೀಲಿನ ಆಸ್ರಣ್ಣರೂ ಬಂದು ನನ್ನೊಡನೆ ಮಾತುಕತೆ ಏರ್ಪಡಿಸಿ ಕೊನೆಗೆ ಆ ಮಹನೀಯರು 50 ಸಾವಿರ ರೂಪಾಯಿ ನೀಡುವುದಕ್ಕೆ ಒಪ್ಪಿದರು. ಆದರೆ ದೇವಸ್ಥಾನದಿಂದ ಸಮುದ್ರಕ್ಕೆ ಹೋಗುವ ರಸ್ತೆಯ ಕೊನೆಯಲ್ಲಿರುವ ಕಟ್ಟಡ ಪಾಳುಬಿದ್ದಿದೆ. ಸಾಲು ಮರಗಳು ಸತ್ತಿವೆ, ರಸ್ತೆಪಕ್ಕದ ಕಲ್ಲುಗಳು ಯಾರ್ಯಾರದೋ ಮನೆಗಳಿಗೆ ಹೋಗಿಬಿದ್ದಿವೆ. ಆದರೆ ನಾನು ಮಾಡಿದ ಸ್ವಾರ್ಥರಹಿತ ಸೇವೆ ನನ್ನನ್ನು ಹಲವು ವಿಧಗಳಲ್ಲಿ ಕಾಪಾಡಿದೆ.

ಉಡುಪಿಯಲ್ಲಿ

ಉಡುಪಿ ಆಚಾರ್ಯ ಮಧ್ವರಿಂದ ಸ್ಥಾಪಿಸಲ್ಪಟ್ಟ ಶ್ರೀಕೃಷ್ಣನ ಪುಣ್ಯಕ್ಷೇತ್ರ. ಅನಂತೇಶ್ವರ, ಚಂದ್ರಮೌಳೀಶ್ವರ ದೇವಾಸ್ಥಾನಗಳು ಇಲ್ಲಿನ ಅತ್ಯಂತ ಪ್ರಾಚೀನ ಸನ್ನಿಧಾನಗಳು. ಈ ದೇವಳಗಳ ಸುತ್ತ ಜಗಲಿಗಳಲ್ಲಿ ಅಂಗಡಿಗಳ ಸಾಲು. ಅಂಗಡಿ ಮಾಲೀಕರ ಕಾರುಗಳು, ಸ್ಕೂಟರುಗಳ ಓಡಾಟ, ಇಲ್ಲೇ

ನಿಲುಗಡೆ. ಭಕ್ತಾದಿಗಳು ನಡೆದಾಡಲು ಬಹಳ ತ್ರಾಸ. ಹೆಚ್ಚೇನು, ದೇವರ ರಥೋತ್ಸವಕ್ಕೂ ಸ್ಥಳಾವಕಾಶದ ಕೊರತೆ. ದೇವಸ್ಥಾನದ ಸುತ್ತಮುತ್ತ (ನಾಲ್ಕು ಬೀದಿಯ ಒಳಗೆ) ವಾಹನಗಳು ಸುಗಮವಾಗಿ ಓಡಾಡಲು ಅವಕಾಶವಿಲ್ಲದಂತೆ ಆಕ್ರಮಿಸಿ ಅಂಗಡಿ ಸಾಲುಗಳನ್ನು ವಿಸ್ತರಿಸಿಕೊಂಡದ್ದೇ ಇದಕ್ಕೆ ಕಾರಣವಾಗಿತ್ತು. ಹೀಗೆ ಅತಿಕ್ರಮಿಸಿಕೊಳ್ಳಲಾಗಿದ್ದ ಜಾಗವನ್ನು ತೆರವುಗೊಳಿಸುವ ಕೆಲಸದಲ್ಲಿ ಮಠಾಧೀಶರುಗಳೊಂದಿಗೆ ನಾನೂ ಸೇರಿ ಹೋರಾಡಿದೆ. ಆದರೆ ಮಠಾಧಿಪತಿಗಳಲ್ಲೇ ಯಾಕೋ ಭಿನ್ನಮತ ತಲೆದೋರಿದ್ದರಿಂದ ಈ ಕಾರ್ಯ ಕೈಗೂಡಲಿಲ್ಲ.

ಶ್ರೀ ಕೃಷ್ಣ ಮಠಕ್ಕೆ ವಾಹನಗಳಲ್ಲಿ ಆಗಮಿಸುವವರಿಗೆ ರಾಜಾಂಗಣದ ಪಕ್ಕದ ಗದ್ದೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕೆಂದು ನಾವು ಸಮಿತಿ ರಚಿಸಿಕೊಂಡು ಮಠಾಧಿಪತಿಗಳೊಂದಿಗೆ ಸೇರಿಕೊಂಡು ಅಲ್ಲಿನ ನಾಲ್ಕು ಎಕರೆ ಜಾಗವನ್ನು ಖರೀದಿಸಿದೆವು. ಮತ್ತೂ 10 ಎಕರೆ ಜಾಗವನ್ನು ಖರೀದಿಸಿದರೆ ಚೆನ್ನ ಎಂಬ ಅಭಿಪ್ರಾಯ ಮೂಡಿ ಬಂದುದರಿಂದ ಅದರ ಖರೀದಿ ಕುಳಿತಂತೆ ಮಾತುಕತೆ ನಡೆಯಿತು. ಅದಕ್ಕೆ ಹಣ ಬೇಕಲ್ಲ. ಸಾಲ ರೂಪದಲ್ಲಿ, ಆದರೆ ಬಡ್ಡಿರಹಿತವಾಗಿ ನೀಡುವಂತೆ ಮಠಾಧಿಪತಿಗಳೊಂದಿಗೆ ಮಾಡಿಕೊಂಡ ವಿನಂತಿಗೆ ಪ್ರೋತ್ಸಾಹ ಸಿಗಲಿಲ್ಲ. ಆ ಪ್ರದೇಶ ಯಾರೋ ಇತರರ ಕೈವಶವಾಗಿ ಆಮೇಲೆ ನಾವು ಎಕರೆಗೆ ಎಂಟು ಲಕ್ಷದಂತೆ ತೆತ್ತು ಖರೀದಿಸಿದ್ದಾಯಿತು. (ಎಲ್ಲಾ ಜಾಗ ಆಗಲೇ ಖರೀದಿಸಿದ್ದಿದ್ದರೆ ಅಲ್ಲಿಂದ ಒಳಹಾದಿಯಲ್ಲಿ ಕಡಿಯಾಳಿ, ಕುಂಜಿಬೆಟ್ಟಿಗೆ, ರೈಲ್ವೆ ನಿಲ್ದಾಣಕ್ಕೆ, ತೆಂಕಪೇಟೆಗೆ ಹಾಗೂ ರಾಜಾಂಗಣಕ್ಕಾಗಿ ಬಡಗು ಪೇಟೆಗೆ ಮಾರ್ಗವಾಗುತ್ತಿತ್ತು.) ಈಗ ನಾವು ಖರೀದಿಸಿದ ಜಾಗದ ಪಕ್ಕದ ಜಾಗಕ್ಕೆ ಸರಿಯಾದ ಸಂಪರ್ಕ ಮಾರ್ಗ ಇರಲಿಲ್ಲ. ಪೂಜ್ಯ ಶೀರೂರು ಸ್ವಾಮೀಜಿಗಳ ಮನವೊಲಿಸಿ ಅವರ ಮಠಕ್ಕೆ ಸೇರಿದ್ದ ಜಾಗದಲ್ಲಿದ್ದ ಸುಮಾರು 40ಕ್ಕೂ ಹೆಚ್ಚು ತೆಂಗಿನ ಮರಗಳನ್ನು ತೆಗೆಸಿ ಮುನಿಸಿಪಾಲಿಟಿ, ಉಡುಪಿ ಅಭಿವೃದ್ಧಿ ನಿಗಮ ಹಾಗೂ ಉಡುಪಿಯ ವಿಧಾನ ಪರಿಷತ್ ಸದಸ್ಯ ಡಾ। ವಿ.ಎಸ್. ಆಚಾರ್ಯರ ಸಹಕಾರದಿಂದ ಗದ್ದೆಗಳಲ್ಲಿ ಮಣ್ಣು ತುಂಬಿ ಮೈದಾನವನ್ನು ನಿರ್ಮಿಸಿದ್ದಾಯಿತು. ಆಮೇಲೆ ಈ ಸಂಬಂಧದ ಸಮಿತಿ ಸಭೆ ನಡೆಯಲಿಲ್ಲ.

ಕೆಂಚನಕೆರೆ ಶಾಲೆ

ಮೂಲ್ಕಿ ಬಳಿಯ ಕಿಲ್ಪಾಡಿಯಲ್ಲಿ ರಸ್ತೆ ಬದಿಯಲ್ಲಿದ್ದ ಸಂಜೀವ ಭಂಡಾರಿಯವರ ಬಾಡಿಗೆ ಕಟ್ಟಡದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದು ಕಾರ್ಯ ನಿರ್ವಹಿಸುತ್ತಿತ್ತು. ಆ ಕಟ್ಟಡವನ್ನು ತೆರವುಗೊಳಿಸಬೇಕೆಂದು ಅವರು ವಿದ್ಯಾ ಇಲಾಖೆಗೆ ತಿಳಿಸಿದ ಕಾರಣ ಶಾಲೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಒದಗಿತು. ಶಾಲೆ ಮುಚ್ಚಬಾರದೆಂದು ಊರವರು ಕೊಟ್ಟ ಮನವಿಯನ್ನು ಪರಿಗಣಿಸಿ, ಆ ಕಟ್ಟಡದಿಂದ ಎರಡು ಕಿಲೋಮೀಟರ್‌ಗಳಷ್ಟು ದೂರದಲ್ಲಿರುವ ಶಿಮಂತೂರು ಗ್ರಾಮದ ಗಡಿಪ್ರದೇಶದಲ್ಲಿದ್ದ ಸರಕಾರಿ ಜಾಗದಲ್ಲಿ ಕಟ್ಟಡವೊಂದನ್ನು ಕಟ್ಟಿ, ಈ ಶಾಲೆಯನ್ನು ಅಲ್ಲಿಗೆ ವರ್ಗಾಯಿಸಲಾಯಿತು. ಆದರೆ ಹೊಸ ಕಟ್ಟಡದಲ್ಲಿ ನಡೆಯಲಾರಂಭಿಸಿದ ಶಾಲೆ ಆ ಪರಿಸರಕ್ಕೆ ಸಹಕಾರಿಯಾಯಿತೇ ಹೊರತು ಹಳೆಯ ಕಟ್ಟಡವಿದ್ದ ಪರಿಸರದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿಲ್ಲ. ಊರವರು ನನ್ನನ್ನು ಭೇಟಿ ಮಾಡಿ ತಮ್ಮ ಮಕ್ಕಳು ಶಾಲೆ ಇಲ್ಲದೆ ವಂಚಿತರಾಗುತ್ತಾರೆಂದು ವ್ಯಸನ ತೋಡಿಕೊಂಡರು. ನಾನು ಹಳೆಯ ಕಟ್ಟಡದ ಬಳಿ ಸರಕಾರಿ ಜಾಗವಿದೆಯೇ ಎಂದು ಪರಿಶೀಲಿಸಿ ಹೇಳುವಂತೆ ಕಂದಾಯ ಅಧಿಕಾರಿಗಳನ್ನು ವಿನಂತಿಸಿದೆ. ಸಮೀಪದ ಕೆಂಚನಕೆರೆ ಎಂಬಲ್ಲಿ ಸ್ಮಶಾನಕ್ಕೆ ಕಾದಿರಿಸಿದ ಜಾಗವಿದೆ ಎಂದು ತಿಳಿಯಿತು. ಆ ಜಾಗವನ್ನು ಶಾಲೆಗಾಗಿ

ಕಟ್ಟಡ ಕಟ್ಟಲು ಒದಗಿಸಲು ಅನುಮತಿ ನೀಡುವಂತೆ ವಿನಂತಿಸಿದೆ. ಕಂದಾಯ ಇಲಾಖೆ ಒಪ್ಪಿತು. ಆದರೆ ಕಟ್ಟಡ ಕಟ್ಟುವುದಕ್ಕೆ ಸರಕಾರ ಹಣ ಒದಗಿಸಲಿಲ್ಲ. ಆಗ ಮೂಲ್ಕಿ-ಮೂಡಬಿದಿರೆ ಶಾಸಕರು 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಅಕ್ಕಿ ಒದಗಿಸುವಂತೆ ಮಾಡುತ್ತೇನೆ ಎಂದರು. ಹೇಳಿದಂತೆಯೇ ಸುಮಾರು 20 ಕ್ವಿಂಟಾಲ್ ಅಕ್ಕಿ ನೀಡಿದರು. ಅಕ್ಕಿ ಚೀಲ ಬಿಚ್ಚಿ ನೋಡಿದರೆ ಎಲ್ಲಾ ಅಕ್ಕಿ ಹಾಳಾಗಿತ್ತು. (ಇದು ಸುಮಾರು 1985ರಲ್ಲಿ). ಕಟ್ಟಡ ಕೆಲಸ ನನ್ನಿಂದ ಎಂದು ನಾನು ಒಪ್ಪಿಕೊಂಡ ಮೇಲೆ, ಅದನ್ನು ಮಾಡುವುದು ನನ್ನ ಜವಾಬ್ದಾರಿ. ಒಂದು ಲಕ್ಷಕ್ಕೂ ಮೇಲ್ಪಟ್ಟು ಹಣ ಹಾಕಿ ವಿಶಾಲವಾದ ಶಾಲಾ ಕಟ್ಟಡ ಕಟ್ಟಿಸಿ, ಮೈದಾನ ಸಮತಟ್ಟುಗೊಳಿಸಿ ಸರಕಾರಕ್ಕೆ ಒಪ್ಪಿಸಿದೆ.

ಇಂದು, ಕಿಲ್ಪಾಡಿ ಗ್ರಾಮದ ಕೆಂಚನಕೆರೆಯಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾರ್ಯನಿರ್ವಹಿಸುತ್ತಿದೆ. ನಾವು ಈ ಶಾಲೆಯನ್ನು ಪ್ರಾರಂಭಿಸುವವರೆಗೆ, ಈ ಪರಿಸರದಲ್ಲಿ ಶಾಲೆ ತೆರೆಯುತ್ತೇವೆಂದು ಯಾರೂ ಮುಂದೆ ಬಂದವರಿಲ್ಲ. ಈ ಶಾಲೆ ಪ್ರಾರಂಭವಾದ ಒಡನೆಯೇ ಹತ್ತಿರದ ಲಿಂಗಪ್ಪಯ್ಯ ಕಾಡು ಮತ್ತು ಕೆರೆಕಾಡು- ಹೀಗೆ ಎರಡು ಕಡೆಗಳಲ್ಲಿ ಸರಕಾರ ಎರಡು ಶಾಲೆಗಳನ್ನು ತೆರೆಯಿತು. ಆದರೆ ಈ ಶಾಲೆ ಚೆನ್ನಾಗಿ ನಡೆಯುತ್ತಿದೆ.

ಕಕ್ವ ಶಾಲೆ

ಮೂಲ್ಕಿಯ ಸಮೀಪದ ಕಕ್ವ ಅತಿಕಾರಿಬೆಟ್ಟು ಎಂಬಲ್ಲಿ ಒಂದು ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯನ್ನು ನಡೆಸಲು ಆಡಳಿತ ಮಂಡಳಿಗೆ ಸಾಧ್ಯವಾಗದೆ ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಬಂತು. ಆಗ ನನಗೆ ಶಾಲೆಗಳನ್ನು ತೆರೆಯುವ ಹುಚ್ಚು! ನಾನು ತೆರೆಯಲೇ ಎಂದು ಅವರಲ್ಲಿ ವಿಚಾರಿಸಿದೆ. ಕ್ರಯ ನಿಗದಿಸಿ ನೀಡಿದರು. ಆಡಳಿತದ ಅಧಿಕಾರವನ್ನು ಪಟೇಲ್ ವಾಸುದೇವರಾವ್ ಟ್ರಸ್ಟಿಗೆ ನೀಡಿದರು. ಶಾಲೆಗೆ ಬರಬೇಕಾದರೆ ಒಬ್ಬ ಕ್ರೈಸ್ತ ಅಧ್ಯಾಪಕರ ಜಾಗದಲ್ಲೇ ನಡೆದುಕೊಂಡು ಬರಬೇಕು ಆ ಅಧ್ಯಾಪಕರು ಆ ಶಾಲೆಯವರೇ ಆಗಿದ್ದರೂ, ಶಾಲೆಗೆ ಬರಲು ಮಕ್ಕಳು ಬಳಸುವ ಆ ಹಾದಿಯನ್ನು ಮುಚ್ಚಿದರು. ಮಕ್ಕಳಿಗೆ ಶಾಲೆಗೆ ಬರಲು ತೊಂದರೆಯಾಯಿತು. ವಿನಂತಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಜಾಗವನ್ನೇ ವಶಪಡಿಸಿಕೊಳ್ಳಲು ನಿರ್ಧರಿಸಿ ಸರಕಾರದ ಮೊರೆ ಹೊಕ್ಕೆ. ವಿಧ್ಯುಕ್ತ ಪ್ರಕ್ರಿಯೆ ಮುಗಿದು ಸರಕಾರಕ್ಕೆ ಹಣವನ್ನೂ ಕಟ್ಟಲಾಯಿತು. ಆದರೆ ನಮ್ಮ ವಶಕ್ಕೆ ಒಪ್ಪಿಸುವ ಸಮಯದಲ್ಲಿ ಸಹಾಯಕ ಕಮೀಶನರರ ಕಛೇರಿಯ ಗುಮಾಸ್ತ ಒಂದು ಟಿಪ್ಪಣಿ ಬರೆದ. ಈ ಟಿಪ್ಪಣಿಗೆ ಹಿನ್ನೆಲೆಯೇನೆಂದರೆ- ಪುತ್ತೂರು ದೇವಸ್ಥಾನದ ಮುಂದುಗಡೆಯ ಜಾಗವನ್ನು ಸ್ವಾಧೀನಕ್ಕೆ ಬರೆದು, ಸರಕಾರಕ್ಕೆ ಹಣ ಸಂದಾಯ ಮಾಡಿದ ಬಳಿಕ ಜಾಗವನ್ನು ದೇವಸ್ಥಾನದ ವಶಕ್ಕೆ ನೀಡಲಾಗಿತ್ತು. ಜಾಗದ ಒಡೆಯರು ನೀಡಿದ ಹಣ ಸಾಲುವುದಿಲ್ಲವೆಂದು ನ್ಯಾಯಾಲಯದ ಮೊರೆಹೊಕ್ಕರು. ಸರಕಾರಿ ಇಲಾಖೆಯವರು ಕೋರ್ಟಿಗೆ ಸರಿಯಾಗಿ ಮಾಹಿತಿ ನೀಡಿರದ ಕಾರಣ ನಿಗದಿತ ಮೊತ್ತಕ್ಕಿಂತ ಹೆಚ್ಚು ಹಣ ಪಾವತಿಸುವಂತೆ ನ್ಯಾಯಾಲಯ ತಿಳಿಸಿತು. 'ಆದ್ದರಿಂದ, ನಿಮ್ಮ (ಎಂದರೆ ನಮ್ಮ ವಶಕ್ಕೆ ಬರುತ್ತಿರುವ) ಜಾಗಕ್ಕೆ ಹಾಗೇನಾದರೂ ಹೆಚ್ಚಿನ ಮೊತ್ತ ಪಾವತಿಸಬೇಕೆಂಬ ಆದೇಶ ಬಂದರೆ ಪಾವತಿಸಲು ಸಿದ್ಧರಿದ್ದೇವೆ ಎಂದು ವಿದ್ಯಾಂಗ ಉಪನಿರ್ದೇಶಕರು ಕೌಂಟರ್ ಗ್ಯಾರಂಟಿ (ಪ್ರತಿಖಾತರಿ) ನೀಡಬೇಕು' ಎಂದು ಆ ಗುಮಾಸ್ತ ನನಗೆ ತಿಳಿಸಿದ. ಆಗ ನಾನು, 'ಖಾಸಗಿ ಶಾಲೆಗೆ ಸರಕಾರ ಏಕೆ ಗ್ಯಾರಂಟಿ ನೀಡುತ್ತದೆ? ಹೆಚ್ಚಿನ ಮೊತ್ತದ ಅಗತ್ಯ ಬಂದರೆ ನಾನು ಪಾವತಿಸಲು ಸಿದ್ಧ ಎಂದು ಸ್ಟಾಂಪ್ ಪೇಪರ್‌ನಲ್ಲಿ ಬರೆದುಕೊಡುತ್ತೇನೆ; ಈ ಬಗ್ಗೆ ನನ್ನ ಸ್ವಂತ ಆಸ್ತಿಯನ್ನೇ

ಖಾತರಿ ನೀಡುತ್ತೇನೆ' ಎಂದೆ. ಆದರೆ ಸಹಾಯಕ ಕಮಿಶನರಾಗಲಿ, ಆ ಗುಮಾಸ್ತನಾಗಲಿ ಒಪ್ಪಲಿಲ್ಲ. ಆ ಅಧಿಕಾರಿಗೆ ಈ ಶಾಲೆಯ ಜಾಗಕ್ಕೆ ಸಂಬಂಧಿಸಿದ ಕೆಲಸದಲ್ಲಿ ಹಿಂದೆ ಎರಡು ಬಾರಿ ಗೌರವಧನ ನೀಡಿದ್ದೆ. ಆಮೇಲೆ ನೀಡಲು ಹೋಗಲಿಲ್ಲ. ಗುಮಾಸ್ತನೂ ಸಹಜವಾಗಿ ಬಹಳ ನಿರೀಕ್ಷೆಯಲ್ಲಿದ್ದ. ಹಣ ನೀಡದೆಹೋದಾಗ ಫೈಲು ಬದಿಗೆ ಸರಿಯಿತು. ಜಾಗ ವಶಕ್ಕೆ ತೆಗೆದುಕೊಳ್ಳುವ(ಎಕ್ಸ್ಪಾಯರ್) ಅವಧಿ ಮುಗಿದು ಹೋಯಿತು. ಭೂಸ್ವಾಧೀನ ಆಗಲೇ ಇಲ್ಲ. ಕಟ್ಟಿದ್ದ ಹಣವನ್ನು ಹಿಂದಕ್ಕೆ ಪಡೆದೆ. ಈ ಹಳೆ ಶಾಲೆಯ ಕಟ್ಟಡದ ರಿಪೇರಿಗಾಗಿ ಸಾವಿರಾರು ರೂಪಾಯಿ ಕಳೆದುಕೊಂಡೆ. ಕಿರುಕುಳ ಕೊಟ್ಟಿದ್ದ ಆ ಅಧ್ಯಾಪಕರು ನಿವೃತ್ತರಾದರು. ನಾನು ಯಾವ ಯಾವುದೋ ಕಾರಣಗಳನ್ನು ನೀಡಿದ್ದರಿಂದ ಅವರ ಪಿಂಚಣಿ ಕೈ ಸೇರಿಲ್ಲ. ಶಾಲೆ ಕುಂಟುತ್ತಾ ಸಾಗುತ್ತಿದೆ. ಆ ಜಾಗದ ಹತ್ತಿರವೇ ವಿಜಯ ಬ್ಯಾಂಕಿನ ಅಧ್ಯಕ್ಷರಾಗಿ ನಿವೃತ್ತರಾಗಿದ್ದ ಒಬ್ಬ ಗಣ್ಯ ವ್ಯಕ್ತಿಯ ಮನೆ. ಅವರು ಈಗಿಲ್ಲ. ಅವರು ಇದೇ ಶಾಲೆಯಲ್ಲಿಯೇ ಕಲಿತವರಂತೆ.

ಉಪ್ಪೂರು ಶಾಲೆ

ಉಡುಪಿಯ ಸಮೀಪದ ಉಪ್ಪೂರಿನಲ್ಲಿ ಒಂದು ಹಿರಿಯ ಪ್ರಾಥಮಿಕ ಶಾಲೆ. ಆ ಶಾಲೆ ರಘುರಾಮ ಹೆಗ್ಡೆ ಎಂಬ ಶಾಲಾ ಪರಿವೀಕ್ಷಣಾಧಿಕಾರಿಗಳದ್ದು. ಅವರ ಹೆಂಡತಿ ಶಕುಂತಳಾ ಅವರು ಆ ಶಾಲೆಯಲ್ಲಿ ಅಧ್ಯಾಪಕಿ. ಗಂಡ ಅಪಘಾತದಲ್ಲಿ ತೀರಿಕೊಂಡರು. ಶಾಲೆಯ ಅಧ್ಯಾಪಕರು ಇವರಿಗೆ ಕಿರುಕುಳ ನೀಡಿ ಇವರು ಹೇಳಿದಂತೆ ಕೇಳದೆ ಬಂಡಾಯ ಪ್ರಾರಂಭಿಸಿದರು. ಆಗ ಶಾಲೆಯನ್ನು ಮುಚ್ಚುವ ತೀರ್ಮಾನಕ್ಕೆ ಬಂದರು.

ಇದನ್ನು ತಿಳಿದ ನಾನು ನಮ್ಮ ಟ್ರಸ್ಟ್‌ಗೆ ಆ ಶಾಲೆಯನ್ನು ನೀಡಲು ವಿನಂತಿಸಿದೆ. ಆ ಜಾಗವನ್ನೂ, ಅದರ ಹತ್ತಿರವಿದ್ದ ಬೇರೆಯವರ ಜಾಗವನ್ನೂ ಖರೀದಿಸಿದೆ. ಶಕುಂತಳಾ ಟೀಚರ್ ಮುಖ್ಯ ಗುರುಗಳಾಗಿ ಸೇವೆ ಮಾಡುತ್ತಿದ್ದರು. ಆಗ ಎಲ್ಲಾ ಅಧ್ಯಾಪಕರಿಗೆ ಭಯ ಬಂತು. ಚೆನ್ನಾಗಿ ಕೆಲಸ ಮಾಡಲು ಪ್ರಾರಂಭಿಸಿದರು. ಶಾಲೆಯನ್ನು ಟ್ರಸ್ಟ್‌ಗೆ ವರ್ಗಾಯಿಸಲು ಕೊಟ್ಟ ಅರ್ಜಿ ಬೆಂಗಳೂರು-ಮಂಗಳೂರು ಯಾತ್ರೆಯಲ್ಲೇ ಇತ್ತು. ಹಲವಾರು ಸಾವಿರ ರೂಪಾಯಿ ಖರ್ಚಾದರೂ ಆದೇಶ ದೊರಕಲಿಲ್ಲ. ನನಗೆ ಲಂಚ ನೀಡಲು ಮನಸ್ಸು ಬಾರದಿದ್ದುದು ಇದಕ್ಕೆ ಕಾರಣ. ಈ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಒಡೆದು ಉಡುಪಿ ಬೇರೆ ಜಿಲ್ಲೆಯಾಯಿತು. ಮತ್ತೆ ಉಡುಪಿಯ ವಿದ್ಯಾಂಗ ಉಪನಿರ್ದೇಶಕರ ಮೂಲಕ ಪ್ರಯತ್ನ; ಸಚಿವರ ಮೂಲಕ ಒತ್ತಡ. ಆ ಸಮಯಕ್ಕೆ ಕಾಯ್ದೆ ಬದಲಾಯಿತು. ಖಾಸಗಿ ಶಾಲೆಗಳನ್ನು ಬೇರೆ ಜನರಿಗೆ, ಟ್ರಸ್ಟ್‌ಗಳಿಗೆ ವರ್ಗಾಯಿಸುವಂತಿಲ್ಲ. ನನ್ನ ಕೇಸು ಹಳೆಯದು ಎಂದು ವಾದಿಸಿದೆ. ಅಂತೂ 12 ವರ್ಷಗಳ ಸತತ ಹೋರಾಟದ ಬಳಿಕ, ಅನುಮತಿ ದೊರಕಿತು! ಈಗ ಶಾಲೆ ಚೆನ್ನಾಗಿ ನಡೆಯುತ್ತಿದೆ.

ತೋಕೂರಿನ ಶಾಲೆ

ನಮ್ಮ ತಾಳಿಪಾಡಿ ಗ್ರಾಮದ ಹತ್ತಿರದ ಗ್ರಾಮವಾದ ತೋಕೂರಿನ ಆರಾಧ್ಯದೈವ ಸುಬ್ರಹ್ಮಣ್ಯದೇವರು. ಆ ದೇವರ ಹೆಸರಿನಲ್ಲಿ ಸುಬ್ರಾಯರೆಂಬ ಮಹನೀಯರು ಶಾಲೆಯೊಂದನ್ನು ಪ್ರಾರಂಭಿಸಿದರು. ಅವರು ತೀರಿಕೊಂಡಾಗ ಮಕ್ಕಳೊಳಗೆ ಆಸ್ತಿಪಾಲು ವ್ಯವಹಾರವಾಗಿ, (1964ರಲ್ಲಿಯೇ) ಆ ಶಾಲೆಯನ್ನು ಮಾರುವುದಕ್ಕೆ ಹೊರಟರು.

ಆ ಸಂದರ್ಭದಲ್ಲಿ ಹತ್ತಿರದ ಪಕ್ಷಿಕೆರೆಯಲ್ಲಿ ಒಂದು ಚರ್ಚು ಪ್ರಾರಂಭವಾಗಿತ್ತು. ಆ ಚರ್ಚಿನ ಫಾದರ್ ಅವರು ಈ ಶಾಲೆಯನ್ನು 12 ಸಾವಿರ ರೂಪಾಯಿಗಳಿಗೆ ಕೇಳಿದರು. ಮಾತುಕತೆ ಮುಗಿದು, ಅವರಿಗೇ

ನೀಡುವುದೆಂದು ತೀರ್ಮಾನವಾಯಿತು. ಆಗ ಕೆಲ ಹಿಂದೂ ಮುಖಂಡರು ನನ್ನ ಬಳಿ ಬಂದು 'ಹೀಗಾಗಬೇಕೇ, ನಮ್ಮ ಕೈಯಲ್ಲೇ ಉಳಿಯಬಾರದೇ?' ಎಂದು ಚರ್ಚಿಸಿದರು. ಆಗ ನಾನು ವ್ಯಾಪಾರಕ್ಕೆ ಹೊರಟಿದ್ದವನು. ಕೈಯಲ್ಲಿ ಹಣವಿತ್ತು. ಸುಬ್ರಾಯರ ಮಕ್ಕಳನ್ನು ಸಂಪರ್ಕಿಸಿ 15 ಸಾವಿರಕ್ಕಾದರೆ ಶಾಲೆ ನನಗೆ ಇರಲಿ-ಎಂದೆ. ಅವರು ಒಪ್ಪಿದರು. ಐದು ಸಾವಿರ ಮುಂಗಡ ನೀಡಿದೆ.

ಆದರೆ ಈ ಹಣದ ಹಂಚಿಕೆ ಕುರಿತಂತೆ ಅಣ್ಣ-ತಮ್ಮಂದಿರಲ್ಲಿ ಒಮ್ಮತ ಮೂಡದೆ ಇದ್ದುದರಿಂದ ಅವರಿಗೆ ಜಾಗವನ್ನು ನನಗೆ ಮಾರಾಟ ಮಾಡಲು ಸಾಧ್ಯವಾಗದೆ ಹೋಯಿತು. ಶಾಲೆ ಹಾಗೆಯೇ ಮುಂದುವರಿಯಿತು. ಹಳೆಯಂಗಡಿ ನಾರಾಯಣ ಸನಿಲರು ಪಂಚಾಯಿತಿ ಮಾಡಿ ಮುಂಗಡ ಹಣ ನನಗೆ ಮರಳಿ ಸಿಗುವಂತೆ ಮಾಡಿದರು.

ಚರ್ಚಿಗೆ ಶಾಲೆ ಸಿಗದು ಎಂದಾದಾಗ ಚರ್ಚಿನ ವತಿಯಿಂದಲೇ ಅದರ ಆವರಣದಲ್ಲೇ ಖಾಸಗಿ ಶಾಲೆಯೊಂದು ಆರಂಭವಾಯಿತು. ಸುಬ್ರಾಯರ ಆಸ್ತಿಯ ಬಗ್ಗೆ ತಕರಾರೆದ್ದುದು, 10 ವರ್ಷಗಳ ಮೇಲಷ್ಟೆ ಕೊನೆಗೊಂಡಿತು. ಶಾಲೆ ಸುಬ್ರಾಯರ ಮಗಂದಿರಲ್ಲೊಬ್ಬರಾದ ದಾಮೋದರ ರಾಯರ ಪಾಲಿಗೆ ಬಂದಿತು. ಅವರು ಈ ಶಾಲೆಯನ್ನು ಮತ್ತೆ ಮಾರಾಟ ಮಾಡಲು ಮುಂದಾದರು. ಶಾಲೆ ಮಾಡುವ ಹುಚ್ಚು ಹತ್ತಿಸಿಕೊಂಡಿದ್ದ ನಾನು ಒಂದೂವರೆ ಲಕ್ಷ ರೂಪಾಯಿ ಸುರಿದು ಶಾಲೆ ಹಾಗೂ ಜಾಗವನ್ನು ಕೊಂಡುಕೊಂಡೆ.

ಆ ಸಮಯದಲ್ಲಿ, ಶಾಲಾಡಳಿತ ವರ್ಗಾವಣೆಯಾಗಬೇಕಿದ್ದರೆ ಪಂಚಾಯಿತಿ ಕಛೇರಿಯ ಒಪ್ಪಿಗೆ ಸಿಕ್ಕಿದರೆ ಸಾಕಿತ್ತು. ಕಕ್ವ ಮತ್ತು ತೋಕೂರಿನ ಶಾಲೆಗಳು ನಮ್ಮ ಟ್ರಸ್ಟ್‌ಗೆ ವರ್ಗಾವಣೆ ಮಾಡಲು ಒಪ್ಪಿಗೆ ದೊರಕಿತು. ಆದರೆ ಉಪ್ಪೂರು ಹಿರಿಯ ಪ್ರಾಥಮಿಕ ಶಾಲೆಯ ವರ್ಗಾವಣೆಯಾಗಬೇಕೆಂದಿದ್ದ ಹೊತ್ತಿಗೆ ಕಾನೂನು ಬದಲಾಯಿತು. ವರ್ಗಾವಣೆಗೆ ಸರಕಾರ ಒಪ್ಪಿಗೆ ನೀಡಬೇಕು. ಹಾಗಾಗಿ ಅರ್ಜಿ ಸಲ್ಲಿಸುವಾಗ ಹಳೆಯ ಕಾನೂನು, ಟಪ್ಪಣೆ ಮುಂದುವರಿದಾಗ ಹೊಸ ಕಾನೂನು. 10 ವರ್ಷಗಳ ಕಾಲ ಹೆಣಗಿದರೂ ಹಳೆಯ ಕಾನೂನಿನಡಿಯಲ್ಲಿ ವರ್ಗಾವಣೆ ಸಾಧ್ಯವಾಗಲಿಲ್ಲ, ಹೊಸ ಕಾನೂನಿನಂತೆ ಆಯಿತು.

ಈ ಎಲ್ಲಾ ಶಾಲೆಗಳಿಗೂ ಅಧ್ಯಾಪಕರ ಕೊರತೆ. ತಾತ್ಕಾಲಿಕ ನೆಲೆಯಲ್ಲಿ ದುಡಿಯುತ್ತಿರುವ ಅಧ್ಯಾಪಕರ ಬಾಬ್ತು ನಾನು ತಿಂಗಳೊಂದಕ್ಕೆ 10 ಸಾವಿರ ರೂ. ವಿನಿಯೋಗಿಸುತ್ತ ಬಂದಿದ್ದೇನೆ. ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ನನ್ನಿಂದ ಇಷ್ಟಾದರೂ ನೆರವು ನನ್ನಿಂದ ಸಾಧ್ಯವಾಗುತ್ತಿದೆಯಲ್ಲ- ಎಂಬ ಸಮಾಧಾನ ನನಗೆ.

ಮೋಸದ ನಿಶ್ಚಿತಾರ್ಥ

ಹಳೆಯಂಗಡಿಯವರ ವರ, ಕುಳಾಯಿಯವರ ವಧು. ಮದುವೆ ನಿಶ್ಚಿತಾರ್ಥವಾಗಿ ವಧುವಿನ ಕಡೆಯವರು ಮದುವೆ ತಯಾರಿಗೆ ಮುಂದಾದರು. ಎಂಟು ಪವನು ಚಿನ್ನ, ಹತ್ತು ಸಾವಿರ ನಗದು ವರದಕ್ಷಿಣೆ. ಆಮಂತ್ರಣ ಮುದ್ರಣ ಮಾಡಿ ಹಂಚಿಯೂ ಆಯಿತು. ಕಲ್ಯಾಣ ಮಂಟಪ ನಿಗದಿಪಡಿಸಿ ಅಡುಗೆಯವರಿಗೆ ಮುಂಗಡ ನೀಡಿಯೂ ಆಯಿತು. ಮದುವೆಗೆ ಮೂರು ದಿನಗಳಿವೆ ಎನ್ನುವಾಗ ಮದುಮಗ ಬಂದು, 'ನನ್ನ ಅಕ್ಕನಿಗೆ ಮದುವೆಗೆ ಬರಲಾಗುವುದಿಲ್ಲ, ಮದುವೆಯನ್ನು ಮುಂದೂಡಲಾಗಿದೆ' ಎಂದು ತಿಳಿಸಿದ! ಹುಡುಗಿಯ ಕಡೆಯವರು ಗಲಿಬಿಲಿಗೊಂಡರು. ವಿಚಾರಿಸಿದಾಗ ಮುಲ್ಕಿ ವಡಭಾಂಡೇಶ್ವರದ ಅರ್ಚಕರ ಮಗಳ ಜೊತೆ ಒಂದು ವಾರದ ಮೊದಲು ಈತನಿಗೆ ಮದುವೆಯಾದ ಬಗ್ಗೆ ತಿಳಿಯಿತು. ಹುಡುಗಿಯ ತಂದೆ ಹುಡುಗನಲ್ಲಿ ವಿಚಾರಿಸಿದಾಗ ಮದುವೆ ಆಗಿರುವ ಸುದ್ದಿ ಸುಳ್ಳೆಂದೂ, ಆರು ತಿಂಗಳ ಅನಂತರ ನಿಮ್ಮ ಹುಡುಗಿಯನ್ನು ಮದುವೆ ಆಗುವೆನೆಂದೂ ತಿಳಿಸಿದ.

ಇದರಿಂದ ಬೇಸರಗೊಂಡ ಹುಡುಗಿಯ ತಂದೆ ತಾನು ನೀಡಿದ ಬಂಗಾರ ಮತ್ತು ಹಣವನ್ನು ಹಿಂತಿರುಗಿಸಲು ತಿಳಿಸಿದರು. ಹುಡುಗ ಹಣವನ್ನು ಹಿಂತಿರುಗಿಸುವುದಿಲ್ಲವೆಂದು ಗದರಿಸಿದ. ಹುಡುಗಿಯ ತಂದೆ ನನ್ನನ್ನು ಸಂಪರ್ಕಿಸಿ ಏನು ಮಾಡಬೇಕೆಂದು ವಿಚಾರಿಸಿದರು. ಮರುದಿನ ನಾಲ್ಕಾರು ಮಂದಿ ಬೆಳಗಿನಿಂದ ಅವರ ಮನೆಯ ಮುಂದೆ ಸತ್ಯಾಗ್ರಹ ಕುಳಿತುಕೊಳ್ಳುವಂತೆ ಸಲಹೆ ಮಾಡಿದೆ. ನಾನು ಸಾಯಂಕಾಲ ಆರು ಗಂಟೆಗೆ ಬರುತ್ತೇನೆ ಎಂದೆ. ವಧುವಿನ ಸಂಬಂಧಿಕರು ನಾನು ತಿಳಿಸಿದಂತೆ ಮನೆಯ ಮುಂದೆ ಸತ್ಯಾಗ್ರಹ ಕುಳಿತರು. ಹುಡುಗನ ಮನೆಯವರು ಬಾಗಿಲನ್ನೇ ತೆರೆಯಲಿಲ್ಲ. ಸಾಯಂಕಾಲ ನಾನು ಹಲವು ಗಣ್ಯರನ್ನು ಕರೆದುಕೊಂಡು ಅವರ ಮನೆಗೆ ಹೋದೆ. ಅವರ ತಾಯಿ 'ನನ್ನ ಮಗ ಮನೆಯಲ್ಲಿ ಇಲ್ಲ' ಎಂದು, ನಾವು ವಿಚಾರಿಸಿದಾಗ ತಿಳಿಸಿದರು. ಆದರೆ ಹತ್ತಿರದ ಮನೆಯವರು ಆತ ಬೆಳಿಗ್ಗೆ ಮನೆಯಲ್ಲೇ ಇದ್ದನೆಂದೂ ಆತನ ಹೆಂಡತಿಯೂ ಮನೆಯಲ್ಲೇ ಇದ್ದಾಳೆಂದೂ ತಿಳಿಸಿದರು. ಪರಿಸ್ಥಿತಿಯನ್ನು ಅರಿತ ಹುಡುಗಿಯ ಬಂಧುಗಳು ಮೂಲ್ಕಿ ಪೊಲೀಸ್ ಸ್ಟೇಶನಿಗೆ ದೂರು ನೀಡಿ ರಕ್ಷಣೆ ನೀಡುವಂತೆ ಬೇಡಿಕೊಂಡರು. ಆದರೆ ಪೊಲೀಸರು ಬರಲಿಲ್ಲ. ನಾನು ಅವನ ತಾಯಿಯೊಡನೆ 'ನಿಮ್ಮ ಮಗ ಒಳಗೆಯೇ ಇದ್ದಾನೆ. ಅದು ನಮಗೆ ಗೊತ್ತಿದೆ. ಆತ ಹೊರಗೆ ಬಂದು ಕ್ಷಮೆ ಕೇಳಿ ಬಂಗಾರ, ಹಣವನ್ನು ಹಿಂತಿರುಗಿಸಿದರೆ ನಾವೇನೂ ಮಾಡುವುದಿಲ್ಲ' ಎಂದು ತಿಳಿಸಿದೆ. ಆದರೆ ತಾಯಿ, 'ಆತ ಮನೆಗೆ ಬಂದು ಮೂರು ದಿನವಾಯಿತು' ಎಂದರು. ಆಗ ನಾನು 'ಖುದ್ದಾಗಿ ಪರಿಶೀಲಿಸುವೆ' ಎಂದು ಮನೆಯ ಒಳಗೆ ಹೋಗಲು ಪ್ರಯತ್ನಿಸಿದೆ. ಆ ಮಹಿಳೆ ಬಾಗಿಲಿಗೆ ಅಡ್ಡವಾಗಿ ನಿಂತು 'ಒಳಬಂದರೆ ಜಾಗ್ರತೆ' ಎಂದರು. ಆಗ ನಾನು ಕೆರಳಿದೆ. ಇನ್ನು ಐದು ನಿಮಿಷ ಸಮಯ ನೀಡುತ್ತೇನೆ. ಆತ ಹೊರಗೆ ಬಂದು ನಮ್ಮೊಡನೆ ಕ್ಷಮೆ ಯಾಚಿಸಬೇಕು. ಇಲ್ಲವಾದರೆ ಬಲಾತ್ಕಾರವಾಗಿ ಮನೆ ಪ್ರವೇಶಿಸುತ್ತೇನೆ' ಎಂದು ಎಚ್ಚರಿಕೆ ನೀಡಿದೆ. ಆಗ ಓರ್ವ ಮಹಿಳೆ ಹೊರಬಂದು 'ನಾನು ಆತನ ಪತ್ನಿ' ಎಂದು ಪರಿಚಯಿಸಿಕೊಂಡಳು. ನಾನು ಅವಳೊಡನೆ ಆಕೆಯ ಗಂಡ ಮಾಡಿದ ಅವಾಂತರದ ಬಗ್ಗೆ ತಿಳಿಸಿದೆ. ಆದರೆ ಆ ಹುಡುಗಿ, 'ನಮ್ಮ ಊರಿನಲ್ಲಿ ಮದುವೆ ನಿಶ್ಚಯಿಸುವುದು, ಬಿಡುವುದು ಸಾಮಾನ್ಯ' ಎಂದು ಹೇಳಬೇಕೆ! ನನಗೆ ಸಹಿಸಲಾಗಲಿಲ್ಲ. 'ನಡಿ ಒಳಗೆ. ನಿನ್ನ ಗಂಡನನ್ನು ಹೊರಗೆ ಕಳುಹಿಸು. ಇನ್ನೆರಡು ನಿಮಿಷದಲ್ಲಿ ಆತ ಬಾರದೆ ಇದ್ದರೆ ನಾವೆಲ್ಲಾ ಮನೆಯೊಳಗೆ ಬಂದು ಆತನನ್ನು ಹೊರತರಬೇಕಾಗುತ್ತದೆ. ತಡೆದರೆ ನಿಮ್ಮೆಲ್ಲರನ್ನು ಹೊಡೆಯುತ್ತೇನೆ' ಎಂದು ಗರ್ಜಿಸಿದೆ. ಆಗ ಮಾಳಿಗೆಯ ಮೆಟ್ಟಿಲಿನ ಅಡಿಯಲ್ಲಿ ಅಡಗಿ ಕುಳಿತಿದ್ದ ಪತಿರಾಯ ಹೆದರಿ ಹೊರಗೆ ಬಂದು 'ನನ್ನಿಂದ ತಪ್ಪಾಯಿತು' ಎಂದು ಕ್ಷಮೆ ಕೇಳಿದ. ಮರುದಿನ ಬೆಳಿಗ್ಗೆ ಬಂಗಾರ ಮತ್ತು ಹಣವನ್ನು ಹಿಂತಿರುಗಿಸುವುದಾಗಿ ಒಪ್ಪಿದ. ನಾವು ಸಮಾಧಾನಗೊಂಡು ಹಿಂತಿರುಗಿದೆವು. ಮರುದಿನ ಎಲ್ಲವನ್ನೂ ಹಿಂತಿರುಗಿಸಿದ.

ಆದರೆ ಮನುಷ್ಯನ ಸ್ವಭಾವ ಬದಲಾಗದು. ಆತ ಮದುವೆ ಮಾಡಿಕೊಂಡ ವಡಭಾಂಡೇಶ್ವರದ ಹುಡುಗಿಗೆ ಒಂದು ಮಗು ಆದ ಮೇಲೆ ಅವಳನ್ನು ವರದಕ್ಷಿಣೆಗಾಗಿ ಪೀಡಿಸಲಾರಂಭಿಸಿದ. ಜಗಳ ತಾರಕಕ್ಕೆ ಹೋಗಿ ಕಾರ್ಕಳ ಕೋರ್ಟಿನಲ್ಲಿ ವಿವಾಹ ವಿಚ್ಛೇದನ ಅರ್ಜಿ ಸಲ್ಲಿಸಲಾಯಿತು. ಮತ್ತೆ ಹುಡುಗಿ ಹಾಗೂ ಅವಳ ತಂದೆ ನನ್ನಲ್ಲಿಗೆ ದೂರು ತಂದರು. ಆಗ ನಾನು, 'ನಿನ್ನ ಗಂಡನ ಮನೆಗೆ ಬಂದಾಗ ನಿಮ್ಮ ಊರಿನಲ್ಲಿ ಇದು ಸಾಮಾನ್ಯ ಎಂದೆ! ಈಗ ನಿನಗೇ ಕಷ್ಟ ಬಂದಾಗ ಇಲ್ಲಿ ಬಂದಿದ್ದೀಯಾ? ಎಂದು ಛೀಮಾರಿ ಹಾಕಿ ಕಳುಹಿಸಿದೆ. ಒಮ್ಮೆ ನಾನು ಯಾವುದೋ ಕೇಸಿನ ನಿಮಿತ್ತ ಕಾರ್ಕಳ ಕೋರ್ಟಿಗೆ ಹೋಗಿದ್ದಾಗ ಆ ವಿಚ್ಛೇದನ ಕೇಸು ಕೂಡ ಆ ಕೋರ್ಟಿನಲ್ಲಿತ್ತು. ಗಂಡ-ಹೆಂಡತಿ ಇಬ್ಬರೂ ಕಟಕಟೆ ಏರಿದ್ದರು. ನನಗೆ ಬಹಳ ಬೇಸರವಾಯಿತು. ವಕೀಲರೊಡನೆ ಮಾತನಾಡಿ ಇಬ್ಬರನ್ನು ಒಂದಾಗಿಸುವ ಪ್ರಯತ್ನ ಮಾಡಿದೆ. ರಾಜಿ

ಆಯಿತು. ಈಗ ಗಂಡ-ಹೆಂಡತಿ ಸುಖವಾಗಿ ಅನ್ಯೋನ್ಯವಾಗಿದ್ದಾರೆ.

ಜೀವ ಉಳಿಸಿದ ಭಾಗ್ಯ

ಸುರತ್ಕಲ್‌ನಲ್ಲಿ ಒಂದು ಬಸ್ಸು ಅಪಘಾತಕ್ಕೀಡಾಯಿತು. ಆ ಹೊತ್ತಿಗೆ ಆ ದಾರಿಯಾಗಿ ನಾನು ಬರುತ್ತಿದ್ದೆ. ಗಾಯಾಳುಗಳನ್ನೆಲ್ಲಾ ನಾನು ಹಾಗೂ ಇತರರ ಸಹಾಯದಿಂದ, ಕುಳಾಯಿಯಲ್ಲಿ ಆಗ ತಾನೆ ಪ್ರಾರಂಭವಾಗಿದ್ದ ಒಂದು ಆಸ್ಪತ್ರೆಗೆ ಸೇರಿಸಿದೆ. ಸಾಧ್ಯವಾದಷ್ಟು ಗಾಯಾಳುಗಳ ಮನೆಗೆ ದೂರವಾಣಿ ಮಾಡಿ ತಿಳಿಸಿ, ನಾನು ನನ್ನ ಕೆಲಸಕ್ಕೆ ತೆರಳಿದೆ. ಮರುದಿನ ಆಸ್ಪತ್ರೆಯ ವೈದ್ಯರಿಂದ ಕರೆಬಂತು. 'ಗಾಯಾಳು ಒಬ್ಬನ ಕಿವಿ, ಮೂಗಿನಲ್ಲಿ ರಕ್ತ ಸೋರುತ್ತಿದೆ. ಕಣ್ಣು ತೆರೆಯುವಂತಿಲ್ಲ. ಆದರೆ, ಅರೆಪ್ರಜ್ಞಾವಸ್ಥೆಯಲ್ಲಿ ನಿಮ್ಮ ಹೆಸರನ್ನು ಹೇಳುತ್ತಿದ್ದಾನೆ. ಕಿವಿಯಲ್ಲಿ ರಕ್ತ ಬರುತ್ತಿರುವುದರಿಂದ ಬದುಕುವ ಅವಕಾಶ ಕಡಿಮೆ' ಎಂದು ತಿಳಿಸಿದರು. 'ಒಮ್ಮೆ ಬಂದು ನೋಡಿ ಹೋಗುತ್ತೀರಾ' ವಿನಂತಿಸಿದರು. ಆ ಗಾಯಾಳುವನ್ನು ಕಾರಿನಲ್ಲಿ ಎತ್ತಿ ಇಡುವಾಗ ಅವರಿಗೆ ಸ್ಮೃತಿ ಇತ್ತು. ಆಗ ನನ್ನನ್ನು ನೋಡಿದ್ದರು. ಅವರು ಉಡುಪಿಯ ಸಂಸ್ಕೃತ ಕಾಲೇಜಿನ ಅಧ್ಯಾಪಕರು. ನಾನು ಕೂಡಲೇ ಹೋಗಿ ಅವರ ಹತ್ತಿರ ನಿಂತೆ. ವೈದ್ಯರು ನನ್ನ ಹೆಸರು ಹೇಳಿ ನಾನು ಬಂದಿದ್ದೇನೆಂದು ತಿಳಿಸಿದರು. ಅಷ್ಟರವರೆಗೆ ಕಣ್ಣು ತೆರೆಯದಿದ್ದ ವ್ಯಕ್ತಿ ಕಣ್ಣು ತೆರೆದರು. ನಾನು ಧೈರ್ಯ ತುಂಬಿದೆ. ಪವಾಡವೆಂಬಂತೆ ಮರುದಿನ ಎದ್ದು ಕುಳಿತರು. ವೈದ್ಯರಿಗೆ ಆಶ್ಚರ್ಯ. ಒಂದು ವಾರದಲ್ಲಿ ಗುಣಮುಖರಾಗಿ ತೆರಳಿದರು. ಭಾಗ್ಯವಂತರನ್ನು ನೋಡಿದರೆ ಸಾವು ಕೂಡ ದೂರ ಹೋಗುತ್ತದೆಂದು ವೈದ್ಯರು ಸಂತಸ ವ್ಯಕ್ತಪಡಿಸಿದರು.

ತಂದೆಯ ಪ್ರೀತಿ, ಮಕ್ಕಳ ಲೆಕ್ಕಾಚಾರ

ಕೊಲ್ಲೂರಿನ ದೇವಸ್ಥಾನದ ಮೊಕ್ತೇಸರನಾಗಿದ್ದ ಸಮಯ. ಒಂದು ರಾತ್ರಿ ಊರಿನತ್ತ ಬರುತ್ತಿದ್ದಾಗ ಉಡುಪಿ ಬಳಿಯ ಬ್ರಹ್ಮಾವರದ ಬಳಿ ಒಂದು ರಸ್ತೆ ದುರಂತವಾಗಿ ಯಾರೋ ಎಂಭತ್ತು ವರ್ಷದ ಮುದುಕರ ಕಾಲುಗಳಿಂದ ರಕ್ತ ಹರಿಯುತ್ತಿತ್ತು. ನಾಲ್ಕೈದು ಜನಕ್ಕೆ ಸಣ್ಣಪುಟ್ಟ ಗಾಯಗಳಾಗಿವೆ. ಇವರನ್ನು ಎಲ್ಲಿಗೆ ಕರೆದುಕೊಂಡು ಹೋಗಬೇಕು ಎಂದು ಕೇಳಿದೆ. ಇವರ ಮಗ ಮಣಿಪಾಲ ಆಸ್ಪತ್ರೆಯಲ್ಲಿ ರೋಗಿಯಾಗಿರುವ ಬಂಧುವನ್ನು ನೋಡಲು ಹೋಗಿದ್ದಾರೆ, ಅಲ್ಲಿಗೆ ಇವರನ್ನು ಕರೆದುಕೊಂಡು ಹೋಗಿ ಮಗನ ಸುಪರ್ದಿಗೆ ಬಿಟ್ಟುಬಿಡುವುದಾಗುತ್ತಿತ್ತು ಎಂದು ಆ ವೃದ್ಧರ ಸಂಬಂಧಿಕರು ಹೇಳಿದರು. ಆ ವೃದ್ಧರನ್ನು ನನ್ನ ಗಾಡಿಯಲ್ಲಿ ಎತ್ತಿ ಇಡಲು ತಿಳಿಸಿದೆ. ಎತ್ತಿ ಇಡುವುದರ ಜೊತೆಗೆ ಆರು ಜನ ಗಾಡಿ ಹತ್ತಿದರು. ನನಗೆ ಕುಳಿತುಕೊಳ್ಳಲು ಜಾಗ ಸಿಗಲಿಲ್ಲ. ನಮ್ಮ ವಾಹನ ಚಾಲಕ ಸುಂದರನೊಡನೆ, ಇವರನ್ನು ಮಣಿಪಾಲಕ್ಕೆ ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಅವರ ಮಗನನ್ನು ಹುಡುಕಿ ಇವರನ್ನು ಒಪ್ಪಿಸಿ ಉಡುಪಿ ಬಸ್ಸು ನಿಲ್ದಾಣಕ್ಕೆ ಬರುವಂತೆ ತಿಳಿಸಿದೆ. ನಾನು ಬಸ್ಸು ಹತ್ತಿ ಉಡುಪಿಗೆ ಬಂದೆ. ಕಾರು ಮಣಿಪಾಲದಿಂದ ಉಡುಪಿಗೆ ಬಂದಾಗ ಅವರ ಸೀಟು ರಕ್ತದಿಂದ ಒದ್ದೆಯಾಗಿತ್ತು. ನಮ್ಮ ವಾಹನ ಚಾಲಕ ಸುಂದರ ಮಣಿಪಾಲದಲ್ಲಿ ತನಗಾದ ಅನುಭವವನ್ನು ವಿವರಿಸಿದ. 'ಗಾಯಗೊಂಡ ವ್ಯಕ್ತಿಯ ಮಗನನ್ನು ಹುಡುಕಿದೆ. ಸಿಕ್ಕಿದರು. ಗಾಯಾಳುವನ್ನು ಎತ್ತಿ ಸ್ಟ್ರೆಚರ್‌ನಲ್ಲಿ ಇಡಬೇಕಿತ್ತು. ಮಗ ಬಿಳಿಯ ಬಿಳಿ ಬಟ್ಟೆ ಧರಿಸಿದ್ದರು. ಕೈ, ಮೈಯಲ್ಲಿ, ಬಟ್ಟೆಯಲ್ಲಿ ರಕ್ತವಾಗಬಹುದೆಂದು ತಂದೆಯ ಕಾಲನ್ನು ಎತ್ತಿ ಹಿಡಿದುಕೊಳ್ಳಲಿಲ್ಲ, ಬದಲಾಗಿ ತಲೆಯ ಭಾಗದಲ್ಲಿ ಹಿಡಿದುಕೊಂಡರು! ನಾನೇ ಗಾಯವಾದ ಕಾಲಿನ ಭಾಗವನ್ನು ಹಿಡಿದು ಎತ್ತಿ ಸ್ಟ್ರೆಚರ್‌ನಲ್ಲಿ ಇಟ್ಟೆ. ಇವನೆಂತಹ ಮಗನಪ್ಪಾ?' ಅನ್ನಿಸಿತು ಎಂದ. ಆಗ ನಾನು ಲಯನ್ಸ್‌ನ ರಾಜ್ಯಪಾಲನಾಗಿದ್ದೆ. ನನ್ನ

ಕಾರಿನಲ್ಲಿ ನನ್ನ ಲಯನ್ಸ್ ಸ್ಲೋಗನ್ "ಕರ್ಮಣ್ಯೇವಾಧಿಕರಸ್ತೇ ಮಾ ಫಲೇಷು ಕದಾಚನ" ಎಂಬ ಗೀತಾ ವಾಕ್ಯವನ್ನು ಬರೆಸಿದ್ದೆ. ಸುಂದರನಿಗೆ ಅದನ್ನು ತೋರಿಸಿ 'ನೀನು ಬೇಸರಪಡಬೇಡ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ' ಎಂದು ಸಮಾಧಾನಪಡಿಸಿದೆ. ಒಂದು ವಾರದ ಅನಂತರ ವಾರ್ತಾ ಪತ್ರಿಕೆಯೊಂದರಲ್ಲಿ ಒಂದು ಪುಟದ ಮರಣ ಜಾಹೀರಾತು ಬಂತು. ಅವರು ಬೆಂಗಳೂರು, ಹೈದರಾಬಾದ್‌ಗಳಲ್ಲಿ ಹೊಟೇಲು ವ್ಯವಹಾರ ಮಾಡುತ್ತಿದ್ದ ಸಾಹುಕಾರರ ತಂದೆಯಂತೆ. ನಾನು ಅವರನ್ನು ಮಣಿಪಾಲಕ್ಕೆ ಕರೆದುಕೊಂಡು ಹೋದಾಗ ಬ್ರಹ್ಮಾವರದವರು ಎಂದು ಮಾತ್ರ ತಿಳಿದಿದ್ದೆ.

ಒಂದು ಸಲ ನಾನು ಕಾರ್ಯನಿಮಿತ್ತ ಹೈದರಾಬಾದಿಗೆ ಹೋಗಿದ್ದೆ. ಅಲ್ಲಿ ಹೊಟೇಲಿನ ಧನಿಗಳೊಬ್ಬರು ಬಂದು ತಮ್ಮ ಮನೆಗೆ ಕಾಫಿ ತಿಂಡಿಗೆ ಕರೆದರು. ಮನೆಗೆ ಹೋದೆ. ಅವರು ಮಾತನಾಡುತ್ತಾ 'ಆ ದಿನ ಬ್ರಹ್ಮಾವರದಲ್ಲಿ ಅಪಘಾತಕ್ಕೆ ಈಡಾದವರು ನನ್ನ ತಂದೆ. ನೀವು ಅವರನ್ನು ಮಣಿಪಾಲಕ್ಕೆ ತತ್‌ಕ್ಷಣ ಕರೆದುಕೊಂಡು ಬಂದದ್ದರಿಂದ ಮತ್ತೆ ಒಂದು ವಾರ ಕಾಲ ಬದುಕಿದರು. ಅವರ ತಲೆಯ ಭಾಗಕ್ಕೆ ಗಾಯಗಳಾಗದಿದ್ದುದರಿಂದ ಚೆನ್ನಾಗಿ ಮಾತನಾಡುತ್ತಿದ್ದರು. ಅದರಿಂದಾಗಿ ಅವರ ವ್ಯವಹಾರವನ್ನು ತಿಳಿದುಕೊಳ್ಳುವಂತಾಯಿತು' ಎಂದರು. ನಾನೇ ತಲೆ ತಗ್ಗಿಸಿದೆ. ತನ್ನ ತಂದೆಯನ್ನು ಉಳಿಸಿಕೊಳ್ಳಲಾಗಲಿಲ್ಲವೆಂಬ ಮಾತು ಅವರ ಬಾಯಿಂದ ಬರಲಿಲ್ಲ. ದೊಡ್ಡ ಸಂಸಾರ; ಎಲ್ಲಾ ಮಕ್ಕಳು ಊರಿಗೆ ಬಂದಾಗ ಅವರಿಗೆ ಕೈ ತುಂಬಾ ಹಣ ನೀಡುತ್ತಿದ್ದರು. ಆ ಹಣ ಯಾರ್‍ಯಾರಿಗೆ ನೀಡಿದ್ದಾರೆ? ಅದನ್ನು ಹೇಗೆ ಹಿಂದೆ ಪಡೆಯಬಹುದು? ಎಂಬ ಬಗೆಗೇ ಅವರ ಗಮನವಿತ್ತು. ಇಂತಹ ಮಕ್ಕಳು ನಮಗೆ ಬೇಕೆ? ಎಂಬ ಯೋಚನೆ ನನ್ನ ತಲೆಯಲ್ಲಿ ಹಾದುಹೋಯಿತು.

ಚಾಕಲೇಟ್ ಉಳಿಸಿದ ಜೀವ

ಮಂಗಳೂರಿನಲ್ಲಿ ಉರ್ವಸ್ಟೋರ್‌ನ ಬಳಿ ನಾನು ಕಾರಿನಲ್ಲಿ ಬರುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಓರ್ವ ಬಿದ್ದಿದ್ದ. ಕೈಸನ್ನೆ ಮಾಡಿ ಎಲ್ಲರನ್ನೂ ಕರೆಯುತ್ತಿದ್ದ. ಎಲ್ಲರೂ ಆತ ಕುಡಿದು ಬಿದ್ದಿದ್ದಾನೆಂದು ಭಾವಿಸಿ ಹತ್ತಿರವೇ ಹೋಗಲಿಲ್ಲ. ನಾನು ಕಾರು ನಿಲ್ಲಿಸಿ ಆತನ ಸಮೀಪ ಹೋದೆ. ಸಕ್ಕರೆ, ಸಕ್ಕರೆ ಎಂದು ಗೋಗರೆದ. ನಾನು ಒಡನೆಯೇ ಹತ್ತಿರದ ಅಂಗಡಿಗೆ ಹೋಗಿ ಚಾಕಲೇಟ್ ಖರೀದಿಸಿ ಆತನ ಬಾಯಿಯಲ್ಲಿ ಇರಿಸಿ ಗಾಡಿಯಲ್ಲಿದ್ದ ನೀರನ್ನು ಕುಡಿಸಿದೆ. ಎತ್ತಿ ತಂದು ರಸ್ತೆ ಬದಿಯಲ್ಲಿ ಕುಳ್ಳಿರಿಸಿದೆ. ಐದು ನಿಮಿಷಗಳ ಅನಂತರ ಆತ ಸುಧಾರಿಸಿದ. ಆತನಿಗೆ ಸಕ್ಕರೆ ಖಾಯಿಲೆ. ರೋಗಿಗಳಿಗೆ ಸಕ್ಕರೆ ಹೆಚ್ಚಾದರೂ, ಕಡಿಮೆ ಆದರೂ ಅಪಾಯ. ಈ ವ್ಯಕ್ತಿಗೆ ಸಕ್ಕರೆ ಕಮ್ಮಿಯಿತ್ತು. ಕುಸಿದುಬಿದ್ದಿದ್ದ. ನನ್ನ ಕಾಲು ಹಿಡಿದು 'ನನ್ನನ್ನು ಬದುಕಿಸಿದಿರಿ. ಜನರೆಲ್ಲ ನಾನು ಕುಡಿದು ಬಿದ್ದಿದ್ದೇನೆಂದು ಹತ್ತಿರ ಬರಲಿಲ್ಲ. ನನ್ನ ಪಾಲಿಗೆ ನೀವೇ ದೇವರು. ನೀವು ಬಾರದಿದ್ದರೆ ಕೆಲವೇ ಕ್ಷಣದಲ್ಲಿ ನಾನು ಹೆಣವಾಗುತ್ತಿದ್ದೆ' ಎಂದು ಕೃತಜ್ಞತೆ ಸಲ್ಲಿಸಿದ.

ಶವಸಾಗಿಸಲು ನೆರವಾದ ಪೊಲೀಸ್ ವ್ಯಾನ್!

ಪಾಂಗಾಳ (ಕಟಪಾಡಿ)ಯಲ್ಲಿ ಯಾತ್ರಾರ್ಥಿಗಳ ಒಂದು ಮೆಟಡೋರ್ ವ್ಯಾನ್ ಅಪಘಾತಕ್ಕೀಡಾಗಿ ವ್ಯಾನಿನಲ್ಲಿದ್ದ 25 ಜನರಲ್ಲಿ ಹತ್ತು ಜನ ಸ್ಥಳದಲ್ಲೇ ಮೃತಪಟ್ಟರು. ಯಾರದೋ ಮೆದುಳು ಸಿಡಿದು ರಸ್ತೆಯಲ್ಲಿ ಬಿದ್ದಿತ್ತು. ಕಾಗೆಗಳು ಅದನ್ನು ತಿನ್ನುತ್ತಿದ್ದವು. ನಾನು ಹಾಗೂ ನೂರ್ ಮಹಮ್ಮದ್ ಅದೇ ದಾರಿಯಲ್ಲಿ ಬರುತ್ತಿದ್ದೆವು. ಈ ಸಮಯದಲ್ಲಿ ಗಾಯಾಳುಗಳಿಗೆ ಯಾರೂ ಸಹಾಯಕ್ಕೆ ಮುಂದೆ ಬಾರದಿದ್ದುದನ್ನು ಕಂಡು ನಾವೇ ಪೊಲೀಸರಿಗೆ, ಅಂಬ್ಯುಲೆನ್ಸ್‌ನವರಿಗೆ ದೂರವಾಣಿ ಮಾಡಿ ತರಿಸಿಕೊಳ್ಳಬೇಕಾಯಿತು. ಶವಗಳನ್ನು

ಒಂದೇ ಗಾಡಿಯಲ್ಲಿ ಇರಿಸಲು ಸಾಧ್ಯವಾಗದೆ ಹೋದಾಗ ಪೊಲೀಸ್ ವಾಹನದಲ್ಲೇ ಉಳಿದ ಶವಗಳನ್ನು ಸಾಗಿಸಲಾಯಿತು. ಹೀಗೆ ಪೊಲೀಸ್ ವ್ಯಾನಿನಲ್ಲಿ ಶವಗಳನ್ನು ಸಾಗಿಸಿದ್ದು ಇದೇ ಮೊದಲು! ಎಲ್ಲ ಗಾಯಾಳುಗಳನ್ನೂ ಆಸ್ಪತ್ರೆಗೆ ಸೇರಿಸಿ, ನಾವು ನಮ್ಮ ಹಾದಿ ಹಿಡಿದೆವು.

ರದ್ದಾದ ಒಂದು ಆದೇಶ

ವಿಶ್ವವಿದ್ಯಾನಿಲಯಕ್ಕೆ ಎಷ್ಟು ಆಸ್ತಿ ಇದೆಯೋ ಅದರ ದಾಮಾಶಯದಂತೆ ಯು.ಜಿ.ಸಿ.ಯಿಂದ ಗ್ರ್ಯಾಂಟ್ ಬರುತ್ತದೆ. ಮಂಗಳೂರಿನ ಸರಕಾರಿ ಶಿಕ್ಷಣ ಕಾಲೇಜನ್ನು ತನ್ನ ಒಡೆತನಕ್ಕೆ ತೆಗೆದುಕೊಂಡರೆ ಕೇಂದ್ರ ಸರಕಾರದಿಂದ ಹೆಚ್ಚಿನ ಅನುದಾನ ಪಡೆಯಬಹುದು ಎಂಬ ಒಂದೇ ಉದ್ದೇಶದಿಂದ ಸರಕಾರ 1992ರಲ್ಲಿ ಆ ಮಹಾವಿದ್ಯಾಲಯವನ್ನು ವಿಶ್ವವಿದ್ಯಾಲಯಕ್ಕೆ ಸೇರಿಸುವ ಆದೇಶ ಹೊರಡಿಸಿತು. ಆಗ ಅಲ್ಲಿನ ಅಧ್ಯಾಪಕರು ಎಚ್ಚೆತ್ತು ಹೋರಾಟ ಮಾಡಿ ಅದನ್ನು ಹಾಗೆಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರು. ಅದು ಫಲಕಾರಿಯಾಗದೆಂದು ಕಂಡುಬಂದಾಗ ಎಲ್ಲರೂ ಸೇರಿ ನನ್ನ ಬಳಿ ಬಂದು ಈ ವಿಚಾರವನ್ನು ತಾವು ಕೈಗೆತ್ತಿಕೊಂಡು ನಮ್ಮನ್ನು ಉಳಿಸಬೇಕೆಂದು ವಿನಂತಿಸಿದರು. ಸರಕಾರ ಹಾಗೂ ವಿಶ್ವವಿದ್ಯಾಲಯಗಳ ವಿರುದ್ಧ ಹೋರಾಟ. ಆದರೂ ಆಗ ಸಚಿವರಾದ ಮಾನ್ಯ ಗೋವಿಂದಗೌಡರನ್ನು ನೋಡಿ ವಿವರಿಸಿದಾಗ ಅವರು ಆ ಆದೇಶವನ್ನು ರದ್ದುಪಡಿಸಿದರು. ಕೋಟ್ಯಂತರ ಬೆಲೆ ಬರುವ ಜಾಗ ವಿಶ್ವವಿದ್ಯಾಲಯಕ್ಕೆ ದೊರಕದೆ ಹೋಯಿತು. ಈಗ ಭವ್ಯ ಕಟ್ಟಡವಾಗಿ ಮಂಗಳೂರಿನ ನೆಹರು ಮೈದಾನಿನ ಸಮೀಪ ಸರಕಾರಿ ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯವಾಗಿ ರಾರಾಜಿಸುತ್ತಿದೆ. ನನ್ನ ಪ್ರಯತ್ನ ಸಫಲವಾಗಿ ಊರಿಗೆ ಉಪಕಾರವಾಯಿತು.

ಸಫಲಗೊಂಡ ಹೋರಾಟ

ಮುಂಬಯಿಗೆ ರೈಲ್ವೆ ಮಾರ್ಗದ ಕೆಲಸ ಪ್ರಾರಂಭವಾಗಿ, ಮೂಲ್ಕಿಯ ಈಗಿನ ರೈಲ್ವೆ ಸ್ಟೇಶನಿನ ಸಮೀಪ ಲಿಂಗಪ್ಪಯ್ಯ ಕಾಡಿನಲ್ಲಿ ರೈಲ್ವೆ ಓವರ್ ಬ್ರಿಡ್ಜ್ ಮಾಡುವಂತೆ ಆದೇಶವೂ ಆಗಿತ್ತು. ಇದರಿಂದ ರೈಲ್ವೇ ಸ್ಟೇಶನಿಗೆ ಹೋಗಲು, ಮಂಗಳೂರು, ಮೂಲ್ಕಿ, ಕಿನ್ನಿಗೋಳಿ ಬದಿಗೆ ಹೋಗಲು ಅನುಕೂಲವಾಗಿತ್ತು. ಯಾವುದೋ ಒತ್ತಡದಿಂದ ರೈಲ್ವೇ ಬ್ರಿಡ್ಜ್ ಯೋಜನೆ ಕೈಬಿಟ್ಟು ಗೇಟನ್ನು ಅಳವಡಿಸುವುದು ಎಂದು ತೀರ್ಮಾನಿಸಲಾಯಿತು. ಇನ್ನೊಂದು ಕಡೆ ಮೂಲ್ಕಿ-ಕಿನ್ನಿಗೋಳಿಯ ಮಾರ್ಗದ ಕಿಲ್ಪಾಡಿಯಲ್ಲಿ ರಸ್ತೆಯನ್ನು ಕಡಿದು ಹಾಕಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿತ್ತು. 10-9-1992ರಂದು 'ರಸ್ತೆ ತಡೆ' ರೂಪದಲ್ಲಿ ಬೃಹತ್ ಪ್ರತಿಭಟನೆಗೆ ಸಜ್ಜಾದಾಗ, ಜಿಲ್ಲಾಧಿಕಾರಿಗಳು, ಕೊಂಕಣ ರೈಲ್ವೆಯ ಮುಖ್ಯ ಇಂಜಿನಿಯರ್ ಬಂದು ರೈಲ್ವೆ ಮೇಲು ಸೇತುವೆಯನ್ನು ನಿರ್ಮಿಸುವುದಾಗಿಯೂ, ಕಿಲ್ಪಾಡಿಯ ಬ್ರಿಡ್ಜ್‌ನ ಮಾರ್ಗ ಸರಿಪಡಿಸುವುದಾಗಿಯೂ ತಿಳಿಸಿ ರಸ್ತೆ ತಡೆ ಚಳುವಳಿ ಕೈಬಿಡುವಂತೆ ವಿನಂತಿಸಿದರು.

ಲಯನ್ಸ್ ಕ್ಷೇತ್ರದಲ್ಲಿ

ಸಮಾಜಕ್ಕೆ ಏನಾದರೂ ಒಳ್ಳೆಯ ಕೆಲಸ ಮಾಡಬೇಕೆಂಬ ಹುಮ್ಮಸ್ಸಿನಲ್ಲಿ ಅಂತರಾಷ್ಟ್ರೀಯ ಲಯನ್ಸ್ ಸಂಸ್ಥೆಗೆ ಸೇರ್ಪಡೆಗೊಂಡೆ. ಪೆಟ್ರೋಲ್ ಪಂಪನ್ನು ಖರೀದಿಸಿದ ಸಮಯ (1977-78)ದಲ್ಲಿ, ಮೂಲ್ಕಿಯ ಲಯನ್ಸ್ ಕ್ಲಬ್ಬಿನ ಸ್ಥಾಪಕ ಸದಸ್ಯ ಡಾ. ಬಾಬು ಶೆಟ್ಟಿಯವರು ನನ್ನನ್ನು ಕ್ಲಬ್ಬಿನ ಸದಸ್ಯನನ್ನಾಗಿ ಸೇರಿಸಿಕೊಂಡರು. 1984-85ರಲ್ಲಿ ಅದರ ಕ್ಲಬ್ಬಿನ ಸದಸ್ಯನನ್ನಾಗಿ ಸೇರಿಸಿಕೊಂಡರು. 1984-85ರಲ್ಲಿ ಅದರ ಅಧ್ಯಕ್ಷನಾಗಿ

ಲಯನ್ಸ್ ಜಿಲ್ಲಾ (324ಡಿ4) ವ್ಯಾಪ್ತಿಯಲ್ಲಿ ಒಳ್ಳೆಯ ಸಮಾಜಸೇವೆ ಮಾಡಿದ ಉತ್ತಮ ಅಧ್ಯಕ್ಷನೆಂಬ ಪ್ರಶಸ್ತಿಗೆ ಪಾತ್ರನಾದೆ.

1985-86ರಲ್ಲಿ ನೇತ್ರಚಿಕಿತ್ಸೆ ಸೇವಾ ವಿಭಾಗದ ಅಧ್ಯಕ್ಷನಾಗಿ ನೂರಕ್ಕೂ ಹೆಚ್ಚು ನೇತ್ರ ಚಿಕಿತ್ಸೆ ಮಾಡಿದ ಕ್ಲಬ್ಬುಗಳಿಗೆ ತಲಾ 10,000 ರೂ.ಗಳ. ಸಹಾಯಧನ ಒದಗಿಸಿದೆ. ಸರಕಾರದ, ಲಯನ್ಸ್ ಸಂಸ್ಥೆಯ ಹಾಗೂ ಉತ್ಸಾಹದಿಂದ ನಮ್ಮ ಲಯನ್ಸ್ ಜಿಲ್ಲಾ ವ್ಯಾಪ್ತಿಯಲ್ಲಿನ ಎಂಟು ಕಂದಾಯ ಜಿಲ್ಲೆಗಳಲ್ಲಿ 10 ಸಾವಿರಕ್ಕಿಂತಲೂ ಅಧಿಕ ಬಡಜನರಿಗೆ ದೃಷ್ಟಿದಾನ ಒದಗಿಸುವುದು ಸಾಧ್ಯವಾಯಿತು. ಈ ಸಾಧನೆಗಾಗಿ ಸಂಸ್ಥೆ ನನ್ನನ್ನು ಅಮೇರಿಕದ ಮಿಯಾಮಿಗೆ ಕರೆಸಿಕೊಂಡು 'ನೈಟ್ ಆಫ್ ದ ಬ್ಲೈಂಡ್' ಎಂಬ ಬಿರುದನ್ನು ನೀಡಿ ಸನ್ಮಾನಿಸಿದ್ದಲ್ಲದೆ, ದೃಷ್ಟಿದಾನದ ಕಾರ್ಯಕ್ರಮಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿ, 'ಸೈಟ್ ಫಸ್ಟ್' ಕಾರ್ಯಕ್ರಮವನ್ನು ತನ್ನ ಮುಖ್ಯ ಕಾರ್ಯಕ್ರಮವನ್ನಾಗಿ ಹಮ್ಮಿಕೊಳ್ಳುತ್ತ ಬಂದಿದೆ. ಅದೇ ಹೊತ್ತಿಗೆ ಡಾ. ಎಂ.ಸಿ. ಮೋದಿ ಅವರು 'ಮಾನವೀಯತೆಯ ಹರಿಕಾರ' ಎಂಬ ಪುರಸ್ಕಾರ ನೀಡಿ ಹರಸಿದರು.

1986-87ರಲ್ಲಿ ಸಂಸ್ಥೆ ವಲಯಾಧ್ಯಕ್ಷನಾಗಿ, 1987-88ರಲ್ಲಿ ಉಪರಾಜ್ಯಪಾಲನಾಗಿ ಲಯನ್ಸ್ ಜಿಲ್ಲೆಯಲ್ಲೇ ಅತ್ಯುತ್ತಮ ಸೇವಾಕಾರ್ಯಕರ್ತನೆಂದು ಅಂತಾರಾಷ್ಟ್ರೀಯ ಗೌರವಕ್ಕೆ ಪಾತ್ರನಾದೆ.

1988-89ರಲ್ಲಿ ಸಂಸ್ಥೆಯ 'ವಸತಿ ಹೀನರಿಗೆ ವಸತಿ' ಎಂಬ ಕಾರ್ಯಕ್ರಮದ ಅಧ್ಯಕ್ಷನಾಗಿ ಕೆಲಸ ಮಾಡಿದೆ. ಈ ಅವಧಿಯಲ್ಲಿ ಪ್ರಕೃತಿ ವಿಕೋಪ ಸಂತ್ರಸ್ತರಿಗೆ ಧನಸಹಾಯ ನೀಡಿಕೆ, ಲಿಂಗಪ್ಪಯ್ಯ ಕಾಡು ಪ್ರದೇಶದ 1,650 ಬಡ ಕುಟುಂಬಗಳಿಗೆ ವಸತಿ ನಿರ್ಮಾಣಕ್ಕೆ ನಿವೇಶನ ನೀಡಿಕೆ ಹಾಗೂ ಆರ್ಥಿಕ ಸಹಕಾರ ಒದಗಣೆ, ಕೆರೆ ಕಾಡು ಪ್ರದೇಶದಲ್ಲಿ ಸುಮಾರು 300 ಮಂದಿಗೆ ಸರಕಾರದ ಜಾಗ ನೀಡಿ ಮನೆ ಕಟ್ಟಲು ಸಹಕಾರ, 50 ಸಾವಿರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ 25 ಮನೆಗಳನ್ನು ಕಟ್ಟಿಸುವಲ್ಲಿ ತಲಾ 25 ಸಾವಿರ ಧನ ಸಹಾಯ ವಿತರಣೆ, ಕೆಂಚನಕೆರೆಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಶಾಲಾ ಕಟ್ಟಡ ನಿರ್ಮಿಸಿ ಸರಕಾರಕ್ಕೆ ಅರ್ಪಣೆ, ವಿದ್ಯುತ್ತಿಲ್ಲದಿದ್ದ ಮನೆಗಳಿಗೆ ವಿದ್ಯುದೀಕರಣ ವ್ಯವಸ್ಥೆ- ಹೀಗೆ ನಮ್ಮ ಲಯನ್ಸ್ ಜಿಲ್ಲಾ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ ಬಡ ಜನತೆಗೆ ಸಲ್ಲಿಸಿದ ಸೇವೆಗಾಗಿ ಅಂತರಾಷ್ಟ್ರೀಯ ನಾಯಕತ್ವ ಪ್ರಶಸ್ತಿಗೆ ಭಾಜನನಾದೆ.

1989-90ರಲ್ಲಿ ವೃದ್ಧರ ಸೇವಾ ವಿಭಾಗದ ಅಧ್ಯಕ್ಷನಾಗಿ ನಾಡಿನೆಲ್ಲೆಡೆ ವೃದ್ಧಾಶ್ರಮಗಳಅಭಿವೃದ್ಧಿಗಾಗಿ ಶ್ರಮಿಸಿದೆ. ಅನುಕೂಲಸ್ಥರು ತಮ್ಮ ತಾಯ್ತಂದೆಯರನ್ನು ಆಶ್ರಮಕ್ಕೆ ಸೇರಿಸುವ ಚಾಳಿಯನ್ನು ತಡೆಗಟ್ಟುವ ಚಳವಳಿಯಲ್ಲಿ ತೀವ್ರವಾಗಿ ತೊಡಗಿಕೊಂಡು ಅಂಥವರ ಮನಸ್ಸನ್ನು ಗೆಲ್ಲುವ ಕಾರ್ಯದಲ್ಲಿ ಯಶಸ್ವಿಯಾದೆ. ಈ ಸಾಧನೆಗಾಗಿ ಅಂತಾರಾಷ್ಟ್ರೀಯ ಪ್ರಶಸ್ತಿಯೂ ನನಗೆ ಲಭಿಸಿತು.

1990-91ರಲ್ಲಿ ಲಯನ್ಸ್ ಜಿಲ್ಲಾಧ್ಯಕ್ಷನಾಗಿದ್ದಾಗ ಎಂಟು ಜಿಲ್ಲೆಗಳಲ್ಲಿ ಸಂಚರಿಸಿ, ಪರಿಸರ ಕುರಿತಂತೆ ಜನಜಾಗೃತಿ ಕೆಲಸದಲ್ಲಿ ನಿರತನಾಗಿ ಹರಿಹರ ಪಾಲಿಫೈಬರ್ಸ್, ಕುದುರೆ ಮುಖ ಅದಿರು ಕಾರ್ಖಾನೆಗೆ ಭೇಟಿ ನೀಡಿ ಸರಕಾರಕ್ಕೆ ವರದಿ ಸಲ್ಲಿಸಿದೆ. ಇದಕ್ಕಾಗಿ ಅಂತಾರಾಷ್ಟ್ರೀಯ ಗೌರವ ಪ್ರಾಪ್ತವಾದದ್ದಲ್ಲದೆ ಹಿರಿಯ ಪರಿಸರವಾದಿ ಡಾ|| ಕೋಟ ಶಿವರಾಮ ಕಾರಂತರಿಂದ 'ಪರಿಸರ ಪ್ರೇಮಿ' ಎಂಬ ಪುರಸ್ಕಾರಕ್ಕೆ ಪಾತ್ರನಾದೆ. ಲಯನ್ಸ್‌ನ ಕುಷ್ಠ ನಿರೋಧನ, ಸಂತಾನಶಕ್ತಿ ಹರಣ, ಪಶುಸಂಗೋಪನ ಮುಂತಾದ ನಾನಾ ವಿಭಾಗಗಳಲ್ಲಿ ಕೆಲಸ ಮಾಡಿ ಆಯಾ ಸೇವೆಗಳಿಗಾಗಿ ಅಂತರಾಷ್ಟ್ರೀಯ ಪಾರಿತೋಷಕಗಳನ್ನು ಪಡೆಯುವ ಸಾರ್ಥಕ ಕ್ಷಣಗಳೂ ನನ್ನ ಪಾಲಿಗೆ ಒದಗಿಬಂದಿವೆ.

ಮೂಲ್ಕಿಯ ಅಭಿವೃದ್ಧಿಗಾಗಿ

ಮೂಲ್ಕಿಯಲ್ಲಿ ಪೆಟ್ರೋಲ್ ಪಂಪು ಖರೀದಿಸಿ ವ್ಯವಹಾರ ಆರಂಭಿಸಿದ ಸಂದರ್ಭದಲ್ಲೇ ಮೂಲ್ಕಿಯ ಅಭಿವೃದ್ಧಿ ಕುರಿತಂತೆ ಹೆಚ್ಚಿನ ಆಸಕ್ತಿ ವಹಿಸಿದೆ.

ಇಲ್ಲಿನ ವಿಜಯ ರೈತ ಸೇವಾ ಸಹಕಾರ ಸಂಘದಲ್ಲಿ ನಿರ್ದೇಶಕನಾಗಿ ರೈತರ ಏಳಿಗೆಗಾಗಿ ಸುಮಾರು 30 ವರ್ಷಗಳಿಂದ ಶ್ರಮಿಸುತ್ತ ಬಂದಿದ್ದೇನೆ.

ಪಣಂಬೂರಿನಲ್ಲಿ ಜೀವವಿಮಾ ಕಛೇರಿ ಪ್ರಾರಂಭಿಸಲು ಅನುಮತಿ ದೊರೆತಾಗ ಅದನ್ನು ಎಂ.ಆರ್. ಎಚ್. ಪೂಂಜರ ಸಹಕಾರದಿಂದ ಮೂಲ್ಕಿಯಲ್ಲಿ ಸ್ಥಾಪಿಸುವಂತೆ ಮಾಡುವಲ್ಲಿ ಸಫಲನಾದೆ. ನನ್ನ ಕಟ್ಟಡದಲ್ಲೇ ಅದನ್ನು ಪ್ರಾರಂಭಿಸಲು ತೀರ್ಮಾನವಾಗಿತ್ತು. ಆದರೆ ಕೇಂದ್ರ ಸಚಿವ ಜನಾರ್ದನ ಪೂಜಾರಿಯವರು ಅದನ್ನು ಜಿಲ್ಲಾ ಸಂಘದ ಕಟ್ಟಡಕ್ಕೆ ವರ್ಗಾಯಿಸಿದರು. ಐಡಿಬಿಐ ಅಧ್ಯಕ್ಷರಾಗಿದ್ದ ಪೂಂಜರ ಸಹೋದರ ತನ್ನ ಹುಟ್ಟೂರಾದ ಮೂಲ್ಕಿಯಲ್ಲಿ ಶಾಖೆಯೊಂದನ್ನು ತೆರೆಯಲು ಅನುಮತಿ ನೀಡಿದರು. ಅದು ಮೂಲ್ಕಿಯಲ್ಲೇ ಆರಂಭವಾಗಬೇಕಿತ್ತು. ಆದರೆ ಅದು ಜನಾರ್ದನ ಪೂಜಾರಿಯವರ ಇರಾದೆಯ ಮೇರೆಗೆ, ಕೂಳೂರು ಹೊಳೆಯ ಬಾವಿಯಲ್ಲಿದ್ದ ದಾಮೋದರ ಸುವರ್ಣರ ಕಟ್ಟಡಕ್ಕೆ ಹೋಯಿತು. ಮೂಲ್ಕಿ ತಾಲೂಕು ರಚನೆಗೂ ನಾನು ಪ್ರಯತ್ನಿಸಿದ್ದೆ. ಆದರೆ ಕೆಲವರ ಅಪಪ್ರಚಾರದಿಂದಾಗಿ ಅದರಿಂದ ಹಿಂದೆ ಸರಿದೆ. ಮೂಲ್ಕಿ ನಾಡ ಕಛೇರಿ, ಗ್ರಾಮಚಾವಡಿ, ಪಶುಗಳ ಆಸ್ಪತ್ರೆ, ಕಟ್ಟಡಗಳ ನವೀಕರಣ ಮಾಡಿದೆ. ಮೂಲ್ಕಿಯ ಸರಕಾರಿ ಆಸ್ಪತ್ರೆಗೆ ನೀರೆತ್ತುವ ಯಂತ್ರ ಅಳವಡಿಸಿದ್ದಲ್ಲದೆ, ಅಲ್ಲಿನ ಹಾಸಿಗೆಗಳಿಗೆ ಶೀಟುಗಳನ್ನು ಖರೀದಿಸಿ ಒಪ್ಪಿಸಿದೆ. ಆಸ್ಪತ್ರೆಯ ಇದಿರಿನ ಟಿ.ಬಿ. ಆಸ್ಪತ್ರೆಯ ಕಟ್ಟಡದ ನವೀಕರಣ ಕಾರ್ಯ, ಆಸ್ಪತ್ರೆಯ ಆವರಣಕ್ಕೆ ಸುಣ್ಣ ಬಣ್ಣ ಕೊಡಿಸುವ ಕೆಲಸ ಇತ್ಯಾದಿಗಳನ್ನು ಪೂರೈಸಿಕೊಟ್ಟೆ. ಪೂಂಜ ಅವರ ನೆರವಿನಿಂದ ಐಟಿಐ ಸ್ಥಾಪಿಸುವಲ್ಲಿ ಸಫಲನಾದೆ. ತೋಕೂರಿನಲ್ಲಿರುವ ಖಾದಿ ಗ್ರಾಮೋದ್ಯೋಗ ಸಂಸ್ಥೆಗೆ ಸೇರಿದ 20 ಎಕರೆಗಳಷ್ಟು ಜಾಗವನ್ನು ಟ್ರಸ್ಟಿನ ಹೆಸರಿಗೆ ಮಾಡಿಸಿಕೊಟ್ಟೆ.

ಬ್ಯಾಂಕೊದರ ಕಹಿ ಅನುಭವ

ಜಿಲ್ಲೆಯ ಸುಪ್ರಖ್ಯಾತ ಖಾಸಗಿರಂಗದ ಬ್ಯಾಂಕೊಂದರ ನಿರ್ದೇಶಕರಾಗಬೇಕೆಂದು ಜಿ.ಎಸ್. ಅವರಿಗೆ ಬಹುದಿನಗಳ ಆಸೆ. ಅವರು ಒಂದು ದಿನ ನನ್ನನ್ನು ಕಂಡು 'ಮೂರು ನಿರ್ದೇಶಕ ಸ್ಥಾನಗಳಿವೆ. ನಾನು ಸ್ಪರ್ಧಿಸುತ್ತೇನೆ. ನೀವು ಬನ್ನಿ' ಎಂದರು 'ನನಗೆ ಯಾವ ಆಸಕ್ತಿಯೂ ಇಲ್ಲ. ನನ್ನಲ್ಲಿ ಬ್ಯಾಂಕಿನ ಶೇರುಗಳೂ ಇಲ್ಲ' ಎಂದೆ. ಕೊನೆಗೆ ಅವರ ಒತ್ತಾಯಕ್ಕೆ ನಾಮಪತ್ರ ಸಲ್ಲಿಸಿದೆ.

ಪ್ರಾಕ್ಸಿ ಸಂಗ್ರಹ ತಾನೇ ಮಾಡುತ್ತೇನೆಂದು ಭರವಸೆ ಕೊಟ್ಟಿದ್ದರು. ಆದರೆ ಚುನಾವಣೆ ಹತ್ತಿರ ಬಂದರೂ ಆ ಕೆಲಸ ಆಗದೆ ಇದ್ದಾಗ ನಾನೇ ಹೋಗಬೇಕಾಯಿತು. ಬೆಂಗಳೂರು, ಮೈಸೂರುಗಳಲ್ಲಿ ತಿರುಗಿ ಗಣನೀಯ ಪ್ರಮಾಣದ ಪ್ರಾಕ್ಸಿ ಸಂಗ್ರಹವಾಯಿತು. ಆದರೆ ಚುನಾವಣೆಯ ಹೊತ್ತಿಗೆ 'ನಿಮ್ಮ ಶೇರುಗಳ ಪ್ರಮಾಣ ಸಾಕಷ್ಟಿಲ್ಲ' ಎಂದು ತಕರಾರು ಎತ್ತಿದರು. ಯಾಕೆ ಹೀಗಾಯಿತು? ಇದು ಸರಿಯಲ್ಲ, ಚುನಾವಣೆ ಮುಂದೂಡಬೇಕು ಎಂದು ಸದಸ್ಯರು ಆಗ್ರಹಿಸಿದಾಗ ಕೊನೆಗೂ ಮುಂದೂಡಲಾಯಿತು. ಪೊಲೀಸರೂ ಬಂದಿದ್ದರು.

ಮತ್ತೆ ಚುನಾವಣೆ ಬಂತು. ಗೆಲುವಿನ ಛಲ ತೊಟ್ಟು ಎಲ್ಲೆಲ್ಲಿ ತಿರುಗಿ ಮತ್ತೆ ಪ್ರಾಕ್ಸಿ ಸಂಗ್ರಹ. ಬ್ಯಾಂಕಿಂಗ್ ಬಗ್ಗೆ ಗೊತ್ತಿದ್ದವರೇ ಆಗಬೇಕೆಂದು ನಾನೇ ಏಳು ಮಂದಿ ಅನುಭವೀ ವ್ಯಕ್ತಿಗಳನ್ನು ನಿರ್ದೇಶಕರನ್ನಾಗಿ

ಆರಿಸಿವೆ. ಉತ್ತಮ ಅಧ್ಯಕ್ಷ ಬೇಕೆಂದು ಒಬ್ಬರನ್ನು ಆಯ್ಕೆ ಮಾಡಿದ್ದು ನಮಗೇ ಮುಳುವಾಯಿತು. ಹೊಸ ನಿರ್ದೇಶಕರು ಹೊಸ ಅಧ್ಯಕ್ಷರ ಮಾತು ಕೇಳಿ ಮುಖ್ಯ ವಿಷಯಗಳಲ್ಲಿ ನಮ್ಮನ್ನು (ನನ್ನನ್ನು ಮತ್ತು ಜಿ.ಎಸ್. ಅವರನ್ನು) ಕತ್ತಲಲ್ಲಿಟ್ಟರು. ನಮ್ಮ ದೂರಿಗೆ ಯಾರೂ ಸೊಪ್ಪು ಹಾಕಲಿಲ್ಲ. ಹೇಗೆ ಹೇಗೋ ಪ್ರಾಕ್ಸಿ ಸಂಗ್ರಹಿಸಿ ನಮ್ಮಿಬ್ಬರನ್ನೂ ಹೊರಹಾಕಿದರು. ಆದರೆ ನಮ್ಮ ಹೋರಾಟದಿಂದಾಗಿ ಬ್ಯಾಂಕಿನ ವ್ಯವಹಾರಗಳಲ್ಲಿ ಪಾರದರ್ಶಕತೆ ಬಂತು. ಬ್ಯಾಂಕಿನ ಅಭಿವೃದ್ಧಿಯೂ ಆಯಿತು. ನಿರ್ದೇಶಕರು ತಮ್ಮ ಕಡೆಯ ಇಬ್ಬರು ವ್ಯಕ್ತಿಗಳಿಗೆ ನೌಕರಿ ಕೊಡಿಸಬಹುದೆಂಬ ಸೌಲಭ್ಯವನ್ನು ಬಳಸಿಕೊಳ್ಳುವಾಗ ನಾನು ಲಿಖಿತವಾಗಿ ಹೆಸರುಗಳ ಪಟ್ಟಿ ನೀಡಿದ್ದರಿಂದ ಪ್ರಯೋಜನವಾಗಲಿಲ್ಲವಾದರೂ ನನ್ನನ್ನು ಹೊರಹಾಕಬೇಕೆಂದಿದ್ದ ವ್ಯಕ್ತಿಗಳು 'ಇವರ ಕಡೆಯವರಿಗೆ ನೌಕರಿ ಸಿಗಲಿಲ್ಲವೆಂಬುದಕ್ಕಾಗಿ ಈ ಹೋರಾಟ ಮಾಡುತ್ತಿದ್ದಾರೆ' ಎಂಬ ಆರೋಪ ಮಾಡಿದ್ದನ್ನೂ ನಾನು ನೋಡಬೇಕಾಯಿತು.

ರಾಜ್ಯ ಪ್ರಶಸ್ತಿ ಬಂತು

1987ರ ಒಂದು ದಿನ. ಕಟೀಲು ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿನ ಆರಾಧ್ಯ ವ್ಯಕ್ತಿ ಅಸ್ರಣ್ಣನವರಲ್ಲಿ ಉಭಯ ಕುಶಲೋಪರಿ ಮಾತನಾಡುತ್ತಿದ್ದ ವೇಳೆ ಅಲ್ಲಿಗೆ ನಮ್ಮ ಜಿಲ್ಲೆಯವರೇ ಆದ ಜನಪ್ರಿಯ ಪ್ರಭಾವೀ ರಾಜಕಾರಣಿಯೊಬ್ಬರು ಬಂದರು. ಲೋಕಾಭಿರಾಮವಾಗಿ ಮಾತನಾಡುತ್ತಾ ಅಸ್ರಣ್ಣನವರಲ್ಲಿ 'ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ನಿಮಗೆ ಸಿಗುವಂತೆ ಪ್ರಯತ್ನಿಸುತ್ತೇನೆ' ಎಂದರು. ಆಗ ನಿಗರ್ವಿ ಅಸ್ರಣ್ಣನವರು 'ನಾನು ಬಾಗಿದ ಮರ. ನನಗೇಕೆ ಪ್ರಶಸ್ತಿ? ಪ್ರಶಸ್ತಿ ಕೊಡುವುದಾದರೆ ಪುನರೂರು ಅವರಿಗೆ ಕೊಡಿ. ಅವರಾದರೋ ಉತ್ಸಾಹಿ. ಚೆನ್ನಾಗಿ ಕೆಲಸ ಮಾಡುವವರು. ನಿಮ್ಮ ಪ್ರಶಸ್ತಿಯಿಂದ ಅವರ ಉತ್ಸಾಹ ಇಮ್ಮಡಿಗೊಂಡು ಇನ್ನಷ್ಟು ಸಮಾಜ ಸೇವೆ ಮಾಡಲು ಹುರುಪು ಸಿಕ್ಕೀತು' ಎಂದರು. ಆ ರಾಜಕಾರಣಿ ಅಸ್ರಣ್ಣರ ಮಾತಿಗೆ ತಲೆಯಾಡಿಸಿ 'ಖಂಡಿತ ಪ್ರಯತ್ನಿಸುತ್ತೇನೆ' ಎಂದು ವಾಗ್ದಾನ ನೀಡಿ ಅಲ್ಲಿಂದ ತೆರಳಿದರು.

ಆ ಕ್ಷಣದಿಂದ ಪ್ರಶಸ್ತಿಯ ಭೂತ ನನ್ನ ತಲೆಯೊಳಗೆ ಹೊಕ್ಕಿತು. ಇದಕ್ಕಾಗಿ ಆ ರಾಜಕಾರಣಿಯನ್ನು ಅನೇಕ ಸಲ ಭೇಟಿಯಾದೆ. ಅಸ್ರಣ್ಣನವರನ್ನೂ ದಣಿಸಿದೆ. ಪ್ರಾಯಃ ಕಟೀಲು ಅಮ್ಮನಿಗೆ ನನಗೆ ಆ ರೀತಿ ಪ್ರಶಸ್ತಿ ಬರುವುದು ಇಷ್ಟವಿರಲಿಲ್ಲವೆಂದು ಕಾಣುತ್ತದೆ. ಆ ರಾಜಕಾರಣಿಯ ಭರವಸೆ ಗಾಳಿಯಲ್ಲೇ ತೇಲಿತು.

ನನಗೆ ಪ್ರಶಸ್ತಿ ಸಿಗಬೇಕೆಂದು ಸರಕಾರದ ಗಮನ ಸೆಳೆದವರು ಅನೇಕರು. ಪೂಜ್ಯ ಪೇಜಾವರ ಸ್ವಾಮಿಗಳಿಂದ ಹಿಡಿದು ಡಾ. ಮೋದಿ, ಡಾ|| ಶಿವರಾಮ ಕಾರಂತರವರೆಗೆ ಅನೇಕರು ನನ್ನ ಮೇಲಿನ ಸಹಜ ಪ್ರೀತಿಯಿಂದ ನನಗೆ ಪ್ರಶಸ್ತಿ ಸಿಗಬೇಕೆಂದು ಶಿಫಾರಸು ಮಾಡಿದರು. ಆದರೆ ಅದೆಲ್ಲ ನೀರ ಮೇಲಿನ ಹೋಮವಾಯಿತು.

1990ರಲ್ಲಿ ಆಗಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಮಾಜಿ ಮುಖ್ಯಮಂತ್ರಿ ಗುಂಡೂರಾಯರು ಶಿಫಾರಸು ಪತ್ರ ನೀಡಿದರೂ ಫಲಕಾರಿಯಾಗಲಿಲ್ಲ.ನಾಲ್ಕೈದು ವರ್ಷಗಳಲ್ಲಿ ಯಾಕೋ ಆ ಬಗ್ಗೆ ಜುಗುಪ್ಸೆ ಬಂತು. 'ಪ್ರಶಸ್ತಿಯ ಬೆನ್ನು ಹತ್ತಿ ಹೋಗುವುದು ನನ್ನಂಥವರಿಗೆ ಹೇಳಿಸಿದ್ದಲ್ಲ; ಬರುವುದಿದ್ದರೆ ಪ್ರಶಸ್ತಿ ತಾನಾಗಿ ಒಲಿದು ಬರಲಿ' ಎಂದು ಪ್ರಶಸ್ತಿಯ ಹಂಬಲವನ್ನು ಬದಿಗೆ ಸರಿಸಿದೆ. ನನ್ನ ಈ ದೃಢ ಸಂಕಲ್ಪದಿಂದ ತಲೆಯೊಳಗೆ ಹೊಕ್ಕಿದ್ದ ಪ್ರಶಸ್ತಿಯ ಗುಂಗಿನ ಹುಳು ಓಡಿ ಹೋಯಿತು. ನಾನು ನಿರಾಳನಾದೆ. ನನ್ನ ಕೆಲಸ ಮಾಡುವ ಅದಮ್ಯ ಉತ್ಸಾಹಕ್ಕೆ ಸವಾಲಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನ ನನಗೆ ದೊರೆಯಿತು. ನಾನು ಕೆಲಸ ಮಾಡುತ್ತಾ ಹೋದೆ. ಸಾಹಿತ್ಯ ಪರಿಷತ್ತಿನ ಉನ್ನತ ಹುದ್ದೆಯಲ್ಲಿ

ಕುರಿತು ನಾನು ಮಾಡಿದ ಕೆಲಸ ಪರಿಷತ್ತಿನ ಇತಿಹಾಸದಲ್ಲೇ ದಾಖಲಾಗಲು ಅರ್ಹವಾದದ್ದು ಎಂದು ಎಲ್ಲ ಪತ್ರಿಕೆಗಳೂ ಮುಕ್ತಕಂಠದಿಂದ ಶ್ಲಾಘಿಸಿದಾಗ ನನಗೆ ಅದು ಎಲ್ಲ ಪ್ರಶಸ್ತಿಗಳಿಗಿಂತ ಹೆಚ್ಚಿನದ್ದಾಗಿ ಕಂಡಿತು.

ಇದಕ್ಕಿಂತ ಅಚ್ಚರಿಯ ಸಂಗತಿ ಘಟಿಸಿದ್ದು ನಾನು ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಲು ಬೆರಳೆಣಿಕೆಯಷ್ಟು ದಿನಗಳ ಮೊದಲು. ಕುವೆಂಪು ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಪರಿಷತ್ತಿನ ವತಿಯಿಂದ 101 ಕೃತಿಗಳ ಬಿಡುಗಡೆ ಸಮಾರಂಭಕ್ಕೆ ಮುಖ್ಯಮಂತ್ರಿ ಧರ್ಮ ಸಿಂಗ್, ಸಚಿವ ಸಿಂಧ್ಯಾ, ಮಾಸ್ಟ್ರ ಶಾಸಕರಾದ ಬಸವರಾಜ್ ಬಂದಿದ್ದರು. ಅದಾಗಲೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಾಗಿ ಅಂತಿಮ ಪಟ್ಟಿ ಸಿದ್ಧಗೊಳ್ಳುವುದರಲ್ಲಿತ್ತು. ನಾನು ಪರಿಷತ್ತಿನ ಜವಾಬ್ದಾರಿ ಸ್ಥಾನದಲ್ಲಿ ನಿಂತು ಮಾಡಿದ ಸಾಧನೆಯ ಬಗ್ಗೆ ಈ ಸಮಾರಂಭದಲ್ಲಿ ಸದಭಿಪ್ರಾಯ ಮೂಡಿಬಂದಾಗ ಮುಖ್ಯಮಂತ್ರಿಗಳು 'ನಿಮಗೆ ಇಷ್ಟರವರೆಗೂ ರಾಜ್ಯೋತ್ಸವ ಪ್ರಶಸ್ತಿ ಬರದಿರಲು ಕಾರಣವೇನು?' ಎಂದು ಸಮಾರಂಭದ ಮಧ್ಯೆಯೇ ಪಕ್ಕದಲ್ಲಿ ಕೂತಿದ್ದ ನನ್ನಲ್ಲಿ ಕೇಳಿದರು. ನಾನು ನನ್ನ ಪ್ರಶಸ್ತಿ ಪಾಡು ಹೇಳಲು ಅದು ಸಮಯ ಸಂದರ್ಭ ಅಲ್ಲವೆಂದು ತಿಳಿದು 'ಸಾರ್, ಪ್ರಶಸ್ತಿ ರಾಜಕೀಯ ನಾನು ನಿಮಗೆ ಹೇಳಬೇಕಾ?' ಎಂದು ಮೌನವಾಗಿ ನಕ್ಕೆ. ಧರ್ಮಸಿಂಗರಿಗೆ ಆ ಮಾತಿನ ಧ್ವನಿ ಅರ್ಥವಾದಂತಿತ್ತು. ಅವರು ಕೂಡಲೇ ಮೊಬೈಲ್ ಎತ್ತಿ ಯಾರೊಡನೆಯೋ ಮಾತಾಡಿದರು. ಪ್ರಶಸ್ತಿ ಪಟ್ಟಿ ಅಂತಿಮಗೊಳಿಸುವ ವಿಚಾರವಾಗಿ ಮಾತನಾಡುತ್ತಿದ್ದಾರೆ ಎನ್ನುವುದು ಅವರ ಮಾತಿನಿಂದ ನನಗೆ ಸ್ಪಷ್ಟವಾಗಿತ್ತು. ಮುಖ್ಯಮಂತ್ರಿಗಳು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿ ನನ್ನ ಹೆಸರನ್ನು ಸ್ವಯಂ ಇಚ್ಛೆಯಿಂದ ಸೇರ್ಪಡೆಗೊಳಿಸಿದರು. ಪ್ರಶಸ್ತಿಯ ಬಗ್ಗೆ ಯೋಚನೆಯನ್ನೇ ಬಿಟ್ಟಿದ್ದ ನನಗೆ ನಿಜಕ್ಕೂ ಅಚ್ಚರಿ ಮತ್ತು ಖುಷಿಯಾಯಿತು. ಹಲವಾರು ವರ್ಷಗಳ ಹಿಂದೆ ನಾನು ಪ್ರಶಸ್ತಿಯನ್ನು ಬಯಸಿದ್ದೆ. ಅದು ಒಕ್ಕಿಯದೇ ಆಯಿತು! ಕಟೀಲು ಅಮ್ಮ ನಿಜವಾದ ಹೊತ್ತಿಗೆ ಕಣ್ಣು ತೆರೆದು ಅನುಗ್ರಹಿಸಿದಳು. ಯಾರ ವಶೀಲಿಯೂ ಇಲ್ಲದೆ ಯಾರಿಗೂ ಅರ್ಜಿ ಹಾಕದೆ ಪ್ರಶಸ್ತಿಯನ್ನೇ ಬಯಸಿರದ ಸಂದರ್ಭದಲ್ಲಿ ಅದು ಅಯಾಚಿತವಾಗಿ ಒಲಿದು ಬಂತು. ಪುರಸ್ಕಾರವೆಂದರೆ ಇದೇ ತಾನೆ?

ಭಾಗ: ಐದು

ಪುನರೂರು–ಸಮೀಪ ಚಿತ್ರ

ಧರ್ಮದರ್ಶಿ ಹರಿಕೃಷ್ಣ ಪುನರೂರು ಜೀವನ–ಸಾಧನೆ



ವಿಳಾಸ: ಧರ್ಮದರ್ಶಿ ಹರಿಕೃಷ್ಣ ಪುನರೂರು, ಮೂಲ್ಕಿ, ದಕ್ಷಿಣ ಕನ್ನಡ ಜಿಲ್ಲೆ

ಜನ್ಮ ದಿನಾಂಕ: 5–6–1943

ತಂದೆ–ತಾಯಿ: ವಾಸುದೇವ ರಾವ್–ಲಕ್ಷ್ಮೀ ಅಮ್ಮ

ವಿದ್ಯಾಭ್ಯಾಸ: ಮೆಟ್ರಿಕ್ಯುಲೇಶನ್

ವೃತ್ತಿ: ಸಮಾಜ ಸೇವೆ, ಕೃಷಿ, ಇಂಡಿಯನ್ ಆಯಿಲ್ ಡೀಲರ್ಸ್, ಹೋಟೆಲು ಉದ್ಯಮಿ

ಸಾಮಾಜಿಕ ಸೇವೆ:

ಶಿಕ್ಷಣ:

1. ಮೂಲ್ಕಿ ಎಜುಕೇಶನ್ ಸೊಸೈಟಿ, ಶಾರದಾ ಎಜ್ಯುಕೇಶನ್ ಸೊಸೈಟಿ, ಪಟೇಲ್ ವಾಸುದೇವರಾವ್ ಮೆಮೋರಿಯಲ್ ಟ್ರಸ್ಟ್ ಸಂಸ್ಥೆಗಳ ಸ್ಥಾಪನೆ. ತನ್ಮೂಲಕ ಬಡಮಕ್ಕಳಿಗೆ ವಿದ್ಯಾದಾನ, ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ಪಠ್ಯಪುಸ್ತಕ ಹಾಗೂ ಶುಲ್ಕ ಸಂದಾಯ.

2. ಮೂಲ್ಕಿಯಲ್ಲಿ ಐ.ಟಿ.ಐ. ಶಿಕ್ಷಣ ಸಂಸ್ಥೆ ಸ್ಥಾಪನೆ, ಶಿಮಂತೂರು ಗ್ರಾಮದಲ್ಲಿ ಪ್ರೈಮರಿ ಸ್ಕೂಲ್ ಹಾಗೂ ಹೈಸ್ಕೂಲ್. ಉಪ್ಪೂರು, ತೋಕೂರು, ಕಕ್ವ, ಅತಿಕಾರಿಬೆಟ್ಟನಲ್ಲಿ ಹೈಯರ್ ಪ್ರೈಮರಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಮೇಲಿನ ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಬಡಮಕ್ಕಳಿಗೆ ಉಚಿತ ಶಿಕ್ಷಣ.

3. ಬಿಜಾಪುರದ ನಿರ್ಗತಿಕರ ಕುಟುಂಬದ ಮಕ್ಕಳಿಗಾಗಿ 1985ನೇ ಇಸವಿಯಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿನ ವೆಚ್ಚದಲ್ಲಿ ಸುಸಜ್ಜಿತ ಶಾಲಾ ಕಟ್ಟಡವನ್ನು ನಿರ್ಮಿಸಿ ಸರ್ಕಾರಕ್ಕೆ ಹಸ್ತಾಂತರ.

4. ಮಕ್ಕಳಿಗಾಗಿ 'ರಾಗತರಂಗ' ಸಂಸ್ಥೆ ಸ್ಥಾಪನೆ, ನಿಃಶುಲ್ಕವಾಗಿ ಸಂಗೀತ, ನಾಟಕದ ತರಬೇತಿ ನೀಡಿಕೆ. ಬಡಮಕ್ಕಳ ಸುಪ್ತ ಪ್ರತಿಭೆ ಬೆಳಗಲು ವಿವಿಧ ಅವಕಾಶಗಳ ಸೃಷ್ಟಿ.

5. 'ಶ್ರೀದೇವಿ ನೃತ್ಯ ಕೇಂದ್ರ' ಸ್ಥಾಪಿಸಿ, ಬಡ ಹೆಣ್ಣು ಮಕ್ಕಳಿಗೆ ನೃತ್ಯಾಭ್ಯಾಸ ನೀಡಿಕೆ.

6. ಮಂಗಳೂರಿನಲ್ಲಿ ಸ್ಥಾಪಿಸಲಾದ 'ಯಕ್ಷಭಾರತಿ' ತರಬೇತಿ ಕೇಂದ್ರದ ಮೂಲಕ ಸಾಂಪ್ರದಾಯಿಕ ಶೈಲಿಯಲ್ಲಿ ಯಕ್ಷಗಾನ ಕಲೆ ತರಬೇತಿ.

7. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಯೋಗಪೀಠ ಪ್ರಾರಂಭಿಸಲು ಇವರು ಕಾರಣಕರ್ತರು. ಇಂದಿಗೂ ಅದರ ಸಲಹೆಗಾರರು.

ಕೃಷಿ:

1. ಮಂಗಳೂರು ತಾಲೂಕು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ, ಕಿನ್ನಿಗೋಳಿ ಗ್ರಾಮೀಣ ವ್ಯವಸಾಯ ಸಂಘ ಮತ್ತು ಮೂಲ್ಕಿ ವಿಜಯ ರೈತರ ವ್ಯವಸಾಯ ಸಂಘದ ನಿರ್ದೇಶಕರಾಗಿ 25-30 ವರ್ಷಗಳಿಂದ ಸೇವೆ ಸಲ್ಲಿಕೆ.

2. ರೈತರಿಗೆ ಆಧುನಿಕ ಕೃಷಿ ವ್ಯವಸಾಯದ ಪ್ರಯೋಜನ ಲಭಿಸಲು ಶ್ರಮಿಸಿದ್ದಾರೆ. ಕೃಷಿ ಮಾಹಿತಿ ಪುಸ್ತಕಗಳ ಮುದ್ರಣ, ಉಚಿತ ವಿತರಣೆ.

3. ಹಸುಗಳ ಆಧುನಿಕ ತಳಿಗಳ ಭರಾಟೆಯಲ್ಲಿ ಮೂಲ ತಳಿಗಳು ನಶಿಸುತ್ತಿರುವುದನ್ನು ಗಮನಿಸಿ, ಮೂಲ 'ಗೋ ತಳಿ' ಸಂರಕ್ಷಣೆಗೆ ಯೋಜನೆ ರೂಪಿಸಿ ಕಾರ್ಯಗತ ಮಾಡಿದ್ದಾರೆ.

ಸಾಹಿತ್ಯ:

ಸಾಹಿತ್ಯ ಪೋಷಕರಾಗಿ ನೂರಾರು ಬರಹಗಾರರಿಗೆ ಸೂಕ್ತ ವೇದಿಕೆಗಳನ್ನು ಕಲ್ಪಿಸಿ ಯುವ ಪ್ರತಿಭೆಗಳಿಗೆ ಸಾಹಿತ್ಯ ಸತ್ವವನ್ನು ಬೆಳೆಸಿಕೊಳ್ಳಲು ನೆರವಾಗಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸುಮಾರು 12 ವರ್ಷಗಳ ಕಾಲ ದುಡಿದು, 81 ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನೂ 13 ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನೂ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನೂ ಯಶಸ್ವಿಯಾಗಿ ಸಂಘಟಿಸಿದ ಹಿರಿಮೆ. ಜಿಲ್ಲೆಯ ನೂರಾರು ಬರಹಗಾರರ ಪುಸ್ತಕಗಳ ಮುದ್ರಣ ಮಾರಾಟಕ್ಕೆ ನೆರವು. ತುಳು, ಕೊಂಕಣಿ ಸಾಹಿತ್ಯದ ಬರಹಗಾರರಿಗೂ ಪ್ರೋತ್ಸಾಹ. ಮುದ್ದಣ ಕಾವ್ಯ ಪ್ರಶಸ್ತಿ, ಪರ್ಲಿ ಕಾವ್ಯ ಪ್ರಶಸ್ತಿ ಯೋಜನೆಗಳಿಗೆ ನಿರಂತರ ಪ್ರೋತ್ಸಾಹ.

ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳು ಭಾಷೆಯ ಅಖಿಲ ಭಾರತ ಮಟ್ಟದ ಸಮ್ಮೇಳನ, ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದಲ್ಲದೆ, ಯುಗಪುರುಷ, ಸುಮುಖ ಪ್ರಕಾಶನ(ಕಿನ್ನಿಗೋಳಿ)ದಂಥ ಸಂಸ್ಥೆಗಳಿಗೆ ನಿರಂತರ ಬೆಂಬಲ.

ಆರೋಗ್ಯ:

1. ಕರ್ನಾಟಕದಲ್ಲಿ ಬೃಹತ್ ಪ್ರಮಾಣದಲ್ಲಿ ಬಡವರಿಗೆ ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ 10 ಸಾವಿರಕ್ಕಿಂತಲೂ ಅಧಿಕ ಮಂದಿಗೆ ಉಚಿತ ನೇತ್ರ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಉಚಿತ ಕನ್ನಡಕ ವಿತರಣೆ.

2 ಕುಟುಂಬ ಕಲ್ಯಾಣ ಇಲಾಖೆಗೆ ನೆರವಾಗಲು ಸಂತಾನಹರಣ ಶಿಬಿರಗಳ ಏರ್ಪಾಡು. ಭಯಂಕರ ರೋಗವಾಗಿರುವ ಏಡ್ಸ್ ಬಗ್ಗೆ ತಿಳುವಳಿಕೆ ನೀಡಲು ಹಳ್ಳಿ ಹಳ್ಳಿಗಳಲ್ಲಿ ಬೀದಿ ನಾಟಕಗಳ ಏರ್ಪಾಡು.

ಕ್ಷಯ ರೋಗದ ಬಗ್ಗೆಯೂ ಇಂತಹುದೇ ಪ್ರಚಾರ ಕೈಗೊಂಡು ರೋಗಿಗಳಿಗೆ ಶುಶ್ರೂಷೆಯ ವ್ಯವಸ್ಥೆ.

ಪರಿಹಾರ ಕಾರ್ಯ:

1985ನೇ ಇಸವಿಯಲ್ಲಿ ಪ್ರಕೃತಿ ವಿಕೋಪ ಉಂಟಾಗಿ ಸುಮಾರು 600 ಬಡ ಕುಟುಂಬಗಳು ಮನೆ-ಮಾರು ಕಳೆದುಕೊಂಡು ನಿರ್ಗತಿಕರಾದವು. ಈ ಸಂದರ್ಭದಲ್ಲಿ ಎಲ್ಲ ಕುಟುಂಬಗಳಿಗೆ ಮನೆ ನಿರ್ಮಾಣದ ಸಲಕರಣೆಗಳ ಹಾಗೂ ಧನಸಹಾಯದ ಒದಗಣೆ.

2. ಜಿಲ್ಲೆಯ ಹಲವು ಅನಾಥ ವಿಧವೆಯರಿಗೆ ವಿವಾಹ ಮಾಡಿಸಿ, ಅವರ ಬಾಳನ್ನು ಹಸನಾಗಿಸಿದ್ದಾರೆ.

3. ಅಂಗವಿಕರಿಗೆ ಕೃತಕ ಕಾಲು ಹಾಗೂ ತ್ರಿಚಕ್ರ ವಾಹನಗಳ ವಿತರಣೆ.

4. ವೃದ್ಧರಿಗೆ ಮಾಸಾಶನ ದೊರಕಿಸಿಕೊಡಲು ಅವರ ಅರ್ಜಿಗಳನ್ನು ತರಿಸಿ, ಭರ್ತಿ ಮಾಡಿಸಿ, ಅವರ ಭಾವಚಿತ್ರಗಳನ್ನು ತೆಗೆಸಿ ಅಗತ್ಯ ದಾಖಲೆಗಳನ್ನು ಒದಗಿಸಿ ಸರ್ಕಾರಕ್ಕೆ ಸಂಬಂಧಪಟ್ಟ ಕಚೇರಿಗಳಿಗೆ ಓಡಾಡಿ ಸುಮಾರು 1,000 ಮಂದಿ ಬಡ ವೃದ್ಧರಿಗೆ ಮಾಸಾಶನ ದೊರಕಿಸಿಕೊಟ್ಟಿದ್ದಾರೆ.

5. ಸ್ವಂತ ಮನೆ ನಿರ್ಮಿಸಿಕೊಳ್ಳಬಯಸಿದ ಬಡ-ಮಧ್ಯಮ ವರ್ಗದ 25 ಮನೆಗಳಿಗೆ ತಲಾ 25 ಸಾವಿರ ರೂಪಾಯಿಗಳಂತೆ ಹಾಗೂ ಬಡವರ 250 ಮನೆಗಳಿಗೆ ತಲಾ 5 ಸಾವಿರ ರೂಪಾಯಿಗಳಂತೆ ಧನಸಹಾಯ.

6. ಮೂಲ್ಕಿ ಹೋಬಳಿಯ ಲಿಂಗಪ್ಪಯ್ಯಕಾಡು, ಕೆರೆಕಾಡು ಪ್ರದೇಶಗಳ ಸುಮಾರು 1,650 ಬಡಜನರಿಗೆ ಸರ್ಕಾರಿ ನಿವೇಶನವನ್ನು ಕೊಡಿಸಿ ಮನೆ ನಿರ್ಮಿಸಿಕೊಳ್ಳಲು ಧನಸಹಾಯ ದೊರಕಿಸಲು ಸಕ್ರಿಯ ಶ್ರಮ.

7. ಮೂಲ್ಕಿಯ ಸ್ವಂತ ಜಾಗದಲ್ಲಿ ಸುಸಜ್ಜಿತವಾದ 101 ಕಾಂಕ್ರೀಟ್ ಮನೆಗಳನ್ನು ನಿರ್ಮಿಸಿ ಬಡವರಿಗೆ ಉಚಿತ ವಿತರಣೆ.

8. ದಕ್ಷಿಣ ಕನ್ನಡ ಜಿಲ್ಲೆಯ ಕಸ್ಬಾನದ ಭಾರತ ಸೇವಾಶ್ರಮದ ಗೌರವ ಅಧ್ಯಕ್ಷರಾಗಿ ಈ ಸಂಸ್ಥೆಯ ಆಶ್ರಯದಲ್ಲಿ ಅನಾಥರಿಗಾಗಿ ಆಶ್ರಮ ನಡೆಸುತ್ತಿದ್ದಾರೆ. 120 ಅನಾಥ ಮಕ್ಕಳು, 10 ವೃದ್ಧರು, 12 ಅಂಗವಿಕಲರು, 17 ಬುದ್ಧಿಮಾಂಧ್ಯರು, 7 ಮಾನಸಿಕ ಅಸ್ವಸ್ಥರು ಈ ಆಶ್ರಮದಲ್ಲಿ ಆಶ್ರಯ ಪಡೆದಿದ್ದಾರೆ. ಕೊಣಾಜೆಯಲ್ಲಿರುವ ಅನಾಥಾಶ್ರಮದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಪರಿಸರ:

1. ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯ ಜಿಲ್ಲೆಯ ರಾಜ್ಯಪಾಲರಾಗಿ ವೃಕ್ಷ ಶಾಸನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ, ಪರಿಸರದ ಬಗ್ಗೆ ಕಾಳಜಿ ವಹಿಸುವ ಕಾರ್ಯಕ್ರಮಗಳ ನಿರ್ವಹಣೆ. ಪರಿಸರ ಮಾಹಿತಿ ನೀಡಿಕೆಗಾಗಿ ಹಲವಾರು ವಿಚಾರ ಸಂಕಿರಣಗಳ ಸಂಘಟನೆ. ಜಿಲ್ಲೆಯ ಪರಿಸರ ಜಾಗೃತಿ ಸಮಿತಿಯ ಅಧ್ಯಕ್ಷರಾಗಿ ದುಡಿಮೆ. ಸರಕಾರಿ ಆಸ್ಪತ್ರೆಯಲ್ಲಿ ಸಂದರ್ಶನ ಸಮಿತಿಯ ಸದಸ್ಯರಾಗಿ ಸ್ವಚ್ಛತೆಯ ಬಗ್ಗೆ ವಿಶೇಷ ಕಾರ್ಯಕ್ರಮಗಳ ಅನುಷ್ಠಾನ. ಆಸ್ಪತ್ರೆಯ ಕುಡಿಯುವ ನೀರಿನ ಬಾವಿಗೆ ಮೋಟಾರು ಅಳವಡಿಸಿ ನಿರಂತರ ನೀರಿನ ಸರಬರಾಜು. ಪಶು ಆಸ್ಪತ್ರೆಗೆ ಸ್ವಂತ ವೆಚ್ಚದಲ್ಲಿ ವಿದ್ಯುದೀಕರಣ.

ದೇಶಸೇವೆ:

ಭಾರತ ಸೇವಾದಳದ ರಾಜ್ಯ ಕೋಶಾಧಿಕಾರಿಯಾಗಿ, ಜಿಲ್ಲಾ ಉಪಾಧ್ಯಕ್ಷರಾಗಿ ಜಿಲ್ಲೆಯ ಪ್ರತಿ ಶಾಲೆಯಲ್ಲಿ ಭಾರತ ಸೇವಾದಳದ ಶಾಖೆಯನ್ನು ತೆರೆದು, ಗಾಂಧೀತತ್ವವನ್ನು ಬೋಧಿಸುವ, ದೇಶಪ್ರೇಮವನ್ನು ಮೂಡಿಸುವ ಕಾರ್ಯಕ್ರಮಗಳ ಅನುಷ್ಠಾನ. ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯಾಗಿರುವ ಮಹಾತ್ಮ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಉಪಯುಕ್ತ ಸೇವೆ.

ಸಾಂಸ್ಕೃತಿಕ ರಂಗ:

ಜಿಲ್ಲೆಯ ವರ್ಧಮಾನ ಪ್ರಶಸ್ತಿ ಪೀಠದ ಉಪಾಧ್ಯಕ್ಷರು. ಉಡುಪಿಯ ಪಾಜಕ ಪ್ರತಿಷ್ಠಾನದ ನಿರ್ದೇಶಕರು. ಮೂಲ್ಕಿಯ ಸಂಸ್ಕೃತ ಪರಿಷತ್ತಿನ ಅಧ್ಯಕ್ಷರು. ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದ ಗೌರವ ಅಧ್ಯಕ್ಷರು.

ರಾಜ್ಯ ಸಣ್ಣ ಉಳಿತಾಯ ಹಾಗೂ ರಾಷ್ಟ್ರೀಯ ಉಳಿತಾಯ ಯೋಜನೆಯ ರಾಜ್ಯ ಸಲಹಾ ಸಮಿತಿಯ ಸದಸ್ಯರು. ಈ ಸಮಿತಿಯು ರಾಜ್ಯದಲ್ಲಿಯೇ ಅತ್ಯುತ್ತಮ ಕೆಲಸ ಮಾಡಿ ಪ್ರಶಂಸೆಗಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಯುವಕ ಹಾಗೂ ಯುವತಿಯರ ಸಂಘಗಳನ್ನು ಕಟ್ಟಿ ಬೆಳೆಸಿ, ಯುವ ಪೀಳಿಗೆಗೆ ಮಾರ್ಗದರ್ಶನ.

ರಾಜಕೀಯರಂಗ:

ಕಿನ್ನಿಗೋಳಿ ಪಂಚಾಯತ್‌ನ ಪಕ್ಷೇತರ ಸದಸ್ಯರಾಗಿ ಸೇವೆ. ಮೂಲ್ಕಿ ಪುರಸಭೆಯ ಸದಸ್ಯರಾಗಿ 20 ವರ್ಷಗಳಿಂದ ಸತತ ದುಡಿಮೆ. ಆ ಪ್ರದೇಶದ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರ ನಿರ್ವಹಣೆ.

ಧಾರ್ಮಿಕ ರಂಗ:

ಬಪ್ಪನಾಡು ದುರ್ಗಾಪರಮೇಶ್ವರಿ, ಕೊಲ್ಲೂರು ಮೂಕಾಂಬಿಕಾ, ಮಂಗಳೂರು ಕಾರಣಿಕ ಹನುಮಂತ ದೇವಸ್ಥಾನದ ಮುಖ್ಯಸ್ಥರಾಗಿ ಪ್ರಶಂಸಾರ್ಹ ಸೇವೆ ಸಲ್ಲಿಸುತ್ತಿದ್ದಾರೆ. ಮಂಗಳೂರಿನ ಮಂಗಳಾದೇವಿ, ಮುಕ್ಕದ ಸದಾಶಿವ ದೇವಸ್ಥಾನ, ಆನೆಗುಡ್ಡೆ, ಪಟ್ಟೆಯಂಗಡಿ, ತೋಕೂರು ಸುಬ್ರಹ್ಮಣ್ಯ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಮತ್ತು ಬ್ರಹ್ಮಕಲಶ ಸಮಿತಿಗಳ ಅಧ್ಯಕ್ಷತೆ.

ಆರ್ಥಿಕ ರಂಗ:

ಕರ್ನಾಟಕ ಬ್ಯಾಂಕಿನ ನಿರ್ದೇಶಕರಾಗಿ ಸೇವೆ. ತಮಿಳುನಾಡು ಫೈನಾನ್ಸ್‌ನ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು:

ಸಮಸ್ತ ಕನ್ನಡಿಗರ ಸಾರ್ವಭೌಮ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ (2001-2004) ಪರಿಷತ್ತಿನ ಕಾರ್ಯಕ್ರಮಗಳನ್ನು ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಹಾಗೂ ಮನೆಮನೆಗಳಿಗೆ ತಲುಪಿಸಿದ್ದಾರೆ. ಗ್ರಾಮಮಟ್ಟದಿಂದ ರಾಜ್ಯಮಟ್ಟದವರೆಗೆ ನೂರಾರು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದಾರೆ. ಗಡಿನಾಡ ಹಾಗೂ ಹೊರನಾಡ ಕನ್ನಡಿಗರ ಪ್ರೋತ್ಸಾಹಕ್ಕಾಗಿ ಗಡಿನಾಡ ಸಮ್ಮೇಳನಗಳನ್ನು ಸಂಘಟಿಸಿದ್ದಾರೆ. ಸಾಹಿತ್ಯ ಪರಿಷತ್ತಿಗೆ ಅಂತರ್ಜಾಲ ತಾಣ ನಿರ್ಮಿಸಿದ್ದಾರೆ. ನಿಘಂಟು ಹಾಗೂ ಅಮೂಲ್ಯ ಪುಸ್ತಕಗಳ ಸಿ.ಡಿ. ತಯಾರಿಸಿದ್ದಾರೆ. ಕುವೆಂಪು ಜನ್ಮ ಶತಮಾನೋತ್ಸವದ ನೆನಪಿಗಾಗಿ 101 ಉಪಯುಕ್ತ ಪುಸ್ತಕಗಳನ್ನು, ದತ್ತಿ ಪ್ರಕಟಣೆ ಮಾಲಿಕೆಯಲ್ಲಿ 300 ಕ್ಕೂ ಹೆಚ್ಚು ಇತರ ಪುಸ್ತಕಗಳ ಮುದ್ರಣ, ಮರುಮುದ್ರಣ ಮಾಡಿಸಿದ್ದಾರೆ, ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟಿನ ಮೊದಲ ಸಂಪುಟವನ್ನು ಹೊರತಂದಿದ್ದಾರೆ. ಸಂಕ್ಷಿಪ್ತ ನಿಘಂಟಿಗೆ ಇಂಗ್ಲಿಷ್ ಅರ್ಥವನ್ನು ಅಳವಡಿಸಿ ಪ್ರಕಟಿಸಿದ್ದಾರೆ. ಕನ್ನಡ ಭಾಷೆ, ನೆಲ-ಜಲ ಹಾಗೂ ರೈತ ಹೋರಾಟಗಳಲ್ಲಿ ಸಕ್ರಿಯವಾಗಿ ಪರಿಷತ್ತು ಭಾಗಿಯಾಗುವಂತೆ ಮಾಡಿದ್ದಾರೆ. ಪರಿಷತ್ತಿನ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಲು ಶ್ರಮಿಸಿದ್ದಾರೆ.

ಸನ್ಮಾನ-ಗೌರವಗಳು:

1. ಕನ್ನಡ ಸಾಹಿತ್ಯದ ಬಗ್ಗೆ ಹಾಗೂ ಬೆಳವಣಿಗೆ ಬಗ್ಗೆ ಸಲ್ಲಿಸಿದ ಸ್ತುತ್ಯರ್ಹ ಸೇವೆಯನ್ನು ಪರಿಗಣಿಸಿ 1994ನೇ ಇಸವಿಯಲ್ಲಿ ಮಂಡ್ಯದಲ್ಲಿ ನಡೆದ 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ

ವಿಶೇಷ ಸನ್ಮಾನ.

2. ಲಯನ್ಸ್ ಸಂಸ್ಥೆಯ ಮೂಲಕ ಬಡವರಿಗೆ ಇವರು ಸಲ್ಲಿಸಿದ ಉತ್ತಮ ಸೇವೆಗೆ 10 ಬಾರಿ ಅಂತಾರಾಷ್ಟ್ರೀಯ ವಿಶೇಷ ಮನ್ನಣೆ.

3. ಅಂತಾರಾಷ್ಟ್ರೀಯ ಲಯನ್ಸ್ ಅಧ್ಯಕ್ಷರಿಂದ ಅಮೇರಿಕದಲ್ಲಿ 'ನೈಟ್ ಆಫ್ ಬ್ಲೈಂಡ್' ಪ್ರಶಸ್ತಿ.

4. ಪರಿಸರ ಕ್ಷೇತ್ರದ ತಮ್ಮ ಅಮೂಲ್ಯ ಕೆಲಸಕ್ಕಾಗಿ ಡಾ॥ ಶಿವರಾಮ ಕಾರಂತರಿಂದ 'ಪರಿಸರ ಪ್ರೇಮಿ' ಪುರಸ್ಕಾರ.


5. ಕನ್ನಡದ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ರಂಗದ ಸೇವೆಗಾಗಿ ನಟಸಾರ್ವಭೌಮ ರಾಜ್‌ಕುಮಾರ್ ಅವರಿಂದ 'ಕನ್ನಡದ ಕಣ್ಮಣಿ' ಬಿರುದು.

6. ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಗಳವರು ಇವರ ಧಾರ್ಮಿಕ ಕಾರ್ಯಕ್ರಮಗಳನ್ನು ಮೆಚ್ಚಿ 'ಧರ್ಮದರ್ಶಿ' ಎಂಬ ಬಿರುದು ನೀಡಿ ಗೌರವಿಸಿದ್ದಾರೆ.

7. ಕನ್ನಡ ರಾಜ್ಯೋತ್ಸವ ಪ್ರಶಸ್ತಿ (2004)ಗೆ ಪಾತ್ರರಾಗಿದ್ದಾರೆ.

ಅನೇಕ ಸಂಘ-ಸಂಸ್ಥೆಗಳು, ಮಠಮಾನ್ಯಗಳು ಹಲವಾರು ಪ್ರಶಸ್ತಿ ಬಿರುದುಗಳನ್ನು ನೀಡಿ ಗೌರವಿಸಿವೆ.

ಪುನರೂರು ವಂಶವೃಕ್ಷ


ನಾರಾಯಣ - ಮಹಾಲಕ್ಷ್ಮಿ
ವೆಂಕಟೇಶ್ - ವಾಗ್ದೇವಿ
ಗೋಪಾಲಕೃಷ್ಣ (ಪದ್ಮಾವತಿ)
ರಾಮಕೃಷ್ಣ (ರಮಾದೇವಿ)
ವಾಸುದೇವ (ಲಕ್ಷ್ಮಿ)
1 ಇಂದಿರಾ (ಮುರಾರಿಭಟ್ಟ)
2 ವಾಗ್ದೇವಿ (ರಾಮಚಂದ್ರ ಉಡುಪ)
3 ಪದ್ಮಾ (ನಾರಾಯಣ ರಾವ್)
4 ಸರಸ್ವತಿ (ಶ್ರೀನಿವಾಸ ರಾವ್)
5 ವೆಂಕಟೇಶ ರಾವ್ (ಸುಶೀಲ)
6 ಭಾರತಿ (ಗೋಪಾಲ ಕೃಷ್ಣ)
7 ಜಾನಕಿ (ವ್ಯಾಸಬಲ್ಲಾಳ)
8 ನಾರಾಯಣ್ (ವಾಸುದೇವ ರಾವ್)
9 ಯಶೋದಾ (ವಾಸುದೇವ ರಾವ್)
10 ರಾಮಮೂರ್ತಿ (ಸಾವಿತ್ರಿ)
11 ಹರಿಕೃಷ್ಣ (ಉಷಾ)
12 ಮಾಧವಿ (ಹಯವದನ)
1 ವಾಸುದೇವ (ಪದ್ಮಾ)
2 ಜಯಂತಿ (ಲಕ್ಷ್ಮಿನಾರಾಯಣ ಆಸ್ರಣ್ಣ)
3 ಜಗದೀಶ (ವಾಣಿಶ್ರೀ)
4 ರಾಘವೇಂದ್ರ (ವಿದ್ಯಾ)
5 ರೇಣುಕಾ (ಮೋಹನದಾಸ)
6 ಜ್ಯೋತಿ (ಮಧ್ವರಾಜ್)
1 ವಿಶ್ವರಾಜ (ದಿವ್ಯಾ)
2 ಸಂದೀಪ
3 ರವಿಚಂದ್ರ
1 ರಾಧಿಕಾ (ಸುಧೀರ್)
2 ಮಲ್ಲಿಕಾ (ಅರವಿಂದ)
3 ಚಂದ್ರಿಕಾ (ಸುಧೀರ್)
4 ದೇವಪ್ರಸಾದ್ (ಅಭಿಜ್ಞಾ)
ಅನಿಶಾ
ಅಭಯ
ಅಮೋಘ

ಭಾಗ- ಆರು
ಪುನರೂರು ಚಿತ್ರ ಸಂಪುಟ



ತಂದೆ :

ಪಟೇಲ್ ವಾಸುದೇವರಾವ್



ತಾಯಿ:

ಶ್ರೀಮತಿ ಲಕ್ಷ್ಮೀ ಅಮ್ಮ



[illegible] [illegible]- ವೆಂಕಟೇಶರಾವ್ - ಸುಶೀಲಾ,

ರಾಮಮೂರ್ತಿರಾವ್ - ಸಾವಿತ್ರಿ ಮತ್ತು [illegible] - ಉಷಾರಾಣಿ



[illegible]

(20-02-1975)



ಉಷಾರಾಣಿ ಸೀಮಂತೋನ್ನಯನ ಕಾರ್ಯಕ್ರಮ: ಎಡದಿಂದ ಬಲಕ್ಕೆ
ಪುನರೂರು ಅವರ ದೊಡ್ಡ ಅಕ್ಕ ಇಂದಿರಾ, ತಾಯಿ ಲಕ್ಷ್ಮೀಅಮ್ಮ ಅಕ್ಕ ನಾರಾಯಣಿ,
ಕುಟುಂಬ ಪುರೋಹಿತ ಕಯ್ಯಾರು ಕೃಷ್ಣಾಚಾರ್ಯ



ಹಿರಿಯ ಮಗಳು ರಾಧಿಕಾಳ ವಿವಾಹ ಸಂದರ್ಭದಲ್ಲಿ







ಮಗ ದೇವಪ್ರಸಾದನ 'ಉಪನಯನ'ದಲ್ಲಿ ಅಜ್ಜಿಯಿಂದ 'ಭಿಕ್ಷೆ'



ಪುನರೂರು ಕುಟುಂಬ



[illegible] ಸಮಾರಂಭದಲ್ಲಿ (04-02-2004)



ಶ್ರೀ [illegible] ಮಂದಿರ [illegible] ಸಂದರ್ಭದಲ್ಲಿ [illegible]
[illegible]



[illegible]



[illegible]


TO
UNARURU

[illegible]



[illegible]



ಒಡಿಯೂರು ಕಲೋತ್ಸವದಲ್ಲಿ ಶ್ರೀಗಳಿಂದ ಸಮ್ಮಾನ



ತರಳಬಾಳು ಶಿವಾಚಾರ್ಯರಿಂದ ಸಮ್ಮಾನ



ಮಂತ್ರಾಲಯದ ಶ್ರೀ ಸುಶಮೀಂದ್ರ ತೀರ್ಥರಿಂದ ಆಶೀರ್ವಾದ



ಮದರ್ ಥೆರೆಸಾ ಅವರಿಂದ ಆಶೀರ್ವಾದ



ಸಂತ ಭದ್ರಗಿರಿ ಅಚ್ಯುತದಾಸರೊಡನೆ



ಕಟೀಲು ಗೋಪಾಲಕೃಷ್ಣ ಆಸ್ರಣ್ಣರಿಂದ ಪುನರೂರು ಸರ್ವಿಸ್ ಸ್ಟೇಷನ್ ಉದ್ಘಾಟನೆ
ಕಾರ್ಪೋರೇಶನ್ ಬ್ಯಾಂಕ್ ಅಧ್ಯಕ್ಷ ವೈ.ಎಸ್. ಹೆಗ್ಡೆ ಅವರ ಉಪಸ್ಥಿತಿಯಲ್ಲಿ



ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಗೆದ್ದು ಬಂದಾಗ (2001) ಕಟೀಲು
ಲಕ್ಷ್ಮೀನಾರಾಯಣ ಅಸ್ರಣ್ಣರಿಂದ ಸನ್ಮಾನ




ಷಷ್ಠ್ಯಬ್ದ ಸಮಾರಂಭದಲ್ಲಿ ಕೊಲ್ಯ ರಮಾನಂದ ಸ್ವಾಮೀಜಿ, ವೇದವ್ಯಾಸ ವಿಶ್ವೇಶತೀರ್ಥ
ಸ್ವಾಮೀಜಿ, ಮೋಹನರಾವ್, ಕಟೀಲು ಲಕ್ಷ್ಮೀನಾರಾಯಣ ಅಸ್ರಣ್ಣ



ಧರ್ಮಸ್ಥಳದ ಧರ್ಮಾಧಿಕಾರಿ ಡಾ|| ಡಿ. ವೀರೇಂದ್ರ ಹೆಗಡೆ, 'ಯುಗಪುರುಷ' ಸಂಪಾದಕ ಭುವನಾಭಿರಾಮ ಉಡುಪ, ಡಿ. ಸುರೇಂದ್ರ ಕುಮಾರ್, ಪ್ರದೀಪ ಕುಮಾರ್ ಕಲ್ಕೂರ, ಡಿ. ಹರ್ಷೇಂದ್ರ ಕುಮಾರ್ ಇವರೊಡನೆ



ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತ ಮೊಕ್ತೇಸರ (1994)



ಕಾಲ್ನಡಿಗೆಯಲ್ಲಿ ಬದರಿಯಾತ್ರೆ
ಮಾಡಿದ ಸಂದರ್ಭ (1997)



ಹರಿದ್ವಾರದಿಂದ ಕೇದಾರನಾಥಕ್ಕೆ ಕಾಲ್ನಡಿಗೆ ನಡೆಸಿದ ಸಂದರ್ಭದಲ್ಲಿ
ಎಂ.ಬಿ. ಪುರಾಣಿಕ್, ಜಯಪ್ರಕಾಶ್, ಪ್ರದೀಪ್‌ಕುಮಾರ್ ಕಲ್ಕೂರರೊಂದಿಗೆ



ಲಯನ್ಸ್ ಜಿಲ್ಲೆ 324 ಡಿ4ರ ರಾಜ್ಯಪಾಲನಾಗಿ ಸಪತ್ನೀಕನಾಗಿ ಹಾಂಕಾಂಗ್‌ಗೆ
ಹೊರಟ ಸಂದರ್ಭದಲ್ಲಿ (1992 ಜೂನ್)



ಅಂತಾರಾಷ್ಟ್ರೀಯ ಲಯನ್ಸ್
ಸಂಸ್ಥೆಯ ಚರಿತ್ರೆಯಲ್ಲೇ
ಪ್ರಥಮ ಭಾರತೀಯ
ಲಯನ್ಸ್ ಅಂತಾರಾಷ್ಟ್ರೀಯ
ಅಧ್ಯಕ್ಷರಾಗಿದ್ದ ಲೋಹಿತ್
ಮೆಹ್ತಾ ಅವರಿಂದ
ರಾಜ್ಯಪಾಲನಾಗಿ ಅಧಿಕಾರ
ಸ್ವೀಕರಿಸಿದ ಸಂದರ್ಭ
(1992)



ಲಯನ್ಸ್‌ನ ನೇತ್ರ ಚಿಕಿತ್ಸಾ ವಿಭಾಗದ ಅಧ್ಯಕ್ಷರಾಗಿದ್ದಾಗ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆಸಲಾದ ಬೃಹತ್ ಉಚಿತ ನೇತ್ರ ಶಸ್ತ್ರಚಿಕಿತ್ಸಾ ಶಿಬಿರದ ಒಂದು ನೋಟ



ಲಯನ್ಸ್ ರಾಜ್ಯಪಾಲರಾಗಿದ್ದಾಗ ಮಂಗಳೂರಿನಲ್ಲಿ ನಡೆದ ಲಯನ್ಸ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ



ಪುನರೂರು ಅವರ ವಿದ್ಯಾಗುರು ಕೊಡೆತ್ತೂರು ಅನಂತಪದ್ಮನಾಭ ಉಡುಪರಿಗೆ
ಡಾ॥ ಶಿವರಾಮ ಕಾರಂತರಿಂದ ಸನ್ಮಾನ



ಉಡುಪಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಕೆ.ಕೆ.ಪೈ ಅವರಿಗೆ ಗೌರವ



[illegible] ಸಂದರ್ಭದಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಗೌರವ ಸಮರ್ಪಣೆ



2001ರಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಂದ ಸನ್ಮಾನ. ಜಾಫರ್ ಷರೀಫ್ ಉಪಸ್ಥಿತಿ.



ಮಾಜಿ ಉಪರಾಷ್ಟ್ರಪತಿ ಕೃಷ್ಣಕಾಂತ್ ದಂಪತಿಯ ಜೊತೆ. ಎಡತುದಿಯಲ್ಲಿರುವವರು
ಮಲ್ಲಿಕಾರ್ಜುನ ಖರ್ಗೆ



ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಂದ ಸನ್ಮಾನ



ವಿಶ್ವ ಹಿಂದೂ ಪರಿಷತ್ತಿನ ಬೃಹತ್ ಸಮ್ಮೇಳನದ ಸಂದರ್ಭದಲ್ಲಿ ಹೊ.ವೆ. ಶೇಷಾದ್ರಿ ಅವರ ಜೊತೆ



ಕೇಂಜೂರಿನ ಶಾಲಾ ಕಟ್ಟಡವನ್ನು ಉಚಿತವಾಗಿ ನಿರ್ಮಿಸಿ ಸರಕಾರಕ್ಕೆ ಹಸ್ತಾಂತರಿಸಿದ ಸಂದರ್ಭದಲ್ಲಿ ಆಗಿನ ಸಚಿವ ಕೆ. ಅಮರನಾಥ ಶೆಟ್ಟಿ ಅವರಿಂದ ಉದ್ಘಾಟನೆ. ಬಲಬದಿಯಲ್ಲಿ ಹಳೆಯಂಗಡಿ ನಾರಾಯಣ ಪಟೇಲ್.



ಹಿರಿಯ ಜಾನಪದ ವಿದ್ವಾಂಸ ಕರೀಂ ಖಾನ್ ಅವರ ಜೊತೆ



ಅಂತಾರಾಷ್ಟ್ರೀಯ ನೃತ್ಯ
ವಿದುಷಿ ಪದ್ಮಾ
ಸುಬ್ರಹ್ಮಣ್ಯಂ ಪುನರೂರು
ಅವರ ನಿವಾಸದಲ್ಲಿ 15
ದಿನಗಳ ನೃತ್ಯ ತರಬೇತಿ
ಶಿಬಿರ ನಡೆಸಿದ
ಸಂದರ್ಭದಲ್ಲಿ



ಬಹುಭಾಷಾ ಚಲನಚಿತ್ರ ತಾರೆ ಬಿ. ಸರೋಜಾದೇವಿ ಪುಸರೂರು ನಿವಾಸಕ್ಕೆ
ಭೇಟಿನೀಡಿದ ಸಂದರ್ಭದಲ್ಲಿ ಶ್ರೀಮತಿ ಉಷಾರಾಣಿ ಅವರೊಂದಿಗೆ



ಖ್ಯಾತ ಹಿನ್ನೆಲೆ ಗಾಯಕ ಡಾ॥ಪಿ.ಬಿ. ಶ್ರೀನಿವಾಸ್ ಅವರೊಂದಿಗೆ (1987)



ವರನಟ ಡಾ॥ ರಾಜ್‌ಕುಮಾರ್ ದಂಪತಿಯ ಜೊತೆ ಸಮಾಲೋಚನೆ.
ಪಕ್ಕದಲ್ಲಿರುವವರು ರಘುನಾಥ ಶೇಟ್ ಹಾಗೂ ಅನಂತರಾಮರಾವ್



ಹಿರಿಯ ಕಲಾವಿದ ಕೆ.ಕೆ. ಹೆಬ್ಬಾರ್ ಅವರೊಂದಿಗೆ (1991)



ಡಾ|| ಪಾಟೀಲ ಪುಟ್ಟಪ್ಪ ಅವರಿಗೆ ಕ.ಸಾ.ಪ ಗೌರವ ಸದಸ್ಯತ್ವ ಪ್ರದಾನ.
(ಡಾ| ಜಿ.ಎಸ್. ಶಿವರುದ್ರಪ್ಪ, ಪುಂಡಲೀಕ ಹಾಲಂಬಿ, ನಿಟ್ಟೂರು ಶ್ರೀನಿವಾಸರಾವ್,
ಡಾ| ಎಂ.ಸಿ. ಮೋದಿ ದಂಪತಿ)



ಮೂಲ್ಕಿಯಲ್ಲಿ ನಡೆದ ವರ್ಧಮಾನ ಪ್ರಶಸ್ತಿ ಪೀಠದ ದಶಮಾನೋತ್ಸವ
ಸಂದರ್ಭದಲ್ಲಿ ಹಾ.ಮಾ.ನಾಯಕ ಅವರ ಜೊತೆ







ಕೋ. ಚೆನ್ನಬಸಪ್ಪ ಕೆ.ಎಸ್.ನರಸಿಂಹಸ್ವಾಮಿ, ಎ.ಎನ್. ಮೂರ್ತಿರಾವ್, ಸೂರ್ಯ ನಾರಾಯಣ ಚಡಗ, ಚಿ.ನ. ಮಂಗಳಾ ಮೊದಲಾದವರೊಂದಿಗೆ



ಪ್ರೊ। ಕು.ಶಿ. ಹರಿದಾಸ ಭಟ್ಟರ ಜೊತೆ



ಡಾ|| ಶಿವರಾಮ ಕಾರಂತ ಹಾಗೂ ಎಸ್. ನಿಜಲಿಂಗಪ್ಪ ಇವರುಗಳೊಂದಿಗೆ



ಪ್ರೊ. ಎ.ಎನ್. ಮೂರ್ತಿರಾವ್ ಅವರ 104ನೆಯ ವರ್ಷದ ಜನ್ಮ ದಿನೋತ್ಸವದಂದು
ಡಾ। ಪ್ರಧಾನ ಗುರುದತ್ತ, ಪ್ರೊ। ದೇಜಗೌ, ಡಾ। ಗುರುಲಿಂಗ ಕಾಪಸೆ, ಬಿ.ಎ.ಕೆ. ಮೂರ್ತಿ,
ಹರಿಕೃಷ್ಣ ಪುನರೂರು



ಪುನರೂರಿನಲ್ಲಿ ನೂರೊಂದು ಮನೆಗಳ ಸಮುಚ್ಚಯಕ್ಕೆ ಭೇಟಿ ನೀಡಿದ ಕ.ಸಾ.ಪ. ಮಾಜಿ ಅಧ್ಯಕ್ಷ ಜಿ. ನಾರಾಯಣ, ವಿದ್ವಾನ್ ಪೆರ್ಲ ಕೃಷ್ಣ ಭಟ್, ನರಸಿಂಹ ಭಟ್, ಪ್ರೊ| ಎಂ. ರಾಜಗೋಲಾಪಾಚಾರ್ಯರೊಂದಿಗೆ



1998ರಲ್ಲಿ ಮೂಲ್ಕಿಯಲ್ಲಿ ನಡೆದ ಬಾಲ ಪ್ರತಿಭಾ ಸಮ್ಮೇಳನ



ಮೂಡಬಿದಿರೆಯಲ್ಲಿ ನಡೆದ ಅಖಿಲ ಭಾರತ 71ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ



ಬಂಟ್ವಾಳ ಸಾಹಿತ್ಯ ಸಮ್ಮೇಳನದ ಉದ್ಘಾಟನ ಕಾರ್ಯಕ್ರಮ: ಪ್ರೊ। ಜಿ.ಎಸ್. ಸಿದ್ಧಲಿಂಗಯ್ಯ,
ನೀರ್ಪಾಜೆ ಭೀಮ ಭಟ್, ರಮಾನಾಥ ರೈ, ಕಯ್ಯಾರ ಕಿಞ್ಞಣ್ಣ ರೈ, ಕೆ.ಟಿ. ಗಟ್ಟಿ,
ಎಂ. ವೀರಪ್ಪ ಮೊಯಿಲಿ, ಡಾ। ಸುಮತೀಂದ್ರ ನಾಡಿಗ, ಎ.ಎಸ್.ಎನ್. ಹೆಬ್ಬಾರ್



ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸುವಾಗ: ಮಹಾಮಾನ್ಯ ರಾಜ್ಯಪಾಲರಾದ ತ್ರಿ.ನ. ಚತುರ್ವೇದಿ, ಪಿ.ಜಿ.ಆರ್. ಸಿಂಧ್ಯಾ,
ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕ ಮುದ್ದು ಮೋಹನ್, ಮುಖ್ಯಮಂತ್ರಿ
ಧರ್ಮಸಿಂಗ್, ಇಲಾಖೆಯ ಕಾರ್ಯದರ್ಶಿ ಉಷಾ ಗಣೇಶ್ (2004 ನವೆಂಬರ್)



ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ
ಅಧ್ಯಕ್ಷನಾಗಿ ಆಯ್ಕೆಯಾದ
ಸಂದರ್ಭದಲ್ಲಿ ಹುಟ್ಟೂರ ಸನ್ಮಾನ



ಪುನರೂರಿನಲ್ಲಿ ವಿಶ್ವನಾಥ ದೇವಸ್ಥಾನದ ಬಳಿ ಪುನರೂರು ಅವರು ಬಡಕುಟುಂಬಗಳಿಗಾಗಿ ನಿರ್ಮಿಸಿದ 101 ಮನೆಗಳಿರುವ ಲಕ್ಷ್ಮೀವಾಸುದೇವ ಅಗ್ರಹಾರ



ಪುನರೂರು ಅವರ ನಿವಾಸ- 'ಶುಭವಾಗಲಿ'



ವಿದ್ವಾನ್ ರಂಗನಾಥ ಶರ್ಮ, ವೆಂಕಟಸುಬ್ಬಯ್ಯ



ಕುತ್ಯಾರು ಕೃಷ್ಣಮೂರ್ತಿ ಭಟ್, ವಸಂತ, ಉಷಾರಾಣಿ, ಸಾವಿತ್ರಿ, ರಾಮಮೂರ್ತಿರಾವ್
ಪುನರೂರು

ಪುನರೂರು ಅಂದರೆ ನಮ್ಮ ನಡುವಿನ ಸಾಮಾನ್ಯನೊಬ್ಬ ಹೇಗೆ ಅಸಾಮಾನ್ಯನಾದ ಎಂಬುದರ ರೂಪಕ. 'ಕರ್ಮಣ್ಯೇವಾಧಿಕಾರಸ್ತೆ...' ಎಂಬ ಗೀತಾವಾಕ್ಯವನ್ನು ನಿಜಾರ್ಥದಲ್ಲಿ ತನ್ನ ಬದುಕಿನಲ್ಲಿ ಆವಾಹಿಸಿಕೊಂಡ ಸಾಹಸಿ. ಹೊರನೋಟದಲ್ಲಿ ಅಥವಾ ಸಂಪರ್ಕದಲ್ಲಿ ತುಸು ಒರಟೆನ್ನುವ ಹಾಗೆ ನಡೆದುಕೊಳ್ಳುವ, ಮುಖವಾಡ ಧರಿಸದ ವ್ಯಕ್ತಿ, ಅಂತರಂಗದಲ್ಲಿ ಇನ್ನೊಬ್ಬರ ಕಷ್ಟಕ್ಕೆ ಕರಗುವ ಜೀವದ್ರವ್ಯದ ಮತ್ತು ಕೈಲಾಗದವರಿಗೆ ಕೈಮೀರಿ ನೆರವಾಗುವ ಔದಾರ್ಯದ ಮೂರ್ತಿ ಎಂದುಕೊಂಡರೂ, ಅದು ಪೂರ್ತಿ ಅವರ ವ್ಯಕ್ತಿತ್ವವನ್ನು ಅನಾವರಣ ಮಾಡಿದ ಹಾಗಾಗುವುದಿಲ್ಲ.

ಪುನರೂರು ಅವರನ್ನು ಒಪ್ಪಿಕೊಂಡವರಿಗೂ, ಒಪ್ಪಿಕೊಳ್ಳದವರಿಗೂ ಅವರು ಸದಾ ಆಕರ್ಷಣೆಯ ಕೇಂದ್ರ. ಅವರ ನಡೆನುಡಿಗಳು ವೈಭವೀಕರಣಕ್ಕೆ ಒಳಗಾದ ಹಾಗೆ ಅವು ಅನೇಕರ ಟೀಕೆಗೂ ಅಸೂಯೆಗೂ ಕಾರಣವಾದುದಿದೆ. ಆದರೆ ಅವರು ತೊಡಗಿಸಿಕೊಂಡ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಹಿತ್ಯಸಂಬಂಧಿ ಸಂಘಟನಾ ಚಟುವಟಿಕೆಗಳಲ್ಲಿನ ನಿಸ್ಪೃಹತೆ ಮತ್ತು ಕೊಡುಗೆಗಳ ಒಟ್ಟು ಮೊತ್ತದ ಬಗ್ಗೆ ಪ್ರಾಯಃ ಯಾರಲ್ಲೂ ಅಭಿಪ್ರಾಯ ಬೇಧ ಇರಲಾರದು. ಈ ಹಿನ್ನೆಲೆಯಲ್ಲಿ ಅವರನ್ನು ಹತ್ತಿರದಿಂದ ಬಲ್ಲ, ದೂರನಿಂತು ನೋಡಿದ ವಿವಿಧ ಕ್ಷೇತ್ರಗಳಲ್ಲಿನ ಗಣ್ಯರು, ರಕ್ತಸಂಬಂಧಿಗಳು ತಮ್ಮ ಕಣ್ಣುಗಳಲ್ಲಿ ಅವರನ್ನು ಕಂಡು, ಕಂಡರಿಸಿದ ಬಗೆಯೇ ಈ ಅಭಿನಂದನ ಗ್ರಂಥ.

ಪುನರೂರು ಮತ್ತು ಕಾಂತಾವರ ಕನ್ನಡ ಸಂಘದ ಸಂಬಂಧ ಎರಡೂವರೆ ದಶಕಗಳನ್ನು ಮೀರಿದ್ದು. ಕಾಂತಾವರ ಕನ್ನಡ ಸಂಘವು 1979ರ ಸುಮಾರಿಗೆ 'ಮುದ್ದಣ ಕಾವ್ಯ ಪ್ರಶಸ್ತಿ ಯೋಜನೆ'ಯನ್ನು ಪ್ರಾರಂಭಿಸಿತಾದರೂ ಅದು 1989ರ ಸುಮಾರಿಗೆ ನಿಂತೇ ಹೋಗುತ್ತದೆನ್ನುವ ಸ್ಥಿತಿ ತಲುಪಿದಾಗ ಗೋವರ್ಧನ ಗಿರಿಧಾರಿಯ ಹಾಗೆ ಅದನ್ನು ಎತ್ತಿ ಹಿಡಿದ ಅವರು ಈಗಲೂ ಕಾಂತಾವರ ಕನ್ನಡ ಸಂಘದ ಚೈತನ್ಯ ಶಕ್ತಿ.

ಪುನರೂರು ಅವರ ತೀರಿಸಲಾರದ ಪ್ರೀತಿಯ ಋಣಕ್ಕಾಗಿ ಕಾಂತಾವರ ಕನ್ನಡ ಸಂಘವು ಈ ಅಭಿನಂದನ ಗ್ರಂಥದ ಮೂಲಕ ನುಡಿನಮನ ಸಲ್ಲಿಸಿ ತನ್ನ ಹೃದಯವನ್ನು ತುಸು ಹಗುರ ಮಾಡಲು ಹೊರಟಿದೆ.

ಡಾ. ನಾ. ಮೊಗಸಾಲೆ

ರೂ. 250/-

ಕನ್ನಡ ಸಂಘ, ಕಾಂತಾವರ-574 129
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ